(10)

J.S. [illegible]

సంపుటము - ౨౦
సంచికలు - ౧-౪

ಪ್ರಬುದ್ಧ

ಕರ್ಣಾಟಕ

ಬಹುಧಾನ್ಯ ಸಂವತ್ಸರ] [ವಿನಾಯಕನ ಸಂಚಿಕೆ

ಮೈಸೂರು :

ಮೈಸೂರು ವಿಶ್ವವಿದ್ಯಾನಿಲಯ

೧೯೩೮

ಸಂಪುಟ ೨೦] [ಸಂಚಿಕೆ ೧

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಸಂಪುಟ ೨೦

(ಬಹುಧಾನ್ಯ ಸಂವತ್ಸರ)

ಮೈಸೂರು:

ಮೈಸೂರು ವಿಶ್ವವಿದ್ಯಾನಿಲಯ

೧೯೩೯

ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

ವಿಷಯ ಸೂಚಿಕೆ

೧. ಕವನಗಳು—

೨. 'ಪುರುಷ ಸರಸ್ವತಿ'ಯ ಕಾವ್ಯಗಳು ಮತ್ತು ಪ್ರಶಸ್ತಿ—

೩. ನಾಟಕಗಳು—

೪. ವಚನಗಳು—

೫. ಜನಪದಸಾಹಿತ್ಯ—

೬. ಲೇಖನಗಳು, ಉಪನ್ಯಾಸಗಳು ಇತ್ಯಾದಿ—

೭. ಗದ್ಯಚಿತ್ರ ಮತ್ತು ಸಣ್ಣ ಕಥೆ—

೮. ಕಾವ್ಯಾವಲೋಕನ—

ಚಿತ್ರಗಳು



ಬಂಕಿಂಚಂದ್ರ ಛಟರ್ಜಿ

ಪ್ರಬುದ್ಧ
ಕರ್ಣಾಟಕ

ಬಹುಧಾನ್ಯ ಸಂವತ್ಸರ — ೭೫ — ವಿನಾಯಕನ ಸಂಚಿಕೆ

ದೇವರು ರುಜು ಮಾಡಿದನು!

ದೇವರು ರುಜು ಮಾಡಿದನು ;
ರಸವಶನಾಗುತ ಕವಿ ಅದ ನೋಡಿದನು !

ಚಿತ್ತ್ರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು !

ನದಿ ಹರಿದಿತ್ತು ; ಬನ ನಿಂತಿತ್ತು ;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.

ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ರೊದಲು
ರಂಜಿಸೆ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ವಿಹಾಯುತ
ಕವಿಮನ ನಾಕದಿ ನೆಲಸಿತ್ತು ;
ಮಧುಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು !

ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕ ಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃ ಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಆದ ನೋಡಿದನು !

ಕೆ. ವಿ. ಪುಟ್ಟಪ್ಪ.

ಸಾಹಿತ್ಯದ ಆವಶ್ಯಕತೆ

ಅಪಾರವಾದ ವಾಙ್ಮಯ ವಿಶ್ವದಲ್ಲಿ ಸಾಹಿತ್ಯವು ಒಂದು ಸುಲಕ್ಷಣ ಪೃಥಿವಿ. ಕಾದಂಬರಿಯ ದೇಶವಿದೇಶ, ನಾಟಕದ ವನ ಸಮುದ್ರಗಳು, ಪದ್ಯದ ಬೆಟ್ಟಗುಡ್ಡ, ಕಥೆಯ ಕೆರೆ ಸರೋವರ, ಪ್ರಬಂಧದ ಕಣಿವೆ ಮೈದಾನ, ಗೀತದ ನದಿ ಉಪನದಿ ಮುಂತಾದ ನೂರು ವಿಚಿತ್ರ ವೈವಿಧ್ಯದಿಂದ ಕೂಡಿಕೊಂಡು, ಕಣ್ಮನಗಳನ್ನು ಸೆಳೆಯುವ ಕಾಂತಿಯುಳ್ಳದ್ದು. ಸೃಷ್ಟಿ ವಿಲಾಸದಲ್ಲಿ ಅದಕ್ಕೂ ನಿಶ್ಚಿತವಾದ ಸ್ಪಷ್ಟ ಗ್ರಹಪಥವಿದೆ. ಅಂದರೆ ಅದು ಪ್ರದಕ್ಷಿಣೆ ಮಾಡುತ್ತಿರುವ ಪರಮ ಬೀಜಶಕ್ತಿ ಯಾವುದು? ಇತರ ವಸ್ತುಗಳು ಎಸಗಲಾಗದ ಯಾವ ಕಾರ್ಯವನ್ನು ಅದು ನೆರವೇರಿಸುತ್ತದೆ? ಈ ಹೊತ್ತು ಅದಿಲ್ಲದೆ ಹೋದರೆ, ಹಠಾತ್ತಾಗಿ ನಾಶವಾಗಿಬಿಟ್ಟರೆ ಯಾವ ಜಾಗವು ಬಿಮ್ಮನೆ ಬರಿದಾಗಿ ನಿಂತು ಈಕ್ಷಿಸುವ ಚಕ್ಷುವಿಗೆ ಸಂಕಟವನ್ನುಂಟುಮಾಡುತ್ತದೆ? ಅಲ್ಲದೆ ಜನಸಾಮಾನ್ಯಕ್ಕೆ ಅದರ ಅಗತ್ಯ ಖಂಡಿತವಾಗಿಯೂ ಇದೆಯೇ? ಕೆಲವು ಲಾಕ್ಷಣಿಕರು ಅಭಿಪ್ರಾಯಪಡುವುದೇನೆಂದರೆ—"ಸಾಹಿತ್ಯ ನವಿಲು ಸಾಧಾರಣ ಮಂದಿಯ ಮನೆಗಳಲ್ಲಿ ವಾಸಿಸುವ ಪಕ್ಷಿಯೇ ಅಲ್ಲ. ಅವರಿಗೂ ಅದಕ್ಕೂ ಆವ ಕೆಳೆತನವೂ ಕಾಣಿಸದು. ಹೇಗೋ ಹೊಟ್ಟೆಯನ್ನು ಹೊರೆದುಕೊಂಡರೆ ಸಾಕೆನ್ನು ವವರಿಗೆ ಷೇಕ್ಸ್‌ಪಿಯರು ಸರ್ವಾಂಟೀಸ ಹಂಪ ಹೋಮರರ ಹಂಗೇಕೆ? ವಸ್ತುಸ್ಥಿತಿ ಹೀಗಿದ್ದರೂ ಕವಿ ಗಮಕಿ ವಿಮರ್ಶಕ ಅಧ್ಯಾಪಕವರ್ಗಗಳ ಕೆಲವು ಬಾಯ್ಬಡಿಗರು ಗುಂಪುಕಟ್ಟಿಕೊಂಡು ಬರೆದು, ಭಾಷಣಗೈದು, ಮಾನವಕೋಟಿಯ ಮೇಲೆ ಉದ್ದುರುಟುತನದಿಂದ ದಾಷ್ಟೀಕವನ್ನು ಚಲಾಯಿಸುತ್ತಿರುವರು. ಆ ಬಡಾಯಿ ಗಾರರು ಮನಬಂದಂತೆ ಜಂಭ ಕೊಚ್ಚುತ್ತಿರುವರು. ಅವರ ಬುಡುಬುಡುಕೆಯ ಶಕುನ ನಿಜವಾದಲ್ಲಿ 'ಮನೆಗೆ ಬೆಳಕಾಗುವುದು ಸಾಹಿತ್ಯ'; 'ಪದ್ಯವನ್ನು ವಚನಮಾಡಿ ಕೊಳ್ಳಲಾಗದವನು ಪಶು'; 'ಕವಿಯೇ ಜನರ ಕಣ್ಣು, ಜನಪದದ ಬಾಯಿ'; 'ಸಾಹಿತ್ಯ ಸಮಾಜದ ಆತ್ಮ'; 'ಷೇಕ್ಸ್‌ಪಿಯರನ್ನು ಉಳಿಸಿಕೊಳ್ಳುವಿರೋ ಇಂಡಿಯಾ ಚಕ್ರಾಧಿಪತ್ಯವನ್ನೋ ಎಂದು ಇಂಗ್ಲಿಷರನ್ನು ಕೇಳಿದರೆ, ಚಕ್ರಾಧಿಪತ್ಯವು ಹೋಗಲಿ, ಎಂದಾದರೂ ಒಂದು ದಿನ ಅದು ಹೋಗುವುದೇ, ನಮ್ಮ ಷೇಕ್ಸ್‌ಪಿಯರನ್ನು ನಾವು ಬಿಡಲಾರೆವು ಎನ್ನುವರು'; 'ಕಥೆ ಪ್ರಬಂಧ ಕಾದಂಬರಿಯಿಲ್ಲದ ಮನೆಯಲ್ಲಿ ಜನಿಸು ವುದು ಮಗುವಿಗೆ ಅತಿ ಕ್ರೂರ ದುರದೃಷ್ಟ'; 'ರಾಜ್ಯ ಸಾಮ್ರಾಜ್ಯಗಳು ಈಗ ಏಳುವುವು, ನಾಳೆ ಮುಳುಗುವುವು, ಚಿರಜೀವಿಯಾಗಿ ಬಾಳುವುದು ಸಾಹಿತ್ಯ ಒಂದೇ.'

ಎಷ್ಟು ಋಣಪ್ರತಿಷ್ಠೆ! ಸಾಹಿತ್ಯವು ಆ ಸಣ್ಣ ಒಕ್ಕಲಿಗೆ ಮಾತ್ರ ಆವಶ್ಯಕವಾದ ಪಾತ್ರೆ ಪರಟಿ; ಪ್ರಜಾವಿಸ್ತಾರಕ್ಕೆ ಅದರಿಂದ ಯಾವ ಮಂಗಳ ಒದಗೀತು? ಅಂತೂ ಆಶ್ಚರ್ಯ; ತಮ್ಮ ಗರ್ವದ ಗಾಪಿನಿಂದ ಅವರು ತಲೆಮಾರು ತಲೆಮಾರಿನಲ್ಲಿಯೂ ಇಡೀ ಜಗತ್ತನ್ನು ಮೋಸಗೊಳಿಸುತ್ತಿದ್ದಾರೆ!''—ಬೀದಿಹೋಕರ ಕೂಗಲ್ಲ ಇದು; ಕೆಲವು ಬುದ್ಧಿವಂತರ ಆಕ್ಷೇಪ. ಆದ್ದರಿಂದ ಈ ಮತವನ್ನು ಚರ್ಚಿಸಬೇಕು. ಹಲವ ರನ್ನು ಸದಾಕಾಲವೂ ವಂಚಿಸಬಹುದು, ಎಲ್ಲರನ್ನೂ ಕೊಂಚಕಾಲ ವಂಚಿಸಬಹುದು, ಎಲ್ಲರನ್ನೂ ಎಲ್ಲ ಕಾಲದಲ್ಲಿಯೂ ವಂಚಿಸುವುದು ಸಾಧ್ಯವೇ? ಬೇಡಬೇಡವೆನ್ನು ತ್ತಿದ್ದರೂ ಖಾರದ ಕಡುಬನ್ನು ನೀರಿಳಿಯದ ಜಗದ ಗಂಟಲಿಗೆ ಗಿಡಿದು ತುಂಬಲಾಗು ತ್ತದೆಯೇ? ಅಲ್ಪಸಂಖ್ಯೆಯು ಹಾಗೆ ಶತಮಾನಗಟ್ಟಲೆ ಬಹುಸಂಖ್ಯೆಯನ್ನು ಠಕ್ಕಿನ ತೆಕ್ಕೆಯಲ್ಲಿ ಸಿಕ್ಕಿಸಿದ್ದರೆ ಅವರದು ಸಾಮಾನ್ಯ ಸಾಹಸವಲ್ಲ, ಅತ್ಯದ್ಭುತ ಪವಾಡ! ವೈಮಾನಿಕನೊಬ್ಬನು ಭೂಮಿದೇವಿಗೆ ಡಾಬನ್ನು ತೊಡಿಸಬಹುದು, ಸಾಹಿತ್ಯ ಪ್ರೇಮಿಯು ಜನಜನಾಂಗಗಳನ್ನು ತನ್ನ ಕಪಟದಲ್ಲಿ ಮತ್ತೆ ಮತ್ತೆ ಮುಳುಗಿಸುವುದು ದೊಡ್ಡ ಗಾರುಡಿ. ಅವನು ನಿಶ್ಚಯವಾಗಿಯೂ ಮಹಾ ಮಾಂತ್ರಿಕ!

ಮತಿವಂತರಾರೂ ಒಪ್ಪಲಾಗದ ಮಾತು ಇದು. ನಮ್ಮೆಲ್ಲರಿಗೂ ಸಾಹಿತ್ಯವು ಸ್ವೀಕರಣೀಯವಾಗಿದ್ದರೆ ಅದಕ್ಕೆ ಸೂಕ್ತ ಸಮಂಜಸ ಕಾರಣವಿರಬೇಕು. ಮೊದಲು ಸಾಹಿತ್ಯ ಅಪೇಕ್ಷಣೀಯವೆಂಬುದನ್ನು ಲಕ್ಷಿಸೋಣ. ಈ ಸಂಗತಿಗಳನ್ನು ಯೋಚಿಸಿ; ಸಕಲ ಅವಧಿಗಳಲ್ಲಿಯೂ ಸಮಸ್ತ ದೇಶಗಳಲ್ಲಿಯೂ ಸಾಹಿತ್ಯ ಪಾಂಚಜನ್ಯವು ಕೇಳಿಸು ತ್ತಲೇ ಬಂದಿದೆ. ಯಾವಾಗಲೂ ಎಲ್ಲಿಯೂ ಅದು ಕೇಳಿಸದೆ ಹೋದ ಕುರುಹಿಲ್ಲ. ಮನುಷ್ಯ ಸ್ವಭಾವತಃ ಸ್ವಾರ್ಥಪರ, ಸೋಮಾರಿ; ಅನಗತ್ಯವಾದ ಹೊರೆಯನ್ನು ಹೊತ್ತುಕೊಳ್ಳಲು ಎಂದಿಗೂ ಸಮ್ಮತಿಸಲಾರ. 'ತಾಳ್ಮೆಯಲ್ಲಿ ತಿರೆ'ಯೆಂದು ಮಂದಿಗಳು ಸ್ತುತಿಗೈದರೂ ತಿರೆಯ ತಾಳ್ಮೆಗೂ ಮಿತಿಯುಂಟು. ಭಾರವನ್ನಿಳಿಸಿಕೊಳ್ಳಲು ಅವಳು ಆಗಾಗ್ಗೆ ಲಯಕಾಳಿಯ ಲಲಾಟವನ್ನು ತಾಳುತ್ತಾಳೆ. ಬಾಧೆಯು ತನ್ನ ಶಕ್ತಿಗೆ ಮಿಂಚಿದಲ್ಲಿ ಪರಮಾತ್ಮನು ಅವತಾರಮಾಡುವಂತೆ ನಿಯೋಜಿಸುವ ನೈಪುಣ್ಯ ಅವಳಿಗಿದೆ. ಬರವಣಿಗೆ ಹುಟ್ಟಿದಂದಿನಿಂದ ಉದ್ಭವಿಸಿದ ಸಾಹಿತ್ಯವೆಷ್ಟು? ಅದರಲ್ಲಿ ಈಗ ಉಳಿದಿರುವುದೆಷ್ಟು? ಈಸ್ಕಿಲಸ್, ಸಾಫೊಕ್ಲೀಸ್, ಯೂರಿಪಿಡೀಸ್ ಎಂಬ ಮೂವರು ಘನ ಗ್ರಂಥಕರ್ತರು ಮುನ್ನೂರಕ್ಕೆ ಮೇಲೆ ನಾಟಕಗಳನ್ನು ರಚಿಸಿದರಂತೆ. ಈಗ ನಮ್ಮ ಪಾಲಿಗಿರುವವು ಮೂವತ್ತುಮೂರು ಮಾತ್ರ! ಸೌಮಿಲ್ಲ, ಕವಿಪುತ್ರ, ಗುಣಭದ್ರ, ಶ್ರೀವಿಜಯಾದಿಗಳ ವಿರಚನೆಗಳು ಯಾವ ಗೂಡು ಗುಹೆಗಳ ಅಡಿಯೊಳಗೆ ಅಡಗಿದುವೋ! ಕಾಲಸಾಗರದ ತೆರೆಗಳ ಮೇಲೆ ಹಾಯ್ದು ಬರಲು ಅವಕ್ಕೆ ಅರ್ಹತೆ

ಎಲ್ಲಿ? 'ಬಲವುಳ್ಳದ್ದು ಬಾಳುತ್ತದೆ'ಯೆಂಬ ವಿಜ್ಞಾನಶಾಸ್ತ್ರದ ವಾದ ಇಲ್ಲಿಗೂ ಅನ್ವಯಿಸುತ್ತದೆ. ಏತಕ್ಕೆಂದರೆ ಕಾಲಪುರುಷ ಕಡುಕ್ರೂರಿ ಮತ್ತು ಪೀನೋದರದ ತೀನಾಳಿ. ಅಲ್ಲೊಂದು ಇಲ್ಲೊಂದನ್ನು ಮಾತ್ರ ಬಿಟ್ಟು ಮಿಕ್ಕೆಲ್ಲವನ್ನೂ ಮುಕ್ಕು ತ್ತಾನೆ. ಹೃದಯ ದೌರ್ಬಲ್ಯವಿನಿತಿಲ್ಲದೆ 'ಅಚ್ಛೇದ್ಯೋಽಹಮದಾಹ್ಯೋಽಹಂ' ಎಂದು ಉಚ್ಚರಿಸಬಲ್ಲ ಅತ್ಯಾವಶ್ಯಕವಾದುದಕ್ಕೆ ಮಾತ್ರ ಚಿರಾಯುಷ್ಯ. ಅಂದಮೇಲೆ ಸಾಹಿತ್ಯ ದೀರ್ಘಕಾಲ ಅವಸಾನ ಹೊಂದದೆ ನಿಂತಿದ್ದರೆ ಅದರ ಒಳಗಡೆ ಬಿರುಗಾಳಿ ಗಳನ್ನು ಕಿರುನಗೆಯಿಂದ ಅಪಹಾಸ್ಯಗೈಯುವ ಜ್ಯೋತಿ ಉರಿಯುತ್ತಿರಬೇಕು.

ಅಲ್ಲದೆ ಇನ್ನೊಂದು ವಿಚಾರ. ಕವಿಗಳ ವಿಷಯದಲ್ಲಿ ಜನಪದ ತೋರಿಸುವ ಉದಾಸೀನ ಉಪಮಾತೀತವೆಂದು ಹಲವರ ನಂಬಿಕೆ. ತನ್ನ ಮಹೋಪಕಾರಿಗಳಿಗೆ ಹಿಟ್ಟು ಹಾಕದೆ ನರಳಿಸಿ, ಅವರು ಸತ್ತಮೇಲೆ ಭಾರಿಯ ಗೋರಿಯನ್ನು ಜಗತ್ತು ಕಟ್ಟುತ್ತದೆ ಎಂಬ ಒಂದು ನಾಣ್ಣುಡಿಯಿದೆ. ಅದು ಒಂದು ಕಡೆಯ ವಾದಸರಣಿ; ಕವಿಗಳ ಪ್ರಾಪಂಚಿಕ ಜೀವನವನ್ನು ಕುರಿತದ್ದು. ಆದರೆ ಅನೇಕ ಕಾವ್ಯಗಳಿಗೆ, ಕೆಲವು ಕವಿಗಳಿಗೂ ಕೂಡ, ಪರಿಮಾಣವನ್ನೇ ಅರಿಯದ ಪುರಸ್ಕಾರ ದೊರೆತಿಲ್ಲವೆ, ಭಾವಿಸಿ? ಹೋಮರನೊಬ್ಬ ಕಣ್ಣಿಲ್ಲದ ಭಿಕಾರಿ; ಜಗಜ್ಜೇತ ಅಲೆಕ್ಸಾಂಡರನು ತಲೆದಿಂಬಿನ ಕೆಳಗೆ ಒಂದು ಕತ್ತಿಯನ್ನೂ ಹೋಮರನ ದಿವ್ಯಕೃತಿಯನ್ನೂ ಇಟ್ಟುಕೊಂಡು ಮಲಗುತ್ತಿದ್ದನಂತೆ! ಈಗ ಹತ್ತು ಪಟ್ಟಣಗಳು ಹೋಮರನ ಜನ್ಮನಗರವೆಂಬ ಬಿರುದಿಗೆ ಪೈಪೋಟಿ ನಡಸುತ್ತಿವೆ. ತಮ್ಮ ಬಾವುಟಗಳ ಮೇಲೆ ಪೋರ್ಚುಗಲ್ಲಿನ ಸಿಪಾಯಿಗಳು ಕೇಮೋಯನ್ಸನ ದ್ವಿಪದಿಗಳನ್ನು ಬರೆದುಕೊಂಡು ಯುದ್ಧಕ್ಕೆ ಹೊರಡು ತ್ತಿದ್ದರು. ವರ್ಜಿಲನ ಉದ್ಗ್ರಂಥವನ್ನು ಭವಿಷ್ಯಹೇಳುವ ಕಣಿಯಾಗಿ ಉಪಯೋಗಿಸಿ ಗೌರವಿಸಿದರು; ಈಗಲೂ ಆ ರೂಢಿ ತಪ್ಪಿಲ್ಲ. ಥೀಬ್ಸ್ ಪುರವನ್ನು ಶತ್ರುಗಳು ಸುಟ್ಟಾಗ ಕೆಲವು ಗುಡಿಗಳು ಮತ್ತು ಪಿಂಡರ್ ಕವಿಯ ಗೃಹವೊಂದು ಹವ್ಯವಾಹನನಿಗೆ ಆಹುತಿಯಾಗಲಿಲ್ಲ. ಸ್ಪೇನ್ ದೇಶದಲ್ಲಿ ಲೋಪ್ ಡ ವೇಗ ಎಂಬ ಕವಿಯನ್ನು ಕುರಿತ ಆದರಣೆಯು ವ್ಯಾಮೋಹವಾಗಿ ಪರಿಣಮಿಸಿತು. ಯಾವ ಪದಾರ್ಥದ ಪ್ರಥಮ ದರ್ಜೆಯ ಬೆಡಗನ್ನು ವರ್ಣಿಸಬೇಕಾದರೂ ಅವನ ಹೆಸರನ್ನು ಒಂದು ವಿಶೇಷಣವನ್ನಾಗಿ ಮಾಡಿ ಬಳಕೆಗೆ ತಂದರು—ಲೋಪ್ ಲತೆ, ಲೋಪ್ ಲಲನೆ, ಲೋಪ್ ಕುಸುಮ, ಲೋಪ್ ಸರೋವರ—ಇತ್ಯಾದಿ. ಕ್ವಿಬೆಕ್ ದುರ್ಗವನ್ನು ಗೆದ್ದ ವುಲ್ಫ್ ಎಂಬ ದಳಪತಿಯು ಕವಿ ಗ್ರೆಯ ಪದ್ಯವನ್ನು ಓದಿ—"ಕ್ವಿಬೆಕ್ಕನ್ನು ಜಯಿಸುವುದಕ್ಕಿಂತಲೂ ಈ ಪ್ರಗಾಥದ ಕರ್ತೃವಾಗಿದ್ದರೆ ನನಗೆ ಎಷ್ಟೋ ಮೇಲು" ಎಂದನಂತೆ. ಭಾರತೀಯರ ಬಾಳುವೆಯಲ್ಲಿ ರಾಮಾಯಣ ಮಹಾಭಾರತಗಳು ರಕ್ತದೊಳಗಿನ ರಕ್ತ, ಮೂಳೆ

ಯೊಳಗಿನ ಮೂಳೆಯಾಗಿ ಸೇರಿಕೊಂಡಿಲ್ಲವೇ! ನರರಾವಾಗಲೂ ಶ್ರೇಷ್ಠ ಸಾಹಿತ್ಯ ವನ್ನು ನಿರರ್ಥಕವೆಂದು ನಿರಾಕರಿಸಿ ಹೊರದೂಡಿಲ್ಲ. ಅದರಿಂದ ಯಾವುದೋ ಹಿತಾನುಕೂಲ ಪ್ರಪಂಚಕ್ಕೆ ನಿರಂತರವಾಗಿ ಜಿನುಗಿ ಹರಿಯುತ್ತಲೇ ಇರಬೇಕಲ್ಲವೇ?

ಸಾಹಿತ್ಯವು ಇಷ್ಟು ದಿವಸ ಬದುಕಿ ಬಂದಿರುವುದನ್ನೂ ಇತರ ಎಲ್ಲ ಮನುಷ್ಯ ನಿರ್ಮಾಣಗಳಿಗಿಂತ ಶಾಶ್ವತವೆಂದು ಪ್ರಖ್ಯಾತಿ ಪಡೆದಿರುವುದನ್ನೂ ನೋಡಿದರೆ, ಮಾನವನ ಮೂಲಪ್ರಕೃತಿಗೆ ಅದು ಹೊಂದಿಕೊಂಡಿರಬೇಕೆಂದು ಧ್ವನಿತವಾಗುತ್ತದೆ. ಹಸಿವು, ನೀರಡಿಕೆ, ಕಾಮ, ಕುತೂಹಲ, ಸೌಖ್ಯಾಭಿಲಾಷೆ, ದೈವಭಕ್ತಿ ಇವು ಮನು ಷ್ಯನ ಪ್ರಥಮ ಅಪೇಕ್ಷೆಗಳು, ಅಂತರ್ಯದ ಪ್ರಧಾನ ಚಲನಗಳು; ಅವನ ಆಧಾರ ಧರ್ಮದ ಮುಖಗಳಾಗಿ ಜೀವನವನ್ನು ಪರಿಪೂರ್ಣಮಾಡುತ್ತವೆ. ಎಲ್ಲಿ ಅವುಗಳ ಮೇಲೆ ವಿಚಕ್ಷಣ ಪಾರುಪತ್ಯವಿಲ್ಲವೋ ಅಲ್ಲಿ ಆಯುರ್ದಾಯವು ಅಸಮಗ್ರ. ಸಾಹಿತ್ಯವೂ ಹಾಗೆ ಒಂದು ಆಳದ ಒಲವೆಂದು ತೋರುತ್ತದೆ. ಹೆಬ್ಬಯಕೆಯೊಂದನ್ನು ತೀರಿಸು ವುದರಿಂದಲೇ ಸಾಹಿತ್ಯಸೃಷ್ಟಿಯೂ ಸಾಹಿತ್ಯಾಲಿಂಗನವೂ ಹಳೆಯ ಚಾಳಿಗಳಾದರೂ ಹೊಸ ಚೆಲುವನ್ನು ಮೆರೆಯುತ್ತಿವೆ. "ಕಾದಂಬರೀರಸಜ್ಞಾನಾಂ ಆಹಾರೋಪಿ ನ ರೋಚತೇ" ಎಂಬುದು ಕೇವಲ ಅಲಂಕಾರ ವಾಣಿಯಲ್ಲ. ಕಾದಂಬರೀಕಾರನಾದ ಸ್ಕಾಟನು ಬಾಲ್ಯದಲ್ಲಿ ಒಂದು ಸಾರಿ ಸ್ಪೆನ್ಸರನ 'ಗಂಧರ್ವರರಸಿ'ಯೆಂಬ ಮಹಾ ಕಾವ್ಯವನ್ನು ಓದುತ್ತ ಮಧ್ಯಾಹ್ನದೂಟವನ್ನು ಮರೆತೇ ಬಿಟ್ಟನು.

ಇದರೊಂದಿಗೆ, ಸಾಹಿತ್ಯ ಸಪ್ತ ಲಲಿತಕಲೆಗಳಲ್ಲಿ ಒಂದಾಗಿದೆ. ಅದೇ ಹಿರಿಯದು, ಹೆಚ್ಚಿನದು ಎಂದು ಕೂಡ ಉದ್ಘೋಷಿಸುವ ಮಂದಿಯುಂಟು. ಆ ಸ್ಥಾನನಿರ್ದೇಶದ ತೊಡಕು ಒತ್ತಟ್ಟಿಗಿರಲಿ; ಸಾಹಿತ್ಯವೊಂದು ಕಲೆ. ಇದಿರಿಗೆ ಪ್ರತ್ಯಕ್ಷವಾಗಿರುವ ಅಂದ ಚಂದವನ್ನೂ ಅತಿರೇಕ ವಿಪರೀತವನ್ನೂ ಹೆಚ್ಚುಕಡಮೆಯನ್ನೂ ಬೊಗಸೆ ಬೊಗಸೆಯಲ್ಲಿ ಕುಡಿದು, ಆವೇಶಹೊಂದಿ, ಆನಂದದಲ್ಲಿ ಪರವಶನಾಗಿ, ಅದರ ಪ್ರತಿ ಸೃಷ್ಟಿಯನ್ನು ತನಗೆ ಸಿದ್ಧವಾದ ಸಾಧನಗಳಿಂದ ಎಬ್ಬಿಸುವುದೇ ಕಲೆಗಾರನ ಕಾಯಕ. ಪ್ರಸಂಗ ದುರಂತವಾಗಿರಲಿ ಮಂಗಳಾಂತವಾಗಿರಲಿ, ಕುರೂಪದಿಂದಿರಲಿ ಕುಬ್ಜ ವಾಗಿರಲಿ, ಅಲ್ಪವಾದದ್ದಾಗಲಿ ಆಶ್ಚರ್ಯಕರವಾಗಿರಲಿ ಅದನ್ನು ಅವನು ಪ್ರತಿ ಪಾದಿಸುವ ರೀತಿ ಲಾವಣ್ಯಮಯ. ಪದವಾಕ್ಯಗಳ ಶೃಂಗಾರ, ಭಾವ ಭಾವನೆಗಳ ಸಂಯೋಗ, ಹಲವಂಗಗಳ ಸಾಮರಸ್ಯ, ಒಟ್ಟಿನ ಪರಿಣಾಮ ಎಲ್ಲದರಲ್ಲಿಯೂ ಸಾಹಿತ್ಯ ಬೆಡಗನ್ನೇ ಲಕ್ಷ್ಯದಲ್ಲಿಟ್ಟುಕೊಂಡು ದುಡಿಯುತ್ತದೆ. ಅಸಹ್ಯವಾದ ಅಪಸ್ಮಾರ ಸಾಹಿತ್ಯವಿಲ್ಲವೆ? ಎಂದು ಯಾರಾದರೂ ಕೋಟಿಹಾಕಿದರೆ, ನಮ್ಮ ಸಮಾಧಾನ: ಅಂತಹದು ಸಾಹಿತ್ಯವಲ್ಲ. ಸತ್ತ ಸಿಂಹದ ಚರ್ಮವನ್ನು ಕುಂಟುಕತ್ತೆ ಹೊದ್ದು

ಕೊಂಡಿದ್ದರೆ ನಮ್ಮ ಕರ್ತವ್ಯ ನಮಗೆ ಗೊತ್ತು. ರಸಋಷಿಯ ಯೋಗದಂಡವು ತಾಕಿದೊಡನೆಯೇ ಬೀಭತ್ಸ ಪಿಶಾಚಿಗಳು ಸಿಟ್ಟುಸಿರು ಬಿಡುತ್ತ ಪಲಾಯನಗೈಯುವುವು. ಸಾಹಿತ್ಯದಲ್ಲಿ ಸತ್ಯಕ್ಕೆ ಏನೂ ಕುಂದುಬಾರದು, ಆದರೆ ಕಮನೀಯತೆಯು ಕೆಡುವುದಿಲ್ಲ. ಸಾಹಿತ್ಯ ಸೌಂದರ್ಯದ ಭಾಷ್ಯ. ಸರಿ. ಚೆಲುವಿನ ವಿಚಾರವಾಗಿ ಜನರ ನಡೆವಳಿಕೆ ಯಾವುದು? ಅದು ಏತಕ್ಕಿದೆ, ಅದರಿಂದ ಬರುವ ಭಾಗ್ಯವೇನು,—ಎಂದು ಸಾಮಾನ್ಯವಾಗಿ ಯಾರೂ ಕೇಳರು. ಮುದ್ದಾದ ಮಗು, ಅರಳಿದ ಬಿಳಿದಾವರೆ, ದಿನೇಶ ಮುಳುಗುವ ದೃಶ್ಯ, ಕೋಗಿಲೆಯ ಸುಸ್ವರ, ಮಲ್ಲಿಗೆಯ ತನಿಗಂಪು, ಮುಂಜಾನೆಯ ತಿಳಿಗಾಳಿ, ಜೋಗದ ಜಲಪಾತ, ಆಗಸದ ಶುಭ್ರ ನೀಲಿಮೆಗಳನ್ನು 'ನಿಮಗೆ ಸೃಷ್ಟಿಯಲ್ಲಿ ಸ್ಥಳವಿದೆಯೇ? ಕಾಲಕಾಲಕ್ಕೆ ಸರಿಯಾಗಿ ಎಷ್ಟು ಬಾಡಿಗೆಯನ್ನು ಸಲ್ಲಿಸುತ್ತಿದ್ದೀರಿ?'' ಎಂದು ಅಲ್ಲೊಬ್ಬ ಇಲ್ಲೊಬ್ಬ ವಣಿಜ್ಮಾನಸ ಆಕ್ಷೇಪಿಸಿಯಾನು. ಪೇಸ್ಲಿ ಎಂಬಲ್ಲಿನ ಒಂದು ಚಿಕ್ಕ ಕಾರ್ಖಾನೆಯ ಮಾಲೀಕನೊಬ್ಬನು ಕೆಲವು ಯಾತ್ರಿಕರೊಡನೆ ಬರ್ನ್ಸ್ ಕವಿಯು ಹುಟ್ಟಿದ ಹಳ್ಳಿಯನ್ನು ನೋಡಲು ಹೋಗಿದ್ದನಂತೆ. ಎಲ್ಲರೂ ಒಂದು ಸೇತುವೆಯ ಮೇಲೆ ನಿಂತುಕೊಂಡು, ಕೆಳಗೆ ಬಂಡೆಯಿಂದ ಬಂಡೆಗೆ ಧುಮುಕಿ ನೊರೆಯುತ್ತ ವೇಗವಾಗಿ ಚಾರುತ್ತಿದ್ದ ಸಣ್ಣ ಪ್ರವಾಹಕ್ಕೆ ಮನಸೋತಿರುವಾಗ, ಅವನು ಮರುಗಿ ಮಾತಾಡಿದನಂತೆ: "ಸ್ಕಾಚ್ ಜನರು ಎಂಥಾ ಮಂದ ಬುದ್ಧಿಗಳು, ಇಲ್ಲಿ ಇಪ್ಪತ್ತು ಕುದುರೆ ಬಲದಷ್ಟು ಶಕ್ತಿ ವ್ಯರ್ಥವಾಗಿ ಹರಿದು ಹಾಳಾಗುತ್ತಿದೆ!" ಅವನ ಗೋತ್ರದವರು ಎಲ್ಲ ಕಡೆಯಲ್ಲಿಯೂ ಇದ್ದಾರೆ. ಕವಿಯೊಬ್ಬನು ತನ್ನ ಲೇಖನದ ಕೈಬರೆಹದ ಪ್ರತಿಯನ್ನು ತಂದು ಅವರ ಮುಂದಿಟ್ಟಲ್ಲಿ, ಅವರು "ಸುಮ್ಮನೆ ಶಾಯಿಚೆಲ್ಲಿ ಕಾಗದವನ್ನು ಕೊಳಕುಮಾಡಿದೆ. ಇಲ್ಲದಿದ್ದರೆ ದಸ್ತಿಗೆ ಆರಾಣೆ ಕೊಡುತ್ತಿದ್ದೆವು!" ಎಂದು ಗದರಿಸಿಬಿಡುತ್ತಾರೆ. ಒಬ್ಬ ಪುಸ್ತಕ ವ್ಯಾಪಾರಿ ಡಾಬ್ಸನ್ ಕವಿಯ ಒಂದು ಗೀತವನ್ನು ಕೊಂಡುಕೊಳ್ಳುತ್ತಾ, "ಇದರಲ್ಲಿರುವ ಎಂಟು ಪಂಕ್ತಿಗಳಲ್ಲಿ ಮೂರು ಪುನರಾವರ್ತನೆ. ಆದ್ದರಿಂದ ಐದು ಪಂಕ್ತಿಗಳಿಗೇ ನಾನು ಖರೀದಿ ಕೊಡುವುದು!" ಎಂದು ಹಾಗೆಯೇ ಮಾಡಿದನಂತೆ. ಅವರ ಸಂತತಿ ಸಾವಿರವಾಗಲಿ; ಆದರೂ ಈ ಸಿದ್ಧಾಂತಕ್ಕೆ ಸಾವಿಲ್ಲ: ಸುಂದರವಾದುದು ಸತ್ಯವೂ ಅಹುದು, ಸಾಧುವೂ ಅಹುದು. ರಮಣೀಯತೆಗೆ ಬೇರೆ ಸಾಧಕವೂ ಬೇಡ, ಬೇರೆ ಪ್ರಮಾಣವೂ ಬೇಡ. "ಚೆಲುವಾದ ಪದಾರ್ಥ ಒಂದು ನಿತ್ಯ ಸಂತೋಷ"ವೆಂಬ ಕೀಟ್ಸನ ವಚನ ಜಗತ್ಪ್ರಸಿದ್ಧ, ಜಗದ್ವಂದ್ಯ. ಕಾರ್ಲೈಲು ಹೇಳಿದ್ದಾನೆ: "ಕಲೆಯನ್ನು ನಾವು ಪ್ರೀತಿಸುವುದು ಅದರ ಫಲಗಳಿಗಾಗಲ್ಲ, ಅದಕ್ಕೋಸ್ಕರಲೇ; ನಮಗೆ ಆತ್ಮಾಹ್ಲಾದವನ್ನು ಕೊಡಲು ಉಪಯುಕ್ತವೆಂದಲ್ಲ, ಕೊನೆಗೆ ಶೀಲವಿನಯಗಳನ್ನು ಅಭಿವೃದ್ಧಿ

ಪಡಿಸುತ್ತದೆಂದೂ ಅಲ್ಲ;—ಅದು ಕಲೆಯಾದ್ದರಿಂದ, ಮಾನವನಲ್ಲಿ ಅಗ್ರಗಣ್ಯವಾದ ವಿಚಾರವಾದ್ದರಿಂದ, ಸಮಸ್ತ ಲಾವಣ್ಯದ ಆತ್ಮವಾದ್ದರಿಂದ. ಕಲೆಯ ಉಪಯೋಗ ವೇನು ಎಂದು ಕೇಳುವುದೂ ಒಂದೇ, ಒಬ್ಬ ದೇವತೆಯ ಉಪಯೋಗವೇನು ಎಂದು ಕೇಳುವುದೂ ಒಂದೇ.'' ಈ ತತ್ತ್ವಕ್ಕೆ ನಾವು ತಲೆಬಾಗದೇ ಇದ್ದ ಪಕ್ಷದಲ್ಲಿ ನಮ್ಮ ಹಂಚಿಕೆ ಹವ್ಯಾಸಗಳಲ್ಲಿ ಮುಖ್ಯವಾದೊಂದು ಭಾಗಕ್ಕೆ ಅರ್ಥನಾಶವಾಗುತ್ತದೆ. ನಾವು ಅನಾರ್ಯರೂ ಚಾರ್ವಾಕರೂ ಆಗಿಬಿಡುತ್ತೇವೆ. ನೂರಾರು ಭೇದ ವ್ಯತ್ಯಾಸ ಗಳಿಂದ ತೋರುತ್ತ ಬಹು ಗದ್ದಲ ಮಾಡುತ್ತಿರುವ ಈ ಬಾಹ್ಯ ಪ್ರಪಂಚದ ಒಡಲಿನಲ್ಲಿ ಯಾವುದೋ ಒಂದು ಊಹಾತೀತವಾದ ಶೃಂಗಾರಮೇಳವು ಧ್ವನಿಗೈಯುತ್ತಿದೆಯೆಂದು ನಾವು ಚಿಂತಿಸಿ, ಅದನ್ನು ಕೇಳಲು ಹಾತೊರೆಯುತ್ತಿದ್ದೇವೆ. ಇಹದ ಕಷ್ಟನಿಷ್ಠುರ ಗಳನ್ನು ಸಹನೆಯಿಂದ ಪ್ರತಿಭಟಿಸಲು ಆ ನಂಬಿಕೆಯೇ ನಮಗೆ ಪುಷ್ಟಿವರ್ಧಕ ಪ್ರಚೋ ದನೆ. ಆ ದೈವಿಕ ಸಂಗೀತದ ಲಘು ಶ್ರವಣವನ್ನು ಏರ್ಪಡಿಸುವುದೇ ಮಧುರಮಾತಿನ ಮಾಲೆಯಾದ ಸಾಹಿತ್ಯದ ಹೆಗ್ಗುರಿ. ಅಂದಮೇಲೆ ಸಾಹಿತ್ಯಕ್ಕೆ ಸಾಹಿತ್ಯವೇ ಸಾಕ್ಷಿ.

ಇಷ್ಟೇ ಸಾಕು, ಸಾಹಿತ್ಯದ ಪ್ರಬಲ ಆವಶ್ಯಕತೆಯನ್ನು ವ್ಯಕ್ತಗೊಳಿಸಿದಂತಾ ಯಿತು. ಆದರೂ ಮತ್ತೂ ಕೆಲವು ವಿವರಗಳನ್ನು ಪರ್ಯಾಲೋಚಿಸುವುದರಿಂದ ಗುಣ ವುಂಟು. ಪರಿಹಾಸದಿಂದ ಪ್ರತಿವಾದಿಯನ್ನು ಧ್ವಂಸಮಾಡುವ ಪದ್ಧತಿ ಒಕ್ಕಡೆಯಿರಲಿ. ವಸ್ತುಸ್ಥಿತಿಯನ್ನು ಪರಿಶೀಲಿಸಿದಲ್ಲಿ, "ಇದರಿಂದ ಪ್ರಯೋಜನವೇನು? ಇದರ ನಂಟು ನಮಗೇತಕ್ಕೆ?" ಎಂದು ಯಾವ ವಸ್ತುವನ್ನಾದರೂ ಒರಟಿ ಕೇಳುವ ಸ್ವಭಾವವು ಮನುಷ್ಯ ಮಕ್ಕಳಿಗೆ ಎಂದಿಗೂ ಬಿಟ್ಟದ್ದಲ್ಲ. ಹಾಗೆ ಕೇಳಿದರೆ ಆವ ಅಪಾಯ? ಜನದ ಬಾಯನ್ನು ಮುಚ್ಚಲಾಗುವುದಿಲ್ಲ, ಸಮಾಜದ ಜಾಯಮಾನವನ್ನು ಏಕಾಏಕಿ ಮಾರ್ಪ ಡಿಸುವುದು ಅಸಾಧ್ಯ. ಆದರೆ ನಾವು ಇಲ್ಲಿ ಮುಂದಿಡಬೇಕಾದುದು ಏನೆಂದರೆ ಪ್ರಯೋಜನವೆಂಬುದಕ್ಕೆ ಎರಡರ್ಥವುಂಟೆಂಬ ಪ್ರಮೇಯ. ವ್ಯಾವಹಾರಿಕವಾದ ದಿನ ಚರಿ ಜೀವನದ ಜಾಣ್ಮೆಗೆ ಅಂಟಿಕೊಂಡ, ರೂಪಾಯಿ ಆಣೆ ಕಾಸಿನ ಅರ್ಥವೊಂದು; ಸಹಸ್ರ ಸಹಸ್ರ ಅಂಶಗಳಿಗೆ ಅದು ನೇರವಾಗಿ ಸಲ್ಲುತ್ತದೆ. ಇನ್ನೊಂದು ಅನ್ನಬಟ್ಟೆಯ ಸಂಪರ್ಕದಿಂದ ದೂರವಾದ, ಉದಾತ್ತ ಅರ್ಥ; ಚಿತ್ತ ಅಂತರ್ಯ ಆತ್ಮಗಳ ನೆಮ್ಮದಿಗೆ ಅದು ಸಂಬಂಧಿಸಿದ್ದು. ಅಳತೆಯ ಸೇರಿಗೆ ಮೀರಿದ, ತಕ್ಕಡಿಯ ತಟ್ಟೆಯಲ್ಲಿ ಕೂರಲಾರದ ಹಲವಂಶಗಳು ನಮ್ಮ ಬಾಳಿನ ಬೊಕ್ಕಸದಲ್ಲಿ ಉಂಟು; ಅವಕ್ಕೆ ಈ ಎರಡನೆಯ ಅರ್ಥ ಸರಿ. ಸಾಹಿತ್ಯಾದಿ ಸವಿಗಳನ್ನು ನಿರ್ದೇಶಿಸಲು ನಮಗೆ ಬೇಕು ಅಂತಃಕರಣ ಸರಪಣಿ, ರಸಿಕಮಾನಸ. ಒರ್ವ ಶ್ರೀಮಂತ ತನ್ನ ತೋಟದಲ್ಲಿ ತಿರುಗಾಡುತ್ತ, ಹೂವಿನ ಪಾತಿಗಳನ್ನು ಕಂಡೊಡನೆಯೇ ದೊಣ್ಣೆಯಿಂದ ದಳಗಳನ್ನು ಬಡಿದು ಕೆಡವಿ, ಮಾಲಿ

ಯನ್ನು ಬಳಿಗೆ ಕರೆದು, “ಇವು ಯಾವ ದೇವರಿಗೆ ಸಲೆ. ಉಪಯುಕ್ತವಾದ ಪೈರನ್ನು ಬೆಳೆಸು : ಆಲೂಗೆಡ್ಡೆಯನ್ನು ನೆಡು” ಎಂದು ಗುಟುರೆ ಹಾಕುತ್ತಿದ್ದನಂತೆ. ವೈಜ್ಞಾನಿಕನೊಬ್ಬನು ವಿದ್ಯುಚ್ಛಕ್ತಿಯ ವಿಷಯದ ಒಂದು ಗಹನ ಗುಟ್ಟನ್ನು ಕಂಡುಹಿಡಿದು, ಸುಲಭ ಪ್ರಯೋಗಗಳ ಮೂಲಕ ಜನರಿಗೆ ಅದನ್ನು ಪರಿಚಯಮಾಡಿಸುತ್ತಿದ್ದಾಗ, ದೇಶದ ಮುಖ್ಯಮಂತ್ರಿ—“ಒಳ್ಳೆಯದು, ನೀನು ಮಾಡಿಸುವಂತೆ ವಿದ್ಯುತ್ತು ಆ ತಂತಿಯಲ್ಲಿ ಹರಿಯುತ್ತೆಯೆನ್ನೋಣ. ಅದರಿಂದ ಆವ ಉಪಯೋಗ?” ಎಂದು ಪ್ರಶ್ನಿಸಿದ. ಅದಕ್ಕೆ ಸೂಕ್ಷ್ಮಮತಿಯಾದ ಆ ವೈಜ್ಞಾನಿಕನು ಉತ್ತರಕೊಟ್ಟ “ಉಪಯೋಗವಿದೆ ಸ್ವಾಮಿ; ಬೇಗ ಅದರ ಮೇಲೆ ನೀವು ತೆರಿಗೆ ವಸೂಲುಮಾಡಬಹುದು!” ಫ್ರಾನ್ಸಿನ ಮಹಾಕವಿ ವಾಲ್ಟೇರನ ತಂದೆ ಆರ್ವೆಯು, ಗ್ರಂಥಕರ್ತನಾಗಿ ಸಾಹಿತ್ಯದ ಮೂಲಕ ಜೀವನವನ್ನು ನಡಸಬೇಕೆಂದು ಮಗನು ಹವಣಿಸುತ್ತಿದ್ದಾಗ, ಅವನನ್ನು ಹತ್ತಿರ ಕರೆದು ಈ ಉಪದೇಶವನ್ನು ಕಿವಿಯಲ್ಲಿ ಬಿತ್ತಿದ—“ನಾಲ್ಕು ಮಂದಿಗೆ ನಿಷ್ಪ್ರಯೋಜಕನಾಗಲೂ ಬಂಧುಗಳಿಗೆ ಹೊರೆಯಾಗಲೂ ಕ್ಷುದ್ಬಾಧೆಯಿಂದ ಕ್ಷಯಿಸಲೂ ಬಯಸುವವನಿಗೆ ತಕ್ಕ ವೃತ್ತಿ ಸಾಹಿತ್ಯ!” ಸೂರ್ಯ ಚಂದ್ರ ಕಿನ್ನರಗಾನ ಅಪ್ಸರ ನೃತ್ಯವೆಲ್ಲಕ್ಕೂ ಕ್ರಯಕಟ್ಟುವ ಶೂರರು ಇವರು; ಕೆಲವು ಪದಾರ್ಥಗಳಿಗೆ ಕ್ರಯವಿಲ್ಲ ಬೆಲೆಯುಂಟು ಎಂಬುದನ್ನು ಅರಿಯರು. ಸಾಹಿತ್ಯ ಕೇವಲ ಮಾತಿನ ಕಗ್ಗ, ಕೈಗೆಲಸ ಮಾಡಲಾರದ ಮೈಗಳ್ಳರು ಕಾಲಕಳೆಯಲು ಹಿಡಿಯುವ ಶುಷ್ಕೋಪಾಯ ಹೀಗೆಂದು ಲೇಖನಿಯ ಉದ್ಯೋಗವನ್ನು ಹಳಿಯುತ್ತಾರೆ. ಸಾಹಿತ್ಯವನ್ನು ಪಠಿಸಿ, ಸಾಹಿತಿಗಳಿಗೆ ಪ್ರೋತ್ಸಾಹಕೊಡುವುದು ಹೋಗಲಿ; ಅದರ ಗೋಜೇ ಬೇಡವೆಂದು ಯಾವ ಸಂಭಾಷಣೆಗೂ ಹೋಗದೆ ತಟಸ್ಥರಾಗಿರುವುದು ಹೋಗಲಿ; ಸಾಹಿತ್ಯ ಹುರುಳು ತಿರುಳಿಲ್ಲದ ಸೊಲ್ಲು, ಕಸಬಾವುದಕ್ಕೂ ಯೋಗ್ಯರಾಗದೆ ಪರಾನ್ನಜೀವಿಗಳಾದ ಈ ಕವಿಗಳು ಸಮಾಜಕ್ಕೆ ದೊಡ್ಡ ಕಳಂಕ ಎಂದು ಅಭಿಪ್ರಾಯಪಟ್ಟು, ಹತ್ತಾರು ದಿನ ಹಸಿದ ಹೆಬ್ಬುಲಿಯಂತೆ ಮೇಲೆ ಬೀಳುವರು. ಇವರು ತಮ್ಮ ವ್ಯಕ್ತಿತ್ವ ಮಂದಿರದ ಮಹಡಿಯ ಮೆಟ್ಟಲಿನ ಮೇಲೆ ಕಾಲಿಟ್ಟವರೇ ಅಲ್ಲ, ಮಹಡಿಯಿದೆಯೆಂಬುದನ್ನೇ ಮರೆತು ಕೆಳಗಣ ಪಡಸಾಲೆಯಲ್ಲಿ ದಪ್ತರಗಳ ನಡುವೆ ದಿವಸವನ್ನು ನೂಕುತ್ತಿರುವವರು. ಹೊರಕ್ಕೆ ಬಂದು, ಪೌಳಿಯ ಬಳಿ ನಿಂತು, ಕತ್ತೆತ್ತಿ ನೋಡಿ, ಇವರು ತಮ್ಮ ಮನವನ್ನು ಕೊಂಚ ದಣಿಸಬೇಕು; ಆಗ ಸಾಹಿತ್ಯದ ಪ್ರಯೋಜನ ಇವರಿಗೂ ಪತ್ತೆಯಾಗುವುದು. ಸಾಹಿತ್ಯ ಶಾಲಿವನದ ಫಲವನ್ನು ಸತ್ಪ್ರಜೆಗಳೆಲ್ಲ ಉಣ್ಣಬಹುದು, ಉಣ್ಣುತ್ತಲಿದ್ದಾರೆ. ಬರೆವವರಿಗೆ, ಓದುಗರಿಗೆ, ಒಟ್ಟಿನ ಪ್ರಪಂಚಕ್ಕೆ ಅದರ ಕಾಣಿಕೆಯಿದೆ. ಅದರಿಂದ ವಿಶೇಷ ಸಹಾಯವುಂಟು.

ಒಂದನೆಯದಾಗಿ, ಯಾರ ಮೆದುಳಿನಿಂದ ಮುತ್ತಿನ ಧಾರೆಯಂತೆ ಉದುರಿ ಬೀಳುತ್ತವೆಯೋ ಆ ಕೃತಿಪತಿಗಳಿಗೆ 'ರಸಾತ್ಮಕವಾಕ್ಯ'ಗಳಿಂದೊದಗುವ ಸತ್ಕಾರ ವನ್ನು ಲಕ್ಷಿಸೋಣ. ನನಗೆ ಅಮುಖ್ಯವೆಂದು ಬೋಧೆಯಾಗುವ ಪ್ರಸ್ತಾಪಗಳನ್ನು ಮೊದಲು ವಿಮರ್ಶಿಸುವುದು ಒಳ್ಳೆಯದು. "ಕಾವ್ಯಂ . . . ಅರ್ಥಕೃತೇ"; ಸಮ್ಮತಿ ಸೋಣವೇ? ಸಾಹಿತ್ಯ ಮೇಘದಿಂದ ಹಣದ ಮಳೆಯು ನಿಸ್ಸಂಶಯವಾಗಿ ಸುರಿಯು ತ್ತದೆಂದು ಉಸುರಲಾಗದು. ಲೇಖನಿಯಿಂದ ಚುಚ್ಚಿ ಚಿನ್ನದ ಗಣಿಯನ್ನು ಕೆದಕಲು ಕವಿಗಳಿಗೆ ಅನುಕೂಲವಿದ್ದಿದ್ದರೆ ಅವರ ಜನ್ಮಕಥೆಯ ಸ್ವಾರಸ್ಯವು ಬಹುಮಟ್ಟಿಗೆ ಇಳಿದುಹೋಗುತ್ತಿದ್ದಿತು. ಕೊಟ್ಟು ತೆಗೆದುಕೊಳ್ಳುವುದಕ್ಕೆ ಅಕ್ಷರ ಕೃಷಿ ಹಿತ್ತಾಳೆ ತಾಮ್ರದ ವ್ಯಾಪಾರವಲ್ಲ. ಅಲ್ಲದೆ ಈ ಕೆಲವು ನಿರ್ವಿವಾದವಾದ ಸಂಗತಿಗಳನ್ನು ಮರೆಯಬಾರದು :

(ಅ) ಚಿರಕಾಲದಿಂದಲೂ ಸಾಹಿತ್ಯಕ್ಕೂ ದಾರಿದ್ರ್ಯಕ್ಕೂ ನಿಕಟಸಂಬಂಧ ಬೆಳೆದುಬಂದಿದೆ. ಅದೇತಕ್ಕೋ ತಿಳಿಯದು. ಪ್ರಾಯಶಃ ಲಕ್ಷ್ಮೀ ಸರಸ್ವತಿಯರು ಅತ್ತೆ ಸೊಸೆಯರಾದುದರಿಂದ, ಸರಸ್ವತಿಯ ಸೇವಕರಿಗೆ ಲಕ್ಷ್ಮಿಯ ಪ್ರಸಾದ ಅಷ್ಟ ಕ್ಕಷ್ಟೆ. ಹೋಮರನು ಶಾರದೆಯ ಜಠರದಿಂದೊಗೆತಂದು, ಅವಳ ಮೊಲೆಯುಂಡು ಮಲೆತವನು. ಆದರೇನು? ಕುರುಡ. ಮನೆಯಿಂದ ಮನೆಗೆ ತಿರುಗಿ 'ಭಿಕ್ಷಾಂ ದೇಹಿ' ಎನ್ನುವುದು ಅವನ ಪಾಡು. ಬರಿದಾದ ತನ್ನ ದುಡ್ಡಿನ ಚೀಲದ ಮೇಲೆ ಚಾಸರನು ಒಂದು ಕೋಮಲ ಗೀತವನ್ನು ಬರೆದಿದ್ದಾನೆ. ಮತ್ತೊಬ್ಬನು ನಿರ್ಗತಿಕನಾಗಿ ಮೇಣದ ಬತ್ತಿಯನ್ನು ಕೊಳ್ಳಲಾರದೆ, ಸಾಕಿದ ಬೆಕ್ಕನ್ನು ಕುರಿತು "ಬರೆಯಲು ನಿನ್ನ ಕಣ್ಣುಗಳ ಬೆಳಕನ್ನು ಎರವು ಪಾಲಿಸು!" ಎಂದು ಹಾಡಿದ್ದಾನೆ. ಸಾವೇಜ್, ಜಾನ್ಸನ್ ಮುಂತಾದವರು ಮಲಗಲು ಒಂದು ಹಾಸಿಗೆಯನ್ನು ಬಾಡಿಗೆಗೆ ತೆಗೆದುಕೊಳ್ಳಲು ದುಡ್ಡಿಲ್ಲದೆ, ಎಷ್ಟೋ ರಾತ್ರಿ ಹಾದಿಹಾದಿಗಳಲ್ಲಿ ಸಂಚರಿಸುತ್ತ ನಿದ್ದೆಯನ್ನು ಗೆದ್ದರೆಂದು ತಿಳಿಯಬಂದಿದೆ. ಸೂಕ್ಷ್ಮ ಗ್ರಾಹಿಯಾದ ಸ್ನೇಹಿತನೊಬ್ಬನ ಆಶ್ರಯ ದೊರಕದಿದ್ದಲ್ಲಿ ವರ್ಡ್ಸ್‌ವರ್ತನಿಗೆ ಬದುಕು ದುಸ್ಸಾಧ್ಯವಾಗುತ್ತಿದ್ದಿತು. ಪೋರ್ಚುಗಲ್ಲಿನ ಮಹಾಕವಿ ಕೇಮೋಯನ್ಸನ ಬಡತನವು ವರ್ಣನಾತೀತವಾಗಿತ್ತು: ದಿವಾಳಿಗಳ ಸೆರೆಮನೆಯನ್ನು ಪದೇ ಪದೇ ಅನುಭವಿಸಿದ. ಜಾವಾ ದೇಶದವನಾದ ಆಳೊಬ್ಬ ಭಿಕ್ಷೆಯೆತ್ತಿ ಅವನನ್ನು ಕೆಲವು ದಿವಸ ಕಾಪಾಡಿದ; ಅವನು ವಿಧಿವಶನಾದಾಗ ಶವವನ್ನು ಮುಚ್ಚಲು ಒಂದು ಹೊದಿಕೆ ಕೂಡ ಇರಲಿಲ್ಲ. ಶೆರಿಡನ್ ಎಂಬ ಗ್ರಂಥಕರ್ತನು ಒಂದು ದಿವಸ ಹೊಸ ಪಾದರಕ್ಷೆಗಳನ್ನು ಕಾಲಿಗೆ ಧರಿಸಿಕೊಂಡಿದ್ದನು. ವಿಸ್ಮಿತರಾದ ಸ್ನೇಹಿತರನ್ನು ಕಂಡು, "ಇವು ಹೇಗೆ ನನಗೆ ಲಭಿಸಿದುವು, ಹೇಳಿ?" ಎಂದು ಒಗಟೆಯನ್ನು

ಮುಂದಿಟ್ಟನು. "ಎರವು ತಂದಿದ್ದಿ", "ಯಾರೋ ದಾತರು ಉಚಿತವಾಗಿ ಕೊಟ್ಟಿದ್ದಾರೆ", "ಮೋಚಿಗೆ ಇನ್ನೂ ಅದರ ಬೆಲೆ ಕೊಟ್ಟಿಲ್ಲ"—ಹೀಗೆ ಅವರು ತಮತಮಗೆ ತೋಚಿದಂತೆ ಹೇಳುತ್ತಾ ಹೋಗಲು, ಶೆರಿಡನ್ "ನೀವೊಬ್ಬರೂ ಊಹಿಸಲಾರಿರಿ. ನಾನು ನಗದು ಹಣ ಕೊಟ್ಟು ಕೊಂಡುಕೊಂಡೆ!" ಎಂದು ನಗುತ್ತ ನುಡಿದನು. ಅವನ ಮಗ ಯಾವಳೋ ಒಬ್ಬಳು ಬಡ ಯುವತಿಯನ್ನು ಮದುವೆಯಾಗುತ್ತೇನೆಂದು ಹಟ ಹಿಡಿದಾಗ, ತಂದೆ "ಸರ್ವಥಾ ಕೂಡದು. ಬೇಡ, ಟಾಮ್. ನೀನು ನನ್ನ ಅಪ್ಪಣೆಯನ್ನು ಉಲ್ಲಂಘಿಸಿದರೆ ಒಂದು ಷಿಲಿಂಗ್ ಮಾತ್ರ ನಿನಗೆ ಕೊಟ್ಟು ನನ್ನ ಆಸ್ತಿಯಿಂದ ನಿನ್ನನ್ನು ಹೊರಗೆ ಹಾಕುತ್ತೇನೆ!" ಎಂದು ಬೆದರಿಸಲು, ಮಗ "ಆಗಲಿ, ಆ ಷಿಲಿಂಗನ್ನು ನೀವು ಎಲ್ಲಿಂದಲೋ ಸಾಲಮಾಡಿ ತರಬೇಕು!" ಎಂದು ನಕಲಿ ಮಾಡಿದನಂತೆ. ಮುಮ್ಮಡಿ ಕೃಷ್ಣರಾಜ ಒಡೆಯರವರ ಆಸ್ಥಾನದಲ್ಲಿದ್ದ ಯಾದವ ರಾಯನೆಂಬ ಕವಿಗೆ ಉದ್ದವಾದ ಮೀಸೆಗಳಿದ್ದುವಂತೆ. ಒಬ್ಬ ಗೃಹಸ್ಥನು "ನಿನಗೇಕಯ್ಯ ಇಷ್ಟು ದೊಡ್ಡ ಮೀಸೆಗಳು?" ಎನ್ನಲು, ಅವನು "ತಮ್ಮಂಥಾ ಶ್ರೀಮಂತರ ಮನೆಯನ್ನು ಗುಡಿಸುವುದಕ್ಕೆ ಸ್ವಾಮಿ!" ಎಂದು ಜವಾಬು ಇತ್ತನಂತೆ. ಈ ತಾತ್ಪರ್ಯದ ಕಥೆಗಳಿಗೆ ಕೊನೆಯಿಲ್ಲ, ಮೊದಲಿಲ್ಲ. ಎಲ್ಲ ದಾರಿಗಳೂ ಒಂದೇ ಪಟ್ಟಣವನ್ನು ಸೇರುವುವು. ಸಾಹಿತಿಗೆ ರಿಕ್ತತೆ ಹಣೆಬರಹ. ಲಾಕ್ ಎಂಬ ದಾರ್ಶನಿಕನು ಕಲಾಭಿಮಾನದೇವಿಯರು ವಿಹರಿಸುತ್ತಿದ್ದ ಜಾಗವೆಂದು ಹೆಸರು ಹೊಂದಿದ್ದ ಪಾರ್ನಸೆಸ್ ಪ್ರದೇಶವನ್ನು ಹೀಗೆ ವರ್ಣಿಸಿದ—"ಅಲ್ಲಿ ಹಿತವಾದ ಹವವುಂಟು, ಆದರೆ ಭೂಮಿ ಬಂಜರು." ವರ್ಜಿಲ್, ಹಾರೆಸ್, ಷೇಕ್ಸ್‌ಪಿಯರ್, ಗಯಟೆ ಮೊದಲಾದ ನಾಲ್ಕಾರು ದೊಡ್ಡ ಕವಿಗಳು ಧನಿಕರಾದದ್ದು ಈ ನಿಜತ್ವದ ಕರಕರೆಯನ್ನು ಕರಗಿಸಲಾರದು.

(ಆ) ಯಾವ ಹೊತ್ತಿಗೆ ಎಷ್ಟು ಆದಾಯವನ್ನು ತರುತ್ತದೆಂದು ಮುಂಗಾಣ್ಕೆ ಕಾಣುವುದು ಸಾಧ್ಯವಿಲ್ಲ. ಮಿಲ್ಟನ್ನನ ಅನುಪಮ ಪದ್ಯಕಾವ್ಯಕ್ಕೆ ಹತ್ತು ಪೌಂಡು ಪ್ರತಿಫಲ! ಈಗಣ ಒಬ್ಬ ಸಾಧಾರಣ ಕವಿಯ ಸಣ್ಣ ಗೀತವೊಂದಕ್ಕೆ ಅಷ್ಟು ದ್ರವ್ಯ ಲಭಿಸಬಹುದು. ಗೋಲ್ಡ್‌ಸ್ಮಿತ್ತನ ಉತ್ಕೃಷ್ಟ ಕಾದಂಬರಿಗೆ ಅರುವತ್ತು ಗಿನಿ ಸಿಕ್ಕಿತು. ಕಿಪ್ಲಿಂಗನ ಕಟ್ಟುಕಥೆ 'ಜಂಗಲಿನ ಪುಸ್ತಕ' ಎಂಬುದು ವರ್ಷವೊಂದಕ್ಕೆ ಹತ್ತು ಸಾವಿರ ಪೌಂಡು ನಫೆ ತರಲು ಶಕ್ಯತೆ ಹೊಂದಿತು! ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಕೀಟ್ಸ್ ಷೆಲ್ಲಿಯವರ ಕೃತಿಗಳನ್ನು ಕೊಂಡು ಓದುವವರು ಬಹು ವಿರಳ. ಆದರೆ ಟಪ್ಪರ್ ಎಂಬ ಕುಕವಿಯ 'ಗಾದೆಗಳ ತತ್ವಶಾಸ್ತ್ರ' ಎಂಬ ಅಧಮ ವೃತ್ತ ವಿರಚನೆಯಿಂದ ಕವಿಗೆ ಹತ್ತುಸಾವಿರ ಪುಸ್ತಕದಂಗಡಿಯವನಿಗೆ ಹತ್ತುಸಾವಿರ ಲಾಭವಾಯ್ತು. ಈ ಬಗೆಯ ಅಸಮಾಧಾನ ವಿದ್ಯಮಾನಗಳನ್ನು ಬಗೆದು ರೋಸಿ ಹೋಗಿ,

ಪಾರ್‍ನ್ ಎಂಬ ಕವಿ ೧೮೪೪ರಲ್ಲಿ 'ಒರಯನ್' ಎಂಬೊಂದು ದೊಡ್ಡ ಕಾವ್ಯ ವನ್ನು ಬರೆದು, ಮುದ್ರಣ ಮಾಡಿಸಿ, ಅದನ್ನು ಮೂರು ಪೈಗಳಿ (ಒಂದು ಫಾರ್ದಿಂಗ್)ಗೆ ಒಂದು ಪ್ರತಿಯಂತೆ ಮಾರಿದನು. ಆ ಗ್ರಂಥಕ್ಕೆ 'ಮೂರು ಕಾಸಿನ ಮಹಾಕಾವ್ಯ' (*Farthing Epic*) ಎಂಬ ನೂತನ ನಾಮಧೇಯ ಉಂಟಾಯಿತು. ಅವನಂತೆಯೇ ಆಯಾಸಪಟ್ಟ ಇನ್ನೊಬ್ಬ "ಯಾವ ಪ್ರಕಟನೆಯಿಂದ ಪ್ರಕಟನಕಾರನಿಗೆ ಹೇರಳ ನಷ್ಟವಾಗುತ್ತದೆಯೋ ಅದರಿಂದ ಪ್ರಪಂಚಕ್ಕೆ ಹೇರಳ ಲಾಭ" ಎಂದು ನಿರ್ದಯ ನುಡಿ ನುಡಿದಿದ್ದಾನೆ. ಲಕ್ಷ್ಮೀ ಸರಸ್ವತಿಯರ ಬಳಗ ಯಾವ ಕ್ರಮವನ್ನು ಅನುಸರಿಸ ದೆಯೂ ಬೆಳೆಯಬಹುದು ಅಥವಾ ಅಕ್ರಮವಾದರೂ ಆಗಬಹುದು. ವಾಗೀಶ್ವರಿಯು ತನ್ನ ಕುವರ ಕುವರಿಯನ್ನು ದೊಡ್ಡದು ಚಿಕ್ಕದೆಂದು ಒಂದು ಸೂಕ್ತ ಮರ್ಯಾದೆಯಲ್ಲಿ ಮಣೆಯ ಮೇಲೆ ಕುಳ್ಳಿರಿಸಿ, ಆರತಿಗೆ ಮುಗ್ಗುಲು ಮನೆಯುವಳಾದ ಶ್ರೀದೇವಿಯನ್ನು ಕರೆದು ಹರಸೆಂದು ಪ್ರಾರ್ಥಿಸಿದರೆ, ಆ ಚಪಲಚಿತ್ತೆಯು ಪಂಕ್ತಿ ಮರ್ಯಾದೆಯನ್ನು ಅಲಕ್ಷಿಸಿ, ಚಾಂಚಲ್ಯದಿಂದ ಕಡೆಯ ಹುಡುಗನಿಗೆ ಕಿಂಕಾಪಿನ ಅಂಗಿ, ಮೊದಲಿಗನಿಗೆ ಮರದ ಪೇಸ, ಮಧ್ಯದವಳಿಗೆ ಘಟ್ಟಿ ವರಹಗಳ ಥೈಲಿ, ಎರಡನೆಯವನಿಗೆ ಒಂದೇ ಒಂದು ಹಣ—ಹೀಗೆ ಉಡುಗೊರೆಗಳನ್ನು ಓದಿಸುತ್ತಾಳೆ. ಸಾಹಿತ್ಯಕ್ಕೂ ಸಂಪತ್ತಿಗೂ ಯಾವ ಕಾರ್ಯಕಾರಣ ರೀತಿಯ ಅನ್ಯೋನ್ಯವೂ ಕಾಣಿಸದು. ಅದು ದೊರಕ ಬಹುದು, ದೊರಕದಿರಬಹುದು. ನಿರೀಕ್ಷಿತವೂ ನ್ಯಾಯಸಮ್ಮತವೂ ಸಂಬಲರ್ಹವೂ ಆದ ಬಹುಮಾನವೆನ್ನಲು ಆಧಾರವಿಲ್ಲ.

(ಇ) ಮತ್ತೊಂದು ವಿಷಯ. ಧನಕ್ಕೋಸ್ಕರವೇ ಬರೆದ ಕಾವ್ಯಗಳು ಅಂತೂ ಇಂತೂ ಅಸಮರ್ಪಕ. ಒರೆಯುಜ್ಜಿ ಪರೀಕ್ಷಿಸಿದಲ್ಲಿ ಬಹಳ ಪಡಿಗೆಯಾಗಿ ತೋರು ತ್ತವೆ. ಚಿನ್ನಬೆಳ್ಳಿಯ ಆಶೆಯೇತಕ್ಕೆ, ಸತ್ಯಸಂಕಲ್ಪವನ್ನುಳಿದು ಬೇರೊಂದು ಭೌತಿಕ ಸಾಮಾಜಿಕ ರಾಜಕೀಯ ಲಾಲಸೆಯಿಂದಲೋ ಯಾರೊಬ್ಬರ ನಿರ್ಬಂಧಕ್ಕೊಳ ಗಾಗಿಯೋ ಅಧಿಕಾರದ ಕಟ್ಟಾಜ್ಞೆಯನ್ನನುಸರಿಸಿಯೋ ತಯಾರಾದ ಗ್ರಂಥ ವಾವುದೂ ತೃಪ್ತಿಕರವಾಗಿಲ್ಲವೆಂದು ಪ್ರಪಂಚವೇ ಒಪ್ಪಿಕೊಂಡಿದೆ. ರಾಣಿಯ ಇಚ್ಛೆ ಯನ್ನು ಶಿರಸಾವಹಿಸಿ, ಷೇಕ್ಸ್‌ಪಿಯರು 'ಫಾಲ್‌ಸ್ಟಾಫ್' ಎಂಬ ತನ್ನ ಅದ್ವಿತೀಯ ಹಾಸ್ಯ ಪಾತ್ರವನ್ನು ದುಷ್ಪ್ರಣಯದಲ್ಲಿ ಚಿತ್ರಿಸಿ ಕಟ್ಟಿರುವ ನಾಟಕವು ಅವರಿಬ್ಬರ ಯೋಗ್ಯತೆಯ ಮಟ್ಟದಿಂದ ಬಹಳ ಕೆಳಗಿದೆ. ಜೇನ್ ಆಸ್ಟನ್ ಎಂಬ ಪ್ರಸಿದ್ಧ ಕಥೆಗಾರಳನ್ನು ರಾಜವಂಶಗಳನ್ನು ಕುರಿತು ಕೆಲವು ಚಾರಿತ್ರಿಕ ಕಾದಂಬರಿಗಳನ್ನು ಬರೆದುಕೊಡೆಂದು ಪುಸ್ತಕ ವ್ಯಾಪಾರಿಗಳು ಪೀಡಿಸಲು, ತಾನೆಂದಿಗೂ ಆ ಕೆಲಸ ವನ್ನು ಮಾಡುವುದಿಲ್ಲವೆಂದು ಒಂದೇ ಮಾತಿನಲ್ಲಿ ಅವರ ಹೂಟವನ್ನು ಮುಗಿಸಿ

ಬಿಟ್ಟಳು. ಸ್ಟೀವನ್ಸನ್ ಕೆಲವರ ಬಲಾತ್ಕಾರದಿಂದ ಫ್ರೆಂಚ್ ಭಾಷೆಯಲ್ಲಿ ಒಂದು ಕಥೆಯನ್ನು ಬರೆದ. ಆದರೆ ಅದನ್ನು ಪ್ರಕಟನೆಗೆ ಕೊಡದೆ ಹರಿದುಹಾಕಿಬಿಟ್ಟ. ಇವುಗಳಿಂದ ಸೂಚಿತವಾಗುವುದೇನೆಂದರೆ, ಕಾವ್ಯೋತ್ಪತ್ತಿಗೆ ಯುಕ್ತವಾದ ಸಹಜವಾದ ಕಾರಣ ಒಂದೇ. ಅದಲ್ಲದೆ ಬೇರೆ ಯಾವ ಒತ್ತಾಯ ಅಪೇಕ್ಷೆ ಪ್ರೋತ್ಸಾಹ ಫಲವಿದ್ದರೂ ಕೆಡುಕು. ಗಗನ ಗಂಗೆ ಉದ್ಭವಿಸಬೇಕಾದರೆ ತ್ರಿವಿಕ್ರಮನ ಉಂಗುಟದ ಸೋಕೇ ಬೇಕು. ಇತರ ಉದ್ವೇಗಗಳ ತಿವಿತದಿಂದ ಉಕ್ಕಿ ಹೊರಡುವ ಸ್ರೋತಗಳು ಗಂಗೆಯಲ್ಲ. ತನ್ನ ಕಾದಂಬರಿಗಳಿಂದ ಸಂಪಾದನೆಮಾಡಿ ಸಾಲ ತೀರಿಸಿದ ಸ್ಕಾಟ್‌ನನ್ನೂ ಕೂಡ ಬೈರನ್ 'ಕೂಲಿ ಕವಿ' ಎಂದು ದೂಷಿಸಿದ. ವರ್ಡ್ಸ್‌ವರ್ತ್ 'ಆಸ್ಥಾನ ಕವಿ' ಎಂಬ ಸರ್ಕಾರದ ಬಿರುದನ್ನು ಅಂಗೀಕರಿಸಿದುದಕ್ಕೆ ಬ್ರೌನಿಂಗು 'ನಾಯಕನ ಅವಸಾನ!' ಎಂದು ಕನಲಿ ಕಿರಿಚಿಬಿಟ್ಟನು. ಆದ್ದರಿಂದ ಧನದ ಯೋಚನೆ ಸಾಹಿತ್ಯದ ಅಧಿಷ್ಠಾನ ತತ್ವಕ್ಕೆ ಸಲ್ಲದು.

ಆ ಮೇಲೆ "ಕರೋತಿ ಕೀರ್ತಿಂ ಪ್ರೀತಿಂ ಚ ಸಾಧುಕಾವ್ಯ ನಿಷೇವಣಂ." ಸಾಹಿತ್ಯದಿಂದ ಕವಿಗಾಗಬಹುದಾದ ಇನ್ನೊಂದು ಉಪಕಾರ ಖ್ಯಾತಿ. ಈ ಭಾವನೆಗೆ ಬಹಳ ಮಂಡನೆ ದೊರಕಿದೆ. ಸುಶಿಕ್ಷಿತ ನರಪುಂಗವನಲ್ಲಿಯೂ ಯಶಸ್ವಿಯಾಗಬೇಕೆಂಬ ಆಶೆಯ ಲೋಪವಿದ್ದೇ ಇರುತ್ತದೆ ಎಂದಿದ್ದಾನೆ ಮಿಲ್ಟನ್. ಅದರಲ್ಲಾವ ಅಚ್ಚರಿಯೂ ಇಲ್ಲ. ಮೃತ್ಯುವನ್ನು ಗೆಲ್ಲುವ ಮಹಾ ಉದ್ಯಮ ಮನುಜನಿಗೆ ಸಹಜವಾದದ್ದು, ಚಿರಕಾಲದಿಂದಲೂ ನಡೆದುಬಂದದ್ದು. ಸತ್ತಮೇಲೆಯೂ ಸೂಕ್ಷ್ಮ ಶರೀರಿಯಾಗಿ ಭೂಮಿಯ ಮೇಲೆ ಬದುಕಬೇಕೆಂಬ ಸಾಹಸ ಸಂನ್ಯಾಸಿಯನ್ನೂ ಮನ್ನಿಸಿಲ್ಲ. ಹೆಂಗಸಿನ ಒಲಪು ಒಯ್ಯಾರಕ್ಕಿಂತಲೂ ವಿಪರೀತ ಕವಿಗಳ ಸೊಕ್ಕಿನ ಹಾವ ಭಾವ. ಲೋಕವೆಲ್ಲವೂ ತಮ್ಮನ್ನು ಆಲಸ್ಯಪಡದೆ ತಡೆಯಿಲ್ಲದೆ ಹೊಗಳಬೇಕು, ತಮ್ಮ ಕಂದ ವೃತ್ತ ಗದ್ಯ ಸೀಸಕಗಳನ್ನು ದರ್ಶಿಸಿ ಬೆರಗಾಗಬೇಕು, ಮನುಷ್ಯೋತ್ತಮನೆಂದು ಮನ್ನಣೆಮಾಡಿ ಆನೆಯ ಮೇಲೆ ಕುಳ್ಳಿರಿಸಿ ಶಬಗಸ್ತು ತಿರುಗಿಸಬೇಕು, 'ಕವಿಗಂಡ ಪೆಂಡೆಯ'ವನ್ನು ತಮ್ಮ ಕಾಲಿಗೆ ಅರಸನು ತನ್ನ ಕೈಯಿಂದಲೇ ತೊಡಿಸಬೇಕು, ಬಾಯಿತುಂಬ ಕಲ್ಲುಸಕ್ಕರೆಯ ಹರಳು, ಚಿನ್ನದ ನಾಣ್ಯಗಳನ್ನು ತುಂಬಬೇಕು ಮೊದಲಾದ ಕೋರಿಕೆಗಳು ಅವರನ್ನು ಕಾಡಿದರೆ, ಅವರು ಕವಿಕುಲಕ್ಕೆ ಸೇರಿದವರೆಂದು ನಿಶ್ಚಿತವಾಯ್ತು. ಟೆನ್ನಿಸನ್ ಕವಿ, ಅರ್ವಿಂಗ್ ನಟ, ಮತ್ತೊಬ್ಬ—ಈ ಮೂವರೂ ಒಂದುಬಾರಿ ಲಂಡನ್ನಿನಲ್ಲಿ ಪಾದಚಾರಿಗಳಾಗಿ ಹೋಗುತ್ತಿದ್ದರಂತೆ. ಕವಿ ಸ್ವಲ್ಪ ಮುಂದೆ ನಡೆಯುತ್ತಿದ್ದ. ಎದುರುಗಡೆಯ ದಾರಿಗರಲ್ಲಿ ಕೆಲವರು ಅರ್ವಿಂಗನ ಕಡೆಗೆ ಬೆರಳು ತೋರಿಸಿ, "ನೋಡು, ಅಲ್ಲಿ ಅರ್ವಿಂಗ್ ಹೋಗುತ್ತಿದ್ದಾನೆ, ಅವನೇ ಅರ್ವಿಂಗ್!"

ಎಂದು ಮಾತಾಡಿಕೊಂಡರು. ಅದು ಟೆನಿಸನ್ನಿಗೆ ಸ್ಪಷ್ಟವಾಗಿ ಕೇಳಿಸಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ "ನೀನೇತಕ್ಕೆ ಲಂಡನ್ನಿಗೆ ಹೆಚ್ಚು ಸಾರಿ ಬರಲೊಲ್ಲೆ?" ಎಂದು ಟೆನಿಸನ್ನನ್ನು ಅವರಿಬ್ಬರೂ ಕೇಳಲು, ಅವನು "ಅಯ್ಯೋ, ನನಗೆ ಜನಗಳ ಅವಾಂತರ ಸೇರದು. ಲಂಡನ್ನಿಗೆ ಬಂದರೆ ಎಲ್ಲರೂ ನನ್ನ ಕಡೆ ಕೈತೋರಿಸುವವರೇ. ಈಗ ತಾನೇ ನೋಡಿದಿರಲ್ಲ ನೀವು. ಆ ಗುಂಪು ನನ್ನನ್ನು ಹೇಗೆ ದೃಷ್ಟಿಸಿ ನೋಡಿತು!" ಎಂದನಂತೆ. ಅವನ ಮಿತ್ರರು ಪ್ರಯಾಸದಿಂದ ನಗುವನ್ನು ತಮ್ಮೊಳಗೆ ನುಂಗಿಕೊಂಡರು. ಆದರೆ ಖಂಡಿತವಾಗಿ ಕೀರ್ತಿಲತೆಯು ಹಬ್ಬುತ್ತದೆಂದು ಯಾವ ಕವಿ ನೆಚ್ಚಿದರೂ ಹಾನಿ. ಜನಪದದ ಅಭಿರುಚಿ ಏರಿಳಿತಕ್ಕೆ ಒಳಪಟ್ಟಿದೆ. ಅದರಲ್ಲಿ ವಿಕೃತ ಬದಲಾವಣೆಯಾದರೂ ಕೌತುಕವಲ್ಲ. ಚಿತ್ತವು ತೀವ್ರ ಪಕ್ಷಪಾತ ಗಾಢಾಭಿಮಾನಿಗಳಿಗೆ ಪಕ್ಕಾಗಿರುವುದ ರಿಂದ ತಪ್ಪುತೀರ್ಪುಗಳಿಗೆ ಅವಕಾಶ ಬೇಕಾದಷ್ಟಿದೆ. ಕಡೆಯದಾಗಿ, ಜನಗಳ ಮೆಚ್ಚಿಕೆ ನೈಜ ಕೀರ್ತಿಯೇ? ಸಾಹಿತ್ಯ ಚರಿತ್ರೆಯಲ್ಲಿ ಜರುಗಿರುವ ಕೆಲವು ಹೊಗಳಿಕೆ ತೆಗಳಿಕೆಗಳ ಹಗಲು-ರಾತ್ರಿ ನಾಟಕಗಳು ನಮ್ಮನ್ನು ಚಕಿತಗೊಳಿಸತಕ್ಕವು. ಸಮ ಕಾಲೀನರ ವಿಚಾರದಲ್ಲಿ ನಿರ್ದಾಕ್ಷಿಣ್ಯವಾದ, ನಿಷ್ಕಪಟವಾದ, ನಮ್ಮ ಮಕ್ಕಳು ಮರಿಮಕ್ಕಳ ಅವಧಿಯಲ್ಲಿ ನಿಲ್ಲಬಹುದಾದ ಅಭಿಪ್ರಾಯಗಳನ್ನು ಹೇಳುವುದು ಬಹು ಕಷ್ಟ, ಬಹುಶಃ ಅಸಾಧ್ಯ. ಅಲ್ಲದೆ ನಿಸರ್ಗಪ್ರಖ್ಯಾತಿ ಸ್ವರ್ಗದಲ್ಲಿ ಬೆಳೆಯುವ ಸಸ್ಯ ವೆಂದೂ ಹೇಳಿಕೆಯಿದೆ. ಅಂದರೆ ಅದು ಪೂರ್ತಿ ನಿಜವಲ್ಲ. ಆದರೂ ಕೀರ್ತಿಯು ಕವಿಗೆ ಕೆಲವು ಕಾಲದ ತರುವಾಯ ಬರತಕ್ಕ ಗೌರವ. ಹತ್ತಾರು ತಲೆಮಾರುಗಳು, ನಾನಾ ದೇಶಗಳು, ಹೊರಗಣ ಜನಾಂಗಗಳು, ಶತಮಾನ ಶತಮಾನಕ್ಕೂ ಯುಮಧರ್ಮ ಧರಿಸುವ ಹೊಸ ಸೋಗುಗಳು ಒಬ್ಬ ಕವಿಯನ್ನು ಕುರಿತು, ಬಿಡಿ ವಿವರಗಳಲ್ಲಿ ಬೇರೆ ಬೇರೆಯಾದರೂ ಒಟ್ಟಿನಲ್ಲಿ ಒಂದಾಗಿ, ಅವನಿಗೆ ಗಣ್ಯಸ್ಥಾನವನ್ನು ಹಿಂದೆಗೆಯದೆ ಕೊಟ್ಟರೆ ಆಗ ಕವಿಯ ಹೆಸರು ಶಾಶ್ವತ, ಕವಿ ಚಿರಂಜೀವಿ. ಸಾಹಿತಿಯು ತೋಪನ್ನು ನೆಡುತ್ತಾನೆ. ಅದರ ನೆರಳಿನಲ್ಲಿ ತಂಪಾಗಿ ಕುಳಿತುಕೊಳ್ಳುವುದು ಅವನಲ್ಲ, ಅವನ ಪ್ರೇತ. ಪ್ರಪಂಚದ ಅತ್ಯುತ್ಕೃಷ್ಟ ಕಾವ್ಯಗಳಲ್ಲಿ ಒಂದನ್ನು ಸೃಜಿಸಿದ ಸರ್ವಾಂಟೀಸ್ ಅದರ ಪ್ರತಿಯೊಂದನ್ನು ಆಗ ಮಹಿಮಾನ್ವಿತನೆನ್ನಿಸಿಕೊಂಡಿದ್ದ ಲೋಪ್ ಡ ವೇಗನಿಗೆ ಕಳುಹಿಸಿ, ಏನಾದರೂ ಸಹಾಯಮಾಡೆಂದು ಕೇಳಿಕೊಂಡನು. ಅವನು "ನಿನಗೆ ಹೇಗೆ ನೆರವಾಗಲಿ? ನಿನ್ನ ಕೃತಿಯಲ್ಲಿ ಕಿಂಚಿತ್ತು ಗುಣೋತ್ಕರ್ಷವೂ ಗೋಚರ ವಾಗುವುದಿಲ್ಲ!" ಎಂದು ಪುಸ್ತಕವನ್ನು ಹಿಂದಕ್ಕೆ ಕಳುಹಿಸಿದ. ವಾಲ್ಟೇರನಿಗೆ ಷೇಕ್ಸ್ಪಿಯರು ಒಬ್ಬ ಅನಾಗರಿಕ ಬಲಿಷ್ಠ, ಶಕ್ತ, ಕಾಡುಮನುಷ್ಯನಾಗಿ ಕಂಡ. ಅವನ ಸಾರಸ್ವತಪ್ರಪಂಚ ಕಸದ ದೊಡ್ಡ ತಿಪ್ಪೆಯಾಗಿ ತೋರಿತು. ಅಲ್ಲಲ್ಲಿ ಒಂದು

ಮುತ್ತು ಅಷ್ಟೆ! ಸಾಫೊಕ್ಲೀಸನು ತನ್ನ ಪ್ರಧಾನ ನಾಟಕವನ್ನು ಸ್ಪರ್ಧೆಗೆ ಕಳುಹಿಸಿದಾಗ ಈಗ ಹೆಚ್ಚುಕಡಮೆ ಅಜ್ಞಾತನಾಗಿರುವ ಒಬ್ಬ ಫಿಲೋಕ್ಲೀಸನು ಅವನನ್ನು ಸೋಲಿಸಿದ. ಯೂರಿಪಿಡೀಸನು ತನ್ನ ಪ್ರಧಾನ ನಾಟಕವನ್ನು ಪ್ರದರ್ಶಿಸಿದಾಗ ಅವನಿಗೆ ಮೂರನೆಯ ಬಹುಮಾನ ದೊರೆಯಿತು. ಮಿಲ್ಟನ್ನನ ಕಾಲದಲ್ಲಿ ಕೌಲಿ ಎಂಬವನ ಹೆಸರನ್ನೇ ಎಲ್ಲರೂ ಹೊಗಳುತ್ತಿದ್ದರು. ಈಗ ಅವನ ಪದ್ಯಗಳನ್ನು ಕೇಳುವವರು ಇಲ್ಲವೇ ಇಲ್ಲ; ಪ್ರಬಂಧಗಳನ್ನು ತಿರುವಿಹಾಕುವವನು ಅಲ್ಲೊಬ್ಬ ಇಲ್ಲೊಬ್ಬ. ಅಲೆಕ್ಸಾಂಡರನ ಉತ್ತೇಜನ ಪಾಲನೆಯೆಲ್ಲ ಕೀರಿಲಸ್ ಎಂಬ ದುಷ್ಕವಿಗೆ. ವಾಗ್ಮಿಗಳಲ್ಲಿ ಅಗ್ರೇಸರನಾದ ಸಿಸಿರೊ ಎಂಬವನಿಗಿಂತಲೂ ಸೆಸ್ಟಸ್ ಎಂಬಾತನನ್ನು ಆ ಕಾಲದ ರೋಮನರು ಹೆಚ್ಚಾಗಿ ಮೆಚ್ಚುತ್ತಿದ್ದರು. ಅವನ ವಚನಗಳನ್ನು ಆಸಕ್ತಿಯಿಂದ ಕಂಠಪಾಠಮಾಡಿ ಒಬ್ಬರಿಗೊಬ್ಬರು ಉದ್ಧರಿಸುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಇಂಗ್ಲೆಂಡಿನಲ್ಲಿ ವಿಶೇಷ ಪ್ರಖ್ಯಾತವಾದ ಕಾವ್ಯ ಮ್ಯಾಥಿಯಸ್ಸನ 'ಸಾಹಿತ್ಯವನ್ನು ಹಿಂಬಾಲಿಸುವುದು' ಎಂಬುದು; ಈಗ ಅದು ನಾಮಮಾತ್ರ ಶೇಷವಾಗಿದೆ. ತಮ್ಮ ಸಮಯದಲ್ಲಿ ಕಾವ್ಯಧುರಂಧರರೆನ್ನಿಸಿಕೊಂಡವರ ಪಾಡು ಈಗ ಏನಾಗಿ ಹೋಗಿದೆ! ಸ್ಥಾಯಿಯಾದ ಆದರಣೆ ಶತಮಾನಗಳ ತರುವಾಯ ಶ್ರೇಷ್ಠ ಕವಿಗೆ ಬರತಕ್ಕ ಕಿರೀಟ. ಪರದಾಡಿ ಯಾವುದೋ ಒಂದನ್ನು ಮಂಡೆಯ ಮೇಲೆ ಏರಿಸಿಕೊಂಡರೆ ಅದು ಬರಿಯ ಸುನೇರಿ ಕಾಗದದ್ದು! ಆದ್ದರಿಂದ ಯಶಸ್ಸು ಕೂಡ ಸಾಹಿತ್ಯದ ಹೊರ ಅಂಗಳಕ್ಕೆ ಹೊಂದಿಕೊಂಡದ್ದು. ಗರ್ಭಗುಡಿಯಿಂದ ಬಹುದೂರ ಆಚೆ ಪಾಯ ಶುದ್ಧಿಮಾಡದೆ ಜನಪ್ರಿಯತೆಯ ಮರಳಿನ ಮೇಲೆ ಕಾವ್ಯಸೌಧವನ್ನು ಕಟ್ಟಲು ಯತ್ನಿಸುವವನು ಆತ್ಮವಿದನಲ್ಲ.

ಕೀರ್ತಿ ಭಾಗ್ಯಗಳಲ್ಲದೆ ಗ್ರಂಥನಿರ್ಮಾಪಕನ ಬುದ್ಧಿಯನ್ನು ಕೆಡಿಸುವ ಒಂದೆರಡು ಇತರ ಭ್ರಮೆಗಳೂ ಇವೆ. ಕೆಲಕವಿಗಳು ಸಾಹಿತ್ಯದ ಮುಖಾಂತರ ಲೋಕ ಕಲ್ಯಾಣವನ್ನೆಸಗಿ ಜನ್ಮಸಾಫಲ್ಯವನ್ನು ಸಾಧಿಸುತ್ತೇವೆಂದು ಬಗೆಯುವರು. ತಮ್ಮ ಕಣ್ಣಿಗೆ ಬಿದ್ದ ಸತ್ಯಾಂಶ, ಚಿತ್ತವನ್ನಪಹರಿಸಿದ ಗಾಡಿಯ ಲಾಸ್ಯ, ಚೇತನವನ್ನು ಕುಣಿಸಿದ ಆನಂದಾನುಭವಗಳನ್ನು ಕೇವಲ ಪರೋಪಕಾರಕ್ಕಾಗಿ ಬೋಧಿಸಿ, ಭ್ರಾತೃಸೇವೆಯನ್ನೆಸಗಿ, ಈಶ್ವರನ ಕೃಪೆಯನ್ನು ಪಡೆಯುವೆವೆನ್ನುವರು. ಒಂದು ಪಂಗಡದ ಭಕ್ತರು ಹಿರಿದ ಕತ್ತಿಯಿಂದ ದೇಶವನ್ನು ರಕ್ಷಿಸುವರು; ಇನ್ನೊಂದು ಗುಂಪಿನವರು ಕುಶಲ ಕೆಲಸಮಾಡಿ ಸಮಾಜ ಹಿತವನ್ನು ಸಾಧಿಸುವರು; ಮತ್ತೊಂದು ಗಡಣದವರು ನಿಪುಣ ಆಡಳಿತ ವ್ಯವಸ್ಥೆಯಿಂದ ಕ್ಷೇಮವನ್ನುಂಟುಮಾಡುವರು. ಸಾಹಿತಿಗಳಾದರೋ ಕಡ್ಡಿ ಬಳಪಗಳ ಮೂಲಕ ಮನುಷ್ಯರ ಪ್ರಗತಿಗೆ ಅನುಕೂಲ ಒದಗಿಸುವರು. ಹಾಗೆಯೇ

ಭಾಷೆಯನ್ನು ಭದ್ರಗೊಳಿಸಿ, ಪುಷ್ಟಿಗೊಳಿಸಿ, ಬೆಳೆಸಿ, ಮುಂದುವರಿಸಿ, ಆ ಸೇವೆಯಿಂದಲೂ ತುಷ್ಟಿಯನ್ನೂ ಮುಕ್ತಿಯನ್ನೂ ಹೊಂದುವೆವೆಂದು ಉಕ್ತಿಹೇಳುವರು. ಏಕಾಗಬಾರದು? ಸಾಹಿತ್ಯರತ್ನಾಕರವನ್ನು ಕಡೆದರೆ ಉದಿಸುವ ಅಮೂಲ್ಯ ವಸ್ತುಗಳಲ್ಲಿ ಸಮಾಜದ ಬೆಳವಣಿಗೆ ಭಾಷಾಭಿವೃದ್ಧಿಗಳನ್ನೂ ಲೆಕ್ಕಿಸಬೇಕು. ಆದರೆ ಸಾಹಿತ್ಯದಿಂದ ಕವಿಗುಂಟಾಗುವ ಸಂಭಾವನೆಗಳು ಅವೇ ಎನ್ನಬಹುದೇ? ಅವು ಗೌಣವಾದ ಫಲಗಳು. ಅವನ್ನೇ ಮೇಲ್ಮೆಯವೆಂದು ಭ್ರಾಂತಿಪಟ್ಟು, ಸೇವೆಯೆಂಬ ಸೂತ್ರವನ್ನು ಪದೇ ಪದೇ ಸೊರಹುವ ಕವಿ ಅಜ್ಞಾನ ಅಥವಾ ಆತ್ಮವಂಚನೆಯ ಗಾಳಕ್ಕೆ ಸಿಕ್ಕಿದ 'ಬಾಳೆಮೀನು'. ಪ್ರಾಮಾಣಿಕ ಕವಿಯ ಮನಸ್ಸಿಗೆ ಈ ಆವ ಆಕಾಂಕ್ಷೆಯೂ ಹೊಳೆಯದು, ಹೊಳೆದರೂ ನಿಶಿಯ ಕಪ್ಪುದುಪ್ಪಟಿಯನ್ನು ಸೀಳಿಕೊಂಡು ಒಂದು ಕ್ಷಣ ಹೊರಬಂದು ಮರುಕ್ಷಣ ಒಳಗೆ ಹುದುಗಿಕೊಳ್ಳುವ ಕೋಲ್ಮಿಂಚಿನಂತೆ, ಘಂಟೆಗಳ ಕಾಲ ಭೂಮ್ಯಾಕಾಶಗಳನ್ನು ಹಾಲಿನಲ್ಲಿ ತೊಳೆದು ಬೆಳಗುವ ಚಂದ್ರನಂತಲ್ಲ.

ಹಾಗಾದರೆ ಕಾವ್ಯಸೃಷ್ಟಿಯನ್ನೆಸಗುವುದರಲ್ಲಿ ಕವಿಯು ಈಡೇರಿಸಲು ಹಂಬಲಿಸುವ ಪ್ರಧಾನ ಧ್ಯೇಯವಾವುದು? ಯಾವುದಕ್ಕೋಸ್ಕರ, ಏತರ ಪ್ರಸನ್ನ ಒತ್ತಾಸೆಯಿಂದ, ಅನಿವಾರ್ಯ ಒತ್ತಾಯದಿಂದ, ಕವಿಯು ಹರಟುತ್ತಾನೆ, ಹಾಡುತ್ತಾನೆ, ಒರೆಯುತ್ತಾನೆ, ಬರೆಯುತ್ತಾನೆ? ಒಂದು ಪಕ್ಷದಿಂದ ಪರಿಶೀಲಿಸಿದರೆ ಕಾವ್ಯರಚನೆಗೆ ಯಾವ ನಿಷ್ಕೃಷ್ಟವಾದ ಉದ್ದೇಶವೂ ಇಲ್ಲ. ಅದೂ ಒಂದು ಬಗೆಯ ನಿಷ್ಕಾಮಕರ್ಮ. ಕವಿಯ ಅಂತಃಕರಣ ಅನಾಸಕ್ತಿಯಿಂದ ಪೂರಿತವಾದ್ದು. "ಲಿನೆಟ್ ಹಕ್ಕಿಯು ಗಾನಗೈಯುವಂತೆ ನಾನೂ ಗಾನಗೈಯುತ್ತೇನೆ" ಎಂಬುದು ಟೆನಿಸನ್ನನ ಒಂದು ವಾಕ್ಯ. "ಏತಕ್ಕೆ ನನ್ನನ್ನು ಹೊರಗೆಳೆದು ತಂದೆ?" ಎಂದು ಕೃತಿಯು ಪ್ರಶ್ನಿಸಿದರೆ, "ನಿನ್ನನ್ನು ನಾನೆಲ್ಲಿ ತಂದೆ, ನೀನೇ ಬಂದೆ!" ಎಂದು ಕೃತಿಸ್ವಾಮಿಯು ಉತ್ತರವೀಯಬಹುದು. ಇದು ವಕ್ರೋಕ್ತಿಯಲ್ಲ, ಹುಡುಗಾಟಿಕೆಯುಲ್ಲ. ಅದಿರಲಿ, ಸಮಯ ಸನ್ನಿವೇಶ ಚರಿತ್ರೆ ಉದಾಹರಣೆಯೆಲ್ಲವನ್ನೂ ಪರಿಶೀಲಿಸಿ ತೀರ್ಪುಕೊಟ್ಟಲ್ಲಿ, ಕವಿಯ ಆಂತರ್ಯದ ಗುರಿ, ಕವಿಗೆ ಸಿಕ್ಕುವ ಮುಖ್ಯಫಲ—ಈ ಎರಡೂ ಒಂದೇ ಎಂದು ಭಾಸವಾಗುತ್ತದೆ: ಅದು ಬಿಡುಗಡೆ! ಸೂರ್ಯೋದಯವನ್ನೋ ಚಕ್ರವರ್ತಿಯ ಸಾವನ್ನೋ ಚಿತ್ರವೊಂದನ್ನೋ ಪಾತ್ರವೊಂದನ್ನೋ ಹಸುರೆಲೆಯ ನಾಟ್ಯವನ್ನೋ ವಿಷಪುರುಷರ ಕ್ರೌರ್ಯವನ್ನೋ ಸಿರಿತನದ ಮೋದವನ್ನೋ ಬಡತನದ ಬಾಧೆಯನ್ನೋ ಸ್ನೇಹದ ಮೋಹವನ್ನೋ ಪ್ರೇಮದ ಮೋಸವನ್ನೋ ಬಗೆದಾಗ, ಕವಿಯ ಹೃದಯವು ನಾನಾ ಭಾವ ಭಾವನೆ ಶಂಕೆ ನಂಬಿಕೆ ಸಾದೃಶ್ಯ ವೈಷಮ್ಯ ಅಭಿಪ್ರಾಯ ಕಲ್ಪನೆಗಳಿಂದ ತುಂಬಿಕೊಳ್ಳುತ್ತದೆ. ಅವುಗಳ ಕೂಟ ಆರ್ಭಟ ಹೊರಳಾಟ ಹೋರಾಟಗಳಿಂದ ದೊಡ್ಡ

ಆಂದೋಳನ ಸಂಘಟಿಸಿ, ಕವಿಯ ಮೇಲೊಂದು ಗುರುಭಾರ ಬೀಳುತ್ತದೆ. ಆ ಹೊರೆಯಿಂದ ವಿಮೋಚನೆ ಹೊಂದಲು ಅವನಿಗೆ ತಾಯಿ ಶಾರದೆ ತೋರಿರುವ ಉಪಾಯ ಕಾವ್ಯರಚನೆ. ಅದನ್ನು ಮುಗಿಸಿದನಂತರ ಅವನಿಗೆ ಸಂತುಷ್ಟಿ, ಶಾಂತಿ. ಕಾವ್ಯೋದಯವನ್ನು ಪ್ರಸವ ಕ್ರಿಯೆಗೆ ಹೋಲಿಸಿರುವುದು ಎಲ್ಲರಿಗೂ ತಿಳಿದ ಅಂಶ. ಸೌಂದರ್ಯ ಪ್ರೇರಣೆ ಪ್ರಾಪ್ತಿಸಿದಾಗ ಉಪಾಸಕನ ಮನದಲ್ಲಿ ವಿಪರೀತ ಕಳವಳ. ಯಾವುದೋ ಒಂದು ಪ್ರಚಂಡ ಗ್ರಹ ಒಳಹೊಕ್ಕು ಕುತ್ತಿಗೆಯನ್ನು ಹಿಸುಕುತ್ತ, ಬಹು ಪೀಡಿಸಿದ ಹಾಗೆ. ಪದ್ಯಗದ್ಯ ಮಂತ್ರಗಳನ್ನು ಉಚ್ಚರಿಸುವವರೆಗೂ ಆ ಗ್ರಹದ ಉಚ್ಚಾಟನೆಯಾಗದು. ಇನ್ನೊಂದು ರೀತಿಯಲ್ಲಿ ವರ್ಣಿಸಿದರೆ: ಸೃಷ್ಟಿ ವೈಲಕ್ಷಣ್ಯ ಕವಿಯ ಮನಸ್ಸನ್ನು ತಾಕಿದೊಡನೆಯೇ ಅದು ಅಗಾಧವಾದ ಸಾಲವಾಗಿ ಪರ್ಯಾಯಹೊಂದಿ, ಅವನ ತಲೆಯ ಮೇಲೆ ಹಾಸುಗಲ್ಲನ್ನು ಹೇರಿದಂತೆ ಒತ್ತುವುದು. ಆಗ ಅವನಿಗೆ ಒಂದೇ ಆಶಯ: ಬೇಗ ಋಣಮುಕ್ತನಾಗಬೇಕು. ಅಲ್ಲಿಯವರೆಗೂ ಅವನಿಗೆ ಅನ್ನನೀರಿನ ಅಗತ್ಯವಿಲ್ಲ, ನಿದ್ದೆ ಬಾರದು, ಸಮಾಧಾನ ಸಾವಿರ ಮೈಲಿಯಾಚೆ. ದೇವರು ಕವಿಜಾತಿಗೆ ಕೆಲವು ಶಕ್ತಿಗಳನ್ನು ಹೆಚ್ಚಿನ ಅಳತೆಯಲ್ಲಿ ದಯಪಾಲಿಸಿರುವನು. ವರಮಾನಕ್ಕೆ ತಕ್ಕ ತೆರಿಗೆಯನ್ನು ಅವರು ಕೊಡಬೇಕಾದುದು ನ್ಯಾಯ. ಹೀಗೆ ಕವಿಯು ಹೊತ್ತುದನ್ನಿಳಿಸಿ ಹಗುರ ಹೊಂದುವುದಕ್ಕೆ, ಗ್ರಹಚೇಷ್ಟೆಯಿಂದ ವಿಮೋಚನೆ ಪಡೆಯುವುದಕ್ಕೆ, ಕಡದ ದುಗುಡವನ್ನು ಕಳೆದುಕೊಳ್ಳುವುದಕ್ಕೆ "ಹಲಗೆ ಬಳಪವ" ಹಿಡಿಯಬೇಕು, ಹಿಡಿಯುತ್ತಾನೆ. ಆದರೆ ಒಂದು ಎಚ್ಚರಿಕೆ. ಹೀಗೆ ಕವಿಗೆ ಆಗಾಗ ತಟ್ಟುವುದು ಒಂದು ಸುಖಪೀಡೆ. ಅದರಿಂದ ಹರ್ಷಸಂಕಟ. ಆ ಅಚ್ಚರಿಗಂಟನ್ನು ಹೊರುವ ಆಯಾಸ ಒಂದು ಆಕರ್ಷಕ ಅವಸ್ಥೆ. ಅದನ್ನಿಳಿಸಿ ಬಿಡುಗಡೆ ಹೊಂದುವ ಬೆಸನ ಒಂದು ಗಡುಸು, ಚುರುಕು ಶ್ರದ್ಧೆ.

ಇನ್ನು ಓದುಗರಿಗೆ ಸಾಹಿತ್ಯವು ಮಡಿಲಿನಲ್ಲಿ ಕಟ್ಟಿ ತರುವ ಉಂಡೆ ಚಕ್ಕುಲಿಯ ವೃತ್ತಾಂತವನ್ನು ಆಲಿಸೋಣ. ಸಾಹಿತಿಗಳೂ ಈ ಸಂದಣಿಗೆ ಸೇರಿಕೊಂಡು, ತಮ್ಮ ಮೆದುಳಿನ ಶಿಶುಗಳನ್ನು ತಾವೇ ಬೇರೆಯವರಂತೆ ಮುಟ್ಟಿ, ಮುದ್ದಿಸಿ, ಗಲ್ಲವನ್ನು ತಿವಿದು, ನೆತ್ತಿಯನ್ನು ಮೂಸಿ ನೋಡಿ, ಹರ್ಷದಿಂದ ಉಬ್ಬಬಹುದು. ಎಲ್ಲರಿಗೂ ಸಾಹಿತ್ಯ ಕ್ಷಿಪ್ರವಾಗಿ ಕ್ಷಣಿಕ ವಿಶ್ರಾಂತಿಯನ್ನು ಈಯಬಲ್ಲುದು. ಗರ್ವ ಲೋಭ ಅನ್ಯಾಯ ಹಿಂಸೆ ಕಲ್ಮಷ ಕೋಟಲೆಗಳಿಂದ ನಿಬಿಡವಾಗಿ ಅನಿಷ್ಟವಾದ ಸಂಸಾರ ಚಕ್ರದಿಂದ ಯಾರಿಗೆತಾನೆ ಕೆಲ ಘಳಿಗೆ ವಿರಾಮ ಬೇಡ? ಪ್ರತಿ ದಿವಸವೂ ತಪ್ಪದೆ ಪ್ರಾಪ್ತಿಸುವ ಕಷ್ಟನಿಷ್ಠುರಗಳನ್ನು ಹಿಂದೆಬಿಟ್ಟು, ಸ್ವಲ್ಪಹೊತ್ತು ಆವುದೋ ದೂರದ ಮಿಥ್ಯಾ ಪ್ರಪಂಚದಲ್ಲಿ ಯಾವ ಬಂಧನವೂ ಇಲ್ಲದೆ ಹಾರಾಡುವ ಅವಕಾಶ, ಸುಯೋಗ,

"ತಪ್ಪಿಸಿಕೊಂಡು ಓಡಿಹೋಗಲು ಒಂದು ದಾರಿ" ಸಾಹಿತ್ಯ (Literature as a Means of Escape)ವೆಂಬುದನ್ನು ಗ್ರಹಿಸಬೇಕು. ಮಾಡಿದ್ದನ್ನು ತಿರುಗಿ ಮಾಡುವುದು, ಸಲಾಕಿಯನ್ನು ಎಳೆದು ಪುನಃ ಸಲಾಕಿಯನ್ನು ಎಳೆಯುವುದು, ತೋಡಿದ ಗುಂಡಿಯ ಆಕಾರದಲ್ಲಿ ಇನ್ನೊಂದು ಗುಂಡಿ ತೋಡುವುದು, ನಡೆದ ಮೈಲಿಯನ್ನು ಮತ್ತೊಮ್ಮೆ ನಡೆಯುವುದು, ಮಧ್ಯಾಹ್ನ ಒಂದು ಘಂಟೆಗೆ ಎರಡು ಚೂರು ರೊಟ್ಟಿಯನ್ನು ತಿಂದು ನಾಳೆ ಮಧ್ಯಾಹ್ನ ಅಂತೆಯೇ ತಿನ್ನುವುದು ಎರಡು ಚೂರು ರೊಟ್ಟಿಯನ್ನ;—ಇಂತು ವೈವಿಧ್ಯವನ್ನು ಕಾಣದೆ, ಉತ್ಸಾಹವನ್ನು ಕೊಲ್ಲುವ ಪುನರಾವರ್ತನದ ರಕ್ಕಸ ಹಿಡಿತಕ್ಕೆ ಸಿಕ್ಕಿ, ಸಂತೋಷ ಶೂನ್ಯವಾದ ಜೀವನವನ್ನು ಆಗಾಗಲಾದರೂ ಅತಿಕ್ರಮಿಸಲು ಮಾನವರ ಹಂಚಿಕೆ. ಶುದ್ಧ ಕಳಪೆಯಾದ ಸಾಹಿತ್ಯ, ಯಾವುವನ್ನು ತಜ್ಞರು ನಿಕೃಷ್ಟವೆಂದು ತಳ್ಳುತ್ತಾರೆಯೋ ಆ 'ಆಣೆಯ ಆಭಾಸಗಳು' (Penny Dreadfuls), ಆ 'ಪತ್ತೆದಾರಿ ಕಥೆಗಳು' (Shilling Shockers) ಕೂಡ ಮೇಲೆ ನಿರ್ದೇಶಿಸಿದ ಹಂಚಿಕೆಯನ್ನು ನೆರವೇರಿಸಬಲ್ಲುವು. ಯಂತ್ರಸಮಾನವಾದ ಪಾತ್ರಗಳು, ಅಮಾನುಷ ಘಟನೆಗಳು, ಕೇವಲ ಗ್ರಾಂಥಿಕವಾದ ಮಾತುಕತೆ, ಮನುಷ್ಯ ಸ್ವಭಾವಕ್ಕೆ ವಿರುದ್ಧವಾದ ಪ್ರಣಯಗಳನ್ನೊಳಗೊಂಡಿರುವ, ಹೊಲಸು ಲೇಖಕರು ಹೊಟ್ಟೆಪಾಡಿಗಾಗಿ ಹೊರತಂದ, ಸಾಹಿತ್ಯ ಬ್ರಹ್ಮರಾಕ್ಷಸಗಳು ಸಾಕು; ಕಷ್ಟಜೀವಿಗಳಿಗೆ ಕೊಂಚ ವಿನೋದ ವಿರಾಮವನ್ನು ತಂದುಕೊಡಬಲ್ಲ ಗುಣವನ್ನು ಹೊಂದಿವೆ. ಪುಷ್ಟಕುಷ್ಠ, ದೀನ ಹೀನ, ಮಧ್ಯಮ ಅಧಮ, ಸಾಧಾರಣ ಅನ್ಯಾದೃಶವೆಂಬ ಭೇದವಿಲ್ಲದೆ, ಬಾಳಿನ ಬೇಸರವನ್ನು ಕೊಂಚಕಾಲ ವಿಸ್ಮೃತಿ ಕಾರಾಗೃಹದಲ್ಲಿ ಕೂಡಿಹಾಕುತ್ತದೆ ಸಾಹಿತ್ಯ. ಗೌರೀಶಂಕರ ಶಿಖರವನ್ನು ಹತ್ತಲು ನಾಲ್ಕೈದು ಪ್ರಯತ್ನಗಳು ನಡೆದಿವೆಯಷ್ಟೆ. ಅವುಗಳಲ್ಲೊಂದರ ಹೆಗ್ಗಡೆಯಾದ ನಾರ್ಟನ್ ಬೆಟ್ಟ ಹತ್ತುವವರ ಜೊತೆಯಲ್ಲಿ ಕಳುಹಿಸಬೇಕಾದ ಉಪಕರಣಗಳ ಪಟ್ಟಿಯಲ್ಲಿ ಪುಸ್ತಕಗಳ ದೊಡ್ಡ ಪೆಟ್ಟಿಗೆಯೊಂದನ್ನು ಸೇರಿಸುವುದು ಅತ್ಯಾವಶ್ಯಕವೆಂದು ಅಭಿಪ್ರಾಯಪಟ್ಟಿದ್ದಾನೆ. ಆದರೆ ಸಾಹಿತ್ಯದ ಉದ್ಧಾರ ಇಷ್ಟರಲ್ಲಿಯೇ ಕೊನೆಗೊಂಡಲ್ಲಿ ಸಾಹಿತ್ಯವೂ ಒಂದು ತರಹದ ಮಲಿನ ಸಿನಿಮಾ ನೋಟ ಅಫೀಮು ಸಾರಾಯಿಯಾಗಿಬಿಡುತ್ತದೆ. ಆಮೇಲೆ ಅವುಗಳಂತೆಯೇ ಹೇಯ, ದೂಷ್ಯ. ಅಲ್ಲದೆ ಜೀವನ ಸಾಹಿತ್ಯದ ಹತ್ತರಷ್ಟು ವಿಸ್ತಾರ. ಅದನ್ನು ಮರೆಯುವುದು ಹತ್ತವತಾರಮಾಡಿದ ಹರಿಗೂ ಆಗದು. ಸಾಹಿತ್ಯದ ಮುಖ್ಯ ಪ್ರಯೋಜನ ಪ್ರತ್ಯೇಕ.

ಸೇವಿಸಲರ್ಹವಾದ, ಸೇವಿಸಿದಲ್ಲಿ ನಮ್ಮನ್ನು ಮಾರ್ಪಡಿಸುವ ಸಾಹಿತ್ಯ ಫಲವೆಂದರೆ ಸ್ವಚ್ಛವಾದ ಆದರ್ಶಲೋಕದ ಪ್ರವಾಸ. ಕಾವ್ಯಕ್ಕೆ ತಾಯಿ ಅತೃಪ್ತಿ

ಯೆಂದು ಒಂದು ವಚನ. ಎಂದರೆ ದುಃಖ ದುರದೃಷ್ಟ ರಾಗ ರೋಗ ಕೊಳೆ ಕೊಲೆಗಳೇ ಎದ್ದು ಕುಕ್ಕುವ ಪ್ರಪಂಚವನ್ನು ನೋಡಿ ನೋಡಿ, ಸೂಕ್ಷ್ಮಸ್ವಭಾವ ದವರಿಗೆ ವೇದನೆಯೂ ಜುಗುಪ್ಸೆಯೂ ವಿರಾಗವೂ ಹುಟ್ಟುತ್ತವೆ. ಆಗ ಪ್ರತಿಭೆ ಯೆಂಬ ದೀಪದ ಭೂತ ತಮಗೆ ದಾಸನಾಗಿರುವುದು ಅವರ ನೆನಪಿಗೆ ಬರುತ್ತದೆ. ಅದರ ಸಹಾಯದಿಂದ, ಪರಿಶುದ್ಧ ಹೃದಯ ಸೂಚಿಸತಕ್ಕ, ಕಾಂತಿಯುಕ್ತವಾದ, ಮಾದರಿಯೆನಿಸಿಕೊಳ್ಳುವ ಸಾರಸ್ವತ ಪ್ರಪಂಚವನ್ನು ಸೃಜಿಸಿ ಜೀವನ್ಮುಕ್ತರಾಗು ತ್ತಾರೆ, ಓದುಗರಿಗೆ ಮುಕ್ತಿಯ ದಾರಿಯನ್ನು ತೋರುತ್ತಾರೆ. ಅದರಿಂದಲೇ ಸಾಹಿತ್ಯದ ಅಧ್ಯವಸಾಯಕ್ಕೆ 'ಕಾಲ್ಪನಿಕ ಇಷ್ಟಾಪೂರ್ತಿ' (Fictional Gratification) ಎಂಬ ಹೆಸರಾಗಿದೆ. ಈ ಪದಗಳನ್ನು ಅಕ್ಷರಶಃ ಗ್ರಹಿಸಿದರೆ ಅನರ್ಥ ವಾದೀತು. ಏತಕ್ಕೆಂದರೆ ಅವುಗಳ ವಾಚ್ಯಾರ್ಥ—'ನೂತನ ಬ್ರಹ್ಮರು' ಹರಡುವ ಭುವನವು ಹುಸಿ! ಹಾಗಾದರೆ ಅತಿಥಿ ಅಭ್ಯಾಗತರಿಗೆ ಅಲ್ಲಿ ಕಾದಿರುವುದು ಬರಿಯ ಗಾಳಿಯ ಕೂಳು, ಕಪಟ ಕರಿಗಡುಬು, ಕನಸಿನ ಪಾಯಸ, ಮಂಜಿನ ಮೊಸರು! ಆ ಅರ್ಥ, ಈ ಅಂಜಿಕೆ—ಎರಡು ಅಬದ್ಧ. ಸಾಹಿತ್ಯ ಪ್ರಪಂಚವು ಲೋಕಾತೀತವೇನೋ ಅಹುದು. ಅಲ್ಲಿನ ಗಂಡು ಹೆಣ್ಣುಗಳು ವೈರಿ ವೀರರು ನಮ್ಮ ಭೂಮಿಯ ಮೇಲೆ ಯಾವಾಗಲೂ ಅವತರಿಸಿದವರಲ್ಲ, ಅವತರಿಸುವವರಲ್ಲ. ಆದರೆ ಎಂದಿಗೂ ವಿಲಕ್ಷಣ ವಿಕಟ ವ್ಯಕ್ತಿಗಳಲ್ಲ. ನಮ್ಮ ಪ್ರಪಂಚವು ನಿಜವಾದರೆ ಸಾಹಿತ್ಯ ಪ್ರಪಂಚವೂ ನಿಜ: ಅಂತು ಚಿಂತಿಸುವುದು ಅತಿಯಲ್ಲದಿದ್ದಲ್ಲಿ, ಇನ್ನೂ ಹೆಚ್ಚು ನಿಜ! ಉದಾತ್ತ ಧ್ಯೇಯ ಉತ್ತೇಜನ ಉದ್ಯಮ ಅಲ್ಲಿದೆ. ಎಲ್ಲ ಅಂಶಗಳಲ್ಲಿಯೂ ಯಾವ ಎಲ್ಲೆ ಪರಿಮಿತಿ ಗಳಿಂದಲೂ ಸಂಕುಚಿತವಾಗದ ವೈಶಾಲ್ಯ; ಕುಬ್ಜಭಾವನೆಗೆ ಎಳ್ಳಷ್ಟೂ ಎಡೆಯಿಲ್ಲ; ಪರ್ವತದಂತೆ ಪರಿಶೋಭಿಸುವ ವಿರು ಪಾತ್ರಗಳು; ಮನುಷ್ಯತ್ವದ ಕಟ್ಟಕಡೆ ಎತ್ತರ ವನ್ನು ವ್ಯಕ್ತಪಡಿಸುವ ಮಹಾ ವಸ್ತು; ಅಸೂಯೆ, ಅಟ್ಟಹಾಸ, ಸಿಡುಕು, ಸಿಟ್ಟು, ಧೈರ್ಯ, ದರ್ಪ, ಕಾಠಿಣ್ಯ, ಅಳಲು, ಆನಂದ, ಯಾವ ಭಾವವನ್ನು ತೆಗೆದುಕೊಂಡರೂ ನಡುಗಿಸುವ ಸಾಮರ್ಥ್ಯ; ಸಾಮಾನ್ಯರ ಊಹೆಗೂ ಮೀರಿಹೋಗುವ ಅಗ್ಗಳಿಕೆ— ಇವು ಆ ಪ್ರಪಂಚದ ಹೆಗ್ಗುರುತುಗಳು. ಜೀವನವು ಎಷ್ಟು ಆಳ ಅಗಲ ಗಹನ ಗಾಢವಾದ್ದು, ಎಂಥಾ ಸತ್ವ ಸ್ವಾರಸ್ಯ ಸಿರಿಯಿಂದ ಕೂಡಿದ್ದು, ಯಾವ ವ್ಯವಸ್ಥೆ ವಿಜೃಂಭಣೆಯನ್ನು ಮೆರೆಯುವಂಥಾದ್ದು; ಅದರ ಸಂಪೂರ್ಣಾನುಭವಕ್ಕೆ ಸಮನಾದ ರಾಜಯೋಗವಿದೆಯೇ?—ಎಂಬುದನ್ನು ಕನ್ನಡಿ ಹಿಡಿದು ತೋರಿಸುತ್ತದೆ ಸಾಹಿತ್ಯ. ಮತ್ತು ಬಾಳಿನ ಒಳಗುಟ್ಟನ್ನು ಮನುಷ್ಯನ ಮಟ್ಟದಷ್ಟು ಅರಿಯಬೇಕಾದರೂ ನಮ್ಮನ್ನು ವ್ಯಥೆಗೊಳಿಸುವ ನಾನಾ ಸಮಸ್ಯೆಗಳಿಗೆ ಸಾಕಷ್ಟು ಸಮಾಧಾನ ನಮಗೆ

ಬೇಕಾದರೂ ಸಾಹಿತ್ಯವೇ ಶರಣು. ಅದು ಬೆಟ್ಟವನ್ನು ಒಡೆದು ಹಾಯ್ದು, ಕಮರಿಯನ್ನು ಹಾರಿ ದಾಟಿ, ನದಿಯನ್ನು ಇಬ್ಭಾಗ ಮಾಡಿ ಹೊಕ್ಕು, ಬಾಗಿಲನ್ನು ಮುರಿದು ನುಗ್ಗಿ, ತೆರೆಯನ್ನು ಹರಿದುಹಾಕಿ, ತನ್ನ ಗುರಿಯನ್ನು ತಪ್ಪದೆ ಸೇರುವುದರಿಂದ, ಸತ್ಯವನ್ನೂ ಸೌಂದರ್ಯವನ್ನೂ ಸಾತ್ವಿಕತೆಯನ್ನೂ ಅವುಗಳ ನೈಸರ್ಗಿಕ ರೂಪು ರಾಶಿಯಲ್ಲಿ ನಾವು ನೋಡಲಾಪೆವು. ಮಹಾಕವಿಗೆ ಕಾಲಜ್ಞಾನಿ, ಪ್ರವಾದಿ, ಪರೋಕ್ಷದರ್ಶಿ ಎಂದು ಬಹು ಹಿಂದಿನ ಅನ್ವರ್ಥಹೆಸರು. ಕವಿಯ ಆಕಾಶಮಂಡಲ ಭೂಗೋಳದ ಮೇಲಿಲ್ಲ, ಆದರೆ ಇರಬೇಕಾದುದು; ಇದ್ದಿದ್ದರೆ ನಮ್ಮನ್ನು ಹಿಡಿಯುತ್ತಿದ್ದವರಾರು? ಅದು ಸಟೆಯಲ್ಲದಿರುವುದು ಹೋಗಲಿ; ಅದರ ದಿವ್ಯತ್ವದ ತೇಜಸ್ಸು ಎಂತಹುದೆಂದರೆ, ನಾವು ವಾಸ್ತವಿಕವೆಂದು ನಂಬಿರುವ ಪ್ರಪಂಚವೇ ಅದರ ಬಳಿಯಲ್ಲಿ ಸುಳ್ಳೆಂದು ತೋರಿಬರುತ್ತದೆ! ರಾಮ, ಆಂಜನೇಯ, ರಾವಣ, ವಿಭೀಷಣ, ಕೌರವ, ಕರ್ಣ, ಭೀಮ, ಸೀತೆ, ಸಾವಿತ್ರಿ, ದ್ರೌಪದಿ, ಅಕಿಲೀಸ್, ಸ್ಯಾಮ್ಸನ್, ಹ್ಯಾಮ್ಲೆಟ್, ಫೌಸ್ಟಸ್, ಫಾಲ್‌ಸ್ಟಾಫ್ ಮುಂತಾದವರು ನಮ್ಮ ಗೆಳೆಯರಿಗಿಂತಲೂ ಅಧಿಕ ಪ್ರಿಯರು, ಬಂಧುಗಳಿಗಿಂತಲೂ ಹೆಚ್ಚು ಹತ್ತಿರದವರು. ಪ್ಲೇಟೊ, ಪ್ಲೂಟಾರ್ಕ್, ಮಿಲ್ಟನ್ ಇತ್ಯಾದಿ ಗ್ರಂಥಗಳನ್ನು ಒಂದೊಂದೂ ಇಪ್ಪತ್ತು ವರ್ಷಗಳ ವಿದ್ಯಾಭ್ಯಾಸಕ್ಕೆ ಸಮಾನವೆಂದು ಸ್ತುತಿಸಿದ್ದಾರೆ. ಸಂಕ್ಷೇಪವಾಗಿ ಹೇಳಬೇಕಾದರೆ ಸಾಹಿತ್ಯದ ಅನುಭವ ನಮ್ಮ ಜೀವನದ ಸೀಸವನ್ನು ಸುವರ್ಣವಾಗಿಸಬಲ್ಲ ಅನುಭವ.

ಆ ಮೇಲೆ ಬಿರುಸು ಭೂಮಾತೆಯು ಗುದ್ದಿ ಘಾಸಿಪಡಿಸಿದವರಿಗೆ ಸಾಹಿತ್ಯ ಸರಿಯಾದ ಮದ್ದು. ಮನೋವ್ಯಾಧಿಗಳಿಂದ ನರಳುವವರು ಬೇರೆ ಔಷಧವನ್ನೇಕೆ ಅರಸಿ ಅಳಬೇಕು? ನಮ್ಮ ಆರೋಗ್ಯವನ್ನು ಹಾಳುಮಾಡುವ ಮೂಕಾಶೆಗಳ ನಿಶ್ಶಕ್ತಿ, ಅಪಕ್ವಾಶೆಗಳ ಅಜೀರ್ಣ, ಆಶೆಗಳ ಮಿಶ್ರಣದ ಉನ್ಮಾದ:—ಇವುಗಳಿಗಿರುವುದು ಎರಡೇ ಚಿಕಿತ್ಸೆ: ದೇವಪೂಜೆ, ಸಾಹಿತ್ಯ ಪಾರಾಯಣ. ಈ ಕ್ರಮವನ್ನು ಹಿಂಬಾಲಿಸಿದರೆ ನಿರಾಶೆ ನಿರ್ನಾಮವಾಗುತ್ತದೆ, ಹುರುಪು ತಿರುಗಿ ಹುಟ್ಟುತ್ತದೆ, ಕ್ಷೋಭೆಯು ತಗ್ಗಿ ಕ್ಷಮೆ ಉದಯಿಸುತ್ತದೆ. ನಮ್ಮ ಕಷ್ಟವೇ ಕಷ್ಟ, ನಮ್ಮ ಶೋಕವೇ ಶೋಕವೆಂಬ ಅಹಂಭಾವವು ಹಿಂದಕ್ಕೆ ಸರಿದು, ಮುಜುಗರಕ್ಕೆ ಮೂಲವಾದ ಸ್ವಾಭಿಮಾನವು ಸೋತು ಹೋಗಿ, ಮನಸ್ಸು ವಿಶಾಲವಾಗಿ, ಎದೆಯು ಮೃದುವಾಗಿ, ಸೈರಣೆ ಹೆಚ್ಚಿ, ಸಹೃದಯ ಸೊಂಪಾಗಿ ಪಸರಿಸಿ, ನಮಗೆ ಭವಾಂಬುಧಿಯನ್ನು ಉಪೇಕ್ಷೆ ಆವೇಶವಿಲ್ಲದೆ ಸ್ವಸ್ಥ ಚಿತ್ತದಿಂದ ನೋಡಲು ಹೊಸ ಕಣ್ಣುಗಳು ಹುಟ್ಟುವುವು. ಗ್ರಂಥಕರ್ತನ ಯಾವುದೋ ಅತೃಪ್ತಿಯಿಂದ ಗ್ರಂಥವು ಜನಿಸಿರಬಹುದು. ಆದರೆ ಓದುವವರಲ್ಲಿ ಅತೃಪ್ತಿಯ ಬದಲು ತೃಪ್ತಿ, ವಿರೋಧದ ಬದಲು ಒಡಂಬಡಿಕೆಯೇ ಆವಿರ್ಭವಿಸುತ್ತದೆ. ನೊಂದು ಬಿದ್ದವ

ರನ್ನು ತಡೆದು, ಹಿಡಿದು, ಮೇಲಕ್ಕೆತ್ತಿ, ಪ್ರಾಣಿಗಳನ್ನು ಗುಣಪಡಿಸಿ, ಪ್ರಪಂಚದೊಡನೆ ಅನ್ಯೋನ್ಯದಿಂದಿರುವ ಮನೋಭಾವವನ್ನು ಸ್ಥಾಪಿಸುವುದೇ ಸಾಹಿತ್ಯದ ಸರಳ ಮನೋರಥ, ಸುಲಭ ಕರ್ತವ್ಯ, ಪುಣ್ಯಪ್ರತಿಷ್ಠೆ. ಮನುಷ್ಯ ಮನುಷ್ಯನಾಗಿರುವುದರಿಂದ ಮಿತ್ರತ್ವವನ್ನು ಛೇದಿಸುವುದು ಅನಾಯಾಸ. ಮನುಷ್ಯ ಮನುಷ್ಯನಾಗಿರುವುದರಿಂದ ಶತ್ರುಗಳನ್ನು ಒಟ್ಟುಗೂಡಿಸುವುದು ಆಯಾಸ. ಮೊದಲನೆಯದು ಬರಿ ಕೇಡು, ಎರಡನೆಯದು ಭಾರಿ ಶ್ರೇಯಸ್ಸು!

ಈ ಪ್ರಸಂಗದಲ್ಲಿ ಸಾಹಿತ್ಯದ ಕೆಲಸ ನೀತಿಬೋಧೆಯೆಂಬ ತತ್ವವನ್ನು ಚರ್ಚಿಸುವುದು ಯುಕ್ತ. ಅದು ನಮ್ಮಲ್ಲಿ ಎಲ್ಲ ಪ್ರಾಚೀನರ, ಕೆಲವು ಅರ್ವಾಚೀನರ, ಮತ. ಕಾಂತಾಸಮ್ಮಿತದಿಂದ ಧರ್ಮ ಪ್ರಚಾರಮಾಡುವುದೇ ಭಾಸ, ಭವಭೂತಿ, ರನ್ನ, ಕುಮಾರವ್ಯಾಸರ ಬದುಕು. ರಾಮನಂತೆ ಆಚರಿಸು, ರಾವಣನಂತೆ ಬೇಡವೆಂಬ ಎಚ್ಚರಿಕೆಗೆ ವಾಲ್ಮೀಕಿಯ ಸಹಸ್ರಾರು ಶ್ಲೋಕಗಳು. ಸಂಸಾರವನ್ನು ನಂಬಿ ಕೆಡಬೇಡಿ ಎಂಬ ಸೂತ್ರವು ಪುರಾಣಗಳ ಸಾರಾಂಶ. ಯೋಚನೆಗೈಯದೆ ಇದನ್ನು ಒಪ್ಪಿಕೊಳ್ಳಬಹುದೆ? ಮಹಾಭಾರತದಲ್ಲಿ ರಂಜಕವಾದುದು ವಿದುರ ನೀತಿಯೇ ಅಭಿಮನ್ಯುವಿನ ಸಂಗ್ರಾಮವೇ? ಧೌಮ್ಯನ ಉಪದೇಶವೇ ದ್ರೋಣನ ಸಂಹಾರವೇ? ಹಲಕೆಲವು ಕವಿಗಳು ಕೂಡ ಈ ಬಲೆಯಲ್ಲಿ ಬಿದ್ದಿದ್ದಾರೆ. ಗೋಲ್ಡ್‌ಸ್ಮಿತ್ತನಿಗೆ ಕಾವ್ಯಕನ್ನಿಕೆ ಸುಗುಣಗಳನ್ನು ಅರ್ಜಿಕೆಮಾಡಿ ವೃದ್ಧಿಗೊಳಿಸುವ ದಾರಿ. ಬ್ರೌನಿಂಗನ ಮತದಂತೆ ದರ್ಶನ ಮೊದಲನೆಯದು, ಕಾವ್ಯ ಎರಡನೆಯದು. ವರ್ಡ್ಸ್‌ವರ್ತ್ ತನ್ನನ್ನು ಆಚಾರ್ಯನೆಂದು ಕರೆದರೆ ಕರೆಯಲಿ, ಇಲ್ಲದಿದ್ದರೆ ಆವ ಹೆಸರೂ ತನಗೆ ಬೇಡವೆಂದು ಬಿಟ್ಟ. ವಿಮರ್ಶಕರಲ್ಲಿಯೂ ಎರಡು ಕಕ್ಷಿಗಳಾಗಿ ಈ ವಿಚಾರವು ಹತ್ತ್ರದ ಹರಿಯದ ವಾಗ್ವಾದದ ಕಣವಾಗಿ ಬಿಟ್ಟಿದೆ. ಇಲ್ಲಿ ಮುಖ್ಯ ಪ್ರಶ್ನೆಗಳು ಇವು: ಸದ್ಧರ್ಮ ಸೌಶೀಲ್ಯ ಸದಾಚಾರಗಳಿಗೂ ಸಾಹಿತ್ಯಕ್ಕೂ ಸಂಬಂಧವಿದೆಯೇ? ಇದ್ದರೆ ಅವನ್ನು ಎಷ್ಟರಮಟ್ಟಿಗೆ ಹೇಗೆ ಗರ್ಭೀಕರಿಸಿಕೊಂಡಿದೆ, ಯಾವ ವಿಧದಲ್ಲಿ ಹೊರಗೆಡಹುತ್ತದೆ ಸಾಹಿತ್ಯ? ನೀತಿಬೋಧೆಯು ಸಾಹಿತ್ಯದ ಹೆಬ್ಬಯಕೆಯೇ? ಅತ್ಯುಕ್ತಿಗಳನ್ನಾಡಿ ಪ್ರತಿವಾದಿಗಳನ್ನು ಧ್ವಂಸಿಸಿದರೆ ಯಾವ ಲಾಭವೂ ದೊರೆಯದು; ನೂರು ಮಂದಿಯನ್ನು ಕೊಂದುಬಿಟ್ಟಲ್ಲಿ ಊರು ಉಳಿಯಿತೇ? ಈ ಪ್ರಶ್ನೆಗಳ ರಹಸ್ಯವನ್ನು ಸೂಕ್ಷ್ಮವಾಗಿ ಬಿಡಿಸಬೇಕು. ಸಾಹಿತ್ಯವು ಒಂದು ಕಲೆ, ಕಲೆಯು ಜೀವನದ ಸುಂದರ ಪ್ರತಿಬಿಂಬ. ಜೀವನದ ಬಸಿರಿನಲ್ಲಿ ಸತ್ಯವನ್ನು ಕುರಿತು ಪ್ರೇಮ, ನ್ಯಾಯದ ಕಡೆಗೆ ಒಲವು, ಔದಾರ್ಯದ ಪುರಸ್ಕಾರ, ಕೆಟ್ಟನಡತೆಯ ದ್ವೇಷ—ಈ ಬಗೆಯ ಧರ್ಮ ಪಕ್ಷಪಾತ ನೆಲಸಿರುವಂತೆ ಭಾಸವಾಗುತ್ತದೆ. ಇಲ್ಲದಿದ್ದರೆ ಮನುಷ್ಯ ರಾಕ್ಷಸನಾಗಿ ಬಿಡುತ್ತಿದ್ದ

ಯಾವಾಗಲೋ; ಆಸುರೀ ಪ್ರಕೃತಿ ಇನ್ನೂ ಅವನಿಂದ ತೊಲಗಿಲ್ಲ; “ಬೊಗಳಿ ಬೊಗಳಿ ರಾಗ” ಎಂಬಂತೆ ಬಹು ಪ್ರಯಾಸದಿಂದ, ಸ್ವಲ್ಪ ಸ್ವಲ್ಪವಾಗಿ ಅದನ್ನು ಆಧಿಪತ್ಯಕ್ಕೆ ಬಗ್ಗಿಸುತ್ತಿದ್ದಾನೆ. ಅಂದಮೇಲೆ ಧರ್ಮದ ಸ್ವಲ್ಪರುಚಿ ಅಲ್ಪವಾಸನೆ ಸಾಹಿತ್ಯದಲ್ಲಿ ಇದ್ದೇ ಇದೆ. ಬಾಳಿನ ತಳ ಧರ್ಮವಾದರೆ ಸಾಹಿತ್ಯದ ತಳವೂ ಅದೇ. ಅದನ್ನು ತಿರಸ್ಕರಿಸಿ, ತ್ಯಜಿಸಿ, ಸಾಹಿತ್ಯವನ್ನು ಕಟ್ಟಲಾಟಿಸುವುದು ಬೇರುಗಳನ್ನು ಆಕಾಶದಲ್ಲಿ ಬಿಡುವಂತೆ, ಮರವನ್ನು ತಲೆಕೆಳಗಾಗಿ ಬೆಳಸಲು ಹುರುಡಿಸಿದಂತೆ. ಕಳವು ಕೊಲೆ ವ್ಯಭಿಚಾರಾದಿ ನಿರಂಕುಶ ಪಶುಜೀವನವನ್ನು ಸಂಭ್ರಮದಿಂದ ಚಿತ್ರಿಸುವ ಸಾಹಿತ್ಯವು ಇಲ್ಲದೆ ಇಲ್ಲ. ಆ ಚಾಳಿಯ ಸ್ತ್ರೀ ಪುರುಷರಿಗೆ ಸಮಾಜದಲ್ಲಿ ಯಾವ ಮರ್ಯಾದೆಯಿದೆಯೋ ಆ ಸಾಹಿತ್ಯಕ್ಕೂ ಅದೇ ಮರ್ಯಾದೆ. ದೊಡ್ಡ ಕವಿಗಳ ಮಾರ್ಗವನ್ನು ನೋಡಿ. ಕಲೆಗೋಸ್ಕರವೇ ಕಲೆ ಎಂಬ ಬೆಟ್ಟವೂ ಸಟೆ, ಧರ್ಮಕ್ಕೋಸ್ಕರವೇ ಕಲೆ ಎಂಬ ಬೆಟ್ಟವೂ ಸಟೆ; ನಿರ್ಮಲ ಸತ್ಯವು ನಡುವಣ ಮೈದಾನದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ವಿವೇಕವನ್ನು ಶಿಕ್ಷಕನಂತೆ ಕಲಿಸುವುದು ಕಾವ್ಯದ ಹಂಬಲವೂ ಉದ್ಯೋಗವೂ ಅಲ್ಲ, ನೀತಿಗೋಸ್ಕರ ಬರೆದ ಸಾಹಿತ್ಯ ನೀರಸ. ಅದು ಒಂದನ್ನು ಖಂಡಿತವಾಗಿ ಕೊಡಬಲ್ಲುದು—ತಲೆನೋವು! ಎಲ್ಲಿ ಕಟ್ಟು ಕಟ್ಟಳೆಗಳ ಪಟ್ಟಿ ಬರುತ್ತದೆಯೋ ಅಲ್ಲಿ ಓದುವನ ಕೆಟ್ಟ, ಅಥವಾ ಬರೆದವ ಸತ್ತ! ನಡತೆಯ ನಿಯಮಗಳು ಬೇಕಾದರೆ ನಾವು ನೀತಿಶಾಸ್ತ್ರಕ್ಕೆ ಹೋಗಿ ಹುಡುಕೋಣ. ಸುಷ್ಠು ಜೀವನದ ಸಂವರಣೆ ಸಾಹಿತ್ಯದಲ್ಲಿ ನಮಗೆ ಸಿಕ್ಕುತ್ತದೆ. ಆದರೆ ಅದನ್ನೇ ಹಟ ತೊಟ್ಟು ಪ್ರಚಾರಮಾಡುವುದಲ್ಲ ಅದರ ವ್ಯಾಪ್ತಿ. ಸಾಹಿತ್ಯದಲ್ಲಿ ಬರುವ ನೀತಿನುಡಿಗಳು ಪ್ರಾಸಂಗಿಕವಾಗಿ, ಸ್ವಾಭಾವಿಕವಾಗಿ, ಆವ ನಡಗರವೂ ಇಲ್ಲದೆ, ವ್ಯಂಗ್ಯದ ಮೂಲಕ ಕೇಳಿಬರುತ್ತವೆ. ತಮ್ಮ ಕಡೆಗೆ ಗಮನವನ್ನು ಸೆಳೆದುಕೊಳ್ಳುವುದಿಲ್ಲ. ಮತ್ತು ಅಂತಹ ವಚನಗಳು ಸಮುಚ್ಚಯವಾಗಿ, ಸೂಕ್ತ ವ್ಯವಸ್ಥೆಗೆ ಸೇರಿ, ಒಂದು ಉಪಶಾಸ್ತ್ರವಾಗಲಾರವು. ಒಬ್ಬ ಕವಿ ಹೇಳಿದ್ದಾನೆ—“ಚೆಲುವೆಲ್ಲವನ್ನೂ ನಿಮ್ಮ ಪದ್ಯಗಳಲ್ಲಿ ಇಡಿ; ನೀತಿಯೆಲ್ಲವನ್ನೂ ನಿಮ್ಮ ಬಾಳಿನಲ್ಲಿ ಇಡಿ.” ಟಾಗೋರರ ತತ್ವಜ್ಞಾನ, ಗಯಟೆಯ ತತ್ವಜ್ಞಾನ, ಹಾರ್ಡಿಯ ತತ್ವಜ್ಞಾನ ಹೀಗೆ ಕೂಗುವ ಕೂಗು ಕೇಳಿಸಿರಬಹುದು. ಅದು ಒಂದು ರೂಪಕ ಅಷ್ಟೆ. ತತ್ವ ಪ್ರಕಟನೆಗೋಸ್ಕರವೇ ಕವಿಗಳು ಜನ್ಮವನ್ನು ತಾಳಿದ್ದರೆ, ಅವರಿಗೂ ರಸಜ್ಞಪಡೆಗೂ ಆವ ಬಾಂಧವ್ಯವೂ ಇರುತ್ತಿರಲಿಲ್ಲ. ನೀತಿಗಳನ್ನು ಪ್ರತಿಪಾದಿಸುವುದು ವಾದ, ನಿಷೇಧ, ಕಾರಣ, ಉದಾಹರಣೆ, ಪೂರ್ವಪಕ್ಷ, ಸಿದ್ಧಾಂತ ಮುಂತಾದ ತರ್ಕಸಾಮಗ್ರಿಗಳನ್ನು ಉಪಯೋಗಿಸುವ ಜ್ಞಾನದ ಕೆಲಸ. ಸಾಹಿತ್ಯವಾದರೋ ಬುದ್ಧಿ, ಚಿತ್ತ, ಪ್ರತಿಭೆ, ಅಂತಃಕರಣ ಎಲ್ಲ ಚೇತನಗಳನ್ನೂ ಒಮ್ಮೆಗೇ

ಒಳಗೊಂಡದ್ದು. ಸಾಹಿತ್ಯದಿಂದ ನಾವು ಎಷ್ಟೋ ಅರಿವನ್ನು ಕಲಿಯುತ್ತೇವೆ, ಆದರೆ ಅದು ಉಪಾಧ್ಯಾಯನಲ್ಲ, ನಾವು ಶಿಷ್ಯರಲ್ಲ. ಜೀವನವು ಹೇಗೆ ಸಾಧಾರಣ ಅನುಭವ ಗಳನ್ನು ಕೊಟ್ಟು, ನಮ್ಮನ್ನು ನಡಸಿಕೊಂಡು ಹೋಗುತ್ತದೆಯೋ ಸಾಹಿತ್ಯವೂ ಹಾಗೆಯೇ ಅಸಾಧಾರಣ ಅನುಭವಗಳನ್ನು ಕೊಟ್ಟು ನಮ್ಮನ್ನು ಪೋಷಿಸುತ್ತದೆ. ವಿನಯ, ದುರ್ನಯ ಮುಂತಾದುವು ಆ ಅನುಭವದ ಮೇಲೆ ನಾವು ಮಾಡುವ ಜಿಜ್ಞಾಸೆ. ತೆಂಗಿನ ಮರದಿಂದ ಒಲೆಗೆ ಸೌದೆಯೂ ಗುಡಿಸಲಿಗೆ ಮೇಲ್ಹಾವಣಿಯೂ ಮನೆಗೆ ತರಾಯಿಯೂ ಲಭಿಸುವುವು, ಆದರೆ ಅದರ ಮುಖ್ಯ ವರ ಅದರ ಸಕ್ಕರೆ ತೀರ್ಥ, ಬಿಳಿಯ ತಿರುಳು !

ಕಡೆಯದಾಗಿ, ಸಾಹಿತ್ಯದ ಬಹು ಪ್ರಿಯವಾದ ಜನಜನಿತವಾದ ಪ್ರಯೋಜನ ವಾವುದೆಂದರೆ ಆನಂದ. ಅದು ಎಲ್ಲರ ಬಾಯಿಯಲ್ಲಿಯೂ ತಕ್ಷಣ ಬರುವ ಮಾತು. ಕಾವ್ಯವನ್ನು ಅಕಾವ್ಯದಿಂದ ಬೇರ್ಪಡಿಸಿ ನಿಷ್ಕರ್ಷಿಸುವಾಗ ಅದನ್ನು ಮಾನ ದಂಡವಾಗಿ ಇಟ್ಟುಕೊಳ್ಳುವುದು ವಾಡಿಕೆ; ಸಮಂಜಸವಾದ ವಾಡಿಕೆಯೇ. ಯಾವ ಗ್ರಂಥವು ಕೇವಲ ತಿಳಿವಳಿಕೆಯನ್ನು ಕೊಡಬಯಸುತ್ತದೆಯೋ ಅದು ಶಾಸ್ತ್ರ. ಯಾವುದು ಹರ್ಷವನ್ನು ಕೊಡಬಯಸುತ್ತದೆಯೋ ಅದು ಸಾಹಿತ್ಯ. ಸಾಹಿತ್ಯ ಚೆಲುವಿನ ಅಂಗಡಿ, ಸಂತಸದ ಚಿಲುಮೆ. 'ಹ್ಲಾದೈಕಮಯೀಂ' ಎಂಬ ವಿವರಣೆ ಎಲ್ಲರಿಗೂ ಗೊತ್ತು. ಆದರೆ ಅದರಲ್ಲಿ ಅತಿಯಾದ ಅರ್ಥವಾಗುವ ಸಂಭವವುಂಟು. ಮಹಾಸಾಹಿತ್ಯ ಗಂಭೀರವಾದ ದುರಂತವಾದ ವಿಷಯಗಳನ್ನು ವಿಶದಪಡಿಸುತ್ತದೆ. ಆಗ ಅದು 'ಹ್ಲಾದೈಕಮಯಿ'ಯಲ್ಲ. ಸರಸ್ವತಿ ತೊಡುವ ಉಡುಪಿಗೆ ಎರಡು ಮೈ. ಹೊರಗೆ ರೇಸಿಮೆಯ ನವಿರು ಕಲಾಪತ್ತಿನ ಥಾಳಥಳ್ಯ, ಒಳಗಾದರೋ ಹದಮಾಡ ದಿರುವ ಉಣ್ಣೆಯ ಮುಳ್ಳು. ಅವಳು ಸ್ಮಿತ ವದನೆ, ಆದರೆ ಹೃದಯದಲ್ಲಿ ಭೀಷಣ ಒಳತೋಟಿ. ಕಾವ್ಯಾನಂದವಾವುದೆಂಬುದನ್ನು ಒಂದು ವಾಕ್ಯದಲ್ಲಿ ಕಟೆದು ನಿಲ್ಲಿಸ ಲಾಗುವುದಿಲ್ಲ. ಅದು 'ಬ್ರಹ್ಮಾನಂದ ಸಹೋದರ.' ನಿಶ್ಚಯವಾಗಿ; ವಾಙ್ಮಯ ತಪಸ್ಸಿನಿಂದಲೇ ಅದರ ಸಿದ್ಧಿ. ತುಸುನಗು, ತಿಳಿನಗು, ಕೀಚುನಗು, ಕಿಸರುನಗು, ದಡ್ಡನಗು, ದಪ್ಪನಗು, ಮೃದುನಗು, ಮಂದನಗು, ಯಾವ ನಗುವಾಗಲಿ ಆ ಆನಂದ ವಾಗದು. ಹಾಸ್ಯ, ಕುಚೋದ್ಯ, ವಿಡಂಬನ, ಪ್ರತಿಮಾತು, ಕಟಕಿ, ಕೊಂಕುನುಡಿ, ವ್ಯಾಜೋಕ್ತಿ, ಚಮತ್ಕಾರ, ಚಾತುರ್ಯಗಳಿಂದ ಜನಿತವಾಗುವ ಗೆಲವು, ಲವಲವಿಕೆ, ಉಬ್ಬುವಿಕೆ, ಬೊಬ್ಬಾಟಗಳೂ ಆನಂದವೆನಿಸಿಕೊಳ್ಳಲಾರವು. ಅದರಲ್ಲಿ ಅವು ಮಿಳಿತ ವಾಗಬಹುದು, ಒಂದೊಂದು ಅಂಶವಾಗಿ. ಮುಖದ ವರ್ಚಸ್ಸಿಗೆ ಕಣ್ಣಿನ ಹೊಳ ಪೊಂದೇ ಕಾರಣವಾಗಬಹುದು. ಆದರೆ ಎಲ್ಲ ಅಂಗಗಳ ಸಾಮರಸ್ಯ ಒಕ್ಕೂಟದಿಂದ

ಜನಿಸುವ ಒಟ್ಟಿನ ಸೌಂದರ್ಯ ಸುಷಮೆ. ಕಾವ್ಯಾನಂದವೂ ಹಾಗೆ. ಸರಳತೆ, ಸೈಜ ರೀತಿ, ಅಕೃತ್ರಿಮ ಸ್ವಭಾವ ಮುಂತಾದ ಲಕ್ಷಣಗಳಿಂದ ಜೀವನದ ಪರುಷತ್ವವನ್ನು ಜಯಿಸಿ ನಿಂತಿರುವ ವಸ್ತುಗಳ ಸಾಮೀಪ್ಯದಿಂದ ಉಂಟಾಗುವ ಶುದ್ಧ ಉಲ್ಲಾಸವೂ ಆ ಆನಂದವಲ್ಲ. ಅಥವಾ ನಮ್ಮ ಕವಿಗಳು ನೂರು ಬಾರಿ ಕಾವ್ಯಕ್ಕೆ ಉಪಮೆಗಳಾಗಿ ಲೆಕ್ಕಿಸುವ ಇಮ್ಮಾವು, ರಸಾಳೆ ಕಬ್ಬು, ಸಕ್ಕರೆ, ಹಾಲು, ಕೋಗಿಲೆಯ ದನಿ, ಬೆಳದಿಂಗಳು, ಪ್ರೇಯಸಿಯ ಅನುರಾಗಗಳಿಂದ ಉತ್ಪತ್ತಿಯಾಗುವ ಸೌಖ್ಯವೂ ಅದಲ್ಲ ; ಅವುಗಳ ಉಪಭೋಗದಿಂದ ಬಾಹ್ಯೇಂದ್ರಿಯಗಳ ತೃಪ್ತಿ ಮಾತ್ರ. ಕಾವ್ಯಾಹ್ಲಾದದಲ್ಲಿ ಸಂತೃಪ್ತಿಯಿದೆ; ಅದಕ್ಕೆ ಅಧಿಕವಾದ ಅಂಶಗಳೂ ಇವೆ. ಉಪಮಾಲಂಕಾರದಿಂದ ನಾವು ಮರುಳಾಗಬಾರದು. ಸಾಹಿತ್ಯ ಸಂತೋಷವು ಇವೆಲ್ಲವನ್ನೂ ಒಳಗೊಂಡು, ಎಲ್ಲವನ್ನೂ ಅತಿಕ್ರಮಿಸಿ ಅನೂನ ಆಂತರ್ಯಸ್ಥಿತಿಯಾಗಿದೆ. ಚಿತ್ತ, ಹೃದಯ, ಬುದ್ಧಿ, ಅಂತಃಕರಣ, ಆತ್ಮ ಮೊದಲಾದ ಮಾನವನ ಸಮಸ್ತ ಕರಣಗಳನ್ನೂ ತಾಕಿ, ತುಷ್ಟಿ ಪಡಿಸಿ, ನಾನಾ ಭಾವಗಳನ್ನು ಉದ್ರೇಕಿಸಿ, ಉಪಶಮನಗೊಳಿಸಿ, ಗಂಭೀರ ಘಟನೆಗಳ ನಡುವೆ ನಮ್ಮನ್ನೊಯ್ದು, ಮಹಾವ್ಯಕ್ತಿಗಳನ್ನು ಮುಟ್ಟುವಂತೆ ಮಾಡಿ, ಹಾಗೂ ಸಂತಯಿಸಿ, ಅತಿ ಗೂಢವಾದ ದ್ವಾರವನ್ನು ತೆಗೆದು ಸೌಂದರ್ಯ ಸತ್ಯಸಾತ್ವಿಕತೆಯ ಮೂರ್ತಿಯಾದ ಶಾಶ್ವತ ಪರಬ್ರಹ್ಮವನ್ನು ಕ್ಷಣಕಾಲ ತೋರಿಸಿ, ಶಾಂತಿ ಸೌಖ್ಯದಲ್ಲಿ ನಮ್ಮನ್ನು ಮಗ್ನರನ್ನಾಗಿಮಾಡುವುದು. ಅದೇ ಸಾಹಿತ್ಯದ ಆನಂದ. ಅದನ್ನೇ ಸಾಹಿತ್ಯದ ಉದ್ದೇಶ, ಆವಶ್ಯಕತೆ, ಪ್ರತಿಫಲ ಎಲ್ಲವೂ ಎಂದು ವಿಧಿಸಬಹುದು.

ಇನ್ನು ಇಡೀ ಪ್ರಪಂಚಕ್ಕೆ ಸಾಹಿತ್ಯದ ಉಪಕೃತಿಯನ್ನು ಗಮನಿಸಿ, ಈ ಲೇಖನವನ್ನು ಕೊನೆಗೊಳಿಸಬಹುದು. ಭಾಷೆಯು ಪುಷ್ಟವಾಗಿ ಬೆಳೆಯಬೇಕಾದರೆ ಸಾಹಿತ್ಯದಿಂದಲೇ. ನಾಲಗೆಯ ಬುಡಕಟ್ಟಿನ ಮರ್ಮವನ್ನು ಕವಿಗಳು ಚೆನ್ನಾಗಿ ಬಲ್ಲರು. ಮಾತುಗಳು ಮರವೂ ಹಿತ್ತಾಳೆಯೂ ಆದಲ್ಲಿ ಸಾಹಿತಿಯು ಅವುಗಳಿಂದ ವೀಣೆಯನ್ನು ಮಾಡಿಕೊಂಡು ಬಾಜಿಸುತ್ತಾನೆ. ಪ್ರತಿಯೊಂದು ಜನಾಂಗವೂ ಈ ವಿಚಾರದಲ್ಲಿ ಸಾಹಿತ್ಯಕ್ಕೆ ಚಿರಕೃತಜ್ಞವಾಗಿರಬೇಕು. ಮತ್ತು ಒಂದು ಜನಾಂಗದ ಆತ್ಮಸ್ವರೂಪ ನಮಗೆ ತಿಳಿಯಬೇಕಾದರೆ ಸಾಹಿತ್ಯವೇ ಸರಿಯಾದ ಕನ್ನಡಿ. ಚರಿತ್ರೆ ಮುಂತಾದ ಬರವಣಿಗೆಗಳಲ್ಲಿ ಅದರ ಹೊರಗಿನ ನಡೆನುಡಿ, ಸರ್ಕಾರ, ಕಂದಾಯ, ಕೌಲು, ಕಾಳಗ, ವ್ಯಾಪಾರ, ಕೈಗಾರಿಕೆಗಳ ಪರಿಚಯ ಹೇರಳವಾಗಿ ಆಗುತ್ತದೆ. ಆದರೆ ಜನರು ಯಾವುದನ್ನು ದೊಡ್ಡದೆಂದು ಬಗೆದಿದ್ದರು? ಯಾವುದನ್ನು ಕೀಳೆಂದು? ಅವರ ರಹಸ್ಯದಭಿಲಾಷೆ ಆವುದಾಗಿತ್ತು? ಧನದಾರಿದ್ರ್ಯಗಳ ಗೊಂದಲ, ಚಿಂತೆ ಶಾಂತಿಗಳ ಸಂಶಯ, ಒಳ್ಳೆಯದು ಕೆಟ್ಟುದರ ವಿವೇಚನೆ, ಜನನಮರಣಗಳ ಸಮಸ್ಯೆ,

ಇಹಪರದ ಆಶೆ ಅನ್ವೇಷಣೆ—ಈ ಚಿರಪ್ರಶ್ನೆಗಳನ್ನು ಯಾವ ರೀತಿ ಚರ್ಚಿಸಿದರು? ಅಥವಾ ಅವು ಏಳಲೇ ಇಲ್ಲವೇ? ಈ ರೀತಿಯ ಆತ್ಮವಿಲಾಸದ ಛಾಯೆ ನಮಗೆ ಸಿಕ್ಕುವುದು ಸಾಹಿತ್ಯದಲ್ಲಿ. ಕೊನೆಯ ಮಾತು. ಸಾಹಿತಿಗಳು ಮಹಾ ಮೇಧಾವಿಗಳು, ಭಾವಬಲದಲ್ಲಿ ಅತಿ ತೀಕ್ಷ್ಣರಾದವರು. ಅವರು ಗಳಿಸಿ ಬಿಟ್ಟುಹೋಗಿರುವ ಸಂಪತ್ತು ಮಾನವನ ನಾಗರಿಕತೆಯನ್ನು ಬೆಳೆಸಿದ, ಬೆಳೆಸುವ ಸಂಪತ್ತು. ಒಂದೆರಡು ಕದನಗಳನ್ನು ಗೆದ್ದ ಯೋಧ, ನಾಲ್ಕಾರು ಶಾಸನಗಳನ್ನು ಏರ್ಪಡಿಸಿದ ಮಂತ್ರಿ, ಕೆಲವು ಕಟ್ಟಡಗಳನ್ನು ಕಟ್ಟಿದ ಯಂತ್ರಕುಶಲಿ ಇವರನ್ನು ಹೊಗಳಿ ಹೊಗಳಿ ಬಾಯಿ ಸೋತು ಬೀಳುತ್ತೇವೆ. ನಶ್ವರವಲ್ಲದ ನಿಧಿಯನ್ನು ದಾನಮಾಡಿರುವ ಕವಿಯನ್ನು ಲಕ್ಷಿಸುತ್ತೇವೆಯೇ, ಅವನ ಯೋಗ್ಯತೆಗನುಗುಣವಾಗಿ ಪ್ರಶಂಸಿಸುತ್ತೇವೆಯೇ? ಆದರೂ ಕಡೆಯಲ್ಲಿ ಕವಿಯೇ ಜಯಶಾಲಿ. ತಾಳಿ ಉಳಿಯುವುದು ಸಾಹಿತ್ಯ. ಸಾಹಿತ್ಯವಿಲ್ಲದ ಸಮಾಜ ಮಡಿದ ಸಮಾಜ. ಸಾಹಿತ್ಯ ಕ್ಷೀಣವಾಗಿದ್ದರೆ ಸಮಾಜಕ್ಕೆ ಕ್ಷಯ. ಸಾಹಿತ್ಯ ಮೈತುಂಬಿಕೊಂಡಿದ್ದರೆ ಸಮಾಜ ಸುಪುಷ್ಟ!

ಎಸ್. ವಿ. ರಂಗಣ್ಣ.

ತೌರಿಗೆ ಹೋಗುವಾಗ

ಹೋಗಿ ಬರುವೆನು ತಾಯೆ; ಬೇಗ ಬರುವೆನು ತಿರುಗಿ,
ಹೋಗಲಾರೆನು ಬಹಳದಿನ ನಿಮ್ಮನಗಲಿ.
ಒಂದು ಪಕ್ಷಕೆ, ತಪ್ಪಿದರೆ ಒಂದು ಮಾಸದಲಿ,
ಹಿಂದಿರುಗಿ ಬಹೆನವ್ವ ನಾ ಮನೆಗೆ ಮರಳಿ.

ಮೂರು ತಿಂಗಳುಮಿಲ್ಲ ಸೇರಿ ನಿಮ್ಮಯ ಮನೆಯ,
ತೋರುತಿದೆ ಹೆತ್ತ ಮನೆ ಅನ್ಯವಾಗಿ :
ಬಯಸಿದೆನದೇಕೊ ತೌರಿಗೆ ಹೋಗಬೇಕೆಂದು ?
ಬಯಕೆ ಬಯಲಾಗುತಿದೆ ಫಲಿಪ ಮೊದಲೆ.

ಯಾವ ಜನ್ಮದ ಋಣವೊ, ಯಾವೊಂದು ಸುಕೃತವೋ,
ಯಾವ ಸೈಪೋ ಏನೊ ?—ನಿಮ್ಮ ಮನೆಯ
ಸೇರಿಸಿಹುದೆನ್ನ : ಮುನ್ನೆಂದು ಕಾಣದ ಅಬಲೆ
ಸಾರ ಸರ್ವಸ್ವವಾಗಿಹೆ ನಿಮ್ಮ ಒಲವ.

ಹೋಗಿಬಹೆನತ್ತಿಗೆಯೆ, ಅತ್ತೆ, ಮೈದುನ, ಭಾವ ;
ಹೋಗಿಬಹೆ ಹಿರಿಯರೇ ಆಶಿಷವ ನೀಡಿ :
ಹೋಗಿ ಬೇಗನೆ ಬರುವೆ, ಕಿಟ್ಟು, ಸರಸೂ, ಪುಟ್ಟು,
ಚಿಣ್ಣಗಳೆ ! ನಿಮ್ಮವಳ ನೀವ್ ಮರೆಯಬೇಡಿ.

ಟಿ. ಎಸ್. ಶ್ರೀನಿವಾಸಮೂರ್ತಿ.

ಬೂತಯ್ಯನ ಮಗ 'ಅಯ್ಯು'*

ನಮ್ಮ ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲಾ ಸಾಹುಕಾರ್ ಬೂತಯ್ಯನವರೇ 'ತ್ರಾಣಿಗಳು'[1]. ಅವರ ಕೈಯಲ್ಲಿ ಹಣ ಕಣ್ಣುಮುಚ್ಚಿ ತೆರೆಯುವುದರೊಳಗೆ ಒಂದಕ್ಕೆ ಹತ್ತರಷ್ಟು ಆಗುತ್ತಿದ್ದಿತು. ನಮ್ಮ ಹಳ್ಳಿಯ ಸುತ್ತ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಅವರ ಜಮೀನುಗಳೆ; ಯಾವ ರೈತನೂ ಅವರ ಸಾಲಗಾರನೆ. ಒಂದು ಸಲ ಅವರಲ್ಲಿ ಸಾಲ ಮಾಡಿದರೆ ಸಾಕು, ಅನಂತರ ಸತ್ತರೂ ಅವರ ಕೈಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಬೂತಯ್ಯನವರು ನಮ್ಮ ಪ್ರಾಂತಕ್ಕೆ ಪಾಳೆಯಗಾರರಂತಿದ್ದರು. ಅವರನ್ನು ಶಿಶುಪಾಲ, ಜರಾಸಂಧ, ರಾವಣ, ಕಳಿಂಗ ಎಂದವರು ನಮ್ಮ ಕಡೆ ಬೇಕಾದಷ್ಟು ಜನ ಇದ್ದಾರೆ. ಅವರು ದುಷ್ಟರು, ಘಾತಕರು ಎಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಅವರು ಯಾವ ಕೆಲಸಮಾಡುವುದಕ್ಕೂ ಹೇಸುತ್ತಿರಲಿಲ್ಲ. ಅವರಿಗೆ ಮನುಷ್ಯನ ಭಯವಿರಲಿಲ್ಲ. ದೇವರ ಭಯ ಸತ್ತನಂತರದ ಭಯವಾದುದರಿಂದ ಅದನ್ನು ಕುರಿತು ಯೋಚಿಸಬೇಕಾದುದು ಸತ್ತನಂತರವೆಂದು ಅವರು ಹೇಳುತ್ತಿದ್ದರು. ಅವರಿಗೆ ಯಾರ ಮೇಲಾದರೂ ಕೋಪ ಬಂದರೆ, ಅವನ ಮನೆಯನ್ನು ಸುಟ್ಟು ಬೂದಿಯನ್ನು ನೆತ್ತಿಗೆ ಹಚ್ಚಿಕೊಳ್ಳುತ್ತಿದ್ದರು. ಅದರಿಂದಲೂ ಅವರ ಕೋಪವೂ ದ್ವೇಷವೂ ಶಾಂತವಾಗುತ್ತಿರಲಿಲ್ಲ. ಮೊದಲು ಎದುರಾಳಿಯನ್ನು ಕೋರ್ಟಿಗೆ ಎಳೆದು ಸುಳ್ಳುಪತ್ರ, ಸುಳ್ಳುಸಾಕ್ಷಿ, ಫೋರ್ಜರಿ ಮುಂತಾದುವುಗಳಿಂದ ಅವನನ್ನು ನಿರ್ನಾಮಮಾಡುತ್ತಿದ್ದರು. ಅನಂತರ ಅವನ ಹೊಲಗದ್ದೆಗಳಿಗೆ ಹೊಡೆಯ ಕಾಲದಲ್ಲಿ ದನಗಳನ್ನು ನುಗ್ಗಿಸಿ ಪೈರನ್ನು ನುಣ್ಣಗೆ ಮೇಯಿಸುತ್ತಿದ್ದರು. ಅದರಿಂದಲೂ ತೃಪ್ತಿಯುಂಟಾಗದಿದ್ದರೆ ಅವನು ಒಬ್ಬನೇ ಸಿಕ್ಕಿದಾಗ ಅವನ ತಲೆ ಒಡೆದು ಸೊಂಟವನ್ನು ಮುರಿದು ಕೈಕಾಲುಗಳನ್ನು ಪಿಂಟಿ ಊನಮಾಡುತ್ತಿದ್ದರು. ಅವನ ದನಗಳನ್ನು ೩೦–೪೦ ಮೈಲಿಗಳ ಆಚೆ ದೊಡ್ಡಿಗಳಿಗೆ ಹೊಡೆದುಕೊಂಡುಹೋಗಿ ಕೂಡಿಬರುತ್ತಿದ್ದರು. ಅಲ್ಲಿಂದಲೂ ದನಗಳನ್ನು ಬಿಡಿಸಿಕೊಂಡು ಬಂದರೆ, ಅವುಗಳ ಕಾಲನ್ನು ಮುರಿದು ಬಾಲವನ್ನು ಕತ್ತರಿಸುತ್ತಿದ್ದರು. ಎದುರಾಳಿಯ ತೋಟಕ್ಕೆ ರಾತ್ರಿ ಕಾಲದಲ್ಲಿ ನುಗ್ಗಿ

---

* ನಡೆದ ಸಂಗತಿಗಳ ಆಧಾರದ ಮೇಲೆ ಬರೆದುದು.

[1] ನಮ್ಮ ಕಡೆ ಒಬ್ಬ ಮನುಷ್ಯನಲ್ಲಿ ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣ ಸೇರಿದರೆ ಅವನಿಗೆ 'ತ್ರಾಣಿ' ಎಂದು ಹೆಸರು.

ಅಲ್ಲಿಯ ಎಳೆಯ ಬಾಳೆಕಂದುಗಳನ್ನೆಲ್ಲಾ ಕುಯ್ಯಗತ್ತಿಯಲ್ಲಿ ಸವರುತ್ತಿದ್ದರು. ಅವನ ಹುಲ್ಲುಮೆದೆಗೆ ಬೆಂಕಿ ಹಚ್ಚಿ ಬೂದಿಯನ್ನು ಎರಡು ಮೈಲಿ ಉರುವುತ್ತಿದ್ದರು. ಬಲಿಷ್ಠನಾದ ರೈತನ ರಾಗಿ ಅಥವಾ ಭತ್ತದ ಗುಡ್ಡೆಗೆ ಅದು ತೆನೆಯೊಂದಿಗೆ ಇರುವಾಗಲೇ ಬೆಂಕಿಯಿಟ್ಟು ಅರಳು ಅರ್ಧ ಮೈಲಿಯವರೆಗೆ ಹಾರಿ ಗುಬ್ಬಕ್ಕಿಗಳಿಗೆಲ್ಲಾ ಆಹಾರವಾಗುವಂತೆ ಮಾಡುತ್ತಿದ್ದರು. ತಮ್ಮ ಕಾಫಿ ತೋಟಕ್ಕೆ ನುಗ್ಗಿದ ಆಡುಗಳನ್ನು ಅಲ್ಲೇ ಕೊಂದು ಗಿಡಗಳ ಬುಡದಲ್ಲಿ ಗೊಬ್ಬರಕ್ಕಾಗಿ ಹೂತುಬಿಡುತ್ತಿದ್ದರು. ಈ ಕಾರಣದಿಂದ "ಬೂತಯ್ಯನವರು ಹಸಿ ಆಡನ್ನೇ ತಿನ್ನುತ್ತಾರೆ" ಎಂದು ಜನರು ಹೇಳುತ್ತಿದ್ದರು. ಒಟ್ಟಿನಲ್ಲಿ ಬೂತಯ್ಯನವರು ಕಿರಾತರಾಗಿದ್ದರು.

ಬೂತಯ್ಯನವರ ಸಂಪಾದನೆಯ ದಾರಿಗಳು ಬಗೆ ಬಗೆಯವಾಗಿದ್ದುವು. ಅವರು ಮಾಡುತ್ತಿದ್ದ ಎಲ್ಲಾ ಕೆಲಸಗಳಲ್ಲೂ ಅವರು ಅನುಸರಿಸುತ್ತಿದ್ದುದು ಒಂದೇ ತತ್ವ—"ತಾವು ಕಾನೂನಿನಲ್ಲಿ ಸಿಕ್ಕಿಕೊಳ್ಳಬಾರದು" ಎಂಬುದು. ಅವರಿಗೆ ಸರ್ಕಾರದ ಭಯದ ಹೊರತು ಮತ್ತಾವ ಭಯವೂ ಇರಲಿಲ್ಲ; ಹಣದ ಹೊರತು ಮತ್ತಾವ ಆಸೆಯೂ ಇರಲಿಲ್ಲ. ಅವರ ದೇಹ ಕಂಚಿನಂತಿದ್ದಿತು. ಅವರ ಕೆಚ್ಚೆದೆಯೂ ಧೈರ್ಯವೂ ಯಾರ ಗುಂಡಿಗೆಯನ್ನಾದರೂ ಅಲ್ಲಾಡಿಸುತ್ತಿದ್ದುವು. ಅವರ ಆಸೆಯು ಇಂದ್ರನ ವೈಭವವನ್ನೇ ಕೊಟ್ಟರೂ ತೃಪ್ತಿಯಾಗುತ್ತಿರಲಿಲ್ಲ. ಹಣ ಸಂಪಾದನೆಯ ಯಾವ ಮಾರ್ಗವನ್ನೂ ಅವರು ಅಲಕ್ಷ್ಯಮಾಡುತ್ತಿರಲಿಲ್ಲ; ಹಣಕ್ಕಾಗಿ ಯಾವ ಅನ್ಯಾಯಮಾಡಲೂ ಹಿಂದೆಗೆಯುತ್ತಿರಲಿಲ್ಲ. ನಮ್ಮ ಪ್ರಾಂತದ ಪ್ರತಿ ಒಬ್ಬ ರೈತನ ಹೆಸರಿನಲ್ಲೂ ಅವರ ಬಳಿ ಒಂದೊಂದು ಖಾಲಿ ಛಾಪಾ ಕಾಗದವಿದ್ದಿತು. ರೈತನು ಇವರ ಮಾತಿನಂತೆ ನಡೆಯದೆ ಸ್ವಲ್ಪ ಬಾಲ ಬಿಚ್ಚಿದರೂ ಸಾಕು, ಬೂತಯ್ಯನವರು ಕೂಡಲೆ ತಮ್ಮಲ್ಲಿದ್ದ ಛಾಪಾ ಕಾಗದವನ್ನು ತೆಗೆದುಕೊಂಡು ಅವನ ಹೆಸರಿನಲ್ಲಿ ಇನ್ನೂರೋ ಮುನ್ನೂರೋ ರೂಪಾಯಿಗಳಿಗೆ ಒಂದು ಕಳ್ಳಪತ್ರವನ್ನು ತಮಗೆ ಬೇಕಾದವರಿಂದ ಬರೆಯಿಸುತ್ತಿದ್ದರು. ಅನೇಕ ವೇಳೆ ರೈತ ಬದುಕಿರುವವರೆಗೆ ಸುಮ್ಮನೆ ಇದ್ದು, ಅವನು ಸತ್ತನಂತರ ತಮಗೆ ಅವನಿಂದ ಹಣವು ಬರಬೇಕಾಗಿದೆ ಎಂದು ಪ್ರಕಟಿಸುತ್ತಿದ್ದರು. ಒಬ್ಬೊಬ್ಬನ ಹೆಸರಿನಲ್ಲೂ ಇಂತಹ ಬುಸುನಾಗಪ್ಪಗಳು ಎಷ್ಟಿವೆ ಎಂಬುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅವರು ಯಾರಿಗೆ ಬೇಕಾದರೂ ಸಾಕ್ಷಿ ಹೇಳಲು ಸಿದ್ಧರಾಗಿದ್ದುದರಿಂದ, ಇಂತಹ ವಿಷಯಗಳಲ್ಲಿ ಅವರಿಗೂ ಸುಳ್ಳುಸಾಕ್ಷಿಗಳನ್ನು ಹೇಳಲು ಜನರು ಸಿದ್ಧರಾಗಿರುತ್ತಿದ್ದರು. ಅವಿಭಕ್ತ ಕುಟುಂಬಗಳಲ್ಲಿ ಸತ್ತ ಅಣ್ಣ ತಮ್ಮಂದಿರ ಹೆಸರಿನಲ್ಲಿ ಇಂತಹ ಸುಳ್ಳು ಕಾಗದಗಳು ಸೃಷ್ಟಿಯಾಗಿ ಮನೆಯಲ್ಲಿ ಗೃಹಚ್ಛಿದ್ರವುಂಟಾಗಿ ಸಂಸಾರಗಳೇ ಹಾಳಾಗುತ್ತಿದ್ದುವು. ಬೂತಯ್ಯನವರು ಅಣ್ಣನನ್ನು ತಮ್ಮನ ಮೇಲೂ ಅತ್ತಿಗೆಯನ್ನು

ಮೈದುನನ ಮೇಲೂ ತಂದೆಯನ್ನು ಮಗನ ಮೇಲೂ ದತ್ತುಪುತ್ರನನ್ನು ತಾಯಿಯ ಮೇಲೂ ಕೆಡವಿ ಎಲ್ಲರ ಪರವನ್ನೂ ಹಿಡಿದು ಎಲ್ಲರಿಂದಲೂ ಕಾಗದಗಳನ್ನು ಬರೆಸಿ ಕೊಂಡು ದೊಡ್ಡ ಗೊಂದಲವನ್ನೇ ಉಂಟುಮಾಡಿ ಆಸ್ತಿಯನ್ನೆಲ್ಲಾ ನುಂಗಿ ಬಿಡುತ್ತಿದ್ದರು.

ರಾತ್ರಿಕಾಲದಲ್ಲಿ ಜತೆ ಜತೆ ಹೋರಿಗಳನ್ನು ಕದ್ದು ಬೆಳಗಾಗುವುದರೊಳಗೆ ೨೦–೩೦ ಮೈಲಿ ದೂರದ ಸಂತೆಗಳಿಗೆ ಹೋಗಿ ಒಂದೊಂದು ಸಂತೆಯಲ್ಲಿ ಒಂದೊಂದು ಹೋರಿಯನ್ನು ಮಾರಿಬಿಡುತ್ತಿದ್ದರು. ಸಂತೆಗಳಲ್ಲಿ ದನಗಳನ್ನು ಮಾರಿದರೆ ಮಾರು ವವನು ಕೊಳ್ಳುವವನಿಗೆ 'ಚಹರೆ ಪಟ್ಟಿ' ಎಂಬುದಾಗಿ ಒಂದನ್ನು ಕೊಡಬೇಕು. ಆ ಪಟ್ಟಿಯಲ್ಲಿ ಮಾರುವವನ ಹೆಸರು, ಅವನಿಗೆ ಆ ದನ ಬಂದ ಬಗೆ ಇವುಗಳನ್ನೆಲ್ಲಾ ಬರೆದಿರಬೇಕು. ಬೂತಯ್ಯನವರು ಧಾರಾಳವಾಗಿ ಚಹರೆ ಪಟ್ಟಿಯನ್ನು ಎತ್ತು ಯಾರದೋ ಅವನ ಹೆಸರಿನಲ್ಲೇ ಬರೆದುಕೊಡುತ್ತಿದ್ದರು. ರಾಸಿನವನು ತನ್ನ ದನವನ್ನು ಹುಡುಕುತ್ತಾ ಕೊಂಡುಕೊಂಡವನ ಬಳಿಗೆ ಬಂದಾಗ ತನ್ನ ಹೆಸರಿನ ಚಹರೆ ಪಟ್ಟಿಯೇ ಅವನಿಗೆ ಕಾಣುತ್ತಿದ್ದಿತು. ರಾಸು ಕಳವುಮಾಲೆಂದು ವ್ಯಕ್ತ ವಾಗಿದ್ದರೆ ಕೊಂಡುಕೊಂಡವನು ಸ್ವಲ್ಪ ಹೆದರುತ್ತಿದ್ದನು. ಆದರೆ ಚಹರೆ ಪಟ್ಟಿ ಯಜಮಾನನ ಹೆಸರಿನಲ್ಲೇ ಇದ್ದುದರಿಂದ ನಿಜವಾಗಿ ತನಗೆ ಮಾರಿದವನೇ ಈ ವೇಷ ದಿಂದ ದನವನ್ನು ಕಡಿಮೆ ಬೆಲೆಗೆ ಹಾರಿಸಿಕೊಂಡುಹೋಗಲು ಬಂದಿರುವನೆಂದು ಅವನು ತಿಳಿದುಕೊಳ್ಳುತ್ತಿದ್ದನು. ದನದ ಯಜಮಾನನು ಕೊಂಡವನು ಎತ್ತನ್ನು ಕದ್ದುದು ಮಾತ್ರವಲ್ಲದೆ, ಚಹರೆ ಪಟ್ಟಿಯನ್ನು ಫೋರ್ಜರಿ ಮಾಡಿದ್ದಾನೆಂದು ರೇಗು ತ್ತಿದ್ದನು. ಇವೆಲ್ಲಾ ಕಣ್ಣೆದುರಿಗೇ ನಡೆಯುತ್ತಿದ್ದರೂ ಬೂತಯ್ಯನವರು ಮಾತ್ರ ಶಾಂತರಾಗಿಯೇ ಇರುತ್ತಿದ್ದರು. ತಮ್ಮ ಅಕೃತ್ಯವೇ ಈ ಕದನಕ್ಕೆ ಕಾರಣವೆಂಬುದ ರಿಂದ ಅವರಿಗೆ ಸ್ವಲ್ಪವೂ ವ್ಯಥೆಯುಂಟಾಗುತ್ತಿರಲಿಲ್ಲ. ಈ ರೀತಿಯಾಗಿ ಸಂತೆಗಳಲ್ಲಿ ಬೂತಯ್ಯನವರು ಸುಮಾರು ಮುನ್ನೂರು ಜತೆ ಎತ್ತುಗಳನ್ನೂ ಇನ್ನೂರು ಎಮ್ಮೆ ಗಳನ್ನೂ ನೂರಾರು ಕುದುರೆಗಳನ್ನೂ ಮಾರಿದ್ದಾರೆಂದು ತಿಳಿದವರು ಹೇಳುತ್ತಾರೆ. ಬೂತಯ್ಯನವರ ಈ ಸಾಧನೆಯಲ್ಲಿ ಅವರಿಗೆ ಅಸಾಧ್ಯ ಸಂಖ್ಯೆಯ ವೈರಿಗಳಾಗಿದ್ದಾರೆ. ಒದೆತಗಳಂತೂ ಲೆಕ್ಕವಿಲ್ಲದಷ್ಟು ಬಿದ್ದಿವೆ. ಒಕ್ಕಲಿಗರೂ ತಿಗಳರೂ ಹರಿಜನರೂ ಒಟ್ಟೊಟ್ಟಾಗಿ ಗುಂಪುಕೂಡಿ ಅವರಿಗೆ ಚೆನ್ನಾಗಿ 'ಇಡಿಕಿ' ಮೈಯಿನ ಪ್ರತಿಯೊಂದು ಮೂಳೆಯನ್ನೂ ಸೆಗ್ಗಿಹಾಕಿದ್ದಾರೆ. ಕೈಕಾಲುಗಳನ್ನೆಲ್ಲಾ ಇಡಿದು ಪುಡಿಮಾಡಿದ್ದಾರೆ. ಆದರೆ ಇದಾವುದರಿಂದಲೂ ಬೂತಯ್ಯನವರು ಹೆದರಿಲ್ಲ. ಪ್ರತಿಯೊಂದು ಘಟನೆ ಯಿಂದಲೂ ಮನುಷ್ಯಜಾತಿಯಲ್ಲಿ ಅವರ ದ್ವೇಷವೂ ಕೋಪವೂ ಹೆಚ್ಚಾಗುತ್ತಿದ್ದುವು.

ಬೂತಯ್ಯನವರಿಗೆ ಸಂಪಾದನೆಯು ಹೆಚ್ಚಾಗಿದ್ದಂತೆ ವೆಚ್ಚವೂ ಕಡಿಮೆಯಾಗಿದ್ದಿತು. ಅವರ ಸ್ವಭಾವ ಬಹು ಹಿಡಿತ, ತೀರ 'ಅಂಟು'. ನಮ್ಮ ಕಡೆ 'ಒಂದು ರೂಪಾಯಿಯನ್ನು ಮುರಿಸಿದರೆ ಒಬ್ಬನ ಬುರುಡೆಯನ್ನು ಹಾರಿಸಿದಂತೆ' ಎಂಬ ಮಾತನ್ನು ಮೊದಲು ಹೇಳಿ, ಅದನ್ನು ಆಚರಣೆಗೆ ತಂದವರು ಅವರೆ. ಅವರು ಜೀವಮಾನದಲ್ಲೆಲ್ಲಾ ಒಂದು ಪ್ರಾಣಿಗೂ ಒಂದು ತುತ್ತು ಅನ್ನವನ್ನೂ ಕೊಟ್ಟವರಲ್ಲ. ಎಂಜಲು ಕೈಯಲ್ಲಿ ಕಾಗೆಯನ್ನು ಸಹ ಓಡಿಸಿದವರಲ್ಲ. ಯಾವ ಸಾಮಾನನ್ನೂ ಅವರು ಒಂದೇ ಸಲ ಮೂರು ಕಾಸಿಗಿಂತ ಹೆಚ್ಚಾಗಿ ಮನೆಗೆ ತಂದುದಿಲ್ಲ. ಉಳಿದವರೆಲ್ಲಾ ತಮ್ಮ ಜಮೀನುಗಳಲ್ಲಿ ಬೆಳೆದ ಬೆಳೆಯ ಪೈಕಿ ತಮ್ಮ ಮನೆಯ ಉಪಯೋಗಕ್ಕೆ ಬೇಕಾದಷ್ಟನ್ನು ಮೊದಲು ಇಟ್ಟುಕೊಂಡು ಉಳಿದುದನ್ನು ಮಾರಿದರೆ ಬೂತಯ್ಯನವರು ಬೆಳೆದುದನ್ನೆಲ್ಲಾ ಮಾರಿ ಮನೆಗೆ ಸಾಮಾನು ಬೇಕಾದಾಗ ಮೂರು ಕಾಸಿಗೋ ಆರು ಕಾಸಿಗೋ ತರುತ್ತಿದ್ದರು. ಅವರ ಮನೆಯಲ್ಲಿ ದುಡ್ಡಿಗೆ ಹೊರತು ಉಳಿದ ಸಾಮಾನುಗಳಿಗೆ ಯಾವಾಗಲೂ ದರಿದ್ರವೇ. ಅವರ ಹೆಂಡತಿಗೂ ಅವರಿಗೂ ಮನೆಗೆ ಬೇಕಾದ ಸಾಮಾನುಗಳನ್ನು ತರಲಿಲ್ಲವೆಂದು ಹತ್ತಿದ ವ್ಯಾಜ್ಯ ಹರಿಯುತ್ತಿರಲಿಲ್ಲ. ಅನೇಕ ದಿನ ಬೂತಯ್ಯನವರು ಮೂರು ಅಥವಾ ನಾಲ್ಕು ಗಂಟೆಗೆ ಹಗಲು ರಾತ್ರಿ ಎರಡಕ್ಕೂ ಅನ್ವಯಿಸುವಂತೆ ಒಂದೇ ಊಟವನ್ನು ಮಾಡುತ್ತಿದ್ದರು. ಅವರು ಉಪಯೋಗಿಸುತ್ತಿದ್ದ ಒಂದೇ ಒಂದು ತರಕಾರಿ: ಹಲಸಿನಕಾಯಿ 'ಒಡಕು'. ಅದಕ್ಕೆ ಅವರು ದುಡ್ಡು ಕಾಸು ಕೊಡಬೇಕಾಗಿರಲಿಲ್ಲ. ಯಾರ ಮರದಲ್ಲಿ ಇದ್ದರೂ ಮುರಿದುಕೊಂಡು ಬರುತ್ತಿದ್ದರು. ಒಂದು ಮರದಲ್ಲಿಯಂತೂ ಅವರ ಜೀವಮಾನದಲ್ಲಿ ಮರದ ಯಜಮಾನನು ಒಂದು ಬಲಿತ ಕಾಯನ್ನೂ ಕಾಣಲೇ ಇಲ್ಲ. "ಈ ಮರದ ಕಾಯಿ ಬಲಿಯುವುದೇ ಇಲ್ಲ. ಇದಕ್ಕೆ ಹಾಕಿದುದೇ ಎಳೆಯ ಬೀಜ" ಎಂದು ಅವರು ಹೇಳುತ್ತಿದ್ದರು. ಹೀಗೆ ಮಾಡಿ ಬೂತಯ್ಯನವರು ತಮ್ಮ ಪಾಲಿಗೆ ಬಂದಿದ್ದ ಹತ್ತುಸಾವಿರ ರೂಪಾಯಿನ ಆಸ್ತಿಯನ್ನು ತಾವು ಸಾಯುವುದಕ್ಕೆ ಮುಂಚೆ ಎರಡು ಲಕ್ಷಕ್ಕೆ ಏರಿಸಿದರು.

ಬೂತಯ್ಯನವರು ವಾಸವಾಗಿದ್ದುದು ಜಾಲಹಳ್ಳಿ ಗ್ರಾಮದಲ್ಲಿ. ಅಲ್ಲಿ ಬ್ರಾಹ್ಮಣರದು ಅವರದು ಒಂದೇ ಒಕ್ಕಲು. ಇವರಲ್ಲದೆ ಜಾಲಹಳ್ಳಿಯಲ್ಲಿ ತಿಗಳರದೂ ಸೇರಿ ಸುಮಾರು ನೂರು ಮನೆಗಳಿದ್ದುವು. ಹಳ್ಳಿಯವರಿಗೆ ಬೂತಯ್ಯನವರು ಬ್ರಾಹ್ಮಣರೆಂದು ಮಾತ್ರ ಗೊತ್ತಿದ್ದಿತೇ ಹೊರತು ಬ್ರಾಹ್ಮಣರಲ್ಲಿ ಅವರು ಯಾವ ಪಂಗಡಕ್ಕೆ ಸೇರಿದವರೆಂಬುದು ತಿಳಿದಿರಲಿಲ್ಲ. ಕೆಲವರು ಬ್ರಾಹ್ಮಣರಲ್ಲಿ ಯಾವುದೋ ಪಂಗಡಕ್ಕೆ ಅವರನ್ನು ಅನ್ವಯಿಸಿಕೊಂಡು "ಬೂತಯ್ಯನವರು ಸಂಕೇ ತಿಗಳರು, ನಾವು ಬರಿಯ ತಿಗಳರು" ಎಂಬುದಾಗಿ ಹೇಳಿಕೊಳ್ಳುತ್ತಿದ್ದರು. ಬೂತಯ್ಯನವರ ಆಕಾರ, ಬಲಿತ

ಗಡ್ಡ, ಅವರ ಬಟ್ಟೆಗಳು, ಮಾತಿನ ಸರಣಿ ಇವುಗಳನ್ನು ನೋಡಿದರೂ ಅವರು ಯಾವ ಜಾತಿಯವರೆಂದು ಹೇಳುವುದು ಕಷ್ಟವಾಗುತ್ತಿದ್ದಿತು. ಬೂತಯ್ಯನವರ ಮಡಿವೈಲಿಗೆಗಳನ್ನು ನೋಡಿದರೆ ಜನಕ್ಕೆ ಮೈ ಜುಂ ಎನ್ನುತ್ತಿದ್ದಿತು. ಅವರ ಬಟ್ಟೆಗಳನ್ನು ಕಂಡರೆ ಬೆಂಕಿಯೂ ನೀರೂ ಹೆದರುತ್ತಿದ್ದುವು. ಅವರ ಸ್ವಭಾವ ಬಹಳ ‘ ಅಂಟಾದುದರಿಂದ ’ ಅವರು ಚಿಂದಿಯಲ್ಲದೆ ಹೊಸ ಬಟ್ಟೆಯನ್ನು ಉಟ್ಟುದನ್ನೇ ಜನರು ಕಾಣರು. ಅತಿ ಸೋಮಾರಿಗಳಾದ ಅವರು ತಮ್ಮ ಬಟ್ಟೆಯನ್ನು ಒಗೆದೇ ಕಾಣರು. ಜಾಲಹಳ್ಳಿಯಲ್ಲಿ ಊರ ಮುಂದೆಯೇ ನದಿ ಹರಿಯುತ್ತಿದ್ದರೂ ಅವರು ಸ್ನಾನಮಾಡುತ್ತಿರಲಿಲ್ಲ. ಸ್ನಾನಕ್ಕೆಂದು ನದಿಗೆ ಹೋಗಿ ಏನೋ ಬೇಸರಿಕೆಯುಂಟಾಗಿ ಸ್ನಾನಮಾಡದೆ ಸುಮ್ಮನೆ ಕೈಕಾಲು ತೊಳೆದುಕೊಂಡು ಮನೆಗೆ ಬಂದುಬಿಡುತ್ತಿದ್ದರು. ಇದರಿಂದ ಸ್ನಾನಮಾಡದೆಯೇ ಸ್ನಾನಮಾಡಿದೆವೆಂದರೆ ಜಾಲಹಳ್ಳಿಯಲ್ಲಿ ‘ ಬೂತಯ್ಯನವರ ಸ್ನಾನವೋ ’ ಎಂದು ಜನರು ಕೇಳುವಷ್ಟು ಮಟ್ಟಿಗೆ ಅವರ ಸ್ನಾನವು ಪ್ರಸಿದ್ಧವಾಗಿದ್ದಿತು. ಬೂತಯ್ಯನವರಿಗೆ ಚಳಿ ಮಳೆ ಯಾವುದೂ ಕೆಂದುತ್ತಿರಲಿಲ್ಲ. ಅವರನ್ನು ಕಚ್ಚಿದ ಸೊಳ್ಳೆಗಳೂ ತಿಗಣೆಗಳೂ ತತ್‌ಕ್ಷಣ ಸತ್ತು ಬೀಳುತ್ತಿದ್ದುವು. ಅವರಿಗೆ ಹಾಸಿಗೆಯಲ್ಲಿ ಮಲಗಿದರೆ ನಿದ್ರೆಯೇ ಬರುತ್ತಿರಲಿಲ್ಲ. ಹಾಸಿಗೆ ಮೆತ್ತಗಿದ್ದುದು ಅವರ ಮೈಗೆ ಒಗ್ಗುತ್ತಿರಲಿಲ್ಲ. ಹೆಗಲ ಮೇಲಿದ್ದ ಬಟ್ಟೆಯನ್ನೇ ಹಾಸಿಕೊಂಡು ಮೊಳಕೈಯನ್ನೇ ತಲೆದಿಂಬಗಿಟ್ಟುಕೊಂಡು ಗೊರಕೆ ಹೊಡೆಯುತ್ತಿದ್ದರು. ಈ ಕಾರಣದಿಂದ “ ಬೂತಯ್ಯನವರು ಏಳುವುದಕ್ಕೆ ಮುಂಚೆ ಅವರ ಹಾಸಿಗೆಯೇ ಏಳುತ್ತದೆ ” ಎಂದು ಜನರು ಹೇಳುತ್ತಿದ್ದರು. ಬೂತಯ್ಯನವರು ಸುಖಕ್ಕೆ ಆಳಾಗಿರಲಿಲ್ಲ. ಮೂರು ದಿನ ಎರಡು ಹೊತ್ತೂ ಬಿಸಿ ಅನ್ನ ಸಾರು ಊಟಮಾಡಿದರೆ ಅವರಿಗೆ ತಲೆನೋವು ಬರುತ್ತಿದ್ದಿತು. ಎಂಟು ದಿನ ಅವರು ಸುಖವಾಗಿ ಕಾಲಕಾಲಕ್ಕೆ ಊಟ ನಿದ್ರೆ ಮಾಡಿದ್ದರೆ ಅವರಿಗೆ ಚಳಿಜ್ವರ ಬರುತ್ತಿದ್ದಿತು. ಒಂದು ತಿಂಗಳು ಅವರನ್ನು ಒಂದೇ ಕಡೆ ಕೂರಿಸಿ ಸುಖದಲ್ಲಿ ಇರಿಸಿದ್ದರೆ ಅವರು ಸಾಯುತ್ತಿದ್ದರು.

ಬೂತಯ್ಯನವರು ತಮ್ಮ ಮನೆಗೆ ಜನರನ್ನು ಸೇರಿಸುತ್ತಿರಲಿಲ್ಲ. ಯಾರಾದರೂ ಮನೆಯ ಹತ್ತಿರ ಬಂದರೆ ಅವರನ್ನು ಅಟ್ಟಿಸಿಕೊಂಡೇ ಬರುತ್ತಿದ್ದರು. “ ಲೋಕದಲ್ಲಿರುವವರೆಲ್ಲಾ ಕಳ್ಳರು. ನಮ್ಮಿಂದ ಏನೋ ಲಾಭ ಸಂಪಾದನೆಗಾಗಿಯೇ ನಮ್ಮ ಬಳಿಗೆ ಬರುತ್ತಾರೆ. ಇವರ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು ” ಎಂದು ಅವರು ಹೇಳುತ್ತಿದ್ದರು. ತಮ್ಮ ಮಗನಾದ ಅಯ್ಯುವಿಗೆ ಅವರು ನಿತ್ಯವೂ “ ಲೋಕದ ಜನರ ದುಷ್ಟಸ್ವಭಾವ ; ಅವರ ವಿಷಯದಲ್ಲಿ ತಾವು ಹೇಗೆ ಎಚ್ಚರಿಕೆಯಿಂದ ನಡೆದುಕೊಂಡು ಬಂದರು ; ಹೇಗೆ ಜನರು ಒಂದು ಸಲ ಮಾಡಿದ ಕೆಡಕನ್ನು ತಾವು ಮರೆಯದೆ

ಸಾಯುವವರೆಗೆ ನಾಗರಹಾವಿನಂತೆ ವೈರವನ್ನು ಸಾಧಿಸಿ ಅವನ ಬಾಲವನ್ನು ಕುಯ್ದರು; 'ಒಕ್ಕಲಿಗನ ನೆಂಟು ಒಡವೆ ಗೇಡು'; 'ಶೂದ್ರಸ್ಯ ಶುಭಂ ನಾಸ್ತಿ'; ತಿಗಳರು ನಿನಗೆ ಕೈಮುಗಿದರೆ, ನಿನ್ನೊಂದಿಗೆ ಒಂದು ಒಳ್ಳೆಯ ಮಾತನಾಡಿದರೆ ನಿನ್ನಿಂದ ಏನೋ ಕಸಿಯಲು ಈ ಸಿದ್ಧತೆಯನ್ನು ಮಾಡುತ್ತಾರೆ, ನೀನು ಎಚ್ಚರಿಕೆಯಿಂದ ಇರಬೇಕು"—ಮುಂತಾಗಿ ಉಪದೇಶಮಾಡುತ್ತಿದ್ದರು. ತಮಗೆ ಎಪ್ಪತ್ತು ವಯಸ್ಸಾಗಿ ಯಮನು ಕಣ್ಣಮುಂದೆ ಸುಳಿಯುತ್ತಿರುವಾಗ ಕೂಡ ಅವರ ಹಣದ ಆಸೆಯೂ ಮನುಷ್ಯ ಸ್ವಭಾವದಲ್ಲಿ ಅಪನಂಬಿಕೆಯೂ ಕಡಮೆಯಾಗಿರಲಿಲ್ಲ. ಅವರು ಸಾಯುವ ಮೊದಲ ರಾತ್ರಿ ಅವರಿಗೆ ಜ್ವರ ಬಹು ತೀಕ್ಷ್ಣವಾಗಿ ಬಂದಿತ್ತು. ಅದರ ಕಾವಿನಿಂದ ಮಧ್ಯೆ ಮಧ್ಯೆ ಅವರಿಗೆ ಜ್ಞಾನಹೋಗುತ್ತಿದ್ದಿತು. ಒಂದು ಸಲ ಎಚ್ಚರವಾದಾಗ ಅವರು ಅಯ್ಯುವನ್ನು ಹತ್ತಿರ ಕರೆದು "ನೋಡು, ಆಚೆ ಬೀದಿ ಕೆಂಗನಿಗೆ ಆವತ್ತು ಒಂದು ಪಾವು ಉಪ್ಪು ಸಾಲಾ ಕೊಟ್ಟೆ. ಸಂತೇಲಿ ತಂದುಕೊಡುತ್ತೇನೆಂದು ಹೇಳಿದ ಕಳ್ಳ ಕೊರಮ ನುಂಗಿಯೇ ಬಿಟ್ಟ. 'ಇನ್ನೇನು ಈ ಮುದಿಗೂಬೆ ಸಾಯುತ್ತೆ, ತನಗೇ ದಕ್ಕಿತು' ಎಂದುಕೊಂಡಿರಬಹುದು. ಒಂದು ಹರಳನ್ನೂ ಬಿಡದೆ ವಸೂಲ್ಮಾಡು" ಎಂದು ಹೇಳಿದರು. ಸ್ವಲ್ಪ ಹೊತ್ತಿನೊಳಗೆ ಅಯ್ಯುವಿಗೆ ಮತ್ತೆ ಕಣ್ಣಿಗೆ ಜೊಂಪು ಹತ್ತಿತು. ಅಷ್ಟರಲ್ಲೇ ಬೂತಯ್ಯನವರು ಮಗನನ್ನು ಮತ್ತೆ ಕೂಗಿ "ಬೀದಿ ಮನೆ ಚಿಕ್ಕ ಎಪ್ಪತ್ತು ಬಳ್ಳ ರಾಗಿ ಗುತ್ತಿಗೆ ಕಮ್ಮಿ ಬಳ್ಳದಲ್ಲಿ ಅಳೆದಿದ್ದಾನೆ. ಅದರ ಓರಡೆ ಎರಡೂವರೆ ಬಳ್ಳ ಒರಬೇಕು. ಈ ಊರಿನ ಪದ್ಧತಿಯೇ ಹೀಗೆ. ಕಿರಾತರು; ನೆಚ್ಚಿದರೆ ತಲೆಗೆ ಕಲ್ಲು. ಒಂದು ಕಾಳೂ ಬಿಡದೆ ಹಳೇ ಬಾಕಿಯನ್ನೆಲ್ಲಾ ವಸೂಲ್ಮಾಡು. ಈ ಊರಲ್ಲಿ ಯಾರನ್ನೂ ನಂಬಬೇಡ. ಊರು ಒಂದು ಸುತ್ತ ಬಂದರೂ ನೂರು ಒಕ್ಕಲಲ್ಲಿ ಒಬ್ಬನಿಗೂ ಹೇಳಿದ ಮಾತು, ಕೊಟ್ಟ ನಂಬಿಕೆ ಎಂಬುದಿಲ್ಲ. ನಮ್ಮನ್ನು ಎಷ್ಟು ಹೀರಿದರೂ ಅವರಿಗೆ ತೃಪ್ತಿಯೇ ಇಲ್ಲ. ಹಣ ಕಾಸಿನ ವಸೂಲಿಯಲ್ಲಿ ಯಾರ ದಾಕ್ಷಿಣ್ಯಕ್ಕೂ ಒಳಗಾಗಬೇಡ. ರೈತರಿಗೆ ಅಯ್ಯೋ ಎಂದರೆ ಸಾಕು, ಆರು ತಿಂಗಳು ಪಾಪ ಸುತ್ತಿಕೊಳ್ಳುತ್ತೆ. ಬೆಣ್ಣೆ ಶಾಖವಿಲ್ಲದೆ ಹೇಗೆ ಕರಗುವುದಿಲ್ಲವೋ ಹಾಗೆಯೇ ರೈತನೂ ಬಿಸಿ ತಟ್ಟಿದ ಹೊರತು ನಿನಗೆ ಬಗ್ಗುವುದಿಲ್ಲ. ಅವನಿಗೆ ಬೈಗಳ ಸರಿಯಾಗಿ ಬೀಳುತ್ತಿದ್ದರೆ ಚೀಲಕ್ಕೆ ಕೈಹಾಕಿ ರೂಪಾಯಿಗಳನ್ನು ತೆಗೆಯುತ್ತಾನೆ. ಆ ಮಧ್ಯೆ ನೀನು ಒಂದು ಒಳ್ಳೆಯ ಮಾತನ್ನಾಡಿದರೂ ಸಾಕು, ಕೈಯಲ್ಲಿದ್ದ ರೂಪಾಯಿಯನ್ನು ಹಾಗೆಯೇ ಮೆಲ್ಲಗೆ ಚೀಲಕ್ಕೇ ಬಿಟ್ಟುಬಿಡುತ್ತಾನೆ. ಆದ್ದರಿಂದ ರೈತನೊಂದಿಗೆ ಮರೆತೂ ಒಂದು ಒಳ್ಳೆಯ ಮಾತನ್ನೂ ಆಡಬೇಡ . . . . ಮರೆತೆ, ಮೂಲೆಮನೆ ರಂಗನ ತಣಿಗೆ ಪೈಕಿ ಒಂದನ್ನು ಮಾರಿಬಿಡು. ಎರಡರ ಹಣವೂ ಬರುತ್ತೆ . . . ." ಎಂದು ಹೇಳುತ್ತಾ ಬೂತಯ್ಯನವರು ಪ್ರಾಣಬಿಟ್ಟರು.

ಮೂಲೆಮನೆ ರಂಗನೆಂಬವನು ಬೂತಯ್ಯನವರಲ್ಲಿ ಹನ್ನೆರಡಾಣೆಗಳನ್ನು ತೆಗೆದುಕೊಂಡು ಎರಡು ಕಂಚಿನ ತಣಿಗೆಗಳನ್ನು ಅಡವಿಟ್ಟಿದ್ದನು. ಅವು ಹೊಸ ತಣಿಗೆಗಳಂತೆ ತೋರುತ್ತಿದ್ದುವು. ಅವುಗಳನ್ನು ಅಡವು ಇಟ್ಟುಕೊಂಡ ಕೆಲವು ದಿವಸಗಳ ಮೇಲೆ ಬೂತಯ್ಯನವರು “ ಇದರಲ್ಲಿ ಊಟ ಪ್ರಾರಂಭಿಸಿದರೆ ನಿತ್ಯ ಎರಡು ಎಲೆ ಉಳಿಯುತ್ತೆ. ಹನ್ನೆರಡಾಣೆಯ ಬಡ್ಡಿಯಾದರೂ ಗಿಟ್ಟಿದಂತಾಯಿತು ” ಎಂದುಕೊಂಡು ರಂಗನ ಮನೆಯ ತಣಿಗೆಯಲ್ಲೇ ಊಟವನ್ನು ಪ್ರಾರಂಭಿಸಿದರು. ಬೂತಯ್ಯನವರ ಹೆಂಡತಿ ಬದುಕಿರುವವರೆಗೆ ಒಕ್ಕಲಿಗನ ತಣಿಗೆಯಲ್ಲಿ (ಅದು ಹೊಸ ತಣಿಗೆಯಾಗಿದ್ದರೂ) ಊಟಮಾಡಲು ಅವಕಾಶಕೊಟ್ಟಿರಲಿಲ್ಲ. ಬೂತಯ್ಯನವರು ಸಾಯುವುದಕ್ಕೆ ಎರಡು ವರುಷ ಮುಂಚೆ ಅವರ ಹೆಂಡತಿಯವರು ಸ್ವರ್ಗಸ್ಥರಾದ ನಂತರ, ಬೂತಯ್ಯನವರೂ ಅಯ್ಯುವೂ ತಣಿಗೆಗಳಲ್ಲಿಯೇ ಊಟಮಾಡುತ್ತಿದ್ದರು.

ಬೂತಯ್ಯನವರ ಕಾಲಾನಂತರ ಅಯ್ಯುವೇ ಅವರ ಆಸ್ತಿಗೆ ಯಜಮಾನನಾದನು. ತಂದೆ ಸಾಯುವಾಗ ಅಯ್ಯುವಿಗೆ ಇಪ್ಪತ್ತೈದು ವಯಸ್ಸಾಗಿದ್ದಿತು. ಅವನು ಅಷ್ಟೇನೂ ಬುದ್ಧಿವಂತನಾಗಿರಲಿಲ್ಲ. ಬೂತಯ್ಯನವರ ದುಡ್ಡು ಇದ್ದುದರಿಂದಲೇ ಅವನೂ ಒಬ್ಬ ಮನುಷ್ಯನಾಗಿದ್ದನು. ಲಂಕೆಯಲ್ಲಿ ಹುಟ್ಟಿದವರೆಲ್ಲಾ ರಾವಣರೇ ಎಂಬಂತೆ ಬೂತಯ್ಯನವರ ಮಗನಾದ ಅವನೂ ದೌಷ್ಟ್ಯದಲ್ಲಿ ಕಡಿಮೆಯಾಗಿರಲಿಲ್ಲ; ಆದರೆ ಬೂತಯ್ಯನವರಷ್ಟು ಬುದ್ಧಿಕೌಶಲ್ಯವು ಅವನಲ್ಲಿ ಇಲ್ಲದುದರಿಂದ ಅವನು ಹಲ್ಲು ಕಿತ್ತ ಹಾವಿನಂತಾಗಿದ್ದನು. ಬುದ್ಧಿಯು ಕಡಿಮೆಯಾಗಿದ್ದುದರಿಂದ ಅವನ ಧೈರ್ಯವೂ ಕಡಿಮೆಯಾಗಿದ್ದಿತು. ಆದರೆ ಅವನು ಯುವಕನಾಗಿದ್ದುದರಿಂದ ದಯೆ ದಾಕ್ಷಿಣ್ಯಗಳ ಸೆಲೆಯು ಪೂರ್ಣವಾಗಿ ಬತ್ತಿಹೋಗಿರಲಿಲ್ಲ. ಬೂತಯ್ಯನವರು ಬದುಕಿರುವಾಗ ಅದು ಪೂರ್ಣವಾಗಿ ಬತ್ತಿಹೋಗಿದೆಯೆಂದು ನಂಬಿದ್ದರು. ರೈತರಿಗೆ ಹಾಗೆಯೇ ತೋರುತ್ತಿದ್ದಿತು. ಬಹು ದೊಡ್ಡ ಅಪಾಯ, ದುಃಖ ಇವು ಬಂದಿದ್ದರೆ ಅದರ ಪರಿಣಾಮ ಅವನ ಮನಸ್ಸಿನ ಮೇಲೆ ಹೇಗೆ ಆಗುತ್ತಿದ್ದಿತೋ ಹೇಳುವುದು ಸಾಧ್ಯವಲ್ಲ. ಅಂತಹ ನೂರಾರು ಅನುಭವಗಳು ತಮಗೆ ಉಂಟಾಗಿದ್ದರೂ ಬೂತಯ್ಯನವರ ಮನಸ್ಸು ಮಾತ್ರ ಕಲ್ಲಿನಂತೆಯೇ ಇದ್ದಿತು. ಬೂತಯ್ಯನವರಲ್ಲೂ ಅಯ್ಯುವಿನಲ್ಲೂ ಮನುಷ್ಯತ್ವ ಇದೆಯೆಂಬುದನ್ನು ಜಾಲಹಳ್ಳಿಯಲ್ಲಿ ಯಾರೂ ಒಪ್ಪುತ್ತಿರಲಿಲ್ಲ. ‘ಆ ಕೇಡಿಗನ ಮಗ ಈ ಕೇಡಿಗ’ ಎಂದು ಅವರು ಅಯ್ಯುವನ್ನು ಬಯ್ಯುತ್ತಿದ್ದರು. ಸಮಯ ಸಿಕ್ಕಿದರೆ ಕೋಳಿಕುರಿಗಳನ್ನು ಕುಯ್ಯುವಂತೆ ಅಯ್ಯುವನ್ನು ಕುಯ್ಯಲು ಅವರು ಹಿಂದೆಗೆಯುತ್ತಿರಲಿಲ್ಲ. ‘ಅಯ್ಯು ಮನಸನ ಕುಲವಲ್ಲ ದೆಯ್ಯ, ಅವನ್ಹಡೆ ಹಾಳಾಗ’ ಎಂದಲ್ಲದೆ ಅವರು ಅಯ್ಯುವಿನ ಮಾತನ್ನು ಎತ್ತುತ್ತಿರಲಿಲ್ಲ. “ನಿಮ್ಮಪ್ಪ ನನ್ನೆಲ್ಲ

ದೋಚಿ ಗುಡ್ಡೆಹಾಕವ್ನೆ; ಯಾವ ಗುದ್ಲಿ ಹಿಡಕೊಂಡು ಕಡ್ದದ್ಕೆ ನಿನಗೆ ಇಷ್ಟು ಬದಕು. ನಮ್ಮ ನೂರು ಮಕ್ಳು ಸತ್ತು ನೀವು ಒಬ್ಬರು ಬದುಕಿದಿರಿ. ಊರೆಲ್ಲ ಉಪಾಸ ಸತ್ತು ನಿಮ್ಮ ಮನೆ ಬೆಳೀತು. ಹಂಗೆ ನುಂಗಿದ್ದನ್ನೆಲ್ಲಾ ಕಕ್ಕೋಕಾಲ ಬರ್‍ತದೆ'' ಮುಂತಾಗಿ ತಿಗಳರು ಅಯ್ಯುವಿನ ಎದುರಿಗೆ ಹರಟುತ್ತಿದ್ದರು. ಬೂತಯ್ಯನವರು ಸತ್ತನಂತರ ಅವರು ಸ್ವಲ್ಪ ಜೋರಾಗಿದ್ದರು. ಬೂತಯ್ಯನವರ ಎದುರಿಗೆ ಆ ತರದ ಮಾತುಗಳನ್ನಾಡಲು ಯಾರಿಗೂ ಧೈರ್ಯವಿರುತ್ತಿರಲಿಲ್ಲ; ಆಡಿದ್ದರೆ ಬೂತಯ್ಯನವರು ಅಲ್ಲೇ ಅವನ ನಾಲಗೆಯನ್ನು ಕುಯಿದು ನಾಯಿ ನರಿಗಳಿಗೆ ಹಾಕುತ್ತಿದ್ದರು.

ಅಯ್ಯು ಕಿರಾತನೇ ಆಗಿದ್ದರೂ ಒಂದೊಂದು ಸಲ ಅವನಿಗೆ ರೈತರನ್ನು ಕಂಡು ಅವರೂ ಮನುಷ್ಯರೇ ಎಂಬ ಯೋಚನೆಯುಂಟಾಗುತ್ತಿದ್ದಿತು. ಆದರೆ ಮರುಕ್ಷಣದಲ್ಲಿಯೇ ಬೂತಯ್ಯನವರು ಹೇಳಿದ್ದ 'ಇವರನ್ನು ನಂಬಿದರೆ ತಲೆಗೆ ಕಲ್ಲು' ಎಂಬ ಮಾತು ಜ್ಞಾಪಕಕ್ಕೆ ಬಂದು ಅವನ ಮನುಷ್ಯ ಸ್ವಭಾವ ಅಲ್ಲೇ ಅದುಮಿಹೋಗಿ ಅವನು ಪಿಶಾಚಿಯಾಗುತ್ತಿದ್ದನು. ಅವನ ಗದ್ದೆಯಲ್ಲಿ ಜೀತಮಾಡುತ್ತಿದ್ದ ಆಳು ಕರಿಯನು ಗದ್ದೆಯಲ್ಲಿ ನಾಗರ ಹಾವಿನ ಕಡಿತದಿಂದ ಸತ್ತಾಗ ಅಯ್ಯುವು ತನಗೆ ಕರಿಯನ ಹೆಂಡತಿಯಿಂದ ಬರಬೇಕಾಗಿದ್ದ ಹಣವನ್ನೆಲ್ಲಾ ಅವಳಿಗೇ ಸೋಡಿ ಮಾಡಿದನು. ಅದಕ್ಕೂ ಜಾಲಹಳ್ಳಿಯ ರೈತರು ಅಯ್ಯುವನ್ನು ಸುಮ್ಮನೆ ಬಿಡಲಿಲ್ಲ. "ಬೂತಯ್ಯನವರು ಇದ್ದ ಕಾಲದಲ್ಲಿ ಗದ್ದೇಲಿ ಬೆಳೆ ಆಗದಿದ್ದರೂ ರೈತರು ಮನೆ ಬಾಗಿಲಿಗೆ ಗುತ್ತಿಗೆ ತಂದು ಅಳೀತಿದ್ರು. ವಸೂಲೀಲಿ ಅವರ ನನ್ಮಂದ ಇವರೇ— ಪಾಪ ಪಾಪ. ಅವರು ಕಾಸಿಗೆ ಕಾಸು ಕೂಡ್ಹಾಕಿದ್ದೆಲ್ಲಾ ಇವರ ಕಾಲದಲ್ಲಿ ದಾರಿ ಹಿಡೀತದೆ'' ಎಂದರು. ಅಯ್ಯುವಿಗೆ ಬಹಳ ಕೋಪ ಬಂತು. "ಎಲಾ ನಾನು ಸ್ವಲ್ಪ ದಯೆ ತೋರಿಸಿದರೆ ನನ್ನನ್ನು ಕೈಲಿ ಹರಿಯದವನು'' ಎನ್ನುತ್ತಾರೆ. ಈ ಮೃಗಗಳಿಗೆ ಚಾವಟಿ ಏಟೆ ಸರಿ. ನಮ್ಮ ತಂದೆ ಹೇಳಿದ್ದಂತೆ 'ಶೂದ್ರಸ್ಯ ಶುಭಂ ನಾಸ್ತಿ' ಎಂದುಕೊಂಡು ಅವನು ರೈತರನ್ನು ಬೂತಯ್ಯನವರಿಗಿಂತಲೂ ಹೆಚ್ಚು ಬಿರುಸಿನಿಂದ ಹುರಿಯಲು ಪ್ರಾರಂಭಿಸಿದನು.

ಜಾಲಹಳ್ಳಿಯ ತಿಗಳರ ಪೈಕಿ ಗುಳ್ಳನೆಂಬುವನು ಸ್ವಲ್ಪ ಪುಷ್ಟನಾಗಿದ್ದನು. ಅವನಿಗೂ ಅಯ್ಯುವಿನಷ್ಟೇ ವಯಸ್ಸಾಗಿದ್ದಿತು. ಅವನನ್ನು ಮನಸ್ಸಿನಲ್ಲಿಟ್ಟುಕೊಂಡು ಬೂತಯ್ಯನವರು ತಾವು ಬದುಕಿರುವಾಗ "ಒಕ್ಕಲಿಗನ ಹತ್ತಿರ ಹಣವಿದ್ದರೆ ಅವನಿಗೆ ಸರಿಯಾಗಿ ನಿದ್ರೆ ಬರುವುದಿಲ್ಲ; ಊಟ ಸೇರುವುದಿಲ್ಲ. ಆ ಹಣವನ್ನು ಯಾರಿಗಾದರೂ ದಂಡ ತೆತ್ತ ಹೊರತು ಅವನಿಗೆ ಮನಸ್ಸಿಗೆ ನಿರಾಳವಿಲ್ಲ. ಕೈಲಿ ದುಡ್ಡಿದ್ದರೆ ಅವನು ಇಲ್ಲದ ವ್ಯಾಜ್ಯವನ್ನು ಗಂಟುಹಾಕಿಕೊಂಡು ಹಣವನ್ನು ಲಾಯರಿಗೆ ತೆತ್ತುಬಿಡುತ್ತಾನೆ.

ಅನಂತರ ಅವನ ಮನಸ್ಸು ಶಾಂತವಾಗುತ್ತೆ. ಜೋರಾದವರಿಗೆ ಒಕ್ಕಲಿಗನು ದಂಡ ತೆತ್ತುಬಿಡುತ್ತಾನೆ; ಮೆತ್ತಗಿರುವವರನ್ನು ತುಳಿದುಬಿಡುತ್ತಾನೆ” ಎಂಬುದಾಗಿ ಹೇಳಿದ್ದರು. ಗುಳ್ಳನು ಒಂದಿಲ್ಲೊಂದು ಕಾರಣದಿಂದ ಯಾವಾಗಲೂ ಇತರರೊಂದಿಗೆ ಜಗಳವನ್ನು ತೆಗೆಯುತ್ತಿದ್ದರೂ ಬೂತಯ್ಯನವರ ತಂಟೆಗೆ ಮಾತ್ರ ಬಂದಿರಲಿಲ್ಲ. ಆದರೆ ಅಯ್ಯುವಿನ ಮನಸ್ಸು ಒಂದೊಂದು ಸಲ ಸ್ವಲ್ಪ ಮೃದುವಾಗುವುದೆಂದು ಅವನಿಗೆ ಗೊತ್ತಾದ ಕೂಡಲೇ ಅವನು “ನಾನು ಅಯ್ಯನನ್ನು ನುಂಗಿ ನೀರು ಕುಡಿದೇ ಬಿಡುತ್ತೇನೆ” ಎಂದುಕೊಂಡನು.

ಬೂತಯ್ಯನವರ ಒಂದು ಜಮೀನನ್ನು ಗುಳ್ಳನು ಹುಲ್ಲುಗಾವಲಿಗೆ ವರುಷಕ್ಕೆ ಒಂದು ರೂಪಾಯಿ ಗುತ್ತಿಗೆಗೆ ಮಾಡಿಕೊಂಡಿದ್ದನು. ಅದು ಸುಮಾರು ಮೂವತ್ತು ವರುಷಗಳಿಂದ ಅವನ ತಂದೆಯ ಸ್ವಾಧೀನದಲ್ಲೇ ಇದ್ದಿತು. ಬೂತಯ್ಯನವರ ಕಾಲದಲ್ಲಿ ಗುಳ್ಳನ ತಂದೆಯು ಒಂದು ವರುಷವೂ ನಿಲ್ಲಿಸದೆ ಗುತ್ತಿಗೆ ರೂಪಾಯಿಯನ್ನು ಪಾವತಿ ಮಾಡುತ್ತಿದ್ದನು. ಆದರೆ ಹಾವಿನ ಹಲ್ಲಲ್ಲಿ ಸತ್ತ ಕರಿಯನ ಹೆಂಡತಿಗೆ ಅಯ್ಯು ಹಣವನ್ನು ಸೋಡಿಮಾಡಿದನಂತರ ತಾನು ಕೊಡಬೇಕಾದ ಒಂದು ರೂಪಾಯಿಯನ್ನೂ ತಿಂದುಕೊಳ್ಳಬಹುದೆಂದು ಗುಳ್ಳನಿಗೆ ತೋರಿತು. ಅವನು ಒಬ್ಬಿಬ್ಬರೊಂದಿಗೆ “ಅಯ್ಯ ಕೊಟ್ಟದ್ದು ತಕೊತಾನೆ, ಕೊಟ್ಟರೆ ತಕೊತಾನೆ. ನಾನು ಮೂವ್ವತ್ತು ವರುಷದಿಂದ ಹುಲ್ಲು ಬೆಳೀಲಿ ಬಿಡಲಿ, ದಂಡದ ಗುತ್ತಿಗೆ ತೆರತಾ ಬಂದಿದೀನಿ. ಈ ಬಾರಿ ರೂಪಾಯಿ ಅಯ್ಯ ತಕೋಳೋದ ನೋಡ್ತಿನಿ” ಎಂದನು. ಅಯ್ಯುವಿಗೆ ತಾನು ಸ್ವಲ್ಪ ದಯೆ ತೋರಿಸಿದುದಕ್ಕೆ ತನ್ನನ್ನು ಕೈಲಿ ಹರಿಯದವನೆಂದುಕೊಂಡು ತನಗೆ ಬರಬೇಕಾದುದನ್ನೆಲ್ಲಾ ಇವರೇ ನುಂಗುತ್ತಾರಲ್ಲಾ ಎಂಬ ಕೋಪ ಪೂರ್ಣವಾಗಿತ್ತು. ಒಬ್ಬನಿಗೆ ಬಿಸಿಯನ್ನು ತೋರಿಸಿದ ಹೊರತು ತನ್ನ ವಿಷಯದಲ್ಲಿ ರೈತರಿಗೆ ಭಯವುಂಟಾಗುವುದಿಲ್ಲವೆಂಬುದು ಅವನಿಗೆ ಮಂದಟ್ಟಾಯಿತು. ಅಯ್ಯುವು “ಗುತ್ತಿಗೆ ರೂಪಾಯಿಯನ್ನು ಕೊಡು. ಇಲ್ಲದಿದ್ದರೆ ಜಮೀನಿಗೆ ದನಗಳನ್ನು ಬಿಟ್ಟು ಮೇಯಿಸಬೇಡ” ಎಂಬುದಾಗಿ ಗುಳ್ಳನಿಗೆ ಹೇಳಿ ಕಳುಹಿಸಿದನು. ಗುಳ್ಳನು ರೂಪಾಯಿಯನ್ನು ಕೊಡಲಿಲ್ಲ. ದನಗಳನ್ನು ಮೇಯಿಸುವುದನ್ನೂ ಬಿಡಲಿಲ್ಲ. ಅಯ್ಯುವು ಹುಲ್ಲುಗಾವಲಿಗೆ ಹೋಗಿ ದನಗಳನ್ನು ದೊಡ್ಡಿಗೆ ಕೂಡಿಸಿದನು. ಗುಳ್ಳನ ಕೈಲಿ ನಾಲ್ಕು ಕಾಸಿನ ಬಲವಿದ್ದುದರಿಂದ ಅವನು ಕೊಬ್ಬಿ ಅಯ್ಯುವಿಗೆ ನಾಲ್ಕು ಬಾರಿಸಿದನು. ಅಯ್ಯು ಗುಳ್ಳನ ಮೇಲೆ ಒಂದು ಕ್ರಿಮಿನಲ್ ಮೊಖದ್ದಮೆಯನ್ನೂ ಒಂದು ಸಿವಿಲ್ ಮೊಖದ್ದಮೆಯನ್ನೂ ಹೂಡಿದನು. ವೈರವು ಇಬ್ಬರಿಗೂ ಪೂರ್ಣವಾಗಿ ಮಸೆಯಿತು. ಒಬ್ಬರನ್ನೊಬ್ಬರು ನಿರ್ನಾಮ ಮಾಡಬೇಕೆಂದು ದೃಢಸಂಕಲ್ಪರಾದರು.

ಅದೇ ಗುಳ್ಳನ ಮನೆ ಹಾಳಾಗುವುದಕ್ಕೆ ಪ್ರಾರಂಭವಾಯಿತೆನ್ನಬಹುದು. ಬೂತಯ್ಯನವರು ಹೇಳುತ್ತಿದ್ದಂತೆ ಅವನ ಕೈಲಿ ನಾಲ್ಕು ಕಾಸು ಇರುವವರೆಗೆ ಆ ಕಾಸು ಅವನನ್ನು ಆ ರೀತಿಯಾಗಿ ಕುಣಿಸುತ್ತಿದ್ದಿತು. ಕ್ರಿಮಿನಲ್ ಮೊಕದ್ದಮೆಯಲ್ಲಿ ಅವನ ಹಸುರು ನೋಟುಗಳು ಒಂದೊಂದಾಗಿ ಕರಗಲು ಪ್ರಾರಂಭವಾದುವು. ಲಾಯರಿಗೆ ಎಷ್ಟು ಕೊಟ್ಟರೂ ತೃಪ್ತಿಯೇ ಇರಲಿಲ್ಲ. ಮೊದಲೇ ಫೀಜನ್ನು ಗೊತ್ತು ಮಾಡಿಕೊಂಡು ಲಾಯರು ಆ ಮೊಬಲಗನ್ನು ಪೂರ್ಣವಾಗಿ ತೆಗೆದುಕೊಂಡುಬಿಟ್ಟರು. ಆದರೆ ಮೊಕದ್ದಮೆಯ ದಿವಸಗಳಲ್ಲೆಲ್ಲಾ ಅಲ್ಪಸ್ವಲ್ಪ ಹಣವನ್ನು ಕೊಡದೆ ಇದ್ದರೆ ಅವರು ಕೋರ್ಟಿಗೇ ಬರುತ್ತಿರಲಿಲ್ಲ. "ಮೊದಲು ಕೊಟ್ಟಿದ್ದು ಆಯಿತು. ಫೀಜು ಬಿದ್ದ ಹೊರತು ವಾದಿಸುವುದು ನಮ್ಮ ಪದ್ಧತಿಯಲ್ಲ" ಎಂದು ಅವರು ಗದರಿಸುತ್ತಿದ್ದರು. ಒಂದು ದಿವಸ "ನನ್ನ ಹೆಂಡತಿಗೆ ಸೀರೆ ಇಲ್ಲ. ಅದನ್ನು ತಂದುಕೊಟ್ಟ ಹೊರತು ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ" ಎಂದರು. ಗುಳ್ಳನು ಗುಮಾಸ್ತನನ್ನು ಕರೆದುಕೊಂಡು ಹೋಗಿ ಸೀರೆಯನ್ನು ತಂದನು. ಮತ್ತೊಂದು ದಿನ ಲಾಯರು "ನನ್ನ ಮಗ ಮೂರು ತಿಂಗಳಿನಿಂದ ಸ್ಕೂಲು ಫೀಜು ಕೊಟ್ಟಿಲ್ಲ. ಅವನನ್ನು ಸ್ಕೂಲಿನಿಂದ ವಜಾ ಮಾಡಿದ್ದಾರೆ. ಅವನು ಸ್ಕೂಲಿಗೆ ಹಿಂದಿರುಗಿ ಹೋಗುವವರೆಗೆ ನಾನು ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ" ಎಂದರು. ಎಲ್ಲದಕ್ಕೂ ತಲೆ ಬೋಳಿಸಿಕೊಂಡು ನಿಂತಿದ್ದ ದುರದೃಷ್ಟದ ಗುಳ್ಳನು ಮೂರು ತಿಂಗಳ ಸ್ಕೂಲು ಫೀಜನ್ನೂ ಲಾಯರಿಗೆ ಸಮರ್ಪಿಸಿದನು. ಲಾಯರ ಹೆಂಡತಿ ಅವನಿಗೆ ಸೌದೆ, ಬೆಣ್ಣೆ, ಬಾಳೆಎಲೆ ಮುಂತಾದುವುಗಳಿಗೆ ಹೇಳುತ್ತಿದ್ದರು. ಮೊಕದ್ದಮೆಯ ದಿವಸ ಹೋದಾಗಲೆಲ್ಲಾ ಲಾಯರು ಗುಳ್ಳನನ್ನು ಹೊಸಬನನ್ನು ಮಾತನಾಡಿಸುವಂತೆ "ಯಾವದು ನಿನ್ನೂರು, ನಿನ್ನ ಹೆಸರೇನು, ಯಾಕೆ ಬಂದೆ" ಮುಂತಾಗಿ ಕೇಳುತ್ತಿದ್ದರು. ಗುಳ್ಳನಿಗೆ ಅವರನ್ನು ನುಂಗುವಷ್ಟು ಸಿಟ್ಟು ಬರುತ್ತಿದ್ದಿತು. ಲಾಯರುಗಳು ಇಷ್ಟು ಹೊಟ್ಟೆಹರುಕರಾಗಿ ಜುಟ್ಟು ಜನಿವಾರ ಉಡಿದಾರ ಕಿತ್ತು ನಿಂತಿರುವರೆಂಬುದು ಅವನಿಗೆ ಎಂದೂ ತಿಳಿದಿರಲಿಲ್ಲ. ಅವರ ಆಸೆಗೆ ಪಾರವೇ ಇರಲಿಲ್ಲ. ಊರನ್ನೇ ನುಂಗಿದರೂ ಅವರ ಹಸಿವು ಅಡಗುವಂತಿರಲಿಲ್ಲ. ಕಕ್ಷಿಗಾರನು ಹೀರಿ ಹೀದೆಯಾದರೂ ಅವರ ಫೀಜು ಮಾತ್ರ ಇನ್ನೂ ಪಾವತಿಯಾಗುತ್ತಿರಲಿಲ್ಲ. ಕಕ್ಷಿಗಾರನನ್ನು ಕಂಡಕೂಡಲೇ ಅವರಿಗೆ ಎಲ್ಲೂ ಇಲ್ಲದ ಆಕ್ರೋಶವೂ ಕೋಪವೂ ಉಂಟಾಗುತ್ತಿದ್ದುವು. ಅವರ ಎದುರಿಗೆ ನಿಷ್ಕಾರಣವಾಗಿ ಯಾರ ಮೇಲೋ ರೇಗಿ ಯಾರನ್ನೋ ಬೈದುಬಿಡುತ್ತಿದ್ದರು. "ಲಾಯರಿ ಅವರು. ಹಣ ಸುರಿದರೆ ಯಾವ ವ್ಯಾಜ್ಯಾನೂ ಗೆದ್ದುಕೊಡ್ತಾರೆ" ಎಂದುಕೊಂಡಿದ್ದ ಗುಳ್ಳನಿಗೆ "ಸದ್ಯ ಲಾಯರ ಕೈಯಿಂದ ತಪ್ಪಿಸಿಕೊಂಡರೆ ಸಾಕು. ಅಯ್ಯನಿಗೆ ಈ

ಬಾರಿ ಜೈಲು ಒಂದು ಆಗಿಬಿಡಲಿ. ಮನೆಮಠ ಇತ್ಯಾಪಾರ ಎಲ್ಲಾ ಹೋದರೂ ಸರಿಯೆ. ಆ ಮೇಲೆ ಕೋರ್ಟಿನ ಕಡೆ ತಲೆಮಾಡಿ ಮಲಗೋಕಿಲ್ಲ ” ಎಂದು ದಿನಕ್ಕೆ ಸಾವಿರ ಸಾರಿ ಪ್ರತಿಜ್ಞೆಮಾಡುತ್ತಿದ್ದನು.

ಜಾಲಹಳ್ಳಿಯಲ್ಲಿ ಗುಳ್ಳನು ಕೀಚಕನಾಗಿದ್ದನು. ಬೂತಯ್ಯನು ಮೇದು ಉಳಿದುವೆಲ್ಲಾ ಅವನ ಪಾಲಾಗುತ್ತಿದ್ದುವು. ಅವನು ಹೆದರುತ್ತಿದ್ದುದು ಬೂತಯ್ಯನವರೊಬ್ಬರಿಗೆ ಮಾತ್ರ. ಅವರು ಬಿಟ್ಟ ಕೂಳೆಗಳನ್ನೆಲ್ಲಾ ಇವನು ನೆಲಸಮಮಾಡುತ್ತಿದ್ದನು. ಗುಳ್ಳನಿಗೂ “ ರೈತರು ಕುರಿಗಳು, ನಾವು ಅವರನ್ನು ತಿನ್ನಬೇಕು, ಅವರು ಇರುವುದೇ ನಮಗಾಗಿ ” ಎಂಬ ನಂಬಿಕೆಯಿದ್ದಿತು. ಅವನು ಫೂಟ್ ಲಾಯರಿಯಾಗಿ ರೈತರನ್ನು ಸದೆಬಡಿದು ಊರಿಗೆ ಮುಖಂಡನಾಗಿದ್ದನು. “ ಸದ್ಯ ಈ ಮುಖಂಡರ ಕೈಯಿಂದ ತಪ್ಪಿಸಿಕೊಂಡರೆ ಬದುಕಿಕೊಂಡೇವಲ್ಲಾ ” ಎಂದು ರೈತರು ಗೋಳಿಡುತ್ತಿದ್ದರು. ಜಾಲಹಳ್ಳಿಯ ತಿಗಳರಿಗೂ ಒಕ್ಕಲಿಗರಿಗೂ ಉಪ್ಪಲಿಗರಿಗೂ ಗುಳ್ಳ, ಬೂತಯ್ಯ—ಈ ಇಬ್ಬರನ್ನು ಕಂಡರೂ ಭಯವಿದ್ದಿತು. ಆದರೆ ಬೂತಯ್ಯನವರಲ್ಲಿ ಅವರ ದ್ವೇಷ ಅಧಿಕವಾಗಿತ್ತು. ಬೂತಯ್ಯನವರೂ ಗುಳ್ಳನೂ ಇಬ್ಬರೂ “ ಹುಡಬಡಿದುಹೋದರೆ ಊರಿನ ಪ್ಲೇಗು, ಕಾಲರಾ, ಮಾರಿ, ಮಸಣಿ ತೊಲಗಿದಂತಾಗುತ್ತೆ ” ಎಂದು ರೈತರು ಹೇಳುತ್ತಿದ್ದರು. ಆದರೂ ಸಮಯಬಂದರೆ ಅವರು ಗುಳ್ಳನಿಗೇ ಸಹಾಯಮಾಡುತ್ತಿದ್ದರು. ಗುಳ್ಳನಿಗೂ ಅಯ್ಯುವಿಗೂ ಹೊಡೆದಾಟ ಪ್ರಾರಂಭವಾದುದರಿಂದ ಊರಿನವರಿಗೆ ಸಂತೋಷವೇ ಆಯಿತು. “ ಆ ಹೈರಾವಣ ಮೈರಾವಣರು ಒಬ್ಬರೊಂದಿಗೆ ಒಬ್ಬರು ಹೊಡೆದಾಡಿ ತಾವೇ ಮಟ್ಟವಾಗ್ತಾರೆ ” ಎಂದುಕೊಂಡು ಹಳ್ಳಿಯವರು ತಟಸ್ಥರಾದರು. ಆ ಎರಡು ಧೂಮಕೇತುಗಳು ಒಬ್ಬರ ಮೇಲೊಬ್ಬರು ತೊಡಚಿಕೊಂಡಿರುವುದು ದೇವರ ತಂತ್ರವೇ ಎಂದು ಅವರು ನಂಬಿದರು.

ಗುಳ್ಳನು ಹಳ್ಳಿಯಲ್ಲಿ ಅಷ್ಟು ಪ್ರಬಲನಾಗಿದ್ದರೂ ಕೋರ್ಟಿಗೆ ಹೆಚ್ಚಾಗಿ ಅಲೆದಿರಲಿಲ್ಲ. ತಾನು ಯಾರ ಹತ್ತಿರವಾದರೂ ಸರಿಯೇ ಕೆಲಸವನ್ನು ಸುಲಭವಾಗಿ ಸಾಧಿಸಿಕೊಳ್ಳುತ್ತೇನೆಂಬ ನಂಬಿಕೆ ಅವನಿಗೆ ಚೆನ್ನಾಗಿದ್ದಿತು. ಆದರೆ ತಾನು ಹಳ್ಳಿಯಲ್ಲಿ ಕಾಗೆಯಂತಿದ್ದರೆ ಕೋರ್ಟಿನ ನೌಕರಮಾನೇರೂ ಲಾಯರ ಗುಮಾಸ್ತರೂ ಸಾಕ್ಷಿಗಾರರೂ ತನ್ನನ್ನೂ ಮೀರಿಸಿದ ಹದ್ದುಗಳೆಂಬುದು ಅವನ ಅನುಭವಕ್ಕೆ ಬಂದಿರಲಿಲ್ಲ. ಅವನ ಲಾಯರು ದೊಡ್ಡ ಕುಡುಕರಾಗಿ ಸೀಮೆಯಿಂದ ಬರುತ್ತಿದ್ದ ಸೀಸೆಯ ಹೆಂಡವನ್ನು .ಕುಡಿಯುತ್ತಿದ್ದರು. ಅದರ ಅಮಲು ಏರಿದ್ದಾಗ ಒಂದು ದಿನ ಅವರು ಒಂದು ಗುಂಡುಸೂಜಿಯಿಂದ ಗುಳ್ಳನನ್ನು ಚುಚ್ಚಿ ಹಾ ಹಾ ಎಂದು ನಕ್ಕರು. ಗುಳ್ಳನು ನೋವನ್ನು ತಡೆಯಲಾರದೆ ಹಾ ಹಾ ಎಂದನು. ಅವನು ಹಾ ಹಾ ಎಂದಷ್ಟೂ

ಲಾಯರು ಗುಂಡುಸೂಜಿಯಿಂದ ಚುಚ್ಚುವುದೂ ನಗುವುದೂ ಹೆಚ್ಚಾಯಿತು. ಗುಳ್ಳನು ನೋವನ್ನು ತಡೆಯಲಾರದೆ ಲಾಯರಿಯ ಕೈಯಿನ ಗುಂಡುಸೂಜಿಯನ್ನು ಕಿತ್ತು ಎಸೆದನು. ಲಾಯರು ಕೋಪದಿಂದ ಗುಳ್ಳನ ವ್ಯಾಜ್ಯದ ಕಟ್ಟನ್ನು ಅವನ ಮುಖದ ಮೇಲೆ ಒಗೆದು "ನನ್ನ ಮನೆ ಹತ್ತಿರ ಇನ್ನು ಮುಂದೆ ಕಾಲಿಟ್ಟೀಯೆ, ಬಂದರೆ ನಿನ್ನ ತಲೆ ಒಡೆಯುತ್ತೇನೆ" ಎಂದು ಕಿರಿಚಿದನು. ಎಂಜಲು ಎಲೆಗಳಂತೆ ಗಾಳಿಯಲ್ಲಿ ಹಾರಾಡುತ್ತಿದ್ದ ಕಟ್ಟಿನ ಕಾಗದಗಳನ್ನೆಲ್ಲಾ ಆಯಿದುಕೊಂಡು ಗುಳ್ಳನು ಕೋರ್ಟಿನ ಬಳಿಗೆ ಹೋದನು. ಗುಳ್ಳನ ಸಾಕ್ಷಿಗಳು ಅವನ ಜೀವವನ್ನು ಹೀರ ತೊಡಗಿದರು. "ಈಗ ಬಿಟ್ಟರೆ ಇವನ ತಾವ ಕಾಸಿನ ಕಿಲುಬೂ ಸಿಕ್ಕೋಕಿಲ್ಲ. ಈ ಏಜ್ಯದಲ್ಲಿ ಇವನ ಗತಿ ನೆಟ್ಟಗಾಗೋಕಿಲ್ಲ. ಹಿರಿದದ್ದೇ ನಮಗೆ ಲಾಭ" ಎಂದು ಅವರು ಗುಳ್ಳನಿಂದ ಸಾಧ್ಯವಾದಷ್ಟು ಹಣವನ್ನು ಹಿರಿಯತೊಡಗಿದರು. ಗುಳ್ಳನು ತನ್ನ ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ಗ್ರಾಮದ ಹತ್ತೂ ಜನರ ಒಳ್ಳೆಯದಕ್ಕೆ ಹೊಡೆ ದಾಡುತ್ತೇನೆಂದು ಹೇಳಿ ಸುಳ್ಳು ಸಾಕ್ಷಿಗಳನ್ನು ಒದಗಿಸಿದ್ದನು. ನಾಲ್ಕು ಜನ ಸಾಕ್ಷಿಗಳನ್ನು ಜೋಡಿಸಿಕೊಂಡು ಸರಿಯಾಗಿ ಮೊಖದ್ದಮೆಯನ್ನು ನಡೆಸಿದರೆ ಅಯ್ಯುವಿಗೆ ಜೈಲು ಆಗುವುದರಲ್ಲಿ ಸಂದೇಹವಿಲ್ಲವೆಂದು ಅವನಿಗೆ ಗೊತ್ತಿದ್ದಿತು. ಅಯ್ಯುವಿಗೇ ಏಟು ಬಿದ್ದಿದ್ದರೂ ಅವನಿಗೆ ಸರಿಯಾದ ಸಹಾಯಕರಾದ ಸಾಕ್ಷಿಗಳಾರೂ ಇರಲಿಲ್ಲ. ಗುಳ್ಳನ ಕಡೆಯವರು ಅಯ್ಯುವೇ ಗುಳ್ಳನನ್ನು ಹೊಡೆದನೆಂದು ಹೇಳಲು ಸಿದ್ಧರಾಗಿದ್ದರು. ಇದರಿಂದ ಅಯ್ಯುವಿಗೆ ಕೋರ್ಟಿನಲ್ಲಿ ತನಗೆ ಏನಾಗುವುದೋ ಎಂದು ಭಯವಿದ್ದಿತು. ಆದರೆ ಅವನಿಗೆ ಗುಳ್ಳನ ಭಯವಿರಲಿಲ್ಲ. "ಈ ಕೇಸು ನಡೆಸುವ ಹೊತ್ತಿಗೆ ಇವನ ಹೆಂಡತಿಯ ತಾಲಿ ಮರದ ತಾಲಿಯಾಗುತ್ತೆ. ಕೋರ್ಟಿಗೆ ಅಲೆದು ಇವನು ಹಣ್ಣಾಗಿ ನೀರ್ಗಾಯಿಯಾಗುತ್ತಾನೆ. ಇನ್ನು ಬೇರೆ ಇವನು ತಲೆ ಎತ್ತುವಂತಿಲ್ಲ" ಎಂದುಕೊಂಡು ಅವನು ಸಮಾಧಾನದಿಂದಲೇ ಇದ್ದನು.

ಗುಳ್ಳನು ಯೋಚಿಸುತ್ತಿದ್ದಂತೆ ಅವನ 'ಇತ್ಲಾಪಾರ' ಹೋದರೂ ಮೊಖದ್ದಮೆ ಮುಗಿಯಲಿಲ್ಲ. ಹೆಚ್ಚು ಖರ್ಚು ಇಲ್ಲದೆ ಸುಖವಾಗಿ ಅವನು ಮನೆಯಲ್ಲಿದ್ದಾಗ ಅವನ ಹತ್ತಿರ ಇದ್ದ ಹಣಕ್ಕೆ ದಾರಿಯೇ ತೋರಿರಲಿಲ್ಲ. ಅದು ಮಧ್ಯಾಹ್ನದನಂತರದ ನೆರಳಿನಂತೆ ಗಳಿಗೆಗಳಿಗೆಗೂ ವೃದ್ಧಿಯಾಗುತ್ತಾ ಹೋಗುತ್ತಿದ್ದಿತು. ಕೋರ್ಟಿಗೆ ಅವನು ತಿರುಗಲು ಪ್ರಾರಂಭಿಸಿದ ಮೇಲೆ ಮನೆಯಲ್ಲಿದ್ದ ಹಣವು ಖರ್ಚಾದುದಲ್ಲದೆ ಸಾಲವೂ ಆಯಿತು. ಎಷ್ಟು ದಿನವಾದರೂ ಆ ಮೊಖದ್ದಮೆ ಮುಗಿಯುವಂತೆಯೇ ತೋರಲಿಲ್ಲ. ಅವನ ಆರಂಬ ಕಾಡುಪಾಲಾಯಿತು. ದನಕರುಗಳು ಗೊರಗವಾದವು. ಬರತಕ್ಕ ಹಣಗಳೆಲ್ಲಾ ನಿಂತುಹೋದವು. ಮನೆಯಲ್ಲಿ ಅವನಿಗೂ ಅವನ ಹೆಂಡತಿಗೂ

ನಿತ್ಯ ಅಯ್ಯುವಿನೊಂದಿಗೆ ರಾಜಿಮಾಡಿಕೊಳ್ಳುವ ವಿಷಯದಲ್ಲಿ ವಾಗ್ವಾದ ನಡೆಯುತ್ತಿದ್ದಿತು. ಇದಾವುದರಿಂದಲೂ ಗುಳ್ಳನು ಜಗ್ಗಲಿಲ್ಲ. ಅವನ ಸಾಕ್ಷಿಗಾರರು ಸರಿಯಾದವರಾಗಿದ್ದರು. ಅಯ್ಯುವಿಗೆ ‘ ಹಾತ್‌ಬೇಡಿ ’ ಬೀಳುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ. “ ಆ ಮೇಲೆ ಆದ್ದಂಗೆ ಆಗಲಿ.”

ಅಯ್ಯುವಿನ ಲಾಯರು ಅವನಿಂದ ತೆಗೆಯಬೇಕಾದ ಫೀಜನ್ನೆಲ್ಲಾ ತೆಗೆದುಕೊಂಡ ನಂತರ “ ನಿನಗೆ ಸಾಕ್ಷಿಗಳಿಲ್ಲದಿದ್ದರೆ ಮೊಖದ್ದಮೆಯು ನಿನಗೆ ವಿರೋಧವಾಗುತ್ತೆ, ಇಲ್ಲಿ ಸರಿಯಾದ ಸಾಕ್ಷಿಗಳಿಲ್ಲದಿದ್ದರೆ ಮೇಲಿನ ಕೋರ್ಟಿಗೆ ಹೋಗುವುದು ಕಷ್ಟ” ಎಂದು ಹೇಳಿಬಿಟ್ಟರು. ಅಯ್ಯುವು ಊರಿಗೆ ಬಂದು ರೈತರನ್ನೆಲ್ಲಾ ವಿಚಾರಿಸಿದನು. ತಾನು ಗುತ್ತಿಗೆ ಹಣವನ್ನು ಕೇಳುವುದಕ್ಕೆ ಹೋಗಿದ್ದಾಗ ಗುಳ್ಳನು ತನ್ನನ್ನು ಬಡಿದುದನ್ನು ಕಂಡಿದ್ದ ಅನೇಕ ರೈತರನ್ನು ನಿಜವಾದ ಸ್ಥಿತಿಯನ್ನು ಸಾಕ್ಷಿ ಹೇಳಬೇಕೆಂದು ಕೇಳಿದನು. ಬೂತಯ್ಯನವರ ಕೈಯಲ್ಲಿ ಬರೆಗಳನ್ನು ತಿಂದಿದ್ದ ರೈತರು ಒಬ್ಬರೂ ಅಯ್ಯುವಿನ ಪರವಾಗಿ ಸಾಕ್ಷಿ ಹೇಳಲು ಒಪ್ಪಲಿಲ್ಲ. ಕೋರ್ಟು ಕಛೇರಿಗಳಲ್ಲಿ ಗಂಟು ವ್ಯಾಜ್ಯಗಳಿಗಾಗಿ ಯಾವಾಗಲೂ ಅಲೆಯುತ್ತಿದ್ದ, ತಲೆಗೆ ಅರಿವೆಯಿಲ್ಲದ ಬೂತಯ್ಯನವರ ಮಗನಾಗಿದ್ದುದೇ ಅಯ್ಯುವಿಗೆ ವಿರೋಧವಾದ ಒಂದು ಬಲವಾದ ಸಾಕ್ಷಿಯಾಗಿದ್ದಿತು. “ ಸಾರಿಗೆ ಹಾಕುವ ಬೇಳೆ ಕೊದಿಯಬಾರದು. ಅದು ಕೊದ್ದರೆ ಸಾರು ಮಾರನೆ ದಿವಸಕ್ಕೆ ಹಳಸಿಹೋಗುತ್ತದೆ. ಬೇಳೆ ಕೊದಿಯದೆ ಇದ್ದರೆ ಸಾರು ಎರಡು ದಿವಸವಾದರೂ ಕಬ್ಬಿನ ಹಾಲಿನಂತೆ ಇರುತ್ತದೆ” ಎಂದು ಹೇಳುತ್ತಾ ಲಕ್ಷಾಂತರವನ್ನು ಸಂಪಾದಿಸಿದ ಬೂತಯ್ಯನವರು ಅಯ್ಯುವಿಗೆ ತಾವು ಬಿಟ್ಟ ಆಸ್ತಿ ಆ ರೀತಿ ಪರಿಣಮಿಸುವುದೆಂದು ಎಂದೂ ತಿಳಿದಿರಲಿಲ್ಲ. ಊರಿನವರಲ್ಲಿ ಒಬ್ಬನಾದರೂ ಸತ್ಯವಂತನು ಇಲ್ಲದುದನ್ನು ಕಂಡು ಅಯ್ಯುವಿಗೆ ಆಶ್ಚರ್ಯವಾಯಿತು. ಅಷ್ಟು ಜನರೂ ಒಟ್ಟಾಗಿ ತನ್ನನ್ನು ದ್ವೇಷಿರುವುದರ ಕಾರಣವೂ ಅವನಿಗೆ ತಿಳಿಯಲಿಲ್ಲ. “ ಈ ಜನರು ಸ್ವಭಾವತಃ ಪಶುಗಳು, ಕಾಡುಮನುಷ್ಯರು; ಆದರೆ ದುಷ್ಟರು. ಇವರನ್ನು ಹಾವನ್ನು ಕಂಡಕಡೆ ಹೊಡೆಯುವಂತೆ ಹೊಡೆದುಹಾಕಬೇಕು. ಇಂತಹ ರೈತರು ಇದ್ದರೂ ಒಂದೇ ಸತ್ತರೂ ಒಂದೇ. ‘ ತನ್ನ ತಿನ್ನುವ ಹಡಗು ಸುಡು ’ ಎಂದು ಹೇಳಿದೆ. ಇದನ್ನು ತಿಳಿದೇ ನಮ್ಮ ತಂದೆ ಇವರನ್ನು ಅರೆಯುತ್ತಿದ್ದರು. ನನಗೂ ಇವತ್ತಿನ ವರೆಗೆ ಇವರಲ್ಲಿ ಅಲ್ಪಸ್ವಲ್ಪ ನಂಬಿಕೆಯಿದ್ದಿತು. ಇನ್ನು ಮೇಲೆ ಎಲ್ಲಾ ಹೋಯಿತು. ಇವರಲ್ಲಿ ಒಬ್ಬನಿಗೂ ಅಯ್ಯೋ ಎನ್ನಬಾರದು. ಅಬ್ಬ! ನನಗೆ ಅವಮಾನಪಡಿಸಲು ಇವರು ಎಷ್ಟು ಒಟ್ಟಾಗಿದ್ದಾರೆ. ಆಗಲಿ, ಇವರ ಬೇರನ್ನು ಬೊಡ್ಡೆಗೆ ಕುಯ್ಯದೆ ಇದ್ದರೆ ನಾನು ಬೂತಯ್ಯನವರ ಮಗನೇ ಅಲ್ಲ” ಎಂದುಕೊಂಡು ಅವನು ರೈತರನ್ನೂ ಗುಳ್ಳನನ್ನೂ ಹಣ್ಣುಮಾಡುವ ಉಪಾಯಗಳನ್ನು ಚಿಂತಿಸತೊಡಗಿದನು.

ಗುಳ್ಳನು ದಾರಿದ್ರ್ಯದಿಂದ ಕಂಗಾಲಾದನು. ಆದರೂ ಅಯ್ಯುವಿನ ಮೊಖದ್ದಮೆ ತೀರ್ಮಾನವಾಗಿರಲಿಲ್ಲ. ಅವರಿಬ್ಬರ ನಡುವೆ ಹಸಿ ಹುಲ್ಲನ್ನು ಹಾಕಿದರೂ ಉರಿದು ಹೋಗುತ್ತಿದ್ದಿತು. ಒಬ್ಬರನ್ನೊಬ್ಬರು ಎದುರಿಗೆ ಕಂಡಾಗ ಎಲ್ಲಿ ಕೈ ಕೈ ಮಿಲಾಯಿಸು ತ್ತದೋ ಎಂದು ಜನರು ಹೆದರುತ್ತಿದ್ದರು. ಅಯ್ಯುವನ್ನು ಜೈಲಿನಲ್ಲಿರಿಸಲು ಗುಳ್ಳನು ತನ್ನ ಸರ್ವಸ್ವವನ್ನೂ ಆಗಲೇ ಕಳೆದಿದ್ದನು. ಗುಳ್ಳನನ್ನು ನುಂಗಿ ನೀರು ಕುಡಿಯಲು ಅಯ್ಯುವು ತನ್ನ ಸರ್ವಸ್ವವನ್ನೂ ವೆಚ್ಚಮಾಡಲು ಸಿದ್ಧನಾಗಿದ್ದನು. ಇಬ್ಬರು ಅಥವಾ ಇಬ್ಬರ ಪೈಕಿ ಒಬ್ಬರು ಇಲ್ಲವಾದ ಹೊರತು ಜಾಲಹಳ್ಳಿಗೆ ಶಾಂತಿಯೂ ಪ್ರಜೆಗಳಿಗೆ ನೆಮ್ಮದಿಯೂ ಉಂಟಾಗುವಂತೆ ತೋರುತ್ತಿರಲಿಲ್ಲ.

ಕ್ರಿಮಿನಲ್ ಮೊಕದ್ದಮೆಯಲ್ಲಿ ತೀರ್ಮಾನವಾಗುವುದಕ್ಕೆ ಸುಮಾರು ಒಂದು ತಿಂಗಳ ಮುಂಚೆ ಸಿವಿಲಿನಲ್ಲಿ ಅಯ್ಯು ಗುಳ್ಳನ ಮೇಲೆ ಒಂದು ಡಿಕ್ರಿಯನ್ನು ತೆಗೆದು ಕೊಂಡು ಅವನ ಮನೆಯನ್ನು ಹರಾಜಿಗೆ ಕೋರ್ಟಿನಲ್ಲಿ ಕೇಳಿದನು. ಆ ಮನೆಯನ್ನು ತನಗೆ ಬರಬೇಕಾದ ಹಣಕ್ಕೆ ಕೋರ್ಟಿನ ಮೂಲಕ ಸ್ವಾಧೀನಪಡಿಸಿಕೊಂಡು, ಗುಳ್ಳನನ್ನೂ ಅವನ ಹೆಂಡತಿಯನ್ನೂ ಜಾಲಹಳ್ಳಿ ಬಿಟ್ಟು ಓಡಿಸಬೇಕೆಂಬುದೇ ಅವನ ಉದ್ದೇಶವಾಗಿತ್ತು. ಸಾಧ್ಯವಾದರೆ ಗುಳ್ಳನನ್ನು ಸಿವಿಲ್ ಜೈಲಿನಲ್ಲಿ ಸಹ ಇಡಿಸ ಬೇಕೆಂದು ಅವನು ಹವಣಿಸುತ್ತಿದ್ದನು. ಕೆಣಕಿದವರ ಹಣೇಬರಹವನ್ನು ತೊಡೆದು ಹಾಕಿದ ಹೊರತು ಅಯ್ಯನು ಬಿಡುವುದಿಲ್ಲ ಎಂಬ ಭಯವನ್ನು ಜನರಲ್ಲಿ ಹುಟ್ಟಿಸ ಬೇಕೆಂಬುದೇ ಅಯ್ಯುವಿನ ಸಂಕಲ್ಪವಾಗಿದ್ದಿತು.

ಗುಳ್ಳನ ಹೆಂಡತಿ ಗುಳ್ಳನಂತೆ ತಾಟಕಿಯಾಗಿರಲಿಲ್ಲ. ಅವಳು ಏನೂ ಅರಿಯದವಳೂ ಭಯಸ್ತಳೂ ಆಗಿದ್ದಳು. ಗುಳ್ಳನ ದಾಂಧಲೆಗಳೊಂದೂ ಅವಳಿಗೆ ಸೇರುತ್ತಿರಲಿಲ್ಲ. ಎಲೆಯು ಮರೆಯ ಕಾಯಂತೆ ಉಪಾಯವಾಗಿ ಕಾಲಹಾಕಬೇಕೆಂದು ಅವಳು ಹೇಳು ತ್ತಿದ್ದಳು. ಜಾಲಹಳ್ಳಿಯಲ್ಲಿ ಅವಳಷ್ಟು ಒಳ್ಳೆಯ ಹೆಂಗಸು ಯಾರೂ ಇರಲಿಲ್ಲ. ಅವಳು ಲಕ್ಷಣವಾಗಿ ಮೈ ಕೈಕಾಲು ತುಂಬಿಕೊಂಡು ದುಂಡುದುಂಡಾಗಿ ನೋಡುವುದಕ್ಕೆ ಗಜಗೌರಿಯಂತಿದ್ದಳು. ಅಯ್ಯುವಿನೊಂದಿಗೆ ತನಗೆ ಒದಗಿದ ಈ ವ್ಯಾಜ್ಯದಲ್ಲಿ ಹೊರತು ಉಳಿದ ಎಲ್ಲಾ ವಿಷಯಗಳಲ್ಲೂ ಗುಳ್ಳನು ಹೆಂಡತಿಯ ಮಾತಿನಂತೆ ನಡೆಯುತ್ತಿದ್ದನು. ಈ ಒಂದು ವ್ಯಾಜ್ಯದಲ್ಲಿ ಮಾತ್ರ ಅತಿದ್ವೇಷವು ಅವನನ್ನು ಕುರುಡಾಗಿಯೂ ಹುಚ್ಚಾಗಿಯೂ ಮಾಡಿದ್ದಿತು. ಅಯ್ಯುವಿನೊಂದಿಗೆ ಹೊಡೆದಾಟವು ಪ್ರಾರಂಭವಾದ ಮೇಲೆ ಗುಳ್ಳನ ಮನಃಶಾಂತಿಯೂ ಆರೋಗ್ಯವೂ ಕೆಟ್ಟವು. ಅದರ ಹೊರತು ಅವನಿಗೆ ಮತ್ತಾವ ಯೋಚನೆಯೂ ಇರಲಿಲ್ಲ. ಇನ್ನು ಮೂರು ತಿಂಗಳು ಆ ವ್ಯಾಜ್ಯ ನಡೆದಿದ್ದರೆ ಗುಳ್ಳನಿಗೆ ಹುಚ್ಚು ಹತ್ತುವುದರಲ್ಲಿ ಸಂದೇಹವಿರಲಿಲ್ಲ. ಅಯ್ಯುವು ಇದ್ದುದು

ಇಲ್ಲದ್ದು ಎಲ್ಲಾ ಸೇರಿಸಿ, ಗಂಟನ್ನು ದಪ್ಪಮಾಡಿ ಗುಳ್ಳನ ಮನೆಯನ್ನು ಹರಾಜಿಗೆ ಕೇಳಿದುದು ಗುಳ್ಳನಿಗೆ ಗೊತ್ತಾದಾಗ ಅವನಿಗೆ ಬಹಳ ಕೋಪಬಂದಿತು. ಹಣವನ್ನು ಕೊಡಲು ಅವನ ಕೈಯಲ್ಲಿ ಒಂದು ಕಾಸೂ ಇರಲಿಲ್ಲ. ಎದುರು ಅರ್ಜಿಗಳನ್ನು ಹಾಕಿ ಪಾಟಿ ಸವಾಲುಗಳನ್ನು ಜೋಡಿಸಿ, ಲಾಯರುಗಳನ್ನೂ ನ್ಯಾಯಾಧಿಪತಿಯನ್ನೂ ಗೊಂದಲದಲ್ಲೂ ಗಾಬರಿಯಲ್ಲೂ ಕೆಡವಲು ದೇಹದಲ್ಲಿ ತ್ರಾಣವೂ ಉತ್ಸಾಹವೂ ಇರಲಿಲ್ಲ. ಊರಿಗೆ ಕಣ್ಣಾಗಿ ಹುಲಿಯಂತೆ ಬಾಳಿ ಅಯ್ಯುವೇ ಬಾಯಲ್ಲಿ ಅಕ್ಕಿಕಾಳು ಹಾಕಿಕೊಳ್ಳುವಂತೆ ಮಾಡಿದ್ದ ತನ್ನನ್ನು ಅಯ್ಯುವು ಹುಚ್ಚುನಾಯನ್ನು ಓಡಿಸುವಂತೆ ತನ್ನ ಮನೆಯಿಂದ ಓಡಿಸುವುದು ಅವನಿಗೆ ಸಹಿಸದಾಯಿತು. ಅವನು ಆ ದಿನವೆಲ್ಲಾ ಗಾಯಗೊಂಡ ಹಾವಿನಂತೆ ಬುಸುಗುಟ್ಟುತ್ತ ನಿಟ್ಟುಸಿರು ಬಿಡುತ್ತಿದ್ದನು. "ಇನ್ನು ಈ ಅವಮಾನವನ್ನು ಸಹಿಸುವುದು ಸಾಧ್ಯವಿಲ್ಲ. ಈ ಊರಲ್ಲಿ ಇನ್ನು ಬದುಕಿದ್ದರೂ ಒಂದೇ ಸತ್ತರೂ ಒಂದೇ. ಆದರೆ ಸಾಯುವುದಕ್ಕೆ ಮುಂಚೆ ಊರಿಗೆ ಒಂದು ಉಪಕಾರ ಮಾಡುತ್ತೇನೆ. ಅಯ್ಯುನ್ನ ತಕೋತೇನೆ. ಅಯ್ಯುನ ಬುರುಡೆ ಹಾರಿದ ಮೇಲೆ ನನ್ನ ಬುರುಡೆ ನೂರು ಸಲ ಹಾರಲಿ. ಅವನ ಕತ್ತು ಕುಯಿದು ನನ್ನ ಕತ್ತು ಕುಯಿಕೋತೇನೆ" ಎಂದು ನಿಶ್ಚಯಿಸಿಕೊಂಡನು. ಗುಳ್ಳನು ಆ ತೀರ್ಮಾನಕ್ಕೆ ಬಂದೊಡನೆಯೇ ಅವನಿಗೆ ಭಯಂಕರವಾದ ಸಂತೋಷವುಂಟಾಯಿತು. ಅವನ ಮುಖದಲ್ಲಿ ಪೈಶಾಚಿಕ ನಗೆಯು ಮೂಡಿತು. ಅಯ್ಯುವು ಆಗಲೇ ಸತ್ತು ಎಷ್ಟೋ ವರುಷಗಳಾದಂತೆ ಅವನಿಗೆ ತೋರಿತು. ಅಯ್ಯುವಿನ ಕಡಿದ ಕತ್ತು, ಬಾತ ಶಿರ, ಹೊರಕ್ಕೆ ಹೊರಟ ಕಣ್ಣುಗುಡ್ಡೆಗಳು, ರಕ್ತದಿಂದ ತೊಯಿದ ದೇಹ ಇವು ಬಹು ದಿನಗಳಿಂದ ತನ್ನ ಜತೆಯಲ್ಲೇ ಸುಳಿದಾಡುತ್ತಿದ್ದಂತೆ ಅವನಿಗೆ ತೋರಿತು. ತನ್ನ ಎಲ್ಲಾ ಕಷ್ಟಗಳೂ ಪರಿಹಾರವಾಗಿ ಮನಸ್ಸಿನ ಗೊಂದಲವೆಲ್ಲಾ ಒಂದೇ ಸಲಕ್ಕೆ ಬಿಡುಗಡೆಯಾದಂತೆ ಅವನಿಗೆ ಭಾಸವಾಯಿತು. ಅವನ ಮನಸ್ಸಿನ ಎಲ್ಲಾ ಪ್ರವೃತ್ತಿಗಳೂ ದ್ವೇಷವೊಂದರಲ್ಲೇ ಅಡಕವಾದುವು. ದೇಹದ ಚಲನವಲನಗಳೆಲ್ಲಾ ಅಯ್ಯುವನ್ನು ಕೊಲೆಮಾಡುವುದೊಂದರಲ್ಲೇ ಕೇಂದ್ರೀಕೃತವಾದುವು. ಆಗ ಯಾರಾದರೂ ಗುಳ್ಳನಿಗೆ "ಅಯ್ಯುವನ್ನು ಕೊಲ್ಲುವ ಪ್ರಯತ್ನವನ್ನು ಬಿಡು" ಎಂಬುದಾಗಿ ಹೇಳಿದ್ದರೆ ಆಗ ಖಂಡಿತವಾಗಿಯೂ ಎರಡು ಕೊಲೆಗಳಾಗುತ್ತಿದ್ದುವೆಂಬುದರಲ್ಲಿ ಸಂದೇಹವಿಲ್ಲ.

ಆ ರಾತ್ರಿ ಗುಳ್ಳನು ಮಚ್ಚನ್ನು ಒಂದೇ ಸಮನಾಗಿ ಹರಿತಮಾಡುತ್ತಿದ್ದನು. ತುಕ್ಕು ಹಿಡಿದು ಕಪ್ಪಾಗಿದ್ದ ಅದರ ಅಲುಗು ಮಿಂಚಿನಂತೆ ಹೊಳೆಯಲು ಪ್ರಾರಂಭವಾಯಿತು. ಅದರ ಹರಿತವನ್ನು ನೋಡಿ ಗುಳ್ಳನಿಗೆ ಬಹಳ ಸಮಾಧಾನವಾಯಿತು. ಗುಳ್ಳನ ಸ್ವಭಾವವನ್ನು ಅರಿತಿದ್ದ ಅವನ ಹೆಂಡತಿಗೆ ಅವನ ಮುಖಭಾವವನ್ನೂ ಅವನು

ಮಸೆಯುತ್ತಿದ್ದ ಮಚ್ಚನ್ನು ನೋಡಿ ಭಯವಾಯಿತು. ಗುಳ್ಳನು ಪದೇ ಪದೇ ತನ್ನ ಎದುರಿಗೆ 'ಅಯ್ಯನ್ನ ತಕೋತೀನಿ' ಎಂಬುದಾಗಿ ಹೇಳುತ್ತಿದ್ದುದೂ ಅಯ್ಯುವು ತನ್ನ ಗಂಡನ ಮನೆಯನ್ನು ಹರಾಜು ಮಾಡಿಸಲು ಏರ್ಪಾಡು ಮಾಡಿರುವುದೂ ಅವಳಿಗೆ ಗೊತ್ತಾಗಿದ್ದಿತು. ಕೋಪಿಷ್ಠನಾದ ಗುಳ್ಳನು ಯಾವುದೋ ಅವಿವೇಕಕ್ಕಾಗಿಯೇ ಹೀಗೆ ಮಚ್ಚನ್ನು ಮಸೆಯುತ್ತಿರುವನೆಂಬುದು ಅವಳಿಗೆ ಸರಾಗವಾಗಿ ಹೊಳೆಯಿತು. ಗುಳ್ಳನು ಆಗತಾನೇ ಪಡಖಾನೆಯಿಂದ ಹೆಂಡವನ್ನು ಭರ್ತಿಯಾಗಿ ಹೊಡೆದು ಕಣ್ಣು ಗುಡ್ಡೆಗಳನ್ನು ಬುಗರಿಯಾಡಿಸುತ್ತಾ ಮನೆಗೆ ಬಂದನು. ಬಂದವನೇ ಮಚ್ಚನ್ನು ಕೈಲಿ ಹಿಡಿದುಕೊಂಡು ಅದರ ಅಲಗಿನ ಮೇಲೆ ಬೆರಳನ್ನಲ್ಲಾಡಿಸಿ ಅದರ ಹರಿತವನ್ನು ನೋಡಿದನು. ಇನ್ನು ಅವನ ಹೆಂಡತಿಗೆ ತಡೆಯುವುದಾಗಲಿಲ್ಲ. ಅವಳು "ಏನು ಮಾಡೋಕೆ ಹಿಂಗೆ ಮಚ್ಚನ್ನ ಮಸೀತೀರಿ" ಎಂಬುದಾಗಿ ಕೇಳಿದಳು. ಗುಳ್ಳನಿಗೆ ಬುಂಡೆಯ ಅಮಲು ಏರಿತ್ತು. ಕೆಲಸ ನಡೆಯುವವರೆಗೆ ಯಾರಿಗೂ ಹೇಳಕೂಡದೆಂದು ಕೊಂಡಿದ್ದ ಗುಳ್ಳನು "ಅಯ್ಯನ ಬುಂಡೆ ಹಾರಿಸತೀನಿ" ಎಂದು ಬಗುಳಿದನು. ಅವನ ಹೆಂಡತಿಯು "ವೈನಾಯ್ತು. ಹೇಳಿದೋರ ಮಾತ ಕೇಳಿಕೊಂಡು ಹುಚ್ಚರಂಗೆ ಆಡಬೇಡಿ. ಕೇಳಿದೋರು ಅದು ನಿಜಾ ಅಂದ್ಕೊಂಡಾರು" ಎಂದಳು. ಗುಳ್ಳನು "ನಿಜವಾಗೂ ಅಯ್ಯನ್ನ ತಕೋತೀನಿ. ನಾಳೆ ಊಟುಹೊತ್ತಿಗೆ ಅಯ್ಯ ಮಸಾಣದ ಹೆಣ. ಮಣ್ಣಾಯ್ತಾನೆ. ಇನ್ನು ಅವನ್ನ ಉಳಿಸೊ ಶಿಖಾಮಣಿ ಯಾರು ಬರ್ತಾರೋ ಬರ್ಲಿ ನೋಡ್ತೀನಿ" ಎಂದನು. ಹೆಂಡತಿಯು "ಅಯ್ಯನ್ನ ಬಡದ್ರೆ ನಿಮ್ನ ಸುಮ್ಮನೆ ಬಿಡ್ತಾರಾ. ಫಾಸಿ ಹಾಕ್ತಾರೆ. ಹೆಂಡದ ಅಮಲು ಏರಿ...." ಗುಳ್ಳನು ಅವಳನ್ನು ಮುಂದೆ ಮಾತನಾಡಗೊಡದೆ "ಏ ಸುಮ್ನೆ ಕೂತಿರು. ನಿನಗೇನು ತಿಳೀತದೆ. ಫಾಸಿಯಂತೆ ಫಾಸಿ. ನಾನು ಅಯ್ಯನ್ಗೆ ಫಾಸಿ ಹಾಕೊಕಿಲ್ಲ. ಕತ್ತು ಕುಯ್ತೀನಿ" ಎಂದನು. ಕೊನೆಯದಾಗಿ ನೋಡೋಣವೆಂದು ಗುಳ್ಳನ ಹೆಂಡತಿಯು "ಅಯ್ಯನ ತಾವ ಬಂದೂಕ ಅಯ್ತೆ" ಎಂದಳು. ಗುಳ್ಳನು "ಅಯ್ತೆ ಅಯ್ತೆ, ಆ ಬಂದೂಕ ಮುಟ್ಟೋಹೊತ್ಗೆ ಅಯ್ಯ ಕಾಪಿ ತಕೋತಾನೆ[1]" ಎಂದು ಹೇಳಿ, ಮಚ್ಚನ್ನು ಜೋಪಾನವಾಗಿ ಹೆಂಡತಿಗೆ ಸಿಕ್ಕದಂತೆ ಸೂರಿಗೆ ಎತ್ತರವಾಗಿ ಸಿಕ್ಕಿಸಿ ಮನೆಬಿಟ್ಟು ಹೊರಕ್ಕೆ ಹೋದನು.

ಗುಳ್ಳನ ಹೆಂಡತಿಗೆ ಮೈಯ್ಯಲ್ಲಿ ನಡುಕವುಂಟಾಯಿತು. ಕೈಕಾಲು ಬೆವರಿದುವು. ಆ ರಾತ್ರಿಯೆಲ್ಲಾ ಅವಳಿಗೆ ಭಯದ ಹೊರತು ಮತ್ತೇನೂ ತೋರಲಿಲ್ಲ. ಅವಳು ಊಟಮಾಡದೆ ಯೋಚಿಸುತ್ತಾ ಮಲಗಿಕೊಂಡಳು. ಬಹಳ ಹೊತ್ತು ಕೆಟ್ಟ ಕನಸುಗಳನ್ನು ಕಂಡನಂತರ ಅವಳಿಗೆ ನಿದ್ರೆ ಹತ್ತಿತು. ಅರ್ಧರಾತ್ರಿ ಕಳೆದ ಮೇಲೆ ಗುಳ್ಳನೂ

[1] ಸಾಯುತ್ತಾನೆ ಎನ್ನುವುದಕ್ಕೆ ಹೀಗೆ ಹೇಳುವುದು ನಮ್ಮ ಕಡೆ ಪದ್ಧತಿ.

ಮನೆಗೆ ಬಂದು ಊಟಮಾಡದೆ ಮಲಗಿಕೊಂಡನು. ಮರುದಿನ ಬೆಳಿಗ್ಗೆ ಗುಳ್ಳನ ಹೆಂಡತಿಯು ನೆಟ್ಟಗೆ ಅಯ್ಯುವಿನ ಮನೆಗೆ ಹೋದಳು. ಅಯ್ಯುವು ಬಾಗಿಲು ಜಗಲಿಯ ಮೇಲೆ ಕುಳಿತುಕೊಂಡು ಯಾವುದೋ ಕಾಗದವನ್ನು ನೋಡುತ್ತಿದ್ದನು. ಗುಳ್ಳನ ಹೆಂಡತಿಯು ತನ್ನ ಮನೆಗೆ ಬರುತ್ತಿರುವಳೆಂಬುದು ಅವಳು ದೂರದಲ್ಲಿರುವಾಗಲೇ ಅಯ್ಯುವಿಗೆ ತಿಳಿಯಿತು. “ಇವಳು ಇಲ್ಲಿ ಯಾಕೆ ಬರುತ್ತಿರಬಹುದು? ಗುಳ್ಳನೇನಾದರೂ ಇವಳ ಕೈಲಿ ಹೇಳಿ ಕಳುಹಿಸಿದ್ದಾನೆಯೇ; ಅಥವಾ ಮನೆಯ ವಿಚಾರ, ಸಿವಿಲ್ ಹರಾಜು ಸಮಾಚಾರ ಕೇಳಿ ಬಂದಿರಬಹುದೇ? ಮನೆ ಹರಾಜುಮಾಡಿಸಬೇಡಿ ಅಂದರೆ ನಾನು ಏನು ಮಾಡಬೇಕು?” ಎಂದು ಅವನು ಯೋಚಿಸ ತೊಡಗಿದನು. ಗುಳ್ಳನ ಹೆಂಡತಿಯು ಜಗಲಿಯ ಸಮೀಪಕ್ಕೆ ಬಂದು “ಸಾಮಿ, ಇವತ್ತು ನೀವು ಈ ಊರುಬಿಟ್ಟು ಹೊರಡಿ. ನಿಮ್ಮ ದಮ್ಮಯ್ಯ. ಕಾಲಿಗೆ ಬಿದ್ದೇನು. ಎಲ್ಲಾರು ಹೊಂಟು ಹೋಗಿ” ಎಂದು ಒಂದೇ ಉಸಿರಿನಲ್ಲಿ ಹೇಳಿದಳು. ಗುಳ್ಳನನ್ನು ಕಾಲಕಡೆಯಿಂದ ಕಡಿದುಹಾಕಿದರೂ ತಪ್ಪಿಲ್ಲವೆಂದು ನಂಬಿದ್ದ ಅಯ್ಯುವು ತನಗೇ ತಿಳಿಯದಂತೆ ಗುಳ್ಳನ ಹೆಂಡತಿ, ದನಕರು ಮುಂತಾದ ಗುಳ್ಳನಿಗೆ ಸಂಬಂಧಪಟ್ಟ ಎಲ್ಲಾ ವಸ್ತುಗಳನ್ನೂ ದ್ವೇಷಿಸುತ್ತಿದ್ದನು. ಗುಳ್ಳನು ತನ್ನ ಶತ್ರುವಾಗಿರುವಾಗ ಗುಳ್ಳನ ಹೆಂಡತಿಯೂ ತನ್ನ ಶತ್ರುವೇ ಎಂಬುದು ಅಯ್ಯುವಿನ ದೃಢವಾದ ನಂಬಿಕೆಯಾಗಿತ್ತು. ಅವನು ಅವಳಿಗೆ “ಯಾಕೆ, ನನ್ನನ್ನು ಊರಬಿಟ್ಟು ದೂಡೋದಕ್ಕೆ ಗುಳ್ಳ ನಿನ್ನನ್ನ ಕಳಿಸಿದನೋ? ನನ್ನ ಊರು ಬಿಟ್ಟುಹೋಗು ಅನ್ನೋಕೆ ಗುಳ್ಳನೇನು ಇಲ್ಲಿಗೆ ಪಾಳೆಯಗಾರನೋ?” ಎಂದು ಗರ್ಜಿಸಿದನು. ಗುಳ್ಳನ ಹೆಂಡತಿಯು “ಇವತ್ತು ನನ್ನ ಮಾತ ಕೇಳಿ ಬುದ್ದಿ. ಮನೆಯೋರು ಕುಡಿದು ಏನೇನೋ ಹರಟ್ತ ಅವ್ರೆ. ಕುಡ್ದಾಗ ಹಂಗೆ ಆಡೋದು ಅವರ ಪದ್ಧತಿ. ಊರಲ್ಲಿ ಎಲ್ಲರನ್ನೂ ಕಡೀತೇನೆ ಅಂತಾರೆ. ನನ್ನೂ ಕಡೀತಾರಂತೆ. ಕೆಂಗನ್ನೂ ಕಡೀತಾರಂತೆ. ನಿಮ್ಮೂ ಕಡೀತಾರಂತೆ. ಕುಡ್ದೋರ ಬುದ್ಧಿ ಯಾವ ಕಾಲ್ಕೆ ಹೆಂಗೊ. ಇವತ್ತು ನೀವು ಅವ್ರ ಕಣ್ಗೆ ಬೀಳಬೇಡಿ. ಈ ಹೆಂಡದಮತ್ತು ಇಳಿದ ಮೇಲೆ ಅವ್ರೆ ತೆಪ್ಪಗಾಗ್ತಾರೆ” ಎಂದಳು. ಗುಳ್ಳನು ಯಾವುದಕ್ಕೂ ಹೇಸುವುದಿಲ್ಲವೆಂದು ನಂಬಿದ್ದ ಅಯ್ಯುವು ಕೋಪದಿಂದ “ಹೊ ಹೊ, ಖೂನಿ ಬೇರೆ ಮಾಡ್ತಾನೋ? ಕಳ್ಳತನ ಆಯ್ತು, ಆವತ್ತು ತಲೆ ಒಡೆದು ಬಚಾವಾದ, ಇವತ್ತೂ ಬಚಾವಾಗ್ತೇನೆ ಖೂನಿ ಮಾಡಿ ಅಂತ ತಿಳಕೊಂಡಿರಬಹುದು. ಆಗಲಿ ಅವನ ಬುಂಡೆ ಕಾಯಿಸ್ತೇನಿ. ನನ್ನ ಹತ್ತಿರ ಬಂದೂಕವಿರೋದನ್ನ ಅವ ಮರೆತಂಗೆ ಕಾಣ್ತದೆ. ಇವತ್ತು ಖಂಡಿತ ಅವನ್ನ ಗುಂಡಿನಲ್ಲಿ ಹೊಡೆದುಹಾಕ್ತೇನೆ” ಎಂದನು. ಗುಳ್ಳನ ಹೆಂಡತಿಗೆ ಅಯ್ಯುವಿನ ಕೋಪವನ್ನು ನೋಡಿದಾಗ, ಗುಳ್ಳನ ಕೋಪವನ್ನು ನೋಡಿದಾಗ ಆದಷ್ಟೇ ಭಯವಾಯಿತು.

ಅಯ್ಯುವೂ ಗುಳ್ಳನಷ್ಟೇ ರಕ್ಕಸನಾಗಿ ತೋರಿದನು. ಇಬ್ಬರೂ ಠಕ್ಕರಾದ ಪಂಜಿನ ಕಳ್ಳರಂತೆ ತೋರುತ್ತಿದ್ದರು. ಅಯ್ಯು ಹೆಂಡವನ್ನು ಕುಡಿಯುವುದಿಲ್ಲವೆಂದು ಗುಳ್ಳನ ಹೆಂಡತಿಗೆ ಖಂಡಿತವಾಗಿ ಗೊತ್ತಿಲ್ಲದೆ ಇದ್ದಿದ್ದರೆ ಅವನ ಕಣ್ಣುಗಳನ್ನು ನೋಡಿ, ಅವನೂ ಕುಡಿಯುತ್ತಾನೆಂದು ಅವಳಿಗೆ ಭಾಸವಾಗುತ್ತಿದ್ದಿತು. ಮನೆಯಿಂದ ಹೊರಡುವುದಕ್ಕೆ ಮುಂಚೆ ಅಯ್ಯುವನ್ನು ಊರುಬಿಟ್ಟು ಹೊರಡಿಸುವುದು ಅವಳಿಗೆ ಬಹು ಸುಲಭವಾಗಿ ತೋರಿದ್ದಿತು. ಈಗ ಅದಕ್ಕಿಂತ ಹೆಚ್ಚು ಕಷ್ಟವಾಗಿ ಮತ್ತಾವ ಕೆಲಸವೂ ತೋರಲಿಲ್ಲ. ಅಯ್ಯುವೂ ಗುಳ್ಳನೂ ಸುಂದೋಪಸುಂದರಂತೆ ಇದ್ದರು. ಒಬ್ಬನ ಹತ್ತಿರ ಕತ್ತಿ, ಒಬ್ಬನ ಹತ್ತಿರ ಬಂದೂಕು. ಇಬ್ಬರಲ್ಲಿ ಒಬ್ಬನೂ ಇವಳ ಮಾತನ್ನು ಕೇಳುವಂತೆ ಇರಲಿಲ್ಲ. ಅಯ್ಯುವಿಗೂ ಗುಳ್ಳನಿಗೂ ವ್ಯಾಜ್ಯ ಪ್ರಾರಂಭವಾದಂದಿನಿಂದ ಅವಳ ಮನಸ್ಸಿಗೆ ಬಹಳ ಬೇಜಾರಾಗಿದ್ದಿತು. ಗುಳ್ಳನಲ್ಲದಿದ್ದರೆ ಅಯ್ಯುವಾದರೂ ತನ್ನ ಮಾತನ್ನು ಕೇಳಿ ಅಪ್ರಕೃತವಾದ ಜೋರನ್ನು ಬಿಟ್ಟು ರಕ್ತಪಾತವನ್ನು ನಿಲ್ಲಿಸುವುದಕ್ಕಾಗಿಯಾದರೂ ಊರುಬಿಟ್ಟು ಹೋದಾನೆಂದು ಅವಳು ತಿಳಿದಿದ್ದಳು. ಆದರೆ ದ್ವೇಷದಿಂದ ಅಂಧರಾಗಿದ್ದ ಆ ಕಿರಾತರಲ್ಲಿ ಒಬ್ಬನೂ ಮನುಷ್ಯಪ್ರಾಣಿಯಾಗಿರಲಿಲ್ಲ. ಇಬ್ಬರೂ ಕೊಲೆಗಡುಕರಾಗಿದ್ದರು. ಈ ಹೊಡೆದಾಟದಲ್ಲಿ ಬಂದೂಕದ ಏಟಿನಿಂದ ಗುಳ್ಳನು ನೊಡಲು ನಾಯಿಯಂತೆ ಸಾಯುವುದು ಖಂಡಿತವೆಂದು ಅವಳಿಗೆ ನಂಬಿಕೆಯಾಯಿತು. ಒಂದು ತಿಂಗಳೊಳಗೆ ನೈ ಅರಂಗುವಂತಿದ್ದ ಪೂರ್ಣ ಬಿಮ್ಮನಿಸಿಯಾದ ಅವಳು ಬೇಸರಿಕೆಯಿಂದ ಊರಮುಂದೆ ಪೂರ್ಣ ಪ್ರವಾಹದಲ್ಲಿ ಹರಿಯುತ್ತಿದ್ದ ನದಿಗೆ ಬಿದ್ದುಬಿಟ್ಟಳು.

ಒಂದು ನಿಮಿಷದಲ್ಲಿ ಹೊ ಹೊ ಎಂದು ಗದ್ದಲವಾಯಿತು. ಊರಿಗೆ ಊರೇ ಹೊಳೆಯ ತೀರಕ್ಕೆ ಮುಗುಚಿಕೊಂಡಿತು. ನದಿಯ ಪ್ರವಾಹ ಬಹು ವೇಗದಲ್ಲಿದ್ದಿತು. ಆ ಪ್ರವಾಹದಲ್ಲಿ ನದಿಯಲ್ಲಿ ಈಜಿಬಿದ್ದು ತೇಲಿಹೋಗುತ್ತಿರುವವರನ್ನು ಹಿಡಿಯುವವನು ಒಳ್ಳೇ ಎದೆಗಾರನಾಗಿರಬೇಕಾಗಿದ್ದಿತು. ಜಾಲಹಳ್ಳಿಯ ನೂರು ಒಕ್ಕಲುಗಳಲ್ಲಿ ಅಂತಹ ಎದೆಗಾರನು ಯಾರೂ ಇರಲಿಲ್ಲ. ನದಿಯ ತೀರದಲ್ಲಿ ಇರುವೆ ಸಾಲಿಟ್ಟಂತೆ ಜನ ಜಮಾಯಿಸಿತ್ತು. ಒಂದು ಸಲ ಗುಳ್ಳನ ಹೆಂಡತಿ ಒಂದು ಕಡೆ ನೀರಿನಿಂದ ಮೇಲಕ್ಕೆ ತಲೆ ಎತ್ತಿದುದು ಕೆಲವರಿಗೆ ಕಂಡಿತು. ಮರುಕ್ಷಣದೊಳಗೆ ಇನ್ನೂ ಅರ್ಧ ಪರ್ಲಾಂಗ್ ಮುಂದೆ ಎರಡನೆಯ ಸಲ ಅವಳ ತಲೆಯು ಮೇಲೆದ್ದಿತು. ನೀರಿನ ವೇಗದ ಜತೆಯಲ್ಲಿ ದಡದಲ್ಲಿದ್ದ ಜನವೂ ಮುಂದು ಮುಂದಕ್ಕೆ ಓಡುತ್ತಿದ್ದಿತು. ತಲೆ ಅಲ್ಲಿ ಎದ್ದಿತು, ಇಲ್ಲಿ ಎದ್ದಿತು ಎಂಬುದಾಗಿ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಜನರ ಗದ್ದಲವೇ ಗದ್ದಲವಾಯಿತು. ಆದರೆ ನೀರಿಗೆ ಇಳಿಯಲು ಯಾರಿಗೂ ಧೈರ್ಯವಿರಲಿಲ್ಲ. ಅಯ್ಯು ಒಬ್ಬನು

ಮಾತ್ರ ಆ ನದಿಯನ್ನು ಪ್ರವಾಹದಲ್ಲಿ ಈಜಿದ್ದನು. ಗುಳ್ಳನಂತೂ ನೀರನ್ನು ಕಂಡರೇ ಹೆದರುತ್ತಿದ್ದನು. ನದಿಯ ತೀರದಲ್ಲಿ ಎಲ್ಲೂ ಗುಳ್ಳನು ಕಾಣಲಿಲ್ಲ. "ಗುಳ್ಳನ ಹೆಂಡತಿ ತ್ಯೇಲಿಯೇ ಹೋದಳು. ಇನ್ನು ಅವಳ ಆಸೆ ಯಾಕೆ? ಈ ನದಿ ನುಂಗಿದೋರ್ನ ಬಿಟ್ಟು ಕೊಟ್ಟದ್ದುಂಟೇ, ಮೂಳೆ ಕೂಡ ಸಿಕ್ಕೊಕಿಲ್ಲ" ಎಂದು ಜನರು ಆಡಿಕೊಳ್ಳುತ್ತಿದ್ದರು. ಆದರೂ ಅವರೆಲ್ಲರ ಲಕ್ಷ್ಯವೂ ಸ್ವಾಭಾವಿಕವಾಗಿ ಅಯ್ಯುವಿನ ಕಡೆಗೆ ಹೋಯಿತು. "ಅಯ್ನೋರು ಒಂದು ಪಕ್ಸ ನೀರಿಗೆ ಬಿದ್ದಿದ್ರೆ ಹಿಡಕೊಂಡು ಬರೋರು" ಎಂದು ಕೆಲವರು ಹೇಳಿಕೊಳ್ಳುತ್ತಿದ್ದರು. ಮತ್ತೆ ಕೆಲವರು "ಅಯ್ನೆ, ಗುಳ್ನ ಹೆಡ್ತಿ ಬದುಕಿ ಸೋಕೆ ಸತ್ತರೂ ಅಯ್ಯ ನೀರಿಗೆ ಇಳಿಯೋಕಿಲ್ಲ" ಎಂದರು. ಆ ವೇಳೆಗೆ ಅಯ್ಯುವೂ ನದಿಯ ತೀರಕ್ಕೆ ಬಂದನು. 'ಗುಳ್ಳನ ಹೆಂಡತಿ' ಎಂದು ಕಿವಿಗೆ ಬಿದ್ದೊಡನೆಯೇ ಅಯ್ಯುವು ಪಂಚೆಯನ್ನು ಮೇಲಕ್ಕೆ ಬಿಗಿದು ಕಟ್ಟಿ ಸುಳಿಸುಳಿಯಾಗಿಯೂ ನೊರೆ ನೊರೆಯಾಗಿಯೂ ಭೋರ್ಗರೆಯುತ್ತಿದ್ದ ಪ್ರವಾಹದಲ್ಲಿ ಮುಳುಗಿಹೋದನು.

ಜನರು ಅಯ್ಯುವಿನ ಆಸೆಯನ್ನು ಬಿಟ್ಟರು. ಕಣ್ಣುಮುಚ್ಚಿ ತೆಗೆಯುವುದರೊಳಗೆ ಅಯ್ಯುವು ಗುಳ್ಳನ ಹೆಂಡತಿ ಎರಡನೆಯ ಸಲ ತಲೆ ಎತ್ತಿ ಮುಳುಗಿದ್ದ ಸ್ಥಳಕ್ಕೆ ಬಂದನು. ಆ ವೇಳೆಗೆ ಇಪ್ಪತ್ತು ಗಜ ದೂರದಲ್ಲಿ ಅವಳು ಮತ್ತೆ ತಲೆ ಎತ್ತಿದಳು. ಆದರೆ ಈ ಸಲ ಅವಳ ನೆತ್ತಿಯ ಕೂದಲು ಮಾತ್ರ ಮೇಲಕ್ಕೆ ಕಂಡಿತು. ಅಯ್ಯುವು ವಾಯುವೇಗದಲ್ಲಿ ಮುಳುಗಿ ಆ ಸ್ಥಳಕ್ಕೆ ಬಂದನು. ಪ್ರವಾಹವು ಗುಳ್ಳನ ಹೆಂಡತಿಯನ್ನು ಮತ್ತಷ್ಟು ದೂರ ಸಾಗಿಸಿದ್ದಿತು. ಅಯ್ಯು ಹತ್ತಿರಕ್ಕೆ ಬಂದ ಕೂಡಲೇ ಗುಳ್ಳನ ಹೆಂಡತಿಯು ಅವನನ್ನು ಹಿಡಿದುಕೊಂಡು ನೀರಿನಲ್ಲಿ ತನ್ನೊಂದಿಗೆ ಮುಳುಗಿಸಿ ಕೊಂಡಳು. ಅಯ್ಯುವು ಅವಳಷ್ಟು ನೀರು ಕುಡಿದು ಸೋತಿರಲಿಲ್ಲವಾದುದರಿಂದ ಒಂದು ಗಳಿಗೆ ಅವಳೊಂದಿಗೆ ನೀರಿನಲ್ಲೇ ಮುಳುಗಿದನು. ಅಷ್ಟು ಹೊತ್ತಿಗೆ ಗುಳ್ಳನ ಹೆಂಡತಿಗೆ ಪ್ರಜ್ಞೆತಪ್ಪಿತು. ಅನಂತರ ಅವಳನ್ನು ಎಳೆದುಕೊಂಡುಬರುವುದು ಅಯ್ಯುವಿಗೆ ಕಷ್ಟವಾಗಲಿಲ್ಲ. ಅವನು ಬಿದ್ದ ಜಾಗದಿಂದ ಮೇಲಕ್ಕೆ ಹತ್ತಿದ ಜಾಗ ಸುಮಾರು ೩೦೦ ಗಜ ದೂರದಲ್ಲಿದ್ದಿತು. ಅಯ್ಯುವು ಗುಳ್ಳನ ಹೆಂಡತಿಯನ್ನು ಹಿಡಿದು ಕೊಂಡು ಬರುತ್ತಿರುವುದನ್ನು ತಿಗಳರೂ ಒಕ್ಕಲಿಗರೂ ನೋಡಿದರು. ಆ ಗಳಿಗೆಯಲ್ಲಿ ತಾವು ಆಜನ್ಮ ವೈರಿಗಳೆಂಬುದು ಅವರ ದೃಷ್ಟಿಯಿಂದ ಮರೆಯಾಗಿ ಊರಿಗೆ ಊರೇ ಆನಂದದ ಕೇಕೆಹಾಕಿತು. ಅಯ್ಯುವಿನ ಮನೆಯಿಂದ ಕಂಬಳಿ ರಗ್ಗುಗಳನ್ನು ತರಿಸಿ ಗುಳ್ಳನ ಹೆಂಡತಿಗೆ ಶಾಖವಾಗಿ ಹೊದಿಸಿ ಸುಮಾರು ಒಂದು ಗಂಟೆ ಆರೈಕೆ ಮಾಡಿದ ನಂತರ ಅವಳಿಗೆ ಪ್ರಜ್ಞೆಬಂದಿತು. ಆ ವೇಳೆಗೆ ಗುಳ್ಳನೂ ಅಲ್ಲಿಗೆ ಬಂದನು. ಅವಳಿಗೆ ಪ್ರಜ್ಞೆಬಂದ ಕೂಡಲೇ ಅಯ್ಯುವು ಆನಂದದಿಂದ ಜನರ ಕಡೆ ನೋಡಲು ಮೊದಲು

ಕತ್ತೆತ್ತಿದಾಗ ಎಲ್ಲರಿಗಿಂತ ಮುಂಚೆ ಅವನ ಕಣ್ಣಿಗೆ ಬಿದ್ದವನು ಗುಳ್ಳ. ಗುಳ್ಳನು ಹೆಂಡತಿಯನ್ನು ಮೆಲ್ಲಗೆ ಮನೆಗೆ ಕರೆದುಕೊಂಡುಹೋದನು.

ಒಂದು ವಾರ ಗುಳ್ಳನು ಅಯ್ಯಪ್ಪನಿಗೆ ಮುಖವನ್ನೇ ತೋರಿಸಲಿಲ್ಲ. ಅವನಿಗೆ ಬಹಳ ಪಶ್ಚಾತ್ತಾಪವಾಗಿರಬೇಕೆಂದು ಅಯ್ಯಪ್ಪ ಯೋಚಿಸುತ್ತಿದ್ದನು. "ಹಾಳು ವ್ಯಾಜ್ಯಕ್ಕೆ ಬೆಂಕಿ ಹಾಕಲಿ, ಸದ್ಯ ಆ ಮಹಾರಾಯಿತ್ತಿ ಬದುಕಿಕೊಂಡಳಲ್ಲ. ಈ ವೈರ ಮಿತಿಯ ಮೇರೆಯನ್ನು ಮೀರಿತು. ನಮ್ಮ ಈ ವೈರಕ್ಕೆ ಆಹುತಿಯಾಗಿಯೇ ಗುಳ್ಳನ ಹೆಂಡತಿ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಳು. ಅವಳಿಗೆ ಇರುವಷ್ಟು ವಿವೇಕ ನಮಗೆ ಇಲ್ಲವಲ್ಲ. ನಾವು ಎರಡು ಕಾಲಿನ ದನಗಳು, ಇನ್ನು ಈ ಬಡಿದಾಟ ಸಾಕು. ಎಲ್ಲಾ ವೈರವನ್ನೂ ಕೊನೆಗಾಣಿಸಬೇಕು. ಎಲ್ಲಾ ಕೇಸುಗಳನ್ನೂ ಇಬ್ಬರೂ ವಾಪಸು ತೆಗೆದುಕೊಳ್ಳಬೇಕು. ಗುಳ್ಳನ ಹೆಂಡತಿಯನ್ನು ಬಲಿಕೊಡುವುದಕ್ಕೆ ಮುಂಚೆ ಸದ್ಯ ನಮಗೆ ಈಗ ಜ್ಞಾನೋದಯವಾಯಿತಲ್ಲಾ. ಅದೇ ನಮ್ಮ ಪುಣ್ಯ" ಎಂದು. ಅಯ್ಯಪ್ಪನ 'ಭಾವ್ಯೈಕ'ನಾದ ಬುಂಡೆಕ್ಯಾತನು (ಇವನ ಹೆಸರು ಶಿಂಗ್ಲಾಚಾರಿ ಎಂದು. ಜಾಲಹಳ್ಳಿಯವರು ಅವನನ್ನು ಬುಂಡೆಕ್ಯಾತನೆಂದು ಕರೆಯುತ್ತಿದ್ದರು) ಅಯ್ಯಪ್ಪನಿಗೆ ನಿತ್ಯ "ನಿನಗೆ ರೈತರ ಮಂಕು ಚೆನ್ನಾಗಿ ಹಿಡಿಯಿತು. ನಿಮ್ಮ ತಂದೆ 'ಶೂದ್ರಃ ಸರ್ವಸ್ವ ಘಾತುಕಃ' ಎಂದುಕೊಂಡು ಅವರನ್ನು ಹಿಡಿತದಲ್ಲಿ ಇಟ್ಟು ಕೊಂಡು ಹತ್ತು ಸಾವಿರವಿದ್ದ ಆಸ್ತಿಯನ್ನು ಎರಡು ಲಕ್ಷಕ್ಕೆ ಏರಿಸಿದನು. ನೀನು ಒಂದು ವ್ಯಾಜ್ಯವನ್ನೇ ಗೆಲ್ಲಲಾರದೆ ಹೋದೆ. ನಿಮ್ಮ ತಂದೆ ಇಂತಹ ನೂರು ವ್ಯಾಜ್ಯಗಳನ್ನು ನೀರು ಕುಡಿದಂತೆ ಜೈಸುತ್ತಿದ್ದರು. ಸಾಲದ್ದಕ್ಕೆ ಪ್ರಾಣ ಹೋಗೋದನ್ನೂ ಕಾಣದೆ ಪ್ರವಾಹ ಈಜಿ, ನಿನ್ನ ತಲೆ ಒಡೆಯೋಕೆ ಬಂದೋನ ಹೆಂಡ್ತೀನ ಬದುಕಿಸಿದೆ. ಬೆಂಕಿಗೆ ಬೀಳೋ ಚೇಳನ್ನು ಕೈಯಲ್ಲಿ ಹಿಡಿದರೆ ಅದು ಹಿಡಿದ ಕೈಯನ್ನೇ ಕುಟುಕುವಂತೆ ನೀನು ಅವನ ಹೆಂಡತಿಯನ್ನು ಬದುಕಿಸಿದರೂ ಗುಳ್ಳ ಬೇರೆ ನಿನ್ನ ತಲೆ ಒಡೆಯೋದನ್ನ ಬಿಡೋದಿಲ್ಲ. ಈಗಾಗಲೇ ಗುಳ್ಳ ಹೇಳುತ್ತಿದ್ದ 'ಅಯ್ಯನ ತಾವ ಕಾಸಗ ಏನೋ ಹಣಗೆಟ್ಟಯ್ತೆ. ಅದ್ಕೆ ಹಂಗೆ ರಾಜೀಗೂ ವ್ಯಾಜ್ಯ ಮುಗಿಸೋಕೂ ಹಠವಾಡ್ತಾ ಅವ್ನೆ' ಅಂತ. ಈಗ ಮತ್ತೆ ರಾಜಿ ಮಾಡ್ಕೊ ಅಂತ ಹೇಳು. ಆ ಸಿಂಹದ ಹೊಟ್ಟೇಲಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು. ತಲೆ ಒಡೆಯೋಕೆ ಎತ್ತಿದ ಕೈನ ಸಲಾಮು ಹಾಕೋಕೆ ಬಂದವ್ನು ಅಂತ ಹೇಳೋನು ನೀನು. ಗುಳ್ಳನಿಗ ದೇವರೇ ಒದಗಿಸಿದ್ದ ಗಂಡಾಂತರ. ಒಂಭತ್ತು ತಿಂಗಳ ಜಿಮ್ಮನಸಿ ಸತ್ತಿದ್ರೆ ಗುಳ್ಳ ಈ ಊರ ಬಿಟ್ಟೇ ಹೋಯ್ತಾ ಇದ್ದ. ನಿನ್ನ ಮಗ್ಗುಲ ಮುಳ್ಳು ನಾಶವಾಗೋದು." ಎಂದು ಬೋಧಿಸುತ್ತಿದ್ದನು. ಅಯ್ಯಪ್ಪ "ನಿನಗೆ ತಿಳಿಯದು. ರೈತರೊಂದಿಗೆ ಹೋರಾಟ

ಸಾಕಾಗಿದೆ. ಅವರೆಲ್ಲಾ ಠಕ್ಕರೇ ಎಂದು ನೀನು ಹೇಳುವುದನ್ನು ನಾನು ನಂಬು ವುದಿಲ್ಲ. ಮನುಷ್ಯ ಸ್ವಭಾವದಲ್ಲಿ ಒಳ್ಳೆಯವನು ಕೆಲವು ಕಾರಣಗಳಿಂದ ಕಠಿಣನೂ ಕ್ರೂರನೂ ಆದರೂ ಸಮಯಬಂದಾಗ ಅವನ ಒಳ್ಳೆಯ ಸ್ವಭಾವವೇ ಪ್ರಕಾಶವಾಗು ತ್ತದೆ. ಗುಳ್ಳನ ಹೆಂಡತಿ ನೀರಿಗೆ ಬೀಳುವುದಕ್ಕೆ ಮುಂಚೆ ಯಾರಾದರೂ 'ಅವಳು ಸಾಯ್ತಾ ಇದಾಳೆ' ಎಂದಿದ್ದರೆ 'ಸತ್ತರೆ ಸಾಯಲಿ' ಎನ್ನುತ್ತಿದ್ದೆ. ಆದರೆ ಅವಳು ನೀರಿಗೆ ಬಿದ್ದಾಗ ಅವಳನ್ನು ಬದುಕಿಸಬೇಕೆಂಬುದರ ಹೊರತು ಬೇರೆ ಯೋಚನೆ ನನಗೆ ತೋರಲಿಲ್ಲ. ಎಲ್ಲರಿಗೂ ಹಾಗೆಯೇ" ಎಂದನು. ಬುಂಡೆಕ್ಯಾತನು "ಗುಳ್ಳ ನಿನ್ನ ತಲೆ ಕಡಿಯುವುದಕ್ಕೆ ಬಂದಿದ್ದ. ಅವನೇನು, ಅವನ ಹೆಂಡತಿಯೇನು. ಸಾಯಲಿ ಎಂಬುದಾಗಿ ನೀನು ಸುಮ್ಮನೆ ಇರಬೇಕಾಗಿತ್ತು. ಮುಂದೆ ಇದು ನಿನ್ನ ಅನುಭವಕ್ಕೇ ಬರುತ್ತದೆ" ಎಂದು ಹೇಳಿ ಸುಮ್ಮನಾದನು.

ಗುಳ್ಳನಿಗೆ ಏನಾಗಿದ್ದರೂ ಖಂಡಿತವಾಗಿಯೂ ಪಶ್ಚಾತ್ತಾಪ ಮಾತ್ರ ಉಂಟಾ ಗಿರಲಿಲ್ಲ. ಅವನಿಗೆ ಮೊದಲು ನಾಚಿಕೆಯೂ ಅನಂತರ ಮಿತಿಮೀರಿದ ಕೋಪವೂ ಉಂಟಾಯಿತು. ಅಯ್ಯು ತನ್ನ ಹೆಂಡತಿಯನ್ನು ನದಿಯಿಂದ ಹಿಡಿದುಹಾಕಿದ್ದುದರಿಂದ ಊರವರ ಎದುರಿಗೆ ತನ್ನ ಯೋಗ್ಯತೆ ಬಹಳ ಮಟ್ಟಿಗೆ ಕಡಿಮೆಯಾಯಿತೆಂದು ಅವನು ಭಾವಿಸಿದನು. ತಾನು ಆವತ್ತು ಅಯ್ಯುವನ್ನು ತೀರಿಸಿ ತನ್ನ ವೈರಕ್ಕೆ ಕಳನವಿಡ ಬೇಕೆಂದು ಮಾಡಿದ್ದಾಗ ಹೆಂಡತಿಯ ಅವಿವೇಕದಿಂದ ತನ್ನ ಉದ್ದೇಶ ಸಾಧಿಸಲಿಲ್ಲ ವಲ್ಲಾ ಎಂದು ಅವನಿಗೆ ಹೆಂಡತಿಯ ಮೇಲೂ ಕೋಪವುಂಟಾಯಿತು. ಅವಳು ನೀರಿಗೆ ಬಿದ್ದರೂ ಅವಳನ್ನು ರಕ್ಷಿಸುವ ತ್ರಾಣ ತನ್ನಲ್ಲಿ ಇಲ್ಲವಾಯಿತಲ್ಲಾ ಎಂಬುದ ರಿಂದ ತನ್ನಲ್ಲೇ ಅವನಿಗೆ ತಿರಸ್ಕಾರವುಂಟಾಯಿತು. ಅಯ್ಯು ಹೊರತು ಮತ್ತಾರು ಹೆಂಡತಿಯನ್ನು ಹೊಳೆಯಿಂದ ಹಿಡಿದು ಹಾಕಿದ್ದರೂ ಅವನಿಗೆ ದುಃಖವಿರಲಿಲ್ಲ. "ಅಯ್ಯು ಇದರಲ್ಲೂ ನನ್ನನ್ನು ಕೊಂದ" ಎಂದು ಅವನು ಕೋಪಗೊಂಡನು. "ಗುಳ್ಳ ಅಯ್ಯುನ್ನ ಕಡಿಯೋಕೆ ಹೋಗಿದ್ದ. ಅದಕ್ಕೆ ಅವನ ಹೆಂಡ್ತಿ ಹೊಳೆ ಬಿದ್ದಳು" ಎಂಬುದು ಹಳ್ಳಿಯಲ್ಲೂ ಸುತ್ತಮುತ್ತಲೂ ಪ್ರಚಾರವಾಗಿದ್ದುದರಿಂದ ಅವನು ಮನೆ ಯಿಂದ ಹೊರಕ್ಕೆ ಬರುವುದಕ್ಕೆ ನಾಚಿ ಮನೆಯಲ್ಲಿಯೇ ಕೂತಿದ್ದನು.

ಗುಳ್ಳನು ಒಂದು ವಾರವಾದರೂ ಕಣ್ಣಿಗೆ ಬೀಳದುದರಿಂದ ಅಯ್ಯು ಅವನಿಗೆ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಹೇಳಿಕಳುಹಿಸಿದನು. "ಎಲ್ಲಾ ವ್ಯಾಜ್ಯವೂ ಹರಿದುಹೋಗಲಿ. ಇಬ್ಬರೂ ರಾಜಿಯಿಂದ ಇದ್ದುಬಿಡೋಣ" ಎಂಬುದೇ ಅವನ ಮಾತಾಗಿತ್ತು. ಆದರೆ ಗುಳ್ಳನ ಮನಸ್ಸು ಪರಿಪಕ್ವವಾಗಿರಲಿಲ್ಲ. "ಮೊಕದ್ದಮೆ ಯಲ್ಲಿ ಸಾಕ್ಷಿ ಅಯ್ಯುನಿಗೆ ವಿರೋಧವಾಗಿದೆ. ಇನ್ನೇನು ನ್ಯಾಯಾಧೀಶರು ತೀರ್ಮಾನ

ಕೊಡುತ್ತಾರೆ. ಇದಕ್ಕಾಗಿ ನನಗೆ ನಾಲ್ಕು ಸಾವಿರ ಖರ್ಚಾಗಿದೆ. ‘ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು’ ಅಂತ ಈಗ ನಾನು ಮೊಕದ್ದಮೆ ಬಿಟ್ಟರೆ ಅಯ್ಯುನ ನಾಲಗೆ ಮೊಳುದ್ದವಾಗುತ್ತೆ. ಈ ಒಂದು ಹಟ ಸಾಧಿಸಿಯೇ ತೀರಬೇಕು. ಅಯ್ಯು ಬೀಳೋಕೆ ಸಿಡಿಗಲ್ಲು ಒಡ್ಡಿದೇನೆ. ಹಗ್ಗ ಎಳೆಯೊದೊಂದೆ ಬಾಕಿ. ಎಳೆದಕೂಡಲೇ ಅಯ್ಯು ಕಲ್ಲಿನ ಕೆಳಗೆ ಸಿಕ್ಕಿ ಹೆಗ್ಗಣದಂತೆ ಅರೆದುಹೋಗುತ್ತಾನೆ” ಎಂದು ಗುಳ್ಳನು ಯೋಚಿಸುತ್ತಿದ್ದನು. “ಅಯ್ಯುನೊಂದಿಗೆ ರಾಜಿಯಾಗಿಬಿಡಿ. ಕೋರ್ಟು ವ್ಯಾಜ್ಯ ಸುರುವಾದದ್ದೆ ಆದ್ದು ನಮ್ಮ ಮನೆ ಹಾಳಾಯ್ತು. ಕೇಳಿಲ್ಲವೆ ‘ಕೋರ್ಟಿನಲ್ಲಿ ಗೆದ್ದೋನು ಸೋತ. ಸೋತೋನು ಸತ್ತ’ ಅನ್ನೋದ” ಎಂಬುದಾಗಿ ಹೆಂಡತಿ ಹೇಳುತ್ತಿದ್ದ ಮಾತು ಗುಳ್ಳನಿಗೆ ಗಣನೆಗೇ ಬರಲಿಲ್ಲ. ಒಂದು ಸಲ ಅವನು ಕೋಪದಿಂದ “ಹೆಂಗಸಾದ ನಿನಗೆ ಇದ ಕಟ್ಕೊಂಡು ಏನು? ನೀನು ಕಂಡಿರೋದು ಹೊಳೆ ಬೀಳೋದು ತಾನೆ” ಎಂದು ಗದರಿಸಿದನು.

ವ್ಯಾಜ್ಯಗಳನ್ನೆಲ್ಲಾ ರಾಜಿಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದ ಅಯ್ಯುವು ಅವುಗಳ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಬುಂಡೆಕ್ಯಾತನು ಪ್ರತಿ ದಿನವೂ “ನೀನು ಹೀಗೆ ಸುಮ್ಮನೆ ಕೂತಿದ್ದರೆ ಗುಳ್ಳ ನಿನ್ನ ಕೈಗೆ ಬೇಡಿ ತೊಡಿಸುತ್ತಾನೆ. ಇನ್ನು ನಾಲ್ಕು ದಿನಕ್ಕೆ ಎರಡು ಕಡೆಯೂ ಆರ್ಗ್ಯುಮೆಂಟ್ ನಡೆಯಬೇಕು. ಮದರಾಸಿನ ಆ ದೊಡ್ಡ ಲಾಯರಿಗಾದರೂ ಬರಿ. ಊರವರೆಲ್ಲಾ ಒಂದಾಗಿ ನಿನಗೆ ವಿರೋಧವಾಗಿ ಸಾಕ್ಷಿ ಹೇಳಿರುವಾಗ ನೀನು ಬಚಾವಾಗೋದು ಕಷ್ಟ” ಎಂದು ಒತ್ತಾಯಪಡಿಸುತ್ತಿದ್ದನು. ಗುಳ್ಳನು ತನ್ನ ಹತ್ತಿರಕ್ಕೆ ನುಳಿಯದುದರಿಂದ ಅಯ್ಯುವಿಗೆ ನಿಜವಾಗಿಯೂ ಮೊಕದ್ದಮೆಯ ಯೋಚನೆ ಹತ್ತಿಕೊಂಡಿತು. “ಗುಳ್ಳನು ಬಾಕಿ ತಿಗಳರಂತೆ ಅಲ್ಲ. ಅವನೂ ಬಿಳಿ ಕಾಗದದ ಮೇಲೆ ಕಪ್ಪು ಹಚ್ಚೋದನ್ನ ಕಲತವನೆ. ಸಾಲದುದಕ್ಕೆ ಫೂಟ್ ಲಾಯರು. ಈ ಅರ್ಧವಿದ್ಯೆಯಿಂದ ಅವನು ಹೆಚ್ಚಿದ್ದಾನೆ. ಇವನ ಸ್ವಭಾವ ಇಷ್ಟು ಬೇಗ ಬದಲಾಯಿಸುವಂತೆ ಇಲ್ಲ” ಎಂದುಕೊಂಡು ಅಯ್ಯುವು ಬುಂಡೆಕ್ಯಾತನನ್ನೇ ಮದರಾಸಿಗೆ ಕಳುಹಿಸಿ ದೊಡ್ಡ ಲಾಯರನ್ನೇ ಆರ್ಗ್ಯುಮೆಂಟಿಗೆ ಗೊತ್ತು ಮಾಡಿದನು. ಗುಳ್ಳನಿಂದ ಹಣವನ್ನು ತಿಂದಿದ್ದ ಲಾಯರೂ ಸಾಕ್ಷಿಗಳೂ ಕೋರ್ಟಿನ ಎಲ್ಲಾ ಗುಮಾಸ್ತರೂ ಬೊಜ್ಜು ಬೆಳಸಿಕೊಂಡು ತಿರುಗುತ್ತಿದ್ದರು. ಗುಳ್ಳನು ಮಾತ್ರ ಹಳೆಯ ಬಟ್ಟೆಗಳನ್ನು ಹಾಕಿಕೊಂಡು ಕೋರ್ಟಿನ ಮುಂದಲ ಮರದ ಕೆಳಗೆ ಮುಖದಲ್ಲಿ ದ್ವೇಷದ ಹೊರತು ಮತ್ತಾವ ಭಾವವನ್ನೂ ತೋರಿಸದೆ ಕುಳಿತಿದ್ದನು. ಆ ದಿನ ಆರ್ಗ್ಯುಮೆಂಟು ಆಯಿತು. ಎರಡು ಕಡೆಯ ಲಾಯರುಗಳೂ ಬಹಳ ಉಗ್ರವಾಗಿ ವಾದಿಸಿದರು. ಕೋರ್ಟಿನಲ್ಲಿ ಅನೇಕ ಗಾಡಿ ಲಾ ಪುಸ್ತಕಗಳು ಬಂದು ಬಿದ್ದಿದ್ದುವು.

ಆರ್ಗ್ಯುಮೆಂಟು ಮುಗಿದ ನಂತರ ಮದರಾಸಿನ ಲಾಯರು ಅಯ್ಯುವಿನ ಬಳಿಗೆ ಬಂದು “ ಗುಳ್ಳನ ಸಾಕ್ಷಿಗಳು ಈ ಮೊಕದ್ದಮೆಯಲ್ಲಿ ನಿನಗೆ ವಿರೋಧವಾಗಿ ಹೇಳಿರುವಷ್ಟು ಒಮ್ಮನಸ್ಸಿನಿಂದ ಸ್ವಲ್ಪವೂ ವ್ಯತ್ಯಾಸ ಬರದಂತೆ ಸಾಕ್ಷಿಗಳು ಹೇಳಿರುವುದನ್ನು ನಾನು ಯಾವ ವ್ಯಾಜ್ಯದಲ್ಲೂ ನೋಡಲಿಲ್ಲ. ಗ್ರಾಮಸ್ತರೆಲ್ಲಾ ಹೀಗೆ ಒಟ್ಟಾದರೆ ಯಾರಿಗೆ ಬೇಕಾದರೂ ಸಜ ಹಾಕಿಸಬಹುದು. ಇವರೆಲ್ಲ ಪರಮ ದುಷ್ಟರು. ಊರಿಗೆ ಊರೇ ಹೀಗೆ ಘಾತುಕರಾದುದನ್ನು ನಾನು ಎಲ್ಲೂ ಕಂಡಿಲ್ಲ. ಅವರನ್ನೆಲ್ಲಾ ನಿರ್ನಾಮ ಮಾಡಿದ ಹೊರತು ನಿನಗೆ ಶಾಂತಿಯುಂಟಾಗುವುದಿಲ್ಲ ” ಎಂದು ಹೇಳಿದರು. ಅಯ್ಯುವು “ ಈ ವ್ಯಾಜ್ಯದ ಮೂಲ ಇವತ್ತಿನದಲ್ಲ. ನಮ್ಮ ತಂದೆ ಇವರನ್ನು ಸದೆ ಬಡಿಯಲು ಪ್ರಾರಂಭಿಸಿದ ದಿನ ಹುಟ್ಟಿದ್ದು ಇದು. ಅಂದು ಉಂಡದ್ದನ್ನು ಇಂದು ಕಕ್ಕಲೇ ಬೇಕಾಗಿದೆ ” ಎಂದುಕೊಂಡು ಸುಮ್ಮನಾದನು. ಬುಂಡೆಕ್ಯಾತನು ಬಂದು ವಾದಿಸಿದಾಗಲೂ ಅಯ್ಯುವು “ ಇದು ನಮ್ಮ ತಂದೆ ಅಂದು ನೆಟ್ಟ ಸೊಸಿಯ ಫಲ. ಇದರ ಬೇರನ್ನು ನಾನು ಕಿತ್ತುಹಾಕದೆ ಇದ್ದರೆ ನನ್ನ ಮಕ್ಕಳೂ ಈ ಹೊಡೆದಾಟಕ್ಕೆ ಹಕ್ಕುದಾರರಾಗುತ್ತಾರೆ. ಇದನ್ನು ಕಿತ್ತುಹಾಕುವುದು ನಮ್ಮ ತಂದೆಗೆ ಸುಲಭ ವಾಗಿದ್ದಿತು. ಅವರು ಮಾಡಲಿಲ್ಲ. ಸನಗೆ ಸ್ವಲ್ಪ ಕಷ್ಟವಾಗುತ್ತದೆ. ನಾನೂ ಇದನ್ನು ಬಿಟ್ಟರೆ ನನ್ನ ಮಕ್ಕಳ ಕಾಲಕ್ಕೆ ರೈತರ ತಲೆಗಳೂ ಅವರ ತಲೆಗಳೂ ಉರುಳಬೇಕಾಗ ಬಹುದು. ನಾವು ದುಷ್ಟರಾದ್ದರಿಂದ ಅವರೂ ದುಷ್ಟರಾಗಿದ್ದಾರೆ. ನಾವು ಒಳ್ಳೆ ಯವರಾದರೆ ಅವರೂ ಒಳ್ಳೆಯವರಾಗುವುದು ಖಂಡಿತ ” ಎಂದು ಹೇಳಿದನು. ಆರ್ಗ್ಯುಮೆಂಟೂ ಆಯಿತು. ಜಡ್ಜಮೆಂಟೂ ಆಯಿತು. ಒಬ್ಬರದೂ ತಪ್ಪಿಲ್ಲವೆಂದು ಮೊಕದ್ದಮೆಯು ವಜಾ ಆಯಿತು. ಗುಳ್ಳನ ಆಸ್ತಿ ಎಲ್ಲಾ ಹೋಗಿ, ಅವನು ಭಿಕಾರಿ ಯಾದನು. ಅಯ್ಯುವಿಗೆ ಗುಳ್ಳನಿಗೆ ತಗುಲಿದುದರ ಎರಡರಷ್ಟು ಖರ್ಚು ತಗುಲಿದರೂ ಅವನು ಹಣದ ಹುತ್ತವಾಗಿದ್ದುದರಿಂದ ಖರ್ಚು ಅವನ ಮೇಲೆ ಕೆಂದಲಿಲ್ಲ.

(ಮುಂದೆ ಸಾಗುವುದು)

ಹೂವಿನ ಬಯಕೆ

ಮುಂಬೆಳಗಿನಲ್ಲಿ ಮೆಲುದನಿಯ ಮಂಜುಳಗೀತ
ಕೇಳಿಬರಲೆದೆಯುಬ್ಬಿ, ಆನಂದವುಕ್ಕಿ
ಹಾಡಿದವರಾರೆಂದು ಕಾಂಬ ಕೌತುಕದಿಂದ
ಒಳಹೊಕ್ಕು ಕೈದೋಟವನು ನಿಂದೆನಲ್ಲಿ.

ಹಕ್ಕಿಯಂದದಿ ಹಾಡಿ, ಗಿಡಗಿಡಕೆ ನಡೆತಂದು
ಮನಮೆಚ್ಚಿ, ಹೂವುಗಳ ಚೆಲುವಿಕೆಗೆ ಸೋತು,
ಆಸೆಯಲಿ ನೋಡುತ್ತ ನಿಂತ ಸುಮಗಳ ಕೆಳದಿ,
ನನ್ನ ಮುದ್ದಿನ ತಂಗಿ, ಎಳಚೆಲುವೆ, ವಿಧವೆ!

ಮನವ ಸೆರೆಹಿಡಿದೆನ್ನನಾ ಬಳಿಗೆ ಕರೆತಂದ
ಸವಿಗೀತವದು ನೊಂದ ಕರುಳಿನೊಳಕೂಗು:
"ಅರಿವ ಮುನ್ನವೆ ನನ್ನ ಸೌಭಾಗ್ಯವಳಿಯಿತೇ,
ಬಾಲವಿಧವೆಯು ಗೋಳು ಕೇಳಿಸದೆ, ದೇವ!

"ಬಾಲ್ಯ ಬೀಳ್ಕೊಡುತಲಿದೆ, ಹರೆಯ ಮೈತುಂಬುತಿದೆ,
ವೈಧವ್ಯದೀ ತೊಟ್ಟಿಲಲಿ ಬೆಳೆದ ನನಗೆ;
ಬಯಕೆಗಳ ಕೆರಳಿಸದಿರೆ"ಂಬ ಮೊರೆ. ಅದ ಕೇಳಿ
ಅಳಲಿಗಳಲನು ಬೆರಸಿ ದೂರದಲಿ ನಿಂತೆ.

ಚೆಂಗುಲಾಬಿಯ ಲತೆಯೊಳರೆಬಿರಿದ ಮೊಗ್ಗೊಂದು
ಗಾಳಿಯೊಂದಿಗೆ ಸರಸದಲಿ ಬಳುಕುತಿರಲು,
ಅದನು ಕೊಯ್ಯುತ ತಂಗಿ ಮುಡಿಗೆ ಕೈಯೆತ್ತಿದಳು;
ಅಳುಕಿ ಕೆಳಗಿಳಿಸಿದಳು;—ತಿರುಗಿದಳು ಮನೆಗೆ.

ಅಣ್ಣನಿಂತಾಡಿದೆನು ಬರುವ ತಂಗಿಯು ಕಂಡು:
"ಇಂದೇನು ಹೂವುಗಳನಾರಿಸುವೆ, ತಂಗಿ?"
ಅದಕವಳು ಕಷ್ಟದಲಿ ಮರುಮಾತನಾಡಿದಳು:
"ಅರ್ಚನೆಗೆ ಹೂವುಗಳು—ಮುಡಿಯಲಲ್ಲಣ್ಣ!"

ಚಿ. ತ. ಈಶ್ವರನ್.

ಚಾರುದತ್ತ

ಮೊದಲನೆಯ ಅಂಕ

(ನಾಂದಿಯಾದ ಮೇಲೆ ಬಳಿಕ ಸೂತ್ರಧಾರನು ಪ್ರವೇಶಿಸುತ್ತಾನೆ)

ಸೂತ್ರಧಾರ—ಇವತ್ತು ಬೆಳಗಿನ ಜಾವದಲ್ಲಿಯೇ ಮನೆಯಿಂದ ಹೊರಟ ನನಗೆ ಹಸಿವಿನಿಂದ ಕಣ್ಣುಗಳೆರಡೂ ತಾವರೆಯೆಲೆಯ ಮೇಲಿನ ನೀರು ಹನಿಗಳಂತೆ ಅದಿರುತ್ತಿರುವ ಹಾಗಿದೆ. (ಮುಂದೆ ಹೋಗಿ) ಮನೆಗೆ ಹೋಗಿ ಊಟಕ್ಕೆ ಏನಾದರೂ ಏರ್ಪಾಡು ನಡೆದಿದೆಯೋ ಇಲ್ಲವೋ ನೋಡುತ್ತೇನೆ. (ಮುಂದೆ ಹೋಗಿ) ಇದು ನಮ್ಮ ಮನೆ. ಒಳಗೆ ಹೋಗುತ್ತೇನೆ. (ಒಳಕ್ಕೆ ಹೋಗಿ ನೋಡಿ) ಇಲ್ಲಿ [1]ಲೋಹದ ಪಾತ್ರೆಗಳನ್ನು ಬೆಳಗಿ ನೆಲ ಕಪ್ಪಾಗಿದೆ. ಎಣ್ಣೆ ತುಪ್ಪಗಳನ್ನು ಕಾಸಿ ಕರಿದ ಸುವಾಸನೆಯಂತೆ ವಾಸನೆ ಬರುತ್ತಿದೆ. [2]ಒಳ್ಳೆಯ ಶಕುನದಂತೆ ಪರಿಚಾರಕರು ಓಡಿಯಾಡುತ್ತಿದ್ದಾರೆ. (ಇದನ್ನೆಲ್ಲ ನೋಡಿದರೆ) ಏನೋ ಏರ್ಪಾಡು ನಡೆದೇ ಇರಬೇಕಲ್ಲವೇ ! ಅಥವಾ ಹಸಿವಿನಿಂದ ಲೋಕವೆಲ್ಲ ನನಗೆ ಅನ್ನಮಯವಾಗಿರುವಂತೆ ಕಾಣುವುದೋ ಏನೋ ! ಆರ್ಯೆಯನ್ನು ವಿಚಾರಿಸಿ ನೋಡುತ್ತೇನೆ. ಆರ್ಯೆ, ಇಲ್ಲಿ ಸ್ವಲ್ಪ ಬಾ.

(ಪ್ರವೇಶಿಸಿ)

ನಟಿ—ಆರ್ಯ, ಇಗೋ ಬಂದಿದ್ದೇನೆ. ಸದ್ಯ ಬಂದಿರಲ್ಲಾ.

ಸೂತ್ರಧಾರ—ಆರ್ಯೆ, ನಮ್ಮ ಮನೆಯಲ್ಲಿ *ಈ ಹಗಲಿನ ಊಟಕ್ಕೆ ಏನಾದರೂ ಇದೆಯೇ ?

ನಟಿ—ಇದೆ.

ಸೂತ್ರಧಾರ—ಚಿರಕಾಲ ಬಾಳು. ಹೀಗೆ ಒಳ್ಳೊಳ್ಳೆಯ ಊಟಗಳನ್ನು ಕೊಡುತ್ತಲೇ ಇರು.

ನಟಿ—ಆರ್ಯ, ನಿಮ್ಮನ್ನೇ ಕಾದುಕೊಂಡಿದ್ದೇನೆ.

ಸೂತ್ರಧಾರ—ಆರ್ಯೆ, ಇದೆಯೋ ಅಪೇಕ್ಷಿಸಿದ್ದು ?

ನಟಿ—ಇದೆ.

---

* ಪ್ರಾತರಾಶಃ = ಹೊತ್ತರೂಟ. 'ತಂಗಳನ್ನ'ವಿರಬಹುದೇ ?

ಸೂತ್ರಧಾರ—ಹೀಗೆಯೇ ದೇವತೆಗಳು ನಿನ್ನನ್ನು ಆದರಿಸಲಿ. ಆರ್ಯೆ, ಏನೇನಿದೆ?

ನಟಿ—ತುಪ್ಪ, ಬೆಲ್ಲ, ಮೊಸರು, ಅಕ್ಕಿ,—ಎಲ್ಲಾ ಇದೆ.

ಸೂತ್ರಧಾರ—ಇದೆಲ್ಲ ಇದೆಯೆ, ನಮ್ಮ ಮನೆಯಲ್ಲಿ?

ನಟಿ—ಇಲ್ಲ, ಇಲ್ಲ, ಅಂಗಡಿಯಲ್ಲಿ.

ಸೂತ್ರಧಾರ—(ರೋಷದಿಂದ) ಆಃ! ಅನಾರ್ಯೆ, ಹೀಗೆ(ಯೇ) ನಿನ್ನ ಆಸೆ(ಯೂ) ಹರಿದುಹೋಗಲಿ! ನೀನು ಹಾಳಾಗಿ ಹೋಗುತ್ತೀಯೆ. ಪ್ರಚಂಡವಾದ ಬಿರುಗಾಳಿ ಎತ್ತಿ ಒಗೆದ ಹುಲ್ಲುಕಂತೆಯಂತೆ ಪರ್ವತದ ಮೇಲಿನಿಂದ ಬಹು ದೂರದ ವರೆಗೂ ಹತ್ತಿಸಿ ಕೆಳಕ್ಕೆ ಕೆಡವಿದವನಂತೆ ಆಗಿಬಿಟ್ಟಿದ್ದೇನೆ.

ನಟಿ—ಹೆದರಬೇಡಿ, ಹೆದರಬೇಡಿ. ಆರ್ಯ, ಒಂದು ಗಳಿಗೆ ತಡೆಯಿರಿ. ಎಲ್ಲ ಸಿದ್ಧವಾಗುತ್ತದೆ. ಇದನ್ನಾಗಲೇ ತಂದಾಗಿದೆ. ಇವತ್ತು ನನ್ನ ಉಪವಾಸ (ವ್ರತ)ಕ್ಕೆ ಆರ್ಯನು ನೆರವಾಗಬೇಕು.

ಸೂತ್ರಧಾರ—ಆರ್ಯೆಯ ಉಪವಾಸದ ಹೆಸರೇನು?

ನಟಿ—'ಅಭಿರೂಪ ಪತಿ'* ಎಂದು.

ಸೂತ್ರಧಾರ—ಏನು, ಬೇರೆ ಜನ್ಮದಲ್ಲಿಯೋ?

ನಟಿ—ಹೌದು.

ಸೂತ್ರಧಾರ—ಎಲ್ಲ ಹಾಗಿರಲಿ. ಈಗ ಆರ್ಯೆಗೆ ಉಪವಾಸವನ್ನು ಉಪದೇಶ ಮಾಡಿದವರು ಯಾರು?

ನಟಿ—ಈ ಪರಿಚಾರಕ ಚೂರ್ಣಗೋಷ್ಠ.

ಸೂತ್ರಧಾರ—ಭಲೆ, ಚೂರ್ಣಗೋಷ್ಠ, ಭಲೆ!

ನಟಿ—ಆರ್ಯನ ಅನುಗ್ರಹವಿರುವುದಾದರೆ, ನಮ್ಮಂಥ ಜನರಿಗೆ ತಕ್ಕ ಯಾರಾದರೊಬ್ಬ ಬ್ರಾಹ್ಮಣನನ್ನು ಕರೆಯಬೇಕೆಂದು ಇಚ್ಛಿಸುತ್ತೇನೆ.

ಸೂತ್ರಧಾರ—ಧರ್ಮಿಷ್ಠವಾದದ್ದೇ ಸರಿ, ಈ ಕೆಲಸ. ಅದರಿಂದ ನನಗೆ ಹಗಲೂಟವೂ† ಸಿಕ್ಕುತ್ತದೆ! ಹಾಗಾದರೆ, ಆರ್ಯೆ, ನೀನು ಒಳಕ್ಕೆ ಹೋಗಬಹುದು. ನಾನು ಕೂಡ ನಮ್ಮಂಥವರಿಗೆ ತಕ್ಕವನಾದ ಒಬ್ಬ ಬ್ರಾಹ್ಮಣನನ್ನು ಹುಡುಕಿಕೊಂಡು ಬರುತ್ತೇನೆ.

ನಟಿ—ಆರ್ಯನು ಅಪ್ಪಣೆಮಾಡಿದಂತೆ. (ಹೋಗುತ್ತಾಳೆ)

ಸೂತ್ರಧಾರ—ಎಲ್ಲಿ ದೊರಕಿಸಲಿ, ದರಿದ್ರ ಬ್ರಾಹ್ಮಣನನ್ನು? (ನೋಡಿ) ಇಗೋ,

---

* ಚೆಲುವಗಂಡ: ಸುಂದರನಾದ ಗಂಡನನ್ನು ಕೊಡುವಂಥದು.

† ಪ್ರಾತರಾಶಃ.

ಆರ್ಯ ಚಾರುದತ್ತನ ಗೆಳೆಯನಾದ ಆರ್ಯ ಮೈತ್ರೇಯನೆಂಬ ಬ್ರಾಹ್ಮಣನು ಇತ್ತಕಡೆಗೇ ಬರುತ್ತಿದ್ದಾನೆ. ಇವನನ್ನು ಕರೆದು ನೋಡುತ್ತೇನೆ. (ಮುಂದೆ ಹೋಗಿ) ಆರ್ಯ, ನಮ್ಮ ಮನೆಗೆ ಊಟಕ್ಕೆ ಬರಬೇಕು. ಆಮಂತ್ರಣ ವಿಷಯದಲ್ಲಿ (ಇವನು) ದರಿದ್ರನೆಂದು ನನ್ನನ್ನು ಕಡೆಗಣಿಸಬೇಡ. ಒಳ್ಳೆಯ ಸಮೃದ್ಧಿಯಾದ ಭೋಜನ. ತುಪ್ಪ, ಬೆಲ್ಲ, ಮೊಸರು, ಅಕ್ಕಿ,—ಎಲ್ಲಾ ಇದೆ. ಇದೂ ಅಲ್ಲದೆ ದಕ್ಷಿಣೆಯ ದುಡ್ಡುಗಳು ಬೇರೆ ಉಂಟು.

(ನೇಪಥ್ಯದಲ್ಲಿ)

ಬೇರೆ, ಬೇರೆ ಯಾರನ್ನಾದರೂ ಕರೆಯಪ್ಪಾ. ನಾನೇನು ದರಿದ್ರನಲ್ಲ.

ಸೂತ್ರಧಾರ— ತುಪ್ಪ ಬೆಲ್ಲ ಮೊಸರು ಚೆನ್ನಾಗಿ ಸೇರಿದ,
ಒಗ್ಗರಿಸಿದ ತೊವ್ವೆ ವ್ಯಂಜನಂಗಳೆಸೆಯುವ,
ಪ್ರೀತಿಯಿಂದ ಬಡಿಸೆ ಮಿಗಿಲು ರುಚಿಯ ತಾಳಿದ,
ರಸಕವಳವನಾರ್ಯ ಬಂದುಂಡು ತಣಿವುದು. ||೧||

(ಹೋಗುತ್ತಾನೆ)

ಸ್ಥಾಪನೆ ಮುಗಿಯಿತು.

(ಬಳಿಕ ವಿದೂಷಕನು ಪ್ರವೇಶಿಸುತ್ತಾನೆ)

ವಿದೂಷಕ—ಬೇರೆ, ಬೇರೆ ಯಾರನ್ನಾದರೂ ಕರೆ; ನಾನೇನು ದರಿದ್ರನಲ್ಲ. 'ನಾನು ದರಿದ್ರನಲ್ಲ' ಎಂದು ಹೇಳುತ್ತಿಲ್ಲವೇ? ಏನೆಂದೆ? ಉತ್ತಮವಾದ ಊಟ ಉಣ್ಣಲು ಸಿಕ್ಕುವುದೆಂದೋ? [1]ಬಹಳ ಸಿಹಿಯಾಗಿರುವ ಮಾವಿನ (ಹಣ್ಣಿನ) ಓಟೆಯನ್ನು ಅದು ಅಯೋಗ್ಯವಾದ್ದರಿಂದ ತಿನ್ನುವುದಿಲ್ಲ ಎಂದು ಬಲ್ಲೆ. ಅದೇಕೆ ಹೀಗೆ ನನ್ನನ್ನು ಉಬ್ಬಿಸಿ ಉಬ್ಬಿಸಿ ಮಾತಾಡುತ್ತೀಯೆ? ನನಗೆ ಕೆಲಸವಿದೆಯೆಂದು ಹೇಳುತ್ತಿದ್ದೇನೆ. ಏನೆಂದೆ? ದಕ್ಷಿಣೆಯ ದುಡ್ಡು ಉಂಟೆಂದೋ?

ಬಾಯಲ್ಲಿ ಬೇಡವೆಂದರೂ ಮನಸ್ಸು ಮಾತ್ರ ಅವನ ಹಿಂದೆಯೇ ಹೋಗುತ್ತಿದೆ. ಅಯ್ಯೋ, ಏನನ್ಯಾಯ! ನಾನು ಕೂಡ ಮತ್ತೊಬ್ಬರ ಆಮಂತ್ರಣವನ್ನು ಹೀಗೆ (ಆಸೆಪಟ್ಟು) ನೆನೆಯುತ್ತಿರುವೆನಲ್ಲಾ! ಪೂಜ್ಯ ಚಾರುದತ್ತನ ಮನೆಯಲ್ಲಿ ಇಂಗು ಹಾಕಿ ವಾಸನೆಕಟ್ಟಿದ ಬಗೆಬಗೆಯ ಅಡಿಗೆಗಳು ಹಗಲೂ ರಾತ್ರೀ ಯಥೇಚ್ಛವಾಗಿರುತ್ತಿದ್ದವು; ಹುಬ್ಬು ಕೊಂಕಿಸಿದ

ಮಾತ್ರಕ್ಕೇ ಸಿದ್ಧವಾಗಿ ಬರುತ್ತಿದ್ದವು. ನಡುನಡುವೆ ಚಪ್ಪರಿಸುತ್ತ ಕುಡಿಯುವಾಗ ಸುಗಂಧಬೀರುವ ಪಾನೀಯಗಳು ಜೇರೆ. (ಇಂಥ ಊಟದಲ್ಲಿ) ನಾನಾ ಬಗೆಯ ಭಕ್ಷ್ಯತುಂಬಿದ ಪಾತ್ರೆಗಳನ್ನು ಸುತ್ತಲೂ ಹರಡಿಕೊಂಡು ಕುಳಿತು ಬಣ್ಣದ ಪಾತ್ರೆಗಳಿಂದ ಸುತ್ತುವರಿದ ಚಿತ್ರಕಾರನಂತೆ ಕಾಣುತ್ತ ಗಂಟಲಿಗೆ ಬರುವವರೆಗೂ ತಿಂದು ಚೌಕದ ಗೂಳಿಯಂತೆ ಕಡುಬು ಮೊದಲಾದ ತಿಂಡಿಗಳನ್ನು ಮೆಲುಕುಹಾಕುತ್ತಾ ದಿನಗಳನ್ನು ಕಳೆಯುತ್ತಿದ್ದೆ. ಅದೇ ನಾನು ಈಗ ಪೂಜ್ಯ ಚಾರುದತ್ತನ ಬಡತನದಿಂದ ಪಾರಿವಾಳಗಳ ಹಾಗೆಯೇ ಸಾಧಾರಣ ವೃತ್ತಿಯನ್ನವಲಂಬಿಸಿ ಬೇರೆ ಕಡೆ ಸುತ್ತಿ ಸುತ್ತಿ (ಉಂಡು) ಅವನ ಮನೆಗೇ ಹೋಗುತ್ತೇನೆ. ಇನ್ನೊಂದಾಶ್ಚರ್ಯ! ನನ್ನ ಹೊಟ್ಟೆ (ನನಗೆ ಬಂದಿರುವ) ಅವಸ್ಥೆಯನ್ನು ತಿಳಿದುಕೊಂಡಿದೆ. ಸ್ವಲ್ಪಕ್ಕೇ ಆದರೂ ತೃಪ್ತಿಪಟ್ಟುಕೊಳ್ಳುತ್ತದೆ. ಕೊಟ್ಟರೆ ಬಹಳ ಅನ್ನದ ಭಾರವನ್ನಾದರೂ ತಾಳಬಲ್ಲದು. ಕೊಡದೆ ಇದ್ದರೆ ಕೇಳುವುದಿಲ್ಲ; ಬದಲು ಮಾತಾಡುವುದಿಲ್ಲ. ಇದರಿಂದ ನಾನೇನಸಂತುಷ್ಟನಾಗಿಲ್ಲ.

ಆದ್ದರಿಂದ ಷಷ್ಠಿಯ ದೇವಕಾರ್ಯವನ್ನು ಮಾಡಿ (ಮುಗಿಸಿ)ರುವ ಪೂಜ್ಯ ಚಾರುದತ್ತನಿಗೋಸ್ಕರ ಹೂವುಗಳನ್ನೂ [1]ಆಕಾಶದಂಥ (ನವಿರು) ಬಟ್ಟೆಯನ್ನೂ ತಂದಿದ್ದೇನೆ. ಇನ್ನು ಅವನ ಬಳಿಗೇ ಹೋಗುತ್ತೇನೆ. (ಮುಂದೆ ಹೋಗಿ, ಸುತ್ತಲೂ ನೋಡಿ) ಇಗೋ, ಪೂಜ್ಯ ಚಾರುದತ್ತನು ಹಗಲಿನ ಚಂದ್ರನಂತೆ ಮರುಕಕ್ಕೆಡೆಯಾದ ಪ್ರಿಯದರ್ಶನವುಳ್ಳವನಾಗಿ ತನ್ನ ಅನುಕೂಲಕ್ಕೆ ತಕ್ಕಂತೆ ಮನೆದೇವರುಗಳನ್ನು ಪೂಜಿಸುತ್ತಾ ಇತ್ತಕಡೆಗೇ ಬರುತ್ತಿದ್ದಾನೆ. ಅವನ ಹತ್ತಿರಕ್ಕೆ ಹೋಗುತ್ತೇನೆ. (ಹೋಗುತ್ತಾನೆ)

(ಬಳಿಕ ಬಲಿಯನ್ನು ತರುತ್ತಿರುವ ನಾಯಕನೂ ವಿದೂಷಕನೂ ಕೈಯಲ್ಲಿ *ಚಾಂಗೇರಿಯನ್ನು ತೆಗೆದುಕೊಂಡು ಚೇಟಿಯೂ ಪ್ರವೇಶಿಸುತ್ತಾರೆ)

ನಾಯಕ—(ದೊಡ್ಡದಾಗಿ ನಿಟ್ಟುಸಿರುಬಿಟ್ಟು) ಮಾನಿಯಾದವನಿಗೆ ಬಡತನ ಉಸಿರಾಡುವ ಸಾವು. ಏಕೆಂದರೆ,

ಯಾವೆನ್ನ ಮನೆಯ ಹೊಸಿಲುಗಳಲಿಟ್ಟಾ ಬಲಿಯ
ನಂಚೆಸಾರಸವಿಂಡು ತಿಂದು ಹೂಮಿಗಿಸಿತ್ತೊ,
ಅಲ್ಲೆ, ಅಂದಿನ ಬಲಿಯ ಯವೆ ಮೊಳೆತ ಬಳಿಯಲೇ
ಹಿಡಿಬೀಜ ಬೀಳುವುದು ಕೀಟಗಳು ತಿನ್ನಲಾಗಿ. ||೨||

---

* ಪುಳ್ಳಂಪರಚಿ. ಪಿತ್ತಹರವಂತೆ. ಮರುದಿನದ ಪಾರಣೆಗೆ ಇರಬಹುದು.

ವಿದೂಷಕ—ಬೇಡ, ನೀನು ಅತಿಯಾಗಿ ಶೋಕಿಸಬೇಡ. ಪುರುಷ ಯೌವನಗಳಂತೆಯೇ ಗೃಹ ಯೌವನಗಳೂ ಬೇರೆಬೇರೆ ದೆಸೆಗಳನ್ನು ಹೊಂದುತ್ತವೆ. ಬಹುಳ ಪಕ್ಷ ದ ಚಂದ್ರನ ಬೆಳುದಿಂಗಳಳಿವಿನಂತೆ ಕಡಲ ಕರೆಯವರೆಗೂ ಎಲ್ಲರಿಗೂ ದಾನಮಾಡಿ ಸಂಪತ್ತನ್ನು ಕಳೆದುಕೊಂಡಿರುವ ನಿನ್ನ ಬಡತನವು ರಮಣೀಯ ವಾಗಿದೆ.

ನಾಯಕ—ಕಳೆದುಹೋದ ಸಂಪತ್ತಿಗಾಗಿ ನಾನು ಶೋಕಿಸುತ್ತಿಲ್ಲವಪ್ಪಾ. ಗುಣದ ರುಚಿಯನ್ನರಿತ ಮನುಷ್ಯನಿಗೆ ವ್ಯಸನ ದಾರುಣತರವೆಂದು ನನಗೆ ತೋರು ತ್ತದೆ. ಏಕೆಂದರೆ,

ಸುಖ, ದುಃಖವನುಭವಿಸಿದಾಬಳಿಕ ಶೋಭಿಪುದು
ಕತ್ತಲೆಯ ಕಡೆಯಿಂದ ದೀಪವನು ಕಾಣುವಂತೆ.
ಸುಖದಿಂದ ಬಡತನಕೆ ಜೀಳ್ವನಾವನೊ ಅವನು
ಮೈವೆತ್ತನಾದರೂ ಸತ್ತಂತೆ ಬಾಳುತಿಹನು. ||೩||

ವಿದೂಷಕ—ಅಯ್ಯಾ ಮಿತ್ರ, ಸಮುದ್ರ ಪಟ್ಟಣಗಳ ಸಾರವಾಗಿದ್ದ ಅಷ್ಟೊಂದು ಧನಸಂಪತ್ತೂ ಎಲ್ಲಿ ಹೋಯಿತು ?

ನಾಯಕ—(ನಿಟ್ಟುಸಿರುಬಿಟ್ಟು) ಮಿತ್ರ, ನನ್ನ ಅದೃಷ್ಟ ಎಲ್ಲಿ ಹೋಯಿತೋ ಅಲ್ಲಿಗೆ. ನೋಡು,

ಕರಗಿದುದು ನೇಹಿಗರ ಕಾರ್ಯಗಳಲೆನ್ನ ಸಿರಿ.
ಎರೆದೆನ್ನ ಬರಿಗೈಯಲೈದಿದನ ಕಂಡರಿಯೆನು.
ಆದರಿದೊ ನಂಬಿಕೆಯ ಬೆಲೆಗೊಟ್ಟು ಕೊಂಡಿರುವ
ಸತ್ತ್ವ, ಕೇಳೆಲೆ ಗೆಳೆಯ, ಕೊರೆಯತಾಸ್ಪೈದದಿಹುದು. ||೪||

(ಚಿಂತೆಯನ್ನು ನಟಿಸುತ್ತಾನೆ)

ವಿದೂಷಕ—ಏನು, ನೀನು ಧನಸಂಪತ್ತನ್ನು ಕುರಿತು ಚಿಂತಿಸುತ್ತಿರುವೆಯಾ ?

ನಾಯಕ— ಹಣ ಹೋದ ಕೊರತೆ ತಾನಿನಿತಿಲ್ಲ ನನಗೆ, ನಿಜ.
ಭಾಗ್ಯವಿರೆ ಹಣ ಮತ್ತೆ ಕೈಗೂಡಿ ಬಹುದು.
ಇದೆ ನನ್ನ ಸುಡುತಿಹುದು : ಧನದ ಸಿರಿ ಹೋದೆನಗೆ
ಸಜ್ಜನರ ನೇಹಗಳು ಸಡಿಲಗೊಳ್ಳುವುವು. ||೫||

ಇದೂ ಅಲ್ಲದೆ,

ಬಡತನಕೆ ಬಿದ್ದವನ ಮಾತ ಕೇಳರು ಬಂಧು
ಜನಗಳಾದರದಿಂದ; ಸತ್ತ್ವ ನಗೆಗೀಡಹುದು;
ಶೀಲಶಶಿಯಾ ಕಾಂತಿ ಕುಂದಿ ಮಿಗೆ ಕಂದುವುದು;
ಹಗೆಯಿಲ್ಲದೆಯೆ ಹಿತವರೆಲ್ಲ ಮುಖದಿರುಹುವರು;
ಬೆಳೆವುವಾಪತ್ತುಗಳು; ಮತ್ತಾರೊ ಮಾಡಿರುವ
ಪಾಪಕರ್ಮವನಿವನೆ ಮಾಡಿದವನೆಂದೆಣಿಪರು. ||೬||

ವಿದೂಷಕ—ಈಗ ಈ ಬಡ್ಡೀಮಗಸೋವು ಹಣದ ವ್ಯವಹಾರಗಳು ದನಕಾಯುವ ಹುಡುಗರಂತೆ ಸೊಳ್ಳೆಗಳಿಗೆ ಹೆದರಿಕೊಂಡು ಮನೆಬಿಟ್ಟು ಹೊರಟುಹೋಗುತ್ತಿವೆ. ಮತ್ತೆ ಮತ್ತೆ ಚಿಂತಿಸುವುದರಿಂದ ಹಣ ಹೋದ ಈ ದುಃಖಕ್ಕೆ ವಸಂತಕಾಲದಲ್ಲಿ ಹಳೆಯ ಜೊಂಡಿನ ಕೂಳೆಗೆ ಹೇಗೋ ಹಾಗೆ ಹೊಸ ಹೊಸ ಕುಡಿಗಳು ಹುಟ್ಟುತ್ತವೆ. ಆದ್ದರಿಂದ ಇನ್ನು ನೀನು ಸಂಕಟಪಡುವುದು ಸಾಕು.

ನಾಯಕ—ಮಿತ್ರ, ಅದೇಕೆ ಸಂತಾಪಪಡಲಿ? ನಾನೇನು ದರಿದ್ರನೆ? ನನಗೆ,

ವಿಭವಕನುಗುಣೆಯೆನ್ನ ಮಡದಿ; ಸುಖದುಃಖದಲಿ
ಸಮನಾದವನು ನೀನು; ಸತ್ತ್ವ ಕೈಬಿಡದಿಹುದು.
ಕೇಳ್ ದರಿದ್ರರಲಿದನು ಕಾಣಲರಿದು. ||೭||

(ಬಳಿಕ ಗಾಬರಿಯಾಗಿ ವಿಟ ಶಕಾರರಿಂದ ಹಿಂಬಾಲಿಸಲ್ಪಟ್ಟು ಸೂಳೆ ಪ್ರವೇಶಿಸುತ್ತಾಳೆ)

ಶಕಾರ—ನಿಲ್ಲು, ನಿಲ್ಲು, ವಶಂತಶೇಣೇ, ನಿಲ್ಲು.

ಯಾಕೆ ಹೋಗುವೆ, ಓಡಿ ಹಾರುವೆಯೆ, ತತ್ತರಿಶುತ?
ಒಳ್ಳೇದು, ದಯತೋರು; ನೀ ಶಾಯೆ; ನಿಲ್ಲು, ನಿಲ್ಲು.
ಈಗ ಕಾಮದಿ ನನ್ನ ಮೈಯೆಲ್ಲ ಶುಡುಶುಡುತಿದೆ
ಕೆಂಡದೊಳಗಡೆ ಬಿದ್ದ ಚಕ್ಕಳದ ಚೂರಿನಂತೆ. ||೮||

ವಿಟ—ವಸಂತಸೇನೇ,

ನೀನೇಕೆ ಭಯದಿಂದ ಮಾರ್ದವವ ಮಾರ್ಪಡಿಸಿ
ನರ್ತನದ ಚಳಕದೀ ಚರಣಗಳನೆತ್ತಿಡುತ,
ದಿಗಿಲ ತಳರ್ನ್ನೋಟವನು ಕಡೆಗಣ್ಗೆ ತಂದಿಟ್ಟು,
ಬೆಂಬತ್ತೆ ಹುಲಿ ಹೆದರಿದಾ ಹರಿಣಿಯಂತೆ ನಡೆವೆ? ||೯||

ಶಕಾರ—ಭಾವ, ಇಗೋ ಈ ವಶಂತಶೇಣೆ ಹೋಗುತ್ತಿದ್ದಾಳೆ.

ನಮ್ಮಿಬ್ಬರಿಂದ ಬೆಂಬತ್ತಿದವಳಾಗಿಹಳು
ಹೆಣ್ಣುನರಿ ನಾಯ್ಗಳಿಂದೆಂತೊ ತಾನಂತೆ;
ಅಂದುಗೆಯನಿಟ್ಟವಳು, ಪಟ್ಟಿಯುಲಿನಗೆಯುವಳು,
ಶುತ್ತುಪೊರೆಯೊಡನೆನ್ನ ಗುಂಡಿಗೆಯನೆಳೆದು. ||೧೦||

ವಿಟ—ವಸಂತಸೇನೇ,

ಏಕೆ ನಡೆಯುವೆ ನೀನು ಅಡಿಗೆ ನೂರಡಿಯಿಡುತ,
ಗರುಡನಂಜಿಕೆಯಿಂದ ತಲ್ಲಣಿಸಿದುರಗಿಯಂತೆ?
ವೇಗದಿಂ ಬರುತಿಹೆನು, ನಾ ಗಾಳಿಗೆಣೆಯುವನು.
ನಿನ್ನ ಹಿಡಿಯಲು ಶಕ್ತಿ ನನಗಿಲ್ಲವೇನು? ||೧೧||

ಸೂಳೆ—(ಎಲ್ಲ ಕಡೆಗೂ ನೋಡಿ) ಪಲ್ಲವಕಾ, ಪಲ್ಲವಕಾ! ಪರಭೃತಿಕೇ, ಪರಭೃತಿಕೇ! ಮಧುಕರಕಾ, ಮಧುಕರಕಾ! ಶಾರಿಕೇ, ಶಾರಿಕೇ! ಅಯ್ಯೋ, ನನ್ನ ಪರಿಜನರೆಲ್ಲ ಮರೆಯಾದರಲ್ಲ! ಇಲ್ಲಿ, ನಾನೇ ನನ್ನನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಶಕಾರ—ಕೂಗು, ಕೂಗು, ಹೆಣ್ಣೇ! ಪಲ್ಲವನನ್ನಾದರೂ ಕೂಗು, ಪರಭೃತಿಕೆಯನ್ನಾದರೂ ಕೂಗು; ಮಧುಕರವನ್ನಾದರೂ ಕೂಗು; ಶಾರಿಕೆಯನ್ನಾದರೂ ಕೂಗು; ಶರ್ವವಶಂತಮಾಶವನ್ನು ಬೇಕಾದರೂ ಕೂಗು. ಯಾರು, ಯಾರು ನಿನ್ನನ್ನು ಉದ್ಧಾರಮಾಡುವವರು?

[6]ಹೆಣದೂರ ಒಡೆಯನಾ ವಾಶುದೇವನೊ ಏನು?
ಅಲ್ಲದಿರೆ ಕುಂತಿಯಾ ಮಗನು ಜನಮೇಜಯನೊ?
ನಾ ನಿನ್ನ ಕೂದಲಿಗೆ ಕೈಹಾಕಿ ಹಿಡಿದು ಕೊಂ
ಡೆಳೆತರುವೆ ಶೀತೆಯನು ದುಶ್ಶಾಶನನ ಹಾಗೆ. ||೧೨||

ವಿಟ—ವಸಂತಸೇನೇ, ನನ್ನ ಮನಸ್ಸು ಎಲ್ಲಿಯೂ ಭಯವನ್ನು ಕಂಡರಿಯದೆಂದು ತಿಳಿದುಕೊ. ನೋಡು,

ಶೀಲದೋಷದಿ ನನಗೆ ಬಳಕೆ ಕತ್ತಲೆಯಿರುಳು.
ಕರಿದಿಂಗಳಿನ ಕಪ್ಪು ಸಂದಿಗಳ ದಾಟಿಹೆನು.
ಯುವತಿಯೆದುರಿಗೆ ಹೇಳಲಾಗದಿದನಾದರೂ
ಪೇಟೆಗಳಲಳಿದುಳಿದ ಕಾವಲರೆ ಸಾಕ್ಷಿ ನನಗೆ. ||೧೩||

ಸೂಳೆ—ಹಾಂ! ಈಗ ನನಗೆ ಅನುಮಾನಕ್ಕೆ ಬಂತು. ಇವನೋ ತನ್ನ ಗುಣಗಳನ್ನು ತಾನೇ ಹೇಳಿಕೊಳ್ಳುತ್ತಿದ್ದಾನೆ. ಹೇಗೆತಾನೇ ಇವರು ಕೆಟ್ಟಕೆಲಸ ಮಾಡದೆ ಇದ್ದಾರು?

ವಿಟ—ವಸಂತಸೇನೆ, ನಮ್ಮ ಒಲವನ್ನು ಅಂಗೀಕರಿಸು. ನೋಡು,

ಮುರಿಯಲನುನಯುವನದು ರೋಷವನು ಕೆರಳಿಪುದು.
ಕೆರಳೆ ನಮ್ಮಂಥವರಿಗೇನುತಾನೇ ಅರಿದು?
ಒಲಿಸುತಿದೆ ಬಲ ತುಂಬಿದೀ ತೋಳು, ಕತ್ತಿನೀಡಿ.
ಹೆಣ್ಣಕೊಲೆಯಿಂದೆನ್ನ, ನಿನ್ನೊಡಲ, ರಕ್ಷಿಸುವುದು. ||೧೪||

ಸೂಳೆ—ಇವನ ಅನುನಯವೂ ಭಯಪಡಿಸುತ್ತದೆ.

ಶಕಾರ—ವಶಂತಶೇಣೇ, ಶರಿಯಾಗಿ ಹೇಳುತ್ತಾನೆ. ಭಾವ. ಬಲಿಷ್ಠರಾದವರಲ್ಲಿ ದುರ್ಲಭವಾದ ಅನುನಯವನ್ನು ಆದರಿಶಲೇ ಬೇಕಷ್ಟೆ. ನೋಡು ಹುಡುಗಿ,

ಕತ್ತಿ ಚೂಪಾಗಿದೆ; ನವಿಲ ಕತ್ತಿನ ಹಾಗೆ ಕಪ್ಪಾಗಿದೆ.
ಇಡುವೆನಿದ ನೆತ್ತಿಗೆ; ಇಲ್ಲವಾದರೆ ನಿನ್ನ ಕೊಂದಿಕ್ಕುವೆ.
ಶಾಕು ಶಾಕಿನ್ನಿದು, ನಮ್ಮಂಥವರಿಗೆ ಶಿಟ್ಟೆಬ್ಬಿಶುವುದು.
ಶತ್ತವನು ಯಾರೋ, ಅವನು ಜೀವಿಶುವುದೇ ಇಲ್ಲ ಮತ್ತೆ. ||೧೫||

ಸೂಳೆ—ಆರ್ಯ, ಕುಲಪುತ್ರರಾದವರ ಶೀಲವನ್ನೂ ತೃಪ್ತಿಯನ್ನೂ ಆಶ್ರಯಿಸಿ ಜೀವಿಸುವ ಸೂಳೆ ನಾನು.

ವಿಟ—ಅದಕ್ಕೇ ತಾನೆ ನಾವು ಪ್ರಾರ್ಥಿಸುತ್ತಿರುವುದು.

ಸೂಳೆ—ಆರ್ಯ, ಈ ಜನದಿಂದ (ನಿಮಗೆ) ಏನು ಬೇಕಾಗಿದೆ. ಶರೀರವೋ ಅಥವಾ ಅಲಂಕಾರವೋ?

ವಿಟ—ಒಳ್ಳೆಯ ಹೂವು ಬಿಡಿಸುವುದು ಉಚಿತವಲ್ಲ. ಬೇಡ ಅಲಂಕಾರ.

ಸೂಳೆ—ಹಾಗಾದರೆ, ಈಗ ನಾನು ಕೊರಗು ಹಚ್ಚಿಕೊಳ್ಳಬೇಕಾಗಿಲ್ಲ.

ಶಕಾರ—ವಶಂತಶೇಣೇ, ನಾನು ಅರಶುಮಗ. ನನಗೆ ಒಲಿದು ಬಾ.

ಸೂಳೆ—ತಣ್ಣಗಾಗಿ ಹೋಗು.[7]

ಶಕಾರ—ಕೇಳು, ಭಾವಾ, ಕೇಳು. ಈ ವಶಂತಶೇಣೆ ನನಗೆ ತಣ್ಣಗಿರು ಎಂದು ಹೇಳುತ್ತಾಳೆ.

ವಿಟ—(ತನ್ನಲ್ಲೇ) ತನ್ನ ಮೇಲೆ ರೋಷಗೊಂಡಿರುವಳೆಂದು ತಿಳಿಯದು ಈ ಮೂರ್ಖನಿಗೆ. 'ಹಾಳಾಗಿ ಹೋಗು' ಎಂದರೆ 'ಸುಖವಾಗಿರು' ಎಂದು ತಿಳಿದುಕೊಳ್ಳುತ್ತಾನೆ. ಇದೂ ಅಲ್ಲದೆ,

ಅಭಿನಯಿಸುವನು ಮಾತ ಮೈಕೈಗಳಿಂದೆಲ್ಲ.
ಏನೇನೊ ಎಣಿಸದರ್ಥವ ನುಡಿವನು.
ತಕ್ಕುದಲ್ಲದ ನಡತೆ; ಬುದ್ಧಿಯಿಲ್ಲದ ಮಾತು;
ಪುರುಷರೂಪದ ಪಶುವಿನಪರಾವತಾರ. ||೧೬||

(ಪ್ರಕಾಶವಾಗಿ) ವಸಂತಸೇನೇ, ಏನಿದು ? ನನ್ನೆದುರಿಗೆ ಸೂಳೆಗೇರಿಗೆ ವಿರುದ್ಧವಾದ ಮಾತಾಡಿದೆಯಲ್ಲಾ. ನೋಡು,

ತರುಣಜನಗಳ ನೆರವು ಸೂಳೆಗೇರಿಯು, ನೋಡು.
ತಿಳಿ, ನೀನು ಸೂಳೆ, ದಾರಿಯ ಬಳ್ಳಿಯಂತೆಂದು.
ಹಣಕೆ ಕೊಳ್ಳಲು ಬರುವ ಕ್ರಯದೊಡವೆ ನಿನ್ನೊಡಲು.
ಒಲಿದವನೊ ಒಲಿಯದನೊ ಉಪಚರಿಸು ಒಂದೆ ಪರಿ ಭದ್ರೆ. ||೧೭||

ಸೂಳೆ—[8]ಈ ನನ್ನ ನಿರ್ಧಾರವನ್ನು ಕುಲೀನರು ತೂಗಿ ಬೆಲೆ ಕೊಡುವರು.

ಶಕಾರ—ಭಾವ, ಈ ಬೀದಿಯಲ್ಲಿ ದಟ್ಟವಾಗಿ ಕಗ್ಗತ್ತಲೆ ಕವಿದಿದೆ. ಇಲ್ಲಿ ಹೆಂಗಸು ತಪ್ಪಿಸಿಕೊಂಡು ಹೋಗಿಬಿಟ್ಟಾಳು. ಆಃ! ಕಾಮದೇವನ ಉತ್ಸವವಾದಾಗಿನಿಂದಲೂ ಕಣ್ಣಿಗೆ ಮಾತ್ರ ಚೆನ್ನಾಗಿ ಕಾಣುವ ದರಿದ್ರ ವರ್ತಕನ ಮಗ ಆ ಹೈದ ಚಾರುದತ್ತನನ್ನು ಕಾಮಿಶುತ್ತಿದ್ದಾಳೆ. ಇದು ಅವನ ಮನೆಯ ಪಕ್ಕಬಾಗಿಲು.

ಸೂಳೆ—(ಹರ್ಷದಿಂದ, ತನ್ನಲ್ಲಿಯೇ) ಇದು ಆತನ ಮನೆಯೇ ? ದೈವಯೋಗದಿಂದ ಆಗದವರ ನಿರ್ಬಂಧದಿಂದಲೇ ಇಷ್ಟಜನರ ಹತ್ತಿರಕ್ಕೆ ತರಲ್ಪಟ್ಟವಳಾದೆ. ಆಗಲಿ, ಹೀಗೆ ಮಾಡುತ್ತೇನೆ. (ಸರಿದು ಹೋಗುತ್ತಾಳೆ)

ಶಕಾರ—(ನೋಡಿ) ಭಾವಾ, ತಪ್ಪಿಶಿಕೊಂಡಳು; ಹೆಂಗಶು ತಪ್ಪಿಶಿಕೊಂಡಳು.

ವಿಟ—ಹೇಗೆ ತಪ್ಪಿಸಿಕೊಂಡಳು ? ಹುಡುಕು, ಹುಡುಕು.

ಶಕಾರ—ಭಾವಾ, ಕಾಣುವುದಿಲ್ಲ.

ವಿಟ—ಅಯ್ಯೋ, ಮೋಸಹೋದೆವು. ವಸಂತಸೇನೇ, ಸಿಕ್ಕಿಬಿದ್ದೆ. ಈಗ,

ಸಂಜೆಗತ್ತಲೆಯಿಂದ ನೀ ಕಾಣೆಯಾದರೂ
ಕಾರ್ಮುಗಿಲ ಬಸಿರೊಳವಿತಿಹ ಮಿಂಚಿನಂತೆ,
ಗಾಳಿಯಲಿ ಬರುವ ಸರುಗಂಪು, ದನಿಗೈದುಲಿವ
ಒಡವೆಗಳು, ನಿನ್ನೆಡೆಯ ಸೂಚಿಸುವುವು. ||೧೮||

(ಸೂಳೆ ಮಾಲೆಯನ್ನು ತೆಗೆದೆಸೆದು ಒಡವೆಗಳನ್ನೂ ಕಳಚುತ್ತಾಳೆ)

ವಿಟ—ಈ ಕತ್ತಲೆ ಎಷ್ಟು ದಟ್ಟವಾಗಿದೆ! ಈಗಲಾದರೋ,

ತಮ ಮೈಗೆ ಬಳಿವಂತೆ, ಬಾನ್ ಕಪ್ಪು ಕರೆವಂತೆ,
ತಗದರೂಳಿಗದಂತೆ, ದೃಷ್ಟಿ ನಿಷ್ಫಲವಾಯಿತು. ||೧೯||

ಇದೂ ಅಲ್ಲದೆ,

ಸುಲಭ ರಕ್ಷಣೆಯಹುದು, ಭಯಕಿದಾಶ್ರಯವಹುದು,
ಕಗ್ಗಾಡು ಕಗ್ಗತ್ತಲೆರಡೊಂದೆ ರೀತಿ ಹೌದು.
ಇಬ್ಬರನ್ನೂ ರಕ್ಷಿಸುವುದು ಕಗ್ಗತ್ತಲೆಯು
ಬೆದರಿಕೆಯ ಬೀರುವವನನದರಿಂದ ಬೆದರುವನನೂ. ||೨೦||

ಹಾಗೆಯೇ,

ಬೆಳಕಿಂದೆ ಹರಡಿದ್ದು ತಟ್ಟನೀ ಕತ್ತಲೆಗೆ
ಬರಲೆನ್ನ ಕಣ್ಣೋಟ ಕಟ್ಟಿಹೋಯ್ತು.
ತೆರೆದಿರುವುದಾದರೂ ಕಣ್ಣು ಕತ್ತಲೆಯಿಂದ
ಮುಚ್ಚಿರುವಹಾಗೆಯೇ ತೋರುತಿಹುದು. ||೨೧||

ಸೂಳೆ—ಓಹೋ, ಗೋಡೆಯ ವ್ಯತ್ಯಾಸವನ್ನು ನೋಡಿದರೆ ಪಕ್ಕಬಾಗಿಲು ಇಲ್ಲಿದೆಯೆಂದು ತೋರುತ್ತದೆ. (ಸುಣ್ಣಬಣ್ಣಗಳನ್ನು)[1] ಉಪಯೋಗಿಸದೆ ಕೊಳೆಯಾಗಿರುವುದರಿಂದ ಇಲ್ಲಿ ಕತ್ತಲೆ ಹೆಚ್ಚು. ಆದ್ದರಿಂದ ಇಲ್ಲಿಯೇ ನಿಂತುಕೊಳ್ಳುತ್ತೇನೆ. (ನಿಲ್ಲುತ್ತಾಳೆ)

ನಾಯಕ—ಮೈತ್ರೇಯ, ಹೋಗು. ಚೌಕದಲ್ಲಿ ಮಾತೃದೇವತೆಗಳಿಗೆ ಬಲಿಯನ್ನು ತೆಗೆದುಕೊಂಡುಹೋಗು.

ವಿದೂಷಕ—ನನಗೆ ಶ್ರದ್ಧೆಯಿಲ್ಲ. ಬೇರೆಯವರು ಹೋಗಲಿ.

ನಾಯಕ—ಏಕೆ?

ವಿದೂಷಕ—ನನ್ನ ಬುದ್ಧಿ ಕನ್ನಡಿಯೊಳಗೆ ಮೂಡಿದ ಪ್ರತಿಬಿಂಬದಂತೆ ತಿರುಗಮುರುಗಾಗಿ, ವಿಮುಖರಾದವರಲ್ಲಿ ದಾಕ್ಷಿಣ್ಯವುಳ್ಳದ್ದೂ ದಾಕ್ಷಿಣ್ಯವುಳ್ಳವರಲ್ಲಿ ವಿಮುಖವೂ ಆಗಿದೆ.

ನಾಯಕ—ಮೂರ್ಖ, ಇರುವಷ್ಟು ವೈಭವದಿಂದಲೇ ಪೂಜೆ ಮಾಡಬೇಕು. ಭಕ್ತಿಯಿಂದ ಸಂತುಷ್ಟರಾಗುತ್ತಾರೆ ದೇವತೆಗಳು. ಆದ್ದರಿಂದ ಹೋಗು.

ವಿದೂಷಕ—ನಾನೊಬ್ಬನೇ ಹೇಗೆ ಹೋಗಲಿ?

ನಾಯಕ—ರದನಿಕೇ, ಈತನ ಜೊತೆಯಲ್ಲಿ ಹೋಗು.

ರದನಿಕೆ—ಸ್ವಾಮಿಯವರ ಅಪ್ಪಣೆಯ ಪ್ರಕಾರ.

ವಿದೂಷಕ—ಅಮ್ಮಾ, ನಾನು ದೀಪವನ್ನು ತರುತ್ತೇನೆ.

*ನಾಯಕ—ನಿನ್ನಿಷ್ಟ ಹೇಗೋ ಹಾಗೆಯೇ ಆಗಲಿ.

ವಿದೂಷಕ—(ದೀಪವನ್ನು ಹಿಡಿದುಕೊಂಡು) ಏ ರದನಿಕೆ, ಪಕ್ಕಬಾಗಿಲನ್ನು (ಹಿಂದಕ್ಕೆ) ತೆಗೆ.

ರದನಿಕೆ—ಆಗಲಿ. (ಬಾಗಿಲು ತೆಗೆಯುವುದನ್ನು ನಟಿಸುತ್ತಾಳೆ)

(ಸೂಳೆ ಸೆರಗಿನಿಂದ ದೀಪವನ್ನು ಆರಿಸುತ್ತಾಳೆ)

ವಿದೂಷಕ—ಅಯ್ಯೋ! ಅಯ್ಯೋ!

ನಾಯಕ—ಮಿತ್ರ, ಏನದು?

ವಿದೂಷಕ—ಪಕ್ಕಬಾಗಿಲನ್ನು ತೆರೆದ ಕೂಡಲೇ ರಾಜಮಾರ್ಗದಲ್ಲಿ ವ್ಯಾಪಿಸಿದ್ದ ಗಾಳಿ ಒಟ್ಟುಗೂಡಿ ಒಳಕ್ಕೆ ನುಗ್ಗಿ ಹೊರಹೊರಡುತ್ತಿದ್ದ ನನ್ನ ಕೈಯಲ್ಲಿದ್ದ ದೀಪವನ್ನು ತಟಕ್ಕನೆ ಆರಿಸಿಬಿಟ್ಟಿತು.

ನಾಯಕ—ಛೀ, ಮೂರ್ಖ.

ವಿದೂಷಕ—ನನ್ನ ಅಪರಾಧ ಬಹು ಸ್ವಲ್ಪ. ರದನಿಕೇ, ಹೋಗು, ಚೌಕದಲ್ಲಿ ನನ್ನನ್ನು ಕಾಯುತ್ತಿರು. ಅಷ್ಟರಲ್ಲಿ ನಾನು ಕೂಡ ಒಳಗಿನ ತೊಟ್ಟಿಯಿಂದ ದೀಪವನ್ನು ತೆಗೆದುಕೊಂಡು ಬರುತ್ತೇನೆ. (ಹೋಗುತ್ತಾನೆ)

ಚೇಟಿ—ಆರ್ಯ, ಹಾಗೇ ಆಗಲಿ. (ಮುಂದೆ ಹೋಗುತ್ತಾಳೆ)

ಸೂಳೆ—ಸದ್ಯ ನಾನು ಒಳಗೆ ಹೋಗುವುದಕ್ಕೆ ಬಾಗಿಲು ತೆರೆಯಿತು! [10]ನಡವಳಿಕೆಗಾಗಿ ಅಂಜಬೇಕಾದ್ದಿಲ್ಲ. ಇನ್ನು ಒಳಕ್ಕೆ ಹೋಗುತ್ತೇನೆ. (ಒಳಕ್ಕೆ ಹೋಗಿ ನಿಂತುಕೊಳ್ಳುತ್ತಾಳೆ)

ವಿಟ—(ಸುತ್ತ ನೋಡಿ, ತನ್ನಲ್ಲಿಯೇ) ಇವಳು ಯಾವಳೋ ಮನೆಯಿಂದ ಹೊರಟು ಬರುತ್ತಿದ್ದಾಳೆ. ಆಗಲಿ, ಇವಳಿಂದ ಈ ಹಾಳಾದವನನ್ನು ವಂಚಿಸುತ್ತೇನೆ. (ಪ್ರಕಾಶವಾಗಿ) ಪರಿಮಳಯುಕ್ತವಾದ ಸ್ನಾನಧೂಪದ ವಾಸನೆ ಬರುವಂತಿದೆ.

ಶಕಾರ—ಹೌದು ಭಾವ. ಕೇಳುತ್ತಿದ್ದೇನೆ ಈ ವಾಶನೆಯನ್ನು, ಕಿವಿಗಳಿಂದ. ಕತ್ತಲೆ ತುಂಬಿರುವ ಮೂಗಿನ ಶೊಳೆಗಳಿಂದ ಚೆನ್ನಾಗಿ ಕಾಣಲಾರೆ.

ವಿಟ—ನಿಲ್ಲು, ನಿಲ್ಲು, ಎಲ್ಲಿಗೆ ಹೋಗುತ್ತೀಯ? (ಚೇಟಿಯನ್ನು ಹಿಡಿದುಕೊಳ್ಳುತ್ತಾನೆ)

(ಚೇಟಿ ಭಯದಿಂದ ನೆಲಕ್ಕೆ ಬೀಳುತ್ತಾಳೆ)

---

* ರದನಿಕೆ ಎಂದಿರಬೇಕಲ್ಲವೇ?

ಶಕಾರ—ಹಿಡಿದುಕೋ, ಭಾವಾ, ಹಿಡಿದುಕೊ.

ವಿಟ— ಇವಳು ಯೌವನ ಗರ್ವದಿಂದ ಕುಲಪುತ್ರರಿಗೆ
ಅವಮಾನ ಮಾಡಿದವಳು,
ಹೂವಿಟ್ಟಲಂಕರಿಸತಕ್ಕ ಮುಡಿಗೂದಲಿಂ
ದವಮಾನ ಪಟ್ಟಿರುವಳು. ||೨೨||

ಶಕಾರ—ಭಾವಾ, ಹಿಡಿದುಕೊಂಡೆಯೋ ?
ವಿಟ—ಹಾಗಲ್ಲದೆ ಏನು ? ವಾಸನೆಯನ್ನನುಸರಿಸಿ ಹೋಗಿ ಹಿಡಿದೆ, ಇವಳನ್ನು.
ಶಕಾರ—ಈ ಬಡ್ಡೀಮಗಳ ತಲೆಕತ್ತರಿಸಿ ಆ ಮೇಲೆ ಶಾಯಿಶಿಬಿಡುತ್ತೇನೆ.
ವಿಟ—ಹಿಡಿದುಕೋ ಮತ್ತೆ.
ಶಕಾರ—(ಚೇಟಿಯನ್ನು ಹಿಡಿದುಕೊಂಡು)

ಇಗೊ ಹಿಡಿದೆನಿವಳನೀ ಹುಡುಗಿಯಾ ತಲೆಯನ್ನು,
ಕೂದಲನು, ಕುರುಳನ್ನು, ತಲೆಗೂದಲನ್ನು.
ಕೂಗಾಡು, ಗೋಳಾಡು, ಅಳು, ದೈನ್ಯದಿಂದಾ ಮ
ಹೇಶ್ವರನ, ಶಂಕರನ, ಈಶ್ವರನ, ಕರೆದು. ||೨೩||

(ಚೇಟಿಯನ್ನು ಬಲವಂತದಿಂದ ಎಳೆಯುತ್ತಾನೆ)

ಚೇಟಿ—ಸ್ವಾಮಿಾ, ಏನು ಮಾಡುತ್ತಿದ್ದೀರಿ ?
ಶಕಾರ—ಭಾವ, ದನಿ ನೋಡಿದರೆ ಇವಳು ವಶಂತಶೇಣೆ ಅಲ್ಲವೆಂದು ನನಗೆ ತೋರುತ್ತದೆ.
ವಿಟ—ಬಿಡಬೇಡ. ಇವಳು ವಸಂತಸೇನೆಯೇ ಹೌದು.

ರಂಗಕ್ಕೆ ಬಂದವಳು ; ಕಲೆಗಳನು ಕಲಿತವಳು ;
ಬೇರೆ ದನಿಯಲಿ ನುಡಿವ ಚದುರೆ; ಬಿಡಲಾಗದಿವಳ. ||೨೪||

(ಪ್ರವೇಶಿಸಿ)

ವಿದೂಷಕ—(ದೀಪವನ್ನು ಹಿಡಿದುಕೊಂಡು) ರಾಜಬೀದಿಯಲ್ಲಿ ಹರಡಿ ತಣ್ಣಗೆ ಬೀಸುತ್ತಿರುವ ಮೆಲುಗಾಳಿಯಿಂದ ಹೆಜ್ಜೆ ಹೆಜ್ಜೆಗೂ ಕಲಕಿ ಕಲಕಿ ತೆರೆಯೇಳುತ್ತಿರುವ ಎಣ್ಣೆ ತುಂಬಿದ ಹಣತೆಯ ದೀಪವನ್ನು ಹೇಗೋ ಕಾಪಾಡಿಕೊಂಡು ತೆಗೆದುಕೊಂಡು ಬಂದೆ.

ಚೇಟಿ—(ಶಕಾರನನ್ನು ಒದೆಯುತ್ತಾ, ಅಳುತ್ತಾ) ಆರ್ಯ ಮೈತ್ರೇಯ, ಇದು ಅವ ಮಾನವೋ ಅಥವಾ ದರ್ಪವೋ ?

ವಿದೂಷಕ—ಕೂಡದು, ಕೂಡದು. (ಕತ್ತಿ ಹಿಡಿದ ವಿಟನನ್ನೂ ಶಕಾರನನ್ನೂ ನೋಡಿ, ಅನುಮಾನಪಟ್ಟು ನಿಲ್ಲುತ್ತಾನೆ)

ವಿಟ—ಓಹೋ, ಇವನು ಆರ್ಯ ಚಾರುದತ್ತನ ಮಿತ್ರ ಮೈತ್ರೇಯ! ಇವಳೂ ವಸಂತಸೇನೆಯಲ್ಲ! ಮಹಾ ಬ್ರಾಹ್ಮಣ, ಇನ್ನೊಬ್ಬಳೆಂಬ ಅನುಮಾನದಿಂದ ಹೀಗೆ ಮಾಡಿದೆವು; ದರ್ಪದಿಂದಲ್ಲ. ನೋಡು,

ಸೆಳೆದುಯ್ವೆವೊಬ್ಬಳನು, ನಮ್ಮ ಕಾಮಿಸದಳನು,
ತನ್ನ ಹರೆಯಕೆ ತಾನೆ ಒಡತಿಯಾದಳನು.
ಜಾರಿ ನುಸುಳಿದಳವಳು. ಅವಳೆಂಬ ಸಂದೇಹ
ದಿಂದ ಶೀಲದಲಿಂತು ಮೋಸವಾಯ್ತು. ||೨೫||

ಶಕಾರ—ಅಯ್ಯೋ, ದರಿದ್ರವರ್ತಕನ ಮಗ ಚಾರುದತ್ತ ಹೈದನ ಚೇಟಿ ಇವಳು. ವಶಂತಶೇಣೆಯಲ್ಲ. ಭೇಷ್, ವಶಂತಶೇಣೇ, ಭೇಷ್! ಕತ್ತಲೆಯ ನಡುವೆ ಭಾವನನ್ನು ವಂಚಿಸಿದೆ. ಮರುಳುಮೋಶದ ನಡತೆಯವಳಾದ ನಿನ್ನಿಂದ ನಾನೂ ಮೋಶಹೋದೆ. ಅಂತೂ ಕೆಲಶ ಕೈಮೀರಿತು.

ವಿದೂಷಕ—ಬೇಡ, ಕೂಡದು. ಇದು ಸರಿಯಲ್ಲ.

ವಿಟ—ಅಯ್ಯಾ ಮಹಾಬ್ರಾಹ್ಮಣ, ಕೈಮುಗಿಯುತ್ತೇನೆ. ಇನ್ನೇನು ತಾನೇ ಮಾಡಲಿ ?

ವಿದೂಷಕ—ಆಗಲಿ, ಆಗಲಿ. ನಿನ್ನಲ್ಲಿ ತಪ್ಪಿಲ್ಲ. ನೀನು ಕ್ಷಮೆ ಬೇಡುವುದಕ್ಕೆ ಅವಕಾಶಕೊಟ್ಟ ನಾನೇ ಅಪರಾಧಿ.

ಶಕಾರ—ಭಾವ, ಆ ದರಿದ್ರವರ್ತಕನ ಮಗ ಚಾರುದತ್ತ ಹೈದನಿಗೆ ಬಹಳ ಹೆದರುವೆಯಲ್ಲಾ !

ವಿಟ—ನಿಜವಾಗಿಯೂ ಹೆದರಿದ್ದೇನೆ.

ಶಕಾರ—ಯಾಕೆ, ಭಾವಾ, ಯಾಕೆ ?

ವಿಟ—ಅವನ ಗುಣಗಳಿಗಾಗಿ. ನೋಡು,

ನನ್ನಂಥವರು ಬೇಡಿ ಬೇಡಿ ಬಡವಾದನವನ್.
ಅವನ ಸಿರಿಯಿಂದ ಮಂಡಿತನಲ್ಲದವನಿಲ್ಲ.
ಬೇಸಿಗೆಯುಲುರೆ ಬರತ ದೊಡ್ಡ ಮಡುವಿನ ಹಾಗೆ
ಜನರ ತೃಷ್ಣೆಯ ಕಳೆದು ಬತ್ತಿರುವನವನು. ||೨೬||

ಮಹಾಬ್ರಾಹ್ಮಣ, ಮಹಾಬ್ರಾಹ್ಮಣ, ಈ ಸಂಗತಿಯನ್ನು ವರ್ತಕಪುತ್ರನಿಗೆ ಹೇಳಬಾರದು. (ವಿಟನು ಹೋಗುತ್ತಾನೆ)

ಶಕಾರ—ಮಾರಿಶ, ಹೈದ, ಮಾರಿಶ! ಹೇಳು ಆ ದರಿದ್ರವರ್ತಕನ ಮಗ ಚಾರುದತ್ತ ಹೈದನಿಗೆ, ನನ್ನ ಮಾತಿನಂತೆ: "ದೊರೆಯ ಭಾವ ಶಂಶ್ಥಾನಕನು ರುಮಾಲು ಶುತ್ತಿದ ತಲೆಯಿಂದ ನಮಶ್ಕಾರಮಾಡಿ ಹೇಳುತ್ತಾನೆ—'ನಾಟಕದ ಹೆಣ್ಣು ವಶಂತಶೇಣೆಯೆಂಬ ಈ ಶೂಳೆಯರ ಹುಡುಗಿ, [11]ಬಂಗಾರದ ಬಣ್ಣದವಳು, ನಾವಿಬ್ಬರೂ ಬಲಾತ್ಕಾರದಿಂದ ಹಿಡಿದುಕೊಂಡು ಹೋಗುತ್ತಿರುವಲ್ಲಿ ಬೇಕಾದಷ್ಟು ಬಂಗಾರದ ಒಡವೆಗಳಿಂದ ಕೂಡಿ ನಿನ್ನ ಮನೆ ಹೊಕ್ಕಳು. ಅವಳನ್ನು ನಾಳೆ ತಂದೊಪ್ಪಿಶಬೇಕು. ಇಲ್ಲದೆ ಹೋದರೆ ನನಗೂ ನಿನಗೂ ಘೋರವಾದ ಮನಶ್ತಾಪವುಂಟಾಗುತ್ತದೆ' ಎಂದು." ಹೈದ, ಮಾರಿಶ, ಇದನ್ನೂ ಹೇಳು—"'ಬೇಡ ಬಡ್ಡಿಮಗನೇ, ಪಾರಿವಾಳದ ಗಂಟಲಿಗೆ ಹೊಕ್ಕ ಬೆಳ್ಳುಳ್ಳಿ ಗೆಡ್ಡೆಯ ಹಾಗೆ ನಿನ್ನ ತಲೆಬುರುಡೆಯನ್ನು ಮಡಮಡಗುಟ್ಟಿಶಿ ಬಿಡುತ್ತೇನೆ. ಬೇಡ ನೋಡು, ಬಾಗಿಲು ತಿರುಗುಣಿಗೆ ಶಿಕ್ಕಿದ ಬೇಲದಹಣ್ಣಿನ ಹಾಗೆ ನಿನ್ನ ತಲೆಯನ್ನು ಪುಡಿಪುಡಿಯಾಗಿ ಮಡಮುಡಿಶಿಬಿಡುತ್ತೇನೆ' ಎಂದು."

ವಿದೂಷಕ—ಅಯ್ಯಾ, ಸರಿ. (ಶಕಾರನನ್ನು ದೀಪದಿಂದ ಬೆದರಿಸುತ್ತಾನೆ)

ಶಕಾರ—(ಸುತ್ತಲೂ ನೋಡಿ) ಎಲ್ಲಿ ಭಾವ? ಹೊರಟುಹೋದ ಭಾವ. ಅಯ್ಯೋ, ಭಾವಾ! (ಶಕಾರನು ಹೋಗುತ್ತಾನೆ)

ವಿದೂಷಕ—ದೇವಕಾರ್ಯವನ್ನು ಮಾಡಿ ಆಯಿತೆಂದು ಪೂಜ್ಯನಿಗೆ ತಿಳಿಸೋಣ. ಅಮ್ಮಾ, ನಿನ್ನ ಮನಸ್ಸಿನಲ್ಲಿ ಸಂಕಟವನ್ನು ಬಿಟ್ಟುಬಿಡು. ಈ ಸಂಗತಿಯನ್ನು ಒಳಗೆ ಹೇಳಲಾಗದು.

ರದನಿಕೆ—ಆರ್ಯ, ರದನಿಕೆಯಲ್ಲವೇ ನಾನು?

ವಿದೂಷಕ—ಬಾ, ಹೋಗೋಣ. (ಇಬ್ಬರೂ ಮುಂದೆ ಹೋಗುತ್ತಾರೆ)

ನಾಯಕ—ಭದ್ರೇ, ದೇವಕಾರ್ಯವಾಯಿತೆ?

ಸೂಳೆ—(ತನ್ನಲ್ಲಿ) ಪರಿಜನವೆಂದು ತಿಳಿದುಕೊಂಡು ನನ್ನನ್ನು ಮಾತಾಡಿಸುತ್ತಾನೆ. ಆಗಲಿ, ಇನ್ನು ಭಯವಿಲ್ಲ.

ನಾಯಕ—ಗಾಳಿಯನ್ನು ಬಯಸುವಂತಿದೆ, ಪ್ರದೋಷ. ಆದ್ದರಿಂದ ಈ ಉತ್ತರೀಯವನ್ನು ತೆಗೆದುಕೊ.

ಸೂಳೆ—(ಉತ್ತರೀಯವನ್ನು ತೆಗೆದುಕೊಂಡು ಹರ್ಷದಿಂದ) ಇವನು ಯೌವನವನ್ನು ಉದಾಸೀನಮಾಡಿಲ್ಲವೆಂಬುದನ್ನು ವಸ್ತ್ರಧೂಪದ ವಾಸನೆಯೇ ಸೂಚಿಸುತ್ತದೆ.

ನಾಯಕ—ರದನಿಕೇ, ಒಳತೊಟ್ಟಿಗೆ ಹೋಗು.

ಸೂಳೆ—(ತನ್ನಲ್ಲಿ) ಭಾಗ್ಯವಿಲ್ಲದವಳು ನಾನು, ಒಳಗೆ ಹೋಗುವುದಕ್ಕೆ.

ನಾಯಕ—ಏನು ಒಳಕ್ಕೆ ಹೋಗುವುದಿಲ್ಲವೇ ?

ಸೂಳೆ—ಈಗ ನಾನೇನು ಹೇಳಲಿ ?

ನಾಯಕ—ರದನಿಕೇ, ಏಕೆ ತಡಮಾಡುವೆ ?

(ರದನಿಕೆ ವಿದೂಷಕರು ಹತ್ತಿರ ಬರುತ್ತಾರೆ.)

ಚೇಟಿ—ಸ್ವಾಮಿ, ಇಗೋ ಬಂದಿದ್ದೇನೆ.

ನಾಯಕ—ಇವಳು ಯಾರು, ಮತ್ತೆ ?

ತಿಳಿಯದೆಯೆ ಕೊಟ್ಟಿವಳಸವಮಾನಗೊಳಿಸಿರಲು ಬಟ್ಟೆಯಿಂದ,
ಶರದಭ್ರ ಬಳಸಿರುವ ಬೆಳುದಿಂಗಳೆಳೆಯಂತೆ ಶೋಭಿಸುವಳು. ||೨೭||

ಸೂಳೆ—(ತನ್ನಲ್ಲಿ) ದೀಪದ ಬೆಳಕಿನಲ್ಲಿ ಕಾಣುವ ರೂಪವುಳ್ಳ ಈತನು ಆತನೇ. ಈತನಿಗಾಗಿಯೇ ನಾನು ಉಸಿರಾಡುತ್ತಾ ಇನ್ನೂ ಬದುಕಿದ್ದೇನೆ.

ವಿದೂಷಕ—ಅಯ್ಯಾ ಚಾರುದತ್ತ, ದೊರೆಯ ಭಾವ ಸಂಸ್ಥಾನಕನು ರುಮಾಲು ಸುತ್ತಿದ ತಲೆಯಿಂದ ನಮಸ್ಕಾರಮಾಡಿ ಬಿನ್ನವಿಸುತ್ತಾನೆ.—“ನಾಟಕದ ಹೆಣ್ಣು ವಸಂತಸೇನೆಯೆಂಬ ಸೂಳೆಯರ ಹುಡುಗಿ ನಾವು ಬಲಾತ್ಕಾರವಾಗಿ ಹಿಡಿದುಕೊಂಡು ಹೋಗುತ್ತಿರುವಾಗ ಬೇಕಾದಷ್ಟು ಬಂಗಾರದೊಡವೆಗಳೊಡನೆ ನಿಮ್ಮ ಮನೆಯನ್ನು ಪ್ರವೇಶಿಸಿದಳು. ಅವಳನ್ನು ನಾಳೆ ತಂದೊಪ್ಪಿಸಬೇಕು” ಎಂದು.

ಸೂಳೆ—(ತನ್ನಲ್ಲೇ) ಹಂ! ಬಲಾತ್ಕಾರವಾಗಿ ಒಯ್ಯುತ್ತಿದ್ದವಳೆಂದು ಹೇಳಿದನಲ್ಲವೇ? ಆಗಲಿ, ಇದೇ ಸಕಾಲವಾಗಿದೆ. (ಪ್ರಕಾಶವಾಗಿ) ಆರ್ಯ, ನಿಮ್ಮ ಮರೆ ಹೊಕ್ಕಿದ್ದೇನೆ.

ನಾಯಕ—ಹೆದರಬೇಡ, ಹೆದರಬೇಡ. ವಸಂತಸೇನೆಯೇ ಇವಳು ?

ವಿದೂಷಕ—ಓಹೋ! ವಸಂತಸೇನೆ! *ಏನು ಮಾಡುವುದಪ್ಪಾ ? (ಬೇರೆಯವರಿಗೆ ಕೇಳಿಸದಂತೆ) ಅಯ್ಯಾ ಚಾರುದತ್ತ, ಇವಳು ವಸಂತಸೇನೆಯೇ ಹೌದು. ಕಾಮದೇವನ ಉತ್ಸವದಂದಿನಿಂದಲೂ ಯಾರನ್ನು ನೀನು ಕಣ್ಣಿನಿಂದ ಮಾತ್ರವೇ ಹೊಗಳುತ್ತಾ ಮನ್ಮಥನು ನೆಲಸಿದ ಹೃದಯದಲ್ಲಿ ಧರಿಸಿಕೊಂಡಿದ್ದೀಯೋ ಆ ವಸಂತಸೇನೆಯೇ ಇವಳು. ಆದ್ದರಿಂದ ನೋಡು, ಇವಳನ್ನು.

* (ಕ ಇವ?)

ನಾಯಕ—ಮಿತ್ರ, ನೋಡುತ್ತಿದ್ದೇನೆ, ಇವಳನ್ನು.

ಮಿಗಿಲು ಸಂಪತ್ತೆಲ್ಲ ಕರಗಿ ಬಳಿಕಿವಳಲೆಡೆ
ಗೊಂಡಿರುವ ನನ್ನ ಕಾಮು,
ಶಕ್ತಿಹೀನನ ರೋಷವೆಂತಂತೆ ತಾನೀಗ
ಲಡಗುವುದು ಒಡಲಿನಲ್ಲೆ. ||೨೮||

ಸೂಳೆ—ಅನುಮತಿಯಿಲ್ಲದೆ ಒಳಗೆ ಬಂದ ಅವಿನಯದಿಂದ ಅಪರಾಧಿಯಾಗಿದ್ದೇನೆ. ನಾನು ಆರ್ಯನಿಗೆ ತಲೆಬಾಗಿ ಕ್ಷಮೆ ಬೇಡುತ್ತೇನೆ.

ನಾಯಕ—ಹಾಗಾದರೆ, ನಾನು ಕೂಡ ತಿಳಿಯದೆ ತೋರಿಸಿದ ಪರಿಜನೋಚಿತವಾದ ನಡತೆಯಿಂದ ಅಪರಾಧಿಯಾಗಿ ನಿನ್ನನ್ನು ಕ್ಷಮೆ ಬೇಡುತ್ತೇನೆ.

ವಿದೂಷಕ—ಅಯ್ಯಾ, ಬಂಡಿಯನ್ನೆಳೆಯುವ ತುಂಟ ಹೋರಿಗಳಂತೆ ಒಬ್ಬರನ್ನೊಬ್ಬರು ಕ್ಲೇಶಪಡಿಸುತ್ತಿದ್ದೀರಲ್ಲಾ! ಈಗ ನಾನು ಯಾರನ್ನು ಕ್ಷಮೆ ಬೇಡಲಿ? ಆಗಲಿ, ಈ ರದನಿಕೆಯ ಕ್ಷಮೆ ಬೇಡುತ್ತೇನೆ. ರದನಿಕೇ, ಪ್ರಸನ್ನಳಾಗು, ಪ್ರಸನ್ನಳಾಗು.

ನಾಯಕ—ಭವತಿ, †ಪರಾಧೀನನಾಗಿದ್ದೇನೆ. ಪ್ರೀತಿಯಿಂದ ಏನು ಮಾಡಬೇಕು?

ಸೂಳೆ—(ತನ್ನಲ್ಲಿ) ಪ್ರಿಯವಾದದ್ದನ್ನು ತಾನೇ ಬಯಸತಕ್ಕದು! ನಾನಾಗಿಯೇ ಬಂದು ಮೊದಲ ನೋಟದಲ್ಲಿಯೇ ಇಲ್ಲಿ ನಿಲ್ಲುವುದು ಸರಿಯಲ್ಲ. ಆದ್ದರಿಂದ ಹೀಗೆ ಮಾಡುತ್ತೇನೆ. (ಪ್ರಕಾಶವಾಗಿ) ನನ್ನಲ್ಲಿ ಆರ್ಯನು ಪ್ರಸನ್ನನಾಗಿದ್ದರೆ ಈ ನನ್ನ ಅಲಂಕಾರ ಇಲ್ಲಿಯೇ ಇರಲಿ. ಅಲಂಕಾರಕ್ಕೋಸ್ಕರ ಪಾಪಿಗಳು ನನ್ನನ್ನು ಬೆಂಬತ್ತಿ ಬರುತ್ತಾರೆ. ನಾನು ಕೂಡ ಆರ್ಯನಿಂದ ರಕ್ಷಿತಳಾಗಿ ಮನೆಗೆ ಹೋಗಬಯಸುತ್ತೇನೆ.

ನಾಯಕ—ಉಚಿತವಾಗಿ ಹೇಳುತ್ತಾಳೆ. ಮೈತ್ರೇಯ, ತೆಗೆದುಕೊ.

ವಿದೂಷಕ—ನನಗೆ ನಂಬಿಕೆಯಿಲ್ಲ.

ನಾಯಕ—ಮೂರ್ಖ, ತೆಗೆದುಕೊ.

ವಿದೂಷಕ—ನಿನ್ನ ಅಪ್ಪಣೆಯಂತಾಗಲಿ. ತಾರಮ್ಮಾ. (ಸೂಳೆ ಕಳಚಿ ಅಲಂಕಾರವನ್ನು ಕೊಡುತ್ತಾಳೆ)

ವಿದೂಷಕ—ರದನಿಕೇ, ಈ ಬಂಗಾರದ ಒಡವೆಗಳನ್ನು ನೀನು ತೆಗೆದುಕೊ. ಪಷ್ಠಿ

---

† ಪರವಾನಸ್ಮಿ. ಕಿಮನುತಿಷ್ಠತಿ ಸ್ನೇಹಃ? "ನಾನು ನಿನ್ನ ಅಧೀನವಾಗಿದ್ದೇನೆ. ನಿನ್ನ ಮೇಲಿನ ಪ್ರೀತಿಗಾಗಿ ಏನು ಅಪೇಕ್ಷಿಸಿದರೂ ನಡಸಿಕೊಡುತ್ತೇನೆ" ಎಂದು ತಾತ್ಪರ್ಯ.

ಯಲ್ಲಿಯೂ ಸಪ್ತಮಿಯಲ್ಲಿಯೂ (ನೀನೇ) ಇಟ್ಟುಕೊಂಡಿರು. ನಾನು ಅಷ್ಟಮಿಯ ಅನಧ್ಯಾಯದಲ್ಲಿ ಇಟ್ಟುಕೊಳ್ಳುತ್ತೇನೆ.

ಚೇಟಿ—(ನಕ್ಕು) ಶಾಸ್ತ್ರ ವ್ಯಾಖ್ಯಾನಮಾಡುವ ಸ್ವಾಮಿಗಳಿಗೆ ಆಗ ಅವಕಾಶ ವಾಗುತ್ತದೆ! ಆರ್ಯ, ಇಲ್ಲಿ ತನ್ನಿ. (ತೆಗೆದುಕೊಂಡು ಹೋಗುತ್ತಾಳೆ)

ನಾಯಕ—ಯಾರಲ್ಲಿ? ಸ್ವಲ್ಪ ದೀಪ.

ವಿದೂಷಕ—ಅಯ್ಯಾ, ದೀಪ ಸೂಳೆಯಂತೆ ನಿಃಸ್ನೇಹವಾಯಿತು.

ನಾಯಕ—ಇನ್ನೇಕೆ ದೀಪ? (ನೋಡಿ) ಸರ್ವ ಜನಸಾಮಾನ್ಯವಾದ ದೊಡ್ಡ ದೀಪ ದಂತಿರುವ ಚಂದ್ರ ಭಗವಂತನು ಉದಿಸಿದನು. ಆದ್ದರಿಂದ,

ಮೂಡುತಿರುವನು ನೆನೆದ ಖರ್ಜೂರದಂದದಲಿ
ಬಿಳುಪಾದ ಚಂದಿರನು; ಯುವತಿಯರ ನೆರವಿಗನು;
ರಾಜಮಾರ್ಗಕೆ ದೊಡ್ಡ ದೀಪವಾದವನು.
ಕತ್ತಲೆಯ ಗುಂಪಿನಲಿ ನಡುನಡುವೆ ಅವನ ಬೆಳು
ಕಿರಣಗಳು, ನೋಡಿದೋ, ನೀರ್‌ತೆಗೆದ ಕೆಸರಿನಲಿ
ಹಾಲಧಾರೆಗಳಂತೆ ಬೀಳುತಿಹವು. ||೨೯||

ಭವತಿ, ರಾಜಬೀದಿಯಲ್ಲಿ ಹೋಗು. ಮಿತ್ರ, ಈಕೆಯ ಜೊತೆಗೆ ಹೋಗು.

ವಿದೂಷಕ—ನೀನು ಅಪ್ಪಣೆಮಾಡಿದಂತೆ. ಬಾರಮ್ಮಾ, ಬಾ.

(ಎಲ್ಲರೂ ಹೋಗುತ್ತಾರೆ)

ಮೊದಲನೆಯ ಅಂಕ ಮುಗಿಯಿತು.

ಎರಡನೆಯ ಅಂಕ

(ಬಳಿಕ ಸೂಳೆಯೂ ಚೇಟಿಯೂ ಪ್ರವೇಶಿಸುತ್ತಾರೆ)

ಸೂಳೆ—ಆಮೇಲಾಮೇಲೆ?

ಚೇಟಿ—ಅಮ್ಮಮ್ಮಾ! ನಾನೇನೂ ಹೇಳಲೇ ಇಲ್ಲ; 'ಆಮೇಲಾಮೇಲೆ' ಅಂದರೇನು?

ಸೂಳೆ—ಹಂಜೇ, ನಾನೇನಂದೆ?

ಚೇಟಿ—ಅಜ್ಜುಕೇ, ಸ್ನೇಹ ಪ್ರಶ್ನೆ ಮಾಡಿಸುತ್ತದೆ; ಅಧಿಕಪ್ರಸಂಗಿತ್ವವಲ್ಲ. ನೀನೇನು ಯೋಚಿಸುತ್ತಿರುವೆ?

ಸೂಳೆ—ಹಂಜೇ, ನೀನು ಏನೆಂದು ಊಹಿಸುತ್ತೀಯೆ ?

ಚೇಟಿ—[12]ಸೂಳೆತನಕ್ಕೆ ಪ್ರಯೋಜನವಿಲ್ಲದೆಯೇ ಅಜ್ಜುಕೆ ಯಾರೋ ಒಬ್ಬನನ್ನು ಕಾಮಿಸುವಳೆಂದು ಊಹಿಸುತ್ತೇನೆ.

ಸೂಳೆ—ಸರಿಯಾಗಿ ಊಹಿಸಿದೆ. ನಿನ್ನ ಬುದ್ಧಿ ಮೋಸಹೋಗಲಿಲ್ಲ. ನಾನು ಹಾಗೆಯೇ ಆಗಿದ್ದೇನೆ.

ಚೇಟಿ—ಅಲಂಕಾರಮಾಡಿಕೊಳ್ಳದಿದ್ದರೂ ಅಜ್ಜುಕೇ, (ನೀನು) ಅಲಂಕಾರಮಾಡಿಕೊಂಡವಳಂತೆಯೇ ಕಾಣುತ್ತೀಯೆ. *ತರುಣಜನರಿಗೆ ಕಾಮವೇ ಅತ್ಯುತ್ತಮವಾದ ಭೂಷಣ.

ಸೂಳೆ—ಹಾಳಾದವಳೇ, ತವಕಗೊಳ್ಳಬೇಕಾದ ವಿಷಯದಲ್ಲಿ ನಿನಗೆ ಅದೇನು ಸಂತೋಷವೋ !

ಚೇಟಿ—ಅಜ್ಜುಕೇ, ಕೇಳಬಯಸುತ್ತೇನೆ. ಬಹುಮಾನದಂತೆ ರಮಣೀಯನಾಗಿರುವ ಒಬ್ಬಾನೊಬ್ಬ ರಾಜಕುಮಾರನಿರಬಹುದೇ ?

ಸೂಳೆ—ನನಗೆ ನಲಿಯುವುದಕ್ಕೆ ಇಷ್ಟ; ಓಲೈಸುವುದಕ್ಕಲ್ಲ.

ಚೇಟಿ—ಹಾಗಾದರೆ, ವಿದ್ಯಾವಿಶೇಷಗಳಿಂದ ರಮಣೀಯನಾಗಿರುವ ಯಾರೋ ಒಬ್ಬ ಬ್ರಾಹ್ಮಣ ಕುಮಾರನಿರಬಹುದೇ ?

ಸೂಳೆ—ಅಂಥವರಲ್ಲಿ †ಬಹು ಗೌರವಾರ್ಹವಾದ ಸಂಯಮವುಂಟು. ಅವರು ಪೂಜಾರ್ಹರಷ್ಟೆ.

ಚೇಟಿ—ಬೇರೆ ಕಡೆಯಿಂದ ಬಂದಿರುವ ಯಾರೋ ಒಬ್ಬ ವರ್ತಕಪುತ್ರನಿರಬಹುದೇ ?

ಸೂಳೆ—ಹುಚ್ಚೀ, ಕಾತರಳಾದವಳು ಯಾವಳುತಾನೇ ತನ್ನ ಆಸೆ ಹರಿದುಹೋಗುವುದನ್ನು ಸಹಿಸಿಯಾಳು ?

ಚೇಟಿ—ನಾನು ಕೇಳುವುದಕ್ಕಾಗದೇನು ? ನಮ್ಮ ಬಯಕೆಯ ಭಾವ ಯಾರು ?

ಸೂಳೆ—ನೀನು ಕಾಮದೇವನ ಉತ್ಸವಕ್ಕೆ ಬಂದಿರಲಿಲ್ಲವೇ ?

ಚೇಟಿ—ಬಂದಿದ್ದೆನಲ್ಲ.

ಸೂಳೆ—ಅದೇಕೆ ಉದಾಸೀನವಾಗಿ ಮಾತಾಡುವೆ ?

ಚೇಟಿ—ಹೇಳು, ಹೇಳು, ಅಜ್ಜುಕೇ, ಹೇಳಿಬಿಡು.

ಸೂಳೆ—ಹಂಜೇ, ಕೇಳು, ಹಾಗಾದರೆ. ವರ್ತಕಪುತ್ರ ಚಾರುದತ್ತನೆಂಬವನಿದ್ದಾನೆ.

ಚೇಟಿ—ಮರೆಹೊಕ್ಕ ನಿನ್ನನ್ನು ರಕ್ಷಿಸಿದನಲ್ಲಾ, ಅವನೇ ?

---

* ಕಾಮೋ ಹಿ ಭಅವಂ ಅಣವಗೀದೋ ಊಸುವೋ ತರುಣ ಜಣಸ್ಸ.

† ಅತ್ಥಿ ಅದಿಬಹುಮದೋ ವಿಸ್ಸಂಭೋ.

ಸೂಳೆ—ಅವನೇ.

ಚೇಟಿ—ಅಯ್ಯಯ್ಯೋ! ದರಿದ್ರನಲ್ಲ ಅವನು?

ಸೂಳೆ—ಅದಕ್ಕೇ (ನಾನು) ಕಾಮಿಸುವುದು. ಅತಿ ದರಿದ್ರನಾದ ಪುರುಷನಲ್ಲಿ ಆಸಕ್ತಳಾದ ಸೂಳೆಗೆ ನಿಂದೆ ತಟ್ಟುವುದಿಲ್ಲ.

ಚೇಟಿ—ಅಜ್ಜುಕೇ, §ಹೂವುದುರಿದ ಮಾವನ್ನು ದುಂಬಿಗಳು ಆಶ್ರಯಿಸುತ್ತವೆಯೇ?

ಸೂಳೆ—ಹಂಜೇ, ‡ಹಾಗೋ? ಆಶ್ರಯಿಸಿಯಾವೆ! (ಅದರಿಂದಲೇ) ಅವನ್ನು ಮಧುಕರಗಳೆನ್ನುತ್ತಾರೆ.

ಚೇಟಿ—ಸಂಪತ್ತು ಕಡಮೆಯಾದದ್ದರಿಂದ ಸೂಳೆಗೇರಿಯ ಸಹವಾಸಕ್ಕೆ ಹೆದರಿ (ಅದು) ದುಃಖಕರವೆಂದು (ತಿಳಿದು) ಬರದೆ ಇದ್ದರೋ?

ಸೂಳೆ—ನಾನು ಅವನನ್ನು ಕಾಮಿಸುವೆನಲ್ಲಾ!

ಚೇಟಿ—ಇಷ್ಟೊಂದು ಪ್ರೀತಿಯಿದ್ದ ಮೇಲೆ ಆದೇಕೆ ಅಭಿಸಾರ ಮಾಡುವುದಿಲ್ಲ?

ಸೂಳೆ—ಹೋಗುವುದಿಲ್ಲವೆಂತಲ್ಲ. ಆದರೂ ತಟ್ಟನೆ ಅಭಿಸಾರಿಕೆಯಾಗಿ ಹೋದರೆ ಪ್ರತ್ಯುಪಕಾರಮಾಡುವುದು (ಅವನಿಗೆ) ಕಷ್ಟವಾದ್ದರಿಂದ ಅವನು ಮತ್ತೆ ನನಗೆ ದುರ್ಲಭನಾಗುವನೆಂದು ತಡಮಾಡುತ್ತಿದ್ದೇನೆ.

ಚೇಟಿ—ಹಂ! ಇದಕ್ಕಾಗಿಯೇ ಏನು, ಅಲ್ಲಿಯೇ ಆ ಅಲಂಕಾರವನ್ನಿಟ್ಟದ್ದು?

ಸೂಳೆ—ಹಾಗೆಯೇ ಸರಿ.

(ಬಳಿಕ *ತೆರೆಯನ್ನು ಚಿಮ್ಮಿ ಸಂವಾಹಕನು ಪ್ರವೇಶಿಸುತ್ತಾನೆ)

ಸಂವಾಹಕ—ಆರ್ಯೆ, ಶರಣಾಗತನಾಗಿದ್ದೇನೆ.

ಸೂಳೆ—ಆರ್ಯನು ಕಳವಳಪಡಬೇಕಾಗಿಲ್ಲ.

ಚೇಟಿ—ಹಂ! ಇದು ಯಾರು, ಇವನು?

ಸೂಳೆ—ಹುಚ್ಚೀ, ಶರಣಾಗತನನ್ನು ಪ್ರಶ್ನೆಮಾಡಬಹುದೇ?

ಚೇಟಿ—ಸಾಹಸಗಾರನಾಗಿದ್ದರೆ?

ಸೂಳೆ—ಹುಚ್ಚೀ, ಗುಣವಂತನನ್ನು ರಕ್ಷಿಸಲೇ ಬೇಕು.

ಸಂವಾಹಕ—ಆರ್ಯೆ, ಭಯದಿಂದ ನ್ಯಾಯವಾದ ನಡವಳಿಕೆಯನ್ನು ಮರೆತೆನೇ ಹೊರತು ಅಗೌರವ ಬುದ್ಧಿಯಿಂದಲ್ಲ. ನೋಡು ಆರ್ಯೇ, ಅಂಜಿದವರಾಗಲಿ,

---

§ ಉದ್ಧೂದ ಪುಪ್ಫಂ ಸಹಆರಂ ಮಹುಅರಾಓ ಉವಾಸಂತಿ.

‡ ಏವಂ, ಉವಾಸಂತಿ. ದೇ ಮಹುಅರಾ ತ್ತಿ ಪುಚ್ಛೀಅಂತಿ.

* ಅಪಟಾಕ್ಷೇಪೇಣ.

ಅವಮಾನಿತರಾಗಲಿ, ಆಪತ್ತಿಗೆ ಸಿಕ್ಕಿದವರಾಗಲಿ, ಸುಲಭವಾಗಿ ಶೀಲವನ್ನು ತೊರೆಯುವಂಥವರೇ ಆಗಲಿ, ಅಪರಾಧ ಮಾಡಿಬಿಡುತ್ತಾರಲ್ಲವೇ ?

ಸೂಳೆ—ಸರಿ, ಸರಿ. ಆರ್ಯನು ನಿಮ್ಮ ದಿಯಾಗಿರಬಹುದು. ನಾನು ಸೂಳೆ.

ಸಂವಾಹಕ—ಕುಲದಲ್ಲಿ, ಶೀಲದಲ್ಲಲ್ಲ.

ಸೂಳೆ—ಹಂಜೇ, ಹೀಗೆ . . .

ಚೇಟಿ—ಅಜ್ಜುಕೆ ಆರ್ಯನನ್ನು ಕೇಳುತ್ತಾಳೆ: ಏತರಿಂದ ಆರ್ಯನಿಗೆ ಭಯ ಎಂದು.

ಸಂವಾಹಕ—ಆರ್ಯೆ, †ಧನಿಕನಿಂದ.

ಸೂಳೆ—ಹಾಗಾದರೆ, ಆರ್ಯನಿಗೆ ಪೀಠವನ್ನು ಕೊಡು.

ಚೇಟಿ—ಹಾಗೆಯೇ ಆಗಲಿ. (ಪೀಠವನ್ನು ಕೊಡುತ್ತಾಳೆ)

ಸೂಳೆ—ಆರ್ಯನು ಕೂತುಕೊಳ್ಳಬೇಕು.

ಸಂವಾಹಕ—(ತನ್ನಲ್ಲಿಯೇ) [18]ಇಷ್ಟು ವಿಶೇಷ ಉಪಚಾರ ಮಾಡಿದ್ದರಿಂದ ಪ್ರಯೋಜನವಿರುವಂತೆ ಕಾಣುತ್ತದೆ. (ಕೂತುಕೊಳ್ಳುತ್ತಾನೆ)

ಸೂಳೆ—ಹಂಜೇ, ಹೀಗೆ . . .

ಚೇಟಿ—ಅಜ್ಜುಕೇ, ಹಾಗೇ ಆಗಲಿ. ಆರ್ಯ, ನಿಮ್ಮನ್ನು ರಾಜಬೀದಿಯಲ್ಲಿ ನಿರಾತಂಕವಾಗಿ ಹೋಗಿಬರಲು ಸಮರ್ಥರಾಗುವಂತೆ ಮಾಡಬೇಕೆಂದು ಬಯಸುತ್ತಾಳೆ, ಅಜ್ಜುಕೆ. ಯಾರಿಗೆ, ಏನು ಕೊಡಬೇಕು ?

ಸಂವಾಹಕ—ಆರ್ಯೆ, ಕೇಳು.

ಸೂಳೆ—ಇಗೋ, ಕೇಳುತ್ತಿದ್ದೇನೆ.

ಸಂವಾಹಕ—ಪಾಟಲೀಪುತ್ರ ನನ್ನ ಹುಟ್ಟಿದೂರು. ಸಹಜವಾಗಿ ನಾನು ವೈಶ್ಯ. ಬಳಿಕ ಅದೃಷ್ಟ ಮಾರ್ಪಟ್ಟು ದೆಸೆ ಬದಲಾಯಿಸಿದ್ದರಿಂದ *ಸಂವಾಹಕ ವೃತ್ತಿಯಿಂದ ಜೀವಿಸುತ್ತಿದ್ದೇನೆ.

ಸೂಳೆ—ಆರ್ಯನು ಸಂವಾಹಕನೇ ! ಸುಕುಮಾರವಾದ ಕಲೆಯನ್ನು ಕಲಿತಿರುವಿರಿ.

ಸಂವಾಹಕ—ಕಲೆಯೆಂದು ಕಲಿತೆ; ಈಗ ಜೀವನೋಪಾಯವಾಗಿ ಪರಿಣಮಿಸಿತು.

ಸೂಳೆ—ಸಂಕಟವನ್ನು ಸೂಚಿಸುವಂತಿದೆ ಆರ್ಯನ ಮಾತು. ಆಮೇಲಾಮೇಲೆ ?

ಸಂವಾಹಕ—ಅಜ್ಜುಕೇ, ಆ ನಾನು ಆಗಂತುಕರಿಂದ ಕೇಳಿ (ತಿಳಿದು, ನನ್ನ ವೃತ್ತಿಗೆ ತಕ್ಕ) ಉತ್ತಮಪುರುಷರು ಸಿಕ್ಕುವರೆಂಬ ಆಸೆಯಿಂದ ಬಂದೆ ಈ ಉಜ್ಜಯಿನಿಗೆ.

---

† ಜೂಜಿನಲ್ಲಿ ಪಣಗೆದ್ದವನು.

* ಮೈ ಕೈ ಹಿಸಕುವವನು.

ಸೂಳೆ—ಆಮೇಲಾಮೇಲೆ ?

ಸಂವಾಹಕ—ಬಳಿಕ, ಇಲ್ಲಿಗೆ ಬಂದಕೂಡಲೆ ಒಬ್ಬಾನೊಬ್ಬ ವರ್ತಕಪುತ್ರನು ಸಿಕ್ಕಿದನು.

ಸೂಳೆ—ಎಂಥವನು ?

ಸಂವಾಹಕ—ಒಳ್ಳೆಯ ಆಕೃತಿಯುಳ್ಳವನು. ನಿಧಾನಿ ; ದುಡುಕಿಲ್ಲದವನು. ಗರ್ವವಿಲ್ಲದವನು. ಲಲಿತನಾದವನು; (ಆದರೆ) ಲಲಿತತನದಿಂದ ಸೊಕ್ಕದವನು. ಚತುರ; ಮಧುರ ; ದಕ್ಷ ; ದಾಕ್ಷಿಣ್ಯಪರ. ಎಲ್ಲರಿಗೂ ಬೇಕಾದವನು. ಆಡಂಬರವಿಲ್ಲದವನು ಮತ್ತು ತೃಪ್ತನಾದವನು. ಕೊಟ್ಟು ಹೊಗಳಿಕೊಳ್ಳುವುದಿಲ್ಲ. ಅಲ್ಪವಾದರೂ (ತನಗೆ ಮಾಡಿದ ಉಪಕಾರವನ್ನು) ನೆನೆಯುತ್ತಾನೆ. ಬಹಳವಾದರೂ ಅಪಕಾರವನ್ನು ಮರೆಯುತ್ತಾನೆ. ಅಜ್ಜುಕೇ, ಹೆಚ್ಚುಮಾತಿನಿಂದೇನು ? ಆ ಕುಲಪುತ್ರನ ಗುಣಗಳಲ್ಲಿ ನಾಲ್ಕನೆಯ ಒಂದು ಪಾಲನ್ನು ಕೂಡ ಬಹುನಿಡಿದಾದ ಗ್ರೀಷ್ಮ ದಿನದಲ್ಲಿಯೂ ವರ್ಣಿಸಲು ಶಕ್ಯವಿಲ್ಲ. ಹೆಚ್ಚು ಮಾತಿನಿಂದೇನು ? ದಾಕ್ಷಿಣ್ಯವಂತನಾದ್ದರಿಂದ ತನ್ನ ಶರೀರವನ್ನೂ ಮತ್ತೊಬ್ಬರದ್ದೋ ಎಂಬಂತೆ ತಾಳಿಕೊಂಡಿದ್ದಾನೆ.

ಸೂಳೆ—(ಬೇರೆಯವರಿಗೆ ಕೇಳಿಸದಂತೆ) ಹಂಜೇ, ಯಾರಿರಬಹುದು ಇವನು, ಆರ್ಯ ಚಾರುದತ್ತನ ಗುಣಗಳನ್ನು ಅನುಕರಿಸುವವನು ?

ಚೇಟಿ—ನನಗೂ ಕುತೂಹಲ, ಕೇಳುವುದಕ್ಕೆ. ಯಾರಿರಬಹುದು, ಉಜ್ಜಯಿನಿಯನ್ನು ತನ್ನ ಗುಣಗಳಿಂದ ಅಲಂಕರಿಸುವವನು ?

ಸೂಳೆ—ಆಮೇಲಾಮೇಲೆ ?

ಸಂವಾಹಕ—ಬಳಿಕ ಅವನ ಗುಣಗಳಿಗೆ ಶರೀರವನ್ನೂ ಮಾರಿಕೊಂಡು ಹೆಂಡತಿಯನ್ನೂ ಮರೆತು ಅವನ ಭೃತ್ಯನಾದೆ.

ಸೂಳೆ—ಅವನು ದರಿದ್ರನೇನು ?

ಸಂವಾಹಕ—ಹೇಗೆ ಗೊತ್ತಾಯಿತು ಆರ್ಯೆಗೆ, ನಾನು ಹೇಳದೆ ಇದ್ದರೂ ?

ಸೂಳೆ—ಒಬ್ಬನಲ್ಲೇ (ಇಷ್ಟು) ಗುಣಸಂಪತ್ತು ದೊರೆಯುವುದು ದುರ್ಲಭವೆಂದು. ಆಮೇಲಾಮೇಲೆ ?

ಚೇಟಿ—ಆ ಆರ್ಯನ ಹೆಸರೇನು ?

ಸಂವಾಹಕ—ಆರ್ಯ ಚಾರುದತ್ತನೆಂದು.

ಸೂಳೆ—ಸರಿಯೇ ! ಆಮೇಲಾಮೇಲೆ ?

ಸಂವಾಹಕ—ಆಮೇಲೆ, ಸಂಪತ್ತು ಕಡಮೆಯಾದ್ದರಿಂದ ಅವನು ಪರಿಜನರನ್ನು

ಸ್ವಾಧೀನದಲ್ಲಿಟ್ಟುಕೊಳ್ಳದೆ, ಕುಟುಂಬ ಪೋಷಣೆಯ ಭಾರವನ್ನು ಕಳೆದು ಕೊಂಡು, ತನ್ನ ನಡತೆಯನ್ನು ಮಾತ್ರ ಉಳಿಸಿಕೊಂಡು *ವರ್ತಕದ ಮನೆ ಯಲ್ಲಿ ವಾಸವಾಗಿದ್ದಾನೆ. ಆ ಆರ್ಯನು ನನಗೂ "ಬೇರೊಬ್ಬನನ್ನು ಸೇವಿಸು" ಎಂದು ಅಪ್ಪಣೆ ಕೊಟ್ಟನು. "ಹೇಗೆತಾನೇ ಇಂಥ ಮತ್ತೊಬ್ಬ ಮನುಷ್ಯ ರತ್ನವನ್ನು ಪಡೆದೇನು? ಅವನ ಕೋಮಲ ಲಲಿತ ಮಧುರ ಶರೀರವನ್ನು ಮುಟ್ಟಿ ಕೃತಾರ್ಥವಾದ ನನ್ನ ಕೈಯನ್ನು ಸಾಧಾರಣ ಶರೀರ ವನ್ನು ಒತ್ತುವುದರಿಂದ ಹೇಗೆ ಶೋಚನೀಯವಾಗಿ ಮಾಡಲಿ!" ಎಂದು ಜುಗುಪ್ಸೆ ಹುಟ್ಟಿ, ಈ ಹಾಳು ಹೊಟ್ಟೆ ಹೊರೆಯುವುದಕ್ಕೋಸ್ಕರ ದ್ಯೂತ ವೃತ್ತಿಯನ್ನವಲಂಬಿಸಿದೆ.

(ಸೂಳೆ ಹರ್ಷದಿಂದ ಕಣ್ಣೀರು ಸುರಿಸುತ್ತ ಚೇಟಿಯನ್ನು ನೋಡುತ್ತಾಳೆ)

ಚೇಟಿ—ಆಮೇಲಾಮೇಲೆ ?

ಸಂವಾಹಕ—ಆಮೇಲೆ ಬಹು ದಿನಗಳಿಂದಲೂ ನನಗೆ ಸೋಲುತ್ತಿದ್ದ ಒಬ್ಬನಿಗೆ ಯಾವಾಗಲೋ ಒಂದು ಸಲ ನಾನೂ ಹತ್ತು ಹೊನ್ನು ಸೋತೆ.

ಸೂಳೆ—ಆಮೇಲಾಮೇಲೆ ?

ಸಂವಾಹಕ—ಆಮೇಲೆ, ಇವತ್ತು ಸೂಳೆಗೇರಿಯ ಬೀದಿಯಲ್ಲಿ ಹಾಗೆಯೇ ಬರು ತ್ತಿರುವಾಗ ಅವನಿಗೆ ಸಿಕ್ಕಿಬಿದ್ದೆ. ಅವನ ಹೆದರಿಕೆಯಿಂದ ಇಲ್ಲಿಗೆ ಬಂದೆ. ಆರ್ಯೆ, ನಡೆದದ್ದಿಷ್ಟು.

ಸೂಳೆ—(ತನ್ನಲ್ಲಿಯೇ) ಆಹಾ! ಎಂಥ ಅನ್ಯಾಯ! ನನಗೆ ಹೀಗೆ ತೋರುತ್ತದೆ: ವಾಸದ ಮರ ಮುರಿದು ಬಿದ್ದರೆ ಹಕ್ಕಿಗಳು ಅಲೆದಾಡಬೇಕಾಗುತ್ತದೆ. (ಪ್ರಕಾಶವಾಗಿ) ಹೀಗಿದ್ದರೆ ಆರ್ಯನು ನಮ್ಮವನೇ ಆದ ಹಾಗಾಯಿತು. ಸಖೀ ಬಾ. ಆ ಜನರನ್ನು ಕಳುಹಿಸಿಬಿಡು.

ಚೇಟಿ—ಹಾಗೆಯೇ ಆಗಲಿ. (ಹೋಗುತ್ತಾಳೆ)

ಸೂಳೆ—ಆರ್ಯನು ಹಣಕ್ಕಾಗಿ ಯೋಚನೆ ಮಾಡಬಾರದು. ಆರ್ಯ ಚಾರುದತ್ತನೇ ಕೊಡುತ್ತಾನೆಂದು ತೆಗೆದುಕೊಳ್ಳಿ.

(ಚೇಟಿ ಪ್ರವೇಶಿಸುತ್ತಾಳೆ)

ಚೇಟಿ—ಅಜ್ಜುಕೇ, ಕಳುಹಿಸಿಕೊಟ್ಟೆ, ಅವನನ್ನು. ಅವನೂ ಸಂತೋಷಪಟ್ಟು ಕೊಂಡು ಹೋದನು.

---

* ಸಾರ್ಥವಾಹಕುಲೀ.

ಸಂವಾಹಕ—ಅನುಗೃಹೀತನಾದೆ.

ಸೂಳೆ—ಆರ್ಯನು ಹೋಗಬಹುದು, ಹಿತವರನ್ನು ನೋಡಿ ಪ್ರೀತಿಯುಂಟು ಮಾಡುವುದಕ್ಕೆ.

ಸಂವಾಹಕ—ಜುಗುಪ್ಸೆಯಿಂದ ಇವತ್ತೇ ಸಂನ್ಯಾಸಿಯಾದರೂ ಆದೇನು. ಈ ನನ್ನ ಕಲೆ ನಿಮ್ಮ ಪರಿಜನರಲ್ಲಿ (ಯಾರಲ್ಲಾದರೂ) ಹರಡುವಂತಾದರೆ, ಆಗ ನನಗೆ ಆರ್ಯೆ ಅನುಗ್ರಹ ತೋರಿಸಿದಂತಾಗುತ್ತದೆ.

ಸೂಳೆ—ಯಾರಿಗೋಸ್ಕರ ಈ ಕಲೆಯನ್ನು ಕಲಿತಿರೋ ಆತನೇ ಆರ್ಯನಿಂದ ಸೇವೆ ಪಡೆಯಲು ತಕ್ಕವನು.

ಸಂವಾಹಕ—(ತನ್ನಲ್ಲಿ) ಚಮತ್ಕಾರವಾಗಿ ಬೇಡವೆಂದುಬಿಟ್ಟಳು. ಯಾರುತಾನೇ ತಾವು ಮಾಡಿದ ಉಪಕಾರವನ್ನು ಪ್ರತ್ಯುಪಕಾರದಿಂದ ಹಾಳುಮಾಡಿ ಕೊಂಡಾರು? (ಪ್ರಕಾಶವಾಗಿ) ಆರ್ಯೇ, ಇನ್ನು ನಾನು ಹೋಗುತ್ತೇನೆ.

ಸೂಳೆ—ಹೋಗಬಹುದು. ಆರ್ಯನು ಮತ್ತೆ ದರ್ಶನ ಕೊಡಬೇಕು.

ಸಂವಾಹಕ—ಆರ್ಯೇ, ಆಗಬಹುದು. (ಹೋಗುತ್ತಾನೆ)

ಸೂಳೆ—ಹಂ! ಏನೋ ಸದ್ದು.

(ಪ್ರವೇಶಿಸಿ)

ಚೇಟ—ವಿಚ್ಛಿತ್ತಿಕೇ, ವಿಚ್ಛಿತ್ತಿಕೇ! ಎಲ್ಲಿ, ಎಲ್ಲಿ, ಅಜ್ಜುಕೆಯೆಲ್ಲಿ?

ಸೂಳೆ—ಹಂಜೇ, ಏನಿದು?

ಚೇಟ—[14] ಹಂ! ವಂಚಿತನಾದೆ. ಕಿಟಕಿಯಲ್ಲಿ ಮುಮ್ಮೈಯನ್ನು ಹೊಗಿಸಿ, ಮೊಲೆಗಳು ತೂಗಬೀಳುವಂತೆ ನಿಂತುಕೊಂಡು ಅಜ್ಜುಕೆ ಈ ಕರ್ಣಪೂರನ ಸಾಹಸವನ್ನು ನೋಡಲಿಲ್ಲವಾದ್ದರಿಂದ ನಾನು ವಂಚಿತನಾದೆ.

ಸೂಳೆ—ಅಲ್ಪರಿಗೆ ಸುಲಭವಾದದ್ದು ಅಹಂಕಾರ. ನಿನ್ನ ಹೆಮ್ಮೆಗೆ ಕಾರಣವೇನು?

ಚೇಟ—ಕೇಳಬೇಕು, ಅಜ್ಜುಕೆ. ಉಗ್ರವಾದ ವೇಗವುಳ್ಳ ಭದ್ರಕಪೋತವೆಂಬ ಮಂಗಳ ಹಸ್ತಿಯು ಮೈತೊಳೆದುಕೊಂಡು ಹಿಂದಿರುಗಿ, ಸುರಿಯುತ್ತಿರುವ ಮದಧಾರೆಯ ಸುವಾಸನೆಯಿಂದ ರಾಜಮಾರ್ಗವನ್ನು ತುಂಬಿಸುತ್ತಾ (ಬರುತ್ತಿರುವಾಗ), ರಾಜಬೀದಿಗಳೆಲ್ಲ ಅನೇಕ ಜನಗಳಿಂದ ಕಿಕ್ಕಿರಿದು ತುಂಬಿರುವಲ್ಲಿ ಉತ್ತರೀಯದ ಬಟ್ಟೆಯ ಕೆಂಪಿನಿಂದ ಹೆಚ್ಚಾಗಿ ಕಣ್ಣಿಗೆ ಬೀಳುತ್ತಿದ್ದ ಒಬ್ಬಾನೊಬ್ಬ ಪರಿವ್ರಾಜಕನನ್ನು ಕಂಡು, ಅವನ ಹತ್ತಿರಕ್ಕೆ ಹೋಯಿತು.

ಸೂಳೆ—ಹಂ! ಆಮೇಲಾಮೇಲೆ?

ಚೇಟ—ಆಮೇಲೆ, (ಅವನು) ಆನೆಯ ಸೊಂಡಿಲ ಮರ್ದನದ ಏಟು ತಿನ್ನುತ್ತಾ ದಂತಗಳ ನಡುವೆ ಹೊರಳಾಡುತ್ತಾ ಆನೆಯ ಸೊಂಡಿಲಿನಲ್ಲಿ ಕಾಲು ಸಿಕ್ಕಿಕೊಳ್ಳಲು, ಆ ಮೇಲೆ ಜನಗಳೆಲ್ಲಾ 'ಅಯ್ಯಯ್ಯೋ, ಸೀಳಿಹಾಕಿತು!' 'ಅಯ್ಯಯ್ಯೋ, ಕೊಂದುಹಾಕಿತು!' ಎಂದು ಕೂಗೆಬ್ಬಿಸಲು, ಆಮೇಲೆ ನಾನು (ಹೋಗಿ) ಕೈಯೇಟುಕೊಟ್ಟು ಆನೆಯನ್ನು ತಿರುಗಿಸಿ ಆ ಪರಿವ್ರಾಜಕನನ್ನು ಬಿಡಿಸಿದೆನು.

ಸೂಳೆ—ನನಗೆ ಸಂತೋಷವಾಯಿತು. ಆಮೇಲಾಮೇಲೆ?

ಚೇಟ—ಆಗ, ಎಲ್ಲಾ ಜನರೂ "ಅಬ್ಬಾ, ಚೇಟನ ಕೆಲಸವನ್ನು ನೋಡಿ!" ಎಂದು ಕೊಂಡಾಡಿದರು. ಆದರೆ ಮತ್ತೆ, ಯಾರೂ ಏನನ್ನೂ ಕೊಡೋಣವೆನ್ನಲಿಲ್ಲ. ಆಮೇಲೆ, ಅಜ್ಜುಕೇ, ಯಾರೋ ಒಬ್ಬ ಕುಲಪುತ್ರನು ಒಡವೆ ಇಟ್ಟುಕೊಳ್ಳ ತಕ್ಕ ಆಯಾ ಸ್ಥಾನಗಳನ್ನು ನೋಡಿಕೊಂಡು, ಬಳಿಕ ಹೆಬ್ಬೆರಳಿನಿಂದ ತಡವಿ, ಆಗಲೂ ಏನೂ ಸಿಕ್ಕದ್ದನ್ನು ಕಂಡು ಅದೃಷ್ಟವನ್ನು ಬೈದು, ದೊಡ್ಡದಾಗಿ ನಿಟ್ಟುಸಿರುಬಿಟ್ಟು—"ಇಷ್ಟೇ ನನ್ನ ಸಂಪತ್ತು!" ಎಂದುಕೊಂಡು, ಪರಿಜನರ ಕೈಯಲ್ಲಿ ಈ ಬಟ್ಟೆಯನ್ನು ಕಳುಹಿಸಿಕೊಟ್ಟನು.

ಸೂಳೆ—ಯಾರಾಗಿರಬಹುದು, ಆರ್ಯ ಚಾರುದತ್ತನ ಗುಣಗಳನ್ನು ಅನುಕರಿಸುತ್ತಿರುವವನು?

ಚೇಟ—ಅಜ್ಜುಕೇ, ನನಗೂ ಕುತೂಹಲವಾಗಿದೆ. ಯಾರಾಗಿರಬಹುದು ಈತ?

ಸೂಳೆ—ಯಾರೋ ಒಬ್ಬ ಸಾಧುಪುರುಷನಿರಬಹುದು.

ಚೇಟ—ಒಳ್ಳೆಯದು. ಕೇಳಿನೋಡೋಣ.

ಸೂಳೆ—ಹಂಜೇ, ಒಬ್ಬನಲ್ಲಿಯೇ ಪಕ್ಷಪಾತವಿಟ್ಟಿರುವುದು (ಉಳಿದವರ) ಗುಣಗಳೆಲ್ಲವನ್ನೂ ಇಲ್ಲದಂತೆಯೇ ಮಾಡುತ್ತದೆ.

ಚೇಟಿ—ಭದ್ರ, ಆತನ ಹೆಸರೇನು, ಗೊತ್ತೇ?

ಚೇಟ—ಇಲ್ಲ, ಗೊತ್ತಿಲ್ಲ.

ಸೂಳೆ—ಅತಿ ಸಣ್ಣ ಕೆಲಸಮಾಡಿಬಿಟ್ಟೆ.

ಚೇಟಿ—ಹಾಗಾದರೆ, ಇಲ್ಲೇಕೆ ಹೇಳುವುದಕ್ಕೆ ಬಂದೆ?

ಚೇಟ—ನನಗೆ ಇಷ್ಟುಮಾತ್ರ ಗೊತ್ತು. ಅವನೊಬ್ಬ ಘನವಂತ; ಹೆಮ್ಮೆಯಿಲ್ಲದವನು.

ಸೂಳೆ—ಬಾ ಮತ್ತೆ, ಅವನನ್ನು ನೋಡೋಣ.

ಚೇಟ—ನೋಡು, ನೋಡು, ಅಜ್ಜುಕೇ. ಆತನು ಇಗೋ ಇಲ್ಲಿ ಹೋಗುತ್ತಿದ್ದಾನೆ.

ಸೂಳೆ—(ಮಹಡಿಯಿಂದ ನೋಡಿ) ಹಂಜೇ, ಆರ್ಯ ಚಾರುದತ್ತನೇ ಇವನು! ಯಜ್ಞೋಪವೀತವೊಂದೇ ಮೇಲುಹೊದಿಕೆಯಾಗಿ ಹೋಗುತ್ತಿದ್ದಾನೆ. ಆತನು ಕಣ್ಣಿಗೆ ಕಾಣದಷ್ಟುದೂರ ಹೋಗುವವರೆಗೂ ಅವನನ್ನು ನೋಡುತ್ತಿರೋಣ.

(ಎಲ್ಲರೂ ಹೋಗುತ್ತಾರೆ)

ಎರಡನೆಯ ಅಂಕ ಮುಗಿಯಿತು.

(ಮುಂದುವರಿಯುವುದು)

ಕೆಲವು ವಚನಗಳು

ದೇಹಕ್ಕೆ ಕುಲವಲ್ಲದೆ ಮನಕ್ಕೆ ಕುಲವಿಲ್ಲವಯ್ಯಾ. ಆದ್ಯರ ವಚನ ಶಿವಶರಣರಿಗೆ ಮಾತ್ರವಲ್ಲವಯ್ಯ, ಮನವಿದ್ದವರಿಗೆಲ್ಲ ಉಂಟಯ್ಯ ಗುರುರಾಜರ ರಾಜ.

* * *

ಶತಶಿರದ ರಾವಣನ ಚಿಕ್ಕಪ್ಪ ಕಾಣಯ್ಯ ಎನ್ನ ಮನಸ್ಸು. ತಲೆ ತರಿಯೆ ಚಿಗಿವಂತೆ ಆಸೆ ಮಡಲಿರಿಯುವುದು, ತರಿದಂತೆ ಚಿಗುರುವುದು; ವಿಶ್ರಾಂತಿಯಿನಿತಿಲ್ಲ. ಸ್ವಾಂತ ವಿಶ್ರಾಂತವಾನಂದ. ಅದನೆಂತು ಪಡೆವೆನೊ ಗುರುರಾಜರ ರಾಜ.

* * *

ಗಂಡನ ಹೆಸರು ಬಾಯೊಳಿದ್ದರೂ ಹೇಳಲು ನಾಚುವ ಬಾಲೆಯಂತೆ ನಿನ್ನ ಭಕ್ತನೆಂದು ಹೇಳಲು ನಾಚುವೆನಯ್ಯ ಗುರುರಾಜರ ರಾಜ. ಭಕ್ತಿ ಬಾಲ್ಯದಲ್ಲಿದೆ ಕಂಡಾ. ವಿಜ್ಞಾನದ ಬಿರುಗಾಳಿ ಭರದಿಂದ ಬೀಸುತಿದೆ; ಭೌತದ ಭೂತವು ಬಾಯ್ತೆರೆದು ಚರಿಸುತಿದೆ; ತರ್ಕರಾಕ್ಷಸನೆನ್ನ ತುತ್ತುಮಾಡುವನೆಂದು ಭಕ್ತಿ ಚಿಂತಿಸುತಿಹುದು. ಪೊರೆವೆಯೊ ಮರೆವೆಯೊ ನೀ ಒಲ್ಲೆ ಗುರುರಾಜರ ರಾಜ.

* * *

ಮೋಡ ಮುಚ್ಚಿದ ತಾವರೆಯಂತೆ ಮಿಡುಕುವುದಯ್ಯ ಎನ್ನ ಮನಸ್ಸು; ಬಾಡಲಿರುವ ಬಳ್ಳಿಯಂತೆ ಕಂದುವುದಯ್ಯ ಎನ್ನ ಮನಸ್ಸು; ಸಂಜೆಯ ಹಕ್ಕಿಯಂತೆ ಇಕ್ಕೆಗಾಣದೆ ಕೂಗುವುದಯ್ಯ ಎನ್ನ ಮನಸ್ಸು. ಗಾಳಿಯಾಗಿ ಬಾರಾ! ಇರ್ಪಾಗಿ ಬಾರಾ! ನೇಸರಾಗಿ ಬಾರಾ! ಗುರುರಾಜರ ರಾಜ.

'ಮಾನ್ವಿ.'

ಕರ್ಣಾಟಕ 'ಟಂಕಾರ' ಟೀಕೆ

ಮಹಾಕವಿ ರಾಜಶೇಖರನು 'ಕಾವ್ಯಮೀಮಾಂಸಾ' ಎಂಬ ಲಕ್ಷಣಗ್ರಂಥದ ಏಳನೆಯ ಅಧ್ಯಾಯದಲ್ಲಿ ತನ್ನ ಕಾಲದ ಹಲವು ದೇಶಗಳವರು ಗದ್ಯಪದ್ಯಗಳನ್ನು ಓದುವ ಬಗೆಯನ್ನು ವಿಮರ್ಶೆಮಾಡಿದ್ದಾನೆ. ಕೆಲವರನ್ನು ಹೊಗಳಿದ್ದಾನೆ; ಮತ್ತೆ ಕೆಲವರನ್ನು ಹೀಯಾಳಿಸಿ ಅಲ್ಲಗಳೆದಿದ್ದಾನೆ; ಇನ್ನು ಕೆಲವರನ್ನು ಉದಾಸೀನ ದೃಷ್ಟಿಯಿಂದ ನೋಡಿದ್ದಾನೆ. ಆ ಸಂದರ್ಭದಲ್ಲಿ ಕನ್ನಡಿಗರ ಓದುಗಾರಿಕೆಯನ್ನು ಕುರಿತ ಮಾತಿದು:

> "ರಸಃ ಕೋऽಪ್ಯಸ್ತು ಕಾಪ್ಯಸ್ತು ರೀತಿಃ ಕೋऽಪ್ಯಸ್ತು ವಾ ಗುಣಃ |
> ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರಪಾಠಿನಃ ||"

"ಕಾವ್ಯದ ರಸ, ರೀತಿ, ಗುಣ ಇವು ಹೇಗಿದ್ದರೂ ಕರ್ಣಾಟಕರೆಲ್ಲರೂ ಗರ್ವದೊಡನೆ ಟಂಕಾರೋತ್ತರವಾಗಿ—ಎಂದರೆ ಟಂಕಾರ ಮುಖ್ಯವಾಗಿ ಕಾಣುವ ಹಾಗೆ—ಓದುತ್ತಾರೆ" ಎಂದರ್ಥ.

ಸರಿ. 'ಟಂಕಾರ' ಎಂದರೆ? ನನಗೆ ತಿಳಿದಮಟ್ಟಿಗೆ ಇದಕ್ಕೆ ಯಾರೂ ಸರಿಯಾದರ್ಥವನ್ನು ತಿಳಿಸಿಲ್ಲ. 'ಕಾವ್ಯಮೀಮಾಂಸೆ'ಯ ತೆಲುಗು ಭಾಷಾಂತರಕಾರರು 'ಟಂಕಾರೋತ್ತರ' ಶಬ್ದಕ್ಕೆ "ಟ್ ಟ್ ಎಂಬಂತೆ—ವಿರಾಮಗಳುಂಟಾಗುವಂತೆ" ಎಂದು ಟೀಕೆ ಟೋಕೆ ಎರಡನ್ನೂ ಮಾಡಿದ್ದಾರೆ. ಇದೊಂದು ವಿಶ್ವಾಮಿತ್ರನ ಸಂಪ್ರದಾಯಕ್ಕೆ ಸೇರಿದ ಅರ್ಥ ಸೃಷ್ಟಿ.

ಬರೋಡಾ ಸರ್ಕಾರದವರ ಆಶ್ರಯದಲ್ಲಿ 'ಕಾವ್ಯಮೀಮಾಂಸೆ'ಯನ್ನು ಮೂರನೆಯ ಸಲ ಪರಿಶೋಧಿಸಿ ಮುದ್ರಿಸಿದ ಪಂಡಿತರೊಬ್ಬರು ಇಂಗ್ಲೀಷು ಭಾಷೆಯಲ್ಲಿ ವಿಸ್ತಾರವಾಗಿ ಟೀಕೆಯನ್ನು ಬರೆಯುತ್ತಾ ಮೇಲ್ಕಂಡ ಪದ್ಯದ ವಿಷಯದಲ್ಲಿ ಇನ್ನೂ ವಿಚಿತ್ರವಾಗಿ ಹೀಗೆ ಬರೆದಿದ್ದಾರೆ:

"Karṇāṭakas are criticized here as they are always fond of using the letter 'ṭa' everywhere without paying any attention to the *Rasa* or *Rīti* or *Guṇa* in the poetry they read."

"ಓದುವ ಕಾವ್ಯದ ರಸ ರೀತಿ ಗುಣಗಳನ್ನು ಸ್ವಲ್ಪವೂ ಗಮನಿಸದೆ ಎಲ್ಲಾ ಕಡೆಗಳಲ್ಲಿಯೂ 'ಟ' ಎಂಬ ಅಕ್ಷರವನ್ನು ಪ್ರಯೋಗಿಸುವುದರಲ್ಲಿ ಕನ್ನಡಿಗರಿಗೆ ಬಹಳ ಪ್ರೀತಿಯಾದ್ದರಿಂದ ಆ ಪದ್ಧತಿಯನ್ನಿಲ್ಲಿ ಖಂಡಿಸಲಾಗಿದೆ"!

'ಟಂಕಾರ' ಶಬ್ದದಲ್ಲಿರುವ ಸೊನ್ನೆಯನ್ನು ಸದ್ದಿಲ್ಲದೆ ನುಂಗಿ 'ಟಕಾರ'ವನ್ನಾಗಿ ಮಾಡಿದ 'ಜಾಣಗುರುಡು' ಹಾಗಿರಲಿ. ಓದುವಾಗ ಎಲ್ಲಾ ಕಡೆಗಳಲ್ಲಿಯೂ ಟಕಾರವನ್ನು ಪ್ರಯೋಗಿಸುವುದೆಂದರೆ ಏನು?—

"ಶ್ರೀಟ ವಧುವಿಟನಂಬಟಕಟ ಚಟಕೋರಟಕಂಟ ಪೊಟರೆ . . ."

ಹೀಗೆಯೇ? ಹೀಗೆ ಓದಿದರೇನೋ ಅದೂ ಒಂದು ವಿಧವಾಗಿ 'ಚಟುವಟಿಕೆ'ಯಾಗಿ ಚೆನ್ನಾಗಿರುತ್ತದೆ, ಕೇಳುವುದಕ್ಕೆ! ಆದರೆ ಇಂಥಾ ವಿಚಿತ್ರ ಪಾಠಪರಿಪಾಟಿಯನ್ನು ಸೃಷ್ಟಿಮಾಡುವಂಥಾ ಪ್ರತಿಭೆ ಕನ್ನಡಿಗರಿಗೆ ಯಾವ ಸಮಯದಲ್ಲಾದರೂ ಇದ್ದಿತೇ ಎಂಬ ಸಂದೇಹ ಸ್ವಲ್ಪವಾಗಿ ಬಾಧಿಸುತ್ತದೆ. ಅದು ಹಾಗಿರಲಿ, ನಮಗೆ ತಿಳಿಯದ ವಿಷಯ.

ಟಂಕಾರ ಶಬ್ದಕ್ಕೆ ನಿಘಂಟುಗಳಲ್ಲಿ ಹಲವು ಅರ್ಥಗಳು ಕಾಣಬರುವುವು—

"ಗುಣಧ್ವನೌ ಪ್ರಸಿದ್ಧಾವಪಿ ಟಂಕಾರಃ"

('ತ್ರಿಕಾಂಡಶೇಷ.')

"ಟಂಕಾರೋ ವಿಸ್ಮಯೇ ಪುಂಸಿ ಪ್ರಸಿದ್ಧೌ ಶಿಂಜಿನೀಧ್ವನೌ."

('ಮೇದಿನೀಕೋಶ.')

'ವಿಶ್ವಕೋಶ'ದಲ್ಲಿಯೂ ಹೀಗೆಯೇ. ಇದರಿಂದ (೧) ಹೆದೆಯನ್ನು ಮಿಾಟುವ ಧ್ವನಿ, (೨) ವಿಸ್ಮಯ, (೩) ಕೀರ್ತಿ ಎಂಬ ಮೂರರ್ಥಗಳು ಲಭಿಸಿದುವು. 'ಶಬ್ದಕಲ್ಪದ್ರುಮ'ದಲ್ಲಿ ಮೇಲ್ಕಂಡ ೧-೨ ಅರ್ಥಗಳ ಜತೆಗೆ 'ಧ್ವನಿ ಸಾಮಾನ್ಯ' ಎಂಬರ್ಥವನ್ನೂ ಕೊಟ್ಟು, "ಟಂಕಾರನೃತ್ಯತ್‌ಕಲ್ಲೋಲಾ"—ಎಂಬ 'ಕಾಶೀಖಂಡ'ದ ಪ್ರಯೋಗವನ್ನೂ "ಸೃಗಾಲೋಲೂಕಟಂಕಾರೈಃ ಪ್ರಣೇದುರಶಿವಂ ಶಿವಾಃ" ಎಂಬ ಭಾಗವತ ಪ್ರಯೋಗವನ್ನೂ ಉದಾಹರಿಸಿದೆ. ಆಪ್ಟೇಯವರ 'ಸಂಸ್ಕೃತಾಂಗ್ಲೇಯ ನಿಘಂಟು'ವಿನಲ್ಲಿ, 'ಹಿಂದೀ ಶಬ್ದಸಾಗರ'ದಲ್ಲಿ ಈ ಅರ್ಥಗಳನ್ನೇ ಕೊಟ್ಟಿದೆ. ಆದರೆ ಕಿಟ್ಟೆಲ್ ಸಾಹೇಬರಿಗೆ ವಿಸ್ಮಯ, ಕೀರ್ತಿ ಎಂಬರ್ಥಗಳು ಗಮನಕ್ಕೆ ಬರಲಿಲ್ಲ.

ಮೇಲ್ಕಂಡ 'ಹೆದೆಯ ಮಿಾಟು', 'ಕೀರ್ತಿ' ಎಂಬರ್ಥಗಳಿಗೂ ನಮಗೂ ಪ್ರಕೃತದಲ್ಲಿ ಸಂಬಂಧವಿಲ್ಲ. 'ಧ್ವನಿ' ಎಂಬ ಸಾಮಾನ್ಯಾರ್ಥವನ್ನು ತೆಗೆದುಕೊಂಡು, ಆ ಕಾಲದ ಕನ್ನಡಿಗರು ಯಾವುದನ್ನು ಓದಿದರೂ ಗಟ್ಟಿಯಾಗಿ ಸದ್ದಾಗುವಂತೆ ಓದುತ್ತಿದ್ದರು ಎಂದು ಬೇಕಾದರೆ ಅರ್ಥಮಾಡಬಹುದು. ಆದರೆ ಅದು ತೃಪ್ತಿಕರವಾಗಿಲ್ಲ.

ನನ್ನ ದೃಷ್ಟಿಗೆ ಬಿದ್ದಿರುವ ಇನ್ನೆರಡು ಪ್ರಾಚೀನ ಪ್ರಯೋಗಗಳನ್ನು ಇಲ್ಲಿ ಉದಾಹರಿಸುತ್ತೇನೆ:

(೧) 'ಸರಸ್ವತೀ ಕಂಠಾಭರಣ' ಮುಂತಾದ ಹಲವು ಪ್ರಾಚೀನ ಲಕ್ಷಣ ಗ್ರಂಥಗಳಲ್ಲಿ ಈ ಕೆಳಗಿನ ಪ್ರಾಕೃತ ಗಾಥೆ ಉದಾಹರಿಸಲ್ಪಟ್ಟಿದೆ—

"ಣಹು ಣವರ ಪುತ್ತಿ ಕೋಅಂಡದಂಡಏ ಮಾಣುಸಮ್ಮಿ ಏಮೇಅ |
ಗುಣವಜ್ಜಿಏ ಣ ಜಾಅಇ ವಂಸುಪ್ಪಣ್ಣೇ ವಿ **ಟಂಕಾರೋ** ||"

ನ ಖಲು ಕೇವಲಂ ಪುತ್ರಿ ಕೋದಂಡದಂಡೇ ಮಾನುಷೇಷ್ಯೇವಮೇವ |
ಗುಣವರ್ಜಿತೇ ನ ಜಾಯತೇ ವಂಶೋತ್ಪನ್ನೇಪಿ ಟಂಕಾರಃ ||

—(ಛಾಯೆ)

"ಬಿಲ್ಲಿನ ಗಣೆಗೆ ಮಾತ್ರವಲ್ಲ, ಮಗಳೇ, ಮನುಷ್ಯನಿಗೂ ಹೀಗೆಯೇ; ಎಂಥಾ ವಂಶದಲ್ಲಿ (ಬಿದಿರಿನಲ್ಲಿ) ಹುಟ್ಟಿದರೂ ಗುಣ (ಹೆದೆ) ಇಲ್ಲದಿದ್ದರೆ ಟಂಕಾರವು ಹುಟ್ಟುವುದಿಲ್ಲ" ಎಂದರ್ಥ.

ಇಲ್ಲಿ ಭೋಜರಾಜನು "ಮಾನುಷೇಪಿ ಗುಣವತ್ಯೇವ ಮಹಾನ್ **ಶಬ್ದೋ** ಭವತಿ" ಎಂದು ಟೀಕಿಸಿದನು. ಅದಕ್ಕೆ ವ್ಯಾಖ್ಯಾಕಾರನು 'ಖ್ಯಾತಿ' ಎಂದೇ ಸ್ಪಷ್ಟಪಡಿಸಿದ್ದಾನೆ ('ಸರಸ್ವತೀ ಕಂಠಾಭರಣ', ಪರಿಚ್ಛೇದ ೩, ಪುಟ ೩೫೫).

(೨) ಮತ್ತು ವಾಕ್ಪತಿರಾಯನ 'ಗಉಡವಹೊ' ಎಂಬ ಪ್ರಾಕೃತ ಕಾವ್ಯದಲ್ಲಿ ಈ ಶ್ಲೋಕವಿದೆ—

ವಿಣಅಗುಣೋ ದಂಡಾಡಂಬರೋ ಅ ಮಂಡಂತಿ ಜಹ ಣರಿಂದಸಿರಿಂ |
ತಹ **ಟಂಕಾರೋ** ಮಹುರತ್ತಣಂಚ ವಾಯಂ ಪಸಾಹೇಂತಿ ||

—(ಕವಿಪ್ರಶಂಸಾ, ಪ. ೬೮.)

ವಿನಯಗುಣೋ ದಂಡಾಡಂಬರಶ್ಚ ಮಂಡಯತೋ ಯಥಾ ನರೇಂದ್ರ ಶ್ರಿಯಮ್ |
ತಥಾ ಟಂಕಾರೋ ಮಧುರತ್ವಂ ಚ ವಾಚಂ ಪ್ರಸಾಧಯತಃ ||

—(ಛಾಯೆ.)

"ವಿನಯಗುಣವೂ ಶಿಕ್ಷೆಯ ಆಡಂಬರವೂ ಹೇಗೆ ರಾಜಲಕ್ಷ್ಮಿಗೆ ಅಲಂಕಾರವಾಗುವುವೋ ಹಾಗೆಯೇ ಮಾಧುರ್ಯವೂ ಟಂಕಾರವೂ ಮಾತಿಗೆ ಅಲಂಕಾರವಾಗುವುವು" ಎಂದರ್ಥ.

ಈ ಪದ್ಯದಲ್ಲಿ ವ್ಯಾಖ್ಯಾಕಾರನು 'ಟಂಕಾರಃ—ಓಜೋಲಕ್ಷಣಃ' ಎಂದು ಬರೆದನು. ಇದನ್ನು ನೋಡಿಯೇ 'ಪಾಇಅಸದ್ದಮಹಣ್ಣವೋ' ಎಂಬ 'ಪ್ರಾಕೃತ ಭಾಷಾ ನಿಘಂಟು'ವಿನಲ್ಲಿ 'ಟಂಕಾರ—ಓಜಸ್' ಎಂದು ಅರ್ಥವನ್ನು ಹೇಳಿದೆ. ಓಜಸ್ ಎಂದರೆ ಸಮಾಸಗಳಿಂದ ತುಂಬಿರುವಿಕೆಯೆಂದು ಆಚಾರ್ಯ ದಂಡಿ ಮುಂತಾದವರ ಮತ; ಪದಗಳ ಹೆಣಿಗೆ ಬಿಗಿಯಾಗಿರುವಿಕೆ ಎಂದು ವಾಮನನ ಮತ; ಶಬ್ದಾರ್ಥ

ಗಳೆರಡರಲ್ಲಿಯೂ ಚಿತ್ತಕ್ಕೆ ದೀಪ್ತಿಯನ್ನೂ ಉದ್ರೇಕವನ್ನೂ ಉಂಟುಮಾಡುವ ಗುಣವೆಂದು ಮಮ್ಮಟಾದಿಗಳ ಅಭಿಪ್ರಾಯ. ಇವುಗಳಲ್ಲಿ ಯಾವುದು ಮೇಲ್ಕಂಡ ಪದ್ಯದ ವ್ಯಾಖ್ಯಾಕಾರನ ಮತವೋ ತಿಳಿಯದು.

ಶಬ್ದಸ್ವರೂಪ ವಿವೇಚನೆಮಾಡಿ ನೋಡಿದರೆ ಟಂಕಾರ ಶಬ್ದಕ್ಕೆ ಮುಖ್ಯವಾದ ಮೊದಲನೆಯ ಅರ್ಥ—ಹೆದೆ ಮುಂತಾದವುಗಳನ್ನು ಮೀಟುವುದರಿಂದ ಉಂಟಾಗುವ ಒಂದು ವಿಧವಾದ ಧ್ವನಿ. 'ಟಂ' ಎನ್ನುವುದು ಆ ಧ್ವನಿಯ ಅನುಕರಣ; ಅದನ್ನು ಮಾಡುವುದು ಟಂಕಾರ. ಈ ಅರ್ಥದಿಂದ ಮುಂದಕ್ಕೆ ಬೆಳೆದುಬಂದ ಲಾಕ್ಷಣಿಕವಾದ ಅರ್ಥಗಳು—ಶತ್ರುವಿನ ಮುಂದೆ ನಿಂತು ಹೆದೆಯನ್ನು ಮೀಟುವವನ ಚಿತ್ತವೃತ್ತಿಗಳಾದ ಆತ್ಮವಿಶ್ವಾಸ, ನಿರ್ಲಕ್ಷ್ಯತೆ, ಹೆಮ್ಮೆ ಎಂಬ ವೀರಗುಣಗಳು. ಇನ್ನೂ ಮುಂದಕ್ಕೆ ಸರಿದು ಗರ್ವ, ದುರಹಂಕಾರ ಎಂದೂ ಪರಿಣಮಿಸಬಹುದು. 'ವಿಸ್ಮಯ' ಎಂಬರ್ಥವನ್ನು ಹೇಳಿದ ಪ್ರಾಚೀನ ನಿಘಂಟುಕಾರರಿಗೆ ಈ ಭಾವವಿದ್ದರೂ ಇರಬಹುದು. ವಿಸ್ಮಯ ವೆಂದರೆ 'ಆಶ್ಚರ್ಯ' ಎಂಬರ್ಥ ಮಾತ್ರವಲ್ಲದೆ 'ಗರ್ವ' ಎಂಬರ್ಥವೂ ಉಂಟು. "ವಿಸ್ಮಯೋದ್ಭುತಗರ್ವಯೋಃ" ಎಂದು 'ವಿಶ್ವಕೋಶ.' ಮತ್ತು ಟಂಕಾರ ಶಬ್ದಕ್ಕೆ ಆಶ್ಚರ್ಯ ಎಂಬರ್ಥದಲ್ಲಿ ಇದುವರೆಗೆ ಎಲ್ಲಿಯೂ ಪ್ರಯೋಗವು ದೊರೆತಿಲ್ಲ. ಆಪ್ಟೇಯವರ 'ಸಂಸ್ಕೃತಾಂಗ್ಲೇಯ ನಿಘಂಟು'ವಿನಲ್ಲಿ 'Surprise, Wonder' ಎಂಬ ಇಂಗ್ಲೀಷು ಅರ್ಥವನ್ನು ಕೊಟ್ಟಿರುವುದಕ್ಕೆ ಪ್ರಾಚೀನ ನಿಘಂಟುಗಳಲ್ಲಿನ ವಿಸ್ಮಯ ಶಬ್ದಕ್ಕೆ ಆಶ್ಚರ್ಯವೆಂಬ ಸಾಮಾನ್ಯಾರ್ಥವನ್ನು ಮಾಡಿಕೊಂಡಿರುವುದೇ ಕಾರಣ ವಾಗಿರಬಹುದು. ಕನ್ನಡಿಗರಲ್ಲಿ ಈಗಲೂ ದುರಭಿಮಾನ ಎಂಬರ್ಥದಲ್ಲಿ 'ಟೇಂಕಾರ' (ಠೇಂಕಾರ) ಶಬ್ದವು ಸಾಮಾನ್ಯ ಪ್ರಚಾರದಲ್ಲಿರುವುದು ನಾವು ಇಲ್ಲಿ ಗಮನಿಸಬೇಕಾದ ವಿಷಯ. ಇದು ಟಂಕಾರ ಶಬ್ದದ ರೂಪಾಂತರವೇ ಎಂದೂಹಿಸಬಹುದಾಗಿದೆ.

ಹೀಗೆ ವೀರಧರ್ಮವಾದ ನಿರ್ಲಕ್ಷ್ಯತೆ, ಹೆಮ್ಮೆ ಎಂಬರ್ಥವನ್ನು ಟಂಕಾರ ಶಬ್ದಕ್ಕೆ ನಾವು ಸ್ವೀಕರಿಸಿದರೆ "ಟಂಕಾರ ನೃತ್ಯತ್ ಕಲ್ಲೋಲಾ" ಎಂಬ 'ಕಾಶೀಖಂಡ' ಪ್ರಯೋಗಕ್ಕೆ ನದಿಯ ಅಲೆಗಳು ಹೆಮ್ಮೆಯಿಂದ ನಾಟ್ಯವಾಡುತ್ತಿರುವುವು ಎಂಬ ರಮಣೀಯವಾದ ಭಾವವನ್ನು ಮಾಡಬಹುದು. "ಣಹು ಣವರ" ಎಂಬ ಪ್ರಾಕೃತ ಗಾಥೆಯಲ್ಲಿ "ಸದ್ವಂಶದಲ್ಲಿ ಹುಟ್ಟಿದರೂ ಗುಣವಿಲ್ಲದ ಮನುಷ್ಯನಿಗೆ ಕೀರ್ತಿಯುಂಟಾಗು ವುದಿಲ್ಲ" ಎಂಬ ಭೋಜರಾಜನ ವ್ಯಾಖ್ಯಾನದ ಜತೆಗೆ, "ಅಂತಹವನಿಗೆ ಆತ್ಮ ವಿಶ್ವಾಸವೂ ನುಗ್ಗಿ ಕೆಲಸಮಾಡುವ ಶಕ್ತಿಯೂ ಉಂಟಾಗುವುದಿಲ್ಲ" ಎಂಬರ್ಥವನ್ನೂ ಮಾಡಬಹುದು. 'ಗಉಡವಹ'ದ ಪದ್ಯದಲ್ಲಿ "ನಪ್ಪೆಯಾಗಿಲ್ಲದ, ದೀಪ್ತಿಯುತವಾದ, ಕೇಳಿದೊಡನೆಯೇ ರಸಭಾವಗಳು ಮನದಟ್ಟುವ, ಶಬ್ದಾರ್ಥಗಳ ಜೋಡಣೆ ಕವಿತೆಗೆ

ಅಲಂಕಾರ" ಎಂಬರ್ಥವನ್ನು ಕೊಡಬಹುದು. "ಸೃಗಾಲೋಲೂಕ" ಎಂಬ ಭಾಗವತ ಪ್ರಯೋಗಕ್ಕೆ ಮಾತ್ರ ಬರಿಯ ಧ್ವನಿಯೆಂದೇ ಅರ್ಥಮಾಡಬೇಕಾಗಿರುವುದು.

ಹೀಗೆಯೇ "ಕನ್ನಡಿಗರು ಟಂಕಾರೋತ್ತರಪಾಠಿಗಳು" ಎಂಬ ವಾಕ್ಯಕ್ಕೆ—ಒಂದು ವಿಧವಾದ ಗತ್ತಿನಿಂದ, ಧೈರ್ಯದಿಂದ, ಸ್ಪಷ್ಟವಾಗಿ, ನಿರ್ಲಕ್ಷ್ಯವಾಗಿ ಓದ ಬಲ್ಲವರೆಂದು ನಾವೀಗ ಅರ್ಥಮಾಡಬಾರದೇಕೆ? ಟಂಕಾರ ಶಬ್ದವು ಈ ಅರ್ಥದಲ್ಲಿ 'ಸಭಾಕಂಪ' ಶಬ್ದಕ್ಕೆ ಸರಿಯಾದ ವಿರುದ್ಧಾರ್ಥವನ್ನು ತಿಳಿಸುವುದು. ನಿಜವಾಗಿ ಇದೊಂದು ಬಹಳ ಮುಖ್ಯವಾದ, ಶ್ಲಾಘ್ಯವಾದ ಓದುಗಾರಿಕೆಯ ಸದ್ಗುಣ. ಈ ಗುಣವನ್ನು ಸಾಧಿಸದಿದ್ದರೆ 'ಗಮಕಿ' ವಿದ್ಯೆಯೇ ನಿಷ್ಫಲವಾಗಿ ನೀರಸವಾಗುವುದು. ಏಕೆಂದರೆ ಓದುಗಾರಿಕೆ ಒಂದು ವಿಧವಾದ ಅಭಿನಯವಿದ್ಯೆ. ಅಲ್ಲದೆ ಮತ್ತೊಬ್ಬನು ರಚಿಸಿದ ಶಬ್ದಗಳ ಸಹಾಯದಿಂದ ವಿವಿಧ ರಸಭಾವ ಸನ್ನಿವೇಶಗಳನ್ನು ವಿರಾಮವಿಲ್ಲದೆ, ಅನುಕ್ರಮವಾಗಿ, ಒಬ್ಬನೇ ನಿರ್ಮಾಣಮಾಡಿ ತೋರಿಸುವ ಕುಶಲಕಲೆಯಿದು. ಇದಕ್ಕೆ ಕೈಹಾಕಿದವನಿಗೆ ಸಭಾಕಂಪವಿದ್ದರೆ ಗತಿಯೇನು? ಆದ್ದರಿಂದ ಗಮಕಿಗೆ ಟಂಕಾರವು ಮುಖ್ಯವಾಗಿ ಸಾಧಿಸಬೇಕಾದ ಮೊದಲನೆಯ ಸುಗುಣ.

ಆದರೆ ಆತ್ಮವಿಶ್ವಾಸವಾದ ಅಭಿಮಾನವು ಅಹಂಕಾರವಾಗಿ ಪರಿಣಮಿಸುವಂತೆ ಟಂಕಾರವೂ ಠೇಂಕಾರವಾಗಿ ಪರಿಣಮಿಸಬಹುದು. ಸಹಜವಾಗಿ ರಸಭಾವಗಳನ್ನನು ಭವಿಸುವ ಶಕ್ತಿಯುಳ್ಳವರು ಹಲವರಿರುವುದಿಲ್ಲ. ಅವುಗಳನ್ನು ಇತರರು ಅನುಭವಿಸುವಂತೆ ಮಾಡಬಲ್ಲವರ ಸಂಖ್ಯೆಯಂತೂ ಮತ್ತಷ್ಟು ಸ್ವಲ್ಪ. ಸಾಧನೆ, ಸಂಸ್ಕೃತಿ ಇವುಗಳ ಬಲದಿಂದ ಮೇಲ್ಕಂಡ ಶಕ್ತಿಗಳನ್ನು ತಕ್ಕಮಟ್ಟಿಗೆ ಸಂಪಾದಿಸಬಹುದು. ಆದರೆ ಸಹಜವಾಗಿ ಅರಸಿಕರಾದವರು ಬಲಾತ್ಕಾರ ಸಾಧನೆಯಿಂದ ರಸಿಕರ ಪದ್ಧತಿಯನ್ನನು ಕರಿಸಲು ಪ್ರಯತ್ನಪಟ್ಟರೆ ಅಣಕಿಸುವ ಹಾಗಾಗಿ ಅಸಹ್ಯವಾಗುವುದು. ಅಂಥವರಲ್ಲಿ ಬರಿಯಜೋರು, ಜಬರದಸ್ತಿ, ಅನಾವಶ್ಯಕವಾದ ಆಗ್ರಹ, ಬೇಕಿಲ್ಲದ ಬಿಗಿ, ಎಲ್ಲೆಂದರೆ ಅಲ್ಲಿ ಎಳೆಯುವುದು, ಅಲ್ಪಪ್ರಾಣಗಳನ್ನು ಮಹಾಪ್ರಾಣಗಳನ್ನಾಗಿ ಮಾಡುವುದು—ಇತ್ಯಾದಿ ದುರ್ಗುಣಗಳು ತುಂಬಿದ್ದು ರಸಭಾವಗಳನ್ನು ರಜ್ಜೆಗೆಳೆದು ಬಿಸಾಡುವುವು. ಈಗಲೂ ಕರ್ಣಾಟಕ ಗಮಕಿಗಳಲ್ಲಿ ಕೆಲವರು—ಏಕೆ, ಹಲವರು—"ಶ್ರೀವನಿತೆಯ ರಸನೆ" ಎಂಬ ನಾರಣಪ್ಪನ ಸಾಮಾನ್ಯ ಮಂಗಳಾಚರಣ ಪದ್ಯವನ್ನು ಓದುವಾಗಲೂ ನಾಟಿ, ಹಂಸಧ್ವನಿ ಮುಂತಾದ ರಾಗಗಳ ಉದ್ರಿಕ್ತ ಧಾಟಿಯಲ್ಲಿ ಶಬ್ದಗಳನ್ನು—ಅರ್ಥದ ಮಾತು ಹಾಗಿರಲಿ—ಒತ್ತಿ ಎಳೆದು ಮುರಿದು ಹರಿದು ಅಸಾಧ್ಯ ಕೋಲಾಹಲವನ್ನು ಮಾಡುವರು. ಇಂಥವರು ಕೆಲವರು ಆ ಕಾಲದಲ್ಲೂ ಇದ್ದಿರಬೇಕು. ನಮ್ಮ ಮತ್ತು ಆತನ ದುರದೃಷ್ಟದಿಂದ ಅಂಥಾ ಕೆಲವರ ಪಾಠಕ್ರಮವನ್ನೇ ಕೇಳಿ ರಾಜಶೇಖರನು

ಕೂಡ ಸರ್ವ ಕರ್ಣಾಟಕರೂ ಹೀಗೆಯೇ ಓದುವರೆಂದು ಸಗಟಾಗಿ ಹೇಳುವುದು ಸ್ವಲ್ಪ ಅಧಿಕಪ್ರಸಂಗದ ಮಾತೆನ್ನುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಆ ಕಾಲದ ಎಲ್ಲಾ ಕನ್ನಡ ಗಮಕಿಗಳನ್ನು ರಾಜಶೇಖರನು ಓದಿಸಿ ಕೇಳಿದ್ದಾನೆಂದು ಊಹಿಸು ವುದು ಅಸಾಧ್ಯ. ಆದ್ದರಿಂದ ಆತನ ಅತಿಶಯೋಕ್ತಿಗೆ ನಾವಷ್ಟಾಗಿ ಗಮನಕೊಡ ಬೇಕಾಗಿಲ್ಲ. ಈಗಿನಂತೆಯೇ—ಮತ್ತು ಇನ್ನೂ ಹೆಚ್ಚಾಗಿಯೇ—ಬಹಳ ಹಿಂದಿನ ಕಾಲದಲ್ಲಿಯೂ (ರಾಜಶೇಖರನು ಒಂಬತ್ತನೆಯ ಶತಕದವನು) ಕರ್ಣಾಟಕರಲ್ಲಿ ಓದುಗಾರಿಕೆ ಹೆಚ್ಚು ಪ್ರಾಶಸ್ತ್ಯವನ್ನೂ ಪ್ರೋತ್ಸಾಹವನ್ನೂ ಪಡೆದ ಲಲಿತಕಲೆಯಾ ಗಿತ್ತೆಂಬ ಹೆಮ್ಮೆಯ ವಿಷಯವನ್ನಾತನಿಂದ ನಾವು ತಿಳಿದಿದ್ದೇವೆ. ಅದಕ್ಕೆ ಕೃತಜ್ಞ ರಾಗಿರೋಣ.

ರಾ. ಅನಂತಕೃಷ್ಣ ಶರ್ಮ.

ಮಾರಿಯ ಪದ

ಬಂಡಿಗೆ ಬಂಡಿ ಬಂದೊ ಕೊಂಡಕೆ ಸಾದೆ ತಂದೊ| ಮೂ-
ಗಂಡಗದಕ್ಕಿ ಮುಯ್ಬಂದೊ| ಮೂ-
ಗಂಡಗದಕ್ಕಿ ಮುಯ್ಬಂದೊ ನನ ತಾಯಿ|
ಮುಂಗೊಂಡ ಹಾಯೋ ಮಗ ಬಂದ||

ಒಕ್ಕಕ್ಕಿ ಆರತಿ ಚುಚ್ಚಿದ ಬಾಯ್ಬೀಗ|
ಉಕ್ಕೋ ಮರಳಾಗೆ ಬರಲಾರೆ|
ಉಕ್ಕೋ ಮರಳಾಗೆ ಬರಲಾರೆ ನನ ತಾಯಿ|
ಒಪ್ಸಿಕೊಳ್ಳೆ ನನ್ನ ಹರಕೆಯ||

ಒಪ್ಸಿಕೊಳ್ಳೋಕೆ ಚಿಕ್ಕಪ್ನ ಮಗನೇನೊ|
ಸುತ್ತಿಬಾರೊ ನನ್ನ ಪೌಳೀಯ|
ಸುತ್ತಿಬಾರೊ ನನ್ನ ಪೌಳೀಯ ನನ ಮುಂದೆ|
ಒಪ್ಸಿಹೋಗೋ ನಿನ್ನ ಹರಕೆಯ||

ಕುಂಕುಮದೇರೀ ಮೇಲೆ ಕುಂತಿರುವಳಿವಳ್ಯಾರೆ|
ಕುಂಕುಮದ ಸೀರೆ ನೆರಿಗ್ಯೋಳೆ|
ಕುಂಕುಮದ ಸೀರೆ ನೆರಿಗ್ಯೋಳೆ ನನ್ನ ತಾಯಿ|
ಕುಂತು ಮೆರಸಮ್ಮ ನಮ ಪೂಜೆಯ||

ಯಾಕೆ ಮಾರವ್ವಾ ಮೂಡ್ಗಡೆ ಮೊಗನಾದೆ|
ನೋಡಾಕೆ ಬಂದೋರು ನಗ್ತಾರೆ|
ನೋಡಾಕೆ ಬಂದೋರು ನಗ್ತಾರೆ ನನ ತಾಯಿ|
ನಿನ್ನ ಕಾಲಿಗೆ ಬಿದ್ದೇನು ದೈವಾಗೆ||

ಹತ್ಲಾರ್ದ ಮರಕೆ ಎತ್ರಾನೆ ಕಲ್ಹಾಕಿ|
ಹತ್ತಿ ನೋಡ್ಯಾಳು ತೌರೂರ|
ಹತ್ತಿ ನೋಡ್ಯಾಳು ತೌರೂರ ಮಾರವ್ವ|
ಗಿಂಡಿಯಾರತಿ ಬರಲಿಲ್ಲ||

ಅಮ್ಮನ ಗುಡಿ ಸುತ್ತ ಸಾಲು ತೆಂಗಿನ ಮರ |
ವಾಲಾಡಿ ಬೆಳೆಯೋ ಗಜನಿಂಬೆ |
ವಾಲಾಡಿ ಬೆಳೆಯೋ ಗಜನಿಂಬೆ ಮರದಲ್ಲಿ |
ಕಳ್ಳರು ಕೊಯ್ವಾಗ ಕಸುಗಾಯಿ ||

ಅರುಗಿನ ಜೈಲಲ್ಲಿ ಹಿಂಡೆಮ್ಮೆ ಕಾಯೋಳು |
ಹಂಡೇಲಿ ಹಾಲ ಕರೆದಾಳೊ |
ಹಂಡೇಲಿ ಹಾಲ ಕರೆದಾಳೊ ನನ ತಾಯಿ
ಗಿಂಡೀಲಿ ಮೊಸರ ಎರೆದಾಳೊ ||

ಸಂಗ್ರಹಕಾರರು : ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ, ಬೆಂಗಳೂರು.

ಬಂಕಿಂ ಪರಿಚಯ*

ಮುನ್ನುಡಿ

ಬಂಕಿಂಚಂದ್ರನು ಇಹಲೋಕವನ್ನು ಬಿಟ್ಟು ೪೪ ವರ್ಷಗಳಾಗಿ ಹೋದುವು. ಅನಂತವಾದ ಕಾಲಸ್ರೋತದಲ್ಲಿ ಈ ೪೪ ವರ್ಷಗಳು ಸಾಮಾನ್ಯವಾದ ಜಲಬುದ್ಬುದದಂತೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಬಂಕಿಂಚಂದ್ರನೇ "ವರ್ಷಗಳು ಕಾಲದ ಮಾನದಂಡವೇನು ? ಭಾವದಲ್ಲಿಯೂ ಅಭಾವದಲ್ಲಿಯೂ ಕಾಲದ ಮಾನದಂಡವಿರುವುದು" ಎಂದು ಹೇಳಿದ್ದಾನೆ.

ಬಂಕಿಂಚಂದ್ರನ ವಿಷಯದಲ್ಲಿ ನಮಗಿರುವ ಅಭಾವಬೋಧೆಯನ್ನು ಕಳೆದುಹೋಗಿರುವ ವರ್ಷಗಳ ಲೆಕ್ಕದಿಂದ ನಿರೂಪಿಸಲಾಗುವುದಿಲ್ಲ. ಆತನ ಪ್ರತಿಭೆಯೆಂಬ ಊಟೆಯ ಭಾವಪ್ರವಾಹಿನಿಯಿಂದ ಬಂಗಾಳಿಗಳಿಗೆ ದೊರೆತ ನೂತನ ಜೀವನರಸವನ್ನು ನಾವು ಎಂದೆಂದಿಗೂ ಮರೆಯುವ ಹಾಗಿಲ್ಲ. ಇಂದು, ಆತನ ಜನ್ಮವರ್ಷದ ಶತಮಾನೋತ್ಸವದ ಕಾಲದಲ್ಲಿ, ಬಂಗಾಳದ ಬಹು ಸ್ಥಳಗಳಲ್ಲಿ ಆತನ ಸ್ಮೃತಿಪೂಜೆಯ ಉತ್ಸವಕ್ಕೆ ಏರ್ಪಾಡುಗಳು ನಡೆದೂ ನಡೆಯುತ್ತಲೂ ಇವೆ.

ಮನುಷ್ಯರು ರಚಿಸುವ ಸಾಹಿತ್ಯವನ್ನೇ ಈತನೂ ರಚಿಸಿದ್ದಾನೆ. "ಸ್ವದೇಶಪ್ರೀತಿಯೇ ಸರ್ವಶ್ರೇಷ್ಠವಾದ ಧರ್ಮವೆಂದು ಹೇಳುವುದು ನ್ಯಾಯ" ಎಂಬುದೇ ಆತನ ಮರ್ಮೋಕ್ತಿಯಾಗಿದ್ದಿತು. ಗಂಗೆಯು ಹಿಂದುಗಳಿಗೆ ಮಾತ್ರವೇ ಪರಮಪೂಜ್ಯವಾದ ದೇವತಾವಿಶೇಷ. ಆತನ "ಇಂದಿರೆ"ಯಲ್ಲಿ ಗಂಗೆಯು ನಿಜವಾಗಿಯೂ ಪುಣ್ಯಮಯೀ ಎಂಬ ವಾಕ್ಯವಿದೆ. ಆದರೆ ಆತನು ದೇಶಕ್ಕಾಗಿ ದುಃಖಪಡುತ್ತಾ ಗಂಗೆಯನ್ನು "ನೀನು ಯಾರ ಪಾದಗಳನ್ನು ತೊಳೆಯುತ್ತಿರುವೆಯೋ ಆ ತಾಯಿಯು ಎಲ್ಲಿ ?" ಎಂದು ಕೇಳಿದ್ದಾನೆ. ಈತನು ದೇಶಮಾತೆಗೆ ಸಕಲ ದೇವತೆಗಳಿಗೂ ಮೇಲಾದ ಪೀಠವನ್ನು ಕೊಟ್ಟಿದ್ದಾನೆ. ಬಂಕಿಂಚಂದ್ರನಿಂದ ನಾವು ಪಡೆದಿರುವ ಆದರ್ಶಭಾಷೆ, ಅಮೂಲ್ಯವಾದ ಭಾವ ಮತ್ತು ಅಪೂರ್ವವಾದ ಸಾಹಿತ್ಯಸಂಪತ್ತು—ಇವೆಲ್ಲವೂ ಆತನ ಅನನ್ಯಸಾಧಾರಣವಾದ ಪ್ರತಿಭೆಯಿಂದ ನಮಗೆ ಲಭ್ಯವಾಗಿದ್ದರೂ

---

* ಇದು ಬಂಕಿಂಚಂದ್ರ ಶತಮಾನೋತ್ಸವದ ಸಂದರ್ಭದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದವರು ಪ್ರಕಟಿಸಿದ "ಬಂಕಿಂ ಪರಿಚಯ" ಎಂಬ ಬಂಗಾಳಿ ಗ್ರಂಥದ ಅನುವಾದ ಅದನ್ನು ಕನ್ನಡಕ್ಕೆ ಅನುವಾದಿಸಿ "ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟಿಸಲು ಅನುಮತಿ ಕೊಟ್ಟದ್ದಕ್ಕಾಗಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರರವರಿಗೆ ನಾನು ಕೃತಜ್ಞನಾಗಿದ್ದೇನೆ.

ಆ ಪ್ರತಿಭೆಯು ಆತನ ಗಾಢವಾದ ದೇಶಪ್ರೇಮದ ಪ್ರಭಾವದಿಂದಲೇ ಪರಿಚಾಲಿತವಾಯಿತೆಂಬುದನ್ನು ನಾವು ಮರೆಯಬಾರದು. ಆತನ ಪ್ರಬಲವಾದ ಸ್ವದೇಶಾಸುರಾಗವೇ ಆತನ "ವಂಗದರ್ಶನ"ದ ಪ್ರಕಟನೆಗೆ ಕಾರಣವಾಯಿತು. ಇದನ್ನು ಒಪ್ಪದವರು ಯಾರಿದ್ದಾರೆ?

"ವಂಗದರ್ಶನ" ಎಂದರೆ ಬಂಕಿಂಚಂದ್ರನ ವಿಷಯವೂ ಬಂಕಿಂಚಂದ್ರ ಎಂದರೆ "ವಂಗದರ್ಶನ"ದ ವಿಷಯವೂ ತಾವಾಗಿಯೇ ನಮ್ಮ ಸ್ಮೃತಿಪಥದಲ್ಲಿ ತಲೆದೋರುವುವು. "ವಂಗದರ್ಶನ"ದ ಮೊದಲನೆಯ ಸಂಚಿಕೆಯಲ್ಲಿಯೇ ಈತನು "ಭಾರತಕಳಂಕ" ಎಂಬ ಹೆಸರಿನ ಒಂದು ಪ್ರಬಂಧವನ್ನು ಬರೆದಿದ್ದಾನೆ; "ಮಧ್ಯಕಾಲದಲ್ಲಿ ಯಾವುದು ಭಾರತದ ಕಳಂಕವೆಂದು ನಮ್ಮ ಮನಸ್ಸಿಗೆ ತೋರುತ್ತಿತ್ತೋ, ಇತಿಹಾಸದ ಸೂಕ್ಷ್ಮವಾದ ಶಸ್ತ್ರದಿಂದ ಅದನ್ನು ಕತ್ತರಿಸಿ ನೋಡಿದರೆ, ಅದೇ ನಮ್ಮ ಭಾರತದ ಗೌರವ ಎಂದು ಕಾಣುತ್ತಿದೆ" ಎಂದು ಈ ಪ್ರಬಂಧದಲ್ಲಿ ಸ್ವದೇಶವಾಸಿಗಳಿಗೆ ಈತನು ತಿಳಿಸಿದ್ದಾನೆ.

"ವಂಗದರ್ಶನ"ವು ಪ್ರಕಾಶಿತವಾದಾಗ ಆತನಿಗೆ ೩೪ ವರ್ಷ ವಯಸ್ಸು. ಈ ಚಿಕ್ಕ ವಯಸ್ಸಿನಲ್ಲಿಯೇ ಈತನು ಸುಶಿಕ್ಷಿತರಾದ ಬಂಗಾಳಿಗಳಿಗೆ "ವಂಗದರ್ಶನ"ದಲ್ಲಿ "ನಮಗೆ ನಂಬಿಕೆಯಿದೆ, ನಾವು ಈಗ ಸ್ವತಃ ನಿರ್ಗುಣರಾಗಿದ್ದರೂ ರತ್ನಪ್ರಸವಿನಿಯ ಮಕ್ಕಳು. ಎಲ್ಲರೂ ಈ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಜಗತ್ತಿನಲ್ಲಿ ತಮಗೆ ಯೋಗ್ಯವಾದ ಸ್ಥಾನವನ್ನು ಪಡೆಯಲು ಪ್ರಯತ್ನಪಡಬೇಕು" ಎಂಬ ಉಪದೇಶವಾಣಿಯನ್ನು ಸೂಚಿಸಿ ನಾನಾ ರೀತಿಯಲ್ಲಿ ಈತನು ಇಂತಹ ಪ್ರಚಾರಕ್ಕೆ ಆರಂಭಮಾಡಿದ್ದು ನಮಗೆ ಆಶ್ಚರ್ಯವನ್ನುಂಟುಮಾಡಿದೆ.

ಬಂಕಿಂಚಂದ್ರನು ಬಂಗಾಳಾ ದೇಶಕ್ಕೂ ಬಂಗಾಳಿ ಜನರಿಗೂ ಗೌರವವನ್ನೂ ಕೀರ್ತಿಯನ್ನೂ ಸಂಪಾದಿಸಿಕೊಟ್ಟಿದ್ದಾನೆ. ಆ ಗೌರವ ಕೀರ್ತಿಗಳಿಂದಲೇ ಕಲ್ಕತ್ತಾ ವಿಶ್ವವಿದ್ಯಾನಿಲಯವೂ ಇಂದು ಗರ್ವಗೌರವಗಳನ್ನು ಪ್ರಕಾಶಪಡಿಸಲು ಯೋಗ್ಯತೆಯನ್ನು ಪಡೆದಿದೆ. ಈ ವಿಶ್ವವಿದ್ಯಾನಿಲಯದಲ್ಲಿ ಮೊಟ್ಟಮೊದಲು ಎನ್ಟ್ರೆನ್ಸ್ ಮತ್ತು ಬಿ.ಎ. ಪರೀಕ್ಷೆಗಳಿಗೆ ಹೋಗಲು ಅವಕಾಶವನ್ನು ಪಡೆದು, ಇವೆರಡು ಪರೀಕ್ಷೆಗಳಲ್ಲಿಯೂ ಈತನು ಉತ್ತಮ ತರಗತಿಯಲ್ಲಿ ಉತ್ತೀರ್ಣನಾದುದು ನಮಗೆಲ್ಲಾ ತಿಳಿದೇ ಇದೆ. ತರುವಾಯ ೧೮೮೪ನೆಯ ಇಸವಿಯಿಂದ ತಾನು ಬದುಕಿರುವ ವರೆಗೂ ಈ ವಿಶ್ವವಿದ್ಯಾಲಯದ ಸದಸ್ಯಪದದಲ್ಲಿ ನಿಯುಕ್ತನಾಗಿದ್ದು ಇದರ ಏಳಿಗೆಗೆ ಈತನು ಶ್ರಮಪಟ್ಟಿದ್ದಾನೆ. ಆದ್ದರಿಂದಲೇ ಆತನ ತೈಲಚಿತ್ರವು ವಿಶ್ವವಿದ್ಯಾನಿಲಯದ ಮಧ್ಯಭಾಗದಲ್ಲಿ ಆದರದಿಂದ ಗೌರವಿಸಲ್ಪಟ್ಟಿದೆ. ಆ ಕಾರಣದಿಂದಲೇ ಆತನ ಜನ್ಮ

ಶತಮಾನೋತ್ಸವದ ಸಂದರ್ಭದಲ್ಲಿ ಬಂಗಾಳಾ ದೇಶದ ಸಂಪ್ರದಾಯವನ್ನನುಸರಿಸಿ ವಿದ್ಯಾರ್ಥಿಗಳಿಗೆ ಉಪಹಾರವಾಗಿ ಕೊಡಬೇಕೆಂಬ ಉದ್ದೇಶದಿಂದ ಕಲ್ಕತ್ತಾ ವಿಶ್ವವಿದ್ಯಾನಿಲಯದಿಂದ ಈ "ಬಂಕಿಂ ಪರಿಚಯ" ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ. ಬಂಕಿಂಚಂದ್ರನ ಗ್ರಂಥಸಮುದ್ರವನ್ನು ಮಂಥನಮಾಡಿ ವಿದ್ಯಾರ್ಥಿಗಳ ಪಾಠಕ್ಕೆ ಉಪಯೋಗವಾಗುವಂತೆ ಆತನ ವಚನಾಮೃತವನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದೆ. "ಕವಿತೆಯು ಕೇವಲ ಕನ್ನಡಿ, ಅದರೊಳಗೆ ಕವಿಯ ಅವಿಕಲವಾದ ಛಾಯೆ ಇರುತ್ತದೆ" ಎಂದು ಬಂಕಿಂಚಂದ್ರನೇ ಹೇಳಿದ್ದಾನೆ. ಆತನ ಗ್ರಂಥಗಳು "ಕವಿತೆ"ಗಳಲ್ಲದಿದ್ದರೂ ಅವುಗಳೊಳಗೆ ಆತನ ಛಾಯೆಯನ್ನು ಕಾಣಬಹುದು. ಬಂಗಾಳಿ ಯುವಕರು ಈ ಪುಸ್ತಕದಲ್ಲಿ ಆತನ ಛಾಯೆಯನ್ನು ಕಂಡು ಆತನನ್ನು ಗುರುತಿಸಿ ಆತನ ಭಾವವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರೆ ವಿಶ್ವವಿದ್ಯಾನಿಲಯದ ಈ ಪ್ರಯತ್ನವೂ ಉದ್ದೇಶವೂ ಸಾರ್ಥಕವಾದುವೆಂದು ಭಾವಿಸುತ್ತೇನೆ.

ಜೂನ್ ೨೦, ೧೯೩೮,
ಸೆನೆಟ್ ಹೌಸ್, ಕಲ್ಕತ್ತಾ.

ಶ್ಯಾಮಪ್ರಸಾದ ಮುಖ್ಯೋಪಾಧ್ಯಾಯ,
Vice-chancellor, Calcutta University.

[ಸೂಚನೆ:— ಈ ಪುಸ್ತಕದಲ್ಲಿ ೮ ವಿಭಾಗಗಳಿವೆ—

೧. ಬಂಕಿಂಚಂದ್ರ—ಜೀವನಚರಿತೆ

೨. ವಂದೇಮಾತರಂ

ವಚನಾಮೃತ:

೩. ಬಂಗಾಳಿಗಳ ಉದ್ದೇಶ

೪. ಬಂಗಾಳಿ ಭಾಷೆ ಮತ್ತು ಸಾಹಿತ್ಯ

೫. ಧರ್ಮ ಮತ್ತು ಸಮಾಜ

೬. ನಾನಾ ವಿಷಯ

೭. ವರ್ಣನೆ

೮. ಪರಿಶಿಷ್ಟ

ಈ ಸಂಚಿಕೆಯಲ್ಲಿ ಈತನ ಜೀವನಚರಿತೆ, "ವಂದೇಮಾತರಂ", ಪರಿಶಿಷ್ಟ (೮)—ಇವುಗಳನ್ನು ಕೊಟ್ಟಿದೆ. ಮುಂದಿನ ಸಂಚಿಕೆಗಳಲ್ಲಿ ಉಳಿದ ಭಾಗಗಳನ್ನು ಕೊಡಲಾಗುತ್ತದೆ.]

ಜೀವನ ಚರಿತೆ

ಬಂಕಿಂಚಂದ್ರನು ಹುಟ್ಟಿದ್ದು ಕ್ರಿ. ಶ. ೧೮೩೮ನೆಯ ಜೂನ್ ೨೭ನೆಯ ತಾರೀಖಿಗೆ ಸರಿಯಾದ ವಂಗಾಬ್ದ ೧೨೪೫ನೆಯ ಸಂವತ್ಸರದ ಆಷಾಢ ಶುದ್ಧ ತ್ರಯೋದಶಿಯ ದಿನ, ಕಾಂಟಾಲಪಾಡಾ ಎಂಬ ಗ್ರಾಮದಲ್ಲಿ. ಈ ಗ್ರಾಮವು ೨೪ ಪರಗಣಗಳ

ಜಿಲ್ಲೆಗೆ ಸೇರಿದ್ದು; ಇದು ಗಂಗಾನದಿಯ ಪೂರ್ವತೀರದಲ್ಲಿದೆ. ಗಂಗೆಯ ಪಶ್ಚಿಮ ತೀರದಲ್ಲಿ ಚುಂಚುಡಾ ಎಂಬ ಗ್ರಾಮವಿದೆ. ಬಂಕಿಂಚಂದ್ರನ ತಂದೆಯ ಹೆಸರು ಯಾದವಚಂದ್ರ ಚಟ್ಟೋಪಾಧ್ಯಾಯ; ಈತನು ಡೆಪ್ಯುಟಿ ಕಲೆಕ್ಟರಾಗಿದ್ದನು. ಯಾದವ ಚಂದ್ರನಿಗೆ ನಾಲ್ಕು ಜನ ಮಕ್ಕಳು; ಬಂಕಿಂಚಂದ್ರನು ಇವರಲ್ಲಿ ಮೂರನೆಯವನು.

ಬಂಕಿಂಚಂದ್ರನು ಎಂದೂ ಯಾವ 'ಪಾಠಶಾಲೆ'ಯಲ್ಲಿಯೂ ಓದಲಿಲ್ಲ. ಬಂಕಿಮನ ಬಾಲ್ಯವಿದ್ಯಾಭ್ಯಾಸವನ್ನು ಕುರಿತು ಆತನ ತಮ್ಮ ಪೂರ್ಣಚಂದ್ರನು ಹೀಗೆ ಬರೆದಿದ್ದಾನೆ: "ಅದೃಷ್ಟಬಲದಿಂದ ಬಂಕಿಂಚಂದ್ರನು ಬಾಲ್ಯದಿಂದಲೂ ವಿದ್ಯೋತ್ಸಾಹಿಗಳೂ ಸುಶಿಕ್ಷಿತರೂ ಆಗಿದ್ದ ಜನರ ಸಹವಾಸದಲ್ಲಿಯೇ ಇರುತ್ತಿದ್ದನು. ನಮ್ಮ ತಂದೆ ಈತನ ಅಸಾಮಾನ್ಯ ಪ್ರತಿಭೆಯನ್ನು ನೋಡಿ ಈತನ ವಿದ್ಯಾಭ್ಯಾಸದ ವಿಚಾರದಲ್ಲಿ ವಿಶೇಷ ಯತ್ನಶೀಲರೂ ಆಲೋಚನಾಪರರೂ ಆಗಿದ್ದರು. ಬಹಳ ಚಿಕ್ಕವನಾಗಿದ್ದಾಗ ಬಂಕಿಂ ಚಂದ್ರನಿಗೆ ವಿದ್ಯಾಭ್ಯಾಸವು ಮೇದಿನೀಪುರದಲ್ಲಿ ನಡೆಯಿತು; ಆಗ ನಮ್ಮ ತಂದೆ ಅಲ್ಲಿ ಡೆಪ್ಯುಟಿ ಕಲೆಕ್ಟರಾಗಿದ್ದರು. ಬಂಕಿಂಚಂದ್ರನು ಒಂದೇ ದಿನದಲ್ಲಿ ಬಂಗಾಳಿ ವರ್ಣ ಮಾಲೆಯನ್ನು ಕಲಿತುಬಿಟ್ಟನೆಂದು ಕೇಳಿದ್ದೇನೆ. ಮೇದಿನೀಪುರದಲ್ಲಿ ಒಂದು ಹೈಸ್ಕೂಲು ಇದ್ದಿತು; ಟೀಡ್ ಎಂಬ ಆಂಗ್ಲೇಯನು ಆ ಹೈಸ್ಕೂಲಿನ ಮುಖ್ಯೋಪಾಧ್ಯಾಯ ನಾಗಿದ್ದನು. ನಮ್ಮಣ್ಣ ಸಂಜೀವಚಂದ್ರನೊಡನೆ ಬಂಕಿಂಚಂದ್ರನು ಆಗಾಗ್ಗೆ ಈ ಹೈಸ್ಕೂಲಿಗೆ ಹೋಗುತ್ತಿದ್ದನು. ಒಂದು ದಿನ ಈ ಮುಖ್ಯೋಪಾಧ್ಯಾಯನು ತರಗತಿಗಳನ್ನು ನೋಡಿಕೊಂಡು ಹೋಗಲು ಬಂದಾಗ ಇವನಿಗೆ ಬಂಕಿಂಚಂದ್ರನ ಪರಿಚಯವಾಯಿತು. ತನ್ನ ತಮ್ಮನಾದ ಬಂಕಿಂಚಂದ್ರನ ವಿಷಯವನ್ನು ಹೇಳುವಾಗ, ಆತನು ಒಂದೇ ದಿನದಲ್ಲಿ ವರ್ಣಮಾಲೆಯನ್ನು ಕಲಿತನೆಂಬುದನ್ನು ತಾನು ಆ ಮುಖ್ಯೋ ಪಾಧ್ಯಾಯನಿಗೆ ತಿಳಿಸಿದುದಾಗಿ ಸಂಜೀವಚಂದ್ರನು ಬರೆದಿಟ್ಟಿದ್ದಾನೆ. ಇದನ್ನು ಕೇಳಿ ಟೀಡ್ ಸಾಹೇಬನು ಸಂತೋಷಪಟ್ಟನು. ಅವನ ಅನುರೋಧದಿಂದಲೇ ಬಂಕಿಂಚಂದ್ರ ನನ್ನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲೀಷ್ ಕಲಿಯುವುದಕ್ಕಾಗಿ ಆ ಪಾಠ ಶಾಲೆಗೇ ಸೇರಿಸಿದರು."

ಕ್ರಿ. ಶ. ೧೮೪೪ರಲ್ಲಿ ಯಾದವಚಂದ್ರನಿಗೆ ಮೇದಿನೀಪುರದಿಂದ ೨೪ ಪರಗಣ ಗಳಿಗೆ ವರ್ಗವಾಯಿತು. ಆಗ ಬಂಕಿಂಚಂದ್ರನು ಕಾಂಟಾಲಪಾಡಾ ಗ್ರಾಮಕ್ಕೆ ಬರಬೇಕಾಯಿತು; ಅಲ್ಲಿದ್ದುಕೊಂಡೇ ಈತನು ಹುಗ್ಲಿ ಕಾಲೇಜಿನಲ್ಲಿ ಓದಲು ಆರಂಭ ಮಾಡಿದನು. ಹುಗ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಭಾಟಪಾಡಾ ಗ್ರಾಮದ ವ್ಯಾಕರಣ ವಿದ್ವಾಂಸರೆಂದು ಪ್ರಸಿದ್ಧರಾಗಿದ್ದ ಶ್ರೀರಾಮನ್ಯಾಯವಾಗೀಶರಲ್ಲಿ ಸಂಸ್ಕೃತ ಸಾಹಿತ್ಯವನ್ನು ವ್ಯಾಸಂಗಮಾಡಿದನು. ಈಶ್ವರಚಂದ್ರಗುಪ್ತರು ಪ್ರಕಟಿಸು

ತ್ತಿದ್ದ "ಸಂವಾದ ಪ್ರಭಾಕರ" ಎಂಬ ಪತ್ರಿಕೆಯಲ್ಲಿ ಈತನು ಪದ್ಯಗಳನ್ನು ಬರೆಯುವುದಕ್ಕೆ ಹೊರಟದ್ದು ಆಗಲೇ. ಈಶ್ವರಚಂದ್ರಗುಪ್ತರ ವಿಷಯವನ್ನು ಪ್ರಸ್ತಾಪಿಸುವಾಗ ತನ್ನ ವಿಚಾರವಾಗಿ ಬಂಕಿಂಚಂದ್ರನು ಹೀಗೆಂದು ಹೇಳಿದ್ದಾನೆ: "ನಾನು 'ಪ್ರಭಾಕರ'ಕ್ಕೆ ವಿಶೇಷ ಋಣಿಯಾಗಿದ್ದೇನೆ. ನನ್ನ ಮೊಟ್ಟಮೊದಲ ಬರವಣಿಗೆಗಳೆಲ್ಲವೂ ಪ್ರಕಟವಾದುದು ಪ್ರಭಾಕರದಲ್ಲಿಯೇ. ಆಗ ಈಶ್ವರಗುಪ್ತರು ನನಗೆ ಬಹಳ ಪ್ರೋತ್ಸಾಹವನ್ನು ಕೊಟ್ಟರು."

ವಿದ್ಯಾರ್ಥಿಗಳಾಗಿರುವಾಗ ಕಾವ್ಯರಚನೆಯ ಕಡೆಗೆ ಹೆಚ್ಚುಗಮನ ಕೊಡುವವರು ಶಾಲೆಯ ಪಾಠಗಳಲ್ಲಿ ಅಷ್ಟು ಆಸಕ್ತಿಯನ್ನು ತೋರಿಸದಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಬಂಕಿಂಚಂದ್ರನು ಮಕ್ಕಳ ವಿಮರ್ಶೆಯನ್ನು ('ಛೇಲೇದೇರ ಸತರ್ಕ'ವನ್ನು) ಮಾಡುವ ಉದ್ದೇಶದಿಂದಲೇ ಹೀಗೆಂದು ಬರೆದಿದ್ದಾನೆ: "ಬರೆಯುವುದಕ್ಕೆ ಸ್ವಲ್ಪ ಶಕ್ತಿಯಿದ್ದರೂ ಚೆನ್ನಾಗಿ ಓದುವುದನ್ನು ಬಿಟ್ಟು ಕೇವಲ ಬರೆಯುವುದರಲ್ಲಿಯೇ ಮಕ್ಕಳ ಮನಸ್ಸು ನಿಂತುಬಿಡುತ್ತದೆ. ಹಗಲು ರಾತ್ರಿಯೂ ಕೀರ್ತಿವಂತರಾಗಬೇಕೆಂಬ ಆಸೆ. ಇಂತಹ ಮಕ್ಕಳೆಲ್ಲರಿಗೂ ಎರಡುಕಡೆ ನಷ್ಟವಾಗುತ್ತದೆ: ಇರುವ ಅಲ್ಪಸ್ವಲ್ಪ ರಚನಾಶಕ್ತಿಯೂ ಒಳ್ಳೆಯ ಓದುಗಾರಿಕೆ (ಶಿಕ್ಷಣ) ಇಲ್ಲದಿರುವುದರಿಂದ ಸಾಮಾನ್ಯ ಫಲವನ್ನೇ ಕೊಡುತ್ತದೆ." ಆದರೆ ಬಂಕಿಂಚಂದ್ರನ ಜೀವನದಲ್ಲಿ ಇದಕ್ಕೆ ವಿರುದ್ಧವಾದ ಸ್ಥಿತಿಯೇ ಸಂಭವಿಸಿತು. "ಲಲಿತಾ" ಮತ್ತು "ಮಾನಸ" ಎಂಬ ಎರಡು ಪದ್ಯ ಪುಸ್ತಕಗಳು ಬಂಕಿಂಚಂದ್ರನ ಹದಿನೈದನೆಯ ವಯಸ್ಸಿನಲ್ಲಿ ಬರೆಯಲ್ಪಟ್ಟುವು. ಇದಾದ ಒಂದು ವರ್ಷಕ್ಕೆ ಸರಿಯಾಗಿ, ಎಂದರೆ ೧೮೫೩ನೆಯ ವರ್ಷದಲ್ಲಿ, ಬಂಕಿಂಚಂದ್ರನು ಜೂನಿಯರ್ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದನು. ತರುವಾಯ ೧೮೫೬ನೆಯ ವರ್ಷದ ಸೀನಿಯರ್ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿಯೂ ಎಲ್ಲರಿಗಿಂತಲೂ ಉತ್ತಮ ಸ್ಥಾನವನ್ನೇ ಪಡೆದನು.

೧೮೫೭ನೆಯ ಇಸವಿಯ ಜನವರಿಯಲ್ಲಿ ಬಂಕಿಂಚಂದ್ರನು ಕಲ್ಕತ್ತಾ ವಿಶ್ವವಿದ್ಯಾನಿಲಯವನ್ನು ಸೇರಿದನು. ಅದೇ ವರ್ಷದ ಏಪ್ರಿಲ್ ತಿಂಗಳಲ್ಲಿ ಪ್ರಥಮ ಎನ್ಟ್ರೆನ್ಸ್ (ಪ್ರವೇಶ) ಪರೀಕ್ಷೆಗೆ ಕೂಡಲು ಆತನಿಗೆ ಅವಕಾಶ ಸಿಕ್ಕಿತು: ೨೪೪ ಮಂದಿ ವಿದ್ಯಾರ್ಥಿಗಳಲ್ಲಿ ೧೬ ಜನರು ಪರೀಕ್ಷೆಗೆ ಬರಲಿಲ್ಲ. ೧೧೫ ಜನ ಮೊದಲನೆಯ ತರಗತಿಯಲ್ಲಿಯೂ ೪೨ ಜನ ಎರಡನೆಯ ತರಗತಿಯಲ್ಲಿಯೂ ಉತ್ತೀರ್ಣರಾದರು. ಈ ಪರೀಕ್ಷೆಯಲ್ಲಿಯೂ ಬಂಕಿಂಚಂದ್ರನು ಮೊದಲನೆಯ ತರಗತಿಯಲ್ಲಿಯೇ ಉತ್ತೀರ್ಣನಾದನೆಂದು ಹೇಳಬೇಕಾಗಿಲ್ಲ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಲಾ (ನ್ಯಾಯಶಾಸ್ತ್ರ) ಓದುತ್ತಿರುವಾಗ ಬಂಕಿಮನು ಈ ಪರೀಕ್ಷೆಗೆ ಕುಳಿತದ್ದು; ಈ ಪರೀಕ್ಷೆಗೆ ಬಂಗಾಳಿ

ಭಾಷೆಯೂ ಒಂದು ಪಠ್ಯವಿಷಯವಾಗಿತ್ತು. ರಾಜಾಕೃಷ್ಣಚಂದ್ರರಾಯ್ ಅವರ ಜೀವನಚರಿತೆ ಮತ್ತು 'ಕೃತ್ತಿವಾಸೀ ರಾಮಾಯಣ'—ಇವೆರಡೂ ಪಠ್ಯಪುಸ್ತಕಗಳು. ಪರೀಕ್ಷಕರು—ರೆವರೆಂಡ್ ಕೃಷ್ಣಮೋಹನ ವಂದ್ಯೋಪಾಧ್ಯಾಯರು.

ಆಗ ಎಫ್. ಎ. ಪರೀಕ್ಷೆಯೇ ಇರಲಿಲ್ಲ ; ಈ ಪರೀಕ್ಷೆಯನ್ನು ಅಲ್ಲಿ ೧೮೬೨ನೆಯ ಇಸವಿಯಿಂದ ಇಡಲಾಯಿತು. ನಿಜವಾಗಿಯೂ ಬಂಕಿಂಚಂದ್ರನು ಈ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿರಲಿಲ್ಲ. ಎನ್ಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ ಒಂದು ವರ್ಷದೊಳಗಾಗಿ ಎಂದರೆ ೧೮೫೮ನೆಯ ಇಸವಿಯಲ್ಲಿ ಪ್ರಥಮ ಬಿ.ಎ. ಪರೀಕ್ಷೆಗೆ ಹೋಗಲು ಬಂಕಿಂಚಂದ್ರನಿಗೆ ಅವಕಾಶ ಸಿಕ್ಕಿತು; ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರೇ ಇಬ್ಬರು ; ಅವರಲ್ಲಿಯೂ ಬಂಕಿಂಚಂದ್ರನು ಮೊದಲನೆಯವನು.

ಇದಾದ ಮೇಲೆ ಬಂಕಿಂಚಂದ್ರನಿಗೆ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಕೆಲಸ ದೊರೆಯಿತು. ಆಗ ಆತನಿಗೆ ವಯಸ್ಸು ೨೦ ವರ್ಷಗಳಾಗಿ ೨ ತಿಂಗಳು ಮಾತ್ರ ಆಗಿತ್ತು. ಈ ಕಾಲದಲ್ಲಿಯೂ ಈತನ ಲೇಖನಿಯು ಬಂಧಿತವಾಗಿರಲಿಲ್ಲ. *Indian Field* ಎಂಬ ಇಂಗ್ಲಿಷ್ ಪತ್ರಿಕೆಗೆ "Rajamohan's Wife" ಎಂಬ ಇಂಗ್ಲಿಷ್ ಕಾದಂಬರಿಯೊಂದನ್ನು ಬರೆಯಲಾರಂಭಿಸಿದನು. ಬಂಗಾಳೀ ಕಾವ್ಯರಚನೆಯಂತೆಯೇ ಈತನ ಇಂಗ್ಲಿಷ್ ಕಾವ್ಯರಚನೆಯೂ ಸರಳವಾಗಿಯೂ ಮಧುರವಾಗಿಯೂ ಇದೆಯೆಂದು ಅನೇಕ ವಿದ್ವಾಂಸರ ಅಭಿಪ್ರಾಯ. ಅನೇಕ ವಿಷಯಗಳನ್ನು ಕುರಿತು ಇಂಗ್ಲಿಷಿನಲ್ಲಿಯೂ ಬಂಕಿಂಚಂದ್ರನು ಅನೇಕ ಪ್ರಬಂಧಗಳನ್ನು ಬರೆದಿದ್ದಾನೆ.

ಈತನು ಎಷ್ಟು ಪ್ರತಿಭಾಶಾಲಿಯಾಗಿದ್ದನೋ ಅಷ್ಟೇ ಪರಿಶ್ರಮ ಪಡತಕ್ಕವನೂ ಆಗಿದ್ದನು. ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಕೆಲಸದಲ್ಲಿದ್ದರೂ ೧೮೬೯ನೆಯ ವರ್ಷದಲ್ಲಿ ಬಂಕಿಂಚಂದ್ರನು ಬಿ.ಎಲ್. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಅದರಲ್ಲಿ ತೃತೀಯ ಸ್ಥಾನವನ್ನು ಪಡೆದನು. ಈ ವರ್ಷದಲ್ಲಿಯೇ ಆತನ "ಮೃಣಾಲಿನಿ" ಎಂಬ ಕಾದಂಬರಿ ಪ್ರಕಟವಾಯಿತು. "ಮೃಣಾಲಿನಿ" ಹೊರಬೀಳುವುದಕ್ಕೆ ಎರಡು ವರ್ಷಗಳ ಮೊದಲೇ "ಕಪಾಲಕುಂಡಲಾ" ಎಂಬ ಕಾದಂಬರಿಯೂ, ಇದಕ್ಕೂ ಎರಡು ವರ್ಷಗಳ ಮೊದಲೇ "ದುರ್ಗೇಶನಂದಿನಿ"ಯೂ ಪ್ರಕಟವಾಗಿದ್ದುವು. ರಮೇಶಚಂದ್ರನು "'ದುರ್ಗೇಶನಂದಿನಿ' ಪ್ರಕಟವಾದಾಗ ವಂಗೀಯ ಸಾಹಿತ್ಯಾಕಾಶದಲ್ಲಿ ಇದ್ದಕ್ಕಿದ್ದ ಹಾಗೆಯೇ ಒಂದು ಹೊಸ ಬೆಳಕು ತಲೆದೋರಿತು' ಎಂದು ಬರೆದಿದ್ದಾನೆ.

೧೮೭೦ನೆಯ ಫೆಬ್ರುವರಿ ತಿಂಗಳಲ್ಲಿ ಬಂಗಾಳದ ಸೋಷಿಯಲ್ ಸೈನ್ಸ್ ಅಸೋಸಿಯೇಷನ್ನಿನಲ್ಲಿ ಬಂಕಿಂಚಂದ್ರನು ಒಂದು ಇಂಗ್ಲಿಷ್ ಪ್ರಬಂಧವನ್ನು ಓದಿದನು. "ಬಂಗಾಳದ ಜನಸಾಧಾರಣ ಸಾಹಿತ್ಯ"ವೇ ಈ ಪ್ರಬಂಧದ ಮುಖ್ಯವಿಷಯ.

ಈ ಪ್ರಬಂಧದಲ್ಲಿ ಒಂದುಕಡೆ ಹೀಗೆಂದು ಹೇಳಿದೆ: "ನಾವು ವಿದ್ಯಾವಂತರಾದ ಬಂಗಾಳಿಗಳು. ನಮ್ಮ ಅದ್ಭುತವಾದ ವಿಸ್ಮೃತಿಯ ಪ್ರಭಾವವಿದು: ಕೇವಲ ಈ ಬಂಗಾಳಿ ಭಾಷೆಯ ಸಹಾಯದಿಂದಲೇ ಬಂಗಾಳಿ ಜನಾಂಗವನ್ನು ಯಾವುದೋ ಒಂದು ರೀತಿಯಲ್ಲಿ ನಡೆಸಿಕೊಂಡು ಅದಕ್ಕೆ ಉತ್ತೇಜನವನ್ನು ಕೊಡಬೇಕಾಗಿದೆ ಎಂಬ ವಿಷಯವನ್ನೇ ಮರೆತುಹೋಗಿದ್ದೇವೆ. ಅಲ್ಲದೆ ನಾವು ಇಂಗ್ಲಿಷ್ ಭಾಷೆಯಲ್ಲಿ ಉಪನ್ಯಾಸಗಳನ್ನು ಕೊಡುತ್ತೇವೆ; ಇಂಗ್ಲಿಷ್ ಗದ್ಯದಲ್ಲಿ ನಮ್ಮ ಮನೋಭಾವವನ್ನು ವ್ಯಕ್ತಪಡಿಸುತ್ತೇವೆ. ನಮ್ಮ ದೇಶದ ಸಾಧಾರಣ ಜನರು ಇಂಗ್ಲಿಷ್ ಭಾಷೆಯ ಬೋಧನೆಗೆ ಹುಟ್ಟುಕಿವುಡರಂತಿದ್ದಾರೆಂಬುದು ನಮ್ಮ ಮನಸ್ಸಿಗೆ ಹೊಳೆಯುವುದೇ ಇಲ್ಲ. ನಾವು ಉಪಯೋಗಿಸುವ ಒಂದು ಇಂಗ್ಲಿಷ್ ಶಬ್ದದ ಅರ್ಥವನ್ನಾಗಲಿ ಅವರು ತಿಳಿದುಕೊಳ್ಳಲಾರರು. ಸಾಮಾಜಿಕ ವಿಷಯದಲ್ಲಿಯೂ ಧರ್ಮ ವಿಷಯದಲ್ಲಿಯೂ ಹೊಸಭಾವ ಅಥವಾ ಸಂಪ್ರದಾಯವು ರೂಢಿಗೆ ಬರಬೇಕಾದರೆ ದೇಶದ ಜನಸಾಧಾರಣವನ್ನು ಉದ್ಧಾರಮಾಡಬೇಕು; ಇಲ್ಲದಿದ್ದರೆ ಮಾಡಿದ ಪ್ರಯತ್ನಕ್ಕೆ ತಕ್ಕ ಫಲವು ದೊರೆಯುವುದಿಲ್ಲ. ಯಾವುದಾದರೊಂದು ದೊಡ್ಡ ಭಾವವನ್ನು ಬಂಗಾಳಿ ಭಾಷೆಯಲ್ಲಿ ಬಂಗಾಳಿ ಜನರಿಗೆ ತಿಳಿಸುವುದು ಸಾಧ್ಯವಾಗುವುದಾದರೆ, ಆ ಭಾವವು ಅವರ ಹೃದಯವನ್ನು ಮುಟ್ಟಿ, ಅದು ಮಿಡಿಯುವಂತೆ ಮಾಡುತ್ತದೆ; ಹೃದಯದಲ್ಲಿ ಹೊಸ ಹೊಸ ಅಲೆಗಳು ಏಳುವುವು; ಆ ತರಂಗವು ಪ್ರತಿಯೊಬ್ಬನ ಮೇಲೆಯೂ ಹಾದು ದೇಶವ್ಯಾಪಿಯಾಗಿ ಒಂದು ವಿರಾಟ್ ಭಾವತರಂಗವನ್ನು ಎಬ್ಬಿಸಬಲ್ಲದು. ಈ ಹೊಸ ಭಾವವು ಜನತೆಯನ್ನು ಉದ್ಧಾರಮಾಡಬಲ್ಲದು; ಜನತೆಯ ಹೃದಯಕ್ಕೆ ಜೀವಕಳೆಯನ್ನು ತಂದು ತುಂಬಬಲ್ಲದು; ಸಮಾಜದ ಹಿತವೂ ತಾನೇ ಸಾಧಿತವಾಗಿಬಿಡುವುದು. ಹಾಗಿಲ್ಲದೆ ಕೇವಲ ಇಂಗ್ಲಿಷಿನಲ್ಲಿಯೇ ಧರ್ಮ ಪ್ರಚಾರಮಾಡಿದರೆ, ಇಂಗ್ಲಿಷಿನಲ್ಲಿಯೇ ಉಪನ್ಯಾಸಗಳನ್ನು ಕೊಟ್ಟರೆ, ಈ ಭಾವಗಳು ಜನತೆಯಲ್ಲಿ ಹರಡಿ ನಡೆಯಬೇಕಾದ ಮಹಾಕಾರ್ಯದ ಸೂಚನೆಯು ಕೂಡ ಕಂಡುಬರುವ ಸಂಭವವಿಲ್ಲದಂತಾಗುವುದು. ಈ ಕಾರಣದಿಂದ ಬಂಗಾಳಿ ಸಾಹಿತ್ಯದ ಪುಷ್ಟಿಯೂ ವಿಸ್ತೃತಿಯೂ ಸಾಮಾಜಿಕ ಹಿತದ ದೃಷ್ಟಿಯಿಂದ ಅತ್ಯಂತ ಆವಶ್ಯಕವಾಗಿವೆ. ಆ ಸಾಹಿತ್ಯವು ಜನತೆಯ ಸಾಹಿತ್ಯ—"ಜನಸಾಧಾರಣದ ಸಾಹಿತ್ಯ"ವಾಗುವುದು. ಬಂಕಿಂಚಂದ್ರನ ಈ ಮಾತಿನಲ್ಲಿ "ವಂಗದರ್ಶನ"ದ ಪ್ರಕಟನೆಯ ಬೀಜವು ಅಡಗಿದೆ. ಇದಾದ ಎರಡು ವರ್ಷಗಳ ಸುಮಾರಿಗೆ, ಎಂದರೆ ೧೮೭೨ನೆಯ ಇಸವಿಯಲ್ಲಿ, "ವಂಗದರ್ಶನ"ವು ಪ್ರಕಟವಾಯಿತು.

ನಾಲ್ಕು ವರ್ಷಗಳ ಕಾಲದಲ್ಲಿ ಈ ಮಾಸಪತ್ರಿಕೆಗೆ ಮೂವರು ಸಂಪಾದಕರಾಗಿದ್ದರು. "ಈ ಸಮಯವೇ ಈ ಪತ್ರಿಕೆಯ ಜೀವನದ ಮಧ್ಯಾಹ್ನ ಕಾಲದಂತೆ ಸಮುಜ್ವಲ

ವಾಗಿದ್ದಿತು" ಎಂದು ಅದರ ಮಾತಿನಲ್ಲಿಯೇ ಹೇಳಬಹುದು. "ವಂಗದರ್ಶನ"ದ ಮೊದಲನೆಯ ಸಂಖ್ಯೆಯಲ್ಲಿ ಸರ್ವಶುದ್ಧವಾದ ಎಂಟು ಲೇಖನಗಳು ಪ್ರಕಟವಾದುವು; ಅವುಗಳಲ್ಲಿ "ಪತ್ರಸೂಚನೆ," "ಭಾರತಕಳಂಕ," "ವಿಷವೃಕ್ಷ," "ಸಂಗೀತ" ಮತ್ತು "ವ್ಯಾಘ್ರಾಚಾರ್ಯ ಬೃಹಲ್ಲಾಂಗೂಲ"—ಈ ಐದು ಲೇಖನಗಳು ಬಂಕಿಂ ಚಂದ್ರನು ಬರೆದವು. ಬಂಕಿಂಚಂದ್ರನು ಈ ಪತ್ರಿಕೆಯ ಸಂಪಾದಕನಾಗಿರುವ ವರೆಗೂ ಈ ಬಗೆಯ ಹೆಚ್ಚು ಲೇಖನಗಳನ್ನು ತಾನೇ ಬರೆಯುತ್ತಿದ್ದನು. "'ವಂಗದರ್ಶನ'ವನ್ನು ಓದಿ ಏನು ತಿಳಿದುಕೊಂಡೆನೋ ಅದನ್ನು ಓದುವುದಕ್ಕೆ ಮೊದಲು ನಾನು ತಿಳಿದು ಕೊಂಡಿರಲಿಲ್ಲ. ಬಂಗಾಳಿ ಭಾಷೆಯಲ್ಲಿ ಎಲ್ಲ ವಿಧದ ವಿಷಯಗಳನ್ನೂ ಸುಂದರವಾಗಿರು ವಂತೆ ಹೇಳುವುದೂ ಬರೆಯುವುದೂ ಸಾಧ್ಯವಾಗುವುದೆಂಬುದು ಆ ಪತ್ರಿಕೆಯನ್ನು ಓದಿದ ಮೇಲೆಯೇ ನನಗೆ ತಿಳಿದುದು. ಭಾಷೆಯ ಅಥವಾ ಸಾಹಿತ್ಯದ ಬಡತನ ಎಂದರೆ ಸರಿಯಾದ ಮನುಷ್ಯರ ಅಭಾವವೆಂದೇ ಅರ್ಥ ಎಂಬುದನ್ನು ತಿಳಿದುಕೊಂಡೆನು. ವಂಗದೇಶಕ್ಕೆ ಮನುಷ್ಯರು ಬಂದಿದ್ದಾರೆ, ವಂಗ ಸಾಹಿತ್ಯಕ್ಕೆ ಪ್ರತಿಭೆ ಪ್ರವೇಶಿಸಿದೆ ಎಂದು 'ವಂಗದರ್ಶನ'ವು ಹೇಳಿತು" ಎಂಬುದಾಗಿ ಚಂದ್ರನಾಥವಸು ಮಹಾಶಯನು ಬರೆದಿದ್ದಾನೆ.

"ವಂಗದರ್ಶನ"ಕ್ಕೆ ಬಂಕಿಂಚಂದ್ರನ ಸ್ವಂತ ಸಾಹಿತ್ಯ ಸೃಷ್ಟಿಯದು ಮಾತ್ರವೇ ಅಲ್ಲದೆ ಇನ್ನೊಂದು ರೀತಿಯ ಕೀರ್ತಿಯೂ ಬಂದಿದೆ; ಆ ಕೀರ್ತಿಯೇ ನೂತನ ಸಾಹಿತ್ಯ ಸೃಷ್ಟಿಯ ಕೀರ್ತಿ. ಆಗ ಬಂಗಾಳಿಯಲ್ಲಿ ಪ್ರಸಿದ್ಧರಾಗಿದ್ದ ಅನೇಕ ಲೇಖಕರು "ವಂಗದರ್ಶನ"ದ ಶಿಷ್ಯರಾಗಿದ್ದರು. ಅನೇಕರು "ವಂಗದರ್ಶನ"ವನ್ನು ಓದಿ ಬಂಗಾಳಿ ಭಾಷೆಯಲ್ಲಿ ಬರೆಯಲು ಮುಂದೆ ಬರುತ್ತಿದ್ದರು. ಇದಕ್ಕಾಗಿಯೂ ಬಂಗಾಳಿ ಸಾಹಿತ್ಯವು "ವಂಗದರ್ಶನ"ಕ್ಕೆ ಅತ್ಯಂತ ಋಣಿಯಾಗಿದೆ.

"ಸಂಜೀವಚಂದ್ರ, ಚಂದ್ರನಾಥ, ಚಂದ್ರಶೇಖರ, ಅಕ್ಷಯಚಂದ್ರ, ರವೀಂದ್ರ, ಯೋಗೀಂದ್ರ, ರಮೇಶ—ಇವರೆಲ್ಲರೂ ಬಂಕಿಂಚಂದ್ರನ ಪ್ರತಿಭೆಯ ಪ್ರಭೆಗಳು. ಸಂಜೀವ ಬಾಬುವು ಬಂಕಿಂಚಂದ್ರನೆಂಬ ರವಿಯಲ್ಲಿ ಪ್ರತಿಫಲಿಸಿದ ಚಂದ್ರಾಲೋಕ. ಚಂದ್ರನಾಥನ "ಶಕುಂತಲಾ ತತ್ವ"ವು ಬಂಕಿಮನ ಉತ್ತರ ಚರಿತದ ಸಮಾಲೋಚನೆ ಯಿಂದ ಉದ್ಬೋಧಿತವಾದದ್ದು. ಅವನ "ಹಿಂದೂತ್ವ"ವು ಬ್ರಾಹ್ಮಣನಾದ ಬಂಕಿಮನ ಬ್ರಾಹ್ಮಣತ್ವದಲ್ಲಿ ಜೀವಿಸಿರುವುದು. ಚಂದ್ರಶೇಖರಬಾಬುವಿನ "ಉದ್ಭ್ರಾಂತ ಪ್ರೇಮ"ವು ಬಂಕಿಂ ಬಾಬುವಿನ "ಕಮಲಾಕಾಂತನ ದಪ್ತರ"ದ ಒಂದೇ ಒಂದು ಕಾಗದದಿಂದ ಪರಿವರ್ಧಿತವಾದದ್ದು; 'ಕಮಲಾಕಾಂತ'ದ ನಾನಾವಿಧವಾದ ಸ್ವರಗಳಲ್ಲಿ ಒಂದು ಸ್ವರವು ಮಾತ್ರ ಗೀತಿಪುಂಜದಿಂದ ದೀರ್ಘೀಕೃತವಾಗಿ, ಕಲಕಂಠದಿಂದ

ಮಧುರನಾದಿತವಾಗಿದೆ. ಅಕ್ಷಯ ಬಾಬುವು "ವಂಗದರ್ಶನ," "ನವಜೀವನ," "ಸಾಧಾರಣೀ"—ಈ ಪತ್ರಿಕೆಗಳಿಂದ ಬಂಕಿಂ ಬಾಬುವಿನ ಮೇಧಾವಿಯಾದ ಶಿಷ್ಯನಾಗಿದ್ದಾನೆ. ರವೀಂದ್ರ ಬಾಬುವು ಬಂಕಿಂ ಬಾಬುವಿನ ಸಹಜ ಚಲಿತಭಾಷೆಯನ್ನು ಮತ್ತಿಷ್ಟು ಸಹಜವಾದುದನ್ನಾಗಿ ಮಾಡಿ, ಲಿಖಿತ ಭಾಷೆಗೆ ಆಡುವ ಭಾಷೆಯನ್ನು ಮತ್ತಿಷ್ಟು ಕೂಡಿಸಿ, ಬಂಕಿಂ ಬಾಬುವಿನ ಕವಿತ್ವಮಯ ಗದ್ಯವನ್ನು ಮತ್ತಿಷ್ಟು ಕವಿತ್ವಮಯವಾದುದನ್ನಾಗಿ ಮಾಡಿ, ಸುಂದರವಾದುದರೊಡನೆ ಸುಂದರವಾದುದನ್ನು ಸೇರಿಸಿಬಿಟ್ಟಿದ್ದಾನೆ. ರಮೇಶ ಬಾಬುವಿನ "ವಂಗವಿಜೇತ" ಎಂಬುದು ಬಂಕಿಂ ಬಾಬುವಿನ ಪ್ರೋತ್ಸಾಹದಿಂದ ಬಂದದ್ದು, ಯೋಗೇಂದ್ರ ಬಾಬುವಿನ "ಆರ್ಯದರ್ಶನ"ವು "ವಂಗದರ್ಶನ"ದ ಅನುಯಾಯಿಯೇ. "ಬಂಗಾಳ ದೇಶದ ಇನ್ನೂ ಅನೇಕ ಲೇಖಕರು ಬಂಕಿಂ ಬಾಬುವು ತಮ್ಮ ಸಾಹಿತ್ಯ ಜೀವನದ ಪ್ರಕೃತಿ ಅಥವಾ ಜನ್ಮದಾತ ಎಂದು ತಾವಾಗಿಯೇ ಒಪ್ಪಿಕೊಂಡಿದ್ದಾರೆ. ಇವರ ಕಾವ್ಯರಚನೆಯಲ್ಲಿ ನಾವು ಬಂಕಿಂಚಂದ್ರನನ್ನು ನೋಡಬಹುದು"—ಎಂದು ಜ್ಞಾನೇಂದ್ರಲಾಲ ರಾಯನು ಯಥಾರ್ಥವನ್ನೇ ಹೇಳಿದ್ದಾನೆ.

ಬಂಕಿಂಚಂದ್ರನು "ವಂಗದರ್ಶನ"ದ ಸಂಬಂಧವನ್ನು ಬಿಟ್ಟಮೇಲೆ ಇನ್ನೊಬ್ಬರ ಸಂಪಾದಕತ್ವದಲ್ಲಿ ಆ ಪತ್ರಿಕೆ ಪ್ರಕಟವಾದಾಗ "ಸಾಧಾರಣೀ" ಪತ್ರಿಕೆಯು ಹೀಗೆಂದು ಬರೆಯಿತು: "ಆ ಕಾಲದಲ್ಲಿ "ವಂಗದರ್ಶನ"ದ ಸಂಬಂಧವನ್ನು ಬಿಟ್ಟಾಗ, ತಂಗಿಯು ಅಜ್ಞಾತವಾಸ ಪ್ರಯಾಸಿಯಾದ ದೊಡ್ಡಣ್ಣನ ಪುನರಾಗಮನವನ್ನು ನಿರೀಕ್ಷಿಸುವಂತೆ, ನಾವೂ ಈಗ ನೀರುತುಂಬಿದ ಕಣ್ಣುಗಳಿಂದ "ವಂಗದರ್ಶನ"ದ ಪುನರ್ದರ್ಶನದ ಆಶಾಪಥವನ್ನೇ ನೋಡುತ್ತ ಕುಳಿತಿದ್ದೇವೆ. ಆ ಆಸೆಯು ನಮ್ಮಲ್ಲಿ ನಿರಾಸೆಯಾಗಿಲ್ಲ; ಆದರೆ, ಈಗಲೂ ಕಣ್ಣೀರು ಸುರಿವುದನ್ನು ತಡೆಯಲಾರೆವು. ವರ್ಷದ ಅಜ್ಞಾತವಾಸವು ಮುಗಿದ ಮೇಲೆ ವೈರಾಗ್ಯದ ವೇಷವೇಕೆ? ಅಜ್ಞಾತವಾಸವಾದ ಮೇಲೆ ಯುಧಿಷ್ಠಿರಾದಿಗಳು ವಿರಾಟರಾಜನ ಅರಮನೆಯಲ್ಲಿ ಯಾವ ವೇಷದಿಂದ ತೋರಿಬಂದರೋ, "ವಂಗದರ್ಶನ"ದ ಸಂಪಾದಕರನ್ನೂ ಲೇಖಕರನ್ನೂ ಅದೇ ವೇಷದಲ್ಲಿಯೇ ಕಾಣಬೇಕೆಂಬುದು ನಮ್ಮ ಆಸೆ. ಅಲ್ಲದೆ ಯುಧಿಷ್ಠಿರನು ಸ್ವರ್ಣ ಸಿಂಹಾಸನದಲ್ಲಿ ವಿರಾಜಿತನಾಗಿ, ಭೀಮಾರ್ಜುನರು ಸಶಸ್ತ್ರರಾಗಿ ಅವನ ಪಾರ್ಶ್ವಗಳಲ್ಲಿ ಕುಳಿತು, ನಕುಲಸಹದೇವರು ಚಾಮರಗಳನ್ನು ಹಿಡಿದುನಿಂತು ಅಣ್ಣನ ಸೇವೆಯನ್ನು ಮಾಡುತ್ತಿರುವಂತೆಯೇ "ವಂಗದರ್ಶನ"ವನ್ನೂ ನೋಡಬೇಕೆಂಬ ಆಸೆಯಿದೆ; ಆದರೆ "ವಂಗದರ್ಶನ"ದ ಆ ರಾಜವೀರಮೂರ್ತಿಯನ್ನು ಮತ್ತೆ ನೋಡಲಾರೆವು ಎಂಬುದು ನಮಗೆ ಗೊತ್ತಾಗಿದೆ. ಅಂದು ಆತ್ಮಗೌರವದಿಂದ ತುಂಬಿ, ಯುವಕೋಚಿತವಾದ ಉತ್ಸಾಹ ಪೂರ್ಣವೇಷ

ದಿಂದ, ಅಶ್ವಾರೋಹಿಯಾಗಿ, ಚಾಟಿಯನ್ನು ಕೈಯ್ಯಲ್ಲಿ ಹಿಡಿದು ಮಂದಹಾಸದಿಂದ ರಣಭೂಮಿಯಲ್ಲಿ "ವಂಗದರ್ಶನ"ವು ಸಂಚರಿಸುತ್ತಿದ್ದಿತು; ಇಂದು ಅದರ ಸರ್ವಾಲಂಕಾರ ಪರಿಭ್ರಷ್ಟವಾದ ತಪಸ್ವಿಯ ವೇಷವನ್ನು ಅದೇ ರಣಭೂಮಿಯಲ್ಲಿ ನಾವು ಅಕ್ಷುಬ್ಧ ಹೃದಯದಿಂದ ನೋಡಲಾರೆವು. ಈಗಲೂ ನಾವು ಕಣ್ಣೀರಿನ ವೇಗವನ್ನು ತಡೆಯಲಾರೆವು."

"ವಂಗದರ್ಶನ"ವನ್ನು ಬಿಟ್ಟಮೇಲೆ ಬಂಕಿಂಚಂದ್ರನು ತನ್ನ ಲೇಖನಿಗೆ ಸ್ವಲ್ಪ ಕಾಲ ವಿಶ್ರಾಂತಿಯನ್ನು ಕೊಟ್ಟಿದ್ದನು. ಲೇಖನಿಗೆ ವಿಶ್ರಾಂತಿಯನ್ನು ಕೊಟ್ಟಿದ್ದರೂ ತಾನು ವಿಶ್ರಾಂತಿಯನ್ನು ತೆಗೆದುಕೊಳ್ಳಲಿಲ್ಲ. ಈ ಸಮಯದಲ್ಲಿ ಆತನು ಧರ್ಮಶಾಸ್ತ್ರವನ್ನು ವಿಶೇಷವಾಗಿ ಓದಿ ಪರಿಶೀಲಿಸುತ್ತಿದ್ದನು. ಆತನು ಬರೆದಿರುವ "ಗುರುಶಿಷ್ಯರ ಕಥೋಪಕಥನ"ದಲ್ಲಿ "ಅತಿತರುಣ ವಯಸ್ಸಿನಿಂದಲೂ ಈ ಎರಡು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ತಲೆದೋರುತ್ತಲೇ ಇದ್ದುವು: (೧) ಈ ಜೀವನದಿಂದ ಏನು ಮಾಡಲಿ? (೨) ಈ ಜೀವನದಿಂದ ಏನು ಮಾಡಬೇಕು? ನನ್ನ ಜೀವಿತಕಾಲದಲ್ಲೆಲ್ಲಾ ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿದೆ. ಉತ್ತರವನ್ನು ಹುಡುಕುತಾ ಜೀವನದ ಬಹುಭಾಗ ಕಳೆದೇಹೋಯಿತು. ಲೋಕದಲ್ಲಿ ವಾಡಿಕೆಯಾಗಿರುವ ಹಲವುಬಗೆಯ ಉತ್ತರಗಳನ್ನು ಸಂಪಾದಿಸಿದೆ; ಬೇಕಾದಷ್ಟನ್ನು ಓದಿದೆ; ಬೇಕಾದಷ್ಟನ್ನು ಬರೆದೆ. ಅನೇಕ ವಿದ್ವಾಂಸರೊಡನೆ ಚರ್ಚೆಗಳನ್ನು ಮಾಡಿದ್ದೇನೆ; ಅವರ ಕಾರ್ಯಕ್ಷೇತ್ರದಲ್ಲಿಯೂ ಸೇರಿ ಕೆಲಸ ಮಾಡಿದ್ದೇನೆ. ಜೀವನದ ಸಾರ್ಥಕತೆಯನ್ನು ಸಂಪಾದಿಸುವುದಕ್ಕಾಗಿ ಪ್ರಾಣದ ಮೇಲೆ ಆಸೆಯನ್ನು ಬಿಟ್ಟು ಪರಿಶ್ರಮಪಟ್ಟಿದ್ದೇನೆ" ಎಂದು ಬರೆದಿದ್ದಾನೆ. ಈ "ಪ್ರಾಣದ ಮೇಲೆ ಆಸೆಯನ್ನು ಬಿಟ್ಟ ಪರಿಶ್ರಮ"ವನ್ನು ಈತನು ಜೀವನದ ಈ ಭಾಗದಲ್ಲಿಯೇ ಮಾಡಬೇಕಾಗಿ ಬಂತು. ಧರ್ಮಶಾಸ್ತ್ರದ ವ್ಯಾಸಂಗದ ಜೊತೆಯಲ್ಲಿಯೇ ಜೀವನದ ಈ ಭಾಗದಲ್ಲಿ ಆತನ ತಂದೆಯಿಂದ ಧರ್ಮಶಿಕ್ಷಣವನ್ನೂ ಪಡೆಯುತ್ತಿದ್ದನು. ಆತನ ತಂದೆ ಆಗ ಹುಗ್ಲಿಯಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಆಗಿದ್ದನು. ಆ ಕಾಲದ ವಿಚಾರವನ್ನೆತ್ತಿ ಆತನ ತಮ್ಮನಾದ ಪೂರ್ಣ ಬಾಬುವು ಹೀಗೆ ಬರೆದಿದ್ದಾನೆ: "ಆಗ ಅಣ್ಣನು ಕೆಲವು ವರ್ಷಗಳ ಕಾಲ ತಂದೆಯವರ ಜೊತೆಯಲ್ಲಿದ್ದು ಧರ್ಮಸಂಬಂಧವಾದ ಶಿಕ್ಷಣವನ್ನು ಪಡೆಯುತ್ತಿದ್ದನು. . . . ಯಾವ ಧರ್ಮ ಪ್ರಚಾರಕರಿಂದಲೂ ಬಂಕಿಂಚಂದ್ರನು ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಶಿಕ್ಷಣವನ್ನು ಪಡೆಯಲಿಲ್ಲ. ಆತನಿಗೆ ಧರ್ಮೋಪದೇಶವನ್ನು ಮಾಡಿದವರು ನಮ್ಮ ತಂದೆಯವರೊಬ್ಬರೇ. ಬಂಕಿಂಚಂದ್ರನು 'ದೇವೀ ಚೌಧುರಾಣಿ'ಯನ್ನು ನಮ್ಮ ತಂದೆಯವರಿಗೆ ಸಮರ್ಪಣೆ ಮಾಡುವ ಸಂದರ್ಭದಲ್ಲಿ "ಯಾರಿಂದ ನಿಷ್ಕಾಮ ಕರ್ಮವನ್ನು ಕೇಳಿದೆನೋ ಅವರು

ಸ್ವಯಂ ನಿಷ್ಕಾಮಕರ್ಮವ್ರತವನ್ನು ಕೈಗೊಂಡಿದ್ದರು. . . .'' ಎಂದು ಬರೆದಿದ್ದಾನೆ. ಬಂಕಿಂಚಂದ್ರನು ಚುಂಚುಡಾದಲ್ಲಿದ್ದಾಗ ನಮ್ಮ ತಂದೆ ಕಾಲಾಧೀನರಾದರು. ಇದಾದ ಮೇಲೆಯೇ ಆತನ ಮನಸ್ಸಿನಲ್ಲಿ ಒಂದು ಗುರುತರವಾದ ಪರಿವರ್ತನೆಯಾಯಿತು. ಅಲ್ಲಿಂದೀಚೆಗೆ ಹೊರಬಿದ್ದ ಬರವಣಿಗೆಯನ್ನೆಲ್ಲಾ ಹಿಂದೂ ಧರ್ಮವನ್ನು ತಿಳಿಸುವ ಉದ್ದೇಶದಿಂದಲೇ ಬರೆದಿದ್ದಾನೆ . . . ನಮ್ಮ ತಂದೆ ಮೃತರಾದದ್ದು ೧೮೮೧ನೆಯ ಇಸವಿಯಲ್ಲಿ. ಕೆಲವು ತಿಂಗಳಾದ ಮೇಲೆ ಸಂಜೀವಚಂದ್ರನ "ವಂಗದರ್ಶನ''ದಲ್ಲಿ 'ಆನಂದಮಠ'ವು ಪ್ರಕಾಶವಾಗುತ್ತಾ ಬಂತು. ೧೮೮೨ನೆಯ ವರ್ಷದಲ್ಲಿ *Statesman* ಎಂಬ ಪತ್ರಿಕೆಯಲ್ಲಿ ಹಿಂದೂ ಧರ್ಮವನ್ನು ಕುರಿತು Rev. Dr. Hastie ಎಂಬವರಿಗೂ ಬಂಕಿಂಚಂದ್ರನಿಗೂ ಮಸಿ (ಲೇಖನೀ) ಯುದ್ಧವು ನಡೆಯಿತು. ೧೮೮೩ನೆಯ ಇಸವಿಯಲ್ಲಿ 'ವಂಗದರ್ಶನ'ದಲ್ಲಿ "ದೇವೀಚೌಧುರಾಣಿ'' ಹೊರಬಿತ್ತು. ೧೮೮೪ರಲ್ಲಿ "ನವಜೀವನ''ದ ಮೊದಲನೆಯ ಸಂಚಿಕೆಯಲ್ಲಿ "ಧರ್ಮತತ್ತ್ವ'' ಪ್ರಬಂಧಾವಳಿಯ ಪ್ರಕಟನೆಯು ಆರಂಭವಾಯಿತು. ಇದೇ ವರ್ಷದ ಶ್ರಾವಣಮಾಸದ "ಪ್ರಚಾರ'' ಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲಿ "ಸೀತಾರಾಮ'' ಎಂಬ ಗ್ರಂಥವು ಹೊರಬಿತ್ತು.

"'ಆನಂದಮಠ'ವು ಪ್ರಕಾಶಿತವಾದ ಮೇಲೆ "ಸಾಧಾರಣೀ'' ಪತ್ರಿಕೆಯು ಹೀಗೆಂದು ಬರೆದಿದೆ: "ಕಳೆದ ವರ್ಷದ ಪ್ರಧಾನ ಕಾವ್ಯವು "ಆನಂದಮಠ.'' ಸಂಕಲ್ಪ ಸಾಧನೆಯಲ್ಲಿ "ಆನಂದಮಠ''ವು ಬಂಕಿಂಬಾಬುವಿನ ಸರ್ವೋತ್ಕೃಷ್ಟ ಗ್ರಂಥ. ಈ "ಆನಂದಮಠ''ವು ಬಂಕಿಂಬಾಬುವಿನ ಹೃದಯವನ್ನು ಸರ್ವೋತ್ಕೃಷ್ಟ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತದೆ . . . . . ಬಂಕಿಂಬಾಬುವಿನ ದೇಶಭಕ್ತಿ ಪ್ರಬಲವಾದದ್ದು, ಮತ್ತು ಗಂಭೀರವಾದದ್ದು. "ಮೃಣಾಲಿನಿ''ಯ ಹೇಮಚಂದ್ರನು ಇದರ ಅಭಿವ್ಯಕ್ತಿ; ಪ್ರತಾಪನಲ್ಲಿ ಪೆಟ್ಟುಬಿದ್ದ ಮೇಲೆ ಬಲಸಂಚಯ; "ಆನಂದಮಠ''ದ ಸಂತಾನರಲ್ಲಿ ಈ ಬಲದ ವಿಕಾಸ. "ಆನಂದಮಠ''ದಲ್ಲಿ ಕಳ್ಳರ ಅರ್ಥಲಾಭ, ಮೋಹಮುಗ್ಧರ ರೂಪತೃಷ್ಣೆ, ದಂಪತಿಗಳ ಪವಿತ್ರವಾದ ಪ್ರಣಯ, ಬಾಲ್ಯಸ್ನೇಹಿತರ ಚಿರಬಂಧುತ್ವ, ದುರಾಕಾಂಕ್ಷಿಗಳ ಉಚ್ಚವಾದ ಆಸೆ, ಮತ್ತು ಉದಾಸೀನರ ಪರಲೋಕ ಚಿಂತೆ—ಇವೆಲ್ಲವೂ ದೇಶಭಕ್ತಿಯ ಪ್ರಬಲವಾದ ಪ್ರವಾಹದಲ್ಲಿ ಪ್ಲಾವಿತವಾಗಿ ಹೋಗಿವೆ. ಬಂಗಾಳಿಗಳಿಗೆ ದೇಶಭಕ್ತಿಯೇ ಪರಾಗತಿ, ಪರಾಮುಕ್ತಿ: ಇದನ್ನು ಇದುವರೆಗೆ ಕಾವ್ಯದಲ್ಲಿ ಉಜ್ವಲವಾಗಿ ಚಿತ್ರಿಸಿ ಯಾರೂ ಬಂಗಾಳಿಗಳಿಗೆ ತೋರಿಸಿ ಕೊಟ್ಟಿರಲಿಲ್ಲ. ವಂಗದೇಶದ ಮೇಲಣ ಬಂಗಾಳಿಗಳ ಭಕ್ತಿಯು ಕಾಶೀದಾಸನಲ್ಲಿಲ್ಲ, ಕೃತ್ತಿವಾಸನಲ್ಲಿಲ್ಲ; ಭಾರತದಲ್ಲಿಲ್ಲ, ರಾಮಾಯಣದಲ್ಲಿಲ್ಲ; ಷೇಕ್ಸ್ಪಿಯರ್ ಅಥವಾ ಷಿಲ್ಲರ್

ಕವಿಗಳಲ್ಲಿರುವ ಸಂಭವವೂ ಇಲ್ಲ. ಬಂಗಾಳಿಯಾದ ಬಂಕಿಂಚಂದ್ರನು ಬಂಗಾಳಿಗಳೆದುರಿಗೆ ಈ ಶ್ರೇಷ್ಠವಾದ ದೇಶಭಕ್ತಿಯನ್ನು ಚಿತ್ರಿಸಿದ್ದಾನೆ. ಇದರಿಂದಲೇ ನಾನು ಹೇಳಿದ್ದು—ಸಂಕಲ್ಪಸಾಧನೆಗೆ 'ಆನಂದಮಠ'ವು ಬಂಕಿಂಬಾಬುವಿನ ಸರ್ವೋತ್ಕೃಷ್ಟವಾದ ಗ್ರಂಥ, ಮತ್ತು ಬಂಕಿಂಬಾಬುವಿನ ಹೃದಯವನ್ನು ಉತ್ಕೃಷ್ಟವಾದ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತದೆ" ಎಂದು.

ಆಗ ಬಂಕಿಂಚಂದ್ರನಿಗೆ ೪೮ ವರ್ಷ ವಯಸ್ಸು. ಆಗ ಅವನು ಬರೆದ "ಕೃಷ್ಣ ಚರಿತ್ರೆ" ಪುಸ್ತಕಾಕಾರದಲ್ಲಿ ಪ್ರಕಾಶಿತವಾಗಿತ್ತು. ಈ ಸಮಯದಲ್ಲಿಯೇ ಆತನು "ಪ್ರಚಾರ" ಎಂಬ ಪತ್ರಿಕೆಯಲ್ಲಿ ಭಗವದ್ಗೀತೆಯ ಮೇಲೆ ವ್ಯಾಖ್ಯಾನವನ್ನು ಬರೆಯಲು ಹೊರಟದ್ದು. "ಕೃಷ್ಣಚರಿತ್ರೆ"ಯ ಎರಡನೆಯ ಪರಿಚ್ಛೇದದಲ್ಲಿ ಈತನು "ವಿದ್ಯಾವಂತರಲ್ಲಿಯೂ ಅಲ್ಲಲ್ಲಿ ಕೆಲಕೆಲವರು ಈ ಗ್ರಂಥವನ್ನು ಓದುತ್ತಾರೆ. ಅದರಿಂದಲೇ ನಾನು ಯೂರೋಪಿನವರ ಮತಕ್ಕೂ ಪ್ರತಿವಾದವನ್ನು ಹೂಡಲು ಹೊರಟಿರುವುದು. ಯಾರಿಗೆ ವಿಲಾಯತಿಯದೆಲ್ಲವೂ ಒಳ್ಳೆಯದೆಂಬ ಭಾವನೆಯಿದೆಯೋ, ಯಾರು ವಿಲಾಯತಿಯ ಪಂಡಿತರಿಂದ ಹಿಡಿದು ವಿಲಾಯತಿಯ ನಾಯಿಗಳ ವರೆಗೂ ಎಲ್ಲರ ಸೇವೆಯನ್ನೂ ಮಾಡುತ್ತಾರೋ—ಯಾರು ನಮ್ಮ ದೇಶೀಯ ಗ್ರಂಥಗಳನ್ನು ಓದುವುದು ಹಾಗಿರಲಿ, ನಮ್ಮ ದೇಶದ ಭಿಕಾರಿಗಳಿಗೆ ಭಿಕ್ಷವನ್ನೂ ಹಾಕುವುದಿಲ್ಲವೋ—ಅವರಿಗೆ ನಾನೇನೂ ಸಹಾಯ ಮಾಡಲಾರೆ. ವಿದ್ಯಾವಂತರಲ್ಲಿ ಅನೇಕರು ಸತ್ಯಪ್ರಿಯರು, ದೇಶವತ್ಸಲರು; ಇವರಿಗೋಸ್ಕರ ನಾನು ಈ ವ್ಯಾಖ್ಯಾನವನ್ನು ಬರೆಯುತ್ತೇನೆ" ಎಂದು ಬರೆದಿದ್ದಾನೆ. "ಧರ್ಮತತ್ತ್ವ"ವನ್ನು ಬರೆದದ್ದೂ ಗೀತಾವ್ಯಾಖ್ಯಾನ ಮಾಲೆಯನ್ನು ಬರೆಯಲು ಹೊರಟದ್ದೂ ವಿದ್ಯಾವಂತರಲ್ಲಿ ಈ ಗುಂಪಿಗೆ ಸೇರಿದವರಿಗೋಸ್ಕರವೇ ಎಂದು ಮತ್ತೆ ಹೇಳಬೇಕಾಗಿಲ್ಲ. ಆದರೆ ಗೀತಾ ವ್ಯಾಖ್ಯಾನವನ್ನು ಬಂಕಿಂಚಂದ್ರನು ಪೂರ್ತಿಮಾಡಲಾಗಲಿಲ್ಲವೆಂಬುದು ನಮ್ಮ ದೇಶದ ದೌರ್ಭಾಗ್ಯ.

ಕ್ರಿ. ಶ. ೧೮೯೧ರಲ್ಲಿ ಬಂಕಿಂಚಂದ್ರನು ಸರ್ಕಾರಿ ಕೆಲಸದಿಂದ ನಿವೃತ್ತನಾದನು. ಈ ವಿಶ್ರಾಂತಿ ಕಾಲದಲ್ಲಿ "ಜೀವನದಿಂದ ನಾನು ಏನು ಮಾಡಬೇಕು?" ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಿ ತಾನು ತಿಳಿದುಕೊಂಡಿದ್ದನ್ನು ಬಂಗಾಳದ ವಿದ್ಯಾವಂತರಿಗೆ ನಾನಾರೀತಿಯಲ್ಲಿ ತಿಳಿಸಬೇಕೆಂದು ಆತನಿಗೆ ಆಸೆಯಿದ್ದಿತು. "ಭಕ್ತಿ, ಪ್ರೀತಿ, ಶಾಂತಿ—ಈ ಮೂರು ಶಬ್ದಗಳಿಂದ ಯಾವ ವಸ್ತು ಚಿತ್ರಿತವಾಗಿದೆಯೋ ಆ ಮೋಹಿನೀ ಮೂರ್ತಿಗಿಂತ ಹೆಚ್ಚು ಮನೋಹರವಾದದ್ದು ಈ ಜಗತ್ತಿನಲ್ಲಿ ಮತ್ತಾವುದೂ ಇಲ್ಲ" ಎಂಬುದನ್ನು ಬಂಕಿಂಚಂದ್ರನು ತಿಳಿದುಕೊಂಡಿದ್ದನು; ಮತ್ತು ಇದಕ್ಕೋಸ್ಕರವೇ "ಅದನ್ನು ಬಿಟ್ಟು ಮತ್ತೊಂದು ವಿಷಯವನ್ನು ಆಲೋಚಿಸಲು ಮನಸ್ಸು ಆಸೆ ಪಡು

ವುದಿಲ್ಲ" ಎಂದು ಹೇಳಿದ್ದಾನೆ. ಈ ತ್ರಿಮೂರ್ತಿಗಳನ್ನು ಮನಸ್ತೃಪ್ತಿಯಾಗುವ ವರೆಗೂ ಸೇವಿಸುವ ಮೊದಲೇ ನಿಷ್ಠುರನಾದ ಕಾಲನು ಅಕಾಲದಲ್ಲಿ ಬಂದು ಆತನನ್ನು ಎಳೆದು ಕೊಂಡು ಹೋದನು. ಸಾಯುವುದಕ್ಕೆ ಎರಡು ತಿಂಗಳುಗಳಿಗೆ ಮೊದಲು ಯೂನಿವರ್ಸಿಟಿ ಇನ್‌ಸ್ಟಿಟ್ಯೂಟಿನಲ್ಲಿ "Vedic Literature" ಎಂಬ ಇಂಗ್ಲಿಷ್ ಪ್ರಬಂಧವನ್ನು ಬಂಕಿಂಚಂದ್ರನು ಓದಿದನು. ಈ ವಿಷಯವನ್ನು ಕುರಿತು ತಿಳಿಸಬೇಕಾದ ಅನೇಕ ವಿಚಾರಗಳಿದ್ದುವು. ಆದರೆ ಅವುಗಳನ್ನು ತಿಳಿಸಲು ಅವಕಾಶ ದೊರೆಯಲಿಲ್ಲ. ಕ್ರಿ. ಶ. ೧೮೯೪ನೆಯ ಇಸವಿ ಏಪ್ರಿಲ್ ೪ನೆಯ ತಾರೀಖಿಗೆ ಸರಿಯಾದ ವಂಗಾಬ್ದ ೧೩೦೦ನೆಯ ಸಂವತ್ಸರದ ಚೈತ್ರಮಾಸದ ೨೬ನೆಯ ತೇದಿ ೩ ಘಂಟೆ ೨೩ ನಿಮಿಷಗಳ ಸಮಯದಲ್ಲಿ ಬಂಕಿಂಚಂದ್ರನು ಇಹಲೋಕವನ್ನು ಬಿಟ್ಟನು.

ವಂದೇ ಮಾತರಂ

(ಮೂಲ)

ವಂದೇ ಮಾತರಂ |
ಸುಜಲಾಂ ಸುಫಲಾಂ ಮಲಯುಜಶೀತಲಾಂ,
ಸಸ್ಯಶ್ಯಾಮಲಾಂ ಮಾತರಂ |
ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ,
ಫುಲ್ಲಕುಸುಮಿತದ್ರುಮದಲಶೋಭಿನೀಂ,
ಸುಹಾಸಿನೀಂ ಸುಮಧುರಭಾಷಿಣೀಂ,
ಸುಖದಾಂ ವರದಾಂ ಮಾತರಂ |

ಸಪ್ತಕೋಟಿಕಂಠ ಕಲಕಲನಿನಾದ ಕರಾಲೇ,
ದ್ವಿಸಪ್ತಕೋಟಿಭುಜೈರ್ಧೃತಖರಕರವಾಲೇ,
ಅಬಲಾ ಕೇನ ಮಾ ಏತ ಬಲೇ |
ಬಹುಬಲಧಾರಿಣೀಂ ನಮಾಮಿ ತಾರಿಣೀಂ
ರಿಪುದಲವಾರಿಣೀಂ ಮಾತರಂ |

ತುಮಿ ವಿದ್ಯಾ ತುಮಿ ಧರ್ಮ್ಮ,
ತುಮಿ ಹೃದಿ ತುಮಿ ಮರ್ಮ್ಮ,
ತ್ವಂ ಹಿ ಪ್ರಾಣಾಃ ಶರೀರೇ |

ಬಾಹುತೇ ತುಮಿ ಮಾ ಶಕ್ತಿ,
ಹೃದಯೇ ತುಮಿ ಮಾ ಭಕ್ತಿ,
ತೋಮಾರಈ ಪ್ರತಿಮಾ ಗಡಿ,
ಮಂದಿರೇ ಮಂದಿರೇ |

ತ್ವಂ ಹಿ ದುರ್ಗಾದಶಪ್ರಹರಣಧಾರಿಣೀ
ಕಮಲಾ ಕಮಲದಲವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿ ತ್ವಾಂ |
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ |
ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ |
ವಂದೇ ಮಾತರಂ |

ಬಂಕಿಂಚಂದ್ರನ ಜೀವನ ಮತ್ತು ಕೆಲಸ

ಬಂಕಿಂಚಂದ್ರನು ಹುಟ್ಟಿದ್ದು: ೧೮೩೮ನೆಯ ಇಸವಿ ಜೂನ್ ೨೭ (ವಂಗಾಬ್ದ ೧೨೪೫ನೆಯ ಆಷಾಢ ಶುದ್ಧ ೧೧).

ಬಂಕಿಂಚಂದ್ರನು ಕಾಲಾಧೀನನಾದದ್ದು: ೧೮೯೪ನೆಯ ಇಸವಿ ಏಪ್ರಿಲ್ ೪ (ವಂಗಾಬ್ದ ೧೩೦೦ನೆಯ ಚೈತ್ರ ಬಹುಳ ೧೧).

ಜೀವನ ಕಾಲ: ೫೫ ವರ್ಷ ೯ ತಿಂಗಳು ೧೪ ದಿನ.

ಜೀವನ ಅಧ್ಯಾಯ: (೧) ೧೮೩೮—೧೮೫೮.
(೨) ೧೮೫೮—೧೮೭೬.
(೩) ೧೮೭೬—೧೮೯೪.

ಅಧ್ಯಾಯ ೧.—ವಿದ್ಯಾವ್ಯಾಸಂಗ, ಬಾಲ್ಯದ ಕಾವ್ಯರಚನೆ, ಮದುವೆ ಮತ್ತು ಸರ್ಕಾರಿ ಕೆಲಸಕ್ಕೆ ಸೇರಿದ್ದು.

ಅಧ್ಯಾಯ ೨.—ಪತ್ನೀವಿಯೋಗ, ಎರಡನೆಯ ಮದುವೆ, ಸಾಹಿತ್ಯಸಾಧನೆ, ಮಾತೃವಿಯೋಗ, ಮತ್ತು "ವಂಗದರ್ಶನ" ಪತ್ರಿಕೆಯ ಪ್ರಕಾಶನ.

ಅಧ್ಯಾಯ ೩.—"ವಂಗದರ್ಶನ"ವನ್ನು ಬಿಟ್ಟದ್ದು, ಪಿತೃವಿಯೋಗ, "ಪ್ರಚಾರ ಮತ್ತು "ನವಜೀವನ' ಪತ್ರಿಕೆಗಳಲ್ಲಿ ಧರ್ಮ ವಿಷಯಗಳ ಸಮಾಲೋಚನೆ, ಸರ್ಕಾರಿ ಕೆಲಸದಿಂದ ನಿವೃತ್ತಿ.

ಅಧ್ಯಾಯ ೧

ಕ್ರಿ. ಶ.

೧೮೩೮ ಬಂಕಿಂಚಂದ್ರನ ಜನ್ಮ.

೧೮೪೩ ಅಕ್ಷರಾಭ್ಯಾಸ.

೧೮೪೪ ಮೇದಿನೀಪುರದ ಇಂಗ್ಲಿಷ್ ಸ್ಕೂಲಿಗೆ ಸೇರಿದ್ದು.

೧೮೪೯ ವಿವಾಹ.

ಹೂಗ್ಲೀ ಕಾಲೇಜಿನಲ್ಲಿ ಪಾಠಾರಂಭ.

೧೮೫೨ "ಸಂವಾದ ಪ್ರಭಾಕರ"ದಲ್ಲಿ ಮೊದಲನೆಯ ಪದ್ಯದ ಪ್ರಕಾಶನ.

೧೮೫೩ ಸಂಸ್ಕೃತ ಸಾಹಿತ್ಯದ ಅಧ್ಯಯನ.

"ಲಲಿತಾ", "ಪೂರ್ವಕಾಲದ ಕಥೆಗಳು" (ಇದರ ಬಂಗಾಳೀ ಹೆಸರು "ಪುರಾಕಾಲಿಕಗಲ್ಪ" ಎಂದು) ಮತ್ತು "ಮಾನಸ"— ಇವುಗಳನ್ನು ಬರೆದದ್ದು.

೧೮೫೪ ಜೂನಿಯರ್ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಬಂದದ್ದು.

೧೮೫೬ "ಲಲಿತಾ"—"ಪೂರ್ವಕಾಲದ ಕಥೆಗಳು"—"ಮಾನಸ" ಎಂಬ ಹೆಸರಿನ ಪದ್ಯ ಪುಸ್ತಕ ಪ್ರಕಟವಾದದ್ದು.

ಸೀನಿಯರ್ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಸಂಪಾದನೆ.

೧೮೫೭ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದ್ದು.

ಅಧ್ಯಾಯ ೨

೧೮೫೮ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದದ್ದು.

ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಪದವಿಯಲ್ಲಿ ನಿಯೋಜಿತನಾದದ್ದು. (ಕೆಲಸಕ್ಕೆ ಸೇರಿದ್ದು ಯಶೋಹರ [Jessore] ದಲ್ಲಿ).

Indian Field ಪತ್ರಿಕೆಯಲ್ಲಿ 'Rajamohan's Wife' ಎಂಬ ಇಂಗ್ಲಿಷ್ ಕಾದಂಬರಿ ಕ್ರಮಕ್ರಮವಾಗಿ ಪ್ರಕಟವಾದದ್ದು.

೧೮೫೯ ಪತ್ನೀವಿಯೋಗ.

೧೮೬೦ ಎರಡನೆಯ ಮದುವೆ.

೧೮೬೫ "ದುರ್ಗೇಶ ನಂದಿನಿ" ಪ್ರಕಟವಾದದ್ದು.

೧೮೬೬ "ಕಪಾಲಕುಂಡಲಾ" ಪ್ರಕಟವಾದದ್ದು.

೧೮೬೯ ಬಿ.ಎಲ್. ಪರೀಕ್ಷೆಯಲ್ಲಿ ಉತ್ತೀರ್ಣನಾದದ್ದು.

"ಮೃಣಾಲಿನೀ" ಪ್ರಕಟವಾದದ್ದು.

ಬೆಥ್ಯೂನ್ ಸೊಸೈಟಿಯ ಅಧಿವೇಶನದಲ್ಲಿ "ಹಿಂದುಗಳ ಪೂಜೋತ್ಸವಗಳ ಉತ್ಪತ್ತಿ ಕಥೆ" ಎಂಬ ಇಂಗ್ಲಿಷ್ ಪ್ರಬಂಧವನ್ನು ಓದಿದ್ದು.

೧೮೭೦ ಮಾತೃವಿಯೋಗ.

ಬೆಂಗಾಲ್ ಸೋಷಿಯಲ್ ಸೈನ್ಸ್ ಅಸೋಸಿಯೇಷನಿನಲ್ಲಿ "ಬಂಗಾಳದ ಜನಸಾಧಾರಣ ಸಾಹಿತ್ಯ" ಎಂಬ ಇಂಗ್ಲಿಷ್ ಪ್ರಬಂಧವನ್ನು ಓದಿದ್ದು.

೧೮೭೨–೭೩ "ವಂಗದರ್ಶನ"ದ ಪ್ರಕಟನೆ.

"ವಂಗದರ್ಶನ"ದಲ್ಲಿ ಬಂಕಿಂಚಂದ್ರನ "ವಿಷವೃಕ್ಷ" ಮತ್ತು "ಇಂದಿರಾ"—ಇವು ಪ್ರಕಾಶಿತವಾದದ್ದು. ಇದಲ್ಲದೆ "ಲೋಕರಹಸ್ಯ", "ವಿಜ್ಞಾನರಹಸ್ಯ', "ಸಾಂಖ್ಯದರ್ಶನ", "ವಿವಿಧ ಸಮಾಲೋಚನೆ" ಮುಂತಾದ ಗ್ರಂಥಗಳನ್ನು ಬರೆದದ್ದು.

೧೮೭೩ "ವಿಷವೃಕ್ಷ" ಮತ್ತು "ಇಂದಿರಾ"—ಇವು ಪುಸ್ತಕ ರೂಪದಲ್ಲಿ ಪ್ರಕಟವಾದದ್ದು.

"ಸಾಧಾರಣೀ" ಪತ್ರಿಕೆಯಲ್ಲಿ "ಜಾತಿವೈರ" ಎಂಬ ಪ್ರಬಂಧವು ಪ್ರಕಟವಾದದ್ದು.

೧೮೭೩–೭೪ ಎರಡನೆಯ ವರ್ಷದ (೧೨೮೦ನೆಯ ವಂಗಾಬ್ದದ) "ವಂಗದರ್ಶನ"ದಲ್ಲಿ "ಯುಗಳಾಂಗುರೀಯ"ವು ಸಂಪೂರ್ಣವಾಗಿ ಪ್ರಕಟವಾದದ್ದು; ಮತ್ತು "ಚಂದ್ರಶೇಖರ", "ಕಮಲಾಕಾಂತನ ದಫ್ತರ" ಮತ್ತು "ಸಾಮ್ಯ"—ಇವುಗಳನ್ನು ಬರೆಯಲಾರಂಭಿಸಿದ್ದು.

೧೮೭೪ "ಯುಗಳಾಂಗುರೀಯ" ಮತ್ತು "ಲೋಕರಹಸ್ಯ"—ಇವು ಗ್ರಂಥರೂಪದಲ್ಲಿ ಹೊರಬಿದ್ದದ್ದು.

“ಭ್ರಮರ” ಪತ್ರಿಕೆಯಲ್ಲಿ “ದುರ್ಗಾಪೂಜೆ” ಎಂಬ ಪ್ರಬಂಧ ಪ್ರಕಟವಾದದ್ದು.

೧೮೭೪–೭೫ ಮೂರನೆಯ ವರ್ಷದ (೧೨೮೧ನೆಯ ವಂಗಾಬ್ದದ)“ವಂಗದರ್ಶನ” ದಲ್ಲಿ “ಚಂದ್ರಶೇಖರ”ದ ಪ್ರಕಟನೆ ಮುಗಿಯಿತು; “ರಜನಿ” ಪ್ರಕಟವಾಗಲು ಪ್ರಾರಂಭವಾಯಿತು.

೧೮೭೫ “ಚಂದ್ರಶೇಖರ” ಮತ್ತು “ವಿಜ್ಞಾನರಹಸ್ಯ” ಗ್ರಂಥಗಳ ಪ್ರಕಟನೆ.

೧೮೭೫–೭೬ ನಾಲ್ಕನೆಯ ವರ್ಷದ “ವಂಗದರ್ಶನ”ದಲ್ಲಿ “ರಜನಿ”ಯ ಪ್ರಕಟನೆ ಮುಗಿಯಿತು; “ರಾಧಾರಾಣಿ” ಸಂಪೂರ್ಣವಾಗಿ ಪ್ರಕಟವಾಯಿತು.

ಪುಷ್ಯಮಾಸದ ಸಂಚಿಕೆಯಲ್ಲಿ “ಕೃಷ್ಣಕಾಂತನ ಉಯಿಲು” ಪ್ರಕಟವಾಗಲು ಪ್ರಾರಂಭವಾಯಿತು.

ಅಧ್ಯಾಯ ೩

೧೮೭೬ “ವಂಗದರ್ಶನ”ವನ್ನು ಬಿಟ್ಟದ್ದು.

“ಕಮಲಾಕಾಂತನ ದಫ್ತರ” (೧ನೆಯ ಭಾಗ) ಗ್ರಂಥರೂಪದಲ್ಲಿ ಹೊರಬಿದ್ದದ್ದು.

“ವಿವಿಧ ಸಮಾಲೋಚನೆ” ಗ್ರಂಥ ಪ್ರಕಟವಾದದ್ದು.

“ದೀನಬಂಧುಮಿತ್ರನ ಜೀವನ”ದ ಪ್ರಕಟನೆ.

೧೮೭೭ “ರಜನಿ” ಪುಸ್ತಕರೂಪದಲ್ಲಿ ಪ್ರಕಟವಾದದ್ದು.

“ಉಪಕಥಾ” (“ಇಂದಿರಾ”, “ಯುಗಳಾಂಗುರೀಯ” ಮತ್ತು “ರಾಧಾರಾಣಿ”) ಪ್ರಕಟವಾದದ್ದು.

೧೮೭೮ “ಕವಿತಾ ಪುಸ್ತಕ” ಮತ್ತು “ಕೃಷ್ಣಕಾಂತನ ಉಯಿಲು” ಗ್ರಂಥರೂಪದಲ್ಲಿ ಹೊರಬಿದ್ದದ್ದು.

೧೮೭೯ “ಪ್ರಬಂಧ ಪುಸ್ತಕ”ದ ಪ್ರಕಟನೆ.

೧೮೮೦ ಸಂಜೀವಚಂದ್ರನ ಸಂಪಾದಕತ್ವದಲ್ಲಿ ಹೊರಟ “ವಂಗದರ್ಶನ”ದಲ್ಲಿ “ಮುಚೀರಾಮ ಗುಡನ ಜೀವನ ಚರಿತೆ” ಪ್ರಕಟವಾದದ್ದು.

೧೮೮೧ ಪಿತೃವಿಯೋಗ.

ಸಂಜೀವಚಂದ್ರನ “ವಂಗದರ್ಶನ”ದಲ್ಲಿ “ಆನಂದಮಠ” ಪ್ರಕಟವಾಗಲು ಪ್ರಾರಂಭವಾಯಿತು.

೧೮೮೨ ರೆವರೆಂಡ್ ಹೇಸ್ಟಿ ಸಾಹೇಬನೊಡನೆ ಲೇಖನೀ ಯುದ್ಧದಲ್ಲಿ ಜಯ.
"ರಾಜಸಿಂಹ", "ಆನಂದಮಠ" ಗ್ರಂಥಗಳ ಪ್ರಕಟನೆ.
ಸಂಜೀವಚಂದ್ರನ "ವಂಗದರ್ಶನ"ದಲ್ಲಿ "ದೇವೀ ಚೌಧುರಾಣಿ"ಯು ಪ್ರಕಟವಾಗಲು ಆರಂಭ.

೧೮೮೩ "ಮುಚಿರಾಮ ಗುಡನ ಜೀವನ ಚರಿತೆ" ಪುಸ್ತಕ ರೂಪದಲ್ಲಿ ಪ್ರಕಟವಾದದ್ದು.

೧೮೮೪ "ನವಜೀವನ"ದಲ್ಲಿ "ಧರ್ಮ ತತ್ತ್ವ"ದ ಪ್ರಬಂಧಾವಳಿಯ ಪ್ರಕಟನೆಗೆ ಆರಂಭ.
"ಪ್ರಚಾರ"ದಲ್ಲಿ "ಸೀತಾರಾಮ", "ಕೃಷ್ಣಚರಿತ್ರೆ"—ಇವುಗಳ ಪ್ರಕಟನಾರಂಭ.
"ದೇವೀ ಚೌಧುರಾಣಿ" ಗ್ರಂಥರೂಪದಲ್ಲಿ ಹೊರಬಿದ್ದದ್ದು.

೧೮೮೫ ಕಲ್ಕತ್ತಾ ವಿಶ್ವವಿದ್ಯಾನಿಲಯದ ಸದಸ್ಯನಾದದ್ದು.
"ಈಶ್ವರಚಂದ್ರಗುಪ್ತನ ಜೀವನ ಚರಿತೆ"ಯನ್ನು ಪ್ರಕಟಿಸಿದ್ದು.

೧೮೮೬ "ಕೃಷ್ಣಚರಿತ್ರೆ" ಗ್ರಂಥರೂಪದಲ್ಲಿ ಬಂದದ್ದು.
"ಪ್ರಚಾರ"ದಲ್ಲಿ ಶ್ರೀಮದ್ಭಗವದ್ಗೀತೆಯ ಮೇಲೆ ಬಂಗಾಳಿಯಲ್ಲಿ ಟೀಕೆಯನ್ನು ಬರೆಯಲಾರಂಭ.

೧೮೮೭ "ಸೀತಾರಾಮ" ಪುಸ್ತಕ ರೂಪದಲ್ಲಿ ಹೊರಬಿದ್ದದ್ದು.
"ವಿವಿಧ ಪ್ರಬಂಧ" ಗ್ರಂಥ ಪ್ರಕಟನೆ.

೧೮೮೮ "ಧರ್ಮತತ್ತ್ವ" ಗ್ರಂಥರೂಪದಲ್ಲಿ ಹೊರಬಿದ್ದದ್ದು.

೧೮೮೯ ಬಂಕಿಂಚಂದ್ರನ ಅಣ್ಣನಾದ ಸಂಜೀವಚಂದ್ರನ ಮರಣ.

೧೮೯೧ ಸರ್ಕಾರಿ ನೌಕರಿಯಿಂದ ನಿವೃತ್ತಿ.

೧೮೯೨ "ರಾಯ್ ಬಹದ್ದೂರ್" ಬಿರುದು ಬಂದದ್ದು.
ಬಂಗಾಳಾ ಸಾಹಿತ್ಯದಲ್ಲಿ "ಪ್ಯಾರಿ ಚಾಂದ್ ಮಿತ್ರನ ಸ್ಥಾನ" ಎಂಬ ಪ್ರಬಂಧದ ಪ್ರಕಟನೆ.

೧೮೯೩ "ಸಂಜೀವಿನೀ ಸುಧಾ" ಪತ್ರಿಕೆಯ ಸಂಪಾದಕನಾದದ್ದು.

೧೮೯೪ ಸಿ.ಐ.ಇ. ಬಿರುದು ಬಂದದ್ದು.
ಬಂಕಿಂಚಂದ್ರನು ಕಾಲಾಧೀನನಾದದ್ದು.

ಮನೋವಿಶ್ಲೇಷಣ

(PSYCHO-ANALYSIS)

ಕೆಲವು ತಿಂಗಳ ಹಿಂದೆ ಹಿಟ್ಲರನು ಆಸ್ಟ್ರಿಯಾ ದೇಶವನ್ನು ಜರ್ಮನಿಯೊಂದಿಗೆ ಐಕ್ಯಗೊಳಿಸಿದಾಗ ಉಂಟಾದ ಕಲಕಲ ಎಲ್ಲರ ಜ್ಞಾಪಕದಲ್ಲೂ ಇದೆ. ನಾಜಿ ಪ್ರಭುತ್ವ ಬಂದ ಕೂಡಲೇ ಜರ್ಮನಿಯಂತೆ ಆಸ್ಟ್ರಿಯಾದಲ್ಲೂ ಯೆಹೂದ್ಯ ಜನಗಳಿಗೆ ಹಿಂಸೆ ತಟ್ಟುವುದಕ್ಕೆ ಆರಂಭವಾಯಿತು; ಎಂಥ ಮಹನೀಯರಾದರೂ ಯೆಹೂದ್ಯ ಕುಲದಲ್ಲಿ ಹುಟ್ಟಿದ್ದರೆ ಸಾಕು, ಕೋಟಲೆಗೆ ಗುರಿಯಾದರು. ಭೌತವಿಜ್ಞಾನದ ತಳಹದಿಯನ್ನೇ ಅಲ್ಲಾಡಿಸಿ ಸಾಪೇಕ್ಷವಾದವನ್ನು ಸಿದ್ಧಾಂತಿಸಿದ ಐನ್‌ಸ್ಟೈನ್ ಪಂಡಿತನಿಗೆ ಕೂಡ ಹಿಂದೆ ಜರ್ಮನಿಯಿಂದ ಉಚ್ಚಾಟನೆ ತಪ್ಪಲಿಲ್ಲವಷ್ಟೆ; ಈಗ ಅದರಂತೆಯೇ, ಮನೋವಿಜ್ಞಾನದಲ್ಲಿ ಒಂದು ಕ್ರಾಂತಿಯನ್ನು ಉಂಟುಮಾಡಿರುವ ಇನ್ನೊಬ್ಬ ಜಗದ್ವಿಖ್ಯಾತ ವೈಜ್ಞಾನಿಕರು ಆಸ್ಟ್ರಿಯಾದಿಂದ ಹೊರಬೀಳಬೇಕಾಯಿತು.—ಇವರೇ ಫ್ರಾಯ್ಡ್: ಮನೋವಿಶ್ಲೇಷಣ*ದ ಜನಕರಾದ ಸಿಗ್ಮಂಡ್ ಫ್ರಾಯ್ಡ್. ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿ ಇವರು ಸ್ವದೇಶ ಭ್ರಷ್ಟರಾಗಿ ಬಂದು ಈಗ ಇಂಗ್ಲೆಂಡಿನಲ್ಲಿ ನೆಲಸಿದ್ದಾರೆ.

ಫ್ರಾಯ್ಡರು ತಮ್ಮ ಹೊಸ ಸಿದ್ಧಾಂತವನ್ನು 'ಸ್ವಪ್ನ ಮೀಮಾಂಸೆ' (*Interpretation of Dreams*) ಎಂಬ ಗ್ರಂಥದಲ್ಲಿ ಮೊಟ್ಟಮೊದಲು ಸ್ಪಷ್ಟಪಡಿಸಿದರು. ಈ ಪುಸ್ತಕವು ಪ್ರಕಟನೆಯಾದಾಗ ಸಾವಿರಾರು ಜನರು ಇದನ್ನು ಓದಿ ಚಕಿತರಾದರು; ಅದರ ಪರಿಚಯವನ್ನು ಮಾಡಿಕೊಳ್ಳದ ವಿದ್ಯಾವಂತರೇ ವಿರಳವಾದರು. ಆದರೆ ಇದನ್ನು ಓದಿದ ಎಲ್ಲರಲ್ಲಿಯೂ ಒಂದೇ ವಿಧವಾದ ಪರಿಣಾಮ ಉಂಟಾಗಲಿಲ್ಲ. ಕೆಲವರಿಗೆ ಹೊಸ ಕಣ್ಣು ತೆರೆದಂತಾಯಿತು; ಮತ್ತೆ ಕೆಲವರಲ್ಲಿ ಅಸಹ್ಯತೆ ಜುಗುಪ್ಸೆಗಳು ತಲೆದೋರಿದುವು. ಮನಶ್ಶಾಸ್ತ್ರಜ್ಞರಲ್ಲಿ ವಾದವಿವಾದಗಳು ಪ್ರಾರಂಭವಾದುವು. ಮನಸ್ಸಿನ ಆಳವನ್ನು ಇಷ್ಟುದೂರ ಪರೀಕ್ಷೆ ಮಾಡಬಹುದೆಂದು ಅವರಿಗೆ ತಿಳಿದಿರಲಿಲ್ಲ.

---

* 'ಮನೋವಿಶ್ಲೇಷಣ' (Psycho-Analysis) ಎಂಬ ಪದವನ್ನು ಮೂರು ಅರ್ಥಗಳಲ್ಲಿ ಉಪಯೋಗಿಸುವ ವಾಡಿಕೆಯಿದೆ: (೧) ನರಗಳಿಗೂ ಮೆದುಳಿಗೂ ಸಂಬಂಧಪಟ್ಟ ವ್ಯಾಧಿಗಳನ್ನು ಗುಣಪಡಿಸಲು ಸಿಗ್ಮಂಡ್ ಫ್ರಾಯ್ಡ್ ಕಂಡುಹಿಡಿದ ಚಿಕಿತ್ಸಾಪದ್ಧತಿ; (೨) ಮನಸ್ಸಿನ ಪರೋಕ್ಷ ಪ್ರವೃತ್ತಿಗಳನ್ನು ಸಂಶೋಧಿಸಲು ಏರ್ಪಟ್ಟ ವೈಜ್ಞಾನಿಕ ಪದ್ಧತಿ; (೩) ಮೇಲೆ ಕಂಡ ಎರಡು ಪದ್ಧತಿಗಳಿಂದಲೂ ಸಂಗ್ರಹಿಸಿದ ಜ್ಞಾನಸಾಮಗ್ರಿ.

ಇದುವರೆಗೆ ಬಹಳ ನಿಧಾನವಾಗಿ ಹೆಜ್ಜೆ ಇಡುತ್ತಿದ್ದ ಮನೋವಿಜ್ಞಾನವು ಅತಿ ವೇಗವಾಗಿ ಮುಂದುವರಿಯಿತು. ಫ್ರಾಯ್ಡರಿಗೆ ಮುಂಚೆ ಮನಶ್ಶಾಸ್ತ್ರಜ್ಞರು ಜಾಗ್ರದವಸ್ಥೆಯಲ್ಲಿ ಎಷ್ಟುರೀತಿಯಲ್ಲಿ ಮನೋವೃತ್ತಿಗಳು ಕೆಲಸಮಾಡುವುವೆಂಬ ವಿಷಯವನ್ನು ಕುರಿತು ಮಾತ್ರ ವಿಚಾರ ನಡಸುತ್ತಿದ್ದರು; ಫ್ರಾಯ್ಡರಾದರೋ ಮನಸ್ಸಿನ ನಿಗೂಢ ತರಂಗಗಳ ಕಡೆಗೆ ಮನಶ್ಶಾಸ್ತ್ರಜ್ಞರ ದೃಷ್ಟಿಯನ್ನು ಸೆಳೆದರು.

ಮನೋವಿಶ್ಲೇಷಣದ ಇತಿಹಾಸ

ಈಗ ಸುಮಾರು ಐವತ್ತು ವರ್ಷಗಳ ಹಿಂದೆ ಡಾ|| ಬ್ರಾಯರ್ ಎಂಬ ವಿಯನ್ನಾ ನಗರದ ವೈದ್ಯನೊಬ್ಬನಿಗೆ ಗೋಚರವಾದ ಒಂದು ಸಣ್ಣ ಸಂಗತಿಯೇ ಮನೋವಿಶ್ಲೇಷಣದ ಉತ್ಪತ್ತಿಗೆ ಕಾರಣವೆನ್ನಬಹುದು. ಒಂದು ದಿನ ಇವನೆಡೆಗೆ ಮಿಥ್ಯೋನ್ಮಾದ (Hysteria)ದಿಂದ ನರಳುತ್ತಿದ್ದ ಒಬ್ಬ ಯುವತಿ ಚಿಕಿತ್ಸೆಗಾಗಿ ಬಂದಳು. ಇವಳನ್ನು ಬ್ರಾಯರನು ಪರೀಕ್ಷಿಸಿ ಇದು ಮನಸ್ಸಿಗೆ ಸಂಬಂಧಪಟ್ಟ ವ್ಯಾಧಿಯೆಂದು ತೀರ್ಮಾನಿಸಿ ಹಿಪ್ನಾಟಿಸಮ್ (Hypnotism) ಎಂಬ ಪ್ರೇರಿತನಿದ್ರೆಯಿಂದ ಗುಣಪಡಿಸಲು ಪ್ರಯತ್ನಿಸಿದನು. ಹಿಪ್ನಾಟಿಸಮ್ ಸ್ಥಿತಿಯಲ್ಲಿ ರೋಗಿಯು ತನ್ನ ಸುಪ್ತಚಿತ್ತ (the Unconscious)ದಲ್ಲಿರುವ ಬಯಕೆಗಳನ್ನೂ ನೆನಪುಗಳನ್ನೂ ಮರೆಮಾಜದೆ ಹೇಳಿಬಿಡುವುದು ಅನುಭವದ ವಿಷಯವಾಗಿತ್ತು. ಈ ರೋಗಿ ನಿದ್ರಾವಸ್ಥೆಯಲ್ಲಿ ತನ್ನ ಪೂರ್ವ ವೃತ್ತಾಂತವನ್ನು ಹೇಳುತ್ತಾ ಬರುವಾಗ ತನ್ನ ಮನಸ್ಸಿನ ಮೇಲೆ ಕವಿದಿದ್ದ ಅನುರಾಗಕ್ಕೆ ಸಂಬಂಧಪಟ್ಟ ಮನೋವಿಕಾರಗಳನ್ನೆಲ್ಲಾ ಒದರಿಬಿಟ್ಟಳು. ಇದರ ಫಲವಾಗಿ ಇವಳ ಶರೀರದಲ್ಲಿ ಉಂಟಾಗಿದ್ದ ನರಗಳ ದೌರ್ಬಲ್ಯ, ಆಲಸ್ಯ, ಮನಸ್ಸಿನ ಗ್ಲಾನಿ ಇವೆಲ್ಲಾ ಕ್ರಮೇಣ ಕಡಮೆಯಾಗುತ್ತಾ ಬಂದುವು. ಬೇರೆ ಔಷಧಿಗಳ ಪ್ರಯೋಗವಿಲ್ಲದೆಯೇ ವ್ಯಾಧಿ ವಾಸಿಯಾಗುವ ಸಂಭವ ಒದಗಿತು. ಹೀಗೆ ಮನಸ್ಸಿನ ರೋಗವನ್ನು ಮನಸ್ಸಿನ ಪರಿವರ್ತನದಿಂದಲೇ ಗೆಲ್ಲಬಹುದಾದ ಪರಿಣಾಮವನ್ನು ಬ್ರಾಯರನು ಕಂಡನು. ಆ ಯುವತಿಯು ವೈದ್ಯನ ಪರೀಕ್ಷೆಯ ಕಾಲದಲ್ಲಿ ಮುಚ್ಚುಮರೆ ಇಲ್ಲದೆ ನಿದ್ರಾವಸ್ಥೆಯಲ್ಲಿ ಹೇಳಿಕೊಂಡು ಬಂದ ಅನುಭವಗಳನ್ನು ತನ್ನ ಅನುದಿನದ ಜಾಗೃತ ಜೀವನದಲ್ಲಿ ಮರೆತಿರುತ್ತಿದ್ದಳು. ಮರೆತ ಅನುಭವವನ್ನು ಹಿಪ್ನಾಟಿಸಮ್ ಸ್ಥಿತಿಯಲ್ಲಿ ಜ್ಞಾಪಿಸಿಕೊಂಡ ತಕ್ಷಣವೇ ಅವಳ ರೋಗದ ಚಿಹ್ನೆಗಳು ಅಳಿದು ಗುಣಪಡುತ್ತಿದ್ದಳು. ಈ ಸಂಗತಿಯನ್ನು ಬ್ರಾಯರನು ತನ್ನ ಸ್ನೇಹಿತರೂ ಮೆದುಳಿನ ರೋಗಗಳ ವೈದ್ಯರೂ ಆದ ಸಿಗ್ಮಂಡ್ ಫ್ರಾಯ್ಡರಿಗೆ ತಿಳಿಸಿದನು. ಇಷ್ಟಾದರೂ, ಕಾಮಜೀವನಕ್ಕೆ ಸಂಬಂಧಪಟ್ಟ ತೊಡಕೊಂದು

ಯುವತಿಯ ರೋಗಕ್ಕೆ ಕಾರಣವೆಂಬ ಅಂಶವು ಬ್ರ್ಯಾಯರನಿಗೆ ಹೊಳೆಯಲಿಲ್ಲ. ಫ್ರ್ಯಾಯ್ಡರಿಗೆ ಮಾತ್ರ ಇದರಲ್ಲಿ ಕುತೂಹಲವು ಬಹುಮಟ್ಟಿಗೆ ಹೆಚ್ಚಿ ಬ್ರ್ಯಾಯರನ ಚಿಕಿತ್ಸಾಕ್ರಮವನ್ನು ತಮ್ಮೆಡೆಗೆ ಬಂದ ರೋಗಿಗಳ ಮೇಲೆ ಪ್ರಯೋಗಮಾಡಿ ಈ ವಿಷಯದಲ್ಲಿ ಅನುಭವವನ್ನು ಹೆಚ್ಚುಮಾಡಿಕೊಂಡರು. ಆದರೆ ಹಿಪ್ನಾಟಿಸಮ್ ಪದ್ಧತಿ ಎಲ್ಲ ರೋಗಿಗಳ ವಿಷಯದಲ್ಲಿಯೂ ಫಲಕಾರಿಯಾಗುತ್ತಿರಲಿಲ್ಲ; ಇದರಿಂದ ರೋಗಿಯ ಮನೋದೌರ್ಬಲ್ಯವು ಕೆಲವು ವೇಳೆ ಹೆಚ್ಚುತ್ತಿದ್ದುದೂ ಉಂಟು. ಆದಕಾರಣ, ಇದಕ್ಕಿಂತಲೂ ಉತ್ತಮವಾದ ಚಿಕಿತ್ಸಾಪದ್ಧತಿಯನ್ನು ಹುಡುಕಲು ಫ್ರ್ಯಾಯ್ಡ್ ತೊಡಗಿದರು. ಈ ಪ್ರಯತ್ನದ ಫಲವೇ ಈಗ ಮನೋವಿಶ್ಲೇಷಣ ಪದ್ಧತಿ ಎಂದು ಹೆಸರುಗೊಂಡಿದೆ.

ಡಾ|| ಬ್ರ್ಯಾಯರನಿಗೆ ಗೋಚರವಾದ ಮೇಲಿನ ಸಂಗತಿಯಿಂದ ಫ್ರ್ಯಾಯ್ಡರು ವಿಸ್ಮೃತಿಗೂ ರೋಗದ ಚಿಹ್ನೆಗೂ ಕಾರ್ಯಕಾರಣ ಸಂಬಂಧವಿರಬೇಕೆಂದು ಅನುಮಾನ ತೆಗೆದರು. ವಿಜ್ಞಾನಿಯಾದ ಫ್ರ್ಯಾಯ್ಡರಿಗೆ ಸಂಗತಿಗಳು ಆಕಸ್ಮಿಕವಾಗಿ ಸಂಭವಿಸುವುವೆಂಬ ವಾದದಲ್ಲಿ ವಿಶ್ವಾಸವಿಲ್ಲ. ಪ್ರಕೃತಿ ನಿಯಮಬದ್ಧವಾಗಿರುವಂತೆ ಮನಸ್ಸಿನ ರೀತಿಯೂ ನಿಯಮಬದ್ಧವಾಗಿರಬೇಕು. ಕಾರ್ಯಕಾರಣ ಸಂಬಂಧವು ಮಾನಸಿಕ ಪ್ರಪಂಚದಲ್ಲಿಯೂ ಇದ್ದಹೊರತು ಮನಸ್ಸಿನ ಸ್ವರೂಪವನ್ನು ನಿಷ್ಕರ್ಷಿಸಲು ಯಾರಿಂದಲೂ ಸಾಧ್ಯವಿಲ್ಲ. ವೈಜ್ಞಾನಿಕ ಪದ್ಧತಿಯ ಅನುಸರಣೆಯೆಂದರೆ ಕಾರ್ಯಕಾರಣ ಸಂಬಂಧಗಳ ಅನ್ವೇಷಣೆ. ಇದನ್ನು ಒಪ್ಪಿಕೊಂಡ ಮೇಲೆ ಮನಸ್ಸಿನ ಪ್ರತಿಯೊಂದು ನಡೆವಳಿಕೆಯಲ್ಲಿಯೂ ಕ್ರಮವೂ ಅರ್ಥವೂ ಇದ್ದೇ ಇರಬೇಕು. ನಮ್ಮ ಹಗಲುಗನಸುಗಳಲ್ಲಿ, ಇರುಳುಗನಸುಗಳಲ್ಲಿ, ನಮ್ಮ ಈಡೇರದ ಬಯಕೆಗಳಲ್ಲಿ, ನಮ್ಮ ಭಾವ ಪ್ರವಾಹದಲ್ಲಿ ಇರುವ ಅರ್ಥವೇನೆಂದು ನಿಷ್ಕರ್ಷಿಸುವ ಹೊಸ ಉದ್ಯಮಕ್ಕೆ ಫ್ರ್ಯಾಯ್ಡರು ಕೈಹಾಕಿದರು. ಇದುವರೆಗೂ ಅರ್ಥವಿಲ್ಲದವೆಂದೂ ಹುರುಳಿಲ್ಲದವೆಂದೂ ವೈಜ್ಞಾನಿಕರು ಅನಾದರಿಸಿದ್ದ ಮನೋವಾಕ್ ಕಾಯಪ್ರವೃತ್ತಿಗಳು ನಮ್ಮ ಮನಸ್ಸಿನ ಅಂತರಾಳದಿಂದ ಹೊರಡುವ ಸಕಾರಣವಾದ ಪರಿಣಾಮಗಳೆಂದು ಮನೋವಿಶ್ಲೇಷಣ ಶಾಸ್ತ್ರದಿಂದ ವ್ಯಕ್ತವಾಯಿತು. ಎಷ್ಟೋ ವೇಳೆ ನಮಗೆ ಮುಖ್ಯವಾಗಿ ಜ್ಞಾಪಕವಿರಬೇಕಾದ ಸಂಗತಿಗಳನ್ನು ಮರೆತುಬಿಡುತ್ತೇವೆ. ಯಾರಾದರೂ ಇದನ್ನು ಜ್ಞಾಪಕಕ್ಕೆ ತಂದರೆ "ಏನೋ ಮರೆತು ಬಿಟ್ಟೆ" ಎಂದೆನ್ನುತ್ತೇವೆ. ಹೀಗೆ ಮರೆಯುವುದಕ್ಕೆ ಗಹನವಾದ ಕಾರಣಗಳುಂಟೆಂದು ಫ್ರ್ಯಾಯ್ಡರ ಅಭಿಪ್ರಾಯ. ಸ್ಮರಣಶಕ್ತಿಯ ಲೋಪಕ್ಕೆ ಶಾರೀರಕವಾದ ಕಾರಣಗಳಿಗಿಂತಲೂ ಮಾನಸಿಕವಾದ ಕಾರಣಗಳು ಅನೇಕವಿರುವುವೆಂದು ಸ್ಥಾಪಿಸಿದವರು ಫ್ರ್ಯಾಯ್ಡರು. ಇವರಿಗೆ ಹಿಂದೆ ಯಾವ ಮನಶ್ಶಾಸ್ತ್ರಜ್ಞನೂ

ಸ್ಮೃತಿ(Memory)ಯ ವಿಚಾರದಲ್ಲಿ ಇಷ್ಟು ಸಮರ್ಪಕವಾದ ಮತ್ತು ಸಂಪೂರ್ಣವಾದ ವಿಮರ್ಶೆಯನ್ನು ಮಾಡಿರಲಿಲ್ಲ. ಫ್ರಾಯ್ಡರ ಶೋಧನೆಗಳಿಂದ ಆಧುನಿಕ ಮನಶ್ಶಾಸ್ತ್ರಕ್ಕೆ ಒಂದು ಹೊಸ ಅಧ್ಯಾಯವನ್ನು ಸೇರಿಸಿದಂತಾಯಿತು.

ಸುಪ್ತಚಿತ್ತ (The Unconscious)—ನಮಗೇ ತಿಳಿಯದ ಬಯಕೆಗಳ ತವರುಮನೆ

ನಮ್ಮೆಲ್ಲರ ಮನಸ್ಸಿನಲ್ಲಿ ಅನೇಕ ವಿಧವಾದ ಬಯಕೆಗಳಿರುವುದು ಸ್ವತಃ ಸಿದ್ಧವಾಗಿದೆ. ಜೀವನದ ಹೋರಾಟವೆಲ್ಲವೂ ಬಯಕೆಗಳನ್ನು ಪೂರ್ತಿಮಾಡಿಕೊಳ್ಳುವ ಪ್ರಯತ್ನ. ಆದರೆ ನಮ್ಮ ಎಲ್ಲ ಬಯಕೆಗಳೂ ಪೂರ್ತಿಗೊಳ್ಳುವುದು ಎಂದಿಗೂ ಸಾಧ್ಯವಿಲ್ಲ. ತೃಪ್ತಿಯನ್ನು ಪಡೆಯದ ಬಯಕೆಗಳು ಕಾರ್ಯಕ್ಷೇತ್ರಕ್ಕೆ ಬಾರದೆ ಮನಸ್ಸಿನಲ್ಲೇ ಇಂಗುವುವು. ಬಯಕೆಗಳನ್ನು ಪೂರ್ತಿಗೊಳಿಸದೆ ಬಹಳಕಾಲ ತಡೆಯುವುದರಿಂದ ಅವುಗಳು ನಮ್ಮ ಗಮನಕ್ಕೆ ಬಾರದೆ ಮನಸ್ಸಿನ ಮೂಲೆಯೊಂದರಲ್ಲಿ ಅವಿತುಕೊಳ್ಳುವುವು. ಹೀಗೆ ಇಂಗಿದ ಬಯಕೆಗಳು ಸಂಪೂರ್ಣವಾಗಿ ಲಯಹೊಂದಿದುವೆಂದು ನಾವು ಭಾವಿಸುತ್ತೇವೆ. ಮನಸ್ಸಿನ ಸ್ವರೂಪವನ್ನು ತಿಳಿಯದೆ ಇರುವುದರಿಂದ ನಾವು ಹಾಗೆ ಭಾವಿಸುತ್ತೇವೆಯೇ ಹೊರತು ನಿಜಸ್ಥಿತಿ ಹಾಗಿಲ್ಲವೆಂದು ಫ್ರಾಯ್ಡರ ಅಭಿಪ್ರಾಯ.

ಫ್ರಾಯ್ಡರು ಮನಸ್ಸನ್ನು ಮೂರು ಪದರಗಳಾಗಿ ವಿಂಗಡಿಸಿರುತ್ತಾರೆ. ಮೊದಲನೆಯದು, ನಮಗೆ ನಮ್ಮ ಎಚ್ಚರದಲ್ಲಿ ಗೋಚರವಾಗುವ ಮನಸ್ಸಿನ ಭಾಗ. ಇದನ್ನು ಜಾಗೃತಚಿತ್ತ ಅಥವಾ ಪ್ರಬುದ್ಧ ಚಿತ್ತವೆನ್ನಬಹುದು. ಪ್ರಬುದ್ಧ ಚಿತ್ತದ ಹೊರಗಿನ ಆವರಣದಲ್ಲಿ ಕಾದಿರುವ ಚಿತ್ತವೃತ್ತಿಗಳಿಗೆ ಅನಾವಿಷ್ಕೃತಚಿತ್ತ (Preconscious) ಎನ್ನಬಹುದು. ಪ್ರಬುದ್ಧ ಸ್ಥಿತಿಗೆ ಸುಲಭವಾಗಿ ಬರಬಹುದಾದ ಸಂಸ್ಕಾರಗಳು ಇಲ್ಲಿರುತ್ತವೆ. ಇದು ಪ್ರಬುದ್ಧಚಿತ್ತದ ಪಕ್ಕದ ಕೊಠಡಿ ಇದ್ದಂತೆ. ಇದರಿಂದ ಕೆಲವು ಸಂಸ್ಕಾರಗಳು ನಾವು ನೆನಸಿಕೊಂಡ ಕೂಡಲೇ ನಮ್ಮ ಜ್ಞಾಪಕಕ್ಕೆ ಸುಲಭ ರೀತಿಯಲ್ಲಿ ಬರುತ್ತವೆ. ಮತ್ತೆ ಕೆಲವು ಸಂಸ್ಕಾರಗಳನ್ನು ನಾವು ಎಷ್ಟು ಪ್ರಯತ್ನಮಾಡಿದರೂ ನೆನಪಿಗೆ ತಂದುಕೊಳ್ಳಲಾಗುವುದಿಲ್ಲ. ಹೀಗೆ ನೆನಪಿಗೆ ಬಾರದ ಪೂರ್ವಾನುಭವದ ಸಂಸ್ಕಾರಗಳು ಸುಪ್ತಚಿತ್ತ (Unconscious) ಎಂಬ ಮೂರನೆಯ ಪದರದಲ್ಲಿ ಅಡಗಿರುವುವು. ನಮ್ಮ ಈಡೇರದ ಬಯಕೆಗಳೆಲ್ಲಾ ಬಹುಮಟ್ಟಿಗೆ ಇಲ್ಲಿಯೇ ಇರುವುವು. ಹೀಗೆ ಹೊರತೋರದೆ ಇಲ್ಲಿ ಅಡಗಿದ್ದರೂ ಕೂಡ ಅವುಗಳ ಪ್ರಭಾವವು ಮನಸ್ಸಿನ ಇತರ ಭಾಗಗಳ ಮೇಲೆ ಇಲ್ಲದೇ ಇಲ್ಲ; ಆದರೆ ಇದು ನಮ್ಮ ತಿಳಿವಳಿಕೆಗೆ ಬಾರದ

ಅಂಶವಾಗಿದೆ, ಅಷ್ಟೆ. "ನಮ್ಮ ಬಯಕೆಗಳೇ ನಮಗೆ ತಿಳಿದಿಲ್ಲ"ವೆಂದು ಫ್ರಾಯ್ಡರು ಹೇಳುವರು. ಇದು ಕೇಳುವುದಕ್ಕೆ ವಿಚಿತ್ರವಾದ ಅಂಶವಾದರೂ ನಿಜವೇನೋ ಹೌದು.

ಹೀಗೆ ನಮ್ಮ ಬಯಕೆಗಳು ನಮಗೆ ತಿಳಿಯದೇ ಹೋಗುವುದಕ್ಕೆ ಕಾರಣ ವೇನೆಂದು ವಿಚಾರಿಸೋಣ. ಎಷ್ಟೋ ವೇಳೆ ನಮ್ಮಲ್ಲಿ ಬೇಸರಿಕೆ ಉಂಟಾಗುವುದು; ಯಾವುದರಿಂದ ಹೀಗಾಗುವುದು, ಇದಕ್ಕೆ ಯಾರು ಕಾರಣವೆಂದು ಹೇಳಲು ಸಾಧ್ಯ ವಾಗುವುದಿಲ್ಲ. ಮನಸ್ಸಿಗೆ ಏನೋ ಒಂದು ಅಶಾಂತಿ, ಜುಗುಪ್ಸೆ, ಹೇಳಲು ಬಾರದ ಅಸಮಾಧಾನ. ಇದು ಉಂಟಾಗುವುದು ನಮಗೆ ತಿಳಿಯದಿರುವ ಬಯಕೆಗಳು ತೃಪ್ತಿಹೊಂದದ ಸಲುವಾಗಿ ಎಂದು ಫ್ರಾಯ್ಡರ ಅಭಿಪ್ರಾಯ. ನಮ್ಮ ಬಯಕೆಗಳು ಈಡೇರಬೇಕಾದರೆ ಶರೀರದ ಮೂಲಕ, ಮತ್ತು ಸಾಂಘಿಕ ಜೀವನದಲ್ಲಿ. ಆದರೆ ವ್ಯಕ್ತಿಗೆ ಉಂಟಾಗುವ ಬಯಕೆಗಳಲ್ಲಿ ಕೆಲವಾದರೂ ನೀತಿಗೂ ನಾಗರಿಕ ಜೀವನಕ್ಕೂ ವಿರುದ್ಧವಾಗಿರುತ್ತವೆ. ಹೀಗೆ ಅಸಮಂಜಸವಾಗಿರುವ ಬಯಕೆಗಳನ್ನು ತಡೆಗಟ್ಟ ದಿದ್ದರೆ ನಾಗರಿಕ ಜೀವನವೇ ಅಸಾಧ್ಯವಾಗುವುದು. ಇಂಥ ಕುತ್ಸಿತವೆನಿಸಿದ ಚಿತ್ತ ವೃತ್ತಿಗಳ ನಿರೋಧಕ್ಕೆ ದಮನ (Repression) ಎಂದು ಹೆಸರು. ಹೀಗೆ ಸಾಮಾಜಿಕ ವ್ಯವಹಾರದ ಸಲುವಾಗಿ ಬುದ್ಧಿಪೂರ್ವಕವಾಗಿ ತಡೆದ ಬಯಕೆಗಳು ಅಲ್ಲಿಗೇ ಲಯಹೊಂದುವುದಿಲ್ಲ. ಜಾಗೃತ ಮನಸ್ಸು (Conscious Mind) ಮಾತ್ರ ಇವು ಗಳನ್ನು ತನ್ನ ಎಲ್ಲೆಕಟ್ಟಿನಲ್ಲಿ ಇರಗೊಡಿಸುವುದಿಲ್ಲ; ಆದರೆ ಮನಸ್ಸಿನ ಇನ್ನೊಂದು ಪ್ರದೇಶದಲ್ಲಿ ಇವುಗಳು ಅವಿತುಕೊಂಡು ನೆಲಸುತ್ತವೆ. ಈ ಪ್ರದೇಶವೇ ಸುಪ್ತಚಿತ್ತ (the Unconscious); ಮನುಷ್ಯನು ಎಚ್ಚರದಿಂದಿದ್ದಾಗ ಈ ಭಾಗ ಸುಪ್ತ ವಾಗಿರುತ್ತದೆ. ಸುಪ್ತಚಿತ್ತದ ಆಳವು ಇಷ್ಟೆಂದು ಅಳೆಯಲು ಸಾಧ್ಯವಿಲ್ಲ. ಮನುಷ್ಯನ ಅತಿ ಪ್ರಾಕ್ತನ (Primitive) ಸ್ಥಿತಿಯ ವಂಶಾನುಗತ ಮನೋಭಾವನೆಗಳು ಇಲ್ಲಿ ಅಡಗಿವೆ. ಮನುಷ್ಯನ ಶರೀರ ರಚನೆಯಲ್ಲಿ ಅವನ ಪ್ರಾಚೀನ ಚರಿತ್ರೆಯ ಚಿಹ್ನೆಗಳು ಅಡಗಿರುವಂತೆ ಈತನ ಸುಪ್ತಚಿತ್ತದಲ್ಲಿ ಅವನ ಮಾನಸಿಕ ಬೆಳವಣಿಗೆಯ ಗುರುತುಗಳು ಕಂಡುಬರುತ್ತವೆ. ಸಮುದ್ರದಲ್ಲಿ ಒಂದು ಮಂಜುಗಡ್ಡೆ ತೇಲುತ್ತಿದ್ದರೆ, ನೀರಿನ ಮೇಲೆ ಕಾಣುವ ಅದರ ಸ್ವಲ್ಪ ಭಾಗದಂತೆ ಜಾಗೃತಚಿತ್ತವಿರುವುದೆಂದೂ, ನೀರಿನಲ್ಲಿ ಮುಳುಗಿರುವ ಮುಕ್ಕಾಲರಷ್ಟು ಭಾಗಕ್ಕೆ ಸುಪ್ತಚಿತ್ತವನ್ನು ಹೋಲಿಸಬಹುದೆಂದೂ ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು. ಸುಪ್ತಚಿತ್ತದ ಆಂತರಿಕ ಮನೋ ವೃತ್ತಿಗಳು ಸಮುದ್ರದಲ್ಲಿ ಮೇಲೇಳುವ ಸಣ್ಣ ಅಲೆಗಳಂತೆ ಸ್ವಲ್ಪವಾಗಿ ಕಾಣಿಸಿ ಕೊಳ್ಳುವುವು ಮತ್ತು ಮರೆಯಾಗುವುವು. ಜಾಗೃತ ಮನಸ್ಸಿನ ಬೆಳಕಿಗೆ ಎಳೆತಂದಾ ಗಲೇ ಈ ಮನೋವೃತ್ತಿಗಳ ನಿಜವಾದ ಸ್ವರೂಪವು ವ್ಯಕ್ತಪಡುವುದು. ಹೀಗೆ ಅದು

ವ್ಯಕ್ತಪಟ್ಟಾಗಲೇ ಮನಸ್ಸಿನ ಮೇಲೆ ಕೆಲವು ವೇಳೆ ಕವಿಯುವ ಮಂಜು ಓರೆಯಾಗುವುದು. ಮನೋವಿಶ್ಲೇಷಣ ಪದ್ಧತಿಯ ಪ್ರಯೋಜನವೇ ಇದು. ನಮ್ಮ ಜಾಗೃತ ಮನಸ್ಸಿನಲ್ಲಿ ಈಡೇರದ ಬಯಕೆಗಳು ಬಯಲಿಗೆ ಬಂದಾಗ, ಅವು ನಮ್ಮವೇ ಆದರೂ ನಾವು ಮರೆತಿದ್ದೆವೆಂದು ತಿಳಿದುಕೊಂಡಲ್ಲಿ, ಮನಸ್ಸಿನ ಅಶಾಂತಿಯು ದೂರವಾಗಿ ನೆಮ್ಮದಿಯನ್ನು ಪಡೆಯುವೆವು.

ಸುಪ್ತಚಿತ್ತಕ್ಕೂ ಕನಸಿಗೂ ಇರುವ ಸಂಬಂಧ

ಜಾಗ್ರದವಸ್ಥೆಯಲ್ಲಿ ಸುಪ್ತಚಿತ್ತದ ಪ್ರವೃತ್ತಿಗಳು ಮನಸ್ಸಿನ ರಂಗಭೂಮಿಗೆ ಬಾರದಿರಲು ಒಂದು ಕಾರಣ ಉಂಟು. ಪ್ರಬುದ್ಧ ಚಿತ್ತಕ್ಕೂ ಸುಪ್ತಚಿತ್ತಕ್ಕೂ ನಡುವೆ ಧರ್ಮಾಧರ್ಮ ವಿಚಾರ ಶಕ್ತಿಯುಳ್ಳ ಮನಸ್ಸಾಕ್ಷಿ (Conscience or Moral Sense) ನಗರರಕ್ಷಣೆಗಾಗಿ ನಿಯಮಿಸಲ್ಪಟ್ಟ ಓಲೆಕಾರನಂತೆ ಕಾದಿರುವುದು. ಸಮಾಜ ಹಿತಕ್ಕೆ ವಿರುದ್ಧವೆಂದೆಣಿಸಲ್ಪಟ್ಟ ಚಿತ್ತವೃತ್ತಿಗಳನ್ನು ತಡೆಯುವ ಅಂಶಗಳನ್ನೆಲ್ಲಾ ಒಟ್ಟುಗೂಡಿಸಿ ಅವುಗಳನ್ನು ಫ್ರಾಯ್ಡರು ಆಕ್ಷೇಪಕ (Censor) ಎಂದು ರೂಪಿಸಿರುವರು. ಪ್ರಬುದ್ಧಚಿತ್ತದ ರಂಗಮಂಟಪಕ್ಕೆ ನುಗ್ಗಲು ಸತತವಾಗಿ ತವಕಪಡುತ್ತಿರುವ ಸುಪ್ತಚಿತ್ತವೃತ್ತಿಗಳ ಗುಂಪನ್ನು ಅಟ್ಟುವುದು ಈ ಆಕ್ಷೇಪಕನ ಕೆಲಸ—ವಿರಾಮವಿಲ್ಲದ ಕೆಲಸ. ಆಜೀವವೂ ಇವುಗಳೊಡನೆ ಹೋರಾಡುವ ಸತತ ಪ್ರಯತ್ನ ಇದರದು. ಈ ಹೋರಾಟದಲ್ಲಿ ಕೆಲವು ವೇಳೆ ಸೋಲು ಇದರ ಪಾಲಾಗುವುದೂ ಉಂಟು. ಎಚ್ಚರದಲ್ಲಿ ಸುಪ್ತಚಿತ್ತವೃತ್ತಿಗಳು ಪ್ರಬುದ್ಧಚಿತ್ತಕ್ಕೆ ಬರಲು ಸಾಧ್ಯವಿಲ್ಲದ್ದರಿಂದ, ನಿದ್ರೆಯಲ್ಲಿ ನಮ್ಮ ಆಕ್ಷೇಪಕನು ಮೈಮರೆತು ಮಲಗಿದಾಗ ಇವುಗಳಿಗೆ ಅವಕಾಶ ದೊರೆಯುತ್ತದೆ. ಬಹುದಿನದ ಅಭ್ಯಾಸಬಲದಿಂದ ಮನುಷ್ಯನ ಸಾಧಾರಣ ಮನಸ್ಸು ಆಗಲೂ ಕೂಡ ನೀತಿವಿರುದ್ಧವಾದ ಮನೋವೃತ್ತಿಗಳಿಗೆ ನಿಜರೂಪದಲ್ಲಿ ಕಾಣಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ. ಆಕ್ಷೇಪಕನನ್ನು ವಂಚಿಸುವ ಉದ್ದೇಶದಿಂದ ನೀತಿವಿರುದ್ಧವೆಂದೆಣಿಸಲ್ಪಟ್ಟ ಚಿತ್ತವೃತ್ತಿಗಳು ನಿರ್ದುಷ್ಟವಾದ ಚಿತ್ತವೃತ್ತಿಗಳ ಉಡುಪನ್ನು ಧರಿಸಿ ವೇಷಧಾರಿಗಳಾಗಿ ಮನಸ್ಸಿನ ರಂಗಮಂಟಪಕ್ಕೆ ಧುಮುಕಿ ಸ್ವೇಚ್ಛೆಯಾಗಿ ವಿಹರಿಸಲು ತೊಡಗುವುವು. ಆಕ್ಷೇಪಕನ ದೃಷ್ಟಿಯಲ್ಲಿ ನಿರ್ದುಷ್ಟವೆಂದರೆ ವಾಡಿಕೆಯಾದ ಅಥವಾ ಸಾಂಪ್ರದಾಯಿಕವಾದ ಮನೋಭಾವ ಮತ್ತು ನಡವಳಿಕೆ. ಸಾಂಪ್ರದಾಯಿಕ ರೂಪವನ್ನು ತಾಳಿದ್ದೆಲ್ಲವನ್ನೂ ಬಿಟ್ಟುಕೊಡುವ ಕೆಲಸವಷ್ಟೇ ಆಕ್ಷೇಪಕನ ಕೆಲಸ. ಅವನು ಅದಕ್ಕಿಂತಲೂ ಹೆಚ್ಚು ವಿಮರ್ಶೆಗೆ ತೊಡಗುವವನಲ್ಲ. ಇದರ ಫಲವಾಗಿ ವಾಡಿಕೆಯಲ್ಲಿನ ಮನೋಭಾವಗಳು ವೇಷಧಾರಿ

ಗಳಾಗಿ, ಸ್ವೇಚ್ಛೆಯಾಗಿ ಮನಸ್ಸಿನಲ್ಲಿ ತಾಂಡವವಾಡಲು ಮೊದಲು ಮಾಡುವುವು. ಸರಿಯಾದ ನಟರೆಲ್ಲರೂ ನಾಟಕದ ಕೊನೆಯಲ್ಲಿ ರಂಗಮಂಟಪವನ್ನು ಬಿಟ್ಟುಹೋದ ಮೇಲೆ ಅವರು ತೆಗೆದಿಟ್ಟ ಉಡುಪುಗಳನ್ನೆಲ್ಲಾ ಹಾಕಿಕೊಂಡು ಅವರಂತೆಯೇ ಅಭಿನಯಮಾಡಲು ಹೊರಟ ನಾಟಕದ ಕಂಪೆನಿಯ ಸೇವಕರಂತೆ ನೀತಿನಿಯಮಗಳ ನಿರ್ಬಂಧವಿಲ್ಲದ ನಾಟಕವನ್ನು ಆಡುವ ಮನೋವೃತ್ತಿಗಳಿವು. ಈ ನಾಟಕವೇ ಕನಸು. ಜಾಗ್ರದವಸ್ಥೆಯಲ್ಲಿ ಈಡೇರದ ಇಚ್ಛೆಗಳು ಇಲ್ಲಿ ಪೂರ್ತಿಗೊಳ್ಳುವುವು ; ನೀತಿನಿಯಮಗಳು ಸಡಿಲವಾಗುವುವು ; ಎಚ್ಚತ್ತಾಗ ತಡೆಗಟ್ಟಿದ ಮನಸ್ಸಿನ ಬಯಕೆಗಳೆಲ್ಲಾ ಇಲ್ಲಿ ಕಾಣಿಸಿಕೊಳ್ಳುವುವು. ಫ್ರಾಯ್ಡರು ಕನಸನ್ನು "ತಡೆದ ಬಯಕೆಗಳ ಗುಪ್ತರೀತಿಯ ತೃಪ್ತಿ" * ಎಂದು ವರ್ಣಿಸಿರುವರು. ನೂರಾರು ಮಂದಿ ಸ್ತ್ರೀಪುರುಷರ ಕನಸುಗಳನ್ನು ಪರೀಕ್ಷೆಮಾಡಿ ಅವರು ಈ ಸಿದ್ಧಾಂತಕ್ಕೆ ಬಂದಿರುವರು. ಜಾಗ್ರದವಸ್ಥೆಯಲ್ಲಿ ಧರ್ಮಿಷ್ಠನೂ ಸಾಧುವೂ ಪಾಪಭೀರುವೂ ಆದ ಮನುಷ್ಯನು ಕೂಡ ಕನಸಿನಲ್ಲಿ ನೀತಿರಹಿತವಾದ ಕೆಲಸಗಳನ್ನು ಮಾಡುವನು. ಹೀಗಾಗುವುದು ಹಾನಿಕಾರಕವಲ್ಲ. ಇದೇ ಮನುಷ್ಯನ ಮಾನಸಿಕ ಆರೋಗ್ಯಕ್ಕೆ ಸಹಾಯಕವಾಗುವುದೆಂದು ಫ್ರಾಯ್ಡರ ಅಭಿಪ್ರಾಯ. ಹೊಟ್ಟೆಗೆ ಸಾಲದ ಭಿಕ್ಷುಕನು ಅಮೃತಾನ್ನವನ್ನುಂಡಂತೆ ಕನಸು ಕಾಣುವುದು ಇದರಿಂದಲೇ. ದಾಂಪತ್ಯಜೀವನದ ಸುಖವನ್ನು ಅರಿಯದ ಯತಿಯು ಕನಸಿನಲ್ಲಿ ತನ್ನ ತಡೆದ ಇಚ್ಛೆಯನ್ನು ವಿಧಿಯಿಲ್ಲದೆ ತೀರಿಸಿಕೊಂಡಂತಾಗುವುದೂ ಇದರಿಂದಲೇ. ತಪಸ್ವಿಯ ತಪೋಭಂಗಕ್ಕೆ ಕಾರಣರಾದ ರಂಭೆ ಊರ್ವಶಿಯರ ಕಥೆಗಳು ಕೂಡ ಮನುಷ್ಯನ ಸುಪ್ತಚಿತ್ತದಲ್ಲಿ ಹುಟ್ಟಿದ ಕಥೆಗಳೆನ್ನಬಹುದು. ತಮ್ಮ ಕಾಮಸ್ವಪ್ನಗಳನ್ನು ಕ್ರೈಸ್ತಯೋಗಿಗಳು ಸೈತಾನನ ಮೋಹಜಾಲವೆಂದು ಬಗೆದರು ; ಬೌದ್ಧಸಂನ್ಯಾಸಿಗಳು ಇವುಗಳನ್ನೇ ಮಾರನ ಮಾಯಾಜಾಲವೆನ್ನುವರು; ಮುನಿಗಳು ತಮ್ಮ ಮನಸ್ಥೈರ್ಯವನ್ನು ಪರೀಕ್ಷಿಸಲು ಏರ್ಪಟ್ಟ ಮನ್ಮಥನ ವಿಲಾಸವೆನ್ನುವರು. ಮನೋವಿಜ್ಞಾನದ ದೃಷ್ಟಿಯಿಂದ, ಮತಗಳಲ್ಲಿ ಕಂಡುಬರುವ ಇಂತಹ ಅಭಿಪ್ರಾಯಗಳೆಲ್ಲಕ್ಕೂ ಆಕರವಾದದ್ದು ಸುಪ್ತಚಿತ್ತ. ಸಾಮಾನ್ಯ ವೈಜ್ಞಾನಿಕರಿಗೆ ಪುರಾಣದ ಅನೇಕ ಕಥೆಗಳು ಅಸಮಂಜಸತೆಯ ಪುಂಜಗಳಂತೆ ಕಾಣುತ್ತವೆ. ಮನೋವಿಶ್ಲೇಷಣದ ದೃಷ್ಟಿಯಿಂದ ಈ ಅಸಮಂಜಸದಲ್ಲಿ ಸಮಂಜಸತೆ ತೋರುವ ಪ್ರಸಂಗವು ಈಗಿನ ವಿದ್ವಾಂಸರಿಗೆ ದೊರೆತಿರುವುದೆಂಬುದರಲ್ಲಿ ಸಂದೇಹವಿಲ್ಲ. ವ್ಯಕ್ತಿಯ ಸುಪ್ತಚಿತ್ತಕ್ಕೆ ಕನಸು ದಾರಿಯಾದಂತೆ ಸಮಾಜದ ಸಮಷ್ಟಿ ಸುಪ್ತಚಿತ್ತಕ್ಕೆ (Racial or Collective

---

* "A dream is the (disguised) fulfilment of a (repressed) wish." (*An Autobiographical Study* by Sigmund Freud, p. 81.)

Unconscious) ಪುರಾಣಗಳು ಬಾರಿ. ಹೀಗೆ ಪುರಾಣಗಳು (Myths) ಮನುಷ್ಯನ ಸಮಷ್ಟಿಜೀವನದ ಕನಸುಗಳೆಂದು ಹೇಳಬಹುದು. ಅಂದರೆ ಅವು ಸುಪ್ತಚಿತ್ತದ ಬಯಕೆಗಳ ಇತಿಹಾಸ.*

ಹಿಸ್ಟಿರಿಯಾ, ನ್ಯೂರೋಸಿಸ್ ಮೊದಲಾದ ಮಾನಸಿಕ ವ್ಯಾಧಿಗಳನ್ನು ವಾಸಿ ಮಾಡಲು ರೋಗಿಯ ಮರೆತ ನೆನಪುಗಳನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು; ಇವನ್ನು ಕಂಡುಹಿಡಿಯಲು ಫ್ರಾಯ್ಡರು ರೋಗಿಗಳ ಕನಸುಗಳನ್ನು ಉಪಯೋಗಿಸಿ ಕೊಂಡರು. ಇದರಿಂದ ಕನಸಿನ ಪರೀಕ್ಷೆಯು ಚಿಕಿತ್ಸೆಯ ಒಂದು ಮುಖ್ಯ ಅಂಗ ವಾಯಿತು. ಕನಸಿಗೂ ಸುಪ್ತಚಿತ್ತಕ್ಕೂ ಇರುವ ಸಂಬಂಧವನ್ನು ಸಿಗ್ಮಂಡ್ ಫ್ರಾಯ್ಡರು ತಾವು ಮೊಟ್ಟಮೊದಲು ಬರೆದ 'ಸ್ವಪ್ನ ವಿಮರ್ಶೆ' (*Interpretation of Dreams*) ಎಂಬ ಪುಸ್ತಕದಲ್ಲಿ ವಿವರಿಸಿರುವರು.

ಮನೋವಿಶ್ಲೇಷಣ ಶಾಸ್ತ್ರವೂ ಜೀವನದ ಸಮಸ್ಯೆಗಳೂ

ಸಾಮಾನ್ಯವಾಗಿ ಸಾಂಪ್ರದಾಯಿಕ ಧರ್ಮಕ್ಕೆ ವಿರುದ್ಧವಾದ ಇಚ್ಛೆಗಳನ್ನು ಮನುಷ್ಯನು ಕನಸಿನಲ್ಲಿ ಈಡೇರಿಸಿಕೊಳ್ಳುವುದರಿಂದ ಅವುಗಳು ಅವನನ್ನು ಜಾಗ್ರದವಸ್ಥೆ ಯಲ್ಲಿ ಹೆಚ್ಚಾಗಿ ಬಾಧಿಸುವುದಿಲ್ಲ. ಕೆಲವರಿಗೆ ಮಾತ್ರ ಹೀಗಾಗುವುದಿಲ್ಲ. ಅಸ್ವಾಭಾವಿಕ ವಾದ ಬಾಳಿನಿಂದ (Unnatural Life) ಕೆಲವರ ಜೀವನದಲ್ಲಿ ಜಾಗ್ರದವಸ್ಥೆಯೂ ಒಂದು ಸ್ವಪ್ನಾವಸ್ಥೆಯಂತೆಯೇ ಇರುತ್ತದೆ. ಬೇಸರಗೊಳಿಸುವ ದಿನದಿನದ ಜೀವನ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವ ಶಕ್ತಿ ಬಹಳ ಮಟ್ಟಿಗೆ ಕಡಮೆಯಾಗಿರು ವುದರಿಂದ ಆ ಸಮಸ್ಯೆಗಳನ್ನು ದಿಟ್ಟಿಸಿನೋಡಲು ಭೀತರಾಗಿ ಮಕ್ಕಳಂತೆ ಅಂಜಿ ಜೀವನ ಕ್ಷೇತ್ರದಿಂದ ಹಿಮ್ಮೆಟ್ಟುವ ಪ್ರಯತ್ನ ಮಾಡತಕ್ಕವರು ಅನೇಕರುಂಟು. ಇಂಥವರು ಕಾರ್ಯಕ್ಷೇತ್ರದಲ್ಲಿ ಕೆಲಸಕ್ಕೆ ಬಾರದವರಾಗಿ ಹಗಲುಗನಸುಗಳ ಸವಿ ನೋಟದಲ್ಲಿ ಕಾಲ ಕಳೆಯುತ್ತಾ ತಮ್ಮ ಇಚ್ಛೆಗಳೆಲ್ಲವೂ ನಿರಾತಂಕವಾಗಿ ಈಡೇರುವ ಕಲ್ಪನಾಪ್ರಪಂಚವೊಂದನ್ನು ತಾವೇ ಸೃಷ್ಟಿಮಾಡಿಕೊಳ್ಳುವರು. ತೊಡಕುಗಳಾವುವೂ ಇಲ್ಲದ ಮಿಥ್ಯಾಪ್ರಪಂಚಕ್ಕೆ ಫ್ರಾಯ್ಡರು 'ಫೇಂಟಸಿ' (Phantasy) ಎಂದು ಹೆಸರಿಟ್ಟಿರುವರು. ಈ ವಿಧವಾದ ಮನೋವೃತ್ತಿಯು ಉತ್ಕಟಾವಸ್ಥೆಗೆ ಬಂದಾಗ

---

* ಇಂಗ್ಲೆಂಡಿನ ಪ್ರಮುಖ ಮನೋವಿಶ್ಲೇಷಣ ಶಾಸ್ತ್ರಜ್ಞರಾದ ಅರ್ನೆಸ್ಟ್ ಜೋನ್ಸ್ ಎಂಬವರು ತಮ್ಮ *Psycho-analysis* ಎಂಬ ಸಣ್ಣ ಪುಸ್ತಕದಲ್ಲಿ ಈ ರೀತಿ ಬರೆದಿರುತ್ತಾರೆ: "The psycho-analysis of myths shows clearly that they represent in a disguised way the most primitive wishes and fears of mankind. The mechanism of the disguise as also the motive for it, is extremely similar to that of dreams." (p. 70.)

ನರದೌರ್ಬಲ್ಯ (Neurosis) ಎಂಬ ವ್ಯಾಧಿಯಿಂದ ಜನರು ನರಳುವರು. ಈ ವ್ಯಾಧಿಗೆ ಕಾರಣವನ್ನು ಫ್ರಾಯ್ಡರು ಈ ರೀತಿ ವಿವರಿಸಿರುವರು. ಪ್ರತಿಯೊಬ್ಬ ಮನುಷ್ಯನ ಜೀವಿತವೂ ಪ್ರೇಯಶ್ರೇಯಗಳ ಹೋರಾಟದ ಕುರುಕ್ಷೇತ್ರ. ಶೈಶವಾವಸ್ಥೆಯಿಂದ ಯೌವನಾವಸ್ಥೆಗೆ ಬೆಳೆಯುತ್ತಾ ಬಂದ ಹಾಗೆಲ್ಲಾ ಪ್ರೇಯವು ಹಿಂದುವರಿದು ಶ್ರೇಯವು ಮುಂದುವರಿಯಬೇಕು. ವಿಷಯಲಾಲಸೆಗಳಿಗೂ ಜೀವನದ ಕ್ರಮಗಳಿಗೂ ಹೋರಾಟವಿರುವ ಸಂಗತಿ ಎಲ್ಲರಿಗೂ ಗೊತ್ತು. ನಾವು ಬಯಸುವ ಸುಖಜೀವನ (Pleasure Principle)ಕ್ಕೂ ಜೀವನದ ವಾಸ್ತವಸ್ಥಿತಿ (Reality Principle)ಗೂ ಇರುವ ಹೋರಾಟವೇ ಸಂಸಾರದ ತಿರುಳು ಎಂಬುದು ಫ್ರಾಯ್ಡರ ಮತ. ವಾಸ್ತವಿಕ ಜೀವನಕ್ಕೆ ಯಾರಾದರೂ ಹೊಂದಿಕೊಳ್ಳದೇ ಹೋದರೆ ಅವರು ಜೀವನ ಕ್ಷೇತ್ರದಿಂದ ಹಿಮ್ಮೆಟ್ಟಿ ಸ್ವಪ್ನರಾಜ್ಯದಲ್ಲಿ ಕಾಲ ಕಳೆಯಬೇಕಾಗುತ್ತದೆ. ತಮ್ಮ ಕನಸುಗಳನ್ನೆಲ್ಲಾ ವಾಸ್ತವಿಕ ಜೀವನದಲ್ಲಿ ಕಾಣದೆ ದುಃಖದಲ್ಲಿ ಕೊರಗಿ ಸೊರಗಿ ಮಡಿಯಬೇಕಾಗುತ್ತದೆ ಅಥವಾ ಜೀವನದ ಉಳಿದ ದಿನಗಳನ್ನು ಮಾನಸ ಚಿಕಿತ್ಸಾಲಯದಲ್ಲಿ ಕಳೆಯಬೇಕಾಗುತ್ತದೆ. ಇಂತಹ ನಿರ್ಭಾಗ್ಯ ಜನರಲ್ಲಿ ಮರುಕಗೊಂಡು ಅವರ ಮನಸ್ಸನ್ನು ಪ್ರಯೋಜನಕಾರಿಯಾಗುವ ರೀತಿಯಲ್ಲಿ ಪರಿವರ್ತಿಸಲು ಫ್ರಾಯ್ಡರು ತೊಡಗಿದರು.

ಲಿಬಿಡೋ ಅಥವಾ 'ಕಾಮ'

ಮನುಷ್ಯನ ಉದ್ಯಮಗಳೆಲ್ಲವುಗಳಲ್ಲಿಯೂ ಕಾಮಜೀವನ (Sexual Life)ದ ಬಯಕೆ ರೂಪಾಂತರಗಳನ್ನು ತಾಳಿ ತೃಪ್ತಿಪಡೆಯುವುದೆಂದು ಫ್ರಾಯ್ಡರ ಅಭಿಪ್ರಾಯ. ಸ್ತನ್ಯಪಾನಮಾಡುವ ಶಿಶುವಿನಿಂದ ಹಿಡಿದು ಪರಮಾತ್ಮನಲ್ಲಿ ಸಾಯುಜ್ಯವನ್ನು ಬಯಸುವ ಯೋಗಿಯವರೆಗೂ ಎಲ್ಲರೂ ತಮ್ಮ ಕಾಮೇಚ್ಛೆಯನ್ನು ವಿವಿಧ ರೀತಿಯಲ್ಲಿ ತೀರಿಸಿಕೊಳ್ಳುವರೆಂಬ ಫ್ರಾಯ್ಡರ ಮಾತು ರೂಢಿಯಲ್ಲಿರುವ ಅಭಿಪ್ರಾಯಗಳಿಗೆ ಸರಿಹೊಂದುವುದಿಲ್ಲ. ಆದರೆ ಇದು ಶಾಸ್ತ್ರದೃಷ್ಟಿಯಿಂದಲೂ ಅನುಭವದ ದೃಷ್ಟಿಯಿಂದಲೂ ಹುಸಿಯಲ್ಲವೆಂದು ಸ್ಥಾಪಿಸಲು ಫ್ರಾಯ್ಡರು ಪ್ರಯತ್ನಪಟ್ಟಿರುವರು. ಕಾಮವೆಂಬುದು ಸೃಷ್ಟಿಶಕ್ತಿ. ಜೀವರಾಶಿಗಳಲ್ಲಿ ಹಸಿವನ್ನು ಬಿಟ್ಟರೆ ಸತತವಾಗಿ ಬದುಕುವ ಬದುಕು ಕಾಮದ ಬದುಕು. ಮನುಷ್ಯವರ್ಗದಲ್ಲಿ ಮನಸ್ಸಿನ ವೈಶಾಲ್ಯದ ಪರಿಣಾಮವಾಗಿ ಕಾಮೇಚ್ಛೆಯು ಕೇವಲ ಕಾಯಕವಾಗಿರದೆ ಬಹುಮಟ್ಟಿಗೆ ಮಾನಸಿಕ ರೂಪವನ್ನು ತಾಳುವುದರಿಂದ ಸಾಹಿತ್ಯ, ಸಂಗೀತ, ಕಲೆ, ಕಾವ್ಯ, ಶಾಸ್ತ್ರದ ವ್ಯಾಸಂಗ, ಹಾಸ್ಯ ಮತ್ತು ರಸಿಕತೆ, ಸಮಾಜಸೇವೆ, ಅಧ್ಯಾತ್ಮಧ್ಯೇಯ, ಕಲ್ಪನೆ—ಇವೇ ಮೊದಲಾದ ಉತ್ಕೃಷ್ಟವೆಂದೆನಿಸಲ್ಪಟ್ಟ, ಮನುಷ್ಯನ ಉನ್ನತಿಗೆ ಸಾಧಕವಾದ ವ್ಯಾಪಾರಗಳಲ್ಲಿ ಫಲಿಸುವುದು. ಆದ್ದರಿಂದ ಕಾಮವೇ ಸಂಸ್ಕೃತಿಯ ಮೂಲ.

ಆದರೆ ಕಾಮಾಸಕ್ತಿ ಯಾವಾಗಲೂ ಎಲ್ಲರಲ್ಲಿಯೂ ಇಂತಹ ಉತ್ಕೃಷ್ಟರೂಪವನ್ನು ತಾಳುವುದಿಲ್ಲ. ಅನೇಕ ವೇಳೆ ಇದು ದಾರಿ ತಪ್ಪಿ, ಸ್ವೇಚ್ಛೆಯಾಗಿ ಮುಂದೆ ಮುಂದೆ ಹರಿದುಹೋಗುತ್ತಿರುವ ನೀರನ್ನು ಅಡ್ಡಗಟ್ಟಿದರೆ ಅಲ್ಲಲ್ಲಿ ನಿಂತು ಕೊಳೆತು ನಾರುವಂತೆ, ವಿಕೃತಾವಸ್ಥೆಗಳನ್ನು ಹೊಂದುವುದು. ಈ ವಿಕೃತಾವಸ್ಥೆಗಳಿಗೆ, ಸಿಕ್ಕುಗಳಿಗೆ ಫ್ರಾಯ್ಡರು 'ಕಾಂಪ್ಲೆಕ್ಸ್' ಎಂಬ ಹೆಸರನ್ನು ಕೊಟ್ಟಿರುವರು. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲು ಸಾಧ್ಯ.

ಮನಸ್ಸಿನ ಸಿಕ್ಕುಗಳು (Complexes)

ಈ ಸಿಕ್ಕುಗಳು ಎಂಥವು, ಇವುಗಳು ಮನಸ್ಸಿನಲ್ಲಿ ಏರ್ಪಡಲು ಕಾರಣಗಳೇನು, ಇವುಗಳಿಂದಾಗುವ ಅನರ್ಥಗಳೇನು, ಇವುಗಳನ್ನು ಬಿಡಿಸುವ ಬಗೆ ಹೇಗೆ ಎಂಬೀ ವಿಚಾರಗಳನ್ನು ತಮ್ಮ ಅನುಭವದ ಆಧಾರದ ಮೇಲೆ ಕೂಲಂಕಷವಾಗಿ ವಿಚಾರ ಮಾಡಿ ಫ್ರಾಯ್ಡರು ಅನೇಕ ಲೇಖನಗಳನ್ನು ಬರೆದಿರುವರು. ಈ ಸಿಕ್ಕುಗಳಲ್ಲಿ ಈಡಿಪಸ್ ಕಾಂಪ್ಲೆಕ್ಸ್ (Oedipus Complex) ಎಂಬುದು ಒಂದು. ಈಡಿಪಸ್ ಎಂಬುವನು ಗ್ರೀಸಿನ ಒಂದು ದುರಂತ ಕಥೆಯ ನಾಯಕ. ಇವನು ಥೀಬ್ಸ್ ರಾಜನ ಮಗ. ಇವನು ಹುಟ್ಟಿದಾಗ ಆಕಾಶವಾಣಿಯೊಂದು ಇವನು ತನ್ನ ತಂದೆಯನ್ನು ಕೊಂದು ತಾಯನ್ನು ಮದುವೆಯಾಗುವನೆಂದು ಉಸುರಿತು. ಇದನ್ನು ಕೇಳಿ ರಾಜನು ಮಗುವಿನ ಕಾಲಿಗೆ ಮೊಳೆಯೊಂದನ್ನು ಚುಚ್ಚಿ ಬಯಲಿನಲ್ಲಿ ಬಿಸುಟು ಬಂದನು. ಪಕ್ಕದ ರಾಜ್ಯದ ದೊರೆಯು ಈ ಮಗುವನ್ನೆತ್ತಿ ಸಾಕಿ ಸಲಹಿದನು. ತನ್ನ ನಿಜವಾದ ತಾಯಿತಂದೆಗಳು ಯಾರೆಂದರಿಯದೆಯೂ ತನಗೆ ಮುಂದಾಗುವ ಗತಿ ಏನೆಂದು ತಿಳಿಯದೆಯೂ ಈಡಿಪಸ್ಸನು ಬೆಳೆದನು. ಯೌವನಸ್ಥನಾದ ಇವನಿಗೆ ಆಕಾಶವಾಣಿಯೊಂದು ತಾನು ಪಿತೃವಧೆಯನ್ನು ಮಾಡಿ ತಾಯಿಯನ್ನು ಮದುವೆಯಾಗುವನೆಂದು ನೇರವಾಗಿ ತಿಳಿಸಿತು. ತನ್ನ ಸಾಕಿದ ತಂದೆಯೇ ತನ್ನ ನಿಜವಾದ ತಂದೆಯೆಂದು ತಿಳಿದಿದ್ದ ಇವನು ಇಂತಹ ದುರ್ಘಟನೆ ಒದಗದಿರಲೆಂದು ರಾಜ್ಯ ಭ್ರಷ್ಟನಾಗಿ ಪರರಾಜ್ಯಗಳಲ್ಲಿ ಸಂಚಾರಮಾಡುತ್ತಿದ್ದನು. ಹೀಗಿರುವಲ್ಲಿ ಹಠಾತ್ತಾಗಿ ಒಂದು ದಿನ ತನ್ನ ಹೆತ್ತ ತಂದೆಯನ್ನು ಸಂಧಿಸಿದಾಗ ಅವನೊಡನೆ ಕಲಹವುಂಟಾಗಿ ಆತನನ್ನು ಕೊಂದನು. ಅಲ್ಲಿಂದ ಅವನು ಮುಂದುವರಿದು ಥೀಬ್ಸಿಗೆ ಬಂದು ಅಲ್ಲಿದ್ದ ನರಸಿಂಹಿಕೆ (Sphinx) ಎಂಬ ದೇವತೆಯ ಯಕ್ಷಪ್ರಶ್ನೆಗಳಿಗೆ (Riddles of the Sphinx) ಸಮಂಜಸವಾದ ಉತ್ತರವನ್ನು ಹೇಳಲು ಥೀಬ್ಸ್ ರಾಜ್ಯದ ಪ್ರಜೆಗಳಿಗೆ ಒದಗಿದ್ದ ಸಾಂಕ್ರಾಮಿಕ ರೋಗವೊಂದು ಅವರನ್ನು ಬಿಟ್ಟು ತೊಲಗಿತು. ಈ ಮಹೋಪಕಾರಕ್ಕೆ ಪ್ರತಿಯಾಗಿ ಈಡಿಪಸ್ಸನು ರಾಜ್ಯಾಭಿಷಿಕ್ತನಾದನಲ್ಲದೆ, ವಿಧವೆ

ಯಾಗಿದ್ದ ರಾಣಿಯು ಅವನನ್ನು ಮದುವೆಯಾದಳು. ಬಹುಕಾಲ ಸುಖವಾಗಿದ್ದ ಇವರಿಗೆ ನಾಲ್ಕು ಮಕ್ಕಳು ಹುಟ್ಟಿದರು. ಆದರೆ ವಿಧಿಯ ದುರ್ಘಟನೆಯೊಂದು ತಾನು ಮಾಡಿದ ಅತ್ಯಾಚಾರವನ್ನು ಈಡಿಪಸ್ಸನ ಮನಸ್ಸಿಗೆ ತಂದಿತು. ಆಗ ಅವನು ತಾನೆಂತಹ ಪಾಪಿಯೆಂದು ಮನನೊಂದು ತನ್ನ ಕಣ್ಣುಗಳನ್ನು ಕಿತ್ತುಕೊಂಡನು. ಹೀಗೆ ಮೇಲಿಂದ ಮೇಲೆ ಅನೇಕ ದುರ್ಘಟನೆಗಳೊದಗಿ ಪಿತೃವಧೆ ಮಾತೃಗಮನವೆಂಬ ಮಹಾಪಾತಕಗಳ ಫಲವಾಗಿ ಈಡಿಪಸ್ಸನ ಜೀವನವು ಮಣ್ಣುಗೂಡಿತು.

ಈ ಪುರಾತನ ಕಥೆಯನ್ನು ಫ್ರಾಯ್ಡರು ಆಧಾರವಾಗಿಟ್ಟುಕೊಂಡು ಸಾಮಾನ್ಯವಾಗಿ ಗಂಡುಮಕ್ಕಳಿಗೆ ತಂದೆಗಿಂತಲೂ ತಾಯಿಯಲ್ಲಿ ಪ್ರೀತಿ ಹೆಚ್ಚೆಂದೂ, ಇದೇ ರೀತಿ ಹೆಣ್ಣುಮಕ್ಕಳಿಗೆ ತಾಯಿಗಿಂತಲೂ ತಂದೆಯಲ್ಲಿ ಪ್ರೀತಿ ಹೆಚ್ಚೆಂದೂ ಅಭಿಪ್ರಾಯಪಟ್ಟಿರುವರು. ಹೀಗೆ ಸಹಜವಾಗಿರುವ ಒಲವು ಅನೇಕ ಕಾರಣಗಳಿಂದ ಮಕ್ಕಳಲ್ಲಿ ವೈಪರೀತ್ಯವನ್ನು ಹೊಂದಿ ಮನಸ್ಸಿನ ಸಿಕ್ಕುಗಳಾಗಿ ನಿಂತು, ಜೀವನದಲ್ಲಿ ಅನೇಕ ವೇಳೆ ಈ ಭಾವವು ಗಂಡಸಿಗೆ ತನ್ನ ತಾಯಿಯಲ್ಲಿ ಅತಿಶಯವಾದ ವ್ಯಾಮೋಹವನ್ನುಂಟುಮಾಡಿ ತಾಯಿಯಲ್ಲದ ಬೇರೊಬ್ಬ ಹೆಂಗಸಿನಲ್ಲಿ ಅನುರಾಗವನ್ನಿಡಲು ಸಾಮರ್ಥ್ಯವಿಲ್ಲದಂತೆ ಮಾಡುವುದು; ಮತ್ತು ತಾಯಿಯಲ್ಲಿ ತನಗಿರುವ ಅನುರಾಗಕ್ಕೆ ತನ್ನ ತಂದೆ ಪ್ರತಿಬಂಧಕವೆಂದು ತೋರುವಂತಾಗಿ ಅವನಲ್ಲಿ ದ್ವೇಷಭಾವವನ್ನು ಹುಟ್ಟಿಸುವುದು. ತನ್ನ ಕಾಮೇಚ್ಛೆ ತನ್ನ ತಾಯಿಯಲ್ಲಿ ನೆರವೇರದ ಕಾರಣ ಅದು ಸ್ವಾನುರಕ್ತಿ (Narcissism)ಯ ರೂಪವನ್ನೋ ಅಥವಾ ಕನಸಿನಲ್ಲಿ ತೀರಿಸಿಕೊಳ್ಳುವ ಪಿತೃವಧ ಮಾತೃಗಮನರೂಪವಾದ ಪಾಪಾಚರಣೆಯ ರೂಪವನ್ನೋ ತಾಳುವುದು. ವಾಸ್ತವಿಕ ಜೀವನದಲ್ಲಿ ಈ ಬಯಕೆಗಳು ಸಲ್ಲದ್ದರಿಂದ ಮನಸ್ಸಿನಲ್ಲಿ ಇವು ಸಿಕ್ಕುಗಳಾಗಿ ನಿಂತು ಮಾನಸಿಕ ಆರೋಗ್ಯವನ್ನು ಕೆಡಿಸಿ 'ನ್ಯೂರೋಸಿಸ್' ವ್ಯಾಧಿಯನ್ನು ತಂದಿಡುವುವು. ಈ ಸಿಕ್ಕೇ 'ಈಡಿಪಸ್ ಕಾಂಪ್ಲೆಕ್ಸ್' ಎಂಬುದು.*

ಹೀಗೆಯೇ ಗಂಡು ಗಂಡಿನಲ್ಲಿ ತೋರುವ ಅನುರಾಗವನ್ನೂ, ಹೆಣ್ಣು ಹೆಣ್ಣಿನಲ್ಲಿ ತೋರುವ ಪ್ರೇಮವನ್ನೂ, ಅಕ್ಕತಂಗಿಯರಲ್ಲಿ ಅಣ್ಣತಮ್ಮಂದಿರಲ್ಲಿ ತೋರುವ ಪರಸ್ಪರ ರಾಗಾನುಬಂಧವನ್ನೂ, ಅವುಗಳಿಂದ ಕೆಲವು ಸಮಯಗಳಲ್ಲಿ ಉತ್ಪನ್ನವಾಗುವ ನೀತಿಯ ಸಮಸ್ಯೆಗಳನ್ನೂ ಫ್ರಾಯ್ಡರು ಮನೋವಿಶ್ಲೇಷಣದ ಮೂಲತತ್ವಗಳ

---

* "Distinct traces are probably to be found in most people of an early partiality on the part of a daughter for her father or on the part of a son for his mother; but it must be assumed to be more intense from the very first in the case of those children whose constitution marks them down for a neurosis, who develop prematurely and have a craving for love." (*Freud*)

ಸಹಾಯದಿಂದ ಬಿಡಿಸಲು ಪ್ರಯತ್ನಪಟ್ಟಿರುವರು. ಇಂತಹ ವಿಚಾರಗಳಲ್ಲಿ ಸಿಗ್ಮಂಡ್ ಫ್ರಾಯ್ಡರಿಗೂ ಇತರ ಪ್ರಮುಖ ಮನಶ್ಶಾಸ್ತ್ರಜ್ಞರುಗಳಿಗೂ ಈಗಲೂ ವಿವಾದ ನಡೆಯುತ್ತಲೇ ಇದೆ. ಇದು ಬಹಳ ಕಷ್ಟವಾದ ಸಮಸ್ಯೆಯಾದದ್ದರಿಂದ ಇದನ್ನು ಇಲ್ಲಿ ಸ್ಥೂಲವಾಗಿ ಸೂಚಿಸುವುದಷ್ಟೇ ಸಾಧ್ಯ.

ಸ್ತ್ರೀಪುರುಷರ ರಹಸ್ಯಜೀವನ

ಸ್ತ್ರೀಪುರುಷರಲ್ಲೆಲ್ಲಾ ಇತರರಿಗೆ ಹೇಳಿಕೊಳ್ಳಲು ಬಾರದ ರಹಸ್ಯಜೀವನ ಒಂದಿದೆ. ಇದು ಕೇವಲ ಕಾಮಜೀವನಕ್ಕೆ ಸಂಬಂಧಪಟ್ಟದ್ದೆಂದು ಫ್ರಾಯ್ಡರ ಮತ. ಹಾಗಿಲ್ಲದಿದ್ದರೆ ಅದರಲ್ಲಿ ಮುಚ್ಚುಮರೆ ಇರಲು ಕಾರಣವಿಲ್ಲ. ಘನತೆ ಗೌರವಗಳ ಸಲುವಾಗಿ ಹೊರಗಿನ ಪ್ರಪಂಚಕ್ಕೆ ಜೀವನದ ಈ ಭಾಗವು ಕಾಣದಂತೆ ಅದರ ಮೇಲೆ ತೆರೆಯೊಂದನ್ನು ಹೊದಿಸಿದ್ದೇವೆ. ಅದು ನಿಜರೂಪದಲ್ಲಿ ಕಂಡೀತೆಂಬ ಭಯದಿಂದ ನಮಗೇ ಅಸಹ್ಯವಾದ ಉದ್ದೇಶಗಳಿಗೆ ಗೌರವದ ರೂಪವನ್ನು ಕೊಟ್ಟು ನಮ್ಮ ನಡೆನುಡಿಗಳು ಉದಾತ್ತಭಾವನೆಗಳಿಂದ ಪ್ರೇರಿತವಾದವುಗಳೆಂದು ನಟಿಸುವೆವು.* ಅಭ್ಯಾಸಬಲದಿಂದ ಈ ನಟನೆಯು ನಮ್ಮ ಸಹಜ ಸ್ವಭಾವವೆಂದು ನಾವೇ ನಂಬಲು ಮೊದಲು ಮಾಡುವೆವು. ಹೀಗಿರುವಲ್ಲಿ ಇತರರ ಕಣ್ಣು ಮರಸುವುದರಲ್ಲೇನಾಶ್ಚರ್ಯ? ಆದರೂ ಅನೇಕ ವೇಳೆ ನಮಗೆ ತಿಳಿಯದೆಯೇ ಅಚಾತುರ್ಯದಿಂದ ನಮ್ಮ ನಡೆಯಲ್ಲಿ, ನುಡಿಯಲ್ಲಿ, ನಮ್ಮ ಉಡುಪಿನಲ್ಲಿ, ನಮ್ಮ ದೃಷ್ಟಿಯಲ್ಲಿ, ನಾವು ಕೂಡುವುದರಲ್ಲಿ, ನಿಲ್ಲುವುದರಲ್ಲಿ ಮತ್ತು ನಮ್ಮ ಇತರ ಅಂಗಚೇಷ್ಟೆಯಲ್ಲಿ ನಮ್ಮ ಗುಪ್ತಬಯಕೆಗಳು ರೂಪುಗೊಳ್ಳುತ್ತವೆ.‡ ಈ ನಮ್ಮ ಗುಪ್ತಜೀವನದಲ್ಲಿ ಪ್ರವೇಶಮಾಡಿ ಅಲ್ಲಿರುವ ಕಸವನ್ನು ಹೊರಗೆಳೆದುಹಾಕುವ ಸಾಹಸವು ಫ್ರಾಯ್ಡರದು. ಇವರ ಮನೋವಿಶ್ಲೇಷಣವೆಂಬ ಸೂರ್ಯರಶ್ಮಿಗೆ ಸಿಕ್ಕದ ಸಮಸ್ಯೆಯೇ ಇಲ್ಲದಂತೆ ತೋರುವುದು. ಇವರನ್ನು ಮನಸ್ಸಿನ ಮಂತ್ರವಾದಿ ಎಂದು ಬೇಕಾದರೂ ಕರೆಯಬಹುದು.

ಅವಿವಾಹಿತರಾದ ಸ್ತ್ರೀಪುರುಷರ ಕಾಮಜೀವನದ ಸಮಸ್ಯೆಗಳನ್ನು ಇವರು ಬಿಡಿಸಲು ಪ್ರಯತ್ನಪಟ್ಟಿರುವರು. ದಾಂಪತ್ಯ ಜೀವನದಲ್ಲಿ ತಲೆದೋರುವ ಅನೇಕ ತೊಡಕುಗಳು ಉಂಟಾಗುವುದು ಕಾಮಜೀವನದ ಗುಪ್ತಬಯಕೆಗಳು ನೆರವೇರದ ಸಲುವಾಗಿ ಎಂದು ಇವರ ಅಭಿಪ್ರಾಯ. ಫ್ರಾಯ್ಡರಿಗೆ ಮುಂಚೆ ಇಂಥ ಸಮಸ್ಯೆಗಳನ್ನು ಶಾಸ್ತ್ರಜ್ಞರು ಮುಟ್ಟುವ ಗೋಜಿಗೇ ಹೋಗುತ್ತಿರಲಿಲ್ಲ. ಇಂಥ ವಿಚಾರಗಳ ವಿಮರ್ಶೆಯಲ್ಲಿ ಹೊಸ ದಾರಿಯನ್ನು ಫ್ರಾಯ್ಡರು ತೋರಿಸಿಕೊಟ್ಟರು. ಯೌವನೋನ್ಮುಖರಾದ ಬಾಲಕ ಬಾಲಕಿಯರ (Adolescents) ಜೀವನ ಸಮಸ್ಯೆಗಳನ್ನೂ

* Rationalization. ‡ Symptomatic Actions.

ನಾಗರಿಕ ಜೀವನದಿಂದ ಉಂಟಾಗುವ ಅನೇಕ ಅಸಹಜವಾದ ಜೀವನಕ್ರಮದ ತೊಡಕುಗಳನ್ನೂ, ಸಂತಾನ ನಿರೋಧ (Birth Control)ದಿಂದ ಉತ್ಪನ್ನವಾಗುವ ಸೂಕ್ಷ್ಮವಾದ ಕ್ಲೇಶಗಳನ್ನೂ, ಸ್ತ್ರೀಪುರುಷ ಸಹವಿದ್ಯಾಭ್ಯಾಸ (Co-education) ಕ್ರಮದಲ್ಲಿ ಉತ್ಪನ್ನವಾಗುವ ಯೌವನದ ತೊಡರುಗಳನ್ನೂ ಬಿಡಿಸಲು ಇವರು ಯತ್ನಿಸಿರುವರು. ಇವರಲ್ಲಿ ಚಿಕಿತ್ಸೆಪಡೆಯಲು ಬರುವ ಬಹುಜನರು ಇಂತಹ ಸಮಸ್ಯೆಗಳ ಕಾಟಕ್ಕೆ ಸಿಕ್ಕಿದವರು. ಯೂರೋಪಿನ ನಾಗರಿಕತೆಯ ತೊಡಕುಗಳಿವು; ಅದರ ಯಜ್ಞಪಶುಗಳಿವರು. ಯೂರೋಪಿನ ನಾಗರಿಕತೆಯೆಂಬ ರೋಗದ ಚಿಹ್ನೆಗಳಾವುವೆಂಬುದನ್ನು ತೀರ್ಮಾನಿಸಿ ಅದರ ಕಾರಣಗಳನ್ನೂ ಅದರ ಚಿಕಿತ್ಸೆಯ ಕ್ರಮಗಳನ್ನೂ ಫ್ರಾಯ್ಡರು ಕಂಡುಹಿಡಿಯಲು ಪ್ರಯತ್ನಪಟ್ಟಿರುವರು.*

ಈ ಸಮಸ್ಯೆಗಳಿಗೆ ಮೂಲಕಾರಣ ಮನುಷ್ಯನ ವಿಷಯಾಸಕ್ತಿ ಅಥವಾ ಕಾಮ. ಬೌದ್ಧಮತದ ಪ್ರಕಾರ ತೃಷ್ಣೆ ಎಂಬುದೇ ಸಂಸಾರದ ಮೂಲ. ಇದನ್ನೇ ಸಿಗ್ಮಂಡ್ ಫ್ರಾಯ್ಡರು ಕಾಮ ಅಥವಾ 'ಲಿಬಿಡೋ' (Libido) ಎಂದು ಕರೆದಿರುವರು. ಇದು ಎಲ್ಲ ರೀತಿಯ ಅನುರಾಗದ ರೂಪನ್ನೂ ತಾಳುವುದು. ಅನುರಾಗವೇ (Sex or Love) ಜೀವನಚಕ್ರದ ಕೇಂದ್ರಸ್ಥಾನ. ಅನುರಾಗವು ಮಾನಸಿಕವೃತ್ತಿ ಮಾತ್ರವಲ್ಲ, ಅದು ಎಲ್ಲ ಶಾರೀರಕ ಪ್ರವೃತ್ತಿಗಳಲ್ಲಿಯೂ ಹರಿದಾಡುವ ಪ್ರಾಣಶಕ್ತಿ. ಶರೀರದ ಅಂಗಗಳಲ್ಲಿ ಹೊರಹೊಮ್ಮುವ ಯೌವನದ ಸೊಬಗೂ ಹೊಳಪೂ ಇದರ ಪರಿಣಾಮವೇ. ಸ್ತನ್ಯರೂಪದಲ್ಲಿ ತಾಯಿಯಿಂದ ಶಿಶುವಿನೊಳಗೆ ಪ್ರವಹಿಸುವ ಜೀವ ಪ್ರವಾಹಕ್ಕೂ ಇದೇ ಮೂಲ. ತಾಯಿ ಮಕ್ಕಳನ್ನು ಪ್ರೇಮ ವಾತ್ಸಲ್ಯಗಳ ತಂತುವಿನಿಂದ ಬಿಗಿಯುವ ರಾಗಾನುಬಂಧವೂ ಇದರ ರೂಪವೇ. ಗಂಡಿಗೆ ಹೆಣ್ಣಿನಲ್ಲಿರುವ ಆಸಕ್ತಿಯೂ ಹೆಣ್ಣಿಗೆ ಗಂಡಿನಲ್ಲಿರುವ ವ್ಯಾಮೋಹವೂ ಮತ್ತು ಇವನ್ನು ಅನುಸರಿಸಿ ಬಂದ ಒಲುಮೆ ಬೇಟ ಕೂಟಗಳೂ (Love, Courtship and Mating) ಇದರಿಂದಲೇ ಚಿಮ್ಮುವ ಜೀವನಕ್ರೀಡೆ. ಇದಲ್ಲದೆ ನಮ್ಮ ಸಾಮಾನ್ಯವಾದ ನಡೆನುಡಿಗಳೆಲ್ಲದರಲ್ಲಿಯೂ ಕಾಮದ ಛಾಯೆ ಇಲ್ಲದೇ ಇಲ್ಲ. ಕಾಮದೇವನ ಇಷ್ಟು ಮಟ್ಟಿನ ವ್ಯಾಪಕತ್ವವನ್ನು ಸಾಧಾರಣವಾಗಿ ಜನರು ಒಪ್ಪುವುದಿಲ್ಲ. ಆದರೆ ಕಾಮಾತುರತೆಯ ಸರ್ವವ್ಯಾಪಕತ್ವವನ್ನು ನಮ್ಮ ನಡೆನುಡಿಯಲ್ಲಿ, ಮಾತನಾಡುವ ರೀತಿನೀತಿಗಳಲ್ಲಿ, ನಮ್ಮ ಕವಿತೆ ಕಾವ್ಯಗಳಲ್ಲಿ, ನಮ್ಮ ಸ್ನೇಹ ದ್ವೇಷಗಳ ಮಾರ್ಗಗಳಲ್ಲಿ, ನಮ್ಮ ದೈವಭಕ್ತಿಯ ರೀತಿಗಳಲ್ಲಿ ನೋಡಬಹುದು. ವಿಷಯಾಸಕ್ತಿಯು ಕ್ರಮೇಣ ಶಾರೀರಕವಾದ ವಿಷಯಗಳಲ್ಲಿ ನಿಲ್ಲದೆ, ನಾಗರಿಕ ಮತ್ತು ಅಧ್ಯಾತ್ಮ ಜೀವನಗಳ ಸಾಧನವೂ ಸಾಧ್ಯವೂ ಆದ

---

* ಫ್ರಾಯ್ಡರ *Civilization and its Discontents* ಎಂಬ ಪುಸ್ತಕವನ್ನು ನೋಡಿ.

ಸತ್ಯಸೌಂದರ್ಯಾನ್ವೇಷಣವನ್ನೇ ಧ್ಯೇಯವಾಗಿ ಉಳ್ಳ ಕಲೋಪಾಸನೆ, ಕಾವ್ಯರಚನೆ, ಶಾಸ್ತ್ರಗಳ ಅಧ್ಯಯನ—ಇವೇ ಮೊದಲಾದವುಗಳಲ್ಲಿ ರೂಪುಗೊಳ್ಳುವುದು. ಕಾಮ ಶಕ್ತಿಯ ಉತ್ಕೃಷ್ಟರೂಪವನ್ನು ಫ್ರಾಯ್ಡರು 'ಉನ್ನಯನ' (Sublimation) ಎಂದು ಕರೆದಿರುವರು.

ಉನ್ನಯನ (Sublimation)

ಕ್ಷುದ್ರ ವಿಷಯಗಳಲ್ಲೇ ಸಿಲುಕಿಕೊಳ್ಳದೆ ಅನುರಾಗವು ಊರ್ಧ್ವಗಾಮಿಯಾಗುವುದೇ 'ಉನ್ನಯನ.' ಹಿಂದೂ ಯೋಗಶಾಸ್ತ್ರದ ಊರ್ಧ್ವರೇತಸ್ಕ ಸ್ಥಿತಿಗೂ ಫ್ರಾಯ್ಡರ 'ಉನ್ನಯನ' ಪದ್ಧತಿಗೂ ಸಾದೃಶ್ಯವು ವಿಶದವಾಗಿದೆ. 'ಲಿಬಿಡೋ' ಮನುಷ್ಯನಲ್ಲಿ ಉಕ್ಕುವ ಸೃಷ್ಟಿಶಕ್ತಿ. ಸಾಧಾರಣವಾಗಿ ಈ ಶಕ್ತಿಯು ಸಂತಾನೋತ್ಪತ್ತಿಗೆ ಸಾಧಕವಾಗುವುದು. ಹಾಗಿಲ್ಲದಿದ್ದರೆ ಇದೇ ಶಕ್ತಿಯು ಮಾನಸಿಕ ಸೃಷ್ಟಿಗೆ ಕಾರಣವಾಗುವುದು. 'ಲಿಬಿಡೋ'ವನ್ನು ಸಂಪೂರ್ಣವಾಗಿ ನಾಶಗೊಳಿಸಲು ಸಾಧ್ಯವಿಲ್ಲ. ಜೀವಶಕ್ತಿಯೇ ಅದಾದದ್ದರಿಂದ ಮನುಷ್ಯನು ಸತ್ತಾಗಲೇ 'ಲಿಬಿಡೋ' ಸಾಯುವುದು. ಸರಿಯಾದ ರೀತಿಯಿಂದ 'ಲಿಬಿಡೋ'ಶಕ್ತಿಯ ವಿಕಾಸಕ್ಕೆ ಅವಕಾಶ ಕೊಡದಿರುವುದರಿಂದ ಜೀವನ ಕ್ಷೇತ್ರದಲ್ಲಿ ಮನುಷ್ಯನ ಕೌಶಲ (Efficiency)ವು ಕಡಮೆಯಾಗುವುದು. ಊರ್ಧ್ವಗತಿಯುಳ್ಳ 'ಲಿಬಿಡೋ'ಶಕ್ತಿಯು 'ಸಬ್ಲಿಮೇಷನ್' ಮಟ್ಟಕ್ಕೆ ಏರುವ ಸ್ವಭಾವವುಳ್ಳದ್ದು. ನಮ್ಮ ಮನಸ್ಸಿನ ಮತ್ತು ಶರೀರದ ಧರ್ಮವನ್ನು ಅರಿಯದೆ ನಾವು ಮಾನಸಿಕ ಮತ್ತು ಶಾರೀರಕ ಆರೋಗ್ಯವನ್ನು ಕೆಡಿಸಿಕೊಂಡರೆ 'ಲಿಬಿಡೋ'ಶಕ್ತಿಯು ಕೆಳಮಟ್ಟಗಳಲ್ಲೇ ಸಿಕ್ಕಿಹೋಗಿ ನಮ್ಮನ್ನು ಮಾನಸಿಕ ವ್ಯಾಧಿಗಳಿಗೆ ತುತ್ತುಮಾಡಿ ನಮ್ಮ ಜನ್ಮವನ್ನು ಮಣ್ಣುಗೂಡಿಸುವುದು. ನಿಷ್ಫಲೀಕೃತವಾದ ಲಿಬಿಡೋವಿನಿಂದ (Fixation of the Libido) ಹುಟ್ಟುವ ಮಾನಸಿಕ ರೋಗಗಳು ಹಲವು: ಸಮಾನಲಿಂಗಾಸಕ್ತಿ (Homo-sexuality), ಸ್ವಾನುರಕ್ತಿ (Narcissism), ಸ್ಯಾಡಿಸಮ್ (Sadism)—ಎಂದರೆ ಇತರರನ್ನು ಹಿಂಸಿಸುವುದರಿಂದ ಸಂತೋಷವನ್ನು ಹೊಂದುವುದು, ಮೆಸೋಕಿಸಮ್ (Masochism)—ಎಂದರೆ ತನ್ನನ್ನೇ ಅನೇಕ ಹಿಂಸೆಗಳಿಗೆ ಒಳಪಡಿಸಿ ಆದರಿಂದ ಸಂತೋಷವನ್ನೈದುವುದು, ಇತ್ಯಾದಿ. ಇವೆಲ್ಲವೂ ಜೀವನದ ವಿಕೃತಾವಸ್ಥೆಗಳು (Complexes). ಶಾರೀರಕವಾದ ರೋಗಗಳಿಂದ ಉತ್ಪನ್ನವಾದ ವಿಷಗಳು (Toxins) ಶರೀರದ ಆರೋಗ್ಯವನ್ನು ಯಾವ ರೀತಿ ಕೆಡಿಸುವುವೋ ಅದೇ ರೀತಿ ಮಾನಸಿಕ ರೋಗಗಳಿಂದ ಉತ್ಪನ್ನವಾದ ಈ ಮೇಲೆ ಹೇಳಿದ ವಿಷಮ ಪ್ರವೃತ್ತಿಗಳು ಮನುಷ್ಯನ ಮಾನಸಿಕ ಆರೋಗ್ಯವನ್ನು ಹಾಳುಮಾಡುವುವು.

ಲಿಬಿಡೋವಿನ ಉನ್ನಯನ (Sublimation)ವೇ ಮನುಷ್ಯನ ಉತ್ಕೃಷ್ಟ ಜೀವನದ ಆಧಾರ. ಇದು ಕಲೆಯಲ್ಲೂ ಕಾವ್ಯದಲ್ಲೂ ಸ್ಫೂರ್ತಿದಾಯಕವಾಗುವುದು ಇತಿಹಾಸ ಪ್ರಸಿದ್ಧವಾಗಿದೆ. ಇಟಲಿ ದೇಶದ ಡಾಂಟೆ ಎಂಬ ಕವಿಗೆ ಬೀಟ್ರಿಸ್ ಎಂಬ ರಮಣಿಯಲ್ಲಿದ್ದ ಅಸದೃಶ ಪ್ರೇಮದ ಬಯಕೆಯು ಈಡೇರದ ಸಲುವಾಗಿ ಆ ಪ್ರೇಮವನ್ನು ತನ್ನ 'ಡಿವೈನ್ ಕಾಮೆಡಿ' (*Divine Comedy*) ಎಂಬ ಸುಂದರವಾದ ಕಾವ್ಯದಲ್ಲಿ ಹರಿಯಬಿಟ್ಟನು. ಇದು ಲೋಕಕ್ಕೆ ಉಪಕಾರವಾಯಿತು. ಇಂತಹ ದೃಷ್ಟಾಂತಗಳು ಅನೇಕವಿವೆ. ಹೀಗೆ ಅನುರಾಗದ ಉತ್ತಮ ಕೃಷಿಯು ಪ್ರಾಯಶಃ ಸಾಮಾನ್ಯಜನರಿಗೆ ಸಾಧ್ಯವಿಲ್ಲದ್ದರಿಂದ ಪ್ರಕೃತಿ ನಿಯಮಗಳನ್ನು ಮೀರದ ದಾಂಪತ್ಯ ಜೀವನವು ಸುಖವೆಂದೂ ಶ್ರೇಯಸ್ಕರವೆಂದೂ ಫ್ರಾಯ್ಡರ ಅಭಿಪ್ರಾಯ. ಹೀಗಿಲ್ಲದ ಸಲುವಾಗಿ, ಎಂದರೆ ಪ್ರಕೃತಿ ನಿಯಮಗಳನ್ನು ಮೀರಿದ ಅಸ್ವೈಸರ್ಗಿಕ ಜೀವನದಿಂದ, ಮಾಡಿಕೊಂಡ ಹೊಸ ತೊಡಕುಗಳನ್ನು ಬಿಡಿಸಿಕೊಳ್ಳುವುದೇ ಈಗಿನ ನಾಗರಿಕತೆಯ ಸಮಸ್ಯೆಯಾಗಿದೆ.

ಕೊನೆಯ ಮಾತು

ಫ್ರಾಯ್ಡರ ಅಭಿಪ್ರಾಯಗಳನ್ನೆಲ್ಲಾ ನಾವು ಒಪ್ಪಲಿ ಒಪ್ಪದಿರಲಿ, ಇಷ್ಟನ್ನು ಮಾತ್ರ ನಾವು ಒಪ್ಪಲೇ ಬೇಕು.* ಫ್ರಾಯ್ಡರು ಇದುವರೆಗೂ ನಮ್ಮ ಮನಸ್ಸಿನ ವಿಷಯದಲ್ಲಿ ಗುಪ್ತವಾಗಿದ್ದ ಅನೇಕ ಹೊಸ ಸಂಗತಿಗಳನ್ನು ತಮ್ಮ ಸಂಶೋಧನೆಯಿಂದ ನಮ್ಮ ಅರಿವಿಗೆ ತಂದಿರುವುದು ದೊಡ್ಡ ಉಪಕಾರ. ಇವರು ನಮ್ಮ ಆತ್ಮಜ್ಞಾನದ ಎಲ್ಲೆಯನ್ನು ವಿಸ್ತರಿಸಿರುವರು. ಇದಕ್ಕಿಂತ ಹೆಚ್ಚಾದ ಹೆಮ್ಮೆ ಅವರಿಗೂ ಇಲ್ಲ. ತಮ್ಮ ಆತ್ಮಕಥೆಯ ಕೊನೆಯಲ್ಲಿ ಅವರು ಈ ರೀತಿ ಬರೆದಿರುವರು: "I can, however, express a hope that I have opened up a pathway for an important advance in our knowledge." "ನಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲು ನಾವು ಹೋಗಬೇಕಾದ ದಾರಿಯೊಂದನ್ನು ತೋರಿರುವೆನೆಂಬುದಷ್ಟೇ ನನ್ನ ನಂಬಿಕೆ." ಈ ಸಂದರ್ಭದಲ್ಲಿ ಗಾಂಧೀಜೀಯವರು ಈಚೆಗೆ 'ಹರಿಜನ ಪತ್ರಿಕೆ'ಯಲ್ಲಿ ಹೇಳಿರುವ ಮಾತನ್ನು ಗಮನಕ್ಕೆ ತಂದುಕೊಳ್ಳುವುದು ಒಳ್ಳೆಯದು. ಪಾಶ್ಚಾತ್ಯ ನಾಗರಿಕತೆಯ

---

* ಸಿಗ್ಮಂಡ್ ಫ್ರಾಯ್ಡರ ಶಿಷ್ಯರಲ್ಲಿ ಪ್ರಮುಖರಾದ ಯೂಂಗ್ (Jüng) ಮತ್ತು ಎಡ್ಲರ್ (Adler) ಎಂಬವರು ತಮಗೂ ತಮ್ಮ ಗುರುಗಳಿಗೂ ಕೆಲವು ವಿಚಾರಗಳಲ್ಲಿ ತೋರ್ಪಡುವ ಭಿನ್ನಾಭಿಪ್ರಾಯಗಳನ್ನು ತಮ್ಮ ತಮ್ಮ ಪುಸ್ತಕಗಳಲ್ಲಿ ವಿವರಿಸಿರುವರು. ಇದರಿಂದ ಫ್ರಾಯ್ಡರ ಅಭಿಪ್ರಾಯಗಳು ಸರ್ವಸಮ್ಮತಿಯಿಂದ ಅಂಗೀಕರಿಸಲ್ಪಟ್ಟಿಲ್ಲವೆಂದು ವ್ಯಕ್ತವಾಗುವುದು. ಸ್ಥಳ ಸಂಕೋಚದಿಂದ ಈ ಭಿನ್ನಾಭಿಪ್ರಾಯಗಳನ್ನು ಈ ಲೇಖನದಲ್ಲಿ ವಿವರಿಸಲು ಸಾಧ್ಯವಿಲ್ಲ.

ಆವರಣದಲ್ಲಿ ಹುಟ್ಟಿ ಬೆಳೆದು, ಅಲ್ಲಿಯ ಸಮಸ್ಯೆಗಳನ್ನು ಬಿಡಿಸಲು ತೊಡಗಿದವರು ಫ್ರಾಯ್ಡರು. ಹಿಂದೂ ಸಂಸ್ಕೃತಿಯ ಆಧಾರದ ಮೇಲೆ ಕಾಮಜೀವನದ ಸಮಸ್ಯೆಗಳಿಗೆ ಪರಿಹಾರವನ್ನು ಹೇಳುವ ಪ್ರಾಚ್ಯ ಸಂಸ್ಕೃತಿಯ ಪ್ರತಿನಿಧಿಗಳು ಗಾಂಧೀಜೀಯವರು. ಜುಲೈ ೨೩, ೧೯೩೮ನೆಯ 'ಹರಿಜನ ಪತ್ರಿಕೆ'ಯಲ್ಲಿ 'ಅಹಿಂಸಾ ತತ್ವದ ಪ್ರಯೋಗ' ಎಂಬ ಲೇಖನದಲ್ಲಿ ಗಾಂಧೀಜೀಯವರು ಈ ರೀತಿ ಬರೆದಿರುವರು: "All power comes from the preservation and sublimation of the vitality that is responsible for the creation of life. If the vitality is husbanded instead of being dissipated, it is transmuted into creative energy of the highest order." "ಜೀವ ನಿರ್ಮಾಣಕ್ಕೆ ಕಾರಣವಾದ ಪ್ರಾಣಶಕ್ತಿಯಿಂದ ಎಲ್ಲಾ ಶಕ್ತಿಗಳೂ ಉತ್ಪನ್ನವಾಗುವುವು. ಈ ಪ್ರಾಣಶಕ್ತಿಯನ್ನು ದುರ್ವ್ಯಯಮಾಡದೆ ಕಾಪಾಡಿಕೊಂಡರೆ ಇದೇ ಉತ್ಕೃಷ್ಟರೀತಿಯ ಕ್ರಿಯಾಶಕ್ತಿಯಾಗಿ ಪರಿಣಮಿಸುವುದು." ಅಂದರೆ ಕಾಮವೆಂಬ ಕಬ್ಬಿಣವು ಪ್ರೇಮವೆಂಬ ಚಿನ್ನವಾಗಿ ಪರಿಣಮಿಸುವುದು. ಫ್ರಾಯ್ಡರ 'ಉನ್ನಯನ'ಕ್ಕೂ ಗಾಂಧಿಜೀಯವರ ಧ್ಯೇಯಕ್ಕೂ ಇರುವ ಸಾದೃಶ್ಯವನ್ನು ವಾಚಕರು ಅವಗಾಹನೆಗೆ ತಂದುಕೊಳ್ಳಬಹುದು. ಪೂರ್ವಪಶ್ಚಿಮ ಸಂಸ್ಕೃತಿಗಳೆರಡೂ ಬೇರೆ ಬೇರೆ ಮಾರ್ಗಗಳಲ್ಲಿ ಬಂದು ಈ ಧ್ಯೇಯದಲ್ಲಿ ಸಮ್ಮಿಳಿತವಾಗಿವೆ.

ಎಂ. ಯಾಮುನಾಚಾರ್ಯ.

ಕರ್ಣಾಟಕದ ಅರಸುಮನೆತನಗಳು—ಕದಂಬರು

ಅವತರಣಿಕೆ

ಕರ್ಣಾಟಕದಲ್ಲಿ ಸ್ವತಂತ್ರವಾದ ರಾಜ್ಯವನ್ನು ಸ್ಥಾಪನೆಮಾಡಿದ ಮೊದಲನೆಯ ರಾಜಮನೆತನದವರು ಕದಂಬರೇ. ಇವರು ಕರ್ಣಾಟಕದ ಕೆಲ ಭಾಗಗಳನ್ನು ಪಲ್ಲವರಿಂದ ಸ್ವಾಧೀನಪಡಿಸಿಕೊಂಡು ಸ್ವತಂತ್ರವಾಗಿ ರಾಜ್ಯವನ್ನು ಸ್ಥಾಪಿಸಿದರು. ಇವರ ರಾಜ್ಯವಿಸ್ತಾರವು ಎಷ್ಟಿತ್ತೆಂಬುದನ್ನು ತಿಳಿದುಕೊಳ್ಳುವುದಕ್ಕೆ ಮುಂಚೆ ಇವರು ಬರುವ ಮೊದಲು ಕರ್ಣಾಟಕವು ಯಾವ ಯಾವ ರಾಜರ ಆಧಿಪತ್ಯಕ್ಕೆ ಒಳಪಟ್ಟಿತ್ತೆಂಬುದನ್ನೂ ಇವರ ನೆರೆಹೊರೆಯ ಅರಸರು ಯಾರಾಗಿದ್ದರೆಂಬುದನ್ನೂ ತಿಳಿದುಕೊಳ್ಳುವುದು ಆವಶ್ಯಕ.

ಐತಿಹಾಸಿಕ ಕಲ್ಪದ ಪ್ರಾರಂಭದಲ್ಲಿ ಕರ್ಣಾಟಕದ ಕೆಲಭಾಗವು ಮೌರ್ಯರ ವಶದಲ್ಲಿತ್ತೆಂದು ಬೌದ್ಧಸಾರ್ವಭೌಮನಾದ ಅಶೋಕ ಮಹಾರಾಜನ ಶಾಸನಗಳಿಂದ ವ್ಯಕ್ತವಾಗುತ್ತದೆ. ನಿಜಾಂ ಪ್ರಾಂತಕ್ಕೆ ಸೇರಿದ ರಾಯಚೂರಿಗೆ ಸುಮಾರು ನಲವತ್ತಾರು ಮೈಲುಗಳ ದೂರದಲ್ಲಿರುವ ಮಾಸ್ಕಿ ಎಂಬ ಗ್ರಾಮದಲ್ಲಿಯೂ ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಿದ್ದಾಪುರದಲ್ಲಿಯೂ ಗುತ್ತಿ (ಅನಂತಪುರ ಜಿಲ್ಲೆ) ಯ ಸಮೀಪದಲ್ಲಿರುವ ಎರ್ರಗುಡಿಯಲ್ಲಿಯೂ ಈ ರಾಜನ ಶಾಸನಗಳು ಸಿಕ್ಕಿವೆ. ಸಿದ್ದಾಪುರದ ಲಿಪಿಗಳಿಂದ ಈ ಗ್ರಾಮವು ಅಶೋಕನ ರಾಜ್ಯದ ಅತ್ಯಂತ ದಕ್ಷಿಣಕ್ಕಿದ್ದ ಸುವರ್ಣಗಿರಿ ಎಂಬ ಪ್ರಾಂತಕ್ಕೆ ಸೇರಿತ್ತೆಂದೂ ಆಗ್ಗೆ ಇದಕ್ಕೆ ಇಸಿಲಾ ಎಂಬ ಹೆಸರು ಇದ್ದಿರಬಹುದೆಂದೂ ವ್ಯಕ್ತವಾಗುತ್ತದೆ. ಈ ಸುವರ್ಣಗಿರಿಯಲ್ಲಿ ಅರಸುಮನೆತನದ ರಾಜಪ್ರತಿನಿಧಿಯು ಇದ್ದುಕೊಂಡು ಈ ಭಾಗದ ಆಡಳಿತವನ್ನು ನಡೆಸುತ್ತಿದ್ದನು. ಮಾಸ್ಕಿಯ ದಕ್ಷಿಣಕ್ಕೂ ಹಂಪೆಯ ಉತ್ತರಕ್ಕೂ ಇರುವ ಕನಕಗಿರಿಯೇ ಶಾಸನಗಳಲ್ಲಿ ಉಕ್ತವಾದ ಸುವರ್ಣಗಿರಿ ಎಂದು ಹುಲ್ಷರು ಅಭಿಪ್ರಾಯಪಟ್ಟಿದ್ದಾರೆ.[1] ಮೌರ್ಯ ಸಾಮ್ರಾಜ್ಯದ ದಕ್ಷಿಣಭಾಗದ ರಾಜಧಾನಿಯೇ ಕರ್ಣಾಟಕದ ಉತ್ತರ ಭಾಗದಲ್ಲಿದ್ದುದರಿಂದ ಕರ್ಣಾಟಕದ ಈ ಭಾಗವು ಮೌರ್ಯರ ಕೈಯಲ್ಲಿದ್ದಿತೆಂಬುದರಲ್ಲಿ

---

[1] Hultzsch : *Inscriptions of Aśōka*, p. xxxviii. ಕೊಪ್ಪಳದ ಹತ್ತಿರ ಪಾಲ್ಕಿಗುಂಡು ಗವಿಮಠಗಳ ಬಂಡೆಗಲ್ಲುಗಳ ಮೇಲೆ ಅಶೋಕನ ಶಾಸನಗಳು ಇರುತ್ತವೆಂದು ಇತ್ತೀಚೆಗೆ ತಿಳಿಯಬಂದಿದೆ. ಇವು *Hyderabad Archæological Series*, No. 10ರಲ್ಲಿ ಪ್ರಸಿದ್ಧವಾಗಿವೆ.

ಸಂಶಯವಿಲ್ಲ. ಇದೇ ವಿಷಯವು ಅಶೋಕ ಮಹಾರಾಜನು ಬನವಾಸಿಗೆ[1] ಧರ್ಮೋಪದೇಶಕರನ್ನು ಕಳುಹಿಸಿದ್ದನೆಂಬ ಮಹಾವಂಸದ ವಚನದಿಂದ ದೃಢವಾಗುತ್ತದೆ. ಮೌರ್ಯರಾಜ್ಯಸ್ಥಾಪಕನೂ ಅಶೋಕನ ಪಿತಾಮಹನೂ ಆದ ಚಂದ್ರಗುಪ್ತನು ಭದ್ರಬಾಹುಮುನಿಯ ಶಿಷ್ಯನಾಗಿ ಆತನೊಡನೆ ಶ್ರವಣಬೆಳ್ಗೊಳಕ್ಕೆ ಬಂದು ಅಲ್ಲಿಯೇ ಗುರುಶುಶ್ರೂಷೆಮಾಡುತ್ತಾ ನಿಂತು ಕೆಲಕಾಲಾನಂತರ ಮೃತನಾದನೆಂದು ಕೆಲಪಂಡಿತರು ಅಭಿಪ್ರಾಯಪಡುತ್ತಾರೆ.[2]

ಮೌರ್ಯರ ತರುವಾಯ ಸಾತವಾಹನರು ಕರ್ಣಾಟಕದ ಅಧಿಪತಿಗಳಾಗಿದ್ದರು. ಬಳ್ಳಾರಿ ಜಿಲ್ಲೆಯ ಆದವಾನಿ ತಾಲ್ಲೂಕಿಗೆ ಸೇರಿದ ಮ್ಯಾಕದೋನಿಯೆಂಬ ಗ್ರಾಮದಲ್ಲಿ ಒಂದು ಬಂಡೆಯ ಮೇಲೆ ಸಾತವಾಹನ ರಾಜನಾದ ಸಿರಿಪುಳುಮಾವಿಯ ಎಂಟನೆಯ ವರ್ಷದ ಶಾಸನವೊಂದಿದೆ. ಇಲ್ಲಿ ಉಕ್ತನಾದ ಪುಳುಮಾವಿಯು ಕ್ರಿ. ಶ. ೧೩೫ರಿಂದ ಸುಮಾರು ಇಪ್ಪತ್ತೆಂಟು ವರ್ಷಗಳು ರಾಜ್ಯಭಾರಮಾಡಿದ ೨ನೆಯ ವಾಸಿಠೀಪುತ ಪುಳುಮಾವಿಯೆಂದು ಈ ಶಾಸನವನ್ನು ಪ್ರಕಟಿಸಿದ ಡಾ|| ಸುಕ್ಥಂಕರರು ಹೇಳಿದ್ದಾರೆ.[3]

ಕ್ರಿ. ಶ. ೩ನೆಯ ಶತಮಾನದಲ್ಲಿ ಇವರ ಸಾಮಂತರಾದ ಚುಟುಕುಲದ ಸಾತಕಣ್ಣಿಗಳು ಬನವಾಸಿ ಪ್ರಾಂತದಲ್ಲಿ ಆಳುತ್ತಿದ್ದರು. ಮಳವಳ್ಳಿಯ[4] ಹಾರೀತಿಪುತ ವಿಣ್ಹುಕಡ್ಡ ಚುಟುಕುಲಾನಂದ ಸಾತಕಣ್ಣಿ ಎಂಬ ರಾಜನ ಆಳ್ವಿಕೆಯ ಎರಡನೆಯ ವರ್ಷದ ಶಿಲಾಲಿಪಿಯಿಂದ ರಾಜನು ಕೌಂಡಿನ್ಯಗೋತ್ರದ ಕೊಂಡಮಾನನೆಂಬ ಬ್ರಾಹ್ಮಣನಿಗೆ ಭೂದಾನ ಮಾಡುವಂತೆ ಮಹಾವಲಭನೆಂಬ ತನ್ನ ಅಧಿಕಾರಿಗೆ ಅಪ್ಪಣೆ ಕೊಟ್ಟನೆಂದು ತಿಳಿಯುತ್ತದೆ. ಇದರಲ್ಲಿ ರಾಜನು ವೈಜಯಂತಿಯ ಅರಸನೆಂದು ಹೇಳಿದೆ. ಬನವಾಸಿಯಲ್ಲಿ ದೊರೆತ ಇದೇ ರಾಜನ ಹನ್ನೆರಡನೆಯ ವರ್ಷದ ಶಿಲಾಶಾಸನದಲ್ಲಿ

---

[1] ಅಶೋಕನು ಮಹಿಷಮಂಡಲಕ್ಕೂ ಧರ್ಮಪ್ರಚಾರಕರನ್ನು ಕಳುಹಿಸಿದ್ದನೆಂದು ಬೌದ್ಧ ಗ್ರಂಥಗಳಿಂದ ತಿಳಿಯುತ್ತದೆ. ಈ ಮಹಿಷಮಂಡಲವು ಮೈಸೂರೆಂದು ಕೆಲವರು ಪ್ರತಿಪಾದಿಸುತ್ತಾರೆ. ಫ್ಲೀಟರು ಇದು ವಿಂಧ್ಯಪರ್ವತದ ಸಾಲಿನ ದಕ್ಷಿಣಕ್ಕೆ ಮಧ್ಯಪ್ರಾಂತಕ್ಕೆ ಸೇರಿದ ನಿಮೂರ್ ಜಿಲ್ಲೆಯ ಖಾಂಡ್ವಾ ತಹಸೀಲಿನಲ್ಲಿರುವ ಈಗಿನ ಮಾಂಧಾತವೆಂದೂ ಪತಂಜಲಿ ಮಹಾಭಾಷ್ಯ, ಮಹಾಭಾರತ, ಸುತ್ತನಿಪಾತ, ರಘುವಂಶಗಳಲ್ಲಿ ಉಕ್ತವಾದ ಮಾಹಿಷ್ಮತಿಯೇ ಈ ಮಹಿಷಮಂಡಲವೆಂದೂ ಹೇಳಿದ್ದಾರೆ. *J.R.A.S.*, 1910, pp. 425 ff., 1911, p. 816 and 1912 p. 246.

[2] *Śravaṇa Beḷagoḷa Inscriptions*, Second Edition, pp. 36–42. ಆದರೆ ಫ್ಲೀಟರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. *Ep. Ind.*, Vol. IV, p. 22; *J.R.A.S.*, 1909, p. 23 and *Ibid.*, 1911, p. 816.

[3] *Ep. Ind.*, Vol. XIV, pp. 152 ff.

[4] Lüders : *List of Brāhmī Inscriptions*, No. 1195.

ಈ ರಾಜನ ಮಗಳು ಸಾತಸಿವಖದ ನಾಗಸಿರಿ (ಸಿವಸ್ಕಂದನಾಗಶ್ರೀ)[1] ಎಂಬ ತನ್ನ ಮಗನೊಂದಿಗೆ ನಾಗವನ್ನೂ ಕೆರೆಯನ್ನೂ ಒಂದು ವಿಹಾರವನ್ನೂ ದಾನಮಾಡಿದಳೆಂದು ಬರೆದಿದೆ. ಶಿವಮೊಗ್ಗೆ ಜಿಲ್ಲೆಯ ತಾಳಗುಂದದ ಪ್ರಣವೇಶ್ವರ ದೇವಾಲಯದಲ್ಲಿರುವ ಕದಂಬ ಕಾಕುಸ್ಥವರ್ಮನ ಲಿಪಿಯಲ್ಲಿ ಈ ದೇವಾಲಯದ ಈಶ್ವರನನ್ನು ಹಿಂದಕ್ಕೆ ಸಾತಕರ್ಣಿ ಮೊದಲಾದ ಅರಸರು ಪೂಜಿಸಿದ್ದರೆಂದು ಹೇಳಿದೆ. ಮೇಲೆ ಹೇಳಿದ ಮ್ಯಾಕದೋನಿ ಶಾಸನದಲ್ಲಿ ಮಹಾಸೇನಾಪತಿ ಖಂದನಾಕ(ಸ್ಕಂದನಾಗ)ನ ವಶದಲ್ಲಿದ್ದ 'ಸಾತವಹನಿಹಾರ' ಜನಪದದಲ್ಲಿಯ ವೇಪುರಕಗ್ರಾಮದ ಗೃಹಪತಿಯೊಬ್ಬನು ಒಂದು ಕೆರೆಯನ್ನು ಅಗೆಸಿದನೆಂದು ಹೇಳಿದೆ. ಪಲ್ಲವ ಸಿವಸ್ಕಂದವರ್ಮರಾಜನ ಕಾಲದ ಇದೇ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯಲ್ಲಿ ದೊರೆತ ತಾಮ್ರಪತ್ರಗಳಿಂದ[2] ಆ ಭಾಗಕ್ಕೆ ಸಾತಾಹನಿರಟ್ಠ ಎಂಬ ಹೆಸರಿತ್ತೆಂದು ತಿಳಿಯಬರುತ್ತದೆ. ಆದುದರಿಂದ ಸಾತವಹನಿಹಾರ ಅಥವಾ ಸಾತಾಹನಿರಟ್ಠ (ಸಾತವಾಹನರಾಷ್ಟ್ರ) ದಲ್ಲಿ ಬಳ್ಳಾರಿ ಜಿಲ್ಲೆಯ ಬಹುಭಾಗವು ಸೇರಿತ್ತೆಂದು ಹೇಳಬಹುದು. ಮೈಸೂರು ಸಂಸ್ಥಾನಕ್ಕೆ ಸೇರಿದ ಚಿತ್ರದುರ್ಗದ ಸಮೀಪದಲ್ಲಿರುವ ಚಂದ್ರವಳ್ಳಿಯಲ್ಲಿ ದೊರೆತ ಈ ವಂಶದ ರಾಜರ ನಾಣ್ಯಗಳಿಂದಲೂ[3] ಆ ಪ್ರಾಂತವು ಸಾತವಾಹನರ ಅಧೀನದಲ್ಲಿದ್ದಿತೆಂದು ಊಹಿಸಬಹುದು. ಅಂತು ಸಾತವಾಹನರು ಕರ್ಣಾಟಕರಾಗಲಿ ಅಲ್ಲದಿರಲಿ, ಕರ್ಣಾಟಕವು ಇವರ ಆಳ್ವಿಕೆಗೆ ಒಳಪಟ್ಟಿತ್ತೆಂಬುದರಲ್ಲಿ ಸಂದೇಹವಿಲ್ಲ.

ಮೇಲೆ ಹೇಳಿದ ಹಿರೇಹಡಗಲಿಯ ಶಾಸನದಿಂದ ಸಾತವಾಹನರ ಬಳಿಕ ಸಾತವಾಹನರಾಷ್ಟ್ರವು ಪಲ್ಲವರ ವಶದಲ್ಲಿದ್ದಿತೆಂದು ತಿಳಿಯಿತು. ಅಂದರೆ ಸಾತವಾಹನರ ವಶದಲ್ಲಿದ್ದ ಕರ್ಣಾಟಕದ ಭಾಗವೆಲ್ಲವೂ ಇವರ ಕೈಸೇರಿತು. ತಾಳಗುಂದದ ಪ್ರಣವೇಶ್ವರ ದೇವಾಲಯದ ಎದುರಿಗಿರುವ ಕಂಬದಲ್ಲಿ ಕೊರೆದಿರುವ ಶಿಲಾಲಿಪಿಯಲ್ಲಿ ಕದಂಬವಂಶದ ಮೂಲಪುರುಷನಾದ ಮಯೂರಶರ್ಮನು ಪಶ್ಚಿಮ ಸಮುದ್ರಕ್ಕೂ ಪ್ರೇಹಾರಕ್ಕೂ ಮಧ್ಯದಲ್ಲಿರುವ ಪ್ರದೇಶವನ್ನು ಪಲ್ಲವರಿಂದ ಪಡೆದನೆಂದು ಹೇಳಿದೆ. ಇದರಿಂದ ಸಾತವಾಹನರ ತರುವಾಯ ಪಲ್ಲವರ ಕೈವಶವಾಗಿದ್ದ ಕರ್ಣಾಟಕದ

---

[1] *Ibid.*, No. 1186. ಮೇಲೆ ಹೇಳಿದ ಮಳವಳ್ಳಿ ಶಾಸನದ ಕೆಳಗೆ ಕೊರೆದಿರುವ ಕದಂಬ ರಾಜನ ಶಾಸನದಲ್ಲಿ ಆತನ ಹೆಸರು ಕೊಟ್ಟಿಲ್ಲ. ಒಂದು ಲಿಪಿಯಲ್ಲಿ ಮಾನವ್ಯಗೋತ್ರನೂ ಹಾರೀತಿಪುತ್ರನೂ ಆದ ಸಿವಖದವಮ್ಮ(ಸಿವಸ್ಕಂದವರ್ಮ)ನು ವೈಜಯಂತೀಪತಿಯಾಗಿದ್ದನೆಂದು ಹೇಳಿದೆ. ಇವನು ಸಾತಸಿವಖದ ನಾಗಸಿರಿಯೇ ಆಗಿರಬೇಕೆಂದು ಪಂಡಿತರ ಊಹೆ. (*Ind. Ant.*, Vol. XLVI, pp. 154–155).

[2] *Ep. Ind.*, Vol. I, p. 2.

[3] *Mysore Archæological Report*, 1909, pp. 29 and 30.

ಭಾಗವನ್ನು ಕದಂಬರು ಆಕ್ರಮಿಸಿಕೊಂಡರೆಂದು ಹೇಳಬೇಕಾಗುತ್ತದೆ. ಅವರು ಹೀಗೆ ಸ್ವತಂತ್ರವಾಗಿ ರಾಜ್ಯವನ್ನು ಸಂಪಾದಿಸುವಾಗ್ಗೆ ಬೃಹದ್ಬಾಣರನ್ನು ಸೋಲಿಸಿ ಅವರಿಂದ ಕರವನ್ನು ತೆಗೆದುಕೊಂಡರೆಂದು ತಾಳಗುಂದ ಶಾಸನವು ಹೇಳುತ್ತದೆ. ಈ ಬೃಹದ್ಬಾಣರು ಈ ಕಾಲದಲ್ಲಿ ಪಲ್ಲವರ ಸಾಮಂತರಾಗಿ ದತ್ತಮಂಡಲ (Ceded Districts)ದ ಕೆಲಭಾಗ (ಶ್ರೀಶೈಲದ ಮಗ್ಗುಲಿನ ಭಾಗ)ಗಳನ್ನು ಆಳುತ್ತಿದ್ದರು.[1]

ಇನ್ನು ಈ ಕಾಲದಲ್ಲಿ ಅಂದರೆ ಸುಮಾರು ೪ನೆಯ ಶತಮಾನದಲ್ಲಿ ಕದಂಬರ ನೆರೆಹೊರೆಯ ರಾಜರಾಗಿ ಉತ್ತರದಲ್ಲಿ ವಾಕಾಟಕರೂ ಶಾಲಂಕಾಯನರೂ ದಕ್ಷಿಣ ದಲ್ಲಿ ಪ್ರಾಯಶಃ ಗಂಗರೂ ಆಳುತ್ತಿದ್ದರು. ವಾಕಾಟಕರು ಮಧ್ಯಹಿಂದೂಸ್ಥಾನದಲ್ಲಿ ವಿಸ್ತಾರವಾದ ರಾಜ್ಯಕ್ಕೆ ಅಧಿಪತಿಗಳಾಗಿದ್ದರು. ಅಜಂತಾ, ಗಂಜ, ಗುಲ್ವಾಡಾಗಳಲ್ಲಿ ಇವರ ಲಿಪಿಗಳು ಸಿಕ್ಕಿವೆ. ಅಜಂತೆಯಲ್ಲಿರುವ ಗುಹಾಂತರ್ದೇವಾಲಯಗಳಲ್ಲಿ ಕೆಲವು ಇವರಿಂದಲೇ ಕೊರೆಯಿಸಲ್ಪಟ್ಟವು. ಹದಿನಾರನೆಯ ಗುಹೆಯ ಹೊರಭಾಗದಲ್ಲಿರುವ ಒಂದು ಶಾಸನವು[2] ಈ ಮನೆತನದ ರಾಜರ ಕೈಕೆಳಗಿದ್ದ ಮಂತ್ರಿಯೊಬ್ಬನ ಮಗನು ಈ ವಿಹಾರವನ್ನು ಮಾಡಿಸಿದನೆಂದು ಹೇಳುತ್ತದೆ. ಉತ್ತರ ಹಿಂದೂಸ್ಥಾನದ ಸಾರ್ವ ಭೌಮರಾಗಿದ್ದ ಗುಪ್ತವಂಶದ ಅರಸರೊಂದಿಗೆ ಇವರು ಶರೀರಸಂಬಂಧವನ್ನು ಬೆಳೆಸಿ ದ್ದರು. ಇದರಿಂದ ಇವರು ಎಷ್ಟು ಪ್ರಬಲರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಗಂಗರು ಮೈಸೂರಿನ ದಕ್ಷಿಣ ಮತ್ತು ಪೂರ್ವಭಾಗಗಳಲ್ಲಿ ಆಳುತ್ತಿದ್ದರು. ಈ ಕಾಲದ ಇವರ ಇತಿಹಾಸವು ಹೆಚ್ಚಾಗಿ ತಿಳಿದಿಲ್ಲ. ತಿಳಿದುಬಂದಿರುವ ವಿಷಯಗಳನ್ನು ಮುಂದೆ ಗಂಗರ ಪ್ರಕರಣದಲ್ಲಿ ಹೇಳುತ್ತೇವೆ. ಅಂತು ೪ನೆಯ ಶತಮಾನದಲ್ಲಿ[3] ಮಯೂರ ಶರ್ಮನು ಕದಂಬ ರಾಜ್ಯವನ್ನು ಸ್ಥಾಪನೆಮಾಡುವಾಗ ಪಲ್ಲವರಲ್ಲದೆ ಒಂದೆಡೆಯಲ್ಲಿ ಕೋಲಾರದ ಗಂಗರೂ ಮತ್ತೊಂದೆಡೆಯಲ್ಲಿ ವಾಕಾಟಕರೂ ಶಾಲಂಕಾಯನರೂ ನೆರೆಹೊರೆಯ ರಾಜ್ಯಗಳನ್ನಾಳುತ್ತಿದ್ದರು.

ಈ ಪ್ರಾಚೀನ ಕಾಲದಲ್ಲಿಯ ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಕಂಡುಹಿಡಿಯಲು ಸಾಕಾದಷ್ಟು ಸಾಧನಗಳಿಲ್ಲ. ಶಾಸನಗಳಿಂದಲೇ ಶಕ್ಯವಾದ ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿದೆ. ಮಳವಳ್ಳಿಯ ಶಾಸನದಲ್ಲಿ ಸಾತಕರ್ಣಿಯು ಕೌಂಡಿನ್ಯಗೋತ್ರದ ಕೊಂಡಮಾನನೆಂಬ ಬ್ರಾಹ್ಮಣನಿಗೆ ಭೂದಾನಮಾಡಿದನೆಂದು ಹೇಳಿರುವುದನ್ನು ಮೇಲೆಯೇ ತಿಳಿಸಿದ್ದೇವೆ. ಇದೇ ರಾಜನ ಬನವಾಸಿ ಲಿಪಿಯಿಂದ

---

[1] *Ep. Ind.*, Vol. XI, p. 231.

[2] *Arch. Sur. W. India*, Vol. IV, pp. 124 ff.

[3] ಪುಟ ೧೨೬–೧೨೭ ನೋಡಿರಿ.

ಅವನ ಮಗಳು ಒಂದು ಬೌದ್ಧ ವಿಹಾರವನ್ನು ಕಟ್ಟಿಸಿಕೊಟ್ಟಂತೆ ತಿಳಿದಿದೆ. ಈ ಶಾಸನಗಳು ಕದಂಬರಾಜ್ಯಸ್ಥಾಪನೆಯ ಕಾಲದವಲ್ಲವಾದರೂ ಈ ಕಾಲಕ್ಕೆ ಸುಮಾರು ಅರ್ಧ ಶತಮಾನಕ್ಕೆ ಮೊದಲು ಹುಟ್ಟಿದವಾದುದರಿಂದ ಆಗಿನ ಪರಿಸ್ಥಿತಿಯಲ್ಲಿ ಈ ಅಲ್ಪಾವಧಿಯಲ್ಲಿ ಹೆಚ್ಚು ವ್ಯತ್ಯಾಸವಾಗಿರಲಿಲ್ಲವೆಂದು ಭಾವಿಸಿದರೆ ತಪ್ಪಾಗಲಾರದು.[1] ಆದುದರಿಂದ ಈ ಕಾಲದಲ್ಲಿ ವೈದಿಕಧರ್ಮ ಬೌದ್ಧಧರ್ಮಗಳೆರಡೂ ಪ್ರಚಾರದಲ್ಲಿದ್ದ ವೆಂದು ಹೇಳಬಹುದು. ಹಿರೇಹಡಗಲಿಯ ಶಾಸನದಲ್ಲಿ ಪಲ್ಲವರಾಜನಾದ ಶಿವಸ್ಕಂದವರ್ಮನು ತನ್ನ ತಂದೆಯಾದ ಮಹಾರಾಜ ಬಪ್ಪಸಾಮಿಯು ಹಿಂದೆ ಕೊಟ್ಟಿದ್ದ ಬ್ರಾಹ್ಮಣ ದತ್ತಿಯನ್ನು ಸ್ಥಿರೀಕರಿಸಿದನೆಂದು ಹೇಳಿದೆ. ಮಧ್ಯಹಿಂದೂಸ್ಥಾನದಲ್ಲಿ ಕದಂಬರ ನೆರೆರಾಜರಾಗಿದ್ದ ವಾಕಾಟಕರು ಬೌದ್ಧ ವಿಹಾರಗಳನ್ನು ನಿರ್ಮಿಸಿದರೆಂದು ಮೊದಲೇ ಹೇಳಿದ್ದೇವೆ.

ನಾಲ್ಕನೆಯ ಶತಮಾನದ ಪ್ರಸಿದ್ಧವಾದ ವಿದ್ಯಾಪೀಠಗಳಲ್ಲಿ ಪಲ್ಲವರ ರಾಜಧಾನಿಯಾಗಿದ್ದ ಕಂಚಿಯು ಒಂದಾಗಿತ್ತು. ಕದಂಬರಾಜರ ಮೂಲಪುರುಷನಾದ ಮಯೂರಶರ್ಮನು ವ್ಯಾಸಂಗಮಾಡುತ್ತಿದ್ದುದು ಈ ಪೀಠದಲ್ಲಿಯೇ. ಈ ಕಾಲದಲ್ಲಿ ಸಂಸ್ಕೃತ ಪ್ರಾಕೃತಗಳೆರಡೂ ಆಸ್ಥಾನ ಮತ್ತು ವ್ಯಾವಹಾರಿಕ ಭಾಷೆಗಳಾಗಿದ್ದ ವೆಂದು ಹೇಳಬಹುದು. ಶಾಸನಗಳೆಲ್ಲವೂ ಇವೆರಡೇ ಭಾಷೆಗಳಲ್ಲಿರುವ ಕಾರಣ ದ್ರಾವಿಡ ಭಾಷೆಗಳು ಇನ್ನೂ ವಾಙ್ಮಯಕ್ಕೆ ತಕ್ಕ ಭಾಷೆಗಳಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ಹೆಚ್ಚಾಗಿ ಲಿಪಿಗಳು ಪ್ರಾಕೃತದಲ್ಲಿಯೇ ಇರುವುದರಿಂದ ಆಗ್ಗೆ ಸಾಮಾನ್ಯ ಜನರಿಗೂ ಪ್ರಾಕೃತವು ತಿಳಿಯುತ್ತಿದ್ದಿರಬೇಕು.

ಬನವಾಸಿಯಲ್ಲಿರುವ ವಿಣ್ಹುಕಡಚುಟುಕುಲಾನಂದ ಸಾತಕಣ್ಣಿಯ ಶಿಲಾಶಾಸನದ ಮೇಲೆ ಬಹು ಸುಂದರವಾದ ನಾಗವೊಂದು ಕೆತ್ತಲ್ಪಟ್ಟಿದೆ. ಇದರಿಂದ ಕರ್ಣಾಟಕದಲ್ಲಿ ಶಿಲ್ಪಕಲೆಯು ಊರ್ಜಿತ ಸ್ಥಿತಿಯಲ್ಲಿದ್ದಿತೆಂದು ಹೇಳಬಹುದು. ರಾಜನ ಮಗಳು ದಾನಮಾಡಿದ ನಾಗವು ಇದೇ ಆಗಿದ್ದರೆ ಇದನ್ನು ಮಾಡಿದವನು ಆಚಾರ್ಯ ಇದಮೋರಕ (ಇಂದ್ರಮಯೂರಕ)ನ ಶಿಷ್ಯನಾದ ನಟಕನು. ಕರ್ಣಾಟಕದಲ್ಲಿ ಕಾಣಬಹುದಾದ ಈ ಕಾಲದ ಕಟ್ಟಡಗಳಲ್ಲಿ ಪುರಾತನವಾದುದು ನಿಜಾಂ ಪ್ರಾಂತಕ್ಕೆ ಸೇರಿದ ನಲದುರ್ಗಾ ಜಿಲ್ಲೆಯ ತೇರ್ (ತಗರ) ನಗರದಲ್ಲಿರುವ ವಿಕ್ರಮ ದೇವಾಲಯವು. ಇದು ಸುಮಾರು ಕ್ರಿ. ಶ. ೪ನೆಯ ಶತಮಾನದ್ದೆಂದೂ ಮೊದಲು ಇದು ಬೌದ್ಧ ವಿಹಾರವಾಗಿದ್ದು ಆಮೇಲೆ ಹಿಂದೂದೇವಾಲಯವಾಗಿರಬೇಕೆಂದೂ ಡಾ|| ಕುಮಾರ

---

[1] ಮಳವಳ್ಳಿಯ ಕದಂಬ ಲಿಪಿಯಲ್ಲಿ ಉಕ್ತನಾದ ಸಿವಖದವಮ್ಮನು ಬನವಾಸಿ ಲಿಪಿಯ ಸಾತಸಿವಖದನೇ ಆಗಿದ್ದರೆ ಇವೆರಡರ ಕಾಲಕ್ಕೂ ಇದ್ದ ಅಂತರವು ತೀರ ಸ್ವಲ್ಪ.

ಸ್ವಾಮಿಯವರು ಅಭಿಪ್ರಾಯಪಟ್ಟಿದ್ದಾರೆ. ಇದು ಆಕಾರದಲ್ಲಿ ಅಜಂತೆ, ಕಾರ್ಲೆ ಮೊದಲಾದ ಸ್ಥಳಗಳಲ್ಲಿರುವ ಬೌದ್ಧ ಚೈತ್ಯಾಲಯಗಳನ್ನು ಹೋಲುತ್ತದೆ. ಆದರೆ ಅವುಗಳಂತೆ ಇದು ಬಂಡೆಯಲ್ಲಿ ಕೊರೆದು ಮಾಡಿದುದಲ್ಲ; ಇಟ್ಟಿಗೆಯಿಂದ ಕಟ್ಟಿದುದು.[1]

ಕದಂಬರು

ಕದಂಬರು ಮೈಸೂರು ಪ್ರಾಂತದ ಶಿವಮೊಗ್ಗೆ ಜಿಲ್ಲೆಯ ತಾಳಗುಂದ (ತಾಣಗುಂದೂರ ಅಥವಾ ಸ್ಥಾಣಕುಂದೂರ)ದ ನಿವಾಸಿಗಳು. ಇವರು ಹಾರೀತಿಪುತ್ರರೂ ಮಾನವ್ಯಸಗೋತ್ರರೂ ಆದ ಬ್ರಾಹ್ಮಣರು. ವಿವಿಧ ಯಜ್ಞಯಾಗಗಳನ್ನು ಮಾಡಿ ಪುಣ್ಯವಿಶೇಷವನ್ನು ಸಂಪಾದನೆಮಾಡಿದವರು; ಷಟ್ಕರ್ಮನಿರತರು. ಇವರು ತಮ್ಮ ಮನೆಯ ಹತ್ತಿರ ಒಂದು ಕದಂಬ ವೃಕ್ಷವನ್ನು ಬೆಳೆಸಿದ್ದರು. ಅದರಿಂದಲೇ ಇವರ ವಂಶಕ್ಕೆ ಕದಂಬ ವಂಶವೆಂದು ಹೆಸರು ಬಂದಿತು. ಈ ವಂಶದಲ್ಲಿ ಹುಟ್ಟಿದ ಮಯೂರ ಶರ್ಮನೇ ಕದಂಬರಾಜ್ಯಸ್ಥಾಪಕನು.[2] ಇವನ ಹಿಂದೆ ಜಯಂತ (ಇವನಿಗೆ ತ್ರಿಲೋಚನ ಅಥವಾ ತ್ರಿನೇತ್ರಕದಂಬ ಎಂಬ ಹೆಸರೂ ಉಂಟು), ಮಧುಕೇಶ್ವರ, ಮಲ್ಲಿನಾಥ, ಚಂದ್ರವರ್ಮ ಎಂಬ ಈ ಮನೆತನದ ಅರಸರು ಆಳಿದರೆಂದೂ ಕಡೆಯವನಾದ ಚಂದ್ರ ವರ್ಮನಿಗೆ ೨ನೆಯ ಚಂದ್ರವರ್ಮ, ಪುರಂದರ ಎಂಬ ಇಬ್ಬರು ಮಕ್ಕಳಿದ್ದರೆಂದೂ ಈ ೨ನೆಯ ಚಂದ್ರವರ್ಮನ ಮಗನೇ ಮಯೂರವರ್ಮ (ಮಯೂರಶರ್ಮ)ನೆಂದೂ ಕ್ರಿ. ಶ. ೧೧ನೆಯ ಶತಮಾನದ ಲಿಪಿಗಳು ಹೇಳುತ್ತವೆ.[3] ಈ ಅರಸರ ಹೆಸರುಗಳು ಕದಂಬ ರಾಜ್ಯಸ್ಥಾಪನಾನಂತರ ಆರು-ಏಳು ಶತಮಾನಗಳವರೆಗೆ ಎಲ್ಲಿಯೂ ಕಾಣಬರುವುದಿಲ್ಲ

---

[1] *History of Indian and Indonesian Art*, p. 77.

[2] ತಾಳಗುಂದ ಶಾಸನ; *Ep. Ind.*, Vol. VIII, pp. 24 ff.

[3] ಇದೇ ಕಾಲದ ಗೋವೆಯ ಕದಂಬರ ಲಿಪಿಗಳಲ್ಲಿ ಕದಂಬರ ಮೂಲಪುರುಷನಾದ ತ್ರಿಲೋಚನ ಕದಂಬ (ಜಯಂತ)ನು ತ್ರಿಪುರಾಸುರ ಸಂಹಾರಾನಂತರ ಶಿವನ ಹಣೆಯಿಂದ ಕದಂಬ ಮರವೊಂದರ ಬುಡದಲ್ಲಿ ಬಿದ್ದ ಬೆವರಿನಿಂದ ಹುಟ್ಟಿದನೆಂದು ಹೇಳಿದೆ. ಆದರೆ ಹಾನಗಲ್ಲು ಮನೆತನದ ರಾಜರ ಶಾಸನಗಳು ಮುಕ್ಕಣ್ಣ ಕದಂಬನು ಶಿವಭೂದೇವಿಯರಿಗೆ ಜನಿಸಿದ ಪುತ್ರನೆಂದು ಹೇಳುತ್ತವೆ. ಪರಶುರಾಮನು ಹೈಗತುಳುನಾಡುಗಳನ್ನು ನಿರ್ಮಿಸಿದ ಕೆಲವು ವರ್ಷಗಳ ಬಳಿಕ ಪಾರ್ವತೀ ಪರಮೇಶ್ವರರು ಪಶ್ಚಿಮಘಟ್ಟಕ್ಕೆ ಸೇರಿದ ಸಹ್ಯಾದ್ರಿಗೆ ಬಂದು ಒಂದು ಕದಂಬ ವೃಕ್ಷದ ಕೆಳಗೆ ಕ್ರೀಡಿಸುವಾಗ ಒಂದು ಗಂಡು ಶಿಶುವು ಹುಟ್ಟಿತೆಂದೂ ಅದರಿಂದ ವಂಶಕ್ಕೆ ಕದಂಬ ಎಂಬ ಹೆಸರು ಬಂದಿತೆಂದೂ ಒಂದು ಐತಿಹ್ಯವುಂಟು. ಈ ಕಥೆಗಳಲ್ಲಿ ಹೀಗೆ ವ್ಯತ್ಯಾಸಗಳಿರುವುದರಿಂದಲೂ ಇವೆಲ್ಲವೂ ಕದಂಬ ರಾಜ್ಯಸ್ಥಾಪನೆಯ ತರುವಾಯ ಬಹುಕಾಲವಾದ ಮೇಲೆ ಕಂಡುಬರುವುದರಿಂದಲೂ ಇವುಗಳಲ್ಲಿ ನಂಬಿಕೆಗರ್ಹವಾದ ವಿಷಯಗಳು ಇವೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ.

ವಾದುದರಿಂದ ಇವುಗಳಲ್ಲಿ ತಥ್ಯಾಂಶವು ಎಷ್ಟಿದೆಯೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಕದಂಬರ ಶಾಸನಗಳಲ್ಲಿ "ಪ್ರತಿಕೃತ ಸ್ವಾಧ್ಯಾಯ ಚರ್ಚಾಪಾರಾಣಾಂ" ಎಂದು ಇವರ ವರ್ಣನೆಯಿದೆ. "ಪ್ರತಿಕೃತಸ್ವಾಧ್ಯಾಯ ಚರ್ಚಾಪಾರ" ಎಂದರೆ ಶ್ರುತಿಗಳ ಅಧ್ಯಯನವನ್ನು ಕ್ರಮವಾಗಿ ಮಾಡುವುದರಲ್ಲಿ ಪರಿಣತರೆಂದರ್ಥ (ಪ್ರತಿ ಪ್ರತ್ಯೇಕಂ ಕೃತಾ ಅನುಷ್ಠಿತಾ ಯಾ ಸ್ವಾಧ್ಯಾಯಸ್ಯ ಚರ್ಚಾ ಉಕ್ತ್ಯನಂತರಂ ಉಕ್ತಿಃ ತಾಂ ಪಾರಯಂತಿ ಇತಿ).[1] ಇದರಿಂದಲೂ ಇವರು ಬ್ರಾಹ್ಮಣರೆಂದೇ ವ್ಯಕ್ತವಾಗುತ್ತದೆ.[2] ಐದನೆಯ ಶತಮಾನದ ತಾಳಗುಂದದ ಲಿಪಿಯಲ್ಲಿ ಕದಂಬರು ತಾಣಗುಂದೂರ ನಿವಾಸಿಗಳೆಂದು ಹೇಳಿರುವುದರಿಂದ ಇವರು ಕರ್ಣಾಟಕ ದೇಶದವರೇ ಎಂಬುದರಲ್ಲಿ ಸಂದೇಹವಿಲ್ಲ.

ಇದುವರೆಗೆ ಸಿಕ್ಕಿರುವ ಈ ವಂಶದ ಅರಸರ ಲಿಪಿಗಳೆಲ್ಲವೂ (ಪ್ರಾಕೃತ ಭಾಷೆಯಲ್ಲಿ ಬರೆದಿರುವ ಚಂದ್ರವಳ್ಳಿ ಮಳವಳ್ಳಿ ಶಾಸನಗಳನ್ನು ಬಿಟ್ಟು) ಸಂಸ್ಕೃತ ಭಾಷೆಯಲ್ಲಿಯೇ ಇರುತ್ತವೆ. ಇವು ಇವರ ಪ್ರಶಸ್ತಿಯನ್ನು ಈ ರೀತಿಯಾಗಿ ಕೊಡುತ್ತವೆ—"ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಾನಾಂ ಮಾನವ್ಯಸಗೋತ್ರಾಣಾಂ ಹಾರಿತೀಪುತ್ರಾಣಾಂ ಆಂಗಿರಸಾಂ ಪ್ರತಿಕೃತ ಸ್ವಾಧ್ಯಾಯ ಚರ್ಚಾಪಾರಾಣಾಂ ಸದ್ಧರ್ಮಸದಂಬಾನಾಂ ಕದಂಬಾನಾಂ" (ಸ್ವಾಮಿ ಮಹಾಸೇನ ಮತ್ತು ಮಾತೃಗಳನ್ನು ಧ್ಯಾನಮಾಡಿ ಅಭಿಷಿಕ್ತರಾದವರೂ ಮಾನವ್ಯಸಗೋತ್ರರೂ ಹಾರಿತೀ ಪುತ್ರರೂ ಶ್ರುತಿಗಳ ಅಧ್ಯಯನದಲ್ಲಿ ನಿರತರೂ ಸದ್ಧರ್ಮಾಚರಣೆಗೆ ತವರುಮನೆಯಂತೆ ಇದ್ದವರೂ ಆದ ಕದಂಬರು). ಇವರ ತಾಮ್ರಪಟ್ಟಿಕೆಗಳ ಮೊಹರುಗಳ ಮೇಲೆ ಸಿಂಹಲಾಂಛನವಿರುತ್ತದೆ.

ಪಲ್ಲವರಿಂದ ಕದಂಬರು ರಾಜ್ಯವನ್ನು ಸಂಪಾದಿಸಿದರೆಂದು ಮೇಲೆ ಹೇಳಿದ್ದೇವೆ. ಮೃಗೇಶವರ್ಮನ ಹಲಸಿ ಮತ್ತು ದೇವಗಿರಿ ತಾಮ್ರಶಾಸನಗಳಲ್ಲಿ[3] ಸಂವತ್ಸರಗಳು ಪೌಷ ಸಂವತ್ಸರವೆಂದೂ ವೈಶಾಖ ಸಂವತ್ಸರವೆಂದೂ ಚಾಂದ್ರಮಾನ

---

[1] *Ep. Ind.*, Vol. VIII, p 48, Note 4. ಕೀಲ್ಹಾರ್ನರು ಬೇರೆ ಅರ್ಥವನ್ನು ಕೊಟ್ಟಿದ್ದಾರೆ. "ಸ್ವಾಧ್ಯಾಯಚರ್ಚೆಯ ಬದಲು ದುಷ್ಟನಿಗ್ರಹ ಶಿಷ್ಟಪರಿಪಾಲನೆಯೇ ಮುಖ್ಯವೆಂದು ತಿಳಿದಿದ್ದವರು" ಎಂದು ಅದರ ತಾತ್ಪರ್ಯ (*Ep. Ind.*, Vol. VI, p. 15).

[2] ಕೆಲ ಪಂಡಿತರು ಇವರು ಬ್ರಾಹ್ಮಣರಲ್ಲವೆಂದು ಬರೆಯುತ್ತಾರೆ. ಆದರೆ ಇದು ಸರಿಯಲ್ಲ. 'ಅಹೋ ಬತ ಕ್ಷತ್ರಾತ್ಪರಿಪೇಲವಾ ವಿಪ್ರತಾ' ಎಂಬ ಮಯೂರಶರ್ಮನ ಉದ್ಗಾರದಿಂದ ಅವನು ವಿಪ್ರನೆಂದೇ ದೃಢವಾಗುತ್ತದೆ. ಶರ್ಮ ಎಂಬ ಉಪಪದವನ್ನು ಬ್ರಾಹ್ಮಣರಲ್ಲದೆ ಅನ್ಯರು ಧರಿಸಲಾರರೆಂಬುದನ್ನು ಜ್ಞಾಪಕದಲ್ಲಿಡಬೇಕು. (ಮನುಸ್ಮೃತಿ : ಅಧ್ಯಾಯ. ೨, ಶ್ಲೋಕ ೩೨)

[3] *Ind. Ant.*, Vols. VII, p. 35 and VI, p. 24.

ತಿಂಗಳುಗಳ ಹೆಸರಿನಿಂದ ಕರೆಯಲ್ಪಟ್ಟಿವೆ, ಮತ್ತು ತಿಂಗಳ ಪಕ್ಷಗಳನ್ನು ಹೇಳದೆ ವರ್ಷಋತು ಎಂಟನೆಯ ಪಕ್ಷ ಎಂದು ಮೊದಲಾಗಿ ಋತುಪಕ್ಷಗಳನ್ನು ಹೇಳಿದೆ. ಈ ರೀತಿ ಕಾಲಗಣನೆಮಾಡುವ ಪದ್ಧತಿಯು ಕ್ರಿ. ಶ. ೫ನೆಯ ಶತಮಾನದ ಮೊದಲಿನಲ್ಲಿದ್ದಿತೆಂದು ಬರ್ಜೆಸ್, ಸುಯೆಲ್ ಮೊದಲಾದ ಪಂಡಿತರು ಅಭಿಪ್ರಾಯಪಡುತ್ತಾರೆ.[1] ಆದುದರಿಂದ ಮೃಗೇಶವರ್ಮನೂ ಅವನ ಹಿಂದಿನ ಅರಸರೂ ೫ನೆಯ ಶತಮಾನ ಮತ್ತು ಅದಕ್ಕೆ ಹಿಂದೆ ಇದ್ದರೆಂದು ಹೇಳಬೇಕಾಗುತ್ತದೆ. ಮಳವಳ್ಳಿಯಲ್ಲಿರುವ ಕದಂಬರ ಪ್ರಾಕೃತ ಶಾಸನವು ಕ್ರಿ. ಶ. ೪ನೆಯ ಶತಮಾನದ ಪ್ರಾರಂಭದಲ್ಲಿ ಹುಟ್ಟಿರಬೇಕೆಂಬುದಕ್ಕೆ ಕಾರಣಗಳುಂಟು. ನಾಲ್ಕನೆಯ ಶತಮಾನದವರೆಗಿನ ಶಾಸನಗಳೆಲ್ಲವೂ ಪ್ರಾಕೃತ ಭಾಷೆಯಲ್ಲಿಯೇ ಇವೆ. ವ್ಯಾಕದೋನಿ ಮಳವಳ್ಳಿಗಳ ಸಾತವಾಹನರ ಲಿಪಿಗಳೂ ಮೈದುವೋಲು ಹಿರೇಹಡಗಲಿಗಳ ಪಲ್ಲವಶಾಸನಗಳೂ ಪ್ರಾಕೃತ ಭಾಷೆಯವು. ಅವು ಕ್ರಿ. ಶ. ೩ನೆಯ ಶತಮಾನ ೪ನೆಯ ಶತಮಾನಗಳ ಮಧ್ಯದಲ್ಲಿ ಹುಟ್ಟಿರಬೇಕೆಂದು ಹೊಸಕೋಟೆ ಕೃಷ್ಣಶಾಸ್ತ್ರಿಗಳು ಸಿದ್ಧಮಾಡಿದ್ದಾರೆ. ಹಿರೇಹಡಗಲಿಯ ಶಾಸನದ ಶಿವಸ್ಕಂದವರ್ಮನು ಸುಮಾರು ೪ನೆಯ ಶತಮಾನದ ಆದಿಯಲ್ಲಿ ಇದ್ದಿರಬೇಕೆಂದು ಅವರು ತೋರಿಸಿದ್ದಾರೆ.[2] ಈ ಶಾಸನದಿಂದ ಸಾತಾಹನಿರಟ್ಠವು ಅಂದರೆ ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗವು ಇವನ ವಶದಲ್ಲಿತ್ತೆಂದು ತಿಳಿಯುತ್ತದೆ. ಮಯೂರಶರ್ಮನು ಪಶ್ಚಿಮ ಸಮುದ್ರದಿಂದ ಶ್ರೀಶೈಲದವರೆಗಿದ್ದ ದೇಶವನ್ನು ಪಲ್ಲವರಿಂದ ತೆಗೆದುಕೊಂಡಾಗ ಈ ಭಾಗವು ಅವನ ಹಸ್ತಗತವಾಗಿರಬೇಕು. ಅಂದರೆ ೪ನೆಯ ಶತಮಾನದ ಪ್ರಾರಂಭದಲ್ಲಿ ಪಲ್ಲವರ ವಶದಲ್ಲಿದ್ದ ಬಳ್ಳಾರಿ ಜಿಲ್ಲೆಯ ಭಾಗವು ಅಲ್ಲಿಂದಾಚೆಗೆ ಕೆಲವು ವರ್ಷಗಳಲ್ಲಿ ಕದಂಬರ ಕೈವಶವಾಗಿರಬೇಕು. ಸುಮಾರು ಕ್ರಿ. ಶ. ೩೫೦ರಲ್ಲಿ ಕದಂಬರು ಪಲ್ಲವರಿಂದ ಅವರ ರಾಜ್ಯದ ಕೆಲಭಾಗಗಳನ್ನು ಕಿತ್ತುಕೊಂಡಿರಬಹುದೆಂದು ಈ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.[3] ಆದುದರಿಂದ ಕದಂಬರಾಜ್ಯಸ್ಥಾಪನೆಯ ಕಾಲವು ೪ನೆಯ ಶತಮಾನದ ಪ್ರಾರಂಭ ಅಥವಾ ಮಧ್ಯವೆಂದಂತಾಯಿತು. ಹರಿವರ್ಮನ ಸಂಗೊಳ್ಳಿ ತಾಮ್ರ ಶಾಸನವು ಅವನ ಆಳ್ವಿಕೆಯ ಎಂಟನೆಯ ವರ್ಷದ ಆಶ್ವಿನಮಾಸ ಅಮಾವಾಸ್ಯೆ ವಿಷುಪದ ದಿನ ಹುಟ್ಟಿದುದು. ಕದಂಬರ ರಾಜ್ಯವು ಕ್ರಿ. ಶ. ೬ನೆಯ ಶತಮಾನದಲ್ಲಿ ಚಾಳುಕ್ಯರ ಕೈಸೇರಿದುದರಿಂದ ಆ ಮನೆತನದ ಕಡೆಯ ಅರಸನಾದ ಹರಿವರ್ಮನು ೬ನೆಯ ಶತಮಾನದಲ್ಲಿದ್ದನೆನ್ನಬೇಕು. ಶಾಸನದಲ್ಲಿ ನಿರ್ದಿಷ್ಟವಾದ ಕಾಲಾಂಗಗಳು ಈ ೬ನೆಯ ಶತಮಾನದಲ್ಲಿ ೫೦೭, ೫೨೬, ೫೪೫

[1] R. Sewell: *The Siddhāntas and the Indian Calender.*

[2] *Ep. Ind.*, Vol. XV, pp. 247 and 248.

[3] *Ibid.*, p. 248.

ಈ ವರ್ಷಗಳಲ್ಲಿ ಕಲೆತಿದ್ದವು. ಇವುಗಳಲ್ಲಿ ಮೊದಲನೆಯದಾದ ೫೦೬ನೆಯ ಇಸವಿಯಲ್ಲಿ ಹರಿವರ್ಮನು ಇದ್ದಿರಲಾರನಾದುದರಿಂದ ಉಳಿದ ಎರಡು ವರ್ಷಗಳಲ್ಲಿ ೫೨೬ನೆಯ ಇಸವಿ ಸೆಪ್ಟೆಂಬರ್ ೨೨ ಮತ್ತು ೫೪೫ನೆಯ ಇಸವಿ ಸೆಪ್ಟೆಂಬರ್ ೨೧ ಈ ದಿವಸಗಳಲ್ಲಿ ಮಾತ್ರ ಈ ಅಂಗಗಳು ಕೂಡಿದ್ದವು. ಅಶ್ವಮೇಧಯಾಜಿ ಕೃಷ್ಣವರ್ಮನ ಅಂದರೆ ಕದಂಬ ೧ನೆಯ ಕೃಷ್ಣವರ್ಮನ ತಂಗಿಯನ್ನು ತಲಕಾಡಿನ ಗಂಗಮನೆತನದ ೩ನೆಯ ಮಾಧವನು ಮದುವೆಯಾದುದರಿಂದ ಕ್ರಿ. ಶ. ೪೮೦ರಿಂದ ೪೯೫ರ ವರೆಗೆ ಆಳಿದ[1] ಈ ಮಾಧವನೂ ಕೃಷ್ಣವರ್ಮನೂ ಸಮಕಾಲೀನರಾಗಿದ್ದಿರಬೇಕು. ಹರಿವರ್ಮನು ಕೃಷ್ಣವರ್ಮನಿಂದಾಚೆಗೆ ಮೂರನೆಯ ತಲೆಯವನು. ಒಂದು ತಲೆಗೆ ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯನ್ನು ಕೊಟ್ಟರೆ ಹರಿವರ್ಮನ ಎಂಟನೆಯ ವರ್ಷವು ಕ್ರಿ. ಶ. ೬ನೆಯ ಶತಮಾನದ ಮಧ್ಯದಲ್ಲಿ ಬೀಳುವುದು. ಅಂದರೆ ಮೇಲೆ ಹೇಳಿದ ಮೂರು ವರ್ಷಗಳಲ್ಲಿ ಕ್ರಿ. ಶ. ೫೪೫ ಅವನ ಎಂಟನೆಯ ವರ್ಷವೆಂದು ತಿಳಿಯುವುದು ಸಮಂಜಸ. ಆದುದರಿಂದ ಇವನು ಕ್ರಿ. ಶ. ೫೩೮ರಲ್ಲಿ ಪಟ್ಟಕ್ಕೆ ಬಂದಿರಬೇಕು. ಹರಿವರ್ಮನಿಂದ ಹಿಂದಕ್ಕೆ ಸರಾಸರಿ ತಲೆಗೆ ಇಪ್ಪತ್ತೈದು ವರ್ಷಗಳಂತೆ ಲೆಕ್ಕಹಾಕಿದರೆ ಕಾಕುಸ್ಥವರ್ಮನ ಕಾಲವು ಕ್ರಿ. ಶ. ೪೨೨–೪೪೭ ಎಂದು ನಿರ್ಣಯವಾಗುತ್ತದೆ.[2] ಈ ಕಾಕುಸ್ಥವರ್ಮನು ಯುವರಾಜನಾಗಿದ್ದಾಗ 'ಸ್ವವೈಜಯಿಕ' ಎಂಬತ್ತನೆಯ ವರ್ಷದಲ್ಲಿ ಹಲಸಿಯ ಶಾಸನವನ್ನು ಬರೆಸಿದ್ದಾನೆ. ಈ ಎಂಬತ್ತನೆಯ ವರ್ಷವು ಮಯೂರಶರ್ಮನು ಪಟ್ಟಕ್ಕೆ ಬಂದಂದಿನಿಂದ ಲೆಕ್ಕಮಾಡಿದ್ದಿರಬೇಕೆಂದು ಫ್ಲೀಟರ ಅಭಿಪ್ರಾಯ.[3] ಇದರಿಂದಲೂ ಕದಂಬ ರಾಜ್ಯಸ್ಥಾಪನೆಯು ಸುಮಾರು ಕ್ರಿ. ಶ. ೪ನೆಯ ಶತಮಾನದ ಮಧ್ಯದಲ್ಲಿ ಆಗಿರಬೇಕೆಂದು ಸ್ಪಷ್ಟವಾಗುತ್ತದೆ.

ಚಾಳುಕ್ಯ ೨ನೆಯ ಪುಲಕೇಶಿಯ ಐಹೊಳೆ ಶಾಸನದಲ್ಲಿ ಕೀರ್ತಿವರ್ಮನು 'ಕದಂಬಕದಂಬಕ' (ಕದಂಬರ ಸಮೂಹ)ವನ್ನು ಚದರಿಸಿದನೆಂದು ಹೇಳಿದೆ. ಇದರಿಂದ ಕದಂಬರ ಎರಡು ಮೂರು ಮನೆತನಗಳು ಒಂದೇ ಕಾಲದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಆಳುತ್ತಿದ್ದವೆಂದು ಗೊತ್ತಾಗುತ್ತದೆ. ಕದಂಬರ ಶಾಸನಗಳಿಂದಲೂ ಇದೇ ಅಭಿಪ್ರಾಯವು ದೃಢಪಡುತ್ತದೆ. ಶಾಂತಿವರ್ಮನ ತಮ್ಮನಾದ ೧ನೆಯ ಕೃಷ್ಣವರ್ಮನ ರಾಜಧಾನಿಯು ತ್ರಿಪರ್ವತವಾಗಿತ್ತೆಂದು ಯುವರಾಜ ದೇವವರ್ಮನ ದೇವಗಿರಿಯ ಶಾಸನದಲ್ಲಿ ಹೇಳಿದೆ.[4] ಮೃಗೇಶವರ್ಮ, ಮಾಂಧಾತೃವರ್ಮ, ರವಿವರ್ಮ,

---

[1] ಗಂಗರ ಪ್ರಕರಣವನ್ನು ನೋಡಿ. [2] ಮುಂದೆ ೧೩೧–೩೨ನೆಯ ಪುಟಗಳನ್ನು ನೋಡಿ.

[3] *Dynasties of the Kanarese Districts*, p. 291.

[4] *Ind. Ant.*, Vol. VII, pp. 33 ff.

ಹರಿವರ್ಮರಾಜರ ರಾಜಧಾನಿಗಳು ವೈಜಯಂತೀ (ಬನವಾಸಿ), ಪಲಾಸಿಕಾ (ಹಲಸಿಗೆ), ಉಚ್ಚಶೃಂಗಿ (ಉಚ್ಚಂಗಿ ದುರ್ಗ) ಗಳಾಗಿದ್ದವು.[1] ಶಾಂತಿವರ್ಮನ ಸಂತತಿಯ ಅರಸರು ತಮ್ಮ ಶಾಸನಗಳಲ್ಲಿ ಕೃಷ್ಣವರ್ಮನ ಸಂತತಿಯ ರಾಜರ ಹೆಸರನ್ನು ಹೇಳುವುದಿಲ್ಲ.[2] ಇದೇ ರೀತಿಯಾಗಿ ಕೃಷ್ಣವರ್ಮನ ಸಂತತಿಯವರ ಲಿಪಿಗಳಲ್ಲಿ ಅವರ ಪಿತೃಪಿತಾಮಹಾದಿಗಳ ಹೆಸರುಗಳು ಮಾತ್ರ ಉಕ್ತವಾಗಿವೆ.[3] ಬೆಣ್ಣೂರು ತಾಮ್ರಶಾಸನವು ೨ನೆಯ ಕೃಷ್ಣವರ್ಮನು ಕದಂಬರ ಐದನೆಯ ಅರಸನೆಂದು ಹೇಳುತ್ತದೆ. ೧ನೆಯ ಕೃಷ್ಣವರ್ಮನಿಂದ ಎಣಿಸಿದರೆ ಈ ಸಂತತಿಯ ಅರಸರಲ್ಲಿ ೨ನೆಯ ಕೃಷ್ಣವರ್ಮನು ಐದನೆಯವನಾಗುತ್ತಾನೆ. ಇದರಿಂದ ಶಾಂತಿವರ್ಮನ ಸಂತತಿಯ ರಾಜರನ್ನು ಗಣನೆಗೆ ತೆಗೆದುಕೊಂಡಿಲ್ಲವೆಂಬುದು ಸ್ಪಷ್ಟವಾಗುತ್ತದೆ.[4] ಈ ಮೇಲಿನ ಕಾರಣಗಳಿಂದ ಕಾಕುಸ್ಥವರ್ಮನನಂತರ ಶಾಂತಿವರ್ಮ ಕೃಷ್ಣವರ್ಮರು ಕದಂಬ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸ್ವತಂತ್ರರಾಗಿ ಆಳತೊಡಗಿದರೆಂದು ಹೇಳಬೇಕಾಗುತ್ತದೆ. ಶಿವಮೊಗ್ಗೆಯ ತಾಮ್ರಶಾಸನದಲ್ಲಿ ಕುಮಾರವರ್ಮ ಮಹಾರಾಜನ ಮಗನಾದ ಮಾಂಧಾತರಾಜನು ತನ್ನ ರಾಜಧಾನಿಯಾದ ಉಚ್ಛೃಂಗಿ (ಉಚ್ಚಂಗಿ ದುರ್ಗ)ಯಲ್ಲಿದ್ದಾಗ ಆತ್ರೇಯ ಗೋತ್ರದ ತ್ರಿಯಂಬಕಸ್ವಾಮಿ ಎಂಬ ಬ್ರಾಹ್ಮಣನಿಗೆ ಕೊಗ್ಗಿ, ಪಾಲ್ಗಟಿನಿ ಗ್ರಾಮಗಳಲ್ಲಿ ಭೂದಾನಮಾಡಿದನೆಂದು ಹೇಳಿದೆ.[5] ಮೇಲಿನ ಎರಡು ಕದಂಬ ಸಂತತಿಗಳಿಗೂ ಕುಮಾರವರ್ಮನಿಗೂ ಯಾವ ವಿಧವಾದ ಸಂಬಂಧವಿತ್ತೆಂಬುದು ತಿಳಿದಿಲ್ಲ. ಈ ಮಾಂಧಾತ ರಾಜನು ಕುಮಾರವರ್ಮನ ಮಗನಾದ ಕಾರಣ ಶಾಂತಿವರ್ಮನ ಮಗನಾದ ವಿಜಯ ಶಿವಮಾಂಧಾತೃವರ್ಮನಿಂದ ಭಿನ್ನನಾಗಿರಬೇಕೆಂದು ಕೀಲ್ಹಾರ್ನರು ಅಭಿಪ್ರಾಯಪಟ್ಟಿದ್ದಾರೆ.[6] ಇದೊಂದು ಬೇರೆ ಸಂತತಿಯಾಗಿದ್ದರೆ ಕದಂಬರಲ್ಲಿ ಮೂರು ಬೇರೆ ಬೇರೆ ಶಾಖೆಗಳಿದ್ದವೆಂದು ಹೇಳಬೇಕಾಗುತ್ತದೆ.[7]

---

[1] *Ibid.*, p. 35; *Ep. Ind.*, Vol. VI, p. 14; *Ibid.*, Vol. VIII, p. 146; *Ind. Ant.*, Vol. VI, p. 29; Ibid, pp. 30 and 31.

[2] *Ibid.*, p. 25; *Ep. Ind.*, Vol. XIV, p. 163.

[3] *Ep. Ind.*, Vol. VI, p. 18; *Ep. Carn.*, Vol. V, p. 827.


[4] ಫ್ಲೀಟರು 'ಪಂಚಮೋಲೋಕಪಾಲಃ' ಎಂಬ ಪದಗಳನ್ನು ಐದನೆಯ ದಿಕ್ಪಾಲಕನೆಂದು ಅರ್ಥಮಾಡಬೇಕೆಂದೂ ಇದರಿಂದ ಇವನು ಪ್ರಸಿದ್ಧನಾದ ರಾಜನೆಂದು ಹೇಳಬಹುದೇ ವಿನಾ ಈ ಮನೆತನದ ಅರಸರಲ್ಲಿ ಐದನೆಯವನೆಂದು ತಿಳಿಯುವುದು ಯುಕ್ತವಲ್ಲವೆಂದೂ ಹೇಳಿದ್ದಾರೆ (*J.R.A.S.*, 1905, p. 291).

[5] *Mysore Archæological Report*, 1911, p. 31.

[6] ಮುಂದೆ ನೋಡಿರಿ.

[7] ಮೋರೇಸರ 'ಕದಂಬ ಕುಲ'ದಲ್ಲಿ ಕದಂಬರ ವಂಶಾವಳಿಯು ಹೀಗೆ ಕೊಡಲ್ಪಟ್ಟಿದೆ:—

ಕದಂಬ ಅರಸರಲ್ಲಿ ಯಾರು ಯಾರು ಎಷ್ಟುಕಾಲ ಆಳಿದರೆಂದು ನಿರ್ಧಾರವಾಗಿ ತಿಳಿದಿಲ್ಲ. ಅವರ ಶಾಸನಗಳಲ್ಲಿ ಶಕಸಂವತ್ಸರಗಳ ನಿರ್ದೇಶವಿಲ್ಲ. ಆದರೆ ರಾಜ್ಯಾಡಳಿತೆಯ ವರ್ಷಗಳು ನಿರೂಪಿಸಲ್ಪಟ್ಟಿವೆ. ಇವುಗಳನ್ನೂ ಹರಿವರ್ಮನು ಪಟ್ಟಕ್ಕೆ ಬಂದ ಕಾಲ ವನ್ನೂ ಆಧಾರವಾಗಿಟ್ಟುಕೊಂಡು ಈ ಮನೆತನದ ಅರಸರ ಕಾಲನಿರ್ಣಯವನ್ನು



ಈ ವಂಶವೃಕ್ಷವನ್ನು ಸಮರ್ಥಿಸುವುದಕ್ಕೆ ಗ್ರಂಥಕರ್ತರು ಈ ರೀತಿ ವಾದಿಸಿದ್ದಾರೆ:—ಮೃಗೇಶನು ಸ್ವಲ್ಪಕಾಲ ರಾಜ್ಯವಾಳಿದನು. ಅವನು ಸಾಯುವಾಗ ರವಿವರ್ಮನು ಅಲ್ಪವಯಸ್ಕನಾಗಿರಬೇಕು. ಇದನ್ನು ಸಾಧಿಸಿ ಕುಮಾರವರ್ಮನು (ಇವನು ಉಚ್ಚಶೃಂಗಿಯಲ್ಲಿ ರಾಜನಾಗಿದ್ದನು) ವೈಜಯಂತೀ ರಾಜ್ಯವನ್ನಾಕ್ರಮಿಸಿದನು. ಅವನ ಮಗನಾದ ಮಾಂಧಾತನು ವೈಜಯಂತಿಯಲ್ಲಿದ್ದು ಕೂಡಗೇರಿ ಶಾಸನವನ್ನು ಕೊಟ್ಟನು. ರವಿವರ್ಮನು ವಯಸ್ಸಿಗೆ ಬಂದಮೇಲೆ ಮಾಂಧಾತನನ್ನು ಕೊಂದು ತನ್ನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಇತ್ತ ೧ನೆಯ ಕೃಷ್ಣವರ್ಮನು ತ್ರಿಪರ್ವತದಲ್ಲಿ ಸ್ವತಂತ್ರ ನಾಗಿ ಶಾಂತಿವರ್ಮನ ಮರಣಾನಂತರ ಆಳತೊಡಗಿದನು. ಇವನನ್ನು ನಣಕ್ಕಾಸಪಲ್ಲವನು ಸೋಲಿಸಿ ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡಿದ್ದನು. ಕೃಷ್ಣವರ್ಮನ ಮರಣಾನಂತರದಲ್ಲಿ ನಣಕ್ಕಾಸ ಪಲ್ಲವನ ಮಗನಾದ ಶಾಂತಿವರನು ವಿಷ್ಣುವರ್ಮನಿಗೆ ರಾಜ್ಯಾಭಿಷೇಕವನ್ನು ಮಾಡಿದನು. ವಿಷ್ಣು ವರ್ಮನು ಮೃಗೇಶನ ಕಾಲದಲ್ಲಿ ವೈಜಯಂತೀ ರಾಜ್ಯಕ್ಕಧಿಪತಿಯಾಗಲು ಹವಣಿಸುತ್ತಿದ್ದನು. ಆದರೆ ಆಗ ಅವನ ಮನೋರಥವು ಈಡೇರಲಿಲ್ಲ. ಮುಂದೆ ರವಿವರ್ಮನು ರಾಜನಾದ ಮೇಲೆ ಆ ಸಮಯ ದಲ್ಲಿ ಪಲ್ಲವರಾಜನಾಗಿದ್ದ ಶಾಂತಿವರನ ಮಗ ಚಂಡದಂಡನ ಸಹಾಯದಿಂದ ವಿಷ್ಣುವರ್ಮನು

ಮಾಡುತ್ತೇವೆ. ಹರಿವರ್ಮನು ಕ್ರಿ. ಶ. ೫೩೮ರಲ್ಲಿ ಸಿಂಹಾಸನಾರೂಢನಾದನೆಂದು ಮೇಲೆಯೇ ಹೇಳಿದ್ದೇವೆ. ಇವನ ತಂದೆಯಾದ ರವಿವರ್ಮನ ಸಿರಸಿ ತಾಮ್ರಶಾಸನವು ಅವನ ಆಳಿಕೆಯ ಮೂವತ್ತೈದನೆಯ ವರ್ಷದ್ದು.[8] ಇದೇ ಅವನ ಕೊನೆಯ ವರ್ಷವಾಗಿದ್ದರೆ ರವಿವರ್ಮನು ಕ್ರಿ. ಶ. ೫೦೩ರಿಂದ ೫೩೮ರ ವರೆಗೆ ಆಳಿರಬೇಕು. ಇವನ ಚಿಕ್ಕಪ್ಪನಾದ[9] ಶಿವಮಾಂಧಾತರಾಜನ ಎರಡನೆಯ ವರ್ಷದ ಶಾಸನವು ದೊರೆತಿದೆ.

ವೈಜಂತಿಯ ಅರಸನ ಮೇಲೆ ದಂಡೆತ್ತಿಹೋದನು. ಶೂರನಾದ ರವಿವರ್ಮನು ವಿಷ್ಣುವರ್ಮನನ್ನು ಕೊಂದು ಚಂಡದಂಡನನ್ನು ಸೋಲಿಸಿ ತ್ರಿಪರ್ವತ ರಾಜ್ಯವನ್ನಾಕ್ರಮಿಸಿದನು. ಇವನ ಕಾಲದಲ್ಲಿ ಕದಂಬರಾಜ್ಯದ ಮೂರು ಭಾಗಗಳು ಇವನ ಆಳ್ವಿಕೆಗೆ ಒಳಪಟ್ಟಿದ್ದವು. ಸಿಂಹವರ್ಮನು ಮಾಂಡಲಿಕನಾಗಿ ಆಳುತ್ತಿದ್ದಿರಬೇಕು. ಸ್ವತಂತ್ರನಾಗಿದ್ದರೂ ಎಲ್ಲಿಯೋ ಮೂಲೆಯಲ್ಲಿದ್ದಿರಬೇಕು. ರವಿವರ್ಮನ ಮಗನಾದ ಹರಿವರ್ಮನಿಗೆ ಸಂತಾನವಿಲ್ಲದುದರಿಂದ ೨ನೆಯ ಕೃಷ್ಣವರ್ಮನು ಇಡೀ ರಾಜ್ಯವನ್ನಾಕ್ರಮಿಸಿದನು. ಅಥವಾ ಸುಮಾರು ೫೪೭ರಲ್ಲಿ ಕೃಷ್ಣವರ್ಮನು ರವಿವರ್ಮನನ್ನು ಸೋಲಿಸಿ ವೈಜಂತಿಯನ್ನು ಆಕ್ರಮಿಸಿಕೊಂಡಿರಬೇಕು.

ಆದರೆ ಈ ಊಹೆಯು ಸಮಂಜಸವಾಗಿಲ್ಲ. ಇದರಲ್ಲಿ ಕಲ್ಪಿತಸಂಬಂಧಗಳೂ ಆಧಾರವಿಲ್ಲದೆ ಅಂಗೀಕೃತವಾದ ವಿಷಯಗಳೂ ಅನೇಕವಾಗಿವೆ. ಮಾಂಧಾತರಾಜನ ತಂದೆಯಾದ ಕುಮಾರವರ್ಮನು ಕಾಕುಸ್ಥನ ಮಗನೆಂದು ತಿಳಿಯಲು ಬಲವಾದ ಪ್ರಮಾಣಗಳಿಲ್ಲ. ರವಿವರ್ಮನು ಅಲ್ಪ ವಯಸ್ಕನಾಗಿದ್ದಾಗ ಕುಮಾರನು ಅವನ ರಾಜ್ಯವನ್ನಾಕ್ರಮಿಸಿದನೆಂದು ತಿಳಿಯುವುದು ಕೇವಲ ಊಹೆ. ರವಿವರ್ಮನ ತಾಯಿ ಕೈಕೇಯವಂಶದ ರಾಜಕುಮಾರಿ. ವಿಷ್ಣುವರ್ಮನ ತಾಯಿಯೂ ಕೈಕೇಯ ವಂಶದವಳೇ. ಬಲವಾದ ಪ್ರಮಾಣಗಳಿಲ್ಲದೆ ರವಿವರ್ಮನು ವಿಷ್ಣುವರ್ಮನನ್ನು ಕೊಂದನೆಂದು ತಿಳಿಯುವುದು ಯುಕ್ತವಲ್ಲ. ವಿಷ್ಣುವರ್ಮನೂ ಪಲ್ಲವ ಚಂಡದಂಡನೂ ಕೂಡಿಕೊಂಡು ರವಿವರ್ಮನ ಮೇಲೆ ಯುದ್ಧವನ್ನು ಹೂಡಿದರೆಂದು ಹಲಸಿ ಶಾಸನದಲ್ಲಿ ಹೇಳಿಲ್ಲ. ನಣಕ್ಕಾಸಪಲ್ಲವನೂ ಶಾಂತಿವರ ಚಂಡದಂಡರೂ ತಂದೆ ಮಕ್ಕಳೆಂದು ಎಲ್ಲಿಯೂ ಉಕ್ತವಾಗಿಲ್ಲ. ರವಿವರ್ಮನು ಉಚ್ಚಶೃಂಗಿ ತ್ರಿಪರ್ವತಗಳ ರಾಜ್ಯಗಳನ್ನು ಆಕ್ರಮಿಸಿಕೊಂಡಾಗ ಸಿಂಹವರ್ಮನೂ ಅವನ ಮಗ ೨ನೆಯ ಕೃಷ್ಣವರ್ಮನೂ (ಕ್ರಿ. ಶ. ೫೪೦—೪೭ರ ವರೆಗೆ) ಎಲ್ಲಿ ಯಾವ ಅಧಿಕಾರದಿಂದ ಆಳುತ್ತಿದ್ದರು? ಶಾಸನಗಳಲ್ಲೆಲ್ಲ ಅವರು ಸ್ವತಂತ್ರರಾಜರಂತೆ ವರ್ಣಿತರಾಗಿದ್ದಾರೆ. ಮೃಗೇಶನ ತರುವಾಯ ಕದಂಬ ಮನೆತನದ ಮೂರು ಶಾಖೆಗಳಲ್ಲಿ ಪರಸ್ಪರ ಭ್ರಾತೃ ಕಲಹವೂ ಅರಸೊತ್ತಿಗೆಗಾಗಿ ಕೊಲೆಗಳೂ ನಡೆದಿದ್ದವೆಂದು ಕಲ್ಪಿಸುವುದು ಇತಿಹಾಸ ರಚನೆಯಲ್ಲಿ ಯುಕ್ತವಲ್ಲ.

[8] *Ep. Ind.*, Vol. XVI, pp. 264 ff.

[9] " ವಿಜಯಶಿವಮಾಂಧಾತರಾಜನ ಕೂಡಗೇರಿ ಶಾಸನದ ಅಕ್ಷರಗಳು ದಕ್ಷಿಣ ದೇಶದ ಲಿಪಿಯ ಜಾತಿಗೆ ಸೇರಿದವು. ಪೆಟ್ಟಿಗೆಯ ಆಕೃತಿಯ ತಲೆಕಟ್ಟುಳ್ಳವು (Box-headed). ಅವು ಸಾಧಾರಣವಾಗಿ ಕದಂಬ ಶಾಸನಗಳಲ್ಲಿ ಮಹಾರಾಜ ಮೃಗೇಶವರ್ಮನ ಹಲಸಿ ಮತ್ತು ನಾಲ್ಕನೆಯ ವರ್ಷದ ದೇವಗೇರಿ ಶಾಸನಗಳ ಲಿಪಿಗಳನ್ನು ಹೋಲುತ್ತವೆ " ಎಂದು ಅದನ್ನು ಪ್ರಸಿದ್ಧಿಸಿದ ಕೀಲ್ಹಾರ್ನ್‌ರು ಅಭಿಪ್ರಾಯಪಟ್ಟಿದ್ದಾರೆ (*Ep. Ind.*, Vol. VI, p. 13). ಇವನ ಹೆಸರಿಗೆ ' ವಿಜಯಶಿವ ' ಎಂಬ ಉಪಪದಗಳು

ಇವನು ತನ್ನ ಅಣ್ಣನಾದ ಮೃಗೇಶವರ್ಮನನಂತರ ಆಳಿದುದರಿಂದ ಇವನ ಆಳಿಕೆಯು ಸ್ವಲ್ಪಕಾಲ ಎಂದರೆ ಸುಮಾರು ಐದು ಆರು ವರ್ಷಗಳು ನಡೆಯಿತೆಂದು ತಿಳಿಯಬಹುದು. ನಿರ್ಣಾಯಕ ಅಂಶಗಳಿಲ್ಲದಿರುವಾಗ ಸಾಮಾನ್ಯವಾಗಿ ಒಂದು ಆಳಿಕೆಗೆ ಇಪ್ಪತ್ತೈದು ವರ್ಷಗಳ ಕಾಲವನ್ನು ಕೊಡುವ ಸಂಪ್ರದಾಯವುಂಟು. ಅದರಂತೆ ಮೃಗೇಶವರ್ಮನು ಇಪ್ಪತ್ತೈದು ವರ್ಷಗಳು ರಾಜ್ಯಭಾರಮಾಡಿದನೆಂದು ತಿಳಿದರೆ ಶಿವಮಾಂಧಾತನು ಕ್ರಿ. ಶ. ೪೯೭ರಿಂದ ೫೦೩ರ ವರೆಗೂ ಮೃಗೇಶನು ೪೭೨ರಿಂದ ೪೯೭ರ ವರೆಗೂ ಆಳಿದರೆಂದು ಹೇಳಬಹುದು. ಈ ಗಣನೆಯಂತೆ ಮೃಗೇಶವರ್ಮನ ತಂದೆಯಾದ ಶಾಂತಿವರ್ಮನ ಆಳಿಕೆಯ ಕಾಲವು ೪೪೭–೪೭೨ ಆಗುತ್ತದೆ.

ವಿಷ್ಣುಗೋಪನ ಮಗನಾದ ಮಾಧವನಿಗೆ ೧ನೆಯ ಕೃಷ್ಣವರ್ಮನ ತಂಗಿಯನ್ನು ಕೊಟ್ಟು ಮದುವೆಮಾಡಿದ್ದರೆಂದು ಗಂಗರ ಶಾಸನಗಳು ಹೇಳುತ್ತವೆ. ಈ ಮಾಧವನ ದೊಡ್ಡಪ್ಪನಾದ ಪೆನುಗೊಂಡೆಯ ಶಾಸನದ ಆಯ್ಯವಮ್ಮನ ಮಗ ಮಾಧವನು ಕ್ರಿ. ಶ. ೪೬೦–೪೭೫ರಲ್ಲಿ ಆಳುತ್ತಿದ್ದನೆಂದು ಗೊತ್ತಾಗಿದೆ.[10] ವಿಷ್ಣುಗೋಪನ ಆಳಿಕೆಯು ಐದೇ ವರ್ಷಗಳೆಂದು ತಿಳಿದು ಅವನ ಮಗನೂ ಕದಂಬ ೧ನೆಯ ಕೃಷ್ಣವರ್ಮನ[11] ಭಾವಮೈದುನನೂ ಆದ ಮಾಧವನು ಕ್ರಿ. ಶ. ೪೮೦ರಿಂದ ೪೯೫ರ ವರೆಗೆ ಆಳಿದನೆನ್ನುವುದಕ್ಕೆ ಕಾರಣಗಳಿರುತ್ತವೆ.[12] ಆದುದರಿಂದ ಇವನ ಸಮಕಾಲೀನನಾದ ಕೃಷ್ಣವರ್ಮನು ಸುಮಾರು ಕ್ರಿ. ಶ. ೪೭೦–೪೯೫ರಲ್ಲಿ ತ್ರಿಪರ್ವತದಲ್ಲಿ ರಾಜ್ಯಭಾರಮಾಡುತ್ತಿದ್ದಿರಬೇಕು. ಹೀಗೆ ಗಣನೆಮಾಡಿದರೂ ಕೂಡ ಇವನ ಅಣ್ಣನಾದ ಶಾಂತಿವರ್ಮನಿಗೆ ನಾವು ಕೊಟ್ಟಿರುವ ಕಾಲವು ಸರಿಯಾಗುತ್ತದೆ. ಶಾಂತಿವರ್ಮನ ಹಿಂದೆ ಕಾಕುಸ್ಥವರ್ಮ, ರಘು, ಭಗೀರಥ, ಕಂಗವರ್ಮ, ಮಯೂರಶರ್ಮ ರಾಜರು ಆಳಿದರು. ಅಣ್ಣತಮ್ಮಂದಿರಾದ ರಘು ಕಾಕುಸ್ಥವರ್ಮರಿಬ್ಬರೂ ರಾಜ್ಯಭಾರ

ಜೋಡಿಸಲ್ಪಟ್ಟಿರುವುದರಿಂದಲೂ ಮಹಾರಾಜನಾಗಿ ತನ್ನ ಆಳಿಕೆಯ ಸಂವತ್ಸರಗಳನ್ನು ಗಣಿಸಿರುವುದರಿಂದಲೂ ಇವನು ರಾಜಮನೆತನದವನಾಗಿದ್ದಿರಬೇಕು. ಮತ್ತು ಮೃಗೇಶವರ್ಮ ರವಿವರ್ಮರ ಆಳಿಕೆಗಳ ಮಧ್ಯದಲ್ಲಿ ರಾಜ್ಯ ಸೂತ್ರಗಳನ್ನು ವಹಿಸಿರಬೇಕು. ಆದುದರಿಂದ ವಂಶಾವಳಿಯಲ್ಲಿ ಈ ಮಾಂಧಾತ ರಾಜನನ್ನು ಮೃಗೇಶವರ್ಮನ ತಮ್ಮನೆಂದು ಗ್ರಹಿಸಿದ್ದೇವೆ.


10 ಗಂಗರ ಪ್ರಕರಣದಲ್ಲಿ ನೋಡಿರಿ.

11 ಡುಬ್ರಾಯಿಲರು ಈ ಕೃಷ್ಣವರ್ಮನು ೨ನೆಯ ಕೃಷ್ಣವರ್ಮನೆಂದು ಹೇಳುತ್ತಾರೆ. ಇದು ತಪ್ಪು. ಈ ವಿಷಯದ ಮೇಲಿನ ಚರ್ಚೆಯನ್ನು ಈ ಪ್ರಕರಣದ ಮುಂದಿನ ಭಾಗದಲ್ಲಿಯೂ ಗಂಗರ ಪ್ರಕರಣದಲ್ಲಿಯೂ ನೋಡಿರಿ.

12 ಗಂಗರಾಜರ ಆಳಿಕೆಯ ಕಾಲನಿರ್ಣಯವನ್ನು ಮುಂದೆ ಗಂಗರ ಪ್ರಕರಣದಲ್ಲಿ ನೋಡಿರಿ.

ಮಾಡಿರುವುದರಿಂದ ಅವರಲ್ಲೊಬ್ಬರಿಗೆ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆ ಅಂದರೆ ಸುಮಾರು ಹದಿನೈದು ವರ್ಷಗಳ ಆಳಿಕೆಯನ್ನೂ ಉಳಿದವರೆಲ್ಲರಿಗೂ ವಾಡಿಕೆಯಂತೆ ಇಪ್ಪತ್ತೈದು ವರ್ಷಗಳನ್ನೂ ಕೊಡಬಹುದು. ಈ ಲೆಕ್ಕದಿಂದ ರಾಜ್ಯಸ್ಥಾಪಕನಾದ ಮಯೂರಶರ್ಮನ ಆಳಿಕೆಯ ಕೊನೆಯ ವರ್ಷವು ಕ್ರಿ. ಶ. ೩೫೭ ಆಗುತ್ತದೆ. ೧ನೆಯ ಕೃಷ್ಣವರ್ಮನ ಕಾಲವು ಸುಮಾರು ೪೭೦–೪೯೫ ಆಗಿರಬೇಕೆಂದು ಮೇಲೆ ಹೇಳಿದೆ. ಇವನ ಸಂತತಿಯವರ ಕಾಲಗಣನೆಯನ್ನು ಇದೇ ಪ್ರಕಾರ ಅಂದರೆ ತಲೆಗೆ ಇಪ್ಪತ್ತೈದು ವರ್ಷಗಳಂತೆ ಮಾಡಿದರೆ ೨ನೆಯ ಕೃಷ್ಣವರ್ಮನು ಕ್ರಿ. ಶ. ೫೪೫ರಲ್ಲಿ ಪಟ್ಟಕ್ಕೆ ಬಂದನೆಂದೂ ಇವನು ಹರಿವರ್ಮನ ಸಮಕಾಲೀನನೆಂದೂ ಹೇಳಬಹುದು. ೧ನೆಯ ಕೃಷ್ಣವರ್ಮನು ಗಂಗ ೩ನೆಯ ಮಾಧವನ ಸಮಕಾಲೀನನಾದುದರಿಂದ ಶಾಂತಿವರ್ಮನೂ ಇವನೂ ಒಂದೇ ಕಾಲದಲ್ಲಿ ಪ್ರತ್ಯೇಕವಾಗಿ ಆಳುತ್ತಿದ್ದರೆಂದು ಹಿಂದೆಯೇ ತೋರಿಸಿದ್ದೇವೆ. ಹರಿವರ್ಮ ಶಾಂತಿವರ್ಮರ ನಡುವೆಯೂ ೨ನೆಯ ಕೃಷ್ಣವರ್ಮ ೧ನೆಯ ಕೃಷ್ಣವರ್ಮರ ನಡುವೆಯೂ ಮೂರು ತಲೆಗಳ ಅಂತರವಿರುವುದರಿಂದಲೂ ಶಾಂತಿವರ್ಮ ೧ನೆಯ ಕೃಷ್ಣವರ್ಮರು ಒಂದೇ ಕಾಲದಲ್ಲಿ ಆಳುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಚಾಲುಕ್ಯ ೧ನೆಯ ಕೀರ್ತಿವರ್ಮನು ಸೋಲಿಸಿದ ಕದಂಬರಾಜ ಮನೆತನಗಳು ಇವರಿಬ್ಬರವೇ ಆಗಿರಬೇಕು. ಕದಂಬರಾಜರ ಪೌರ್ವಾಪರ್ಯ (Order of Succession) ಆಳಿಕೆಯ ಕಾಲಗಳನ್ನು ತೋರಿಸುವ ವಂಶವೃಕ್ಷವನ್ನು ವಾಚಕರ ಸೌಕರ್ಯಕ್ಕಾಗಿ ಕೊಟ್ಟಿದೆ—

ಕದಂಬರ ವಂಶವೃಕ್ಷ



ಕದಂಬರ ಮೂಲಪುರುಷನಾದ ಮಯೂರಶರ್ಮನ ಶಾಸನವು ಒಂದೇ ಒಂದು ಈಚೆಗೆ ಮೈಸೂರು ಪ್ರಾಕ್ತನ ವಿಮರ್ಶನ ಶಾಖೆಯ ಅಧಿಕಾರಿಗಳಾದ ಡಾ|| ಎಂ. ಎಚ್. ಕೃಷ್ಣರವರಿಂದ ಕಂಡುಹಿಡಿಯಲ್ಪಟ್ಟಿದೆ. ಮೈಸೂರು ಸಂಸ್ಥಾನದ ಚಿತ್ರಕಲ್ ದುರ್ಗದ ಪಶ್ಚಿಮಕ್ಕೆ ಹುಲೆಗೊಂದಿಯೆಂಬ ಕಂದಕವುಂಟು. ಇಲ್ಲಿ ಹಿಂದಕ್ಕೆ ಚಂದ್ರವಳ್ಳಿಯೆಂಬ ಪಟ್ಟಣವಿತ್ತೆಂದು ದಂತಕತೆಗಳನ್ನು ಹೇಳುತ್ತಾರೆ. ಇದರ ದಕ್ಷಿಣ ದಿಕ್ಕಿನಲ್ಲಿರುವ ಒಂದು ಬಂಡೆಗಲ್ಲಿನ ಮೇಲೆ ಈ ಪ್ರಸಿದ್ಧವಾದ ಶಾಸನವು ಕೊರೆಯಲ್ಪಟ್ಟಿದೆ. ಇದರಲ್ಲಿ "ತ್ರೈಕೂಟ, ಆಭೀರ, ಪಲ್ಲವ, ಪಾರಿಯಾತ್ರಕ, ಸಕಸ್ಥಾನ, ಸಯಿಂದಕ, ಪುನ್ನಾಟ, ಮೊಕರಿ ರಾಜರನ್ನು ಸೋಲಿಸಿದ (?) ಕದಂಬವಂಶದ

ಮಯೂರಶರ್ಮನು (ಈ) ತಡಾಗವನ್ನು ಕಟ್ಟಿಸಿದನೆಂದು ಬರೆದಿದೆ.[1] ಈ ಶಾಸನದ ಭಾಷೆಯು ಪ್ರಾಕೃತ; ಲಿಪಿಯು ೩–೪ನೆಯ ಶತಮಾನದ್ದು. ಮಳವಳ್ಳಿಯ ಕದಂಬ ಪ್ರಾಕೃತ ಶಾಸನವೂ ಇವನದೇ ಆಗಿರಬೇಕೆಂದು ಡುಬ್ರಾಯಿಲರು ಬರೆದಿದ್ದಾರೆ. ಆದರೆ ಇದರಲ್ಲಿ 'ಉಕ್ತಂ ಖಂಧೋ' ಎಂದು ಹೇಳಿ ತದನಂತರ 'ಕದಂಬರು ಬ್ರಹ್ಮದೇಯಗಳನ್ನು ಕೊಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದರೆಂಬ' ಅರ್ಥದ ಪ್ರಾಕೃತ ಶ್ಲೋಕವು ಕೊಡಲ್ಪಟ್ಟಿದೆ. ಈ ಶ್ಲೋಕವು ಈ ಶಾಸನದ ಕಾಲಕ್ಕೆ ಮೊದಲೇ ಕದಂಬರು ಬಹಳವಾಗಿ ಬ್ರಹ್ಮದೇಯಗಳನ್ನು ಕೊಟ್ಟಿದ್ದರೆಂಬುದನ್ನು ಸೂಚಿಸುತ್ತದೆ. ಆದುದರಿಂದ ಕದಂಬ ರಾಜ್ಯಸ್ಥಾಪಕನಾದ ಮಯೂರಶರ್ಮನ ವಂಶಜರಲ್ಲಿ ಪ್ರಾಕೃತ ಶಾಸನಗಳ ಕಾಲದಲ್ಲಿದ್ದ ಒಬ್ಬ ರಾಜನು ಈ ಶಾಸನವನ್ನು ಬರೆಸಿದನೆಂದು ಹೇಳಬೇಕಾಗುತ್ತದೆ. ಅದರಲ್ಲಿ ವೈಜಯಂತೀಪತಿಯೂ ಪ್ರತಿಕೃತ ಸ್ವಾಧ್ಯಾಯ ಚರ್ಚಾಪಾರನೂ ಆದ ಒಬ್ಬ ಕದಂಬರಾಜನು ದಾನಮಾಡಿದಂತೆ ಹೇಳಿದೆ. ಶಿವಸ್ಕಂದವರ್ಮನು ಹಿಂದಕ್ಕೆ ಮಳಪಳಿ ದೇವರಿಗೆ ಕೊಟ್ಟಿದ್ದ ಸಲಹಾಟವೀ ಮೊದಲಾದ ಹದಿಮೂರು ಹಳ್ಳಿಗಳ ದಾನವು ಅಂತರಿಸಿರಲು ಕದಂಬರಾಜನು ತನ್ನ ಮೊದಲನೆಯ ವರ್ಷದಲ್ಲಿ ಅವುಗಳನ್ನು ಕೌಂಡಿನ್ಯ ಗೋತ್ರದ ಕೊಂಡಮಾನ ಕುಲತಿಲಕನಾದ ಶ್ರೀನಾಗದತ್ತನೆಂಬ ಬ್ರಾಹ್ಮಣನಿಗೆ ಕೊಟ್ಟು ಆ ದತ್ತಿಯನ್ನು ಪುನರುಜ್ಜೀವನ ಮಾಡಿದನೆಂದು ಬರೆದಿರುತ್ತದೆ. ಇದೇ ಶಾಸನದ ಮೇಲ್ಭಾಗದಲ್ಲಿರುವ ಹಿಣ್ಣುಕಡ್ಡ ಚುಟುಕುಲಾನನ್ದ ಸಾತಕಣ್ಣಿರಾಜನ ಶಾಸನದಲ್ಲಿ ಅವನು ಸಲಹಾಟವಿಯನ್ನು ಕೌಂಡಿನ್ಯ ಗೋತ್ರದ ಕೊಂಡಮಾನನಿಗೆ ಬ್ರಹ್ಮದೇಯವಾಗಿ ಕೊಟ್ಟನೆಂದು ಹೇಳಿದೆ. ಇವನ ತರುವಾಯ ವೈಜಯಂತೀ ಪತಿಯಾದ ಶಿವಸ್ಕಂದವರ್ಮನು ಇದಕ್ಕೆ ಬೇರೆ ಹನ್ನೆರಡು ಹಳ್ಳಿಗಳನ್ನು ಸೇರಿಸಿಕೊಟ್ಟಿರಬೇಕು. ಈ ದತ್ತಿಯು ಮಧ್ಯದಲ್ಲಿ ಅಂತರಿತವಾಗಿರಲು ಕದಂಬ ರಾಜನು ಅದೇ ಕೊಂಡಮಾನ ವಂಶಜರಿಗೆ ಆ ಗ್ರಾಮಗಳನ್ನು ತಿರುಗಿ ಕೊಟ್ಟಿರಬೇಕು.

ಇವೆರಡು ಪ್ರಾಚೀನ ಲಿಪಿಗಳಿಂದ ಮಯೂರಶರ್ಮನು ಹೇಗೆ ರಾಜ್ಯ ಸ್ಥಾಪನೆಮಾಡಿದನೆಂಬುದು ತಿಳಿಯುವುದಿಲ್ಲ. ಕಾಕುಸ್ಥವರ್ಮನ ತಾಳಗುಂದಶಾಸನದಲ್ಲಿ[2] ಈ ವಿಷಯವು ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಮಯೂರಶರ್ಮನು ತನ್ನ

---

[1] *Mysore Archæological Report*, 1929, p. 50. ಈ ಶಾಸನವನ್ನು ಓದುವುದರಲ್ಲಿಯೂ ಅರ್ಥಕಲ್ಪನೆಯಲ್ಲಿಯೂ ಕೆಲವು ಸ್ಖಲಿತಗಳು ಇರುತ್ತವೆ.

[2] *Ep. Ind.*, Vol. VIII, p. 24. 'ಪಲ್ಲವಾಶ್ವ ಸಂಸ್ಥೇನ ಕಲಹೇನ' ಎಂದರೆ ಆಗಿನ ಪಲ್ಲವರಾಜನು ಮಾಡುತ್ತಿದ್ದ ಅಶ್ವಮೇಧಯಾಗದ ಬಗ್ಗೆ ಉಂಟಾದ ಕಲಹದಿಂದ ಎಂದು ಅರ್ಥ ಮಾಡಬೇಕು.

ಗುರುವಾದ ವೀರಶರ್ಮನೊಂದಿಗೆ, ಪಲ್ಲವರ ರಾಜಧಾನಿಯಾಗಿದ್ದ ಕಾಂಚೀ ಪಟ್ಟಣದ ಘಟಿಕಾಸ್ಥಾನದಲ್ಲಿ ಅಧ್ಯಯನಮಾಡಲಿಕ್ಕೆ ಹೋದನು. ಅಲ್ಲಿ ವ್ಯಾಸಂಗಮಾಡು ತ್ತಿರುವಾಗ ಒಂದು ದಿನ ಪಲ್ಲವರ ಅಶ್ವಮೇಧಯಾಗದ ಸಂಬಂಧವಾಗಿ ತೀವ್ರವಾದ ಕಲಹವುಂಟಾಗಲು ಮಯೂರಶರ್ಮನು ರೋಷಗೊಂಡವನಾಗಿ "ಅಯ್ಯೋ! ಈ ಕಲಿಯುಗದಲ್ಲಿ ಕ್ಷಾತ್ರತೇಜಸ್ಸಿನ ಮುಂದೆ ಬ್ರಾಹ್ಮಣ್ಯವು ಕಳೆಗುಂದಿತಲ್ಲ! ಗುರು ಕುಲದಲ್ಲಿ ಅತಿ ಪ್ರಯಾಸದಿಂದ ಗುರುಶುಶ್ರೂಷೆಮಾಡಿ ವೇದಾಧ್ಯಯನಮಾಡಿದರೂ ಬ್ರಹ್ಮಸಿದ್ಧಿಯು ನೃಪಾಧೀನವಾಗಿದೆಯಲ್ಲ! ಅಯ್ಯೋ! ಎಂತಹ ಕಷ್ಟಕಾಲ ವೊದಗಿತು" ಎಂದು ಉದ್ಗಾರಮಾಡಿ ಕುಶಸಮಿಧಾದಿ ಯಜ್ಞೋಪಕರಣಗಳನ್ನು ಹಿಡಿಯುವುದರಲ್ಲಿ ನುರಿತ ತನ್ನ ಕೈಯಲ್ಲಿ ಸಕಲ ಭೂಮಂಡಲವನ್ನು ಜಯಿಸುವ ಇಚ್ಛೆಯಿಂದ ಪ್ರಜ್ವಲಿಸುವ ಶಸ್ತ್ರವೊಂದನ್ನು ಝಳಪಿಸಿದನು. ಶೀಘ್ರದಲ್ಲಿಯೇ ಪಲ್ಲವರ ಅಂತಪಾಲರನ್ನು ಯುದ್ಧದಲ್ಲಿ ಗೆದ್ದು ಶ್ರೀಪರ್ವತದವರೆಗಿನ ಘೋರಾರಣ್ಯವನ್ನಾ ಕ್ರಮಿಸಿ ಬೃಹದ್ಬಾಣ ಮೊದಲಾದ ಮಾಂಡಲಿಕರಿಂದ ಕರವನ್ನು ತೆಗೆದುಕೊಂಡನು. ಇದನ್ನು ಕೇಳಿ ಪಲ್ಲವರು ಕ್ರೋಧದಿಂದ ಮಯೂರಶರ್ಮನ ಮೇಲೆ ತಮ್ಮ ಸೇನೆ ಯನ್ನು ಕಳುಹಿಸಲು ಅವನು ಖಡ್ಗೈಕ ಸಹಾಯನಾಗಿ ಕ್ಷಣಮಾತ್ರದಲ್ಲಿಯೇ ಅದನ್ನು ಹೊಡೆದಟ್ಟಿದನು. ಈ ಬಲಶಾಲಿಯೊಂದಿಗೆ ದ್ವೇಷ ಬೆಳೆಯಿಸುವುದು ತಮಗೂ ತಮ್ಮ ರಾಜ್ಯಕ್ಕೂ ಅಪಾಯಕರವೆಂದು ಬಗೆದು ಪಲ್ಲವರು ಅವನಿಗೆ ಸೇನಾಪತಿ ಪದವನ್ನು ಕೊಟ್ಟು ಅವನ ಸಖ್ಯವನ್ನು ಸಂಪಾದಿಸಿದರು. ಆಮೇಲೆ ಸೈನ್ಯಾಧಿಪತ್ಯದಲ್ಲಿ ಇವನು ತೋರಿಸಿದ ಪರಾಕ್ರಮಕ್ಕೆ ಮೆಚ್ಚಿ ಪಶ್ಚಿಮದಲ್ಲಿ ಸಮುದ್ರದ ವರೆಗೂ ಪೂರ್ವದಲ್ಲಿ ಪ್ರೇಹರ(?)ದ ವರೆಗೂ ಇದ್ದ ಭೂಮಿಯನ್ನು ಕೊಟ್ಟು ಅವನಿಗೆ ಸಾಮಂತಪಟ್ಟವನ್ನು ಕಟ್ಟಿದರು. ಹೀಗೆ ಮಯೂರಶರ್ಮನು ಸ್ವಬಾಹುಬಲದಿಂದ ಸಂಪಾದಿಸಿದ ರಾಜ್ಯವನ್ನು ತನ್ನ ರಾಜಧಾನಿಯಾದ ವೈಜಯಂತಿಯಿಂದ ಸುಮಾರು ಕ್ರಿ. ಶ. ೩೩೨ರಿಂದ ೩೫೭ರ ವರೆಗೆ ಆಳಿದನು. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಬನವಾಸಿಯೇ ಆಗ ವೈಜಯಂತಿ ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡಿತ್ತು. ಈ ಬನವಾಸಿಯು ಬಹು ಪ್ರಾಚೀನಕಾಲದಿಂದಲೂ ಹೆಸರುವಾಸಿಯಾದ ಪಟ್ಟಣ ವಾಗಿತ್ತು. ಈ ಪಟ್ಟಣಕ್ಕೇ ಅಶೋಕ ಮಹಾರಾಜನ ಕಾಲದಲ್ಲಿ ರಕ್ಷಿತನೆಂಬ ಬೌದ್ಧ ಧರ್ಮಪ್ರಚಾರಕನು ಹೋಗಿದ್ದುದು. ಲೋಕಪ್ರವಾಸಿಕನಾದ ಟಾಲೆಮಿ (ಕ್ರಿ. ಶ. ೨ನೆಯ ಶತಮಾನ)ಯ ಭೂವಿವರಣೆಯಲ್ಲಿಯೂ ಬನವಾಸಿಯು ಉಕ್ತವಾಗಿದೆ.[1] ಮಯೂರಶರ್ಮನಿಗೆ ಹಿಂದೆ ಇದ್ದ ಸಾತಕರ್ಣಿಗಳ ಈ ಭಾಗದ ರಾಜಧಾನಿಯೂ

[1] *Ep. Ind.*, Vol. XX, p. 36.

ಬನವಾಸಿ(ವೈಜಯಂತಿ)ಯೇ ಆಗಿತ್ತು. ವನವಾಸಕ ಮಹಾರಾಜನ ರಾಣಿಯೂ ಇಖಾಕು ವಂಶದ ವಿರಪುರಿಸದತನ ಮಗಳೂ ಆದ ಕೊದಬಲಿಸಿರಿ ಎಂಬಾಕೆಯು ಚೈತ್ಯ ವಿಹಾರಗಳನ್ನು ಕಟ್ಟಿಸಿದ್ದಳೆಂದು ಗುಂಟೂರು ಜಿಲ್ಲೆಗೆ ಸೇರಿದ ನಾಗಾರ್ಜುನಿ ಕೊಂಡದಲ್ಲಿರುವ ಕ್ರಿ. ಶ. ೩ನೆಯ ಶತಮಾನದ ಪ್ರಾಕೃತ ಶಾಸನಗಳಲ್ಲಿ ಹೇಳಿದೆ.[1] ಇದರಿಂದ ರಾಜಧಾನಿಯಾದ ಬನವಾಸಿಯ ಹೆಸರಿನಿಂದಲೇ ಅಲ್ಲಿಯ ರಾಜರು ಕೂಡ ಕರೆಯಲ್ಪಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಹೀಗೆ ಪ್ರಖ್ಯಾತಿಹೊಂದಿದ್ದ ಬನವಾಸಿಯು ಕ್ರಿ. ಶ. ४ನೆಯ ಶತಮಾನದಿಂದ ೬ನೆಯ ಶತಮಾನದ ವರೆಗೂ ಕದಂಬರ ರಾಜಧಾನಿಯಾಗಿತ್ತು.

(ಮುಂದೆ ಸಾಗುವುದು.)

---

[1] *Ep. Ind.*, Vol. XX, pp. 1 ff.

ಕಾವ್ಯಾವಲೋಕನ

೧. ಬುದ್ಧವಚನಪರಿಚಯ ಮತ್ತು ಮಿಲಿಂದಪ್ರಶ್ನೆ—ಅನುವಾದಕ-ಸಂಪಾದಕರು: ಶ್ರೀಮಾನ್ ಜಿ. ಪಿ. ರಾಜರತ್ನಂ, ಶಾಕ್ಯಸಾಹಿತ್ಯಮಂಟಪ, ಮಲ್ಲೇಶ್ವರ, ಬೆಂಗಳೂರು ; ಡೆ. ಅ. ೨೧೦ + ೧೩೪ ; ಬೆಲೆ, ರೂ. ೪—೦—೦.

೨. ಪಾಲಿಪಜ್ಜಪುಪ್ಫಂಜಲಿ—ಅನುವಾದಕ-ಸಂಪಾದಕರು : ಶ್ರೀಮಾನ್ ಜಿ. ಪಿ. ರಾಜರತ್ನಂ ; ಕ್ರೌನ್ ಅ. ೬೪ ; ಬೆಲೆ, ೦—೮—೦.

ಬುದ್ಧದೇವನು ಭರತಖಂಡದಲ್ಲಿ ಹುಟ್ಟಿ ಬೆಳೆದು ಬಾಳಿ ಪರಿವ್ರಜಿಸಿ ಧರ್ಮವನ್ನು ಬೋಧಿಸಿದರೂ, ಅವನ ಧರ್ಮವು ಇಲ್ಲಿಂದ ದೂರವಾಗಿ—ಕಾರಣವೇನಾದರೂ ಇರಲಿ—ಸಿಂಹಳದ್ವೀಪ, ಬರ್ಮಾ, ಟಿಬೆಟ್, ಚೀನಾ, ಜಪಾನ್ ಮುಂತಾದ ದೇಶಗಳಲ್ಲಿ ನೆಲಸಿತು. ಇವುಗಳಲ್ಲಿ ಮುಖ್ಯವಾಗಿ ಸಿಂಹಳ ಮತ್ತು ಬರ್ಮಾ ದೇಶಗಳಲ್ಲ ಪ್ರಚಾರ ದಲ್ಲಿರುವ 'ಹೀನಯಾನ'ವೆಂಬ ಬೌದ್ಧಮತ ಪ್ರಭೇದವು ಇತರ ದೇಶಗಳಲ್ಲಿ ಕಂಡು ಬರುವ 'ಮಹಾಯಾನ'ಕ್ಕಿಂತಲೂ ಬುದ್ಧದೇವನ ಮೂಲಧರ್ಮಕ್ಕೆ ಸಮೀಪ ವಾದುದು. ಇದು ಪಾಲಿ ಭಾಷೆಯಲ್ಲಿ 'ತಿಪಿಟಕ (ತ್ರಿಪಿಟಕ)'ವೆಂಬ ಹೆಸರಿನಿಂದ ಒಂದು ವಿಸ್ತಾರವಾದ ಸಾಹಿತ್ಯ ರೂಪದಲ್ಲಿ ನಡೆದುಬಂದಿದೆ. ಆದರೆ ದುರದೃಷ್ಟದಿಂದ ನಮ್ಮ ದೇಶದಲ್ಲಿ ಬೌದ್ಧಮತಕ್ಕೆ ಆದ ಗತಿಯೇ ಈ ಬೌದ್ಧಸಾಹಿತ್ಯಕ್ಕೂ ಉಂಟಾಗಿ ಅದರ ಪರಿಚಯವೇ ನಮಗೆ ಇಲ್ಲವಾಗಿತ್ತು. ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ಕನ್ನಡಕ್ಕೆ ಭಾಷಾಂತರವಾಗಿದ್ದ 'ಧಮ್ಮಪದ'ವೊಂದನ್ನು ಬಿಟ್ಟರೆ, ಕನ್ನಡಿಗರಿಗಂತೂ ಈ ಸಾಹಿತ್ಯದ ಪರಿಚಯವೇ ಈ ವರೆಗೆ ಆದಂತೆ ಕಾಣುವುದಿಲ್ಲ. ಆದ್ದರಿಂದ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು ಕೈಕೊಂಡಿರುವ ಈ ಕೆಲಸವು ಅತ್ಯಂತ ಶ್ಲಾಘನೀಯವಾದುದು. ಅವರು ತಮ್ಮ ಉದ್ದೇಶವನ್ನು ಈ ರೀತಿಯಾಗಿ 'ಪರಿಚಯ'ದ ಮುನ್ನುಡಿಯಲ್ಲಿ ಹೇಳು ತ್ತಾರೆ (ಪು. ೫-೬) : "ಬೌದ್ಧರ ಈ ಪ್ರಸಿದ್ಧ ಪವಿತ್ರ ಪ್ರಾಚೀನ ಪ್ರಮಾಣ ಗ್ರಂಥ ಗಳ ಉತ್ತಮೋತ್ತಮ ಭಾಗಗಳನ್ನು ಮೂಲ ಪಾಲಿಯಿಂದ ಅನುವಾದಮಾಡಿ ಕನ್ನಡಿ ಗರ ಮಡಿಲಿನಲ್ಲಿ ಇಡುವುದು ಈ ಸದ್ಯದ ಪ್ರಯತ್ನ. ಈ ಪ್ರಯತ್ನದ ಗುರಿ ಎರಡು : ಪಾಲಿ ಪಿಟಕಗಳಲ್ಲಿರುವ ಸಾಹಿತ್ಯ ಗುಣವನ್ನು ಆದಷ್ಟು ಮಟ್ಟಿಗೆ ಕನ್ನಡದಲ್ಲಿ ತಿಳಿಸು ವುದು ಒಂದು ; ಭಗವಂತನ [=ಬುದ್ಧನ] ನಿಜಸ್ವರೂಪವನ್ನೂ ಅದರೊಡನೆ ಸಹಗತ ವಾಗುವ ಆತನ ಧರ್ಮದ ಪರಿಚಯವನ್ನೂ ಮೂಲ ಗ್ರಂಥಗಳಿಂದ ಯಥಾಭೂತವಾಗಿ ಮಾಡಿಕೊಡುವುದು ಎರಡನೆಯದು." ಈ ಉದ್ದೇಶ ಸಾಧನೆಗಾಗಿ ಹೊರಟು 'ಬುದ್ಧ

ವಚನ ಪರಿಚಯ'ದಲ್ಲಿ ಕೆಲವು ಸಂವಾದಗಳನ್ನೂ ಜಾತಕ ಕಥೆಗಳನ್ನೂ ಬುದ್ಧನ ಉಪದೇಶಗಳನ್ನೂ ಆಗಾಗ ಅವನು ಕೊಡುತ್ತಿದ್ದ ದೃಷ್ಟಾಂತಗಳನ್ನೂ—ಬೌದ್ಧರು ಹೇಳುವಂತೆ, ಉಪಮಾನಗಳನ್ನೂ—ಮಾದರಿಗಾಗಿ ಸಂಗ್ರಹಿಸಿದ್ದಾರೆ. 'ಪಾಲಿಪಜ್ಜ ಪುಷ್ಪಾಂಜಲಿ'ಯಲ್ಲಿ ಪದ್ಯಸಾಹಿತ್ಯದಿಂದ ಕೆಲವನ್ನು ಆರಿಸಿ ಮೂಲವನ್ನೂ ಅನುವಾದವನ್ನೂ ಎದುರುಬದರು ಪುಟಗಳಲ್ಲಿ ಕೊಟ್ಟಿದ್ದಾರೆ. ಇವುಗಳಿಂದ ವಾಚಕರಿಗೆ ತ್ರಿಪಿಟಕ ಸಾಹಿತ್ಯದ ವಿಷಯವಿಸ್ತಾರವೂ ವೈವಿಧ್ಯವೂ ಸೌಂದರ್ಯವೂ ಸ್ವಲ್ಪ ಮಟ್ಟಿಗೆ ಗೊತ್ತಾಗಬಹುದು.

ಇನ್ನು 'ಮಿಲಿಂದ ಪ್ರಶ್ನೆ'. ಇದು ತ್ರಿಪಿಟಕದಲ್ಲಿ ಸೇರಿಲ್ಲ, ಬುದ್ಧದೇವನ ವಚನವಲ್ಲ. ಆದರೂ ಇದಕ್ಕೆ ಬೌದ್ಧರು ಅದರಷ್ಟೇ ಪ್ರಾಶಸ್ತ್ಯವನ್ನೂ ಗೌರವವನ್ನೂ ಕೊಟ್ಟಿದ್ದಾರೆ. ಈ ಗ್ರಂಥದಲ್ಲಿ ಕ್ರಿ. ಪೂ. ೧ನೆಯ ಶತಮಾನದಲ್ಲಿ ಹಿಂದೂದೇಶದ ವಾಯುವ್ಯದಲ್ಲಿ ಆಳುತ್ತಿದ್ದ ಮಿಲಿಂದ (ಮಿನಾಂದರ್) ಎಂಬ ಯವನರಾಜನು ನಾಗಸೇನನೆಂಬ ಬೌದ್ಧ ಭಿಕ್ಷುವಿನೊಡನೆ ಸಂವಾದ ನಡೆಸಿ, ಪ್ರಶ್ನೆಗಳನ್ನು ಹಾಕಿ, ಉತ್ತರಗಳನ್ನು ಕೇಳಿ, ಮೆಚ್ಚಿದ ಕಥೆ ಇದೆ. ಪ್ರಶ್ನೆಗಳೆಲ್ಲವೂ ಬೌದ್ಧಧರ್ಮಕ್ಕೂ ತತ್ತ್ವಕ್ಕೂ ಸಂಬಂಧಪಟ್ಟವು. ಶೈಲಿಯು ಸರಳವಾದುದು, ತೀಕ್ಷ್ಣವಾದುದು. ಸಂಭಾಷಣೆಗಳು ಅತ್ಯಂತ ಸ್ವಾಭಾವಿಕ. ತರ್ಕದ ರೀತಿಯು ನವೀನವಾದುದು, 'ಕ್ಷುರದ ಧಾರೆಯಂತೆ ನಿಶಿತ'ವಾದುದು. ಅಲ್ಲದೆ ಗದ್ಯವು ಭಾರತ ಸಾಹಿತ್ಯದ ಗದ್ಯಕ್ಕೇ ಮಾದರಿಯಾದುದು. ಇಂಥ ಗ್ರಂಥವು ನಮ್ಮ ಸಾಹಿತ್ಯದಲ್ಲಿ ಅದೃಷ್ಟಪೂರ್ವ. ಪ್ರಪಂಚ ಸಾಹಿತ್ಯದಲ್ಲೆಲ್ಲೂ ಕಂಡುಬರುವುದಿಲ್ಲವೆಂದು ಹೇಳಬಹುದು. ಇಷ್ಟಾದರೂ ಇದನ್ನು ಬರೆದವನು ಯಾರೆಂಬುದು ಗೊತ್ತಿಲ್ಲ. ಇಂಥ ಅಮೂಲ್ಯ ಗ್ರಂಥವನ್ನು ಶ್ರೀಮಾನ್ ರಾಜರತ್ನಂ ಅವರು ಪ್ರಕ್ಷಿಪ್ತಗಳನ್ನು ಬಿಟ್ಟು—ಯಾವ ಒಳ್ಳೆಯ ಕೃತಿಗೂ ಪ್ರಕ್ಷಿಪ್ತಗಳ ಕಾಟ ತಪ್ಪಲಿಲ್ಲ—ಸರಳವಾದ ಶೈಲಿಯಲ್ಲಿ, ಮುಖ್ಯವಾಗಿ ಮೂಲದ ಜಾಡನ್ನೇ ಹಿಡಿದು ಭಾಷಾಂತರ ಮಾಡಿದ್ದಾರೆ. ಕೆಲವು ವೇಳೆ ಪಾರಿಭಾಷಿಕ ಶಬ್ದಗಳು ಬಂದಾಗ ಕ್ಲಿಷ್ಟವಾಗಿ ತೋರಬಹುದು. ಆದರೆ ಇದು ತಪ್ಪಿದ್ದಲ್ಲ. ಒಂದು ದೃಷ್ಟಿಯಿಂದ ಇದು ಅವಶ್ಯವೆಂದೇ ಹೇಳಬೇಕು. ಹಾಗೆ ಮಾಡುವುದರಿಂದ ವಿಷಯಕ್ಕೆ ತಕ್ಕ ವಾತಾವರಣವು ಕಲ್ಪಿತವಾಗಿ ಕಾವ್ಯದ ಕಾಂತಿಯು ಇಮ್ಮಡಿಯಾಗಬಹುದು. ಅಲ್ಲದೆ ಕನ್ನಡ ಭಾಷೆಯ ಶಬ್ದ ಸಂಪತ್ತಿಯೂ ಹೆಚ್ಚಬಹುದು. ಆದರೆ 'ಆತಾಪಿ', 'ನಿಪಕ'—ಇಂಥ ಪದಗಳಿಂದ ಕನ್ನಡಕ್ಕೆ ಏನು ಪ್ರಯೋಜನವೂ ನಮಗೆ ಕಂಡುಬರುವುದಿಲ್ಲ. ಹಾಗೆಯೇ 'ಏರಂಡ', 'ರತನಿ', 'ಲಂಘಕ', 'ನೀಚಾಸನ' ಎಂಬಿವೇ ಮೊದಲಾದ ಸಾಧಾರಣ ಪದಗಳನ್ನೂ ಭಾಷಾಂತರ ಮಾಡದೆ ಹಾಗೆಯೇ

ಇಟ್ಟುಕೊಂಡದ್ದರಿಂದ ಏನು ಫಲವೋ ಹೇಳುವುದು ಕಷ್ಟ. ಅಲ್ಲದೆ ಮೂಲದ 'ಸ್ಪಷ್ಟತೆಗಾಗಿ' ಮಾಡಿರುವ ಬದಲಾವಣೆಗೆಂದು ಅನುವಾದಕರು ಕೊಟ್ಟಿರುವ ಒಂದು ಉದಾಹರಣೆಯನ್ನು ನೋಡಿ ನಮಗೆ ಆಶ್ಚರ್ಯವಾಯಿತು. 'ಕತಿವಸ್ಸೋಸಿ ತ್ವಂ, ಭನ್ತೇ ನಾಗಸೇನ?' 'ಸತ್ತವಸ್ಸೋಹಂ, ಮಹಾರಾಜ'—ಎಂಬುದಕ್ಕೆ, 'ಭನ್ತೇ ನಾಗಸೇನ, ನೀನು ಎಷ್ಟುವರ್ಷ?' 'ನಾನು ಏಳುವರ್ಷ, ಮಹಾರಾಜ' ಎಂಬುದು 'ಮಾಡಬೇಕಾದ ಅನುವಾದ'ವೆಂದೂ ಆದರೆ ತಾವು ಹಾಗೆ ಮಾಡದೆ ಸ್ಪಷ್ಟತೆಗಾಗಿ ಬದಲಾವಣೆ ಮಾಡಿದ್ದಾರೆಂದೂ ಹೇಳುತ್ತಾರೆ. ನಿಜವಾಗಿ ಇದು ಮಾಡಬಾರದ ಅನುವಾದ. 'ಕತಿವಸ್ಸೋ', 'ಸತ್ತವಸ್ಸೋ' ಎಂಬಿವು ಬಹುವ್ರೀಹಿ ಸಮಾಸಗಳು. 'ಎಷ್ಟು ವರ್ಷ ವಯಸ್ಸಿನವನು', 'ಏಳುವರ್ಷ ವಯಸ್ಸಿನವನು' ಎಂದೇ ಅವಕ್ಕೆ ಅರ್ಥ. ಅಲ್ಲದೆ, ಅನುವಾದದಲ್ಲಿ 'ಸಮ್ಮತಿ' (ಪು. ೩೭)ಗಿಂತ 'ಸಂಜ್ಞೆ'ಯೆಂದೂ 'ಜಾತಿ' (ಪು. ೬೯)ಗಿಂತ 'ಜನ್ಮ'ವೆಂದೂ 'ಪರಿದೇವ' (ಪು. ೬೯, ೯೪)ಕ್ಕಿಂತ 'ಪರಿದೇವನೆ'ಯೆಂದೂ ಹೇಳಿದ್ದರೆ ವಾಚಕರಿಗೆ ಸಂಶಯಕ್ಕೆ ಅವಕಾಶವಿರುತ್ತಿರಲಿಲ್ಲ. ಶೈಲಿಯು ಅಲ್ಲಲ್ಲಿ ಅಸ್ವಾಭಾವಿಕವಾಗಿದೆ; ಉದಾಹರಣೆ: "ಹಂದಿಯು . . . . ಮರವನ್ನು ತಲೆಯಿಂದ ಹೊಡೆದು ಅಲ್ಲಿಯೇ ಸತ್ತಿತು" ಇತ್ಯಾದಿ. ಭಾಷಾಂತರವು ಒಂದೆರಡು ಕಡೆ ಸಮರ್ಪಕವಾಗದೆ ಇರಬಹುದು, ಆದರೂ ಒಟ್ಟಿನಲ್ಲಿ ಬರೆವಣಿಗೆ ಸುಲಭವಾಗಿದೆ; ಶೈಲಿಯು ಓಡುತ್ತದೆ, ಮೂಲದ ಛಾಯೆಯನ್ನು ತರುತ್ತದೆ.

ಈಚೆಗೆ ಬಹಳ ಚರ್ಚೆಗೆ ಅವಕಾಶವನ್ನು ಕೊಟ್ಟ 'ತೀರ್ಥಕ' ಪದದ ವಿಷಯದಲ್ಲಿ ಒಂದು ಮಾತು. ಆ ಪದವನ್ನು ಅನುವಾದಕರು ಇಲ್ಲಿ ಎರಡು ಸಂದರ್ಭಗಳಲ್ಲಿ ಉಪಯೋಗಿಸಿದ್ದಾರೆ (ಪು. ೧೯, ೨೮). ಆದರೆ ನಮ್ಮ ಅಭಿಪ್ರಾಯದಲ್ಲಿ ಇದು ಮೂಲ ಪಾಲಿಯ 'ತಿತ್ಥಿಯ' ಶಬ್ದಕ್ಕೆ ಸರಿಯಾದ ಸಂಸ್ಕೃತದ ಛಾಯೆಯಲ್ಲ; 'ತೀರ್ಥ್ಯ' ಅಥವಾ 'ತೀರ್ಥಿಕ' ಎಂದಾಗಬೇಕು. ಅದು ಹೇಗಾದರೂ ಇರಲಿ. ಇಲ್ಲಿ ಮೊದಲನೆಯ ಸನ್ನಿವೇಶದಲ್ಲಿ ಮೂಲದಲ್ಲಿರುವುದು 'ಪುಥು ತಿತ್ಥಕರಾನಂ ಅಗ್ಗಮಕ್ಖಾಯತಿ' ಎಂದು. ಇದಕ್ಕೆ ಸರಿಯಾದ ಭಾಷಾಂತರವು ಹೀಗಿರಬೇಕು: "ಅನೇಕ ತೀರ್ಥಕರರಲ್ಲಿ ಅಗ್ರಗಣ್ಯನೆಂದು ಜನರು ಹೇಳುವರು." ಇದು ಮಿಲಿಂದರಾಜನ ವರ್ಣನೆ. ಅಲ್ಲದೆ ಅವನು ಹಿಂದಿನ ಒಂದು ಜನ್ಮದಲ್ಲಿ ಶ್ರಾಮಣೇರನಾಗಿದ್ದು, ಬುದ್ಧನ ಆಜ್ಞೆಯಂತೆ ಅವನ ಧರ್ಮವನ್ನು ಉದ್ಧಾರ ಮಾಡುವುದಕ್ಕೆ ಈ ಜನ್ಮವೆತ್ತಿದ್ದಾನೆಂದು ಬೇರೆ ಹೇಳಿದೆ. ಇದರಿಂದ 'ತೀರ್ಥಕರ' ಶಬ್ದಕ್ಕೆ 'ಬೌದ್ಧಮತಾಚಾರ್ಯ'ನೆಂಬ ಅರ್ಥವೂ ಆಗಬೇಕೆಂದು ಹೇಳಿದಂತಾಯಿತು. ಎರಡನೆಯ ಸಂದರ್ಭದಲ್ಲಿ ಮೂಲದಲ್ಲಿ 'ಪರತಿತ್ಥಿಯ

ಮದ್ದನೋ' ಎಂದಿದೆ: "ಇತರ ತೀರ್ಥ್ಯರನ್ನು ಮರ್ದನ ಮಾಡುವವನು." ಇದರಿಂದ 'ತಿತ್ಥಿಯ' ಪದಕ್ಕೆ ತಿಪಿಟಕ ಸಾಹಿತ್ಯದಲ್ಲಿ ಬೌದ್ಧೇತರ ಮತಾವಲಂಬಿಗಳೆಂಬ ಅರ್ಥವಿದ್ದರೂ, 'ಮಿಲಿಂದ ಪ್ರಶ್ನೆ'ಯ ಕಾಲಕ್ಕೆ 'ಪರತಿತ್ಥಿಯ' ಎಂದು ಹೇಳಬೇಕಾದ ಆವಶ್ಯಕತೆಯುಂಟಾಯಿತು. ಜೊತೆಗೆ ಬೌದ್ಧ ಭಿಕ್ಷುವಾದ ನಾಗಸೇನನನ್ನು ಅದೇ ಸಂದರ್ಭದಲ್ಲಿ 'ಜಿನವಚನದಲ್ಲಿ ಪಾರಂಗತನು', 'ಜಿನಶಾಸನವನ್ನು ಚೆನ್ನಾಗಿ ತೋರಿಸುವವನು' ಎಂದು ಬೇರೆ ಕರೆದಿದೆ. ಇವನ್ನೆಲ್ಲ ನೋಡಿದರೆ, 'ತಿತ್ಥಿಯ', 'ತಿತ್ಥಕರ', 'ಜಿನ' ಎಂಬ ಪದಗಳು ಆ ಕಾಲಕ್ಕೆ ಬಹುಶಃ ಎಲ್ಲಾ ಮತಗಳಿಗೂ—ಖಂಡಿತವಾಗಿ ಬೌದ್ಧ ಜೈನ ಮತಗಳೆರಡಕ್ಕೂ—ಅನ್ವಯಿಸುತ್ತಿದ್ದವೆಂದು ತೋರಿಬರುತ್ತದೆ.

ಈ ಗ್ರಂಥದ ಸೂಚಿಗಳ (Indexes) ವಿಷಯದಲ್ಲಿ ಒಂದು ಮಾತು. ಇವುಗಳಲ್ಲಿ ವರ್ಣಕ್ರಮವು ನವೀನವಾಗಿದೆ: 'ಕ್ಲೇಶ'ವಾದ ಮೇಲೆ 'ಕೌಟುಂಬರ', 'ಬ್ರಹ್ಮಚಾರಿ'ಯಾದ ಮೇಲೆ 'ಬುದ್ಧವಚನ'! ಈ ವಿಷಯದಲ್ಲಿ ಎಲ್ಲರೂ ಅನುಸರಿಸುವ ಕ್ರಮವನ್ನು ಅನುಸರಿಸುವುದು ಒಳ್ಳೆಯದು.

ಮೇಲಿನ ಭಾಷಾಂತರಗಳ ವಿಷಯದಲ್ಲಿ ಹೇಳಿದ ಮಾತುಗಳನ್ನು 'ಪಾಲಿಪಜ್ಜಪುಪ್ಫಂಜಲಿ'ಯ ವಿಷಯದಲ್ಲಿಯೂ ಹೇಳುವುದಕ್ಕಾಗುವುದಿಲ್ಲವೆಂದು ವಿಷಾದವಾಗುತ್ತದೆ. "ವ್ಯಂಜನಕ್ಕಿಂತ ಮುಖ್ಯವಾಗಿ ಅರ್ಥವನ್ನು ಹಿಡಿದು" ಅನುವಾದ ಮಾಡುವ ಉದ್ದೇಶದಿಂದ ಹೊರಟಿದ್ದರೂ ಉದ್ದೇಶವು ಅಷ್ಟು ಸಫಲವಾದಂತೆ ಕಾಣುವುದಿಲ್ಲ. ಪದ್ಯಗಳ ಗದ್ಯಾನುವಾದದಲ್ಲಿ 'ಗದ್ಯತನ' ಹೆಚ್ಚೆಂದು ಅನಿಸುತ್ತದೆ; ಪದ್ಯಾನುವಾದದಲ್ಲಿ ಸಾಕಾದಷ್ಟು ಕಾವಿಲ್ಲ. ಅಲ್ಲದೆ ಶೈಲಿಯಲ್ಲಿ ಸ್ವಾಭಾವಿಕತೆ ಕಡಮೆ; ಎಷ್ಟೋ ವೇಳೆ ಭಾವವು ಸರಿಯಾಗಿ ಹೊಳೆಯುವುದಿಲ್ಲ. ಜೊತೆಗೆ ತಪ್ಪುಗಳಿವೆ. 'ಉಪ್ಪತಿತಂ ಕೋಧಂ (ಉತ್ಪತಿತಂ ಕ್ರೋಧಂ)' ಎಂದರೆ 'ಎದ್ದು ಬೀಳುತ್ತಿರುವ ಕೋಪ'ವೆಂದು ಆಗಲಾರದು (ಪದ್ಯ ೩೮). ೩೫ನೆಯ ಪದ್ಯದ ಭಾವವು ಸ್ಪಷ್ಟವಾಗಿಲ್ಲ; 'ಆಭರಣಗಳು ತಾಗುವುದನ್ನು ಕಂಡು' ಎಂದಿದ್ದರೆ ಚೆನ್ನಾಗಿತ್ತು. ಇನ್ನೊಂದು ಪದ್ಯದಲ್ಲಿ (೨೧) ಕರ್ತೃಪದವೂ ಕರ್ಮಪದವೂ ವ್ಯತ್ಯಾಸವಾಗಿ ಪದ್ಯದ ಸ್ವಾರಸ್ಯವೇ ಕೆಟ್ಟುಹೋಗಿದೆ: ಅದರ ಮುಂದಿನ ಪದ್ಯದಿಂದಲೇ ಇದು ವ್ಯಕ್ತವಾಗುವುದು. 'ನೀರಿನ ಮೀನಿನಂತೆ ಬಲೆಯನ್ನು ಒಡೆದು' (ಪದ್ಯ ೩೬) ಎನ್ನುವುದು ಕನ್ನಡಕ್ಕೆ ಒಪ್ಪುವುದಿಲ್ಲ. ಹೀಗೆ. ಮೂಲ ಪಾಲಿಯನ್ನೂ ಅನುವಾದವನ್ನೂ ಎದುರು ಬದುರು ಅಚ್ಚು ಮಾಡಿರುವುದರಿಂದ ಎರಡಕ್ಕೂ ಇರುವ ಅಂತರವು ತಟ್ಟನೆ ತೋರಿಬರುತ್ತದೆ.

ಮುನ್ನಡಿಯಲ್ಲಿ ಅನುವಾದಕರು "ಮೂಲವನ್ನು ಓದುವಾಗ ಅಕ್ಷರಗಳ ಉಚ್ಚಾರಣೆಯೆಲ್ಲ ಎಂದಿನಂತೆಯೇ. ಆದರೆ, ಅನುಸ್ವಾರ ಬಂದ ಕಡೆ ಮಾತ್ರ ಅದನ್ನು 'ಮ'ಕಾರದಂತೆ ಉಚ್ಚರಿಸದೆ 'ಙ'ಕಾರದಂತೆ ಉಚ್ಚರಿಸಬೇಕು" ಎಂದು ಹೇಳುತ್ತಾರೆ. ಆದರೆ ಅನುಸ್ವಾರಕ್ಕೆ ಈ ಅನುನಾಸಿಕದಂಥ ಉಚ್ಚಾರಣೆಯು ಸಿಂಹಳ ದ್ವೀಪದಲ್ಲಿ ಮಾತ್ರ ಪ್ರಚಾರದಲ್ಲಿದೆ. ಪಾಲಿಗೇ ಹೀಗೆಂದು ನಿಯಮಿಸುವುದು ಸಾಧುವಲ್ಲ. ಅಲ್ಲದೆ, ಉದ್ದಕ್ಕೂ 'ಗವೇಸ್ಸಥ', 'ಹರೇಯ್ಯ', 'ಸೇಟ್ಠೊ', 'ದೇಸೇನ್ತಿ' ಎಂದು ಮೊದಲಾಗಿ ಅಚ್ಚುಮಾಡಿರುವುದರಿಂದ, ಹಾಗೆಯೇ ಉಚ್ಚಾರಣೆ ಮಾಡಿದರೆ ತಪ್ಪಾಗುವುದು. ಪಾಲಿಯೇ ಮೊದಲಾಗಿ ಎಲ್ಲಾ ಪ್ರಾಕೃತಗಳಲ್ಲೂ ಸಂಯುಕ್ತಾಕ್ಷರದ ಹಿಂದಿನ ದೀರ್ಘ ಏಕಾರ ಓಕಾರಗಳು ಉಚ್ಚಾರಣೆಯಲ್ಲಿ ಹ್ರಸ್ವ ಎಕಾರ ಒಕಾರಗಳಾಗಿ ಪರಿಣಮಿಸುತ್ತವೆ (ಆಗಲೂ 'ಗುರು'ವಾಗಿಯೇ ಉಳಿಯುವುದರಿಂದ ಇದರಿಂದ ಏನೂ ಹಾನಿಯಿಲ್ಲ). ಇದೊಂದು ನಿಯತ ಸೂತ್ರ. ದೇವನಾಗರೀ ಲಿಪಿಯಲ್ಲಿ ಈ ಅಕ್ಷರಗಳನ್ನು ಬರೆಯಲು ಸಾಧ್ಯವಿಲ್ಲ. ರೋಮನ್ ಲಿಪಿಯಲ್ಲಿ ಇವನ್ನು ತೋರಿಸುವ ಸಂಪ್ರದಾಯವು—ದೇವನಾಗರೀ ಸಂಪ್ರದಾಯಕ್ಕೆ ಕಟ್ಟುಬಿದ್ದು—ಇನ್ನೂ ಹೆಚ್ಚಾಗಿ ಪ್ರಚಾರವಿಲ್ಲ. ಆದರೆ ಕನ್ನಡ ಲಿಪಿಯಲ್ಲಿ ನಾವು ಏಕೆ ತಪ್ಪಾಗಿ ಬರೆದು, ತಪ್ಪಾಗಿ ಉಚ್ಚಾರಣೆ ಮಾಡಬೇಕು?

ಈ ಪದ್ಯ ಸಂಗ್ರಹದ ಮಾತಿರಲಿ. ಶ್ರೀಮಾನ್ ರಾಜರತ್ನಂ ಅವರು ಕೈಕೊಂಡಿರುವ ಕೆಲಸವು ದೊಡ್ಡದು, ಶ್ರಮಸಾಧ್ಯವಾದುದು. ಇದಕ್ಕೆ ಕನ್ನಡಿಗರ ಪ್ರೋತ್ಸಾಹ ಅತ್ಯವಶ್ಯವಾಗಿದೆ. ಒಂದು ರೀತಿಯಲ್ಲಿ ಅದು ಕನ್ನಡಿಗರ ಧರ್ಮವೆಂದೇ ಹೇಳಬಹುದು. ಏಕೆಂದರೆ, ಬುದ್ಧದೇವನ ಜೀವನ, ಧರ್ಮ, ಅದನ್ನು ಪ್ರತಿಪಾದಿಸುವ ಈ ಸುಂದರ ಪಾಲಿ ಸಾಹಿತ್ಯ—ಇವುಗಳ ಮಹತ್ತ್ವದ ವಿಷಯವಾಗಿ ವಿದ್ಯಾವಂತರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಲ್ಲದೆ ಅನ್ಯಧರ್ಮಗಳ ಪರಿಚಯವು ನಮ್ಮ ಧರ್ಮಬುದ್ಧಿಯನ್ನು ವಿಕಾಸಮಾಡುವುದೇ ಹೊರತು ಎಂದಿಗೂ ಸಂಕುಚಿತವಾಗಿ ಮಾಡಲಾರದು. ಇದರ ಜೊತೆಗೆ ಈ ಸಾಹಿತ್ಯವು ಹಿಂದೂಸ್ಥಾನದ ಅನೇಕ ಭಾಷೆಗಳಿಗೆ ಭಾಷಾಂತರವಾಗಿದ್ದರೂ, ಕನ್ನಡದಲ್ಲಿ ಮಾತ್ರ ಅನುವಾದಕ್ಕೆ ಇದೇ ಮೊದಲು. ಆದ್ದರಿಂದ ನಾವು ಶ್ರೀಮಾನ್ ರಾಜರತ್ನಂ ಅವರನ್ನು ಅವರ ಪ್ರಥಮ ಪ್ರಯತ್ನಕ್ಕಾಗಿ ಅಭಿನಂದಿಸಿ, ಅವರ ಉದ್ದೇಶವು ಸಫಲವಾಗಲೆಂದು ಹಾರೈಸುತ್ತೇವೆ.

ನಂ. ಶಿವರಾಮಶಾಸ್ತ್ರಿ.

*
* *

೩. ಕರ್ನಾಟಕ ದರ್ಶನ (ಮಿಂಚಿನ ಬಳ್ಳಿಯ ಮೊದಲನೆಯ ಕುಡಿ)—ಸಂಪಾದಕರು : ಶ್ರೀಮಾನ್ ಬುರ್ಲಿ ಬಿಂದುಮಾಧವ; ಪ್ರಕಾಶಕರು : ಬಾಳಾಚಾರ್ಯ ಗುರಾಚಾರ್ಯ ಅವಧಾನಿ, ಮಿಂಚಿನಬಳ್ಳಿಯ ಚಾವಡಿ, ದೇಸಾಯಿ ಓಣಿ, ಧಾರವಾಡ; ಸಚಿತ್ರ; ಕ್ರೌನ್ ಅ. ೨ + ೧೪೯; ಬೆಲೆ, ರೂ. ೧—೦—೦.

ಈ ಗ್ರಂಥವನ್ನು ಮೆಚ್ಚಲು ಹಲವು ಕಾರಣಗಳಿವೆ. ಕರ್ನಾಟಕದ ಏಕೀಕರಣ ವಾಗಬೇಕೆಂದು ಜನರೆಲ್ಲ ಹಾತೊರೆಯುತ್ತಿರುವಾಗ ಸಮಗ್ರ ಕರ್ನಾಟಕವನ್ನು ಕುರಿತು ತಕ್ಕ ತಿಳಿವಳಿಕೆಯನ್ನು ಉಂಟುಮಾಡಬೇಕಾದದ್ದು ಆವಶ್ಯಕ. ಕನ್ನಡ ನಾಡಿನ ಇಂದಿನ ಸ್ಥಿತಿಗತಿಗಳನ್ನು ಪರಿಶೀಲಿಸಿರುವ ವಿದ್ವಾಂಸರ ಹಲವು ಲೇಖನಗಳು ಒಂದೆಡೆ ಸಿಕ್ಕುವುದು ಕಷ್ಟ. ಇಂಥ ಲೇಖನಗಳ ಮಾಲೆ ಈ ಪುಸ್ತಕ. ಆದ್ದರಿಂದ ಇಲ್ಲಿ ಅನೇಕ ಶೈಲಿಗಳ, ಅನೇಕ ವಿಚಾರಗಳ, ಅನೇಕ ಪ್ರತಿಭಾವಂತರ ಪರಿಚಯ ಉಂಟಾಗಿ ನಮ್ಮ ನಾಡು ನುಡಿಗಳಲ್ಲಿ ಹೆಮ್ಮೆಯ ಭಾವ ಮೂಡಿಬರುವುದು. ಬರಿ ಕೂಗಾಟದ ಕಾಲ ಮುಗಿದುಹೋಯಿತು. ನಾವು ಎಲ್ಲಿದ್ದೇವೆ, ಎತ್ತ ಹೋಗು ತ್ತಿದ್ದೇವೆ ಎಂಬುದಾಗಿ ನಮ್ಮನ್ನು ನಾವೇ ಕೇಳಿಕೊಂಡು ವಿಚಾರಮಾಡಿ ಮುಂದಕ್ಕೆ ಹೋಗಬೇಕಾಗಿದೆ; ವಿಹಿತವಾದ ಹಾದಿಯನ್ನು ಹಿಡಿಯಬೇಕಾಗಿದೆ. ಜಳ್ಳು ಅಭಿ ಮಾನವು ವಿಚಾರದ ಗಾಳಿಗೆ ಸಿಕ್ಕಿ ತೂರಿಹೋಗಿ ಗಟ್ಟಿಯಾದದ್ದು, ಸಕಾರಣ ವಾದದ್ದು ನಿಲ್ಲಬೇಕಾಗಿದೆ. ‘ ಕರ್ನಾಟಕ ದರ್ಶನ ’ ಈ ಕಾರ್ಯವನ್ನು ನೆರವೇರಿಸಲು ಪ್ರಯತ್ನಿಸಿದೆ.

ಈ ಲೇಖನ ಮಾಲೆಯನ್ನು ಆರಂಭಮಾಡಿರುವವರು ಹಿರಿಯ ಸಾಹಿತಿ ಗಳಾದ ಶ್ರೀಮಾನ್ ಆಲೂರ ವೆಂಕಟರಾಯರು. ‘ ಕರ್ನಾಟಕಾಂತರ್ಗತ ಭಾರತ ಮಾತೆಗೆ ನಮಸ್ಕಾರ ಹಾಕಿ ಮುಂದೆ ಹೋಗಬೇಕು; ಭಾರತೀಯ ಸಂಸ್ಕೃತಿಯ ಚೈತನ್ಯವು ಇತರ ಪ್ರಾಂತಗಳಲ್ಲಿರುವಂತೆ ಕರ್ನಾಟಕದಲ್ಲಿಯೂ ಅಡಕವಾಗಿ ಪ್ರೇರಿಸು ತ್ತಿರುವುದರಿಂದ ಇಡೀ ಭರತ ಖಂಡದ ಸಮಷ್ಟಿ ಶಕ್ತಿಯು ಕರ್ನಾಟಕದಲ್ಲಿಯೂ ಅಂತರ್ಯಾಮಿಯಾಗಿದೆ ’ ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ. ಈ ಹೊಸ ದೃಷ್ಟಿ ಯಿಂದ ಕರ್ನಾಟಕಕ್ಕೆ ಮಾಡಿದ ಸೇವೆ ಭಾರತಕ್ಕೂ ಮಾಡಿದ ಹಾಗೆ ಎನ್ನುವುದೂ, ಮನೆಯನ್ನು ಹಸನುಮಾಡಿದರೆ ಊರನ್ನೂ ಬೆಳಗಿದಂತೆ ಎನ್ನುವುದೂ ವೇದ್ಯವಾಗಿ ಹಿತವಾದ ದಾರಿಯಲ್ಲಿ ಜನ ನಡೆಯುವಂತಾಗುತ್ತದೆ.

ಎರಡು-ಮೂರನೆಯ ಲೇಖನಗಳು ‘ ಕರ್ನಾಟಕ ರಾಷ್ಟ್ರೀಯ ಜೀವನ ’ವನ್ನು ಕುರಿತಿವೆ. ೧೯೨೦ರ ವರೆಗೆ ಕರ್ನಾಟಕದಲ್ಲಿ ನಡೆದ ರಾಜಕೀಯ ಆಂದೋಲನಗಳನ್ನು ಶ್ರೀಮಾನ್ ಮುದವೀಡು ಕೃಷ್ಣರಾಯರು ಉದ್ಘೋಷಿಸಿದ್ದಾರೆ. ೧೯೨೦ರ ಅನಂತರ

ಮಹಾತ್ಮರ ಮಹಾಶಕ್ತಿವಾಹಿನಿಯ ಸೆಳತಕ್ಕೆ ಸಿಕ್ಕಿ ಭರತಖಂಡವೆಲ್ಲ ನವಚೈತನ್ಯದಿಂದ ಮಿಡಿಯುತ್ತಿದ್ದಾಗ ಕರ್ನಾಟಕವೂ ಹುರುಪುಗೊಂಡು ಅನುಪಮವಾದ ಸ್ವಾರ್ಥತ್ಯಾಗವನ್ನೂ ದೇಶಭಕ್ತಿಯನ್ನೂ ಪ್ರದರ್ಶಿಸಿ ಇತರ ಪ್ರಾಂತ್ಯಗಳಿಗೆ ಸರಿಮಿಗಿಲೆನಿಸಿಕೊಂಡಂದಿನಿಂದ ನಡೆದಿರುವ ಚಲನವಲನಗಳನ್ನು ಶ್ರೀಮಾನ್ ಕರಮರ್‌ಕರ್ ಅವರು ತಮ್ಮ ಲೇಖನದಲ್ಲಿ ಸಮತೆಯಿಂದ ವಿಶದವಾಗಿ ವಿವೇಚನೆ ಮಾಡಿದ್ದಾರೆ.

ಮುಂದೆ ಬರುವ ಮೂರು ಲೇಖನಗಳು ವಿಚಾರ ವಿಮರ್ಶೆಗಳಿಂದ ಕೂಡಿದುವು. ಕರ್ನಾಟಕದ ಏಕೀಕರಣವಾಗುವುದಕ್ಕೆ ಇರುವ ಅಡ್ಡಿ ಆತಂಕಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಎಲ್ಲ ದೃಷ್ಟಿಗಳಿಂದ ವಿಚಾರದ ಒರೆಗಲ್ಲಿನಲ್ಲಿ ಉಜ್ಜಿ ಬೇಕಾದ ಅಂಕೆ ಅಂಶಗಳಿಂದ ಪುಷ್ಟೀಕರಿಸಿ ನಂಬಿಕೆ ಹುಟ್ಟುವ ರೀತಿಯಲ್ಲಿ ಶ್ರೀಮಾನ್ ಮಂಗಳವೇಡೆ ಶ್ರೀನಿವಾಸರಾಯರು ನಿರೂಪಿಸಿದ್ದಾರೆ. ನಾಡಿನ ಜಾತಿ ಜನಾಂಗಗಳ ವಿಷಯವನ್ನು ಬರೆಯುವಾಗ ಶ್ರೀಮಾನ್ ಜೋಶಿ ಶಂಕರರಾಯರು ವಿಶಾಲವಾದ, ಉದಾರವಾದ ದೃಷ್ಟಿಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಲ್ಲಿ ಮಡುಗಟ್ಟಿ ಮಲೆತು ಕೊಳೆಯುತ್ತಿರುವ ಕೋಮುವಾರು ವಿದ್ವೇಷದ ಹಾಳು ಹಳ್ಳಗಳು ಇನ್ನು ಮುಂದಾದರೂ ಹರಿಯುವುದಕ್ಕೆ ಆರಂಭಿಸಿ, ತಿಳಿಯಾಗಿ, ಶುಚಿಯಾಗಿ ರಾಷ್ಟ್ರಜೀವನದ ಕಾಂತಿಯನ್ನು ಹೆಚ್ಚಿಸಲೆಂಬುದು ಅವರ ಹಾರೈಕೆ. ಪ್ರೊಫೆಸರ್ ಯಲಬುರ್ಗಿ ಅವರು ಕರ್ನಾಟಕದ ಕೈಗಾರಿಕೆಯ ಉದ್ಯಮಗಳನ್ನೂ ಖನಿಜಸಂಪತ್ತನ್ನೂ ಸಂಗ್ರಹವಾಗಿ ಅರ್ಥಶಾಸ್ತ್ರದ ದೃಷ್ಟಿಯಿಂದ ವಿಚಾರಿಸಿ ಮುಂದೆ ಕರ್ನಾಟಕವು ಉದ್ಯೋಗದ ತವರುಮನೆಯಾಗಲಿಕ್ಕೆ ಇರುವ ಅವಕಾಶಗಳನ್ನು ತಕ್ಕಮಟ್ಟಿಗೆ ವಿವೇಚಿಸಿದ್ದಾರೆ.

ಇಂದಿನ ಕನ್ನಡ ಸಾಹಿತ್ಯವನ್ನು ಕುರಿತ ಮೂರು ಲೇಖನಗಳು ಮನನೀಯವಾಗಿವೆ. ಈಗಿನ ಸಾಹಿತ್ಯದ ಪ್ರೇರಕಶಕ್ತಿಗಳನ್ನೂ ಅವು ಸಾಹಿತ್ಯದಲ್ಲಿ ವಿಕಾಸಗೊಂಡಿರುವ ಪ್ರಕಾರಗಳನ್ನೂ ಸಿದ್ಧಿಸಾಧನಗಳನ್ನೂ ಮುಂದೆ ಹಿಡಿಯಬೇಕಾದ ಹಾದಿಯನ್ನೂ ಶ್ರೀಮಾನ್ ಬೇಂದ್ರೆಯವರು ತಮ್ಮ ನಿಶಿತವಾದ ಶೈಲಿಯಲ್ಲಿ ಮನದುಂಬುವಂತೆ ವರ್ಣಿಸಿದ್ದಾರೆ. ಕಾದಂಬರಿ-ಸಣ್ಣ ಕತೆಗಳ ವಿಚಾರವಾಗಿ ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು ಬರೆದಿದ್ದಾರೆ. ಸ್ವತಂತ್ರ ಕಾದಂಬರೀ ರಚನೆಯಲ್ಲಿ ಕನ್ನಡಿಗರ ಪ್ರತಿಭೆ ಇನ್ನೂ ಸುಪುಷ್ಟವಾಗಿ, ಶಕ್ತಿಮಯವಾಗಿ ಹರಿದು ಉತ್ತಮ ಫಲವನ್ನು ತಳೆಯಬೇಕೆಂಬುದು ಎಲ್ಲರ ಬಯಕೆ. ಸಣ್ಣ ಕತೆಗಳ ಕ್ಷೇತ್ರದಲ್ಲಿ ಬೆಳೆ ಎಷ್ಟು ಹುಲುಸಾಗಿದೆಯೋ ಅಷ್ಟೇ ಉತ್ಕೃಷ್ಟವಾದ ಸೃಷ್ಟಿಚೈತನ್ಯ ಅವುಗಳಲ್ಲಿ ಪ್ರಸ್ಫುಟಿತವಾಗಿದೆ. ಇಂದಿನ ಸಾಹಿತ್ಯದ ಹೆಮ್ಮೆ ಇಂದಿನ ಸಣ್ಣ ಕಥೆಗಳು. ಶ್ರೀಮಾನ್ ಕೃಷ್ಣಶರ್ಮರು ಈ ವಿಷಯಗಳನ್ನು ಉಚಿತ ರೀತಿಯಲ್ಲಿ ನಿದರ್ಶನಗಳೊಡನೆ ಸ್ಪಷ್ಟೀ

ಕರಿಸಿದ್ದಾರೆ. ನಾಟಕಗಳ ವಿಷಯವಾಗಿ ಬರೆದಿರುವವರು ಪ್ರೊ. ಜಹಗೀರದಾರರು; ಕನ್ನಡ ನಾಟಕದ ಚರಿತ್ರೆಯನ್ನು—ಅದು ಹೆಚ್ಚಾಗಿಲ್ಲ—ಮೊದಲಿಂದ ಹಿಡಿದು ಈವರೆಗೆ ಸಮಾಲೋಕಿಸಿದ್ದಾರೆ. ನಾಟಕ, ನಟ, ನೇಪಥ್ಯವಿಧಾನ, ರಂಗಭೂಮಿ ಮೊದಲಾದುವು ಗಳಿಗೆ ಅನ್ವಯಿಸಬಹುದಾದ ಕೆಲವು ಉಪಯುಕ್ತ ಸಲಹೆಗಳು ಇಲ್ಲಿ ಕಂಡುಬರುತ್ತವೆ. ಕನ್ನಡ ನಾಟಕಗಳಲ್ಲಿ ಉತ್ಕೃಷ್ಟವಾದ ಈಚಿನ ಕೃತಿಗಳನ್ನು ಬೆರಳಿಟ್ಟು ತೋರಿಸಿದೆ; ಲೋಪದೋಷಗಳು ಸಾಕಷ್ಟು ವ್ಯಕ್ತವಾಗುವಂತೆ ವರ್ಣಿತವಾಗಿವೆ. ಭಾವೀ ಕನ್ನಡ ಸಾಹಿತ್ಯದಲ್ಲಿ ನಾಟಕದ ಕಲೆ ಉನ್ನತಿಗೇರುವ ಚಿಹ್ನೆಗಳು ಕಾಣಬರುತ್ತಿವೆ.

ಕೊನೆಯ ಲೇಖನ ಗ್ರಂಥದ ಸಂಪಾದಕರದು. ಇದರಲ್ಲಿ ಬಗೆಬಗೆಯ ಕಾರ್ಯ ಸಾಧನೆಯಿಂದ ಸಮಗ್ರ ಭರತಖಂಡದಲ್ಲಿ ಕೀರ್ತಿ ಸಂಪಾದಿಸಿರುವ ಕರ್ನಾಟಕದ ಕೆಲವರು ಮಹನೀಯರ ವಿಷಯಕವಾದ ಉಲ್ಲೇಖವಿದೆ.

ಆಂಜನೇಯನ ಶಕ್ತಿ ಆತನಿಗೇ ತಿಳಿದಿರಲಿಲ್ಲವಂತೆ; ಅಪ್ತರ ಹೇಳಿಕೆಯಿಂದ ಆ ಜ್ಞಾನ ಆತನಿಗೆ ಬಂತಂತೆ. ಇಂದು ಕನ್ನಡಿಗರ ಪಾಡು ಹೀಗಾಗಿದೆ. ಅವರ ಸತ್ವವನ್ನು ಅವರಿಗೇ ತಿಳಿಸುವ ಕನ್ನಡಿ ಬೇಕಾಗಿದೆ. 'ಕರ್ನಾಟಕ ದರ್ಶನ' ಇಂಥ ಒಂದು ಕನ್ನಡಿ.

ಡಿ.ಎಲ್.ಎನ್.

ಸಾದರ ಸ್ವೀಕಾರ

೧. ಹುಚ್ಚು ಬೆಳದಿಂಗಳಿನ ಹೂಬಾಣಗಳು—ಲೇಖಕರು: ಶ್ರೀಮಾನ್ ಪ. ರಮಾನಂದ; ಚಿತ್ರಕಾರರು: ಶ್ರೀಮಾನ್ ಟಿ. ಮುಕುಂದರಾವ್; ಪ್ರಕಾಶಕರು: ಮನೋಹರ ಗ್ರಂಥಮಾಲೆ, ಧಾರವಾಡ; ಕ್ರೌನ್ ಅ. ೬+೨೩೩; ಬೆಲೆ, ರೂ. ೧—೮—೦.

೨. ಮಹಾಪೂರ (ಸ್ವತಂತ್ರ ಸಾಮಾಜಿಕ ಕಾದಂಬರಿ)—ಬರೆದವರು: ಶ್ರೀಮಾನ್ ಕುಲಕರ್ಣಿ ಶೇಷಗಿರಿರಾಯರು; ಪ್ರಕಾಶಕರು: ಮನೋಹರ ಗ್ರಂಥಮಾಲಾ, ಧಾರವಾಡ; ಕ್ರೌನ್ ಅ. ೪+೧೩೪; ಬೆಲೆ, ೧೨ ಆಣೆ.

೩. ಸಣ್ಣ ಕಥೆಗಳು (ಸಂಕಲಿತ ಗ್ರಂಥ)—ಪ್ರಕಾಶಕರು: ಕರ್ಣಾಟಕ ಸಂಘ, ಚೆನ್ನರಾಯಪಟ್ಟಣ; ಕ್ರೌನ್ ಅ. ೫೯; ಬೆಲೆ, ೦—೩—೩.

೪. ಕಾಡುಮಲ್ಲಿಗೆ—ಲೇಖಕರು: ಶ್ರೀಮಾನ್ ಸಿ. ಕೆ. ನಾಗರಾಜರಾವ್; ಪುಸ್ತಕ ದೊರೆಯುವ ಸ್ಥಳ: ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ; ಕ್ರೌನ್ ಅ. ೬೨; ಬೆಲೆ, ೮ ಆಣೆ.

೫. ಪ್ರೇಮಯೋಗಿನಿ—ಅನುವಾದಕರು: ಶ್ರೀಮಾನ್ ಸಿ. ಕೆ. ನಾಗರಾಜರಾವ್; ಪುಸ್ತಕ ದೊರೆಯುವ ಸ್ಥಳ: ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ; ಡೆಮಿ ಅ. ೬೦; ಬೆಲೆ, ೪ ಆಣೆ.

೬. ವಿಜ್ಞಾನ—ಲೇಖಕರು: ಶ್ರೀಮಾನ್ ಜಿ. ಹನುಮಂತರಾವ್, ಎಂ.ಎ.; ಪ್ರಕಾಶಕರು: ಕರ್ಣಾಟಕ ಸಂಘ, ಶಿವಮೊಗ್ಗ; ಕ್ರೌನ್ ಅ. ೧೦೯; ಬೆಲೆ, ೧೨ ಆಣೆ.

೭. ಕನ್ನಡ ಗದ್ಯಮಾಲೆ (ಭಾಗ ೧)—ಸಂಪಾದಕರು: ಶ್ರೀಮಾನ್ ಎಸ್. ಎಸ್. ಮಾಳವಾಡ, ಎಂ.ಎ.; ಪುಸ್ತಕ ದೊರೆಯುವ ಸ್ಥಳ: ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ; ಕ್ರೌನ್ ಅ. xvi+೧೭೫; ರೂ. ಬೆಲೆ, ೧—೦—೦.

೮. ಉಯ್ಯಾಲೆ—ಲೇಖಕರು: ಶ್ರೀಮಾನ್ 'ಅಂಬಿಕಾತನಯ ದತ್ತ'; ಪ್ರಕಾಶಕರು: ಶ್ರೀಮಾನ್ ಬಿ. ಜಿ. ಚಿಮ್ಮಲಗಿ, ಗೌಳಿಗುಡ್ಡ, ಹೈದರಾಬಾದ (ದಕ್ಷಿಣ); ಕ್ರೌನ್ ಅ. ೩+೧೦೯+೨; ಬೆಲೆ, ರೂ. ೧—೦—೦.

೯. ಕರ್ನಾಟಕ ಒಕ್ಕಲುತನದ ಪ್ರದರ್ಶನದ ದಿಗ್ದರ್ಶನವು (ಬೆಳಗಾವಿಯ 'ಹಳ್ಳಿಯ ಆಳಿ'ನ ವಿಶೇಷ ಸಂಚಿಕೆ)—ಸಂಗ್ರಾಹಕರು: ಶ್ರೀಮಾನ್ ಈಶ್ವರ ಮ. ಸಣಕಲ್ಲ.

೧೦. ಜಯಂತಿ (ಸಚಿತ್ರ ಮಾಸಪತ್ರಿಕೆ, ವರ್ಷ ೧, ಸಂಚಿಕೆ ೩)—ಸಂಪಾದಕರು: ಶ್ರೀಮಾನ್ ಪಾಟೀಲ ಮಾಧವರಾಯರು ಮತ್ತು ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು; ಪ್ರಕಾಶಕರು: ಶ್ರೀಮಾನ್ ಎಂ. ಜಿ. ಪಾಟೀಲ್, ಜಯಂತಿ ಕಾರ್ಯಾಲಯ, ಧಾರವಾಡ; ಬೆಲೆ, ಬಿಡಿ ಸಂಚಿಕೆ: ೪ ಆಣೆ.

೧೧. आत्मनिवेदनम्: प्रणेता, के. भुजबलिशास्त्री; प्रकाशिका, विदुषीरत्न चन्द्रबाई, आरा.

ಸಂಪಾದಕೀಯ

ಜನತಾವತ್ಸಲರೂ ದಾನವೀರರೂ ಆಗಿದ್ದ ಹಿರಿಯ ಕನ್ನಡಿಗರೊಬ್ಬರು ದಿವಂಗತರಾದರು. ರಾಜಸಭಾಭೂಷಣ ದಿವಾನ್ ಬಹದ್ದೂರ್ ಡಾಕ್ಟರ್ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟಿ, ಕೆಟಿ., ಸಿ.ಐ.ಇ., ಎಲ್‌ಎಲ್.ಡಿ. ಅವರ ಕೀರ್ತಿ ಭರತಖಂಡದ ಎಲ್ಲೆಯನ್ನು ದಾಟಿ ಹೊರದೇಶಗಳಲ್ಲೂ ವ್ಯಾಪಿಸಿತ್ತು. ಮೈಸೂರಿನಲ್ಲಂತೂ ಅವರ ಹೆಸರನ್ನು ಅರಿಯದ ಜನರೂ ಅವರ ಔದಾರ್ಯದ ಫಲವನ್ನು ಪಡೆಯದ ಸಾರ್ವಜನಿಕ ಸಂಸ್ಥೆಗಳೂ ವಿರಳ. ವಿದ್ಯಾ ಪ್ರಚಾರದಲ್ಲಿ ಅವರದು ಕೊಡುಗೈ; ಕನ್ನಡ ಏಳಿಗೆಯನ್ನು ಕುರಿತು ಅವರಿಗೆ ವಿಶೇಷ ಮಮತೆ. ವಿಜ್ಞಾನದ ನೂತನ ಶೋಧನೆಗಳನ್ನು ಕನ್ನಡಿಗರು ತಿಳಿಯುವಂತೆ ಕನ್ನಡದಲ್ಲಿ ಗ್ರಂಥಗಳನ್ನು ಬರೆಸುವುದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೨೦,೦೦೦ ರೂಪಾಯಿಗಳ ಶಾಶ್ವತ ನಿಧಿಯನ್ನು ಶ್ರೀಮಾನ್ ಪುಟ್ಟಣ್ಣಶೆಟ್ಟರವರು ಕಲ್ಪಿಸಿರುವ ಸಂಗತಿಯನ್ನು ನಾವು ಇಲ್ಲಿ ಸ್ಮರಿಸಬಹುದು. ಇಷ್ಟು ವಿಪುಲವಾದ ಹಣ ಕೂಡ ಅವರ ದಾನ ಭಂಡಾರದಲ್ಲಿ ಒಂದು ಅಂಶ ಮಾತ್ರ; ಬೇರೆ ಬೇರೆ ಸದುದ್ದೇಶಗಳಿಗಾಗಿ ಅವರು ಕೈಯೆತ್ತಿಕೊಟ್ಟಿರುವ ಹಣವನ್ನು ಲೆಕ್ಕಮಾಡಿದರೆ ಸುಮಾರು ನಾಲ್ಕುಲಕ್ಷ ರೂಪಾಯಿಗಳಾಗಬಹುದು.

ಕೀರ್ತಿಶೇಷರಾದ
ಸರ್ ಕೆ. ಪಿ. ಪುಟ್ಟಣ್ಣ
ಶೆಟ್ಟರವರು

ಶ್ರೀಮಾನ್ ಪುಟ್ಟಣ್ಣಶೆಟ್ಟರವರು ತಮ್ಮ ಶಕ್ತಿ ಶೀಲ ಸೌಜನ್ಯಗಳ ಪ್ರಭಾವದಿಂದ ಉನ್ನತಪದವಿಗೇರಿದರು; ಪ್ರಭುಗಳ ವಿಶ್ವಾಸವನ್ನೂ ಪ್ರಜೆಗಳ ಮನ್ನಣೆಯನ್ನೂ ಏಕರೀತಿಯಾಗಿ ಗಳಿಸಿಕೊಂಡರು. ಅವರ ದೀರ್ಘವಾದ ದೇಶಸೇವೆಯನ್ನು ಮೆಚ್ಚಿ ಶ್ರೀಮನ್ಮಹಾರಾಜರವರೂ ಸಾರ್ವಭೌಮ ಸರ್ಕಾರದವರೂ ಅವರಿಗೆ ಒಂದಾದ ಮೇಲೊಂದು ಗೌರವ ಸನ್ಮಾನಗಳನ್ನು ದಯಪಾಲಿಸಿದರು. ಶ್ರೀಮಾನ್ ಪುಟ್ಟಣ್ಣಶೆಟ್ಟರವರ ಅವಿಶ್ರಾಂತ ವಿದ್ಯಾಪಕ್ಷಪಾತಕ್ಕೆ ಕಲಶಪ್ರಾಯವಾಗಿ ನಮ್ಮ ವಿಶ್ವವಿದ್ಯಾನಿಲಯದವರು ಅವರಿಗೆ ಸಲ್ಲಿಸಿದ ಎಲ್‌ಎಲ್.ಡಿ. ಪ್ರಶಸ್ತಿಯನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳದೆ ಇರಲಾರೆವು.

" ಮುದುಕರ ಸಾವು ಚೆಂದ " ಎಂದು ಹೇಳುವುದುಂಟು. ಶ್ರೀಮಾನ್ ಪುಟ್ಟಣ್ಣಶೆಟ್ಟರವರು ತುಂಬುಜೀವನವನ್ನು ಬಾಳಿ ಇಹಲೋಕವನ್ನು ಬಿಟ್ಟು ತೆರಳಿದರು. ಆದರೆ ನಮ್ಮ ನಾಡಿನ ಜೀವನದಲ್ಲಿ ಇನ್ನೊಬ್ಬರು ತುಂಬಲಾಗದ ಒಂದು ಜಾಗವನ್ನು ತೆರವು ಮಾಡಿ ನಮ್ಮನ್ನು ಬಿಟ್ಟುಹೋಗಿದ್ದಾರೆ. ಇಂಥ ಹಿರಿಯ ಮಾರ್ಗದರ್ಶಿಗಳನ್ನು

ಕಳೆದುಕೊಂಡದ್ದಕ್ಕಾಗಿ ನಾವು ಎಷ್ಟು ಖೇದಪಟ್ಟರೂ ಸಾಲದು. ಶ್ರೀಮಾನ್ ಪುಟ್ಟಣ್ಣಶೆಟ್ಟರ ಕುಟುಂಬದವರೊಂದಿಗೆ, ನಾಡಿನ ಜನದೊಂದಿಗೆ ನಾವೂ ಕಂಬನಿಯನ್ನು ಮಿಡಿಯುತ್ತೇವೆ; ಅವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಹಾರೈಸುತ್ತೇವೆ.

***

ಬಂಕಿಂಚಂದ್ರರ ಶತಮಾನೋತ್ಸವ

ಕನ್ನಡಿಗರಿಗೆ ಹೊಸದೊಂದು ಬಗೆಯ ಗದ್ಯಸಾಹಿತ್ಯದ ಪರಿಚಯವನ್ನು ಮಾಡಿಕೊಟ್ಟು, ಅವರಲ್ಲಿ ಓದುಗಾರಿಕೆಯನ್ನು ಬೆಳಸಿದ ಕೃತಿಗಳೆಂದರೆ 'ವೆಂಕಟಾಚಾರ್ಯರ ಕಾದಂಬರಿ'ಗಳು. ಇವು ಮೊದಲು ಮಾಸಪತ್ರಿಕೆಯಲ್ಲಿ ಖಂಡಖಂಡವಾಗಿ ಪ್ರಕಟವಾಗುತ್ತಿದ್ದಾಗ ಒಂದು ತಿಂಗಳಿಂದ ಮತ್ತೊಂದು ತಿಂಗಳ ತನಕ ಕಾದಿರುವುದಕ್ಕೆ ವಾಚಕರಿಗೆ ತುಂಬ ಕಷ್ಟವಾಗುತ್ತಿದ್ದಿತಂತೆ. ಇದಕ್ಕೆ ಕಾರಣ ಆ ಕಾದಂಬರಿಗಳ ಸ್ವಾರಸ್ಯ: ಅವುಗಳ ಮೂಲಕರ್ತರಾದ ಬಂಕಿಂಚಂದ್ರ ಛಟರ್ಜಿಯವರ ಪ್ರತಿಭೆಯ ಸಾಮರ್ಥ್ಯ. ಬಂಕಿಮರ ಕಾದಂಬರಿಗಳು ಬಂಗಾಳಿ ಭಾಷೆಯಲ್ಲಿ 'ವಂಗದರ್ಶನ' ಪತ್ರಿಕೆಯಲ್ಲಿ ಮೊಟ್ಟಮೊದಲು ಪ್ರಕಟವಾಗುತ್ತಿದ್ದಾಗ ಜನರು ಹೀಗೆಯೇ ಅವುಗಳನ್ನು ಉತ್ಸುಕತೆಯಿಂದ ಓದುತ್ತಿದ್ದರೆಂದು ರವೀಂದ್ರನಾಥ ಠಾಕೂರರು ತಮ್ಮ 'ಜೀವನ ಸ್ಮೃತಿ'ಯಲ್ಲಿ ವರ್ಣಿಸಿದ್ದಾರೆ. ಪತ್ರಿಕೆಯ ಒಂದು ಸಂಚಿಕೆ ಬಂದಕೂಡಲೇ ಅದು ದೊಡ್ಡವರ ಪಾಲಾಗಿಬಿಡುತ್ತಿತ್ತು; ಅವರೆಲ್ಲರ ಕೈದಾಟಿ ಹುಡುಗರ ವಶಕ್ಕೆ ಬರುವತನಕ—ರವೀಂದ್ರರು ಆಗಿನ್ನೂ ಹುಡುಗರಾಗಿದ್ದರು—ಇವರಿಗೆ ಕುತೂಹಲವನ್ನು ತಡೆದುಕೊಳ್ಳುವುದು ಸಾಕುಸಾಕಾಗಿ ಹೋಗುತ್ತಿತ್ತು. ಅಂದು ಬಂಕಿಮರ ಕೃತಿಗಳ ವಿಷಯದಲ್ಲಿ ವಾಚಕರಿಗೆ ಮೂಡಿದ ಆದರ ಉತ್ಸಾಹಗಳು ಇಂದಿಗೂ ಕುಗ್ಗಿಲ್ಲ: ಅವರ ಕಾದಂಬರಿಗಳು ಈಗ ಲೋಕವಿಶ್ರುತವಾಗಿವೆ. ಅವರು ಕೇವಲ ಬಂಗಾಳಿ ಸಾಹಿತಿಗಳಾಗಿ ಮುಗಿಯದೆ ಭಾರತೀಯ ಸಾಹಿತ್ಯದಲ್ಲೇ ಉನ್ನತಸ್ಥಾನವನ್ನು ಪಡೆದಿದ್ದಾರೆ.

ಈ ಮಹನೀಯರ ಜನ್ಮಶತಮಾನೋತ್ಸವವು ಈ ವರ್ಷ ಬಂಗಾಳದಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು; ಆ ಸಮಯದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದವರು ಪ್ರಕಟಮಾಡಿದ 'ಪರಿಚಯ' ಗ್ರಂಥದ ಕೆಲವು ಭಾಗಗಳ ಅನುವಾದವನ್ನು ಈ ಸಂಚಿಕೆಯಲ್ಲಿ ಕೊಟ್ಟಿದೆ. ಬಂಕಿಮರ ಕೃತಿಗಳಿಂದ ಕನ್ನಡಕ್ಕೆ ಆಗಿರುವ ಮಹೋಪಕಾರವನ್ನು ಸ್ಮರಿಸುವುದಕ್ಕಾಗಿ ಕನ್ನಡಿಗರೂ ಅವರ ಶತಮಾನೋತ್ಸವವನ್ನು ಆಚರಿಸುವುದು ಅಗತ್ಯ. ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಕೆಲವು ದಿನಗಳ ಕೆಳಗೆ ನಡಸಿದಂತೆಯೇ, ನಮ್ಮ ನಾಡಿನ ಬೇರೆ ಬೇರೆ ಸ್ಥಳಗಳ ಕರ್ಣಾಟಕ ಸಂಘಗಳವರೂ ಈ ಉತ್ಸವದ ಏರ್ಪಾಡನ್ನು ಕೈಕೊಳ್ಳಬೇಕೆಂದು ಈ ಮೂಲಕ ಸೂಚಿಸುತ್ತೇವೆ.

ಪ್ರಬುದ್ಧ ಕರ್ಣಾಟಕ

ಬಹುಧಾನ್ಯ ಸಂವತ್ಸರ] [ದೀಪಾವಳಿಯ ಸಂಚಿಕೆ

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೩೮

ಸಂಪುಟ ೨೦] [ಸಂಚಿಕೆ ೨

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಬಹುಧಾನ್ಯ ಸಂವತ್ಸರ — ೩೬ — ದೀಪಾವಳಿಯ ಸಂಚಿಕೆ

ಬಾ ಫಾಲ್ಗುಣರವಿದರ್ಶನಕೆ!

ಶಿವಮಂದಿರಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ;
ಬಾ, ಫಾಲ್ಗುಣರವಿದರ್ಶನಕೆ : ಶಿವದರ್ಶನಕೆ!

ಕುಂಕುಮಧೂಳಿಯ ದಿಕ್ತಟವೇದಿಯೊಳೋಕುಳಿಯಲಿ ಮಿಂದೇಳುವನು;
ಕೋಟಿ ವಿಹಂಗಮ ಮಂಗಲ ರವ ರಸ ನೈವೇದ್ಯಕೆ ಮುದ ತಾಳುವನು;
ಚಿನ್ನದ ಚೆಂಡೆನೆ ಮೂಡುವನು; ಹೊನ್ನನೆ ಹೊಯ್‌ನೀರ್ ನೀಡುವನು;
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯಮಾಡುವನು!

ತೆರೆತೆರೆಯಾಗಿಹ ನೊರೆನೊರೆ ಕಡಲೆನೆ ನೋಡುವ ಕಣ್ಣೋಡುವವರೆಗೆ
ಬನಸಿರಿ ತುಂಬಿದ ಕಣಿವೆಯ ಹಂಬಿರೆ ಧೂಳೀಸಮ ಹಿಮ ಬಾನ್‌ಕರೆಗೆ,
ಪ್ರತಿಭೆಯ ಹೇಮಾಗ್ನಿಯ ಮೇಲೆ ಕವಿಮನ ತಾಸುರಿದುರಿದೇಳೆ
ಮರಗಿಡದಲಿ ಜಡದೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ!

ವರ್ಣಸದಿಂದ್ರಿಯ ಸಂದಸವಸು ದಾಂಟುತೆ ದರ್ಶನ ಮುಕ್ತಿಯ ಸೇರಿ
ವ್ಯಕ್ತಿತೆ ವೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ:
ಸರ್ವೇಂದ್ರಿಯ ಸುಖನಿಧಿ ಅಲ್ಲಿ; ಸರ್ವಾತ್ಮನ ಸನ್ನಿಧಿ ಅಲ್ಲಿ;
ಸಕಲಾರಾಧನ ಸಾಧನ ಬೋಧನಸದನುಭವ ರಸ ತಾನಹುದಲ್ಲಿ!

ಕೆ. ವಿ. ಪುಟ್ಟಪ್ಪ.

ಸಾಹಿತ್ಯ ಸೃಷ್ಟಿ

ಹೇಗೆ ಒಂದು ಸೂತ್ರವನ್ನನುಸರಿಸಿ ಕಲ್ಲುಸಕ್ಕರೆಯ ಕಣಗಳು ಒಂದಾಗಿ ಕೂಡುವವೋ ಹಾಗೆಯೇ ನಮ್ಮ ಮನಸ್ಸಿನಲ್ಲಿಯೂ ಯಾವುದೋ ಒಂದು ಸೂತ್ರವನ್ನನುಸರಿಸಲು ಸಾಧ್ಯವಾದಾಗಲೇ ಅನೇಕ ವಿಚ್ಛಿನ್ನಭಾವಗಳು ಒಂದಾಗಿ ಸೇರಿ ಒಂದು ಆಕಾರವನ್ನು ಪಡೆಯಲಾಗುವುದು. ಅಸ್ಫುಟತೆಯಿಂದ ಪರಿಸ್ಫುಟತೆಗಾಗಿಯೂ ವಿಚ್ಛಿನ್ನತೆಯಿಂದ ಸಂಶ್ಲಿಷ್ಟತೆಗಾಗಿಯೂ ನಮ್ಮ ಮನಸ್ಸಿನಲ್ಲಿ ಒಂದು ಪ್ರಯತ್ನವು ಸದಾ ನಡೆಯುತ್ತಲೇ ಇರುತ್ತದೆ. ಸ್ವಪ್ನದಲ್ಲಿ ಕೂಡ ಏನಾದರೊಂದು ಸೂಚನೆ ಕಂಡ ಕೂಡಲೇ ಅದರ ಸುತ್ತಲೂ ಎಷ್ಟೋ ಭಾವನೆಗಳು ನೋಡುತ್ತ ನೋಡುತ್ತಿರುವಾಗಲೇ ಆಕಾರ ಧಾರಣಮಾಡುತ್ತವೆ. ಅವ್ಯಕ್ತಭಾವನೆಗಳು ರೂಪವನ್ನು ಪಡೆಯುವ ಸುಯೋಗದ ಅಪೇಕ್ಷೆಯಿಂದ ನಿದ್ರೆಯಲ್ಲಿಯೂ ಜಾಗ್ರದವಸ್ಥೆಯಲ್ಲಿಯೂ ಮನಸ್ಸಿನಲ್ಲಿ ಪ್ರೇತಗಳಂತೆ ಸುತ್ತಾಡುತ್ತಿರುತ್ತವೆ. ಹಗಲು ಹೊತ್ತು ನಮ್ಮ ಕೆಲಸದ ಸಮಯ; ಆಗ ಬುದ್ಧಿಯ ಕಠೋರ ಪಹರೆ ಇರುತ್ತದೆ; ಅದು ನಮ್ಮ ಆಫೀಸಿನಲ್ಲಿ ನಿರರ್ಥಕವಾದ ಗುಂಪೊಂದು ಸೇರಿ ಕೆಲಸಕ್ಕೆ ಬಾಧಕವನ್ನುಂಟುಮಾಡಲು ಅವಕಾಶ ಕೊಡುವುದಿಲ್ಲ. ಅದರ ದವಲತ್ತಿನಲ್ಲಿ ನಮ್ಮ ಭಾವನೆಗಳು ಒಂದು ಕಾರ್ಯಸೂತ್ರವನ್ನವಲಂಬಿಸಿ ಅತ್ಯಂತ ಸುಸಂಗತಭಾವದಲ್ಲಿ ಮಾತ್ರವೇ ತಮ್ಮನ್ನು ಪ್ರಕಾಶಪಡಿಸಿಕೊಳ್ಳಬೇಕಾಗುತ್ತದೆ. ವಿರಾಮ ದೊರೆತು ಸುಮ್ಮನೆ ಕುಳಿತಿದ್ದಾಗ ಕೂಡ ಈ ವ್ಯವಹಾರವು ನಡೆಯುತ್ತಿರುತ್ತದೆ. ಬಹುಶಃ ಒಂದು ಪುಷ್ಪದ ಸುಗಂಧದ ನೆಪ ಸಿಕ್ಕಿದ ಕೂಡಲೇ ಎಷ್ಟು ದಿನಗಳ ಸ್ಮೃತಿ ಅದರ ಸುತ್ತುಮುತ್ತಲೂ ನೋಡುತ್ತ ನೋಡುತ್ತ ಸೇರಿಕೊಳ್ಳುತ್ತದೆ! ಒಂದು ಮಾತು ಯಾವ ಕ್ಷಣದಲ್ಲಿ ನಿರ್ಮಿತವಾಗುತ್ತದೆಯೋ ಆಕ್ಷಣವೇ ಅದನ್ನು ಆಶ್ರಯಿಸಿ ಎಷ್ಟು ಮಾತುಗಳು ಒಂದರ ಹಿಂದೊಂದು ಧಾವಿಸಿ ಹೋಗುತ್ತವೆ! ಇವಕ್ಕೆ ಗೊತ್ತುಗುರಿಯಿಲ್ಲ. ಇದು ಮತ್ತೇನೂ ಅಲ್ಲ, ಭಾವನೆಗಳು ಯಾವುದಾದರೊಂದು ರೀತಿಯಲ್ಲಿ ಏನಾದರೊಂದು ರೂಪವನ್ನು ಪಡೆಯುವ ಪ್ರಯತ್ನ. ಭಾವನಾ ರಾಜ್ಯದಲ್ಲಿ ಈ ಪ್ರಯತ್ನಕ್ಕೆ ವಿರಾಮವೇ ಇಲ್ಲ.

ಹೀಗೆ ರೂಪುಗೊಳ್ಳುವ ಪ್ರಯತ್ನವು ಸಫಲವಾದರೆ ಆಮೇಲೆ ಸ್ಥಾಯಿಯಾಗಿ ಉಳಿಯುವ ಪ್ರಯತ್ನದ ಸರದಿ ಬರುತ್ತದೆ. ಹಲಸಿನ ಮರದಲ್ಲಿ ಫಲಬಿಡುವ ಕಾಲ ಬಂದಾಗ ಒಂದರಮೇಲೊಂದು ಬೇಕಾದಷ್ಟು ಕಾಯಿ ಬಿಡುತ್ತವೆ; ಆದರೆ ಯಾವ ಕಾಯಿಗಳು ಸಣ್ಣ ಕೊಂಬೆಗೆ ಅಂಟಿಕೊಂಡಿರುತ್ತವೆಯೋ, ಯಾವುಗಳ ತೊಟ್ಟುಗಳು

ಅತ್ಯಂತ ಶೀರ್ಣವಾಗಿರುತ್ತವೆಯೋ ಅವು ಮೊದಲು ಹೇಗೋ ಹಲಸಿನ ಲೀಲೆಯನ್ನು ಸ್ವಲ್ಪ ಆರಂಭಿಸಿದರೂ ಆಮೇಲೆ ಅವ್ಯಕ್ತದಲ್ಲಿ ಅಂತರ್ಧಾನವಾಗುತ್ತವೆ.

ನಮ್ಮ ಭಾವನೆಗಳ ಗತಿಯೂ ಅದೇ. ಯಾವುವು ಮಜಬೂತಾದ ಸೂತ್ರವನ್ನು ಕಂಡುಕೊಳ್ಳುತ್ತವೆಯೋ ಅವು ಅದರ ಪೂರ್ಣ ಪ್ರಯತ್ನದಿಂದ ವೃದ್ಧಿಹೊಂದುತ್ತವೆ; ಅವುಗಳ ಸಮಸ್ತ ಕೋಶಗಳೂ ಚೆನ್ನಾಗಿ ಅಂದವನ್ನೂ ಪುಷ್ಟಿಯನ್ನೂ ಪಡೆಯುತ್ತವೆ; ಅವುಗಳ ಹುಟ್ಟು ಸಾರ್ಥಕವಾಗುತ್ತದೆ. ಯಾವುವು ಹೇಗೋ ಮಾಡಿ ಸ್ವಲ್ಪಮಟ್ಟಿಗೆ ಆಶ್ರಯಿಸಬಹುದಾದ ಸ್ವಾರ್ಥವನ್ನು ಮಾತ್ರ ಕಂಡುಕೊಳ್ಳುತ್ತವೆಯೋ ಅವು ಅತಿ ಡೊಂಕುಡೊಂಕಾಗಿ ಅಸಂಗತ ಗುಚ್ಛಗಳಾಗಿ ಬೇಗ ಹೋಗಿಬಿಡುತ್ತವೆ.

ಕೆಲವು ಗಿಡಗಳಲ್ಲಿ ಮೊಗ್ಗು ಹುಟ್ಟಿ ಕೂಡಲೇ ಉದುರಿ ಹೋಗುತ್ತವೆ; ಫಲವಾಗುವ ಪರ್ಯಂತ ಉಳಿಯುವುದಿಲ್ಲ. ಹಾಗೆಯೇ ಕೆಲವು ಮನಸ್ಸುಗಳಲ್ಲಿ ಭಾವನೆಗಳು ಬರುತ್ತವೆ, ಹೋಗುತ್ತವೆ; ಆದರೆ ಭಾವದ ಆಕಾರವನ್ನು ಹೊಂದಲು ಸಾಕಾದಷ್ಟು ಅವಕಾಶವನ್ನು ಪಡೆಯುವುದಿಲ್ಲ. ಭಾವುಕರ ಮನಸ್ಸುಗಳಲ್ಲಿ ಮಾತ್ರವೇ ಭಾವನೆಗಳು ಪೂರ್ಣತೆಯನ್ನು ಹೊಂದಿ ಭಾವದ ರೂಪವನ್ನು ಪಡೆಯುತ್ತವೆ—ಆ ಮನಸ್ಸುಗಳಲ್ಲಿ ಅಂಥ ಒಂದು ರಸ ವಿಶೇಷವಿರುತ್ತದೆ, ಅಂಥ ತೇಜಸ್ಸೊಂದಿರುತ್ತದೆ. ಅಲ್ಲಿಯೂ ಕೂಡ ಅನೇಕ ಭಾವನೆಗಳು ಉದುರಿ ಹೋಗುವುದು ನಿಜ, ಆದರೆ ಹಲ ಕೆಲವು ಫಲಗಳೂ ಆಗುತ್ತವೆ.

ಗಿಡದಲ್ಲಿ ಎಷ್ಟು ಕಾಯಿಗಳು ಫಲಿಸುತ್ತವೆಯೋ ಅವುಗಳಲ್ಲಿ ಈ ರೀತಿಯ ಸಮಾಲೋಚನೆ ನಡೆಯುತ್ತದೆ: "ಕೊಂಬೆಯಲ್ಲಿ ಅಂಟಿಕೊಂಡೇ ಇದ್ದರೆ ಪ್ರಯೋಜನವಿಲ್ಲ. ಅಲ್ಲಿದ್ದುಕೊಂಡು ನಾವು ರಸದಿಂದ ತುಂಬಿ, ಒಳ್ಳೆಯ ಬಣ್ಣವನ್ನು ಪಡೆದು, ಸುಗಂಧವನ್ನೊಳಕೊಂಡು, ಬೀಜದಲ್ಲಿ ಶಕ್ತಿಯನ್ನು ಪಡೆದು ಮರವನ್ನು ಬಿಟ್ಟು ಹೊರಗೆ ಹೋಗೋಣ—ಆ ಹೊರಗಿನ ಭೂಮಿಯಲ್ಲಿ ಸರಿಯಾದ ಸ್ಥಿತಿಯಲ್ಲಿ ಬೀಳದೆ ಹೋದರೆ ನಮ್ಮ ಬಾಳು ಸಾರ್ಥಕವಾಗುವುದಿಲ್ಲ." ಭಾವುಕರ ಮನಸ್ಸಿನಲ್ಲಿ ಭಾವನೆಗಳು ಭಾವದ ರೂಪವನ್ನು ತಳೆದಾಗ ಅವುಗಳದೂ ಇದೇ ಸಮಾಲೋಚನೆ—ಯಾವುದಾದರೊಂದು ಸುಯೋಗವು ದೊರೆಯುವುದಾದರೆ ಈ ಸಲ ವಿಶ್ವಮಾನವನ ಮನಸ್ಸಿನ ಭೂಮಿಯಲ್ಲಿ ನವಜನ್ಮದ ಮತ್ತು ಚಿರಜೀವನದ ಲೀಲೆಗಾಗಿ ಹೊರಗೆ ಹೋಗೋಣ. ಮೊದಲು ಹುಟ್ಟುವ ಸುಯೋಗ, ಆ ಮೇಲೆ ಫಲವಾಗುವ ಸುಯೋಗ, ಅದಾದ ಮೇಲೆ ಹೊರಗೆ ಹೋಗಿ ಭೂಮಿಲಾಭವನ್ನು ಪಡೆಯುವ ಸುಯೋಗ—ಈ ಮೂರು ಸುಯೋಗಗಳೂ ಘಟಿಸಿದಾಗಲೇ ಮಾನವನ ಮನಸ್ಸಿನ ಭಾವನೆ ಕೃತಾರ್ಥವಾಗುತ್ತದೆ. ಭಾವನೆಗಳು ಸಜೀವ ವಸ್ತುಗಳಂತೆ ಆ ಕೃತಾರ್ಥತೆಯ ತಗಾದೆಯನ್ನು

ಮನುಷ್ಯನಿಗೆ ಕೊಡುತ್ತವೆ. ಆದಕಾರಣವೇ ಮನುಷ್ಯರು ಒಬ್ಬರ ಭುಜದ ಮೇಲೆ ಒಬ್ಬರು ಕೈಹಾಕುವುದು, ಒಬ್ಬರ ಕಿವಿಯಲ್ಲಿ ಒಬ್ಬರು ಮಾತನಾಡುವುದು. ಒಂದು ಮನಸ್ಸು ಇನ್ನೊಂದು ಮನಸ್ಸನ್ನು ಹುಡುಕುವುದು ತನ್ನ ಭಾವನೆಯ ಭಾರವನ್ನು ಇಳಿಸಲು ಸಹಾಯಮಾಡುವುದಕ್ಕಾಗಿ, ತನ್ನ ಮನಸ್ಸಿನ ಭಾವವನ್ನು ಅನ್ಯರ ಮನಸ್ಸಿನಲ್ಲಿ ಭಾವಿತವಾಗುವಂತೆ ಮಾಡುವುದಕ್ಕಾಗಿ. ಇದಕ್ಕಾಗಿ ಹೆಂಗಸರು ನದಿಯ ಘಟ್ಟಗಳಲ್ಲಿ ಸೇರುತ್ತಾರೆ, ಸ್ನೇಹಿತನ ಬಳಿಗೆ ಸ್ನೇಹಿತನು ಓಡುತ್ತಾನೆ, ಕಾಗದಗಳು ಹೋಗಿಬರುತ್ತವೆ; ಇದಕ್ಕಾಗಿಯೇ ಸಭಾಸಮಿತಿ, ತರ್ಕವಿತರ್ಕ, ಕಾಗದಪತ್ರಗಳು, ವಾದ ಪ್ರತಿವಾದ—ಅಷ್ಟೇಕೆ, ಇದಕ್ಕಾಗಿಯೇ ಮಾರಾಮಾರಿ ಮುಷ್ಟಾಮುಷ್ಟಿಯ ಪರ್ಯಂತ ಒಂದೂ ಉಳಿಯುವುದಿಲ್ಲ. ಮಾನವ ಮನಸ್ಸಿನ ಭಾವನೆಗಳು ಸಫಲತೆಯ ಲಾಭಕ್ಕಾಗಿ ಒಳಗೊಳಗೇ ಮನುಷ್ಯನಿಗೆ ಎಷ್ಟು ಬಲವಾದ ತಗಾದೆ ಕೊಡುತ್ತವೆಂದರೆ ಅವು ಮನುಷ್ಯನನ್ನು ಒಬ್ಬೊಂಟಿಗನಾಗಿ ಇರಗೊಡುವುದಿಲ್ಲ. ಇದರ ತಾಡನೆಯಿಂದಲೇ ಜಗತ್ತಿನಲ್ಲೆಲ್ಲ ಮಾನವನು ಸಶಬ್ದವಾಗಿಯೂ ನಿಶ್ಶಬ್ದವಾಗಿಯೂ ಹಗಲಿರುಳೂ ಎಷ್ಟು ವ್ಯರ್ಥಾಲಾಪನೆ ಮಾಡುವನೆಂದರೆ ಅದಕ್ಕೆ ದಿಕ್ಕುದರಿಯಿಲ್ಲ. ಈ ಎಲ್ಲ ಆಲಾಪವೂ ಕಥಾವಾರ್ತೆಗಳಲ್ಲಿ, ಜನಸಂದಣಿಯ ಕೂಗಾಟದಲ್ಲಿ, ಕಾಗದಪತ್ರಗಳಲ್ಲಿ, ಮೂರ್ತಿಗಳಲ್ಲಿ, ಚಿತ್ರಗಳಲ್ಲಿ, ಗದ್ಯಪದ್ಯಗಳಲ್ಲಿ, ಕೆಲಸಕಾರ್ಯಗಳಲ್ಲಿ, ಎಷ್ಟು ವಿಚಿತ್ರವೇಷಗಳಲ್ಲಿ, ಎಷ್ಟು ವಿವಿಧ ಆಕಾರಗಳಲ್ಲಿ, ಎಷ್ಟು ಸುಸಂಗತ ಅಸಂಗತ ಆಯೋಜನೆಗಳಲ್ಲಿ, ಮಾನವ ಜಗತ್ತಿನಲ್ಲಿ ಗುಂಪು ಕಟ್ಟಿಕೊಂಡು ಸುಗ್ಗಾಡುತ್ತಿರುವುದೆಂಬುದನ್ನು ಮನಸ್ಸಿನ ಕಣ್ಣಿನಿಂದ ನೋಡಿದರೆ ಸ್ತಬ್ಧರಾಗಬೇಕಾಗುತ್ತದೆ.

ಒಂದು ಮನಸ್ಸಿನ ಭಾವನೆ ಮತ್ತೊಂದು ಮನಸ್ಸಿನಲ್ಲಿ ಸಾರ್ಥಕತೆಯನ್ನು ಹೊಂದುವುದಕ್ಕಾಗಿ ಮಾಡುವ ಈ ಪ್ರಯತ್ನವು ಮಾನವ ಸಮಾಜವನ್ನು ಸಂಯೋಜಿಸುತ್ತಾ ಹೋಗುತ್ತದೆ. ಈ ಪ್ರಯತ್ನವಶದಿಂದ ನಮ್ಮ ಭಾವಗಳು ಸ್ವಾಭಾವಿಕವಾಗಿ ಎಂಥ ಒಂದು ಆಕಾರವನ್ನು ಧರಿಸುವುವೆಂದರೆ ಅವು ಭಾವುಕನೊಬ್ಬನವು ಮಾತ್ರವೇ ಆಗುವುದಿಲ್ಲ. ಅನೇಕ ವೇಳೆ ಅವು ನಮ್ಮ ಗಮನಕ್ಕೆ ಬಾರದೆಯೇ ಘಟನೆಯಾಗುತ್ತವೆ. ನಾವು ಯಾವನಾದರೊಬ್ಬ ಗೆಳೆಯನೊಂದಿಗೆ ಮಾತನಾಡಿದಾಗ ಆ ಮಾತು ಆ ಗೆಳೆಯನ ಮನಸ್ಸಿನ ಕಾಂತಿಯಿಂದ ಅಷ್ಟಿಷ್ಟಾದರೂ ರೂಪುಗೊಳ್ಳುತ್ತದೆಂಬುದನ್ನು ವಿಚಾರಮಾಡಿ ನೋಡಿದಾಗ ಎಲ್ಲರೂ ಒಪ್ಪುವರೆಂದು ತೋರುತ್ತದೆ. ಒಬ್ಬ ಸ್ನೇಹಿತನಿಗೆ ನಾವು ಯಾವ ರೀತಿಯಾಗಿ ಕಾಗದ ಬರೆಯುತ್ತೇವೆಯೋ ಮತ್ತೊಬ್ಬ ಸ್ನೇಹಿತನಿಗೆ ಅದೇ ರೀತಿಯಾಗಿ ಕಾಗದ ಬರೆಯಲಾಗುವುದಿಲ್ಲ. ನಮ್ಮ ಭಾವವು ಗೊತ್ತಾದ ಸ್ನೇಹಿತನ ಪಕ್ಷದಲ್ಲಿ ಸಂಪೂರ್ಣತೆಯನ್ನು

ಪಡೆಯುವ ಗೂಢ ಪ್ರಯತ್ನದಲ್ಲಿ ಆ ಮನಸ್ಸಿನ ಪ್ರಕೃತಿಯೊಂದಿಗೆ ತಕ್ಕಮಟ್ಟಿಗೆ ಮಿಳಿತವಾಗುತ್ತದೆ. ವಸ್ತುತಃ ನಮ್ಮ ಮಾತು ಕೇಳುವವನು ಹೇಳುವವನು ಇವರಿಬ್ಬರ ಯೋಗದಿಂದಲೇ ತಯಾರಾಗುತ್ತದೆ.

ಆದಕಾರಣ ಸಾಹಿತ್ಯದಲ್ಲಿ ಲೇಖಕನು ತನ್ನ ಲೇಖನವನ್ನು ಯಾರಿಗಾಗಿ ಉದ್ದೇಶಿಸಿರುವನೋ ಅವನ ಪ್ರಕೃತಿಯೊಂದಿಗೆ ತನ್ನ ಲೇಖನವನ್ನೂ ಅಜ್ಞಾತವಾಗಿ ಯಾದರೂ ಮಿಶ್ರಮಾಡಿಕೊಳ್ಳುತ್ತಾನೆ. ದಾಶರಥಿಯ 'ಪಾಂಚಾಲಿ'ಯು ಕೇವಲ ದಾಶರಥಿಯೊಬ್ಬನದು ಮಾತ್ರವಲ್ಲ; ಯಾವ ಸಮಾಜವು ಆ ಪಾಂಚಾಲಿಯನ್ನು ಕೇಳುತ್ತದೆಯೋ ಆ ಸಮಾಜದ ಜತೆಗೆ ಸೇರಿ ಪಾಂಚಾಲಿ ರಚಿತವಾಗಿದೆ. ಆದಕಾರಣ ಈ ಪಾಂಚಾಲಿಯಲ್ಲಿ ದಾಶರಥಿಯೊಬ್ಬನ ಮನಸ್ಸಿನ ಮಾತು ಕಂಡುಬರುವುದಿಲ್ಲ, ಇದರಲ್ಲಿ ಒಂದು ಕಾಲದ, ಒಂದು ಸಮಾಜದ ಅನುರಾಗವಿರಾಗ ಶ್ರದ್ಧಾವಿಶ್ವಾಸ ರುಚಿಗಳು ಪ್ರಕಾಶವನ್ನು ಪಡೆದಿರುತ್ತವೆ.

ಲೇಖಕರಲ್ಲಿ ಕೆಲವರು ಸ್ನೇಹಿತನಿಗೆ, ಕೆಲವರು ಸಂಪ್ರದಾಯಕ್ಕೆ, ಕೆಲವರು ಸಮಾಜಕ್ಕೆ, ಕೆಲವರು ಸರ್ವಕಾಲದ ಮಾನವನಿಗೆ ತಮ್ಮ ಮಾತನ್ನು ತಿಳಿಸಲು ಅಪೇಕ್ಷಿಸುತ್ತಾರೆ. ಈ ಕಾರ್ಯದಲ್ಲಿ ಯಾರು ಕೃತಾರ್ಥರಾಗುತ್ತಾರೋ ಅವರ ಲೇಖದಲ್ಲಿ ಆ ಸ್ನೇಹಿತನ, ಸಂಪ್ರದಾಯದ, ಸಮಾಜದ ಅಥವಾ ವಿಶ್ವಮಾನವನ ಪರಿಚಯವು ಅಷ್ಟಿಷ್ಟು ದೊರೆತೇ ದೊರೆಯುತ್ತದೆ. ಹೀಗೆ ಮಾಡಿ ಸಾಹಿತ್ಯವು ಲೇಖಕನ ಪರಿಚಯವನ್ನು ಮಾತ್ರವೇ ಅಲ್ಲದೆ, ತಾನು ಯಾರಿಗೋಸ್ಕರ ರಚಿತ ವಾಯಿತೋ ಅವರ ಪರಿಚಯವನ್ನೂ ಮಾಡಿಕೊಡುತ್ತದೆ.

ವಾಸ್ತವ ಜಗತ್ತಿನಲ್ಲಿಯೂ ಯೋಗ್ಯವಸ್ತು ಯೋಗ್ಯಸ್ಥಾನದಲ್ಲಿ ಆಶ್ರಯ ಪಡೆದಾಗ ಸುತ್ತುಮುತ್ತಣ ಆನುಕೂಲ್ಯವನ್ನು ಪಡೆದೇ ಉಳಿದಿರುತ್ತದೆ. ಆದಕಾರಣ ಯಾವ ವಸ್ತು ಉಳಿದಿರುತ್ತದೆಯೋ ಅದು ತನ್ನ ಪರಿಚಯವನ್ನು ಮಾತ್ರವೇ ಅಲ್ಲದೆ ತನ್ನ ಸುತ್ತುಮುತ್ತಿನ ಆವರಣದ ಪರಿಚಯವನ್ನೂ ಮಾಡಿಕೊಡುತ್ತದೆ. ಏಕೆಂದರೆ ಅದು ತನ್ನ ಗುಣದಿಂದ ಮಾತ್ರವೇ ಅಲ್ಲದೆ ಸುತ್ತುಮುತ್ತಿನ ಆವರಣದ ಗುಣದಿಂದಲೂ ಉಳಿದಿರುತ್ತದೆ.

ಈಗ ಸಾಹಿತ್ಯದ ಸೃಷ್ಟಿರಚನೆಯ ವಿಷಯವನ್ನು, ಈ ಒಟ್ಟುಗೂಡಿ ಬಂದಾಗುವ ವಿಷಯವನ್ನು, ಭಾವಿಸಿ ನೋಡೋಣ—ಒಂದೆರಡು ದೃಷ್ಟಾಂತಗಳನ್ನು ಪರಿಶೀಲಿಸೋಣ.

ಎಷ್ಟು ನವ ವರ್ಷಾಕಾಲದ ಮೇಘ, ಬಲಾಕಗಳ ಶ್ರೇಣಿ, ಕಾದ ಭೂಮಿಯ ಮೇಲೆ ಮಳೆಯ ನೀರು ಬಿದ್ದು ಉಂಟಾದ ಸುಗಂಧ—ಎಷ್ಟು ಪರ್ವತ ಅರಣ್ಯ, ನದೀ

ನಿರ್ಝರ, ನಗರ ಗ್ರಾಮಗಳ ಮೇಲೆ ಹಾದು ಘನಪುಂಜ ಗಂಭೀರವಾದ ಆಷಾಢದ ಸ್ನಿಗ್ಧ ಸಂಚಾರವು ಎಷ್ಟು ದಿನಗಳಿಂದ ಹಿಡಿದು ಎಷ್ಟು ಭಾವದ ಛಾಯೆ, ಸೌಂದರ್ಯದ ಪುಲಕ, ವೇದನೆಯ ಆಭಾಸಗಳನ್ನು ಕವಿಯ ಮನಸ್ಸಿನಲ್ಲಿ ಇಟ್ಟು ಹೋಗಿರುತ್ತದೆ! ಯಾರ ಮನಸ್ಸಿನಲ್ಲಿ ತಾನೇ ಇಡುವುದಿಲ್ಲ? ಜಗತ್ತಾದರೆ ಹಗಲಿರುಳೂ ನಮ್ಮ ಮನಸ್ಸನ್ನು ಸ್ಪರ್ಶಮಾಡಿ ಚಲಿಸುತ್ತದೆ. ಆ ಸ್ಪರ್ಶದಿಂದ ನಮ್ಮ ಮನಸ್ಸಿನ ತಂತಿಯಲ್ಲಿ ಅಷ್ಟಿಷ್ಟಾದರೂ ಧ್ವನಿಯುಂಟಾಗುತ್ತದೆ.

ಕಾಳಿದಾಸನ ಮನಸ್ಸಿನಲ್ಲಿ ಆತನ ಬಹುದಿನದ ಬಹುತರವಾದ ಈ ಧ್ವನಿಗಳು ಒಮ್ಮೆ ಒಂದು ಸೂತ್ರವನ್ನು ಅವಲಂಬಿಸಿದ ಕೂಡಲೇ ಅವು ಒಂದಾದ ಮೇಲೊಂದು ನುಗ್ಗಿ ಬಂದು ಸ್ಪಷ್ಟತೆಯನ್ನು ಹೊಂದಿ ಎಂಥ ಸುಂದರ ಸಂಘಟನೆಯನ್ನು ಪಡೆದುವು! ಅನೇಕ ದಿನಗಳ ಅನೇಕ ಭಾವಗಳ ಚಿತ್ರಗಳು ಕಾಳಿದಾಸನ ಮನಸ್ಸಿನಲ್ಲಿ ಈ ಶುಭ ಮುಹೂರ್ತಕ್ಕಾಗಿ ಉಮೇದುವಾರಿ ಮಾಡುತ್ತ ಸುಳಿದಾಡುತ್ತಿದ್ದುವು! ಇಂದು ಅವು ಯಕ್ಷನ ವಿರಹವಾರ್ತೆಯ ಸೂತ್ರವನ್ನು ಅವಲಂಬಿಸಿ ವರ್ಣನೆಯ ಪದರಪದರಗಳಲ್ಲಿ, ಮಂದಾಕ್ರಾಂತದ ಗುಚ್ಛಗುಚ್ಛಗಳಲ್ಲಿ ಘನೀಭವಿಸಿದುವು. ಇಂದು ಅವು ಒಂದರೊಡನೆ ಮತ್ತೊಂದು, ಸಮಗ್ರದೊಡನೆ ಪ್ರತ್ಯೇಕವಾಗಿದ್ದವು, ರಕ್ಷಣೆಯನ್ನು ಪಡೆದುವು.

ಸತಿ ಎಂದರೆ ಹಿಂದುಗಳ ಮನಸ್ಸಿನಲ್ಲಿ ಯಾವ ಭಾವವು ಜಾಗೃತವಾಗುತ್ತ ದೆಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಯಾರನ್ನು ನೋಡಿದರೆ ಸತೀತ್ವದ ಮಾಹಾತ್ಮ್ಯವು ನಮ್ಮ ಮನಸ್ಸನ್ನು ಅಷ್ಟಿಷ್ಟಾದರೂ ಸ್ಪರ್ಶಿಸುತ್ತದೆಯೋ ಅಂತಹ ಯಾರಾದರೊಬ್ಬ ಸ್ತ್ರೀಯನ್ನು ನಾವು ಪ್ರತಿಯೊಬ್ಬರೂ ನಿಶ್ಚಯವಾಗಿಯೂ ನೋಡಿರುತ್ತೇವೆ. ಸಾಂಸಾರಿಕ ದಿನಚರಿಯ ಕೆಲಸಕಾರ್ಯಗಳ ತುಚ್ಛತೆಯ ಮಧ್ಯದಲ್ಲಿ ಮಂಗಳದ ಯಾವ ದಿವ್ಯಮೂರ್ತಿಯನ್ನು ನಾವು ಕ್ಷಣೇ ಕ್ಷಣೇ ನೋಡಿರುತ್ತೇವೆಯೋ ಆ ನೋಟದ ಸ್ಮೃತಿಯು ಮನಸ್ಸಿನಲ್ಲಿ ಅಸ್ಪಷ್ಟ ಛಾಯೆಯಂತೆ ಸುಳಿದಾಡುತ್ತಾ ಇರುತ್ತದೆ.

ಕಾಳಿದಾಸನು ಕುಮಾರಸಂಭವದ ಕಥೆಯನ್ನು ಅವಲಂಬಿಸಿದಾಗ ಸತಿಯ ಸಂಬಂಧದಲ್ಲಿ ಯಾವ ಭಾವಗಳು ವಾತಾವರಣದಲ್ಲಿ ಸುಳಿದಾಡುತ್ತಿದ್ದವೋ ಅವೆಲ್ಲವೂ ಹೇಗೆ ಒಂದುಗೂಡಿ ಸಶಕ್ತವಾಗಿ ಆತನ ವಶವಾದುವು! ಮನೆಮನೆಯಲ್ಲಿಯೂ ನಿಷ್ಠಾವಂತಳಾದ ಸ್ತ್ರೀಯ ಯಾವ ಕಠೋರ ತಪಸ್ಸು ಸಾಂಸಾರಿಕ ಕಾರ್ಯಗಳ ಮರೆಯಿಂದ ಅಸ್ಪಷ್ಟವಾಗಿ ಕಣ್ಣಿಗೆ ಬೀಳುವುದೋ ಆ ತಪಸ್ಸೇ ಮಂದಾಕಿನಿಯ ಧಾರೆಯಿಂದ ಧೌತವಾದ ದೇವದಾರು ವನಚ್ಛಾಯೆಯಲ್ಲಿ ಹಿಮಾಲಯದ ಶಿಲಾತಲದಲ್ಲಿ, ದೇವಿಯ ತಪಸ್ಸಿನ ಪಟದಲ್ಲಿ ಚಿರಕಾಲವೂ ಉಜ್ವಲವಾಗಿ ಉಳಿದಿರುತ್ತದೆ.

ಯಾವುದನ್ನು ನಾವು ಗೀತಕಾವ್ಯವೆಂದು ಕರೆಯುತ್ತೇವೆಯೊ, ಅರ್ಥಾತ್ ಯಾವುದು ಸ್ವಲ್ಪದರಲ್ಲಿ ಒಂದೇ ಒಂದು ಭಾವದ ವಿಕಾಸವೋ, ಅದೂ ಕೂಡ ನಮ್ಮ ಮನಸ್ಸಿನ ಬಹು ದಿನದ ಅವ್ಯಕ್ತಭಾವದ ಯಾವುದೋ ಒಂದು ಸುಯೋಗವನ್ನು ಆಶ್ರಯಿಸಿ ಪರಿಸ್ಫುಟವಾಗುವುದಾಗಿದೆ.

ಆವಿಯು ವಾಯುವಿನಲ್ಲಿ ತೇಲಿಕೊಂಡು ಸುಳಿದಾಡುತ್ತದೆ; ಆದರೆ ಪುಷ್ಪರೇಖೆಯ ಶೀತಲ ಸ್ಪರ್ಶವಾದಾಗ ಒಟ್ಟುಗೂಡಿ ಹನಿಯಾಗುತ್ತದೆ. ಆಕಾಶದಲ್ಲಿ ಆವಿ ತೇಲುತ್ತಾ ಹೋಗುತ್ತದೆ, ಕಣ್ಣಿಗೆ ಕಾಣುವುದಿಲ್ಲ. ಬಂಡೆಯ ಹತ್ತಿರ ಬಂದು ತಾಗುತ್ತಲೇ ಮೇಘವಾಗಿ ಪರಿಣಮಿಸಿ ಮಳೆಯ ವೇಗದಿಂದ ನದೀ ನಿರ್ಝರಗಳಾಗಿ ಪ್ರವಹಿಸುತ್ತದೆ. ಹಾಗೆಯೇ ಗೀತಕಾವ್ಯದಲ್ಲಿ ಒಂದೇ ಒಂದು ಭಾವವು ಒಟ್ಟುಗೂಡಿ ಮುತ್ತಿನಂತೆ ಥಳಥಳಿಸುತ್ತದೆ. ದೊಡ್ಡ ದೊಡ್ಡ ಕಾವ್ಯಗಳಲ್ಲಿ ಭಾವದ ಸಮ್ಮಿಳಿತ ಸಮೂಹವು ಪ್ರವಾಹವಾಗಿ ಪರಿಣಮಿಸುತ್ತದೆ. ಆದರೆ ಮುಖ್ಯ ಮಾತೇನೆಂದರೆ, ಆವಿಯಂತೆಯೇ ಅವ್ಯಕ್ತಭಾವಗಳು ಕವಿಯ ಕಲ್ಪನೆಯಲ್ಲಿ ಎಂತಹ ಒಂದು ಸ್ಪರ್ಶಲಾಭವನ್ನು ಪಡೆಯುವುವೆಂದರೆ, ನೋಡುತ್ತ ನೋಡುತ್ತಿರುವಾಗಲೇ ಅದನ್ನು ಸುತ್ತಿ ವಿಚಿತ್ರವಾದ ಸುಂದರ ಮೂರ್ತಿಯನ್ನು ರಚಿಸಿ ಪ್ರತ್ಯಕ್ಷವಾಗುತ್ತವೆ.

ವರ್ಷಋತುವಿನಂತೆಯೇ ಮಾನವ ಸಮಾಜದಲ್ಲಿಯೂ ಒಂದೊಂದು ಸಮಯದಲ್ಲಿ ವಾತಾವರಣದಲ್ಲಿ ಭಾವದ ಆವಿಯು ಹೆಚ್ಚಾಗಿ ಚಲಿಸುತ್ತಿರುತ್ತದೆ. ಚೈತನ್ಯನ ಕಾಲವಾದ ಮೇಲೆ ಬಂಗಾಳಾ ದೇಶದಲ್ಲಿ ಇಂತಹ ಸ್ಥಿತಿ ಬಂದಿತ್ತು. ಆಗ ಆಕಾಶವೆಲ್ಲವೂ ಪ್ರೇಮರಸದಿಂದ ಆರ್ದ್ರವಾಗಿತ್ತು. ಆದಕಾರಣವೇ ದೇಶದಲ್ಲಿ ಆ ಕಾಲದಲ್ಲಿ ಎಲ್ಲೆಂದರಲ್ಲಿ ಎಷ್ಟು ಕವಿಗಳ ಮನಸ್ಸು ತಲೆಯೆತ್ತಿತ್ತೆಂದರೆ ಎಲ್ಲರೂ ಆ ರಸದ ಆವಿಯನ್ನು ಘನೀಭೂತಮಾಡಿ ಎಷ್ಟು ಅಪೂರ್ವ ಭಾಷೆಯಲ್ಲಿ, ನೂತನ ಛಂದಸ್ಸಿನಲ್ಲಿ, ಎಷ್ಟು ಹೆಚ್ಚಾಗಿ ಮತ್ತು ಎಷ್ಟು ಪ್ರಬಲವಾಗಿ ಅದನ್ನು ದಿಕ್ಕು ದಿಕ್ಕುಗಳಲ್ಲಿಯೂ ವರ್ಷ ಮಾಡಿದರು!

ಫ್ರಾನ್ಸಿನ ವಿದ್ರೋಹದ ಸಮಯದಲ್ಲಿಯೂ ಹಾಗೆಯೇ ಮಾನವ ಪ್ರೇಮದ ಭಾವಹಿಲ್ಲೋಲವು ಆಕಾಶವನ್ನೆಲ್ಲ ತುಂಬಿಕೊಂಡಿತ್ತು. ಅದು ನಾನಾ ಕವಿಗಳ ಚಿತ್ತದಲ್ಲಿ ಆಘಾತ ಪಡೆದು ಕೆಲವು ಕಡೆ ಕರುಣೆಯಲ್ಲಿ, ಕೆಲವು ಕಡೆ ವಿದ್ರೋಹದ ಸ್ವರದಲ್ಲಿ ತನ್ನನ್ನು ನಾನಾ ರೂಪದಲ್ಲಿ ಅಜಸ್ರಭಾವದಲ್ಲಿ ಪ್ರಕಾಶಮಾಡಿಕೊಂಡಿತು. ಆದಕಾರಣ ವಿಷಯವು ಇಷ್ಟು: ಮಾನವ ಮನಸ್ಸು ಯಾವ ವಿವಿಧ ಅವ್ಯಕ್ತಭಾವಗಳನ್ನು ಉಚ್ಛ್ವಸಿತಮಾಡುತ್ತದೆಯೋ—ಯಾವುದು ಅನವರತವೂ ಕ್ಷಣಿಕ ವೇದನೆಯಲ್ಲಿ, ಕ್ಷಣಿಕ ಭಾವನೆಯಲ್ಲಿ, ಕ್ಷಣಿಕ ಮಾತಿನ ವಿಷಯದಲ್ಲಿ ವಿಶ್ವಮಾನವನ

ಸುವಿಶಾಲವಾದ ಮನೋಲೋಕದ ಆಕಾಶವನ್ನು ಮುಸುಕಿ ತಿರುಗುತ್ತಿರುತ್ತದೆಯೋ—ಒಬ್ಬೊಬ್ಬ ಕವಿಯ ಕಲ್ಪನೆಯು ಒಂದೊಂದು ಆಕರ್ಷಣ ಕೇಂದ್ರದಂತಾಗಿ ಅವುಗಳಲ್ಲಿ ಒಂದೊಂದು ಗುಂಪನ್ನು ಕಲ್ಪನಾಸೂತ್ರದಿಂದ ಒಂದುಗೂಡಿಸಿ ಮನಸ್ಸಿಗೆ ಸ್ಪಷ್ಟವಾಗುವಂತೆ ಮಾಡುತ್ತದೆ. ಆದ್ದರಿಂದಲೇ ನಮಗೆ ಆನಂದವಾಗುತ್ತದೆ. ಆನಂದವು ಏಕಾಗುತ್ತದೆ? ಅದಕ್ಕೆ ಕಾರಣವೇನೆಂದರೆ ತನ್ನನ್ನು ತಾನು ನೋಡಬೇಕೆಂಬ ಒಂದು ಪ್ರಯತ್ನವು ಸಮಸ್ತ ಮಾನವನ ಮನಸ್ಸಿನಲ್ಲಿಯೂ ಸದಾ ಕೆಲಸಮಾಡುತ್ತಾ ಇರುತ್ತದೆ—ಆದಕಾರಣ ಎಲ್ಲಿ ಅದು ಯಾವುದಾದರೊಂದು ಐಕ್ಯದಲ್ಲಿ ತನ್ನ ಯಾವುದೋ ಒಂದು ವಿಕಾಸವನ್ನು ಕಂಡಾಗ ಅಲ್ಲಿಯೇ ಅದರ ಈ ನಿಯತಪ್ರಯತ್ನವು ಸಾರ್ಥಕವಾಗಿ ಅದಕ್ಕೆ ಆನಂದವನ್ನು ಕೊಡುತ್ತದೆ. ಕೇವಲ ಸಾಹಿತ್ಯವೇ ಏಕೆ? ದರ್ಶನ ಇತಿಹಾಸಗಳೂ ಹೀಗೆಯೇ. ದರ್ಶನ ಶಾಸ್ತ್ರದ ಸಮಸ್ತ ಪ್ರಶ್ನೆಗಳೂ ಸಮಸ್ತ ವಿಚಾರಗಳೂ ಅವ್ಯಕ್ತಭಾವದಲ್ಲಿ ಸಮಸ್ತ ಮಾನವರ ಮನಸ್ಸಿನಲ್ಲಿಯೂ ನೆಲಸಿರುತ್ತವೆ. ದಾರ್ಶನಿಕ ಪ್ರತಿಭೆಯು ಅವುಗಳಲ್ಲಿ ಯಾವುದೋ ಒಂದು ಗುಂಪಿಗೆ ಯಾವುದೋ ಒಂದು ಐಕ್ಯವನ್ನು ಕೊಟ್ಟ ಮಾತ್ರದಿಂದಲೇ ಅದರ ಒಂದು ರೂಪವು, ಒಂದು ಮೀಮಾಂಸೆಯು ನಮಗೆ ವ್ಯಕ್ತವಾಗುತ್ತದೆ—ನಾವು ನಮ್ಮ ಮನಸ್ಸಿನ ಆಲೋಚನೆಯ ಒಂದು ವಿಶೇಷ ಮೂರ್ತಿಯನ್ನು ನೋಡುತ್ತೇವೆ. ಇತಿಹಾಸವು ಜನರ ಬಾಯಲ್ಲಿ ಲೋಕವಾರ್ತೆಯ ಆಕಾಶದಲ್ಲಿ ನಿಂತಿರುತ್ತದೆ. ಐತಿಹಾಸಿಕನ ಪ್ರತಿಭೆಯು ಅದನ್ನು ಒಂದು ಸೂತ್ರದ ಸುತ್ತಲೂ ಬಂಧಿಸಿದ ಕೂಡಲೇ ಇಷ್ಟು ಕಾಲದ ಅವ್ಯಕ್ತ ಇತಿಹಾಸದ ವ್ಯಕ್ತ ಮೂರ್ತಿಯು ನಮ್ಮ ಬಳಿಗೆ ಬರುತ್ತದೆ.

ಯಾವ ಕವಿಯ ಕಲ್ಪನೆಯಿಂದ ಮನುಷ್ಯನ ಹೃದಯದ ಯಾವ ವಿಶೇಷ ರೂಪವು ಘನೀಭೂತವಾಗಿ ತಾನು ಅನಂತ ವೈಚಿತ್ರ್ಯದ ಒಂದು ಅಪರೂಪ ಪ್ರಕಾಶವನ್ನು ಸೌಂದರ್ಯದ ಮೂಲಕ ಪರಿಸ್ಫುಟಗೊಳಿಸುತ್ತದೆಯೋ ಅದೇ ಸಾಹಿತ್ಯ ಸಮಾಲೋಚಕನು ವಿಚಾರಮಾಡಿ ನೋಡಬೇಕಾದ ವಿಷಯ. ಕಾಳಿದಾಸನ ಉಪಮೆ ಸೊಗಸಾದದ್ದು, ಭಾಷೆ ಸರಸವಾದದ್ದು; ಕುಮಾರಸಂಭವದ ತೃತೀಯಃಸರ್ಗದ ವರ್ಣನೆ ಸುಂದರವಾದದ್ದು ಅಥವಾ ಅಭಿಜ್ಞಾನ ಶಾಕುಂತಳದ ಚತುರ್ಥ ಅಂಕದಲ್ಲಿ ಕರುಣರಸ ಪ್ರಚುರವಾಗಿದೆ ಎಂಬ ಆಲೋಚನೆ ಸಾಲದು. ಆದರೆ ಕಾಳಿದಾಸನ ಸಮಸ್ತ ಕಾವ್ಯದಲ್ಲಿ ಮಾನವನ ಒಂದು ವಿಶೇಷ ರೂಪವು ಸೇರಿದೆ. ಆತನ ಕಲ್ಪನೆಯು ಒಂದು ವಿಶೇಷ ಕೇಂದ್ರಸ್ವರೂಪವಾಗಿ ಆಕರ್ಷಣ-ವಿಕರ್ಷಣ ಗ್ರಹಣ-ವರ್ಜನಗಳ ನಯದಿಂದ ಮಾನವನ ಮನೋಲೋಕದಲ್ಲಿ ಯಾವ ಅವ್ಯಕ್ತವನ್ನು ಒಂದು ವಿಶೇಷ ಸೌಂದರ್ಯದಲ್ಲಿ ವ್ಯಕ್ತಮಾಡಿದೆ ಎಂಬುದೇ ಸಮಾಲೋಚಕನು ವಿಚಾರಮಾಡ

ಬೇಕಾದದ್ದು. ಕಾಳಿದಾಸನು ಜಗತ್ತಿನಲ್ಲಿ ಜನ್ಮಗ್ರಹಣಮಾಡಿ ನೋಡಿದನು, ಭಾವಿಸಿದನು, ಸಹಿಸಿದನು, ಕಲ್ಪಿಸಿದನು ಮತ್ತು ರಚಿಸಿದನು. ಆತನ ಈ ಭಾವನಾ ವೇದನಾ ಕಲ್ಪನಾಮಯ ಜೀವನವು ಮಾನವನ ಅನಂತ ರೂಪದ ಒಂದು ವಿಶೇಷ ರೂಪವನ್ನೇ ಮಾತಿನ ಮೂಲಕ ವ್ಯಕ್ತಪಡಿಸಿರುತ್ತದೆ. ಅದು ಏನು? ಒಂದು ವೇಳೆ ನಾವು ಪ್ರತಿಯೊಬ್ಬರೂ ಅಸಾಧಾರಣ ಕವಿಗಳಾಗಿದ್ದರೆ ನಾವು ಪ್ರತಿಯೊಬ್ಬರೂ ಅಪೂರ್ವತೆ ಕಂಡುಬರುವಂತಹ ನಮ್ಮ ಹೃದಯವನ್ನು ಮೂರ್ತಿಗೊಳಿಸುತ್ತಿದ್ದೆವು ಮತ್ತು ಈ ರೀತಿಯಾಗಿ ಅಂತವಿಲ್ಲದ ವಿಚಿತ್ರವು ಅಂತವಿಲ್ಲದ ಏಕವನ್ನು ಪ್ರಕಾಶ ಪಡಿಸುತ್ತಿತ್ತು. ಆದರೆ ನಮಗೆ ಆ ಸಾಮರ್ಥ್ಯವಿಲ್ಲ. ನಾವು ಮುಚ್ಚುಮರೆಯಿಲ್ಲದೆ ಹೀಗೆ ಹೇಳುತ್ತೇವೆ—ಯಾವುದನ್ನು ನಾವು ಸತ್ಯವೆಂದು ಪ್ರಚಾರಮಾಡುತ್ತೇವೆಯೋ ಅದು ನಮ್ಮ ಪ್ರಕೃತಿಗತವಾದ ಸತ್ಯವಲ್ಲ; ಹತ್ತು ಜನರಂತೆ ನಾವು ಅಭ್ಯಾಸಮಾಡಿದ ಆವೃತ್ತಿ ಮಾತ್ರ. ಆದಕಾರಣ, ನಾನು ನನ್ನ ಸಮಸ್ತ ಜೀವನದಿಂದ ಏನನ್ನು ನೋಡಿದ್ದೇನೆಯೋ, ತಿಳಿದಿದ್ದೇನೆಯೋ, ಪಡೆದಿದ್ದೇನೆಯೋ ಅದನ್ನು ಸಮಗ್ರಮಾಡಿ, ಸುಸ್ಪಷ್ಟ ಮಾಡಿ ತೋರಿಸಲು ನನಗೆ ಶಕ್ತಿಯಿಲ್ಲ. ಕವಿಗಳಾದರೂ ಸಂಪೂರ್ಣ ಶಕ್ತರೆಂದಲ್ಲ, ಅವರ ವಾಣಿಯಲ್ಲಿಯೂ ಸಮಸ್ತವೂ ಸ್ಪಷ್ಟವಾಗುವುದಿಲ್ಲ, ಸತ್ಯವಾಗುವುದಿಲ್ಲ, ಸುಂದರವಾಗುವುದಿಲ್ಲ—ಅವರ ಪ್ರಕೃತಿಯ ಗೂಢ ಭಾವವನ್ನು ಅವರ ಪ್ರಯತ್ನವು ಯಾವಾಗಲೂ ಸಾರ್ಥಕಮಾಡುವುದಿಲ್ಲ. ಆದರೆ ಅವರ ಸ್ವಂತಕ್ಕೆ ಅಗೋಚರವಾದ, ಅವರ ಪ್ರಯತ್ನಕ್ಕೆ ಮೀರಿದ ಒಂದು ಪ್ರದೇಶದಿಂದ, ವಿಶ್ವವ್ಯಾಪಿಯಾದ ಒಂದು ಗೂಢ ಪ್ರಯತ್ನದ ಪ್ರೇರಣೆಯಿಂದ, ಸಮಸ್ತ ಅಂತರಾಯ ಅಸ್ಪಷ್ಟತೆಗಳೊಳಗಿನಿಂದ ತಾನಾಗಿ ತಾನು ಒಂದು ಮಾನಸ ರೂಪವು—ಯಾವುದನ್ನು "ಹಿಡಿ ಹಿಡಿ ಎಂದು ಮನಸ್ಸುಮಾಡಿ ಹಿಡಿಯುವುದಕ್ಕೆ ಹೋದರೆ ಸಿಕ್ಕುವುದಿಲ್ಲವೋ" ಅದು—ಒಮ್ಮೆ ಸ್ವಲ್ಪಮಟ್ಟಿಗೆ, ಒಮ್ಮೆ ಹೆಚ್ಚಾಗಿ ಪ್ರಕಾಶವಾಗುತ್ತದೆ. ಯಾವ ಗೂಢದರ್ಶಿಯಾದ ಭಾವುಕನು ಕವಿಯ ಕಾವ್ಯದೊಳಗಿನಿಂದ ಈ ಸಮಗ್ರರೂಪವನ್ನು ನೋಡಬಲ್ಲನೋ ಅವನೇ ಯಥಾರ್ಥವಾದ ಸಾಹಿತ್ಯವಿಚಾರಕ.

ನಾವು ಈ ಎಲ್ಲ ಮಾತನ್ನೂ ಹೇಳುವುದರ ತಾತ್ಪರ್ಯವೇನೆಂದರೆ—ನಮ್ಮ ಭಾವದ ಸೃಷ್ಟಿಯು ಹುಡುಗಾಟಿಕೆಯ ಸೃಷ್ಟಿಯಲ್ಲ; ಅದು ವಸ್ತುಸೃಷ್ಟಿಯಂತೆಯೇ ಒಂದು ಅಮೋಘವಾದ ನಿಯಮಕ್ಕೆ ಅಧೀನವಾದದ್ದು. ಪ್ರಕಾಶದ ಯಾವುದೊಂದು ಆವೇಗವನ್ನು ನಾವು ಬಾಹ್ಯಜಗತ್ತಿನಲ್ಲಿ ಸಮಸ್ತ ಅಣುರೇಣುಗಳೊಳಗೂ ನೋಡುತ್ತೇವೆಯೋ ಆ ಆವೇಗವು ನಮ್ಮ ಮನೋವೃತ್ತಿಯಲ್ಲಿಯೂ ಪ್ರಬಲವೇಗದಿಂದ ಕಾರ್ಯಮಾಡುತ್ತದೆ. ಆದಕಾರಣ ಯಾವ ದೃಷ್ಟಿಯಿಂದ ನಾವು ಪರ್ವತ ಕಾನನ

ನದನದೀ ಮರುಭೂಮಿ ಸಮುದ್ರಗಳನ್ನು ನೋಡುತ್ತೇವೆಯೋ ಆ ದೃಷ್ಟಿಯಿಂದಲೇ ಸಾಹಿತ್ಯವನ್ನೂ ನೋಡಬೇಕು—ಇದೂ ಕೂಡ ನಿಮ್ಮದೂ ನಮ್ಮದೂ ಅಲ್ಲ, ಒಟ್ಟು ಸೃಷ್ಟಿಯ ಒಂದು ಭಾಗ.

ಆ ರೀತಿಯಾಗಿ ನೋಡಿದರೆ ಸಾಹಿತ್ಯದ ಗುಣದೋಷಗಳನ್ನು ಮಾತ್ರ ವಿಚಾರ ಮಾಡಿ ಮುಗಿಸಲಾಗುವುದಿಲ್ಲ. ಅದರ ಜತೆಗೆ ಅದರ ಒಂದು ವಿಕಾಸದ ಪ್ರಣಾಳಿಯನ್ನು, ಅದರ ಒಂದು ದೊಡ್ಡ ಕಾರ್ಯಕಾರಣ ಸಂಬಂಧವನ್ನು ನೋಡಬೇಕೆಂಬ ಆಸಕ್ತಿಯುಂಟಾಗುತ್ತದೆ. ನಾನು ಹೇಳುತ್ತಿರುವುದನ್ನು ಒಂದು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

"ಗ್ರಾಮಸಾಹಿತ್ಯ" ಎಂಬ ಪ್ರಬಂಧದಲ್ಲಿ ನಾನು ಹೀಗೆ ಹೇಳಿದ್ದೇನೆ: ದೇಶದ ಸಾಧಾರಣ ಜನರಲ್ಲಿ ಕೆಲವು ಭಾವಗಳು ಮೊದಲು ತುಂಡು ಕಾವ್ಯಗಳಾಗಿ ನಾಲ್ಕು ದಿಕ್ಕಿನಲ್ಲಿಯೂ ಹರಡಿಕೊಂಡು ಇರುತ್ತವೆ. ಆ ಮೇಲೆ ಒಬ್ಬ ಕವಿ ಆ ತುಂಡು ಕಾವ್ಯಗಳನ್ನು ಒಂದು ದೊಡ್ಡ ಕಾವ್ಯದ ಸೂತ್ರದಲ್ಲಿ ಒಂದುಗೂಡಿಸಿ ಒಂದು ದೊಡ್ಡ ಉಂಡೆಯನ್ನಾಗಿ ಮಾಡುತ್ತಾನೆ. ಯಾವ ಪುರಾಣದಲ್ಲಿಯೂ ಇಲ್ಲದ ಎಷ್ಟೋ ಹರಪಾರ್ವತಿಯರ ಕಥೆಗಳೂ ಮೂಲರಾಮಾಯಣದಲ್ಲಿಲ್ಲದ ರಾಮಸೀತೆಯರ ಕಥೆಗಳೂ ಗ್ರಾಮದ ಗಾಯಕ ಕಥಕರ ಬಾಯಿಂದ ಹಳ್ಳಿಯ ಚತ್ವರಗಳಲ್ಲಿ, ಲಕ್ಷಣಗಳ ಬಿಕ್ಕಟ್ಟಿಗೆ ಸಿಕ್ಕದ ಛಂದಸ್ಸಿನಲ್ಲಿ, ಗ್ರಾಮ್ಯಭಾಷೆಯಲ್ಲಿ ಬಹುಕಾಲ ಸುತ್ತಾಡುತ್ತಿರುತ್ತವೆ. ಅಂತಹ ಸಮಯದಲ್ಲಿ ಯಾವನೋ ಒಬ್ಬ ರಾಜಸಭೆಯ ಕವಿ ಕುಟೀರದ ಅಂಗಳದಲ್ಲಲ್ಲದೆ ಒಂದು ದೊಡ್ಡ ವಿಶಿಷ್ಟಸಭೆಯಲ್ಲಿ ಗಾನಮಾಡುವುದಕ್ಕಾಗಿ ಆಹ್ವಾನ ಪಡೆದಾಗ ಆ ಗ್ರಾಮ್ಯಕಥೆಗಳನ್ನು ತನ್ನವನ್ನಾಗಿ ಮಾಡಿಕೊಂಡು ಪರಿಷ್ಕೃತ ಛಂದಸ್ಸಿನಲ್ಲಿ ಗಂಭೀರ ಭಾಷೆಯಲ್ಲಿ ದೊಡ್ಡ ಕಾವ್ಯವನ್ನಾಗಿ ಮಾಡುತ್ತಾನೆ. ಪುರಾತನವನ್ನು ನೂತನವನ್ನಾಗಿಯೂ ವಿಚ್ಛಿನ್ನವನ್ನು ಅಖಂಡವನ್ನಾಗಿಯೂ ತೋರಿಸಿದಾಗ ಸಮಸ್ತ ದೇಶವೂ ತನ್ನ ಹೃದಯವನ್ನು ಸ್ಪಷ್ಟವಾಗಿಯೂ ಪ್ರಶಸ್ತವಾಗಿಯೂ ನೋಡಿ ಆನಂದಪಡುತ್ತದೆ. ಇದರಿಂದ ಅದು ತನ್ನ ಜೀವನ ಪಥದಲ್ಲಿ ಇನ್ನೊಂದು ಪರ್ವ ಮುಂದುವರಿಯುತ್ತದೆ. ಮುಕುಂದರಾಮನ 'ಚಂಡಿ', ಘನರಾಮನ 'ಧರ್ಮಮಂಗಳ', ಕೇತಕದಾಸ ಮೊದಲಾದವರ 'ಮನಸಾರ ಭಾಸಾನ್', ಭಾರತಚಂದ್ರನ 'ಅನ್ನದಾ ಮಂಗಳ' ಇವು ಈ ಶ್ರೇಣಿಯ ಕಾವ್ಯಗಳು. ಇವು ಬಂಗಾಳದ ಚಿಕ್ಕ ಚಿಕ್ಕ ಹಳ್ಳಿಯ ಸಾಹಿತ್ಯವನ್ನು ದೊಡ್ಡ ಸಾಹಿತ್ಯದಲ್ಲಿ ಜೋಡಿಸುವ ಪ್ರಯತ್ನಗಳು. ಹೀಗೆ ಮಾಡಿ ಒಂದು ದೊಡ್ಡ ಸ್ಥಾನದಲ್ಲಿ ತಮ್ಮ ಪ್ರಾಣಪದಾರ್ಥವನ್ನು ಒಟ್ಟುಗೂಡಿಸಿ ಗ್ರಾಮ ಸಾಹಿತ್ಯವು ಕಾಯಿ ಹಿಡಿದ ಕೂಡಲೇ ಬಿದ್ದುಹೋಗುವ ಹುಪ್ಪಿನ ತೊಟ್ಟುಗಳಂತೆ ಜಾರಿ ಬಿದ್ದುಹೋಗುತ್ತವೆ.

ಪಂಚತಂತ್ರ, ಕಥಾಸರಿತ್ಸಾಗರ, ಅರಬ್ಬಿಯ ಕಥೆಗಳು, ಇಂಗ್ಲೆಂಡಿನ ಆರ್ಥರ್ ಕಥೆಗಳು, ಸ್ಕ್ಯಾಂಡಿನೇವಿಯದ ಸಾಗಾಸಾಹಿತ್ಯ ಇವೆಲ್ಲವೂ ಹೀಗೆಯೇ ಹುಟ್ಟಿದುವು. ಆ ಗ್ರಂಥಗಳಲ್ಲಿ ಜನರ ಬಾಯಿಯಲ್ಲಿದ್ದ ಕಥೆಗಳು ಒಂದು ಸ್ಥಾನದಲ್ಲಿ ದೊಡ್ಡ ಆಕಾರದಲ್ಲಿ ಒಟ್ಟುಗೂಡುವುದಕ್ಕೆ ಪ್ರಯತ್ನಮಾಡಿವೆ.

ಈ ರೀತಿಯನ್ನು ಬಿಟ್ಟು ಭಾವದಲ್ಲಿ ಐಕ್ಯತೆಯನ್ನು ಹೊಂದುವ ಪ್ರಯತ್ನವು ಮಾನವ ಸಾಹಿತ್ಯದಲ್ಲಿ ಕೆಲವು ಕಡೆ ಅತ್ಯಾಶ್ಚರ್ಯಕರವಾದ ವಿಕಾಸವನ್ನು ಪಡೆಯುತ್ತದೆ. ಗ್ರೀಸಿನಲ್ಲಿ ಹೋಮರನ ಕಾವ್ಯಗಳು ಮತ್ತು ಭಾರತವರ್ಷದಲ್ಲಿ ರಾಮಾಯಣ ಮಹಾಭಾರತಗಳು ಈ ತೆರದ ಗ್ರಂಥಗಳು.

ಇಲಿಯಡ್ ಮತ್ತು ಒಡೆಸ್ಸಿಗಳಲ್ಲಿ ಅನೇಕ ಖಂಡಕಥೆಗಳು ಕ್ರಮಕ್ರಮವಾಗಿ ಪದರಪದರವಾಗಿ ಸೇರಿಕೊಂಡು ಒಂದಾದುವು. ಈ ರೀತಿಯಾಗಿ ಪ್ರಾಯಶಃ ಸ್ಥೂಲವಾಗಿ ಸರ್ವತ್ರವೂ ನಡೆಯಿತು. ಯಾವ ಕಾಲದಲ್ಲಿ ಕೈಬರವಣಿಗೆಯ ಪುಸ್ತಕಗಳೂ ಅಚ್ಚಿನ ಪುಸ್ತಕಗಳೂ ಇರಲಿಲ್ಲವೋ, ಯಾವಾಗ ಗಾಯಕರು ಕಾವ್ಯವನ್ನು ಗಾನಮಾಡುತ್ತಾ ಜನರ ಕಿವಿಗೆ ಬೀಳುವಂತೆ ಮಾಡಿ ಸಂಚರಿಸುತ್ತಿದ್ದರೋ ಆಗ ನಾನಾ ಕಾಲಗಳಲ್ಲಿ ನಾನಾ ಹಸ್ತಗಳಿಂದ ಒಂದು ಕಾವ್ಯವು ಕ್ರಮಕ್ರಮವಾಗಿ ತುಂಬಿಕೊಳ್ಳುತ್ತದೆ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಯಾವ ಅಸ್ಥಿಪಂಜರದ ಮಧ್ಯದಲ್ಲಿ ಈ ಕಾವ್ಯಗಳು ಎದ್ದು ನಿಲ್ಲಲು ಅವಕಾಶ ದೊರೆಯುತ್ತದೆಯೋ ಅದು ಒಬ್ಬ ದೊಡ್ಡ ಕವಿಯ ರಚನೆ ಎಂಬುದರಲ್ಲಿ ಸಂದೇಹವಿಲ್ಲ. ಆ ಅಸ್ಥಿಪಂಜರದ ಜೋಡಣೆಯನ್ನನುಸರಿಸಿ ಹೊಸ ಹೊಸ ಕಥೆಗಳು ಈ ಐಕ್ಯದ ಕಾಂಡದಿಂದ ಭ್ರಷ್ಟವಾಗಲು ಸಾಧ್ಯವಾಗುವುದಿಲ್ಲ.

ಮಿಥಿಲೆಯ ವಿದ್ಯಾಪತಿಯ ಗಾನವು ಹೇಗೆ ಬಂಗಾಳದ ಪದಾವಳಿಯಾಯಿತೆಂಬುದನ್ನು ನೋಡಿದರೆ ಸ್ವಭಾವದ ನಿಯಮದಿಂದ ಒಂದು ಹೇಗೆ ಮತ್ತೊಂದಾಗಿ ಪರಿಣಮಿಸುತ್ತದೆಂಬುದು ಗೊತ್ತಾಗುತ್ತದೆ. ಬಂಗಾಳದಲ್ಲಿ ಪ್ರಚಲಿತವಾಗಿರುವ ವಿದ್ಯಾಪತಿಯ ಪದಾವಳಿಯನ್ನು ವಿದ್ಯಾಪತೀಯವೆಂದು ಹೇಳಲಾಗುವುದಿಲ್ಲ. ಮೂಲ ಕವಿಯದಾದ ಯಾವುದೂ ಆತನ ಅನೇಕ ಪದಗಳಲ್ಲಿ ಉಳಿದಿರುವುದಿಲ್ಲ. ಕಾಲಕ್ರಮದಲ್ಲಿ ಬಂಗಾಳಿ ಗಾಯಕರ ಮತ್ತು ಬಂಗಾಳಿ ಶ್ರೋತೃಗಳ ಯೋಗದಿಂದ ಅವುಗಳ ಭಾಷೆ, ಅವುಗಳ ಅರ್ಥ, ಅಷ್ಟೇಕೆ?—ಅವುಗಳ ರಸವೂ ಕೂಡ ಪರಿವರ್ತನವಾಗಿ ಅವು ಒಂದು ನೂತನ ವಸ್ತುವಾಗಿ ಪರಿಣಮಿಸಿವೆ. ಗ್ರಿಯರ್ಸನ್ನನು ವಿದ್ಯಾಪತಿಯ ಯಾವ ಮೂಲ ಪದಗಳನ್ನು ಪ್ರಕಾಶಪಡಿಸಿದ್ದಾನೆಯೋ ಬಂಗಾಳಾ ಪದಾವಳಿಯಲ್ಲಿ ಅವುಗಳಲ್ಲಿ ಮೂರು-ನಾಲ್ಕು ಮಾತ್ರ ಸೇರಿರುತ್ತವೆ. ಅವುಗಳಲ್ಲಿ ಬಹುಭಾಗದವು ಸೇರಲಾರವು.

ಆದರೂ ನಾನಾ ಕಾಲದ ಮತ್ತು ನಾನಾ ಜನರ ಮೂಲಕವಾಗಿ ಪರಿವರ್ತನ ಹೊಂದಿದ್ದರೂ ಅವು ಅಸಂಬದ್ಧ ಪ್ರಲಾಪವಾಗಿಹೋಗಿಲ್ಲ. ಏಕೆಂದರೆ ಒಂದು ಮೂಲ ಸ್ವರವು ಮಧ್ಯದಲ್ಲಿದ್ದುಕೊಂಡು ಎಲ್ಲ ಪರಿವರ್ತನವನ್ನೂ ತನ್ನದನ್ನಾಗಿ ಮಾಡಿಕೊಳ್ಳಲು ಸರ್ವದಾ ಎಚ್ಚರದಿಂದಿರುತ್ತದೆ. ಆ ಸ್ವರದ ಪ್ರಾಧಾನ್ಯದಿಂದ ಈ ಪದಗಳನ್ನು ವಿದ್ಯಾಪತಿಯವೆಂದು ಹೇಳುತ್ತೇವೆ. ಮತ್ತೊಂದು ಕಡೆ ಆಮೂಲಾಗ್ರವಾದ ಪರಿವರ್ತನದ ಪ್ರಾಧಾನ್ಯದಿಂದ ಇವುಗಳನ್ನು ಬಂಗಾಳಿಗಳ ಸಾಹಿತ್ಯವೆಂದು ಹೇಳಲು ಹಿಂದೆಗೆಯಬೇಕಾದ ಕಾರಣವಿಲ್ಲ.

ಇದರಿಂದ ತಿಳಿಯುವುದೇನೆಂದರೆ, ಮೊದಲು ಅನೇಕ ಬಾಯಿಗಳಲ್ಲಿ ಪ್ರಚಲಿತವಾಗಿದ್ದ ಖಂಡಗಾನಗಳು ಒಂದು ಕಾವ್ಯದಲ್ಲಿ ಒಟ್ಟಾಗಿ ಸೇರಿ, ಆ ಕಾವ್ಯವು ಮತ್ತೆ ಬಹುಕಾಲದ ವರೆಗೂ ಜನಸಾಮಾನ್ಯದಲ್ಲಿ ಹಾಡಿನ ರೂಪದಲ್ಲಿ ಬಳಕೆಯಲ್ಲಿದ್ದಾಗ ಅದರ ಮೇಲೆ ನಾನಾ ಕಡೆಗಳಿಂದ ನಾನಾ ಕಾಲದ ಕೈವಾಡವು ಪುನಃ ಕೆಲಸಮಾಡುತ್ತದೆ. ಆ ಕಾವ್ಯವು ದೇಶದ ಎಲ್ಲ ಕಡೆಗಳಿಂದಲೂ ತನ್ನ ಪುಷ್ಟಿಯನ್ನು ತಾನೇ ಆಕರ್ಷಿಸಿ ಪಡೆಯುತ್ತದೆ. ಹೀಗೆ ಮಾಡಿ ಕಾಲಕ್ರಮದಲ್ಲಿ ಅದು ಸಮಗ್ರ ದೇಶದ ವಸ್ತುವಾಗಿ ಪರಿಣಮಿಸುತ್ತದೆ. ಅದರಲ್ಲಿ ಸಮಸ್ತ ದೇಶದ ಅಂತಃಕರಣದ ಇತಿಹಾಸವೂ ತತ್ತ್ವಜ್ಞಾನವೂ ಧರ್ಮಬೋಧವೂ ಕರ್ಮನೀತಿಯೂ ತಾವೇ ಬಂದು ಸೇರಿಕೊಳ್ಳುತ್ತವೆ. ಯಾವ ಕವಿ ಕೊನೆಯಲ್ಲಿ ಇವುಗಳ ಭಿತ್ತಿಯಿಂದ ಪಟ್ಟಣವನ್ನು ನಿರ್ಮಿಸುತ್ತಾನೆಯೋ ಅವನ ಆಶ್ಚರ್ಯಕರವಾದ ಶಕ್ತಿಯಿಂದಲೇ ಇದು ಸಂಭವವಾಗಬಲ್ಲದು. ಅವನು ಎಂತಹ ಜಾಗದಲ್ಲಿ, ಎಂತಹ ರೀತಿಯಲ್ಲಿ ತಳಹದಿಯನ್ನು ಆರಂಭಿಸುತ್ತಾನೆಂದರೆ, ಅವನ ನಕ್ಷೆ ಎಷ್ಟು ಪ್ರಶಸ್ತವಾಗಿರುವುದು ಎಂದರೆ ಬಹು ಕಾಲದ ವರೆಗೂ ಅವನು ಸಮಸ್ತ ದೇಶವನ್ನೂ ತನ್ನ ಕಾರ್ಯದಲ್ಲಿ ನಿಯೋಗಿಸಿಕೊಳ್ಳಲು ಸಮರ್ಥನಾಗುತ್ತಾನೆ. ಇಷ್ಟು ಜನಗಳಿಂದ ಇಷ್ಟು ಜನರ ಕೈಗೆ ಬಿದ್ದು ಅದು ಎಲ್ಲಿಯೂ ಸ್ವಲ್ಪವೂ ಏರುಪೇರಾಗುವುದಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಮೂಲ ನಿರ್ಮಾಣದ ಮಾಹಾತ್ಮ್ಯೆಯಿಂದ ಅದೆಲ್ಲವೂ ನಿವಾರಿತವಾಗುತ್ತದೆ.

ನಮ್ಮ ರಾಮಾಯಣ ಮಹಾಭಾರತಗಳು, ಮುಖ್ಯವಾಗಿ ಮಹಾಭಾರತವು, ಇದರ ದೃಷ್ಟಾಂತ ಸ್ಥಲ.

ಈ ರೀತಿಯಾಗಿ ಕಾಲಕಾಲದಲ್ಲಿ ಒಂದು ಸಮಗ್ರಜನಾಂಗವು ಯಾವ ಕಾವ್ಯವನ್ನು ಒಬ್ಬ ಕವಿಯ ಕವಿತ್ವಭಿತ್ತಿಯನ್ನಾಶ್ರಯಿಸಿ ರಚನೆಯಾಗುವುದೋ ಅದನ್ನೇ ಯಥಾರ್ಥವಾದ ಮಹಾಕಾವ್ಯವೆಂದು ಹೇಳಬೇಕಾಗುತ್ತದೆ. ಅದನ್ನು ನಾನು ಗಂಗೆ, ಬ್ರಹ್ಮಪುತ್ರ ಮೊದಲಾದ ನದಿಗಳೊಂದಿಗೆ ಹೋಲಿಸುತ್ತೇನೆ. ಮೊದಲು ಪರ್ವತದ

ಅನೇಕ ಗುಪ್ತ ಗುಹೆಗಳಿಂದ ಅನೇಕ ನಿರ್ಝರಿಗಳು ಬಂದು ಜಾಗಕ್ಕೆ ಬಂದು ದೊಡ್ಡ ನದಿಯನ್ನು ತಯಾರುಮಾಡುತ್ತವೆ. ಅದಾದಮೇಲೆ ಅದು ತನ್ನ ಮಾರ್ಗದಲ್ಲಿ ಹರಿದು ಹೋಗುವಾಗ ನಾನಾ ದೇಶಗಳಿಂದ ನಾನಾ ಉಪನದಿಗಳು ಅದರೊಂದಿಗೆ ಸೇರಿ ಅದರಲ್ಲಿ ತಾವು ಲೀನವಾಗಿ ಹೋಗುತ್ತವೆ.

ಆದರೆ, ಭಾರತವರ್ಷದ ಗಂಗೆ, ಈಜಿಪ್ಟಿನ ನೈಲ್ ಮತ್ತು ಚೀನಾ ದೇಶದ ಯಾಂಗ್‌ಟಿ ಸಿಕಿಯಾಂಗ್ ಮೊದಲಾದುವುಗಳಂತೆ ಮಹಾ ನದಿಗಳು ಜಗತ್ತಿನಲ್ಲಿ ಕೆಲವು ಮಾತ್ರ ಇವೆ. ಈ ನದಿಗಳು ತಾಯಿಯಂತೆ ಒಂದು ದೊಡ್ಡ ದೇಶದ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತವನ್ನು ರಕ್ಷಿಸುತ್ತಾ ಮುಂದೆ ಸಾಗುತ್ತವೆ. ಅವು ಒಂದೊಂದು ಪ್ರಾಚೀನ ಸಭ್ಯತೆಯ ಸ್ತನ್ಯಕೊಡುವ ದಾದಿಯಂತೆ ಇರುತ್ತವೆ.

ಈ ರೀತಿಯ ಮಹಾಕಾವ್ಯಗಳು ನಮಗೆ ತಿಳಿದಿರುವ ಸಾಹಿತ್ಯದಲ್ಲಿ ನಾಲ್ಕು ಮಾತ್ರ ಇವೆ—ಇಲಿಯಡ್, ಓಡೆಸ್ಸಿ, ರಾಮಾಯಣ ಮತ್ತು ಮಹಾಭಾರತ. ಅಲಂಕಾರ ಶಾಸ್ತ್ರದ ಕೃತ್ರಿಮ ನಿಯಮಗಳ ಬಲದಿಂದ ರಘುವಂಶ, ಭಾರವಿ, ಮಾಘ ಅಥವಾ ಮಿಲ್ಟನ್ನಿನ ಪ್ಯಾರಡೈಸ್ ಲಾಸ್ಟ್, ವಾಲ್ಟೇರನ ಹೆನ್ರಿಯಡ್ ಮೊದಲಾದುವನ್ನು ಮಹಾಕಾವ್ಯದ ಪಂಕ್ತಿಯಲ್ಲಿ ಬಲಾತ್ಕಾರದಿಂದ ಕೂಡಿಸಲಾಗಿದೆ. ಈಗಿನ ಕಾಲ ದಲ್ಲಂತೂ ಮುದ್ರಣಾಲಯದ ಸೌಕರ್ಯದಿಂದ ಮಹಾಕಾವ್ಯವು ಸೃಷ್ಟಿಯಾಗುವ ಸಂಭವವೂ ಕೂಡ ಲೋಪವಾಗಿ ಹೋಗಿದೆ.

ರಾಮಾಯಣವು ರಚಿತವಾಗುವುದಕ್ಕೆ ಮೊದಲು ರಾಮಚರಿತ್ರ ಸಂಬಂಧವಾಗಿ ದೇಶದ ಜನಸಾಮಾನ್ಯದಲ್ಲಿ ಪ್ರಚಲಿತವಾಗಿದ್ದ ಮೊದಲಿನ ಹಳೆಯ ಕಥೆಗಳನ್ನು ಈಗ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಆದರೆ ಅವುಗಳಲ್ಲಿಯೇ ರಾಮಾಯಣದ ಒಂದು ಪೂರ್ವಸೂಚನೆಯು ದೇಶದಲ್ಲೆಲ್ಲ ಹರಡಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ನಮ್ಮ ದೇಶದಲ್ಲಿ ಅವತಾರ ಪುರುಷರೆಂದು ಗಣ್ಯರಾಗಿರುವ ವೀರಪುರುಷರೆಲ್ಲರೂ ನಿಶ್ಚಯವಾಗಿಯೂ ಜಗತ್ತಿನ ಹಿತಕ್ಕಾಗಿ ಕೆಲಕೆಲವು ಅಸಾಮಾನ್ಯ ಕಾರ್ಯಗಳನ್ನು ಮಾಡಿದ್ದರು. ರಾಮಾಯಣವು ರಚಿತವಾಗುವುದಕ್ಕೆ ಮೊದಲು ದೇಶದಲ್ಲಿ ರಾಮ ಚಂದ್ರನ ವಿಷಯವಾಗಿ ಆ ರೀತಿಯ ಒಂದು ಸುದ್ದಿ ನಿಸ್ಸಂದೇಹವಾಗಿಯೂ ಪ್ರಚಲಿತವಾಗಿತ್ತು. ಆತನು ತಂದೆಯ ಸತ್ಯಪಾಲನೆಗಾಗಿ ವನಕ್ಕೆ ಹೋದನು, ಮತ್ತು ಆತನ ಪತ್ನಿಯನ್ನು ಅಪಹರಿಸಿದವನನ್ನು ವಿನಾಶಮಾಡಿ ಆಕೆಯನ್ನು ಉದ್ಧಾರಮಾಡಿ ದನು ಎಂಬ ಸಂಗತಿಗಳಲ್ಲಿ ಆತನ ಚರಿತ್ರದ ಮಹತ್ವವು ಪ್ರಮಾಣವಾಗುವುದು ನಿಜ; ಆದರೆ ಯಾವ ಅಸಾಧಾರಣ ಲೋಕಹಿತವನ್ನು ಸಾಧಿಸಿ ಆತನು ಜನರ ಹೃದಯದಲ್ಲಿ ಅಧಿಕಾರ ಮಾಡಿದನೋ ಆ ಲೋಕಹಿತದ ಆಭಾಸ ಮಾತ್ರ ರಾಮಾಯಣದಲ್ಲಿ ಇದೆ.

ಭಾರತದಲ್ಲಿ ಆರ್ಯರ ಅಧಿಕಾರಕ್ಕೆ ಮುಂಚೆ ಯಾವ ದ್ರಾವಿಡ ಜಾತೀಯರು ಆದಿ ನಿವಾಸಿಗಳನ್ನು ಜಯಿಸಿ ಈ ದೇಶದಲ್ಲಿ ನೆಲಸಿದ್ದರೋ ಅವರು ಕೇವಲ ಅನಾಗರಿಕರಾಗಿರಲಿಲ್ಲ; ಅವರು ಆರ್ಯರಿಂದ ಸುಲಭವಾಗಿ ಸೋಲನ್ನೂ ಒಪ್ಪಿಕೊಳ್ಳಲಿಲ್ಲ. ಅವರು ಆರ್ಯರ ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿದ್ದರು; ವ್ಯವಸಾಯಕ್ಕೆ ತೊಂದರೆ ಕೊಡುತ್ತಿದ್ದರು. ಕುಲಪತಿಗಳು ಅಡವಿಯನ್ನು ಕಡಿದು ಒಂದೊಂದು ಆಶ್ರಮವನ್ನು ಸ್ಥಾಪಿಸಿಕೊಂಡಾಗ ಅವರು ವಿಶೇಷ ತೊಂದರೆಯನ್ನು ಕೊಡುತ್ತಿದ್ದರು.

ಈ ದ್ರಾವಿಡಜಾತಿಯ ರಾಜವಂಶವು ಅತ್ಯಂತ ಪರಾಕ್ರಾಂತವಾಗಿ ದಾಕ್ಷಿಣಾತ್ಯದ ಒಂದು ದುರ್ಗಮಸ್ಥಾನದಲ್ಲಿ ಸಮೃದ್ಧಶಾಲಿಯಾದ ಒಂದು ರಾಜ್ಯವನ್ನು ಸ್ಥಾಪನೆಮಾಡಿತು. ಆ ದ್ರಾವಿಡ ರಾಜರಿಂದ ಪ್ರೇರಿತರಾದ ಜನರು ಹಠಾತ್ತಾಗಿ ವನಮಧ್ಯದಿಂದ ಹೊರಗೆ ಬಂದು ಆರ್ಯರ ಉಪನಿವೇಶಗಳನ್ನು ತೊಂದರೆಗೀಡು ಮಾಡುತ್ತಿದ್ದರು.

ರಾಮಚಂದ್ರನು ವಾನರರನ್ನು, ಅರ್ಥಾತ್ ಆದಿನಿವಾಸಿಗಳನ್ನು, ದಳದಲ್ಲಿ ಸೇರಿಸಿಕೊಂಡು ಬಹು ದಿನದ ಪ್ರಯತ್ನದಿಂದಲೂ ಕೌಶಲದಿಂದಲೂ ಆ ದ್ರಾವಿಡರ ಪ್ರತಾಪವನ್ನು ನಷ್ಟಪಡಿಸಿದನು. ಈ ಕಾರಣದಿಂದಲೇ ಅವನ ಗೌರವಗಾನವು ಆರ್ಯರಲ್ಲಿ ಪ್ರಚಲಿತವಾಯಿತು. ಶಕರ ಉಪದ್ರವದಿಂದ ಹಿಂದುಗಳನ್ನು ಉದ್ಧಾರಮಾಡಿ ವಿಕ್ರಮಾದಿತ್ಯನು ಹೇಗೆ ಯಶಸ್ವಿಯಾದನೋ ಅದೇ ರೀತಿಯಲ್ಲಿ ಅನಾರ್ಯರ ಪ್ರಭಾವವನ್ನು ಖರ್ವಮಾಡಿ ಆರ್ಯರಿಗೆ ನಿರುಪದ್ರವವನ್ನುಂಟುಮಾಡಿದ ಆ ರಾಮನೂ ಸಾಧಾರಣರಿಗೆ ಅತ್ಯಂತ ಪ್ರಿಯನೂ ಪೂಜ್ಯನೂ ಆದನು.

ಆ ಉಪದ್ರವವನ್ನು ಯಾರು ದೂರಮಾಡಬಲ್ಲರೆಂಬ ಚಿಂತೆಯು ಆಗ ನಾಲ್ಕು ದಿಕ್ಕುಗಳಲ್ಲಿಯೂ ಜಾಗ್ರತವಾಗಿತ್ತು. ಅಲ್ಪ ವಯಸ್ಸಿನಲ್ಲಿಯೇ ಸುಲಕ್ಷಣನಾಗಿರುವುದನ್ನು ಕಂಡು ವಿಶ್ವಾಮಿತ್ರನು ರಾಮಚಂದ್ರನನ್ನು ಯೋಗ್ಯಪಾತ್ರವೆಂದು ಸ್ಥಿರೀಕರಿಸಿದನು. ಬಾಲ್ಯದಿಂದಲೂ ರಾಮಚಂದ್ರನು ವಿಶ್ವಾಮಿತ್ರನ ಪ್ರೋತ್ಸಾಹದಿಂದಲೂ ಶಿಕ್ಷಣದಿಂದಲೂ ಶತ್ರುಗಳೊಡನೆ ಯುದ್ಧಮಾಡಲು ನಿಯುಕ್ತನಾದನು. ಆಗ ಅವನು ಅರಣ್ಯದ ಗುಹನೊಂದಿಗೆ ಸ್ನೇಹ ಬೆಳಸಿ ಯಾವ ರೀತಿ ಶತ್ರುಗಳನ್ನು ಜಯಿಸಬಹುದು ಎಂಬುದರ ಸೂಚನೆಯನ್ನು ಕೊಡುತ್ತಿದ್ದನು.

ಆ ಕಾಲದಲ್ಲಿ ಗೋವು ಧನವೆಂದೂ ಕೃಷಿ ಪವಿತ್ರಕರ್ಮವೆಂದೂ ಗಣ್ಯವಾಗಿದ್ದುವು. ಜನಕನು ಸ್ವಹಸ್ತದಿಂದ ಉಳುತ್ತಿದ್ದನು. ಈ ಉಳುವ ನೇಗಿಲಿನಿಂದಲೇ ಆಗ ಆರ್ಯರು ಭಾರತವರ್ಷದ ಭೂಮಿಯನ್ನು ಕ್ರಮಕ್ರಮವಾಗಿ ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದರು. ಈ ನೇಗಿಲಿನ ಬಾಯಿಂದ ಅರಣ್ಯವು ನಾಶವಾಗಿ ವ್ಯವಸಾಯ ಕ್ಷೇತ್ರವು ವ್ಯಾಪಿಸುತ್ತಿತ್ತು. ರಾಕ್ಷಸರು ಈ ವ್ಯಾಪ್ತಿಗೆ ಅಂತರಾಯವಾಗಿದ್ದರು.

ಪ್ರಾಚೀನ ಮಹಾಪುರುಷರಲ್ಲಿ ಜನಕನು ಆರ್ಯಸಭ್ಯತೆಯ ಒಬ್ಬ ಧುರಂಧರ ನಾಗಿದ್ದನೆಂಬುದನ್ನು ಅನೇಕ ಜನಪ್ರವಾದಗಳು ಸಮರ್ಥನಮಾಡುತ್ತವೆ. ಭಾರತ ವರ್ಷದಲ್ಲಿ ಕೃಷಿಯನ್ನು ವಿಸ್ತಾರಮಾಡುವುದರಲ್ಲಿ ಆತನು ಒಬ್ಬ ಉದ್ಯೋಗಿಪುರುಷ ನಾಗಿದ್ದನು. ತನ್ನ ಮಗಳ ಹೆಸರನ್ನು ಕೂಡ ಸೀತೆಯೆಂದಿಟ್ಟನು. ಯಾವ ವೀರನು ಧನುರ್ಭಂಗಮಾಡಿ ಅಸಾಮಾನ್ಯ ಬಲವನ್ನು ತೋರಿಸುವನೋ ಅವನಿಗೆ ಕನ್ಯೆ ಯನ್ನು ಕೊಡುವುದಾಗಿ ಶಪಥಮಾಡಿದನು. ಆ ಅಶಾಂತಿಯ ಕಾಲದಲ್ಲಿ ಇಂತಹ ಅಸಾಮಾನ್ಯ ಬಲಿಷ್ಠ ಪುರುಷನಿಗಾಗಿ ಆತನು ಅಪೇಕ್ಷೆಮಾಡಿದ್ದನು. ಪ್ರಬಲ ಶತ್ರು ವಿಗೆ ವಿರೋಧವಾಗಿ ಯಾರು ನಿಲ್ಲಬಲ್ಲನೆಂಬುದನ್ನು ಕಂಡುಹಿಡಿಯಲು ಇದೊಂದು ಉಪಾಯವಿತ್ತು.

ವಿಶ್ವಾಮಿತ್ರನು ರಾಮಚಂದ್ರನನ್ನು ಅನಾರ್ಯ ಪರಾಭವ ವ್ರತದಲ್ಲಿ ದೀಕ್ಷಿತ ನನ್ನಾಗಿ ಮಾಡಿ ಆತನನ್ನು ಜನಕನ ಪರೀಕ್ಷಾ ಸ್ಥಲಕ್ಕೆ ಕರೆದುಕೊಂಡು ಹೋದನು. ಅಲ್ಲಿ ರಾಮಚಂದ್ರನು ಧನುರ್ಭಂಗಮಾಡಿ ತಾನು ವ್ರತಗ್ರಹಣಕ್ಕೆ ಶ್ರೇಷ್ಠ ಅಧಿಕಾರಿ ಯೆಂಬುದರ ಪರಿಚಯವನ್ನು ಮಾಡಿಕೊಟ್ಟನು.

ಅದಾದ ಮೇಲೆ ಆತನು ತನ್ನ ತಮ್ಮನಾದ ಭರತನ ಮೇಲೆ ರಾಜ್ಯಭಾರವನ್ನು ಹಾಕಿ ಮಹಾ ಪ್ರತಿಜ್ಞೆಯ ಪಾಲನಕ್ಕಾಗಿ ವನಪ್ರವೇಶಮಾಡಿದನು. ಭರದ್ವಾಜ, ಅಗಸ್ತ್ಯ ಮುಂತಾದ ಯಾವ ಋಷಿಗಳು ದುರ್ಗಮವಾದ ದಕ್ಷಿಣದಲ್ಲಿ ಆರ್ಯ ನಿವಾಸ ವಿಸ್ತಾರದಲ್ಲಿ ಪ್ರವೃತ್ತರಾಗಿದ್ದರೋ ಅವರ ಉಪದೇಶವನ್ನು ಹೊಂದಿ ಅನುಚರನಾದ ಲಕ್ಷ್ಮಣನೊಡನೆ ಅಪರಿಚಿತವಾದ ಗಹನ ಅರಣ್ಯದೊಳಗೆ ಆತನು ಅದೃಶ್ಯನಾದನು.

ಅಲ್ಲಿ ವಾಲಿ ಸುಗ್ರೀವರೆಂಬ ಇಬ್ಬರು ಪ್ರತಿದ್ವಂದ್ವಿಗಳಾದ ಅಣ್ಣತಮ್ಮಂದಿರಲ್ಲಿ ಒಬ್ಬನನ್ನು ಕೊಂದು ಇನ್ನೊಬ್ಬನನ್ನು ತನ್ನ ದಳದಲ್ಲಿ ಸೇರಿಸಿಕೊಂಡನು. ವಾನರರನ್ನು ವಶಮಾಡಿಕೊಂಡು ಅವರಿಗೆ ಯುದ್ಧವಿದ್ಯೆಯನ್ನು ಕಲಿಸಿ ಸೈನ್ಯವನ್ನು ನಿರ್ಮಾಣ ಮಾಡಿದನು. ಆ ಸೈನ್ಯದೊಡನೆ ಶತ್ರುಪಕ್ಷದಲ್ಲಿ ಕೌಶಲದಿಂದ ಆತ್ಮವಿಚ್ಛೇದವನ್ನುಂಟು ಮಾಡಿ ಲಂಕಾಪುರಿಯನ್ನು ಧ್ವಂಸಮಾಡಿದನು. ಈ ರಾಕ್ಷಸರು ಗೃಹನಿರ್ಮಾಣ ವಿದ್ಯೆಯಲ್ಲಿ ದಕ್ಷರಾಗಿದ್ದರು. ಯುಧಿಷ್ಠಿರನು ತಯಾರುಮಾಡಿಸಿದ ಆಶ್ಚರ್ಯಕರವಾದ ಪ್ರಾಸಾದವನ್ನು ನಿರ್ಮಿಸಿದವನು ಮಯನೆಂಬ ದಾನವನು. ಮಂದಿರ ನಿರ್ಮಾಣದಲ್ಲಿ ದ್ರಾವಿಡರ ಕೌಶಲವು ಇಂದಿನ ವರೆಗೂ ಭಾರತವರ್ಷದಲ್ಲಿ ವಿಶಿಷ್ಟತೆಯನ್ನು ಪಡೆದಿರು ತ್ತದೆ. ಇವರೇ ಪ್ರಾಚೀನ ಈಜಿಪ್ಟಿನವರ ಸಜಾತೀಯರೆಂದು ಕೆಲಕೆಲವರು ಅನುಮಾನ ಮಾಡುವುದು ಹೆಚ್ಚು ಅಸಂಗತವೆಂದು ತೋರುವುದಿಲ್ಲ.

ಅದು ಹೇಗಾದರೂ ಇರಲಿ, ಲಂಕಾಪುರಿಯ ವಿಷಯವಾಗಿ ನಡೆದುಬಂದಿರುವ ಪ್ರವಾದಕ್ಕೆ ಸ್ವಲ್ಪ ಮೂಲವಿತ್ತು. ಆ ರಾಕ್ಷಸರು ಅಸಭ್ಯರಾಗಿರಲಿಲ್ಲ. ಅಷ್ಟೇ ಅಲ್ಲ, ಶಿಲ್ಪಕಾರ್ಯದಲ್ಲಿ ಅವರು ಆರ್ಯರಿಗಿಂತಲೂ ಶ್ರೇಷ್ಠರಾಗಿದ್ದರು.

ರಾಮಚಂದ್ರನು ಶತ್ರುಗಳನ್ನು ಜಯಿಸಿದನು. ಆದರೆ ಅವರ ರಾಜ್ಯವನ್ನು ಹರಣಮಾಡಲಿಲ್ಲ. ವಿಭೀಷಣನು ಆತನ ಮಿತ್ರನಾಗಿ ಲಂಕೆಯಲ್ಲಿ ರಾಜ್ಯಭಾರ ಮಾಡಲು ಮೊದಲುಮಾಡಿದನು. ಕಿಷ್ಕಿಂಧೆಯ ರಾಜ್ಯಭಾರವನ್ನು ವಾನರರಿಗೇ ಒಪ್ಪಿಸಿ ಚಿರಕಾಲವೂ ಆತನು ಅವರನ್ನು ವಶಮಾಡಿಕೊಂಡನು. ಈ ರೀತಿಯಾಗಿ ರಾಮಚಂದ್ರನೇ ಆರ್ಯರೊಂದಿಗೆ ಅನಾರ್ಯರ ಮಿಳನವನ್ನುಂಟುಮಾಡಿ ಅವರಲ್ಲಿ ಪರಸ್ಪರ ಆದಾನಪ್ರದಾನದ ಸಂಬಂಧವನ್ನು ಸ್ಥಾಪಿಸಿದನು. ಅದರ ಫಲವಾಗಿಯೇ ದ್ರಾವಿಡರು ಕಾಲಕ್ರಮದಲ್ಲಿ ಆರ್ಯರೊಂದಿಗೆ ಒಂದು ಸಮಾಜಕ್ಕೆ ಸೇರಿದವರಾಗಿ ಹಿಂದೂ ಜನಾಂಗವನ್ನು ಸೃಜಿಸಿದರು. ಈ ಹಿಂದೂ ಜಾತಿಯಲ್ಲಿ ಉಭಯಜಾತಿಯ ಆಚಾರವಿಚಾರಗಳೂ ಪೂಜಾಪದ್ಧತಿಗಳೂ ಮಿಶ್ರವಾಗಿ ಭಾರತವರ್ಷದಲ್ಲಿ ಶಾಂತಿಯು ಸ್ಥಾಪಿತವಾಯಿತು.

ಕ್ರಮಕ್ರಮವಾಗಿ ಆರ್ಯ ಅನಾರ್ಯರ ಮಿಳನವು ಸಂಪೂರ್ಣವಾದಾಗ— ಪರಸ್ಪರ ಧರ್ಮವು, ವಿದ್ಯವು ನಿರ್ಣಯವಾದಾಗ ರಾಮಚಂದ್ರನ ಪುರಾತನ ಕಥೆ ಬಾಯಿಂದ ಬಾಯಿಗೆ ಹೋಗುತ್ತಾ ರೂಪಾಂತರವನ್ನೂ ಭಾವಾಂತರವನ್ನೂ ಪಡೆಯಿತು. ಮುಂದೆ ಎಂದಾದರೊಂದು ದಿನ ಇಂಗ್ಲಿಷರೊಂದಿಗೆ ಭಾರತವಾಸಿಗಳ ಸಂಪೂರ್ಣ ಮಿಳನವಾದರೆ ಕ್ಲೈವನ ಕೀರ್ತಿಯನ್ನು ವಿಶೇಷ ರೀತಿಯಲ್ಲಿ ಆಡಂಬರ ಮಾಡುವ ಯಾವ ಕಾರಣವಾದರೂ ಉಳಿದಿರುತ್ತದೆಯೇ? ಅಥವಾ ಸೀಪಾಯಿ ದಂಗೆಯ ಔಟ್ರಾಂ ಮೊದಲಾದ ಯೋಧರ ಕಥೆಯನ್ನು ವಿಶೇಷ ಸ್ಮರಣೀಯವಾಗಿ ಮಾಡಬೇಕಾದ ಸ್ವಾಭಾವಿಕವಾದ ಯಾವ ಉತ್ತೇಜನವಾದರೂ ಉಳಿಯುತ್ತದೆಯೇ?

ದೇಶದಲ್ಲಿ ಪ್ರಚಲಿತವಾಗಿದ್ದ ಚರಿತ್ರ ಕಥೆಗಳನ್ನು ಮಹಾಕಾವ್ಯದಲ್ಲಿ ಸೇರಿಸಿದ ಕವಿ ಈ ಅನಾರ್ಯವಶವ್ಯಾಪಾರಕ್ಕೆ ಪ್ರಾಧಾನ್ಯವನ್ನು ಕೊಡದೆ ಮಹಾ ಚರಿತ್ರದ ಒಂದು ಸಂಪೂರ್ಣ ಆದರ್ಶವನ್ನು ವೃದ್ಧಿಮಾಡಿದನು. ಅದನ್ನು ಕವಿ ಮಾಡಿದನೆಂದರೆ ತಪ್ಪಾಗುವುದೆಂದು ತೋರುತ್ತದೆ. ರಾಮಚಂದ್ರನ ಪೂಜ್ಯಸ್ಮೃತಿ ಕ್ರಮ ಕ್ರಮವಾಗಿ ಕಾಲಾಂತರ, ಅವಸ್ಥಾಂತರಗಳನ್ನು ಅನುಸರಣಮಾಡಿ ತನ್ನ ಪೂಜನೀಯತೆಯನ್ನು ಸಾಧಾರಣರ ಭಕ್ತಿವೃತ್ತಿಗೆ ಉಪಯೋಗಿಯನ್ನಾಗಿ ಮಾಡಿರುತ್ತದೆ. ಕವಿ ತನ್ನ ಪ್ರತಿಭೆಯ ಮೂಲಕ ಅದನ್ನು ಒಂದು ಸ್ಥಳದಲ್ಲಿ ಘನೀಭೂತವಾಗುವಂತೆಯೂ

ಸುಸ್ಪಷ್ಟವಾಗುವಂತೆಯೂ ಮಾಡಿದನು. ಆಗ ಸರ್ವಸಾಧಾರಣರ ಭಕ್ತಿ ಚರಿತಾರ್ಥವಾಯಿತು.

ಆದರೆ ಆದಿಕವಿ ಅದನ್ನು ಎಲ್ಲಿ ನಿಲ್ಲಿಸಿದನೋ ಅದು ಅಲ್ಲಿಂದೀಚೆಗೆ ಅಲ್ಲಿಯೇ ನಿಂತಿಲ್ಲ.

ರಾಮಾಯಣದ ಆದಿಕವಿ ಗಾರ್ಹಸ್ಥ್ಯ ಪ್ರಧಾನವಾದ ಹಿಂದೂ ಸಮಾಜದ ಅವತಾರವಾಗುವಂತೆ ರಾಮನನ್ನು ಚಿತ್ರಿಸಿದ್ದಾನೆ. ಪುತ್ರನಾಗಿ, ಭ್ರಾತೃವಾಗಿ, ಪತಿಯಾಗಿ, ಮಿತ್ರನಾಗಿ, ಬ್ರಾಹ್ಮಣ ಧರ್ಮದ ರಕ್ಷಕನಾಗಿ, ಕೊನೆಗೆ ರಾಜನಾಗಿ ವಾಲ್ಮೀಕಿಯ ರಾಮನು ತನ್ನ ಲೋಕ ಪೂಜ್ಯತೆಯನ್ನು ಸಪ್ರಮಾಣಮಾಡಿದ್ದಾನೆ. ಆತನು ರಾವಣನನ್ನು ಕೊಂದದ್ದು ಕೂಡ ಕೇವಲ ಧರ್ಮಪತ್ನಿಯ ಉದ್ಧಾರಕ್ಕಾಗಿ. ಕೊನೆಯಲ್ಲಿ ಆ ಪತ್ನಿಯನ್ನು ತ್ಯಾಗಮಾಡಿದ್ದು ಕೇವಲ ಪ್ರಜಾರಂಜನೆಯ ಅನುರೋಧದಿಂದ. ತನ್ನ ಎಲ್ಲ ಸ್ವಾಭಾವಿಕ ಪ್ರವೃತ್ತಿಯನ್ನೂ ಶಾಸ್ತ್ರಾನುಸಾರವಾಗಿ ಶಾಸನಮಾಡಿ ಸಮಾಜ ರಕ್ಷೆಯ ಆದರ್ಶವನ್ನು ತೋರಿಸಿದ್ದಾನೆ. ನಮ್ಮ ಸ್ಥಿತಿ ಪ್ರಧಾನವಾದ ಸಭ್ಯತೆಯಲ್ಲಿ ಪದೇ ಪದೇ ಪ್ರಯೋಜನವಾಗುವ ತ್ಯಾಗ, ಕ್ಷಮೆ, ಆತ್ಮನಿಗ್ರಹಗಳು ರಾಮನ ಚರಿತ್ರೆಯಲ್ಲಿ ಪ್ರಸ್ಫುಟವಾಗಿದ್ದು ರಾಮಾಯಣವು ಹಿಂದೂ ಸಮಾಜದ ಮಹಾ ಕಾವ್ಯವಾಗಿ ಪರಿಣಮಿಸಿದೆ.

ಆದಿಕವಿ ರಾಮಾಯಣವನ್ನು ಬರೆದಾಗ, ರಾಮನ ಚರಿತೆಯಲ್ಲಿ ಅಮಾನುಷತ್ವವನ್ನು ಸೇರಿಸಿದಾಗಲೂ ಕೂಡ, ಆತನು ರಾಮನನ್ನು ಮನುಷ್ಯನ ಆದರ್ಶವಾಗಿಯೇ ಚಿತ್ರಿಸಿದ್ದಾನೆ.

ಆದರೆ ಅಮಾನುಷತ್ವಕ್ಕೆ ಒಂದು ಕಡೆ ಸ್ಥಾನಕೊಟ್ಟರೆ ಅದನ್ನು ಅಲ್ಲಿಯೇ ಇಡುವುದು ಸಾಧ್ಯವಲ್ಲ. ಅದು ಕ್ರಮಕ್ರಮವಾಗಿ ಬೆಳೆಯುತ್ತದೆ. ಹೀಗಾಗಿ ರಾಮನು ಕಾಲಕ್ರಮದಲ್ಲಿ ದೇವತಾಪದವಿಯನ್ನು ಪಡೆದನು.

ಆಗ ರಾಮಾಯಣದ ಮೂಲಸ್ವರದಲ್ಲಿ ಇನ್ನೊಂದು ಪರಿವರ್ತನವು ಪ್ರವೇಶಿಸಿತು. ಕೃತ್ತಿವಾಸನ ರಾಮಾಯಣದಲ್ಲಿ ನಮಗೆ ಅದರ ಪರಿಚಯವು ದೊರೆಯುತ್ತದೆ.

ರಾಮನನ್ನು ದೇವತೆಯೆಂದು ಹೇಳಿದರೆ ಆತನು ಯಾವ ಕಠಿಣಕಾರ್ಯಗಳನ್ನು ಮಾಡಿದನೋ ಅವುಗಳ ದುಸ್ಸಾಧ್ಯತೆ ಉಳಿಯುವುದಿಲ್ಲ. ಆದಕಾರಣ ರಾಮನ ಚರಿತ್ರವನ್ನು ಹಿರಿಯದನ್ನಾಗಿ ಮಾಡುವುದಕ್ಕೆ ಅವುಗಳ ವರ್ಣನೆ ಇನ್ನು ಸಾಕಾಗುವುದಿಲ್ಲ. ಆಗ ಯಾವ ಭಾವದ ಕಡೆಯಿಂದ ನೋಡಿದರೆ ದೇವಚರಿತ್ರವು ಮನುಷ್ಯರಿಗೆ ಪ್ರಿಯವಾಗುವುದೋ ಆ ಭಾವವೇ ಕಾವ್ಯದಲ್ಲಿ ಪ್ರಧಾನವಾಗುತ್ತದೆ.

ಭಕ್ತವತ್ಸಲತೆಯೇ ಆ ಭಾವ. ಕೃತ್ತಿವಾಸನ ರಾಮನು ಭಕ್ತವತ್ಸಲ ರಾಮ.

ಆತನು ಅಧಮರನ್ನೂ ಪಾಪಿಗಳನ್ನೂ ಎಲ್ಲರನ್ನೂ ಉದ್ಧಾರಮಾಡುತ್ತಾನೆ. ಆತನು ಗುಹನೆಂಬ ಚಂಡಾಲನನ್ನು ಮಿತ್ರನೆಂದು ಆಲಿಂಗನಮಾಡುತ್ತಾನೆ. ವನದ ಪಶುಗಳಾದ ವಾನರರನ್ನು ಪ್ರೇಮದ ಮೂಲಕ ಧನ್ಯರನ್ನಾಗಿ ಮಾಡುತ್ತಾನೆ; ಭಕ್ತ ಹನುಮಂತನ ಜೀವನವನ್ನು ಭಕ್ತಿಯಿಂದ ಆರ್ದ್ರಮಾಡಿ ಅವನ ಜನ್ಮವನ್ನು ಸಾರ್ಥಕಮಾಡುತ್ತಾನೆ. ವಿಭೀಷಣನು ಆತನ ಭಕ್ತ. ರಾವಣನೂ ಕೂಡ ಶತ್ರುಭಾವದಲ್ಲಿ ಆತನಿಂದ ವಿನಾಶ ವನ್ನು ಹೊಂದಿ ಉದ್ಧಾರವಾದನು. ಈ ರಾಮಾಯಣದಲ್ಲಿರುವುದು ಭಕ್ತಿಯ ಲೀಲೆ.

ಭಾರತವರ್ಷದಲ್ಲಿ ಒಂದು ಕಾಲದಲ್ಲಿ ಈ ಒಂದು ಭಾವವು ಜನಸಾಮಾನ್ಯದಲ್ಲಿ ಉತ್ಪನ್ನವಾಗಿತ್ತು: ಈಶ್ವರಲಾಭದ ಅಧಿಕಾರವು ಕೇವಲ ಜ್ಞಾನಿಗಳದಲ್ಲ; ಅಲ್ಲದೆ ಈಶ್ವರನನ್ನು ಕಾಣಬೇಕಾದರೆ ಮಂತ್ರ, ತಂತ್ರ, ವಿಶೇಷವಿಧಿಗಳಿಂದ ಪ್ರಯೋಜನ ವಿಲ್ಲ; ಸರಳಭಕ್ತಿಯ ಮೂಲಕವೇ ಆಪಾಮರಚಂಡಾಲರೂ ಈಶ್ವರಲಾಭವನ್ನು ಪಡೆಯಬಲ್ಲರು. ಈ ಮತವು ಹಠಾತ್ತಾಗಿ ಒಂದು ನೂತನ ಆವಿಷ್ಕಾರದಂತೆ ಬಂದು ಭಾರತೀಯ ಜನಸಾಮಾನ್ಯದ ದುಸ್ಸಹವಾದ ಹೀನತಾಭಾವವನ್ನು ಮೋಚನ ಮಾಡಿತು. ಆ ಬೃಹದಾನಂದವು ದೇಶದಲ್ಲೆಲ್ಲಾ ವ್ಯಾಪ್ತವಾಗಿ ತುಂಬಿ ತುಳುಕು ತ್ತಿದ್ದಾಗ ಹುಟ್ಟಿದ ಸಾಹಿತ್ಯವು ಜನಸಾಮಾನ್ಯದ ಈ ನೂತನ ಗೌರವಲಾಭದ ಸಾಹಿತ್ಯ. ಕಾಲಕೇತು, ಧನಪತಿ, ಚಾಂದ್‌ಸದಾಗರ್ ಮೊದಲಾದ ಸಾಧಾರಣ ಜನರೇ ಅದರ ನಾಯಕರು; ಬ್ರಾಹ್ಮಣ ಕ್ಷತ್ರಿಯರಲ್ಲ; ಮುನಿ ಜ್ಞಾನಿ ಸಾಧಕರಲ್ಲ. ಸಮಾಜದಲ್ಲಿ ಯಾರು ಕೆಳಗೆ ಬಿದ್ದಿದ್ದಾರೆಯೋ ದೇವರು ಅವರ ದೇವತೆ ಎಂಬುದನ್ನು ಸಾಹಿತ್ಯವು ನಾನಾ ರೀತಿಯಲ್ಲಿ ಪ್ರಚಾರ ಮಾಡಿತು. ಕೃತ್ತಿವಾಸನ ರಾಮಾಯಣ ದಲ್ಲಿಯೂ ಈ ಭಾವವಿರುತ್ತದೆ: ಭಗವಂತನು ಶಾಸ್ತ್ರಜ್ಞಾನಹೀನರೂ ಅನಾಚಾರಿಗಳೂ ಆದ ವಾನರರಿಗೆ ಮಿತ್ರನು; ಕಟ್ಟಿಗೆ ಮಾರುವವಳ ಅತಿ ಸಾಮಾನ್ಯವಾದ ಸೇವೆಯೂ ಆತನಿಗೆ ಅಗ್ರಾಹ್ಯವಾಗುವುದಿಲ್ಲ; ಪಾಪಿಷ್ಠ ರಾಕ್ಷಸರನ್ನು ಕೂಡ ಆತನು ಯಥೋಚಿತ ಶಾಸ್ತಿಯ ಮೂಲಕ ಸೋಲಿಸಿ ಉದ್ಧಾರಮಾಡುತ್ತಾನೆ. ಈ ಭಾವವು ಕೃತ್ತಿವಾಸನ ಕಾವ್ಯದಲ್ಲಿ ಪ್ರಬಲವಾಗಿ ಭಾರತವರ್ಷದಲ್ಲಿ ರಾಮಾಯಣ ಕಥೆಯ ಧಾರೆಯನ್ನು ಗಂಗೆಯ ಶಾಖೆಯಾದ ಭಾಗೀರಥಿಯಂತೆ ಒಂದು ವಿಶೇಷಮಾರ್ಗದಲ್ಲಿ ಒಯ್ಯುತ್ತದೆ.

ರಾಮಾಯಣ ಕಥೆಯ ಯಾವ ಧಾರೆಯನ್ನು ನಾವು ಅನುಸರಣಮಾಡಿಕೊಂಡು ಬಂದಿದ್ದೇವೆಯೋ ಅದರ ಒಂದು ಅತ್ಯಂತ ಆಧುನಿಕ ಶಾಖೆಯು 'ಮೇಘನಾದವಧ' ಕಾವ್ಯದಲ್ಲಿ ಇರುತ್ತದೆ. ಈ ಕಾವ್ಯವು ಈ ಪುರಾತನ ಕಥೆಯನ್ನು ಅವಲಂಬನ ಮಾಡಿಯೂ ವಾಲ್ಮೀಕಿ, ಕೃತ್ತಿವಾಸ ರಾಮಾಯಣಗಳಿಂದ ಭಿನ್ನವಾದ ಒಂದು ವಿಪರೀತ ಪ್ರಕೃತಿಯನ್ನು ಪಡೆದಿರುತ್ತದೆ.

ಇಂಗ್ಲಿಷನ್ನು ಓದಿ ಯಾವ ಸಾಹಿತ್ಯವನ್ನು ನಾವು ರಚಿಸುತ್ತೇವೋ ಅದು ಸ್ಥಾಯಿಯಾದ ವಸ್ತುವಲ್ಲ; ಆದಕಾರಣ ಈ ಸಾಹಿತ್ಯವು ದೇಶಸಾಹಿತ್ಯವೆಂದು ಗಣ್ಯವಾಗುವುದಕ್ಕೂ ಯೋಗ್ಯವಲ್ಲ ಎಂದು ನಾವು ಅನೇಕ ವೇಳೆ ಹೇಳಿದ್ದೇವೆ.

ಯಾವ ವಸ್ತು ಯಾವುದಾದರೂ ಒಂದು ಸ್ಥಾಯಿಯಾದ ವಿಶೇಷತ್ವವನ್ನು ಪಡೆಯುವುದೋ ಯಾವುದು ಇನ್ನು ಯಾವ ರೀತಿಯಾಗಿಯೂ ಪರಿವರ್ತನವಾಗುವ ಸಂಭವವಿಲ್ಲವೋ ಅದನ್ನು ಸ್ಥಾಯಿಯಾದ ವಸ್ತು ಎಂದು ಹೇಳುವುದಾದರೆ ಸಜೀವ ಪ್ರಕೃತಿಯಲ್ಲಿ ಆ ವಸ್ತು ಎಲ್ಲಿಯೂ ಇಲ್ಲ.

ಮನುಷ್ಯ ಸಮಾಜದಲ್ಲಿ ಭಾವದೊಂದಿಗೆ ಭಾವದ ಮಿಳನವಾಗುತ್ತದೆ, ಮತ್ತು ಆ ಮಿಳನದಲ್ಲಿ ಹೊಸ ಹೊಸ ವೈಚಿತ್ರ್ಯದ ಸೃಷ್ಟಿಯಾಗುತ್ತದೆ. ಭಾರತವರ್ಷದಲ್ಲಿ ಇಂತಹ ಮಿಳನಗಳು ಎಷ್ಟಾದುವು, ನಮ್ಮ ಮನಸ್ಸು ಎಷ್ಟು ಪರಿವರ್ತನಗಳ ಮೂಲಕ ಬಂದಿದೆ ಎಂಬುದಕ್ಕೆ ಮಿತಿ ಮೇರೆ ಇಲ್ಲ. ಸ್ವಲ್ಪ ಕಾಲದ ಹಿಂದೆ ಮುಸಲ್ಮಾನರು ನಮ್ಮ ದೇಶದ ರಾಜಸಿಂಹಾಸನದಲ್ಲಿ ಕುಳಿತಿದ್ದಾಗ ಅವರು ನಮ್ಮ ಮನಸ್ಸನ್ನು ಸ್ಪರ್ಶಿಸಲಿಲ್ಲವೇನು? ಅವರ ಸೆಮಿಟಿಕ್ ಭಾವದೊಡನೆ ಹಿಂದೂ ಭಾವದ ಸ್ವಾಭಾವಿಕ ಸಮ್ಮಿಶ್ರಣವು ಉಂಟಾಗಲಿಲ್ಲವೇನು? ನಮ್ಮ ಶಿಲ್ಪ, ಸಾಹಿತ್ಯ, ವೇಷಭೂಷಣಗಳು, ರಾಗರಾಗಿಣಿಗಳು, ಧರ್ಮಕರ್ಮಗಳಲ್ಲಿ ಮುಸಲ್ಮಾನ ಸಾಮಗ್ರಿಯು ಮಿಶ್ರವಾಗಿದೆ. ಮನಸ್ಸಿನೊಂದಿಗೆ ಮನಸ್ಸಿನ ಈ ಮಿಳನವು ಆಗದಿರುವುದು ಸಾಧ್ಯವಿಲ್ಲ. ಒಂದು ವೇಳೆ ಕೇವಲ ನಮ್ಮಲ್ಲಿ ಮಾತ್ರವೇ ಹಾಗಾಗುವುದು ಅಸಂಭವವಾಗುವ ಪಕ್ಷದಲ್ಲಿ ಅದು ನಮಗೆ ಅತ್ಯಂತ ಲಜ್ಜಾಸ್ಪದವಾದ ವಿಷಯವಾಗುತ್ತದೆ.

ಯೂರೋಪಿನಿಂದ ಒಂದು ಭಾವಪ್ರವಾಹವು ಬಂದಿದೆ. ಸ್ವಾಭಾವಿಕವಾಗಿಯೇ ಅದು ನಮ್ಮ ಮನಸ್ಸನ್ನು ಸ್ಪರ್ಶಿಸುತ್ತದೆ. ಈ ರೀತಿಯ ಘಾತ ಪ್ರತಿಘಾತದಿಂದ ನಮ್ಮ ಮನಸ್ಸು ಜಾಗೃತವಾಗಿರುತ್ತದೆ—ಈ ಮಾತನ್ನು ಒಪ್ಪದಿದ್ದರೆ ನಮ್ಮ ಚಿತ್ತ ವೃತ್ತಿಗೆ ಅನ್ಯಾಯವಾದ ಅಪವಾದವನ್ನು ಹೊರಿಸಬೇಕಾಗುತ್ತದೆ. ಈ ರೀತಿಯಾದ ಭಾವಮಿಳನದಲ್ಲಿ ಯಾವ ಒಂದು ವ್ಯಾಪಾರವು ಉತ್ಪನ್ನವಾಗುವುದೋ ಅದರ ಮೂರ್ತಿಯನ್ನು ಕೆಲವು ಕಾಲಾನಂತರ ಸ್ಪಷ್ಟವಾಗಿ ನೋಡಬಹುದಾದ ಸಮಯವು ಬರುತ್ತದೆ.

ಯೂರೋಪಿನಿಂದ ನೂತನ ಭಾವದ ಸಂಘಾತವೊಂದು ನಮ್ಮ ಹೃದಯವನ್ನು ಚೇತನಗೊಳಿಸಿದೆಯೆಂಬ ಮಾತು ಸತ್ಯವಾದ ಪಕ್ಷದಲ್ಲಿ ನಾವು ಸ್ಥಾಯಿಯಾಗಿರಲು ಸಹಸ್ರ ಪ್ರಯತ್ನಗಳನ್ನು ಮಾಡಿದರೂ ನಮ್ಮ ಸಾಹಿತ್ಯವು ಒಂದಲ್ಲ ಒಂದು ನೂತನ ರೂಪವನ್ನು ತಾಳಿ ಈ ಸತ್ಯವನ್ನು ಪ್ರಕಾಶಮಾಡದೆ ಇರಲು ಸಾಧ್ಯವಿಲ್ಲ. ಪುರಾತನ

ವಸ್ತುವಿನ ಪುನರಾವೃತ್ತಿಯು ಇನ್ನೇನು ಮಾಡಿದರೂ ಆಗುವುದು ಸಾಧ್ಯವಿಲ್ಲ. ಒಂದು ವೇಳೆ ಆದರೆ ಆ ಸಾಹಿತ್ಯವನ್ನು ಸುಳ್ಳು, ಕೃತ್ರಿಮ ಎಂದು ಹೇಳುತ್ತೇವೆ.

ಮೇಘನಾದವಧ ಕಾವ್ಯದಲ್ಲಿ ಕೇವಲ ಛಂದೋಬಂಧದಲ್ಲಿ, ರಚನಾಪ್ರಣಾಳಿಯಲ್ಲಿ ಮಾತ್ರವಲ್ಲ; ಅದರ ಒಳಗಿನ ಭಾವರಸಗಳಲ್ಲಿಯೂ ಒಂದು ಅಪೂರ್ವ ಪರಿವರ್ತನವು ಕಂಡುಬರುತ್ತದೆ. ಈ ಪರಿವರ್ತನವು ಆತ್ಮ ವಿಸ್ಮೃತಿಯಲ್ಲ. ಇದರಲ್ಲಿ ಒಂದು ವಿದ್ರೋಹ ಇದೆ. ಕವಿ ಕಾಲಿನ ಶೃಂಖಲೆಯನ್ನು ಮುರಿದುಹಾಕಿದ್ದಾನೆ. ರಾಮರಾವಣರ ಸಂಬಂಧದಲ್ಲಿ ಬಹುಕಾಲದಿಂದ ನಮ್ಮ ಮನಸ್ಸಿನಲ್ಲಿ ಯಾವ ಒಂದು ಭಾವ ಉಳಿದು ಕೊಂಡು ಬಂದಿದೆಯೋ ಅದರ ಶಾಸನವು ಇಲ್ಲಿ ಸ್ಪರ್ಧಾಪೂರ್ವಕವಾಗಿ ಭಂಗ ಹೊಂದಿದೆ. ಈ ಕಾವ್ಯದಲ್ಲಿ ರಾಮಲಕ್ಷ್ಮಣರಿಗಿಂತಲೂ ರಾವಣ ಇಂದ್ರಜಿತ್ತರು ದೊಡ್ಡವರಾಗಿದ್ದಾರೆ. ಯಾವ ಧರ್ಮಭೀರುತ್ವವು ಯಾವುದು ಎಷ್ಟು ಒಳ್ಳೆಯದು ಎಷ್ಟು ಕೆಟ್ಟದು ಎಂಬುದನ್ನು ಯಾವಾಗಲೂ ಅತಿ ಸೂಕ್ಷ್ಮವಾಗಿ ವಹಿಸುತ್ತಾ ಬಂದಿದೆಯೋ ಅದರ ತ್ಯಾಗ, ದೈನ್ಯ, ಆತ್ಮನಿಗ್ರಹಗಳು ಆಧುನಿಕ ಕವಿಯ ಹೃದಯ ವನ್ನು ಆಕರ್ಷಿಸಲಾರದೆ ಹೋದುವು. ಆತನು ಸ್ವತಃಸ್ಫೂರ್ತಶಕ್ತಿಯ ಪ್ರಚಂಡ ಲೀಲೆಯಲ್ಲಿ ಆನಂದಾನುಭವ ಮಾಡಿದ್ದಾನೆ. ಈ ಶಕ್ತಿಯದು ನಾಲ್ಕು ದಿಕ್ಕಿನಲ್ಲಿಯೂ ಪ್ರಭೂತ ಐಶ್ವರ್ಯ; ಇದರ ಮಹಡಿಯ ಶಿಖರವು ಮೇಘ ಪಥವನ್ನು ತಡೆಯುತ್ತದೆ; ಇದರ ರಥ ರಥಿಕ ಅಶ್ವ ಗಜಗಳಿಂದ ಪೃಥ್ವಿಯು ನಡುಗುತ್ತದೆ; ಇದು ಸ್ಪರ್ಧೆಯ ಮೂಲಕ ದೇವತೆಗಳನ್ನು ಸೋಲಿಸಿ ವಾಯು ಅಗ್ನಿ ಇಂದ್ರರನ್ನು ತನ್ನ ದಾಸತ್ವದಲ್ಲಿ ನಿಯೋಜಿಸುತ್ತದೆ. ಈ ಶಕ್ತಿ ಯಾವುದನ್ನು ಅಪೇಕ್ಷಿಸುವುದೋ ಅದಕ್ಕೆ ಶಾಸ್ತ್ರದ ಅಥವಾ ಅಸ್ತ್ರದ ಅಥವಾ ಮತ್ತಾವುದರ ತಡೆಯನ್ನೂ ಗೌರವಿಸಲು ಒಪ್ಪುವುದಿಲ್ಲ. ಇಷ್ಟು ದಿನ ಕೂಡಿಟ್ಟ ಅಭ್ರಭೇದಿಯಾದ ಐಶ್ವರ್ಯವು ನಾಲ್ಕು ದಿಕ್ಕುಗಳಲ್ಲಿಯೂ ಒಡೆದೊಡೆದು ಧೂಳಿಯಾಗಿ ಹೋಗುತ್ತದೆ; ಸಾಮಾನ್ಯ ಭಿಕಾರಿಯಾದ ರಾಘವ ನೊಂದಿಗೆ ಮಾಡುವ ಯುದ್ಧದಲ್ಲಿ ತನ್ನ ಪ್ರಾಣಕ್ಕಿಂತಲೂ ಪ್ರಿಯರಾದ ಪುತ್ರ ಪೌತ್ರರೂ ಆತ್ಮೀಯ ಸ್ವಜನರೂ ಒಬ್ಬೊಬ್ಬರಾಗಿ ಎಲ್ಲರೂ ಸಾಯುತ್ತಾರೆ; ಅವರ ತಾಯಿಯರು ಧಿಕ್ಕಾರಮಾಡಿ ಅಳುತ್ತಾ ಹೋಗುತ್ತಾರೆ. ಆದರೂ ಯಾವ ಅಚಲ ಶಕ್ತಿ ಭಯಂಕರವಾದ ಸರ್ವನಾಶದ ಮಧ್ಯದಲ್ಲಿ ಕುಳಿತು ಯಾವ ರೀತಿಯಲ್ಲಿಯೂ ಸೋಲನ್ನು ಒಪ್ಪಿಕೊಳ್ಳಲು ಇಷ್ಟ ಪಡುವುದಿಲ್ಲವೋ ಆ ಧರ್ಮವಿದ್ರೋಹಿಯಾದ ಮಹಾದಂಭದ ಪರಾಭವದಲ್ಲಿ, ಸಮುದ್ರತೀರದ ಶ್ಮಶಾನದಲ್ಲಿ ಕವಿ ದೀರ್ಘ ನಿಃಶ್ವಾಸವನ್ನು ಬಿಟ್ಟು ಕಾವ್ಯದ ಉಪಸಂಹಾರ ಮಾಡಿದ್ದಾನೆ. ಯಾವ ಶಕ್ತಿ ಅತಿ ಸಾವಧಾನವಾಗಿ ಸಮಸ್ತವನ್ನೂ ಗೌರವಿಸಿ ಹೋಗುತ್ತದೆಯೋ ಅದನ್ನು ಹೀನೈಸಿ

ಯಾವ ಶಕ್ತಿ ಸ್ಪರ್ಧಾಭರದಿಂದ ಬಂದನ್ನೂ ಗೌರವಿಸಲು ಇಷ್ಟಪಡುವುದಿಲ್ಲವೋ ಅದರ ಕಂಠದಲ್ಲಿಯೇ ಕಾವ್ಯಲಕ್ಷ್ಮಿ ಬೀಳ್ಕೊಡುವ ಕಾಲದಲ್ಲಿ ತನ್ನ ಕಣ್ಣೀರಿನಿಂದ ತೊಯ್ದ ಮಾಲೆಯನ್ನು ಹಾಕುತ್ತಾಳೆ.

ಯೂರೋಪಿನ ಶಕ್ತಿ ತನ್ನ ವಿಚಿತ್ರ ಪ್ರಹರಣ ಮತ್ತು ಅಪೂರ್ವ ಐಶ್ವರ್ಯದಲ್ಲಿ ಪಾರ್ಥಿವ ಮಹಿಮೆಯ ಶಿಖರದ ಮೇಲೆ ನಿಂತು ಇಂದು ನಮ್ಮೆದುರಿಗೆ ಆವಿರ್ಭೂತ ವಾಗಿದೆ—ಅದರ ವಿದ್ಯುತ್ಖಚಿತ ವಜ್ರವು ನಮ್ಮ ಬಾಗಿದ ತಲೆಯ ಮೇಲಿನಿಂದ ಘಣ್-ಘಣ್ ಎಂದು ಗರ್ಜನ ಮಾಡುತ್ತಾ ಮಾಡುತ್ತ ಹೋಗುತ್ತಿದೆ—ಈ ಶಕ್ತಿಯ ಸ್ತೋತ್ರದೊಂದಿಗೆ ಆಧುನಿಕ ಕಾಲದಲ್ಲಿ ರಾಮಾಯಣ ಕಥೆಯ ಬಂದು ನೂತನ ಬಂಧನವು ಅದರೊಳಗೊಳಗೆ ಸ್ವರವನ್ನು ಸೇರಿಸುತ್ತದೆ. ಇದು ಯಾವನೋ ಒಬ್ಬ ವ್ಯಕ್ತಿಯ ಪ್ರತಿಭೆಯೇ ಅಥವಾ ಹಗಲುಗನಸೇ? ದೇಶವೆಲ್ಲಾ ಸೇರಿ ಇದರ ಆಯೋಜನೆಯನ್ನು ನಡಸುತ್ತಿದೆ. ದೌರ್ಬಲ್ಯದ ಅಭಿಮಾನಕ್ಕೆ ಕಟ್ಟುಬಿದ್ದು ಇದನ್ನು ನಾವು ಸ್ವೀಕಾರಮಾಡುವುದಿಲ್ಲವೆಂದು ಹೇಳಿದರೂ ಪದೇ ಪದೇ ಸ್ವೀಕಾರಮಾಡಲು ಬಾಧ್ಯರಾಗುತ್ತೇವೆ. ಆದ್ದರಿಂದಲೇ ರಾಮಾಯಣವನ್ನು ಗಾನಮಾಡುವುದಕ್ಕೆ ಹೊರಟಾಗಲೂ ಇದರ ಸ್ವರವನ್ನು ನಿಲ್ಲಿಸುವುದು ನಮಗೆ ಅಸಾಧ್ಯ.

ಮಾನವ ಸಾಹಿತ್ಯದಲ್ಲಿ ಯಾವ ಬಂದು ಭಾವದ ಸೃಷ್ಟಿ ನಡೆಯುತ್ತಿದೆಯೋ ಅದರ ಸ್ಥಿತಿಗತಿಯ ಕ್ಷೇತ್ರವು ಬಹು ದೊಡ್ಡದು ಎಂಬುದನ್ನು ರಾಮಾಯಣವನ್ನು ಅವಲಂಬನಮಾಡಿ ತೋರಿಸಲು ನಾನು ಪ್ರಯತ್ನಿಸಿದ್ದೇನೆ. ಅದು ನೋಡಲು ಆಕಸ್ಮಿಕ. ಈ ಚೈತ್ರಮಾಸದಲ್ಲಿ ಎಷ್ಟು ಮಳೆ ಬೀಳುತ್ತದೆಯೋ ಅದೂ ಕೂಡ ಆಕಸ್ಮಿಕವೆಂದು ತೋರುತ್ತದೆ. ಆದರೆ ಎಷ್ಟು ದೂರದಲ್ಲಿರುವ ಪಶ್ಚಿಮದಿಂದ, ಕಾರಣ ಪರಂಪರೆಯ ಮೂಲಕ ವಾರಿತವಾಗಿ, ಕೆಲವು ಕಡೆ ವಿಶೇಷವಾದ ಸುಯೋಗವನ್ನೂ ಕೆಲವು ಕಡೆ ವಿಶೇಷವಾದ ಬಾಧೆಯನ್ನೂ ಹೊಂದಿ ಆ ಮಳೆ ನಮ್ಮ ಕ್ಷೇತ್ರವನ್ನು ಅಭಿಷಿಕ್ತಮಾಡಿದೆ! ಭಾವದ ಪ್ರವಾಹವೂ ಹಾಗೆ ಮಾಡಿಯೇ ಪ್ರವಹಿಸುತ್ತದೆ. ಅದು ಚಿಕ್ಕ ದೊಡ್ಡ ಎಷ್ಟು ಕಾರಣಗಳ ಮೂಲಕ ಖಂಡದಿಂದ ಏಕ ಮತ್ತು ಏಕದಿಂದ ಶತವಾಗಿ ಎಷ್ಟು ರೂಪರೂಪಾಂತರಗಳನ್ನು ಪಡೆಯುತ್ತದೆ! ಸಮ್ಮಿಳಿತವಾದ ಮಾನವನ ಬೃಹತ್ ಮನವು ಮನಸ್ಸಿನ ನಿಗೂಢವೂ ಅಮೋಘವೂ ಆದ ನಿಯಮದಿಂದ ತನ್ನನ್ನು ಕೇವಲ ಪ್ರಕಾಶಪಡಿಸಿ ಅಪರೂಪಮಾನಸಸೃಷ್ಟಿಯನ್ನು ಸಮಸ್ತ ಜಗತ್ತಿನಲ್ಲಿಯೂ ವಿಸ್ತರಿಸುತ್ತದೆ. ಅದಕ್ಕೆ ಎಷ್ಟು ರೂಪ, ಎಷ್ಟು ರಸ, ಎಷ್ಟು ವಿಚಿತ್ರಗಮನ!

ಲೇಖಕನನ್ನು ನಾವು ಅತ್ಯಂತ ಹತ್ತಿರ ಪ್ರತ್ಯಕ್ಷವಾಗಿ ನೋಡಿದಾಗ ಲೇಖಕ ನೊಂದಿಗೆ ಲೇಖನಕ್ಕಿರುವ ಸಂಬಂಧವು ನಮಗೆ ಪ್ರಬಲವಾಗಿರುವಂತೆ ಕಾಣುತ್ತದೆ—

ಆಗ ಗಂಗೋತ್ರಿಯೇ ಗಂಗೆಯನ್ನು ಸೃಷ್ಟಿಸುತ್ತದೆ ಎಂದು ಭಾವಿಸುತ್ತೇವೆ. ಆದ ಕಾರಣ ಜಗತ್ತಿನ ಸಕಲ ಕಾವ್ಯಗಳ ಲೇಖಕನು ಯಾರೋ ಅವನಿಗೆ ಸ್ಥಾನವೇ ಇಲ್ಲದಂತಾಗಿದೆ. ಸಕಲ ಕಾವ್ಯವೂ ತನ್ನನ್ನು ತಾನೇ ಸೃಷ್ಟಿಮಾಡಿಕೊಂಡು ಹೋಗುತ್ತಿದೆ. ಆದರೂ ಯಾವುದರ ಸೂತ್ರವು ಹರಿದುಹೋಗಿಲ್ಲವೋ ಆ ಎಲ್ಲ ಕಾವ್ಯಗಳ ದೃಷ್ಟಾಂತವನ್ನು ಕೊಟ್ಟು ನಾನು ಭಾವಸೃಷ್ಟಿಯ ವಿಪುಲವಾದ ನೈಸರ್ಗಿಕತೆಯ ಕಡೆಗೆ ನಿಮ್ಮ ಮನಸ್ಸನ್ನು ಆಕರ್ಷಣೆಮಾಡುವ ಪ್ರಯತ್ನಮಾಡಿದ್ದೇನೆ.

ಮಾನಿನಿ

('ಅಮರುಶತಕ'ದ ಕೆಲವು ಪದ್ಯಗಳ ಅನುವಾದ)

'ಬಾಲೆ!' 'ಏನದು ನಾಥ?' 'ಮುನಿಸನುಳಿ ಮಾನಿನಿ!'
'ಮುನಿದು ಮಾಡಿರುವುದೇನು?'
'ದುಮ್ಮಾನ ನನ್ನಲ್ಲಿ.' 'ನಿನ್ನ ತಪ್ಪೇನಿಲ್ಲಿ,
ತಪ್ಪೆಲ್ಲವೂ ನನ್ನದು.'
'ಅಂತಿರಲು ನುಡಿವಾಗ ಬಿಕ್ಕಳಿಸುತೇಕಳುವೆ?'
'ಆರ ಮುಂದಳುತಿರುವುದು?'
'ನನ್ನ ಮುಂದಿದೊ!' 'ನಿನಗೆ ನಾನಾರು?' 'ನಲ್ಲೆ.' 'ನಾ-
ನಲ್ಲವೆಂದಳುತಿರುವುದು!'

*
* *

"ಎದೆ ಸೀಳಲಿ, ಮದನನು ಮನ ಬಂದೊಲು ಮೈಕುಂದಿಸಲಿ,
ಚಲಪ್ರೇಮದ ನಲ್ಲನೊಳಿನ್ನಿಲ್ಲವೆ ಸಖಿ, ನನಗೆನಕ!"—
ಕಡುಮಾನದ ಬಿರುಸಿನಲಿಂತಾ ಹರಿಣಾಂಬಕಿ ನುಡಿದು,
ಹೋದಿನಿಯನ ಹಾದಿಯನೇ ನಿಟ್ಟಿಸಿದಳು ಬಿಡದೆ.

*
* *

ಹೃದಯದಲಿ ನೀನಿಂತು ಮುನಿಸನು ಹೂಡಿಕೊಳ್ಳಲು, ಸುಂದರಿ,
ನಲ್ಲನಾಗಲಿ ನಿನಗದೇ; ಇನ್ನಿಲ್ಲಿ ಮಾಡುವುದೇನನು?
ಮುನ್ನ ನಾನೊಪ್ಪಿಸಿರುವಪ್ಪುಗೆಯೆಲ್ಲವನು ಮತ್ತೊಪ್ಪಿಸು;
ಜೊತೆಗೆ, ನಾನಂದಿತ್ತ ಮುತ್ತೆಲ್ಲವನು ಹಿಂದಕೆ ಸಲ್ಲಿಸು!

*
* *

ಒಂದೆ ಹಾಸಿಗೆಯಲ್ಲಿ, ಮುಖಕೆ ಮುಖಕೊಡದಂತೆ
ಮಲಗಿ, ನುಡಿವುದನುಳಿದು ಕುದಿಗೊಳ್ಳುತ,
ಒಬ್ಬರೊಬ್ಬರನೊಲಿಸಿಕೊಳುವಾಸ ಮನಸಿನೊಳ-
ಗಿದ್ದರೂ ಬಿಗುಮಾನವನು ಕಾಯುತ,
ದಂಪತಿಗಳಿರಲು, ಕಡೆಗಣ್ಣು ಮೆಲ್ಲನೆ ಹೊರಳಿ
ನೋಟದೊಂದಿಗೆ ನೋಟ ಬೆರೆದುಬಿಡಲು,—
ನಗೆ ಥಟ್ಟನುಕ್ಕಿದುದು; ಭಂಗವಾದುದು ಕೊರಳಿ-
ನಪ್ಪಿಗೆಯ ತಡೆದಿದ್ದ ಮಾನಕಲಹ!

ತೀ. ನಂ. ಶ್ರೀ.

ಬೂತಯ್ಯನ ಮಗ 'ಅಯ್ಯು'

(ಮುಂದುವರಿದದ್ದು)

ಅಯ್ಯುವಿನಲ್ಲಿ ಮೊದಲುಮೊದಲು "ಒಳ್ಳೆಯತನ" ತೋರಿದಾಗ ಜಾಲಹಳ್ಳಿಯ ರೈತರು ಅದನ್ನು ಗಮನಿಸಲೇ ಇಲ್ಲ. ಬೂತಯ್ಯನೂ ತನ್ನ ಕೆಲಸವಾಗಬೇಕಾದರೆ ಹಿಂಗೆ ಇರುತ್ತಿದ್ದ ಎಂದು ಅವರು ಅಯ್ಯುವನ್ನು ನಂಬಲೇ ಇಲ್ಲ. ಅವರು ಹೇಗೆ ಮಾಡಿದರೂ ಅಯ್ಯುವಿನ ಈಚಿನ ನಡವಳಿಕೆಗಳು ಅಯ್ಯುವಿನ ಹಿಂದಲ ಸ್ವಭಾವಕ್ಕೆ ಹೊಂದಿಕೆಯಾಗುವಂತೆ ಇರಲಿಲ್ಲ. ಕೊನೆಗೆ ಅವರು "ಅಯ್ಯ ಇದೊಂದು ಸೋಗು ಹಾಕವ್ನೆ ಬಕ ಮೀನ ಹಿಡಿಯೋ ಹಂಗೆ" ಎಂದುಕೊಂಡು ಸುಮ್ಮನಾದರು. ಆದರೆ ಬೂತಯ್ಯನವರ ಹಿಂದಲ ಲೂಟಿಯಲ್ಲಿ ಸಹಾಯಕರಾಗಿದ್ದ ಶ್ಯಾನುಭಾಗ ಪಟೇಲರಿಗೂ ಜೋಯಿಸ ಪೂಜಾರಿಗಳಿಗೂ ಮುಸಲ್ಮಾನ ಲಾವುಗಾರರಿಗೂ ಅಮೀನ ಸಮನ್ ಪೇದೆಗಳಿಗೂ ಯಾವುದಕ್ಕೂ ಸಾಕ್ಷಿ ಹೇಳಲು ಸಿದ್ಧರಾಗಿದ್ದ ಸದ್ಗೃಹಸ್ಥರಿಗೂ ಅಯ್ಯುವಿನ ಈ ಸಪ್ಪೆತನದಿಂದ ತುಂಬ ರೇಗಿತು. ತಮ್ಮ ಆಸ್ತಿಯೇ ಹಾಳಾದಂತೆ ಅವರು ಕೂಗಾಡತೊಡಗಿದರು. "ಹೀಗೆ ಮಾಡಿದರೆ ಇವನು ಆಸ್ತಿಯನ್ನು ಮೂರು ದಿನದಲ್ಲಿ ನೀಗುವುದು ಖಂಡಿತ. ಎಂಥಾ ಬದುಕು, ಎಂಥಾ ಆಸ್ತಿ. ಬೂತಯ್ಯನವರು ಮೂರು ವರ್ಷ ಮೂಗು ಕೆರೆದರೂ ಒಬ್ಬನಿಗೆ ಮೂರು ಕಾಸು ಕೊಟ್ಟವರಲ್ಲ. ಅಂಥ ಆಸ್ತಿ ಈಗ ನಾಯಿಪಾಲು ನೀರುಪಾಲು" ಎಂದು ಅವರು ಬೇಸರಿಕೆ ಪಟ್ಟರು. ಸರ್ಕಾರವು ಅಧಿಕಾರಿಗಳ ಮೂಲಕ ಕಾರ್ಯಕ್ರಮವನ್ನು ನಡೆಸುವಂತೆ ಬೂತಯ್ಯನವರು ತಮ್ಮ ಆಡಳಿತದ ಸಹಾಯಕ್ಕೆ ಮೇಲೆ ಹೇಳಿದವರನ್ನೆಲ್ಲಾ ನಿಯಮಿಸಿಕೊಂಡಿದ್ದರು. ಅವರು ಹೇಳುತ್ತಿದ್ದ ಮಾತುಗಳೆಲ್ಲಾ ಅಯ್ಯುವಿನ ಕಿವಿಗೆ ಬಿದ್ದುವು. "ಅಯ್ಯ ಮುಂದೆ ಏನ್ಮಾಡ್ತಾನೆ, ನೋಡೋಣ" ಎಂದು ರೈತರು ನಿರೀಕ್ಷಿಸುತ್ತಿದ್ದರು.

ಅಯ್ಯುವಿನಲ್ಲಿ ಅಷ್ಟೊಂದು ಪೂರ್ಣವಾದ ಬದಲಾವಣೆಯು ಯಾವಾಗ ಆಯಿತೋ ಅಯ್ಯುವಿಗೇ ತಿಳಿಯದು. ಗುಳ್ಳನ ವ್ಯಾಜ್ಯದಿಂದಲೇ ಅವನು ಕಣ್ಣು ಬಿಟ್ಟನು. ತನಗೂ ರೈತರಿಗೂ ಇದ್ದ ಅಜಗಜ ನ್ಯಾಯವು ಆಗ ಅವನಿಗೆ ತಿಳಿಯಿತು. "ಗುಳ್ಳ ಒಂದು ವ್ಯಾಜ್ಯಕ್ಕೇ ಪಾಪರನಾದ. ನಾನು ಇಂತಹ ನೂರು ವ್ಯಾಜ್ಯಗಳನ್ನಾದರೂ ಸುಲಭವಾಗಿ ಕಾದಬಲ್ಲೆ. ರೈತ ಇಪ್ಪತ್ತುನಾಲ್ಕು ಗಂಟೆ ದುಡಿದರೂ ಒಂದು ಒಳ್ಳೆಯ ಅಂಗಿಯನ್ನು ಹಾಕಿಕೊಂಡುದನ್ನು ಕಾಣೆ. ಒಂದು ದಿನ ಅವನು

ಕೆಲಸಮಾಡದಿದ್ದರೂ ಅವನ ಹೊಟ್ಟೆ ತುಂಬುವುದಿಲ್ಲ. ನಮ್ಮ ಮನೆಯಲ್ಲಿ ಮೂರು ತಲೆಗಳಿಂದಲೂ ದುಡಿದದ್ದನ್ನೇ ಕಾಣೆ. ಆದರೆ ಹಣ ಹುಳಿತುಹೋಗುತ್ತಿದೆ. ಇದು ನಮ್ಮ ಅಪ್ಪ ಹಾಕಿದ ಮೋಡಿ. ಇದಕ್ಕೆ ಪ್ರತಿಮೋಡಿ ಯಾವಾಗ ಬೀಳುತ್ತದೋ ಕಾಣೆ. ಬಿದ್ದಾಗ ಮಾತ್ರ ನಾವು ಉಳಿಯುವಂತೆ ಇಲ್ಲ.''

ಹೊಸ ಪೂಜಾರಿ ನಾಯಿತುಳಸಿ ಕುಯ್ದಂತೆ ಗುಳ್ಳನ ಮೊದಲನೆಯ ವ್ಯಾಜ್ಯದಲ್ಲೇ ಅವನ ಕೊಟ್ಟು ನೆಲಸಮವಾಯಿತು. ಚಿನ್ನ ಬಿತ್ತಿದರೆ ಚಿನ್ನ ಬೆಳೆಯುವಂತಿದ್ದ ಖರ್ಜೂರದ ಮಣ್ಣಿನ ಹೊಲಗದ್ದೆಗಳೆಲ್ಲಾ ಲಾಯರ ಫೀಜಿಗೂ ಸಾಕ್ಷಿಗಳ ಲಂಚ ಮತ್ತು ಖುಷಾಮತ್ತಿಗೂ ಹೋಯಿತು. ಉಳಿದ ಬೋರೆಯಮೇಲಿನ ತನುಟೆ ಅಗಲದ ಪಾಳುಹೊಲ ಕಂದಾಯದ ಬಾಕಿಗೆ ಹರಾಜಾಗಿ ಸರ್ಕಾರಕ್ಕೆ ಸೇರಿಕೊಂಡಿತು. ಕರು ಸತ್ತರೂ ಸಗಣೀನಾತ ತಪ್ಪಲಿಲ್ಲವೆಂಬಂತೆ ವ್ಯಾಜ್ಯ ಕೊನೆಗಂಡರೂ ಲಾಯರ ಫೀಜು ಪೂರ್ತಾ ಪಾವತಿಯಾಗಿರಲಿಲ್ಲ. ಹೇಗಾದರೂ ಮೊಖದ್ದಮೆ ನಡೆದರೆ ಸಾಕೆಂದು ಗುಳ್ಳನು ಕೊಟ್ಟು ಉಳಿದ ಫೀಜಿಗೆ ಲಾಯರಿಗೆ ಒಂದು 'ಟಾಂಪುಸರಿ' ಬರೆದುಕೊಟ್ಟಿದ್ದನು. ಲಾಯರು 'ಟಾಂಪುಸರಿಯ' ಹಣಕ್ಕೆ ಸಿವಿಲ್ ಕೋರ್ಟಿನಲ್ಲಿ ದಾವಾ ಹಾಕಿದನು. ಗುಳ್ಳನು ಕೋರ್ಟಿನಿಂದ ಬಂದ ಸಮನ್ಸಿಗೇ ಸಿಕ್ಕದೆ ತಪ್ಪಿಸಿಕೊಳ್ಳ ಹತ್ತಿದನು. ಆದರೆ ಬಗ್ಗಿಕೊಂಡು ಉತ್ತರೆ ಕಂದಾಯ ತಪ್ಪುವುದೇ? ವಾರಂಟು ಬಂದಿತು. ಗುಳ್ಳನು ಮೂರು-ನಾಲ್ಕು ಸಲ ವಾರಂಟನ್ನು ತಪ್ಪಿಸಿಕೊಂಡು ತಿರುಗಿದನು. ಕೊನೆಯ ಸಲ ವಾರಂಟು ಬಂದಾಗ ಅವಿನಾಸನು ಮನೆಯ ಬಾಗಿಲಿನಲ್ಲಿ ಕುಳಿತಿದ್ದ ಗುಳ್ಳನನ್ನು ದಸ್ತಗಿರಿಮಾಡಿದನು.

ವಿಚಾರ ಊರವರಿಗೆಲ್ಲಾ ತಿಳಿದಂತೆ ಅಯ್ಯುವಿಗೂ ತಿಳಿಯಿತು. ಬುಂಡೆಕ್ಯಾತನು "ಅವನಿಗೆ ದೇವರೇ ಕೊಟ್ಟ. ಆರು ತಿಂಗಳು ಜೈಲು ಮಣ್ಣು ಹೊತ್ತು ಬರಲಿ. ಹುಳಿ ಮುರಿಯುತ್ತೆ. ಊರಿನ ಶನಿ ತೊಲಗುತ್ತೆ'' ಎಂದನು. ಅಯ್ಯುವು ನೋಡೋಣವೆಂದು ಗುಳ್ಳನ ಮನೆಯ ಹತ್ತಿರಕ್ಕೆ ಹೋದನು. ಚಾಲಹಳ್ಳಿಯಲ್ಲಿ ಅಯ್ಯು ಹೊರತು ಉಳಿದವರನ್ನು ಕಂಬಕ್ಕೆ ಕಟ್ಟಿ ಚೆಚ್ಚಿದ್ದರೂ ಒಂದು ಕಾಸೂ ಸಿಕ್ಕುತ್ತಿರಲಿಲ್ಲ. ಆದುದರಿಂದ ಗುಳ್ಳನನ್ನು ವಾರಂಟಿನಿಂದ ಬಿಡುಗಡೆ ಮಾಡಲು ಅಯ್ಯುವಿನ ಹೊರತು ಬೇರೆ ದಾರಿಯಿರಲಿಲ್ಲ. ಆದರೆ ಅಯ್ಯು ಗುಳ್ಳನನ್ನು ಬಿಡುಗಡೆ ಮಾಡಿಸುತ್ತಾನೆಂಬ ನಂಬಿಕೆ ಊರವರಿಗೆ ಖಂಡಿತ ಇರಲಿಲ್ಲ. ಅಯ್ಯುವನ್ನು ದೂರದಿಂದ ನೋಡಿದ ಗುಳ್ಳನು "ನಾನು ಜೈಲಿಗೆ ಹೋಗೋದ ನೋಡೋಕೆ ಅಯ್ಯು ಬರ್ತಾ ಅವನೆ. ಬರಲಿ, ಬರಲಿ. ಅಲ್ಲಿಂದ ವಾಪಸು ಬಂದಮೇಲೆ ಅಯ್ಯುನಿಗೆ ಹಬ್ಬ ಮಾಡ್ತೀನಿ'' ಎಂಬುದಾಗಿ ಹಲ್ಲು ಕಡಿದನು. ಅಯ್ಯುವು ಬಂದು ತಾನೇ ಗುಳ್ಳನ ಹಣವನ್ನು ಕೊಡುವುದಾಗಿ ಅವಿನಾಸನಿಗೆ

ಹೇಳಿದನು. ಮೊದಲು ಮೊದಲು ಗುಳ್ಳ ಏನು ಮಾಡಿದರೂ ಅಯ್ಯುವಿನ ಹಣದಿಂದ ಬಿಡುಗಡೆ ಹೊಂದಲು ಒಪ್ಪಲಿಲ್ಲ. ಕೊನೆಗೆ ಅಯ್ಯುವು "ನೀನು ನನ್ನ ಮನೆಯಲ್ಲಿ ಕೆಲಸಮಾಡಿ ಈ ಹಣವನ್ನು ತೀರಿಸುವಿಯಂತೆ" ಎಂದು ಹೇಳಿದ ಮೇಲೆ ಮಾತ್ರ ಗುಳ್ಳನು ಅಯ್ಯುವಿನಿಂದ ಹಣವನ್ನು ತೆಗೆದುಕೊಂಡನು.

ಗುಳ್ಳನಿಗೆ ಹಣವನ್ನು ಕೊಟ್ಟಾಗ ಅಯ್ಯುವು "ಇವ ಜೈಲಿಗೆ ಹೋಗೋದನ್ನ ತಪ್ಪಿಸಿದೆ. ನನ್ನ ಮನೆಯಲ್ಲಿ ಕೆಲಸಮಾಡಿ ಆ ಹಣ ತೀರಿಸುತ್ತಾನಂತೆ. ಏನೋ ಹಣ ತೆಗೆದುಕೊಳ್ಳಲಿ ಅಂತ ಹೇಳಿದೆ. ಕೆಲಸಮಾಡಿದಷ್ಟು ದಿವಸ ಮಾಡಲಿ. ಅಷ್ಟನ್ನೇ ಈ ಹಣಕ್ಕೆ ವಜಾ ಹಾಕಿದರೆ ಆಯಿತು. ಆ ಮೇಲೂ ಇವನಿಗೆ ಕೆಲಸಮಾಡಲು ಇಷ್ಟವಿದ್ದರೆ ಏನಾದರೂ ವರ್ಷಕ್ಕೆ ಇಷ್ಟು ಅಂತ ಗೊತ್ತುಮಾಡಿದರೆ ಅವನ ಜೀವನವೂ ನಡೆಯುತ್ತೆ. ನಮ್ಮ ಕೆಲಸವೂ ಆಗುತ್ತೆ" ಎಂದುಕೊಂಡನು. ಗುಳ್ಳನು "ಅಯ್ಯ ನನಗೆ ಈ ಹಣ ಸಾಲ ಕೊಟ್ಟವ್ನೆ. ಅಸಲು ಬಡ್ಡಿ ಎರಡ್ನೂ ದುಡಿದೇ ತೀರಿಸಬೇಕು. ಈ ಅಯ್ಯನ ಒಂದು ಕಾಸು ಋಣವೂ ನನಗೆ ಬೇಡ. ಸಾಲಾ ತೀರೋಗಂಟ ಅವನ ಮಗನಾಗಿ ದುಡಿತೇನೆ. ಇನ್ನೊಬ್ಬ ಕೊಡೋ ಸಾಲ ಇವನೆ ಕೊಟ್ಟವ್ನೆ. ಇದು ಮುಗಿದ ಮೇಲೆ, ದೇವರ ದಯ ಇದ್ರೆ 'ಗುಳ್ಳ ದ್ವೇಷ ಎಂದಿಗೂ ಮರೆಯೋಲ್ಲ' ಅನ್ನೋದು ಅಯ್ಯನಿಗೆ ಗೊತ್ತಾಗಿಯೇ ಆಗ್ತತೆ" ಎಂದುಕೊಂಡನು. ಅಯ್ಯುವು ಗುಳ್ಳ ಮಾಡಿದಷ್ಟು ಕೆಲಸಮಾಡಲಿ ಎಂದು ಸುಮ್ಮನೆ ಇದ್ದರೂ ಗುಳ್ಳನು ಮಾತ್ರ ಒಂದು ಗಳಿಗೆಯೂ ಪೋಲುಮಾಡದೆ ಇತರ ಆಳುಗಳಿಗಿಂತ ಹೆಚ್ಚು ಶ್ರದ್ಧೆಯಿಂದ ದುಡಿಯುತ್ತಿದ್ದನು. ಉಳಿದ ಆಳುಗಳಿಂದಲೂ ಅಯ್ಯುವು ಎಂದಿಗೂ ಮಾಡಿಸದಷ್ಟು ಕೆಲಸ ಮಾಡಿಸುತ್ತಿದ್ದನು. ಒಂದು ಆಳು ಒಂದು ಗಳಿಗೆ ಸೋಮಾರಿಯಾದರೂ ಗುಳ್ಳನು ಅವನನ್ನು ಒದ್ದು ಅವನಿಂದ ಒಂಡಕ್ಕೆ ಎರಡರಷ್ಟು ಕೆಲಸವನ್ನು ತೆಗೆಯುತ್ತಿದ್ದನು. ಅಯ್ಯುವಿನ ಮನೆಯಲ್ಲಿ ಒಂದು ಹುಲ್ಲುಕಡ್ಡಿ ಪೋಲಾಗುವುದಕ್ಕೂ ಅವನು ಅವಕಾಶ ಕೊಡುತ್ತಿರಲಿಲ್ಲ. ಅವನ ಕೆಲಸ ಆದರೆ ಆಯಿತು ಹೋದರೆ ಹೋಯಿತು ಎನ್ನುವ ತರದ ಕೆಲಸವಾಗಿರಲಿಲ್ಲ. ಮೊದಮೊದಲು ಅಯ್ಯುವಿಗೆ ಗುಳ್ಳನು ಏಕೆ ಇಷ್ಟೊಂದು ಕಷ್ಟಪಡುತ್ತಾನೆ? ಉಳಿದ ಆಳುಗಳ ಜತೆಯಲ್ಲಿ ಸೇರಿಕೊಂಡು ಹೇಗೋ ಹಾಗೆ ಕೆಲಸ ಮಾಡಿಕೊಂಡು ಹೋಗಬಾರದೆ? ಎನ್ನಿಸಿತು. ಗುಳ್ಳನು ಅಯ್ಯುವಿನೊಂದಿಗೆ ಹೆಚ್ಚು ಮಾತನಾಡುತ್ತಿರಲಿಲ್ಲ. ಅವನ ಮುಖದಲ್ಲಿ ಉತ್ಸಾಹವಾಗಲಿ, ಸಂತೋಷವಾಗಲಿ ಕಾಣುತ್ತಿರಲಿಲ್ಲ. ಜೈಲಿನಲ್ಲಿರುವ ಖೈದಿಯು ಜೈಲು ಯಜಮಾನನ್ನು ನೋಡುವಂತೆ ಅವನು ಯಾವಾಗಲೂ ಅಯ್ಯುವನ್ನು ದ್ವೇಷದಿಂದಲೇ ನೋಡುತ್ತಿದ್ದನು. ಅಯ್ಯು ಕೊಟ್ಟ ಸಾಲ ಬಡ್ಡಿಯೊಂದಿಗೆ ತೀರಿಸಬೇಕು ಎಂಬುದಿಷ್ಟೇ ಅವನ ಹಂಬಲವಾಗಿತ್ತು.

ಅಯ್ಯು ತನ್ನನ್ನು ಜೈಲಿನಿಂದ ಬಿಡುಗಡೆ ಮಾಡಿದ್ದಾನೆ, ಊರಿನವರ ಎದುರಿಗೆ ತನ್ನ ಮಾನ ಉಳಿಯಿತು ಮುಂತಾದ ಮೃದುಭಾವನೆಗಳು ಅವನ ಮನಸ್ಸನ್ನು ಹೊಕ್ಕಿರಲೇ ಇಲ್ಲ. ಉಳಿದ ಆಳುಗಳಂತೆ ಅವನು ಅಯ್ಯುವಿನೊಂದಿಗೆ ಕಷ್ಟಸುಖಗಳನ್ನು ಹೇಳಿ ಕೊಳ್ಳುತ್ತಿರಲಿಲ್ಲ. ಅವರಂತೆ ತಿಂಗಳಿಗೆ ಎರಡು-ಮೂರು ದಿನ ಬಂದಿಲ್ಲೊಂದು ನೆವದಿಂದ ಬಿಡುವು ಕೇಳುತ್ತಿರಲಿಲ್ಲ. ಅಯ್ಯುವಿನ ಮನೆಯಲ್ಲಿ ಕೆಲಸಮಾಡುತ್ತಾ ಇದ್ದರೂ ಅಯ್ಯುವಿನ ಮೇಲಿನ ಅವನ ದ್ವೇಷ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಸಾಲದ ಹಣ ಅವನು ತೀರಿಸಬೇಕಾದದ್ದು ಇಲ್ಲದಿದ್ದರೆ ಅವನು ಎಂದೋ ಅಯ್ಯುವಿನ ಮೇಲೆ ಬಿದ್ದಿರುತ್ತಿದ್ದನು. ಅಯ್ಯುವು ಹಣದ ಯೋಚನೆಯನ್ನೇ ಮಾಡುತ್ತಿರಲಿಲ್ಲ. ಗುಳ್ಳನು ಕೂಲಿಗಿಂತ ಹೆಚ್ಚಾಗಿ ಇಷ್ಟರಮಟ್ಟಿಗೆ ದುಡಿಯುತ್ತಿದ್ದಾನೆಂಬುದೂ ಅವನಿಗೆ ಮೊದಲು ತಿಳಿದಿರಲಿಲ್ಲ. ಗಾಣದ ಎತ್ತಿನಂತೆ ಗುಳ್ಳ ದುಡಿಯುತ್ತಿದ್ದುದನ್ನು ನೋಡಿದಾಗ ಅಯ್ಯುವು, "ಇವನು ಇನ್ನೂ ನಮಗೆ ಹತ್ತಿರದವನಾಗಲಿಲ್ಲ. ಇವನ ಕಿಚ್ಚು ಇನ್ನೂ ಆರಿಲ್ಲ. ದ್ವೇಷ ಸ್ವಲ್ಪವೂ ಕಡಿಮೆಯಾಗಿಲ್ಲ" ಎಂದುಕೊಂಡನು. ಬರಿಯ ಕೆಲಸದ ದೃಷ್ಟಿಯಿಂದ ಹೊರಗಡೆ ನೋಡುವವರಿಗೆ ಗುಳ್ಳನಂತಹ ಆಳೇ ಲೋಕದಲ್ಲಿ ಇಲ್ಲವೆಂದು ತೋರುತ್ತಿದ್ದಿತು. ಅಯ್ಯುವಿನ ಹೆಂಡತಿಗೆ ಕೂಡ "ಇಂತಹ ಆಳು ನಮಗೆ ಯಾವಾಗಲೂ ಸಿಕ್ಕಲಿಲ್ಲ" ಎನ್ನಿಸಿತು. ಜಾಲಹಳ್ಳಿಯ ಉಳಿದ ಎಲ್ಲಾ ರೈತರಿಗೂ ಅಯ್ಯುವಿನ ಮನೆಗೆ ಬರುತ್ತಿದ್ದ ಅವನ ಬಂಧುಗಳಿಗೂ ಹಾಗೆಯೇ ತೋರುತ್ತಿದ್ದಿತು. "ಅಯ್ಯು ಮನೆಯಲ್ಲಿ ಇಲ್ಲದಿದ್ದರೂ ಗುಳ್ಳನೇ ಮನೆಯ ಆಡಳಿತಗಳನ್ನು ನಡೆಸಿಕೊಂಡು ಹೋಗುತ್ತಾನೆ" ಎಂದು ಎಲ್ಲರೂ ಹೇಳುತ್ತಿದ್ದರು. ಮನೆಯಲ್ಲಿ, ಗದ್ದೆಯಲ್ಲಿ, ವಸೂಲಿ ಯಲ್ಲಿ, ದನಕರುಗಳನ್ನು ನೋಡಿಕೊಳ್ಳುವುದರಲ್ಲಿ ಯಾವ ಕೆಲಸದಲ್ಲೂ ಗುಳ್ಳ ತಾನು ಒಂದು ಆಳಾದರೂ ಎರಡು ಆಳಿನಷ್ಟು ಕೆಲಸಮಾಡುತ್ತಿದ್ದನು. ಅವನ ಪ್ರಾಮಾಣಿಕ ತನವೂ ಹಾಗೆಯೇ ಇದ್ದಿತು. ಅಯ್ಯುವಿನ ಸಾವಿರಾರು ರೂಪಾಯಿಗಳನ್ನು ವಸೂಲು ಮಾಡಿ ಅದನ್ನು ಕನಕ್ಕಿಂತಲೂ ಕಡೆಯಾಗಿ ಎಣಿಸಿ ಅಯ್ಯುವಿಗೆ ತಲಪಿಸುತ್ತಿದ್ದನು. ಈ ಎಲ್ಲಾ ಕೆಲಸಗಳನ್ನು ಮಾಡುತ್ತಿರುವಾಗ, ಅವನ ಮುಖವನ್ನು ಕುರಿತು ನೋಡಿ ಅದರ ಭಾವಭಂಗಿಗಳನ್ನು ವ್ಯಾಸಂಗಮಾಡುವವರಿಗೆ ಮಾತ್ರ ಅಲ್ಲಿ ಒಂದು ಕಿಚ್ಚೂ ಹಠಸಾಧನೆಯೂ ಗೋಮುಖವ್ಯಾಘ್ರ ಸ್ವಭಾವವೂ ಕಾಣುತ್ತಿದ್ದವು. ಉಳಿದವರಿಗೆ "ನಮಗೂ ಗುಳ್ಳನಂತಹ ಆಳು ಸಿಕ್ಕಿದರೆ ನಾವೂ ಬೂತಯ್ಯನವರ ಎರಡರಷ್ಟು ಬಕ್ಕಲುತನವಾದೇವು" ಎನ್ನಿಸುತ್ತಿತ್ತು.

ಗುಳ್ಳನ ಕೀರ್ತಿ ಹೀಗೆ ಎಲ್ಲೆಲ್ಲೂ ಬೆಳಗಿದರೂ ಬುಂಡೆಕ್ಯಾತ ಮತ್ತು ಅಯ್ಯು ಇವರಿಬ್ಬರಿಗೆ ಮಾತ್ರ ಅದರ ' ಸಾಚಾ ತನ 'ದಲ್ಲಿ ಅನುಮಾನವುಂಟಾಗಿತ್ತು. ಬುಂಡೆ

ಕ್ಯಾತನಿಗೆ ಅನುಮಾನವುಂಟಾಗಲು, ರೈತರಲ್ಲಿ ಅವನಿಗೆ ಇದ್ದ ಸ್ವಾಭಾವಿಕವಾದ ಅನುಭವಜನ್ಯವಾದ ದ್ವೇಷವೇ ಮುಖ್ಯಕಾರಣವಾಗಿತ್ತು. “ಗುಳ್ಳ ಶುದ್ಧ ಕಳ್ಳ, ಸತ್ತರೂ ಅವನನ್ನು ನಂಬಕೂಡದು.” ಅವನು “ತಲೆ ಬುಂಡೆ ಕೂದು ಇಟ್ಟರೂ ಅದು ಸೋರೆ ಬುಂಡೆಯೇ” ಎಂಬುದು ಅವನ ಮಾತಾಗಿತ್ತು. ಆದರೆ ರೈತರ ವಿಷಯದಲ್ಲಿ ಅಯ್ಯುವಿನ ಅನುಭವ ಹೆಚ್ಚು ನವರೂ ಕೂರಾದುದೂ ಆಗಿತ್ತು. ಅವರ ಸ್ವಭಾವ ಕಷ್ಟಸುಖಗಳನ್ನು ಅವನು ಚೆನ್ನಾಗಿ ಅರಿತ್ತಿದ್ದನು. ಅವನಿಗೆ ಬುದ್ಧಿಯ ಪ್ರಾಬಲ್ಯಕ್ಕಿಂತ ಹೃದಯದ ಅನುಭವ ಚೆನ್ನಾಗಿತ್ತು. ಬೂತಯ್ಯನವರು ಆಸ್ತಿಯನ್ನು ಸಂಪಾದಿಸಲು ಪಟ್ಟ ಕಷ್ಟಗಳೂ ತಿಂದ ನೋವುಗಳೂ ಕೊಟ್ಟ ದಂಡಗಳೂ ಅವರ ಹೃದಯದ ತಂಪನ್ನೇ ಬತ್ತಿಸಿದ್ದುವು. ಆ ಹಣದ ಮೇಲೆ ಅಯ್ಯು ಬಂದು ಕುಳಿತಾಗ ಅವನ ಮನುಷ್ಯತ್ವವನ್ನು ಅಮುಕುವ ಅನುಭವಗಳು ಅವನಿಗೆ ಉಂಟಾಗಿರಲಿಲ್ಲ. ಅವನು ಸ್ವಭಾವದಿಂದಲೂ ಯೌವನದಿಂದಲೂ ಉದಾರಿಯೇ ಆಗಿದ್ದನು. ಮಾಡುತ್ತಿದ್ದ ಕೆಲಸಗಳಿಗಿಂತ ಹೆಚ್ಚಾಗಿ ಅದರ ಹಿಂದಲ ಮನೋಭಾವವನ್ನು ನೋಡುವುದು ಅವನಿಗೆ ಪದ್ಧತಿಯಾಗಿತ್ತು. ಗುಳ್ಳನ ಮುಖವನ್ನು ನೋಡಿದಾಗಲೆಲ್ಲಾ ಅವನಿಗೆ ಅಲ್ಲಿ ಅಡಗಿರುವ ದ್ವೇಷ ಕಾಣುತ್ತಿತ್ತು. ಇತರರಿಗೆ ಗುಳ್ಳನ ಪ್ರಾಮಾಣಿಕತೆ ತೋರಿದಾಗ ಅಯ್ಯುವಿಗೆ ಅವನ ದುರಹಂಕಾರ ಕಾಣುತ್ತಿತ್ತು. ಇತರರಿಗೆ ಅವನ ಕಷ್ಟಸಹಿಷ್ಣುತೆ ಕಂಡಾಗ ಅಯ್ಯುವಿಗೆ ಅವನ ಹಠಮಾರಿತನ ಕಾಣುತ್ತಿದ್ದಿತು. ದ್ವೇಷವೇ ಹೊಗೆಯಾಡುತ್ತಿರುವ ಬೆಂಕಿಯಾಗಿ, ವಾಯಿದೆ ಕಳೆಯುವವರೆಗೆ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದು, ಒಂದು ವಿಧದಲ್ಲೂ ಅಯ್ಯುವಿನ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ, ಹಣ ತೀರಿದ ಕೂಡಲೇ ಒಳಗೆ ತುಂಬಿರುವ ಕಿಚ್ಚನ್ನೆಲ್ಲಾ ಭುಗಿಲೆಂದು ಹೊರಕ್ಕೆ ಗುಳ್ಳನು ಕಾರುವುದರಲ್ಲಿ ಸಂದೇಹವಿಲ್ಲವೆಂದು ಅಯ್ಯುವಿಗೆ ಚೆನ್ನಾಗಿ ಗೊತ್ತಾಗಿದ್ದಿತು.

ಅಯ್ಯುವು ಗುಳ್ಳನಿಗೆ ಅನೇಕ ಆಸೆಗಳನ್ನು ತೋರಿಸಿದನು. “ಇತರ ಆಳುಗಳು ಮಾಡುವುದರ ಎರಡರಷ್ಟು ಕೆಲಸ ನೀನು ಮಾಡಿದ್ದೀಯೆ. ಅವರು ಹತ್ತು ವರ್ಷ ಕೆಲಸಮಾಡಿದರೆ ನೀನು ಐದು ವರ್ಷ ಮಾಡಿದಷ್ಟು ಆಗುವುದಿಲ್ಲ. ನಿನ್ನ ಹಣ ತೀರಿತು. ನೀನು ಇನ್ನು ಕೆಲಸಮಾಡಬೇಕಾದ್ದಿಲ್ಲ” ಎಂದು ಅಯ್ಯು ಹೇಳಿದುದಕ್ಕೆ ಗುಳ್ಳ “ನಾನೂ ಎಲ್ಲರಂತೆ” ಎಂದುಬಿಟ್ಟನು. ಅಯ್ಯುವು “ಜೀತವನ್ನು ಬಿಡು, ನನ್ನ ಜಮೀನನ್ನೇ ವಾರಕ್ಕೆ ಮಾಡಿಕೊ” ಎಂದಾಗ, ಗುಳ್ಳನು “ಸ್ವಂತ ಜಮೀನಿದ್ದರೆ ಆರಂಬ, ವಾರವು ಘೋರ” ಎಂದನು. ಗುಳ್ಳನ ಈ ‘ಕಡದು’ ಆಚರಣೆಯಿಂದ ಅವನ ಗೌರವ ಊರಿನಲ್ಲಿ ಏರಿತು. “ತಕೊಂಡ ಹಣ ಒಂದು ಕಾಸು ನಿಲ್ಲಿಸದೆ ದಣಿ

ಋಣ ತೀರಿಸಿದ" ಎಂಬ ಬಿರುದು ಹಳ್ಳಿಯಲ್ಲಿ ಬಂದರೆ ರೈತರ ದೃಷ್ಟಿಯಲ್ಲಿ ಅವನೇ ಭಾರಿ ಗೃಹಸ್ಥ. ರೈತರು ಅವನನ್ನೇ ಗೃಹಸ್ಥನೆನ್ನುವುದು. ಅಲ್ಲಿ ಉಳಿದ ಯಾವ ಗೃಹಸ್ಥಧರ್ಮವೂ ಮನುಷ್ಯನ ಯೋಗ್ಯತೆಗೆ ಬೆಲೆಯನ್ನು ಕೊಡುವುದಿಲ್ಲ.

ಸಾಧನೆಯನ್ನು ಮಾಡುವ ಯೋಗಿಯಂತೆ ಗುಳ್ಳನು ಗೊತ್ತುಮಾಡಿಕೊಂಡಿದ್ದ ಹತ್ತು ವರ್ಷ ಜೀತವನ್ನು ದೇವರೂ ಮನುಷ್ಯರೂ ಒಪ್ಪುವ ರೀತಿಯಲ್ಲಿ ದುಡಿದು ಹಣವನ್ನು ತೀರಿಸಿಬಿಟ್ಟನು. ಮಾರನೆಯ ದಿನ ಜಾಲಹಳ್ಳಿಯಲ್ಲಿ ಮಾರಿಜಾತ್ರೆ. ಬೂತಯ್ಯನವರು ಬದುಕಿದ್ದಾಗ ರೈತರೊಂದಿಗೂ ತಿಗಳರೊಂದಿಗೂ ಯಾವುದೋ ಏರ್ಪಾಡುಮಾಡಿಕೊಂಡು ಜಾತ್ರೆಯಲ್ಲಿ ತಾವೂ ಸಹಾಯಕರಾಗಿ ಅದರಿಂದಲೂ ಸ್ವಲ್ಪ ಹಣವನ್ನು ಗಳಿಸುತ್ತಿದ್ದರು. ಅಯ್ಯುವಿಗೆ ಮೊದಲಿನಿಂದಲೂ ಮಾರಿಜಾತ್ರೆ ಎಂದರೆ ಮೈ ಜುಂ ಎನ್ನುತ್ತಿದ್ದಿತು. ಅವನ ಬಾಲ್ಯದಲ್ಲಿ ಒಂದು ಸಲ ಕೋಣನನ್ನು ಜಾತ್ರೆಯಲ್ಲಿ ಕಡಿಯುತ್ತಿದ್ದಾಗ ಅವನು ನೋಡುವುದಕ್ಕೆ ಹೋಗಿದ್ದನು. ಸ್ವಲ್ಪ ಮುಂಚೆ ಕೋಣನನ್ನು ಕಡಿಯುವವನು ಬೂತಯ್ಯನವರ ಹತ್ತಿರ "ಎಂಥಾ ಕೋಣಾನೂ ಒಂದು ಏಟಿಗೆ ಕಡಿಯುವುದಕ್ಕೆ ಆಗುವುದಿಲ್ಲ. ಕತ್ತಿನ ಮೂಳೆ ಮೇಲೆ ಏಟು ಕೊಟ್ಟರೆ ಕತ್ತಿಯೇ ಮೇಲಕ್ಕೆ ಹಾರುತ್ತೆ. ಸರಿಯಾದ ಜಾಗ ನೋಡಿ ಗರಗಸದಲ್ಲಿ ಕುಯ್ಯೋ ಹಾಗೆ ಕತ್ತೀನ ಜಾರಿಸಬೇಕು. ನಾನು ಆಗಲೇ ನೂರು ಕೋಣ ಕಡಿದಿದೇನೆ. ಇನ್ನೂ ಪಟ್ಟು ಸಿಕ್ಕಿಲ್ಲ" ಎಂದಿದ್ದನು. ಅಯ್ಯುವು ಕೋಣನನ್ನು ಕಡಿಯುವ ಕಂಬದಿಂದ ತುಂಬ ದೂರ ನಿಂತಿದ್ದರೂ ಮೊದಲನೆಯ ಕತ್ತಿಯ ಏಟು ಕೋಣನ ಕತ್ತಿನ ಮೇಲೆ ಬಿದ್ದ ಕೂಡಲೇ ಅದರಿಂದ ರಕ್ತವು ಚಿಲ್ಲೆಂದು ಚಿಲುಮೆಯಂತೆ ಹಾರಿ ಅಯ್ಯುವಿನ ಮೈ ಮೇಲೆ ಚೆಲ್ಲಿತು. ಜಾತ್ರೆಯಾಗಲಿ ಆಗದಿರಲಿ, ಅಯ್ಯುವಿಗೆ ಆ ಜ್ಞಾಪಕ ಪದೇ ಪದೇ ಬರುತ್ತಿದ್ದಿತು. ಕೋಣನ ತಲೆಯ ಮೇಲೆ ಹರಳೆಣ್ಣೆ ದೀಪವನ್ನಿಟ್ಟು, ಮನೆ ಮನೆಯಲ್ಲಿ ಕೊಟ್ಟ ಎಣ್ಣೆಯನ್ನು ಅದಕ್ಕೆ ಸುರಿಯುತ್ತಾ ಭಯಂಕರವಾದ ಕೊಂಬು, ತಮಟೆಗಳೊಂದಿಗೆ ಅದರ ಮೆರವಣಿಗೆ ಮಾಡುವುದು; ಇಪ್ಪತ್ತು-ಮೂವತ್ತು ಗಡಿಗೆಗಳಲ್ಲಿ ಹೆಂಡವನ್ನು ತಂದು ಅವುಗಳನ್ನು ಮಾರಿಯಮ್ಮನ ಮುಂದೆ ಇಟ್ಟು ಸುತ್ತ ಕುಣಿಯುವುದು; ಮಾರಿಯಮ್ಮನಿಗೆ ಮೊದಲನೆಯ ಆಹುತಿಗೆ ಒಂದು ಕುರಿಯನ್ನು ಸೀಕೊಡುವುದು; ಅದರ ರಕ್ತದಲ್ಲಿ ಅನ್ನವನ್ನು ಕಲಸಿ ರುಚಿ ನೋಡಿ ಊರಿನ ನಾಲ್ಕು ದಿಕ್ಕುಗಳಲ್ಲೂ ಅದನ್ನು ಬಲಿ ಹಾಕುವುದು; ಆ ಭಯಂಕರ ತಮಟೆ; ಕುಡಿದವರ ಅಮಲಿನ ಕಿರಿಚಾಟ;—"ಈ ಮತ್ತು ಏರಿದವರು ಕೋಣಗಳನ್ನು ಕಡಿಯುವುದಿರಲಿ, ಮನುಷ್ಯರನ್ನು ಕಡಿಯುವುದೂ ಆಶ್ಚರ್ಯವಲ್ಲ" ಎಂದು ಅಯ್ಯುವಿಗೆ ತೋರಿತು. ಆ ವರ್ಷ ಅವನು ಬಹಳ ಉಪಾಯದಿಂದ "ಕೋಣಗಳನ್ನು ಕಡಿಯುವುದನ್ನು ಈ ವರ್ಷ ನಿಲ್ಲಿಸಿ"

ಎಂದು ರೈತರನ್ನು ಕೇಳಿಕೊಂಡಿದ್ದನು. ಕಡಿಯಬೇಕೆಂದು ಹೇಳುತ್ತಿದ್ದವರು ನೂರು ಒಕ್ಕಲು. ಬೇಡವೆನ್ನುತ್ತಿದ್ದವನು ಒಬ್ಬ. "ಕೋಣ ಕಡಿಯುವುದನ್ನು ಬಿಟ್ಟರೆ ಊರಿಗೆ ಪರಬಲವಿಲ್ಲ" ಎಂದು ಆ ನೂರು ಒಕ್ಕಲೂ ನಂಬಿದ್ದರು. ಚರ್ಚೆ ನಡೆಯುತ್ತಿದ್ದಾಗ ಅಯ್ಯು ಅಲ್ಲಿ ಇರಲಿಲ್ಲ. "ನನ್ನ ಮಾತು ನಾನು ಹೇಳಿದ್ದೇನೆ. ಅವರು ಇಷ್ಟವಿದ್ದಂತೆ ಮಾಡಲಿ. ಇದು ಅವರ ಜಾತ್ರೆ, ನನ್ನ ಜಾತ್ರೆಯಲ್ಲ" ಎಂದುಕೊಂಡು ಅವನು ಮನೆಯಲ್ಲೇ ಇದ್ದನು. ಆ ವೇಳೆಗೆ ಗುಳ್ಳನು ಅಲ್ಲಿಗೆ ಬಂದನು. "ಜಾತ್ರೆ ಬಿಟ್ರೆ ಊರು ಪ್ರಬಲ ಆಗೋಲ್ಲ. ಅಯ್ಯನ ಮಾಟವೂ ಅದೇಯ. ನಮ್ಮ ಅಪ್ಪ ಅಜ್ಜನ ಕಾಲದಿಂದ ನಡಕೊಂಡು ಬಂದಿರೋ ದೇವರು ದಿಂಡರು ಇವತ್ತು ನಮಗೆ ಆಗದೋರಾದ್ರ? 'ಜಾತ್ರೆ ಬಿಡಲಿ. ಒಕ್ಕಡಿಂದ ಪ್ಲೇಗೋ ಕಾಲರಾನೋ ದೊಡ್ಡ ರೋಗಾನೋ ಹೊಡೆದು ಈ ಮುಂಡೆ ಮಕ್ಕಳ್ನೆಲ್ಲಾ ಸವರಿಕೊಂಡು ಹೋಗ್ಲಿ. ಆ ಮೇಲೆ ರಾಜ್ಯ ಎಲ್ಲಾ ನಂದೇ' ಅಂತ ಅಯ್ಯ ಹೇಳ್ತಾನೆ. ನೀವು ಮೂಡ ಮುಂಡೇವು. ತಲೆ ಕಡೀತಿನಿ ಅಂದ್ರೆ ಹಂಗೆ ಮಾಡು ನಮ್ಮಪ್ಪ ಅಂತೀರಿ." ಗುಳ್ಳನ ಮಾತು ಜನಕ್ಕೆ ಚೆನ್ನಾಗಿ ಹಿಡಿಯಿತು. "ಅಯ್ಯನ ಬಲಗೈ ಗುಳ್ಳನೇ ಹಂಗೆ ಹೇಳಬೇಕಾದರೆ ಅಯ್ಯನ ಇಚಾರ ತಳಮಟ್ಟ ಅವ ಸೋದಿಸಿ ತಿಳಕೊಂಡೆ ಅವ್ನೆ. ಇಂಥ ಹಿಕ್ಮತ್ತು ಅಯ್ಯಂದು ಅಂತ ನಂಗೆ ಹಿಂದೆಯೇ ತಿಳಿದಿತ್ತು" ಎಂದ ಊರ ಪಟೇಲ. ಗುಳ್ಳನಲ್ಲಿ ತುಂಬಿಕೊಂಡಿದ್ದ ದ್ವೇಷವೆಲ್ಲಾ ಹೊರಕ್ಕೆ ಕಿಚ್ಚು ಕಿಚ್ಚಾಗಿ, ಉರಿ ಉರಿಯಾಗಿ ಬಂದಿತು. ಉದ್ರೇಕದಿಂದ ಅವನ ಮೈನಡುಗುತ್ತಿದ್ದಿತು, ನಾಲಗೆ ತೊದಲುತ್ತಿದ್ದಿತು. ಅವನು "ಈ ಅಯ್ಯ ಅನ್ನೊ ಹುಳಾನ ನಾವು ಹೊಸಕಿ ಹಾಕ್ದೆ ಇದ್ರೆ ಇವ ನಮ್ಮ ಗ್ರಾಮ ತಕೋತಾನೆ. ನಮ್ಮ ಅಪ್ಪ ಅಜ್ಜದೀರು ದುಡಿದೂ ದುಡಿದೂ ಇವನ ಅಪ್ಪನ ಮನೆ ದೊಡ್ಡದುಮಾಡಿದರು. ನಾವು ದುಡಿದೂ ದುಡಿದೂ ಇವನ ಮನೆ ಅರಮನೆಯಾಯ್ತದೆ. ಈಗಲೆ ಇವನ ಫೈಸಲ್ ಹತ್ತಿಸದೆ ಬಿಟ್ಟರೆ ನಮ್ಮ ಮಕ್ಕಳೂ ಇವನ ಜೀತಮಾಡೋದೆ ಆಯ್ತದೆ. ಈ ನೂರು ಒಕ್ಕಲಲ್ಲಿ ಬೂತಯ್ಯನಿಗೆ ಸಾಲಗಾರರಲ್ಲದೋರು ಯಾರಾದರೂ ಅವ್ರೋ? ಇಲ್ಲ. ಅಯ್ಯ ನಾಳೆ ದಾವಾ ಹಾಕಿದರೆ ನಾವೆಲ್ಲಾ ಊರುಬಿಟ್ಟು ವನವಾಸ ಮಾಡೋದೆ. ಅಯ್ಯನಿಗೆ ಆಧಾರ ಆಗದ್ದು ಅಂಗೈ ಅಗಲ ಜಮೀನು ಈ ಊರಲ್ಲಿ ಇಲ್ಲ. ಆ ಜಮೀನ್ನ ಅಯ್ಯನಿಂದ ಬಿಡಿಸದೆ ಹೋದ್ರೆ ನಿಮ್ಮ ಮಕ್ಕಳ ಕೈಗೆ ಕರಟ ತಾನೆ. ನೀವೆಲ್ಲಾ ಮೂಡರು. ಹೆಬ್ಬೆಟ್ಟು ತಿವಿದ ಪತ್ರಗಳು ಅಯ್ಯನ ಮನೇಲಿ ಬಾರಿ ಹುಲ್ಲು ಹೊರೆ ಅಷ್ಟು ಅಯ್ತೆ. ಅಯ್ಯ ನಿಮ್ಮ ಮನೆ, ಜಮೀನು, ಹಣ ಎಲ್ಲಾ ಸಣ್ಣ ಮಾಡಿದ. ಇನ್ನು ಊರನೇ ಸಣ್ಣ ಮಾಡೋಣ ಅಂತ ಜಾತ್ರೆ ಬಿಡಿ ಅಂತಾನೆ. ಅಪ್ಪ ಅಜ್ಜ ಸಂಪಾದಿಸಿದ ಆಸ್ತಿಯೆಲ್ಲಾ ಹೋಯ್ತು. ಪರಾಣಾನೂ ಮಾರಿಯಮ್ಮನ

ಕೋಪಕೆ ಒಪ್ಪಿಸಿಬಿಡಿ” ಎಂದ. ಗುಳ್ಳಸು ಪತ್ರಗಳ ವಿಚಾರ ಹೇಳಿದುದರಿಂದ ಜಾತ್ರೆಗಿಂತ ರೈತರಿಗೆ ಅದೇ ಹೆಚ್ಚಾಯಿತು. “ಅಯ್ಯನ ಕೈಲೆ ನಮ್ಮ ಜೀವ ಅಯ್ತೆ” ಅನ್ನುವುದು ಪ್ರತಿಯೊಬ್ಬನಿಗೂ ಮತ್ತೆ ಮತ್ತೆ ಜ್ಞಾಪಕಕ್ಕೆ ಬಂತು. ಅಯ್ಯುವಿನ ಹಣೇಬರಹ ತೊಡೆದುಹೋಯಿತು. “ನಾಳೆ ರಾತ್ರಿ ಅಯ್ಯನ ಮನೆ ಸುಗ್ಗಿ ಲೂಟಿ ಮಾಡಿಬಿಡಬೇಕು. ಅಯ್ಯನೇನಾದರೂ ಚುಟಕ್ ಪಿಟಕ್ ಅಂದರೆ ಅವನನ್ನ ಕಡಿದೇ ಹಾಕಬೇಕು. ಮನೇಲಿ ಯಾರು ತಡೆದರೂ ಅವರನ್ನೂ ಕಡಿದೇ ಹಾಕಬೇಕು. ಮನೆಗೆ ಬಂದಾಳು ದೊಣ್ಣೆ, ಕತ್ತಿ, ಕೊಡಲಿ ಸಿಕ್ಕಿದ್ದು ತೆಗೆದುಕೊಂಡು ಬರಬೇಕು. ಬರದಿದ್ದರೆ ಅವರನ್ನೂ ಕಡಿದುಹಾಕಬೇಕು” ಎಂದು ತೀರ್ಮಾನಿಸಿಕೊಂಡು ರೈತರೆಲ್ಲಾ ತಮ್ಮ ತಮ್ಮ ಮನೆಗಳಿಗೆ ಹೋದರು. ಬೆಳಗಾದನಂತರ ಆ ವರ್ಷ ಎಲ್ಲಾ ವರ್ಷಗಳಿಗಿಂತ ಹೆಚ್ಚು ಕೋಣಗಳನ್ನು ಕಡಿಯುತ್ತಾರೆಂದು ಅಯ್ಯುವಿಗೆ ತಿಳಿಯಿತು. “ಅವರ ಇಷ್ಟ” ಎಂದುಕೊಂಡು ಸುಮ್ಮನಾದನು.

ಜಾಲಹಳ್ಳಿಯಲ್ಲಿ ‘ಅಯ್ಯ’ನಾಗಿದ್ದವನು ಅಯ್ಯು ಒಬ್ಬನೆ. ಅವನ ಮನೆಯಲ್ಲಿ ಅವನ ಹೆಂಡತಿಯೂ ಇಬ್ಬರು ಗಂಡುಮಕ್ಕಳೂ ಇದ್ದರು. ಮೊದಲನೆಯ ಹುಡುಗನಿಗೆ ಆರು ವರ್ಷವೂ ಎರಡನೆಯ ಹುಡುಗನಿಗೆ ನಾಲ್ಕು ವರ್ಷವೂ ಆಗಿತ್ತು. ಮನೆಯಲ್ಲಿ ಮೂರು-ನಾಲ್ಕು ಆಳುಗಳು ಯಾವಾಗಲೂ ಜೀತಕ್ಕೆ ಇರುತ್ತಿದ್ದರು. ಮನೆಯಲ್ಲಿ ದನಕರುಗಳೂ ಕರಾವೂ ಭತ್ತ ರಾಗಿ ಕಿರಾಣಿಗಳೂ ಸಮೃದ್ಧಿಯಾಗಿದ್ದುವು. ಅಯ್ಯುವಿನ ಭಾವ್ಮೈದ ಬುಂಡೆಕ್ಯಾತನು ಆಗಾಗ್ಗೆ ಬಂದು ಅಲ್ಲಿ ಒಂದು ತಿಂಗಳು ಎರಡು ತಿಂಗಳು ಇರುತ್ತಿದ್ದನು. ಅಯ್ಯುವಿನ ಸಪ್ಪೆತನ ಅವನಿಗೆ ಸೇರುತ್ತಿರಲಿಲ್ಲ. ಮಾರಿ ಜಾತ್ರೆಯ ಹೊತ್ತಿಗೆ ಅವನು ಜಾಲಹಳ್ಳಿಯಿಂದ ತನ್ನ ಊರಿಗೆ ಹೋಗಿ ಸುಮಾರು ಒಂದು ತಿಂಗಳಾಗಿತ್ತು. ಅಯ್ಯುವಿನ ಮನೆ ತೊಟ್ಟಿ ಮನೆ. ಅದರ ಮಧ್ಯ ಭಾಗದಲ್ಲಿ ಅಂಗಳವಿದ್ದು ಸೂರಿನ ಹಾರನ್ನು ಎಲ್ಲಾ ಕಡೆಗಳಿಂದಲೂ ಆ ಅಂಗಳಕ್ಕೆ ಬಗ್ಗಿಸಿದ್ದರು. ಅಂಗಳದ ಮೇಲುಗಡೆ ಕಬ್ಬಿಣದ ಸಲಾಕಿಗಳನ್ನು ಬಿಗಿದು ಅದರ ಮೂಲಕ ಒಳಕ್ಕೆ ಬರಲು ಸಾಧ್ಯವಾಗದಂತೆ ಮಾಡಿದ್ದರು. ಬಾಗಿಲುಗಳನ್ನು ಅರ್ಧ ಅಡಿ ದಪ್ಪವಾದ ಹಲಗೆಗಳಿಂದ ಮಾಡಿದ್ದುದರಿಂದ ದೇವಸ್ಥಾನದ ಬಾಗಿಲುಗಳಂತೆ ಭಾರವೂ ಬಿಗಿಯೂ ಆಗಿದ್ದುವು. ಗೋಡೆಗಳಿಗೆಲ್ಲಾ ಮರದ ದಿಮ್ಮಿಗಳನ್ನು ಕೊಟ್ಟು ಸುಮಾರು ಒಂದು ಮಾರು ಅಗಲವಾಗಿ ಕಟ್ಟಿದ್ದರು. ‘ರೈತರೆಲ್ಲಾ ರಾಕ್ಷಸರು’ ಎನ್ನುತ್ತಿದ್ದ ಬೂತಯ್ಯನವರು ಅಷ್ಟೊಂದು ಜನರ ಮಧ್ಯೆ ತಾವು ಒಬ್ಬರೇ ಇರಬೇಕಾಗಿದ್ದುದರಿಂದ ಕೋಟೆಯಂತಹ ಮನೆಯನ್ನು ಕಟ್ಟಿದ್ದರು. ಮನೆ ಕಟ್ಟಿದ ಬಡಗಿಯು “ಈ ಊರಿಗೆ ಮತ್ತೆ ಕೋಟೆ ಕಟ್ಟಬೇಕಾದರೆ ಬೂತಯ್ಯನವರ ಮನೆ

ಗೋಡೆ ಒಡೆದರೆ ಸಾಕು. ಬೇಕಾದಷ್ಟು ಮಣ್ಣು ಸಿಕ್ಕುತ್ತೆ" ಎಂದು ಹೇಳಿದ್ದನು. ಆದರೆ "ಸಿಡಿಲು ಬಡಿದರೆ ಹಿಡಿದ ಕೊಡೆ ಕಾಯುವುದೆ?'' ಊರವರೆಲ್ಲಾ ಒಂದಾಗಿ ಮೇಲೆ ಬೀಳುವುದಕ್ಕೆ ಬಂದ ಕಾಲಕ್ಕೆ ಯಾವ ಗೋಡೆಯೂ ತಡೆಯುವುದಾಗಿರಲಿಲ್ಲ.

ಆ ದಿವಸ ಜನ ಹೆಚ್ಚಾಗಿ ಅಯ್ಯುವಿನ ಮನೆ ಮುಂದೆ ಸುಳಿಯಲಿಲ್ಲ. ಸಾಯಂಕಾಲವಾದನಂತರ ಹೊಲೆಯರು ಹೆಂಡವನ್ನು ಕುಡಿದು ಮಾರಿಗುಡಿಯ ಮುಂದೆ ಬಂದು ತಮಟೆಯನ್ನು ಪ್ರಾರಂಭಿಸಿದರು. ಅನೇಕ ತಿಗಳರೂ ಒಕ್ಕಲಿಗರೂ ತಲೆಗೆ ಮುಸುಕು ಹಾಕಿಕೊಂಡು ತಾವೂ ಅದರ ಮರೆಯಲ್ಲಿ ಹೆಂಡವನ್ನು ಕುಡಿದರು. ಜಾತ್ರೆಯ ತಮಟೆಯ ಸದ್ದನ್ನು ಕೇಳಿ ಅಯ್ಯುವಿನ ಹೆಂಡತಿಗೆ ರಣವಾದ್ಯವನ್ನು ಕೇಳಿದಂತೆ ಭಯವಾಯಿತು. ಸ್ವಲ್ಪ ಹೊತ್ತಿಗೆ ಒಬ್ಬ ತಿಗಳನು ಬಂದು ಉಪ್ಪಿನಕಾಯನ್ನು ಕೇಳಿದನು. ಅಯ್ಯುವಿನ ಹೆಂಡತಿಯು "ಈಗ ಮಡಿ ಇಲ್ಲ. ಬೆಳಿಗ್ಗೆ ಕೊಡುತ್ತೇನೆ" ಎಂದಳು. ರಾತ್ರಿ ಹತ್ತು ಗಂಟೆಗೆ ಅಯ್ಯುವಿನ ಮಕ್ಕಳು ಮಲಗಿದ್ದುವು. ಆ ದಿನ ಮಾರಿ ಜಾತ್ರೆಯಾದುದರಿಂದ ಯಾವ ಜೀತದ ಆಳೂ ಅಯ್ಯುವಿನ ಮನೆಗೆ ಮಲಗಲು ಬರಲಿಲ್ಲ. ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಅಯ್ಯುವಿಗೆ ಸ್ವಲ್ಪ ಜೊಂಪು ಬಂದಿತು. ತಮಟೆಯ ಘೋರಾಟದಿಂದ ಅವನಿಗೆ ನಿದ್ರೆ ಬರಲಿಲ್ಲ. ಅವನ ಹೆಂಡತಿಗೂ ನಿದ್ರೆ ಬರಲಿಲ್ಲ. ಅರ್ಧರಾತ್ರಿಯ ಹೊತ್ತಿಗೆ ಯಾರೋ ಬಾಗಿಲನ್ನು ತಟ್ಟಿದರು.

ಅಯ್ಯುವು ಬಾಗಿಲನ್ನು ತೆಗೆಯುವುದಕ್ಕೆ ಎದ್ದನು. ಅವನ ಹೆಂಡತಿಯು "ಭಯವಾಗುತ್ತೆ, ಇಷ್ಟು ಹೊತ್ತಿನಲ್ಲಿ ಯಾಕೆ ತೆಗೆಯಬೇಕು, ಮಲಗಿಕೊಳ್ಳಿ, ನಿದ್ರೆ ಬಂದಿದೆ ಎಂದುಕೊಂಡು ಹೋಗುತ್ತಾರೆ, ಬೆಳಿಗ್ಗೆ ನೋಡೋಣ" ಎಂದಳು. ಅಯ್ಯುವು "ಹುಚ್ಚೀ, ಭಯವೇನು ಬಂತು. ಜಾತ್ರೆಗೆ ಏನಾದರೂ ಬೇಕೇನೊ. ಇವರೆಲ್ಲಾ ನಮ್ಮ ರೈತರು. ಭಯಪಟ್ಟುಕೊಂಡು ಈ ಊರಲ್ಲಿ ಇರುವುದಕ್ಕೆ ಆಗುತ್ತದೆಯೇ ? ನೀನು ಮಲಗಿಕೊ" ಎಂದು ಹೇಳಿ, ಲಾಂದ್ರವನ್ನು ದಪ್ಪಮಾಡಿಕೊಂಡು ಬಂದು ಬಾಗಿಲನ್ನು ತೆರೆದನು. ಬಾಗಿಲನ್ನು ಅರ್ಧ ತೆಗೆದ ನಂತರ ಅಯ್ಯುವು ಸ್ವಲ್ಪ ಬೆಚ್ಚಿಬಿದ್ದನು. ಆದರೆ ಅದನ್ನು ತೋರಿಸಿಕೊಳ್ಳದೆ ಬಾಗಿಲನ್ನು ಪೂರ್ತ ತೆಗೆದು ಹೊರಕ್ಕೆ ಬಂದನು. ಅವನ ಕಣ್ಣಿಗೆ ಮೊದಲು ಬಿದ್ದವನು ಗುಳ್ಳ. ಅವನು ಅಯ್ಯುವನ್ನೇ ನುಂಗುವಂತೆ ನೋಡುತ್ತಿದ್ದನು. ಅವನ ಕಣ್ಣಿನಲ್ಲಿ ಆಗ ಕಂಡಷ್ಟು ದ್ವೇಷವೂ ಪಿಶಾಚತನವೂ ರಾಕ್ಷಸಭಾವವೂ ಅಯ್ಯುವಿಗೆ ಮತ್ತಾವಾಗಲೂ ಕಂಡಿರಲಿಲ್ಲ. "ಇದಕ್ಕೋಸ್ಕರವೇ ಈ ಹತ್ತು ವರ್ಷ ನಿನ್ನ ಜೀತಮಾಡಿದೆ'' ಎಂದು ಅವನು ತನಗೆ ಹೇಳುತ್ತಿರುವಂತೆ ಅಯ್ಯುವಿಗೆ ತೋರಿತು. ಗುಳ್ಳನ ಕೈಲಿ ದೊಣ್ಣೆಯಾಗಲಿ, ಮಚ್ಚಾಗಲಿ ಇರಲಿಲ್ಲ. ಅವನ ಹಿಂದುಗಡೆ ಊರಿನವರೆಲ್ಲಾ ಸಾಲಾಗಿ ಮಾತನಾಡದೆ

ನಿಂತಿದ್ದರು. ಪ್ರತಿಯೊಬ್ಬನ ಕೈಲೂ ಒಂದೊಂದು ಆಯುಧ ಹೊಳೆಯುತ್ತಿತ್ತು. ಒಬ್ಬನು ಮಾರಿಕೋಣವನ್ನು ಕಡಿಯುವ ಉದ್ದವಾದ ಕತ್ತಿಯನ್ನೇ ಹೂವಿನ ಹಿಡಿಯೊಂದಿಗೆ ತಂದಿದ್ದನು. ಬಂದಿದ್ದವರಲ್ಲಿ ಮುಕ್ಕಾಲು ಜನ ಕುಡಿದಿದ್ದರು. ಐದು ನಿಮಿಷ ಅಯ್ಯುವೂ ಮಾತನಾಡಲಿಲ್ಲ, ಅವರೂ ಮಾತನಾಡಲಿಲ್ಲ. ಯಾವ ಕ್ಷಣದಲ್ಲೋ ಸಿಡಿಯುವ ಸಿಡಿಮದ್ದುಗಳಂತೆ ಇದ್ದ ಆ ರೈತರು ಗುಳ್ಳನ ಕಡೆಯೇ ನೋಡುತ್ತಾ ಅವನ ಸೂಚನೆಯನ್ನೇ ನಿರೀಕ್ಷಿಸುತ್ತಿದ್ದರು. ಅಯ್ಯನ ಕೈಯಲ್ಲಿ ರಿವಾಲ್ವರ್ ಇದ್ದುದನ್ನು ಗುಳ್ಳನ ಹೊರತು ಮತ್ತಾರೂ ನೋಡಲಿಲ್ಲ.

ಅಯ್ಯುವಿನ ಮನೆಯಲ್ಲಿ ಹತ್ತು ವರ್ಷ ಜೀತಮಾಡಿದ್ದ ಗುಳ್ಳನಿಗೆ ಅಯ್ಯುವಿನ ಹತ್ತಿರ ರಿವಾಲ್ವರೂ ಜೋಡುನಲ್ಲಿಯ ಬಂದೂಕೂ ಇರುವುದು ಗೊತ್ತಿದ್ದಿತು. ಅಯ್ಯು ರಾತ್ರೆಹೊತ್ತು ಯಾವಾಗ ಎದ್ದರೂ ರಿವಾಲ್ವರನ್ನು ಕೈಯಲ್ಲಿ ಹಿಡಿದುಕೊಳ್ಳದೆ ಬಾಗಿಲು ತೆರೆಯುತ್ತಿರಲಿಲ್ಲವೆಂಬುದೂ ಅವನಿಗೆ ಗೊತ್ತಿದ್ದಿತು. ಆದರೆ ನೂರು ಜನರ ಆಕ್ರೋಶಕ್ಕೆ ಎದುರಾಗಿ ಒಂದು ರಿವಾಲ್ವರು ಏನು ಮಾಡಬಲ್ಲುದೆಂದು ದ್ವೇಷದಿಂದ ಕುರುಡನಾಗಿದ್ದ ಅವನು ಯೋಚಿಸಿದನು. ಆದರೆ ಅಯ್ಯುವು ಬಾಗಿಲು ತೆಗೆದು ಎದುರಿಗೆ ನಿಂತಾಗ ಗುಳ್ಳನಿಗೆ—ಅವನು ಕುಡಿಯದೆ ಇದ್ದುದರಿಂದ—ಸ್ವಲ್ಪ ಯೋಚನೆ ಯುಂಟಾಯಿತು. "ಅಯ್ಯ ಬಂದೂಕ ಹಾರಿಸಿದರೆ ಈ ಕುರಿಗಳು ಇಲ್ಲಿ ನಿಲ್ಲೋ ಹಂಗೆ ಇಲ್ಲ. ಆ ಬಂದೂಕದಲ್ಲೇ ಐದು ತೋಟಾ ಇದೆ. ಐದು ಜನ ಪ್ರಾಣ ಒಪ್ಪಿಸ್ತಾರೆ. ಆ ಮೇಲೂ ಈ ಅಳ್ಳಿದೆಯೋವು ಒಳೀಕೆ ನುಗ್ಗತವೋ ಇಲ್ಲವೋ. ಆಗೋದಾಗ್ಲಿ. ಐದಾಳು ಸತ್ರು ಚಿಂತೆ ಇಲ್ಲ. ನುಗ್ಗಿಯೇ ಬಿಡೋಣ" ಎಂದು ಅವನು ತೀರ್ಮಾನಿಸಿಕೊಂಡನು. ಅಯ್ಯುವಿಗೆ ಗುಳ್ಳನ ಯೋಚನೆ ಅವನ ಮುಖವನ್ನು ನೋಡಿದಾಗಲೇ ತಿಳಿಯಿತು. ಅವನು "ನಾನು ಈ ಐದು ಜನ ಕೊಂದರೆತಾನೆ ಫಲವೇನು. ಹೇಗೂ ಉಳಿದ ೯೫ ಜನದ ಪೈಕಿ ಆರನೆಯವನಿಗೇ ನಾನು ಆಹುತಿ. ಬರಲಿ ಏನಾಗುತ್ತೆ, ನೋಡೋಣ. ಸಾಯಬೇಕಾದ್ರೆ ಅವರ್ನ ಕೊಲ್ಲದೆಯೆ ಸಾಯೋಣ" ಎಂದುಕೊಂಡು ರಿವಾಲ್ವರನ್ನು ಜನರ ಮುಂದೆ ಎಸೆದು ಬಾಗಿಲಿನಿಂದ ಅರುಗಾಗಿ ನಿಂತುಕೊಂಡನು.

ರಿವಾಲ್ವರು ಬಿದ್ದುದನ್ನು ನೋಡಿದ ಕೂಡಲೇ ಬೂತಯ್ಯನವರು "ರಿವಾಲ್ವರ್ ಲೈಸೆನ್ಸಿ ತೆಗೆದಿಟ್ಟಿದ್ದೇನೆ. ಮನೆಹತ್ರ ಬಂದೊನ್ನ ಸುಟ್ಟುಹಾಕ್ತೇನೆ" ಎಂಬುದಾಗಿ ಹೇಳುತ್ತಿದುದು ಜನರ ಜ್ಞಾಪಕಕ್ಕೆ ಬಂದು, ಅವರ ಕೋಪ ಮತ್ತಷ್ಟು ಹೆಚ್ಚಾ ಯಿತು. ಅವರು ದಡದಡನೆ ಒಬ್ಬರಾದ ಮೇಲೊಬ್ಬರು ಮನೆಯೊಳಕ್ಕೆ ನುಗ್ಗಿದರು. ಅಯ್ಯು ಮಾತನಾಡಲಿಲ್ಲ. "ಬೇಕಾದವರು ಬೇಕಾದುದನ್ನು ತೆಗೆದುಕೊಳ್ಳಲಿ"

ಎಂದು ಸುಮ್ಮನಾದನು. ಅವನ ಹೆಂಡತಿಯೂ ಇಬ್ಬರು ಮಕ್ಕಳೂ ಹಾಸಿಗೆಯ ಮೇಲೆ ಎದ್ದು ಕುಳಿತಿದ್ದರು. ನಾಟಕದಲ್ಲಿ ಬರುವ ರಾಕ್ಷಸರ ಪಾತ್ರಗಳಂತೆ ಕತ್ತಿಗಳನ್ನೂ ಮಚ್ಚುಗಳನ್ನೂ ಹಿಡಿದುಕೊಂಡು ಒಳಕ್ಕೆ ನುಗ್ಗಿದ ಆ ಪಂಜಿನ ಕಳ್ಳರನ್ನು ನೋಡಿ ಹುಡುಗರೆರಡೂ ಕಿಟ್ಟನೆ ಕಿರಚಿದುವು. ಅಯ್ಯುವಿಗೆ ಭಯವುಂಟಾಗಿತ್ತು. ಆದರೆ ಅವನಿಗುಂಟಾಗಿದ್ದ ಭಯ ಅವನಿಗೋಸ್ಕರ ಅಲ್ಲ. ತನ್ನ ಹೆಂಡತಿ ಮಕ್ಕಳಿಗಾಗಿ. ಬೂತಯ್ಯನವರ ಕಾಲದಲ್ಲೇ ರೈತರು ಎಷ್ಟೋ ಸಲ ಮನೆಯೊಳಕ್ಕೆ ನುಗ್ಗಬಹುದೆಂದು ಅವನು ಯೋಚಿಸಿದ್ದನು. ಒಂದೆರಡು ಸಲ ಇವರು ಯಾಕೆ ನುಗ್ಗಲಿಲ್ಲವೆಂದೂ ಆಶ್ಚರ್ಯಪಟ್ಟಿದ್ದನು. ಆದರೆ ಈಚೆಗೆ ಏಳು-ಎಂಟು ವರ್ಷಗಳಿಂದ ಅವನಿಗೆ ಆ ಭಯ ತಪ್ಪಿತ್ತು. ಈಗ ಅದು ಇದ್ದಕ್ಕಿದ್ದಂತೆ ಈ ರೂಪಕ್ಕೆ ಬಂದುದರಿಂದ ಆತನಿಗೆ ಏನೂ ತೋಚದಾಯಿತು. ಅವನು “ಆಗಲಿ ನೋಡೋಣ” ಎಂದುಕೊಂಡು ಸುಮ್ಮನೆ ಕುಳಿತುಕೊಂಡನು. ಬಂದಿದ್ದವರು ಸಿಕ್ಕಿದುದನ್ನೆಲ್ಲಾ ಲೂಟಿ ಮಾಡಿದರು. ಮನೆಯಲ್ಲಿದ್ದ ಸೀರೆ ಪಂಚೆಗಳನ್ನೆಲ್ಲಾ ತೆಗೆದುಕೊಂಡರು. ಪೆಟ್ಟಿಗೆಗಳನ್ನೆಲ್ಲಾ ಒಡೆದು ಇದ್ದ ಸಾಮಾನುಗಳನ್ನೆಲ್ಲಾ ತೆಗೆದುಕೊಂಡರು. ಕೆಲವರು ಪಾತ್ರೆಗಳನ್ನು ಸಹ ತೆಗೆದುಕೊಂಡರು. ಮನೆಯಲ್ಲಿದ್ದ ಎಲ್ಲಾ ಬೆಳ್ಳಿ ಪಾತ್ರೆಗಳೂ ಹಿತ್ತಾಳೆ ಪಾತ್ರೆಗಳೂ ರೈತರ ಪಾಲಾದವು. ಇದ್ದ ಮಡಕೆಗಳೆಲ್ಲಾ ಅವರ ದೊಣ್ಣೆಗಳಿಗೆ ಆಹುತಿಯಾದುವು. ಒಬ್ಬನು ಕೊಡಲಿಯಿಂದ ಅಯ್ಯುವಿನ ಕಬ್ಬಿಣದ ಪೆಟ್ಟಿಗೆಗೆ ಒಂದು ಬಿಟ್ಟನು. ಆ ಏಟಿಗೆ ಅದು ಜಗ್ಗದುದರಿಂದ ಇನ್ನೂ ನಾಲ್ಕು-ಐದು ದರೋಡೆಕಾರರು ಕೊಡಲಿಗಳೊಂದಿಗೆ ಅದರ ಹತ್ತಿರಕ್ಕೆ ಬಂದರು. ಅಯ್ಯು ಪೆಟ್ಟಿಗೆಯ ಬೀಗದ ಕೈಯನ್ನು ಅವರ ಮುಂದೆ ಎಸೆದನು. ಅವರಿಗೆ ಬೀಗವನ್ನು ತೆಗೆಯಲು ಬಾರದುದರಿಂದ ತಾನೇ ಬೀಗವನ್ನು ತೆಗೆದುಕೊಟ್ಟನು. ಅದರಲ್ಲಿ ಕಾಗದಪತ್ರಗಳ ಗಂಟೂ ಕೆಲವು ಬೆಳ್ಳಿಯ ಪಾತ್ರೆಗಳೂ ಸ್ವಲ್ಪ ಹಣವೂ ಇದ್ದಿತು. ಕಳ್ಳರು ಎಲ್ಲವನ್ನೂ ತೆಗೆದುಕೊಂಡರು. ಅಯ್ಯುವಿನ ಹೆಂಡತಿಯು ಕೈಯಲ್ಲಿದ್ದ ಬಳೆಗಳನ್ನೂ ತೆಗೆದು ಕೆಳಕ್ಕೆ ಹಾಕಿದಳು. ಅದನ್ನು ತೆಗೆದುಕೊಳ್ಳಲು ಒಬ್ಬನು ಮುಂದಕ್ಕೆ ಬಂದನು. ಗುಳ್ಳನು ಹಾ ಎಂದು ಗದರಿಸಿದನು. ಬಳೆಗಳನ್ನು ಯಾರೂ ಮುಟ್ಟಲಿಲ್ಲ. ಗುಳ್ಳನು ಗದ್ದರಿಸಿದುದನ್ನು ಅಯ್ಯುವು ನೋಡಿ “ನೀನು ಇನ್ನೂ ನಮ್ಮವನೆ” ಎಂದುಕೊಂಡನು. ಸಾಯಂಕಾಲ ಉಪ್ಪಿನಕಾಯನ್ನು ಕೇಳಿದ್ದ ತಿಗಳನು ಒಳಕ್ಕೆ ನುಗ್ಗಿ ಉಪ್ಪಿನಕಾಯಿ ಮಡಕೆಯನ್ನೇ ಹೊತ್ತುಕೊಂಡು ಬಂದನು. ಅದರೊಳಕ್ಕೆ ಪ್ರತಿಯೊಬ್ಬ ರೈತನೂ ಕೈಹಾಕಿ ಉಪ್ಪಿನಕಾಯನ್ನು ಪಾಯಸದಂತೆ ಹೀರಿ ಸುರಿದರು. ಅಯ್ಯುವಿನ ಮನೆಯಲ್ಲಿ ಯಾವ ಸಾಮಾನೂ ಉಳಿಯದಂತೆ ರಾಗಿ ಭತ್ತ ಮೊದಲುಗೊಂಡು ರೈತರು ಎಲ್ಲವನ್ನೂ

ಊಟ ಮಾಡಿ ತಮ್ಮ ತಮ್ಮ ಮನೆಗಳಿಗೆ ಸಾಗಿಸಿಬಿಟ್ಟರು. ಅಯ್ಯು ಎಲ್ಲವನ್ನೂ ನೋಡುತ್ತಾ ಮಾತನಾಡದೆ ಕುಳಿತಿದ್ದನು. ಅವನು ಒಂದೇ ಒಂದು ಮಾತನ್ನಾಡಿದ್ದರೂ ಆ ರಾಕ್ಷಸರು ಅವನನ್ನು ಕತ್ತರಿಸಿ ಹಾಕುತ್ತಿದ್ದುದರಲ್ಲಿ ಸಂದೇಹವಿರಲಿಲ್ಲ.

ಆದರೆ ಗುಳ್ಳನೂ ಕೂಡ ನಿರೀಕ್ಷಿಸದಿದ್ದ ಒಂದು ಕೆಲಸ ನಡೆದುಹೋಯಿತು. ಕಳ್ಳರು ದನದ ಕೊಟ್ಟಿಗೆಯನ್ನು ಲೂಟಿ ಮಾಡುತ್ತಿರುವಾಗ ಲಾಂದ್ರವು ಕೆಳಕ್ಕೆ ಉರುಳಿ ಸೀಮೆ ಎಣ್ಣೆ ಚೆಲ್ಲಿ ಹುಲ್ಲಿಗೆ ಹತ್ತಿಕೊಂಡಿತು. ಒಂದೇ ನಿಮಿಷದಲ್ಲಿ ಅದು ಗೋದಲಿಕೆಯಿಂದ ಗೋದಲಿಕೆಗೆ ಹರಡಿ ಕೊಟ್ಟಿಗೆಯಲ್ಲಿ ಸಾವಿರಾರು ದೀವಟಿಗೆಗಳ ಪ್ರಕಾಶವಾಯಿತು. ಹೋಹೋ ಎನ್ನುವುದರೊಳಗಾಗಿ ಕೊಟ್ಟಿಗೆಯ ಬೆಂಕಿ ಸೂರಿಗೆ ತಗಲಿ ಹರಡಲು ಮೊದಲಾಯಿತು. ದನದ ಕೊಟ್ಟಿಗೆಯ ಮುಂಭಾಗವೇ ಮನೆಯಾಗಿದ್ದುದರಿಂದ ಹತ್ತು-ಹದಿನೈದು ನಿಮಿಷಗಳಲ್ಲಿ ಉರಿಯು ಮನೆಯ ಸೂರಿಗೆ ತಗಲಿ ಗಳುಗಳೆಲ್ಲಾ ಛಟಛಟನೆ ಬೇಯಲು ಪ್ರಾರಂಭವಾದುವು. ಬೆಂಕಿ ಆಕಸ್ಮಿಕವಾಗಿ ಉಂಟಾಯಿತೆಂಬುದು ಅಯ್ಯುವಿಗೂ ಗುಳ್ಳನಿಗೂ ತಿಳಿಯಲಿಲ್ಲ. ದರೋಡೆಕೋರರೇ ಇದನ್ನೂ ಮಾಡಿದ್ದಾರೆಂದೂ ಅವರು ತಿಳಿದರು. ಈ ಕಾರಣದಿಂದ ಮನೆಯು ಉರಿಯುತ್ತಿದ್ದರೂ ಹೊರಕ್ಕೆ ಹೊರಡಲು ಅಯ್ಯುವಿಗೆ ಧೈರ್ಯವಾಗಲಿಲ್ಲ. ತನ್ನ ಜತೆಯಲ್ಲಿ ಹೆಂಡತಿ ಮಕ್ಕಳೂ ಇರುವರಲ್ಲಾ ಎಂಬುದೇ ಅವನ ಪರಿತಾಪವಾಗಿತ್ತು. ನಾವು ಹೊರಕ್ಕೆ ಹೊರಟರೆ ಆ ಹೆಂಡಕುಡುಕರು ಎಲ್ಲಿ ತಡೆಯುವರೋ ನಮ್ಮನ್ನು ಇಲ್ಲೇ ಬೇಯಿಸಬೇಕೆಂಬುದೇ ಅವರ ಯೋಚನೆಯೋ ಎಂದು ಅಯ್ಯು ಹೆದರಿದನು. ಉರಿ ಜೋರಾದುದನ್ನು ಕಂಡ ಕೂಡಲೇ ರೈತರಿಗೆ ಗಾಬರಿಯಾಯಿತು. ಅವರು ಕಳ್ಳತನಕ್ಕಿಂತ ಹೆಚ್ಚಾಗಿ ಲೂಟಿಗೂ ಸೇಡಿಗೂ ಬಂದಿದ್ದರು. ಪತ್ರಗಳ ಗಂಟನ್ನು ಕದಿಯುವುದೇ ಅವರ ಮುಖ್ಯ ಉದ್ದೇಶವಾಗಿತ್ತು, ಮನೆ ಸುಡುವುದು ಎಂದಿಗೂ ಅವರ ಉದ್ದೇಶವಾಗಿರಲಿಲ್ಲ. ಆಕಸ್ಮಿಕವಾಗಿ ಬೆಂಕಿ ಹತ್ತಿದುದನ್ನು ಕಂಡು ರೈತರು ಒಬ್ಬರೊಂದಿಗೊಬ್ಬರು ಹೇಳದೆ ಕೇಳದೆ ಅಯ್ಯುವಿನ ಮನೆಯಿಂದ ಜಾರಿದರು. ಅನಂತರ ಅಯ್ಯುವು ಭಯದಿಂದ ಮಂಕಾಗಿದ್ದ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದು ಮನೆಯ ಹೊರಗಡೆ ಕೂರಿಸಿ ದನದ ಕೊಟ್ಟಿಗೆಗೆ ಹೋಗಿ ದನಗಳ ಹಗ್ಗವನ್ನು ಬಿಚ್ಚಿ ಓಡಿಸಿದನು. ಸಾಧಾರಣವಾದ ಕಾಲವಾಗಿ ಊರವರೆಲ್ಲಾ ಸೇರಿದ್ದರೆ ಬೆಂಕಿಯನ್ನು ಆರಿಸುವುದಕ್ಕೆ ಕಷ್ಟವಾಗುತ್ತಿರಲಿಲ್ಲ. ಆದರೆ ಆಗ ಅಯ್ಯು ಒಬ್ಬನೇ ಆದುದರಿಂದ ಅವನು ಏನನ್ನೂ ಮಾಡದೆ ಉರಿಯನ್ನು ನೋಡುತ್ತಾ ಸುಮ್ಮನೆ ಕುಳಿತಿದ್ದನು. ಬೆಳಗಿನ ಜಾವದ ಹೊತ್ತಿಗೆ ಸೂರು, ತೊಲೆ, ಕಂಬ ಎಲ್ಲಾ ಸುಟ್ಟು ಭಸ್ಮವಾಗಿ ಹೋಯಿತು. ಇಲಿಗಳೂ ಹೆಗ್ಗಣಗಳೂ ರಾಸಿರಾಸಿಯಾಗಿ ಬೆಂದುಹೋದುವು. ಕಣಜದಲ್ಲಿ ಉಳಿದಿದ್ದ

ಅಲ್ಪಸ್ವಲ್ಪ ಭತ್ತವು ಅರ್ಧಗಂಟೆಯ ಕಾಲ ಪಟಪಟನೆ ಸಿಡಿಯಿತು. ಆ ರಾತ್ರಿ ಮಾರಿ ಜಾತ್ರೆ ನಡೆಯಲೇ ಇಲ್ಲ. ಕೋಣಗಳೆಲ್ಲಾ ಉಳಿದುಕೊಂಡೇ ಬಿಟ್ಟುವು. ಅಯ್ಯುವಿನ ಮನೆಗೆ ಬೆಂಕಿ ಬಿದ್ದುದರಿಂದ ರೈತರೆಲ್ಲಾ ಹೆದರಿ ಮನೆಯಲ್ಲಿಯೇ ಅಡಗಿಕೊಂಡು ಯೋಚಿಸತೊಡಗಿದರು. ಮೊದಲು ಗೊತ್ತುಮಾಡಿಕೊಳ್ಳದೆ ಇದ್ದ ಆ ಒಂದು ಕೆಲಸ ನಡೆದುದರಿಂದ ಅವರ ಧೈರ್ಯವೆಲ್ಲಾ ಕರಗಿ ನೀರಾಗಿ ಹೋಗಿತು.

ರೈತರೆಲ್ಲಾ ಒಗ್ಗಟ್ಟಾಗಿ "ಗಡ್ಡ ಕಿತ್ತರೂ ಬಾಯಿ ಬಿಡೆ" ಎಂದಿದ್ದರೂ ಹೋಬಳಿಯ ಪೋಲಿಸ್ ಸ್ಟೇಷನ್ನಿಗೆ ಬೆಳಗ್ಗೆ ವರ್ತಮಾನ ತಿಳಿಯಿತು. ದಫೇದಾರರು ಪೋಲಿಸ್ ಸೂಪರಿಂಟೆಂಡೆಂಟರಿಗೆ ತಿಳಿಸಿದರು : ಜಾಲಹಳ್ಳಿಯಲ್ಲಿ ದೊಡ್ಡದೊಂಬಿಯೇ ನಡೆದಿದೆ ಎಂದು. ಪೋಲಿಸ್ ಇನಿಸ್ಪೆಕ್ಟರು ಅನೇಕ "ಕನಿಸ್ಟಬಿಲ್ಲೆ"ಗಳೊಂದಿಗೆ ಅಲ್ಲಿಗೆ ಬಂದರು. ಪೋಲಿಸಿನ ಪರಿವಾರ ದೇವತೆಗಳೆಲ್ಲಾ ತಮ್ಮ ಕೈಬೆಚ್ಚಗಾಗುವುದೆಂದು ಸಂಜಿದ್ದರು. "ದೊಂಬಿ; ಒಬ್ಬೊಬ್ಬನಿಗೆ ಎಂಟು ವರ್ಷ, ಹತ್ತು ವರ್ಷ ಸಜ ಬಿಗಿಸುತ್ತೇವೆ" ಎಂದು ಅರಿವೆಕಾಲುಗಳು ರೈತರೊಂದಿಗೆ ಪಟಾಪಟಿಯನ್ನು ಕೊಚ್ಚುತ್ತಿದ್ದರು. ಪೋಲಿಸಿನವರು ಗುಳ್ಳನನ್ನೂ ಗ್ರಾಮದ ಪಟೇಲನನ್ನೂ ಇತರ ಮೂರು-ನಾಲ್ಕು ಮಂದಿ ಅಳ್ಳೆದೆಯವರನ್ನೂ ಹಿಡಿದು ಹುಣಿಸೆ ಹಣ್ಣನ್ನು ಇಡಿಯುವಂತೆ ಚೆನ್ನಾಗಿ ಇಡಿದರು. ಗುಳ್ಳನು ಪೋಲಿಸಿನವರ ಒದೆತಕ್ಕೆ ಜಗ್ಗಲಿಲ್ಲ. ಆದರೆ ಪಟೇಲನೂ ಇತರ ಅಳ್ಳೆದೆಯ ತಿಗಳರೂ ಹೆದರಿ ಹಣ್ಣಾದರು. ಅವರಿಗೆ ಬಿದ್ದ ಏಟುಗಳು ರಾತ್ರಿ ಕತ್ತಿ ಕಠಾರಿಗಳೊಂದಿಗೆ ಹೊರಟಿದ್ದ ದಸ್ಯುಗಳ ಎದೆಯನ್ನು ನಡುಗಿಸಿತು. ಪೋಲಿಸು ಇನಿಸ್ಪೆಕ್ಟರು ಊರವರನ್ನೆಲ್ಲಾ ಸಾಲಾಗಿ ನಿಲ್ಲಿಸಿ ಅಯ್ಯುವಿಗೆ ಹೇಳಿಕಳುಹಿಸಿದರು. ಅಯ್ಯುವು ಬಂದ ಕೂಡಲೇ ಇನಿಸ್ಪೆಕ್ಟರು "ಈ ಠಕ್ಕರಲ್ಲಿ ನಿಮ್ಮ ಮನೆ ಸುಟ್ಟವರು ಯಾರು ಗುರುತಿಸಿ" ಎಂದರು. ಅಯ್ಯುವು ಎಂದಿನಿಂದಲೂ ರೈತರಾಗಿದ್ದ, ಮೊದಲ ರಾತ್ರಿ ಕತ್ತಿ ಕೊಡಲಿಗಳೊಡನೆ ತನ್ನ ಮನೆಗೆ ನುಗ್ಗಿದ್ದ ಹೆದರಿದ್ದ ತನ್ನ ನೂರು ರೈತರನ್ನು ನೋಡಿದನು. ಮೊದಲ ರಾತ್ರಿ ತನ್ನ ಮನೆಗೆ ನುಗ್ಗಿದ್ದಾಗ ಅವರೆಲ್ಲ ಪಿಂಡಾರಿಯವರಂತೆ ಕಂಡಿದ್ದರೂ ಉದ್ರೇಕವಿಳಿದ ಮೇಲೆ ಅತ್ಯಂತವಾಗಿ ಹೆದರಿದ್ದ ಅವರು ತನ್ನಂತೆಯೇ ಬಡಪ್ರಾಣಿಗಳಾಗಿ ತೋರಿದರು. ರೈತರು ಒಬ್ಬರ ಮುಖದಲ್ಲೂ ಉತ್ಸಾಹವಿರಲಿಲ್ಲ. "ಇದೊಂದು ಸಲ ತಪ್ಪಿಸಿಕೊಂಡರೆ ಸಾಕು. ಮುಂದೆ ಪ್ರಾಣಹೋದರೂ ಇಂತಹ ಭಂಡಬಾಳನ್ನು ಬಾಳಬಾರದು, ದೇವರೇ" ಎಂದು ಅವರ ದೈನ್ಯದ ದೃಷ್ಟಿ ಹೇಳುತ್ತಿದ್ದಿತು. ಅಯ್ಯುವು ಗುಳ್ಳನ ಮುಖವನ್ನು ನೋಡಿದನು. ಅದು ಮೊದಲಿನಂತೆ ಕಠೋರವೂ ನಿಷ್ಠುರವೂ ಆಗಿದ್ದಿತು. ಅಲ್ಲಿ ಪಶ್ಚಾತ್ತಾಪದ ಸೂಚನೆ ಏನೂ ತೋರಲಿಲ್ಲ. ಅಯ್ಯುವು ನಿಶ್ಚಯಕ್ಕೆ ಬರಲು ಅದೇ ಸಾಕಾಯಿತು. "ಈ ಬಾರಿ ಜೈಲು

ಮಣ್ಣು ಹೊರೋದೇ ನಮ್ಮ ಹಣೆಬರ್ಹ, ಇಷ್ಟಾಳಿಗೂ ಬೇಡಿ ಬಿಗಿಸೋದ್ನ ಅಯ್ಯು ಬಿಡ್ತಾನ್ಯೆ" ಎಂದುಕೊಂಡು ರೈತರು ಅಯ್ಯುವು ತಮ್ಮನ್ನು ಸರ್ಕಾರಕ್ಕೆ ದೂರು ವುದನ್ನು ಕೇಳಿ ಬಂದುದನ್ನು ಅನುಭವಿಸಲು ಸಿದ್ಧರಾದರು. ಅಯ್ಯುವಿನ ಮನಸ್ಸಿನಲ್ಲಿ ಯೋಚನೆ ಹೀಗೆ ನಡೆದಿತ್ತು. "ನನ್ನ ಮನೆಯೇನೋ ಸುಟ್ಟು ಬೂದಿಯಾಯಿತು. ಆದರೆ ಪ್ರಾಣ ಉಳಿದುಕೊಂಡಿತು. ಇಂತಹ ಮನೆ ನೂರಾರು ಕಟ್ಟಬಹುದು. ಆದರೆ ಇವರು ಜೈಲಿಗೆ ಹೋದರೆ ಆ ಮೇಲೆ ಅದನ್ನು ತಿದ್ದುವುದು ಸಾಧ್ಯವಿಲ್ಲ. ನನ್ನ ಪತ್ರ ಗಳನ್ನೆಲ್ಲಾ ಕದ್ದಿದ್ದಾರೆ, ಹೋಗಲಿ. ಇವರ ಹಣದಿಂದಲೇ ನಮ್ಮ ಅಪ್ಪ ಈ ಮನೆ ಕಟ್ಟಿದ್ದು. ಮುಂದೆ ನಾನು ಕಟ್ಟುವುದೂ ಇವರ ಹಣದಿಂದಲೇ. ಈಗ ಬ್ಯಾಂಕಿನಲ್ಲಿ ಇಟ್ಟಿರುವ ಹಣವೆಲ್ಲಾ ಇವರದೆ. ಸುತ್ತಲೂ ಸೇರಿರುವ ಸಾವಿರಾರು ರೂಪಾಯಿ ಕಂದಾಯದ ಜಮೀನುಗಳೆಲ್ಲಾ ಇವರದೆ. ಈಗ ಮಾತ್ರ ಇವರನ್ನು ನಾನು ಬಿಟ್ಟರೆ ಗುಳ್ಳನನ್ನೂ ಹಳ್ಳಿಯವರನ್ನೂ ಎಂದಿಗೂ ತಿದ್ದಲು ಸಾಧ್ಯವಿಲ್ಲ. ಈ ವೈರ ಇನ್ನು ಎಂದಿಗೂ ಹೋಗತಕ್ಕದ್ದಲ್ಲ. ಎಲ್ಲರ ಮೇಲೂ ಕೇಸುಮಾಡಿ ಏಳು-ಎಂಟು ವರ್ಷ ಸಜಾ ಜಗಿಸಿದರೆ ಊರಿನ ಪುಂಡು ಕಡಿಮೆಯಾಗುತ್ತೆ, ನಿಜ. ಆದರೆ ಅದರಿಂದ ನಮ್ಮಿಬ್ಬರ ದ್ವೇಷವೂ ಶಾಂತವಾಗುವುದಿಲ್ಲ. ಈಗ ನಾನು ಇವರನ್ನು ಬಿಟ್ಟರೆ ಮುಂದೆ ಇವರು ಒಳ್ಳೆಯವರಾಗುವುದು ಖಂಡಿತ. ಇವರ ಮನಸ್ಸನ್ನು ನಾನು ಈಗ ಪರಿವರ್ತನೆ ಮಾಡಿಕೊಂಡರೆ ಹೋದ ನಷ್ಟವೆಲ್ಲಾ ಬಂದಂತೆ. ಗುಳ್ಳ ರಾತ್ರಿ ಲೂಟಿ ಮಾಡುವಾಗ ನನ್ನ ಹೆಂಡತಿಯ ಒಡವೆಗಳನ್ನು ಮುಟ್ಟಲಿಲ್ಲ. ನಾನು ಅವನ ಹೆಂಡತಿಯನ್ನು ಉಳಿಸಿ ದುದು ಅವನ ಜ್ಞಾಪಕಕ್ಕೆ ಬಂದಿರಬಹುದು. ಅದರಿಂದಲೇ ಇವನ ಹೃದಯ ಪೂರ್ಣ ವಾಗಿ ಒಣಗಿಲ್ಲ. ಇವನನ್ನು ತಿದ್ದಬಹುದೆಂದುಕೊಂಡೆ. ಪ್ರೀತಿಯನ್ನು ತೋರಿಸಿದರೆ ದುಷ್ಟನಾದ ಮನುಷ್ಯನೂ ಸಾತ್ವಿಕನಾಗುತ್ತಾನೆ. ನಮ್ಮ ತಂದೆ ಅವತ್ತು ಎಸೆದಿದ್ದ ಕಲ್ಲು ಇವತ್ತು ಹಿಂದಿರುಗಿತು. ಇದನ್ನು ಹೂತುಬಿಡಬೇಕು. ಹಾಗಲ್ಲದೆ ನಾನು ಇದನ್ನು ಮತ್ತೆ ಎಸೆದರೆ ಇದರ ಎರಡರಷ್ಟು ಜೋರಾಗಿ ನನ್ನ ಮಕ್ಕಳಿಗೆ ತಿರಿಗಿ ಹೊಡೆಯುವುದು. ಊರನ್ನೆಲ್ಲಾ ನನ್ನವರನ್ನಾಗಿ ಮಾಡಲು ಇದೇ ಸಮಯ. ನಾವು ಮನುಷ್ಯನಿಗೆ ಒಳ್ಳೆಯದನ್ನು ಮಾಡಿದರೆ ಅವನಲ್ಲಿರುವ ಒಳ್ಳೆಯ ಸ್ವಭಾವವೇ ಅಭಿವೃದ್ಧಿಯಾಗುತ್ತದೆ."

ಅಯ್ಯುವು ಇನಿಸ್ಪೆಕ್ಟರಿಗೆ "ನನ್ನ ಮನೆಗೆ ಯಾರೂ ನುಗ್ಗಿರಲಿಲ್ಲ" ಎಂದನು. ಇನಿಸ್ಪೆಕ್ಟರು ಬೆಚ್ಚಿಬಿದ್ದರು. ತಿಗಳರೂ ಒಕ್ಕಲಿಗರೂ ತಮ್ಮ ಕಿವಿಯನ್ನೇ ತಾವು ನಂಬದೆ ಹೋದರು. ಇನಿಸ್ಪೆಕ್ಟರು "ಏನು?" ಎಂಬುದಾಗಿ ಗದ್ದರಿಸಿದರು. ಅಯ್ಯು ಮತ್ತೆ ಮೊದಲು ಹೇಳಿದ ಮಾತನ್ನೇ ಹೇಳಿದನು. ಇನಿಸ್ಪೆಕ್ಟರು ತಾವು ಸಿದ್ಧಪಡಿಸಿದ್ದ

ಎಲ್ಲಾ ಮೊಖದ್ದಮೆಗಳೂ, ಇಂತಹ ದೊಂಬಿಯನ್ನು ಮಟ್ಟಹಾಕಿದುದಕ್ಕೆ ಬರಬೇಕಾಗಿದ್ದ ಬಡ್ತಿ ಇತ್ಯಾದಿಗಳೂ ಈ ಮಂಕನ ಮಾತಿನಿಂದ ಗಾಳಿಗೇ ತೂರಿಹೋದವೆಂದು ತಿಳಿದುಕೊಂಡರು. ಇನಿಸ್ಪೆಕ್ಟರಿಗೆ ಕೋಪವೂ ಹತ್ತಿತು. ಅವರು “ಹಾಗಾದರೆ ನಿನ್ನ ಮನೆ ಸುಟ್ಟವರು ಯಾರು?” ಎಂದು ಗದ್ದರಿಸಿದರು. ಅಯ್ಯುವು “ದನದ ಕೊಟ್ಟಿಗೆಯಲ್ಲಿ ಆಳು ಲಾಂದ್ರವನ್ನು ಮಡಗಿದ್ದ. ಎತ್ತು ಅದನ್ನು ಉರುಳಿಸಿತು. ಬೆಂಕಿ ಹುಲ್ಲಿಗೆ ಹತ್ತಿಕೊಂಡು ಮನೆ ಸುಟ್ಟುಹೋಯಿತು” ಎಂದನು. ಅಯ್ಯುವಿನ ಮುಂದೆ ಇನಿಸ್ಪಕ್ಟರ ಆಟ ಸಾಗಲಿಲ್ಲ. ಅವರು ಅದೇ ಮಧ್ಯಾಹ್ನ ಅರಿವೆಕಾಲುಗಳನ್ನೆಲ್ಲಾ ಕರೆದುಕೊಂಡು ಅಯ್ಯುವಿನ ಸ್ವಭಾವಕ್ಕೆ ಆಶ್ಚರ್ಯಪಡುತ್ತಾ “ಈ ಸಲ ಬಚಾವಾದರೆ ಈ ಪಟಿಂಗರು ಅವನನ್ನು ಖೂನಿಮಾಡುವುದು ಖಂಡಿತ” ಎಂದುಕೊಂಡು ಹೊರಟುಹೋದರು. ಗುಳ್ಳ ಮನೆಗೆ ಹೋಗುತ್ತಿರುವಾಗ ಅಯ್ಯುವು ಅವನನ್ನು ನೋಡಿದನು. ಗುಳ್ಳನ ಮುಖದಲ್ಲಿ ಸ್ವಲ್ಪವೂ ದ್ವೇಷವಿರಲಿಲ್ಲ. ಆಶ್ಚರ್ಯವು ಮೂಡಿಮಾಯವಾಗಿ ಕೃತಜ್ಞತೆಯೂ ದೈನ್ಯವೂ ಅಲ್ಲಿ ತುಂಬಿದ್ದುವು. ಗುಳ್ಳನನ್ನು ಆ ರೀತಿ ಅಯ್ಯುವು ಎಂದೂ ಕಂಡಿರಲಿಲ್ಲ. ಗುಳ್ಳನ ಹೃದಯದಲ್ಲಿ ಯಾವುದೋ ಒಂದು ಸತ್ಪ್ರೇರಣೆಯು ವಿಕಾಸಹೊಂದಿದ್ದಂತೆ ತೋರುತ್ತಿದ್ದಿತು. ಅವನಲ್ಲಿದ್ದ ದ್ವೇಷವು ನೂರು ವರ್ಷ ಅವನಿಗೆ ಸಜಾ ಜಗಿದಿದ್ದರೂ ಹೋಗುತ್ತಿರಲಿಲ್ಲ. ಆದರೆ ಅಯ್ಯುವಿನ ಒಂದೇ ಒಂದು ಕೆಲಸದಿಂದ, “ಮನುಷ್ಯಸ್ವಭಾವ ಕೊನೆಯಲ್ಲಿ ಒಳ್ಳೆಯದೇ” ಎಂಬ ಅವನ ದೃಢವಾದ ನಂಬಿಕೆಯಿಂದ ಆ ದ್ವೇಷವು ಸೂರ್ಯನ ಎದುರಿನಲ್ಲಿ ಇಬ್ಬನಿಯಂತೆ ಕರಗಿಹೋಯಿತು. ಅಯ್ಯು ಆಗ “ಇನ್ನು ನೀನು ನಮ್ಮವನೆ” ಎಂದುಕೊಂಡನು. ಇನಿಸ್ಪೆಕ್ಟರ ವಿಚಾರಣೆ ನೋಡಲು ಊರಿನ ಎಲ್ಲಾ ಗಂಡು ಹೆಣ್ಣು ಮಕ್ಕಳೂ ಸೇರಿದ್ದರು. ತನ್ನ ಒಂದು ಮಾತಿನಿಂದ ಅವರಿಗೆ ಉಂಟಾದ ಸಂತೋಷವನ್ನು ಕಂಡು ಅಯ್ಯುವಿಗೂ ಆನಂದವಾಯಿತು. ಊರಿಗೆ ಊರೇ ಆನಂದದಲ್ಲಿ ತೇಲಾಡುತ್ತಿದ್ದಿತು. ಇಂತಹ ಸಲ್ಮೆಯನ್ನು ಅವರಿಗೆ ಉಂಟುಮಾಡಲು ತನಗೆ ಸಾಧ್ಯವಾಯಿತಲ್ಲಾ ಎಂಬುದಾಗಿ ಅಯ್ಯುವಿನ ಮನಸ್ಸಿಗೂ ಬಹಳ ತೃಪ್ತಿಯುಂಟಾಗಿದ್ದಿತು.

ಗುಳ್ಳನು ಮೊದಲುಗೊಂಡು ಊರಿನ ಯಾವ ರೈತನಿಗೂ ಅಯ್ಯುವಿನ ಎದುರಿಗೆ ಬರಲು ನಾಚಿಕೆಯಾಗಿದ್ದಿತು. “ಅಯ್ನೋರು ನಮ್ಮ ತಲೆಹೋಗುವಾಗ ತಮ್ಮ ತಲೆ ಕೊಟ್ಟುಬಿಟ್ರು” ಎಂಬುದೇ ಎಲ್ಲೆಲ್ಲೂ ಮಾತಾಗಿತ್ತು. ಆ ರಾತ್ರಿ ಬುಂಡೆಕ್ಯಾತನು ಜಾಲಹಳ್ಳಿಗೆ ಬಂದನು. ಅಯ್ಯುವಿನ ಮನೆ ಸುಟ್ಟು ನಿಂತುದನ್ನೂ ಅಯ್ಯುವು ಇನಿಸ್ಪೆಕ್ಟರಿಗೆ ಹೇಳಿದ್ದ ಮಾತನ್ನೂ ಕೇಳಿ ತನ್ನನ್ನೇ ತಾನು ತಿಂದುಕೊಳ್ಳುವಷ್ಟು ಕೋಪ ಅವನಿಗೆ ಉಂಟಾಯಿತು. “ಈ ಸಲ ಅವರು ನಿನ್ನ ಭಯದಿಂದ ನಿನ್ನ ಹೆಂಡ್ತಿ

ಮಕ್ಕಳನ್ನು ಖೂನಿಮಾಡಲಿಲ್ಲ. ನೀನು ಇಂತಹ ಅಳ್ಳೆದೆಯವನು ಅಂತ ತಿಳಿದರೆ ಯಾವುದು ಮಾಡಿದರೂ ದಕ್ಕುತ್ತೆ ಅಂದ್ಕೊಂಡು ಮುಂದಲ ಸಲ ಖೂನೀನೂ ಮಾಡ್ತಾರೆ. ಇವರನ್ನು ಭಯದಲ್ಲಿ ಇಡದೆ ಹೋದರೆ ಇವರು ನಿನ್ನನ್ನು ಸುಮ್ಮನೆ ಬಿಡ್ತಾರ್ಯೆ. ನಿನ್ನ ತಂದೆಯವರ ಕಾಲದಲ್ಲಿ ಒಬ್ಬ ರೈತನಾಗಲಿ ನಿಮಗೆ ಎದುರಾಗಿ ಮಾತನಾಡಿದ್ದುಂಟೇ? ಕೋರ್ಟಿನ ಭಯ ಅಂದರೆ ಅವರು ಹಾಗೆ ಇಟ್ಟಿದ್ದರು. ಇಂತಹ ಸಮಯದಲ್ಲಿ ಎಲ್ಲರಿಗೂ ಬರೆ ಎಳೆದಿದ್ದರೆ ಅವರು ಎಂದೆಂದಿಗೂ ನಿನ್ನ ತಂಟೆ ಬರುತ್ತಿರಲಿಲ್ಲ. ಈಗಲೂ ಮುಂದೆ ನಿನಗೆ ಇವರಿಂದ ಕೇಡು ತಪ್ಪಿದ್ದಲ್ಲ. ಈ ನಿನ್ನ ಸಪ್ಪೆತನದಿಂದ ನೀನು ನ್ಯಾಯದ ನಡೆಗೆ ಅಡ್ಡ ಬಂದೆ. ನೀನು ಹೆದರಿದೆ ಎಂದು ತಿಳಿದರೆ ಅಲ್ಲಿಗೆ ಮುಗಿಯಿತು ನಿನ್ನ ಪಾರುಪತ್ಯ. ನಿನ್ನನ್ನು ಬೇರುಸಹಿತ ಹೀರಿಬಿಡುತ್ತಾರೆ" ಎಂದು. ಅಯ್ಯುವು ಅವನ ಹತ್ತಿರ ಹೆಚ್ಚಾಗಿ ವಾದಮಾಡಲಿಲ್ಲ. "ನೀನು ಹೇಳುವಂತೆ ಇವರು ದುಷ್ಟರು. ಆ ದೌಷ್ಟ್ಯ ಇವರಿಗೆ ನಮ್ಮ ಘಾತಕತನದಿಂದಲೇ ಉಂಟಾಗಿದೆ. ಅವರ ಮನಸ್ಸಿನ ಒಳ್ಳೆಯ ಭಾವಗಳನ್ನು ವಿಕಾಸಗೊಳಿಸಲು ನನಗೆ ತೋರಿದ ದಾರಿಯನ್ನು ನಾನು ಅನುಸರಿಸಿದೆ. ಇದರ ಪರಿಣಾಮ ನನಗೆ ಕೆಡುಕೇ ಆಗುವುದಿದ್ದರೆ ನೀನು ಹೇಳಿದ ದಾರಿಯನ್ನು ಅನುಸರಿಸಿದರೆ ಅದರ ಪರಿಣಾಮ ಇನ್ನೂ ಹೆಚ್ಚು ಕೆಡುಕಾಗುತ್ತೆ. ನಮ್ಮ ಜನರಲ್ಲಿ ನಾವು ನಂಬಿಕೆಯನ್ನಿಟ್ಟರೆ ನಮಗೆಂದಿಗೂ ಕೇಡುಂಟಾಗುವುದಿಲ್ಲ" ಎಂದು ಹೇಳಿ ಸುಮ್ಮನಾದನು. ಬುಂಡೆಕ್ಯಾತನು ಅಯ್ಯುವಿಗೆ ಏನೇನೋ ಹೇಳಿ ನೋಡಿದನು. ರೈತರು ಕದ್ದಿರುವ ಪತ್ರಗಳೆಲ್ಲಾ ರಿಜಸ್ಟರ್ ಆಗಿವೆ. ಅವುಗಳ ನಕಲುಗಳನ್ನಾದರೂ ತೆಗೆದುಕೊಂಡು ದಾವಾ ಹಾಕು ಎಂಬುದಾಗಿ ಅವನು ಬಲಾತ್ಕರಿಸಿದನು. ಅಯ್ಯುವು "ಅವರ ದುಡ್ಡು ಅವರಿಗೇ ಸೇರಿತು. ಅವರಾಗಿಯೇ ಪತ್ರವನ್ನೋ ಹಣವನ್ನೋ ತಂದುಕೊಟ್ಟರೆ ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ಇಲ್ಲ" ಎಂದನು. ಕಳವಾದ ಬೆಳ್ಳಿ ಪಾತ್ರೆಗಳನ್ನಾದರೂ ತರಿಸೆಂದು ಬುಂಡೆಕ್ಯಾತನು ಹೇಳಿದುದಕ್ಕೆ ಅಯ್ಯುವು "ಅವರ ಮನೆಯಲ್ಲೂ ಕೆಲವು ಪಾತ್ರೆಗಳಿರಲಿ" ಎಂದುಬಿಟ್ಟನು. ಬುಂಡೆಕ್ಯಾತನು "ನಿನ್ನ ಮುಂದೆ ತಲೆ ಚಚ್ಚಿಕೊಂಡರೂ ಒಂದೇ" ಎಂದುಕೊಂಡು ಸುಮ್ಮನಾದನು.

ಚಾಲಹಳ್ಳಿಯಲ್ಲಿ ಅಯ್ಯುವಿನ ಮನೆಮುಂಗೆ ನದಿ ಹರಿಯುತ್ತಿದ್ದಿತೆಂದು ಮೊದಲೇ ಹೇಳಿದ್ದೇವೆ. ನದಿಯ ತೀರದಲ್ಲಿ ನದಿಯ ಪಾತ್ರಕ್ಕಿಂತಲೂ ಸ್ವಲ್ಪ ಹಳ್ಳದಲ್ಲಿ ವಿಸ್ತಾರವಾದ ಒಂದು ಬೈಲು ಇದ್ದಿತು. ಸಾವಿರಾರು ವರ್ಷಗಳ ಹಿಂದೆ ಯಾವಾಗಲೋ ಕಲ್ಪಾಂತರದಲ್ಲಿ ಪ್ರಾಯಶಃ ನದಿಯು ದಡವನ್ನು ಒಡೆದುಕೊಂಡು ಆ ಕಡೆ ಸ್ವಲ್ಪ ದೂರ ನುಗ್ಗಿ ಮತ್ತೆ ತನ್ನ ಮೊದಲಿನ ದಾರಿಯನ್ನು ಹಿಡಿದಂತೆ ತೋರುತ್ತಿದ್ದಿತು.

ಬೂತಯ್ಯನವರ ಕಾಲದಲ್ಲೂ ಮಳೆಗಾಲದಲ್ಲಿ ಅಲ್ಲಿ ಸಮುದ್ರದಂತೆ ನೀರುನುಗ್ಗಿ ಮೆಕ್ಕಲು ಮಣ್ಣನ್ನು ವಿಪರೀತವಾಗಿ ರಾಸಿಹಾಕಿ ಬೇಸಗೆಯಲ್ಲಿ ನೀರು ಇಂಗಿ ಹೋಗುತ್ತಿದ್ದಿತು. ಆ ಮೆಕ್ಕಲು ಗೊಬ್ಬರವನ್ನೂ ಒಂದೇ ಸಮನಾಗಿದ್ದ ಬಯಲನ್ನೂ ನೋಡಿ, ದುಡ್ಡುಮಾಡುವುದರಲ್ಲಿ ಪ್ರಚಂಡರಾದ ಬೂತಯ್ಯನವರಿಗೆ ಅದರಲ್ಲಿ ಪೂರಾ ಆಸೆಯುಂಟಾಯಿತು. ಆ ಬಯಲಿನಲ್ಲಿ ವರ್ಷದಲ್ಲಿ ನಾಲ್ಕು-ಐದು ತಿಂಗಳು ಮಳೆಗಾಲ ದಲ್ಲಿ ಒಂದಾಳುದ್ದ-ಒಂದೂವರೆಯಾಳುದ್ದ ನೀರು ನಿಂತಿರುತ್ತಿದ್ದಿತು. ಉಳಿದ ಕಾಲದಲ್ಲಿ ಅದು ಒಣಗಿದ ನದಿಯ ಪಾತ್ರದಂತೆ ತೋರುತ್ತಿದ್ದಿತು. ತಿಗಳರೂ ಒಕ್ಕಲಿಗರೂ ನದಿಯಿಂದ ಸ್ವಲ್ಪ ಮೇಲಕ್ಕೆ ಎತ್ತರವಾದ ಅರೆಗಳ ಮೇಲೆ ಮನೆಗಳನ್ನು ಕಟ್ಟಿ ಕೊಂಡಿದ್ದರು. ಅವರಾರಿಗೂ ಆ ನದಿಯ ಬಯಲು ಉಪಯೋಗಕ್ಕೆ ಬರಬಹುದೆಂದು ತೋರಲಿಲ್ಲ. ಅವರಿಗೆ ಅದೂ ನದಿಯ ಪಾತ್ರವಾಗಿಯೇ ತೋರಿತು. ಆದರೆ ಹಣ ಸಂಪಾದನೆಯಾಗಬಹುದೆಂದು ತೋರಿದಾಗ ಬೂತಯ್ಯನವರು ನೀರಿನ ಮೇಲೆ ನಡೆದು ನೆಳಲನ್ನು ಬೇಕಾದರೂ ಹಿಡಿಯುತ್ತಿದ್ದರು. ನದಿಯ ದಡವನ್ನು ಒಡೆದುಕೊಂಡು ಬೈಲಿನ ಕಡೆಗೆ ಹರಿದ ಸ್ಥಳ ದೊಡ್ಡ ಕಾಲುವೆಯಂತೆ ಕಿರಿದಾಗಿದ್ದಿತು. ಆ ಕಿರಿಬಾಯಲ್ಲಿ ಮಳೆಗಾಲದಲ್ಲಿ ನೀರುನುಗ್ಗಿ ವಿಸ್ತಾರವಾದ ಬಯಲನ್ನು ಕೆರೆಯಂತೆ ತುಂಬುತ್ತಿದ್ದಿತು. ಬೂತಯ್ಯನವರು ನದಿಯ ಆ ಬಾಯಿಗೆ ಕಟ್ಟೆಹಾಕಿ ಮಳೆಗಾಲದಲ್ಲೂ ನೀರಿನ ಪ್ರವಾಹವನ್ನು ತಡೆದು, ಯಾತದಿಂದ ತಮಗೆ ಬೇಕಾದಷ್ಟು ನೀರನ್ನು ಬಿಟ್ಟುಕೊಂಡು ಆ ಬಯಲನ್ನು ಸಾಗುವಳಿ ಮಾಡಬೇಕೆಂದು ನಿಶ್ಚಯಿಸಿದರು. ಮೊದಲು ಮೊದಲು ಬೂತಯ್ಯನವರ ಈ ಯೋಚನೆಯನ್ನು ಕೇಳಿದವರಾರೂ ಅವರು ನಿಜವಾಗಿಯೂ ನದಿಗೆ ಕಟ್ಟೆಹಾಕಬೇಕೆಂದು ಯೋಚಿಸುತ್ತಿರುವರೆಂದು ನಂಬಲಿಲ್ಲ. ರೈತರಂತೂ ಆ ರೀತಿ ನದಿಗೆ ಕಟ್ಟೆಯನ್ನು ಹಾಕಿ ಅದರ ದಾರಿಯನ್ನು ತಡೆದರೆ ಅದು ಒಂದಿಲ್ಲ ಒಂದು ದಿನ ಸೇಡನ್ನು ತೀರಿಸಿಕೊಂಡೇ ಬಿಡುವುದೆಂದು ಹೆದರುತ್ತಿದ್ದರು. ಬೂತಯ್ಯನವರು ಪ್ರಕೃತಿಯ ಸೇಡಿಗೂ ಮನುಷ್ಯನ ಸೇಡಿಗೂ ಹೆದರುವವರಾಗಿರಲಿಲ್ಲ. ಅವರು ಇಂಜ ನಿಯರುಗಳನ್ನೂ ಓವರ್‌ಸಿಯರುಗಳನ್ನೂ ಕೇಳಿ ಅನೇಕ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನದಿಯು ಕವಲೊಡೆಯುತ್ತಿದ್ದ ಕಾಲುವೆ ಬಾಯಿಗೆ ಬಂದಾದ ಕಲ್ಲಿನ ಕಟ್ಟೆಯನ್ನು ಹಾಕಿದರು. ಅದರಲ್ಲಿ ಎಂಟು-ಹತ್ತು ಯಾತಗಳನ್ನು ಇರಿಸಿದರು. ಮೊದಲು ನದಿಯ ನೀರು ನಿಲ್ಲುತ್ತಿದ್ದ ಬೈಲನ್ನೆಲ್ಲಾ ಗದ್ದೆಗಳನ್ನು ಮಾಡಿದರು. ಜಾಲಹಳ್ಳಿಯ ಸುತ್ತ ನೂರು ಮೈಲಿ ಎಲ್ಲಿ ನೋಡಿದರೂ ಅಂತಹ "ತಾಕು" ದೊರೆಯುತ್ತಿರಲಿಲ್ಲ. ಜಮೀನು ಹಳ್ಳತಿಟ್ಟುಗಳಿಲ್ಲದೆ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಒಂದೇ ಸಮನಾಗಿ ಗಾಜಿನಂತೆ ತೋರುತ್ತಿದ್ದಿತು. ನದಿಯ ಆಸರೆಯಲ್ಲಿದ್ದುದರಿಂದ ಹನ್ನೆರಡು ತಿಂಗಳೂ

ನೀರು ಬೇಕಾದಂತೆ ದೊರೆಯುತ್ತಿದ್ದಿತು. ಆ ವಿಶಾಲವಾದ ಬಯಲಿಗೆ "ಜಾಲಹಳ್ಳಿಯ ಕಾಡು" ಎಂದೇ ಹೆಸರಾಯಿತು. ಅಲ್ಲಿ ವರ್ಷಕ್ಕೆ ಎರಡು ಬೆಳೆ ಭತ್ತ ಸರಾಗವಾಗಿ ಬರುತ್ತಿದ್ದಿತು. ಕಬ್ಬು, ಬಾಳೆ ಅಲ್ಲಿ ಬೆಳೆಯುತ್ತಿದ್ದಂತೆ ಆ "ಪ್ರಾಂತ"ದಲ್ಲೇ ಬೆಳೆಯುತ್ತಿರಲಿಲ್ಲ. ಮಣ್ಣು ಹಿಡಿದರೆ ಹೊನ್ನು ಆಗುತ್ತಿದ್ದ ಆ ಜಮೀನು ಸಾಗುವಳಿಗೆ ಸಿಕ್ಕಿದರೆ ಸಾಕೆಂದು ರೈತರು ಹಂಬಲಿಸುತ್ತಿದ್ದರು. ಅನೇಕ ವರ್ಷಗಳಿಂದ ನದಿಯ ಮೆಕ್ಕಲು ಬಂದು ಕೂರುತ್ತಿದ್ದುದರಿಂದ ಆ ಜಮೀನಿಗೆ ಗೊಬ್ಬರವೇ ಬೇಕಿರಲಿಲ್ಲ. ವಿಭೂತಿ ಹಾಕಿಕೊಂಡು ಗದ್ದೆಯ ಮೇಲೆ ತಿರುಗದೆ ಇದ್ದರೂ ಹದಿನಾರಾಣೆಯ ಪೈರು ಬರುತ್ತಿದ್ದಿತು. ಮೊದಲು ಬೂತಯ್ಯನವರ ಸಾಹಸವನ್ನು ಹುಚ್ಚು ಸಾಹಸವೆಂದು ಹೇಳಿದ ಜಾಲಹಳ್ಳಿಯ ಎಲ್ಲಾ ರೈತರೂ ಆ ಜಮೀನನ್ನು ಸಾಗುವಳಿಮಾಡಿ ಅದರಲ್ಲಿ ಕಬ್ಬನ್ನೂ ಭತ್ತವನ್ನೂ ಬೆಳೆಯುತ್ತಿದ್ದರು. ಇದರಿಂದ ಬೂತಯ್ಯನವರ ಕೀರ್ತಿಯು ಹೆಚ್ಚಾಯಿತು. ಅವರ ಉತ್ಪತ್ತಿ ಒಂದಕ್ಕೆ ನಾಲ್ಕು ಆಯಿತು. ಕಟ್ಟೆಯನ್ನು ನೋಡಿದವರೆಲ್ಲಾ ಅವರ ಸಾಹಸವನ್ನು ಕೊಂಡಾಡುತ್ತಿದ್ದರು. ತರಿ ಜಮೀನಿನ ಕಂದಾಯವನ್ನು ಆ ಜಮೀನುಗಳಿಗೆ ಸರ್ಕಾರದವರು ತಗುಲಿಸಿದುದರಿಂದ ಸರ್ಕಾರದ ಉತ್ಪತ್ತಿಯೂ ಹೆಚ್ಚಾಯಿತು. ಜಮೀನಿನ ಮಧ್ಯದಲ್ಲಿದ್ದರೆ ಒಳ್ಳೆಯದೆಂದುಕೊಂಡು ಬೂತಯ್ಯನವರು ಊರೊಳಗಿದ್ದ ತಮ್ಮ ಮನೆಯನ್ನು ಬಿಟ್ಟು ಜಾಲಹಳ್ಳಿ ಕಾಡಿನಲ್ಲೇ ಒಂದು ಮನೆಯನ್ನು ಕಟ್ಟಿಕೊಂಡು ಇರತೊಡಗಿದರು. ಅಷ್ಟೇನೂ ಧನಿಕರಲ್ಲದ ಬೂತಯ್ಯನವರ ಪೂರ್ವಿಕರ ಹಳ್ಳಿಯ ಮನೆಗಿಂತ ಆ ಹೊಸ ಮನೆಯೇ ತುಂಬಾ ಚೆನ್ನಾಗಿದ್ದಿತು. ಬೂತಯ್ಯನವರು ಸಾಯುವವರೆಗೆ ಆ ಮನೆಯಲ್ಲಿಯೇ ಇದ್ದರು. ಆಗ ಊರೊಳಗೆ ಇದ್ದ ಮನೆಯು ದನದ ಕೊಟ್ಟಿಗೆಯಾಗಿದ್ದಿತು. ಬೂತಯ್ಯನವರು ಸತ್ತನಂತರ ಅಯ್ಯುವು ಹಳ್ಳಿಯೊಳಗೆ ರೈತರ ಮಧ್ಯದಲ್ಲೇ ಇರುವುದು ಒಳ್ಳೆಯದೆಂದುಕೊಂಡು ಗದ್ದೆಬಯಲಿನ ಮನೆಯಿಂದ ಊರೊಳಗಿನ ಮನೆಗೆ ಬಂದಿದ್ದನು. ರೈತರಲ್ಲಿ ಕೆಲವರೂ ಅಲ್ಲೇ ಗುಡಿಸಲುಗಳನ್ನು ಹಾಕಿಕೊಂಡಿದ್ದವರು ಅಯ್ಯುವಿನ ಜತೆಯಲ್ಲಿ ಊರೊಳಕ್ಕೆ ಬಂದರು. ತನ್ನ ಮನೆಯು ರೈತರ ಕೋಪಕ್ಕೆ ಆಹುತಿಯಾದ ಮಾರನೆಯ ದಿನವೇ ಅಯ್ಯುವು ಮತ್ತೆ ಗದ್ದೆಬಯಲಿನ ಹಿಂದಲ ಮನೆಗೆ ಹೋದನು. ಊರೊಳಗೆ ತನ್ನ ಹಳೆಯ ಮನೆ "ರಿಪೇರಿ"ಯಾದನಂತರ ಮತ್ತೆ ಅಲ್ಲಿಗೇ ಬರಬೇಕೆಂಬುದು ಅವನ ಉದ್ದೇಶವಾಗಿತ್ತು.

ಬೂತಯ್ಯನವರು ಜಾಲಹಳ್ಳಿ ಕಾಡನ್ನು ಸೃಷ್ಟಿಸಿ ಕಾವೇರಿಗೆ ಕಟ್ಟೆಯನ್ನು ಹಾಕಿದುದು ಸರಿಯಷ್ಟೆ. ಮಳೆಗಾಲದಲ್ಲಿ ನದಿಯ ಪ್ರವಾಹವು ಭೋರ್ಗರೆಯುತ್ತಾ ಕಟ್ಟೆಗೆ ರಾಚುತ್ತಿದ್ದಿತು. ಮಳೆಗಾಲ ನಾಲ್ಕು ತಿಂಗಳೂ ಒಂದು ಗಳಿಗೆಯೂ ಬಿಡುವಿಲ್ಲದೆ ಅಲೆಗಳೂ ಸುಳಿಗಳೂ ಕಲ್ಲಿನ ಕಟ್ಟೆಯನ್ನು ಬಡಿಯುತ್ತಿದ್ದುವು.

ಬಿರುಗಾಳಿಯು ಯಾವಾಗಲೂ ಕಿರೋ ಎಂಬುದಾಗಿ ಕೂಗುತ್ತಿದ್ದಿತು. ರಾತ್ರಿಯ ಕಾಲದಲ್ಲಿ ಸುತ್ತ ಅನೇಕ ಮೈಲಿಗಳ ವರೆಗೆ ನದಿಯು ಕಟ್ಟೆಯನ್ನು ಬಡಿಯುವ ಸದ್ದು ಕೇಳಿಸುತ್ತಿದ್ದಿತು. ಬೂತಯ್ಯನವರು ಕಲ್ಪಾಂತದವರೆಗೆ ಕಟ್ಟೆಗೆ ಭಯವಿಲ್ಲವೆಂದು ಹೇಳುತ್ತಿದ್ದರೂ, ನದಿಯ ಹೊಡೆತವನ್ನು ಜ್ಞಾಪಿಸಿಕೊಂಡ ಕೂಡಲೆ ಮಳೆಗಾಲ ಪೂರ್ತಿಯಾಗುವ ವರೆಗೆ ಯಾರಿಗಾದರೂ ಆ ಬಯಲಿನಲ್ಲಿರಲು ಎದೆಯು ನಡುಗುತ್ತಿದ್ದಿತು. ಕಟ್ಟೆ ಏನಾದರೂ ಒಡೆದಿದ್ದರೆ ಹತ್ತೇ ನಿಮಿಷಗಳೊಳಗೆ ನದಿಯ ಪ್ರವಾಹವೆಲ್ಲಾ ಪೂರ್ಣವಾಗಿ ಆ ಬಯಲಿಗೆ ನುಗ್ಗಿ ಅದನ್ನು ಅನೇಕ ತಿಂಗಳುಗಳ ವರೆಗೆ ಒಂದೂವರೆ ಆಳುದ್ದ ನೀರಿನಲ್ಲಿ ಮುಳುಗಿಸುತ್ತಿದ್ದಿತು. ಬೂತಯ್ಯನವರ ಹೆಂಡತಿ ಬದುಕಿದ್ದಾಗ ಅವರಿಗೆ ಆ ಕಟ್ಟೆಯ ಭಯ ಬಹಳವಾಗಿತ್ತು. ನದಿಯ ಬಾಯಿನ ತುತ್ತನ್ನು ಕಸು ಕೊಂಡುದರಿಂದ ಅದು ಒಂದಿಲ್ಲೊಂದು ರೀತಿಯಿಂದ ತಮ್ಮನ್ನು ನುಂಗುವುದೆಂದು ಅವರು ಹೇಳುತ್ತಿದ್ದರು. ಕಗ್ಗತ್ತಲೆಯ ರಾತ್ರಿಯಲ್ಲಿ ಸುತ್ತಲೂ ಅನೇಕ ಮೈಲಿಗಳ ವರೆಗೆ ನಿಶ್ಶಬ್ದವಾಗಿರುವಾಗ ಬಿರುಗಾಳಿಯೂ ಸುಂಟರಗಾಳಿಯೂ ತಾವೇತಾವಾಗಿ ಲೋಕವನ್ನೇ ಒಂದು ಕಡೆಯಿಂದ ಚಾಪೆಯನ್ನು ಸುತ್ತಿದಂತೆ ಸುತ್ತಿಕೊಂಡು ಹೋಗುತ್ತಿರುವಾಗ ಸ್ವಲ್ಪವೂ ಬಿಡುವಿಲ್ಲದೆ ನಾಲ್ಕು-ಐದು ತಿಂಗಲು ಹಗಲುರಾತ್ರಿ ನದಿಯ ಪ್ರವಾಹವು ಕಟ್ಟೆಯನ್ನು ಒತ್ತಿ ಒಡಿಯುತ್ತಿರುವುದನ್ನು ಕೇಳಿ ಅವರ ಎದೆ ನಡುಗುತ್ತಿದ್ದಿತು. ಆದರೆ ಬೂತಯ್ಯನವರು ಭಯವನ್ನೇ ಕಾಣದವರಾದುದರಿಂದ ಅವರು ಈ ಕಟ್ಟೆಗೆ ಎಂದಿಗೂ ಚ್ಯುತಿಯಿಲ್ಲ ಎಂಬುದಾಗಿ ಹೇಳಿದ್ದಾಗ ರೈತರಿಗೆ ಕಟ್ಟೆಯಿಂದ ಅಪಾಯವಿಲ್ಲವೆಂದು ನಂಬಿಕೆಯಾಗಿದ್ದಂತೆ ಬೂತಯ್ಯನವರ ಹೆಂಡತಿಗೂ ನಂಬಿಕೆಯಾಗಿದ್ದಿತು. ಆದರೂ ಮಳೆಗಾಲದ ರಾತ್ರಿಗಳಲ್ಲಿ ಭಯ ಅವರನ್ನು ಏನು ಮಾಡಿದರೂ ಬಿಟ್ಟಿರಲಿಲ್ಲ. ಆ ಮನೆಯ ಭಯ ಅಲ್ಲಿ ವಾಸಮಾಡುವವರಿಗೆ ಗೊತ್ತಾಗುತ್ತಿದ್ದಂತೆ ಇತರರಿಗೆ ಗೊತ್ತಾಗುತ್ತಿರಲಿಲ್ಲ. ಅಯ್ಯುವಿನ ಮನೆ ಸುಟ್ಟಾಗ ಮಳೆಗಾಲವು ಪ್ರಾರಂಭವಾಗಿದ್ದರೂ ಅವನಿಗೆ ಕಟ್ಟೆಯ ಭಯ ಸ್ವಲ್ಪವೂ ಇರಲಿಲ್ಲ. ರೈತರಿಗೂ ಮೊದಲು ಒಂದೆರಡು ವರ್ಷ ಇದ್ದ ಭಯ ಕಟ್ಟೆ ೩೫ ವರ್ಷಗಳು ಶಾಶ್ವತವಾಗಿ ನಿಂತ ಮೇಲೆ ಇರಲಿಲ್ಲ.

ಅದು ೧೯೩೬ನೆಯ ಇಸವಿಯ ಮಳೆಗಾಲ. ಅಯ್ಯುವು ಮೈಸೂರಲ್ಲಿ ಖಾಯಿಲೆ ಬಿದ್ದಿದ್ದ ಚಿಕ್ಕಮ್ಮನನ್ನು ನೋಡಿಕೊಂಡು ಬರಲು ಅಲ್ಲಿಗೆ ಹೋದನು. ಮನೆಯಲ್ಲಿ ಅಯ್ಯುವಿನ ಹೆಂಡತಿಯೂ ಎರಡು ಮಕ್ಕಳೂ ಬುಂಡೆಕ್ಯಾತನೂ ಮಾತ್ರ ಇದ್ದರು. ಅಯ್ಯು ಮೈಸೂರಿನಿಂದ ಎರಡೇ ದಿನಗಳಲ್ಲಿ ಹಿಂದಿರುಗಬೇಕೆಂದು ಹೋಗಿದ್ದನು. ಚಿಕ್ಕಮ್ಮನ ಕಾಯಿಲೆ ಹೆಚ್ಚಾದುದರಿಂದ ಕೆಲವು ದಿನ ಅಲ್ಲೇ ಇರಬೇಕಾಯಿತು.

ಬುಂಡೆಕ್ಯಾತನು ಊರಲ್ಲಿ ಇರುವನೆಂಬ ಧೈರ್ಯದಿಂದ ಅವನು ನಿರಾಲೋಚನೆಯಿಂದ ಇದ್ದನು. ೧೯೨೪ನೆಯ ಇಸವಿಯ ಮಳೆಗಾಲವನ್ನೂ ಅಂತಹ ಪ್ರವಾಹವನ್ನೂ ಮತ್ತೆ ನಾವು ನಮ್ಮ ಜೀವಮಾನದಲ್ಲಿ ಕಾಣುವುದಿಲ್ಲವೆಂದು ತೋರುತ್ತದೆ. ಆಗ ಬೆಟ್ಟ ಗುಡ್ಡಗಳೆಲ್ಲಾ ಕೆರೆಗಳಾದುವು. ಮಳೆ ಕುಂಭದ್ರೋಣವಾಗಿ ಸುರಿಯಿತು. ಆಕಾಶದ ಬಾಗಿಲು ತೆರೆದುಕೊಂಡು ಮುಚ್ಚುವುದನ್ನು ಮರೆತಂತೆ ತೋರಿತು. ಕೆರೆಗಳೆಲ್ಲಾ ತುಂಬಿ ಕೋಡಿ ಹರಿದುವು. ಅನೇಕ ಕೆರೆಗಳು ಒಡೆದೇ ಹೋದುವು. ನದಿಯು ಮೇರೆ ತಪ್ಪಿ ದಡವನ್ನು ಮೀರಿ ಸಮುದ್ರದಂತೆ ಹರಿಯಿತು. ಕಾವೇರೀ ನದಿಯ ಆ ಆರ್ಭಟಕ್ಕೆ ಜನರು ನಡುಗಿದರು. ಅನೇಕ ಕಡೆ ಗದ್ದೆ ಹೊಲಗಳ ಮೇಲೆ ನುಗ್ಗಿ ಅಲ್ಲಿ ಹತ್ತಾಳು ಗಾತ್ರದ ಮರಳ ರಾಸಿಯನ್ನೇ ಬಿಟ್ಟಿತು. ಕೆಲವೆಡೆ ಹತ್ತಾಳು ಆಳದ ಕೆರೆಗಳನ್ನೇ ಕೊರೆಯಿತು. ಇದ್ದ ಪಾತ್ರವನ್ನು ಮುಚ್ಚಿ ಹೊಸ ಪಾತ್ರವನ್ನೇ ಮಾಡಿಕೊಂಡು ಉರುಳಿತು. ಸಹಸ್ರಾರು ಹಳ್ಳಿಗಳು ನೆಲಸಮವಾದುವು. ಕಾಡಿನ ಮರಗಳೆಲ್ಲಾ ಬೇರುಸಹಿತ ತೇಲಿಹೋದುವು. ಲಕ್ಷಾಂತರ ದನಗಳೂ ಆಡು ಕುರಿಗಳೂ ನೀರಿನ ಗೋರಿಯನ್ನು ಕಂಡುವು. ರಸ್ತೆಗಳಲ್ಲೆಲ್ಲಾ ಕತ್ತುದ್ದ ನೀರು ಹರಿಯುತ್ತಿದ್ದಿತು. ಅನೇಕ ಕಡೆ ಸೇತುವೆಗಳು ಒಡೆದು ಪುಡಿಯಾದುವು. ಟೆಲಿಗ್ರಾಫ್ ಕಂಬಗಳೆಲ್ಲಾ ನೀರಲ್ಲಿ ಈಜುತ್ತಿದ್ದುವು. ರೈಲು ಕಂಬಿಗಳೂ ಸ್ಥಳವನ್ನು ಬಿಟ್ಟು ಕದಲಿದುವು. ನದಿಯ ಆಚೆ ಈಚೆ ದಡಗಳಲ್ಲಿ ಅನೇಕ ಮೈಲಿಗಳ ವರೆಗೆ ನೀರಿನ ಹೊರತು ಮತ್ತೇನೂ ಕಾಣುತ್ತಿರಲಿಲ್ಲ. ಪ್ರವಾಹ ಬಂದ ಕಡೆ ಮಳೆ ಇಲ್ಲದಿದ್ದರೂ ಮತ್ತೆಲ್ಲೋ ಮೇಲೆ ಮಳೆಯಾಗಿ ಅನಿರೀಕ್ಷಿತವಾದ ಎಡೆಗಳಲ್ಲೆಲ್ಲಾ ಜಲಸಮಾಧಿಯಾಯಿತು. ಇಷ್ಟೆಲ್ಲಾ ಒಂದು ರಾತ್ರಿಯೇ ನಡೆದುಹೋಯಿತು.

ಬೂತಯ್ಯನವರು ಬದುಕಿದ್ದಾಗ, ಅವರ ಅನ್ಯಾಯಗಳು ಅತಿಯಾದಾಗ ರೈತರು "ಹೊಳೆಗೂ ಇವರ ಮೇಲೆ ಸಿಟ್ಟು ಬರವೊಲ್ಲದಲ್ಲ" ಎಂದು ಕೊರಗುತ್ತಿದ್ದರು. ಆದರೆ ಆ ಹೊಳೆಯ ಸಿಟ್ಟು ಈ ರೂಪದಲ್ಲಿ ಬರಬಹುದೆಂದು ಅವರು ನಂಬಲಿಲ್ಲ. ಬೂತಯ್ಯನವರು ಜನರನ್ನೂ ದೇವರನ್ನೂ ಮಂಕಿನಲ್ಲಿ ಕೆಡವಿದಂತೆ ಹೊಳೆಗೂ ಮಾಟ ಮಾಡಿರುವರೆಂದು ರೈತರು ನಂಬಿದ್ದರು. ಆದರೆ ಸಮುದ್ರವೇ ಹೊಳೆಯಾಗಿ ಜಗತ್ತನ್ನೇ ಮುಕ್ಕಳಿಸಲು ಬರುವಾಗ ಕಟ್ಟೆಗಿಟ್ಟೆಗಳು ಗುತ್ತಿಗಿಂತಲೂ ಕಡೆಯೆಂಬುದು ಯಾರಿಗೂ ಹೊಳೆದಿರಲಿಲ್ಲ. ಪ್ರಳಯವಾದ ಆ ರಾತ್ರಿ ಸುಮಾರು ಒಂದು ಗಂಟೆ ಹೊತ್ತಿನಲ್ಲಿ ಬೂತಯ್ಯನವರ ಕಟ್ಟೆ ಕಿತ್ತುಹೋಯಿತು. ಬುಂಡೆಕ್ಯಾತನು ಇದೇನು ಸದ್ದೆಂದು ಬಾಗಿಲಿಗೆ ಬರುವ ವೇಳೆಗೆ ಸಮುದ್ರ ಅವನ ಮನೆಯ ಮೇಲೆ ಬರುತ್ತಿದ್ದಿತು. ಒಂದೇ ಒಂದು ಗಳಿಗೆ ಬುಂಡೆಕ್ಯಾತನು ಏಳುವುದು ಸಾವಕಾಶವಾಗಿದ್ದರೂ ನೀರು

ಮನೆಯೊಳಗೆ ಪೂರ್ತ ನುಗ್ಗುತ್ತಿದ್ದಿತು. ಕಟ್ಟೆ ಒಡೆದಿದೆ ಎಂಬುದು ಬುಂಡೆಕ್ಯಾತನಿಗೆ ಹೊಳೆದ ಕೂಡಲೇ ಅವನ ಎದೆಯೂ ಒಡೆಂಪಿತು. ಒಂದೇ ಗಳಿಗೆಯಲ್ಲಿ ಅಯ್ಯುವಿನ ಹೆಂಡತಿಯನ್ನೂ ಇಬ್ಬರು ಮಕ್ಕಳನ್ನೂ ಎಬ್ಬಿಸಿಕೊಂಡು ಮನೆಯಲ್ಲಿ ಅತ್ಯಂತ ಎತ್ತರವಾದ ಬಿಸಿಲಿನ ಮಚ್ಚಿಗೆ ಹೋದನು. ಜಾಲಹಳ್ಳಿ ಕಾಡು ಕಣ್ಣುಮುಚ್ಚಿ ತೆಗೆಯುವುದರೊಳಗೆ ನೀರಿನಿಂದ ತುಂಬಿಹೋಯಿತು. ನದಿಯ ನೀರೆಲ್ಲವೂ ಆ ಕಡೆ ನುಗ್ಗಿದುದರಿಂದ ಎರಡು ಮೈಲಿ ದೂರ ನೀರು ಹೊರತು ಮತ್ತೇನೂ ಕಾಣುತ್ತಿರಲಿಲ್ಲ. ಅಯ್ಯುವಿನ ಮನೆ ಪೂರ್ತ ಮುಳುಗಿಹೋಗಿದ್ದಿತು. ಮಾಳಿಗೆ ಮಾತ್ರ ಮುಳುಗಿರಲಿಲ್ಲ. ಆದರೆ ನೀರು ನುಗ್ಗುತ್ತಿದ್ದುದರಿಂದ ಮಾಳಿಗೆಯೂ ಮುಳುಗಬಹುದೆಂದು ಬುಂಡೆಕ್ಯಾತನು ಹೆದರಿದನು. ಅಯ್ಯುವಿನ ಹೆಂಡತಿಗೆ ಭಯದಿಂದ ಹುಚ್ಚು ಹತ್ತಿದಂತಾಗಿದ್ದಿತು. ಮಕ್ಕಳು ಚಳಿಗೂ ಗಾಳಿಗೂ ಕಿರೋ ಎಂದು ಕಿರಿಚುತ್ತಿದ್ದುವು. ಬುಂಡೆಕ್ಯಾತನಿಗೆ ಕೈಕಾಲು ಬಲವೇ ಹೋಯಿತು. ಎಲ್ಲಿ ನೋಡಿದರೂ ನೀರೇ. ಅವನಿಗೆ ನೀರಿನ ಹೊರತು ಮತ್ತೇನೂ ಎಲ್ಲೂ ಕಾಣಲಿಲ್ಲ. ಬೆಳಗಿನವರೆಗೆ ಆ ಮನೆ ನಿಲ್ಲುವಂತೆ ತೋರಲಿಲ್ಲ. ಗೋಡೆಗಳೆಲ್ಲಾ ನೀರಿನಲ್ಲಿ ಮುಳುಗಿದ್ದುದರಿಂದ ಒಂದೆರಡು ಗಂಟೆಗಳೊಳಗೆ ಅವು ಕುಸಿದು ಬೀಳುವುದರಲ್ಲಿ ಸಂದೇಹವಿರಲಿಲ್ಲ. ಒಂದು ವೇಳೆ ಬೆಳಗಿನ ವರೆಗೂ ಮನೆ ನಿಂತಿದ್ದರೂ ಬೆಳಗಾದ ಮೇಲೂ ಎರಡು ಮೈಲಿ ನೀರನ್ನು ದಾಟಿಕೊಂಡು ಇವರನ್ನೂ ಸಂರಕ್ಷಿಸಲು ಯಾರೂ ಬರುವವರಾಗಿರಲಿಲ್ಲ. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಸಮುದ್ರವೇ ಕಾಣುತ್ತಿದ್ದುದರಿಂದ ನೀರಿಗೆ ಇಳಿಯಲು ಎಲ್ಲರೂ ಹೆದರುವರೆಂಬುದು ಬುಂಡೆಕ್ಯಾತನಿಗೆ ಗೊತ್ತಾಗಿದ್ದಿತು. ಮಕ್ಕಳನ್ನು ತಬ್ಬಿಕೊಂಡು ಬಿದ್ದು ಬಿದ್ದು ಅಳುತ್ತಿದ್ದ ತಂಗಿಗೆ ಅವನು “ ಬೆಳಗಿನವರೆಗೆ ನಾವು ಉಳಿಯುವಂತಿಲ್ಲ. ಒಂದೆರಡು ಗಂಟೆಯಲ್ಲಿ ಜಾಲಹಳ್ಳಿಯ ರೈತರು ಯಾರಾದರೂ ಹರಗಲನ್ನು ತಂದರೆ ನಾವು ಬದುಕಿಕೊಳ್ಳಬಹುದು, ಇಲ್ಲದಿದ್ದರೆ ನಾವು ನೀರಿನ ಪಾಲು. ರೈತರಿಗೆ ನಾವು ಹೀಗೆ ತೇಲಿಹೋಗುತ್ತಿರುವುದು ಗೊತ್ತಾಗುವುದು ಹೇಗೆ? ಗೊತ್ತಾದರೂ ಆ ಘಾತಕರು ನಮ್ಮ ಪ್ರಾಣವನ್ನು ಉಳಿಸಲು ಒಂದು ಕಡ್ಡಿಯನ್ನೂ ಅಲ್ಲಾಡಿಸುವುದಿಲ್ಲ ” ಎಂದನು. ಜಗತ್ತಿಗೆ ಅಂದೆ ಪ್ರಳಯವಾಗುವಂತೆ ತೋರಿತು. ಅಯ್ಯುವಿನ ಹೆಂಡತಿ ಸಾಯುವುದಕ್ಕೆ ಸಿದ್ಧಳಾದಳು. ಬೂತಯ್ಯನವರ ಯಾವ ಆಸ್ತಿಯೂ ಅವರನ್ನು ಉಳಿಸುವುದಾಗಿರಲಿಲ್ಲ.

ಜಾಲಹಳ್ಳಿ ಕಾಡಿನ ಕಟ್ಟೆ ಒಡೆದುದು ಅದರ ಸದ್ದಿನಿಂದ ಗುಳ್ಳನಿಗೆ ಕೇಳಿಸಿತು. ಅವನಿಗೆ ಆ ರಾತ್ರಿ ಚೆನ್ನಾಗಿ ನಿದ್ರೆ ಹತ್ತಿರಲಿಲ್ಲ. ಮನೆ ಸುಟ್ಟ ಈಚೆಗೆ ಅವನಿಗೆ ನಿದ್ರೆ ಚೆನ್ನಾಗಿ ಬರುವುದೇ ಕಡಿಮೆಯಾಗಿದ್ದಿತು. ಅಯ್ಯುವಿನ ಸ್ವಭಾವವನ್ನೇ ಕುರಿತು

ಅವನು ಯೋಚನೆಮಾಡುತ್ತಿದ್ದನು. ಕಟ್ಟೆ ಒಡೆದ ಸದ್ದು ಕೇಳಿದ ಒಂದೆರಡು ನಿಮಿಷ ಅದು ಯಾವ ಸದ್ದೆಂಬುದು ಅವನಿಗೆ ಹೊಳೆಯಲಿಲ್ಲ. ಇದು ಕಟ್ಟೆ ಎಂದು ಅವನ ಮನಸ್ಸಿಗೆ ಬಂದಕೂಡಲೆ ಅವನ ಮೈ ಬೆವರಿತು. ಅಯ್ಯುವಿನ ಹೆಂಡತಿ ಮಕ್ಕಳು ಆ ಮನೆಯಲ್ಲಿ ಇರುವುದು ಅವನಿಗೆ ಗೊತ್ತಿದ್ದಿತು. ಆ ಬಯಲಿನ ಆಳವೂ ಅಲ್ಲಿಗೆ ನುಗ್ಗುವ ನೀರಿನ ಗಾತ್ರವೂ ಅವನಿಗೆ ಗೊತ್ತಿದ್ದುದರಿಂದ ಅಯ್ಯುವಿನ ಮನೆಯು ಅದರಲ್ಲಿದ್ದವರೊಂದಿಗೆ ಕೊಚ್ಚಿಕೊಂಡು ಹೋಗಿರುವುದು ಖಂಡಿತವೆಂದು ಅವನಿಗೆ ನಂಬಿಕೆಯಾಯಿತು. ಅಯ್ಯುವಿಗಾಗಿ ಅವನಿಗೆ ಬಹಳ ಸಂಕಟವಾಯಿತು. ಗುಳ್ಳನು ಕೂಡಲೆ ಹಾಸಿಗೆಯಿಂದ ಎದ್ದನು. ಒಂದು ನಿಮಿಷದೊಳಗಾಗಿ ಊರಿಗೆ ಊರೇ ಎಚ್ಚರಗೊಂಡಿತು. ಅವರೆಲ್ಲರೂ ಪಂಜುಗಳನ್ನು ಹಿಡಿದುಕೊಂಡು ಜಾಲಹಳ್ಳಿ ಕಾಡಿನ ಕಡೆ ಹೊರಟರು. ಜಾಲಹಳ್ಳಿ ಸ್ವಲ್ಪ ಎತ್ತರವಾದ ಬೋರೆಯ ಮೇಲೆ ಇದ್ದಿತೆಂದು ಮೊದಲೇ ಹೇಳಿದ್ದೇವೆ. ಬೋರೆಯಿಂದ ಕೆಳಗೆ ಇಳಿದ ಕೂಡಲೇ ನೀರು ಪ್ರಾರಂಭವಾಯಿತು. ಅವರಿಗೆ ಪರಿಚಿತವಾಗಿದ್ದ ಹೊಲಗದ್ದೆ ತೋಪುಗಳೆಲ್ಲಾ ಕತ್ತಲೆಯಲ್ಲಿ ಮುಂದೆ ಹೋಗಲು ಧೈರ್ಯವುಂಟಾಗಲಿಲ್ಲ. ನದಿ ಯಾವುದು? ಅದು ಒತ್ತಿರುವ ನೀರು ಯಾವುದು? ಎಂಬುದೇ ತಿಳಿಯದಷ್ಟು ಪ್ರವಾಹ ವಿಸ್ತಾರವಾಗಿತ್ತು. ಬೂತಯ್ಯನವರ ಕಾಲದಲ್ಲಿ "ಹೊಳೆಗೂ ಸಿಟ್ಟು ಬರವೊಲ್ಲದಲ್ಲ" ಎನ್ನುತ್ತಿದ್ದ ರೈತರು ಅಯ್ಯುವಿನ ಹೆಂಡತಿ ಮಕ್ಕಳನ್ನು ಉಳಿಸಲು ತಮ್ಮ ಪ್ರಾಣವನ್ನು ಬೇಕಾದರೂ ಕೊಡಲು ಸಿದ್ಧರಾಗಿದ್ದರು.

ರಾತ್ರಿ ಕಗ್ಗತ್ತಲಾಗಿತ್ತು. ಅಪಾಯ ಅವರ ಬುದ್ಧಿ ಸಾಹಸಗಳನ್ನು ಮೀರಿದ್ದಿತು. ಅಯ್ಯುವಿನ ಮನೆಯ ದಿಕ್ಕನ್ನು ಊಹಿಸುವುದೂ ಕಷ್ಟವಾಗಿತ್ತು. ನೀರಿನೊಳಕ್ಕೆ ಒಂದು ಸಲ ಇಳಿದ ಮೇಲೆ ಮತ್ತೆ ಮೇಲೆ ಸುರಕ್ಷಿತವಾಗಿ ಹತ್ತುವ ನಂಬಿಕೆ ಯಾರಿಗೂ ಇರಲಿಲ್ಲ. ಅಯ್ಯುವು ಜನರ ಮನಸ್ಸನ್ನು ಆ ರೀತಿ ಪರಿವರ್ತಿಸದೆ ಇದ್ದಿದ್ದರೆ ರೈತರು ಹಾಸಿಗೆಯನ್ನೇ ಬಿಟ್ಟು ಏಳುತ್ತಿರಲಿಲ್ಲ. ಮನುಷ್ಯನ ಒಳ್ಳೆಯ ಸ್ವಭಾವವೇ ಕೊನೆಯಲ್ಲಿ ಜಯಿಸುತ್ತದೆ ಎಂಬ ಅಯ್ಯುವಿನ ನಂಬಿಕೆ ರೈತರಿಗೂ ನಿದರ್ಶನಕ್ಕೆ ಬಂದಿತು. ಅಯ್ಯುವಿನ ಮನೆಯೂ ಅವನ ಹೆಂಡತಿ ಮಕ್ಕಳೂ ಅಷ್ಟು ಹೊತ್ತಿಗೇ ಕೊಚ್ಚಿಕೊಂಡು ಹೋಗಿರುವುದು ಖಂಡಿತವೆಂದು ರೈತರಿಗೆ ನಂಬಿಕೆಯಾದರೂ ಅವರನ್ನು ಉಳಿಸಲು ಸಾಹಸಮಾಡಲೇ ಬೇಕೆಂದು ಅವರು ನಿಶ್ಚಯಿಸಿದರು. ಅರ್ಧ ಗಂಟೆಯೊಳಗಾಗಿ ಹಾಲವಾಣ ಬೊಂಬುಗಳಿಂದ ಒಂದು ತೆಪ್ಪವನ್ನು ಕಟ್ಟಿದರು. ಭೂಮಿಯು ನುಂಗುವುದಕ್ಕೆ ಬಂದಾಗ ಮನೆ ರಕ್ಷಿಸಬಲ್ಲದೆ? ತೆಪ್ಪವು ಸ್ವಾಧೀನ ತಪ್ಪಿ ನೀರಪಾಲಾಗುವುವೆಂದು ಅರ್ಧ ರೈತರು ಹೆದರಿದರು. ತೆಪ್ಪದ ಮೇಲೆ ಹೊರಟ ನಾಲ್ಕು

ಜನರಂತೂ ತಮ್ಮ ಜೀವದ ಆಸೆಯನ್ನೇ ಬಿಟ್ಟರು. ತೆಪ್ಪವೂ ಅವರೂ ಹಿಂದಿರುಗುವರೆಂದು ಯಾರೂ ನಿರೀಕ್ಷಿಸಲಿಲ್ಲ. ಹೋಗಕೂಡದೆಂದು ಯಾರೂ ಒಂದು ಮಾತನ್ನೂ ಹೇಳಲಿಲ್ಲ. ಅಯ್ಯುವಿನ ಹೆಂಡತಿ ಮಕ್ಕಳನ್ನು ಉಳಿಸಲು ಮಾಡಬೇಕಾದ ಸಾಹಸವನ್ನು ನಿರ್ವಂಚನೆಯಿಂದ ಮಾಡಲೇ ಬೇಕೆಂದು ಅವರು ನಿಶ್ಚಯಿಸಿದರು. ತೆಪ್ಪದಲ್ಲಿ ಕುಳಿತ ನಾಲ್ವರ ಪೈಕಿ ಗುಳ್ಳನೇ ಮೊದಲನೆಯವನೂ ಮುಖಂಡನೂ ಆಗಿದ್ದನು. ಪಂಜಿನ ಬೆಳಕಿನಲ್ಲಿ ಅವರು ನಿಧಾನವಾಗಿ ತೆಪ್ಪವನ್ನು ನಡೆಸಿಕೊಂಡು ಹೊರಟರು. ಕತ್ತಲೆಯಲ್ಲಿ ಅವರಿಗೆ ಅಯ್ಯುವಿನ ಮನೆಯು ಯಾವ ಜಾಗದಲ್ಲಿ ಇರಬಹುದೆಂಬುದರ ಗುರುತು ಹತ್ತಲಿಲ್ಲ. ಅನೇಕ ಕಡೆ ತೆಪ್ಪವು ಗುತ್ತಿಗಳಿಗೂ ಮುಳುಗಿದ್ದ ಮೋಟು ಮರಗಳಿಗೂ ತಗುಲಿ ತಲೆಕೆಳಕಾಗುವುದರಲ್ಲಿದ್ದಿತು. ಮಧ್ಯದಲ್ಲಿ ಒಂದು ಸಲ ಗುಳ್ಳನು ಒಂದು ಕೂಗನ್ನು ಹಾಕಿದನು. ಮನುಷ್ಯನ ಧ್ವನಿಯು ಕೇಳೀತೆ ಎಂದು ಕಾತರಿಸುತ್ತಿದ್ದ ಬುಂಡೆಕ್ಯಾತನು ಮತ್ತೊಂದು ಕೂಗಿನಲ್ಲಿ ಪ್ರತ್ಯುತ್ತರವನ್ನು ಕೊಟ್ಟನು. ಹೀಗೆ ಸುಮಾರು ಎರಡು ಗಂಟೆ ಉತ್ತರಪ್ರತ್ಯುತ್ತರಗಳು ಬರಿಯ ಧ್ವನಿಯಲ್ಲೇ ನಡೆದು ತೆಪ್ಪವು ಎಡಕ್ಕೂ ಬಲಕ್ಕೂ ತಿರುಗಿ ಕೊನೆಗೆ ಅಯ್ಯುವಿನ ಮನೆಯ ಹತ್ತಿರಕ್ಕೆ ಹೋಯಿತು. ನೀರಿನ ಸೆಳೆತ ನದಿಯ ಕಡೆಗೆ ಇದ್ದಿತು. ನದಿಯ ವೇಗಕ್ಕೆ ತೆಪ್ಪವು ಸಿಕ್ಕಿದ್ದರೆ ಅದರ ಗತಿ ದೇವರೇ ಗತಿ. ಅದು ವೇಗಕ್ಕೆ ಸಿಕ್ಕದಂತೆ ಒತ್ತುನೀರಿನಲ್ಲಿ ಅದನ್ನು ಹಿಂದಕ್ಕೆ ತರಬೇಕಾದರೆ ಜನಸಹಾಯ ತೆಪ್ಪಕ್ಕೆ ಹೆಚ್ಚಾಗಿ ಬೇಕಾಗಿದ್ದಿತು. ಆದರೆ ತೆಪ್ಪವು ಅಷ್ಟು ಜನರ ಭಾರವನ್ನು ತಡೆಯುವಷ್ಟು ಬಲವಾಗಿರಲಿಲ್ಲ. ನದಿಯ ಕಡೆಯ ವೇಗವನ್ನು ತಪ್ಪಿಸಿ ನಿಲ್ಲುನೀರಿನ ಕಡೆಗೆ ತೆಪ್ಪವನ್ನು ತಿರುಗಿಸುವುದು ಬಹಳ ಕಷ್ಟವಾಯಿತು. ಗುಳ್ಳನೂ ಉಳಿದ ಮೂರು ಜನ ರೈತರೂ ಜೀವದ ಆಸೆ ಬಿಟ್ಟು ಹುಟ್ಟಿಗಣೆಗಳ ಜತೆಯಲ್ಲಿ ಹೆಣಗಿದರು. ತೆಪ್ಪಕ್ಕೆ ಭಾರವು ಹೆಚ್ಚಾದುದರಿಂದ ಸ್ವಲ್ಪ ಸ್ವಲ್ಪ ದೂರ ಬಂದನಂತರ ರೈತರು ಒಬ್ಬೊಬ್ಬರಾಗಿ ತೆಪ್ಪದಿಂದ ಜಾರಿ ನೀರಿನಲ್ಲಿ ನಿಂತಿದ್ದ ಮರಗಳ ತುದಿಗಳನ್ನು ಏರಿದರು. ಕೊನೆಗೆ ಬುಂಡೆಕ್ಯಾತನೂ ತೆಪ್ಪದಿಂದ ಇಳಿದು ಮರವನ್ನು ಏರಬೇಕಾಯಿತು. ಗುಳ್ಳನೂ ಅಯ್ಯುವಿನ ಹೆಂಡತಿಯೂ ಮಕ್ಕಳೂ ಮಾತ್ರವೇ ತೆಪ್ಪದಲ್ಲಿ ಉಳಿದರು. ಗುಳ್ಳನ ಮೈಯಲ್ಲಿ ಬೆವರು ಹರಿಯುತ್ತಿದ್ದಿತು. ಬೆಳಗಿನ ಜಾವಕ್ಕೆ ತೆಪ್ಪವು ಜಾಲಹಳ್ಳಿಗೆ ಬಂದಿತು. ಗುಳ್ಳನು ಮತ್ತೆ ಹೋಗಿ ನೀರಿನಲ್ಲಿ ಮರಗಳ ಮೇಲೆ ಕುಳಿತಿದ್ದ ನಾಲ್ವರನ್ನು ಕರೆದುಕೊಂಡು ಬಂದನು. ಬೆಳಗಾದ ಮೇಲೆ ನೋಡಿದಾಗ ಅಯ್ಯುವಿನ ಜಾಲಹಳ್ಳಿ ಕಾಡಿನ ಮನೆ ಇರಲಿಲ್ಲ. ತೇಲಿಹೋಗಿದ್ದಿತು. ಕಟ್ಟೆ ಒಡೆದ ಸಮಾಚಾರ ತಿಳಿದು ಅಯ್ಯುವು ಮಾರನೇ ದಿನ ಜಾಲಹಳ್ಳಿಗೆ ದೌಡಾಯಿಸಿಕೊಂಡು ಬಂದನು.

*   *   *   *   *

ಇದು ನಡೆದು ಈಗ ಹದಿನಾಲ್ಕು ವರ್ಷಗಳಾದುವು. ಅಯ್ಯಂವಿನ ಮನೆಯಿಂದ ಕಳವಾದ ಪತ್ರಗಳೆಲ್ಲಾ ಒಂದೊಂದಾಗಿ ಅವನ ಮನೆಗೆ ರೈತರಿಂದಲೇ ಬಂದುವು. ಅವನ ಆಸ್ತಿ ಪೈವಟ್ಟು ಬೂತಯ್ಯನವರ ಕಾಲದಲ್ಲಿ ಇದ್ದುದಕ್ಕಿಂದ ಸ್ವಲ್ಪವೂ ಕಡಿಮೆಯಾಗಿಲ್ಲ. ಅವನಿಗೆ ರೈತರ ಭಯವೂ ರೈತರಿಗೆ ಅವನ ಭಯವೂ ಇಲ್ಲ. ಗುಳ್ಳನು ಈಗಲೂ ಅವನ ಮನೆಯ ಆಳು. ಊರಲ್ಲಿ ಯಾರ ಬಾಯಲ್ಲಿ ಕೇಳಿದರೂ "ಬೇಕಾದ್ದು ಬರಲಿ ಅಯ್ನೋರು ಆತ್ಕೊತಾರೆ" ಎಂಬುದೇ ಮಾತಾಗಿದೆ.

ಗೊರೂರು ರಾಮಸ್ವಾಮಿ ಐಯಂಗಾರ್.

ಉಯ್ಯಾಲೆ

೧

ತಿಂಗಳ ಬೆಳಕು ಹಾಲನು ಚೆಲ್ಲಿ
ನಗೆಯನು ಹರಡಿತ್ತು
ಬಯಲಲಿ ಕೇಕೆಯು ಹಬ್ಬಿತ್ತು।
ಆಲದ ರೆಂಬೆಗೆ ಏಣಿಯು ಕಟ್ಟಿ
ಆಟವು ನಡೆದಿತ್ತು
ಚೆಲುವಿನ ನೋಟವು ಮೆರೆದಿತ್ತು ॥

೨

ಅಟ್ಟಣೆ ಏರಿ ಹುಡುಗರ ತಂಡ
ಕೇಳಿಯ ಮೆರೆಸಿತ್ತು
ಹಾಡಿನ ಹೊನಲನು ಹರಿಸಿತ್ತು।
ಗುಂಪಿನ ಪೋರಿ ತೂಗಿಗೆ ಕೂಗೆ
ನುಡಿ ಮಾರ್ನುಡಿದಿತ್ತು
ಕಣ್ಣಾದು ಮುಸಿಮುಸಿ ನಗುತಿತ್ತು ॥

೩

ಸೀಮಾತುಗಳ ಸವಿಯನು ಹೀರಿ
ಮನಸೆತ್ತೋ ಜಾರಿ
ನೆನಪಿನ ಜಾಡನು ತುಳಿದಿತ್ತು।
ಕೊಂಬೆಯ ತುದಿಗೆ ಕೂಹೂ ಎನುತ
ಉಯ್ಯಾಲೆಯಾಡಿತ್ತು
ಕೋಕಿಲ ಕುಕಿಲುತ ನಲಿದಿತ್ತು ॥

೪

ಹಕ್ಕಿಯ ಪುಟ್ಟ ಮೈಯೊಳಗಿಂದ
ಒಲವದು ಚಿಮ್ಮಿತ್ತು
ಸುತ್ತಲು ನಲವದು ಹೊಮ್ಮಿತ್ತು।

ಬಗೆಹೂ ಅರಳಿ ಎದೆವಳ್ಳಿಯಲಿ
ಚೆಂದದಿ ತೊನೆದಿತ್ತು
ಕಂಪನು ಗಾಳಿಯು ಬೀಸಿತ್ತು ||

೫

ನಲುಗಿನ ಹೆಣ್ಣು ಕರೆಯುತ ಬೀಗಿ
ಎದೆಮಣೆಯಲಿ ತೂಗಿ
ಮೆಲ್ಲನೆ ಒಸಗೆಯನುಸುರಿತ್ತು |
ಸೋಂಕಿಗೆ ಬಳುಕಿ ಮುದ್ದಿಗೆ ನಿಲುಕಿ
ತೋಳ್ಸೆರೆ ಸಿಕ್ಕಿತ್ತು
ಸೊಗಸಿನ ಚಿತ್ರವು ಕರಗಿತ್ತು ||

ಎಂ. ನಂಜುಂಡ ಶಾಸ್ತ್ರಿ.

ಚಾರುದತ್ತ

(ಮುಂದುವರಿದದ್ದು)

ಮೂರನೆಯ ಅಂಕ

(ಬಳಿಕ ನಾಯಕನೂ ವಿದೂಷಕನೂ ಪ್ರವೇಶಿಸುತ್ತಾರೆ)

ನಾಯಕ—ಮಿತ್ರ, ವೀಣೆಯೆಂಬುದು ಸಮುದ್ರದಲ್ಲಿ ಹುಟ್ಟದ ರತ್ನ. ಏಕೆಂದರೆ,

[15]ಕಾತರಗೆ ಮನದೆಣಿಕೆಯಂತೆ ನಡೆಯುವ ಗೆಳತಿ.
ಸಂಕೀರ್ಣದೋಷವಿಲ್ಲದ ಗೋಷ್ಠಿ* ವಿಷಯಗಳಲಿ.
ಮದನನಾಟಗಳಲೊಲವೆರೆವ ಮೆಚ್ಚಿನ ಮಡದಿ.
ಹೆಂಗಳಿಗೊ, ಕಾದಲರ ಕೂಟಕೆಡರೆಳೆವ ಸವತಿ. ||೧||

ವಿದೂಷಕ—ಎಷ್ಟು ಹೊತ್ತಾಗಿದೆ, ನೋಡು! (ಗಸ್ತಿನವರು) ಸಾರಿದ್ದರಿಂದ ರಾಜಬೀದಿಗಳೆಲ್ಲ ಜನಸಂಚಾರವಿಲ್ಲದವಾಗಿವೆ. ನಾಯಿಗಳೂ ಮಲಗಿವೆ. ನಮಗೆ ನಿದ್ದೆಯಿಲ್ಲ. ಇದಿನ್ನೊಂದು ವಿಚಿತ್ರ, ಈಗ. ಈ ಹಾಳು ವೀಣೆ ನನಗೆ ಸೊಗಸುವುದಿಲ್ಲ. ಬಹು ಬಿಗಿಯಾದ ಕಡೆಯಲ್ಲಿ ಅದರ ತಂತಿ ಕಿತ್ತುಹೋಗಲಿ!

ನಾಯಕ—ಮಿತ್ರ, ಬಗೆಬಗೆಯ ಭಾವಗಳನ್ನು ಸಮರಸವಾಗಿ ಹೊಂದಿಸಿ ಬಹು ಇಂಪಾಗಿ ಹಾಡಿದರಲ್ಲಾ; ನಿನಗೆ ಸೊಗಸಲೇ ಇಲ್ಲವೇ?

ವಿದೂಷಕ—ಅದರಿಂದಲೇ ನನಗೆ ಇದು ರುಚಿಸುವುದಿಲ್ಲ. ಮಧುರವಾದರೂ ಅತಿಯಾಗಿ ತಿಂದರೆ ಅಜೀರ್ಣವಾಗುತ್ತದೆ.

ನಾಯಕ—ಸರ್ವವಿಧಗಳಲ್ಲಿಯೂ ಬಹು ಸ್ಪಷ್ಟವಾಗಿತ್ತು ಸಂಗೀತ. ಏಕೆಂದರೆ,

ರಾಗದಿಂದೊಡಗೂಡಿ, ತಾರದಿಂದಿಂಪಾಗಿ,
ಸಮವಾಗಿ, ಸ್ಫುಟವಾಗಿ, ಭಾವಪರವಶವಾಗಿ,
ರಂಜಿಸಿತು; [16]ಅಭಿನಯುವ ಜತೆಗೊಂಡುದಲ್ಲವಿದು.
ಆಯಾ ಗುಣಂಗಳನು ಪರಿಪರಿಯ ನುಡಿಯಿಂದ
ಬಹು ಹೊಗಳಿ ಫಲವೇನು? ನಡುಗೋಡೆಯೊಂದಿದ್ದ
ಪಕ್ಷದಲಿ ಯುವತಿಯೆಂದೇ ನೆನೆಯುತ್ತಿದ್ದೆ ನಾನು. ||೨||

---

* ಸಂಗೀತಸಭೆ (ಗಾನಸದಃ).—ಗ. ಶಾ.

ವಿದೂಷಕ—ಬೇಕಾದಷ್ಟು ಹೊಗಳಬಹುದು, ನೀನು. ನನಗಾದರೋ ಹಾಡುವ ಗಂಡಸೂ ಓದುವ ಹೆಂಗಸೂ ಇಬ್ಬರೂ ಹಿತವಾಗಿ ತೋರುವುದಿಲ್ಲ. ಹಾಡುವ ಗಂಡಸಾದರೋ ಕೆಂಪು ಹೂಮಾಲೆಯನ್ನು ಹಾಕಿಕೊಂಡ ಪುರೋಹಿತನಂತೆ ಸ್ವಲ್ಪವೂ ಚೆನ್ನಾಗಿ ಕಾಣುವುದಿಲ್ಲ. ಓದುವ ಹೆಂಗಸು ಕೂಡ ಹರಕುಮೂಗಿನ ಹಸುವಿನ ಹಾಗೆ ಅತಿ ವಿರೂಪವಾಗಿ ಕಾಣುತ್ತಾಳೆ.

ನಾಯಕ—ಮಿತ್ರ, ಅರ್ಧರಾತ್ರಿಯಾಯಿತು. ರಾಜಬೀದಿಗಳಲ್ಲೆಲ್ಲ ಕತ್ತಲೆ ನೆಲೆನಿಂತುಬಿಟ್ಟಿದೆ. ಜನರು ಯಾರೂ ತಿರುಗಾಡದಿರುವುದರಿಂದ ಉಜ್ಜಯಿನಿಯೇ ನಿದ್ದೆಮಾಡುತ್ತಿರುವಂತೆ ತೋರುತ್ತದೆ. ಏಕೆಂದರೆ,

ಈ ಅಷ್ಟಮಿಯ ಚಂದ್ರನಿದೊ ನೋಡು ಮುಳುಗುತಿಹ
ನೆಡೆಗೊಟ್ಟು ಕತ್ತಲೆಗೆ ತಾನು.
ಕಾಡಾನೆ ನೀರ್ಮುಳುಗಿ ಖಾಯುತಿರುವಂದದರ
ಮುಳುಗುತಿಹ ತುದಿಗೊಂಬಿನಂತೆ. ||೩||

ವಿದೂಷಕ—ಚೆನ್ನಾಗಿ ಹೇಳಿದೆ. ತಿಂಗಳು ಮುಳುಗುತ್ತಿರುವುದರಿಂದ ಅವಕಾಶ ಸಿಕ್ಕಲಾಗಿ ಮಹಡಿಯ ಮೇಲಿನಿಂದ ಇಳಿದುಬರುವಂತೆ ಕಾಣುತ್ತದೆ, ಈ ಕತ್ತಲೆ.

ನಾಯಕ—(ಮುಂದೆ ಹೋಗಿ) ಇದು ನಮ್ಮ ಮನೆ. ವರ್ಧಮಾನಕಾ, ವರ್ಧಮಾನಕಾ!

(ಪ್ರವೇಶಿಸಿ)

ಚೇಟ—ಅಮ್ಮಮ್ಮಾ! ಆರ್ಯ ಮೈತ್ರೇಯ!

ನಾಯಕ—ವರ್ಧಮಾನಕಾ!

ಚೇಟ—ಅಮ್ಮಮ್ಮಾ, ಸ್ವಾಮಿಯವರು! ಸ್ವಾಮಿಯವರಿಗೆ ಅಡ್ಡಬಿದ್ದೆ.

ನಾಯಕ—ಕಾಲಿಗೆ ನೀರು ತೆಗೆದುಕೊಂಡು ಬಾ.

ಚೇಟ—(ಮುಂದೆ ಹೋಗಿ) ಇಗೋ, ಕಾಲಿಗೆ ನೀರು. (ನಾಯಕನ ಕಾಲು ತೊಳೆಯುತ್ತಾನೆ)

ವಿದೂಷಕ—ವರ್ಧಮಾನಕಾ, ನನಗೂ ಕಾಲು ತೊಳೆ.

ಚೇಟ—ಚೆನ್ನಾಗಿ ಕಾಲು ತೊಳೆದುಕೊಂಡು (ಆಮೇಲೆ) ನೆಲದ ಮೇಲೆ ಹೊರಳಾಡಬೇಕು. ನೀರು ಹಾಳು (ಅಷ್ಟೇ). ಅಥವಾ ತನ್ನಿ ಇಲ್ಲಿ; ತೊಳೆಯುತ್ತೇನೆ. (ವಿದೂಷಕನ ಕಾಲುಗಳನ್ನು ತೊಳೆಯುವಂತೆ ನಟಿಸುತ್ತಾನೆ)

ವಿದೂಷಕ—ಕಾಲನ್ನು ಮಾತ್ರವೇ ತೊಳೆಯಲಿಲ್ಲ, ಈ ಬಡ್ಡೀಮಗ. ಮುಖಕ್ಕೂ ಪ್ರಕ್ಷಾಳನೆ ಮಾಡಿದ.

ನಾಯಕ—ಮಿತ್ರ,

ಈ ನಿದ್ರೆ ಕಣ್ಸೆಳೆದು ಹಣೆಯ ಬಳಿಯಿಂದಿಳಿದು
ತಾನೆನ್ನ ಸಾರುತಿಹಳು.
ಸುಳಿವುದೋರದೆ ಚಪಲೆ ಜರೆಯಂತೆ ಆಳಾರ್ಪ
ಕೀಳ್ಪಡಿಸಿ ಹೆಚ್ಚುತಿಹಳು. ||೪||

ಮೈತ್ರೇಯ, ಮಲಗಿಕೊ.

(ಚೇಟನು ಹೋಗುತ್ತಾನೆ)

(ಒಡವೆಯ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಚೇಟಿ ಪ್ರವೇಶಿಸುತ್ತಾಳೆ)

ಚೇಟಿ—ಆರ್ಯ ಮೈತ್ರೇಯ, ಏಳಿ, ಎಳಿ.

ವಿದೂಷಕ—ಅಮ್ಮಾ, ಏನಿದು?

ಚೇಟಿ—ಬಂಗಾರದ ಪೆಟ್ಟಿಗೆಯನ್ನು ಷಷ್ಠಿಯಲ್ಲಿಯೂ ಸಪ್ತಮಿಯಲ್ಲಿಯೂ ನಾನು ಹತ್ತಿರ ಇಟ್ಟುಕೊಂಡಿದ್ದೆ. ಅಷ್ಟಮಿ, ಇವತ್ತು.

ನಾಯಕ—ಇದು ಆ ವಸಂತಸೇನೆಯ ಸ್ವತ್ತೋ?

ಚೇಟಿ—ಹೌದು. ಸ್ವಾಮಿಯವರು ತಾವೇ ಹೇಳಬೇಕು: 'ತೆಗೆದುಕೊಳ್ಳಬೇಕು' ಎಂದು.

ನಾಯಕ—ಮೈತ್ರೇಯ, ತೆಗೆದುಕೊ.

ವಿದೂಷಕ—ಅದೇಕೆ ಈ ಅಲಂಕಾರವನ್ನು ಒಳತೊಟ್ಟಿಗೆ ಕಳುಹಿಸುವುದಿಲ್ಲ?

ನಾಯಕ—ಮೂರ್ಖ, [17]ಹೊರಗಿನವರು ಹಾಕಿಕೊಂಡ ಅಲಂಕಾರವನ್ನು ಮನೆಯವರು ನೋಡಬಾರದು.

ವಿದೂಷಕ—ಏನು ಗತಿ! ತಾ ಇಲ್ಲಿ, ತೆಗೆದುಕೊಳ್ಳುತ್ತೇನೆ. ಕಳ್ಳರ ಕೈಗೆ ಸಿಕ್ಕುವುದೇ ದಿಟ.

(ಚೇಟಿ ಕೊಟ್ಟು ಹೋಗುತ್ತಾಳೆ)

ವಿದೂಷಕ—ಅಯ್ಯಾ, ಅದೇಕಯ್ಯಾ ಉತ್ತರೀಯವನ್ನು ಆ ಸೂಳೆಯ ಪರಿಚಾರಕನಿಗೆ ಕೊಟ್ಟುಬಿಟ್ಟೆ?

ನಾಯಕ—ಮರುಕದಿಂದ.

ವಿದೂಷಕ—ಇಲ್ಲಿ ಕೂಡ ಮರುಕವೇ?

ನಾಯಕ—ಮಿತ್ರ, ಬೇಡ, ಹಾಗೆನ್ನಬೇಡ.

ವಿದೂಷಕ—ನಾನು ಭಾರಹೇರಿದ ಕತ್ತೆಯಂತೆ ನೆಲದ ಮೇಲೆ ಹೊರಳಾಡುತ್ತಿದ್ದೇನೆ !

ನಾಯಕ—ನಿದ್ದೆ ನನ್ನನ್ನು ಬಾಧಿಸುತ್ತಿದೆ. ಸುಮ್ಮನಿರು.

ವಿದೂಷಕ—ಮಲಗಿಕೊ. ಬೆಳಗ್ಗೆ ಸುಖವಾಗಿ ಏಳು. ಇನ್ನು ನಾನೂ ನಿದ್ದೆಮಾಡು ತ್ತೇನೆ. (ಇಬ್ಬರೂ ನಿದ್ದೆಹೋಗುತ್ತಾರೆ)

(ಬಳಿಕ ಸಜ್ಜಲಕನು ಪ್ರವೇಶಿಸುತ್ತಾನೆ)

ಸಜ್ಜಲಕ—ನಾನಾದರೋ,

ಸುಖವಾಗಿ ಮೈಯನೊಳಹೊಗಿಸಲಾಗುವ ಕರ್ಮ
ಮಾರ್ಗವನು ಕಲ್ಕೆಬಲದಿಂದ, ಬಲದಿಂದ, ಮಾಡಿ;
ಪಕ್ಕಗಳ ನೆಲದ ಮೇಲೆಳೆದೆಳೆದು ಹರಿಯುವೆನು
ಮೈ ಶಿಥಿಲವಾಗಿರುವ ಹಾವು ಪರೆಯುರ್ಚುವಂತೆ. ||೫||

ಓಹೋ ! ತೋಟದ ಪಕ್ಕಬಾಗಿಲಿನಲ್ಲಿ ಕನ್ನಕೊರೆದು ಒಳಕ್ಕೆ ಬಂದೆ. ಇನ್ನು ಈಗ ತೊಟ್ಟಿಯ ಕಡೆಗೆ ಹೋಗೋಣ. (ಬೇಸರ ಪಟ್ಟುಕೊಂಡು, ಯೋಚಿಸಿ)

[18]ಇದು ನೀಚವೆಂದೊರೆಗೆ ತಿಳಿದವರು, ಮಲಗಿದರೊಳಿಂತು ನಾನೆಸಗೆ.
ನಂಬಿದರ ಮೋಸದಿಂದಡಗಿಪುದು ಶೌರ್ಯತಾನಲ್ಲ ಕರ್ಕಶತೆ.
ತನ್ನಿಚ್ಛೆಯೊಳಗಿರುವ ಪಳಿಯೆ ಮೇಲ್, ಊಳಿಗದೆ ಕೈಮುಗಿವುದಲ್ಲ.
ಮುನ್ನ ಸೌಪ್ತಿಕವಧೆಯಲೀ ದಾರಿ ಮಾಡಿಹನು ದ್ರೌಣಿ ತಾನಂದು. ||೬||

(ಯೋಚಿಸಿ)

ಕೈತುಂಬ ಹಣವಿದ್ದು ಕಡುಲೋಭಿಯಾದವನ,
ಸಾಧುಗಳನಾದರಿಸಿ ಮನ್ನಿಸದ ನರನ,
ತನ್ನ ವೃತ್ತಿಯಲಧಿಕ ಕಠಿನನಹ ವರ್ತಕನ—
ಇಂಥವರ ಮನೆಯೊಂದು ಸಿಕ್ಕಿದರೆ ನನಗೆ
ಒಳಗೊಳಗೆ ನನ್ನ ಮನಕೊರೆಯದಾ ಕೊರತೆ. ||೭||

ಏನಾದರೂ ಆಗಲಿ. ಏನನ್ನು ತಾನೆ ಮಾಡಿಸಲಾರದು, ಕಾಮವಿಕಾರ? ಇನ್ನು ಕೆಲಸಕ್ಕೆ ಮೊದಲುಮಾಡೋಣ. ಓಹೋ !

ಯಾವ ಬಳಿ ನೀರಿಳಿದು ಸಡಲಿ ಕೊರೆವಂದಿನಿತು
ಸದ್ದಾಗದಂತಿಹುದೊ ? ಗೋಡೆಗಳಲಾವಡೆಯ
ಲೊಳಗುದೋರುವ ಸಂದು ಸುಖವಾಗಿ ಹಿರಿದಹುದೊ ?

ಉಪ್ಪುದುರಿ ನವೆದಲುಗುವಿಟ್ಟಿಗೆಯು ಕಟ್ಟಡವ
ದಾವ ಬಳಿ ಕೊರೆದಿಹುದೊ? ಯಾವ ಬಳಿ ಹೆಂಗಸರು
ಕಾಣರೋ? ಮತ್ತೆನ್ನ ಯತ್ನ ಕೈಗೂಡಿಬಹುದೋ? ||೮||

(ಮುಂದೆ ಹೋಗಿ) ಇದು ಕಟ್ಟಡವನ್ನು ವಿಂಗಡಿಸಿರುವ ರೀತಿ. ಒಟ್ಟು ಮನೆಯಲ್ಲೆಲ್ಲ ಈ (ಬಳಿಯ) ಕಟ್ಟಡ ತೇವಗೂಡಿರುವ ಹಾಗಿದೆ. ಇಲ್ಲಿಯೇ ಒಳನುಸಿಯಲು ದಾರಿಮಾಡುತ್ತೇನೆ. ಆಹಾ! ಈಗ ಯಾವ ಬಗೆಯ ಕನ್ನವನ್ನು ಕೊರೆಯಲಿ?

(ಮೆರೆವ) ಸಿಂಹಾಕ್ರಾಂತ, ಪೂರ್ಣಚಂದ್ರ, ಝಷಾಸ್ಯ,
ಚಂದ್ರಾರ್ಧವಾ ವ್ಯಾಘ್ರವಕ್ತ್ರ, ತ್ರಿಕೋಣ, ಮೇಣ್
ಪೀಠಿಕೆ, ಗಜಾಸ್ಯಗಳಲಾವ ಕನ್ನವ ಕೊರೆವೆನ್?
ಎನ್ನಕಡೆಯವರೆಲ್ಲರಚ್ಚರಿಯ ತಳೆವರೆಂತು? ||೯||

ಆಗಲಿ, ಸಿಂಹಾಕ್ರಾಂತವನ್ನೇ ಕೊರೆಯುತ್ತೇನೆ.

ವಿದೂಷಕ—ಅಯ್ಯಾ, ನೀನೇನು ಎಚ್ಚರವಾಗಿದ್ದೀಯೋ, ಇಲ್ಲವೋ?

ನಾಯಕ—ಏಕೆ?

ವಿದೂಷಕ—ನನಗಾದರೋ [19]ಪರಿಚಾರಿಕೆಯೊಡನೆ ಸಂಕೇತಮಾಡಿಕೊಂಡಿರುವ ಶಾಕ್ಯಶ್ರಮಣಕನಂತೆ ನಿದ್ದೆಯೇ ಬರಲೊಲ್ಲದು. ನನ್ನ ಎಡಗಣ್ಣು ಬೇರೆ ಹಾರುತ್ತದೆ. ಕಳ್ಳ ಕನ್ನ ಕೊರೆಯುತ್ತಿರುವ ಹಾಗೆ ತೋರುತ್ತದೆ. ಸಂಪತ್ತಿಗೆ ಈ ರೀತಿಯ ಅವಸ್ಥೆಯಾಗುವ ಹಾಗಿದ್ದರೆ ನಾನು ಹುಟ್ಟು ದರಿದ್ರನೇ ಆಗಿಬಿಡುತ್ತೇನೆ.

ನಾಯಕ—ಛೀ, ಮೂರ್ಖ! ದಾರಿದ್ರ್ಯವನ್ನು ಬಯಸುವೆಯಲ್ಲಾ!

ಸಜ್ಜಲಕ—ಇನ್ನು ಯಾವುದರಿಂದ ಕನ್ನ ಕೊರೆಯುವ ದಾರಿಯನ್ನು ಗುರುತಿಸಲಿ? ಇದು ಹಗಲು ಜನಿವಾರವೂ ರಾತ್ರೆ ಅಳತೆಯ ದಾರವೂ ಆಗುವುದಷ್ಟೆ!

ಈಗಿದರ ಗೋಡೆಗಳಲೊಮ್ಮೆ [20]ಕಾಕಲಿಯಿಟ್ಟು
ರಾತ್ರಿ ನಾ ಕೊರೆದಿರಲು, ಸೀಳಿಯೂ ಸಮವಾಗಿ
ತೋರುತಿರೆ ಗೋಡೆಗಳು, ಬೆಳಗಾಗೆ ನೆರೆಯುವರು
ಕೊರಗಿನಲಿ ಮುಖಗೆಟ್ಟು ನನ್ನ ತಪ್ಪೆಣಿಸಲಿ!
ಅಂತೆ ಕೆಲಸದಲೆನ್ನ ಚಳಕವನು ಬಣ್ಣಿಸಲಿ! ||೧೦||

ಖರಪಟನಿಗೆ ನಮಸ್ಕಾರ. ರಾತ್ರಿಹೊತ್ತು ಗೋಚರವಾಗುವ ದೇವತೆಗಳಿಗೆ ನಮಸ್ಕಾರ. (ಕನ್ನ ಕೊರೆಯುತ್ತಾನೆ) ಅಬ್ಬಾ! ಮುಗಿಯಿತು, ಕೆಲಸ! ಇನ್ನು ಒಳಗೆ ಹೋಗೋಣ. (ಒಳಹೊಕ್ಕು) ಅಯ್ಯೋ, ದೀಪ ಉರಿಯುತ್ತಿದೆ! ಹಿಂದಕ್ಕೆ ಹೋಗಿಬಿಡೋಣವೇ? ಛೇ, ಛೇ! ಸಜ್ಜಲಕನಲ್ಲವೇ ನಾನು?

ಬೆಕ್ಕು ಹಾರಿಕೆಯಲ್ಲಿ, ತೋಳ ಹಿನ್ನಡೆಯಲ್ಲಿ,
ಡೇಗೆ ಮನೆನೋಟದಲಿ, ನಿದ್ದೆ ಮಲಗಿರುವಾಳ
ಬಲದಳವನಳೆವಲ್ಲಿ, ಹಾವು ಬಳಿಸಾರುವಲ್ಲಿ,
ಮಾಯೆ ಮೈಬಣ್ಣಮಾರ್ಪಾಟಿನಲಿ, ವಾಗ್ದೇವಿ
ದೇಶಭಾಷೆಗಳಲ್ಲಿ, ದೀಪವಿರುಳಲಿ, ಕತ್ತಲ್
ಎಡರಿನಲಿ, ಗಾಳಿ ನೆಲದಲಿ, ಹಡಗು ನೀರಿನಲ್ಲಿ. ||೧೧||

(ಸುತ್ತಲೂ ನೋಡಿ) ನಾನು ಇಲ್ಲಿ ಹೊಸದಾಗಿ ಬಂದವನಾದ್ದರಿಂದ (ಸಂಪತ್ತಿನ) ಸಮೃದ್ಧಿಯನ್ನರಿಯದೆ ಕೇವಲ ಉಪ್ಪರಿಗೆಯನ್ನೇ ನಂಬಿಕೊಂಡು ಇಲ್ಲಿಗೆ ನುಗ್ಗಿದೆ. ಈಗ (ಇಲ್ಲಿ) ಯಾವ ಬಗೆಯ ವಿಶೇಷತರದ ಪದಾರ್ಥವೂ ಕಾಣುವುದಿಲ್ಲ. ಇವನೇನಾದರೂ ದರಿದ್ರನೇ ಇರಬಹುದೇ? ಇಲ್ಲದಿದ್ದರೆ, ಇವನು ನೋಡತಕ್ಕ ಉತ್ತಮ ವಸ್ತುಗಳನ್ನೆಲ್ಲಾ ಅಡಗಿಸಿ ವ್ಯರ್ಥವಾಗಿಟ್ಟುಕೊಂಡಿರುವನೋ ಏನೋ? ಅಥವಾ ಈ ಕಟ್ಟಡದ ವಿನ್ಯಾಸ ಬಹು ಅಂದವಾಗಿದೆ. ಇವನು ಐಶ್ವರ್ಯವನ್ನನುಭವಿಸಿ ಕಳೆದುಕೊಂಡವನಾಗಿರಬಹುದು.

ಹಾಗೆ ಕೊರೆಯಾದರೂ ಸಿರಿ, ಹುಟ್ಟಿದೆಡೆಯೆಂದು
ಮಾರುವೀಹೊತ್ತಿನಲು ಮಿಗುವ ನೀಲಸ್ನೇಹ
ದಿಂದ ಮನೆಯನು ಕಾಯ್ದುಕೊಂಡಿರುವನು. ||೧೨||

ಆಗಲಿ, ನೋಡೋಣ. ಅಥವಾ ನನ್ನಂತೆಯೇ ದರಿದ್ರನಾಗಿ ಬಂದೇ ಅವಸ್ಥೆಯಲ್ಲಿರುವ ಕುಲಪುತ್ರನನ್ನು ಪೀಡಿಸಬಾರದು. ಇನ್ನು ಹೋಗುತ್ತೇನೆ.

ವಿದೂಷಕ—ಅಯ್ಯಾ, ತೆಗೆದುಕೊ, ಈ ಬಂಗಾರದ ಪೆಟ್ಟಿಗೆಯನ್ನು.

ಸಜ್ಜಲಕ—ಏನಿದು? ಬಂಗಾರದ ಪೆಟ್ಟಿಗೆಯೆಂದನಲ್ಲಾ! ನನ್ನನ್ನು ಕಂಡೇನಾದರೂ ಮಾತಾಡುತ್ತಾನೋ? ಹಾಗಲ್ಲದೆ ಸತ್ತ್ವಸಾಲದ್ದರಿಂದ ಕನವರಿಸುತ್ತಿರುವನೋ ಏನೋ? ಆಗಲಿ, ಸ್ವಲ್ಪ ನೋಡೋಣ. (ನೋಡಿ) ನಿಜವಾಗಿಯೂ ಇವನಿಗೆ ನಿದ್ದೆ ಹತ್ತಿದೆ. ಹೇಗೆಂದರೆ,

ಉಸಿರು ಶಂಕಿತವಲ್ಲ, ಏರುಪೇರಾಗಿಲ್ಲ,
ನಡುಬಿಡುವು ಸಮವಹುದು; ಮೈ ಕೀಲುಗಳೆಲ್ಲ
ನೀಳ್ಮೆವಡೆದಿಹುದು, ಹಾಸಿಗೆಯಳವ ಮೀರಿಹುದು;
ಕಣ್ ಗಟ್ಟಿಯಾಗಿ ತಾ ಮುಚ್ಚಿಹುದು; ರೆಪ್ಪೆಗಳು
ಚಪಲತೆಯ ತಳೆದಿಲ್ಲ; ಸೋಗುನಿದ್ದೆಯಿದಾಗೆ
ಮುಖದೆದುರು ದೀಪವನು ಸಹಿಸನಿವನು. ||೧೩||

ಎಲ್ಲಿರಬಹುದು ಅದು? ಇಗೋ, ಹರಿಕಲು ಹೊದಕೆಯ ಒಂದು ಕಡೆಯಲ್ಲಿ ದೀಪದ ಬೆಳಕಿನಿಂದ ಹೊಳೆಹೊಳೆಯುತ್ತಾ ಅದು ಚೆನ್ನಾಗಿ ಕಾಣುತ್ತಿದೆ. ಇವನು ಬಹಳ ಗಟ್ಟಿಯಾಗಿ ಹಿಡಿದುಕೊಂಡಿದ್ದಾನೆ. ಇದೀಗ ಸರಿಯಾದ ಕಾಲ. ಈ ಚಿಟ್ಟೆಗಳನ್ನು ಹಿಡಿದುಕೊಂಡು ಬಂದಿದ್ದೇನೆ. ದೀಪವನ್ನು ಆರಿಸುವುದಕ್ಕೆ ಒಂದನ್ನು ಬಿಡುತ್ತೇನೆ. (ದುಂಬಿಯ ಕರಡಿಗೆಯಿಂದ ಒಂದನ್ನು ಹೊರಕ್ಕೆ ಬಿಡುತ್ತಾನೆ) ಇಗೋ ಇದು ದೀಪವನ್ನಾರಿಸಿ ಬಿದ್ದು ಬಿಟ್ಟಿತು.

ವಿದೂಷಕ—ಅಯ್ಯೋ, ಆರಿಹೋಯಿತು, ದೀಪ ಈಗ! ನನ್ನ ಪೆಟ್ಟಿಗೆ ಕಳವಾದಂತೆಯೇ. ಅಯ್ಯಾ, ಚಾರುದತ್ತ, ತೆಗೆದುಕೊ ಈ ಬಂಗಾರದ ಅಲಂಕಾರವನ್ನು. ನನಗೋ ಹೆದರಿಕೆಯಿಂದ, ದಾರಿತಪ್ಪಿದ ವರ್ತಕನ ಹಾಗೆ ನಿದ್ದೆಯೇ ಬರುವುದಿಲ್ಲ. ನನ್ನ ಬ್ರಹ್ಮತ್ವದ ಮೇಲೆ ಆಣೆ, ನೀನು ತೆಗೆದುಕೊಳ್ಳದೆ ಇದ್ದರೆ.

ಸಜ್ಜಲಕ—ಇದಕ್ಕೇಕೆ ಆಣೆ ಮಾಡಬೇಕು? ಇಗೋ, ತೆಗೆದುಕೊಳ್ಳುತ್ತೇನೆ. (ತೆಗೆದುಕೊಳ್ಳುತ್ತಾನೆ)

ವಿದೂಷಕ—(ಕೊಟ್ಟು) ಇನ್ನು ನಾನು ತನ್ನ ಸರಕನ್ನೆಲ್ಲ ಮಾರಿದ ವರ್ತಕನ ಹಾಗೆ ಸುಖವಾಗಿ ಮಲಗುತ್ತೇನೆ.

ಸಜ್ಜಲಕ—ಸುಖವಾಗಿ ನಿದ್ದೆಮಾಡಯ್ಯಾ, ಮಹಾ ಬ್ರಾಹ್ಮಣ! (ಯೋಚಿಸಿ) ಆಹಾ! ಬ್ರಾಹ್ಮಣನು ನಂಬಿ ಕೊಟ್ಟದ್ದನ್ನು ನಾನು ಕದಿಯಬೇಕಾಗಿ ಬಂತು.

ಹಾಳಾಯ್ತು ದಾರಿದ್ರ್ಯ! ತಣಿವಿಲ್ಲದೀಹರಯ!
ಈ ಕ್ರೂರಕಾರ್ಯವನು ಹಳಿಯುತಲೆ ಮಾಡುತಿಹೆನು! ||೧೪||

(ನೇಪಥ್ಯದಲ್ಲಿ ನಗಾರಿಯ ಸದ್ದಾಗುತ್ತದೆ)

(ಕಿವಿಗೊಟ್ಟು) ಓಹೋ, ಬೆಳಗಿನ ಹೊತ್ತಾಯಿತು. ಇನ್ನು ಹೊರಟು ಹೋಗಿಬಿಡುತ್ತೇನೆ. (ಸಜ್ಜಲಕನು ಹೋಗುತ್ತಾನೆ)

(ಪ್ರವೇಶಿಸಿ)

ಚೇಟಿ—(ಕೂಗಿಕೊಂಡು) ಆರ್ಯ ಮೈತ್ರೇಯ, ನಮ್ಮ ತೋಟದ ಪಕ್ಕಬಾಗಿಲಿನಲ್ಲಿ ಕನ್ನ ಕೊರೆದು ಕಳ್ಳ ನುಗ್ಗಿದ.

ವಿದೂಷಕ—(ಥಕ್ಕನೆ ಎದ್ದು) ಏನಂದೇ, ನೀನು?

(ಚೇಟಿ ತೋಟದ . . . ಎಂದು ಮುಂತಾಗಿ ಹೇಳುತ್ತಾಳೆ)

ವಿದೂಷಕ—ಕಳ್ಳ ಕೊರೆದು ಕನ್ನ ನುಗ್ಗಿದ!

ಚೇಟಿ—ಅಯ್ಯೋ, ಮಂಕಪ್ಪಾ! ಕನ್ನ ಕೊರೆದು ಕಳ್ಳ ನುಗ್ಗಿದ.

ವಿದೂಷಕ—ಬಾ, ತೋರಿಸು.

ಚೇಟಿ—(ಮುಂದೆ ಹೋಗಿ) ಇದು.

ವಿದೂಷಕ—ಅಯ್ಯಯ್ಯೋ, ನಾಯಿಬಡ್ಡೀಮಗ ನುಗ್ಗಿಯೇ ಬಿಟ್ಟಿದ್ದಾನೆ! ಅಮ್ಮಾ, ಬಾ. ಚಾರುದತ್ತನಿಗೆ ಪ್ರಿಯವಾರ್ತೆಯನ್ನು ತಿಳಿಸೋಣ. (ಇಬ್ಬರೂ ಹತ್ತಿರ ಹೋಗಿ) ಅಯ್ಯಾ, ಚಾರುದತ್ತ, ನಿನಗೊಂದು ಪ್ರಿಯವಾರ್ತೆಯನ್ನು ಹೇಳುತ್ತೇನೆ.

ನಾಯಕ—(ಎಚ್ಚತ್ತು) ಏನು ನನಗೆ ಪ್ರಿಯವಾರ್ತೆ? ವಸಂತಸೇನೆ ಬಂದಳೋ?

ವಿದೂಷಕ—ವಸಂತಸೇನೆ ಅಲ್ಲ, ವಸಂತಸೇನ ಬಂದ.

ನಾಯಕ—ರದನಿಕೇ, ಏನಿದು?

ರದನಿಕೆ—ಸ್ವಾಮಿ, ನಮ್ಮ ತೋಟದ ಪಕ್ಕಬಾಗಿಲಿನಲ್ಲಿ ಕನ್ನ ಕೊರೆದು ಕಳ್ಳ ನುಗ್ಗಿದ.

ನಾಯಕ—ಏನು, ಕಳ್ಳ ನುಗ್ಗಿದನೇ?

ವಿದೂಷಕ—ಅಯ್ಯಾ, ಮಿತ್ರ! ಸದಾ ನೀನು ಹೇಳುತ್ತಲೇ ಇರುತ್ತೀಯ, "ಮೈತ್ರೇಯ ಮೂರ್ಖ, ಮೈತ್ರೇಯ ದಡ್ಡ" ಎಂದು. ನಾನು ಆ ಬಂಗಾರದ ಪೆಟ್ಟಿಗೆಯನ್ನು ನಿನ್ನ ಕೈಯಲ್ಲಿ ಕೊಟ್ಟದ್ದು ಒಳ್ಳೆಯದೇ ಆಯಿತಲ್ಲವೇ?

ನಾಯಕ—ನೀನು ಕೊಟ್ಟೆಯಾ?

ವಿದೂಷಕ—ಸಂದೇಹವೇನು?

ನಾಯಕ—ಎಷ್ಟು ಹೊತ್ತಿನಲ್ಲಿ?

ವಿದೂಷಕ—ಅರ್ಧರಾತ್ರಿಯಲ್ಲಿ.

ನಾಯಕ—ಅರ್ಧರಾತ್ರಿಯಲ್ಲಿಯೇ? ನಿಜವಾಗಿಯೂ ಕೊಟ್ಟೆಯಾ?

ವಿದೂಷಕ—ಅಯ್ಯಾ ಚಾರುದತ್ತ, ನಿನಗೆ ಎಚ್ಚರವಾಗಿತ್ತಲ್ಲಾ ಆಗ ಕೊಟ್ಟೆ.

ನಾಯಕ—ಅಯ್ಯೋ, ಬಂಗಾರದ ಪೆಟ್ಟಿಗೆ ಕಳವಾಗಿ ಹೋಯಿತು!

ವಿದೂಷಕ—ಅಯ್ಯಾ, ಈಗ ನನ್ನ ಕೈಗೆ ಹಿಂದಿರುಗಿ ಕೊಟ್ಟುಬಿಡು.

ನಾಯಕ—(ತನ್ನಲ್ಲಿ)

ನಿಜವ ನಂಬುವರಾರು? ನನ್ನನೆ
ತೂಗುವರು ಜನರೆಲ್ಲರು.
ತಪ್ಪು ತೋರಲು ಶಂಕೆಗೆಡೆ ಈ
ಮಹಿಮೆಯಳಿದ ದರಿದ್ರತೆ. ||೧೫||

(ಪ್ರವೇಶಿಸಿ)

ಬ್ರಾಹ್ಮಣಿ—ರದನಿಕೇ, ರದನಿಕೇ, ಬಾ ಇಲ್ಲಿ. ಕೇಳುವುದೇ ಇಲ್ಲ! ಬಾಗಿಲು ಸದ್ದು ಮಾಡಿ ನೋಡುತ್ತೇನೆ. (ಹಾಗೆ ಮಾಡುತ್ತಾಳೆ)

ಚೇಟಿ—ಬಾಗಿಲು ಸದ್ದಾಗುವ ಹಾಗಿದೆ. ಅಮ್ಮಾವರು ನನ್ನನ್ನು ಕರೆಯುತ್ತಿದ್ದಾರೆ. (ಮುಂದೆ ಹೋಗಿ) ಅಮ್ಮಾ, ಇಗೋ ಬಂದಿದ್ದೇನೆ.

ಬ್ರಾಹ್ಮಣಿ—ಆರ್ಯಪುತ್ರನಿಗಾಗಲಿ, ಆರ್ಯ ಮೈತ್ರೇಯನಿಗಾಗಲಿ ಪೆಟ್ಟುಬಿದ್ದಿಲ್ಲ ತಾನೇ? ಕೊಂದುಹಾಕಿಲ್ಲ ತಾನೇ?

ಚೇಟಿ—ಕ್ಷೇಮವಾಗಿದ್ದಾರೆ ಸ್ವಾಮಿಯವರೂ ಆರ್ಯ ಮೈತ್ರೇಯನೂ. ಆಕೆಯ ಅಲಂಕಾರವಿತ್ತಲ್ಲ ಅದನ್ನು ಕಳ್ಳ ತೆಗೆದುಕೊಂಡು ಹೋಗಿದ್ದಾನೆ.

ಬ್ರಾಹ್ಮಣಿ—ಏನಂದೆ? ಕಳ್ಳ ತೆಗೆದುಕೊಂಡನೆಂದೆಯಾ?

ಚೇಟಿ—ಹೌದು.

ಬ್ರಾಹ್ಮಣಿ—ಆಕೆಗೆ ಏನು ಕೊಡಬೇಕಾಗುವುದೋ ಕಾಣೆ. ಅಥವಾ ಇದನ್ನು ಕೊಡುತ್ತೇನೆ. (ಕಿವಿಗಳನ್ನು ಮುಟ್ಟಿಕೊಂಡು) ಅಯ್ಯೋ, ಇದು ಬರಿ ಬಿಚ್ಚೋಲೆ. ಆ ಅಭ್ಯಾಸ ಈಗ ನನ್ನನ್ನು ಹಾಸ್ಯ (ಕ್ಕೆ ಗುರಿ) ಮಾಡುತ್ತಿದೆ. ಈಗೇನು ಮಾಡಲಿ? (ಯೋಚಿಸಿ) ಆಗಲಿ, ತಿಳಿಯಿತು. ನಮ್ಮ ತವರುಮನೆಯಿಂದ ಬಂದದ್ದು ನೂರು ಸಾವಿರ ಬೆಲೆಬಾಳುವ ಮುತ್ತಿನ ಸರವಿದೆ. ಅದನ್ನಾದರೂ ಆರ್ಯಪುತ್ರನು ಸ್ವಾಭಿಮಾನಿಯಾದ್ದರಿಂದ ಪರಿಗ್ರಹಿಸಿಯಾನೇ! ಆಗಲಿ, ಹೀಗೆ ಮಾಡಿಬಿಡುತ್ತೇನೆ. (ಹೋಗುತ್ತಾಳೆ)

ವಿದೂಷಕ—ಕತ್ತಲೆಯಲ್ಲಿ ಮಾಡಿದ ಈ ತಪ್ಪಿಗಾಗಿ ನಿನಗೆ ತಲೆ ಬಗ್ಗಿ ನಮಸ್ಕಾರ ಮಾಡಿ ಕ್ಷಮೆ ಬೇಡುತ್ತೇನೆ. ಈಗ ನನ್ನ ಕೈಗೆ ಕೊಟ್ಟುಬಿಡು.

ನಾಯಕ—ಹೀಗೇಕೆ ನೀನು ನನ್ನನ್ನು ಪೀಡಿಸುತ್ತೀಯೆ?

ಅನುದಿನದಲೆನ್ನ ಶೀಲವನೆಲ್ಲ ಬಲ್ಲವನು
ನೀನೆನ್ನ ನಂಬದಿರುವೆ.
ಅವಳೆಂತು ನಂಬುವಳು, ಕಲೆಯಿಂದ ಜೀವಿಪಳು,
ವಂಚನೆಗೆ ನುರಿತಿರುವಳು ? ||೧೬||

ವಿದೂಷಕ—ಮಂದಭಾಗ್ಯನಾದ ನಾನು ಕಳ್ಳನ ಕೈಗೆ ಕೊಟ್ಟುಬಿಟ್ಟೆನೆಂದು ತೋರುತ್ತದೆ. (ಪೆಚ್ಚಾಗಿ ನಿಲ್ಲುತ್ತಾನೆ)

(ಪ್ರವೇಶಿಸಿ)

ಬ್ರಾಹ್ಮಣಿ—ರದನಿಕೇ, ಆರ್ಯ ಮೈತ್ರೇಯನನ್ನು ಸ್ವಲ್ಪ ಕರೆ.

ಚೇಟಿ—ಆರ್ಯ ಮೈತ್ರೇಯ, ಅಮ್ಮಾವರು ನಿಮ್ಮನ್ನು ಕರೆಯುತ್ತಾರೆ.

ವಿದೂಷಕ—ಅಮ್ಮಾ, ಏನು ನನ್ನನ್ನೇ ?

ಚೇಟಿ—ಹೌದು.

ವಿದೂಷಕ—ಇಗೋ ಬಂದೆ. (ಹತ್ತಿರ ಹೋಗುತ್ತಾನೆ)

ಬ್ರಾಹ್ಮಣಿ—ಆರ್ಯ ಮೈತ್ರೇಯ, ಈ ದಾನವನ್ನು ಸ್ವೀಕರಿಸಬೇಕು.

ವಿದೂಷಕ—ಈಗಿನ ಅವಸ್ಥೆಗೆ ವಿರೋಧವಾಗಿದೆಯಲ್ಲಾ, ಈ ದಾನದ ಸಡಗರ! ಏಕೆ ಬಂತು ಈ ದಾನ ?

ಬ್ರಾಹ್ಮಣಿ—ಷಷ್ಠಿಯ ದಿನ ಉಪವಾಸಮಾಡುತ್ತೇನಷ್ಟೆ. ಸರ್ವಶ್ರೇಷ್ಠವಾದ ವಸ್ತುವನ್ನು ಕೊಟ್ಟು ಬ್ರಾಹ್ಮಣನಿಂದ ಸ್ವಸ್ತಿವಾಚನ ಮಾಡಿಸಿಕೊಳ್ಳಬೇಕೆಂದು ಈ ದಾನವನ್ನು ತಂದೆ.

ವಿದೂಷಕ—ಇವತ್ತು ಅಷ್ಟಮಿಯಲ್ಲಾ !

ಬ್ರಾಹ್ಮಣಿ—ಮರೆತು ಬಿಟ್ಟಿರಿ. ಇವತ್ತು ಪೂಜೆ ನಡೆಯುತ್ತದೆ.

ವಿದೂಷಕ—ದಾನ (ಈಗಿನ ಅವಸ್ಥೆಗೆ) ಅನುರೂಪವಲ್ಲವಾದ್ದರಿಂದ ಮರುಕವೇ ಕಾರಣವಾಗಿರಬೇಕು ಎಂದು ತೋರುತ್ತದೆ. (ಇತರರಿಗೆ ಕೇಳಿಸದಂತೆ) ರದನಿಕೇ, ಏನು ಮಾಡಲಿ ?

ಚೇಟಿ—(ಇತರರಿಗೆ ಕೇಳಿಸದಂತೆ) ಆಕೆಗೆ ಏನು ಕೊಡಬೇಕಾಗುವುದೋ ಎಂಬ ಈ ಕಾರಣದಿಂದ ಯಜಮಾನರು ಸಂಕಟಪಡುವರೆಂದು ಅಮ್ಮಾವರು (ಇದನ್ನು) "ನಿಮ್ಮ ಕೈಯಲ್ಲಿ ಕೊಟ್ಟು ಆರ್ಯಪುತ್ರನನ್ನು ಋಣಮುಕ್ತನನ್ನಾಗಿ ಮಾಡುತ್ತೇನೆ" ಎಂದುಕೊಂಡು ಹೀಗೆ ಮಾಡುತ್ತಾರೆ. ಆದ್ದರಿಂದ ತೆಗೆದುಕೊಳ್ಳಿ ಇದನ್ನು.

ಬ್ರಾಹ್ಮಣಿ—ಮುಕ್ತಾವಳಿ ನೀರಿನಲ್ಲಿ ಹುಟ್ಟಿ (ದುರ್ಲಭವಾ)ದ್ದರಿಂದಲೂ (ಸಕಾಲದಲ್ಲಿ) ನೀವು ಸಿಕ್ಕದೆ ಹೋದ್ದರಿಂದಲೂ ದಾನ ಮರೆತುಹೋಯಿತು. ತೆಗೆದುಕೊಳ್ಳಿ ಇದನ್ನು. (ಕೊಡುತ್ತಾಳೆ)

ವಿದೂಷಕ—(ತೆಗೆದುಕೊಂಡು) ಅದೆಲ್ಲ ಇರಲಿ. ಅಳುತ್ತಿರುವಂತೆ ಕಾಣುವುದಲ್ಲಾ ನಿಮ್ಮ ಕಣ್ಣು ?

ಬ್ರಾಹ್ಮಣಿ—ದೇವರ ಮನೆಯ ಹೊಗೆಯಿಂದ ನೀರು ಸುರಿಯುತ್ತಿದೆ.

ವಿದೂಷಕ—ಪೂಜ್ಯ ಚಾರುದತ್ತನ ಮೇಲಿನ ಆಣೆ, ಸುಳ್ಳು ಹೇಳಿದರೆ.

ಬ್ರಾಹ್ಮಣಿ—ಅಯ್ಯೋ ! (ಹೋಗುತ್ತಾಳೆ)

ವಿದೂಷಕ—ಈಕೆ ಮಾತಿನಲ್ಲಿ ದುಃಖವನ್ನು ಹೊರಗೆಡವದೆ (ಅಡಗಿಸಿಕೊಂಡು) ಕಣ್ಣೀರಿನಿಂದ ಸೂಚಿಸಿ ಹೊರಟುಹೋದಳು. (ಹತ್ತಿರ ಹೋಗಿ) ಅಯ್ಯಾ, ಇದು.

ನಾಯಕ—ಏನಿದು ?

ವಿದೂಷಕ—ತಕ್ಕ ಕುಲದ ಹೆಣ್ಣು ತಂದದ್ದರ ಫಲ.

ನಾಯಕ—ಬ್ರಾಹ್ಮಣಿ ನನ್ನಲ್ಲಿ ಅನುಕಂಪ ತೋರಿಸುವಳೇ ?

ವಿದೂಷಕ—ಇದು ಹೀಗೆ.

ನಾಯಕ—ಅಯ್ಯೋ, ನನ್ನ ಬಾಳೇ ! ಈಗ ನಾನು ಸತ್ತೆ.

ಹಣ ಹೋಗಿ ನಾ ಕುಗ್ಗಲು,
ಮರುಗಿ ಸ್ತ್ರೀ ಧನವಿತ್ತಳು.
ಹಣವಿರದ ಗಂಡು ಹೆಣ್ಣು.
ಹಣವಿರಲು ಹೆಣ್ಣೆ ಗಂಡು. ||೧೭||

ವಿದೂಷಕ—ಪೂಜ್ಯಳು ಪ್ರೀತಿಯಿಂದ ನಿನ್ನನ್ನು ಬೇಡುತ್ತಾಳೆ. ನಾನು ತಲೆಬಾಗಿ ಬೇಡುತ್ತೇನೆ. ತೆಗೆದುಕೊ ಇದನ್ನು.

ನಾಯಕ—ಹಾಗೇ ಆಗಲಿ. (ತೆಗೆದುಕೊಂಡು) ಮಿತ್ರ, ಈ ಮುತ್ತಿನ ಸರವನ್ನು ತೆಗೆದುಕೊಂಡು ವಸಂತಸೇನೆಯ ಬಳಿಗೆ ಹೋಗು.

(ಗಳಿಸಿದ್ದ) ಧನಗಳನು ಬಯಸಿದಂತನುಭವಿಸಿ
ಮನವೆಳಸುತಿಹುದು ಸ್ತ್ರೀಧನವನನುಚಿತವಾಗಿ.
ಮಾನದಲು ಕರ್ತವ್ಯಕಾರ್ಯದಲು ತಳುವಿದೆನು.
ಅಯ್ಯೋ ನನ್ನಾ ಕುಲವೆ ! ಹಾಳು ಬಡತನದ ಬಾಳೇ ! ||೧೮||

ವಿದೂಷಕ—ಆಹಾ! ಅಲ್ಪ ಬೆಲೆಯ ಬಂಗಾರದ ಪೆಟ್ಟಿಗೆಗಾಗಿ ಸೂರು ಸಾವಿರದ ಬೆಲೆಯುಳ್ಳ ಮುತ್ತಿನ ಸರವನ್ನು ಕೊಡಬೇಕಾಗಿ ಬಂತೇ!

ನಾಯಕ—ಮಿತ್ರ, ಹಾಗೆನ್ನಬೇಡ.

ಯಾವ ನಂಬುಗೆ ನೋಡಿ ನಮ್ಮಲ್ಲಿಗವಳು ತಂ
ದಿಟ್ಟಳೋ ನ್ಯಾಸವಿದನು,
ಆ ದೊಡ್ಡ ಸಂಬುಗೆಗೆ ಬೆಲೆಯಾಗಿ ಕೊಡುವುದೈ
(ಬಹು ಬೆಲೆಯ) ಹಾರವಿದನು. ||೧೯||

(ಎಲ್ಲರೂ ಹೋಗುತ್ತಾರೆ)

ಮೂರನೆಯ ಅಂಕ ಮುಗಿಯಿತು.

ನಾಲ್ಕನೆಯ ಅಂಕ

(ಬಳಿಕ ಉತ್ಕಂಠಿತಳಾದ ವಸಂತಸೇನೆಯೂ ಚಿತ್ರದ ಹಲಗೆಯನ್ನು ತೆಗೆದುಕೊಂಡು ಕುಂಚದ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದ ಚೇಟಿಯೂ ಪ್ರವೇಶಿಸುತ್ತಾರೆ)

ಸೂಳೆ—ಹಂಜೇ, ಆತನ ಹಾಗೆಯೇ ಕಾಣುವುದಲ್ಲವೇ?

ಚೇಟಿ—ಅಜ್ಜುಕೇ, ಆನೆ ತುಳಿತದ ಆ ಕೋಲಾಹಲದಲ್ಲಿ ಬಹುವಾಸದಿಂದ ಕಣ್ಣು ತಗ್ಗಿಸಿ ದೂರದಿಂದಲೇ ಆತನನ್ನು ನೋಡಿದ್ದೆ; ಹೀಗೆಯೇ ಇದ್ದಾನೆ.

ಸೂಳೆ—ನೀನೋ, "ಸೂಳೆಗೇರಿಯ ಜನ ದಾಕ್ಷಿಣ್ಯಪರರು" ಎಂಬ ಜನವಾದವನ್ನು ದಿಟಮಾಡುತ್ತಾ ಸುಳ್ಳು ಹೇಳುತ್ತೀಯೆ.

ಚೇಟಿ—ಸೂಳೆಗೇರಿಯ ಜನಗಳೆಲ್ಲರೂ ದಾಕ್ಷಿಣ್ಯಪರರೇ ಆಗಿಬಿಡುತ್ತಾರೆ ಎಂತಲೇ? ಅಜ್ಜುಕೇ, ನೋಡು, ಸಂಪಗೆಯ ತೋಟದಲ್ಲಿ ಬೇವಿನ ಮರಗಳೂ ಹುಟ್ಟುತ್ತವೆ. ಬಹಳವಾಗಿ ಹೋಲುತ್ತಿದೆಯೆಂದು ನನ್ನ ಮನಸ್ಸು ಮೆಚ್ಚುತ್ತಿದೆ. ನಿಜವಾಗಿಯೂ ಪ್ರಶಂಸೆಮಾಡುತ್ತಿದ್ದೇನೆ. ಕಾಮದೇವನೇ ಎನ್ನಬಹುದು.

ಸೂಳೆ—ಹಂಜೇ, ಗೆಳತಿಯರ ಅಪಹಾಸ್ಯಕ್ಕೆ ಗುರಿಯಾಗದಂತೆ ತಪ್ಪಿಸಿಕೊಳ್ಳುತ್ತೇನೆ.

ಚೇಟಿ—ಇದು ಒಪ್ಪತಕ್ಕದ್ದೇ, ಸೂಳೆಯರಿಗೆ ಗೆಳತಿಯರೇ ಸವತಿಯರು.

(ಬಳಿಕ ಕೈಯಲ್ಲಿ ಒಡವೆಗಳನ್ನು ಹಿಡಿದುಕೊಂಡು ಮತ್ತೊಬ್ಬ ಚೇಟಿ ಪ್ರವೇಶಿಸುತ್ತಾಳೆ)

ಚೇಟಿ—ಅಜ್ಜುಕೆಗೆ ಸುಖವಾಗಲಿ.

ಸೂಳೆ—ಹಂಜೇ, ನಿನಗೆ ಸ್ವಾಗತ.

ಚೇಟಿ—ಅಜ್ಜುಕೇ, ಅತ್ತೆ ಅಪ್ಪಣೆಮಾಡಿದರು—"ಪದ್ಮಾಕಾರದ ಬಂಡಿ ಹಿಂದಿರುಗಿ ಈಗ ಬಾಗಿಲೊಳಕ್ಕೆ ಬಂದಿದೆ. ಆದ್ದರಿಂದ ಒಡವೆಗಳನ್ನಿಟ್ಟುಕೊಂಡು ಅವಕುಂಠನವನ್ನು ತೆಗೆದುಕೊಂಡು ಬೇಗ ಬಾ" ಎಂದು. ಅಜ್ಜುಕೇ, ಈ ಅಲಂಕಾರಗಳಿಂದ ಶೃಂಗಾರಮಾಡಿಕೊಳ್ಳಬೇಕು.

ಸೂಳೆ—ಆರ್ಯ ಚಾರುದತ್ತನು ಅಲಂಕಾರಿಸುತ್ತಿರುವನೇ ?

ಚೇಟಿ—ಇಲ್ಲ. ಅಲಂಕಾರ ಕಳುಹಿಸಿದವನು ದೊರೆಯ ಭಾವ, ಸಂಸ್ಥಾನಕ.

ಸೂಳೆ—ತೊಲಗತ್ತ, ಅವಿನೀತೆ.

ಚೇಟಿ—ಕ್ಷಮಿಸಬೇಕು, ಅಜ್ಜುಕೇ, ಕ್ಷಮಿಸಬೇಕು. ಹೇಳಿಕಳುಹಿಸಿದ್ದನ್ನು ಮಾತ್ರ ತಿಳಿಸುತ್ತಿದ್ದೇನೆ, ನಾನು. (ಕಾಲಿಗೆ ಬೀಳುತ್ತಾಳೆ)

ಸೂಳೆ—ಏಳು, ಏಳು. ಈ ಹಾಳು ಸಂದೇಶದಿಂದ ಕೋಪವೇ ಹೊರತು ನಿನ್ನ ಮೇಲಲ್ಲ.

ಚೇಟಿ—ಅತ್ತೆಗೆ ನಾನೇನು ಹೇಳಲಿ ?

ಸೂಳೆ—ಅತ್ತೆಗೆ ಹೇಳು—"ಯಾವಾಗ ಆರ್ಯ ಚಾರುದತ್ತನ ಬಳಿಗೆ ಅಭಿಸಾರ ಮಾಡಬೇಕೋ ಆಗ ಅಲಂಕಾರ ಮಾಡಿಕೊಳ್ಳುತ್ತೇನೆ" ಎಂದು.

ಚೇಟಿ—ಹಾಗೆಯೇ ಆಗಲಿ. (ಹೋಗುತ್ತಾಳೆ)

(ಬಳಿಕ ಸಜ್ಜಲಕನು ಪ್ರವೇಶಿಸುತ್ತಾನೆ)

ಸಜ್ಜಲಕ—

ನಿಶೆಯಲ್ಲಿ ಪಳಿತರುವ ತಪ್ಪ ತಾನೆಸಗಿ,
ನಿದ್ದೆಯನು ಕತ್ತಲೆಯನಂಜಿಕೆಯನುಳಿದು,
ನೇಸರುದಿಸಿರಲು ಮೆಲುಮೆಲನೆ ಬಲಗುಂದಿ,
ಹಗಲ ಚಂದ್ರನ ಹಾಗೆ ಬೆದರುವೆನು ನಾನು. ||೧||

ಸದ್ಯ, ಕೆಲಸ ಮುಗಿದಮೇಲೆ ಬೆಳಗಾಯಿತು. ಈಗ ವಸಂತಸೇನೆಯ ಪರಿಚಾರಿಕೆ ಮದನಿಕೆಯ ದಾಸ್ಯ ಬಿಡಿಸಲು ಕೊಡಬೇಕಾದ ಬಿಡುಗಡೆಯ ಹಣಕ್ಕಾಗಿ ನಾನು ಇದನ್ನು ಮಾಡಿದೆ. (ಮುಂದೆ ಹೋಗಿ) ಇದು ವಸಂತ ಸೇನೆಯ ಮನೆ. ಒಳಗೆ ಹೋಗುತ್ತೇನೆ. (ಒಳಹೊಕ್ಕು) ಮದನಿಕೆ ಒಳಗೇ ಇದ್ದಾಳಲ್ಲವೇ ? ಅಥವಾ ಬೆಳಗಿನ ಹೊತ್ತು ಸೂಳೆಯರು ಒಳಗೇ ಇರುತ್ತಾರಷ್ಟೆ. ಆದ್ದರಿಂದ ಅವಳೂ ಅಲ್ಲಿಯೇ ಇರಬೇಕು. ಕೂಗಿ ನೋಡುತ್ತೇನೆ. ಮದನಿಕೇ, ಮದನಿಕೇ !

ಚೇಟಿ—(ಆಲಿಸಿ) ಸಜ್ಜಲಕನ ಹಾಗಿದೆ, ದನಿ! ಅಜ್ಜುಕೆ ಕೆಲಸದಲ್ಲಿದ್ದಾಳೆ. ಆದ್ದರಿಂದ ಅವನ ಬಳಿ ಹೋಗುತ್ತೇನೆ. (ಹತ್ತಿರ ಹೋಗಿ) ಇಗೋ ಬಂದಿದ್ದೇನೆ.

ಸಜ್ಜಲಕ—ಇಲ್ಲಿ ಬಾ ಸ್ವಲ್ಪ.

ಚೇಟಿ—ಅದೇಕೆ, ನೀನು ಬೆದರಿದವನಂತೆ ಕಾಣುವೆಯಲ್ಲಾ!

ಸಜ್ಜಲಕ—ಇಲ್ಲ, ಇಲ್ಲ. ಏನೋ ಒಂದು ಮಾತು ಹೇಳಬೇಕೆಂದಿದ್ದೇನೆ.

ಸೂಳೆ—ಹಂಜೀ, ಈ ಚಿತ್ರಫಲಕವನ್ನು ಸೆಜ್ಜೆಯಲ್ಲಿಡು. (ನೋಡಿ) ಎಲ್ಲಿ ಹೋದಳು, ಈ ಹಾಳಾದವಳು? ಅಥವಾ ಇಲ್ಲಿಯೇ ಎಲ್ಲಿಯೋ ಹತ್ತಿರದಲ್ಲೇ ಇರಬಹುದು. ಅವಳೆಲ್ಲಿದ್ದಾಳೋ ನೋಡುತ್ತೇನೆ. (ಮುಂದೆ ನಡೆದು, ಸುತ್ತಲೂ ನೋಡಿ) ಅಮ್ಮಮ್ಮಾ! ಇವಳು ಅತಿ ಸ್ನೇಹಗೊಂಡ ದೃಷ್ಟಿಯಿಂದ ಯಾವನೋ ಒಬ್ಬ ಮನುಷ್ಯನನ್ನು ಹೀರಿಬಿಡುವಳೋ ಎಂಬಂತೆ (ನೋಡುತ್ತಾ) ಅವನ ಸಂಗಡ ಮಾತಾಡುತ್ತ ನಿಂತಿದ್ದಾಳೆ. ಏನಾದರೂ ಬೆಲೆ ಕೊಟ್ಟು ನನ್ನನ್ನು ಕೇಳಿಕೊಳ್ಳುವವನು ಇವನೇ ಎಂದು ತೋರುತ್ತದೆ.

ಸಜ್ಜಲಕ—ಗುಟ್ಟು (ಹೇಳುತ್ತೇನೆ), ಕೇಳು.

ಸೂಳೆ—ಮತ್ತೊಬ್ಬರ ಗುಟ್ಟು ಕೇಳುವುದು ಸರಿಯಲ್ಲ. ನಾನು ಹೋಗುತ್ತೇನೆ.

ಸಜ್ಜಲಕ—ವಸಂತಸೇನೆಯೇನಾದರೂ . . . (ಎಂದು ಅರ್ಧ ಮಾತಿನಲ್ಲೇ ನಿಲ್ಲಿಸುತ್ತಾನೆ)

ಸೂಳೆ—ನನ್ನ ವಿಷಯವೇ ಬಂದಿದೆ, ಇವರ ಮಾತಿನಲ್ಲಿ. ಆಗಲಿ, ಮುಂದೇನು ಆಡುತ್ತಾರೋ ಕೇಳುತ್ತೇನೆ. (ಮತ್ತೆ ಹಿಂದಕ್ಕೆ ಬಂದು ನಿಲ್ಲುತ್ತಾಳೆ)

ಸಜ್ಜಲಕ—ನಿನ್ನನ್ನು ಬಿಟ್ಟುಕೊಡುತ್ತಾಳೆಯೇ, ಬಿಡುಗಡೆಯ ಹಣವನ್ನು ತೆಗೆದುಕೊಂಡು?

ಸೂಳೆ—ಅವನೇ ಇವನು. ಆಗಲಿ, ಕೇಳೋಣ.

ಚೇಟಿ—ಸಜ್ಜಲಕ, ನನ್ನನ್ನು ಕೊಡುವುದಾಗಿ ಮೊದಲೇ ಅಜ್ಜುಕೆ ಹೇಳಿಬಿಟ್ಟಿದ್ದಾಳೆ.

ಸಜ್ಜಲಕ—ಹಾಗಾದರೆ, ಇದನ್ನವಳಿಗೆ ಕೊಡು. ಕೊಡುವಾಗ ಹೀಗೆ ಹೇಳು—

ಇದು ನಿನ್ನ ಮೈಯಳತೆಗೆನೆ ಮಾಡಿದಂತಿಹುದು.
ಈ ಅಲಂಕಾರವನು ತೋರಬಾರದು ಹೊರಗೆ.
ನನ್ನೊಲವಿಗಾಗಿ ತೊಡಬೇಕು ನೀನೆಂದು. ||೨||

ಚೇಟಿ—ಎಲ್ಲಿ ನೋಡೋಣ.

ಸಜ್ಜಲಕ—ತೆಗೆದುಕೊ. (ತೋರಿಸುತ್ತಾನೆ)

ಚೇಟಿ—ಹಿಂದೆ ನೋಡಿದ ಹಾಗಿದೆ, ಈ ಅಲಂಕಾರ.

ಸೂಳೆ—ನನ್ನದರ ಹಾಗೆಯೇ ಇದೆ, ಈ ಅಲಂಕಾರ.

ಚೇಟಿ—ಹೇಳು, ಹೇಳು, ಇದು ಹೇಗೆ ನಿನ್ನ ಕೈಗೆ ಬಂತು?

ಸಜ್ಜಲಕ—ನಿನ್ನ ಮೇಲಿನ ಪ್ರೀತಿಯಿಂದ ಒಂದು ಸಾಹಸ (ಕಾರ್ಯ) ಮಾಡಿದೆ.

ಇಬ್ಬರೂ—ಹಾಂ! ಸಾಹಸಗಾರ!

ಚೇಟಿ—(ತನ್ನಲ್ಲಿಯೇ) ಆಃ! ಅಜ್ಜುಕೆಯದೇ ಇದು. ಕೃತ್ಯದ ಕ್ರೂರತನದಿಂದ ಇವನ ಆಕೃತಿ ಕಳವಳಕ್ಕೆ ಕಾರಣವಾಗಿದೆ. (ಪ್ರಕಾಶವಾಗಿ) ಅಯ್ಯೋ! ಎಂಥ ಅನ್ಯಾಯ! ನನಗೋಸ್ಕರ ಎರಡನ್ನೂ ಅಪಾಯಕ್ಕೆ ಗುರಿಮಾಡಿದೆ—ನಿನ್ನ ಶರೀರ, ನಡತೆ, ಎರಡನ್ನೂ.

ಸಜ್ಜಲಕ—ಹುಚ್ಚೀ, ಸಾಹಸದಲ್ಲಿಯೇ ಅಲ್ಲವೇ, ಲಕ್ಷ್ಮಿ ನೆಲಸಿರುವುದು?

ಚೇಟಿ—ನಿನಗೆ ಬುದ್ಧಿಯಿಲ್ಲ. ಯಾರುತಾನೇ ಜೀವವನ್ನು ಕೊಟ್ಟು ಶರೀರವನ್ನು ಕೊಳ್ಳುತ್ತಾರೆ? ಯಾರ ಮನೆಯಲ್ಲಿ ಈ ನಂಬಿಕೆ ದ್ರೋಹಮಾಡಿದೆ?

ಸಜ್ಜಲಕ—ಬೆಳಗ್ಗೆ ನಾನು ಕೇಳಿದ್ದರಲ್ಲಿ, ಸೆಟ್ಟರ ಚೌಕದಲ್ಲಿ ವರ್ತಕಪುತ್ರ ಚಾರುದತ್ತನೆಂಬವನಿದ್ದಾನೆ.

ಇಬ್ಬರೂ—ಹಂ!

ಸಜ್ಜಲಕ—ಏನಿದು?

> ಸಂಕಟದಿ ಸರ್ವಾಂಗ ಸಡಲಿ,
> ಕಳವಳದಿ ಕಣ್ಣು ಬಿರಿದರಳಿ,
> ಕಣೆನಟ್ಟ ಮೈಯ ಮೃಗಿಯಂತೆ
> ನಡುಗುತಿಹೆ, ಮರುಗುತಿಹೆ ಅಂತೆ. ||೩||

ಚೇಟಿ—ಸತ್ಯವಾಗಿ ಹೇಳು. ಸಾಹುಕಾರರ ಮನೆಯಲ್ಲಿ ಸಾಹಸಮಾಡುವಾಗ ಯಾವನಾದರೂ ಕುಲಪುತ್ರನನ್ನು ಶಸ್ತ್ರದಿಂದ ಗಾಯಗೊಳಿಸಿದೆಯಾ? ಅಥವಾ ಕೊಂದುಬಿಟ್ಟೆಯೋ?

ಸೂಳೆ—ಸರಿ. ನಾನು ಕೇಳಬೇಕಾಗಿದ್ದದ್ದನ್ನೇ ಇವಳು ಕೇಳಿದಳು.

ಸಜ್ಜಲಕ—ಮದನಿಕೇ, ಇಷ್ಟು ಸಾಲದೇ? ಮತ್ತೂ ಒಂದು ಕೆಟ್ಟಕೆಲಸ ಮಾಡಲೇ? ಅಲ್ಲಿ ಯಾರನ್ನೂ ಶಸ್ತ್ರದಿಂದ ಗಾಯಗೊಳಿಸಲಿಲ್ಲ; ಸಾಯಿಸಲೂ ಇಲ್ಲ.

ಚೇಟಿ—ಸಜ್ಜಲಕ, ನಿಜವೋ?

ಸಜ್ಜಲಕ—ನಿಜ.

ಚೇಟಿ—ಒಳ್ಳೆಯದು, ಸಜ್ಜಲಕ! ನನಗೆ ಸಂತೋಷವಾಯಿತು.

ಸಜ್ಜಲಕ—ಏನು, ಏನು, ಸಂತೋಷವಾಯಿತೇ? ಹೀಗೋ, ಮದನಿಕೇ!

ನಿನ್ನೊಲವಿಗೆದೆಗೊಟ್ಟು ಮಾಡಿದೆನಕಾರ್ಯವನು
ತಣಿದ ಹಿರಿಯರ ಮಗನು, ಸತ್ಕುಲದಿ ಹುಟ್ಟಿದವನು ;
ಹಿಡಿದಿಹೆನು ಮನ್ಮಥನ ಕೈಗೆ ಬಿದ್ದೀ ಮೈಯು.
ಮಿತ್ರನೆನ್ನುವೆ ಎನ್ನನ್, ಇನ್ನೊರ್ವನೆಡೆಗೆ ನಡೆವೆ! ||೪||

ಚೇಟಿ—ಸಜ್ಜಲಕ, ಕೇಳು. ಅಜ್ಜುಕೆಯದು ಈ ಅಲಂಕಾರ. (ಕಿವಿಯಲ್ಲಿ) ಹೀಗಾಯಿತು.

ಸಜ್ಜಲಕ—ಹೀಗೋ ?

ಅರಿಯದೆಯೆ ನಾ ಮೊದಲದಾವ ಕೊಂಬೆಯಲೆಲೆಯ
ನುದುರಿಸಿದೆನೋ,
ಅದನೆ ಮತ್ತಾಶ್ರಯಿಸಬಂದಿಹೆನು ಬೇಸಗೆಯ
ಬೇಗೆಯಲಿ ಬೆಂದು. ||೫||

ಸೂಳೆ—ಇದರಿಂದ ಮಾಡಬಾರದ್ದನ್ನು ಮಾಡಿದೆನೆಂದು (ಅವನು) ಸಂಕಟಪಡುತ್ತಿರುವ ಹಾಗೆ ತೋರುತ್ತದೆ.

ಸಜ್ಜಲಕ—ಮದನಿಕೇ, ಹಾಗಾದರೆ (ಈಗ) ಏನು ಮಾಡಬೇಕು ?

ಚೇಟಿ—ಅಲ್ಲಿಯೇ ಕೊಟ್ಟು ಬಂದುಬಿಡು. ಇದನ್ನು ಅಜ್ಜುಕೆ ತೊಟ್ಟುಕೊಳ್ಳುವುದಿಲ್ಲ.

ಸಜ್ಜಲಕ—ಈಗ ಅವನು ಕೋಪದಿಂದ ಕಳ್ಳನೆಂದು ನನ್ನನ್ನು ಕಾಪಿನವರಿಗೆ ಹಿಡಿದು ಕೊಟ್ಟುಬಿಟ್ಟರೆ ಏನು ಮಾಡಲಿ ?

ಚೇಟಿ—ಹೆದರಬೇಡ, ಹೆದರಬೇಡ. ಆ ಕುಲಪುತ್ರನು ಗುಣಕ್ಕೆ ಮೆಚ್ಚುತ್ತಾನೆ.

ಸೂಳೆ—ಸಾಧು, ಭದ್ರೇ, ಸಾಧು. ನಿನ್ನಲ್ಲೇನೂ ತಪ್ಪಿಲ್ಲ. ಈ ಮಾತು ನಿನಗೆ ಅಲಂಕಾರವಾಗಿದೆ.

ಸಜ್ಜಲಕ—ಖಂಡಿತ ನನ್ನ ಕೈಲಾಗುವುದಿಲ್ಲ ಅಲ್ಲಿ ಹೋಗುವುದಕ್ಕೆ.

ಚೇಟಿ—ಇದಿನ್ನೊಂದು ಉಪಾಯ.

ಸೂಳೆ—ಇವು ಗುಣಗಳು, ಸೂಳೆಗೇರಿಗೆ.

ಸಜ್ಜಲಕ—ಯಾವುದು, ಬೇರೆ ಉಪಾಯ ?

ಚೇಟಿ—ಅಜ್ಜುಕೆಯಾಗಲಿ ವರ್ತಕಪುತ್ರನಾಗಲಿ ನಿನ್ನನ್ನು ನೋಡಿ ಗುರುತಿಸಬಲ್ಲರೇ ?

ಸಜ್ಜಲಕ—ಇಲ್ಲ.

ಚೇಟಿ—ಹಾಗಾದರೆ, ಈ ಅಲಂಕಾರವನ್ನು ಆ ವರ್ತಕಪುತ್ರನು ಹೇಳಿದನೆಂದು ಅಜ್ಜುಕೆಗೆ ಕೊಟ್ಟುಬಿಡು. ಹೀಗೆ ಮಾಡಿದರೆ ನಿನಗೂ ತೊಂದರೆಯಿಲ್ಲ,

ಆ ಆರ್ಯನೂ ದುಃಖಿತನಾಗುವುದಿಲ್ಲ. ನಾನೂ ನೊಂದುಕೊಳ್ಳುವಂತಾಗು ವುದಿಲ್ಲ. ಹಾಗಲ್ಲದೆ ಅಜ್ಜುಕೆಯನ್ನು ಮತ್ತೆ ವಂಚಿಸಿದರೆ ಮತ್ತೆ ದಾಸ್ಯವೇ ಸಿದ್ಧ.

ಸಜ್ಜಲಕ—ಮದನಿಕೇ, ಒಪ್ಪಿದೆ.

ಸೂಳೆ—ಆಗಲಿ, ಒಳಕ್ಕೆ ಹೋಗಿ ಕೂತುಕೊಳ್ಳುತ್ತೇನೆ. (ಹಾಗೆ ಮಾಡುತ್ತಾಳೆ)

ಚೇಟಿ—ಸಜ್ಜಲಕ, ಬಾ. ಕಾಮದೇವನ ಗುಡಿಯಲ್ಲಿ ನನ್ನನ್ನು ನಿರೀಕ್ಷಿಸುತ್ತಿರು. ನಾನು ಸಮಯ ನೋಡಿಕೊಂಡು ಅಜ್ಜುಕೆಗೆ ಹೇಳುತ್ತೇನೆ.

ಸಜ್ಜಲಕ—ಆಗಬಹುದು. (ಹೋಗುತ್ತಾನೆ)

(ಬಳಿಕ ಬೇರೊಬ್ಬ ಚೇಟಿ ಪ್ರವೇಶಿಸುತ್ತಾಳೆ)

ಚೇಟಿ—ಅಜ್ಜುಕೆಗೆ ಸುಖವಾಗಲಿ; ವರ್ತಕಪುತ್ರನ ಬಳಿಯಿಂದ ಒಬ್ಬಾನೊಬ್ಬ ಬ್ರಾಹ್ಮಣ ಬಂದಿದ್ದಾನೆ ನಿಮ್ಮನ್ನು ನೋಡುವುದಕ್ಕೆ.

ಸೂಳೆ—(ಆದರದಿಂದ) ಹೋಗು, ಬೇಗ ಕರೆದುಕೊಂಡು ಬಾ ಆತನನ್ನು.

ಚೇಟಿ—ಹಾಗೆಯೇ ಆಗಲಿ. (ಹತ್ತಿರ ಹೋಗಿ) ದಯಮಾಡಿಸಬೇಕು, ಸ್ವಾಮಿ ಯವರು ದಯಮಾಡಿಸಬೇಕು.

(ಪ್ರವೇಶಿಸಿ)

ವಿದೂಷಕ—(ಸುತ್ತಲೂ ನೋಡಿ) ಅಬ್ಬಾ! ಈ ಸೂಳೆಯ ಮನೆ ಎಷ್ಟು ಸೊಗಸಾಗಿದೆ! [21]ನಾನಾ ಪಟ್ಟಣಗಳಿಂದ ಬಂದಿರುವ ಆಗಂತುಕರು ಪುಸ್ತಕಗಳನ್ನು ಓದು ತ್ತಿದ್ದಾರೆ. ಬಗೆಬಗೆಯ ಅಡಿಗೆಗಳು ಸಿದ್ಧವಾಗುತ್ತಿವೆ. ವೀಣೆಯನ್ನು ನುಡಿಸುತ್ತಿದ್ದಾರೆ. ಅಕ್ಕಸಾಲೆಗಳು ಬಹು ಎಚ್ಚರಿಕೆಯಿಂದ ತೆರತೆರದ ಅಲಂಕಾರಗಳನ್ನು ಅಣಿಮಾಡುತ್ತಿದ್ದಾರೆ.

ಚೇಟಿ—ಇಗೋ ಅಜ್ಜುಕೆ. ಆರ್ಯನು ಹತ್ತಿರ ಹೋಗಬಹುದು.

ವಿದೂಷಕ—(ಹತ್ತಿರ ಹೋಗಿ) ಅಮ್ಮಾ, ನಿನಗೆ ಮಂಗಳವಾಗಲಿ!

ಸೂಳೆ—ಆರ್ಯನಿಗೆ ಸ್ವಾಗತವೇ? ಹಂಜೇ! ಆರ್ಯನಿಗೆ ಮಣೆ, ಕಾಲಿಗೆ ನೀರು, ತೆಗೆದುಕೊಂಡು ಬಾ.

ವಿದೂಷಕ—(ತನ್ನಲ್ಲಿಯೇ) ಎಲ್ಲವನ್ನೂ ತರಬಹುದು, ಊಟವೊಂದು ಹೊರತು.

ಚೇಟಿ—ಅಜ್ಜುಕೆಯ ಅಪ್ಪಣೆಯ ಪ್ರಕಾರ (ಮಣೆ ಹಾಕಿ ಕಾಲಿಗೆ ನೀರು ಕೊಡುತ್ತಾಳೆ) ಆರ್ಯ, ಕುಳಿತುಕೊಳ್ಳಿ.

ವಿದೂಷಕ—(ಕುಳಿತುಕೊಂಡು) ಅಮ್ಮಾ, ಕುಳಿತುಕೊ. ನಾನು ಒಂದು ಮಾತು ಹೇಳುವುದಕ್ಕಾಗಿ ಬಂದೆ.

ಸೂಳೆ—(ಕುಳಿತುಕೊಂಡು) ಕಿವಿಗೊಟ್ಟು ಕೇಳುತ್ತಿದ್ದೇನೆ.

ವಿದೂಷಕ—ಎಷ್ಟಾದೀತು, ಆ ಅಲಂಕಾರದ ಬೆಲೆ?

ಸೂಳೆ—ಆರ್ಯ, ಅದೇಕೆ ಹಾಗೆ ಕೇಳುವಿರಿ?

ವಿದೂಷಕ—ಅವ್ವಾ, ಕೇಳು. ಪೂಜ್ಯ ಚಾರುದತ್ತನ ಗುಣದಲ್ಲಿ ನಂಬಿಕೆಯಿದ್ದುದರಿಂದ ನೀನು ಅಲಂಕಾರವನ್ನು ಅವನಲ್ಲಿ ಇಟ್ಟೆಯವ್ವೆ. ಅವನು ಅದನ್ನು ಜೂಜಿನಲ್ಲಿ ಕಳೆದುಕೊಂಡುಬಿಟ್ಟನು.

ಸೂಳೆ—ಜೂಜಿನಲ್ಲಿ! ಸರಿ. ಆಮೇಲಾಮೇಲೆ?

ವಿದೂಷಕ—ಆದ್ದರಿಂದ ನೀನು ಆ ಅಲಂಕಾರದ ಬೆಲೆಗಾಗಿ ಈ ಮುತ್ತಿನ ಸರವನ್ನು ತೆಗೆದುಕೊಳ್ಳವ್ವಾ.

ಸೂಳೆ—(ತನ್ನಲ್ಲಿಯೇ) ಥೂ, ಹಾಳು ಸೂಳೆತನವೇ! ನನ್ನನ್ನು ದುರಾಸೆಯವಳೆಂದು ತಿಳಿದುಕೊಳ್ಳುತ್ತಾನೆ! ತೆಗೆದುಕೊಳ್ಳದಿದ್ದರೆ ಅದೇ ತಪ್ಪಾಗುತ್ತದೆ. (ಪ್ರಕಾಶವಾಗಿ) ಆರ್ಯ, ತನ್ನಿ.

ವಿದೂಷಕ—ಇಗೋ, ತೆಗೆದುಕೊಳ್ಳವ್ವಾ.

ಸೂಳೆ—(ತೆಗೆದುಕೊಂಡು) ಆರ್ಯ, ಅವಳು ತೆಗೆದುಕೊಂಡಳೆಂದು ತಿಳಿಸಿಬಿಡಿ.

ವಿದೂಷಕ—(ತನ್ನಲ್ಲಿಯೇ) ಉಪಚಾರದ ಮಾತು ಒಂದನ್ನೂ ಆಡಲಿಲ್ಲ, ಇವಳು. (ಪ್ರಕಾಶವಾಗಿ) ಹಾಗೆಯೇ ಆಗಲಿ. (ಕೊಟ್ಟು ಹೋಗುತ್ತಾನೆ)

ಸೂಳೆ—ಭಲೆ, ಚಾರುದತ್ತ, ಭಲೆ! ಭಾಗ್ಯಪಲ್ಲಟವಾಗಿರುವ ಈ ಅವಸ್ಥೆಯಲ್ಲಿಯೂ ಮಾನಾಪಮಾನವನ್ನು ಕಾಪಾಡಿಕೊಂಡೆ.

(ಪ್ರವೇಶಿಸಿ)

ಮದನಿಕೆ—ಅಜ್ಜುಕೇ, ವರ್ತಕಪುತ್ರನ ಬಳಿಯಿಂದ ಯಾರೋ ಒಬ್ಬ ಮನುಷ್ಯ ಬಂದಿದ್ದಾನೆ; ಅಜ್ಜುಕೆಯನ್ನು ನೋಡಬೇಕೆಂದು ಅಪೇಕ್ಷಿಸುತ್ತಾನೆ.

ಸೂಳೆ—ಹಿಂದೆ ಎಂದಾದರೂ ಕಂಡಿದ್ದವನೋ? ಅಥವಾ ಹೊಸಬನೋ?

ಮದನಿಕೆ—ಅಜ್ಜುಕೇ, ಅಲ್ಲ. ಯಾರೋ ಅವನ ಕಡೆಯವನೆಂದು ನನಗೆ ತೋರುತ್ತದೆ.

ಸೂಳೆ—ಹೋಗು, ಅವನನ್ನು ಒಳಗೆ ಕರೆದುಕೊಂಡು ಬಾ.

ಮದನಿಕೆ—ಹಾಗೇ ಆಗಲಿ. (ಹೋಗುತ್ತಾಳೆ)

ಸೂಳೆ—ಆಹಾ, ಈ ದಿವಸ ಎಷ್ಟು ಸೊಗಸಾಗಿದೆ!

(ಬಳಿಕ ಸಜ್ಜಲಕನ ಸಂಗಡ ಮದನಿಕೆ ಪ್ರವೇಶಿಸುತ್ತಾಳೆ)

ಸಜ್ಜಲಕ—ಬಹಳ ಕಷ್ಟ, ತನ್ನ ಮನಸ್ಸಿನಲ್ಲಿಯೇ ಅನುಮಾನವಿಟ್ಟುಕೊಂಡಿರುವುದು.

ಯಾವನೋ ಮೆಲುಮೆಲನೆ ನಡೆದೆನ್ನ ನೋಡಿದರೆ,
ಬಿರುಬಿರನೆ ಬಂದು ಬಳಿಸಾರಿದರೆ, ತಾ ನಿಂದರೆ;
ಅವರಲೆಲ್ಲರಲೆನ್ನ ಮನ ತಪ್ಪ ಶಂಕಿಪುದು.
ತನ್ನಲ್ಲೆ ತಪ್ಪಿಹನು ಸಂದೇಹಗೊಳ್ಳನಲ್ಲೆ! ||೬||

ಮದನಿಕೆ—ಇಗೋ, ಅಜ್ಜುಕೆ. ಆರ್ಯನು ಹತ್ತಿರ ಹೋಗಬಹುದು.

ಸಜ್ಜಲಕ—(ಹತ್ತಿರ ಹೋಗಿ) ಅಮ್ಮಾ, ನಿನಗೆ ಸುಖವಾಗಲಿ!

ಸೂಳೆ—ಆರ್ಯನಿಗೆ ಸ್ವಾಗತವೇ? ಹಂಜೇ, ಮಣೆಕೊಡು, ಆರ್ಯನಿಗೆ.

ಸಜ್ಜಲಕ—ಇರಲಿ, ಇರಲಿ. ಮಣೆಯ ಮೇಲೆ ಕೂತುಕೊಂಡೆ. ಕೂಡಲೇ ಮಾಡಬೇಕಾದ್ದು ಒಂದು ಸ್ವಲ್ಪ ಕೆಲಸವಿದೆ.

ಸೂಳೆ—ಹಾಗೋ? ಆರ್ಯ, ಹೇಳಿ.

ಸಜ್ಜಲಕ—ಆರ್ಯ ಚಾರುದತ್ತನು ನನ್ನನ್ನು ಕಳುಹಿಸಿದ್ದಾನೆ. "ಮನೆ ಸರಿಯಾಗಿ ನೋಡಿಕೊಳ್ಳದೆ ಶಿಥಿಲವಾಗಿರುವುದರಿಂದಲೂ, ಮನೆಯ ಜನಗಳೆಲ್ಲ ಹತ್ತಿರ ಇಲ್ಲವಾದ್ದರಿಂದಲೂ, ನೀನು ನನ್ನ ಕೈಯಲ್ಲಿ ಕೊಟ್ಟಿದ್ದೆಯಲ್ಲಾ ಆ ಅಲಂಕಾರವನ್ನು ಕಾಪಾಡುವುದು ಕಷ್ಟವಾಗಿದೆ. ಆದ್ದರಿಂದ ಅದನ್ನು ತೆಗೆದುಕೊ" ಎಂದು ಹೇಳಿ ಕಳುಹಿಸಿದ್ದಾನೆ.

ಸೂಳೆ—ಆರ್ಯ, ಇದನ್ನು ಆ ಚಾರುದತ್ತನಿಗೆ ಕೊಟ್ಟುಬಿಡಿ.

ಸಜ್ಜಲಕ—ಅಮ್ಮಾ, ನಾನು (ಅಲ್ಲಿಗೆ) ಹೋಗುವುದಿಲ್ಲವಲ್ಲಾ.

ಸೂಳೆ—ನನಗೆ ಗೊತ್ತು. ಅವರ ಮನೆಯಲ್ಲಿ ಸಾಹಸಮಾಡಿ ತಂದಿದ್ದೀರಿ ಈ ಅಲಂಕಾರವನ್ನು. ಅವನ ಗುಣಗಳಿಗೆ ಮರುಕಪಡಬೇಕು, ಸ್ವಾಮಿ.

ಸಜ್ಜಲಕ—(ತನ್ನಲ್ಲಿಯೇ) ಅದು ಹೇಗೆ ನನ್ನನ್ನು ಗೊತ್ತುಮಾಡಿಬಿಟ್ಟಳು, ಇವಳು?

ಸೂಳೆ—ಯಾರಲ್ಲಿ? ಬಂಡಿ(ಯನ್ನು ತರಿಸಿ), ಆರ್ಯನಿಗೆ.

ಮದನಿಕೆ—ಚಕ್ರದ ಸದ್ದಾಗುವಂತೆ ಕೇಳುತ್ತದೆ. ಬಂಡಿ ಬಂದಿರಬೇಕು.

ಸೂಳೆ—(ತನ್ನ ಒಡವೆಗಳಿಂದ ಮದನಿಕೆಯನ್ನು ಅಲಂಕರಿಸಿ) ಆರ್ಯನು ಆರ್ಯೆಯೊಡನೆ ಬಂಡಿಯನ್ನು ಹತ್ತಬೇಕು.

ಮದನಿಕೆ—ಅಜ್ಜುಕೇ, ಏನಿದು?

ಸೂಳೆ—ಬೇಡ, ಬೇಡ, ಹಾಗೆನ್ನಬೇಡ. ಈಗ ನೀನು ಆರ್ಯೆಯೇ ಆದೆ. ಆರ್ಯ, ಸ್ವೀಕರಿಸಬೇಕು. [ಮದನಿಕೆಯ (ಕೈಯನ್ನು) ಹಿಡಿದುಕೊಂಡು ಸಜ್ಜಲಕನಿಗೆ ಕೊಡುತ್ತಾಳೆ]

ಸಜ್ಜಲಕ—ಆಹಾ! ಯಾವಾಗ ಇವಳಿಗೆ ಪ್ರತ್ಯುಪಕಾರ ಮಾಡಿಯೇನು! ಅಥವಾ ಬಿಟ್ಟಿತು, ಬಿಟ್ಟಿತು.

ಮಾಡಿಉಪಕಾರಕ್ಕೆ ಪ್ರತಿಮಾಡ ಬಯಸುವನ
ಆಸೆಯಾಪತ್ತಿನಲಿ ಸಫಲವಾಗುವುದು.
ಇವಳಿಗೋ ಅವನಿಗೋ ಬರುವಾ ವಿಪತ್ಕಾಲ
ಇವರ ವೈರಿಗಳಿಗೇ ಬಂದಡಸಲಿ. ||೭||

(ಮದನಿಕೆಯೊಡನೆ ಸಜ್ಜಲಕನು ಹೊರಟುಹೋಗುತ್ತಾನೆ)

ಸೂಳೆ—ಚತುರಿಕೇ.

(ಪ್ರವೇಶಿಸಿ)

ಚೇಟಿ—ಅಜ್ಜುಕೇ, ಇಗೋ ಬಂದಿದ್ದೇನೆ.

ಸೂಳೆ—ಹಂಜೇ, ನೋಡು; ಎಚ್ಚತ್ತಿರುವಾಗಲೇ ಹೀಗೆ ಕನಸು ಕಂಡೆ!

ಚೇಟಿ—ನನಗೆ ಸಂತೋಷವೇ. [22]ಅಮೃತಾಂಕ ನಾಟಕವಾಯಿತು.

ಸೂಳೆ—ಬಾ, ಈ ಅಲಂಕಾರವನ್ನು ತೆಗೆದುಕೊಂಡು ಆರ್ಯ ಚಾರುದತ್ತನ ಬಳಿಗೆ ಅಭಿಸಾರ ಹೋಗೋಣ.

ಚೇಟಿ—ಅಜ್ಜುಕೇ, ಹಾಗೇ ಆಗಲಿ. ಇಗೋ ನೋಡು, ಅಭಿಸಾರಿಕೆಯರಿಗೆ ಸಹಾಯಕವಾಗಿರುವ ಜಡಿಮೋಡವೆದ್ದಿದೆ.

ಸೂಳೆ—ಹತಾಶೇ, ತಡಮಾಡಬೇಡ.

ಚೇಟಿ—ಬಾ, ಬಾ, ಅಜ್ಜುಕೇ, ಬಾ.

(ಇಬ್ಬರೂ ಹೋಗುತ್ತಾರೆ)

ನಾಲ್ಕನೆಯ ಅಂಕ ಮುಗಿಯಿತು.

[23]ಚಾರುದತ್ತ ಮುಗಿಯಿತು.

ಟಿಪ್ಪಣಿಗಳು

[1] ಲೋಹೀ ಪರಿವಟ್ಟಣ ಕಾಳಸಾರಾ ಭೂಮೀ = ಲೌಹೀ ಪರಿವರ್ತನ ಕಾಲಸಾರಾ ಭೂಮಿಃ. ಲೌಹೀನಾಂ ಅಯಸ್ತಾಮ್ರ ಸೀಸಕಾದಿ ಲೋಹನಿರ್ಮಿತಾನಾಂ ಪಾಕಸಾಧನ ಶರಾವ ಸ್ಥಾಲ್ಯಾದಿ ಪಾತ್ರೀಣಾಂ ಪರಿವರ್ತನೇನ ಶುಚೀಕರಣೇನ ಅಥವಾ ಪರಿತೋ ನಿವೇಶನೇನ ಕಾಲ ಸಾರಾ ಕೃಷ್ಣರಕ್ತಸಿತವರ್ಣಾ ವರ್ತತ ಇತಿ ಶೇಷಃ = ಕಬ್ಬಿಣ, ತಾಮ್ರ, ಸೀಸ ಮೊದಲಾದ ಲೋಹಗಳಿಂದ ಮಾಡಿದ ಶ್ರಾವೆ, ತಪ್ಪಲೆ ಮೊದಲಾದ ಅಡಿಗೆಯ ಪಾತ್ರೆಗಳನ್ನು ಬೆಳಗಿರುವುದ ರಿಂದ ಅಥವಾ ಸುತ್ತಲೂ ಇಟ್ಟಿರುವುದರಿಂದ ನೆಲ ಕಪ್ಪು, ಕೆಂಪು, ಬಿಳಿಯ ಬಣ್ಣಗಳಿಂದ ಕೂಡಿದೆ.—ಶ್ರೀಮಾನ್ ಗಣಪತಿ ಶಾಸ್ತ್ರೀ.

The ground has been blackened by turning round iron pots = ಕಬ್ಬಿಣದ ಪಾತ್ರೆಗಳನ್ನು ಉರುಳಾಡಿಸಿ ನೆಲ ಕಪ್ಪಾಗಿದೆ.—ಶ್ರೀಮಾನ್‌ಗಳಾದ ವುಲ್ನರ್ ಮತ್ತು ಲಕ್ಷ್ಮಣ ಸರೂಪ್.

[2] ಸುಣಿಮಿತ್ತಂ ವಿಅ ಪರಿಬ್ಭಮಂತೋ ವಡಿವಸ್ಸಅ ಜಣೋ = ಸುನಿಮಿತ್ತಮಿವ ಪರಿಭ್ರಮನ್ ವರಿವಸ್ಯಕಜನಃ.

ವರಿವಸ್ಯಕಜನಃ ವ್ರತಾನುಷ್ಠಾಪಕೋ ಧಾರ್ಮಿಕಜನಃ.—ಗ. ಶಾ.

And as a good omen attendants are running to and fro = . . . ಪರಿ ಚಾರಕರು ಓಡಾಡುತ್ತಿದ್ದಾರೆ.—ವು. ಮತ್ತು ಸ.

ಸೂತ್ರಧಾರನ ಸ್ಥಿತಿಯನ್ನು ಪರಿಶೀಲಿಸಿದರೆ ಅವನು ದರಿದ್ರನೆಂದು ವ್ಯಕ್ತವಾಗುತ್ತದೆ. ಅಂಥವನ ಮನೆಯಲ್ಲಿ ಪರಿಚಾರಕರು ಓಡಾಡುತ್ತಿದ್ದರೆಂದು ಹೇಳುವುದಕ್ಕಿಂತ ಅವತ್ತಿನ ವ್ರತ ಮಾಡಿಸುವ ಪುರೋಹಿತರು ಸುಳಿದಾಡುತ್ತಿದ್ದರೆಂಬುದು ಹೆಚ್ಚು ಸಂಭವನೀಯವಾಗಿದೆ. ಆದರೆ ಇಲ್ಲಿ ಹಾಗೆ ಅರ್ಥಮಾಡುವುದಕ್ಕೆ ಸ್ವಲ್ಪ ತೊಡಕಿದೆ. ವರಿವಸ್ಯಕನ ಹೆಸರು—ಚೂರ್ಣಗೋಷ್ಠ (ಚೂರ್ಣದ ಪಾತ್ರೆ)—ವಿಚಿತ್ರವಾಗಿದೆ. ಈ ಹೆಸರು ಪುರೋಹಿತನಿಗಿಂತ ಅಡಿಗೆಯ ಪರಿಚಾರಕನಿಗೇ ಚೆನ್ನಾಗಿ ಒಪ್ಪುತ್ತದೆ. ಅಲ್ಲದೆ ನಟಿ ಅವನನ್ನು ಕುರಿತು ಮಾತಾಡುವಾಗ 'ಅನೇನ ವರಿವಸ್ಯಕೇನ ಚೂರ್ಣಗೋಷ್ಠೇನ' ಎಂದು ಮಾತ್ರ ಹೇಳುತ್ತಾಳೆ. ಪುರೋಹಿತನಾಗಿದ್ದ ಪಕ್ಷದಲ್ಲಿ ಗೌರವ ಕ್ಕಾಗಿ 'ಆರ್ಯ ಚೂರ್ಣಗೋಷ್ಠೇನ' ಎಂದಾದರೂ ಹೇಳಬಹುದಾಗಿತ್ತು. ದರಿದ್ರನಾದ ಸೂತ್ರ ಧಾರನ ಮನೆಯಲ್ಲಿ ಸಂಬಳದ ಪರಿಚಾರಕರು ಇಲ್ಲದಿದ್ದರೂ ಅವತ್ತಿನ ಮಟ್ಟಿಗೆ ಯಾರಾದರೂ ಸಹಾಯಕ್ಕೆ ಬಂದಿರಬಹುದು.

[3] 'ಸಾಧ್ಯವಿಲ್ಲದ್ದರಿಂದ ಓಟೆಯನ್ನು ತಿನ್ನುತ್ತಿಲ್ಲ, ಅಷ್ಟೆ' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತಾನೆ.

[4] ಸುಮಣೋ ಅಂತಳಿಕ್ಖವಾಸೋಅ. = ಸುಮನಸೋಽನ್ತರೀಯವಾಸಶ್ಚ. ಅಂತರೀಯ ವಾಸಶ್ಚ ಪರಿಧಾನವಸ್ತ್ರಂಚ.—ಗ. ಶಾ.

A garment of air = ಗಾಳಿಬಟ್ಟೆ.—ವು. ಮತ್ತು ಸ.

'ಅಂತಳಿಕ್ಖ' ಎಂಬುದರ ಸಂಸ್ಕೃತ 'ಅಂತರಿಕ್ಷ' ಎಂದಾಗಬೇಕು. ಅಂತಳಿಕ್ಖ ವಾಸ ಎಂದರೆ ಆಕಾಶದಂತೆ ಸೂಕ್ಷ್ಮವಾದ ಬಟ್ಟೆ ಎಂದು ಅರ್ಥವಾಗುತ್ತದೆ. ಪುರಾತನ ಭರತಖಂಡದಲ್ಲಿ ಗಾಳಿಯಂತೆ ಹಗುರವಾದ ನವಿರುಬಟ್ಟೆ ಕಾಣದ ವಸ್ತುವೇನಾಗಿರಲಿಲ್ಲ. ಚಾರುದತ್ತನಂಥ ಭೋಗಿಗಳು ಅಂಥ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರೆಂದು ಧಾರಾಳವಾಗಿ ನಂಬಬಹುದು. ಅಥವಾ ಆ ಬಟ್ಟೆ ಷಷ್ಠೀ ದೇವಕಾರ್ಯದ ದಿನ ದಾನಕೊಡುವುದಕ್ಕೆ ತಂದದ್ದಾದರೂ ಆಗಿರಬಹುದು. ಚಾರುದತ್ತನಿಗೆ ಬಡತನ ಬಂದಮೇಲೆ ಒತ್ತುನೆಯ್ಗೆಯ ಒಳ್ಳೆಯ ಬಟ್ಟೆಯನ್ನು ಕೊಡುವುದಕ್ಕೆ ಗತಿಯಿಲ್ಲದೆ ಬಹು ತೆಳ್ಳನೆಯ ಜಾಳುಬಟ್ಟೆಯನ್ನು ತಂದನೆಂದು ಬೇಕಾದರೂ ಹೇಳಬಹುದು.

5 ಏತತ್ ತು ಮಾಂ ದಹತಿ ನಷ್ಟಧನಶ್ರಿಯೋ ಮೇ
ಯತ್ ಸೌಹೃದಾನಿ ಸುಜನೇ ಶಿಥಿಲೀಭವಂತಿ.

ನೈರ್ಧನ್ಯದೋಷೇಣಾತ್ಮನಃ ಸುಜನವಿಷಯಃ ಸುಹೃದ್ಭಾವೋಽಪಿ ಶಿಥಿಲತಾಂ ಯಾತೀತ್ಯೇತದೇವ ದುಃಖಕರಂ = ದುಡ್ಡಿಲ್ಲದಿರುವುದರ ದೋಷದಿಂದ ನನಗೆ ಒಳ್ಳೆಯವರ ಸ್ನೇಹ ಕೂಡ ಸಡಿಲವಾಗುತ್ತದೆ. ಇದೊಂದೇ ದುಃಖಕರವಾಗಿದೆ.—ಗ. ಶಾ.

My friends become indifferent to a man that's merely good. = ಹಣವಿಲ್ಲದೆ ಬರಿ ಒಳ್ಳೆಯವನಾಗಿರುವ ನನ್ನಲ್ಲಿ ಸ್ನೇಹಿತರು ಉದಾಸೀನರಾಗುವರು.—ವು. ಮತ್ತು ಸ.

ಎರಡನೆಯ ಅರ್ಥಕ್ಕೆ ಅನ್ವಯ ಹೊಂದಿಸುವುದು ಕಷ್ಟ. ಬಡತನದ ದೋಷದಿಂದ ಸಜ್ಜನರು ಸ್ನೇಹಬಿಡುವರೆಂದೂ ಹೇಳುವ ಹಾಗಿಲ್ಲ. ಚಾರುದತ್ತನು ಮೊದಲಿನಂತೆ ಧಾರಾಳವಾಗಿ ಆದರಿಸಿ ಸತ್ಕರಿಸಲು ಅವಕಾಶವಿಲ್ಲದ್ದರಿಂದ ತಾನೇ ಅಳುಕಿ ಹಿಂಜರಿಯುತ್ತಾನೆಂದೂ ಅದರ ಫಲವಾಗಿ ಸಜ್ಜನರ ಸ್ನೇಹ ಸಡಿಲವಾಗಿತ್ತ ಬರುವುದೆಂದೂ ಸಮಾಧಾನ ಮಾಡಿಕೊಳ್ಳಬೇಕು.

6 ಕಿಂ ವಾಶುದೇವೇ ಶವಪಟ್ಟಣೇಶೇ ?
ಕುಂತೀಶುದೇ ವಾ ಜಣಮೇಜಯೇ ವಾ ?
ಅಹಂ ತುಮಂ ಗಹ್ಣಿಅ ಕೇಶಹತ್ಥೇ
ದುಃಶಾಶಳೇ ಶೀದಮಿವಾಹುಳಾಮಿ ||

ಇಲ್ಲಿ ಶ್ರೀಮಾನ್ ಗಣಪತಿ ಶಾಸ್ತ್ರಿಗಳು—ವಾಸುದೇವನೋ, ಯಮನೋ, ಕುಂತಿಯ ಮಗನೋ, ಜನಮೇಜಯನೋ ಎಂದು ಬೇರೆ ಬೇರೆಯಾಗಿ ಬಿಡಿಸಿ ಅರ್ಥಮಾಡುತ್ತಾರೆ. 'ಶವಪಟ್ಟಣೇಶಃ' ಎಂಬುದಕ್ಕೆ 'ಯಮ' ಎಂದು ಅರ್ಥಮಾಡುವುದಕ್ಕಿಂತ 'ಸುಡುಗಾಡಿನ ಒಡೆಯ, ಶಿವ' ಎಂದು ಹೇಳುವುದು ಮೇಲು. ಶಕಾರನು ಶಿವ ವಿಷ್ಣುಗಳನ್ನೂ ಸೀತಾ ದ್ರೌಪದಿಯರನ್ನೂ ರಾವಣ ದುಶ್ಶಾಸನರನ್ನೂ ಕುಂತೀಸುತ ಜನಮೇಜಯರನ್ನೂ ಪರಸ್ಪರ ಭ್ರಮಿಸಿ ತೊಡಕುಮಾಡಿಕೊಂಡು ಮಾತಾಡುತ್ತಾನೆ. ಈ ರೀತಿಯ ಪುರಾಣ ಸಾಂಕರ್ಯ ಶಕಾರನ ಮಾತಿನ ಒಂದು ಅಪೂರ್ವ ಸ್ವಾರಸ್ಯ. 'ಮೃಚ್ಛಕಟಿಕ'ದಲ್ಲಿ ಇದನ್ನು ವಿಶೇಷವಾಗಿ ಕಾಣಬಹುದು.

[7] ವಸಂತಸೇನೆ 'ಸಂತೋಽಸಿ' (ಶಾಂತೋಽಸಿ = ನೀನು ಹಾಳಾದೆ) ಎನ್ನುತ್ತಾಳೆ. ಶಕಾರನು 'ಶಂತೋಽಸಿ' (ಶ್ರಾಂತೋಽಸಿ = ನೀನು ಆಯಾಸಪಟ್ಟಿದ್ದೀಯೆ) ಎಂದು ವಸಂತಸೇನೆ ಹೇಳುತ್ತಾಳೆ ಎಂದು ತಿಳಿದುಕೊಂಡು ಹಿಗ್ಗುತ್ತಾನೆ.

[8] ಏಸೋ ಮೇ ಅಭಿಣಿವೇಸೋ ಅಭಿಜಣೇಣ ತುಳೀಅದಿ. = ಏಷ ಮೇ ಅಭಿನಿವೇಶಃ ಅಭಿಜನೇನ ತೋಲ್ಯತೇ.

ಕುಲಪುತ್ರರನ್ನು ಮಾತ್ರ ತೃಪ್ತಿಪಡಿಸಿ ಬಾಳಬೇಕೆಂಬ ನನ್ನ ನಿರ್ಧಾರ ನಮ್ಮ ಕುಲದಲ್ಲಿ ನಡೆದುಬಂದ ಧರ್ಮ. ನನ್ನ ತಾಯಿ ಅಜ್ಜಿ ಮುಂತಾದವರೆಲ್ಲ ಇದನ್ನು ಸರಿಯಾಗಿ ಪಾಲಿಸುತ್ತಿರುವೆನೋ ಇಲ್ಲವೋ ಎಂಬುದನ್ನು ಪರೀಕ್ಷಿಸುತ್ತಲೇ ಇರುತ್ತಾರೆ. ಈ ಕುಲಧರ್ಮವನ್ನು ನಾನು ಮೀರುವುದಿಲ್ಲ ಎಂದು ಅಭಿಪ್ರಾಯ.—ಗ. ಶಾ.

The nobility appreciates my devotion = ನನ್ನ ನಿಷ್ಠೆಯನ್ನು ಕುಲೀನರು ಮೆಚ್ಚುತ್ತಾರೆ.—ವು. ಮತ್ತು ಸ.

ತಾಯಿ, ಅಜ್ಜಿ ಮುಂತಾದವರೆಲ್ಲ ಈ ನಿರ್ಬಂಧವನ್ನಿಟ್ಟುಕೊಂಡಿದ್ದರೆನ್ನಲು ಆಧಾರವಿಲ್ಲ. ಶಕಾರ ಕುಲೀನನಲ್ಲವೆಂದು ವಸಂತಸೇನೆ ತಿರಸ್ಕರಿಸಿದರೂ ಅವಳ ತಾಯಿ ಅವನ ಮನೆಗೆ ಮಗಳನ್ನು ಕಳುಹಿಸಲು ಆಕ್ಷೇಪಿಸದೆ ಪ್ರೋತ್ಸಾಹ ಕೊಡುತ್ತಾಳೆ (ನಾಲ್ಕನೆಯ ಅಂಕದ ಪ್ರಾರಂಭದಲ್ಲಿ ನೋಡಿ). ಕುಲಪುತ್ರರನ್ನು ಮಾತ್ರ ಆದರಿಸಬೇಕೆಂಬುದು ವಸಂತಸೇನೆಯ ಸ್ವಂತ ನಿಯಮ. "ಈ ನಡತೆ ವಿಟ ಶಕಾರರಂಥವರಿಗೆ ಅರ್ಥವಾಗದಿದ್ದರೂ ಕುಲೀನರಿಗೆ ಮೆಚ್ಚಿಕೆಯಾಗುತ್ತದೆ" ಎಂಬುದು ವಸಂತಸೇನೆಯ ಆಶಯ.

[9] ಅಸಂಭೋಅ ಮಳಿನದಾಏ = ಅಸಂಭೋಗ ಮಲಿನತಯಾ. 'ಉಪಯೋಗಿಸದೆ ಬಿಟ್ಟು ಸುಣ್ಣ ಬಣ್ಣ ಇಲ್ಲದ್ದರಿಂದ' ಎಂದು ಇದಕ್ಕೆ ಅರ್ಥವಾಗುತ್ತದೆ. ಮಿ|| ಇ. ಎಚ್. ಜಾನ್‌ಸ್ಟನ್ ಎಂಬ ಪಂಡಿತರು ಇದು ಸಮರ್ಪಕವಲ್ಲವೆಂದು 'ಅಸಂಜೋಅ ಮಳಿನತಾಏ' ಎಂದು ತಿದ್ದುಪಡಿ ಸೂಚಿಸುತ್ತಾರೆ. ಇದರ ಪ್ರಕಾರ 'ಅಸಂಯೋಗ ಮಲಿನತಯಾ' ಎಂದಾಗುತ್ತದೆ. ಗೋಡೆ ಉದ್ದಕ್ಕೂ ಒಂದೇ ಸಮನಾಗಿರದೆ ಏನೋ ಸ್ವಲ್ಪ ವ್ಯತ್ಯಾಸ ಕಂಡದ್ದರಿಂದ ಬಾಗಿಲು ಅಲ್ಲೇ ಇರಬೇಕೆಂದು ವಸಂತಸೇನೆ ಊಹಿಸುತ್ತಾಳೆ. ಬಾಗಿಲಿರುವ ಬಳಿ ಗೋಡೆ ಕಡಿದು ಹೋಗಿ ಗೂಡುಬಿದ್ದಿರುವುದರಿಂದ ಅಲ್ಲಿ ಕತ್ತಲೆ ಹೆಚ್ಚಾಗಿರುವುದು ಸಹಜ. ಇದರಿಂದ ಅವಳ ಊಹೆಗೆ ಪುಷ್ಟಿ ದೊರೆಯುತ್ತದೆ. 'ಅಲ್ಲಿ ಅಡಗಿಕೊಳ್ಳುವುದಕ್ಕೆ ಸ್ಥಳವೂ ಉಂಟು, ಸುಲಭವಾಗಿ ಸಿಕ್ಕಿಬೀಳುವುದೂ ಇಲ್ಲ' ಎಂದು ಹೊಳೆಯುತ್ತದೆ. ಅಲ್ಲಿ ಅಡಗಿಕೊಂಡಿದ್ದು ಬಾಗಿಲು ತೆರೆದ ಕೂಡಲೇ ದೀಪ ಆರಿಸಿ ಒಳಕ್ಕೆ ಹೋಗುತ್ತಾಳೆ. ಈ ಸಂದರ್ಭದಲ್ಲಿ, ಉಪಯೋಗಿಸದೆ ಬಿಟ್ಟದ್ದರಿಂದ ಬಾಗಿಲಿನ ಬಳಿ ಹೆಚ್ಚು ಕತ್ತಲೆಯಾಯಿತೆನ್ನುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದರೂ ಮೂಲ ಪ್ರತಿಯಲ್ಲಿ ಆಧಾರ ದೊರೆಯುವವರೆಗೂ ಈ ಬದಲಾವಣೆಯನ್ನು ಅಂಗೀಕರಿಸಲಾಗುವುದಿಲ್ಲ.

[10] ಅಳಂ ಚಾರಿತ್ತಭಏಣ = ಅಲಂ ಚಾರಿತ್ರಭಯೇನ. ಮೊದಲು ತಿಳಿಸದೆ ಇದ್ದಕ್ಕಿದ್ದಂತೆ ಒಬ್ಬರ ಮನೆಗೆ ಪ್ರವೇಶಮಾಡುವುದು ನಡವಳಿಕೆಯಲ್ಲ. ಈಗ ತಾನು ಫಕ್ಕನೆ ಒಳಹೊಕ್ಕರೆ ನಡವಳಿಕೆಯನ್ನು ಮೀರಿದಹಾಗಾಗುತ್ತದೆ. ಆದರೆ ಈ ಕಷ್ಟಕಾಲದಲ್ಲಿ ಆ ಭಯ ಇಟ್ಟುಕೊಳ್ಳುವುದು ಸರಿಯಲ್ಲ.—ಎಂದು ವಸಂತಸೇನೆಯ ಆಶಯ.

'ನಡತೆಗೆ ಇನ್ನು ಭಯವಿಲ್ಲ' ಎಂದರೆ 'ವಿಟ ಶಕಾರರಿಂದ ನನ್ನ ಶೀಲ ಭಂಗವಾಗುವುದೆಂಬ ಭಯ ತಪ್ಪಿತು' ಎಂದೂ ಅರ್ಥಮಾಡಬಹುದು.

11 ಶುವಣ್ಣವಣ್ಣಾ = ಸುವರ್ಣವರ್ಣಾ. 'ಬಂಗಾರದ (ಜಾತಿಯ) ವಳು' ಎಂದಿರಬಹುದೆ? **Of the gold-caste.**—ವು. ಮತ್ತು ಸ.

12 ಅಪ್ಪಓಅಣದಾಏ ಗಣಿಆಭಾವಸ್ಸ ಅಜ್ಜುಆ ಕಂ ಪಿ ಕಾಮೇದಿತ್ತಿ ತಕ್ಕೇಮಿ = ಅಪ್ರಯೋಜನತಯಾ ಗಣಿಕಾಭಾವಸ್ಯ ಅಜ್ಜುಕಾ ಕಮಪಿ ಕಾಮಯತ ಇತಿ ತರ್ಕಯಾಮಿ. ಸೂಳೆತನದ ಪ್ರಯೋಜನ ಧನಾರ್ಜನೆ. ಹಾಗೆ ಹಣ ಸಂಪಾದಿಸುವುದರಲ್ಲಿ ಅಪೇಕ್ಷೆಯಿಲ್ಲದೆ ನೀನು ಯಾರನ್ನೋ ಕಾಮಿಸುತ್ತಿರುವೆಯೆಂದು ಊಹಿಸುತ್ತೇನೆ.—ಗ. ಶಾ. ತನ್ನ ವೃತ್ತಿಯ ಆವಶ್ಯಕತೆಗೆ ವಿರೋಧವಾಗಿ ನಮ್ಮೊಡತಿ ಯಾರನ್ನೋ ಕಾಮಿಸುತ್ತಿರುವಳೆಂದು ನಂಬುತ್ತೇನೆ.—ವು. ಮತ್ತು ಸ.

ಎರಡನೆಯದರ ಪ್ರಕಾರ 'ತಾನಾಗಿ ಯಾರನ್ನಾದರೂ ಕಾಮಿಸುವುದು ಸೂಳೆತನಕ್ಕೆ ವಿರೋಧ' ಎಂಬ ಧ್ವನಿ ಬರುತ್ತದೆ.

13 ಪೂಆವಿಸೇಸೇಣ ಜಾಣಾಮಿ ಕಯ್ಯಂ ತಿ = ಪೂಜಾವಿಶೇಷೇಣ ಜಾನಾಮಿ ಕಾರ್ಯಮಿತಿ. ಪೀಠಕೊಟ್ಟು ಉಪಚರಿಸಿದ್ದರಿಂದ ಧನಿಕನ ಕಾಟವನ್ನು ಪರಿಹರಿಸಿಕೊಳ್ಳಬೇಕಾದ ನನ್ನ ಕೆಲಸವೂ ಇವಳಿಂದ ಈಡೇರುವುದೆಂದು ನಂಬುತ್ತೇನೆ.—ಗ. ಶಾ.

ಈ ಮಾತಿಗೆ ಬೇರೊಂದು ರೀತಿಯಿಂದಲೂ ಅರ್ಥ ಹೇಳಬಹುದು. ಸಂವಾಹಕನು ಹೇಳದೆ ಕೇಳದೆ ಒಳಗೆ ನುಗ್ಗಿಬಂದು ತನಗೆ ಎಲ್ಲಿ ಅಪಮಾನವಾಗುವುದೋ ಎಂದು ಬಹಳ ಅಳುಕುತ್ತಿದ್ದನು. ಕುಳಿತುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಿದ್ದನು. ಪೀಠ ಕೊಟ್ಟು ಉಪಚರಿಸಿದ್ದರಿಂದ ಹೆದರಿಕೆ ಹೋಗಿ 'ಇಷ್ಟು ಉಪಚಾರ ಮಾಡಿದ ಮೇಲೆ ಕೂತುಕೊಳ್ಳಲೇಬೇಕು' ಎಂದು ತೀರ್ಮಾನಿಸಿ ಕುಳಿತುಕೊಂಡನು. ಶ್ರೀಮಾನ್‌ಗಳಾದ ವುಲ್ನರ್ ಮತ್ತು ಸರೂಪ್ ಅವರು 'She is so polite about it, I suppose I must' ಎಂದು ಭಾಷಾಂತರ ಮಾಡಿದ್ದಾರೆ.

14 ಹಂ, ವಿಪ್ಪಳದ್ಧೋಹ್ಮಿ, ವಾದಾಅಣಣಿಕ್ಖಾಮಿದ ಪುವ್ವಕಾಳಿಏ ಓಣಮಿಅ ಪಓಹರಾಏ ಕಣ್ಣಊರಸ್ಸ ಪರಿಪ್ಫಂದೋ ಅಜ್ಜುಆಏ ಜೇಣ ಣ ದಿಟ್ಠೋ. = ಹಂ, ವಿಪ್ರಲಬ್ಧೋಽಸ್ಮಿ, ವಾತಾಯನ ನಿಷ್ಕ್ರಾಮಿತ ಪೂರ್ವಕಾಯಯಾ ಅವನಮಿತ ಪಯೋಧರಯಾ ಕರ್ಣಪೂರಸ್ಯ ಪರಿಸ್ಪಂದಃ ಅಜ್ಜುಕಯಾ ಯೇನ ನ ದೃಷ್ಟಃ.

ಇದು ಶ್ರೀಮಾನ್ ಗಣಪತಿ ಶಾಸ್ತ್ರಿಗಳು ಕೊಟ್ಟಿರುವ ಛಾಯೆ. ಇದರ ಪ್ರಕಾರವೇ ನಾನು ಕನ್ನಡಿಸುವುದು. ಆದರೆ ಮಿ|| ಜಾನ್‌ಸ್ಟನ್ ಪಂಡಿತರು ಬೇರೆ ರೀತಿ ಅರ್ಥ ಮಾಡುತ್ತಾರೆ. ಅದೂ ಸ್ವಾರಸ್ಯವಾಗಿರುವುದರಿಂದ ಅದನ್ನು ಇಲ್ಲಿ ಸೂಚಿಸುತ್ತೇನೆ.

ಮೇಲಿನ ವಾಕ್ಯದಲ್ಲಿ '. . . ಪುವ್ವಕಾಳಿಏ, ... ಪಓಹರಾಏ, ಅಜ್ಜುಕಾಏ' ಎಂಬ ಪದಗಳು ತೃತೀಯಾಂತಗಳಲ್ಲ, ಷಷ್ಠ್ಯಂತಗಳು. 'ಕರ್ಣಪೂರ' ಎಂಬುದು ವಸಂತಸೇನೆಯ ಸೇವಕನ ಹೆಸರಲ್ಲ. 'ಮೃಚ್ಛಕಟಿಕ'ದಲ್ಲಿ ಅವನಿಗೆ ಆ ಹೆಸರಿದ್ದ ಮಾತ್ರಕ್ಕೇ ಇಲ್ಲಿಯೂ ಹಾಗಿರಲೇಬೇಕೆಂಬ ನಿರ್ಬಂಧವಿಲ್ಲ. ಇಲ್ಲಿ 'ಕರ್ಣಪೂರ' ಎಂದರೆ ಕರ್ಣಾಭರಣ, ಅಷ್ಟೇ.

ಇದರ ಛಾಯೆ '. . . . ವಾತಾಯನ ನಿಷ್ಕ್ರಾಮಿತ ಪೂರ್ವಕಾಯಾಯಾಃ ಅವನಮಿತ ಪಯೋಧ ರಾಯಾಃ ಕರ್ಣಪೂರಸ್ಯ ಪರಿಸ್ಪಂದಃ ಅಜ್ಜುಕಾಯಾಃ ಯೇನ ನ ದೃಷ್ಟಃ' ಎಂದಿರಬೇಕು. 'ವಸಂತಸೇನೆ ಕಿಟಕಿಯಲ್ಲಿ ಹಾಗೆ ನಿಂತುಕೊಂಡು ನನ್ನ ಸಾಹಸವನ್ನು ಕಂಡು ಮೆಚ್ಚಿ ಮೈಯುಬ್ಬಿದಾಗ ಸಂಭ್ರಮದಿಂದ ಅವಳ ಕರ್ಣಾಭರಣ ಅಲುಗುವುದನ್ನು ನಾನು ಕಾಣಲಿಲ್ಲ ವಲ್ಲಾ' ಎಂದು ಚೇಟನ ದುಃಖ. ಈ ಮಾತಿನಲ್ಲಿ 'ತನ್ನ ಸಾಹಸವನ್ನು ಅವಳು ನೋಡಬೇಕು, ಅವಳು ಸಂತೋಷಪಟ್ಟದ್ದನ್ನು ತಾನು ಕಾಣಬೇಕು' ಎಂಬ ಭಾವ ಅಡಗಿದೆ. (*The Indian Antiquary*, LXII, 1933, pp. 114–115.)

ಇದರಂತೆ ಅರ್ಥಮಾಡುವುದಾದರೆ '. . . . ನಿಂತುಕೊಂಡು ನೋಡುವ ಅಜ್ಜುಕೆಯ ಕಿವಿಯೋಲೆಯ ಅಲುಗಾಟವನ್ನು ನೋಡಲಿಲ್ಲವಾದ್ದರಿಂದ ನಾನು ವಂಚಿತನಾದೆ' ಎಂದು ತಿದ್ದಿಕೊಳ್ಳಬೇಕಾಗುತ್ತದೆ.

15 ಉತ್ಕಂಠಿತಸ್ಯ ಹೃದಯಾನುಗತಾ ಸಖೀವ
ಸಂಕೀರ್ಣದೋಷರಹಿತಾ ವಿಷಯೇಷು ಗೋಷ್ಠೀ
ಕ್ರೀಡಾರಸೇಷು ಮದನವ್ಯಸನೇಷು ಕಾಂತಾ
ಸ್ತ್ರೀಣಾಂ ತು ಕಾಂತರತಿವಿಘ್ನಕರೀ ಸಪತ್ನೀ ||

ಇಲ್ಲಿ ಎರಡನೆಯ ಪಾದದ ಅಭಿಪ್ರಾಯ ಸ್ಪಷ್ಟವಾಗುವುದಿಲ್ಲ.

16 ನ ಚ ಸಾಭಿನಯಪ್ರಯೋಗಂ. ಅಭಿನಯದ ಸಹಾಯವಿಲ್ಲದೆಯೇ 'ಭಾವಾರ್ಪಿತ' ವಾಗಿತ್ತು. (ಸಾಧಾರಣವಾಗಿ ಭಾವಪ್ರಕಾಶಕ್ಕೆ ಅಭಿನಯ ಬೇಕು.)

17 ಬಾಹ್ಯಜನಧಾರಿತಮಲಂಕಾರಂ ಗೃಹಜನೋ ನ ದ್ರಕ್ಷ್ಯತಿ. ಬಾಹ್ಯಜನೋ ವೇಶ ವಾಟಜನಃ, ಗೃಹಜನಃ ಗೃಹಿಣೀ.—ಗ. ಶಾ.

ಚಾರುದತ್ತನಿಗೆ ತನ್ನ ಹೆಂಡತಿಯ ಪ್ರೀತಿಯ ಆಳ ಚೆನ್ನಾಗಿ ಗೊತ್ತೆಂದು ತೋರುತ್ತದೆ. ವಸಂತಸೇನೆಯ ಒಡವೆಗಳನ್ನು ಅವಳ ಬಳಿಗೆ ಕಳುಹಿಸಿ ಮನಸ್ಸು ನೋಯಿಸಲು ಇಷ್ಟವಿಲ್ಲದೆ ಈ ಮಾತಾಡುತ್ತಾನೆ.

18 ಕಾಮಂ ನೀಚಮಿದಂ ವದಂತು ವಿಬುಧಾಃ ಸುಪ್ತೇಷು ಯದ್ವರ್ತತೇ
ವಿಶ್ವಸ್ತೇಷು ಹಿ ವಂಚನಾಪರಿಭವಃ ಶೌರ್ಯಂ ನ ಕಾರ್ಕಶ್ಯತಾ |
ಸ್ವಾಧೀನಾ ವಚನೀಯತಾಪಿ ತು ವರಂ ಬದ್ಧೋ ನ ಸೇವಾಂಜಲಿಃ
ಮಾರ್ಗಶ್ಚೈಷ ನರೇಂದ್ರಸೌಪ್ತಿಕವಧೇ ಪೂರ್ವಂ ಕೃತೋ ದ್ರೌಣಿನಾ ||

ಈ ಪದ್ಯದ ಅರ್ಥ ಸ್ವಲ್ಪ ತೊಡಕಾಗಿದೆ. ವ್ಯಾಖ್ಯಾನಕಾರರು, ಇಂಗ್ಲಿಷ್ ಭಾಷಾಂತರ ಕಾರರು ಮತ್ತು ವಿಮರ್ಶಕರು—ಇವರಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಾರೆ. ನಾನು ವ್ಯಾಖ್ಯಾನಕಾರರನ್ನೇ ಅನುಸರಿಸಿ ಒಟ್ಟು ಅಭಿಪ್ರಾಯಕ್ಕೆ ಹೊಂದಿಸಿಕೊಂಡು ಕನ್ನಡಿಸಿ ದ್ದೇನೆ. ವ್ಯಾಖ್ಯಾನಕಾರರು 'ಶೌರ್ಯಂ ನ; ಕಾರ್ಕಶ್ಯತಾ. = ಶೌರ್ಯವಲ್ಲ; ಕರ್ಕಶತೆ' ಎಂದೂ ಉಳಿದವರು 'ಶೌರ್ಯಂ; ನ ಕಾರ್ಕಶ್ಯತಾ = ಶೌರ್ಯ; ಕರ್ಕಶತೆಯಲ್ಲ' ಎಂದೂ ಅನ್ವಯಮಾಡಿಕೊಂಡಿದ್ದಾರೆ. ಇದರ ಜೊತೆಗೆ ಇಲ್ಲಿ ಪಾದಗಳು ಹಿಂದುಮುಂದಾಗಿರಬಹು

ದೆಂದೂ ಎರಡನೆಯದನ್ನು ಮೂರನೆಯದನ್ನಾಗಿಯೂ ಮೂರನೆಯದನ್ನು ಎರಡನೆಯದನ್ನಾಗಿಯೂ ಇಟ್ಟುಕೊಂಡರೆ ತೊಡಕು ಪರಿಹಾರವಾಗುವುದೆಂದೂ ಮಿ|| ಜಾನ್‌ಸ್ಟನ್ ಪಂಡಿತರು ಅಭಿಪ್ರಾಯ ಪಡುತ್ತಾರೆ. ಈ ಚರ್ಚೆಯನ್ನು ವಿಶದವಾಗಿ ತಿಳಿಯಬಯಸುವವರು 'ಇಂಡಿಯನ್ ಆಂಟಿಕ್ವೆರಿ ಪತ್ರಿಕೆ'ಯ ೧೯೩೩ನೆಯ ವರ್ಷದ ಸಂಪುಟವನ್ನು ನೋಡಬಹುದು.

[19] ಅಹಂ ಖು ದಾವ ಕತ್ತವ್ವಕರತ್ಥೀಕಿದಸಂಕೇದೋ ವಿಅ ಸಕ್ಕಿಅ ಸಮಣ ಓ ಣಿದ್ದಂ ಣ ಳಭಾಮಿ = ಅಹಂ ಖಲು ತಾವತ್ ಕರ್ತವ್ಯಕರಸ್ತ್ರೀಕೃತಸಂಕೇತ ಇವ ಶಾಕ್ಯ ಶ್ರಮಣಕೋ ನಿದ್ರಾಂ ನ ಲಭೇ.

ಈ ನಾಟಕದ ಮೊದಲನೆಯ ಆವೃತ್ತಿಯಲ್ಲಿ 'ಕತ್ತವ್ವಕರಿತ್ತೀಕಿದಸಂಕೇದೋ ವಿಅ = ಕರ್ತವ್ಯಕರಿಕ್ತೀಕೃತಸಂಕೇತ ಇವ' ಎಂದು ಅಚ್ಚಾಗಿದೆ. ಅಡಿಟಿಪ್ಪಣಿಯಲ್ಲಿ 'ಕತ್ತವ್ವ ಕರೀಕಿದ = ಕರ್ತವ್ಯಕರೀಕೃತ . . .' ಎಂದು ಪಾಠಾಂತರವಿರುವಂತೆ ಸೂಚಿಸಿದೆ.

ಶ್ರೀಮಾನ್‌ಗಳಾದ ವುಲ್ನರ್-ಸರೂಪರ ಭಾಷಾಂತರವನ್ನು ವಿಮರ್ಶೆ ಮಾಡುವಾಗ ಮಿ|| ಜಾನ್‌ಸ್ಟನ್ ಪಂಡಿತರು ಈ ವಾಕ್ಯದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ:—'ಕರ್ತವ್ಯಕರಸ್ತ್ರೀ = ಪರಿಚಾರಿಕಾ' ಎಂಬುದು ಬಹಳ ಅಸಂಭವ. ಬೌದ್ಧ ಮತಪ್ರಕ್ರಿಯೆಗಳ ಅರಿವಿಲ್ಲದ್ದರಿಂದ ಹೀಗೆ ಅನಾವಶ್ಯಕವಾಗಿ ತಿದ್ದಿಬಿಟ್ಟಿದ್ದಾರೆ. 'ಕತ್ತಬ್ಬಕ, ಸಂಕೇತ' ಎಂಬೆರಡೂ ಬೌದ್ಧಪಾರಿಭಾಷಿಕ ಶಬ್ದಗಳು. 'ರಿಕ್ತೀಕೃ' ಎಂಬ ಪ್ರಯೋಗ ಸಂಸ್ಕೃತ ಸಾಹಿತ್ಯದಲ್ಲಿ ವಿರಳ; ಬಹು ಈಚಿನದು. ಪಾಲಿಯಲ್ಲಿ 'ರಿಚ್' ಧಾತುವಿಗೆ 'ಶುದ್ಧೀಕರಿಸು' ಎಂದರ್ಥ; 'ರಿಕ್ತ' ಎಂದರೆ 'ಮುಕ್ತ' ಎಂದರ್ಥ. 'ಕತ್ತಬ್ಬ' (= ಕರ್ತವ್ಯ) ಎಂದರೆ ಅರ್ಹತ್ಪದವಿಗೆ ಬರಬೇಕಾದರೆ ಸಾಧಕನು ನಡಸಬೇಕಾದ 'ಜಾಗರಿಕಾ' ಎಂಬ ಕಾರ್ಯ (ಜಾಗರಣೆ); 'ಕರಣೀಯ' ಎಂಬುದಕ್ಕೆ ಸಮಾನಾರ್ಥಕ. 'ಸಂಕೇತ' ಎಂಬುದು 'ವ್ಯವಹಾರ' ಮತ್ತು 'ಸಂವೃತಿ' ಎಂಬವುಗಳಿಗೆ ಸಮಾನಾರ್ಥಕ; 'ಸಾಮಾನ್ಯರಿಗೆ ತೋರುವ ಸತ್ಯ, ಲೋಕ ವ್ಯವಹಾರ' ಎಂದರ್ಥ. ವಿದೂಷಕನನ್ನು ಹಾಸ್ಯಕ್ಕೆ ಗುರಿಮಾಡುವುದಕ್ಕಾಗಿ ಬೇಕೆಂತಲೇ ಈ ಮಾತುಗಳನ್ನು ಆಭಾಸವಾಗಿ ಸೇರಿಸಿರುವಂತೆ ತೋರುತ್ತದೆ. ಈ ವಾಕ್ಯಕ್ಕೆ 'ಅರ್ಹತ್ಪದವಿಯ ಮಾರ್ಗವನ್ನನುಸರಿಸಿ (ಎಂದರೆ ಜಾಗರಿಕೆಯನ್ನು ನಡಸಿ) ವ್ಯವಹಾರ ಜ್ಞಾನದಿಂದ ಮುಕ್ತನಾದ ಶಾಕ್ಯಶ್ರಮಣಕನಂತೆ' ಎಂದು ಅರ್ಥ. ಭಾಸನ ಕಾಲದಲ್ಲಿ ಹೀನಯಾನ ಬೌದ್ಧಮತ ಇನ್ನೂ ಏಳಿಗೆಯಲ್ಲೇ ಇತ್ತು. ಜನಸಾಮಾನ್ಯಕ್ಕೆ ಬೌದ್ಧರ ಆಚಾರಗಳ ಪರಿಚಯ ಚೆನ್ನಾಗಿತ್ತು. ಬೌದ್ಧೇತರ ಗ್ರಂಥಗಳಲ್ಲಿ ಬೌದ್ಧಸಂನ್ಯಾಸಿಗಳ ವಿಷಯ ಬಂದರೆ ಅದು ಅವರಿಗೆ ಕಳಂಕಕರವಾಗಿರಲೇ ಬೇಕೆಂದು ಭಾವಿಸುವುದು ತಪ್ಪು ಎಂದು ಇದರಿಂದ ಸಿದ್ಧವಾಗುತ್ತದೆ.

ಈ ವಿಮರ್ಶೆ ದೃಷ್ಟಿಗೆ ಬಿದ್ದ ಮೇಲೆ ನಿಜಸ್ಥಿತಿಯನ್ನು ತಿಳಿಯಬೇಕೆಂಬ ಉದ್ದೇಶದಿಂದ ಈ ಸಂಗತಿಯನ್ನು ಮೈಸೂರು ಮಹಾರಾಜರ ಕಾಲೇಜಿನಲ್ಲಿ ಸಂಸ್ಕೃತ ಪ್ರೊಫೆಸರಾಗಿದ್ದ ಶ್ರೀಮಾನ್ ಎಂ. ಹಿರಿಯಣ್ಣ, ಎಂ.ಎ., ಎಲ್.ಟಿ. ಅವರ ಗಮನಕ್ಕೆ ತರಲಾಗಿ ಅವರು ಬಹು ದಿನಗಳ ವರೆಗೆ ಚೆನ್ನಾಗಿ ವಿಚಾರಮಾಡಿ "ಪೂರ್ಣಸಮರ್ಪಕನಾದ ವಿವರಣೆ ಇನ್ನೂ ಹೊಳೆದಿಲ್ಲ. ಆದರೆ ಮಿ|| ಜಾನ್‌ಸ್ಟನ್‌ರವರು ಮಾಡಿರುವ ಅರ್ಥ ನನಗೆ ಸರಿತೋರುವುದಿಲ್ಲ. ಅದು ಬಹು ಕ್ಲಿಷ್ಟವಾಗಿದೆ. ಶ್ರೀಮಾನ್ ಗಣಪತಿ ಶಾಸ್ತ್ರಿಗಳ ವಿವರಣೆಯೇ ಮೇಲೆಂದು ಭಾವಿಸುತ್ತೇನೆ. ಆದರೆ

ಅವರು ಮಾಡಿರುವಂತೆ ಮೂಲವನ್ನು ತಿದ್ದುವ ಅಗತ್ಯವಿಲ್ಲ. ‘ಕರ್ತವ್ಯ ಕರೀಕೃತ ಸಂಕೇತಃ’ ಎಂಬ ಪಾಠದಿಂದ ಅದೇ ಅರ್ಥ ಸಿದ್ಧಿಸುತ್ತದೆ. ಮದರಾಸು ಓರಿಯಂಟಲ್ ಲೈಬ್ರೆರಿಯಲ್ಲಿರುವ ಒಂದು ಹಸ್ತಪತ್ರಿಯಲ್ಲಿ ಈ ಪಾಠವೇ ಇದೆ; ‘. . . ರಿಕ್ತೀಕೃತ’ ಎಂಬ ಪಾಠವಿಲ್ಲ. ಪರಿಚಾರಿಕೆ ಎಂಬರ್ಥದಲ್ಲಿ ‘ಕರ್ತವ್ಯಕರೀ’ ಎಂಬ ರೂಪ ಸ್ವಲ್ಪ ಹೊಸತರದ್ದೇನೋ ಹೌದು. ಆದರೆ ಇದು ವ್ಯಾಕರಣ ಶುದ್ಧವಾದ ಪ್ರಯೋಗ (ಪಾಣಿನಿ, ೩. ೨. ೨೦ ನೋಡಿ)’’ ಎಂದು ತಿಳಿಸಿದ್ದಾರೆ.

[20] ಕಾಕಲಿ = ಕಳ್ಳರು ಕನ್ನ ಕೊರೆಯುವ ಒಂದು ಸಾಧನ.—ಗ. ಶಾ. Burglar's drone = ಮನೆಯವರು ಎಚ್ಚರವಾಗಿರುವರೋ ಇಲ್ಲವೋ ಎಂದು ಪರೀಕ್ಷಿಸಲು ಕಳ್ಳರು ಉಪಯೋಗಿಸುವ ಒಂದು ಸಾಧನ.—ವು. ಮತ್ತು ಸ.

[21] ಣಾಣಾಪಟ್ಟಣಸಮಾಗದೇಹಿ ಆಅಮಿಏಹಿ ಪುತ್ತಆ ವಾಈಅಂತಿ = ನಾನಾ ಪಟ್ಟಣ ಸಮಾಗತೈಃ ಆಗಮಿಕೈಃ ಪುಸ್ತಕಾನಿ ವಾಚ್ಯಂತೇ. ಆಗಮಿಕೈಃ ಶಾಸ್ತ್ರಜ್ಞೈಃ = ನಾನಾ ಪಟ್ಟಣಗಳಿಂದ ಬಂದಿರುವ ಶಾಸ್ತ್ರಜ್ಞರು ಪುಸ್ತಕಗಳನ್ನು ಓದುತ್ತಿದ್ದಾರೆ.—ಗ. ಶಾ.

‘ಆಅಮಿಏಹಿ’ ಎಂಬುದು ‘ಆಗಾಮಿಕೈಃ’ ಎಂದಾಗಬೇಕು; ‘ಆಗಮಿಕೈಃ’ ಎಂದಲ್ಲ. ಆಗಾಮಿಕ ಎಂದರೆ ಮನೆಗೆ ಬಂದವನು, ಆಗಂತುಕ (Visitor) ಎಂದರ್ಥ.

[22] ಅಮುದಂಕ ಣಾಡಅಂ ಸಂವುತ್ತಂ = ಅಮೃತಾಂಕ ನಾಟಕಂ ಸಂವೃತ್ತಂ. ಇದರ ಅಭಿಪ್ರಾಯವೇನೋ ಸರಿಯಾಗಿ ತಿಳಿಯದು. ‘‘ಜೀವಮಾನದಲ್ಲೆಲ್ಲಾ ಮರೆಯಲಾಗದಂಥ ಸಂತೋಷಕರವಾದ ಸಂಗತಿ ನಡೆಯಿತು’’ ಎಂದು ಭಾವವಿರಬಹುದು. ‘ಪ್ರತಿಜ್ಞಾ ಯೌಗಂಧರಾಯಣ’ದ ಮೂರನೆಯ ಅಂಕಕ್ಕೆ ‘ಮಂತ್ರಾಂಕ’ ಎಂದು ಹೆಸರಿರುವಂತೆ ಈ ಅಂಕಕ್ಕೆ ‘ಅಮೃತಾಂಕ’ ಎಂಬ ಹೆಸರು ಬಳಕೆಯಲ್ಲಿದ್ದಂತೆ ಕಾಣುತ್ತದೆ. ಸಜ್ಜಲಕ-ಮದನಿಕೆಯರ ಮತ್ತು ಚಾರುದತ್ತ-ವಸಂತಸೇನೆಯರ ಪ್ರೇಮ ಫಲಿಸಿ ಅವರು ಆನಂದಪೂರ್ಣರಾದ ವೃತ್ತಾಂತವನ್ನು ವರ್ಣಿಸುವ ಈ ಅಂಕಕ್ಕೆ ‘ಅಮೃತಾಂಕ’ ಎಂಬ ಮುದ್ದು ಹೆಸರು ಚೆನ್ನಾಗಿ ಒಪ್ಪುತ್ತದೆ.

[23] ಅವಸಿತಂ ಚಾರುದತ್ತಂ.

ಶ್ರೀಮಾನ್ ಗಣಪತಿ ಶಾಸ್ತ್ರಿಗಳು ತಾವು ಆಧಾರವಾಗಿಟ್ಟುಕೊಂಡ ಓಲೆಗರಿಯ ಪ್ರತಿಗಳಲ್ಲೊಂದರಲ್ಲಿ ಈ ಸಮಾಪ್ತಿವಾಕ್ಯವಿತ್ತೆಂದು ತಿಳಿಸುತ್ತಾರೆ. ಮೊದಲನೆಯ ಮುದ್ರಣದಲ್ಲಿ ಆ ವಾಕ್ಯವನ್ನೂ ಅಚ್ಚುಮಾಡಿದ್ದರು. ‘ಮೃಚ್ಛಕಟಿಕ’ದಂತೆಯೇ ಈ ‘ಚಾರುದತ್ತ’ವೂ ಹತ್ತಂಕಗಳ ಪ್ರಕರಣವೆಂದೂ ಈಗ ಸಿಕ್ಕಿರುವ ಕೃತಿ ಅಸಂಪೂರ್ಣವೆಂದೂ ನಿರ್ಧರಿಸಿಕೊಂಡು ಎರಡನೆಯ ಮುದ್ರಣದಲ್ಲಿ ಆ ವಾಕ್ಯವನ್ನು ಬಿಟ್ಟುಬಿಟ್ಟಿದ್ದಾರೆ.

ನಾಟಕ ಮುಗಿದಿಲ್ಲವೆನ್ನಲು ಭರತವಾಕ್ಯವಿಲ್ಲದ್ದು ಪ್ರಧಾನಕಾರಣವೆಂದು ತೋರುತ್ತದೆ. ಇದರ ಜೊತೆಗೆ ಚಾರುದತ್ತನು ಬಡತನದ ದೋಷಗಳನ್ನು ವರ್ಣಿಸುವಾಗ ಆಡುವ ಒಂದು ಮಾತು, ಸಜ್ಜಲಕನು ನುಡಿಯುವ ಹರಕೆಯ ಮಾತು—ಇವುಗಳಲ್ಲಿ ಮುಂದಿನ ಕಥಾಸೂಚನೆಯುಂಟೆಂದು ಭಾವಿಸಿ ಆ ಕಥೆ ಸಿಕ್ಕಿಲ್ಲವಾದ್ದರಿಂದ ಗ್ರಂಥ ಅಸಂಪೂರ್ಣವೆಂದು ಸಾಧಿಸುತ್ತಾರೆ. ‘‘ಯಾರೋ ಮಾಡಿದ ಪಾಪವನ್ನು ಇವನೇ ಮಾಡಿದನೆಂದು ಸಂದೇಹಪಡುತ್ತಾರೆ’’ ಎಂಬ ಮಾತಿನಿಂದ ವಸಂತಸೇನೆಯ ಅಲಂಕಾರವನ್ನು ಬೇರೊಬ್ಬನು ಕದ್ದಿದ್ದರೂ ಆ ಕಳವಿನ ಅಪರಾಧ ಚಾರುದತ್ತನ ಮೇಲೆ

ಹೊತ್ತದ್ದೂ, ''ಇವಳಿಗೋ ಅವನಿಗೋ ಬರುವ ವಿಪತ್ಕಾಲ ಇವರ ವೈರಿಗಳಿಗೇ ಬರಲಿ'' ಎಂಬ ಮಾತಿನಿಂದ ವಸಂತಸೇನೆಗೂ ಚಾರುದತ್ತನಿಗೂ ಬಂದಿದ್ದ ಆಪತ್ತು ತಪ್ಪಿ ಅವರ ಶತ್ರುವಾದ ಶಕಾರನೇ ಅದಕ್ಕೆ ಗುರಿಯಾದದ್ದೂ ಸೂಚಿತವಾಗುತ್ತದೆ ಎಂದು ಅವರ ವಾದ.

'ಚಾರುದತ್ತ'ದ ಕಥೆ ಮುಂಬರಿದಿತ್ತೆಂದು ಬೇರೆ ಆಧಾರಗಳಿಂದ ನಿರ್ಧರವಾದರೆ ಆಗ ಆ ನಿರ್ಧಾರಕ್ಕೆ ಇದೂ ಪುಷ್ಟಿಕೊಡಬಲ್ಲದೇ ಹೊರತು ಬರಿ ಇದೊಂದರಿಂದಲೇ ಹಾಗೆ ನಿರ್ಧರಿಸುವುದು ಸಮರ್ಪಕವಾಗಿ ಕಾಣುವುದಿಲ್ಲ. 'ಮೃಚ್ಛಕಟಿಕ'ದ ನಾಲ್ಕನೆಯ ಅಂಕದಲ್ಲಿಯೇ ಮುಂದಿನ ರಾಜಕೀಯ ವಿಪ್ಲವದ ಸೂಚನೆ ಕಾಣಬರುತ್ತದೆ. 'ಚಾರುದತ್ತ'ದಲ್ಲಿ ಆ ಪ್ರಸ್ತಾಪವೇ ಇಲ್ಲ. ಕಥೆ ಮುಂದೆ ಬೆಳೆಯುವ ಹಾಗಿದ್ದರೆ ಮುಖ್ಯವಾದ ಆ ಸಂಗತಿ ಬಿಟ್ಟುಹೋಗುತ್ತಿರಲಿಲ್ಲ. ಚಾರುದತ್ತನು ಬಡತನದ ಕೇಡುಗಳನ್ನು ಕುರಿತು ಚಿಂತಿಸಿದ ಮಾತ್ರಕ್ಕೇ ಆ ಕೇಡುಗಳೆಲ್ಲವೂ ಅವನೊಬ್ಬನಿಗೇ ಬಂದು ಮುತ್ತಿಕೊಳ್ಳಬೇಕೆಂಬ ಅಗತ್ಯವಿಲ್ಲ. ಸಜ್ಜಲಕನ ಹರಕೆಯೂ ಹಾಗೆಯೇ. ''ಇವರಿಗೆ ಬರುವ ಕೇಡು ಇವರ ಶತ್ರುಗಳಿಗೇ ಬರಲಿ'' ಎನ್ನುವುದು ಲೋಕ ರೂಢಿಯ ಮಾತು. ಆ ಕೇಡು ಬಂದೇ ಬರುವುದೆಂಬ ಖಂಡಿತವೇನೂ ಇಲ್ಲ. ಬಂದೇ ತೀರ ಬೇಕೆಂಬ ಅಪೇಕ್ಷೆಯೂ ಇಲ್ಲ.

ಚಾರುದತ್ತ-ವಸಂತಸೇನೆಯರ ಒಲವನ್ನು ಚಿತ್ರಿಸುವುದು ಭಾಸನ ಉದ್ದೇಶವೆಂದು ಕಾಣುತ್ತದೆ. ಸಜ್ಜಲಕ-ಮದನಿಕೆಯರ ಪ್ರಣಯ ಚರಿತ್ರೆ ಆ ಉದ್ದೇಶಕ್ಕೆ ಸಹಕಾರಿ. ಅದರಿಂದ ಚಾರುದತ್ತ-ವಸಂತಸೇನೆಯರ ಘನತೆಯೂ ಔದಾರ್ಯವೂ ಸ್ಪಷ್ಟವಾಗಿ ಬೆಳಗಿ ಅವರ ಸಮಾಗಮವಾಗಲು ತುಂಬ ಸಹಾಯವಾಗುತ್ತದೆ. ಇಲ್ಲಿ ಮತ್ತೊಂದು ವಿಶೇಷವಿದೆ. ವಸಂತಸೇನೆ ತಾನಾಗಿಯೇ ಚಾರುದತ್ತನಿಗೆ ಒಲಿದು ಬಂದವಳು. ಅವನ ಬಳಿ ಹೋಗಿ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ತಕ್ಕ ಸಮಯ ದೊರೆತೀತೇ ಎಂದು ತವಕದಿಂದ ನಿರೀಕ್ಷಿಸುತ್ತಿದ್ದವಳು. ಅಂಥ ಸಮಯ ಸಿಕ್ಕಿದಾಗ ಎಚ್ಚರದಲ್ಲಿಯೂ ಕನಸು ಕಂಡಂತಾಗುವಷ್ಟು ಸುಖವನ್ನನುಭವಿಸುತ್ತಾಳೆ. ಅದೇ ಸಂತೋಷದ ಭರದಲ್ಲಿ ಪ್ರಿಯನ ಬಳಿಗೆ ಹೊರಡುತ್ತಾಳೆ. 'ಅಮೃತಾಂಕ ನಾಟಕ'ವಾಗುತ್ತದೆ. ಈ ರೀತಿ ನಾಯಕ ನಾಯಿಕೆಯರ ಸಮಾಗಮವಾದ ಬಳಿಕ ಭಾಸನ ಉದ್ದೇಶ ಈಡೇರಿದಂತಾಗಲಿಲ್ಲವೇ ?

ರೂಢಿಯ ಭರತವಾಕ್ಯವಿಲ್ಲದಿದ್ದರೂ ಸಜ್ಜಲಕನ ಹರಕೆಯೇ ನಿಜವಾದ ಭರತವಾಕ್ಯವೆಂದು ಭಾವಿಸಬಹುದು. ಇದಲ್ಲದೆ 'ಅಮೃತಾಂಕ ನಾಟಕಂ ಸಂವೃತ್ತಂ' ಎಂಬ ಮಂಗಳಕರವಾದ ಸಮಾಪ್ತಿವಾಕ್ಯ ಬೇರೆ ಇದೆ. ಇದನ್ನೆಲ್ಲ ಗಮನಿಸಿದರೆ 'ಚಾರುದತ್ತ' ನಾಟಕ ಇಲ್ಲಿಗೇ ಮುಗಿಯಿತೆಂದು ನಂಬುವುದು ಸಾಧುವಾಗಿ ಕಾಣುತ್ತದೆ.

'ಮೃಚ್ಛಕಟಿಕ'ಕಾರ ನಿಪುಣನಾದ ಕವಿ. ಈ ನಾಲ್ಕು ಅಂಕಗಳ ಆಧಾರದ ಮೇಲೆ ತನ್ನ ಬುದ್ಧಿಸಾಮರ್ಥ್ಯದಿಂದ ಬಹು ರಮಣೀಯವಾದ ಪ್ರಕರಣವನ್ನು ಕಟ್ಟಿದ್ದಾನೆ. ಆ ಕಥೆಯನ್ನೆಲ್ಲ ಪೂರ್ತಿಯಾಗಿ ಹೋಲುವ 'ಚಾರುದತ್ತ' ನಾಟಕ ಸಿಕ್ಕುವ ವರೆಗಾದರೂ ಶೂದ್ರಕನಿಗೆ ಸ್ವಲ್ಪ ಕಲ್ಪನಾಶಕ್ತಿಯನ್ನು ಮೀಸಲಿಟ್ಟು ಈಗ ನಮಗೆ ದೊರೆತಿರುವ 'ಚಾರುದತ್ತ' ಪೂರ್ಣವಾಗಿದೆಯೆಂದು ಭಾವಿಸುವುದು ತಪ್ಪಾಗಲಾರದು.

ಲೀಲಾವತೀ

(ಅದರ ಲಾಲಿತ್ಯ ಮತ್ತು ಸಂದೇಶ)

"ಭಾಸ್ಕರಾಚಾರ್ಯರಿಗೆ ಲೀಲಾವತಿಯೆಂಬ ಮುದ್ದಿನ ಮಗಳಿದ್ದಳು. ಚೆಲುವೆ, ಜಾಣೆ. ಆದರೆ ಆಕೆಯ ಹಣೆಯಲ್ಲಿ ವಿಧಿ ವೈಧವ್ಯದುಃಖವನ್ನು ಲಿಖಿಸಿದ್ದನು. ಜಾತಕ ಪರಿಶೋಧನೆಯಿಂದ ಈ ವಿಷಯವು ತಂದೆಗೆ ಗೊತ್ತಾಗಿ ಆತನು ಕೊರಗುತ್ತಿದ್ದನು. ಲೀಲಾವತಿ ಪ್ರಾಪ್ತವಯಸ್ಕಳಾದಳು, ವರನಿಶ್ಚಯವಾಯಿತು. ತಂದೆಯು ಬಹು ಶ್ರಮಪಟ್ಟು ಸಂಶೋಧಿಸಿ ವೈಧವ್ಯದೋಷಭಂಗವಾಗುವಂತಹ ವಿವಾಹ ಮುಹೂರ್ತವೊಂದನ್ನು ಹುಡುಕಿದನು. ಧಾರೆಯ ದಿನ ಮುಹೂರ್ತಸಾಧನೆಗಾಗಿ ಒಂದು ಜಲ ಯಂತ್ರವನ್ನೂ ನಿರ್ಮಿಸಿಟ್ಟನು. ಸೂರ್ಯೋದಯದಿಂದ ಮೊದಲುಗೊಂಡು ಒಂದು ಪ್ರಮಾಣದ ನೀರು ಲಾಳಿಕೆಯಿಂದ ಪಾತ್ರೆಯೊಳಕ್ಕೆ ಹರಿದರೆ ಮುಹೂರ್ತವೊದಗಿತೆಂದು ಆತನ ಲೆಕ್ಕ. ಆದರೆ ವಿಧಿವಿಲಾಸವನ್ನು ಮೀರಬಲ್ಲವರಾರು? ಆ ನೂತನ ಯಂತ್ರವು ಲೀಲಾವತಿಯ ಮನಸ್ಸನ್ನು ಸೆಳೆಯಿತು. ವಧುವು ಹತ್ತಿರ ಹೋಗಿ ಅದನ್ನು ಈಕ್ಷಿಸುತ್ತ ನಿಂತಳು. ಆಗ ಆಕೆಯ ಕಂಠಮಾಲೆಯಿಂದ ಒಂದು ಮುತ್ತು ಸರಿದು ಯಾರಿಗೂ ಅರಿವಾಗದಂತೆ ಲಾಳಿಕೆಯೊಳಕ್ಕೆ ಬಿತ್ತು. ಇದರಿಂದ ನೀರಿನ ಹರಿಯುವಿಕೆ ಹೆಚ್ಚು ಕಡಮೆಯಾಗಿ ಮುಹೂರ್ತ ತಪ್ಪಿಹೋಯಿತು. ವಿವಾಹವಾದ ಸ್ವಲ್ಪಕಾಲದಲ್ಲೇ ವೈಧವ್ಯ ಪ್ರಾಪ್ತಿಯಾಯಿತು. ಮಗಳ ದುಃಖವನ್ನು ನೋಡಲಾರದೆ ಭಾಸ್ಕರಾಚಾರ್ಯರು ಆಕೆಯ ಮನಸ್ಸನ್ನು ಬೇರೆ ಕಡೆ ತಿರುಗಿಸುವುದಕ್ಕಾಗಿ ಆಕೆಗೆ ಗಣಿತಶಾಸ್ತ್ರವನ್ನು ಬೋಧಿಸತೊಡಗಿದರು. ಈ ಬೋಧನೆಯ ಫಲವೇ 'ಲೀಲಾವತೀ ಗ್ರಂಥ.' "—ಆದರೆ ಈ ಕರುಣ ಕಥೆಗೆ ಆಧಾರವಿಲ್ಲ. ಯಾರೋ ಸಾಹಿತಿಗಳು ಹೇಳಿದ ಸುಳ್ಳಿರಬಹುದು. ಸಾಹಿತಿಗಳು ಸುಳ್ಳು ಹೇಳುವುದು ಅಪರೂಪವಲ್ಲ. ಲೀಲಾವತಿಯ ಪದ್ಯಗಳ ಕೊನೆಯಲ್ಲಿ, "ಅಯೇ ಬಾಲೇ ಲೀಲಾವತಿ ಮತಿಮತಿ ಬ್ರೂಹಿ", "ಬ್ರೂಹಿ ಕಾಂತೇಽಲಿ ಸಂಖ್ಯಾಂ", "... ಬ್ರೂಹಿ ತಂ! ರಾಶಿಂ ವೇತ್ಸಿಹಿ ಚಂಚಲಾಕ್ಷಿ ವಿಮಲಾಂ ಬಾಲೇ ವಿಲೋಮಕ್ರಿಯಾಂ" ಮುಂತಾದ ಸ್ತ್ರೀಸಂಬೋಧನೆ ಇರುವುದರಿಂದ ಅವರು ಹಾಗೆ ಕಥೆ ಹೊಸೆದಿರಬಹುದು. ಕಥೆ ಇರಲೇಳಿ, ಚೆನ್ನಾಗಿದೆ. ಸಾಹಿತಿಗಳು ಹೇಳುವ ಸುಳ್ಳು ಬಹುಮಟ್ಟಿಗೆ ಚೆನ್ನಾಗಿಯೇ ಇರುತ್ತದೆ. ನಿಮಗೆ ಬೇಕಾದರೆ ಇನ್ನೊಂದು ಕಥೆಯನ್ನು ಕಟ್ಟಿ. ಅದನ್ನು ಸುಳ್ಳೆಂದು ಸಾಧಿಸಿ ಆಗಬೇಕಾದ್ದಾದರೂ ಏನು? "ವಿಶಾಲ ನೀಲಗಗನದ ಮಧ್ಯದಲ್ಲಿ ನಡುರಾತ್ರಿಯಲ್ಲಿ ಒಂದೇ ಒಂದು ನಕ್ಷತ್ರವಿದ್ದ

ಹಾಗಿದೆ" ಎಂದು ಅವರು ಯಾವುದಕ್ಕಾದರೂ ಉಪಮೆ ಹೇಳಿದರೆ, "ಇಲ್ಲ, ಶುದ್ಧ ಸುಳ್ಳು. ಅರ್ಧರಾತ್ರಿಯಲ್ಲಿ, ತಿಳಿಯಾಗಸದಲ್ಲಿ, ನಡುನೆತ್ತಿಯ ಮೇಲೆ ಒಂದೇ ಒಂದು ನಕ್ಷತ್ರವಿದ್ದು, ಉಳಿದ ನಕ್ಷತ್ರಗಳೆಲ್ಲಾ ಮಾಯವಾಗಿದ್ದ ಪರಿಸ್ಥಿತಿಯನ್ನು ಕಂಡವರಾರನ್ನೂ ಅರಿಯೆವು" ಎಂದು ವಾದಿಸಲೇಕೆ? ಅದನ್ನು ಕಾಣುವುದು ಸಾಧ್ಯವಾದರೆ ಆ ನೋಟ ಸೊಗಸಾಗಿಯೇ ಇರುತ್ತದೆ. ಒಂದೊಂದು ವೇಳೆ ಈ ರೀತಿಯ 'ಸುಂದರವಾದ ಸುಳ್ಳು' ಸುಂದರವಾಗಿರುವುದರ ಜೊತೆಗೆ ಪ್ರಯೋಜನಕರವಾಗಿರುವುದೂ ಉಂಟು, ಒಂದೊಂದು ವೇಳೆ ಪ್ರಸಾದಕರವಾಗುವುದೂ ಉಂಟು. ಆ ಪ್ರಸ್ತಾಪವನ್ನು ಜೀರ್ಣೋದ್ಧಾರ ಮಾಡೋಣ. ಮೇಲಿನ ಕಥೆಯೂ ಇರಲಿ. ಗ್ರಂಥದಲ್ಲಿ ಒಂದೆರಡು ಕಡೆ ಬಾಲಕನ ಅಥವಾ ಸುಮಂಗಲಿಯ ಸಂಬೋಧನೆ ಇದ್ದರೆ ಅದನ್ನೂ ಉಪೇಕ್ಷಿಸೋಣ.

ಆದರೆ ಲೀಲಾವತಿಯಲ್ಲಿರುವ ಸ್ತ್ರೀಸಂಬೋಧನೆಯು ಮಗಳನ್ನು ಕುರಿತದ್ದು ಎಂದು ಹೇಳುವುದಕ್ಕಿಂತ ಪ್ರೇಯಸಿಯನ್ನು ಕುರಿತದ್ದು ಎಂದು ಹೇಳುವುದು ಇನ್ನೂ ಸಹಜವಾಗಿ ಒಪ್ಪುತ್ತದೆ. ಗಂಡಹೆಂಡಿರು ತಮ್ಮ ವಿನೋದಕ್ಕಾಗಿ ಸಮಸ್ಯೆಗಳನ್ನು (ಒಗಟೆಗಳನ್ನು) ಹೇಳಿಕೊಳ್ಳುವ ರೀತಿ ಆ ಪದ್ಯಗಳಲ್ಲಿ ಕಾಣಬರುತ್ತದೆ. "ಕಾಲಾರು ಕಂಗಳಾರು ತಲೆಮೂರು ಕಿವಿನಾಲ್ಕು ಬಾಲಂಗಳೆರಡೂ ಭಾಮಿನಿ ಹೇಳೆ" ಎಂದು ಮೂಷಕವಾಹನನೂ ಸರ್ಪಾಲಂಕೃತನೂ ಆದ ಗಣೇಶನ ಮೇಲೆ ಒಗಟೆ ಹೇಳಿದ ಹಾಗೆ.

ಅಲಿಕುಲದಲಮೂಲಂ ಮಾಲತೀಂ ಯಾತಮಷ್ಟೌ |
ನಿಖಿಲ ನವಮಭಾಗಾಶ್ಚಾಲಿನೀ ಭೃಂಗಮೇಕಂ ||
ನಿಶಿ ಪರಿಮಲಲುಬ್ಧಂ ಪದ್ಮಮಧ್ಯೇ ನಿರುದ್ಧಂ |
ಪ್ರತಿರಣತಿ ರಣಂತಂ ಬ್ರೂಹಿ ಕಾಂತೇಽಲಿ ಸಂಖ್ಯಾಂ ||

ಈ ಪದ್ಯದಲ್ಲಿ "ಎಲೆಕಾಂತೆ, ಒಂದು ಭೃಂಗಸಮೂಹವಿತ್ತು. ಅದರ ಅರ್ಧಭಾಗದ ವರ್ಗಮೂಲದಷ್ಟು ಭೃಂಗಗಳು ಮಾಲತೀ ಪುಷ್ಪವನ್ನು ಕುರಿತು ತೆರಳಿದವು, ಒಂಭತ್ತನೆಯ ಭಾಗದ ಎಂಟರಷ್ಟು ಹಾಗೆಯೇ ಹೋದವು. ಪದ್ಮಕೋಶದಲ್ಲಿ ಸಿಲುಕಿ ಒಂದು ಭೃಂಗವು ಝೇಂಕರಿಸುತ್ತಿರಲು ಇನ್ನೊಂದು ಭೃಂಗವು ಆ ಪದ್ಮದ ಬಳಿ ಅದಕ್ಕೆ ಪ್ರತಿಧ್ವನಿ ಕೊಡುತ್ತಿತ್ತು. ರಾತ್ರಿಯಲ್ಲಿ ಪರಿಮಲ ಲುಬ್ಧತೆಯಿಂದ ಪದ್ಮಪುಷ್ಪವನ್ನು ಸಾರಿದ್ದ ಆ ಭೃಂಗವು ಆ ಮೇಲೆ ಪದ್ಮವು (ಇಂದೀವರವು) ಮುಚ್ಚಿಕೊಂಡ ಕಾರಣದಿಂದ ಅಲ್ಲಿಯೇ ಸಿಲುಕಿಕೊಂಡಿತ್ತು. ಭೃಂಗಗಳ ಸಂಖ್ಯೆಯನ್ನು ಹೇಳು." ಎಂದು ಕೇಳಿದ್ದಾರೆ. ಇನ್ನೊಂದರಲ್ಲಿ—


ಅಸ್ತಿ ಸ್ತಂಭತಲೇ ವಿಲಂ ತದುಪರಿ ಕ್ರೀಡಾಶಿಖಂಡೀ ಸ್ಥಿತಃ |
ಸ್ತಂಭೇ ಹಸ್ತನವೋಚ್ಛ್ರಿತೇ ತ್ರಿಗುಣಿತಸ್ತಂಭ ಪ್ರಮಾಣಾಂತರೇ ||
ದೃಷ್ಟ್ವಾಹಿಂ ವಿಲಮಾವ್ರಜಂತಮುಪತತ್ತಿರ್ಯಕ್ ಸ ತಸ್ಯೋಪರಿ |
ಕ್ಷಿಪ್ರಂ ಬ್ರೂಹಿ ತಯೋರ್ವಿಲಾತ್ಕತಿಮಿತೈಃ ಸಾಮ್ಯೇನ ಗತ್ಯೋರ್ಯುತಿಃ ||

ಎಂದರೆ, "ಒಂದು ಸ್ತಂಭದ ತುದಿಯಲ್ಲಿ ಒಂದು ನವಿಲು ಕುಳಿತಿತ್ತು. ಸ್ತಂಭದ ಬುಡದಲ್ಲಿ ಹಾವಿನ ಬಿಲವಿತ್ತು. ಬಿಲಕ್ಕೆ ಬರುತ್ತಿದ್ದ ಹಾವನ್ನು ಕಂಡು ನವಿಲು ಹಾರಿ ಅದನ್ನು ಹಿಡಿಯಿತು. ಸ್ತಂಭದ ಎತ್ತರ ಒಂಭತ್ತು ಹಸ್ತಗಳು. ಹಾವು ಬಿಲದಿಂದ ಇಪ್ಪತ್ತೇಳು ಹಸ್ತಗಳ ದೂರದಲ್ಲಿದ್ದಾಗ ನವಿಲು ಅದನ್ನು ಕಂಡದ್ದು. ಎರಡರ ವೇಗವೂ ಸಮವಾಗಿದ್ದರೆ, ಬಿಲದಿಂದ ಎಷ್ಟು ದೂರದಲ್ಲಿ ಎರಡೂ ಸಂಧಿಸಿದವೆಂಬುದನ್ನು ಕ್ಷಿಪ್ರವಾಗಿ ಹೇಳು" ಎಂಬ ಗಣಿತ ಸಮಸ್ಯೆ ಇದೆ. (ಪುಟ ೮೨ರ ಚಿತ್ರವನ್ನು ನೋಡಿ.) ಹೀಗೆಯೇ ಇನ್ನೂ ನೂರಾರು ಸಮಸ್ಯೆಗಳಿವೆ. ಬೇಕಾದರೆ ಅವುಗಳನ್ನು ನಾವೂ ನಮ್ಮ ನಲ್ಲೆಯರಿಗೆ ಒಡ್ಡಿ ನಲಿಸಬಹುದಾದಷ್ಟು ಅನುಕೂಲವಾಗಿವೆ. ಗಣಿತದ ಮೇಲೆ ಸ್ತ್ರೀಯರಿಗೆ ಸಹ ಆಸಕ್ತಿ ಹುಟ್ಟಿಸಬಹುದೆಂಬುದನ್ನು ಭಾಸ್ಕರರು ತೋರಿಸಿದ್ದಾರೆ.

ಗ್ರಂಥವು ಗಣಿತದ ಅಭ್ಯಾಸಿಗಳಿಗಾಗಿ—ಭಾಸ್ಕರರ ಶಿಷ್ಯವರ್ಗದವರಿಗಾಗಿ—ಬರೆಯಲ್ಪಟ್ಟಿತೆಂದು ಮೇಲೆಯೇ ಕಾಣಬರುತ್ತದೆ. ಸಂಕಲನದಿಂದ ಹಿಡಿದು ಈಗಿನ ಇಂಟರ್‌ಮೀಡಿಯೇಟ್ ದರ್ಜೆಯ ವರೆಗಿನ ಅಂಕಗಣಿತ, ಬೀಜಗಣಿತ, ರೇಖಾ ಗಣಿತ, ಕ್ಷೇತ್ರಗಣಿತಗಳ ಅನೇಕ ವಿಷಯಗಳು ಅದರಲ್ಲಿವೆ. ಗ್ರಂಥಕರ್ತರು ಹೇಳಿರುವ ರೀತಿಗೆ ಒಲಿದ ಮನಸ್ಸು ಅವರು ಹೂಡಿರುವ ಸಮಸ್ಯೆಗಳನ್ನು ಬಿಡಿಸೋಣವೆಂಬ ಹುಮ್ಮಸ್ಸಿಗೆ ಏರುತ್ತದೆ. ಆ ಸಮಸ್ಯೆಗಳಲ್ಲಿ ಕುಹಕತನವಿಲ್ಲ, ಮೋಸವಿಲ್ಲ. "ಒಂದು ಮರದ ಮೇಲೆ ನೂರು ಹಕ್ಕಿಗಳು ಕುಳಿತಿದ್ದುವು. ಒಬ್ಬನು ಬಂದೂಕವನ್ನು ಹಾರಿಸಿ ಒಂದು ಹಕ್ಕಿಯನ್ನು ಕೆಡವಿದನು. ಉಳಿದ ಹಕ್ಕಿಗಳೆಷ್ಟು?" ಎಂಬ ಪ್ರಶ್ನೆಯ ಮೋಸವು ಎಲ್ಲರಿಗೂ ಗೊತ್ತಿದೆ. "ಬಂದೂಕದ ಶಬ್ದಕ್ಕೆ ಉಳಿದುವೆಲ್ಲಾ ಹಾರಿ ಹೋದವು" ಎಂದು ಇದಕ್ಕೆ ಉತ್ತರವಂತೆ! ಈ ಬಗೆಯ ಚಮತ್ಕಾರವು ಲೀಲಾವತಿಯಲ್ಲಿಲ್ಲ. ಕ್ರಮವಾದ ಸೂತ್ರಗಳನ್ನೂ ಮಾರ್ಗಗಳನ್ನೂ ಉದಾಹರಣೆಗಳನ್ನೂ ನ್ಯಾಸಗಳನ್ನೂ ನಕ್ಷೆಗಳನ್ನೂ ಅಭ್ಯಾಸಗಳನ್ನೂ ಉತ್ತರಗಳನ್ನೂ ಒಳಕೊಂಡು ವಿಷಯ ನಿರೂಪಣೆಯು ಶಾಸ್ತ್ರೀಯವಾದ ರೀತಿಯಲ್ಲಿದೆ. ಹೇಗೆಂದರೆ ಶ್ರೇಢಿಯಲ್ಲಿರುವ

ಆದ್ಯೇ ದಿನೇ ದ್ರಮ್ಮಚತುಷ್ಟಯಂ ಯೋ ದತ್ವಾ ದ್ವಿಜೇಭ್ಯೋನುದಿನಂ ಪ್ರವೃತ್ತಃ |
ದಾತುಂ ಸಖೇ ಪಂಚಚಯೇನ ಪಕ್ಷೇ ದ್ರಮ್ಮಾ ವದ ದ್ರಾಕ್ಕತಿ ತೇನ ದತ್ತಾಃ ||

ಎಂದರೆ, "ಒಬ್ಬನು 15 ದಿನಗಳ ಕಾಲ ಬ್ರಾಹ್ಮಣರಿಗೆ ದಾನಮಾಡಿದನು. ಮೊದಲನೆಯ ದಿನ 4 ದ್ರಮ್ಮಗಳನ್ನು ಕೊಟ್ಟನು. ಎರಡನೆಯ ದಿನ 9 ದ್ರಮ್ಮಗಳು, ಹೀಗೆ ಐದೈದಾಗಿ



ಚಿತ್ರಗಾರರು: ಶ್ರೀಮಾನ್ ಬಿ. ಎ. ರಾಮ ಅಯ್ಯಂಗಾರ್.

ಹೆಚ್ಚಿಸಿದನು. ಒಟ್ಟು ಎಷ್ಟು ದ್ರಮ್ಮಗಳಾದವು?" ಎಂಬ ಉದಾಹರಣೆಯನ್ನು ತೆಗೆದುಕೊಳ್ಳಿ. ಈಗ 4 + 9 + 14 + . . . ಹೀಗೆ 15 ಸಂಖ್ಯೆಗಳನ್ನು ಬರೆದು ಕೊಡಬೇಕು. ಈ ಉದಾಹರಣೆಯ ಹಿಂದೆ ವಿಧಿ ಹೀಗೆ ಉಕ್ತವಾಗಿದೆ: "ಬೇಕಾದ ಅಂತರವನ್ನಿಟ್ಟುಕೊಂಡಾಗ, ಪದದಲ್ಲಿ (number of terms) 1ನ್ನು ಕಳೆದು, ಚಯ ದಿಂದ (common difference) ಗುಣಿಸಿ ಆದಿಸಂಖ್ಯೆಗೆ ಸೇರಿಸಿದರೆ ಅಂತ್ಯಸಂಖ್ಯೆ ಗೊತ್ತಾಗುತ್ತದೆ. ಆದಿ ಮತ್ತು ಅಂತ್ಯಸಂಖ್ಯೆಗಳ ಮೊತ್ತದ ಅರ್ಧವೇ ಮಧ್ಯಧನ (Arithmetic Mean). ಮಧ್ಯಧನವನ್ನು ಪದದಿಂದ ಗುಣಿಸಿದರೆ ಸರ್ವಧನ (Sum) ಗೊತ್ತಾಗುತ್ತದೆ." ಅಲ್ಲದೆ ಉದಾಹರಣೆಯ ಕೆಳಗೆ ನ್ಯಾಸವು ಈ ರೀತಿ ಇದೆ: "ಆದಿಸಂಖ್ಯೆ 4; ಚಯ 5; ಪದ 15; ಅಂತ್ಯಧನ 74; ಮಧ್ಯಧನ 39; ಸರ್ವಧನ 585." ಹೀಗೆ ವಿಧಿ—ಉದಾಹರಣೆ—ಅಭ್ಯಾಸ—ನ್ಯಾಸ—ಉತ್ತರ. ಇದು ಲೀಲಾವತಿಯಲ್ಲಿ ಅನುಸರಿಸಲ್ಪಟ್ಟಿರುವ ಕ್ರಮ. ವಿಧಿಗಳಿಗೆ ಕಾರಣಗಳನ್ನು ಯೋಚಿಸುವ ಕೆಲಸವನ್ನು ಮಾತ್ರ ಗ್ರಂಥಕರ್ತರು ವಾಚಕರಿಗೆ ಬಿಟ್ಟಿದ್ದಾರೆ. ಕಾರಣ ಗಳೂ ಬಹುಶಃ ಸುಲಭವಾಗಿಯೇ ಸಿಗುತ್ತವೆ.

ಹೀಗೆ ವಸ್ತುವನ್ನು ಸುಲಭವನ್ನಾಗಿಯೂ ಆಕರ್ಷಕವನ್ನಾಗಿಯೂ ಮಾಡಿದ ಭಾಸ್ಕರರು ಪ್ರಶ್ನೆಗಳಿಗೆ ಉತ್ತರಗಳನ್ನು ಕ್ಷಿಪ್ರವಾಗಿ ಹೇಳೆನ್ನುವುದು ಸ್ವಾಭಾವಿಕ ವಾಗಿಯೇ ಇದೆ. ಅದರಿಂದ ಯಾರೂ ಕೋಪಿಸಬೇಕಾಗಿಲ್ಲ. 'ಕ್ಷಿಪ್ರ'ವಾಗಿ ಹೇಳ ಲಾರದವರು ಗುಣಾಕಾರ ಹಾಕಿಕೊಂಡೇ ಹೇಳಲಿ. ಆದರೆ ಕ್ಷಿಪ್ರವಾಗಿ ಹೇಳುವುದು ಅಸಾಧ್ಯವಲ್ಲ. ಅದಕ್ಕೆ ಪ್ರಯತ್ನಮಾಡುವುದು ಒಳ್ಳೆಯದು. ಅಂಕಗಣಿತದಲ್ಲಿ ಎಂತಹ ಲೆಕ್ಕವನ್ನು ಕೊಟ್ಟರೂ ಒಂದೇ ನಿಮಿಷದಲ್ಲಿ ಗಣಿತಶಾಸ್ತ್ರ ಪಾರಂಗತರನ್ನು ಸಹ ವಿಸ್ಮಯಗೊಳಿಸುವ ಹಾಗೆ ಉತ್ತರಗಳನ್ನು ಹೇಳಬಲ್ಲ ಪ್ರತಿಭಾಶಾಲಿಗಳನ್ನು ನಾವು ನೋಡಿದ್ದೇವೆ. ಅಂಥವರು ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಇದ್ದರು; ಈಗಲೂ ಇದ್ದಾರೆ. ನಾವು ಕಾಲುಘಂಟೆಯ ಕಾಲ ಶ್ರಮಿಸಿ, ಸರಿಯಾಗಿಯೋ ತಪ್ಪಾಗಿಯೋ ಮಾಡುವಷ್ಟು ದೊಡ್ಡ ಗುಣಾಹಾರಗಳನ್ನೂ ವರ್ಗಮೂಲಗಳನ್ನೂ ವಿವಿಧ ಪರಿವರ್ತನೆಗಳನ್ನೂ ಅವರು ಒಂದು ಕ್ಷಣದಲ್ಲಿ ಸರಿಯಾಗಿ ಹೇಳುತ್ತಾರೆ. ಶ್ಯಾಮಣ್ಣನೆಂಬ ಕನ್ನಡಿಗನೊಬ್ಬನನ್ನು ಈ ಬಗೆಯ ಪರೀಕ್ಷೆಗೀಡುಮಾಡಿ ಪೀಡಿಸುವ ವಿನೋದದಲ್ಲಿ ನಾವು ಅನೇಕ ಬಾರಿ ತೊಡಗಿದ್ದೇವೆ. ಶ್ಯಾಮಣ್ಣನ ಗುಟ್ಟು ಒಂದೊಂದು ವೇಳೆ ಶ್ಯಾಮಣ್ಣನಿಗೇ ಗೊತ್ತಿರುವುದಿಲ್ಲ. ಆದರೆ ಆತನು ಪ್ರತಿಭಾ ಶಾಲಿಯಾದ ಗಣಕನೆಂಬುದರಲ್ಲಿ ಸಂಶಯವಿಲ್ಲ. ಹಿಂದೆ ಬಿಡ್ಡರ್ ಎಂಬ ಪಾಶ್ಚಾತ್ಯ ಪ್ರತಿಭಾಶಾಲಿಯೊಬ್ಬನನ್ನು ಬಾಲಕರು ಅನೇಕ ಪ್ರಶ್ನೆಗಳಿಂದ ಬಾಧಿಸಿ, ಕೊನೆಗೆ

"ಭೂಮಿಗೂ ಚಂದ್ರನಿಗೂ ಇಷ್ಟು ಲಕ್ಷ ಮೈಲಿ ದೂರವಾದರೆ ಎರಡನ್ನೂ ಕೂಡಿಸಲು ಎತ್ತಿನ ಬಾಲಗಳೆಷ್ಟು ಬೇಕಾಗುತ್ತವೆ?" ಎಂದು ಪಟಿಂಗತನ ಮಾಡಿದರಂತೆ. ಅದಕ್ಕೆ ಆತನು ಬೇಸರದಿಂದ "ಸಾಕಾದಷ್ಟು ಉದ್ದದ ಒಂದು ಬಾಲವಾದರೆ ಸಾಕು" ಎಂದು ಉತ್ತರ ಹೇಳಿ ಹೊರಟುಹೋದನಂತೆ. ಅದಿರಲಿ, ಇಂತಹ ಪ್ರತಿಭಾಶಾಲಿಗಳನ್ನು ಲಾಗ್ರಾಂಜ್ ಮೊದಲಾದ ವಿದ್ವಾಂಸರು ಅನೇಕ ವೇಳೆ ತಮ್ಮ ಕೆಲಸಗಳಿಗೆ ಉಪಯೋಗಿಸಿಕೊಂಡಿದ್ದಾರೆ. ಕ್ಷಿಪ್ರವಾಗಿ ಉತ್ತರ ಹೇಳುವ ಶಕ್ತಿಯು ಕೆಲವು ವೇಳೆ ದೈವದತ್ತವಾಗಿಯೂ ಕೆಲವು ವೇಳೆ ಅಭ್ಯಾಸಾನುಸರಿಯಾಗಿಯೂ ಬರುತ್ತದೆ. ಲೀಲಾವತಿಯನ್ನೋದಿದವರ ಬುದ್ಧಿವೇಗವು ಅಂಥವರ ಮಟ್ಟಕ್ಕೇರಲೆಂಬುದೂ ಭಾಸ್ಕರಾಚಾರ್ಯರ ಒಂದು ಗುರಿ.

ತಮ್ಮ ಮುಖ್ಯೋದ್ದೇಶವನ್ನು ಭಾಸ್ಕರರು ಪ್ರಥಮ ಶ್ಲೋಕದಲ್ಲೇ ಹೇಳಿದರು:

ಪಾಟೀಂ ಸಂಗಣಿತಸ್ಯ ವಚ್ಮಿ ಚತುರಪ್ರೀತಿಪ್ರದಾಂ ಪ್ರಸ್ಫುಟಾಂ |
ಸಂಕ್ಷಿಪ್ತಾಕ್ಷರಕೋಮಲಾಮಲಪದೈರ್ಲಾಲಿತ್ಯ ಲೀಲಾವತೀಂ ||

ಎಂದು, ಪ್ರೀತಿಪ್ರದವೂ ಲಲಿತವೂ ಆದ ಇಂಥ ವಿಜ್ಞಾನ ಗ್ರಂಥಗಳ ಅವಶ್ಯಕತೆಯನ್ನು ಹನ್ನೆರಡನೆಯ ಶತಮಾನದ ಅವರು ಗ್ರಹಿಸಿದರೂ ಇಪ್ಪತ್ತನೆಯ ಶತಮಾನದ ನಾವು ಇನ್ನೂ ಗ್ರಹಿಸಿಲ್ಲ. ಗ್ರಹಿಸುವುದು ತಾನೇ ಹೇಗೆ ಸಾಧ್ಯ? ಇಂದಿನ ನಮ್ಮ ವಿಜ್ಞಾನಿಗಳಿಗೆ ಸಾಹಿತ್ಯಬೇಕಿಲ್ಲ. ಸಾಹಿತಿಗಳು ವಿಜ್ಞಾನವೆಂದರೆ ಹಾರಿಬೀಳುತ್ತಾರೆ. ಪ್ರತಿಯೊಬ್ಬರೂ ಹುಟ್ಟುವಾಗಲೇ ಗಂಡೋ ಹೆಣ್ಣೋ ಆಗಿರುವಂತೆಯೇ ಸಾಹಿತಿಯೋ ವಿಜ್ಞಾನಿಯೋ ಆಗಿಯೂ ಇರುತ್ತಾರೆ ಎಂಬುದು ಇಂದಿನ ನಮ್ಮ ವಿದ್ವಾಂಸರ ಮತ. ಅಲ್ಲದೆ ಈ ಎರಡು ಪಂಗಡಗಳಿಗಿರುವ ಅಂತರವು ದಿನೇ ದಿನೇ ಹೆಚ್ಚುತ್ತಲೇ ಇದೆ. ಆದರೆ "ನಾವು ಸಾಹಿತಿಗಳು. ವಸಂತ ಋತುವಿನಲ್ಲಿ ಪಾಡುತ್ತೇವೆ. ಮಳೆಗಾಲದಲ್ಲಿ ಮೇಘಗಳಿಗೆ ಸಂದೇಶ ಕೊಡುತ್ತೇವೆ. ಉಳಿದ ಕಾಲದಲ್ಲಿ ಬೆಚ್ಚಗೆ ಮಲಗುತ್ತೇವೆ. ಬುದ್ಧಿಶ್ರಮ ನಮಗೆ ಬೇಡ. ನಮಗೂ ವಿಜ್ಞಾನಕ್ಕೂ ಸಂಬಂಧವಿಲ್ಲ" ಎಂದು ಹೇಳುವ ಸಾಹಿತಿಯನ್ನಾಗಲಿ, "ನಾವು ವಿಜ್ಞಾನಿಗಳು. ನಾವು ಹಾಡುವುದೇ ಇಲ್ಲ. ಎಲ್ಲಾ ಋತುಗಳಲ್ಲೂ ಬುದ್ಧಿಯನ್ನು ಶ್ರಮಿಸುತ್ತೇವೆ. ರಸಾಸ್ವಾದನೆ ನಮಗೆ ಬೇಕಿಲ್ಲ. ನಮಗೂ ಸಾಹಿತ್ಯಕ್ಕೂ ಬಹಳ ದೂರ" ಎಂದು ಹೇಳುವ ವಿಜ್ಞಾನಿಯನ್ನಾಗಲಿ ಭಾಸ್ಕರಾಚಾರ್ಯರು ಒಪ್ಪಲಿಲ್ಲ. ದೇವರು ಮನುಷ್ಯರನ್ನು ಸಾಹಿತಿಗಳು, ವಿಜ್ಞಾನಿಗಳು ಎಂದು ಎರಡು ಭಾಗಮಾಡಿ ಅವರಿಗೆ ಬುದ್ಧಿ ಇಲ್ಲದಂತೆಯೂ ಇವರಿಗೆ ಭಾವನಾಶಕ್ತಿ ಇಲ್ಲದಂತೆಯೂ ಮಾಡಲಿಲ್ಲ. ಏಕೆಂದರೆ, ಬುದ್ಧಿಯ ಹಿಡಿತವಿಲ್ಲದ ಮನಸ್ಸಿನ

ಹಾರಾಟವಾಗಲಿ, ಭಾವನಾಶಕ್ತಿಯ ಉದ್ವೇಗವಿಲ್ಲದ ಬರೀ ಬುದ್ಧಿಯ ವ್ಯಾಪಾರವಾಗಲಿ ನಿರರ್ಥಕವೆಂದು ಆತನಿಗೆ ಗೊತ್ತು. ಪ್ರಪಂಚದ ತುಂಬ ವಿಜ್ಞಾನಿಗಳೇ ಇದ್ದು ಸಾಹಿತಿಗಳಿಲ್ಲದೆಯೇ ಹೋದರೆ ಆ ಪರಿಸ್ಥಿತಿಯಲ್ಲಿ ಎಷ್ಟು ಭಯಂಕರವಾದ ನ್ಯೂನತೆ ಕಾಣುತ್ತದೆಯೋ ಅಷ್ಟೇ ನ್ಯೂನತೆಯು ಬರೀ ಸಾಹಿತಿಗಳೇ ಇರುವ ಪರಿಸ್ಥಿತಿಯಲ್ಲೂ ಕಾಣಬರುತ್ತವೆ. ಪ್ರಪಂಚಕ್ಕೆ ಅನ್ವಯಿಸುವ ಮಾತು ಒಬ್ಬ ವ್ಯಕ್ತಿಗೂ ಅನ್ವಯಿಸುತ್ತದೆ. ಬರೀ ಸಾಹಿತ್ಯದಲ್ಲಾಗಲಿ, ಬರೀ ವಿಜ್ಞಾನದಲ್ಲಾಗಲಿ ಸಂಸ್ಕಾರವನ್ನು ಪಡೆದವನಲ್ಲಿ ನ್ಯೂನತೆ ಇದೆ ಎಂಬುದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬನಲ್ಲೂ ಬುದ್ಧಿ ಭಾವನಾಶಕ್ತಿಗಳೆರಡೂ ಸಮತೂಕದಲ್ಲಿಲ್ಲದೆ ಇರಬಹುದು. ನಿಜ. ಇಷ್ಟು ಕಾರಣದಿಂದಲೇ "ಸತ್ಯ ಸೌಂದರ್ಯಗಳೆರಡೂ ಕೊನೆಗೆ ಒಂದೇ. ಸಾಹಿತ್ಯವಾದರೇನು, ವಿಜ್ಞಾನವಾದರೇನು ? ನನಗೆ ಯಾವ ಶಕ್ತಿ ಬಲವಾಗಿದೆಯೋ ಅದನ್ನು ಪಯೋಗಿಸಿಕೊಂಡರಾಯಿತು. ಇನ್ನೊಂದರಗೊಡವೆಯೇಕೆ ?" ಎಂದು ಹೇಳುವುದಾದರೆ ಅದು "ಯಾವ ಕಣ್ಣಿನಲ್ಲಿ ನೋಡಿದರೂ ಕಾಣಿಸುವುದು ಒಂದೇ. ಈ ಕಣ್ಣಾದರೇನು, ಆ ಕಣ್ಣಾದರೇನು ? ನನಗೆ ಯಾವ ಕಣ್ಣಿನ ಪಟುತ್ವ ಬಲವಾಗಿದೆಯೋ ಅದನ್ನು ಉಪಯೋಗಿಸಿಕೊಂಡರಾಯಿತು. ಇನ್ನೊಂದನ್ನು ಮುಚ್ಚಿಕೊಳ್ಳುತ್ತೇನೆ" ಎಂದ ಹಾಗಾಗುತ್ತದೆ. ಅಥವಾ "ನಡೆದು ಹೋಗುವಾಗ ಎಡಗಾಲಿನ ಗುರಿಯೂ ಬಲಗಾಲಿನ ಗುರಿಯೂ ಒಂದೇ. ಈ ಕಾಲಿನಲ್ಲೇ ಕುಂಟಿಕೊಂಡು ಹೋದರೆ ಊರು ಸಿಗುವುದಿಲ್ಲವೇ ? ಆ ಕಾಲು ಬೇಡವೇ ಬೇಡ" ಎಂಬಂತೆ ಆಗುತ್ತದೆ. ಶುದ್ಧ ಆವಶ್ಯಕತೆಯ ದೃಷ್ಟಿಯಿಂದ ಒಂದೇ ಕಣ್ಣು, ಒಂದೇ ಕೈ, ಒಂದೇ ಕಾಲು ಸಾಕಾದರೂ ದೇವರು ಎರಡೆರಡನ್ನು ಕೊಟ್ಟನು ; ಹಾಗೂ ಬಲಪಾರ್ಶ್ವಕ್ಕೆ (ಒಂದೊಂದು ವೇಳೆ ಎಡಪಾರ್ಶ್ವಕ್ಕೆ) ಹೆಚ್ಚು ಶಕ್ತಿಯನ್ನು ಕೊಟ್ಟನು. ಒಂದು ಪಾರ್ಶ್ವದ ಗೋಜನ್ನೇ ಬಿಡುವ ಹಠವು ಅನನುಕೂಲ, ಹಾಗೂ ಅವಿವೇಕ. ಸ್ವಯಂಕಲ್ಪಿತವಾದ ಕೆಲವು ಕಾರಣಗಳಿಂದ ನಮ್ಮ ವಿದ್ವಾಂಸರು ಈ ಹಠದಲ್ಲಿ ಸಿಕ್ಕಿಕೊಂಡಿದ್ದಾರೆ. ಸರ್ಕಾರಿ ಸಂಬಳವನ್ನು ಪಡೆದು ಖಾಕೀ ಉಡುಪನ್ನು ಧರಿಸಿದ ಪೊಲೀಸನು ತಾನೂ ಒಬ್ಬ ಪ್ರಜೆ, ಒಬ್ಬ ಗೃಹಸ್ಥನೆಂಬುದನ್ನು ಮರೆತಹಾಗೆ, ಸಾಹಿತ್ಯದ ಅಧ್ಯಾಪಕನೆಂದು ಕರೆಸಿಕೊಂಡವನು ವಿಜ್ಞಾನದ ಕಡೆ ಗಮನವನ್ನೇ ಮರೆತಿದ್ದಾನೆ. ವಿಜ್ಞಾನಿಯೂ ಹೀಗೆಯೇ.

ಭಾಸ್ಕರಾಚಾರ್ಯರ ಪಾಂಡಿತ್ಯವಾದರೋ ಸರ್ವತೋಮುಖವಾದುದು. ಲೀಲಾವತಿಯ ಕೊನೆಯಲ್ಲಿ ಅವರ ಶಿಷ್ಯನೊಬ್ಬನು ತನ್ನ ಗುರುವಿನ ಪಾಂಡಿತ್ಯದ ವಿಚಾರವಾಗಿ ಈ ಶ್ಲೋಕವನ್ನು ಸೇರಿಸಿದ್ದಾನೆ:

ಅಷ್ಟ ವ್ಯಾಕರಣಾನಿ ಷಟ್ಚ ಭಿಗಜಾಂ ವ್ಯಾಚಷ್ಟ ತಾಃ ಸಂಹಿತಾಃ |
ಷಟ್ತರ್ಕಾ ಗಣಿತಾನಿ ಪಂಚ ಚತುರೋ ವೇದಾನಧೀತೇಸ್ಮ ಯಃ ||
ರತ್ನಾನಾಂ ತ್ರಿತಯಂ ದ್ವಯಂ ಚ ಬುಬುಧೇ ಮೀಮಾಂಸಯೋರಂತರಂ |
ಸದ್ಬ್ರಹ್ಮೈಕಮಗಾಧಬೋಧಮಹಿಮಾ ಸೋಽಸ್ಯಾಃ ಕವಿರ್ಭಾಸ್ಕರಃ ||


ಶಿಷ್ಯನಾದವನ ಸ್ತೋತ್ರವೆಂದು ಇದರಲ್ಲಿ ಎಷ್ಟು ಭಾಗವನ್ನು ಉತ್ಪ್ರೇಕ್ಷೆಗಾಗಿ ಬಿಟ್ಟರೂ ಸಹ, ಭಾಸ್ಕರರ ಪಾಂಡಿತ್ಯವು ಬಹುಮುಖವಾಗಿದ್ದಿತೆಂಬುದು ವ್ಯಕ್ತವಾಗದೇ ಇರುವುದಿಲ್ಲ. ಪ್ರತಿಯೊಬ್ಬರೂ ತಂತಮ್ಮ ಕೈಲಾದ ಮಟ್ಟಿಗೆ ಸರ್ವತೋಮುಖವಾದ ಪಾಂಡಿತ್ಯವನ್ನೂ ಗಳಿಸಿ, ನಾಲ್ಕು ಕಡೆಗಳಲ್ಲೂ ಸಜೀವಾಸಕ್ತಿಯನ್ನಿಟ್ಟುಕೊಳ್ಳುವುದು ಆವಶ್ಯಕ. ಸರ್ವತೋಮುಖವಾದ ಪಾಂಡಿತ್ಯವು ಹಿಮವತ್ಪರ್ವತದ ಹಾಗೆ. ಅದರಲ್ಲಿ ಐದು ಮೈಲಿ ಎತ್ತರದ ಗೌರೀಶಂಕರದ ಜೊತೆಗೆ ಬೇರೆ ಬೇರೆ ಮಟ್ಟದ ಬೇರೆ ಬೇರೆ ಶಿಖರಗಳೂ ಇವೆ. ಪರ್ವತಕ್ಕೆ ಇವೆಲ್ಲಾ ಆವಶ್ಯಕವೇ. ಆ ಬದಲು ಶಿಖರಗಳನ್ನೆಲ್ಲ ಅಗೆದುಹಾಕಿ ಐದು ಮೈಲಿ ಎತ್ತರದ ಒಂದು ಗಣೆಯನ್ನು ನೆಡಿಸಿ ಅದಕ್ಕೆ ಗೌರೀಶಂಕರವೆಂದು ಹೆಸರಿಟ್ಟ ಹಾಗಾಗಿದೆ ಈಗಿನವರ ಪಾಂಡಿತ್ಯ! ಈಗ ನೋಡೋಣವೆಂದರೆ ಒಂದು ಪರ್ವತ ಕಾಣಿಸುವುದಿಲ್ಲ—ಎಲ್ಲೆಲ್ಲಿ ನೋಡಿದರೂ ಬರೀ ಗಣೆಗಳೇ. 'ಲೀಲಾವತಿ'ಯಂತಹ ಪ್ರೀತಿಪ್ರದವಾದ ವಿಜ್ಞಾನಗ್ರಂಥಗಳ ಕೊರತೆಯುಂಟಾಗಿರುವುದಕ್ಕೆ ಭಾಸ್ಕರರಂತೆ ಪ್ರೌಢಸಾಹಿತಿಗಳೂ ವಿಜ್ಞಾನಿಗಳೂ ಸಹ ಆದ ವಿದ್ವಾಂಸರಿಲ್ಲದಿರುವುದೇ ಕಾರಣ.

ಸಾಹಿತ್ಯವು ಸಕ್ಕರೆ ಇದ್ದಹಾಗೆ. ಸಾಮಾನ್ಯವಾಗಿ ಜನರಿಗೆ ಸಾಹಿತ್ಯದ ಕಡೆಗೀಳು ಹೆಚ್ಚಾಗಿರುತ್ತದೆ. ಸಕ್ಕರೆಯೆಂದರೆ ಯಾರಿಗೆ ಅಕ್ಕರೆಯಿಲ್ಲ? ಆದರೂ ಬರೀ ಸಕ್ಕರೆಯನ್ನೇ ತಿನ್ನಬಾರದು. ಸರಿಯಾದ ದೇಹಸ್ಥಿತಿಗೆ ಸಕ್ಕರೆಯ ಜೊತೆಗೆ ಉಪ್ಪನ್ನೂ ಹುಳಿಯನ್ನೂ ಕಹಿಯಾದ ಕ್ವಿನೀನನ್ನೂ ಸಹ ಸೇವಿಸಬೇಕಾದ ಆವಶ್ಯಕತೆ ಇರುವಂತೆ ಸರಿಯಾದ ಸಂಸ್ಕಾರಕ್ಕೆ ಸಾಹಿತ್ಯದ ಜೊತೆಗೆ ವಿಜ್ಞಾನದ ವ್ಯವಸಾಯವೂ ಬೇಕು. ಕ್ವಿನೀನಿಗೆ ಸಕ್ಕರೆಯನ್ನು ಸವರುವಂತೆ ಭಾಸ್ಕರರು ವಿಜ್ಞಾನಕ್ಕೆ ಸಾಹಿತ್ಯದ ಮೇಲ್ಮುಸುಕನ್ನು ಹೊದಿಸಿದರು. ಈ ಹೋಲಿಕೆಯನ್ನನುಸರಿಸಿ, ಮನುಷ್ಯನ ಬುದ್ಧಿಯ ಸುತ್ತಲೂ ಭಾವನಾಶಕ್ತಿಯ ಆವರಣವಿದೆಯೆಂದು ಬೇಕಾದರೆ ಇಟ್ಟುಕೊಳ್ಳಬಹುದು. ಸಕ್ಕರೆಯ ಮೇಲ್ಮುಸುಕು ಈ ಆವರಣದಲ್ಲಿ ಕರಗುವ ವೇಳೆಗೆ ಗುಳಿಗೆ ಮುಂದುವರಿದು ಅದರೊಳಗಿರುವ ವಸ್ತುವು ಬುದ್ಧಿಗೆ ಅಂಟುವುದಕ್ಕೆ ಮಾರ್ಗವು ಸುಗಮವಾಗುತ್ತದೆ. ಅಧಿಕಾರಿಗಳನ್ನು ನೋಡುವುದಕ್ಕೆ ಹೋದಾಗ ದ್ವಾರಪಾಲಕರನ್ನು ಸಂತೋಷಗೊಳಿಸುವುದು ಒಳ್ಳೆಯದಷ್ಟೆ. ರೇಖಾಗಣಿತದಲ್ಲಿ ಒಂದು ತ್ರಿಕೋನದ ಮುಖ್ಯಗುಣವನ್ನು ಪ್ರಸ್ತಾಪಿಸುತ್ತ ಭಾಸ್ಕರರು ಸಾಹಿತ್ಯವನ್ನು ಹೇಗೆ ಬಳಸಿಕೊಂಡರೆಂಬುದನ್ನು ನೋಡಿ:

ಚಕ್ರಕ್ರೌಂಚಾಕುಲಿತಸಲಿಲೇ ಕ್ವಾಪಿ ದೃಷ್ಟಂ ತಡಾಗೇ |
ತೋಯಾದೂರ್ಧ್ವಂ ಕಮಲಕಲಿಕಾಗ್ರಂ ವಿತಸ್ತಿ ಪ್ರಮಾಣಂ ||
ಮಂದಂ ಮಂದಂ ಚಲಿತಮನಿಲೇನಾಹತಂ ಹಸ್ತಯುಗ್ಮೇ |
ತಸ್ಮಿನ್ ಮಗ್ನಂ ಗಣಕ ಕಥಯ ಕ್ಷಿಪ್ರಮಂಭಃಪ್ರಮಾಣಂ ||

ಚಕ್ರ ಕ್ರೌಂಚ ಪಕ್ಷಿಗಳಿಂದಲೂ ಕಮಲಗಳಿಂದಲೂ ಆವೃತವಾದ ಒಂದು ತಟಾಕ ವನ್ನು ನಮ್ಮ ಕಣ್ಣೆದುರಿಗೆ ನಿಲ್ಲಿಸಿದರು. ಅದರಲ್ಲಿ ನೀರಿನ ಮಟ್ಟದಿಂದ ಮೇಲಕ್ಕೆದ್ದಿರುವ ಒಂದು ಕಮಲ ಕಲಿಕಾಗ್ರವನ್ನು ಚಿತ್ರಿಸಿದರು. ಮಂದಮಾರುತವನ್ನು ಕರೆತಂದರು. ಅದರಿಂದ ಕಮಲದ ದಂಟು ಬಾಗಿ ಸ್ವಲ್ಪ ದೂರದಲ್ಲಿ ಅದರ ತುದಿ ಮುಳುಗಿಕೊಂಡು ದನ್ನು ತೋರಿಸಿದರು. ಈ ದೂರವನ್ನೂ, ನೀರಿನ ಮಟ್ಟದ ಮೇಲಿನ ದಂಟಿನ ಅಳತೆ ಯನ್ನೂ ಕೊಟ್ಟು, ನೀರಿನ ಆಳವನ್ನು ಕ್ಷಿಪ್ರವಾಗಿ ಹೇಳೆಂದರು. (ಪುಟ ೮೮ರ ಚಿತ್ರವನ್ನು ನೋಡಿ.) ಆ ಕೆರೆಯ ಬಳಿ, ಆ ಮನೋಮೋಹಕ ವಾತಾವರಣದಲ್ಲಿ ಕುಳಿತು ಉತ್ತರವನ್ನು ಯೋಚಿಸುವುದಕ್ಕೆ ಯಾರಿಗೆತಾನೇ ಮನಸ್ಸು ಬರುವುದಿಲ್ಲ? ಆ ಬದಲು "ಒಂದು ಕಾಟುಕೋನ ತ್ರಿಕೋನದ ಈ ಅಳತೆ ಇಷ್ಟು, ಆ ಅಳತೆ ಅಷ್ಟು, ಇನ್ನೊಂದಳತೆ ಎಷ್ಟು?" ಎಂದು ಪ್ರಶ್ನಿಸಿದ್ದರೆ, "ಸ್ವಾಮೀ, ನಿಮ್ಮ ಕಾಟು ಕೋನವೂ ಬೇಡ, ತ್ರಿಕೋನವೂ ಬೇಡ, ನಮಸ್ಕಾರ" ಎಂದು ಹೇಳಿ ವಿದ್ಯಾರ್ಥಿಯು ಬೇಸರದಿಂದ ಎದ್ದು ಹೋಗುವುದಲ್ಲದೆ ಮತ್ತೆ ಅವನು ಗಣಿತದ ತಂಟೆಗೆ ಬರುವುದಿಲ್ಲ.

ಬೇರೊಂದು ಉದ್ದೇಶಕ್ಕಾಗಿ ಸಾಹಿತ್ಯವನ್ನು ಉಪಯೋಗಿಸಿಕೊಳ್ಳುವಾಗ ಎಚ್ಚರಬೇಕು. ಒಂದು ವಸ್ತುವಿಗೆ ಇನ್ನೊಂದು ವಸ್ತುವಿನ ಆವರಣವನ್ನು ಕೊಡುವ ಬದಲು ಎರಡನ್ನೂ ಪುಡಿಮಾಡಿ ಕಲಸಿಬಿಟ್ಟರೆ ಕೆಲಸ ಕೆಟ್ಟೀತು. ಅಲ್ಲದೆ ಬೆರೆಯ ಬಾರದ ವಸ್ತುಗಳೂ ಇದ್ದಾವು. ನಮ್ಮ ಪೂರ್ವಿಕರು ಸ್ವರ್ಗ ನರಕ ಲೋಕಗಳನ್ನು ಯಥೇಚ್ಛವಾಗಿ ವರ್ಣಿಸಿದರು. ಪುಣ್ಯ ಗಳಿಸಿಕೊಂಡವರಿಗೆ ಕಾದಿರುವ ಇಂದ್ರ ಭೋಗವನ್ನು ಬಾಯಲ್ಲಿ ನೀರೂರುವ ಹಾಗೆ ಚಿತ್ರಿಸಿದರು. ತಪ್ಪುಮಾಡಿದವರಿಗೆ ವಿಧಿಸಲ್ಪಡುವ ಯಮಲೋಕ ಯಾತನೆಯನ್ನು ಭಯಂಕರವಾದ ರೀತಿಯಲ್ಲಿ ಉಗ್ಗಡಿ ಸಿದರು. ಎಂದರೆ ಸನ್ಮಾರ್ಗದಲ್ಲಿರಬೇಕೆಂಬ ಜೀವನ ನಿಯಮದ ಜೊತೆಗೆ ಸಾಹಿತ್ಯದ ಸೊಬಗನ್ನು ಚೆನ್ನಾಗಿ ಮಿಶ್ರಮಾಡಿಬಿಟ್ಟರು. ಸಾಮಾನ್ಯ ಜನರಿಗೆ ಸನ್ಮಾರ್ಗ ಬೋಧನೆ ಮಾಡುವುದು ಇವರ ಉದ್ದೇಶ. ಶ್ಲಾಘನೀಯವಾದ ಉದ್ದೇಶವೇ. ಈ ಉಪಾಯ ದಿಂದ ಸ್ವಲ್ಪ ಮಟ್ಟಿಗೆ ಉದ್ದೇಶ ಸಾಧನೆಯೂ ಆಗಿರಬಹುದು. ಆದರೆ ಅಷ್ಟು ಹೆಚ್ಚಾಗಿ ಮಿಶ್ರಣಮಾಡದಿದ್ದರೆ ಮೇಲಾಗಿತ್ತೆಂದು ಕಾಣುತ್ತದೆ. ಏಕೆಂದರೆ, ಸಾಮಾನ್ಯ ಜನರಿಗೆ ಇದರಲ್ಲಿ ಉತ್ಪ್ರೇಕ್ಷೆ ಯಾವುದು, ನಿಜಾಂಶ ಯಾವುದು ಎಂದು ಪ್ರತ್ಯೇಕಿಸು ವಷ್ಟು ಸಾಮರ್ಥ್ಯವಿರುವುದಿಲ್ಲ. ಆ ಸಾಮರ್ಥ್ಯವಿರುವವರಿಗೆ ಈ ಮಿಶ್ರಣೋಪಾಯವು



ಚಿತ್ರಗಾರರು : ಶ್ರೀಮಾನ್ ಬಿ. ಎ. ರಾಮ ಅಯ್ಯಂಗಾರ್.

ಅನಾವಶ್ಯಕ. ಹೇಳಿದುದನ್ನೆಲ್ಲ ಒಟ್ಟಾಗಿ ನಿಜವೆಂದು ನಂಬಿಕೊಂಡು ವರ್ತಿಸುವವನಿಗೆ ಒಂದಾನೊಂದು ದಿವಸ "ಈ ಲೋಕಗಳು ಇವೆಯೋ ಇಲ್ಲವೋ" ಎಂಬ ಶಂಕೆ ಉಂಟಾದರೆ, ಅವನು ಹೇಳಿದುದೆಲ್ಲವನ್ನೂ ಒಟ್ಟಿಗೆ ಕೈಬಿಟ್ಟಾನು. ಮಾರ್ಲೆಯವರು ಹೇಳಿರುವಂತೆ ಸಾಮಾನ್ಯ ಜನರಿಗೆ ಕಣ್ಣಿಗೆ ಕಾಣದುದರಲ್ಲಿ ಅಪನಂಬಿಕೆ ಹುಟ್ಟುವುದು ಅಸಂಭವವಲ್ಲ. ಆದ್ದರಿಂದ ನೇರವಾಗಿ "ಸನ್ಮಾರ್ಗದಲ್ಲಿರುವುದು ಸುಖ. ನಮ್ಮ ದುರ್ಮಾರ್ಗದಿಂದ ಇತರರಿಗೆ ನೋವುಂಟಾಗುತ್ತದೆ. ಅವರೂ ನಮ್ಮ ಹಾಗೇ ಅಲ್ಲವೇ?" ಎಂದು ಬೋಧಿಸಿ, ಇದನ್ನು ಉದಾಹರಿಸುವುದಕ್ಕೆ ಬೇಕಾದರೆ ಒಂದೆರಡು ಕಥೆಗಳನ್ನು ಕಟ್ಟುವುದು ಮೇಲು. ಅದರಲ್ಲಿ ಅಷ್ಟು ಅಪಾಯವಿಲ್ಲ. ನೋಡಿ ಬಂದವರಿಗಿಂತ ಹೆಚ್ಚಾಗಿ ಇಲ್ಲದ ಇಂದ್ರಲೋಕ ಯಮಲೋಕಗಳನ್ನು ವರ್ಣಿಸಿ ಎದುರಿಗೆ ನಿಲ್ಲಿಸುವುದು ಒಂದು ವೇಳೆ ಒಳ್ಳೆಯ ಉಪಾಯವಾದರೂ ಇನ್ನೊಂದು ವೇಳೆ ಅನರ್ಥಕಾರಿಯಾಗುವ ಸಂಭವವೂ ಇದೆ. ಹೀಗೆ ಕೆಲವು ಸಂದರ್ಭಗಳಲ್ಲಿ ಸಾಹಿತ್ಯದ ಉಪಯೋಗವು ನಿರಪಾಯವಾಗಿರಬೇಕಾದರೆ ಅದರ ಮಿಶ್ರಣಕ್ಕೆ ಒಂದು ಎಲ್ಲೆ ಇರುತ್ತದೆ. ಆದರೆ ವಿಜ್ಞಾನವನ್ನೂ ಸಾಹಿತ್ಯವನ್ನೂ ಹೇಗೆ ಬೇಕಾದರೂ ಬೆರಸಿರಿ, ಹೇಗೆ ಬೇಕಾದರೂ ಕಲಕಿರಿ, ಯಾವ ಅಪಾಯವೂ ಇಲ್ಲ; ಮಿಶ್ರಣದ ಉಪಯೋಗವು ಮಿಶ್ರಣಕಾರರ ಕುಶಲತೆಯ ಮೇಲೆ ಹೋಗುತ್ತದೆ. ಅಪಾಯವಂತೂ ಇಲ್ಲ. ಲೀಲಾವತಿಯಲ್ಲಿ—

> ಪಾರ್ಥಃ ಕರ್ಣವಧಾಯ ಮಾರ್ಗಣಗಣಂ ಕ್ರುದ್ಧೋ ರಣೇ ಸಂದಧೇ |
> ತಸ್ಯಾರ್ಧೇನ ನಿವಾರ್ಯ ತಚ್ಛರಗಣಂ ಮೂಲೈಶ್ಚತುರ್ಭಿರ್ಹಯಾನ್ ||
> ಶಲ್ಯಂ ಷಡ್ಭಿರಥೇಷುಭಿಸ್ತ್ರಿಭಿರಪಿ ಚ್ಛತ್ರಂ ಧ್ವಜಂ ಕಾರ್ಮುಕಂ |
> ಚಿಚ್ಛೇದಾಸ್ಯ ಶಿರಃ ಶರೇಣ ಕತಿ ತೇ ಯಾನರ್ಜುನಃ ಸಂದಧೇ ||

ಎಂದರೆ, "ಪಾರ್ಥನು ರಣರಂಗದಲ್ಲಿ ಕುಪಿತನಾಗಿ ಕರ್ಣವದೆಗಾಗಿ ನಿಂತನು. ಬತ್ತಳಿಕೆಯಲ್ಲಿನ ಬಾಣಗಳಲ್ಲಿ ಅರ್ಧಸಂಖ್ಯೆಯನ್ನು ಶತ್ರುಶರನಿವಾರಣೆಗಾಗಿ ಉಪಯೋಗಿಸಿದನು. ವರ್ಗಮೂಲದ ನಾಲ್ಕರಷ್ಟು ಬಾಣಗಳಿಂದ ಶತ್ರುಹಯಗಳನ್ನು ಕೊಂದನು. ಶಲ್ಯನ ಪತನಕ್ಕೆ ಆರು ಬಾಣಗಳಾದುವು. ಮೂರರಿಂದ ಕರ್ಣನ ಛತ್ರಧ್ವಜ ಕಾರ್ಮುಕಗಳುರುಳಿದುವು. ಉಳಿದ ಒಂದು ಬಾಣವು ಕರ್ಣನ ಶಿರಶ್ಛೇದನೆ ಮಾಡಿತು. ಒಟ್ಟು ಬಾಣಗಳೆಷ್ಟಿದ್ದುವು?" ಎಂದು ಭಾಸ್ಕರರು ಕೇಳಿದ್ದಾರೆ. ಮಹಾಭಾರತವನ್ನು ಆಧಾರವಾಗಿಟ್ಟುಕೊಂಡು, ತಿರುವಿಹಾಕಿ, ಅರ್ಜುನನು ನೂರು ಬಾಣಗಳನ್ನು ಮಾತ್ರ ತೆಗೆದುಕೊಂಡು ಹೋಗಲಿಲ್ಲವೆಂದೂ, ಈ ಸಂಖ್ಯೆಗಳಾವುವೂ ಅಲ್ಲಿ ಉಕ್ತವಾಗಿಲ್ಲವೆಂದೂ, ಕಾಳಗದ ಕ್ರಮ ಬೇರೆಯಾಗಿತ್ತೆಂದೂ ಯಾರಾದರೂ ಸಾಧಿಸಿದರೂ ಪ್ರಶ್ನೆಯ ಗಣಿತಭಾಗಕ್ಕೆ ಕುಂದುಕವಿಲ್ಲ. ಹಾಗೂ ಕರ್ಣಾರ್ಜುನ ಕಾಳಗದ ಆ

ಚಿತ್ರ—ಆ ಬಾಣಗಳ ಹಾರಾಟ, ಆ ಸೈನ್ಯದ ನಾಶ, ಚೀತ್ಕಾರ, ಛತ್ರಧ್ವಜ ಕಾರ್ಮುಕಗಳ ಪತನ, ಶಲ್ಯಕರ್ಣರ ಶಿರಶ್ಛೇದನ—ಆ ದೃಶ್ಯ ಕಣ್ಣಿಗೆ ಕಟ್ಟಿದಂತೆ ನಿಂತು ಬುದ್ಧಿಯ ಶ್ರಮವನ್ನು ಪರಿಹರಿಸುತ್ತದೆ. ಇನ್ನೂ ಹೆಚ್ಚಾದ ವರ್ಣನೆಯನ್ನೂ ಕಲ್ಪನೆಯನ್ನೂ ಸೇರಿಸಿದ್ದರೂ ಬಾಧಕವಿರುತ್ತಿರಲಿಲ್ಲ. ಹೀಗೆಯೇ ಲೀಲಾವತಿಯ ಇತರ ಕಲ್ಪನೆಗಳಿಂದಲೂ, ವರ್ಣನೆಗಳಿಂದಲೂ, ಚಿತ್ರಗಳಿಂದಲೂ, ಉತ್ಪ್ರೇಕ್ಷೆ ಗಳಿಂದಲೂ ಗಣಿತಭಾಗಕ್ಕೆ ಉಪಯೋಗವಾಗಿದೆಯೇ ವಿನಾ ಯಾವ ಚ್ಯುತಿಯೂ ಆಗಿಲ್ಲ; ಭಾಸ್ಕರರು ವಿಜ್ಞಾನಕ್ಕೆ ಸಾಹಿತ್ಯದ ಮೇಲ್ಮುಸುಕನ್ನು ಮಾತ್ರ ಹೊದಿಸಿದರು, ಆದರೆ ಎರಡನ್ನೂ ಕಲಕಿಬಿಡಲಿಲ್ಲ. ಒಂದು ವೇಳೆ ಹಾಗೆ ಕಲಕಿದರೂ ಅಪಾಯವಿಲ್ಲ. ಇಲ್ಲಿ ಹೆಚ್. ಜಿ. ವೆಲ್ಸ್‌ರವರ ಒಂದು ಕಥೆ ನೆನಪಿಗೆ ಬರುತ್ತದೆ: "ದಪ್ಪನೆಯ ಒಬ್ಬ ಮನುಷ್ಯನಿಗೆ ತನ್ನ ಶರೀರವನ್ನು ತೆಳ್ಳಗೂ ಲಘುವಾಗಿಯೂ ಇರುವಂತೆ ಮಾಡಿಕೊಳ್ಳಬೇಕೆಂಬ ಆಸೆಯಾಯಿತಂತೆ. ಹಳೆಯ ವೈದ್ಯ ಗ್ರಂಥವೊಂದನ್ನು ತಿರುವಿ 'ತೂಕ ಕಮ್ಮಿಯಾಗುವುದಕ್ಕೆ' ಎಂದು ಉಕ್ತವಾಗಿದ್ದ ಔಷಧಿಯನ್ನು ಮಾಡಿ ಕೊಂಡು ಸೇವಿಸಿದನಂತೆ. ಕ್ರಮೇಣ ಅವನ ಶರೀರ ಹಗುರವಾಗುತ್ತ ಆಗುತ್ತ ತೇಲಾಡುವುದಕ್ಕೆ ಪ್ರಾರಂಭಿಸಿತಂತೆ—ಮನೆಯ ಮಾಳಿಗೆಗೆ ಅಂಟಿಕೊಂಡಿತಂತೆ! ನಿರುಪಾಯನಾಗಿ ಬಹಳ ಅವಸ್ಥೆ ಪಟ್ಟನಂತೆ. ಕೊನೆಗೆ ಕೆಳಕ್ಕೆ ಬರುವುದಕ್ಕೆ ಉಕ್ಕಿನ ಅಂಗಿಯನ್ನೂ ಪಾದುಕೆಗಳನ್ನೂ ಮಾಡಿಸಿಕೊಂಡನಂತೆ. ಆ ಮೇಲೆ ಔಷಧಿಯು 'ತೂಕ ಕಮ್ಮಿಯಾಗುವುದಕ್ಕೆ' ಮಾತ್ರ ಉಕ್ತವಾಗಿತ್ತೆಂದೂ 'ಗಾತ್ರ ಕಮ್ಮಿಯಾಗು ವುದಕ್ಕೆ' ಸಂಬಂಧಿಸಿರಲಿಲ್ಲವೆಂದೂ ಅವನಿಗೆ ಹೊಳೆಯಿತಂತೆ—ಈ ಸುಂದರವಾದ ಸಣ್ಣಕಥೆಯಲ್ಲಿ ಕುಶಲಿಗಳಾದ ಕಥೆಗಾರರು ತೂಕ, ಗಾತ್ರ ಇವುಗಳಿಗಿರುವ ವ್ಯತ್ಯಾಸವನ್ನು ಉತ್ಪ್ರೇಕ್ಷೆಯೊಂದಿಗೆ ಕಲಕಿಬಿಟ್ಟಿದ್ದಾರೆ. ಆದರೂ ವಿಜ್ಞಾನದ ಅಂಶಕ್ಕೆ ಏನೂ ಧಕ್ಕೆಯಿಲ್ಲ. ಹಾಗೂ ತೂಕ ಗಾತ್ರಗಳ ವ್ಯತ್ಯಾಸವು ನಿರಾಯಾಸ ವಾಗಿ ಹೃದಯಂಗಮವಾಗುತ್ತದೆ.

ಸಾಮಾನ್ಯವಾಗಿ ಪರೀಕ್ಷೆಯ ಮತ್ತು ಇತರ ಪ್ರತಿಫಲಗಳ ದೃಷ್ಟಿಯಿಂದ ನಮ್ಮ ವಿದ್ಯಾರ್ಥಿಗಳು ವಿಜ್ಞಾನದಲ್ಲಿ ಆಸಕ್ತಿಯನ್ನು ಕಲ್ಪಿಸಿಕೊಳ್ಳುತ್ತಿರುವರೇ ವಿನಾ, ವಿಜ್ಞಾನವನ್ನು ಚಿತ್ತಾಕರ್ಷಕವನ್ನಾಗಿ ಮಾಡುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ. ಆ ಬದಲು ವಿಜ್ಞಾನವೆಂದರೆ ಕಠಿನವಾದ, ದಾರುಣವಾದ, ನಿಃಸಾರವಾದ ಒಂದು ವಿದ್ಯೆ ಎಂಬ ಭಾವನೆಯು ಚಿಕ್ಕತನದಲ್ಲೇ ಮೂಡುವುದಕ್ಕೆ ಸಹಾಯಕ ಗಳಾಗುವ ಕೆಲಸಗಳನ್ನು ನಾವು ತಿಳಿದೋ ತಿಳಿಯದೆಯೋ ಮಾಡುತ್ತಿದ್ದೇವೆ. ಪಠ್ಯಪುಸ್ತಕಗಳಲ್ಲಿ ನಾವು ಉಪಯೋಗಿಸುತ್ತಿರುವ ಹೆಸರುಗಳೇ ಸಾಕು, ಆಬಾಲ

ವೃದ್ಧರಾಗಿ ಯಾರನ್ನಾದರೂ ನಡುಗಿಸಬಲ್ಲವು. ಆ 'ಸಮದ್ವಿಬಾಹು ತ್ರಿಭುಜ'ಗಳೇನು, ಆ 'ವೇಳಾ ಪ್ರಕಾಶಕ'ಗಳೇನು, ಆ 'ಬಹಿರ್ವಕ್ರ ಕೋನ'ಗಳೇನು! ಇತರ ಶಾಸ್ತ್ರಗಳಲ್ಲಿ ರೂಢಿಗೆ ಬರುತ್ತಿರುವ ಶಬ್ದಗಳು ಇನ್ನೂ ಹೆಚ್ಚಾಗಿ ಗುಡುಗುತ್ತವೆ. ಇದಕ್ಕೆ ಮುಖ್ಯಕಾರಣವೇನೆಂದರೆ, ಸಂಪೂರ್ಣ ಸೂತ್ರವೂ ವಿವರಣೆಯೂ ಹೆಸರಿನಲ್ಲೇ ಅಡಗಿರಬೇಕೆಂಬ ಆಸೆ. ಹೆಸರುಗಳು ಕರ್ಕಶವಾಗಿಯೇ ಇರಲಿ, ಲಂಬವಾದ ಸಮಾಸ ಪದಗಳೇ ಆಗಲಿ—ಅವುಗಳನ್ನು ಸೃಜಿಸಿದ ಮಹನೀಯರಿಗೆ ಲೇಶಾಂಶ ಮರುಕವಿಲ್ಲ. ಹಾಗೂ ತಮ್ಮ ಲೇಖನಿಯಿಂದ ಬಂದ ಹೆಸರು ಎಷ್ಟು ಭೀಷಣವಾಗಿದ್ದರೆ ಅಷ್ಟು ಹೆಮ್ಮೆ, ಅಷ್ಟು ಪ್ರೌಢಿಮೆ ಅವರಿಗೆ! ಈ ಬಗೆಯ ಹೆಸರುಗಳಿಂದ ತುಂಬಿದ ಪುಸ್ತಕವನ್ನೋದುವುದಕ್ಕೆ ಯಾರಿಗೆತಾನೇ ಮನಸ್ಸು ಬರುತ್ತದೆ? ಸಂಸ್ಕೃತ ಭಾಷೆಯಲ್ಲಿ ಈ ಬಗೆಯ ಹೆಸರುಗಳು ಇದ್ದಿರಬಹುದು, ಇದ್ದುವು. ಆದರೆ ಆ ಭಾಷೆಗೆ, ಆ ಕಾಲಕ್ಕೆ ತಕ್ಕ ಹೆಸರುಗಳು ನಮ್ಮ ಭಾಷೆಗೆ, ನಮ್ಮ ಆವಶ್ಯಕತೆಗಳಿಗೆ ಹೊಂದದೆ ಹೋಗಬಹುದು. ಪಂಡಿತರ ಮತ್ತು ಅವರ ಗ್ರಂಥಗಳ ಶೃಂಖಲೆಗಳಲ್ಲಿದ್ದ ವಿಜ್ಞಾನವು ಬಹು ಮುಖವಾಗಿ ಬೆಳೆದು ಈಗ ಜನಜೀವನವನ್ನು ವ್ಯಾಪಿಸುತ್ತಿದೆ. ವಿಜ್ಞಾನವು ಬೆಳೆದಂತೆಲ್ಲ ಹೆಸರುಗಳೂ ಹೆಚ್ಚಿವೆ, ಮತ್ತು ದಿನಚರಿಯ ರೂಢಿಗೂ ಬೇಕಾಗಿವೆ. "ನನ್ನ ಹೊಲವು ಚಕ್ರೀಯ ಚತುರ್ಭುಜಾಕೃತಿಯಲ್ಲಿದೆ (Cyclic Quadrilateral)", "ಸೋಮಣ್ಣನವರ ಮಗಳ ಸೂಚೀಮುಖಫಲಕಾಕೃತಿಯ (Pyramid) ಭಂಗಾರದ ಜಡೆಮೊಗ್ಗಿನ ಯಥಾಪ್ರಮಾಣಾಕ್ಷವು (Axis of Symmetry) ಸೊಟ್ಟನಾಗಿದೆ" ಎಂದು ಮಾತನಾಡಿಕೊಳ್ಳುವ ದುಃಸ್ಥಿತಿಗೆ ನಾವು ನಮ್ಮ ಮಕ್ಕಳನ್ನು ಈಡುಮಾಡಬಾರದು. ಹೆಸರುಗಳು ರೂಢಿಗೆ ಬಂದ ಮೇಲೆ ಅವುಗಳನ್ನು ತಿದ್ದಿಕೊಳ್ಳುವುದು ಪ್ರಯಾಸ, ಅಸಾಧ್ಯ. ಈಚೆಗೆ ಪಾಶ್ಚಾತ್ಯರು ನಾಮಕರಣದ ಈ ಮರ್ಮವನ್ನರಿತಿದ್ದಾರೆ. ಒಂದರ ಮುಂದೆ ನೂರು ಸೊನ್ನೆಗಳನ್ನಿಟ್ಟರೆ ಆಗುವ ಸಂಖ್ಯೆಗೆ ಒಂದು ಹೆಸರಿಡಬೇಕಾಗಿ ಬಂದಾಗ ಪಾಶ್ಚಾತ್ಯ ವಿದ್ವಾಂಸನೊಬ್ಬನು ತನ್ನ ಪುಟ್ಟ ಮಗಳನ್ನು ಕೇಳಿದನಂತೆ. ಅದಕ್ಕೆ ಆ ಮಗು ಗುಘೂಲ್ ಎಂದು ಅರ್ಥವಿಲ್ಲದೆ ನುಡಿಯಿತಂತೆ. ಈಗ ಆ ಸಂಖ್ಯೆಗೆ ಗುಘೂಲ್ ಎಂದೇ ಹೆಸರಿದೆ. ವಿಜ್ಞಾನದಲ್ಲಿ ಬಹು ಮುಖ್ಯವಾದ ಸಂಖ್ಯೆ ಅದು. ನಕ್ಷತ್ರಗಳ ಒಟ್ಟು ಸಂಖ್ಯೆ ಸಹ ಅದನ್ನು ಮೀರಿಲ್ಲ. ಈಗ ಗುಘೂಲ್ ಎಂದರೆ ಆ ಸಂಖ್ಯೆ ಎಂದು ಎಲ್ಲರಿಗೂ ಗೊತ್ತಾಗುತ್ತದೆ. ನಮ್ಮವರಾಗಿದ್ದರೆ ಅವಕ್ಕೆ 'ಏಕಾದಿ ಶತಶೂನ್ಯ ಶ್ರೇಣೀ' ಎಂದು ಹೆಸರಿಟ್ಟುಬಿಡುತ್ತಿದ್ದರು! ವಾಡಿಕೆಯಲ್ಲಿರುವ ಅನೇಕ ಸಣ್ಣ ಹೆಸರುಗಳನ್ನು ವಿಜ್ಞಾನದಲ್ಲಿ ವಿಶೇಷಾರ್ಥದಲ್ಲಿ ಉಪಯೋಗಿಸುವ ಪದ್ಧತಿಯೂ ಈಚೆಗೆ ಪಾಶ್ಚಾತ್ಯರಲ್ಲಿ ಹುಟ್ಟಿದೆ. ಹೀಗೆ 'ಉಂಗುರ' ಎಂಬ ಮಾತಿಗೆ

ವಿಜ್ಞಾನದ ಅರ್ಥವೇ ಬೇರೆ. ಮೃದುವಾದ ಪುಟ್ಟ ಹೆಸರುಗಳು ಆಕರ್ಷಕವಾಗಿರುತ್ತವೆ. "ಸಂಕ್ಷಿಪ್ತಾಕ್ಷರ ಕೋಮಲಾಮಲ ಪದೈರ್ಲಾಲಿತ್ಯ ಲೀಲಾವತೀಂ", "ಸರಸೋಕ್ತಿಮುದಾಹರಂತೀಂ" ಎಂದು ಭಾಸ್ಕರರು ಹಾಕಿದ ಮೇಲ್ಪಂಕ್ತಿಯನ್ನೇ ನಾವು ಮರೆತಿದ್ದೇವೆ. ಸಮದ್ವಿಬಾಹುತ್ರಿಭುಜವನ್ನು ತಿಲಕ ಎಂದು ಕರೆದು, ಆ ಮೇಲೆ ತಿಲಕ ಎಂದರೆ ಈ ಆಕೃತಿ ಎಂದು ವಿವರಿಸಿದರೆ ತಪ್ಪೇನು? ನಮ್ಮ ಭಾಷೆಯಲ್ಲಿ ಕೋಮಲಾಮಲ ಪದಗಳು ಬೇಕಾದಷ್ಟಿವೆ. ನಾವು ಅವನ್ನು ಉಪಯೋಗಿಸುತ್ತಿಲ್ಲ, ಅಷ್ಟೆ. ರೋಜಾ ಹೂವಿಗೆ ಯಾವ ಹೆಸರಾದರೇನು, ಅದರ ವಾಸನೆ ಎಲ್ಲಿ ಹೋಗುತ್ತದೆ? ಎಂಬುದೇನೋ ನಿಜ; ಆದರೆ ಕರ್ಕಶವಾದ ಹೆಸರಿಟ್ಟರೆ ಆ ಹೂವಿನ ವಾಸನೆ ನೋಡೋಣವೆಂಬ ಕುತೂಹಲ ಯಾರಿಗೂ ಹುಟ್ಟುವುದಿಲ್ಲ. ಆದ್ದರಿಂದ ಹೆಸರು ಕೋಮಲವಾಗಿಯೇ ಇರಬೇಕು. ಕರ್ಕಶವಾದ ಹೆಸರು ಕೊಳಕಾದ, ಚಿಂದಿಯಾದ, ಬಟ್ಟೆಯಂತೆ; ಕೋಮಲವಾದ ಹೆಸರು ಅಂದವಾದ, ಶುಭ್ರವಾದ ವಸ್ತ್ರದಂತೆ. ವಿಜ್ಞಾನವನ್ನು ನಾಡಿನ ಭಾಷೆಯಲ್ಲಿ ಬೋಧಿಸಬೇಕಾಗಿರುವ ಈ ಸಂಧಿಯಲ್ಲಿ ಹೆಸರುಗಳ ಚರ್ಚೆ ಬಹು ಮುಖ್ಯವಾದುದು. ನಾಲ್ವರನ್ನು ಸೇರಿಸಿ, ಕೋಮಲವಾದ, ಸರಿಯಾದ ಹೆಸರುಗಳನ್ನು ಹುಡುಕಿಸಿ ರೂಢಿಗೆ ತರುವುದು ಸರ್ಕಾರದ ಮತ್ತು ಎಲ್ಲರ ಕರ್ತವ್ಯವಾಗಿದೆ. ಕರ್ಕಶವಾದ ಹೆಸರುಗಳು ರೂಢಿಗೆ ಬಂದರೆ ಜನರಿಗೆ ವಿಜ್ಞಾನದಲ್ಲಿ ಜುಗುಪ್ಸೆ ಹುಟ್ಟುವುದರಲ್ಲಿ ಸಂಶಯವಿಲ್ಲ.

ಪದಗಳ ಅನ್ವೇಷಣ ಮಾತ್ರದಿಂದ ಕಾರ್ಯ ಮುಗಿಯುವುದಿಲ್ಲ. ವಿಷಯ ಪ್ರತಿಪಾದನೆಯೂ ಸಾಧ್ಯವಾದಷ್ಟು ಆಕರ್ಷಕವಾದ ರೀತಿಯಲ್ಲಿರಬೇಕು ಅಥವಾ ಭಾಸ್ಕರಾಚಾರ್ಯರು ಹೇಳಿದಂತೆ ಪ್ರೀತಿಪ್ರದವಾಗಿರಬೇಕು. ಗ್ರಂಥದ ಲಾಲಿತ್ಯವು ಬರೆಹಗಾರನ ಕುಶಲತೆಯ ಮೇಲೆ ಹೋಗುತ್ತದೆ. ವಿಜ್ಞಾನದ ಅಭ್ಯಾಸಕ್ಕೂ ಸಹ ಗ್ರಂಥಗಳನ್ನು ರಸವತ್ತಾಗಿ ಬರೆಯುವುದು ಸಾಧ್ಯವೆಂಬುದಕ್ಕೆ ಲೀಲಾವತಿಯೇ ಸಾಕ್ಷಿ.

ಲೀಲಾವತಿಯನ್ನೋದಿದರೆ ಸುಂದರವಾದ ಒಂದು ರತ್ನಾಭರಣದ ನೆನಪುಂಟಾಗುತ್ತದೆ. ಆಭರಣದ ಚಿನ್ನದ ಗೂಡುಗಳಲ್ಲಿ ಹೊಳೆಯುವ ರತ್ನಗಳಂತೆ ಲೀಲಾವತಿಯ ಸಾಹಿತ್ಯದ ಗೂಡುಗಳಲ್ಲಿ ಗಣಿತದ ರತ್ನಗಳು ಪ್ರಕಾಶಿಸುತ್ತವೆ. ಆಭರಣದ ಆಕೃತಿ ಒಪ್ಪುವಹಾಗಿದೆ. ಗೂಡುಗಳು ರತ್ನಗಳ ಕಾಂತಿಯನ್ನು ಹೆಚ್ಚಿಸುವಂತೆ ರಚಿಸಲ್ಪಟ್ಟಿವೆ. ಚಿನ್ನವನ್ನು ಪರೀಕ್ಷಿಸಬಹುದು, ರತ್ನಗಳನ್ನು ಪರೀಕ್ಷಿಸಬಹುದು, ಆದರೆ ಎರಡನ್ನೂ ಸೇರಿಸಿ ಮಾಡಿದ ಆಭರಣದ ರಚನಾಕೌಶಲವನ್ನು ಪರೀಕ್ಷಿಸುವುದು ಅಷ್ಟು ಸುಲಭವಲ್ಲ. ಲೀಲಾವತಿಯು ಸಾಹಿತ್ಯ ಗ್ರಂಥವಲ್ಲ. ಜೀವನದ ಅಥವಾ ವೇದಾಂತ ತತ್ತ್ವಗಳ ರಸಾನುಭವದಿಂದ ಉಕ್ಕಿ ಹರಿದ ಹಾಡುಗಳು ಅದರಲ್ಲಿಲ್ಲ. ಪ್ರೌಢ ಸಾಹಿತಿಯೂ

ವಿಜ್ಞಾನಿಯೂ ಆಗಿದ್ದವನೊಬ್ಬನು ಬರೆದ ಶಾಸ್ತ್ರ ಗ್ರಂಥ ಅದು. ಅದಕ್ಕೆ ಬೇಕಾಗುವ ವಿಮರ್ಶದೃಷ್ಟಿಯೇ ಬೇರೆ ಎಂಬುದನ್ನು ಮರೆಯಬಾರದು.

ಲೀಲಾವತಿಯು ನಮ್ಮನ್ನು ಯಾವುದೋ ಒಂದು ಮನೋಮೋಹಕವಾದ ನೂತನ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಹೂವಿನ ತೋಟಗಳಲ್ಲಿ ಝೇಂಕರಿಸುತ್ತ ಹಾರಾಡುವ ಭೃಂಗ ಸಮೂಹಗಳು; ನಲಿದು ನರ್ತಿಸುವ ನವಿಲುಗಳು; ಮರಗಳಿಂದ ಇಳಿದು ಬರುತ್ತಿರುವ, ಅಥವಾ ಮರಗಳ ಮೇಲೆ ಹಾರುತ್ತಿರುವ ಕಪಿಗಳು; ವಿವಿಧ ಲೀಲೆಯಲ್ಲಿರುವ ಆನೆಗಳ ಗುಂಪುಗಳು; ಚಕ್ರಕ್ರೌಂಚಾಕುಲಿತವಾದ ಸರೋವರಗಳು; ಸ್ಥಲಪದ್ಮಿನೀವನಗಳು; ಜಲಕೇಲಿ ಕಲಹದಲ್ಲಿರುವ ಅಥವಾ ವರ್ಷಾಕಾಲದಲ್ಲಿ ಮಾನಸಾಭಿಮುಖವಾಗಿರುವ ಕಲಹಂಸಗಳು; ರಾಜಮಾರ್ಗಗಳು; ತೀರ್ಥಯಾತ್ರಿಕರು; ಶತ್ರುನಗರಗಾಮಿಗಳಾದ ರಾಜಸೈನ್ಯಗಳು; ಯುದ್ಧಭೂಮಿಗಳು; ಮಾಣಿಕ್ಯ ಇಂದ್ರನೀಲ ಮುಕ್ತಾಫಲಾದಿ ರತ್ನ ವ್ಯಾಪಾರಿಗಳು; ಕವಿಗಳು; ದೇವಪೂಜಾ ಧುರಂಧರರು; ತ್ಯಾಗಿಗಳು; ರಾಜಹರ್ಮ್ಯಗಳು; ನಂದಾದೀಪಗಳು; ಕರ್ಪೂರಾದಿ ಪರಿಮಳ ದ್ರವ್ಯಗಳು—ಈ ಪ್ರಪಂಚದಲ್ಲಿ ಮೈಮರೆತು ಹೋಗುತ್ತೇವೆ. ಕಾಳಿದಾಸನ 'ಮೇಘ ಸಂದೇಶ'ದ ವರ್ಣನೆಗಳ ನೆನಪುಂಟಾಗುತ್ತದೆಯಲ್ಲವೆ? ಕಾಳಿದಾಸನದು ಒಮ್ಮುಖವಾದ ಕೆಲಸ; ವರ್ಣನೆಗಳು ವಿಸ್ತಾರವಾಗಿವೆ. ಆದರೆ ಭಾಸ್ಕರರ ಗುರಿ ಬೇರೆ; ವರ್ಣನೆಗಳು ಹ್ರಸ್ವವಾಗಿವೆ. ಚಿತ್ರಗಾರನು ಕುಂಚಿಯಿಂದ ಮಾಡಬಹುದಾದ ಎಷ್ಟೋ ಕೆಲಸವನ್ನು ಭಾಸ್ಕರರು ಅನೇಕ ವೇಳೆ ಒಂದೇ ಪದದಿಂದ ಮಾಡಿದ್ದಾರೆ. ಶಾಶ್ವತವಾಗಿರುವಂತೆ ಒಂದು ಕಲಾಶಾಲೆಯ ಗೋಡೆಗಳ ಮೇಲೆ ಒಳ್ಳೆಯ ಚಿತ್ರಗಾರನಿಂದ ಲೀಲಾವತಿಯ ಒಂದೊಂದು ಅಭ್ಯಾಸವನ್ನೂ ಚಿತ್ರಗಳ ರೂಪದಲ್ಲಿ ಬರೆಸಿದರೆ, ಆಗ ಈ ಗ್ರಂಥಕ್ಕೆ ಸರಿಯಾದ ಕಾಣಿಕೆಯನ್ನು ಸಲ್ಲಿಸಿದಂತಾಗುತ್ತದೆ. ಅಪೂರ್ವವಾದ ಈ ಗ್ರಂಥಕ್ಕೆ ಅನೇಕ ವ್ಯಾಖ್ಯಾನಕಾರರಿಂದಲೂ ಭಾಷಾಂತರಕಾರರಿಂದಲೂ ಆರಾಧನೆ ನಡೆದಿದೆ. ಆದರೆ ಇದಕ್ಕೆ ಚಿತ್ರಗಾರನ ಆರಾಧನೆಗಿಂತ ಮಿಗಿಲಾದ ವ್ಯಾಖ್ಯಾನವಾಗಲಿ, ಭಾಷಾಂತರವಾಗಲಿ, ವಿಮರ್ಶೆಯಾಗಲಿ ಇರಲಾರದು.

ಇಂತಹ ನೂತನ ಪ್ರಪಂಚವನ್ನು ನಿರ್ಮಿಸುವುದಕ್ಕೆ ಭಾಸ್ಕರರು ಪದ್ಯ ರೂಪವನ್ನಾರಿಸಿಕೊಂಡುದು ನ್ಯಾಯವಾಗಿಯೇ ಇದೆ. ಬುದ್ಧಿಯನ್ನು ಶ್ರಮಿಸುವಾಗ ಹಾಡಿಕೊಳ್ಳುವುದಕ್ಕೂ ಅನುಕೂಲವಾಗುವಂತೆ ಅವರ ಪದ್ಯಗಳು ಸುಮಧುರವಾಗಿವೆ. ಹೊಲ ಕೊಯ್ಯುವವರು, ದೋಣಿ ನಡೆಸುವವರು, ಪಲ್ಲಕ್ಕಿ ಹೊರುವವರು, ದಾರಿ ನಡೆಯುವರು—ಎಲ್ಲರಿಗೂ ಹಾಡುಗಳು ಬೇಕು. ಆ ಹಾಡುಗಳು ಆಯಾ ಕೆಲಸಕ್ಕೆ ತಕ್ಕಂತಿರಬೇಕು. ಕೆಲಸದಲ್ಲಿ ಹೆಚ್ಚು ಆಸಕ್ತಿಯನ್ನು ಹುಟ್ಟಿಸುವಂತಿರಬೇಕು.

ಮನಸ್ಸನ್ನು ಸೂರೆಮಾಡಿ ಹೆಚ್ಚು ಶ್ರಮವನ್ನು ಸಾರ್ಥಗೊಳಿಸುವಂತಿರಬೇಕು. ಇಂಥ ಹಾಡುಗಳು ಬುದ್ಧಿ ಶ್ರಮ ವಹಿಸುವವರಿಗೂ ಬೇಕು.

ಬಾಲೇ ಮರಾಲಕುಲಮೂಲದಲಾನಿ ಸಪ್ತ |
ತೀರೇ ವಿಲಾಸಭರಮಂಥರಗಾಣ್ಯಪಶ್ಯಂ ||
ಕುರ್ವಚ್ಚ ಕೇಲಿಕಲಹಂ ಕಲಹಂಸಯುಗ್ಮಂ |
ಶೇಷಂ ಜಲೇ ವದ ಮರಾಲಕುಲಪ್ರಮಾಣಂ ||

ಎಂದರೆ, "ಎಲೆ ಬಾಲೆ, ಜಲವಿಲಾಸ ಸಾಕಾಗಿ ಒಂದು ಹಂಸ ಸಮೂಹದಲ್ಲಿ ವರ್ಗಮೂಲದ ಮೂರೂವರೆಯಷ್ಟು ಹಂಸಗಳು ದಡಕ್ಕೆ ಹೋದುವು. ಒಂದು ಜೋಡಿ ಕಲಹಂಸಗಳು ಮಾತ್ರ ಇನ್ನೂ ಕೇಲಿ ಕಲಹವನ್ನು ಮಾಡುತ್ತ ನೀರಿನಲ್ಲೇ ಇದ್ದು, ದಡಕ್ಕೆ ಹೋದ ಹಂಸಗಳನ್ನು ನೋಡುತ್ತಿದ್ದುವು. ಸಮೂಹ ಸಂಖ್ಯೆಯನ್ನು ಹೇಳು" ಎಂಬ ಪ್ರಶ್ನೆಗೆ ಉತ್ತರವನ್ನು ಯೋಚಿಸುವಾಗ—

ಕುರ್ವಚ್ಚ ಕೇಲಿಕಲಹಂ ಕಲಹಂಸಯುಗ್ಮಂ
ಕೇಲಿಕಲಹಂ ಕಲಹಂಸಯುಗ್ಮಂ
ಕಲಹಂ ಕಲಹಂಸಯುಗ್ಮಂ

ಎಂದು ಮೆಲ್ಲನೆ ಸುಖವಾಗಿ ಹೇಳಿಕೊಳ್ಳುತ್ತ ಅಥವಾ ಹಾಡಿಕೊಳ್ಳುತ್ತ ಆಲೋಚನಾ ಕ್ರಮವನ್ನು ಮರೆಯಬಹುದು. ಹೀಗೆಯೇ ಉದಾಹರಣೆಗಳನ್ನು ಕೊಡುತ್ತ ಹೋದರೆ ಯಾವುದನ್ನು ಕೊಡಬೇಕು, ಯಾವುದನ್ನು ಬಿಡಬೇಕು ಎಂಬ ತವಕಕ್ಕೆ ಸಿಲುಕುತ್ತೇವೆ. "ವರ್ಷಾಕಾಲವು ಪ್ರಾಪ್ತವಾಗಲು ಒಂದು ಹಂಸ ಸಮೂಹದಲ್ಲಿ ವರ್ಗಮೂಲದ ಹತ್ತರಷ್ಟು ಹಂಸಗಳು ಮಾನಸ ಸರೋವರಕ್ಕೆ ತೆರಳಿದುವು. ಎಂಟನೆಯ ಒಂದು ಭಾಗವು ಸ್ಥಲಪದ್ಮಿನೀ ವನಕ್ಕೆ ಹೋಯಿತು. ಉಳಿದ ಮೂರು ಜೋಡಿ ಹಂಸಗಳು ಜಲಕೇಲಿಯಲ್ಲಿ ತೊಡಗಿದುವು. ಸಮೂಹ ಸಂಖ್ಯೆ ಎಷ್ಟು?" ಎಂಬುದಕ್ಕೆ ಉತ್ತರವನ್ನು ಯೋಚಿಸುವಾಗ—

ಜಾತಂ ಹಂಸಕುಲಸ್ಯ ಮೂಲದಶಕಂ ಮೇಘಾಗಮೇ ಮಾನಸಂ |
ಪ್ರೋಡ್ಡೀಯ ಸ್ಥಲಪದ್ಮಿನೀವನಮಗಾದಷ್ಟಾಂಶಕೋಂಭಸ್ತಟಾತ್ ||
ಬಾಲೇ ಬಾಲಮೃಣಾಲಶಾಲಿನಿಜಲೇ ಕೇಲಿಕ್ರಿಯಾಲಾಲಸಂ |
ದೃಷ್ಟಂ ಹಂಸಯುಗತ್ರಯಂ ಚ ಸಕಲಾಂ ಯೂಥಸ್ಯ ಸಂಖ್ಯಾಂ ವದ ||

ಎಂಬ ಸುಂದರವಾದ ಪದ್ಯದ ಹಾಡಿಕೆಯಲ್ಲಿ ಆನಂದಿಸಬಹುದು. ಇಷ್ಟೇ ಅಲ್ಲದೆ ಪದ್ಯರೂಪವು ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದಕ್ಕೂ ಅನುಕೂಲವಾಗುತ್ತದೆ.

ಆ ಕಾಲದಲ್ಲಿ ಪದ್ಯರೂಪವು ವಾಡಿಕೆಯಲ್ಲಿದ್ದು ಭಾಸ್ಕರಾಚಾರ್ಯರಿಗೆ ಅನೇಕ ವಿಧಗಳಲ್ಲಿ ಸಹಾಯಕರವಾಯಿತು.

ಭಾಸ್ಕರರಿಗೆ ರಸಾನುಭವ ಶಕ್ತಿಯ ಜೊತೆಗೆ ಅಪ್ರತಿಮವಾದ ಮೇಧಾಶಕ್ತಿ ಇತ್ತೆಂಬುದು ಅವರು ತೋರಿಸಿರುವ ಗಣಿತಮಾರ್ಗಗಳಿಂದ ವ್ಯಕ್ತವಾಗುತ್ತದೆ. ಗ್ರಂಥ ರಚನೆಯಲ್ಲಿ ಆರ್ಯಭಟ್ಟ, ಬ್ರಹ್ಮಗುಪ್ತ ಮುಂತಾದ ಹಿಂದಿನ ಸಿದ್ಧಾಂತಿಗಳಿಗೆ ಅವರು ಅನೇಕ ವೇಳೆ ಋಣಿಗಳಾಗಿದ್ದರೂ, ಹಿಂದಿನವರ ಕೆಲಸವನ್ನು ಸ್ಫುಟ ಮಾಡಿದುದೇ ಅಲ್ಲದೆ ಸ್ವಂತವಾಗಿ ಅನೇಕ ಅಂಶಗಳನ್ನು ಕಂಡುಹಿಡಿದರು. ಉದಾಹರಣೆಗಾಗಿ $ay^2-1=x^2$ ಎಂಬ ಸಾಮ್ಯವನ್ನು ಭಾಸ್ಕರರ ಹೆಸರಿನಲ್ಲಿ ಕರೆಯುವುದು ನ್ಯಾಯವೆಂದು ಇಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಮೇಧಾವಿಗಳೂ ರಸಿಕರೂ ಬೋಧಕರೂ ಆದ ಗುರುಗಳ ಬಳಿ (ಬಹುಶಃ ರಮ್ಯವಾದ ವನಪ್ರದೇಶಗಳಲ್ಲಿ ಕುಳಿತು) ಶಾಸ್ತ್ರಾಭ್ಯಾಸಮಾಡುವ ಭಾಗ್ಯವನ್ನು ಪಡೆದ ಅವರ ಶಿಷ್ಯವರ್ಗದವರನ್ನು ಪುಣ್ಯಶಾಲಿಗಳೆನ್ನಬೇಕು.

ಶಿಷ್ಯವರ್ಗದವರೂ ಸಹ ಒಳ್ಳೆಯ ಮೇಧಾವಿಗಳಾಗಿದ್ದಿರಬೇಕು. ಭಾಸ್ಕರರು ಗಣಿತಮಾರ್ಗಗಳನ್ನು ವಿಧಿಸಿ ಉದಾಹರಣೆಗಳನ್ನೂ ನ್ಯಾಸಗಳನ್ನೂ ಕೊಟ್ಟ ಮೇಲೆ ಆ ವಿಧಿಗಳಿಗೆ ಕಾರಣಗಳನ್ನು ಹುಡುಕಿಕೊಳ್ಳುವಷ್ಟು ಶಕ್ತಿಯಾದರೂ ಅವರಿಗಿದ್ದಿರಬೇಕು. ಎಂದರೆ, “1+2+3+4+ . . . ಹೀಗೆ ಬೇಕಾಗುವ ಸಂಖ್ಯೆಯ ವರೆಗೆ ಬರೆದು ಮೊತ್ತವನ್ನು ಕಂಡುಹಿಡಿಯಲು ಆದ್ಯಂತ ಸಂಖ್ಯೆಗಳ ಮೊತ್ತದ ಅರ್ಧವನ್ನು ಅಂತ್ಯ ಸಂಖ್ಯೆಯಿಂದ ಗುಣಿಸಬೇಕು” ಎಂಬ ವಿಧಿಯನ್ನು ಹೇಳಿ, $1+2+3+\ldots+9=\frac{9\times 10}{2}=45$ ಎಂದು ಉದಾಹರಿಸಿದ ಬಳಿಕ, ಈ ವಿಧಿಗೆ ಕಾರಣವೇನೆಂಬುದನ್ನು ಶಿಷ್ಯರು ಯೋಚಿಸಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಅಂತೂ ವಿಧಿಗಳ ಕಾರಣಗಳನ್ನು ಭಾಸ್ಕಾರರು ಗ್ರಂಥದಲ್ಲಿ ಬರೆದಿಲ್ಲ. ತಾವು ಬರೆದಿರುವಷ್ಟು ವಿವರಣೆಯೇ ಹೆಚ್ಚೆಂದು ಅವರ ಎಣಿಕೆ. “ಕಿಮಜ್ಞಾತಂ ಸುಬುದ್ಧೀನಾಮತೋ ಮಂದಾರ್ಥಮುಚ್ಯತೇ” ಎಂದರೆ, ಬುದ್ಧಿಶಾಲಿಗಳಿಗೆ ತಿಳಿಯದುದಾವುದು, ಮಂದಬುದ್ಧಿಯಿರುವವರಿಗಾಗಿ ಹೇಳುತ್ತಿದ್ದೇನೆ—ಎಂದು ಒಂದು ಕಡೆ ಹೇಳಿದ್ದಾರೆ. ಆದರೆ ಈ ಭಾವನೆಯು ವ್ಯಾಖ್ಯಾನಕಾರರನ್ನು ಅನೇಕ ವೇಳೆ ಕಷ್ಟಕ್ಕೀಡುಮಾಡಿದೆ. ಉದಾಹರಣೆಗಾಗಿ, ಈ ಮೇಲೆ ಕೊಟ್ಟಿರುವ ವಿಧಿಗೆ ಗಂಗಾಧರರ ವ್ಯಾಖ್ಯಾನದಲ್ಲಿ (1420) ಕಾರಣ ಉಕ್ತವಾಗಿಲ್ಲ. ಸೂರ್ಯದಾಸರು ತಮ್ಮ ‘ಗಣಿತಮಿತ್ರ’ವೆಂಬ ವ್ಯಾಖ್ಯಾನದಲ್ಲಿ (1538) “ಈ ವಿಧಿ ರೂಢಿಯಲ್ಲಿದೆ” ಎಂದುಬಿಟ್ಟಿದ್ದಾರೆ. ಗಣೇಶರು ತಮ್ಮ ‘ಬುದ್ಧಿವಿಲಾಸಿನೀ’ ಎಂಬ ವ್ಯಾಖ್ಯಾನದಲ್ಲಿ (1545) “ಆದಿಸಂಖ್ಯೆ 1; ಇದಕ್ಕೆ ಅಂತ್ಯ ಸಂಖ್ಯೆಯನ್ನು ಸೇರಿಸಿ

ಅರ್ಧಿಸಿದರೆ ಮಧ್ಯಸಂಖ್ಯೆ ಬರುತ್ತದೆ. ಮಧ್ಯಸಂಖ್ಯೆಯ ಹಿಂದೆ ಸಂಖ್ಯೆಗಳು ಹೇಗೆ ಕ್ಷೀಣಿಸುತ್ತವೆಯೋ ಹಾಗೆ ಅದರ ಮುಂದೆ ವೃದ್ಧಿಯಾಗುತ್ತವೆ. ಆದ್ದರಿಂದ ಮಧ್ಯ ಸಂಖ್ಯೆಯನ್ನು ಪದದಿಂದ ಗುಣಿಸಿದರೆ ಮೊತ್ತ ಬರುತ್ತದೆ" ಎಂದು ಕಾರಣ ಹೇಳಿದ್ದಾರೆ. ಇದು ಸಮರ್ಪಕವಾಗಿಯೇ ಇದ್ದಾಗ್ಯೂ ಪದವು (Number of Terms) ಸಮ ಸಂಖ್ಯೆಯಾದಾಗ ಅಷ್ಟು ಸರಿಹೋಗುವುದಿಲ್ಲ. ರಂಗನಾಥರು (17ನೆಯ ಶತಮಾನ) ತಮ್ಮ ವ್ಯಾಖ್ಯಾನದಲ್ಲಿ ಸಂಖ್ಯೆಗಳನ್ನು ಹಿಂದಿರುಗಿಸಿ ಬರೆದು ಕೂಡಿ ವಿಧಿಯನ್ನು ಸಮರ್ಪಕವಾಗಿ ಸಮರ್ಥಿಸಿದ್ದಾರೆ; ಈ ದಾರಿಯು ಕಮಲಾಕರನಿಂದ ಉಕ್ತವಾಗಿದೆ ಯೆಂದೂ ಹೇಳಿದ್ದಾರೆ. ನಾವು ಈಗ ಇಂಟರ್‌ಮೀಡಿಯೇಟ್ ತರಗತಿಯಲ್ಲಿ ಉಪಯೋಗಿಸುತ್ತಿರುವ ಮಾರ್ಗವೇ ಇದು.[1]

ಒಂದೊಂದು ವೇಳೆ ಭಾಸ್ಕರರ ವಿಧಿಗಳಿಗೆ ಕಾರಣಗಳನ್ನು ಕೊಡುವುದಕ್ಕೆ ಬಹಳ ಯೋಚಿಸಬೇಕಾಗುತ್ತದೆ. "ಐದು ಸ್ಥಾನಗಳುಳ್ಳ ಸಂಖ್ಯೆಯಾಗಬೇಕು, ಅದರಲ್ಲಿನ ಐದು ಅಂಕಗಳನ್ನೂ ಕೂಡಿದರೆ 13 ಆಗಬೇಕು. ಇಂಥಾ ಸಂಖ್ಯೆಗಳೆಷ್ಟಿವೆ?" ಎಂದು ಇಂದಿನ ಗಣಿತ ವಿದ್ವಾಂಸರನ್ನು ಪ್ರಶ್ನಿಸಿದಾಗ ಅವರು ತಂತಿಯ ಮೇಲೆ ನಿಂತವನಂತೆ ಆಡುವುದನ್ನು ನಾವು ನೋಡಬಹುದು. ಇಂತಹ ಪ್ರಶ್ನೆಗಳಿಗೆ ಭಾಸ್ಕರರ ವಿಧಿಯನ್ನು [$\frac{|\,s-1}{|\,n-1\;|\,s-n}$; $s =$ ಮೊತ್ತ ; $n =$ ಸ್ಥಾನಗಳು ; $s < (n + 9)$; ಸೊನ್ನೆ ಬರಬಾರದು ; ಸಂಖ್ಯೆಗಳಲ್ಲಿ ಒಂದೇ ಅಂಕೆ ಎಷ್ಟುಬಾರಿ ಬೇಕಾದರೂ ಬರಬಹುದು ಎಂದು] ಹೇಳಿ, ಅದಕ್ಕೆ ಕಾರಣವನ್ನು ಹುಡುಕಿರೆಂದಾಗಲೂ ಅಷ್ಟೆ. ಅದಕ್ಕೇ ಭಾಸ್ಕರರು "ಗರ್ವಿತಗಣಕಬಹೂನಾಂ ಸ್ಯಾತ್ಪಾತೋಽವಶ್ಯಮಂಕ ಪಾಶೇಽಸ್ಮಿನ್" —ಗಣಕರೆಂದು ಗರ್ವಪಡುವವರನೇಕರಿಗೆ ಈ ಅಂಕಪಾಶದಲ್ಲಿ ಅವಶ್ಯಕವಾಗಿ ಪತನವಾಗುತ್ತದೆ ಎಂದು ಹೇಳಿದುದು.

ಕೆಲವು ಕಡೆ ಭಾಸ್ಕರರ ಮಾರ್ಗಗಳಿಗಿಂತ ಸುಲಭವಾದ ಅಥವಾ ಹ್ರಸ್ವವಾದ ಮಾರ್ಗಗಳು ಇಂದು ನಮಗೆ ಗೊತ್ತಿವೆ—

> ಏಕದ್ವಿತ್ರ್ಯಾದಿಮೂಷಾವಹನಮಿತಿ ಮಹೋ ಬ್ರೂಹಿ ಮೇ ಭೂಮಿಭರ್ತುಃ |
> ಹರ್ಮ್ಯೇ ರಮ್ಯೇಽಷ್ಟಮೂಷೇ ಚತುರವಿರಚಿತೇ ಶ್ಲಕ್ಷ್ಣಶಾಲಾ ವಿಶಾಲೇ ||

---

[1] ಮೇಲೆ ಹೇಳಿದ ವ್ಯಾಖ್ಯಾನಗಳಲ್ಲದೆ ರಮಾಕೃಷ್ಣದೇವನೆಂಬಾತನು 'ಮನೋರಂಜನ'ವೆಂಬ ವ್ಯಾಖ್ಯಾನವನ್ನು ಬರೆದನು ; ಕಾಲ ಗೊತ್ತಾಗಿಲ್ಲ. ಮತ್ತು ಸೂರ್ಯದಾಸರೂ ರಂಗನಾಥರೂ 'ಗಣಿತ ಕೌಮುದಿ' ಎಂಬ ವ್ಯಾಖ್ಯಾನವನ್ನು ಉಪಯೋಗಿಸಿದ್ದಾರೆ ; ಆದರೆ 'ಗಣಿತ ಕೌಮುದಿ' ಇನ್ನೂ ಸಿಕ್ಕಿಲ್ಲ. ಈಚೆಗೆ ಕೋಲ್‌ಬ್ರುಕ್, ವಿಲ್ಕಿನ್ಸನ್ ಎಂಬ ಇಂಗ್ಲಿಷರು ಲೀಲಾವತಿಯನ್ನೂ, ಕೆಲವು ವ್ಯಾಖ್ಯಾನಗಳ ಭಾಗಗಳನ್ನೂ ಭಾಷಾಂತರಿಸಿದ್ದಾರೆ.

ಎಂದರೆ, ಚತುರವಿರಚಿತವಾದ, ರಮ್ಯವಾದ ಅರಮನೆಯ ಒಂದು ದೊಡ್ಡ ಶಾಲೆಗೆ ಎಂಟು ಕಿಟಕಿ ಇವೆ. ಒಂದೊಂದಾಗಿ, ಎರಡೆರಡಾಗಿ, ಮೂರು ಮೂರಾಗಿ . . . ಕಿಟಿಕಿಗಳನ್ನು ತೆರೆದರೆ, ಒಟ್ಟು ಎಷ್ಟು ವಿಧವಾಗಿ ತೆರೆಯಬಹುದು?" ಎಂಬ ಪ್ರಶ್ನೆಗೆ ಇಂದು ನಾವು $2^8-1=255$ ಎಂದು ಹ್ರಸ್ವಮಾರ್ಗದಿಂದ ಉತ್ತರ ಹೇಳುತ್ತೇವೆ. ಆದರೆ ಅವರು ${}_8C_1+{}_8C_2+\dots+{}_8C_8=255$ ಎಂಬ ದೀರ್ಘನ್ಯಾಸವನ್ನು ಕೊಟ್ಟಿದ್ದಾರೆ.

ವಸ್ತುವಿಗೆ ಒಪ್ಪುವ, ಸರಿಯಾದ ಉದಾಹರಣೆಗಳನ್ನು ಆರಿಸುವುದರಲ್ಲಿ ಭಾಸ್ಕರರು ಹೆಚ್ಚಾದ ಕುಶಲತೆಯನ್ನು ತೋರಿಸಿದ್ದಾರೆ. ನಾವು ಮತ್ತೆ ಯಾವಾಗ ಆ ವಸ್ತುವನ್ನು ಸಂಧಿಸಿದರೂ, ಅದರ ಜೊತೆಗೆ ಆ ಉದಾಹರಣೆ ನೆನಪಿಗೆ ಬರದೇ ಇರುವುದಿಲ್ಲ—ವಸ್ತು ಮತ್ತು ಉದಾಹರಣೆಗಳ ಜೋಡಣೆ ಅಷ್ಟು ಅಚ್ಚುಕಟ್ಟಾಗಿದೆ. ಅಂಕಪಾಶದಲ್ಲಿ ಸ್ಥಾನಾಂತ ಭೇದವನ್ನು (Permutations) ವಿವರಿಸುತ್ತ ಈ ಉದಾಹರಣೆಯನ್ನು ಕೊಟ್ಟಿದ್ದಾರೆ—

> ಪಾಶಾಂಕುಶಾಹಿಡಮರೂಹಕಪಾಲಶೂಲೈಃ |
> ಖಟ್ವಾಂಗಶಕ್ತಿಶರಚಾಪಯುತೈರ್ಭವಂತಿ ||
> ಅನ್ಯೋನ್ಯಹಸ್ತಕಲಿತೈಃ ಕತಿ ಮೂರ್ತಿಭೇದಾಃ |
> ಶಂಭೋರ್ಹರೇರಿವ ಗದಾರಿಸರೋಜಶಂಖೈಃ ||

"ಪಾಶ, ಅಂಕುಶ ಮೊದಲಾಗಿ ಹತ್ತು ಆಯುಧಗಳನ್ನು ಹತ್ತು ಕೈಗಳಲ್ಲಿ ಬೇರೆ ಬೇರೆ ಕ್ರಮಗಳಲ್ಲಿಟ್ಟು ಶಂಭುವಿನ ಮೂರ್ತಿಗಳನ್ನು ಮಾಡಿದರೆ ಎಷ್ಟು ಮೂರ್ತಿಗಳಾಗುತ್ತವೆ? ಹಾಗೆಯೇ ನಾಲ್ಕು ಆಯುಧಗಳುಳ್ಳ ಹರಿಯ ಮೂರ್ತಿಗಳೆಷ್ಟಾಗುತ್ತವೆ?" ಎಂದರೆ, ಪ್ರತಿಯೊಂದು ವಿಗ್ರಹಕ್ಕೂ ಹತ್ತು ಕೈಗಳಿವೆ, ಒಂದೊಂದು ಕೈಯಲ್ಲಿ ಒಂದೊಂದು ಆಯುಧವಿದೆ. ಒಂದು ವಿಗ್ರಹದಲ್ಲಿ ಒಂದು ಆಯುಧ ಈ ಕೈಯಲ್ಲಿದ್ದರೆ, ಇನ್ನೊಂದರಲ್ಲಿ ಅದೇ ಆಯುಧ ಇನ್ನೊಂದು ಕೈಯಲ್ಲಿದೆ. ಈ ವಿಗ್ರಹಗಳು ನಮ್ಮ ಕಣ್ಣೆದುರಿಗೆ ನಿಂತಲ್ಲದೆ ಸ್ಥಾನಾಂತ ಭೇದವು ಅಷ್ಟು ಅನುಕೂಲವಾಗಿ ಮುಂದಟ್ಟಾಗಲಾರದು. ಶಂಭುವಿನಲ್ಲಿ ಸಂಪೂರ್ಣವಾದ ಭಕ್ತಿಯಿರುವ ಶಿಲ್ಪಿಯು 36,28,800 ಬೇರೆ ಬೇರೆ ಶಂಭು ವಿಗ್ರಹಗಳನ್ನು ಕೆತ್ತಿಟ್ಟು ಕೃತಾರ್ಥನಾಗಬಹುದು. ಆದರೆ ವಿಷ್ಣು ಭಕ್ತನಿಗೆ ಅಷ್ಟು ಶ್ರಮವಿಲ್ಲ—24 ವಿಗ್ರಹಗಳಾದರೆ ಸಾಕು. "ವಿಷ್ಣುವಿಗೇನೋ 24 ಹೆಸರುಗಳಿವೆ, ಒಂದೊಂದು ವಿಗ್ರಹಕ್ಕೆ ಒಂದೊಂದು ಹೆಸರಿಡಬಹುದು. ಆದರೆ ಶಂಭುವಿಗ್ರಹಗಳಿಗೆ ಅಷ್ಟು ಹೆಸರುಗಳನ್ನು ಯಾರೂ ಜೋಡಿಸಿದಂತೆ ಕಾಣುವುದಿಲ್ಲ" ಎಂದು ಹರಣಚಂದ್ರಬಾನರ್ಜಿಯವರು ವ್ಯಾಖ್ಯಾನಮಾಡಿದ್ದಾರೆ.

ಸಮಂಜಸವಾದ ಪ್ರಶ್ನೆಗಳ ಅನ್ವೇಷಣದಲ್ಲಿ ಇಷ್ಟು ಆಸಕ್ತಿಯನ್ನು, ಇಷ್ಟು ಎಚ್ಚರವನ್ನು ಇಟ್ಟುಕೊಂಡಿದ್ದ ಭಾಸ್ಕರರಿಗೆ ಅಸಾಧುವಾದ ಅಥವಾ ಅಸಂಬದ್ಧವಾದ ಪ್ರಶ್ನೆಯನ್ನು ಕಂಡರೆ ಆಗ್ರಹವುಂಟಾಗುತ್ತಿದ್ದುದು ಸ್ವಾಭಾವಿಕವಾಗಿಯೇ ಇದೆ. ಮೂರು ಬಾಹುಗಳನ್ನು ಕೊಟ್ಟರೆ ತ್ರಿಭುಜವು ನಿಯತವಾಗುವ ಹಾಗೆ ನಾಲ್ಕು ಬಾಹುಗಳನ್ನು ಕೊಟ್ಟರೆ ಚತುರ್ಭುಜವು ನಿಯತವಾಗುವುದಿಲ್ಲವಷ್ಟೆ. ಆದರೆ ಶ್ರೀಧರ ಮುಂತಾದ ಗಣಕರು ಇದನ್ನರಿಯದೆ ಅನಿಯತವಾದ ಚತುರ್ಭುಜದ ಕರ್ಣಗಳನ್ನೂ (Diagonals) ಫಲವನ್ನೂ (Area) ಕಂಡುಹಿಡಿಯುವ ವಿಧಾನಗಳನ್ನು ಹೇಳಿದ್ದರು. ಇದನ್ನು ಖಂಡಿಸುತ್ತ ಭಾಸ್ಕರರು "ಸ ಪೃಚ್ಛಕಃ ಪಿಶಾಚೋ ವಾ ವಕ್ತಾ ವಾ ನಿತರಾಂ ತತಃ | ಯೋ ನ ವೇತ್ತಿ ಚತುರ್ಬಾಹುಕ್ಷೇತ್ರಸ್ಯಾಽನಿಯತಾಂ ಸ್ಥಿತಿಂ ||—ಅಂಥ ಚತುರ್ಭುಜದ ಫಲವನ್ನು ಅರಸುವವನೊಬ್ಬ ಪಿಶಾಚಿ, ಅವನ ಪ್ರಶ್ನೆಗೆ ಉತ್ತರ ಹೇಳುವವನು ಇನ್ನೊಬ್ಬ ಪಿಶಾಚಿ, ಏಕೆಂದರೆ ಚತುರ್ಭುಜದ ಅನಿಯತವಾದ ಸ್ಥಿತಿ ಅವರಿಗೆ ಗೊತ್ತಿಲ್ಲ" ಎಂದು ಲೀಲಾವತಿಯಲ್ಲಿ, ಯಾರೊಬ್ಬರ ಹೆಸರನ್ನೂ ಹೇಳದೆ, ತೇಜೋವಧೆ ಮಾಡಿದ್ದಾರೆ. ಇನ್ನೊಂದು ಕಡೆ "ಬೀಜಗಣಿತೇ ಪಟವೋಽಪಿ ಮೂಢಾಃ" ಎಂದು ಯಾರನ್ನೋ ಅಂದಿದ್ದಾರೆ. ಸಹಿಷ್ಣುಶಾಲಿಗಳಿಗೆ ಕೋಪಬಂದರೆ ಕಷ್ಟವಲ್ಲವೇ ?

ಮೇಲೆ ಅಲ್ಲಲ್ಲಿ ಕೊಟ್ಟಿರುವ ಉದಾಹರಣೆಗಳ ಜೊತೆಗೆ ಈ ಕೆಳಗಿನ ಉದಾಹರಣೆಗಳನ್ನೂ ಸೇರಿಸಿಕೊಂಡು ಲೀಲಾವತಿಯ ವ್ಯಾಪ್ತಿಯನ್ನು ತಕ್ಕಮಟ್ಟಿಗೆ ಅರಿಯಬಹುದಾಗಿದೆ—

(1) ನಾಲ್ವರು ರತ್ನ ವ್ಯಾಪಾರಿಗಳ ಪೈಕಿ ಒಬ್ಬನಲ್ಲಿ ಎಂಟು ಮಾಣಿಕ್ಯಗಳೂ ಇನ್ನೊಬ್ಬನಲ್ಲಿ ಹತ್ತು ಇಂದ್ರನೀಲಗಳೂ ಮೂರನೆಯವನಲ್ಲಿ ನೂರು ಮುಕ್ತಾಫಲಗಳೂ ಕೊನೆಯವನಲ್ಲಿ ಐದು ವಜ್ರಗಳೂ ಇದ್ದುವು. ಒಂದು ದಿನ ನಾಲ್ವರೂ ಕಲೆತಾಗ ಸ್ನೇಹಭಾವದಿಂದ ಪ್ರತಿಯೊಬ್ಬನೂ ತನ್ನ ಸರಕಿನಲ್ಲಿ ಒಂದೊಂದನ್ನು ಉಳಿದ ಮೂವರಿಗೂ ಕೊಟ್ಟನು. ಆಗ ಅವರ ಸರಕುಗಳು ಸಮವಾದ ಬೆಲೆಯುಳ್ಳುವಾದುವು. ಮಾಣಿಕ್ಯ, ಇಂದ್ರನೀಲ, ಮುಕ್ತಾಫಲ, ವಜ್ರ ಇವುಗಳ ಬೆಲೆಗಳನ್ನು ಹೋಲಿಸಿರಿ.

(2) ಎರಡು ಸಂಖ್ಯೆಗಳ ವರ್ಗಗಳ ಮೊತ್ತದಿಂದಲಾಗಲಿ, ವ್ಯತ್ಯಾಸದಿಂದಲಾಗಲಿ 1 ನ್ನು ಕಳೆದರೆ ವರ್ಗ ಸಂಖ್ಯೆ ಬರುವ ಹಾಗೆ ಎರಡು ಸಂಖ್ಯೆಗಳನ್ನು ಹೇಳಿ.

(3) ಒಂದು ಸಂಖ್ಯೆಯನ್ನು 5 ರಿಂದ ಗುಣಿಸಿ 63 ರಿಂದ ಭಾಗಿಸಿದರೆ ಶೇಷ 7 ಬರಬೇಕು. ಅದೇ ಸಂಖ್ಯೆಯನ್ನು 10 ರಿಂದ ಗುಣಿಸಿ 63 ರಿಂದ ಭಾಗಿಸಿದರೆ ಶೇಷ 14 ಬರಬೇಕು. ಅಂಥಾ ಸಂಖ್ಯೆಯನ್ನು ಹೇಳಿ.

(4) ಒಂದು ಮರವು 300 ಮೊಳ ಎತ್ತರವಿದೆ. ಅದಕ್ಕೆ 200 ಮೊಳ ದೂರದಲ್ಲಿ ಒಂದು ಬಾವಿ ಇದೆ. ಮರದ ತುದಿಯಲ್ಲಿ ಎರಡು ಕಪಿಗಳಿವೆ. ಒಂದು ಕಪಿ ಮರವನ್ನಿಳಿದು ನೇರವಾಗಿ ಬಾವಿಗೆ ಹೋಗುತ್ತದೆ. ಇನ್ನೊಂದು ಮರದ ಮೇಲೆ ಸ್ವಲ್ಪ ಎತ್ತರಕ್ಕೆ ನೆಗೆದು ಆ ಮೇಲೆ ನೇರವಾಗಿ ಬಾವಿಗೆ ಹೋಗುತ್ತದೆ. ಎರಡು ಮಾರ್ಗಗಳೂ ಒಂದೇ ದೂರವಾದರೆ, ಕಪಿ ಎಷ್ಟು ಮೇಲಕ್ಕೆ ನೆಗೆಯಿತು ?

(5) ಒಂದು ಸ್ತಂಭದ ಎತ್ತರ 12 ಅಂಗುಲ, ನೆರಳು 8 ಅಂಗುಲ. ಸ್ತಂಭವನ್ನು ದೀಪದಿಂದ ಇನ್ನೂ 48 ಅಂಗುಲ ದೂರ ಇಟ್ಟರೆ, ನೆರಳು 12 ಅಂಗುಲ. ದೀಪದ ಎತ್ತರ ಮತ್ತು ದೂರ ಎಷ್ಟು ?

(6) ಧಾನ್ಯವನ್ನು ಒಂದು ಗೋಡೆಯ ಪಕ್ಕದಲ್ಲಿ 6 ಮೊಳ ಎತ್ತರಕ್ಕೆ ನಿಡು ಗೋಪುರವಾಗಿ ಹೊಯ್ದಿದ್ದಾರೆ. ಗೋಪುರದ ತಳ ಅರ್ಧವರ್ತುಳವಾಗಿದೆ, ಮತ್ತು ತಳದ ಸುತ್ತಳತೆ 30 ಮೊಳ. ಧಾನ್ಯವು ಎಷ್ಟು ಪ್ರದೇಶವನ್ನಾಕ್ರಮಿಸಿದೆ ? ಧಾನ್ಯದ ರಾಶಿ ಒಳಮೂಲೆಯಲ್ಲಿದ್ದು, ಎತ್ತರ 6 ಮೊಳವೂ ತಳದ ಸುತ್ತಳತೆ 60 ಮೊಳವೂ ಆದರೆ ಪ್ರದೇಶವೆಷ್ಟು ? ಹಾಗೆಯೇ ಹೊರಮೂಲೆಯಲ್ಲಿದ್ದು, ಎತ್ತರ 6 ಮೊಳವೂ ತಳದ ಸುತ್ತಳತೆ 45 ಮೊಳವೂ ಆದರೆ ಪ್ರದೇಶವೆಷ್ಟು ?

(7) ಒಂದು ಮರದ ತುಂಡು ಒಂದು ಕೊನೆಯಲ್ಲಿ 20 ಅಂಗುಲ ದಪ್ಪವಾಗಿಯೂ ಇನ್ನೊಂದು ಕೊನೆಯಲ್ಲಿ 16 ಅಂಗುಲ ದಪ್ಪವಾಗಿಯೂ ಇದೆ. ಕೊನೆಗಳು ಚೌಕನಾಗಿವೆ. ತುಂಡಿನ ಉದ್ದ 100 ಅಂಗುಲಗಳು ? ಅದನ್ನು (ಉದ್ದವನ್ನು) ಸಮದೂರಗಳಲ್ಲಿ ನಾಲ್ಕು ಕಡೆ ಕೊಯ್ದರೆ, ಎಷ್ಟು ಚದರ ಅಂಗುಲಗಳನ್ನು ಕೊಯ್ದಂತಾಯಿತು ?

ಕೋಷ್ಟಕಗಳು, ಸಂಕಲನಾದಿ ವಿಧಿಗಳು, ಭಿನ್ನರಾಶಿ, ವಿಲೋಮ (Inversion), ಇಷ್ಟಕರ್ಮ (Supposition), ಸಂಕ್ರಮಣ (Sum and Difference of Numbers), ವರ್ಗಕರ್ಮ (Squares), ಮೂಲ (Roots), ತ್ರೈರಾಶಿ, ಮಿಶ್ರವ್ಯವಹಾರ (Interest), ವಾಪ್ಯಾದಿಪೂರಣ (Filling of Tanks), ಕ್ರಯವಿಕ್ರಯ, ಸುವರ್ಣಗಣಿತ, ಛಂದಶ್ಚಿತ್ಯಾದಿ (Combinations), ಶ್ರೇಢಿ (Progressions), ಕ್ಷೇತ್ರ, ಖಾತ (Excavations, Contents), ಚಿತಿ (Piles), ಕ್ರಕಚ (Saw), ರಾಶಿ (Grain), ಛಾಯಾ, ಕುಟ್ಟಕ (Indeterminate Equations), ಅಂಕಪಾಶ (Permutations)—ಇಷ್ಟು ಭಾಗವು ಕೇವಲ 277 ಶ್ಲೋಕಗಳ ಈ ಚಿಕ್ಕ ಗ್ರಂಥದಲ್ಲಿ ಅಡಗಿದೆ. ಈಚಿನವರು ಪುಸ್ತಕದಲ್ಲಿ ಹನ್ನೆರಡು ಕಡೆ ಗೀಟುಹಾಕಿ ಹದಿಮೂರು ಅಧ್ಯಾಯಗಳನ್ನಾಗಿ ವಿಭಾಗಿಸಿದ್ದಾರೆ. ಗ್ರಂಥಕರ್ತರು ಕೊನೆಯಲ್ಲಿ "ಸಂಕ್ಷಿಪ್ತಮುಕ್ತಂ ಪೃಥುತಾಭಯೇನ

ನಾಂತೋಸ್ತಿ ಯಸ್ಮಾದ್ಗಣಿತಾರ್ಣವಸ್ಯ'' ಎಂದು ಹೇಳಿದ್ದಾರೆ—ಈಜಿ ನೋಡಿ ಬಂದವರು ಹೇಳಿದ ಮಾತು.

ಇಷ್ಟಾಗಿ ಲೀಲಾವತಿಯು ಭಾಸ್ಕರರ 'ಸಿದ್ಧಾಂತ ಶಿರೋಮಣಿ'ಯೆಂಬ ಗ್ರಂಥದ ಪ್ರಥಮ ಭಾಗ ಮಾತ್ರ. ಬೀಜಗಣಿತ, ಗೋಳಾಧ್ಯಾಯ, ಭುವನಕೋಶ, ಗ್ರಹಗಣಿತ ಮುಂತಾದ ಇತರ ಭಾಗಗಳೂ ಸಿದ್ಧಾಂತ ಶಿರೋಮಣಿಯಲ್ಲಿವೆ. ಭಾಸ್ಕರರ ಕಾಲಕ್ಕೆ ನಮ್ಮ ದೇಶದಲ್ಲಿ ಗಣಿತದ ಕೆಲವು ಭಾಗಗಳು ಯಾವ ಮಟ್ಟದಲ್ಲಿದ್ದು ವೆಂಬುದನ್ನು ಈ ಗ್ರಂಥದಿಂದ ಊಹಿಸಬಹುದಾಗಿದೆ. ಭಾಸ್ಕರರು ಕ್ರಿ. ಶ. 1114 (ಶಾ. ಶ. 1036)ರಲ್ಲಿ ಸಹ್ಯಾದ್ರಿ ಎಂಬ ಕುಲಪರ್ವತಗಳ ಒಳಿ ಬಿಜ್ಜಡಬಿಡವೆಂಬ ಊರಿನಲ್ಲಿ ಹುಟ್ಟಿದರು. ಇವರ ತಂದೆಯ ಹೆಸರು ಮಹೇಶ್ವರೋಪಾಧ್ಯಾಯ. ಶಾಂಡಿಲ್ಯ ಗೋತ್ರಜರು. ಬಿಜ್ಜಡಬಿಡವು ಉಜ್ಜಯಿನಿಯ ರೇಖಾಂಶದಲ್ಲಿ 19ನೆಯ ಅಕ್ಷಾಂಶದಲ್ಲಿದ್ದು ಕರ್ಣಾಟಕಕ್ಕೋ ಮಹಾರಾಷ್ಟ್ರಕ್ಕೋ ಸೇರಿತ್ತು. ಭಾಸ್ಕರರಿಗೆ ತಂದೆಯೇ ವಿದ್ಯಾಗುರು. ಸಿದ್ಧಾಂತ ಶಿರೋಮಣಿಯನ್ನು ಕ್ರಿ. ಶ. 1150ರಲ್ಲಿ, ತಮ್ಮ 36ನೆಯ ವಯಸ್ಸಿನಲ್ಲಿ ಬರೆದು ಮುಗಿಸಿದರು. ಭಾಸ್ಕರಾಚಾರ್ಯರೂ ಅವರ ಹಿಂದಿನ ಸಿದ್ಧಾಂತಿಗಳೂ ಎಂತಹ ಮೇಧಾವಿಗಳಾಗಿದ್ದರು, ಹನ್ನೆರಡನೆಯ ಶತಮಾನದ ವೇಳೆಗೆ ನಮ್ಮ ದೇಶದಲ್ಲಿ ಗಣಿತವನ್ನು ಯಾವ ಹಂತಕ್ಕೇರಿಸಿದ್ದರು ಎಂಬುದನ್ನು ಒಂದು ಮಾತಿನಲ್ಲಿ ಹೇಳಬೇಕಾದರೆ ಅವರು ಅಂದು ವಿಧಿಸಿದ ಗಣಿತಮಾರ್ಗಗಳ ಆಧಾರದಿಂದ ಇಂದು ನಮ್ಮ ಪಂಚಾಂಗಗಳು ಗುಣಿಸಲ್ಪಡುತ್ತಿವೆ, ಸೂರ್ಯಚಂದ್ರ ಗ್ರಹಣಾದಿ ನಿರ್ಣಯಗಳು ಮಾಡಲ್ಪಡುತ್ತಿವೆಯೆಂದು ಹೇಳಿದರೆ ಸಾಕು.

ಭಾಸ್ಕರರಿಗೆ ಗಣಿತವೆಂಬುದು ಒಂದು ಆಟ. ಒಳ್ಳೆಯ ಆಟಗಾರನಾದ ಬಾಲಕನು ಚೆಂಡಾಟದಲ್ಲಿ ನಲಿಯುವಂತೆ ಭಾಸ್ಕರರು ಗಣಿತದಲ್ಲಿ ನಲಿದಾಡಿದ್ದಾರೆ. ಒಮ್ಮೆ ಅವರ ಮನಸ್ಸು ಆಟದಲ್ಲಿ ಲೀನವಾಗಿ ಉಳಿದ ಎಲ್ಲವನ್ನೂ ಮರೆತುಬಿಡುತ್ತದೆ. ಮತ್ತೊಮ್ಮೆ ಚೆಂಡು ಮೇಲಕ್ಕೆ ಹಾರಿರಲು ಅವರ ಗಮನವು ನಕ್ಷತ್ರ ಸಮೂಹಗಳ ಕಡೆಗೋ, ಮೇಘಾಕೃತಿಗಳ ಕಡೆಗೋ, ಚಂದ್ರಬಿಂಬದ ಕಡೆಗೋ ಹೋಗಿ ಆಟದ ಸೊಂಪು ಮತ್ತಷ್ಟು ಹೆಚ್ಚಾಗುತ್ತದೆ. ಅವರು ಆಡುವಾಗ ಹಾಡಿಯೂ ಇದ್ದಾರೆ. ವಿಶಾಲವಾದ, ಮನೋಹರವಾದ ಬಯಲಿನ ಪ್ರದೇಶವಾದರೆ ಆಟವು ಮತ್ತಷ್ಟು ಸ್ವಾರಸ್ಯವಾಗುತ್ತದೆಂದು ಅವರಿಗೆ ಗೊತ್ತು. ಅದಕ್ಕೇ ಅವರು ಆಟವನ್ನು ಪ್ರಾರಂಭಿಸು ವುದಕ್ಕೆ ಮುಂಚೆ ರಮ್ಯವಾದ ಪ್ರದೇಶಕ್ಕೆ ಹೋಗುವ ನಿಯಮವನ್ನಿಟ್ಟುಕೊಂಡರು. ಅವರ ಜೊತೆಯಲ್ಲಿ ಹೋಗಿ ಅವರ ಹಾಗೆ ಆಟವಾಡುವುದನ್ನು ಕಲಿಯುವುದಕ್ಕೆ ಯಾರಿಗೆತಾನೇ ಹುಮ್ಮಸು ಹುಟ್ಟುವುದಿಲ್ಲ?

ಬಿ. ಸೀತಾರಾಮಶಾಸ್ತ್ರೀ.

ಕರ್ಣಾಟಕದ ಅರಸುಮನೆತನಗಳು—ಕದಂಬರು

(ಮುಂದುವರಿದದ್ದು)

ಮಯೂರಶರ್ಮನ ಕಾಲದ ಶಾಸನಗಳು :

ಚಂದ್ರವಳ್ಳಿ ಶಾಸನ.—ಇದರ ಲಿಪಿ ೩-೪ನೆಯ ಶತಮಾನಗಳಲ್ಲಿ ಪ್ರಚಾರದಲ್ಲಿದ್ದ ಬ್ರಾಹ್ಮೀಲಿಪಿ. ಭಾಷೆ ಪ್ರಾಕೃತ. ಈ ಶಾಸನದ ಸಾರಾಂಶವನ್ನು ಹಿಂದೆ ಕೊಟ್ಟಿದ್ದೇವೆ.[1]

ಮಯೂರಶರ್ಮನ ತರುವಾಯ ಅವನ ಮಗನಾದ ಕಂಗವರ್ಮನು ಪಟ್ಟಕ್ಕೆ ಬಂದನು. ಇವನ ಲಿಪಿಗಳಾವುವೂ ದೊರೆತಿಲ್ಲ. ಈ ಮನೆತನದ ಬೇರೆ ಶಾಸನಗಳಿಂದ ಇವನು ಬಹು ಪರಾಕ್ರಮಶಾಲಿಯೂ ಸಾಮಂತರಾಜಪೂಜಿತನೂ ಆಗಿದ್ದನೆಂದು ತಿಳಿಯುತ್ತದೆ. ಇವನ ಮಗನು ಭಗೀರಥರಾಜನು. ಇವನ ಕಾಲವು ಸುಮಾರು ಕ್ರಿ. ಶ. ೩೮೨–೪೦೭. ಇವನ ಕಾಲದ ಶಾಸನಗಳೂ ಸಿಕ್ಕಿಲ್ಲ. ಇವನನಂತರ ಆಳಿದ ರಾಜರ ಶಾಸನಗಳಿಂದಲೂ ಇವನ ವಿಷಯವೇನೂ ತಿಳಿದುಬಂದಿಲ್ಲ. ಆ ಮೇಲೆ ಇವನ ಮಗನಾದ ರಘುರಾಜನು ಸಿಂಹಾಸನವನ್ನೇರಿದನು. ಈತನು ಅನೇಕ ಸಮರಗಳಲ್ಲಿ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ನಿಷ್ಕಂಟಕವಾಗಿ ಪಾಲಿಸಿದನು; ಶ್ರುತಿಪಥನಿಪುಣನೂ ಕವಿಯೂ ದಾನಶೂರನೂ ಕಲಾಕುಶಲನೂ ಪ್ರಜಾಪ್ರಿಯನೂ ಆಗಿದ್ದನು.[2]

ರಘುರಾಜನನಂತರ ಇವನ ತಮ್ಮನಾದ ಕಾಕುಸ್ಥವರ್ಮನು ಕದಂಬ ರಾಜ್ಯಸೂತ್ರಗಳನ್ನು ವಹಿಸಿದನು. ಇವನು ಪ್ರಜಾಪಾಲನ ದಕ್ಷನೂ ದೇವದ್ವಿಜಗುರುಪೂಜಾನಿರತನೂ ಆಗಿದ್ದನು. ಇವನ ಪ್ರತಾಪವು ಸ್ವದೇಶದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲಿಯೂ ಹಬ್ಬಿತ್ತು. ಪ್ರಸಿದ್ಧರಾದ ಗುಪ್ತರೇ ಮೊದಲಾದ ರಾಜರು ಇವನ ಸಹಾಯಾಪೇಕ್ಷಿಗಳಾಗಿ ಇವನೊಡನೆ ಬಾಂಧವ್ಯವನ್ನು ಬಯಸಿ ಶರೀರಸಂಬಂಧವನ್ನು ಬೆಳೆಸಿದರು. ಆಗಿನ ಕಾಲದ ರಾಜಮನೆತನಗಳ ಶಾಸನಗಳ[3] ಪರೀಕ್ಷೆಯಿಂದ ಕಾಕುಸ್ಥವರ್ಮನಿಗೆ ನಾಲ್ಕು ಜನ ಹೆಣ್ಣುಮಕ್ಕಳಿದ್ದಿರಬೇಕೆಂದು ಗೊತ್ತಾಗು

---

[1] ಇದರ ಅಕ್ಷರಗಳು ಪುಳುಮಾವಿಯ ಮ್ಯಾಕದೊನಿ ಶಾಸನದ ಲಿಪಿಯನ್ನು ಹೋಲುತ್ತವೆಂದೂ ಅವು ೩ನೆಯ ಶತಮಾನದವೆಂದೂ ಡಾ|| ಎಂ. ಎಚ್. ಕೃಷ್ಣರು ಅಭಿಪ್ರಾಯಪಟ್ಟಿದ್ದಾರೆ.

[2] *Ep. Ind.*, Vol. VIII, pp. 24 ff.

[3] *Ibid*, p. 33; *Ep. Ind.*, Vol. IX, p. 268; *M.A.R.*, 1924, p. 68; *Ibid*, 1925, p. 88; *Ibid*, 1911, p. 32.

ತ್ತದೆ. ಹಿರಿಯ ಮಗಳನ್ನು ತನ್ನ ಸಮಕಾಲೀನನಾದ ಕುಮಾರಗುಪ್ತನ (ಕ್ರಿ. ಶ ೪೧೫–೪೫೫) ಮಗ ಸ್ಕಂದಗುಪ್ತನಿಗೆ ಕೊಟ್ಟನೆಂದು ಊಹಿಸಬಹುದು.[1] ಕಾಕುಸ್ಥವರ್ಮನಿಗಿಂತ ಮೊದಲೇ ಪಟ್ಟಕ್ಕೆ ಬಂದ ಕುಮಾರಗುಪ್ತನು ತನ್ನ ಸಮವಯಸ್ಕನೋ ಹಿರಿಯನೋ ಆಗಿದ್ದಿರಬಹುದಾದುದರಿಂದ ಅವನಿಗೆ ಕಾಕುಸ್ಥವರ್ಮನು ತನ್ನ ಮಗಳನ್ನು ಕೊಟ್ಟನೆಂದು ಹೇಳುವುದು ಸಮಂಜಸವಾಗಲಾರದು.[2]

ವಾಕಾಟಕ ಅರಸನಾದ ನರೇಂದ್ರಸೇನನು ಕುಂತಲ ರಾಜನ ಮಗಳಾದ

---

[1] ಹೇರಾಸರು ಕುಮಾರ ಗುಪ್ತನಿಗೆ ಕೊಟ್ಟಿರಬಹುದೆಂದು ಬರೆದಿದ್ದಾರೆ (*J.B.O.R.S.*, Vol. XII, p. 459).

[2] ರೈಸರು ಈ ಗುಪ್ತರಾಜನು ಸಮುದ್ರಗುಪ್ತನಾಗಿರಬೇಕೆಂದು ಹೇಳಿದ್ದಾರೆ (*Mysore and Coorg from Inscriptions*, p. 23). 'ಕದಂಬ ಕುಲ'ವು ಹೇರಾಸರ ಅಭಿಪ್ರಾಯವನ್ನೇ ಎತ್ತಿಹಿಡಿಯುತ್ತದೆ (pp. 20 ff.).

ರಾಜಶೇಖರನ 'ಕಾವ್ಯಮೀಮಾಂಸೆ'ಯಲ್ಲಿಯ ಒಂದು ಶ್ಲೋಕದಲ್ಲಿ 'ಕುಂತಲಾಧೀಶ'ನ ನಿರ್ದೇಶವಿದೆ. ಇದೇ ಶ್ಲೋಕವನ್ನು ಭೋಜನು (೧೧ನೆಯ ಶತಮಾನ) ತನ್ನ ಶೃಂಗಾರ ಪ್ರಕಾಶದಲ್ಲಿ ಉದ್ಧರಿಸಿ ವಿಕ್ರಮಾದಿತ್ಯನು ಕುಂತಲರಾಜನ ಆಸ್ಥಾನಕ್ಕೆ ಕಾಳಿದಾಸನನ್ನು ಕಳುಹಿಸಿದ್ದನೆಂದು ಹೇಳಿದ್ದಾನೆ. ಕ್ಷೇಮೇಂದ್ರನ 'ಔಚಿತ್ಯವಿಚಾರ ಚರ್ಚೆ'ಯಲ್ಲಿ ಈ ಶ್ಲೋಕವು ಕಾಳಿದಾಸನ 'ಕುಂತೇಶ್ವರ ದೌತ್ಯ'ವೆಂಬ ಗ್ರಂಥದಿಂದಿರಬೇಕೆಂದು ಬರೆದಿದೆ. ಈ ಆಧಾರಗಳಿಂದ ಹೆರಾಸರು ಚಂದ್ರಗುಪ್ತನು ಕಾಳಿದಾಸನನ್ನು ಕುಂತಲೇಶನಾದ ಕದಂಬ ಭಗೀರಥರಾಜನ ಆಸ್ಥಾನಕ್ಕೆ ವಿವಾಹ ನಿಶ್ಚಯಕ್ಕಾಗಿ ಕಳುಹಿಸಿದ್ದನೆಂದು ಹೇಳಿದ್ದಾರೆ. ಆದರೆ 'ಭರತಚರಿತ'ದಲ್ಲಿ ಕುಂತಲೇಶನು 'ಸೇತುಬಂಧ ಕಾವ್ಯ'ವನ್ನು ರಚಿಸಿದನೆಂದು ಹೇಳಿದೆ. ಬಾಣನು ತನ್ನ 'ಹರ್ಷಚರಿತ'ದ ಉಪೋದ್ಘಾತದಲ್ಲಿ 'ಸೇತುಬಂಧ ಕಾವ್ಯ'ವು ಪ್ರವರಸೇನನದೆಂದು ಹೇಳಿದ್ದಾನೆ. ಇದರಿಂದ ಪ್ರವರಸೇನನಿಗೆ ಕುಂತಲೇಶನೆಂಬ ಬಿರುದು ಇದ್ದಂತೆ ತಿಳಿಯುತ್ತದೆ. ೧ನೆಯ ಪೃಥ್ವೀಸೇನನು ಕುಂತಲ ರಾಜನನ್ನು ಗೆದ್ದನೆಂದು ಅಜಂತೆಯ ಒಂದು ಲಿಪಿಯಲ್ಲಿ (೧೬ನೆಯ ಗುಹೆಯಲ್ಲಿಯ ಶಾಸನ, *Arch. Surv. W. Ind.*, Vol. IV, 53 and 124) ಉಕ್ತವಾಗಿರುವುದರಿಂದ ಆಗಿನ ಕಾಲದಿಂದ ವಾಕಾಟಕರಿಗೆ 'ಕುಂತಲಾಧೀಶ' ಎಂಬ ಬಿರುದು ಬಂದಿರಬಹುದೆಂದೂ ೨ನೆಯ ಚಂದ್ರಗುಪ್ತನು ಕಾಳಿದಾಸನನ್ನು ತನ್ನ ಮಗಳ ಮಗನಾದ ಪ್ರವರಸೇನನ ಆಸ್ಥಾನಕ್ಕೆ ಕಳುಹಿಸಿದ್ದನೆಂದೂ ಕೃಷ್ಣಸ್ವಾಮಿ ಅಯ್ಯಂಗಾರ್ರು ಅಭಿಪ್ರಾಯಪಟ್ಟಿದ್ದಾರೆ (*Annals of the Bhandarkar Research Institute*, Vol. V, pp. 44 ff.). ನರೇಂದ್ರಸೇನನು ಕುಂತಲ ರಾಜನ ಮಗಳನ್ನು ಮದುವೆಯಾದನೆಂದು ಶಾಸನದಲ್ಲಿ ಹೇಳಿರುವುದರಿಂದ ವಾಕಾಟಕರಿಗೆ 'ಕುಂತಲೇಶ' ಎಂಬ ಬಿರುದು ಇದ್ದರೂ ನಿಜವಾದ ಕುಂತಲ ರಾಜರು ಬೇರೆ ಆಗಿರಬೇಕು. ಆದುದರಿಂದ ಕಾಳಿದಾಸನು ಇವರಲ್ಲಿ ಯಾವ ಕುಂತಲ ರಾಜನ ಆಸ್ಥಾನಕ್ಕೆ ಹೋಗಿದ್ದನೆಂಬುದನ್ನು ನಿಶ್ಚಯಿಸಲಾಗದು. ಈ ವಿಷಯವನ್ನು ಕುರಿತು ಬರೆದಿರುವ ಶ್ರೀ. ಲಕ್ಷ್ಮೀನಾರಾಯಣರಾಯರ ಲೇಖವನ್ನು ನೋಡಿರಿ (*Ind. His. Quarterly*, Vol. IX, pp. 197 ff.).

ಅಜ್ಜಿತಭಟ್ಟಾರಿಕೆಯನ್ನು ಮದುವೆಯಾಗಿದ್ದನೆಂದು ಬಾಲಾಘಾಟ್ ಶಾಸನದಿಂದ ತಿಳಿಯುತ್ತದೆ.[1] ನರೇಂದ್ರಸೇನನ ಅಜ್ಜನಾದ ೨ನೆಯ ರುದ್ರಸೇನನು ೨ನೆಯ ಚಂದ್ರ ಗುಪ್ತನ ಮಗಳಾದ ಪ್ರಭಾವತೀಗುಪ್ತೆಯನ್ನು ಸುಮಾರು ಕ್ರಿ. ಶ. ೩೯೫ರಲ್ಲಿ ವಿವಾಹಮಾಡಿಕೊಂಡನೆಂದು ವಿನ್ಸೆಂಟ್ ಸ್ಮಿತರು ಹೇಳಿದ್ದಾರೆ.[2] ಆದುದರಿಂದ ನರೇಂದ್ರ ಸೇನನ ಮದುವೆಯು ಸುಮಾರು ಕ್ರಿ. ಶ. ೪೪೫ರಲ್ಲಿ ಆಗಿರಬಹುದು.[3] ಈ ಅಜ್ಜಿತ ಭಟ್ಟಾರಿಕೆಯು ಕದಂಬ ಕಾಕುಸ್ಥವರ್ಮನ ಮಗಳೇ ಆಗಿರಬೇಕು. ಈ ಕಾಲದಲ್ಲಿ ಕುಂತಲ ದೇಶವನ್ನಾಳುತ್ತಿದ್ದ ಅರಸರು ಕದಂಬರಲ್ಲದೆ ಬೇರೆ ಯಾರೂ ಅಲ್ಲ. ತಾಳ ಗುಂದದ ಪ್ರಣವೇಶ್ವರ ಗುಡಿಯಲ್ಲಿಯ ಸುಮಾರು ಕ್ರಿ. ಶ. ೫ನೆಯ ಶತಮಾನದ ಒಂದು ಶಿಲಾಲಿಪಿಯಲ್ಲಿ[4] ಭಟಾರಿ ವಂಶದ ಪಶುಪತಿ ಕಾಕುಸ್ಥನು ಕದಂಬ ವಂಶದ ರಾಜಪುತ್ರಿಯ ಮಗನೆಂದೂ ಅವನು ಹತ್ತು ಜನ ಮಾಂಡಲಿಕರ ನಾಯಕನಾಗಿದ್ದ ನೆಂದೂ ಉಕ್ತವಾಗಿದೆ. ಈ ಕದಂಬ ವಂಶದ ರಾಜಪುತ್ರಿಯು ಕಾಕುಸ್ಥವರ್ಮನ ಮಗಳಾಗಿರಬಹುದು. ಆಕೆಯು ತನ್ನ ಮಗನಿಗೆ ತಂದೆಯ ಹೆಸರನ್ನಿಟ್ಟುದು ಸ್ವಾಭಾ ವಿಕವಾಗಿ ತೋರುತ್ತದೆ.

ಗಂಗರ ಶಾಸನಗಳಿಂದ ವಿಷ್ಣುಗೋಪನ ಮಗನಾದ ೩ನೆಯ ಮಾಧವನು 'ಅಶ್ವಮೇಧಯಾಜಿ'ಯಾದ ಕದಂಬ ಕೃಷ್ಣವರ್ಮನ ಭಗಿನಿಯನ್ನು ವಿವಾಹಮಾಡಿ ಕೊಂಡಿದ್ದನೆಂದು ತಿಳಿಯಬರುತ್ತದೆ.[5] ಡುಬ್ರಾಯಿಲರು ಇವನು ಕದಂಬ ೨ನೆಯ ಕೃಷ್ಣ ವರ್ಮನಾಗಿರಬೇಕೆಂದು ಹೇಳಿದ್ದಾರೆ.[6] ಆದರೆ ಎಲ್ಲ ಶಾಸನಗಳಲ್ಲಿಯೂ ಅವಿನೀತನು

---

[1] *Ep. Ind.*, Vol. IX, p. 268.

[2] *J.R.A.S.*, 1914, p. 326.

[3] J. Dubreuil : *Ancient History of the Deccan*, p. 75.

[4] *Mysore Archæological Report*, 1911, p. 33.

[5] ಗಂಗರ ಪ್ರಕರಣದಲ್ಲಿ ನೋಡಿರಿ.

[6] *Ancient History of the Deccan*, p. 103. ಡಿ.ಸಿ. ಸರ್ಕಾರರೂ ಹೀಗೆಯೇ ಭಾವಿಸಿ ದ್ದಾರೆ (*Journal of Indian History*, Vol. XV, pp. 316 ff.).

'ಕದಂಬಕುಲ'ವೆಂಬ ಪುಸ್ತಕದಲ್ಲಿ (pp. 55—59) ಕದಂಬ ೨ನೆಯ ಕೃಷ್ಣವರ್ಮನ ತಂಗಿ ಯನ್ನು ಗಂಗ ೩ನೆಯ ಮಾಧವನು ಮದುವೆಯಾದನೆಂಬ ವಿಷಯದಲ್ಲಿ ಕೆಳಗಿನ ಪ್ರಮಾಣಗಳು ಕೊಡಲ್ಪಟ್ಟಿವೆ :—" ೧. ಶ್ರೀಪುರುಷನ ಹಲ್ಲೂರು ಶಾಸನ ಕಾಲವು ಕ್ರಿ. ಶ. ೭೮೮. ಆದುದರಿಂದ ಇದೇ ಅವನ ಕಡೆಯ ವರ್ಷವೆಂದು ಭಾವಿಸಿ ಹಿಂದಿನ ರಾಜರ ಆಳಿಕೆಯ ಕಾಲವನ್ನು ಗಣಿಸಿದರೆ ೨ನೆಯ ಮಾಧವನ ಕಾಲವು ೫೩೦—೫೫೫ ಆಗುತ್ತದೆ. ೨ನೆಯ ಕೃಷ್ಣವರ್ಮನೂ ಇದೇ ಕಾಲ ದವನು. (೨) ದುರ್ವಿನೀತನು ಚಾಲುಕ್ಯ ೨ನೆಯ ಪುಲಿಕೇಶಿಯ ಶ್ವಶುರ (ಮಾವನೂ) ಒಂದನೆಯ ವಿಕ್ರಮಾದಿತ್ಯನ ಅಜ್ಜನೂ ಆಗಿದ್ದನೆಂದು (ವೆಂಕಟರಮಣಯ್ಯ : Durvinīta and Vikramāditya, *Trivēṇi*, pp. 112-120) ಗೊತ್ತಿರುವುದರಿಂದಲೂ ಭೋಗಿವರ್ಮನು ಪುಲಿಕೇಶಿಯ ಸಮಕಾಲೀನ

ಅಶ್ವಮೇಧಯಾಜಿಯಾದ ಕದಂಬ ಕೃಷ್ಣವರ್ಮನ ಸೋದರಳಿಯನೆಂದು ಹೇಳಿರುವುದರಿಂದಲೂ 'ಅಶ್ವಮೇಧಯಾಜಿ'ಯೆಂಬ ಬಿರುದು ೧ನೆಯ ಕೃಷ್ಣವರ್ಮನಿಗಲ್ಲದೆ ೨ನೆಯ ಕೃಷ್ಣವರ್ಮನಿಗೆ ಇದ್ದಿಲ್ಲವಾದುದರಿಂದಲೂ ಅವಿನೀತನ ಸೋದರಮಾವನು ೧ನೆಯ ಕೃಷ್ಣವರ್ಮನೇ ಆಗಿರಬೇಕು. ಇದಲ್ಲದೆ ೩ನೆಯ ಮಾಧವನು ಸುಮಾರು ಕ್ರಿ. ಶ. ೪೮೦–೪೯೫ರಲ್ಲಿಯೂ[1] ೨ನೆಯ ಕೃಷ್ಣವರ್ಮನು ಸುಮಾರು ಕ್ರಿ. ಶ. ೫೪೫–೫೭೦ರಲ್ಲಿಯೂ[2] ಆಳಿದರೆಂದು ಅನೇಕ ಪ್ರಮಾಣಗಳಿಂದ ನಿರ್ಧಾರಿತವಾಗಿರುವುದರಿಂದ ಅವರಿಬ್ಬರೂ ಸಮಕಾಲೀನರಾಗುವುದು ಸಂಭಾವ್ಯವಲ್ಲ. ಈ ೧ನೆಯ ಕೃಷ್ಣವರ್ಮನ ತಂಗಿಯೇ ಕಾಕುಸ್ಥವರ್ಮನ ಕಡೆಯ ಮಗಳಾಗಿರಬೇಕು. ಶಾಂತಿ

ನಾಗಿರಬೇಕಾದುದರಿಂದಲೂ ೨ನೆಯ ಕೃಷ್ಣವರ್ಮ, ಮಾಧವರು ಏಕಕಾಲದಲ್ಲಿ ಆಳುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. (೩) ಅವಿನೀತನ ಸೋದರಮಾವನಾದ (೨ನೆಯ) ಕೃಷ್ಣವರ್ಮನು 'ಕದಂಬಕುಲ ಗಗನಗಭಸ್ತಿಮಾಲೀ' ಎಂದು ಶಾಸನಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ. ಭೋಗಿವರ್ಮನ ತಗರೇ ಶಾಸನದಲ್ಲಿ ಈ ವಿಶೇಷಣವು ೨ನೆಯ ಕೃಷ್ಣವರ್ಮನಿಗೆ ಕೊಡಲ್ಪಟ್ಟಿದೆ.'' ಆದರೆ ಈ ಕಾರಣಗಳು ಸಮರ್ಪಕವಾಗಿಲ್ಲ—(i) ಹಿಂದಿನ ರಾಜರ ಆಳಿಕೆಗಳ ಗಣನೆಯಲ್ಲಿ ತಪ್ಪುಗಳಿವೆ. ಮಾಧವನು ಕ್ರಿ. ಶ. ೪೮೦–೪೯೫ರಲ್ಲಿ ಆಳಿರಬೇಕೆಂದು ಸಪ್ರಮಾಣವಾಗಿ ಗಂಗಪ್ರಕರಣದಲ್ಲಿ ತೋರಿಸಿದ್ದೇವೆ. (ii) ವೆಂಕಟರಮಣಯ್ಯನವರ ವಿಧಾನವು ತಪ್ಪು. ದುರ್ವಿನೀತನು ವಿಕ್ರಮಾದಿತ್ಯನ ಸಮಕಾಲೀನನಾಗಿದ್ದರೆ ದುರ್ವಿನೀತನ ಕಡೆಯ ವರ್ಷವು ಸುಮಾರು ಕ್ರಿ. ಶ. ೬೫೫ ಎಂದು ಹೇಳಬೇಕಾಗುತ್ತದೆ. ದುರ್ವಿನೀತ ೧ನೆಯ ಶಿವಮಾರರ ನಡುವೆ ನಾಲ್ವರು ರಾಜರು ಆಳಿರುವುದರಿಂದ ೧ನೆಯ ಶಿವಮಾರನ ಪಟ್ಟಬಂಧದ (ಕ್ರಿ. ಶ. ೬೭೯) ಪೂರ್ವದಲ್ಲಿ ಅಂದರೆ ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಮುಷ್ಕರ ಪೊಲವೀರ ಶ್ರೀವಿಕ್ರಮ ಭೂವಿಕ್ರಮರ ಆಳಿಕೆಗಳು ಮುಗಿದಿದ್ದವೆಂದು ಹೇಳಬೇಕಾಗುತ್ತದೆ. ಈ ವಿಷಯದ ಚರ್ಚೆಯನ್ನು ಗಂಗಪ್ರಕರಣದಲ್ಲಿ ನೋಡಿರಿ. (iii) ಅವಿನೀತನ ಸೋದರಮಾವನಾದ ಕೃಷ್ಣವರ್ಮನಿಗೆ 'ಅಶ್ವಮೇಧಯಾಜಿ' ಎಂಬುದು ವ್ಯಾವರ್ತಕ ವಿಶೇಷಣವಾಗಿತ್ತು. ಈ ವಿಶೇಷಣವು ೨ನೆಯ ಕೃಷ್ಣವರ್ಮನ ಶಾಸನಗಳಲ್ಲಿಯೂ ೧ನೆಯ ಕೃಷ್ಣವರ್ಮನಿಗೇ ಕೊಡಲ್ಪಟ್ಟಿದೆ. ಮತ್ತು ಭೋಗಿವರ್ಮನ ತಗರೇ ಶಾಸನದಲ್ಲಿ ೨ನೆಯ ಕೃಷ್ಣವರ್ಮನಿಗೆ 'ಕದಂಬ ಕುಲಗಗನ' ಇತ್ಯಾದಿಯಾದ ವಿಶೇಷಣವಿಲ್ಲ. ಅದೇ ಅರ್ಥವನ್ನು ಸೂಚಿಸುವ ''ಕದಂಬಾನಾಂ ಅನ್ವಯಾಂಬರ ಭಾಸ್ಕರಸ್ಯ'' ಎಂಬ ಬೇರೆ ಶಬ್ದಪ್ರಯೋಗವಿದೆ. ಇದರಿಂದ ಆ ವಿಶೇಷಣವು ಕೇವಲ ವರ್ಣನಾಪರವೆಂದು ಹೇಳಬೇಕಾಗುತ್ತದೆ. ಅವಿನೀತನನ್ನು ವರ್ಣಿಸುವಾಗ ಗಂಗರ ಶಾಸನಗಳಲ್ಲೆಲ್ಲ ''ಅವಿಚ್ಛಿನ್ನಾಶ್ವಮೇಧಾವಭೃಥಾಭಿಷಿಕ್ತ ಶ್ರೀಮತ್ಕದಂಬಕುಲ ಗಗನಗಭಸ್ತಿಮಾಲಿನಃ ಶ್ರೀ ಕೃಷ್ಣವರ್ಮ ಮಹಾಧಿರಾಜಸ್ಯ'' ಎಂಬ ಆನುಪೂರ್ವಿಯಿಂದ ಕೃಷ್ಣವರ್ಮನ ನಿರ್ದೇಶವಿದೆ. ಆದುದರಿಂದ ಈ ವಿಶೇಷಣಗಳುಳ್ಳ ರಾಜನು ೧ನೆಯ ಕೃಷ್ಣವರ್ಮನೇ ಆಗಿರಬೇಕು.

[1] ಗಂಗಪ್ರಕರಣದಲ್ಲಿ ನೋಡಿರಿ.

[2] ಕದಂಬರಾಜರ ವಂಶವೃಕ್ಷವನ್ನೂ ಅವರ ಆಳಿಕೆಯ ಕಾಲಗಳ ವಿಷಯದಲ್ಲಿ ನಾವು ಮಾಡಿರುವ ಚರ್ಚೆಯನ್ನೂ ನೋಡಿರಿ.

ವರ್ಮನು ಕಾಕುಸ್ಥನ ಔರಸಪುತ್ರನೆಂದು ಹೇಳಿಕೊಳ್ಳುವುದರಿಂದ ಕೃಷ್ಣವರ್ಮನು ಅವನ ಮಲತಮ್ಮನಾಗಿರಬಹುದು. ಅವಿನೀತನ ತಾಯಿಯೂ ಕೃಷ್ಣವರ್ಮನೂ ಒಡಹುಟ್ಟಿದವರಾಗಿರಬೇಕು.

ಕಾಕುಸ್ಥವರ್ಮನನ್ನು ಕುರಿತು ಹೇಳುವ ಶಾಸನಗಳು ಎರಡು ಮಾತ್ರ ದೊರೆತಿವೆ.[1] ಅವನು ಯುವರಾಜನಾಗಿದ್ದಾಗ[2] ಅಂದರೆ ಅವನ ಅಣ್ಣನಾದ ರಘುರಾಜನು ರಾಜ್ಯಭಾರವನ್ನು ವಹಿಸಿದ್ದಾಗ ಬರೆದ ಹಲಸಿಯ ತಾಮ್ರಶಾಸನದಲ್ಲಿ ಕಾಕುಸ್ಥವರ್ಮನು ತನ್ನನ್ನು (ಯಾವುದೋ ಒಂದು ವಿಪತ್ತಿನಿಂದ) ಪಾರುಮಾಡಿದ ಸೇನಾಪತಿ ಶ್ರುತಕೀರ್ತಿಗೆ ಖೇಟಗ್ರಾಮದಲ್ಲಿ ಭೂಮಿಯನ್ನು ದಾನಮಾಡಿದನೆಂದು ಹೇಳಿದೆ. ತಾಳಗುಂದದ ಶಿಲಾಶಾಸನದಿಂದ ಇವನು ಸ್ಥಾನಕುಂದೂರ(ತಾಳಗುಂದ)ಲ್ಲಿ ಶಿವಾಲಯದ ಹತ್ತಿರದಲ್ಲಿ ಒಂದು ಕೆರೆಯನ್ನು ಕಟ್ಟಿಸಿದನೆಂದೂ ಈ ಶಿವಾಲಯದ ಈಶ್ವರನನ್ನು ಸಾತಕರ್ಣ್ಣಿ ಮೊದಲಾದ ರಾಜರು ಪೂರ್ವದಲ್ಲಿ ಪೂಜಿಸಿದ್ದರೆಂದೂ ತಿಳಿಯುತ್ತದೆ. ಕಾಕುಸ್ಥವರ್ಮನ ಔರಸಪುತ್ರನಾದ ಶಾಂತಿವರ್ಮ ನೃಪತಿಯ ಅಪ್ಪಣೆಯ ಮೇರೆಗೆ ಕುಬ್ಜನೆಂಬ ಕವಿಯು ಈ ಶಾಸನವನ್ನು ಬರೆದನೆಂದು ಹೇಳಿದೆ.

ಕಾಕುಸ್ಥವರ್ಮನಿಗೆ ಶಾಂತಿವರ್ಮ ಕೃಷ್ಣವರ್ಮರೆಂಬ ಇಬ್ಬರು ಗಂಡು ಮಕ್ಕಳಿದ್ದರು.[3] ಇವರು ಕದಂಬ ರಾಜ್ಯದ ಬೇರೆ ಬೇರೆ ಭಾಗಗಳನ್ನು ಒಂದೇ ಕಾಲದಲ್ಲಿ ಸ್ವತಂತ್ರವಾಗಿ ಆಳುತ್ತಿದ್ದರೆಂದು ಹಿಂದೆ ಹೇಳಿದ್ದೇವೆ. ಮೊದಲು ಹಿರಿಯ ಮಗನಾದ

---

[1] ತಾಳಗುಂದ ಶಿಲಾಶಾಸನ (*Ep. Ind.*, Vol. VIII, pp. 24 ff.); ಹಲಸಿ ತಾಮ್ರಶಾಸನ (*Ind. Ant.*, Vol. VI, p. 23).

[2] 'ಕದಂಬಾನಾಂ ಯುವರಾಜ'ನಾದ ಕಾಕುಸ್ಥವರ್ಮನ "ಸ್ವ ವೈಜಯಿಕೇ ಅಶೀತಿತಮೇ ಸಂವತ್ಸರೇ" ಎಂಬ ವಾಕ್ಯದಿಂದ ಕಾಕುಸ್ಥನು ಯುವರಾಜನಾದಂದಿನಿಂದ ಈ ಕಾಲಗಣನೆಯಾಗಿರಬೇಕೆಂದು ಅರ್ಥವಾಗುತ್ತದೆ. ಫ್ಲೀಟರು ಈ ಅರ್ಥವನ್ನು ಹೇಳಿ ಒಬ್ಬ ರಾಜನು ಎಂಬತ್ತು ವರ್ಷಗಳು ಆಳುವುದು ಅಸಂಭವವೆಂದು ಬಗೆದು ಈ ಶಾಸನದಲ್ಲಿ ನಿರ್ದಿಷ್ಟವಾದ ಸಂವತ್ಸರವು ಮಯೂರಶರ್ಮನ ರಾಜ್ಯಾಭಿಷೇಕ ಕಾಲದಿಂದ ಎಂಬತ್ತನೆಯ ವರ್ಷವಿರಬೇಕೆಂದು ಬರೆದಿದ್ದಾರೆ (*Dyn. Kan. Dist.*, p. 291). ಗುಪ್ತವಂಶದ ೧ನೆಯ ಕುಮಾರಗುಪ್ತನ ಶಾಸನಗಳಲ್ಲಿ 'ಕುಮಾರಗುಪ್ತಸ್ಯಾಭಿವರ್ದ್ಧಮಾನ ವಿಜಯರಾಜ್ಯ ಸಂವತ್ಸರೇ ಷಣ್ಣವತೇ' ಎಂದೂ 'ಕುಮಾರ ಗುಪ್ತಸ್ಯ ವಿಜಯರಾಜ್ಯಸಂವತ್ಸರೇ ಶತೇ ಸಪ್ತದಶೋತ್ತರೇ' ಎಂದೂ ಕಾಲನಿರ್ದೇಶ ಮಾಡಲ್ಪಟ್ಟಿದ್ದರೂ ಈ ಶಾಸನಗಳ ೯೬ನೆಯ ವರ್ಷ ಮತ್ತು ೧೧೭ನೆಯ ವರ್ಷಗಳು ಅವನ ರಾಜ್ಯದ ವರ್ಷಗಳಾಗಲಾರವು. ಗುಪ್ತರಾಜ್ಯ ಸ್ಥಾಪನೆಯ ಕಾಲದಿಂದ ಈ ವರ್ಷಗಳು ಗಣಿಸಲ್ಪಟ್ಟಿರಬೇಕು.

[3] ಬೀರೂರು ಕೃತಕ ಶಾಸನದಲ್ಲಿ ಶಾಂತಿವರ್ಮನು ವಿಷ್ಣುವರ್ಮನ 'ಜ್ಯೇಷ್ಠ ಪಿತೃ' ಎಂದು ವರ್ಣಿಸಲ್ಪಟ್ಟಿದ್ದಾನೆ. ಇದರಿಂದ ಶಾಂತಿವರ್ಮ ಕೃಷ್ಣವರ್ಮರು ಅಣ್ಣತಮ್ಮಂದಿರೆಂದು ಸ್ಪಷ್ಟವಾಗುತ್ತದೆ. ತಾಳಗುಂದ ಶಾಸನದಲ್ಲಿ ಶಾಂತಿವರ್ಮನು ಕಾಕುಸ್ಥನ 'ಔರಸಪುತ್ರ' ಎಂದು ಬರೆದಿದೆ.

ಶಾಂತಿವರ್ಮನ ಸಂತತಿಯ ರಾಜರ ವೃತ್ತವನ್ನು ಕೊಟ್ಟು ಆ ಮೇಲೆ ಕೃಷ್ಣವರ್ಮನ ಮತ್ತು ಅವನ ವಂಶಜರ ಇತಿಹಾಸವನ್ನು ಬರೆಯುತ್ತೇವೆ. ಮೇಲೆ ಹೇಳಿದ ತಾಳಗುಂದ ಶಿಲಾಶಾಸನದಲ್ಲಿ ಶಾಂತಿವರ್ಮನು "ಪಟ್ಟತ್ರಯಾರ್ಪಣವಿರಾಜಿತ ಚಾರುಮೂರ್ತೇಃ" (ಮೂರು ಪಟ್ಟಗಳನ್ನು ಧರಿಸಿದ್ದವನು) ಎಂದು ಬರೆದಿದೆ.[1] ಈ ಮೂರು ಪಟ್ಟಗಳಾವುವೆಂಬುದು ತಿಳಿದಿಲ್ಲ. ಹಲಸಿಯ ತಾಮ್ರಶಾಸನದಲ್ಲಿ ಶಾಂತಿವರವರ್ಮನು ದುಷ್ಟವನಿತೆಯಂತೆ ಶತ್ರುಗೃಹದಲ್ಲಿ ಅಡಗಿದ್ದ ರಾಜ್ಯಲಕ್ಷ್ಮಿಯನ್ನು ಸೆಳೆದುತಂದನೆಂದು ಬರೆದಿದೆ. ಇವನ ಮಗನಾದ ಮೃಗೇಶನು ತುಂಗ ಗಂಗರನ್ನೂ ಪಲ್ಲವರನ್ನೂ ಸೋಲಿಸಿದನೆಂದು ಅದೇ ಶಾಸನದಲ್ಲಿ ಹೇಳುವುದರಿಂದ ನೆರೆಹೊರೆಯ ರಾಜರಾಗಿದ್ದ ಪಲ್ಲವರೂ ಗಂಗರೂ ಶಾಂತಿವರ್ಮನ ಕಾಲದಲ್ಲಿ ಕದಂಬ ರಾಜ್ಯವನ್ನು ಅಪಹರಿಸಲು ಪ್ರಯತ್ನ ಮಾಡಿದಂತೆ ತೋರುತ್ತದೆ. ವೈಜಯಂತಿಯು (ಬನವಾಸಿ) ಇವನ ರಾಜಧಾನಿಯಾಗಿತ್ತು.[2] ಪಲಾಸಿಕೆಯೂ ಕದಂಬರಾಜ್ಯದಲ್ಲಿ ಒಂದು ರಾಜಧಾನಿಯಾಗಿತ್ತೆಂದು ಗೊತ್ತಾಗುತ್ತದೆ.[3]

ಶಾಂತಿವರ್ಮನ ಬಳಿಕ ಪಟ್ಟಕ್ಕೆ ಬಂದ ಅವನ ಹಿರಿಯ ಮಗನಾದ ಮೃಗೇಶವರ್ಮನು ಅನೇಕ ಘೋರವಾದ ಯುದ್ಧಗಳಲ್ಲಿ ಪರಾಕ್ರಮದಿಂದ ಶತ್ರುಗಳನ್ನು ಸೋಲಿಸಿದನೆಂದು ಹುಣಸೂರು ಹಲಸಿ ಶಾಸನಗಳಲ್ಲಿ ಹೇಳಿದೆ.[4] ಹಲಸಿ ತಾಮ್ರಶಾಸನದಲ್ಲಿ ಮೃಗೇಶನು 'ತುಂಗಗಂಗಕುಲೋತ್ಸಾದಿ'[5] ಎಂದೂ 'ಪಲ್ಲವಪ್ರಲಯಾನಲ' ನೆಂದೂ ವರ್ಣಿಸಲ್ಪಟ್ಟಿದ್ದಾನೆ. ಮೇಲೆ ಹೇಳಿದ ಘೋರ ಯುದ್ಧಗಳು ಗಂಗ ಪಲ್ಲವರೊಡನೆ ನಡೆದುವುಗಳೇ ಇರಬಹುದು. ಹುಣಸೂರಿನ ಶಾಸನದಲ್ಲಿ ಇವನು "ಮಹತಿ ಸಮರಸಂಕಟೇ ಸ್ವಭುಜಬಲಪರಾಕ್ರಮಾವಾಪ್ತ ವಿಶಾಲವಿಭವೈಶ್ವರ್ಯಃ" (ಭೀಕರವಾದ ಯುದ್ಧಪ್ರಸಂಗದಲ್ಲಿ ಇವನು ಸ್ವಭುಜಬಲಪರಾಕ್ರಮಗಳಿಂದ ವಿಪುಲವಾದ ಐಶ್ವರ್ಯವನ್ನು ಸಂಪಾದಿಸಿದವನು) ಎಂದು ವರ್ಣಿತನಾಗಿರುವುದರಿಂದ

---

[1] *Ep. Ind.*, Vol. VIII, pp. 24ff.

[2] ಇವನ ಮಕ್ಕಳು ಮೊಮ್ಮಕ್ಕಳ ಶಾಸನಗಳು ವೈಜಯಂತಿಯು ಕದಂಬರ ರಾಜಧಾನಿಯೆಂದು ಹೇಳುತ್ತವೆ. ಮೊದಲಿನಿಂದಲೂ ಪ್ರಸಿದ್ಧವಾದ ಈ ವೈಜಯಂತಿಯು ಕಾಕುಸ್ಥನ ಕಾಲದಲ್ಲಿಯೂ ರಾಜಧಾನಿಯಾಗಿದ್ದಿರಬಹುದು.

[3] *Ind. Ant.*, Vol. VI, p. 23.

[4] *Ep. Carn.*, Vol. IV, p. 231; *Ind. Ant.*, Vol. VI, p. 23.

[5] 'ತುಂಗಗಂಗರು' ಎಂದರೆ, ಉನ್ನತ (ಪ್ರಖ್ಯಾತ) ಗಂಗರೆಂಬ ಅರ್ಥವು ಗೃಹೀತವಾಗಿದೆ. 'ತುಂಗ'ವು ರಾಷ್ಟ್ರಕೂಟ ವಂಶದ ಹೆಸರಾದುದರಿಂದ (*Ep. Ind.*, Vol. V, p. 193.) ಇಲ್ಲಿಯ ತುಂಗ ಶಬ್ದವು ಅವರನ್ನು ನಿರ್ದೇಶಿಸಬಹುದು.

ಆ ಶತ್ರುಗಳನ್ನು ಸೋಲಿಸಿ ತನ್ನ ಮನೆತನದ ವೈಭವವನ್ನು ಉಳಿಸಿದನೆಂದು ತಿಳಿಯಬಹುದು. ರವಿವರ್ಮನು ಕಾಂಚೀಶನಾದ ಚಂಡದಂಡನನ್ನು ಕೊಂದು ಹಲಸಿಗೆಯಲ್ಲಿ ನಿಂತು ಸುಖರಾಜ್ಯಂಗೆಯ್ಯುತ್ತಿದ್ದನೆಂದು ಅವನದೊಂದು ಶಾಸನವು[1] ಹೇಳುತ್ತದೆ. ಇದರಿಂದ ಪಲ್ಲವರು ಕದಂಬರ ರಾಜ್ಯವೈಭವವನ್ನು ಸಹಿಸಲಾರದೆ ರವಿವರ್ಮನ ಕಾಲದ ವರೆಗೂ ಅವರೊಡನೆ ಕಾಳಗಗಳನ್ನು ಹೂಡಿ ಕೊನೆಗೆ ಪರಾಜಿತರಾದರೆಂದು ಊಹಿಸಬಹುದು.

ಮೃಗೇಶವರ್ಮನು 'ದ್ವಿಜಸಾಮಂತ'ರಿಂದ ಪೂಜಿತನಾಗಿದ್ದನು.[2] ಈ ಸಾಮಂತರ ಹೆಸರುಗಳು ಗೊತ್ತಾಗಿಲ್ಲ. ರವಿವರ್ಮರಾಜನ ತಾಯಿಯಾದ ಕೈಕೇಯ ಕುಲದ ಪ್ರಭಾವತಿಯು ಇವನ ರಾಣಿ.[3] ಶಾಂತಿವರ್ಮನ 'ಜ್ಯೇಷ್ಠ' ತನಯನೆಂದು ಇವನು ವರ್ಣಿಸಲ್ಪಟ್ಟಿರುವುದರಿಂದ[4] ಮೃಗೇಶನಿಗೆ ತಮ್ಮನು ಅಥವಾ ತಮ್ಮಂದಿರಿದ್ದಿರಬೇಕು. ಕೂಡಗೇರಿ ತಾಮ್ರಶಾಸನದ ವಿಜಯಶಿವಮಾಂಧಾತೃವರ್ಮನು ಪ್ರಾಯಶಃ ಒಬ್ಬ ತಮ್ಮನಾಗಿರಬೇಕು.[5] ಮೃಗೇಶನಿಗೆ ರವಿವರ್ಮ, ಭಾನುವರ್ಮ, ಶಿವರಥ ಎಂಬ ಮೂವರು ಮಕ್ಕಳಿದ್ದರು.[6]

ಮೃಗೇಶನ ಶಾಸನಗಳು :

೧. ದೇವಗಿರಿ ತಾಮ್ರಶಾಸನವು.[7]—ರಾಜನು ವೈಜಯಂತಿಯಲ್ಲಿದ್ದಾಗ ತನ್ನ ಆಳಿಕೆಯ ಮೂರನೆಯ ವರ್ಷದ ಪೌಷ ಸಂವತ್ಸರ, ಕಾರ್ತಿಕ ಬಹುಳ ದಶಮಿ ದಿನ ಉತ್ತರಾ ಭಾದ್ರಪದ ನಕ್ಷತ್ರದ ಪುಣ್ಯಕಾಲದಲ್ಲಿ ಅರ್ಹಂತರಿಗೆ ಚೈತ್ಯಾಲಯದ ಸಂಮಾರ್ಜನೋಪಲೇಪನ ಭಗ್ನಸಂಸ್ಕಾರಗಳಿಗೋಸ್ಕರವಾಗಿ ಬೃಹತ್‌ಪರಲರೂ ಗ್ರಾಮದಲ್ಲಿ ನಲವತ್ತು ನಿವರ್ತನಗಳ ಎರೆಭೂಮಿಯನ್ನು ದಾನಮಾಡಿದನು.

೨. ದೇವಗಿರಿ ಶಾಸನವು[8].—ರಾಜನು ತನ್ನ ಆಳಿಕೆಯ ನಾಲ್ಕನೆಯ ವರ್ಷದ ಎಂಟನೆಯ ಪಕ್ಷದ ಪೂರ್ಣಿಮಾ ತಿಥಿಯಂದು ವೈಜಯಂತಿಯಲ್ಲಿದ್ದಾಗ ಕಾಲವಂಗಾ ಗ್ರಾಮದಲ್ಲಿ ಮೂರು ಭಾಗಗಳನ್ನು ಮಾಡಿ, ಒಂದು ಭಾಗವನ್ನು ಅರ್ಹಂತರಿಗೆ ಮತ್ತು ಜಿನೇಂದ್ರ ದೇವರಿಗೆ, ಇನ್ನೊಂದು ಭಾಗವನ್ನು ಶ್ವೇತಪಟ ಮಹಾಸಂಘಕ್ಕೆ,

---

[1] ಹಲಸಿ ತಾಮ್ರಶಾಸನ (*Ind. Ant.*, Vol. VI, p. 29).

[2] *Ind. Ant.*, Vol. VI, p. 24.

[3] *Mys. Arch. Rep.*, 1910–11, p. 35.

[4] *Ind. Ant.*, Vol. VI, p. 24.

[5] *Ep. Ind.*, Vol. VI, p. 14.

[6] *Ind. Ant.*, Vol. VI, p. 28; *Ibid*, p. 30.

[7] *Ibid*, Vol. VII, p. 35.

[8] *Ind. Ant.*, VII, p. 37.

ಉಳಿದುದನ್ನು ನಿರ್ಗ್ರಂಥ ಮಹಾಶ್ರಮಣ ಸಂಘಕ್ಕೆ ಕೊಟ್ಟನೆಂದು ಹೇಳುತ್ತದೆ. ಈ ಶಾಸನವನ್ನು ಸೇನಾಪತಿ ನರವರನು ಬರೆದನು.

೩. ಹುಣಸೂರು ಶಾಸನವು[1].—ರಾಜನು ತನ್ನ ಆಳಿಕೆಯ ಏಳನೆಯ ವರ್ಷದ ಮಾರ್ಗಶಿರಮಾಸ ಶುಕ್ಲಪಕ್ಷ ದಶಮೀ ದಿನದಲ್ಲಿ ಅಥರ್ವವೇದದ ಔಪಗಹನಿ ಸಗೋತ್ರದ ಒಬ್ಬ ಬ್ರಾಹ್ಮಣನಿಗೆ ಕಿಱುಸೀರಲ್ಲಿ ಎಂಬ ಗ್ರಾಮವನ್ನು ಬ್ರಹ್ಮದೇಯವಾಗಿ ಬಿಟ್ಟನು. ಈ ಶಾಸನವು ವೈಜಯಂತಿಯಿಂದ ಹೊರಟಿದೆ. ಇದನ್ನು ಕೀರ್ತಿವರನು ಬರೆದನು. ಶಾಸನದ ಆದಿಭಾಗದಲ್ಲಿ "ಸುರಾಸುರಮುಕುಟಪ್ರಣಿಹಿತಮಣಿಕಿರಣಖಚಿತ ಚರಣಯುಗಃ ದಂಡಕಮಂಡಲುಹಸ್ತಃ ಪದ್ಮಪ್ರವರಾಸನೋ ಬ್ರಹ್ಮಾ" ಎಂದು ದಂಡಕಮಂಡಲುಹಸ್ತನೂ ಪದ್ಮಾಸನನೂ ಆದ ಚತುರ್ಮುಖಬ್ರಹ್ಮನ ಸ್ತೋತ್ರವಿದೆ.

೪. ಹಿರೇಶಕುನ ತಾಮ್ರಶಾಸನವು[2].—ರಾಜನು ತನ್ನ ಆಳಿಕೆಯ ಎಂಟನೆಯ ವರ್ಷದ ವೈಶಾಖ ಪೌರ್ಣಮಿಯ ದಿನದಲ್ಲಿ ಸೋಮಶರ್ಮಾರ್ಯನೆಂಬ ಬ್ರಾಹ್ಮಣನಿಗೆ ಕಡಟಿಕಟನಿಯೆಂಬ ಗ್ರಾಮವನ್ನೂ ವಾಸ್ತುಕ ಕ್ಷೇತ್ರವನ್ನೂ ಕೊಟ್ಟನು.

೫. ಹಲಸಿಯ ಶಾಸನವು[3].—ಮೃಗೇಶನು ವೈಜಯಂತಿಯಲ್ಲಿದ್ದಾಗ ತನ್ನ ಆಳಿಕೆಯ ಎಂಟನೆಯ ವರ್ಷವಾದ ವೈಶಾಖ ಸಂವತ್ಸರದ ಕಾರ್ತ್ತಿಕ ಪೂರ್ಣಿಮೆಯಂದು ತನ್ನ ತಂದೆಯ ಮೇಲಿನ ಭಕ್ತಿಯಿಂದ ಹಲಸಿಗೆಯಲ್ಲಿ ಜಿನಾಲಯವನ್ನು ಕಟ್ಟಿಸಿ ಯಾಪನೀಯ ನಿರ್ಗ್ರಂಥ ಕೂರ್ಚಕರ ಪೋಷಣೆಗಾಗಿ ಮಾತೃಸರಿತದಿಂದ ಇಂಗಿಣೀಸಂಗಮದ ವರೆಗಿನ ಮೂವತ್ತುಮೂರು ನಿವರ್ತನಗಳ ಭೂಮಿಯನ್ನು ಅರ್ಹಂತರಿಗೆ ದಾನಮಾಡಿದನು. ಈ ಶಾಸನದ ಆಜ್ಞಪ್ತಿಯು ದಾಮಕೀರ್ತಿ ಭೋಜಕನು. ಆಯುಕ್ತಕನು ಸರ್ವಾಧಿಕಾರಿ ಜಿಯಂತನು.

೬. ತಾಳಗುಂದ ಶಿಲಾಶಾಸನ[4].—ಇದು ಪ್ರಣವೇಶ್ವರ ದೇವಾಲಯದ ಗರ್ಭ ಗೃಹದಲ್ಲಿ ಒಂದು ಕಲ್ಲಿನಮೇಲೆ ಕೊರೆಯಲ್ಪಟ್ಟಿದೆ. ರವಿವರ್ಮಧರ್ಮಮಹಾರಾಜನ ತಾಯಿಯಾದ ಪ್ರಭಾವತಿಯು ಮೃಗೇಶವರ್ಮನ 'ಪ್ರಿಯ ಭಾರ್ಯೆ'ಯೆಂದೂ ಅವಳು 'ಕೈಕೇಯ ಮಹಾಕುಲ ಪ್ರಸೂತಿ'ಯೆಂದೂ ಇದರಲ್ಲಿ ಬರೆದಿದೆ. ಶಾಸನವು ಅಪೂರ್ಣವಾಗಿದೆ. ಈ ಶಾಸನದ ಕಾಲದಲ್ಲಿ ರವಿವರ್ಮನು ರಾಜನಾಗಿದ್ದನೆಂದು ಊಹಿಸಬಹುದಾದುದರಿಂದ ಮೃಗೇಶವರ್ಮನ ಮರಣಾನಂತರದಲ್ಲಿ ಪ್ರಭಾವತೀ ದೇವಿಯು ಪತಿಭಕ್ತಿಯಿಂದ ಬ್ರಹ್ಮದಾಯವನ್ನು ಕೊಟ್ಟು ಅದನ್ನು ಕಲ್ಲಮೇಲೆ ಕೆತ್ತಿಸು ವಾಗ ಏತಕ್ಕೋ ಅಪೂರ್ಣವಾಗಿ ಉಳಿಸಿದಂತೆ ತೋರುತ್ತದೆ.

---

[1] *Ep. Carn.*, Vol. IV, Hs. 18.

[2] *Ep. Carn.*, Vol. VIII, Sorab 133.

[3] *Ind. Ant.*, Vol. VI, p. 24.

[4] *Mys. Arch. Rep.*, 1910–11, p. 35.

ಮೃಗೇಶವರ್ಮನ ಬಳಿಕ ಅವನ ತಮ್ಮನಾದ ಶಿವಮಾಂಧಾತನು ಕದಂಬ ಸಿಂಹಾಸನವನ್ನೇರಿದನು. ಇವನ ಎರಡನೆಯ ವರ್ಷದ ಕೂಡಗೇರಿ ತಾಮ್ರಶಾಸನದಲ್ಲಿ ರಾಜನು ತನ್ನ ಗುರುವಾದ (ದತ್ತಾನುಯೋಗ) ಕೌಂಡಿನ್ಯ ಗೋತ್ರದ ತೈತ್ತಿರೀಯ ಚರಣದ ದೇವಶರ್ಮನಿಗೆ ಕೋಳಾಲ[1] ಗ್ರಾಮದಲ್ಲಿ ಭೂಮಿಯನ್ನು ದಾನಮಾಡಿದ ನೆಂದು ಹೇಳಿದೆ. ಈ ಶಾಸನವನ್ನು ರಹಸ್ಯಾಧಿಕೃತ (Private Secretary) ದಾಮೋದರದತ್ತನು ಬರೆದನು. ಇದರ ಲಿಪಿಯು ಮೃಗೇಶವರ್ಮನ ಹಲಸಿ ದೇವಗಿರಿ ಶಾಸನಗಳ ಅಕ್ಷರಗಳನ್ನು ಹೋಲುತ್ತದೆ.[2]

ಶಿವಮಾಂಧಾತನಾದ ಮೇಲೆ ಮೃಗೇಶನ ಹಿರಿಯ ಮಗನಾದ ರವಿವರ್ಮನು ರಾಜನಾದನು. ಇವನು ವಿಷ್ಣುವರ್ಮ ಮೊದಲಾದ ರಾಜರನ್ನು ಕೊಂದು ಕಾಂಚೀ ಪತಿಯಾದ ಚಂಡದಂಡನನ್ನು ನಿರ್ಮೂಲ ನಾಶಮಾಡಿ ಪಲಾಸಿಕೆಯಲ್ಲಿ ಸುಖದಿಂದ ರಾಜ್ಯವಾಳಿದನು. ಈ ವಿಷ್ಣುವರ್ಮನು[3] ಮತ್ತು ಚಂಡದಂಡನು ಯಾರೆಂಬುದು

---

[1] ತುಮಕೂರು ಜಿಲ್ಲೆಯ ತಿಪಟೂರು, ತುಮಕೂರು ತಾಲ್ಲೂಕುಗಳಲ್ಲಿ ಕೋಳಾಲವೆಂಬ ಹೆಸರಿನ ಹಳ್ಳಿಗಳಿವೆ.

[2] ಹಿಂದೆ ನೋಡಿರಿ.

[3] ಡುಬ್ರಾಯಿಲರು ಈ ವಿಷ್ಣುವರ್ಮನು ೧ನೆಯ ಕೃಷ್ಣವರ್ಮನ ಮಗನೆಂದು ಹೇಳಿದ್ದಾರೆ (*Ancient History of the Deccan*, p. 102). 'ಕದಂಬ ಕುಲ'ದಲ್ಲಿ (pp. 41 and 42) ೧ನೆಯ ಕೃಷ್ಣವರ್ಮನ ಮರಣಾನಂತರ ಮೃಗೇಶವರ್ಮನು ವಿಷ್ಣುವರ್ಮನ ಪಟ್ಟಬಂಧಕ್ಕೆ ತಡೆಯನ್ನುಂಟುಮಾಡಿದನೆಂದೂ ವಿಷ್ಣುವರ್ಮನು ತನ್ನ ಸಾರ್ವಭೌಮನಾದ ಪಲ್ಲವಶಾಂತಿವರನ ಸಾಹಾಯ್ಯದಿಂದ ವಿಘ್ನಗಳನ್ನು ದೂರಮಾಡಿಕೊಂಡು ಅವನಿಂದ ಅಭಿಷಿಕ್ತನಾದನೆಂದೂ ಬರೆದಿದೆ. ಮತ್ತು ತನ್ನ ದೇಶದಲ್ಲಿ ಶಾಂತತೆ ನೆಲೆಗೊಂಡಮೇಲೆ ವಿಷ್ಣುವರ್ಮನು ತನ್ನ ಪ್ರಭುವಾಗಿದ್ದ ಚಂಡ ದಂಡನೊಂದಿಗೆ ಆಗ ವೈಜಯಂತಿಯಲ್ಲಿ ಆಳುತ್ತಿದ್ದ ರವಿವರ್ಮನನ್ನು ರಣಾಂಗಣದಲ್ಲಿ ಎದುರಿಸಿದ ನೆಂದೂ ರವಿವರ್ಮನು ವಿಷ್ಣುವರ್ಮನನ್ನು ಕೊಂದು ಚಂಡದಂಡನನ್ನು ಸೋಲಿಸಿದನೆಂದೂ ಹೇಳಿದೆ. ಈ ಗ್ರಂಥದಲ್ಲಿ ಮಾಡಿರುವ ವಿವೇಚನೆಯಿಂದ ರವಿವರ್ಮನು ತ್ರಿಪರ್ವತದ ರಾಜ್ಯವನ್ನು ಸ್ವಾಧೀನಪಡಿಸಿ ಕೊಂಡನೆಂದು ಭಾಸವಾಗುತ್ತದೆ. ಆದರೆ ವಿಷ್ಣುವರ್ಮನ ಮಗನಾದ ಸಿಂಹವರ್ಮನು ಮಹಾರಾಜ ನಾಗಿ ಆಳಿದುದರಿಂದಲೂ ೨ನೆಯ ಕೃಷ್ಣವರ್ಮನೇ 'ವೈಜಯಂತೀ ವಿಜಯಯಾತ್ರೆ'ಗೆ ಹೊರಟನೆಂದು ಬೆಣ್ಣೂರು ಶಾಸನದಲ್ಲಿ ಹೇಳಿರುವುದರಿಂದಲೂ ರವಿವರ್ಮನ ಮನೆತನದಲ್ಲಿ ತ್ರಿಪರ್ವತದ ರಾಜ್ಯವು ಉಳಿಯಿತೆಂದು ಹೇಳುವುದು ನಿರಾಧಾರವಾದ ಕಲ್ಪನೆಯೇ ಸರಿ. ಈ ಕಲ್ಪನೆಯೇ ನಿಜವಾಗಿದ್ದರೆ ಸಿಂಹವರ್ಮ ಕೃಷ್ಣವರ್ಮರು ಯಾವ ಭಾಗದಲ್ಲಿ ಆಳುತ್ತಿದ್ದರು? ವೈಜಯಂತೀ ವಿಜಯಯಾತ್ರೆಯ ಪೂರ್ವದಲ್ಲಿಯೇ ಕೃಷ್ಣವರ್ಮನು "ಕದಂಬಾನಾಂ ಪಂಚಮೋ ಲೋಕಪಾಲಃ ಶ್ರೀಮದ್ಧರ್ಮ ಮಹಾರಾಜಃ" ಎಂದು ಉದ್ದಾಮ ಪದಗಳಿಂದ ವರ್ಣಿಸಲ್ಪಟ್ಟಿದ್ದಾನೆ (ಬೆಣ್ಣೂರು ಶಾಸನ). ಇದರಿಂದ ಅವನು ಕ್ರಮಪ್ರಾಪ್ತವಾದ ತ್ರಿಪರ್ವತದ ರಾಜ್ಯದಲ್ಲಿ ಆಳುತ್ತಿದ್ದನೆಂದೂ ರವಿವರ್ಮನು ವೈಜಯಂತೀ

ತಿಳಿದಿಲ್ಲ. ರವಿವರ್ಮನಿಗೆ ಭಾನುವರ್ಮ ಶಿವರಥರೆಂಬ ಇಬ್ಬರು ತಮ್ಮಂದಿರಿದ್ದರು.[1] ಹಲಸಿಗೆಯ ತಾಮ್ರಶಾಸನದಲ್ಲಿ ಭೋಜಕ ಪಂಡರನು ಭಾನುವರ್ಮರಾಜನ ಪ್ರಸಾದದಿಂದ ದಾನಮಾಡಿದಂತೆ ಹೇಳಿರುವುದರಿಂದ ರವಿವರ್ಮ ಭಾನುವರ್ಮರಿಬ್ಬರೂ ಏಕೀಭವಿಸಿ ಆಳುತ್ತಿದ್ದರೆಂದು ತಿಳಿಯಬಹುದು. ಹರಿವರ್ಮನು ತನ್ನ ಚಿಕ್ಕಪ್ಪನಾದ ಶಿವರಥನ ಉಪದೇಶದಿಂದ ದಾನಮಾಡಿದನೆಂದು ಅವನ ಒಂದು ಶಾಸನವು ತಿಳಿಸುತ್ತದೆ. ಇದರಿಂದ ಶಿವರಥನು ಮೃಗೇಶನ ಇನ್ನೊಬ್ಬ ಮಗನೆಂದು ಹೇಳಬಹುದು.

ರವಿವರ್ಮನ ಕಾಲದ ಶಾಸನಗಳು :

೧. ನಿಲಂಬೂರು ತಾಮ್ರಶಾಸನವು[2].—ರಾಜನು ತನ್ನ ಆಳಿಕೆಯ ಐದನೆಯ ವರ್ಷದ ಕಾರ್ತ್ತಿಕ ಪೂರ್ಣಿಮೆಯ ದಿವಸದಲ್ಲಿ ಯಜುರ್ವೇದಾಧ್ಯಾಯಿಯಾದ ಕಾಶ್ಯಪ ಗೋತ್ರದ ಗೋವಿಂದಸ್ವಾಮಿಯೆಂಬ ಬ್ರಾಹ್ಮಣನಿಗೆ ಮೊಗಲೂರ ವಿಷಯದಲ್ಲಿಯ ಕಿಱುಪಾಸಾಸಿ ಗ್ರಾಮದ ಪೂರ್ವದಿಕ್ಕಿನಲ್ಲಿರುವ ಮುಟ್ಟಗಿ, ಮಡ್ಡಾಕವು ಗ್ರಾಮಗಳನ್ನು ದಾನಮಾಡಿದನು.

೨. ಹಲಸಿಯ ಶಾಸನವು[3].—ರವಿವರ್ಮನ ಆಳಿಕೆಯ ಹನ್ನೊಂದನೆಯ ವರ್ಷದ ಹೇಮಂತದ ಆರನೆಯ ಪಕ್ಷದಲ್ಲಿ ದಶಮೀ ತಿಥಿಯಂದು ರಾಜನ ತಮ್ಮನಾದ ಭಾನುವರ್ಮಭೂಪನು ಪ್ರತಿಪೂರ್ಣಿಮೆಯ ದಿವಸವೂ ಶಾಶ್ವತವಾಗಿ ಜಿನಾಭಿಷೇಕ ನಡೆಯುವುದಕ್ಕಾಗಿ ಭೂಮಿಯನ್ನು ದಾನಮಾಡಿದನೆಂದೂ ಈ ಭಾನುವರ್ಮನ ಆಜ್ಞೆಯಿಂದ ಭೋಜಕ ಪಂಡರನು ಹಲಸಿಗೆಯಲ್ಲಿ ಹದಿನೈದು ನಿವರ್ತನಗಳ ಭೂಮಿಯನ್ನು ದಾನಮಾಡಿದನೆಂದೂ ಬರೆದಿದೆ.

೩. ಸಿರಸಿ ತಾಮ್ರಶಾಸನವು[4].—ರವಿವರ್ಮನು ತನ್ನ ಆಳಿಕೆಯ ಮೂವತ್ತೈದನೆಯ ವರ್ಷದಲ್ಲಿ ಕಾರ್ತಿಕಮಾಸ ಶುಕ್ಲಪಕ್ಷ ಪಂಚಮೀ ತಿಥಿಯಂದು ವೈಜಯಂತಿಯಲ್ಲಿದ್ದಾಗ ತನ್ನ ಪ್ರಿಯ ವೈದ್ಯನಾದ ನೀಲಕಂಠ ದೇಶಾಮಾತ್ಯನು ಕಟ್ಟಿಸಿದ ಮಹಾದೇವಾಯತನಕ್ಕೆ ಸಾತೇಗ್ರಾಮದಲ್ಲಿ ನಾಲ್ಕು ನಿವರ್ತನಗಳ ಭೂಮಿಯನ್ನು ಕೊಟ್ಟನೆಂದು ಹೇಳಿದೆ.

ರಾಜ್ಯದಲ್ಲಿ ರಾಜನಾಗಿದ್ದನೆಂದೂ ತಿಳಿಯುವುದು ಸಮಂಜಸವಾಗುತ್ತದೆ. ರವಿವರ್ಮನು ಕೊಂದ ವಿಷ್ಣುವರ್ಮನು ಕದಂಬನಾಗಿರಲಾರನು. ಇವರಿಬ್ಬರೂ ಕೈಕೇಯ ವಂಶದ ರಾಜಪುತ್ರಿಯರ ಮಕ್ಕಳೆಂದು ಶಾಸನಗಳಲ್ಲಿ ಹೇಳಿದೆ. ಫ್ಲೀಟರು ಈ ವಿಷ್ಣುವರ್ಮನು ಪಲ್ಲವ ವಿಷ್ಣುಗೋಪವರ್ಮನೋ ಅಥವಾ ಅವನ ಸೇನಾಪತಿ ವಿಷ್ಣುವರ್ಮನೋ ಆಗಿರಬೇಕೆಂದು ಹೇಳಿದ್ದಾರೆ (*Dyn. Kan. Dist.*, p. 322).

[1] *Ind. Ant.*, Vol. VI, pp. 28 and 30.
[2] *Ep. Ind.*, Vol. VIII, pp. 146 ff.
[3] *Ind. Ant.*, Vol. VI, p. 28
[4] *Ep. Ind.*, Vol. XVI, pp. 264 ff.

೪. ಹಲಸಿ ತಾಮ್ರಶಾಸನವು[1].—ದಾಮಕೀರ್ತಿಯ ಮಗನಾದ ಜಯಕೀರ್ತಿ ಪ್ರತೀಹಾರನು ತನ್ನ ಪಿತೃಗಳಿಗೆ ಪುಣ್ಯವಾಗಬೇಕೆಂದು ಪಲಾಸಿಕೆಯಲ್ಲಿ ಜಿನೇಂದ್ರನ ಪೂಜಾದಿಗಳನ್ನು ನಡೆಯಿಸುವುದಕ್ಕೋಸ್ಕರ ಪುರುಖೇಟ ಗ್ರಾಮವನ್ನು ದಾನಮಾಡಿ ದಂತೆ ಬರೆದಿದೆ. ಇದರಲ್ಲಿ ಕಾಲನಿರ್ದೇಶವಿಲ್ಲ.

೫. ಹಲಸಿ ತಾಮ್ರಶಾಸನವು[2].—ರಾಜನು ದಾಮಕೀರ್ತಿಯ ಮಾತೆಯ ಪ್ರಸಾದದಿಂದ ಜಿನೇಂದ್ರಪೂಜೆಗಾಗಿ ನಾಲ್ಕು ನಿವರ್ತನಗಳ ಭೂಮಿಯನ್ನು ದಾನ ಮಾಡಿದಂತೆ ಇದು ತಿಳಿಸುತ್ತದೆ. ರವಿವರ್ಮನು ವಿಷ್ಣುವರ್ಮ ಮೊದಲಾದ ರಾಜ ರನ್ನು ಕೊಂದು ಸಮಸ್ತ ಪೃಥ್ವಿಯನ್ನು ಜಯಿಸಿ ಕಾಂಚೀಶನಾದ ಚಂಡದಂಡನನ್ನು ಸೋಲಿಸಿ ಪಲಾಸಿಕೆಯಲ್ಲಿ ವಾಸವಾಗಿದ್ದನೆಂದು ಹೇಳಿದೆ. ಇದರಲ್ಲಿಯೂ ಕಾಲ ನಿರ್ದೇಶವಿಲ್ಲ.

೬. ಕವಡಿ ಶಿಲಾಶಾಸನವು[3].—ಇದರಲ್ಲಿ ಸಹ ಕಾಲನಿರ್ದೇಶವಿಲ್ಲ. ರವಿವರ್ಮನೂ ಅವನ ಹೆಂಡತಿಯೂ ಸತ್ತರೆಂದು ಇದು ಹೇಳುತ್ತದೆ.

ರವಿವರ್ಮನನಂತರ ಅವನ ಮಗನಾದ ಹರಿವರ್ಮನು ಸಿಂಹಾಸನವನ್ನೇರಿದನು. ಭಾನುಶಕ್ತಿಯೆಂಬ ಸೇಂದ್ರಕರಾಜನು ಇವನ ಸಾಮಂತನಾಗಿದ್ದನು.[4]

ಹರಿವರ್ಮನ ಶಾಸನಗಳು :

೧. ಹಲಸಿ ತಾಮ್ರಶಾಸನವು[5].—ರಾಜನು ತನ್ನ ಆಳಿಕೆಯ ನಾಲ್ಕನೆಯ ವರ್ಷದಲ್ಲಿ ಫಾಲ್ಗುಣ ಶುಕ್ಲ ತ್ರಯೋದಶೀ ತಿಥಿಯಂದು ಉಚ್ಚಶೃಂಗಿಯಲ್ಲಿದ್ದಾಗ ಭಾರದ್ವಾಜ ಗೋತ್ರದ ಸಿಂಹಸೇನಾಪತಿಯ ಮಗನಾದ ಮೃಗೇಶನು ಹಲಸಿಗೆಯಲ್ಲಿ ಕಟ್ಟಿಸಿದ ಅರ್ಹದಾಯತನದಲ್ಲಿ ಪೂಜಾದಿಗಳು ನಡೆಯುವುದಕ್ಕಾಗಿ ಚಂದ್ರಕ್ಷಾಂತ ಪ್ರಮುಖ ವಾರಿಷೇಣಾಚಾರ್ಯ ಸಂಘದ ಕೂರ್ಚಕ ಸಂಘಕ್ಕೆ ಸುದ್ದಿಕುಂದೂರು ವಿಷಯದಲ್ಲಿಯ ವಸುಂತವಾಟಕ ಗ್ರಾಮವನ್ನು ತನ್ನ ಚಿಕ್ಕಪ್ಪನಾದ ಶಿವರಥನ ಉಪದೇಶದ ಮೇರೆಗೆ ದಾನಮಾಡಿದನು.

---

[1] *Ind. Ant.*, Vol. VI, p. 25.

[2] *Ibid*, p. 29.

[3] *Ep. Carn.*, Vol. VIII, Sb. 523.

[4] ಚಾಲುಕ್ಯ ೧ನೆಯ ವಿಕ್ರಮಾದಿತ್ಯನ ಮಾಂಡಲಿಕನಾದ ಜಯಶಕ್ತಿಯ ಮುತ್ತಜ್ಜನಾದ ಶ್ರೀವಲ್ಲಭ ಭಾನುಶಕ್ತಿಯೆಂಬ ಸೇಂದ್ರಕ ರಾಜನೊಬ್ಬನಿದ್ದನು. ಮುಂದೆ ಚಾಲುಕ್ಯ ಪ್ರಕರಣದಲ್ಲಿ ನೋಡಿರಿ.

[5] *Ind. Ant.*, Vol. VI, p. 30.

೨. ಹಲಸಿಯ ಮತ್ತೊಂದು ಶಾಸನವು[1].—ಸೇಂದ್ರಕ ಭಾನುಶಕ್ತಿಯ ವಿಜ್ಞಾಪನೆಯ ಮೇರೆಗೆ ಸಾಧುಜನರ ಉಪಯೋಗಕ್ಕಾಗಿಯೂ ಅಹರಿಷ್ಟಿ ಎಂಬ ಶ್ರಮಣ ಸಂಘದ ಜಿನಾಲಯದಲ್ಲಿ ಪೂಜಾದಿಗಳನ್ನು ನಡೆಯಿಸುವುದಕ್ಕಾಗಿಯೂ ಹರಿವರ್ಮನು ತನ್ನ ಐದನೆಯ ವರ್ಷದಲ್ಲಿ ಪಲಾಸಿಕೆಯಲ್ಲಿದ್ದಾಗ ಮರದೇ ಎಂಬ ಗ್ರಾಮವನ್ನು ದಾನ ಮಾಡಿದನು. ಧರ್ಮನಂದ್ಯಾಚಾರ್ಯರು ಈ ಶ್ರಮಣ ಸಂಘದ ಅಧ್ಯಕ್ಷರಾಗಿದ್ದರು.

೩. ಸಂಗೊಳ್ಳಿ ತಾಮ್ರಶಾಸನವು[2].—ರಾಜನು ತನ್ನ ಆಳಿಕೆಯ ಎಂಟನೆಯ ವರ್ಷದಲ್ಲಿ ಆಶ್ವಯುಜಾಮಾವಾಸ್ಯೆ ವಿಷುಪದಂದು ವೈಜಯಂತಿಯಲ್ಲಿದ್ದಾಗ ಅಥರ್ವವೇದದ ನಾನಾ ಗೋತ್ರಗಳ ಇಪ್ಪತ್ತಮೂರು ಜನ ಬ್ರಾಹ್ಮಣರಿಗೆ ತೇದಾವ ಗ್ರಾಮವನ್ನು ಕೊಟ್ಟನು. ಈ ಶಾಸನದಲ್ಲಿ ಕೊಟ್ಟ ಕಾಲಾಂಗಗಳು ಕ್ರಿ. ಶ. ೫೪೫ ಸೆಪ್ಟೆಂಬರ್ ೨೧ ಗುರುವಾರಕ್ಕೆ ಸರಿಯಾಗುತ್ತವೆಂದು ಇದನ್ನು ಪ್ರಸಿದ್ಧಿಸಿದ ರಾವ್ ಬಹದ್ದೂರ್ ಕೆ. ಎನ್. ದೀಕ್ಷಿತರವರು ತೋರಿಸಿದ್ದಾರೆ.

ಶಾಂತಿವರ್ಮನ ಸಂತತಿಯಲ್ಲಿ ಹರಿವರ್ಮನೇ ಕದಂಬರ ಕಡೆಯ ರಾಜನಾಗಿದ್ದಿರಬೇಕು. ಅವನಿಗೆ ಮಕ್ಕಳಿದ್ದಂತೆ ಶಾಸನಗಳಿಂದ ತಿಳಿದುಬಂದಿಲ್ಲ.

ಇನ್ನು ತ್ರಿಪರ್ವತದಲ್ಲಿ[3] ಆಳಿದ ೧ನೆಯ ಕೃಷ್ಣವರ್ಮನ ಮಗನಾದ ಯುವರಾಜ

---

[1] *Ind. Ant.*, Vol. VI, p. 31.

[2] *Ep. Ind.*, Vol. XIV, pp. 163 ff.

[3] ಹೇರಾಸರು ಹಾಸನ ಜಿಲ್ಲೆಯ ಬೇಲೂರು ತಾಲೂಕಿಗೆ ಸೇರಿದ ಹಳೇಬೀಡೇ ತ್ರಿಪರ್ವತವೆಂದು ಹೇಳಿದ್ದಾರೆ (*Karnatak Historical Review*, Vol. I, pp. 13–18). ಹೆಸರಿಗೆ ಅನ್ವರ್ಥವಾಗಿ ಹಳೇಬೀಡಿನ ಹತ್ತಿರದಲ್ಲಿ ಭೈರವಗುಡ್ಡ, ಪುಷ್ಪಗಿರಿ, ಬೆಣ್ಣೆಗುಡ್ಡ ಎಂಬ ಮೂರು ಬೆಟ್ಟಗಳಿವೆಯೆಂದೂ ಬೀರೂರು ಶಾಸನದಲ್ಲಿ ಕೃಷ್ಣವರ್ಮನು ದಕ್ಷಿಣಾಪಥದಲ್ಲಿ ಆಳುತ್ತಿದ್ದನೆಂದು ಹೇಳಿರುವುದರಿಂದ ಹಳೇಬೀಡು ಬನವಾಸಿಯ ದಕ್ಷಿಣದಲ್ಲಿ ಇರಬೇಕೆಂದೂ ಇದರ ಸಮೀಪದಲ್ಲಿ ೨ನೆಯ ಕೃಷ್ಣವರ್ಮನ ತಾಮ್ರಶಾಸನಗಳು ಸಿಕ್ಕಿರುತ್ತವೆಂದೂ ಮೊದಲಾಗಿ ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ಇವು ಸಮರ್ಪಕವಾಗಿ ತೋರುವುದಿಲ್ಲ. ಬೀರೂರು ಶಾಸನವು ಕೃತಕವಾಗಿರಬೇಕೆಂದು ಹೇಳಿದ್ದೇವೆ. ಅದನ್ನು ನಂಬಿದರೂ ಹೇರಾಸರ ವಿಧಾನಕ್ಕೆ ಬಲ ಸಾಲದು. ಅದರಲ್ಲಿ ದತ್ತವಾದ ಭೂಮಿಯು ಸಿಂಧುಥಯರಾಷ್ಟ್ರದಲ್ಲಿ (ಬಿಜಾಪುರ ಜಿಲ್ಲೆಯ ಭಾಗದಲ್ಲಿ)ದ್ದುದರಿಂದ ವಿಷ್ಣುವರ್ಮನ ರಾಜ್ಯವು ಬನವಾಸಿಯ ಉತ್ತರದಲ್ಲಿದ್ದ ವಿಜಾಪುರ ಜಿಲ್ಲೆಯನ್ನು ಒಳಗೊಂಡಿತ್ತೆಂದು ಹೇಳಬೇಕಾಗುತ್ತದೆ. ಅಂದರೆ ಕೃಷ್ಣವರ್ಮನ ರಾಜ್ಯವು ದಕ್ಷಿಣಾಪಥ(?)ದಲ್ಲಿರಲಿಲ್ಲವೆಂದಾಯಿತು. ದಕ್ಷಿಣಾಪಥವೆಂದರೆ ಬನವಾಸಿಯ ದಕ್ಷಿಣಕ್ಕಿದ್ದ ದೇಶವೆಂಬ ಅರ್ಥವು ಹೇಗೆ ಬಂದಿತೋ ತಿಳಿಯದು. ನಣಕ್ಕಾಸ(?)ಪಲ್ಲವನಿಗೂ ಕೃಷ್ಣವರ್ಮನಿಗೂ ದಾವಣಗೆರೆ ತಾಲೂಕಿನಲ್ಲಿ ಭೀಕರವಾದ ಯುದ್ಧವು ನಡೆದುದರಿಂದ ಪಲ್ಲವನು ಕೃಷ್ಣವರ್ಮನ ರಾಜ್ಯದ ಮೇಲೆ ದಂಡೆತ್ತಿ ಬಂದು ಅಲ್ಲಿ ಅವನನ್ನು ಎದುರಿಸಿ ಸೋಲಿಸಿದನೆಂದು ತಿಳಿಯುವುದು ಸಮಂಜಸ. ಹಳೇಬೀಡು ಕೃಷ್ಣವರ್ಮನ ರಾಜಧಾನಿಯಾಗಿದ್ದರೆ

ದೇವವರ್ಮನ ದೇವಗಿರಿತಾಮ್ರಶಾಸನದಲ್ಲಿ[1] ಕೃಷ್ಣವರ್ಮನು ಸಾಮಂತರಾಜವಿಶೇಷರತ್ನ ನಾಗವಂಶಜರನ್ನು ಸೋಲಿಸಿದನೆಂದು ಹೇಳಿದೆ. ನಾಗರು ಸಾತವಾಹನರ ಸಾಮಂತರಾಗಿದ್ದರೆಂದು ಡುಬ್ರಾಯಿಲರು ಅಭಿಪ್ರಾಯಪಟ್ಟಿರುತ್ತಾರೆ.[2] ಹೀಗಿದ್ದ ಪಕ್ಷದಲ್ಲಿ ಸಾತವಾಹನರ ರಾಜ್ಯವು ಪಲ್ಲವರ ಕೈಸೇರಿದಾಗ ಈ ನಾಗರು ಅವರ ಮಾಂಡಲಿಕರಾಗಿರಬೇಕು. ಮುಂದೆ ಕದಂಬರು ಪಲ್ಲವರ ರಾಜ್ಯದ ಕೆಲಭಾಗವನ್ನು ಆಕ್ರಮಿಸಿದಾಗ ಅವರು ಕದಂಬರ ಪ್ರಭುತ್ವವನ್ನು ಒಪ್ಪಿಕೊಂಡಿರಬೇಕು. ಕೃಷ್ಣವರ್ಮನ ಕಾಲದಲ್ಲಿ ನಾಗರು ಕದಂಬರ ವಿರುದ್ಧವಾಗಿ ದಂಗೆಯೆಬ್ಬಿಸಿದಂತೆ ತೋರುತ್ತದೆ. ಆಗ ಕೃಷ್ಣವರ್ಮನು ಅವರನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡನೆಂದು ಮೇಲಿನ ಲಿಪಿಯಿಂದ ಊಹಿಸಬಹುದು. ಸುಮಾರು ೫ನೆಯ ಶತಮಾನದಲ್ಲಿ ಬರೆಯಲ್ಪಟ್ಟ ಒಂದು ಶಿಲಾಲಿಪಿಯಲ್ಲಿ[3] ನಣಕ್ಕಾಸ(?)ಪಲ್ಲವನಿಗೂ ಕೃಷ್ಣವರ್ಮ ರಾಜನಿಗೂ ತುಮುಲ ಯುದ್ಧವಾಗಿ ಅದರಲ್ಲಿ ಕೃಷ್ಣವರ್ಮನ ಸೈನ್ಯವು ಭಗ್ನವಾಯಿತೆಂದೂ ಆ ಪ್ರಸಂಗದಲ್ಲಿ ಸ್ವದೇಶ ಕ್ಷಯವಾಗಲು ಕೈಕಯ ವಂಶಜನಾದ ಶಿವನಂದವರ್ಮನು ಕೃಷ್ಣವರ್ಮನ ಪರಾಭವದಿಂದ ನೊಂದು ಅವನ ರಾಜ್ಯದ ಪೂರ್ವ ವೈಭವವನ್ನು ಸಂಪಾದಿಸಿಯೇ ತೀರುವೆನೆಂದು ನಿಶ್ಚಯಿಸಿ ಉಗ್ರವಾದ ತಪಸ್ಸನ್ನಾಚರಿಸತೊಡಗಿದನೆಂದೂ ಬರೆದಿದೆ. ಈ ಶಾಸನದಲ್ಲಿ ಉಕ್ತನಾದ ಕೃಷ್ಣವರ್ಮನು ಕದಂಬನಾಗಿರಬೇಕು. ಅವನ ಪರಾಜಯದಿಂದ ಸಂತಪ್ತನಾದ ಶಿವನಂದವರ್ಮನು ಕದಂಬರಾಜನ ಬಂಧುವಾಗಿದ್ದಂತೆ ತೋರುತ್ತದೆ. ಕದಂಬ ಕೃಷ್ಣವರ್ಮನು ಕೈಕೇಯ ವಂಶದ ರಾಜಪುತ್ರಿಯನ್ನು ಮದುವೆಯಾಗಿದ್ದುದರಿಂದ ಕೈಕೇಯ ವಂಶದ ಈ ಶಿವನಂದವರ್ಮನು ಅವನ ಬಂಧುವಾಗಿದ್ದನೆಂದು ತಿಳಿಯುವುದು ಅಸಮಂಜಸವಲ್ಲ. ಮತ್ತು

ನಣಕ್ಕಾಸಪಲ್ಲವನು ದಾವಣಗೆರೆಯವರೆಗೆ ಬರಬೇಕಾದ ಅವಶ್ಯವಿಲ್ಲ. ಇದಲ್ಲದೆ ಹಾಸನ ತಾಲೂಕು ಕದಂಬ ಗಂಗರಾಜ್ಯಗಳ ಮೇರೆಯಾಗಿದ್ದುದರಿಂದ ಕೃಷ್ಣವರ್ಮನು ದಕ್ಷಿಣಾಪಥ (?)ದಲ್ಲಿದ್ದ ತನ್ನ ರಾಜ್ಯಕ್ಕೆ ಈಶಾನ್ಯದ ಮೂಲೆಯಲ್ಲಿದ್ದ ಹಳೇಬೀಡನ್ನು ರಾಜಧಾನಿಯಾಗಿ ಮಾಡಿಕೊಳ್ಳುವುದು ಆಡಳಿತಕ್ಕೆ ಸುಕರವಲ್ಲ. ರಾಜಧಾನಿಯು ಸಾಧಾರಣವಾಗಿ ರಾಜ್ಯದ ಮಧ್ಯವರ್ತಿಯಾಗಿರಬೇಕು. ಈ ಕಾರಣಗಳಿಂದ ತ್ರಿಪರ್ವತವು ಹಳೇಬೀಡಾಗಲಾರದು. ಡುಬ್ರಾಯಿಲರು ಇದು ದೇವಗಿರಿಯಾಗಿರಬಹುದೆಂದು ಹೇಳಿದ್ದಾರೆ (*Ancient History of the Deccan*, p. 101). ಪ್ರೊ. ಪಾಠಕರು ಇದು ಬೆಳಗಾವಿ ಜಿಲ್ಲೆಯಲ್ಲಿರುವ ಮುರಗೋಡೆಂದು ಅಭಿಪ್ರಾಯಪಟ್ಟಿದ್ದಾರೆ. (*Dyn. Kan. Dist.*, p. 285, note 6). ಮೇಲೆ ಕೊಟ್ಟ ಕಾರಣಗಳಿಂದ ಪಾಠಕರ ಊಹೆಯೇ ಸರಿಯೆಂದು ನಮಗೆ ತೋರುತ್ತದೆ.

1 *Ind. Ant.*, Vol. VII, p. 33.
2 *Ancient History of the Deccan*, p. 50.
3 *Ep. Carn.*, Vol. XI, p. 210, D.G., 161.

ಪಲ್ಲವನ ಪ್ರತಿಕಕ್ಷಿಯಾಗಿ ಹೋರಾಡಿದ ಕೃಷ್ಣವರ್ಮನು ಆ ಹೆಸರಿನ ಕದಂಬ ರಾಜನೇ ಆಗಿರಬೇಕೆಂದು ಸ್ಪಷ್ಟವಾಗುತ್ತದೆ.

ಕೃಷ್ಣವರ್ಮನು ಅಶ್ವಮೇಧಯಾಜಿಯಾಗಿದ್ದನೆಂದು ಮೇಲೆ ಹೇಳಿದ ದೇವಗಿರಿ ಶಾಸನದಲ್ಲಿಯೂ ವಿಷ್ಣುವರ್ಮನ ಹೆಬ್ಬಟ ಶಾಸನದಲ್ಲಿಯೂ ಎಸೆಯ ಕೃಷ್ಣವರ್ಮನ ಶಾಸನದಲ್ಲಿಯೂ ಉಕ್ತವಾಗಿದೆ.[1] ಇವನು ಪಲ್ಲವರ ಮೇಲಿನ ತನ್ನ ವೈರವನ್ನು ತೀರಿಸಿಕೊಂಡು ದಿಗ್ವಿಜಯಮಾಡಿಕೊಂಡು ಬಂದಮೇಲೆ ಈ ಅಶ್ವಮೇಧಯಾಗವನ್ನು ಮಾಡಿರಬಹುದು. ಮೃಗೇಶವರ್ಮನು 'ಪಲ್ಲವ ಪ್ರಲಯಾನಲ'ನಾಗಿದ್ದನೆಂದು ಹಲಸಿ ತಾಮ್ರಶಾಸನದಲ್ಲಿ ಹೇಳಿರುವುದರಿಂದ ಪಲ್ಲವ ಪರಾಜಯದಲ್ಲಿ ಇವನು ಕೃಷ್ಣವರ್ಮನಿಗೆ ಬೆಂಬಲವನ್ನು ಕೊಟ್ಟಿರಬೇಕು. ಮೃಗೇಶವರ್ಮನ ಹೆಂಡತಿಯು ಕೈಕೇಯ ಕುಲದವಳೇ ಆಗಿದ್ದುದರಿಂದ ಅವನು ಕೃಷ್ಣವರ್ಮನ ಹಿತೇಚ್ಛುವಾಗಿ ಪಲ್ಲವರನ್ನು ಸೋಲಿಸುವುದರಲ್ಲಿ ಭಾಗ ತೆಗೆದುಕೊಂಡಿರಬೇಕು. ಈ ಹಲಸಿ ತಾಮ್ರಶಾಸನವು ಮೃಗೇಶವರ್ಮನ ಎಂಟನೆಯ ವರ್ಷದಲ್ಲಿ ಹುಟ್ಟಿದುದರಿಂದ ಪಲ್ಲವರೊಡನೆ ಆದ ಯುದ್ಧವು ಸುಮಾರು ಕ್ರಿ. ಶ. ೪೮೦ಕ್ಕಿಂತ ಮುಂಚೆ ನಡೆದಿರಬೇಕು.

ಕೃಷ್ಣವರ್ಮನಿಗೆ ವಿಷ್ಣುವರ್ಮ ದೇವವರ್ಮರೆಂಬ ಇಬ್ಬರು ಮಕ್ಕಳಿದ್ದರು. ವಿಷ್ಣುವರ್ಮನು ಕೈಕೇಯ ವಂಶದ ರಾಜಕುಮಾರಿಯ ಮಗನು.[2] ಬೀರೂರು ತಾಮ್ರ ಶಾಸನದಲ್ಲಿ[3] ಇವನು ಕೃಷ್ಣವರ್ಮನ ಹಿರಿಯ ಮಗನೆಂದು ಹೇಳಿದೆ. ದೇವವರ್ಮನು ಯುವರಾಜನಾಗಿದ್ದನೆಂದು ದೇವಗಿರಿ ಶಾಸನದಲ್ಲಿ ಬರೆದಿರುವುದರಿಂದ ಯೌವರಾಜ್ಯ ಪದವಿಯು ಚಿಕ್ಕವನಾದ ದೇವವರ್ಮನಿಗೆ ಹೇಗೆ ಬಂದಿತೆಂಬುದನ್ನು ಹೇಳಲಿಕ್ಕಾಗು ವುದಿಲ್ಲ.

---

[1] *Mys. Arch. Rep.*, 1925, p. 98; *Ep. Carn.*, Vol. V, p. 827; *Ep. Ind.*, Vol. VI, p. 18; ವಿಷ್ಣುವರ್ಮನ ಬೀರೂರು ಕೃತಕಶಾಸನದಲ್ಲಿಯೂ (*Ep. Carn.*, Vol. VI, Kd. 162) ಈ ವಿಶೇಷಣವು ಕೊಡಲ್ಪಟ್ಟಿದೆ.

[2] ಬನ್ನಹಳ್ಳಿ ತಾಮ್ರಶಾಸನ (*Ep. Ind.*, Vol. VI, p. 18).

[3] ಇದರಲ್ಲಿ ಕೃಷ್ಣವರ್ಮ ಮಹಾರಾಜನ ಜ್ಯೇಷ್ಠತನಯನಾದ ವಿಷ್ಣುವರ್ಮ ಧರ್ಮ ಮಹಾರಾಜನು 'ಕರ್ಣಾಟದೇಶ ಭೂವರ್ಗಭರ್ತೃ'ವಾದ 'ಜ್ಯೇಷ್ಠ ಪಿತೃ' ಶಾಂತಿವರವರ್ಮ ಧರ್ಮ ಮಹಾರಾಜನ ಅನುಜ್ಞೆಯಿಂದ ಸಿಂಧುಥಯರಾಷ್ಟ್ರದಲ್ಲಿದ್ದ ಕತಟ್ಟಾಕ ಗ್ರಾಮವನ್ನು ನಂದಪರಾಜ ಮಾರ್ಗದ ಮಗ್ಗುಲಿನಲ್ಲಿ ಹರಿಯುವ ಕರ್ಣೇಸಕ ನದಿಯ ಸೇತುವಿನ ಸಮೀಪದಲ್ಲಿದ್ದ ಭೂಮಿಯನ್ನು ಎಂಭತ್ತೈದು ಜನ ಬ್ರಾಹ್ಮಣರಿಗೆ ದಾನಮಾಡಿದನೆಂದು ಹೇಳಿದೆ. ಈ ಶಾಸನದ ಭಾಷೆ ಅಶುದ್ಧ, ಲಿಪಿ ಆಗಿನ ಕಾಲಕ್ಕೆ ಸರಿಯಿಲ್ಲ. ವಿಷ್ಣುವರ್ಮನು ರಾಜನಾಗಿದ್ದಾಗ ಶಾಂತಿವರ್ಮನು ಬದುಕಿದ್ದನೆಂಬ ಅಭಿಪ್ರಾಯವು ಈ ಶಾಸನದಿಂದ ವ್ಯಕ್ತವಾಗುತ್ತದೆ. ಆದರೆ ಇದು ಅಸಂಭವ. ಇವೆಲ್ಲ ಕಾರಣಗಳಿಂದ ಈ ಶಾಸನವು ಕೃತಕವೆಂದು ಹೇಳಬೇಕಾಗುತ್ತದೆ.

ಕೃಷ್ಣವರ್ಮನ ತರುವಾಯ ವಿಷ್ಣುವರ್ಮನೂ ಅವನಾದ ಮೇಲೆ ಸಿಂಹವರ್ಮನೂ ರಾಜ್ಯವಾಳಿದರು. ಸಿಂಹವರ್ಮನ ಮಗನಾದ ೨ನೆಯ ಕೃಷ್ಣವರ್ಮನು ಬಹು ಪ್ರಖ್ಯಾತನಾದ ರಾಜನು. ಇವನು ಸ್ವಬಾಹುಬಲದಿಂದ ತನ್ನ ರಾಜ್ಯವನ್ನು ವಿಸ್ತರಿಸಿದನು. ಇವನ ಆಳಿಕೆಯ ೫ನೆಯ ವರ್ಷದ ಅಂದರೆ ಕ್ರಿ. ಶ. ೫೫೨ರಲ್ಲಿ ಹುಟ್ಟಿದ ಬನ್ನಹಳ್ಳಿ ತಾಮ್ರಶಾಸನದಲ್ಲಿ[1] ಇವನು ಬಳ್ಳಾವಿ ವಿಷಯದಲ್ಲಿಯ ಕೋಳಾಲನಲ್ಲೂರು ಗ್ರಾಮವನ್ನು ವಿಷ್ಣುಶರ್ಮನೆಂಬ ಬ್ರಾಹ್ಮಣನಿಗೆ ದಾನಮಾಡಿದನೆಂದು ಹೇಳಿದೆ. ಬಳ್ಳಾವಿ ವಿಷಯವು ಸೇಂದ್ರಕ ವಿಷಯದ ಒಂದು ಭಾಗವಾಗಿತ್ತು. ಸೇಂದ್ರಕರು ಹರಿವರ್ಮನ ಮಾಂಡಲಿಕರಾಗಿದ್ದರೆಂದು ಹಿಂದೆಯೇ ಹೇಳಿದ್ದೇವೆ. ಆದುದರಿಂದ ತ್ರಿಪರ್ವತದ ಕದಂಬರು ಕ್ರಿ. ಶ. ೫೫೨ಕ್ಕೆ ಮುಂಚೆಯೇ ಸೇಂದ್ರಕ ವಿಷಯದವರೆಗೂ ತಮ್ಮ ರಾಜ್ಯವನ್ನು ಹಬ್ಬಿಸಿದ್ದರೆಂದು ಹೇಳಬೇಕಾಗುತ್ತದೆ. ಶಾಂತಿವರ್ಮನ ಸಂತತಿಯ ರಾಜರ ವಶದಲ್ಲಿದ್ದ ವೈಜಯಂತಿಯು ಇದರಲ್ಲಿ ಅಂತರ್ಗತವಾಗಿರಬೇಕು. ಕೃಷ್ಣವರ್ಮನ ಆಳಿಕೆಯ ಹತ್ತೊಂಬತ್ತನೆಯ ವರ್ಷದ ಸಿರಸಿ ಶಾಸನದಲ್ಲಿ ವೈಜಯಂತಿಯು ಇವನ ರಾಜಧಾನಿಯಾಗಿತ್ತೆಂದು ಹೇಳಿದೆ.[2] ಬೆಣ್ಣೂರು ತಾಮ್ರಶಾಸನವು[3] ಕೃಷ್ಣವರ್ಮನು "ವೈಜಯಂತೀ ವಿಜಯಯಾತ್ರಾಮಭಿಪ್ರಸ್ಥಿತಃ" (ವೈಜಯಂತೀ ವಿಜಯಯಾತ್ರೆಗಾಗಿ ಹೊರಟನು) ಎಂದು ಹೇಳುವುದರಿಂದ ಅವನು ಹರಿವರ್ಮನನ್ನು ಈ ಪ್ರಸಂಗದಲ್ಲಿ ಸೋಲಿಸಿ ಅವನ ರಾಜ್ಯವನ್ನು ಕೈವಶಪಡಿಸಿಕೊಂಡಿರಬಹುದು. ಆದುದರಿಂದಲೇ ಮೇಲೆ ಹೇಳಿದಂತೆ ಕೃಷ್ಣವರ್ಮನಿಗೆ ವೈಜಯಂತಿಯಲ್ಲಿದ್ದು ಶಾಸನವನ್ನು ಕೊಡಲು ಶಕ್ಯವಾಯಿತು. ಬನ್ನಹಳ್ಳಿ ಶಾಸನದಲ್ಲಿ ಕೃಷ್ಣವರ್ಮನನ್ನು ವರ್ಣಿಸುವ "ಸ್ವವೀರ್ಯ ಬಲಪರಾಕ್ರಮೋಪಾರ್ಜಿತರಾಜ್ಯಶ್ರಿಯಾ" ಎಂಬ ವಿಶೇಷಣದಿಂದ ಅವನು ಸ್ವಬಾಹುಬಲದಿಂದ ಹೊಸದಾಗಿ ರಾಜ್ಯವನ್ನು ಗೆದ್ದನೆಂದು ತಿಳಿಯಬಹುದು. ಹರಿವರ್ಮನು ಕ್ರಿ. ಶ. ೫೪೫ರಲ್ಲಿ ವೈಜಯಂತಿಯಲ್ಲಿದ್ದನೆಂದು ಸಂಗೊಳ್ಳಿ ಶಾಸನದಿಂದ ತಿಳಿಯುವುದರಿಂದ ಈ ವೈಜಯಂತೀ ವಿಜಯವು[4] ಕ್ರಿ. ಶ. ೫೪೫—ಕ್ರಿ. ಶ. ೫೫೨ರ ಮಧ್ಯದಲ್ಲಿ ಸಿದ್ಧಿಸಿರಬೇಕು. ಬೆಣ್ಣೂರು ತಾಮ್ರಶಾಸನದ ಕಾಲಾಂಗಗಳು ಅಪೂರ್ಣವಾಗಿವೆ. ಅವು ಪೂರ್ಣವಾಗಿದ್ದರೆ ಈ ಸಂಗತಿ ಸಂಭವಿಸಿದ ಕಾಲವನ್ನು ನಿಃಸಂದೇಹ

---

[1] *Ep. Ind.*, Vol. VI, p. 18.

[2] *Ep. Ind.*, Vol. XVI, pp. 264 ff.

[3] *Ep. Carn.*, Vol. V, p. 827.

[4] ಈ ವಿಜಯಯಾತ್ರೆಯಲ್ಲಿ ಕೃಷ್ಣವರ್ಮನ ಹಗೆಯು ಹರಿವರ್ಮನಾಗಿ ಇರಬೇಕೆಂಬುದರಲ್ಲಿ ಸಂದೇಹವಿಲ್ಲ. 'ಕದಂಬಕುಲ'ದಲ್ಲಿ ಈ ದಂಡಯಾತ್ರೆಯು ಸೇಂದ್ರಕರ ಮೇಲೆ ಇದ್ದಿರಬೇಕೆಂದು ಬರೆದಿದೆ. ಆದರೆ ವೈಜಯಂತಿಯು ಸೇಂದ್ರಕರ ವಶದಲ್ಲಿದ್ದಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ವಾಗಿ ನಿಶ್ಚಯಿಸಬಹುದಾಗಿತ್ತು. ವೈಜಯಂತೀಪುರವು ಅನೆಯ ಕೃಷ್ಣವರ್ಮನ ಕೈಸೇರಿದ ಮೇಲೆ ಹರಿವರ್ಮನ ಪಾಡೇನಾಯಿತೆಂಬುದು ಗೊತ್ತಿಲ್ಲ.

ಕೃಷ್ಣವರ್ಮನ ಶಾಸನಗಳು:

೧. ಬನ್ನಹಳ್ಳಿ ತಾಮ್ರಶಾಸನವು[1].—ರಾಜನು ತನ್ನ ಏಳನೆಯ ವರ್ಷದ ಕಾರ್ತಿಕ ಶುಕ್ಲಪಂಚಮಿ ಜ್ಯೇಷ್ಠಾ ನಕ್ಷತ್ರದಂದು ತುರಿಯಲ್ಲ ಗೋತ್ರ ಪ್ರವರಗಳುಳ್ಳ ಹರಿದತ್ತ ಶ್ರೇಷ್ಠಿಯ ಉಪದೇಶದ ಮೇರೆಗೆ ಕೌಶಿಕ ಗೋತ್ರದ ವಿಷ್ಣುಶರ್ಮನೆಂಬ ಬ್ರಾಹ್ಮಣನಿಗೆ ವಳ್ಳಾವಿ ವಿಷಯದಲ್ಲಿದ್ದ ಕೋಳಾಲನಲ್ಲೂರು ಗ್ರಾಮವನ್ನು ದಾನಮಾಡಿದನು.

೨. ಸಿರಸಿ ತಾಮ್ರಶಾಸನವು.—ರಾಜನು ತನ್ನ ಹತ್ತೊಂಬತ್ತನೆಯ ವರ್ಷದ ಕಾರ್ತಿಕ ಶುದ್ಧ ಪೌರ್ಣಮಿಯ ದಿನದಲ್ಲಿ ವೈಜಯಂತಿಯಲ್ಲಿದ್ದಾಗ ಸೋಮಯಾಜಿಯೂ ಋಗ್ವೇದ ಪಾರಗನೂ ಆದ ವಾರಾಹೀ ಗೋತ್ರದ ಸೋಮಸ್ವಾಮಿಯೆಂಬ ಬ್ರಾಹ್ಮಣನಿಗೆ ಕರವನ್ನಾಡ್ಗ ವಿಷಯದಲ್ಲಿಯ ಗಿರಿಗಡ ಗ್ರಾಮದಲ್ಲಿ ಕಮುಕಪಲ್ಲಿಯನ್ನು ಸರ್ವಪರಿಹಾರವಾಗಿ ಕೊಟ್ಟನು.

೩. ಬೆಣ್ಣೂರು ತಾಮ್ರಶಾಸನವು.—ಈ ಶಾಸನದ ಕಾಲವು ಪೌಷಶುಕ್ಲ ಪ್ರತಿಪದೆಯೆಂದು ಮಾತ್ರ ಕೊಟ್ಟಿದೆ. ಕೃಷ್ಣವರ್ಮನಿಗೆ ದೋಷರಾಶಿವರ್ಮನೆಂದೂ ಇವನ ಅಜ್ಜನಾದ ವಿಷ್ಣುವರ್ಮನಿಗೆ ವಿಷ್ಣುದಾಸನೆಂದೂ ಹೆಸರುಗಳು ಕೊಡಲ್ಪಟ್ಟಿವೆ. ರಾಜನು ಸೇಂದ್ರಕ ವಿಷಯದಲ್ಲಿ ಪಲ್ಮಡಿ ಗ್ರಾಮದಲ್ಲಿಯ ರಾಜಭಾಗದ ದಶಬಂಧವನ್ನೂ ಹತ್ತು ನಿವರ್ತನಗಳ ಭೂಮಿಯನ್ನೂ ಭವಸ್ವಾಮಿಯೆಂಬ ಬ್ರಾಹ್ಮಣನಿಗೆ ದಾನಮಾಡಿದನೆಂದು ಬರೆದಿದೆ. ಇದರಲ್ಲಿ ಕೃಷ್ಣವರ್ಮನು ವೈಜಯಂತೀ ವಿಜಯಯಾತ್ರೆಗೆ ಹೊರಟನೆಂದು ಬರೆದಿರುವುದರಿಂದಲೂ[2] ದತ್ತಿಯು ಸೇಂದ್ರಕ ವಿಷಯದಲ್ಲಿದ್ದುದರಿಂದಲೂ ವೈಜಯಂತಿಯನ್ನು ಸ್ವಾಧೀನಪಡಿಸಿಕೊಂಡ ಮೇಲೆ ಈ ಶಾಸನವು ಕೊರೆಯಲ್ಪಟ್ಟಿತೆಂದು ಹೇಳಬಹುದು. ಹಾಗಿದ್ದ ಪಕ್ಷದಲ್ಲಿ ಇದರ ಕಾಲವು ರಾಜನ ಏಳನೆಯ ವರ್ಷಕ್ಕಿಂತ ಹಿಂದೆ ಇದ್ದಿರಬೇಕು.[3]

ಕೃಷ್ಣವರ್ಮನ ತರುವಾಯ ಅವನ ಮಗನಾದ ಅಜವರ್ಮನೂ ಅವನಾದ ಮೇಲೆ ಅವನ ಮಗ ಭೋಗಿವರ್ಮನೂ ರಾಜ್ಯವಾಳಿದರು. ಭೋಗಿವರ್ಮ ಮಹಾ

---

[1] *Ep. Ind.*, Vol. VI, p. 18.

[2] "ಕದಂಬಾನಾಂ ಪಂಚಮೋ ಲೋಕಪಾಲಃ ಶ್ರೀಮದ್ಧರ್ಮ್ಮ ಮಹಾರಾಜಃ ವಿಜಯಶಿವ ಕೃಷ್ಣವರ್ಮ್ಮ ವೈಜಯಂತೀ ವಿಜಯಯಾತ್ರಾಮಭಿಪ್ರಸ್ಥಿತಃ" ಎಂದು ಬರೆದಿದೆ.

[3] ಬನ್ನಹಳ್ಳಿ ಶಾಸನದ ಕಾಲಕ್ಕೆ ಮುಂಚೆಯೇ ವೈಜಯಂತಿಯು ಕೃಷ್ಣವರ್ಮನ ವಶಕ್ಕೆ ಬಂದಿರಬೇಕೆಂದು ಮೇಲೆ ಹೇಳಿದ್ದೇವೆ.

ರಾಜನು ತನ್ನ ಮಗ ವಿಷ್ಣುವರ್ಮನ ವಿಜ್ಞಾಪನೆಯ ಮೇರೆಗೆ ತಗರೇ ವಿಷಯದಲ್ಲಿದ್ದ ತಗರೇ ಮಹಾಗ್ರಾಮಾಂತರ್ಗತವಾದ ಇಪ್ಪತ್ತನಾಲ್ಕು ಹಳ್ಳಿಗಳಲ್ಲಿ ಕಿಱುಕೂಡ ಲೂರನ್ನು ಕಶ್ಯಪ ಗೋತ್ರದ ಭೂತಶರ್ಮನಿಗೆ ದಾನಮಾಡಿದನೆಂದು ತಗರೇ ತಾಮ್ರ ಶಾಸನದಲ್ಲಿ ಹೇಳಿದೆ.[1]

ಶಿವಮೊಗ್ಗೆ ತಾಮ್ರಶಾಸನದಲ್ಲಿ[2] ಕುಮಾರವರ್ಮ ಮಹಾರಾಜನ ಮಗನಾದ ಮಾಂಧಾತರಾಜನು ಉಚ್ಛೃಂಗಿಯಲ್ಲಿ ರಾಜ್ಯವಾಳುತ್ತಿದ್ದಾಗ ತನ್ನ ಆಳಿಕೆಯ ಐದನೆಯ ವರ್ಷದಲ್ಲಿ ಕಾರ್ತಿಕಮಾಸ ಶುಕ್ಲಪಕ್ಷ ದ್ವಾದಶಿಯಂದು ಆತ್ರೇಯ ಗೋತ್ರದ ತ್ರಯಂಬಕಸ್ವಾಮಿಯೆಂಬ ಬ್ರಾಹ್ಮಣನಿಗೆ ಪಾಲ್ಗಟಿನಿ ಕಗ್ಗಿ ಗ್ರಾಮಗಳಲ್ಲಿ ಭೂಮಿಯನ್ನು ಕೊಟ್ಟಂತೆ ಹೇಳಿದೆ. ಕದಂಬವಂಶಾವಳಿಯಲ್ಲಿ ಇವರ ಸ್ಥಾನವನ್ನು ನಿರ್ಧಾರಮಾಡುವುದಕ್ಕೆ ಸಾಕಾದಷ್ಟು ಆಧಾರಗಳಿಲ್ಲ.[3] ಉಚ್ಚಶೃಂಗಿಯು ಹರಿವರ್ಮನ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಹಲಸಿಶಾಸನದಿಂದ ತಿಳಿದಿದ್ದೇವೆ.

ಗೇರಸೊಪ್ಪೆಯ ಜಲಪಾತದ ಹತ್ತಿರದಲ್ಲಿ ಬಂಡೆಗಲ್ಲಿನ ಮೇಲೆ ಕೊರೆದಿರುವ ಒಂದು ಲಿಪಿಯಲ್ಲಿ[4] ಕದಂಬಕುಲದ ದಾಮೋದರನೃಪನ ನಿರ್ದೇಶವಿದೆ. ಅವನು ಪಿತೃಭಕ್ತನೂ ಸತ್ಯೋತ್ಸಾಹಸಂಪನ್ನನೂ ಪ್ರತಾಪಶಾಲಿಯೂ ಆಗಿದ್ದನೆಂದು ಬರೆದಿದೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಇವನು ಕದಂಬರ ಕಡೆಯ ಕಾಲದವನಾಗಿದ್ದನೆಂದು ಹೇಳಬಹುದು.

ಚಾಳುಕ್ಯರ ೧ನೆಯ ಪುಲಕೇಶಿಯು ವಾತಾಪಿಯಲ್ಲಿ ನೆಲಸಿದ್ದನೆಂದು ಐಹೊಳೆಯ ಶಿಲಾಲಿಪಿಯಲ್ಲಿ ಹೇಳಿರುವುದರಿಂದ ಇವನು ಕದಂಬರ ಮಾಂಡಲಿಕನಾಗಿದ್ದು ಅವರು ನಿರ್ಬಲರಾದ ಸಮಯದಲ್ಲಿ ತನ್ನದೊಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿಕೊಂಡಿರಬೇಕು.[5] ಇವನ ಮಗನಾದ ಕೀರ್ತಿವರ್ಮನು ಕದಂಬ ಕದಂಬಕವನ್ನು ಚೆದರಿಸಿದನೆಂದು ಹೇಳಿರುವುದರಿಂದ ಅವನು ಅವರ ರಾಜ್ಯದ ಕೆಲಭಾಗವನ್ನಾಕ್ರಮಿಸಿರಬೇಕು. ಉಳಿದ

---

[1] *Mys. Arch. Rep.*, 1918, p. 35.

[2] *Ibid.*, 1911, p. 31. ಈ ಶಾಸನದ ಮುದ್ರೆಯ ಮೇಲೆ ಸಿಂಹಲಾಂಛನವಿದೆ.

[3] ಮಾಂಧಾತರಾಜನಿಗೆ 'ಧರ್ಮಮಹಾರಾಜ' ಮೊದಲಾದ ಬಿರುದುಗಳಿಲ್ಲವಾದುದರಿಂದ ಕದಂಬರ ಅವನತಿಯ ಕಾಲದಲ್ಲಿ ೨ನೆಯ ಕೃಷ್ಣವರ್ಮನು ಹರಿವರ್ಮನನ್ನು ಸೋಲಿಸಿ ವೈಜಯಂತಿಯನ್ನಾಕ್ರಮಿಸಿಕೊಂಡನಂತರ ಹರಿವರ್ಮನ ಪಕ್ಷಕ್ಕೆ ಸೇರಿದ ಮಾಂಧಾತನು ಉಚ್ಛೃಂಗಿಯ ರಾಜಧಾನಿಯಿಂದ ಚಿಕ್ಕ ಪ್ರಾಂತ್ಯವನ್ನಾಳುತ್ತಿದ್ದಂತೆ ತೋರುತದೆ.

[4] ಕೊಣ್ಣೂರ ಬಂಡೆಗಲ್ಲುಶಾಸನ (*Ind. Ant.*, Vol. XXI, p. 93).

[5] ಫ್ಲೀಟರು ಜಯಸಿಂಹ ರಣರಾಗರೂ ಕದಂಬರ ಮಾಂಡಲಿಕರಾಗಿದ್ದಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ (*Dyn. Kan. Dist.*, p. 343).

ಭಾಗಗಳಲ್ಲಿ ಅಂದರೆ ಕೇವಲ ದಕ್ಷಿಣಕ್ಕಿದ್ದ ತಗರೇ ಪ್ರಾಂತದಲ್ಲಿ ಕದಂಬ ಅಜವರ್ಮ ಭೋಗಿವರ್ಮರು ಆಳುತ್ತಿದ್ದರೆಂದು ಭೋಗಿವರ್ಮನ ತಗರೇ ಶಾಸನ[1]ದಿಂದ ಊಹಿಸಬಹುದು. ೭ನೆಯ ಶತಮಾನದ ಆದಿಭಾಗದಲ್ಲಿ ಮಂಗಲೇಶನ ಮರಣಾನಂತರದಲ್ಲಿ ಉಂಟಾಗಿದ್ದ ಅರಾಜಕತೆಯ ಸಮಯವನ್ನು ಸಾಧಿಸಿ ಕದಂಬ ಮಾಂಡಲಿಕರು ವೈಜಯಂತಿಯಲ್ಲಿ ಸ್ವಾತಂತ್ರ್ಯ ಪತಾಕೆಯನ್ನು ನಟ್ಟಂತೆ ತೋರುತ್ತದೆ. ಆದರೆ ಪ್ರಬಲನಾದ ೨ನೆಯ ಪುಲಕೇಶಿಯು ಪರಮಾಸದಿಯ ದಡದಲ್ಲಿದ್ದ ವನವಾಸಿಯನ್ನೂ ಅನೇಕ ದುರ್ಗಗಳನ್ನೂ ಸ್ವಾಧೀನಪಡಿಸಿಕೊಂಡು ಉದ್ಧಟರಾಗಿದ್ದ ಕದಂಬರಾಜರ ಹೆಮ್ಮೆಯನ್ನು ಮುರಿದನು. ಇಲ್ಲಿಂದಾಚೆಗೆ ಕದಂಬರು ಸಾಮಂತರಾಗಿಯೇ ಉಳಿದರು.

ಕದಂಬರ ರಾಜ್ಯವಿಸ್ತಾರ

ಮಯೂರಶರ್ಮನು ಪಶ್ಚಿಮದಲ್ಲಿ ಸಮುದ್ರ ಪೂರ್ವ ದಿಕ್ಕಿನಲ್ಲಿ ಪ್ರೇಹರ (?) ಇವುಗಳ ಮಧ್ಯದಲ್ಲಿದ್ದ ರಾಜ್ಯವನ್ನು ಪಲ್ಲವರಿಂದ ತೆಗೆದುಕೊಂಡನೆಂದು ಮೇಲೆ ಹೇಳಿದ್ದೇವೆ. ಪ್ರೇಹರವು ಯಾವುದೆಂಬುದು ಗೊತ್ತಾಗಿಲ್ಲ. ತಾಳಗುಂದವು ಕದಂಬರ ಮೂಲಸ್ಥಾನವಾದುದರಿಂದಲೂ ಮಳವಳ್ಳಿಯಲ್ಲಿ ಅವರದೊಂದು ಪ್ರಾಕೃತ ಶಾಸನವು ಸಿಕ್ಕಿರುವುದರಿಂದಲೂ ಹಲಸಿ ವೈಜಯಂತಿಗಳು ಮೊದಲಿನಿಂದಲೂ ಅವರ ರಾಜಧಾನಿಗಳಾಗಿದ್ದುದರಿಂದಲೂ ಶಿವಮೊಗ್ಗೆ, ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಜಿಲ್ಲೆಗಳು ಕದಂಬರ ಆಧಿಪತ್ಯಕ್ಕೆ ಒಳಪಟ್ಟಿದ್ದವೆಂದು ಸಾಮಾನ್ಯವಾಗಿ ಹೇಳಬಹುದು. ಮಯೂರಶರ್ಮನು ಶ್ರೀಪರ್ವತದ ವರೆಗಿನ ರಾಜ್ಯವನ್ನು ಆಕ್ರಮಿಸಿದ್ದನೆಂದು ತಾಳಗುಂದಶಾಸನದಲ್ಲಿ ಹೇಳಿರುವುದರಿಂದ ಪಲ್ಲವರು ಅವನಿಗೆ ಕೊಟ್ಟಿದ್ದ ರಾಜ್ಯವು ಪ್ರಾಯಶಃ ಶ್ರೀಪರ್ವತವನ್ನು ಒಳಗೊಂಡಿರಬೇಕು. ಉಚ್ಚಂಗಿದುರ್ಗವು[2] ಹರಿವರ್ಮ ಮಾಂಧಾತರ ರಾಜಧಾನಿಯಾಗಿದ್ದುದರಿಂದ ಅದು ಅವರ ರಾಜ್ಯದ ಈಶಾನ್ಯ ದಿಕ್ಕಿನಲ್ಲಿದ್ದ ಪ್ರಾಂತದ ಮಧ್ಯವರ್ತಿಯಾಗಿರಬೇಕು. ಬಾದಾಮಿಯು ಕದಂಬರ ರಾಜ್ಯದಲ್ಲಿತ್ತೆಂದೂ ಅಲ್ಲಿ ಪುಲಿಕೇಶಿಯು ಮಾಂಡಲಿಕನಾಗಿ ಆಳುತ್ತಿದ್ದನೆಂದೂ ಹಿಂದೆ ಹೇಳಿದ್ದೇವೆ. ಇದರಿಂದ ಬಿಜಾಪುರ ಜಿಲ್ಲೆಯ ಕೆಲಭಾಗವು ಕದಂಬರ ಆಳಿಕೆಗೊಳಪಟ್ಟಿರಬೇಕು. ವಿಷ್ಣುವರ್ಮನ ಕೃತಕ ಬೀರೂರು ತಾಮ್ರಶಾಸನದಿಂದ ಸಿಂಧುಥಯ ರಾಷ್ಟ್ರದಲ್ಲಿ ಕರ್ಣ್ಣೇಸಕ ನದಿಯು ಇತ್ತೆಂದು ತಿಳಿಯುತ್ತದೆ. ಸಿಂಧುಥಯರಾಷ್ಟ್ರವು

[1] *Mys. Arch. Rep.*, 1918, p. 35.

[2] ಮೊಳಕಾಲ್ಮೂರುವಿನಿಂದ ಪೂರ್ವಕ್ಕೆ ಮೂರು ಮೈಲುಗಳಲ್ಲಿರುವ ಉಚ್ಚಂಗಿದುರ್ಗವೇ ಇದೆಂದು ರೈಸರು ಹೇಳಿದ್ದಾರೆ (*Mysore and Coorg from Inscriptions*, p. 26).

ಬಿಜಾಪುರ ಜಿಲ್ಲೆಯಲ್ಲಿತ್ತೆಂದೂ ಕರ್ಣ್ಣೇಸಕ ನದಿಯು ಕೃಷ್ಣಾನದಿಯಿರಬೇಕೆಂದೂ ರೈಸರು ಹೇಳಿದ್ದಾರೆ.[1] ಜೀರೂರು ಶಾಸನವನ್ನು ನಂಬುವುದಾದರೆ, ಉತ್ತರದಲ್ಲಿ ಸಿಂಧುಥಯರಾಷ್ಟ್ರವನ್ನು (ಇದು ಪ್ರಾಯಶಃ ಸಿಂದಗಿ ತಾಲ್ಲೂಕಿನ ಭಾಗವನ್ನೊಳಗೊಂಡಿರಬಹುದು) ಅದರಲ್ಲಿ ಸೇರಿಸಬೇಕಾಗುತ್ತದೆ.

ವಿಜಯ ಶಿವಮಾಂಧಾತೃವರ್ಮನು ತುಮಕೂರು ಜಿಲ್ಲೆಯಲ್ಲಿಯ ಕೋಳಾಲ ಗ್ರಾಮವನ್ನು ದಾನಮಾಡಿದ್ದಾನೆ. ಇದೇ ಕಾಲದಲ್ಲಿ ಗಂಗ ಅವಿನೀತನ ಪಟ್ಟ ಮಹಿಷಿಯು ಮರುಕರ ವಿಷಯದಲ್ಲಿ ಕೊಳ್ಪಳ್ಳಿ ಗ್ರಾಮವನ್ನು ದಾನಮಾಡಿದಳೆಂದು ಅವನ ಶೃಂಗೇರಿ ತಾಮ್ರಶಾಸನದಿಂದ ಗೊತ್ತಾಗುತ್ತದೆ.[2] ಈ ಮರುಕರ ವಿಷಯವು (ಮರುಗರ ನಾಡು) ತುಮಕೂರು ತಾಲೂಕಿನ ಭಾಗಗಳನ್ನೊಳಗೊಂಡಿತ್ತೆಂದು ಹಿರೇಗುಂಡಿಗಲ್ಲಿನ ವೀರಗಲ್ಲುಗಳ ಆಧಾರದಿಂದ ಹೇಳಬಹುದು. ಆದುದರಿಂದ ತುಮಕೂರು ಜಿಲ್ಲೆಯ ಪಶ್ಚಿಮ ಭಾಗವು ಕದಂಬರ ಸ್ವಾಧೀನದಲ್ಲಿತ್ತೆಂದು ತಿಳಿಯಬಹುದು. ೨ನೆಯ ಕೃಷ್ಣವರ್ಮನ ಮೊಮ್ಮಗನಾದ ಭೋಗಿವರ್ಮನು ತಗರೇ ಮಹಾಗ್ರಾಮದಲ್ಲಿಯ ಕೂಡಲೂರನ್ನು ದಾನಮಾಡಿದನೆಂದು ಹೇಳಿದ್ದೇವೆ. ತಗರೆಯು ಹಾಸನ ಜಿಲ್ಲೆಯ ಬೇಲೂರು ತಾಲೂಕಿಗೆ ಸೇರಿದೆ. ಆದಕಾರಣ ಹಾಸನದ ಉತ್ತರ ಭಾಗವು ಕದಂಬ ರಾಜ್ಯದ ದಕ್ಷಿಣ ಮೇರೆಯಾಗಿರಬೇಕು. ಹೀಗೆ ಉತ್ತರದಲ್ಲಿ ಬಿಜಾಪುರಜಿಲ್ಲೆ, ಪೂರ್ವದಲ್ಲಿ ಶ್ರೀಶೈಲ, ದಕ್ಷಿಣದಲ್ಲಿ ಹಾಸನ, ಪಶ್ಚಿಮಕ್ಕೆ ಶಿವಮೊಗ್ಗೆ ಜಿಲ್ಲೆ ಮತ್ತು ಸಮುದ್ರ—ಇವುಗಳು ಮೇರೆಯಾಗಿದ್ದ ಪ್ರದೇಶವನ್ನು ಕ್ರಿ. ಶ. ೪-೬ನೆಯ ಶತಮಾನಗಳಲ್ಲಿ ಕದಂಬರು ಆಳುತ್ತಿದ್ದರು. ಈ ರಾಜ್ಯವನ್ನು ಆಡಳತೆಯ ಸೌಕರ್ಯಕ್ಕಾಗಿ ಅನೇಕ ಪ್ರಾಂತಗಳಾಗಿ ವಿಂಗಡಿಸಿದ್ದರು. ಅವುಗಳನ್ನು 'ವಿಷಯ' ಎಂದು ಕರೆಯುತ್ತಿದ್ದರು. ಸುದ್ದಿಕುಂದೂರು ವಿಷಯ, ಸೇಂದ್ರಕ ವಿಷಯ, ವಳ್ಳಾವಿ ವಿಷಯ, ಕರವನ್ನಾಡಗ್ಗ ವಿಷಯ, ತಗರೇ ವಿಷಯ, ಮೊಗಲೂರು ವಿಷಯಗಳೆಂಬ ಆರು ಭಾಗಗಳು ಅವರ ಲಿಪಿಗಳಲ್ಲಿ ಉಕ್ತವಾಗಿವೆ. ಪಲಾಸಿಕೆಯಲ್ಲಿಯ ಅರ್ಹದಾಲಯಕ್ಕೆ ಸುದ್ದಿಕುಂದೂರು ವಿಷಯದೊಳಗಿನ ವಸುಂತವಾಟಕ ಗ್ರಾಮವನ್ನು ಹರಿವರ್ಮನು ಕೊಟ್ಟನು. ಆದುದರಿಂದ ಪಲಾಸಿಕೆಯು ಸುದ್ದಿಕುಂದೂರು ವಿಷಯದಲ್ಲಿದ್ದಿರಬಹುದು. ಕರವನ್ನಾಡಗ್ಗ ವಿಷಯದಲ್ಲಿದ್ದ ಗಿರಿಗಡ ಗ್ರಾಮದಲ್ಲಿ ಕಮಕಪಲ್ಲಿಯು ಸೇರಿತ್ತೆಂದು ಮೇಲೆ ಹೇಳಿದ್ದೇವೆ. ಈ ವಿಷಯವು ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಸಿರಸಿ ತಾಲೂಕಿನ ಒಂದು ಭಾಗ

---

[1] *Ep. Carn.*, Vol. VI, Introduction. ಈ ಶಾಸನವು ಕೃತಕವಾಗಿದ್ದರೂ ಭೂವಿವರಣೆ ಮೊದಲಾದ ಭಾಗಗಳನ್ನು ನಂಬಬಹುದು.

[2] *Mys. Arch. Rep.*, 1916, p. 35.

ವಾಗಿರಬೇಕು. ಈ ತಾಲೂಕಿನಲ್ಲಿ ಕರವನ್ನಾಡ್ಗವು ಕರೂರು ಎಂಬ ಹೆಸರಿನಿಂದಲೂ ಗಿರಿಗಡವು ಗಿರಿಗಡ್ಡೆ ಎಂಬ ಹೆಸರಿನಿಂದಲೂ ಈಗಲೂ ಇರುತ್ತವೆ. ಸೇಂದ್ರಕವಿಷಯವು ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಗಳ ಭಾಗಗಳನ್ನೊಳಗೊಂಡಿತ್ತು. ವಳ್ಳಾವಿ ವಿಷಯದಲ್ಲಿ ಕೋಳನಲ್ಲೂರು ಗ್ರಾಮವಿತ್ತೆಂದು ತಿಳಿದುಬಂದಿದೆ. ಈ ಗ್ರಾಮವು ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯ ಹತ್ತಿರದಲ್ಲಿರುವ ನಲ್ಲೂರೆಂದು ರೈಸರು ಹೇಳಿದ್ದಾರೆ.[1] ಆದುದರಿಂದ ಚನ್ನಗಿರಿಯ ಸುತ್ತಣ ಪ್ರದೇಶವು ವಳ್ಳಾವಿ ವಿಷಯಕ್ಕೆ ಸೇರಿರಬೇಕು. ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ತಗರೇಗ್ರಾಮದಲ್ಲಿ ದೊರೆತ ಶಾಸನದಿಂದ ಇಪ್ಪತ್ತನಾಲ್ಕು ಗ್ರಾಮಗಳನ್ನೊಳಕೊಂಡಿದ್ದ ತಗರೇ ಮಹಾಗ್ರಾಮವು ತಗರೇ ವಿಷಯದಲ್ಲಿತ್ತೆಂದು ತಿಳಿಯುತ್ತದೆ. ಆದುದರಿಂದ ತಗರೇ ವಿಷಯವು ಬೇಲೂರು ತಾಲೂಕಿನಲ್ಲಿದ್ದಿರಬೇಕು. ಮುಟ್ಟಗಿ ಗ್ರಾಮವು ಮೊಗಲೂರು ವಿಷಯದಲ್ಲಿತ್ತೆಂದು ರವಿವರ್ಮನ ನಿಲಂಬೂರು ಶಾಸನದಿಂದ ಗೊತ್ತಾಗುತ್ತದೆ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿ ಮುತ್ತಗಿ ಎಂಬ ಹಳ್ಳಿ ಇದೆ. ಇದೇ ಮುಟ್ಟಗಿಯಾಗಿದ್ದಿರಬಹುದು. ಗೋಪೀನಾಥರಾಯರು ಇದು ತಲಕಾಡಿನ ದಕ್ಷಿಣಕ್ಕೆ ಐದು ಮೈಲುಗಳ ದೂರದಲ್ಲಿರುವ ಬದನಗುಪ್ಪೆಯ ಪಕ್ಕದ ಮುತ್ತಗಿಯಾಗಿರಬೇಕೆಂದು ಹೇಳಿದ್ದಾರೆ.[2] ಆದರೆ ಈ ಪ್ರದೇಶವು ಗಂಗರಾಜ್ಯದಲ್ಲಿ ಸೇರಿತ್ತು.

ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು

ಕ್ರಿಸ್ತಶಕದ ೪ನೆಯ ಶತಮಾನಕ್ಕೆ ಪೂರ್ವದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ವೈದಿಕ ಬೌದ್ಧಧರ್ಮಗಳೆರಡೂ ಪ್ರಚಾರದಲ್ಲಿದ್ದುವೆಂದು ಹೇಳಿದ್ದೇವೆ. ಕದಂಬರ ಕಾಲದಲ್ಲಿ ಬೌದ್ಧಧರ್ಮದ ಪ್ರಸಾರವು ವಿಶೇಷವಾಗಿದ್ದಂತೆ ತೋರುವುದಿಲ್ಲ. ಆಗಿನ ರಾಜರು ಕೊಟ್ಟ ಶಾಸನಗಳಲ್ಲಿ ಬೌದ್ಧ ದತ್ತಿಗಳು ಹೆಚ್ಚಾಗಿ ಗೋಚರವಾಗುವುದಿಲ್ಲ. ಆದರೆ ಈ ಅವಧಿಯಲ್ಲಿ ಜೈನಧರ್ಮಕ್ಕೆ ರಾಜಾಶ್ರಯವಿದ್ದಿತು. ಕದಂಬ ರಾಜರು ಜೈನ ಸಂಘಗಳಿಗೆ ಕೊಟ್ಟ ದಾನಗಳಿಂದಲೂ ಗಂಗರು ಜೈನರಾಗಿದ್ದು ತಮ್ಮ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹದಿಂದಲೂ ಈ ವಿಷಯವು ಸ್ಪಷ್ಟವಾಗುತ್ತದೆ. ಕದಂಬರ ಬ್ರಾಹ್ಮಣ ದತ್ತಿಗಳಿಂದಲೂ ಗಂಗರು ಮಾಡಿದ ಬ್ರಹ್ಮದೇಯ ದಾನಗಳಿಂದಲೂ ವೈದಿಕ ಧರ್ಮಕ್ಕೂ ಉತ್ತೇಜನವಿತ್ತೆಂದು ವ್ಯಕ್ತವಾಗುತ್ತದೆ. ೧ನೆಯ ಕೃಷ್ಣವರ್ಮನು ಅಶ್ವಮೇಧಯಾಗವನ್ನು ಮಾಡಿದುದು ಇದಕ್ಕೆ ಸಾಕ್ಷಿ. ಈ ಕಾಲದಲ್ಲಿ ಜೈನರಲ್ಲಿ ಯಾಪನೀಯ, ನಿರ್ಗ್ರಂಥ, ಕೂರ್ಚಕ, ಶ್ವೇತಪಟ, ಅಹರಿಷ್ಟಿ ಸಂಘಗಳೆಂಬ ಪಂಗಡ

[1] *Ep. Carn.*, Vol. V, Introduction p. III.
[2] *Ep. Ind.*, Vol. VIII, p. 147.

ಗಳಿದ್ದುವು. ಹಲಸಿಗೆಯೇ ಇವರ ಕೇಂದ್ರವಾಗಿತ್ತು. ಕಾಕುಸ್ಥವರ್ಮನಿಂದ ಖೇಟ ಗ್ರಾಮವನ್ನು ಪಡೆದ ಶ್ರುತಕೀರ್ತಿ ಸೇನಾಪತಿ, ದಾಮಕೀರ್ತಿ ಭೋಜಕ, ಅವನ ಮಗನಾದ ಜಯಕೀರ್ತಿ ಪ್ರತೀಹಾರ, ಶ್ರೀಕೀರ್ತಿ ಮೊದಲಾದ ಜೈನ ಅಧಿಕಾರಿಗಳು ಮೃಗೇಶವರ್ಮ ರವಿವರ್ಮರ ಲಿಪಿಗಳಲ್ಲಿ ಉಕ್ತರಾಗಿದ್ದಾರೆ. ಒಂದು ಅಥವಾ ಹೆಚ್ಚು ಗ್ರಾಮಗಳ ಮೇಲೆ ನಿರಾಬಾಧ ಸ್ವಾಮ್ಯವುಳ್ಳವರೇ ಭೋಜಕರು.[1] ಮೇಲೆ ಹೇಳಿದ ದಾಮಕೀರ್ತಿ ಮೊದಲಾದ ಭೋಜಕರ ವಂಶಸ್ಥಾಪಕರು 'ನಿಮಿತ್ತಜ್ಞಾನ ಪಾರಗ'ರಾದ ಬಂಧುಷೇಣಾಚಾರ್ಯರು.[2] ಜಯಕೀರ್ತಿ ಪ್ರತೀಹಾರನು ಹಲಸಿಯ ಜಿನೇಂದ್ರನ ಉತ್ಸವಕ್ಕಾಗಿ ಕೊಟ್ಟ ಪುರುಖೇಟಕಗ್ರಾಮದ ಧನಾದಾಯದಲ್ಲಿ ಪ್ರತಿ ವರ್ಷ ಕಾರ್ತೀಕ ಮಾಸದಲ್ಲಿ ಹುಣ್ಣಿಮೆಯ ವರೆಗೆ ಎಂಟು ದಿನಗಳ ಉತ್ಸವವನ್ನು ನಡೆಯಿಸಬೇಕೆಂದೂ ಮಳೆಗಾಲದಲ್ಲಿ ನಾಲ್ಕು ತಿಂಗಳು ಕಾಲ ಯಾಪನೀಯ ಸಂಘದ ತಪೋಧನರು ಉಪಭೋಗಮಾಡಬೇಕೆಂದೂ ರವಿವರ್ಮನು ವ್ಯವಸ್ಥೆಮಾಡಿದನು. ಕುಮಾರದತ್ತ ಪ್ರಮುಖರಾದ ವಿದ್ವಾಂಸರ ಗಣವು ಈ ವ್ಯವಸ್ಥೆಯನ್ನು ಪಾಲಿಸ ತಕ್ಕುದೆಂದು ಆಜ್ಞೆಮಾಡಿದನು. ಹಲಸಿಗೆಯಲ್ಲಿಯ ಅರ್ಹದಾಲಯದಲ್ಲಿ ಪ್ರತಿ ವರ್ಷ ಎಂಟು ದಿವಸಗಳ ವರೆಗೆ **ಮಹಾಮಹೋತ್ಸವವನ್ನು** ನಡೆಯಿಸುವುದಕ್ಕೂ ಸಂಘದ ಆಹಾರ ದಾನಕ್ಕೂ ಉಪಯೋಗಿಸಬೇಕೆಂದು ವಸುಂತವಾಟಕ ಗ್ರಾಮವನ್ನು ಹರಿ ವರ್ಮನು ವಾರಿಷೇಣಾಚಾರ್ಯರಿಂದ ಸ್ಥಾಪಿತವಾದ ಕೂರ್ಚಕ ಸಂಘಕ್ಕೆ ಪ್ರಮುಖ ರಾದ ಚಂದ್ರಕ್ಷಾಂತಾಚಾರ್ಯರಿಗೆ ಕೊಟ್ಟನು. ಇದೇ ರಾಜನು ಅಹರಿಷ್ಟಿ ಶ್ರಮಣ ಸಂಘದ ಚೈತ್ಯಾಲಯದಲ್ಲಿ ಪೂಜಾ ಸಂಸ್ಕಾರಾದಿಗಳಿಗಾಗಿಯೂ ಸಾಧುಜನೋಪ ಯೋಗಕ್ಕಾಗಿಯೂ ಮರದೇ ಗ್ರಾಮವನ್ನು ಧರ್ಮನಂದ್ಯಾಚಾರ್ಯರ ವಶಕ್ಕೆ ಒಪ್ಪಿಸಿದನು. ದೇವವರ್ಮನು ತ್ರಿಪರ್ವತದಲ್ಲಿದ್ದಾಗ ಅರ್ಹದಾಲಯದ ಭಗ್ನಸಂಸ್ಕಾರ ಕ್ಕಾಗಿ ಸಿದ್ಧಕೇದಾರದಲ್ಲಿ ಹನ್ನೆರಡು ನಿವರ್ತನಗಳ ಭೂಮಿಯನ್ನು ಯಾಪನೀಯ ಸಂಘಕ್ಕೆ ಕೊಟ್ಟನು. ಅಂತು ಜೈನರಲ್ಲಿ ಯಾಪನೀಯ ಮೊದಲಾದ ಸಂಘಗಳಿದ್ದು ವೆಂದೂ ಬಂಧುಷೇಣ, ವಾರಿಷೇಣ, ಧರ್ಮನಂದಿ, ಕುಮಾರದತ್ತ, ಚಂದ್ರಕ್ಷಾಂತ ಮೊದಲಾದ ಕಾಲಜ್ಞಾನಿಗಳೂ ಶಾಸ್ತ್ರಪಾರಗರೂ ಆದ ಅನೇಕ ಆಚಾರ್ಯರಿಗೆ ರಾಜಾಶ್ರಯವಿತ್ತೆಂದೂ ತಿಳಿಯಬರುತ್ತದೆ. ಕೊಂಡಕುಂದಾನ್ವಯ ಸ್ಥಾಪಕರಾದ ಕೊಂಡಕುಂದಾಚಾರ್ಯರು ಶಿವಕುಮಾರ ಮಹಾರಾಜನ ಗುರುಗಳಾಗಿದ್ದರೆಂದು ೧೦ನೆಯ ಶತಮಾನದ ಬಾಲಚಂದ್ರನು ತನ್ನ ಪ್ರಾಭೃತಸಾರದ ಪೀಠಿಕೆಯಲ್ಲಿ ಹೇಳಿ

---

[1] *Ep. Ind.* Vol. I, p. 7, f.n. 12.

[2] *Ind. Ant.*, Vol. VI, p. 25.

ದ್ದಾನೆ.[1] ಈ ಶಿವಕುಮಾರ ಮಹಾರಾಜನು ಕದಂಬ ಮಾಂಧಾತ ರಾಜನ ತಂದೆಯಾದ ಕುಮಾರವರ್ಮನಾಗಿರಬಹುದು.

ಒಬ್ಬ ಕದಂಬ ರಾಜನು ಕೊಂಡಮಾನ ವಂಶದ ಶಿವನಾಗದತ್ತನೆಂಬ ಬ್ರಾಹ್ಮಣನಿಗೆ ಹದಿಮೂರು ಗ್ರಾಮಗಳನ್ನು ದಾನಮಾಡಿದನೆಂದು ಹಿಂದೆ ಹೇಳಿದ್ದೇವೆ. ಕಾಕುಸ್ಥವರ್ಮನು ಸ್ಥಾನಕುಂದೂರಿನ ಪ್ರಣವೇಶ್ವರ ದೇವಾಲಯದ ಹತ್ತಿರ ಒಂದು ಕೆರೆಯನ್ನು ಕಟ್ಟಿಸಿದನು. ಮೃಗೇಶವರ್ಮ, ಶಿವಮಾಂಧಾತೃವರ್ಮ, ರವಿವರ್ಮ, ಹರಿವರ್ಮ, ೨ನೆಯ ಕೃಷ್ಣವರ್ಮ ಮೊದಲಾದ ರಾಜರು ಅನೇಕ ಬ್ರಹ್ಮದೇಯಗಳನ್ನು ಕೊಟ್ಟಿದ್ದಾರೆ. ಶಿವಮಾಂಧಾತೃವರ್ಮನಿಗೆ ದೇವಶರ್ಮನೆಂಬ ಬ್ರಾಹ್ಮಣನು ಗುರುವಾಗಿದ್ದನು.

ಹೀಗೆ ಕದಂಬರ ಕಾಲದಲ್ಲಿ ಜೈನ ವೈದಿಕ ಧರ್ಮಗಳೆರಡೂ ರಾಜಾಶ್ರಯದಿಂದ ಅಭಿವೃದ್ಧಿಯನ್ನು ಹೊಂದುತ್ತಲಿದ್ದುವು. ಕದಂಬರು ವೈದಿಕ ಧರ್ಮಾವಲಂಬಿಗಳಾಗಿದ್ದರೆಂಬುದು ತಾಳಗುಂದ ಶಾಸನದಿಂದಲೂ "ಅಶ್ವಮೇಧಾವಭೃತಾಭಿಷಿಕ್ತಾನಾಂ" ಎಂಬ ಅವರ ವರ್ಣನೆಯಿಂದಲೂ ಸ್ಪಷ್ಟವಾಗುತ್ತದೆ. ಪ್ರಜೆಗಳ ಧರ್ಮವನ್ನು ಪಾಲಿಸುವುದು ರಾಜರ ಕರ್ತವ್ಯವಾದುದರಿಂದ ಕದಂಬರು ಅನ್ಯಧರ್ಮೀಯರಿಗೂ ಸಮದೃಷ್ಟಿಯಿಂದ ಪ್ರೋತ್ಸಾಹವನ್ನು ಕೊಡುತ್ತಿದ್ದರು.

ಕದಂಬ ರಾಜ್ಯದ ಬೇರೆ ಬೇರೆ ವಿಷಯಗಳಲ್ಲಿ ಯಾವ ಅಧಿಕಾರಿಗಳು ಆಳುತ್ತಿದ್ದರೆಂದು ಹೇಳುವುದಕ್ಕೆ ಆಧಾರಗಳಿಲ್ಲ. ಶ್ರುತಕೀರ್ತಿ ಸೇನಾಪತಿ, ಸಿಂಹ ಸೇನಾಪತಿ, ರಹಸ್ಯಾಧಿಕೃತ ದಾಮೋದರದತ್ತ, ರವಿವರ್ಮನ ವೈದ್ಯನಾದ ನೀಲಕಂಠ ದೇಶಾಮಾತ್ಯ, ಆಯುಕ್ತಕ ಜಿಯಂತ, ಆಜ್ಞಪ್ತಿ ದಾಮಕೀರ್ತಿ ಭೋಜಕ, ಜಯಕೀರ್ತಿ ಪ್ರತೀಹಾರರೇ ಮೊದಲಾದ ಅಧಿಕಾರಿಗಳು ಶಾಸನಗಳಲ್ಲಿ ಉಕ್ತರಾಗಿದ್ದಾರೆ. ಇವರ ವಿಷಯವಾಗಿ ನಮಗೆ ಇನ್ನೇನೂ ತಿಳಿದಿಲ್ಲ.

ಕದಂಬರ ಕಾಲದ ವಾಸ್ತುಶಿಲ್ಪದ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಸಾಧನಗಳು ಕಡಮೆ. ಐಹೊಳೆಯಲ್ಲಿರುವ ಲಾಡಖಾನ್ ಗುಡಿಯು ಕ್ರಿ. ಶ. ಸುಮಾರು ೪೫೦ರಲ್ಲಿ ನಿರ್ಮಾಣವಾಗಿರಬೇಕೆಂದು ಎ. ಕೆ. ಕುಮಾರಸ್ವಾಮಿಯವರು ಹೇಳಿದ್ದಾರೆ. ಈ ಕಾಲದಲ್ಲಿ ಈ ಪ್ರದೇಶವು ಕದಂಬರ ವಶದಲ್ಲಿತ್ತು. ಆದರೆ ಈ ದೇವಾಲಯವನ್ನು ರಾಜಮನೆತನದವರು ಕಟ್ಟಿಸಿದರೋ ಇಲ್ಲವೋ ಎಂಬುದನ್ನು ನಿರ್ಧರಿಸುವುದಕ್ಕೆ ಆಧಾರಗಳಿಲ್ಲ. ಈ ಗುಡಿಗೆ ಶಿಖರವಿಲ್ಲ. ಮಾಳಿಗೆಯು ಬೌದ್ಧ ಚೈತ್ಯಗಳಲ್ಲಿ ಕಾಣಬರುವ ಕಮಾನುಗಳನ್ನುಳ್ಳದ್ದಾಗಿದೆ. ದೇವಾಲಯದ ಮುಂಭಾಗದಲ್ಲಿರುವ ಕಂಬಗಳ ಮೇಲೆ ನದೀ ದೇವಿಯ ವಿಗ್ರಹಗಳು ಕೆತ್ತಲ್ಪಟ್ಟಿವೆ. ಮಾಳಿಗೆಯ ಮೇಲೆ ಸೂರ್ಯ ದೇವರ

[1] *Dyn. Kan. Dist.*, p. 288.

ಗೋಸ್ಕರ ಒಂದು ಸಣ್ಣ ಗುಡಿಯುಂಟು. ಗೋಡೆಗಳಲ್ಲಿ ಬೊಂಬೆಗಳನ್ನು ಕೆತ್ತಿದ ಗೂಡುಗಳಿವೆ. ಇದೇ ಊರಿನಲ್ಲಿರುವ ದುರ್ಗಾ ದೇವಸ್ಥಾನವೂ ೬ನೆಯ ಶತಮಾನ ದ್ದೆಂದು ಈ ಪಂಡಿತರ ಅಭಿಪ್ರಾಯವು.[1] ಇದೂ ಬೌದ್ಧ ಚೈತ್ಯಾಲಯಗಳ ಮಾದರಿ ಯನ್ನು ಅನುಸರಿಸಿ ಕಟ್ಟಲ್ಪಟ್ಟಿದೆ. ಇದಕ್ಕೆ ಶಿಖರವಿದ್ದರೂ ಅದು ಗುಡಿ ಕಟ್ಟಿದ ಬಹಳ ಕಾಲಾನಂತರದಲ್ಲಿ ರಚಿಸಲ್ಪಟ್ಟಿರಬೇಕೆಂದು ಅವರು ಹೇಳಿದ್ದಾರೆ. ಇದರಂತೆಯೇ ಶಿಖರವಿಲ್ಲದ ಕೊಂತಗುಡಿ, ಹುಚ್ಚಿಮಲ್ಲಿಗುಡಿ ಮೊದಲಾದ ಇನ್ನೂ ಕೆಲವು ಪ್ರಾಚೀನ ದೇವಸ್ಥಾನಗಳು ಐಹೊಳೆಯಲ್ಲಿವೆ. ಆದರೆ ಅವು ಚಾಳುಕ್ಯರ ಕಾಲಕ್ಕೆ ಪೂರ್ವದಲ್ಲಿ ನಿರ್ಮಿತವಾದವುಗಳೋ ಅಲ್ಲವೋ ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ.

ಕರ್ಣಾಟಕದ ರಾಜಕೀಯ ಪರಿಸ್ಥಿತಿಗಳು

(೬ನೆಯ ಶತಮಾನ)

ವೈಜಯಂತಿಯಲ್ಲಿ ಆಳುತ್ತಿದ್ದ ಕದಂಬರು ೬ನೆಯ ಶತಮಾನದಲ್ಲಿ ಬಲಹೀನ ರಾಗಿದ್ದರೆಂದು ತಿಳಿಸಿದ್ದೇವೆ. ಈ ಸಮಯವನ್ನು ಸಾಧಿಸಿ ಚಾಳುಕ್ಯ ಮನೆತನದ ೧ನೆಯ ಪುಲಿಕೇಶಿಯು ಅವರ ರಾಜ್ಯದಲ್ಲಿ ಆಯಕಟ್ಟಿನ ಮೆಟ್ಟಾದ ವಾತಾಪಿ ಪಟ್ಟಣದಲ್ಲಿ ಸ್ವತಂತ್ರನಾದನು. ಈ ಕಾಲದಲ್ಲಿ ಪ್ರಸಿದ್ಧ ಕರ್ಣಾಟಕ ಅರಸುಮನೆತನ ವೆಂದರೆ ಗಂಗರದು. ಇವರು ತುಮಕೂರು ಜಿಲ್ಲೆಯ ದಕ್ಷಿಣ ಮತ್ತು ಪೂರ್ವಕ್ಕಿರುವ ಮೈಸೂರು ಸಂಸ್ಥಾನದ ಭಾಗವನ್ನೂ ಅನಂತಪುರ ಜಿಲ್ಲೆಯ ಭಾಗಗಳನ್ನೂ ಉತ್ತರ ಆರ್ಕಾಡು, ಸೇಲಂ ಕೊಯಮುತ್ತೂರು ಜಿಲ್ಲೆಗಳ ಕೆಲ ಭಾಗಗಳನ್ನೂ ಒಳಕೊಂಡಿದ್ದ ರಾಜ್ಯವನ್ನು ಆಳುತ್ತಿದ್ದರು. ಕಡೂರು, ಶಿವಮೊಗ್ಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಭಾಗಗಳಲ್ಲಿ ಆಳುಪರು ಶಿವಮೊಗ್ಗೆ ಜಿಲ್ಲೆಗೆ ಸೇರಿದ ಪೊಂಬುಚ್ಚ (ಹುಂಚ)ವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದರು. ಪಿಠಾಪುರದಿಂದ ದೆಂದಲೂರು ಅಥವಾ ಕೃಷ್ಣಾನದಿಯವರೆಗಿರುವ ದೇಶಕ್ಕೆ ವಿಷ್ಣುಕುಂಡಿ ರಾಜರು ಅಧಿಪತಿ ಗಳಾಗಿದ್ದರು. ಉತ್ತರದಲ್ಲಿ ಪ್ರಾಯಶಃ ಕೃಷ್ಣಾನದಿ, ದಕ್ಷಿಣದಲ್ಲಿ ಕಾವೇರೀ ನದಿ, ಪೂರ್ವದಲ್ಲಿ ಸಮುದ್ರ, ಪಶ್ಚಿಮದಲ್ಲಿ ಕದಂಬ ಗಂಗರಾಜ್ಯಗಳೇ ಮೇರೆಗಳಾಗಿದ್ದ ಪ್ರದೇಶದಲ್ಲಿ ಪಲ್ಲವರಿದ್ದರು. ಇವರ ರಾಜಧಾನಿ ಪ್ರಸಿದ್ಧ ಕಾಂಚೀ ಪಟ್ಟಣವಾಗಿತ್ತು. ಇದರ ದಕ್ಷಿಣಕ್ಕೆ ಚೋಳರು ಉರಗಪುರದಲ್ಲಿಯೂ ಪಾಂಡ್ಯರು ಮಧುರೆಯಲ್ಲಿಯೂ ರಾಜ್ಯಭಾರ ಮಾಡುತ್ತಿದ್ದರು. ಇವರ ಪಶ್ಚಿಮಕ್ಕೆ ಮಲೆಯಾಳ ಪ್ರಾಂತದಲ್ಲಿ ಕೇರಳರು ರಾಜರಾಗಿದ್ದರು. ಅಲ್ಲಿಯೇ ಸಮೀಪದಲ್ಲಿದ್ದ ಎಲಿಮಲೆಯಲ್ಲಿ ಮೂಷಕರು

[1] *History of Indian and Indovesian Art*, p. 79.

ಆಳುತ್ತಿದ್ದರು. ಇನ್ನು ಉತ್ತರಕ್ಕೆ ಅಂದರೆ ಪಶ್ಚಿಮ ಸಮುದ್ರದ ತೀರದಲ್ಲಿದ್ದ ಪುರಿ(ಪೋರ್ ಬಂದರ್)ಯೇ ಮುಖ್ಯಪಟ್ಟಣವಾಗಿದ್ದ ಕೊಂಕಣದಲ್ಲಿ ಮೌರ್ಯರೂ ಲಾಟ (ಗುಜರಾತ, ಮಾಳವದೇಶದ ಭಾಗಗಳು)ದಲ್ಲಿ ಕಟಚ್ಚುರಿ(ಕಲತ್ಸುರಿ)ಗಳೂ ಆಳುತ್ತಿದ್ದರು. ನಳರು ಮಧ್ಯಪ್ರಾಂತದಲ್ಲಿದ್ದಂತೆ ತೋರುತ್ತದೆ. ಈ ವಂಶದ ರಾಜನಾದ ಭವತ್ತವರ್ಮನ ತಾಮ್ರಶಾಸನದಿಂದ ಇವನ ರಾಜಧಾನಿಯು ನಂದಿವರ್ಧನ ವಾಗಿತ್ತೆಂದು ತಿಳಿಯುತ್ತದೆ. ಈ ನಂದಿವರ್ಧನವು ಮಧ್ಯಪ್ರಾಂತದಲ್ಲಿದೆಯೆಂದು ಈ ಶಾಸನವನ್ನು ಪ್ರಕಟಿಸಿದ ಗುಪ್ತೆಯವರು ಹೇಳಿದ್ದಾರೆ.[1] ಇವರ ಶಿಲಾಲಿಪಿಗಳು ಮದ್ರಾಸ್ ಅಧಿಪತ್ಯದ ಜಯಪುರ ಏಜನ್ಸಿಯಲ್ಲಿರುವ ಪೊಡಾಗಡ ಗ್ರಾಮದಲ್ಲಿಯೂ ಸಿಕ್ಕಿವೆ.[2] ಪೂರ್ವ ಸಮುದ್ರದ ಹತ್ತಿರ ಪಿಠಾಪುರದ ಮೇಲ್ಭಾಗದಲ್ಲಿ ಕಳಿಂಗರೂ ಅವರ ಪಶ್ಚಿಮ ದಿಕ್ಕಿನ ನೆರೆಹೊರೆಯವರಾಗಿ ಕೋಸಲರೂ ರಾಜ್ಯವಾಳುತ್ತಿದ್ದರು. ಈ ರೀತಿಯಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಅನೇಕ ರಾಜರು ಬೇರೆ ಬೇರೆ ಸಂಸ್ಥಾನ ಗಳಲ್ಲಿ ರಾಜ್ಯವಾಳುತ್ತಿದ್ದ ಸಮಯದಲ್ಲಿ ಚಾಳುಕ್ಯರು ವಾತಾಪಿ ನಗರಿಯಲ್ಲಿ ಸ್ವತಂತ್ರ ವಾದ ರಾಜ್ಯವನ್ನು ಸ್ಥಾಪಿಸಿದರು.

ಎನ್. ಲಕ್ಷ್ಮೀನಾರಾಯಣರಾವ್,
ಆರ್. ಎಸ್. ಪಂಚಮುಖಿ.

---

[1] *Ep. Ind.*, Vol. XIX, p. 102.

[2] ೧ನೆಯ ವಿಕ್ರಮಾದಿತ್ಯನ ಕರ್ನೂಲು ತಾಮ್ರಶಾಸನದಲ್ಲಿ ನಳವಾಡಿ ವಿಷಯದಲ್ಲಿದ್ದ ರತ್ನಗಿರಿಯನ್ನು ಈ ರಾಜನು ದಾನಮಾಡಿದಂತೆ ಹೇಳಿದೆ. ಈ ರತ್ನಗಿರಿ ಕರ್ನೂಲು ಜಿಲ್ಲೆಯಲ್ಲಿರ ಬೇಕೆಂದೂ ಬಳ್ಳಾರಿ ಕರ್ನೂಲು ಜಿಲ್ಲೆಗಳ ಪ್ರಾಂತವೇ ನಳವಾಡಿ ವಿಷಯವಾಗಿತ್ತೆಂದೂ ಫ್ಲೀಟರು ಬರೆದಿದ್ದಾರೆ. (*Dyn. Kan. Dist.*, pp. 336, 363.) ವಿನಯಾದಿತ್ಯನ ಹನ್ನೆರಡನೆಯ ವರ್ಷದ ದಯ್ಯಮದಿನ್ನೆ ತಾಮ್ರಶಾಸನದಲ್ಲಿ ರಾಜನು ತಗರ ನದಿಯ ಉತ್ತರ ದಡದಲ್ಲಿದ್ದ ತಳಯಖೇಟದಲ್ಲಿ ದ್ದಾಗ ನಳವಾಡಿ ವಿಷಯದ ಉಳ್ಟುಳ್ ಗ್ರಾಮದಲ್ಲಿ ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಿದ ನೆಂದು ಹೇಳಿದೆ. ತಗರ ನದಿಯೇ ಈಗಿನ ತೇರ್ (ಥೈರ್ನ) ನದಿಯೆಂದೂ ಅದರ ಉತ್ತರ ದಂಡೆಯಲ್ಲಿದ್ದ ಥೈರ ಖೇಡವೇ ಶಾಸನದಲ್ಲಿ ಉಕ್ತವಾದ ತಳಯಖೇಟವಾಗಿರಬೇಕೆಂದೂ ಕೃಷ್ಣ ಶಾಸ್ತ್ರಿಗಳು ಬರೆದಿದ್ದಾರೆ. (*M.E.R.*, 1916, p. 130.) ಉಳ್ಟುಳ್ ಕರ್ನೂಲು ತಾಲೂಕಿಗೆ ಸೇರಿದ ಉಲಚಾಲವಾಗಿರಬಹುದು. ಈ ಶಾಸನವನ್ನು ಶ್ರೀ ಪಂಚಮುಖಿಯವರು ಪ್ರಸಿದ್ಧಿಸಿದ್ದಾರೆ. (*Ep. Ind.*, Vol. XXII, pp. 24 ff.) ನಳವಾಡಿ ವಿಷಯಕ್ಕೂ ನಳ ಅರಸರ ರಾಜ್ಯವಾದ ಜಯಪುರ ಏಜನ್ಸಿಯ ಭಾಗಕ್ಕೂ ಅಂತರ ಬಹಳವಿರುವುದರಿಂದ ಅವೆರಡಕ್ಕೆ ಸಂಬಂಧವನ್ನು ಕಲ್ಪಿಸಲಾಗದೆಂದು ಹೇಳಿದ್ದಾರೆ.

ಪ್ರಾಕ್ಕಾವ್ಯ ಪರಬ್ರಹ್ಮ[1]

ಪ್ರಾಚೀನ ಪ್ರೌಢ ಪ್ರಬಂಧ ಪಿನಾಕಿ[2]

ಪರಮಾಲಂಕಾರ ಪ್ರದರ್ಶನ ಪ್ರವೀಣ ಪದ್ಮನಾಭ[3]

ಪುರಾತನ ಕವಿಕೇಸರಿ[4] ಪುರಾಣ ಕವಿತಾವಿಚಕ್ಷಣ[5] ಪ್ರಾಚೀನ ಕಾವ್ಯಶಿರೋಮಣಿ[6]

ಪ್ರಾಕ್ಪುರಾತನ ಕವಿರಾಜ[7] ಪ್ರಪ್ರಾಚೀನ ಕವಿರತ್ನ[8]

ಕರ್ಣಾಟಕ ಕುಲಕ್ರಮಾಗತ ಕವಿರಾಜಮಾರ್ಗ ಪ್ರತಿಪನ್ನ ಪ್ರಚಣ್ಡ ಪರಮೇಶ್ವರ[9]

ಸಕಲ ಸುನಿಪುಣ ಸಾಹಿತ್ಯ ಸರ್ವಸ್ವ ಸಂಯುಕ್ತ ಸರ್ವೇಶ್ವರ[10]

ಕವಿನರಪಾಳ[11] ಕುಳಕಪ್ರಿಯ[12]

ಇತ್ಯಾದ್ಯನೇಕ ಬಿರುದಾವಲಿ ಭೂಷಣವಿಭೂಷಿತ

ಮಹಾಕವಿ[13]

ಪುರುಷ ಸರಸ್ವತಿ

ಪ್ರಣೀತಮಪ್ಪ

ಶತಕಾರ್ಧತ್ರಯೀ[14]

ಎಂಬ

ತ್ರಿಲೋಕತುಲ್ಯ ಮಹಾಕ್ಷುದ್ರಕಾವ್ಯ[15] ಪ್ರಪಂಚವು

"ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ"

ಎಂದ ಸತ್ಕವಿಯ ಸೂಕ್ತಿಯನ್ನು ಸಂಪೂರ್ಣವಾಗಿ ಸಾರ್ಥಕಗೊಳಿಸಿದ

ದುಷ್ಟಬುದ್ಧಿ[16]ಯೆಂಬವನ ದೊಡ್ಡಯ್ಯನ ದೌಹಿತ್ರನಾದ

ವಿಪರೀತಬುದ್ಧಿಯ ವಿಸ್ತರವ್ಯಾಖ್ಯಾನದೊಡನೆ

ಲೋಕಹಿತಾರ್ಥವಾಗಿ ಪ್ರಚುರಪಡಿಸಲ್ಪಟ್ಟಿತು.[17]

(ವಿವರಗಳಿಗೆ ಮಗ್ಗಲು ಪುಟ ನೋಡಿ)

—: ವಿಶೇಷ ಸೂಚನೆ :—

ಕಾವ್ಯಕರ್ತೃವೂ ವ್ಯಾಖ್ಯಾನಕಾರನೂ 'ಗುಪ್ತಸಂಪಾದಕ ಪಂಚಕ'ವೂ

ಸರ್ವವೂ **ಶ್ರೀಮಾನ್ ಜಿ. ಪಿ. ರಾಜರತ್ನಂ,** ಎಂ. ಎ. ಎಂಬವರೆಂದು

ಈಗತಾನೆ ಈ ಕೃತಿ ಅಚ್ಚಾದಮೇಲೆ ತಿಳಿದುಬಂದಿದೆ.

1, 2, 3—ಪುರುಷ ಸರಸ್ವತಿಯು ತನ್ನ ಕಾವ್ಯಗಳಲ್ಲಿ ತ್ರಿಮೂರ್ತಿಗಳನ್ನು ಒಟ್ಟಿಗೆ ಅನೇಕವಾಗಿ ಸ್ತುತಿಸಿ ಆಸ್ತಿಕ ಲೋಕದಿಂದ ಈ ಮೂರು ಬಿರುದು ಪಡೆದನು.

4, 5, 6, 7, 8—ನಾಸ್ತಿಕ ಲೋಕವು ತಾನು ಆಸ್ತಿಕ ಲೋಕಕ್ಕಿಂತ ಹಿಂದುಳಿದಿಲ್ಲವೆಂಬುದನ್ನು ತೋರಿಸಲೋಸುಗ ಕವಿಯನ್ನು ಈ ಬಿರುದಾವಲಿ ಪಂಚಕದಿಂದ ಶೃಂಗರಿಸಿತು.

9, 10—ಹೀಗೆ ಸಮಸ್ತ ನಾಸ್ತಿಕಾನಾಸ್ತಿಕ ಪ್ರಪಂಚವೂ ತನ್ನನ್ನು ಗೌರವಿಸುತ್ತಿರಲು, "ಆತ್ಮಗೌರವಕ್ಕೆ ಮಿಗಿಲಾದುದು ಮುಗಿಲ ಕೆಳಗಿಲ್ಲ'ವೆಂಬುದನ್ನು ಜಗತೀವಳಯಕ್ಕೆ ತೋರಿಸಿ ಕೊಡುವುದಕ್ಕಾಗಿ ಕವಿಯು ತನಗೇ ತಾನು ಕೊಟ್ಟುಕೊಂಡ ಎರಡು ಬಿರುದುಗಳಿವು.

11—ಕವಿಯು ಪ್ರಾಸ ರಕ್ಷಣೆಗೋಸ್ಕರ ತನ್ನ 'ಕರ್ಣ ನಾಟಕ ಪುರಾಣ'ದ ಮೂರನೆಯ ಪದ್ಯದಲ್ಲಿ ಕೊಟ್ಟುಕೊಂಡ ಬಿರುದು.

12—ಈತನ ಕಾವ್ಯಗಳಲ್ಲಿ ಮೇಲಿಂದ ಮೇಲೆ ತಲೆದೋರುವ ಕುಳಕಗಳನ್ನು ಕಂಡು ಮುಗ್ಧರಾಗಿ, ನಾವು—ಸಂಪಾದಕರು—ಕೊಟ್ಟ ಬಿರುದು.

13—ನಿನ್ನೆಗಿಂತ ಹಿಂದಿನ ಕನ್ನಡ ಕೃತಿಕಾರರನ್ನೆಲ್ಲ ಪಂಕ್ತಿಭೇದವಿಲ್ಲದಂತೆ "ಮಹಾಕವಿ" ಯೆಂದು ಸಂಬೋಧಿಸುವ ಸ್ತೋತ್ರಾರ್ಹವಾದ ನೂತನ ಸತ್ಸಂಪ್ರದಾಯಕ್ಕೆ ಸೇವೆ ಸಲ್ಲಿಸಲು ಈ ಪ್ರಕೃತದ ಕರ್ತನನ್ನೂ "ಮಹಾಕವಿ" ಎಂದು ಕರೆದಿದ್ದೇವೆ.

14—ಐವತ್ತೈವತ್ತು ಭಾಮಿನಿ ಷಟ್ಪದಿಗಳ ವಿಸ್ತಾರದ ಮೂರು ಕಾವ್ಯಗಳು—(ಅ) ಕರ್ಣ ನಾಟಕ ಪುರಾಣವು—ಅಥವಾ—ಸಾಲಂಕೃತ ಶತಕಾರ್ಧ ಷಟ್ಪದವು—ಎಂಬ—ಜತ್ಯೋದ್ಧರಣ ಮಹಾಕ್ಷುದ್ರಕಾವ್ಯ ಪ್ರಪಂಚವು. (ಆ) ಹಾರ್ಮೋನಿಯಂ ಹರಣವು—ಅರ್ಥಾತ್—ವೆಂಕಟೇಶ ಹಗರಣವು—ಅಥವಾ—ನಿಂಗನಿರ್ಯಾಣವು—ಎಂಬ—ಹಾರ್ಮೋನಿಯಮನ್ನು ಹರಣಮಾಡಲು ಹೋದ ವನ ಹರಣವು ಹರಣವಾದ ಹ[ಗ]ರಣವು (ಇ) ಜೈರಿಗೇಂದ್ರ ಭಯಾನಕವು—ಎಂಬ—ಭಯಂಕರ ಬೃಹದ್ವೈರಿಗೇಶ್ವರ ಪುರಾಣವು.

15—ಪುರುಷ ಸರಸ್ವತಿಯ ಕೃತಿಗಳು 50 ಏ ಪದ್ಯಗಳಾದುದರಿಂದ "ಕ್ಷುದ್ರಕಾವ್ಯ"ಗಳೆಂದೂ, ಮಹಾಕವಿ ಬರೆದುದರಿಂದ "ಮಹಾಕ್ಷುದ್ರಕಾವ್ಯ"ಗಳೆಂದೂ ಪ್ರಸಿದ್ಧವಾಗಿವೆ.

16—ಈ ದುಷ್ಟಬುದ್ಧಿ ಯಾರೋ ಪತ್ತೆಯಾಗಿಲ್ಲ.

17—ದ್ರುಪದರಾಜನಂದನೆಯನ್ನು ಸಂಪಾದಿಸಲು ವಿಕ್ರಮಿಸಿದ ಪಂಚಪಾಂಡವರಂತೆ ಈ ಮಹಾಕವಿ ಪುರುಷ ಸರಸ್ವತಿಯ ಶತಕಾರ್ಧತ್ರಯವನ್ನು ಸಂಪಾದಿಸಲು ಸಾಹಸಗೈದಿರುವ ನಾವೈವರು ಉದ್ದೇಶಪೂರ್ವಕವಾಗಿ ನಮ್ಮ ಹೆಸರನ್ನು ಅಡಗಿಸಿದ್ದೇವೆ. "ಹೂವಿನಿಂದ ನಾರೂ ನಾರಿಯ ಮುಡಿ ಗೇರಿತು—ಎಂಬ ನಾಣ್ಣುಡಿಯಂತೆ ಮಹಾಕವಿಯ ಗ್ರಂಥ ಸಂಪಾದಿಸುವ ವ್ಯಾಜದಿಂದ ಈ ಐವರು ಯಃಕಶ್ಚಿತ್ತುಗಳಾದ ಪಂಚಸಂಪಾದಕರು ತಾವೂ ಖ್ಯಾತರಾದರು" ಎಂಬ ಅಪವಾದಕ್ಕೆ ಪಕ್ಕಾಗ ಬಾರದೆಂಬುದೇ ಮೇಲೆ ನಮೂದಿಸಿದ ನಮ್ಮ ಪವಿತ್ರ ಪರಮೋದ್ದೇಶವು. ಮುಖ್ಯವಾಗಿ ನಮ್ಮದು 'ಅಳಿಲ ಸೇವೆ'; ನಾವು 'ಎಲೆಯ ಮರೆಯ ಕಾಯಿಗಳು'; 'ಬಲಗೈಮಾಡುವುದು ಎಡಗೈಗೆ ತಿಳಿಯಬಾರದು' ಎಂಬುದು ನಮ್ಮ ಗಾಯತ್ರಿ; ಅಲ್ಲದೆ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬುದು ನಮ್ಮ ತಾರಕಮಂತ್ರ. ಅಸ್ತು. ಇತ್ಯಲಂ.

ಮಹಾಕವಿ ಪುರುಷ ಸರಸ್ವತಿಯ ಪರಿಚಯ

ನಾವು—ಸಂಪಾದಕರು—ಇಂತಹ ಕಾರ್ಯಕ್ಕೆ ಹೊಸಬರು. ವಾಚಕರು ಹಂಸ ಕ್ಷೀರನ್ಯಾಯದಿಂದ ಇದನ್ನು ಪರಾಂಬರಿಸಬೇಕು.

ಶತಕಾರ್ಧತ್ರಯವನ್ನು ರಚಿಸಿರುವ ಈ ಕನ್ನಡಕವಿಯ ವಿಷಯವಾಗಿ ನಮಗೇನೇನೂ ಗೊತ್ತಿಲ್ಲ. ಆದರೆ ಆತನ ಕೃತಿಗಳಿಂದ ಅವನ ಹೆಸರು ಪುರುಷ ಸರಸ್ವತಿಯೆಂದೂ, ಅವನ ತವರೂರು ತಾವರೆಪುರವೆಂದೂ, ತಂದೆಯ ಹೆಸರು ಲಕ್ಷ್ಮೀರಮಣನೆಂದೂ, ಹೆಣ್ಣುಕೊಟ್ಟ ಮಾವನ ಹೆಸರು ಪರ್ವತ (ಬೆಟ್ಟದಯ್ಯ?)ನೆಂದೂ ತಿಳಿದುಬರುತ್ತದೆ ('ಹಾರ್ಮೋನಿಯಂ ಹರಣ'ವನ್ನು ನೋಡಿ).

ಈತನ ಕಾಲ ಇನ್ನೂ ನಿರ್ಧರವಾಗಿಲ್ಲ. ಈತನು ಮಹಾ ಕುರುಕ್ಷೇತ್ರ ಸಮರಕ್ಕಿಂತ ಹಿಂದಿನ ಯಾವ ಐತಿಹಾಸಿಕ ಘಟನೆಯನ್ನೂ ತನ್ನ ಕಾವ್ಯದಲ್ಲಿ ಸ್ಮರಿಸಿಲ್ಲವಾದ ಕಾರಣ ಈತನು (*a*) ಮಹಾಭಾರತ ಯುದ್ಧಕ್ಕೆ ಈಚಿನವನೆಂದು ಕೆಲವರೂ (*b*) ಮಹಾಭಾರತ ಯುದ್ಧಕ್ಕೆ ಹಿಂದಿನವನಲ್ಲವೆಂದು ಉಳಿದವರೂ ಇನ್ನೂ ವಾದ ಮಾಡುತ್ತಿದ್ದಾರೆ.

ಈತನ ಮತವೂ ತಿಳಿದುಬಂದಿಲ್ಲ. ಹರಿಹರ ಹಿರಣ್ಯಗರ್ಭರು ಮೂವರನ್ನೂ ಒಂದೇ ಉಸಿರಿನಲ್ಲಿ ಸ್ಮರಿಸುವ ಅಪೂರ್ವ ಸಂಪ್ರದಾಯವು ಈ ಮಹಾಕವಿಯ ಮುಖ್ಯ ವೈಶಿಷ್ಟ್ಯ. (ಈತನ ಮತ ಯಾವುದೆಂದು ನಿಶ್ಚಯಿಸಿಕೊಟ್ಟವರಿಗೆ ಏತನ್ಮತೀಯರು ೫,೦೦೦ ರೂಪಾಯಿಗಳ ಬಹುಮಾನ ಕೊಡುವುದಾಗಿ ಜಾಹೀರಾತು ಮಾಡಿದ್ದಾರೆ. ಅಪೂರ್ವ ಸಂಶೋಧಕರಿಗೆ ಅಪೂರ್ವ ಸಂಧಿ!)

ಈ ಕವಿಯ ಬಿರುದುಗಳನ್ನು ಎದುರುಪುಟದಲ್ಲಿ ವಿವರಿಸಿದೆ.

ಈ ಕವಿಯ ಶೈಲಿಯನ್ನು ಸೂಚಿಸಲು ಸ್ಥಳಸಂಕೋಚದಿಂದ ಯಾವ ಪದ್ಯವನ್ನೂ ಇಲ್ಲಿ ಉದ್ಧರಿಸಿಲ್ಲ. ಆದರೂ "ಒಂದಕ್ಕಿಂತ ಮೂರು ಮೇಲು" ಎಂಬ ಮಾತಿನಂತೆ ಈ ಮಹಾಕವಿಯ ಮೂರು ಶತಕಾರ್ಧಗಳನ್ನೂ ಮುಂದೆ ಕೊಡುವವರಾಗಿದ್ದೇವೆ.

ಈತನ ವಿಷಯವಿನ್ನೇನೂ ಗೊತ್ತಿಲ್ಲವಾದ್ದರಿಂದ ನಮ್ಮ ಗುಪ್ತಸಂಪಾದಕ ಪಂಚಕದಲ್ಲಿ ಮಧ್ಯಮರಾದ "ಕನ್ನಡಾಂಗ್ಲೋಭಯಭಾಷಾಚಕ್ರವರ್ತಿ"ಗಳೆನಿಸಿದವರಿಂದ ರಚಿತವಾದ "ಮಹಾಕವಿ ಪುರುಷ ಸರಸ್ವತಿ ಸ್ತೋತ್ರಪಂಚಕ"ವನ್ನು ಇಲ್ಲಿ ಉಲ್ಲೇಖಿಸುತ್ತೇವೆ. ಇದು ಕೂಡ ಅಪರೂಪ ಕೃತಿಯಾದುದರಿಂದ ಪ್ರತಿಪದ್ಯದ ಅನ್ವಯವನ್ನೂ ಅಲ್ಲಲ್ಲೆ ಕೊಡುತ್ತೇವೆ.

ಮಹಾಕವಿ ಪುರುಷ ಸರಸ್ವತಿ ಸ್ತೋತ್ರ ಪಂಚಕವು

(ತಲೆಯ ಮೇಲೆ * ಗುರುತಿರುವ ಅಕ್ಷರವನ್ನು ಶಿಥಿಲದ್ವಿತ್ವವೆಂದು ಭಾವಿಸಬೇಕು)

೧. ಏಜಸಾಯಿತು ನರರ ನಡುವೆ ಗ
ಲೀಜಿನೊಳಗಣ ಪಂಕಜದವೊಲ್
ಸೇಜು ವರಕವಿ ಏವನೀಟೀಸಿಗಳ ಪೊಗಳಿಕೆಗೆ
ಭಾಜನನು ತಾನೆನಿಸಿ ಜ಼ೂವಿನ
ಕೇಜಿನೊಳಗಣ ಕ್ರೀ*ಚರುಗಳಂ
ತೀಜ಼ಿಲೈಫಿನ ಜನರ ಮೂದಲಿಸುವರು ರೈಜ಼ಾಗಿ

[ಅನ್ವಯ—ಗಲೀಜಿನ ಒಳಗಣ ಪಂಕಜದವೊಲ್, ನರರ ನಡುವೆ "sageಉ, ವರಕವಿ, A1, ETC."ಗಳ ಪೊಗಳಿಕೆಗೆ ಭಾಜನನು ತಾನೆನಿಸಿ Zooವಿನ cageಇನ ಒಳಗಣ Creatureಉ ಗಳಂತೆ easy-lifeಇನ ಜನರ ಮೂದಲಿಸುವರು riseಆಗಿ agesಆಯಿತು.]

೨. ವರ್ತ್ತು ನೋಟೀಸಿಂಗು ನಗಿಸುವ
ಮರ್ತ್ತಿಗೀ ಕನ್ನಡದೊಳಾಫು
ಲ್ಡರ್ತ್ತು ಮೈಗಾಡ್ ಪುರಿಸ ಸರಸತಿ ಓಯೆಸಿಸ್ಸು ಕಣಾ
ಬರ್ತ್ತು ತಾವರೆಪುರದ ಕರಿ ಮದ
ರರ್ತ್ತಿನಲಿ ಮೇಣವನ ಫೇಮಿನ
ಗರ್ತ್ತು ಗಣನಾತೀತ [1]ತುದಿಗಳೆ ಹೆವನು ಹೆಲ್ಲುಗಳು[1]

[ಅನ್ವಯ—Worthಉ noticingಉ ! ಈ ಕನ್ನಡದೊಳು ನಗಿಸುವ mirthಇಗೆ awful dearthಉ ! My God! ಪುರಿಸ ಸರಸತಿ oasisಉ ಕಣಾ ! (ಆ ಪುರುಷ ಸರಸ್ವತಿಯ) birthಉ ತಾವರೆಪುರದ ಕರಿ Mother Earthಇನಲಿ ; ಮೇಣ್ ಅವನ fameಇನ girthಉ ಗಣನಾತೀತ ! (ಆ fameಇನ) ತುದಿಗಳೆ Heavenಉ Hellಉಗಳು !]

೩. ಏಂಗೆಡಾರೋಸಮುಕಿ ಕಳೆದ
ಸ್ಪ್ರಿಂಗುಗಳು ಸರಸತಿಯು ಹೈಲೀ
ಸ್ಟ್ರಂಗುಮೂಡಿನ ಮಾತು ಸಮ್ರಾ ಪೊಯೆಟ ಫ್ಲೈ*[2]ಟ್ಗಿಂದು
ಫಿಂಗರುಗಳಿಗೆ ಮೇಡ್ಟು-ಆರ್ಡರ್
ರಿಂಗುಗಳ ಸಮನಾಗಿ ಕವಿಗಳ
ಕಿಂಗು ತಾನಾದಿವಸನೆಕೊಸ್ಟಲ್ಗೈವರಡ್ಮೈರರ್ಸ್

---

[1] ಹೆವನು ಹೆಲ್ಲುಗಳು ತುದಿಗಳಾದರೆ ನಡುವೆ ಭೂಮಿಯೂ ಕೂಡಿದೆಯೆಂಬುದು ಇಲ್ಲಿ ಧ್ವನಿ.

[2] ಇದು ಅಚ್ಚಿನಲ್ಲಿ 'ಶಿಥಿಲತ್ರಿತ್ವ'ದಂತೆ ಕಂಡರೂ, ಇದು ಶಿಥಿಲದ್ವಿತ್ವವೇ.

[ಅನ್ವಯ—Admirers (= admire ಮಾಡುವವರು) ಕವಿಗಳ Kingಉ ತಾನಾದ ಇವನನು "ನಮ್ಮ ಈ poetಅ (=poetಇನ) flightsಉ winged arrows, ಅಮುಕಿ ಕಳೆದ springಉಗಳು, ಸರಸತಿಯ highly strungಉ moodಇನ ಮಾತು" ಎಂದು, fingerಉಗಳಿಗೆ made-to-order-ringಉಗಳ ಸಮನಾಗಿ (= appropriate ಆಗಿ) extol ಗೈವರು.]

೪. ಕರ್ಲಿಹೆಡ್ಡು ಕವೀಶ್ವರಗೆ ಬಲು
ಬರ್ಲಿಬಾಡಿ ಬ್ರದರ್ಲಿ* ಫೀಲಿಂಗ್ಸ್
ಸರ್ಲಿಲುಕ್ಸಿನ ಷಾಡೊ ಸುಳಿವಿಲ್ಲವನ ಫೇಸಿನಲಿ
ವೆರಿಲಿಯಿದುವೇ ಕವಿಯ ಟ್ರೂ* ಪಿ
ಕ್ಚರು ಗಡಾತನ ಮೆರಿಟಿಯೂನಿನ[1]
ಜಿರಲೆ ಬುಳುಬುಳು ಸುಳಿದು ತನುಮನ ಜುಂಜುಮೆನುತಿಹುದು

[ಅನ್ವಯ—ಕವೀಶ್ವರಗೆ (= ಪುರಿಸ ಸರಸತಿಗೆ) Curly-headಉ, ಬಲು burly body, brotherly feelings (with the world); ಅವನ faceಇನಲಿ surly looksಇನ shadow ಸುಳಿವಿಲ್ಲ. Verily, ಇದುವೇ ಕವಿಯ true pictureಉ ಗಡಾ! ಆತನ merry tuneಇನ ಜಿರಲೆ ಬುಳುಬುಳು ಸುಳಿದು ತನುಮನ ಜುಂಜುಂ ಎನುತಿಹುದು.]

೫. ಕೌಂಗು ನೀ ನಾ ಕುರುಚಲೆನ್ನೀ
ಟಾಂಗದೆದುರಿಗೆ ಬಸ್ಸು ನೀ [2]ಕಿಂಗ್
ಕಾಂಗು[2] ನೀ ಕ್ರಿಮಿ ನಾನು ಪುಂಗವ ನೀನು ನಾನೇನು
ಆಂಗ್ಲ ಕನ್ನಡವೆರಡರಲು ನಾ
ರ್ಯಾಂಗ್ಲರಾದವನಿದಿಗೊ ಹೈಲ್ಹೈಲ್
ಲಾಂಗ್ಲಿವೆನುವೆನು ಪುರಿಸ ಸರಸತಿ ಹಿಪ್ಹಿಪ್ಹುರೆಯೆಂಬೆ

[ಅನ್ವಯ—(ಹೇ ಪುರುಷ ಸರಸ್ವತಿ!) ನೀ(ನು) ಕೌಂಗು, ನಾ(ನು) ಕುರುಚಲು! ಎನ್ನ ಈ tongaದ ಎದುರಿಗೆ ನೀ(ನು) busಉ! ನೀ(ನು) King Kongಉ, ನಾನು ಕ್ರಿಮಿ! ನೀನು ಪುಂಗವ, ನಾನು ಏನು!?! ಆಂಗ್ಲ ಕನ್ನಡವೆರಡರಲು wrangler ಆದವನು ನಾ(ನು), ಇದಿಗೋ! "Hail! Hail! Long live ಪುರಿಸ ಸರಸತಿ!' ಎನುವೆನು!! "Hip! Hip! Hooray!" ಎಂಬೆ!!!

---

[1] 'ಟಿಯೂನ್' ಎಂಬುದು 'tune' ಎಂಬುದರ ಅಪಭ್ರಂಶ.

[2] King Kong ಎಂಬುದು ಪರ್ವತಸದೃಶವಾದ ಆಕಾರದ ಮಹಾಕಪಿ; ಹಾಗೂ King Kong ಎಂಬವನು ಬೃಹದಾಕಾರದ ಪಾಶ್ಚಾತ್ಯ ದೇಶದ ಪ್ರಸಿದ್ಧ ಮಲ್ಲ.

ಮಹಾಕವಿ ಪುರುಷ ಸರಸ್ವತಿಯು **'ಕರ್ಣನಾಟಕ ಪುರಾಣ', 'ಹಾರ್ಮೋನಿಯಂ ಹರಣ'** ಮತ್ತು **'ಬೈರಿಗೇಂದ್ರ ಭಯಾನಕ'**—ಎಂಬ ಶತಕಾರ್ಧತ್ರಯವನ್ನು ಭಾಮಿನಿಷಟ್ಪದಿಯಲ್ಲಿ ಬರೆದುದು ಮಾತ್ರವಲ್ಲದೆ **'ಸಂದೇಹ ಸಂದೋಹ ಸಂದೇಶ'**ವೆಂಬ ಸಂಪೂರ್ಣವಾದ ಅಸಂಪೂರ್ಣ ಗ್ರಂಥವೊಂದನ್ನು ವಾರ್ಧಕ ಷಟ್ಪದಿಯಲ್ಲೂ ಬರೆದಿದ್ದಾನೆ. 50 ಪದ್ಯ ಬರೆಯಬೇಕಾದವನು 3ಏ ಪದ್ಯ ಬರೆದುದರಿಂದ ಅದು 'ಅಸಂಪೂರ್ಣ ಗ್ರಂಥ'ವೆಂದೂ, 3ರಲ್ಲೇ ಮುಕ್ತಾಯವಾಗಿರುವುದರಿಂದ "ಸಂಪೂರ್ಣ ಅಸಂಪೂರ್ಣ ಗ್ರಂಥ"ವೆಂದೂ ಪ್ರಸಿದ್ಧವಾಗಿದೆ. ಇದನ್ನು ಸ್ಥಳಸೌಲಭ್ಯಕ್ಕಾಗಿ "ಕರ್ಣನಾಟಕ ಪುರಾಣ"ದ ಅನಂತರ ಪ್ರಕಟಪಡಿಸಿದೆ.

ಪುರುಷ ಸರಸ್ವತಿಯು ಈ ಕೃತಿಗಳು **"ತುರುಚುಗಬ್ಬ", "ಶತಾರಿ", "ಹತಾರಿ", "Satire"** ಎಂಬ ಕಾವ್ಯಜಾತಿಗೆ ಸೇರಿದುವು.

"ಕವಿ ಮಹಾಜನಮಾರ್ಗ್ಗ"ದಲ್ಲಿ ಹೀಗೆ ಹೇಳಲಾಗಿದೆ:

ಹೊರಗಣ್ಗತಿ ಸೌಮ್ಯಂ ಸುಂ | ದರತರಮತಿ ಬಂಧುರವಿದುವೆಂದೆನಿಸಿಪ್ಪರ್ಾ ||
ಕರಚೆಲುವಿನ ತುರುಚಿಯವೋ | ಲ್ತುರುಚುರುಗುಟ್ಟಿಪುದೆ **ತುರುಚುಗಬ್ಬಂ** ಪೆಸರಿಂ ||

"ಬೃಹತ್ಸ್ನಿಗ್ಧ ಸಂದಿಗ್ಧ ಶಬ್ದಾರ್ಥ ಸಂದೋಹ"ದಲ್ಲಿ ಹೀಗಿದೆ:

ಯೇನ ಶತಂ ಅರಯಃ ಸಂಭವನ್ತಿ ವಾ ಉತ್ಪದ್ಯನ್ತೇ ವಾ ಉತ್ಪಾದ್ಯನ್ತೇ ವಾಸಃ **ಶತಾರಿಃ** || ಯಥಾ ಶಶೀ ಸಸಿ ಭವತಿ ತಥಾ ಶತಾರೇಃ ಶಕಾರಃ ಸಕಾರೋ ಭವತಿ | ಏವಂಚ ಯಥಾ ಸದ್ಮ ಹದ್ಮ ಭವತಿ ತಥೈವ ಸತಾರೇಃ ಸಕಾರಃ ಹಕಾರೋ ಭವತಿ | ತಸ್ಮಾತ್ ಶತಾರಿಃ >ಸತಾರಿಃ >**ಹತಾರಿಃ** || ಯೇನ ಅರಯಃ ಹತಾಃ ಭವನ್ತಿ ಸಃ **ಹತಾರಿಃ** || ಇತಿ.

"Satire—in its literary aspect, may be defined as the expression in adequate terms of the sense of amusement or disgust excited by the ridiculous or unseemly, provided that humour is a distinctly recognizable element, and that the utterence is invested with literary form. Without humour satire is invective; without literary form it is mere clownish jeering."
ಎಂದು "ಎನ್ಸೈಕ್ಲೊಪಿಡಿಯ' ದಲ್ಲಿ ಹೇಳಿದೆ.

* * * * *

ಇದೋ! ಮೊದಲನೆಯ ಶತಕಾರ್ಧಷಟ್ಪದವು—ಕರ್ಣನಾಟಕ ಪುರಾಣವು!

ಈ ಪುರಾಣವನ್ನು 'ಪಾತಾಳದ ಪ್ರತಿ' ಮತ್ತು 'ಅಟ್ಟದ ಪ್ರತಿ' ಎಂಬ ಎರಡು ಪ್ರತಿಗಳ ಸಹಾಯದಿಂದ ಸಂಪಾದಿಸಲಾಗಿದೆ. 'ಅಟ್ಟದ ಪ್ರತಿ'ಯ ಪಾಠಾಂತರಗಳನ್ನು ಪುಟದಡಿ ಕಾಣಿಸಿದೆ.

ಇಂತು
ಸಿರಿಗನ್ನಡಿಗರ ಡಿಂಗರಿಗರು
"ಗುಪ್ತ ಸಂಪಾದಕಪಂಚಕ."

ಕರ್ಣನಾಟಕ ಪುರಾಣವು

ಅರ್ಥಾತ್

ಸಾಲಂಕೃತ ಶತಕಾರ್ಧ ಷಟ್ಪದವು

ಎಂಬ

ಣತ್ವೋದ್ಧರಣ ಮಹಾಕ್ಷುದ್ರಕಾವ್ಯ ಪ್ರಪಂಚವು

ಪೀಠಿಕಾ ಪ್ರಕರಣವು[1]

ಎಂಬ ಮೊದಲನೆಯ ಗತಿಯು

ಶ್ರೀ ವನಿತೆಯುರಸಸಿಗೆ ಶರಣರ
ದೇವನಗಜಾರಮಣನಿಗೆ ರಾ
ಜೀವಸಂಭವ ವಾಣಿಯಾಣ್ಮಗೆ ಮಣಿವೆ ದಣ್ಣಿಕ್ಕಿ |
ಕಾವಿಯ[2]ದ ಕೆನೆಹಾಲ ಕರೆಯುವ
ಗೋವು ನಾ ಕನ್ನಡದ ಮಧುಪಕೆ
ಹೂವು ನಾಸೀನಾಸೆ ಕನ್ನಡ ತಾಯ ಡಿಂಗರಿಗ ||೧||
[3]ಆರೆ ಷಟ್ಪದಿಗಳಲಿ ಮೂವ
ತ್ತಾರೆ ಪಾದಗಳಲ್ಲಿ ಮಾತ್ರೆಯ
ಮೇರೆ ಮೀರದೆ ಐದಸೂರೆಂಬತ್ತು ನಾಲ್ಕರಲಿ |
ಚಾರು ಕರ್ಣಾಟಕದ ಮಹಿಮೆಯು
ಸಾರವನು ಮುನ್ನಾರುಮರುಹದು
ದಾರ ರೀತಿಯಿನ್ನೈದೆ ಷಟ್ಪದಿಗಳಲಿ ಬಣ್ಣಿಸುತೆ[3] ||೨||

---

[1] ಕವಿಯು ಈ ಪ್ರಕರಣವನ್ನು ತನ್ನ ಸಂಪ್ರದಾಯವಾದ ತ್ರಿಮೂರ್ತಿಗಳ ಸ್ಮರಣೆಯಿಂದ ಪ್ರಾರಂಭಿಸುತ್ತಾನೆ. ಅನಂತರ ಸಂಪ್ರದಾಯಾನುಸಾರವಾಗಿ ೧, ೨, ೩ ಮತ್ತು ೪ನೆಯ ಪದ್ಯಗಳಲ್ಲಿ ಸ್ವಪ್ರಶಂಸೆಯನ್ನು ಪೂರೈಸಿ ೫, ೬, ೭ಗಳಲ್ಲಿ ವಾಚಕ ನಿಂದೆಯನ್ನು ನೆರವೇರಿಸಿ, ೮ನೆಯ ಪದ್ಯದಲ್ಲಿ ಈ ಕಾವ್ಯ ಹುಟ್ಟಿದ ಕಾರಣವನ್ನು ನಿರೂಪಿಸುತ್ತಾನೆ. [2] ಕಾವಿಯ—'ಕಾವ್ಯ'ದ ತದ್ಭವ.

[3] ಶರ (60 ಮಾತ್ರೆ), ಕುಸುಮ (74 ಮಾತ್ರೆ), ಭೋಗ (88 ಮಾತ್ರೆ), ಭಾಮಿನಿ (102 ಮಾತ್ರೆ), ಪರಿವರ್ಧಿನಿ (116 ಮಾತ್ರೆ) ಮತ್ತು ವಾರ್ಧಕ (144 ಮಾತ್ರೆ)—ಹೀಗೆ 6ಏ ಷಟ್ಪದಿಗಳಲ್ಲಿ, 36ಏ ಪಾದಗಳಲ್ಲಿ, 584ಏ ಮಾತ್ರೆಗಳಲ್ಲಿ ಕರ್ಣಾಟಕ ಸ್ತವನಗೆಯ್ದಿರುವ ವಿಶಿಷ್ಟ ಯಶಸ್ಸಿಗೆ ಈ ಮಹಾಕವಿಯು ಮಾತ್ರ ಪಾತ್ರನು. (ಮುಂದೆ ಪದ್ಯ ೯—೧೪ ನೋಡಿ.)

ಬೋಳುಗವಿಗಳ್[1] ಹೂಳಿಸುತೆ ಬಲು
ಗೋಳುಗವಿಗಳ್[2] ಸೀಳಿಸುತೆ ಮೇಣ್
ಕೋಳಿಗವಿಗಳ್[3] ಕಿರಿಚುಸಾಲಗೆ ಹಿಡಿದು ಕೀಳಿಸುತೆ।
[4]ಹಾಳುಗವಿತೆಯ ಕುಕವಿ ಮಾರನ
ಭಾಳಲೋಚನನೆನಿಸಿ ಕವಿನರ
ಪಾಳ ಬಿರುದಿನ ಪುರುಷ ಸರಸತಿ ಪೆಸರಿಸವ ನಾನು[4] ॥೩॥

ಹಾಳು ಕರ್ಣಾಟಕದ ಸ-ಣ ಬಿರು
ಗಾಳಿ ಬೀಸಿತು [5]ನಾಡ ಮುಸುಕಿತು
ಧೂಳು ರೂಪಿನ ಕರಣವಟನಗಳಕಗಳದರಿದರ್[5]।
ಬಾಳು ಮುನ್ನಂತಾಗಲೆಂದಾಂ
ಕೇಳಿರುವ [6]ಕರ್ಣಾಟಕವನಿದೊ
ಪೇಳಲುದ್ಯೋಗಿಸಿದೆನೀ ಶತಕಾರ್ಧಷಟ್ಪದವ ॥೪॥

ಹತ್ತು ವತ್ಸರಕೊಂದು ಪಂಕ್ತಿಯ
ಕೆತ್ತಿ ಮೇಣ್ ಗಡ ಗಳ ವಲಂಗಳ
ಮೆತ್ತಿ ಮಾಡುವ ಸುತ್ತು ಬಳಸಿನ ಧುತ್ತ[7] ನಾನಲ್ಲ।
ಮುತ್ತುಮಾತಿನ ಜಿಡುರಸದ ಸವಿ
ದುತ್ತು ಭಾವಿಸೆ ತಾನೆ ಸತ್ಯದ
ಬಿತ್ತು ವಾಣಿಗೆ ನತ್ತು ನನ್ನೈವತ್ತು ಷಟ್ಪದವು ॥೫॥

---

[1] ಪ್ರಾಸ ಅಲಂಕಾರ ವ್ಯಾಕರಣ ರಹಿತರಾದವರು.

[2] ಕಾವ್ಯರಚನೆಯಿಂದ ದ್ರವ್ಯಸಂಪಾದನೆಯಾಗುವುದಿಲ್ಲವೆಂದು ಗೋಳಾಡುವವರು.

[3] ಕೋಳಿಯು "ಕೊ-ಕ್ಕೊ-ಕ್ಕೋ" ಎಂದು ಕೂಗಿದ್ದನ್ನೇ ಕೂಗುವಂತೆ 'ಹಾಡಿದ್ದೆ ಹಾಡೊ ಕಿಸುಬಾಯ್ದಾಸ" ಮಾಡುವವರು.

[4] 'ಅಟ್ಟದ ಪ್ರತಿ'ಯ ಪಾಠಾಂತರ:

ಭಾಳಲೋಚನನಂತೆ ಕುಕವಿ ಕ।
ಪಾಳವನು ಹಿಡಿದದರಲೇ ಗೋ।
ಪಾಳವೆತ್ತುವ ಪುರುಷ ಸರಸತಿ ಪೆಸರಿನವ ನಾನು॥

[5] ಅನ್ವಯ: "ಕರಣ ಅಟನಗಳ ಅಕಗಳ ಅದರ ಇದರ ರೂಪಿನ ಧೂಳು ನಾಡ ಮುಸುಕಿತು."

[6] ವೈಶಂಪಾಯನನಿಂದಲೋ ವಿದುರನಿಂದಲೋ ಸಂಜಯನಿಂದಲೋ ಕೇಳಿರುವ.

[7] 'ಧೂರ್ತ'ದ ತದ್ಭವ.

ಮುಂಜಿಯೂಟಕೆ ಬಂದು ಮಕ್ಕಳ
ಬಂಜೆ ಕಂಡಂದದಲಿ ಬೆಳಗಿನ
ಸಂಜೆವರಮುಂಡುಂಡು ಕಡೆಗಾ ಮಜ್ಜಿಗನ್ನದಲಿ |
ಗಂಜಿಯಿತ್ತೆಂದೆಂಬ ಸಹಿಸದ
ನಂಜುನಾಲಗೆಯಾತ ಕಬ್ಬದ
ಬಿಂಜವಿದ ತಾ ಮೆಚ್ಚಸೆನಲಾನಂಜಿ ನಿಲಿಸುವೆನೆ ||೬||

ಏನನಾರಾಡಿದಡೆ[1] ನನಗೇ
ನೂನವಿಲ್ಲ ವಿಚಾರಿಸಲು ಮತಿ
ಹೀನರೆಲ್ಲರ ಮರುಳುಮಾತುಗಳಾರ ನಿಲಿಸುವುವು |
ಧೇನು ಕರೆಯದೆ ಹಾಲ ಹುಟ್ಟಿಯ
ಜೇನು ಕಟ್ಟದೆ ನೆಯ್ಯ ಸೊಬಗಿನ
ಸೋನೆ ಸುರಿಯದೆ ನಿಲುಗುಮೇನವರಿವರ ಬಿರುನುಡಿಗೆ ||೭||

ಓದುವವರೋದುವರು ಸಹಿಸದೆ
ಸೀದು ಸಿಡಿಮಿಡಿಗೊಂಡು ನಡುವಣ
ಬೀದಿಯಲಿ ಬೈದಿಡುವವರು ಬೈದಾಡುವರು ಬಿಡೆಲಾ |
[2]ವೇದನಾಲ್ಕರ ಪಿರಿಯ ಬೊಮ್ಮನ
ಮೇದಿನಿಯ ಮೇಲೆತ್ತಿದವನನ
ನಾದಿಮೂರುತಿ ಶಿವನ ನೆನೆಯುತೆ ನುಡಿಯ ತೊಡಗುವೆನು ||೮||

---

[1] 'ಅಟ್ಟದ ಪ್ರತಿ'ಯ ಪಾಠಾಂತರ—"ಏನನಾರೇಳಿದಡೆ."

ಇಲ್ಲಿರುವ ಅನ್ವಯ ಪಲ್ಲಟವನ್ನು ಸರಿಪಡಿಸಿಕೊಂಡರೆ, ಈ 'ಏನನಾರೇಳಿದಡೆ' ಎಂಬುದು 'ಆರನೇನೇಳಿದಡೆ' ಎಂದಾಗುವುದು.

ಇದನ್ನು ಪದಚ್ಛೇದ ಮಾಡಿದರೆ—'ಆರನೇ + ನು + ಏಳಿದಡೆ' ಎಂದಾಗುವುದು. ಅನ್ವಯ ಕ್ರಮವಾಗಿ ಅರ್ಥಮಾಡಿದರೆ—ಆರನೇ = ಆರನ್ನೇ, ನು = ಅವನು (ಅವಳು ಅಲ್ಲ), ಏಳಿದಡೆ = ಏಳೆಂದು ಭಾವಿಸಿದರೆ—ಅರ್ಥಾತ್ ವಿಮರ್ಶಕನು ಆರನ್ನೇ ಏಳೆಂದು ಭಾವಿಸಿದರೆ; ಎಂದರೆ, ಸತ್ಕಾವ್ಯವಾದ ಇದನ್ನು ಅಸತ್ಕಾವ್ಯವೆಂದು ವಿಮರ್ಶಕನು ಭಾವಿಸಿದರೆ ನನಗೇನೂ ಊನವಿಲ್ಲ ಎಂದು ಮುಖ್ಯತಾತ್ಪರ್ಯವು ಹಾಗೂ ಭಾವಾರ್ಥವು.

[2] ಕವಿಯು ಸಂಪ್ರದಾಯದಂತೆ ತ್ರಿಮೂರ್ತಿಗಳನ್ನು ನೆನೆಯುವನು.

ಕರ್ಣಾಟಕ ಸ್ತವನವು[1]

ಎಂಬ ಎರಡನೆಯ ಗತಿಯು

ತುದಿಯ ಕಕಾರದ
ಬದಿಯಲಿ ಣಾವನು
ಚೆದುರದಿ ಮೇಣ್ ಅರ್ಕಾವೊತ್ತೆ
ಪೊದೆದು ಟಕಗಳಿಂ
ದೆದೆಗೊಳಿಸುವುದರ
ಪದವ ಪಿಡಿವೆ ಕ-ಣಾ-ರ್-ಟ-ಕ-ದಾ ||೯||

[2]'ಗ' ವೆ ಮೊದಲು ಗಣಪತಿಗೆ
'ಸ' ವೆ ಮೊದಲು ಸರಸತಿಗೆ
'ಹ' ವೆ ಮೊದಲು ಹರಿಹರರ ಬಲ್ಜೋಡಿಗೆ |
'ಉ' ವೆ ಮೂಲವ್‌ಉಳಿದವರಿಗ್
'ಎ' ವೆ ಮೂಲವ್‌ಎಲ್ಲರಿಗೆ
'ಕ' ವೆ ಮೂಲ ಕರ್ಣಾಟಕಕ್ಕೆ ಅಲ್ತೇ[2] ||೧೦||

---

[1] ಕವಿಯು ಪ್ರಾರಂಭದ ಎರಡನೆಯ ಪದ್ಯದಲ್ಲಿ ಹೇಳಿಕೊಂಡಂತೆ ಇಂತಹ ಅಪೂರ್ವವಾದ ಸ್ತವನಗೈದಿರುವವನು ಇವನೊಬ್ಬನೇ. ಅದರಲ್ಲೂ ಮೊದಲ ಷಟ್ಪದಿಯಲ್ಲಿ ಕರ್ಣಾಟಕ ಮಾತೆಯನ್ನು ವರ್ಣಿಸಿ, ಉಳಿದ ಐದರಲ್ಲಿ ''ಕ-ರ್-ಣಾ-ಟ-ಕ''ದ ಪಂಚಾಂಗಗಳ ಮಹಿಮೆಯನ್ನು ಹಾಡಿದವನೆಂದರೆ ಈ ಪುರುಷ ಸರಸ್ವತಿಯೊಬ್ಬನೆ. ಇವನಂಥವರು ಇನ್ನಿಲ್ಲ. ಅಲ್ಲದೆ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕವೆಂಬ ಆರು ಷಟ್ಪದಿಗಳಿಂದ ಈ ರೀತಿಯ ಗತಿಗೆ ಕಾರಣನಾದವನು ಇವನೊಬ್ಬನೇ.

[2] ಈ ಪದ್ಯದ ಮೊದಲ ಪಂಕ್ತಿಯಲ್ಲಿ ಕವಿಯು ವಿಘ್ನೇಶ್ವರನನ್ನೂ ಎರಡನೆಯದರಲ್ಲಿ ವಿದ್ಯಾಭಿಮಾನಿ ದೇವತೆಯನ್ನೂ ಮೂರನೆಯದರಲ್ಲಿ ಹರಿಹರರ ದ್ವೈತಾದ್ವೈತವನ್ನೂ ನಾಲ್ಕನೆಯದರಲ್ಲಿ ಉಳಿದವರನ್ನೂ ಐದನೆಯದರಲ್ಲಿ ಎಲ್ಲರನ್ನೂ ಸ್ಮರಿಸಿ, ಆ ಆ ಪಂಕ್ತಿಗಳಲ್ಲಿ ಸ್ಮರಿಸಿದವರ ಹೆಸರಿನ ಆದ್ಯಕ್ಷರಗಳನ್ನು ಆ ಆ ಪಂಕ್ತಿಗಳ ಆದಿಯಲ್ಲಿ ಇಡುತ್ತ ಬಂದಿರುವ ಈ ಅಪೂರ್ವ ಚಮತ್ಕಾರವು '' ಆದ್ಯಕ್ಷರನ್ಯಾಸಾಲಂಕಾರ ''ವೆಂಬ ಹೆಸರಿನಿಂದ ಪ್ರಸಿದ್ಧವಾಗಬೇಕಾಗಿದೆ. (ಈ ಕವಿಯು ಇಂತಹ ಅಲಂಕಾರಗಳಿಗೆ ಎತ್ತಿದ ಕೈ. ಇವನ ಇತರ ಅಲಂಕಾರಗಳು—ರಾಸಭಲಾಂಗೂಲಾಲಂಕಾರ, ರಜಕರಹಸ್ಯಾಲಂಕಾರ, ವ್ಯರ್ಥಾಲಂಕಾರ, ತಾಲೀಬುಲಾಕನ್ಯಾಯಾಲಂಕಾರ, ಸತಿಪತಿ ಸಮಾನಸ್ಥಾನಾಲಂಕಾರ, ಸಂದೇಹ ಸಂದೋಹ ಸಂದೇಶಾಲಂಕಾರ, ಇತ್ಯಾದಿ, ಇತ್ಯಾದಿ.)

[1]ಪರುಷ ರೇಫೆ ನತ್ವ ಮುಟ್ಟೆ
ಹರುಷದಿಂದ ಣತ್ವವಾಯ್ತು
ಕರುಣೆಯೋತು ಪೇಳ್ದನಲ್ತೆ ತಾತ ಪಾಣಿನಿ |
ಮರೆತು ಮುತ್ತಿನಂಥ ಮಾತ
ನರರೆ ನತ್ವವನ್ನು ಬಳಸಿ
ನರರು ಪಾಪಿ ಮನುಜರಯ್ಯೊ ಪೋಪರೆಲ್ಲಿಗೆ[1] ||೧೧||

[2]ತರುಣನಾಗಲಿ ಣತ್ವ ತಪ್ಪದು
ತರುಣಿಯಾಗಲಿ ಣತ್ವ ತಪ್ಪದು
ಅರರೆ ಕೇಳಿರೊ ಉರಿವ ಬೆರಣಿಗು ಣತ್ವ ತಪ್ಪದಲಾ |
ಹರಣಗಾವ ಗುರಾಣಿ ಹರಣೇ
ಶ್ವರಿಯ ಹರಣದ ಹರಣದಲಿ ಣಾ
ಮರುಳು ಮಾನವ ಣತ್ವವೇ ಸರ್ವತ್ರಸಾಧನವು[2] ||೧೨||

ಅಕ್ಕರಗಳಲಿ 'ಟ' ವೆಂಬುದೆ ಮುಖ್ಯವು
ನಿಕ್ಕುವಮಿದುವೇ ದಿಟ ಸಟೆಯಲ್ತೆಂ
ತಕ್ಕುಮಿದಿಲ್ಲದೆ ಆಟವು ಊಟವು ಬೇಟವು ಕೂಟವು ತಾವ್[3] |
ತಕ್ಕುದುವದೆ ಕಾರಣದಿಂದೆ 'ಟ' ಯೆಂ
ಬಕ್ಕರಸಾಲಿನ ಕಡೆಯು ಹಿರಿ 'ಣ 'ವ
ನ್ನುಕ್ಕಿಸುವುದು ಕರ್ಣಾಟಕ ರೂಪಿನಲದುವೇ ಸಭ್ಯತೆಯು[3] ||೧೩||

---

[1] ಇಲ್ಲಿ ಕವಿಯು, "ರಷಾಭ್ಯಾಂ ನೋ ಣಃ ಸಮಾನಪದೇ" ಎಂಬ ಪಾಣಿನಿಯ ಪವಿತ್ರ ಸೂತ್ರವನ್ನು ಪರಮಪಾಮರರಿಗೂ ಅರ್ಥವಾಗುವಂತೆ ಹೃದಯಂಗಮವಾಗಿ ತಿಳಿಸಿರುವನು. ರೇಫೆ ಯೆಂಬ ಸ್ಪರ್ಶಮಣಿಯ ಸೋಕಿನಿಂದ ನಕಾರವೆಂಬ ಸಾಮಾನ್ಯಲೋಹವು ಹೇಗೆ ಣಕಾರವೆಂಬ ಚಿನ್ನವಾಗುವುದೆಂಬ ರಹಸ್ಯಕ್ಕೆ ಮನಸೋಲದಿದ್ದರೂ, ಆರನೆಯ ಪಂಕ್ತಿಯ "ಅಯ್ಯೋ" ಎಂಬ ಹೃದಯ ವಿದ್ರಾವಕವಾದ ಕೂಗನ್ನು ಕೇಳಿಯಾದರೂ ನಕಾರವಾದಿಗಳು ತಮ್ಮ "ವಿಶ್ರಂಖಲ ಪ್ರವೃತ್ತಿ"ಯನ್ನು ತೊರೆದು ಭೂತದಯೆ ಪಶ್ಚಾತ್ತಾಪಗಳನ್ನು ಮೆರೆದು ಣಕಾರವಾದಿಗಳಾಗುವರೆಂದು ಕವಿಯ ಹಂಬಲ.

[2] "ಸರ್ವಂ ಣತ್ವಮಯಂ ಜಗತ್" ಎಂಬುದನ್ನು ಕವಿ ಇಲ್ಲಿ ತನ್ನದೇ ತನ್ನದಾದ ರೀತಿ ಯಲ್ಲಿ ಸ್ಪಷ್ಟಗೊಳಿಸಿದ್ದಾನೆ.

[3] ಆಹಾ, ಅಲ್ಲವೆ !

ಬಾಲ ಹೋದರು ಕೊಂಬು ಬಸವಗಿರಬೇಕಯ್ಯ
ಕಾಲು ಹೋದರು ನಡುವು ನೆಟ್ಟಗಿರಲೇ ಬೇಕು
ನಾಲಗೆಗಳಿಲ್ಲದಿದ್ದರು ಬೇಡ ಹಾವುಗಳ್ಗಿರಬೇಕು ವಿಷದ ಹಲ್ಲು |
ಮೇಲು ಕೀಳಾದರೆಯು ಕೀಳು ಮೇಲಾದರೆಯು
ಕಾಲು ತಲೆಯಾದರೆಯು ತಲೆಯು ಕಾಲಾದರೆಯು
ಪಾಲಿಸಲೆ ಬೇಕು ಣತ್ವವ ಕಡೆಯ ಕತ್ವದಿಂದೇನೀಗ [1]ಕತ್ತೆಬಾಲ[1] ||೧೪||

ಣಾಕ ವ್ಯಾವರ್ಣನವು

ಎಂಬ ಮೂರನೆಯ ಗತಿಯು

ಶ್ರೀರಮಣ ಗಿರಿಜಾಮನೋಹರ
ವಾರಿಜೋದ್ಭವರೊಲಿದು ಸಲಹುವ
ಧಾರಿಣಿಯಿದೀಯಿದರ ಮೇಲಿನ ಸಾಲುಸಗ್ಗಗಳು |
[2]ಮೂರರೆಪ್ಪತ್ತೇಳರರುವ
ತ್ತಾರರೈವತ್ತೈದರೊಂಬತು
ನೂರರೆಣಿಕೆ[2]ಯೊಳೆಸೆಯುತಿರ್ಪುವು ಪೇಳಲಸದಳವು ||೧೫||

ಮಿಂಚಿದಪಶಬ್ದಾಕ್ಷರಗಳನೆ
ಹೊಂಚಿ ಹಿಡಿಹಿಡಿದದರ ಕತ್ತ ಕಿ
ವುಂಚಿ ಲೋಕಕೆ ಸತ್ತ ಹೆಣಸದ ಸುಟ್ಟಿ ತೋರುತ್ತೆ |
ಕಿಂಚಿದೀಷದ್ದೋಷವಿರೆ ನಿ
ರ್ವಂಚನೆಯೊಳದ ಖಂಡಿಸುತೆ ರೋ
ಮಾಂಚವಡೆವರು ಪಡೆವರಾ ಸಗ್ಗಗಳಲೊಂದೊಂದ ||೧೬||

---

[1] ಇದನ್ನು ಪಾಮರರು "ಅನ್ನೆಸೆಸರಿ ಅಪೆಂಡೇಜಲಂಕಾರ" ಎನ್ನುವರು. ಸಂಪ್ರದಾಯದಲ್ಲಿ ಇದಕ್ಕೆ "ರಾಸಭಲಾಂಗೂಲಾಲಂಕಾರ" ಅಥವಾ "ರಜಕರಹಸ್ಯಾಲಂಕಾರ" ಎಂದು ಹೆಸರು. 'ರಾಸಭ' ಎಂದರೆ ಕತ್ತೆಗೆ, 'ಲಾಂಗೂಲ' ಎಂದರೆ ಬಾಲವು ಇದ್ದರೆ ಎಷ್ಟು ಭಾರ ಹೊರಬಲ್ಲುದೋ ಇಲ್ಲದಿದ್ದರೂ ಅಷ್ಟೇ ಭಾರ ಹೊರಬಲ್ಲುದು—ಎಂಬ 'ರಹಸ್ಯ' ಎಂದರೆ ಗುಟ್ಟನ್ನು, 'ರಜಕ' ಎಂದರೆ ಅಗಸನು ಹೇಗೆ ಬಲ್ಲನೋ ಹಾಗೆ ಕಸಹಿತವಾದ 'ಕರ್ಣಾಟಕ'ಕ್ಕೆ ಎಷ್ಟು ಗೌರವ ಮರ್ಯಾದೆಗಳುಂಟೋ ಕರಹಿತವಾದ 'ಕರ್ಣಾಟ'ಕ್ಕೂ ಅಷ್ಟೇ ಉಂಟೆಂಬುದನ್ನು ಈ ಮೂಲಕ ಕವಿ ತಿಳಿಸಿದ್ದಾನೆ.

[2] $3 \times 77 \times 66 \times 55 \times 900 = 75,46,77,000$.

ಅನಿತರೊಳಗುತ್ತಮವು ಣಾಕವು
ವಿನುತ ಕರ್ಣಾಟಕದ ಣತ್ವವ
ನೆನಿತೊ ಸಾಹಸದಿಂದೆ ಸಲಹುವ ಣರರ ನಿಲುದಾಣ |
ಮನುಮಥನ ಸಿರಿರೂಪ [1]ನರವಾ
ಹನನ ಮಹದೈಶ್ವರಿಯ[1] ನೆರೆ ವಾ
ಮನನ ವಿಕ್ರಮವೆಲ್ಲವಾಯೆಡೆ ಣತ್ವ ಭಕ್ತರಿಗೆ ||೧೭||

ಣರರು ಣಾಕಾರಾಂಗ ಸುರಸುಂ
ದರರು ಕೈ ಕಾಲ್ ಮೂಗು ಕಣ್ ಕಿವಿ
ಸಿರಿಮೊಗವು ಮರಿಮಿಾಸೆ ಮೈಮನಸುಸಿರುಗಳೆಲ್ಲ |
ಸರುವ ಣತ್ವಪ್ರಸರವೇ ಮೈ
ವೆರೆದ ಣಾಕದ ಣತ್ವಪರಮೇ
ಶ್ವರರ ವಿಭವವ ಪೊಗಳಲಸದಳವಾದಿಶೇಷನಿಗು ||೧೮||

ಣತ್ವಮಣಿಪೀಠದಲಿ ಮಂಡಿಸಿ
ಣತ್ವಪರ್ಯಂಕದಲಿ ನಿದ್ರಿಸಿ
ಣತ್ವಜಲದಲಿ ಮಿಂದು ಣತ್ವಾಭರಣಗಳ ದರಿಸಿ |
ಣತ್ವಪಾನಾನ್ನಗಳ ಸೇವಿಪ
ಣತ್ವಸುಖದ ಮಹತ್ವವದನಾ
ಣತ್ವವೇತ್ತರೆ ಬಲ್ಲರಲ್ಲದೆಯೆಲ್ಲರಿಗೆ ಮೊಗ್ಗೇ ||೧೯||

ಅದುವೆ ಕತದಿಂದೆನ್ನವೊಲು ನೀ
ನಿದಿರುಗೊಂಡು ನಕಾರವಾದಿಗ
ಳೆದೆಯನಪಹರಿಸಿರುವ ಕರ್ನಾಟಕದ ಸತ್ವವನು |
ಕೆದಕಿ ತೊಲಗಿಸಿ ಣವನೆ ನಿಲಿಸಲು
ಪದುಳವಪ್ಪುದು ಕಂದ ಕೇಳೈ
ಕದಲದನುಕರಿಸುವುದು ಣತ್ವೋದ್ಯೋಗ ದಾಯಿಗರ ||೨೦||

---

[1] ಕುಬೇರನು ನಯುತನಾದ 'ನರ'ನನ್ನು 'ವಾಹನ'ಮಾಡಿಕೊಂಡವನಾದುದರಿಂದ, ಅವನಂತೆಯೆ ನಕಾರವಾದಿಗಳನ್ನು ಕೆಳಗಿಕ್ಕಿದ ಣಕಾರವಾದಿಗಳಿಗೂ ನರವಾಹನನ ಮಹದೈಶ್ವರ್ಯ ಬರುವುದರಲ್ಲಿ ಸೋಜಿಗವೇನಿದೆ? (ಇದೇ ಸಂದರ್ಭದಲ್ಲಿ, ನರ-ಣರ, ನಾಕ-ಣಾಕ ಎಂಬ ರೂಪಗಳೊಡನೆ 'ಮಿಾಸೆ-ಮಿಾಶೆ-ಮಿಾಷೆ' ಎಂಬ ಅವಸ್ಥಾತ್ರಯಗಳ ನಾಮಾಂತರಗಳನ್ನೂ ಗಮನಿಸಿರಿ.)

ಣತ್ವ ಪ್ರಾಚೀನತಾಖ್ಯಾನವು

ಎಂಬ ನಾಲ್ಕನೆಯ ಗತಿಯು

[1]ರೂಪ ಕರ್ಣ್ನಾಟಕವೆ ಮೊದಲುಃ ಸು
ರೂಪ ಕರ್ಣ್ಣಾಟಕವೆ ಬಳಿಕಲು
ರೂಪ ಕರ್ಣಾಟಕವೆ ಬಳಕೆಯ ರೂಪಗಳ ರೂಪ |
ಭಾಪು ಕರ್ಣಾಟಾಂಕ ಣತ್ವವ
ಕಾಪಿಡಲು ಪರಮಾತ್ಮನೊಲಿವನು
ಪಾಪಮಯಃ ಕರ್ನಾಟಕವ ತೆಗೆ ತಳ್ಳು ಸೂಕತ್ತ ||೨೧||

ಣತ್ವಯುತ ಕರ್ಣಾಟಕವ ತಾ
ವೊತ್ತರಿಸಿ ನಾವುಗಳು ಬಳಸದ
ಸತ್ವಯುತ ಕರ್ನಾಟಕವ ಹಿಡಿದೆತ್ತಿ ರೂಢಿಸುವ |
ಕುತ್ತವಿದ ಕುಡಿಯಲ್ಲೆ ಕಡಿದು ಮ
ಹತ್ವವೆಮ್ಮದನೆತ್ತಿ ಬೆಳೆಸುವ
ಣತ್ವಶೂರರು ನಾವು ನಮ್ಮದು ನತ್ವವಲ್ಲೆಂದ ||೨೨||

*ಅರಿಯದವನೇ ವ್ಯಾಸ ಪಂಪನು
ಕುರಿಯೆ ವಿನುತ ಕಥಾಸರಿತ್ಸಾ
ಗರದ ಕರ್ತನು ಮೇಣ್ ಬೃಹತ್ಸಂಹಿತೆಯ ಬರೆದವನು |
ಮರುಳರೇ ವಿನ್ನಾಗವರ್ಮರು
ಇರುವರೊಡನಾ ನಾಗಚಂದ್ರನು
ಕುರುಡುಕವಡೆಗು ಕೀಳೆ ಪೇಳಾ ಭಾಗವತದಲ್ಲಿ ||೨೩||

---

[1] ಶಾಸನಗಳಲ್ಲಿ ಕರ್ಣ್ನಾಟಕ, ಕರ್ಣ್ಣಾಟಕ, ಕರ್ಣಾಟಕ ಎಂಬ ಮೂರೂ ರೂಪಗಳು ಕಂಡುಬರುತ್ತವೆ, ತಾನೆ. ಇದನ್ನು ಪುಷ್ಟೀಕರಿಸಿ, ಹಾಗೂ ವಿವರಿಸಿ "ಕರ್ಣನಾಟಕ"ವೆಂಬ ಮೂಲರೂಪವು ಹೇಗೆ "ಕರ್ಣ್ನಾಟಕ"ವಾಯಿತೆಂದೂ, ಅದು ಕಾಲಕ್ರಮೇಣ ಹೇಗೆ "ಕರ್ಣ್ಣಾಟಕ", "ಕರ್ಣಾಟಕ" ರೂಪಗಳಿಗೆ ಬದಲಾಯಿತೆಂದು ಮುಂದಣ ಗತಿಯಲ್ಲಿ ವಿಸ್ತರಿಸಿ, "ಕರ್ನಾಟಕ"ವನ್ನು ಬಳಸಬಾರದೆಂದು ಎಚ್ಚರಿಸುತ್ತಾನೆ.

* ಪದ್ಯಗಳು 23, 24 ಮತ್ತು 25ರ ಪೂರ್ವಾರ್ಧಗಳಲ್ಲಿ ಕವಿಯು ಟವರ್ಗ ಪಂಚಮಾಕ್ಷರ ಘಟಿತವೂ ಮೂರ್ಧನ್ಯಣಕಾರಸಹಿತವೂ ಆದ 'ಕರ್ಣಾಟಕ'ದ ವಿಶ್ವರೂಪದರ್ಶನವನ್ನು ದಯ ಪಾಲಿಸುವ ಅಚ್ಚಾದ ಗ್ರಂಥಗಳನ್ನು ಉಲ್ಲೇಖಿಸಿದ್ದಾನೆ.

ಭವ್ಯ ಜತ್ವಸಯುಕ್ತ ರೂಪವ್ರ
ದಿವ್ಯ ಮಾರ್ಕಂಡೇಯ ಚರಿತದ
ಲವ್ಯಯದ ನವ ದುರುಗಸಿಂಹನ ಕೇಶಿರಾಜರಲಿ।
ಕಾವ್ಯಮೀಮಾಂಸೆಯ ರಚಿಸಿ ಸಂ
ಭಾವ್ಯನಾಗುತೆ ಸಕಲ ಬುಧಜನ
ಸೇವ್ಯವೆನಿಸಿದಖಂಡ ನಾಟಕ ನಾಟಿಕೆಗಳೆರಡ ||೨೪||

ರಚಿಸಿದಾ ವರ ರಾಜಶೇಖರ
ವಚನನಿಚಯದೆ ಕಾಣಲಾಗುವ್ರ
ದುಚಿತವೆನಿಸಿಹ ಜಯುತ ಕರ್ಣಾಟಕದ ಮೂರ್ತಿಗಳ।
[1]ಶುಚಿ ಸದಾಚಾರಿಗಳ ಬಳಕೆಯ
ಖಚಿತ ಪದರೂಪುಗಳ ಕೆಡಿಸಲು
ಪಚನವಪ್ಪುದೆ ಗೈದ ದುಷ್ಕೃತ ದೇವರೊಲಿಯುವನೆ[1] ||೨೫||

ಹಿಂದಣಾ ಪುಸ್ತಕಗಳೆಲ್ಲೆ
ಲ್ಲಿಂದಲೋ[2] ಅಚ್ಚಾಗಿ ಹೊರಬಿ
ದ್ದಿಂದಿಗೂ ಅಚ್ಚಳಿಯದಿವೆ[3] ಸಂದೇಹ ಮೂಡಿದರೆ।
ಕುಂದದೆಯೆ ಕರ್ಣಾಟ ರೂಪೊಂ
ದೊಂದು ಪುಟದಲು ರಾಜಿಸುತ್ತಿಹು
[4]ದೊಂದೆ ಸಾಕ್ಷಿಯು ಸಾಲದೇ ಪಲವೆನಿತರಿಂದೇನು[4] ||೨೬||

---

[1] ಅಚ್ಚು ಕೆಲಸ ಮುಗಿದನಂತರ ಸೋಪು ಹಾಕಿ ಕೈಗಳನ್ನು "ಶುಚಿ"ಮಾಡಿಕೊಳ್ಳುವ "ಸದಾಚಾರ"ವುಳ್ಳವರು "ಬಳಸಿ", ಯಂತ್ರದಲ್ಲಿ ಕಳಚಿಬೀಳದಂತೆ "ಖಚಿತ"ವಾಗಿ ನಿಲ್ಲಿಸಿದ ಪದರೂಪಗಳನ್ನು ಕೆಡಿಸಿದರೆ, ಮಾಡಿದ ಪಾಪ ಅರಗುತ್ತದೆಯೆ? ಅರಗುವುದಿಲ್ಲ; ದೇವರು ಒಲಿಯುವನೆ? ಒಲಿಯುವುದಿಲ್ಲ—ಎಂದು ಭಾವ.

[2] ಎಲ್ಲೆಲ್ಲಿಂದ ಎಂದು ಹೇಳುವುದು ಕಷ್ಟವೆಂದರ್ಥ; ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ, ಕಲ್ಕತ್ತ, ಇಂಗ್ಲೆಂಡು, ಜರ್ಮನಿ, ಅಮೆರಿಕ ಇತ್ಯಾದಿ.

[3] ಅಚ್ಚು ಮೊಳೆಯ ಅಚ್ಚು ಹಾಳಾಗದೆ.

[4] ಇದಕ್ಕೆ "ತಾಲೀಬುಲಾಕುನ್ಯಾಯಾಲಂಕಾರ"ವೆಂದು ಹೆಸರು. ಬುಲಾಕು ಎಂಬ ಒಂದೇ ಸಾಕ್ಷಿಯು ಇದ್ದರೆ, ವ್ಯಕ್ತಿಯೊಂದನ್ನು ಹೆಂಗಸೆಂದು ತಿಳಿಯಲು ಬೇರೆ ಸಾಕ್ಷಿಗಳು ಹೇಗೆ ಬೇಕಿಲ್ಲವೋ; ತಾಲಿಯೆಂಬ ಒಂದೆ ಸಾಕ್ಷಿಯಿದ್ದರೆ, ಆ ಹೆಂಗುಸಿಗೆ ಮದುವೆಯಾಗಿರುವುದನ್ನು ತಿಳಿಯಲು ಹೇಗೆ ಬೇರೆ ಸಾಕ್ಷಿಗಳು ಬೇಕಿಲ್ಲವೋ ಹಾಗೆಯೇ ಇಲ್ಲಿಯೂ ಎಂದು ಗ್ರಹಿಸಬೇಕು.

ಅದ್ರಿಗಳ ತೆರದಿಂದಲೊಪ್ಪುವ
ಮುದ್ರಿಸಿದ ಪುಸ್ತಕದ ರಾಶಿಯು
ನಿದ್ರಿಸದೆ ಕಣ್ಣೊಳಗೆ ಕೈಯೆಣ್ಣೆಯನು ಹಚ್ಚಿರಿಸಿ |
ಶುದ್ಧದೃಷ್ಟಿ ವಿಶುದ್ಧ ಮನಸಿನೊ
ಳಿದ್ದು ಪರಿಕಿಸಲುದ್ಧ ಣತ್ವ ನಿ
ಬದ್ಧ ಕರ್ಣಾಟಕವೆ ಕಂಗೊಳಿಸುವುದು ಕೇಳೆಂದ ||೨೭||

ಏತಕೀ ಮರುಳಾಟವೆಲೆ ನಿನ
ಗೋತು ಪೇಳುವೆನಿಂತು ಕರುಣದಿ
ಪಾತಕವು ಸತ್ವ ಪ್ರಯೋಗವು ಬೇಡ ಬೇಡೆಲವೊ |
ಸೋತು ತಪಿಸಿ ವಿನೀತನಹ ಪಾ
ಪಾತುಮನ ಪೊರೆವಾ ಣಕಾರವು
ಸೇತುವೆಯು ತಾನಿಹಪರಗಳಿಗೆ ಮುಕ್ತಿಮಾರ್ಗದಲಿ ||೨೮||

ಜಂಭವಾತಲ್ಲಿದು ವೃಥಾ ಸಂ
ರಂಭಗೆಯ್ವುದಕೋಸುಗ ಪ್ರಾ
ರಂಭಿಸಿದುದಲ್ಲೆನಗೆ ಕಿವಿಗುಡು ಪೇಳ್ವೆನರೆವಾತ |
ಕುಂಭಿಯಂತೆಯೆ ಕೂಗಿ ಬರಿದೆ ವಿ
ಜೃಂಭಿಸಿದನಿವನೆನ್ನದಿರು ನೆರೆ
ಶಂಭು[1] ನಿನಗೊಲಿಯುವನು ಣತ್ವಕೆ ಶರಣು ಶರಣೆನಲು ||೨೯||

---

[1] ಇಲ್ಲಿ ಈ "ಶಂಭು" ಎಂಬುದು ಸಾಮಾನ್ಯವಾಗಿ ಪ್ರಚಾರವಾಗಿರುವಂತೆ ಕೇವಲ ಶಿವನೆಂಬ ಅರ್ಥದಲ್ಲಿಲ್ಲ.

ಮೊದಲ "ಶ"ಕಾರದಿಂದ ಶರ್ವಾಣೀರಮಣನಾಗಿ ಶಂಕರನಾದ ಪರಶಿವನನ್ನೂ;

ಅನಂತರದ ಬ್ರಹ್ಮಾಂಡದಂತಿರುವ ಅನುಸ್ವಾರದಿಂದ—ತಪಂಡಕ್ಕೆ ಚರಣಾಯುಧಸ್ವರೂಪನಾದ. ಸಾಕ್ಷಾತ್ ಹಿರಣ್ಯಗರ್ಭ ಪರಬ್ರಹ್ಮನನ್ನೂ;

ಕಡೆಯ "ಭು"ಕಾರದಿಂದ—ಭುವನ ಮೋಹಕವಾದ ಮೋಹಿನೀ ರೂಪವನ್ನು ತಾಳಿ, ಭೂದೇವಿಯನ್ನು ಉದ್ಧರಿಸಿ ಭೂಭೃತರನ್ನು ಸಂಹರಿಸಿ, ಸ್ವಯಂ"ಭು"ವಾದ ಶ್ರೀಮನ್ನಾರಾಯಣ ಸ್ವಾಮಿಯನ್ನೂ;

ಈ ಪರಿಯಲ್ಲಿ ತ್ರಿಮೂರ್ತಿಗಳನ್ನೂ ಕವಿಯು ಸ್ಮರಿಸಿದ್ದಾನೆ.

ಕರ್ಣ್ಣಾಟಕ ಸ್ವರೂಪ ವಿವರಣವು

ಎಂಬ ಐದನೆಯ ಗತಿಯು

ತಿಣಿಕುವರು ಫಣಿರಾಯ ರಾಮಾ
ಯಣದ ಗಡಣದಿನಂದು ನೊಂದಂ
ತೆಣಿಕೆಗೆಟುಕದ ವೀರ ಕರ್ಣಾಟಕದ ಗಂಡುಗಳು |
ನ-ಣ ಪರಾಕ್ರಮಿಗಳೆ ವೃಥಾ ಹಗ
ರಣದ ಕರ್ಣಾಟಕದ ತತ್ವವ
ಗಿಣಿಗೆ ಪೇಳ್ವಂದದಲಿ ಪೇಳುವೆನುಚಿತವಚನದಲಿ ||೩೦||

ಮಾರಪಿತ ಸಿರಿರಮಣ ಸಾರಾ
ಸಾರಸಂಗತ ಸಕಲ ಜಗದು
ದ್ಧಾರಕರ್ತನು ಕಪಟನಾಟಕ ಸೂತ್ರಧಾರಿ ಹರಿ |
ಭಾರತದ ಕದನದಲಿ ಗೀತಾ
ಚಾರಿಯನ ನೆವದಿಂದಲಾ ಜಂ
ಭಾರಿಸೂನುವ ಕೆಣಕಿ ಕರ್ಣನ ಕೊಲಿಸಿದಾ ಅಂದು* ||೩೧||

ಪರಮಪುರುಷೋತ್ತಮನು ಪಾರ್ಥನ
ವರವರೂಥವನೆಸಗುತಾ ತಾ
ಮರಸಮಿತ್ರನ ಮಗನ ತೇರಿನ ಬಲದ ಗಾಲಿಯನು |
ತಿರೆಯು ನುಂಗಿರಲಾಗಳೇ ಮುಂ
ಬರಿದು ಪಾರ್ಥನ ಕರೆದನಂತರ
ಮರಿದು ಕರ್ಣನ ಕೊಲಲು ಬೇಗನೆ ಕಣೆಯ ಬಿಸುಡೆಂದ ||೩೨||

---

* ಟವರ್ಗ ಪಂಚಮಾಕ್ಷರಘಟಿತವಾದ ಕರ್ಣಾಟಕ ಶಬ್ದವು ಮಹಾಭಾರತದಲ್ಲಿ ಮೊಟ್ಟ ಮೊದಲು ಕಂಡುಬರುವುದೆಂಬುದು ಈ ಪುರುಷ ಸರಸ್ವತಿಯ ಕಾವ್ಯದಿಂದಲೂ ಪುಷ್ಟೀಕರಿಸಲ್ಪಡುತ್ತಿರುವುದನ್ನು ಗಮನಿಸಬೇಕು.

[ಮಗ್ಗುಲು ಪುಟದ ೩೩ನೆಯ ಪದ್ಯಕ್ಕೆ ಟಿಪ್ಪಣಿ:—ಭಾರತ ಕದನದಲ್ಲಿ ತನ್ನ ಹೂತಗಾಲಿಯನ್ನು ಕರ್ಣನು ಹೆಗಲುಕೊಟ್ಟು ಮೇಲೆತ್ತುವವರೆಗೆ, ಹೂತಗಾಲಿಯನ್ನು ಹೇಗೆ ಮೇಲೆತ್ತಬೇಕೆಂಬುದು ಲೋಕಕ್ಕೆ ತಿಳಿದಿರಲಿಲ್ಲ; ತಮ್ಮ ಹೂತಗಾಲಿಯನ್ನು ರಥಸಮೇತನಾಗಿ ಅಲ್ಲಲ್ಲೆ ಪರಿತ್ಯಾಗಮಾಡುವುದು ಅದುವರೆಗೆ ವಾಡಿಕೆಯಾಗಿತ್ತು. ಕರ್ಣನು ಅಂದು ಕಲಿಸಿಕೊಟ್ಟ ಈ "ಭೂಸಕ್ತಚಕ್ರೋದ್ಧರಣ ವಿದ್ಯೆ"ಯನ್ನು ಇಂದಿಗೂ ನಮ್ಮ ಗ್ರಾಮಾಂತರಗಳಲ್ಲಿ ಕಾಣಬಹುದು. ಇದು ಪ್ರಾಚೀನ ಸಂಸ್ಕೃತಿಯ ಅವಶೇಷ.]

ಹೂತ ಬಲಗಾಲಿಯನು ನೆಲನ ಸ
ಮೇತ ಸೆಳೆದೆಳೆವಸಮು ಸತ್ವೋ
ಪೇತ ರವಿಜನು ಚಕ್ರಕೆಡಹೆಗಲಿಕ್ಕುವುದ ಕಂಡು |
ಗೀತೆಗೊಡೆಯನ ನುಡಿಗಳಿಗೆ ಮನ
ಸೋತ ನರನಿನುಗಣೆಯು ಕರ್ಣನ
ನಾತುಕೊಂಡೊಯ್ದೋಡಿತೊಡನಾ ರಥರಥಾಂಗಗಳ ||೩೩||

ಕೊಂಡುಹೋಯಿತ್ತಿರದೆ ತಾನಾ
ಖಂಡಲನ ಮಗನೆಸೆದ ಕಣೆಯು
ದ್ದಂಡ ಕರ್ಣರ ಚಕ್ರರಥಗಳ ವಿಂಧ್ಯದಿಂದಾಚೆ |
ಗಂಡುಗಲಿಯದ ಕಂಡುಯೆಚ್ಚತು
ಕೊಂಡು ತಾ ನಿಲಲುಜ್ಜುಗಿಸಲೊರು
ಬಂಡೆ ಸಿಕ್ಕಿತು ನದಿಯ ಗೋದಾವರಿಯ ದಂಡೆಯಲಿ ||೩೪||

ಜಟ್ಟಿಗನು ತಾ ಮಲ್ಲವಿದ್ಯೆಯ
ಪಟ್ಟಿನಲಿ ಕೆಳಗಂಡ ಬಂಡೆಯ
ಮೆಟ್ಟಿ ನಿಂತನು *ವಜ್ರಮುಷ್ಟಿಯ ಕಾಲಹಿಡಿತದಲಿ* |
ದಿಟ್ಟ ದಿವಿಜೋತ್ತಮನ ಮಗನೆಸೆ
ದಿಟ್ಟ ಕಣೆ ರವಿಜಾತನನು ಬಿರು
ಬಿಟ್ಟಿತೇ ತೂಳ್ದೊಯ್ದಿತಾ ಕಾವೇರಿ ಹರಿವನಕ ||೩೫||

ಇಂತು ಗೋದಾವರಿಯಿನೆಡದಡ
ಪಿಂತೆ ಕಾವೇರಿಯಿನ ಬಲದಡ
ಮುಂತೆ ತಾನಾದಿಳೆಯು ತನಗಾಕ್ರಾಂತವಾದುದನು |
ಚಿಂತೆಗೊಳ್ಳದೆ ಕಪಟ ನಾಟಕ
ತಂತುಧಾರನ ಬಿಗುರ್ತ ಕಣೆಯ ಸ
ಮಂತು ನೆನೆಯುತೆ 'ಕರ್ಣ ನಾಟಕ'ವೆಂದನಾ ಕರ್ಣ ||೩೬||

---

* ಪುರುಷ ಸರಸ್ವತಿಯ ಪ್ರಕಾರ ಆ ಕಾಲದಲ್ಲಿ ಕೈಮುಷ್ಟಿ, ಕಾಲುಮುಷ್ಟಿ ಎಂದು ಮುಷ್ಟಿಗಳಲ್ಲಿ ಎರಡು ತೆರನಿದ್ದಂತೆ ಕಾಣುತ್ತದೆ. ಹಾಗಾದರೆ, 'ಕಪಿಮುಷ್ಟಿ'ಯೆಂಬುದು ಕೇವಲ ಈಚಿನದಿರಬೇಕು. ಎಂದರೆ—ಮಹಾಭಾರತ ಕಾಲದಲ್ಲಿ ಕಪಿಗಳು ಇದ್ದುವೆ, ಇರಲಿಲ್ಲವೆ? ಇದ್ದರೆ, ಅವುಗಳಿಗೆ ಮುಷ್ಟಿ ಇತ್ತೆ, ಇರಲಿಲ್ಲವೆ? ವಿದ್ವಾಂಸರಿಗೆ ವಿಚಾರಾರ್ಹವಾದ ವಿಷಯವಿದು.

ತನಗೆ ಪಾದಾಕ್ರಾಂತವಾದಾ
ಜನಪದಕೆ ಕರ್ಣ್ಣಾಟಕಾಂಕದ
ಮಿಸುಗು ಮುದ್ರೆಯನೊತ್ತಿ ಸಂಧಿಸಿ ಕರ್ಣ ನಾಟಕವ |
ಕೊನೆಯ ಗಳಿಗೆಯೊಳೊಡೆಯ ದುರಿಯೋ
ಧನನ ಕೈಯೆಡೆ ಮಾಡಿ ದಾಸದ
ಖನಿಯ [1]ಕರ್ಣ್ಣಾಟಕವ ಕಣ್ಮುಚ್ಚಿದನು[1] ಕಲಿಕರ್ಣ ||೩೭||

ಕತೆಯನಿದನರಿತವರು ಬಲುಬಿರು
ವೆತೆಯನಾಂತು ಮಹೋನ್ನತನ ರವಿ
ಸುತನ ಕರ್ಣನನವಗೆ ಕೂರ್ಗಣೆ ನಾಟಿ ನಟ್ಟುದನು |
[2]ಹಿತಮಿತಾ[2]ಕ್ಷರ ಮೂರರಲಿ ಸಂ
ತತವು [3]ನೆನೆನೆನೆದ[3]ದನೆ ತಾವೊ
ಮ್ಮತದೊಳಾತನ ನಾಡಿಗಿಟ್ಟರು ಅದುವೆ ಕರ್ಣ್ಣಾಟ ||೩೮||

ಬಾಯಿ ತಿರುಗದ ಕೆಲರು ಸುಲಭೋ
ಪಾಯ ಚತುರರು ರೂಪಿಗದಕ
ನ್ಯಾಯ ಮಾಡಿಯೆ 'ಣ' ವನೆ ನುಡಿಯಲು ನಕ್ಕೆ ಬದಲಾಗಿ |
ಆಯಿತಾ ಕರ್ಣ್ಣಾಟಕವು ಮೇಲ್
ರಾಯ ಕರ್ಣಾಟಕವು ಬಂದಿತು
ಹೇಯ ಕರ್ನಾಟಕವು ಬರುತಿದೆಯೆಚ್ಚರೆಚ್ಚರಿಕೆ ||೩೯||

---

[1] 'ಅಟ್ಟದ ಪ್ರತಿ'ಯ ಪಾಠಾಂತರ: "ಕರ್ಣಾಟಕದ ಕಣ್ಮುಚ್ಚಿದನು." (ಪೆಟ್ಟಿಗೆಗೆ ಬೀಗ ಹಾಕಿ ಕೈಕೊಂಡವರು ತಾವೇ ಬಂದು ಬೀಗ ತೆಗೆದು ಹೇಗೆ ಪೆಟ್ಟಿಗೆ ಬಿಚ್ಚಬೇಕೋ, ಅದರಂತೆ ಕರ್ಣನು ಕರ್ಣಾಟಕದ ಕಣ್ಣುಚ್ಚಿದುದು ದಿಟವಾದರೆ, ಪುನಃ ದ್ವಾಪರ ಬಂದು, ಕುರುಕ್ಷೇತ್ರ ನಡೆದು, ಕರ್ಣನು ಕಳಕ್ಕಿಳಿಯುವ ವರೆಗೂ ಕರ್ಣಾಟಕದ ಕಣ್ಣು ಮುಚ್ಚಿಯೇ ಇರುವುದೊ?—ಸಂ. ಪಂ.)

[2, 3] ಪಂಪನು ತನ್ನನ್ನು "ಹಿತಮಿತವಚನಂ" ಎಂದು ಕರೆದುಕೊಂಡುದಕ್ಕೂ "ನೆನೆಯದಿರಣ್ಣ ಭಾರತದೊಳಿಂ ಪೆರರಾರುಮಂ" ಎಂದು ಕರ್ಣನನ್ನು ಕೀರ್ತಿಸಿದುದಕ್ಕೂ ಈ ಪದಗಳು ಏನಾದರೂ ಪ್ರೇರಕವಾಗಿರಬಹುದೆ? ಹಾಗಾದರೆ, ಪುರುಷ ಸರಸ್ವತಿಯು ಪಂಪನಿಗಿಂತ ಪ್ರಾಚೀನನಾಗುತ್ತಾನಲ್ಲವೆ? ಎಂದರೆ, ಷಟ್ಪದಿಗಳ ಕಾಲವಾದ ಮೇಲೆ ಚಂಪು ಹುಟ್ಟಿದಂತಾಯಿತಲ್ಲವೆ?—ಎಂದು ಸಂಪಾದಕ ಪಂಚಕದ ಸಂಶಯ.

ಸಾಕ್ಷ್ಯಪ್ರದರ್ಶನವು—ಪ್ರಥಮವು

ಎಂಬ ಆರನೆಯ ಗತಿಯು

ನಂಬು ನನ್ನೀ ನುಡಿಯು ತದ್ಭವ
ಬಿಂಬ ಕನ್ನಡವದರ ಮೂಲ
ಸ್ತಂಭ ಕರ್ಣಾಟಕವು ಸಾಕ್ಷಿಯೆ ಕೇಶಿರಾಜನಲಾ |
ತುಂಬು ಗೋದಾವರಿಯೆ ಮೇಲ್ತಲೆ
ದಿಂಬು ತಾ ಕಾವೇರಿ ಕಾಲ್ಕೆಳ
ಗೆಂಬ ನಡುವಣ ನಾಡೆ ಕನ್ನಡವೆನಸೆ ನೃಪತುಂಗ ||೪೦||

[1]ವಿಾಶೆವೊತ್ತನವೋಘವರ್ಷನ
ರೇಶ ನೃಪತುಂಗಾಖ್ಯ ತಾನವಿ
ನಾಶಿಯಾತನ ಮಾತಿಗೆದುರೆದ್ದಾರ್ಪರಾರುಂಟು[1] |
ಕೇಶಿರಾಜ ವ್ಯಾಕರಣದಾ
ಕಾಶದೊಳು ಖರಕಿರಣ ನುಡುವನು
ಲೇಶ ಸಂದೆಗವಿಲ್ಲವವನಾಡಿದುದನಲ್ಲೆನಲು ||೪೧||

ನರ ನಕಾರದ ಮುರುವ ನಿನಗೇ
ನರಿವೊ ನೀನುದ್ದಾಮ ವೈಯಾ
ಕರಣ ಕೇಶಿಯ ಸರಿಸಮಾನಸ್ಕಂಥನಾದೆಯಲ |
ತಿರುಗುಮುರುಗಾದರು ಕಣಾ ನಿ
ನ್ನಿರಿರು ನಿನ್ನಂತಹರು ಕೇಶಿಯ
[2]ಗರುಡಿಯಾಳ್ಗಳ ಮುಂದೆ ಕಿರುಗೂಸುಗಳು [2]ತೆಗೆಯೆಂದ ||೪೨||

---

1 ಮೋಶವೆತ್ತನ ವಿಾಘವಸ್ರನ
ರೇಶನ ಪತಂಗಾಖ್ಯತಾನ ವಿ
ನಾಶಿಯಾತನ . . . . . (ಎಂದು 'ಅಟ್ಟದ ಪ್ರತಿ.')

(ಇದಕ್ಕೆ ಅರ್ಥವಾಗುವುದಿಲ್ಲ. ಕನ್ನಡದಂತೆ ಕಂಡರೂ ಕನ್ನಡದಂತೆ ಅರ್ಥವಾಗದ ಈ ಭಾಷೆ ಕೂಡ ಕಾವ್ಯದ ಪ್ರಾಚೀನತೆಯನ್ನು ತೋರಿಸುತ್ತದೆಯಲ್ಲವೆ? ಹಿಂದಿನ ಪುಟದ ಟಿಪ್ಪಣಿ 2, 3 ನೋಡಿ.—ಸಂ. ಪಂ.)

2 "ಕರಡಿಯಾಳ್ಗಳ ಮುಂದೆ ಕುರಿಕೂಸುಗಳು."—'ಅಟ್ಟದ ಪ್ರತಿ.'

ಸಡಿ ಫಡಾ ನರಕೀಟ ನಡನಡ
ನಡುಗು ಕೇಳದೊ ವೀರ ಕೇಶಿಯು
ಗುಡುಗು ಕಿವಿಗುಡು ಪಾಣಿನಿಗೆ ಭಟ್ಟಾಕಲಂಕರಿಗೆ।
ಹುಡುಗತನವನು ತೊರೆದು ತೆಗೆದಿಡು
ಮಡಗು ಮೂಲೆಗೆ ಹುಲು ನಕಾರವ
ತುಡು ಟವರ್ಗದ ಪಂಚಮಾಕ್ಷರ ವಜ್ರಕವಚವನು ||೪೩||

ಸಾಕ್ಷ್ಯಪ್ರದರ್ಶನವು—ದ್ವಿತೀಯವು

ಎಂಬ ಏಳನೆಯ ಗತಿಯು

ಸಾಲದೈ ಈಯೊಂದೆ ಸಾಕ್ಷಿಯು
ಗಾಲಿಯೊಂದರ ತೇರು ದೊಡ್ಡದು
ವಾಲಿಕೊಂಡುರುಳುವುದು ತೇಲದು ಜಲದ ನಾವೆಯೊಲು।
[1]ಸಾಲುಸಾಕ್ಷಿಯನೆಳೆದು ಸೇರಿಸಿ
ಕೀಲಿಸುವ ಹಗರಣವಿದೇಕೀ[1]
ಮೇಲುಸಾಕ್ಷಿಯಿದೊಂದೆ ಸಾಲದೆ ಬರಿದೆ ಬಹುವೇಕೆ ||೪೪||

[2]ಮಾನಧನನನು ಕಾಂಬನಕ ಬರಿ
ಮಿಾನಿನಿಂದಲೆ ಬಳೆದನಾ ಕಾ
ನೀನ ಕುಂತಿಯ ಮಗನ ಗಂಗೆಯು ಕೈಯು ಕಾದವನ।
ಏನ ಪೇಳುವೆನಿನತನೂಜನ
ಭಾನುವಂಶ ಲಲಾಮ ರವಿಜನ
ನೂನದಾನಿಯ ಹಜ್ಜೆ ಹಿಂದಣ ಕರ್ಣನಾಟಕರ[2] ||೪೫||

---

[1] (ಸಾಲಿನ ಬಹುಧಾನ್ಯ ಸಂವತ್ಸರದ ಆಷಾಢ—ಭಾದ್ರಪದದ 'ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ'ಯಲ್ಲಿ "ಸಾಲುಸಾಕ್ಷಿಯನೆಳೆದು ಸೇರಿಸಿ ಕೀಲಿಸುವ ಹಗರಣದ" ಸುದೀರ್ಘ ಲೇಖವನ್ನು ಬರೆದಿರುವ ಶ್ರೀ. ಜಿ. ಪಿ. ರಾಜರತ್ನಂ, ಎಂ.ಎ. ಎಂಬವರಿಗೆ ಈ ಭಾಗ ಅನ್ವಯಿಸುವುದು ಪರಮಾಶ್ಚರ್ಯ. ಹೀಗೆ ಮುಂದಾಗುವುದನ್ನು ಅಂದೇ ತಿಳಿಸಿದ ಪ್ರಾಚೀನನಾದ ಪುರುಷ ಸರಸ್ವತಿಯ ಈ ಕಾವ್ಯವು ಬಹುಶಃ ಭವಿಷ್ಯತ್ಪುರಾಣದಿಂದ ಬಹಿರ್ಗತವಾದ ಭಾಗವಿರಬಹುದೆಂದು ತೋರುತ್ತದೆ.—ಸಂ. ಪಂ.)

[2] ಕೇವಲ 'ಕರ್ಣ'ನೆಂಬುದನ್ನು 'ಮಾನಧನನನು ಕಾಂಬನಕ ಬರಿ ಮಿಾನಿನಿಂದಲೆ ಬಳೆದನು' ಮುಂತಾದ ಅನೇಕ ಪದಗಳಿಂದ ವ್ಯರ್ಥವಾಗಿ ವರ್ಣಿಸಿರುವುದರಿಂದ ಇದರಲ್ಲಿ "ವ್ಯರ್ಥಾಲಂಕಾರ"ವುಂಟು.

ಜನರು ಕರ್ಣಾಟಕದವರು ಬಲು
ಘನರು ದಾನದ ದೃಢದ ಪದ್ಮಾ
ಸನರು ಪರಹಿತಕಾಗಿ ಜೀವವ ತೇದು ವಾಮನರು |
ವಿನಯದಿಂದ್ದೈತರಲಿ ಮೇಣ್ಕಾಡು
ಮುನಿಸಿನಿಂದಲೆ ಬರಲಿ ಕರೆದೊಳ
ಮನೆಯ ಸರುವಸ್ವವನು ಸುರಿವರು ಕರ್ಣನಾಟಕರು ||೪೬||

ಕರೆದು ತಣಿಯರು ಕೊಟ್ಟು ತಣಿಯರು
ಸುರಿದು ಸೂರೆಯನಿಟ್ಟು ತಣಿಯರು
ಹರಿದು ತಮ್ಮದ ಹಂಚಿ ತಣಿಯರು ನಾಡನಿತರರಿಗೆ |
ಮರೆದು ತಣಿಯರು ನುಡಿಯ ತಮ್ಮದ
ಮೊರೆದು ತಣಿಯರು ನುಡಿಯ ಪರರದ
ಸರಿದು ತಣಿಯರು ತಮ್ಮ ಜೀವವ ಪೆರರ ಬೆಳೆಗಾಗಿ ||೪೭||

ಕನಸುಮಾತ್ರಲ್ಲಿದು ಕಣಾ ತಮ
ಗಿನಿಸನೂ ತಾವಿರಿಸಿಕೊಳ್ಳದೆ
ಪನಸು ಪಣ್ತಾಂದದಲಿ ಬೀಯಕೆ ತವರೆ ತಾವಾಗಿ |
ಮನೆಯ ಮಕ್ಕಳ ಪರಿವೆಯನು ಮರೆ
ವೆನಿತೊ ದೂರದ ಜನರ ಮನವೋ
ಹಸರು ಗರುವದ ವರದ ಬಿರುದಿನ ವೀರದಾನಿಗಳು ||೪೮||

ಕಾಡುಪಾಲಾದರೆಯು ಸರಿ ನಾ
ಬೇಡಿ ಬೇಡಿದವರ್ಗೆಯದನೇ
ತೋಡಿ ಕೊಡುವೆನು ತಪ್ಪದೀ ನುಡಿಯೆಂದ ಕರ್ಣನನು |
ನಾಡೆ ಹಿಡಿದಾ [1]ಕುರಿಯು[1] ಹಿಂದಣ
ನಾಡ ಕರ್ಣಾಟಕದ [2]ಮಂದೆಯು[2]
ನೋಡಿಯಾದರು ನಂಬಬಾರದೆ ನನ್ನ ನುಡಿಯಿದನು ||೪೯||

---

[1] ಹರಿಯು.

[2] ಹಂದಿಯು—' ಅಟ್ಟದ ಪ್ರತಿ.'

ಕಾವ್ಯ ಸಮಾಪನವು

ಎಂಬ ಕಡೆಯ ಗತಿಯು

ಶಾಂತವಾಗಲಿ ನಮ್ಮ ಜನ ಸಿರಿ
ಕಾಂತನೊಲಿಯಲಿ ನೆಲಸಿ ನಿಲಲಿ ನಿ
ತಾಂತವೀ ಕರ್ಣಾಟಕವು ಸಹಣತ್ವವಾಗಿಯೆ ತಾ |
ಕ್ರಾಂತಿಕಾರಕನಲ್ಲ ನಾ ವಿ
ಭ್ರಾಂತಿಗೊಂಡವನಲ್ಲಲಾ ವಿ
ಶ್ರಾಂತಿಗೊಳುವೆನು ಮುಗಿಯಿತೀ ಶತಕಾರ್ಧ ಷಟ್ಪದವು[1] ||೫೦||

ಭರತವಾಕ್ಯವು

(ಲಿಪಿಕಾರನು ರಚಿಸಿದುದು)

ಕಂ|| ಜಯಮಕ್ಕೆ ಣವರ್ಣಕ್ಕಂ
ಜಯಮಕ್ಕೆ ಣವರ್ಣಯುಕ್ತ ಕರ್ಣಾಟಕಕಂ |
ಜಯ ಜಯ ಣತ್ವಾತ್ಮರ್ಗಂ
ಜಯಮಾಗುಗೆ ಣನೆ ಬರೆವ ಸಕಲ ಜನಕ್ಕಂ ||

ಪುರುಷ ಸರಸ್ವತಿಯ ಶತಕಾರ್ಧ ಷಟ್ಪದಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ

[1] (ಮಹಾ ಕವಿಯೆನಿಸಿದ ಪುರುಷ ಸರಸ್ವತಿಯು ''ಶತಕಾರ್ಧ ಷಟ್ಪದ''ಗಳನ್ನು ಬರೆಯ ತೊಡಗಿ, ಅವುಗಳನ್ನು ಕಡೆಯಪಕ್ಷ ''ತ್ರಿಪಾದ ಷಟ್ಪದ''ಗಳಾಗಿಯಾದರೂ ಮುಗಿಸದೆ, ಕೇವಲ 50ಏ ಷಟ್ಪದಿಗಳಲ್ಲಿ ಮುಗಿಸಿ ಸತ್ಸಂಪ್ರದಾಯವನ್ನು ಏಕೆ ಮುರಿದನೆಂಬುದು ಇನ್ನೂ ನಮಗೆ ಸಮರ್ಪಕವಾಗಿ ಬಗೆಹರಿದಿಲ್ಲ.—ಸಂ. ಪಂ.)

ಸಂದೇಹ ಸಂದೋಹ ಸಂದೇಶವು

ಶತಕಾರ್ಧತ್ರಯವನ್ನು ರಚಿಸಿದ ಮಹಾಕವಿ ಪುರುಷ ಸರಸ್ವತಿಯ
ಒಂದು ಸಂಪೂರ್ಣವಾದ ಅಸಂಪೂರ್ಣ ಗ್ರಂಥ

ಶ್ರೀವನಿತೆಯರಸನಿಗೆ ತನ್ನಾತ್ಮಜೆಯನಿತ್ತ
ಮಾವನ್ಸೈಕಿಲುಮೆಟ್ಟನಳಿಯನಿಗೆ ಮೇಣುಮಾ
ದೇವಿಯರಸನ ಮೈಯ ನಟ್ಟ ನಡುವಣ ನಾಭಿಯಿಂದೆದ್ದ ಕಮಲಜನಿಗೆ[1]
ಸೇವಕನು ನಾ ಮಣಿಯುತೆನ್ನ ಕರಶಿರಗಳಿಂ
ದಾವರಿಸಿ ಮೂವರವರಾರಡಿಗಳನು ಕುಣಿವ
ಸೇವ್ರರವನನುಕರಿಸಿ ನುಡಿವೆನೀ "ಸಂದೇಹ ಸಂದೋಹ ಸಂದೇಶ"ವ

ಆಲಿಸಾದೊಡೆ ಮುನ್ನ ಕಡೆದ ಕಡಲಿನ ಘೋರ
ಹಾಲಾಹಲವ ನೊಣೆದ ನಂಜುಗೊರಲನ ಕೊರಲ
ನೋಲೈಸಿ ನೆಲಸಿದ ಕರೋಟಿಮಾಲೆಯವೋಲು ಚಕ್ರಧರನಾಯುಧದಲಿ
ಸಾಲುನೆಲಸಿದ ಹಲ್ಲುಗಳ ಪಿತಾಮಹನ ನೆರೆ
ಜೋಲುಗಡ್ಡದ ದಟ್ಟಗೂದಲಿನ ಸರಿಸಮದ
ಜಾಲವಾಗಿಪ್ಪುದೀ "ಸಂದೇಹ ಸಂದೋಹ ಸಂದೇಶ" ಸತ್ಕೃತಿಯಿದು

ಒಂದೆ ಸಂದೆಗವೆನಗೆ ಭಾಮಿನಿಯಿನೀರೇಳು
ಛಂದದನುಭವದ ನುಡಿ ಜೋಡಿಯಿನಾರೈದರೊಡ
ನೊಂದುವುದೊ ಪೊಂದದೋ ಸಾರ್ಥಕವು ಭಾಮಿನಿಗೆ ಮೇಳ ಬರುವುದೊ ಬಾರದೋ
ಮುಂದೆ ಮಾತೇಕಣ್ಣ ಮುಟ್ಟಿದುದು ಮೂರು ನೂ
ಱಿಂದ ಮಾತಿಗೆ ಸಾಕು ಮೂರೆ ಷಟ್ಪದ ನನಗೆ
ಚೆಂದ ಕಾಣದು ಮುಗಿಯಿತಿಲ್ಲಿಗೀ "ಸಂದೇಹ ಸಂದೋಹ ಸಂದೇಶ"ವು

---

[1] ಈ ಪೂರ್ವಾರ್ಧದಲ್ಲಿ ಕವಿಯು "ಕಾವ್ಯಸ್ವರೂಪ ಸೂಚನಾಲಂಕಾರ"ವೆಂಬ ಅಲಂಕಾರವನ್ನು ಪ್ರಯೋಗಿಸಿದ್ದಾನೆ. ಎರಡನೆಯ ಪದ್ಯದಲ್ಲಿ ಸೂಚಿಸಿರುವಂತೆ ಈ ಸಂದೇಹ ಸಂದೋಹವು ನಿರುಪಮವಾದ ಜಾಲ ತಾನೆ! ಕಾವ್ಯವು ಪ್ರಾರಂಭದಲ್ಲಿಯೇ ಸಂದೇಹಗಳಿಂದ ಮೊದಲಾಗುತ್ತದೆ. 'ಮಾವನ್ಸೈಕಿಲುಮೆಟ್ಟನಳಿಯ'ನಾದ ಶಿವನು 'ಶ್ರೀವನಿತೆಯರಸ'ನಾದ ವಿಷ್ಣುವಿಗೆ ತನ್ನಾತ್ಮಜೆಯನ್ನು ಯಾವಾಗ ಇತ್ತ? ಅವನ ಆತ್ಮಜೆ ತಾನೆ ಯಾರು? 'ಮೇಣ್', ಉಮಾದೇವಿಯರಸನಾದ ಪರಶಿವನ ಮೈಯ ನಟ್ಟನಡುವಣ ನಾಭಿಯಿಂದೆದ್ದ ಕಮಲಜನಾರು?—ಎಂದು ತನ್ನ ತ್ರಿಮೂರ್ತಿಗಳನ್ನು ಸ್ಮರಿಸುವ ವ್ಯಾಜದಿಂದ ಇಲ್ಲದ ಸಂದೇಹಗಳಿಗೆ ಎಡೆಮಾಡಿ ಚಮತ್ಕಾರಮಾಡಿದ್ದಾನೆ.

ಕಾವ್ಯಾವಲೋಕನ

ಧರ್ಮಜ್ಯೋತಿ (ವಿಚಾರಪ್ರಚೋದಕ ನಾಟಕ)—ಲೇಖಕರು : ಶ್ರೀಮಾನ್ ಮಂ. ಅ. ದೊರೆಸ್ವಾಮಿ ಅಯ್ಯಂಗಾರ್; ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ; ಕ್ರೌನ್ ಅ. ೨೦೫; ಬೆಲೆ, ರೂ. ೧—೪—೦.

ನಿರಂಕುಶ ರಾಷ್ಟ್ರೀಯತೆ, ನಿರಂಕುಶ ಐಶ್ವರ್ಯ, ನಿರಂಕುಶ ವಿಜ್ಞಾನ ಇವುಗಳಿಂದ ನಿರ್ಮಿತವಾದ ಈಗಿನ ನಾಗರಿಕತೆಯು ದಾನವರ ತ್ರಿಪುರದಂತೆ ತನ್ನ ಒಳಗಿನ ಬೆಂಕಿಯಿಂದಲೇ ಹತ್ತಿ ಉರಿದುಹೋಗುತ್ತಿದೆ. ಈ ದೃಶ್ಯದ ಒಳಮರ್ಮವನ್ನು ದೇವದಾನವರ ಕಲಹ ರೂಪದಲ್ಲಿಯೂ, ಋಷಿಗಳ ಸಂವಾದ ರೂಪದಲ್ಲಿಯೂ ಅಪೂರ್ವ ಪ್ರತಿಭೆಯಿಂದ ಶ್ರೀಮಾನ್ ದೊರೆಸ್ವಾಮಿ ಅಯ್ಯಂಗಾರ್ ಅವರು ತಮ್ಮ 'ತ್ರಿಪುರದಹನ'ವೆಂಬ ಗ್ರಂಥದಲ್ಲಿ ಚಿತ್ರಿಸಿ ಈಗಾಗಲೇ ಪ್ರಸಿದ್ಧರಾಗಿದ್ದಾರೆ. ಈಗ ವಿಮರ್ಶೆಗೆ ಬಂದಿರುವ 'ಧರ್ಮಜ್ಯೋತಿ' ಎಂಬ ಗ್ರಂಥವು ಅವರ ವಿಚಾರ ಸರಣಿಯನ್ನು ಮುಂದುವರಿಸುವುದಾಗಿದೆ.

ನಾಗರಿಕತೆಯು ಈಗ ಸಂಭವಿಸಿರುವ ವಿಷಮಪರಿಸ್ಥಿತಿಯನ್ನು ಎದುರಿಸಿ ಆತ್ಮೋದ್ಧಾರವನ್ನು ಪಡೆಯಬೇಕಾದರೆ ಯಾವ ಸೂತ್ರಗಳನ್ನು ಹಿಡಿಯಬೇಕು—ಎಂಬ ವಿಚಾರವು ಪ್ರಪಂಚದ ಮೇಧಾವಿಗಳೆಲ್ಲರನ್ನೂ ಬಾಧಿಸುತ್ತಿದೆ. ಸಾವಿರಾರು ಗ್ರಂಥಗಳು ಹತ್ತಾರು ದಾರಿಗಳನ್ನು ತೋರುತ್ತಿವೆ. ಇವುಗಳಲ್ಲಿ ಮುಖ್ಯವಾದವುಗಳು ಮಾನವನ ಪುರಾತನ ಮತಧರ್ಮಗಳ ಸಾರವನ್ನೂ, ಮೋಕ್ಷಮಾರ್ಗವೆಂದು ಪ್ರಸಿದ್ಧವಾಗಿರುವ ಪಂಥವನ್ನೂ ಎತ್ತಿಹಿಡಿಯುತ್ತಿವೆ. ಆದರೆ ಈಗ ಮತಧರ್ಮಗಳು ತಮ್ಮ ಉದಾತ್ತವಾದ ಧ್ಯೇಯಗಳನ್ನೂ ಕಲ್ಯಾಣ ಲಕ್ಷಣಗಳನ್ನೂ ಹೊರಸೂಸುತ್ತಿಲ್ಲ; ಈಗಿನ ಮಾನವನ ಸಂಕಟಗಳಿಗೆ ಮದ್ದನ್ನು ತಂದೊದಗಿಸುತ್ತಿಲ್ಲ. ಇದಕ್ಕೆ ಪ್ರತಿಯಾಗಿ ಅನೇಕ ವೇಳೆ ಹೊಸ ವಿಷಗಳನ್ನೇ ಏರ್ಪಡಿಸುತ್ತಿರುವಂತೆ ತೋರುವುವು. ಇದಕ್ಕೆ ಕಾರಣವೇನು? ಮತಗಳಲ್ಲಿ ಜೀವಕಳೆಯಿರುವ ಅಂಶವೆಷ್ಟು? ನಿರರ್ಥಕವಾದ ಅಂಶವೆಷ್ಟು? ಮತವನ್ನು ಈ ರೀತಿ ಒರೆಹಚ್ಚಿ ನೋಡುವ ವಿಚಾರವು ಯೂರೋಪಿನಲ್ಲಿ ಕಳೆದ ಶತಮಾನದಲ್ಲಿ ಬಹಳ ಸಮಗ್ರವಾಗಿ ನಡೆಯಿತು. ಫಲಿತಾಂಶದಲ್ಲಿ ಕೆಲವರು ಮತವನ್ನು ಸಂಪೂರ್ಣವಾಗಿ ತ್ಯಜಿಸಿ ನಿರೀಶ್ವರವಾದಿಗಳಾದರು; ಮತ್ತೆ ಕೆಲವರು ಮತದ ಸಾರವನ್ನು ಮಾತ್ರ ಒಪ್ಪಿ, ಪ್ರಪಂಚಾತೀತವಾದ ಪರವಸ್ತುವನ್ನು ಬಿಟ್ಟು, ಮಾನವನ ಅನುಭವಸೀಮೆಯಲ್ಲಿ ಪುರುಷಾರ್ಥಗಳ ದಿವ್ಯಮಂದಿರವನ್ನು

ರಚಿಸಲು ಯತ್ನಪಟ್ಟರು. 'ಧರ್ಮಜ್ಯೋತಿ'ಯು ಎರಡನೆಯ ಮಾರ್ಗವನ್ನು ಅನುಸರಿಸಿದೆ.

'ಧರ್ಮಜ್ಯೋತಿ'ಯು ನಾಟಕ ವೇಷಧಾರಿಯಾದ ಜಿಜ್ಞಾಸಾ ಗ್ರಂಥ. ಆದರೂ ಈ ಗ್ರಂಥದಲ್ಲಿಯೂ ಈ ಮೊದಲೇ ಪ್ರಕಟವಾಗಿರುವ 'ತ್ರಿಪುರದಹನ'ದಲ್ಲಿಯೂ ಕಂಡುಬರುವ ಗ್ರಂಥಕರ್ತರ ಸಂವಾದರಚನಾನಿಪುಣತೆಯನ್ನೂ ಪಾತ್ರಪ್ರತಿಪಾದನ ಕೌಶಲವನ್ನೂ ನೋಡಿದರೆ, ಇವರು ಕಲಾದೃಷ್ಟಿಯಿಂದ ನಾಟಕವನ್ನೋ ಕಾದಂಬರಿಯನ್ನೋ ಏಕೆ ಬರೆಯಬಾರದು ಎಂಬ ಪ್ರಶ್ನೆ ಮನಸ್ಸನ್ನು ಆಕ್ರಮಿಸುತ್ತದೆ.

'ಧರ್ಮಜ್ಯೋತಿ'ಯಲ್ಲಿ ನಮ್ಮ ದೇಶದ ಒಬ್ಬ ಜಹಗೀರುದಾರರ ಕುಟುಂಬದವರೂ ನಂಟರಿಷ್ಟರೂ ಪಾತ್ರಗಳಾಗಿ ಬರುತ್ತಾರೆ. ಇವರು ಈಗಿನ ನವನಾಗರಿಕತೆಯ ಪ್ರಭಾವಕ್ಕೆ ಸಿಕ್ಕಿರುವ ವ್ಯಕ್ತಿಗಳು. ದರಿದ್ರನಾರಾಯಣ ಸೇವೆ, ಸಮುದಾಯ ಸ್ವಾಮ್ಯ (*Socialism*), ದೀನರ ಸ್ಥಿತಿ, ಅಧಿಕಾರದವರ ದರ್ಪ, ಅಸ್ಪೃಶ್ಯರ ಸಮಸ್ಯೆ, ಮತಕಲಹ, ಇತ್ಯಾದಿ ಸಮಸ್ಯೆಗಳನ್ನು ಒಳಕೊಂಡು ಇವರುಗಳ ಜೀವನ ಚಿತ್ರವು ಬಹಳ ಹೃದಯಂಗಮವಾಗಿ, ಸ್ವಾಭಾವಿಕವಾಗಿ, ಓದುಗರ ಮನಸ್ಸಿನ ಮುಂದೆ ಭಾವಪೂರ್ವಕವಾಗಿ ನಲಿದಾಡುತ್ತದೆ.

ಈ ಗ್ರಂಥದ ಎರಡನೆಯ ಅಧ್ಯಾಯದಲ್ಲಿ ಮತಧರ್ಮಗಳ ಸಾರವು ಸಂವಾದ ರೂಪದಲ್ಲಿ ಸಮಗ್ರವಾಗಿ, ತೃಪ್ತಿಕರವಾಗಿ ಪ್ರತಿಪಾದಿತವಾಗಿದೆ. ಜಹಗೀರುದಾರರಾದ ಕೇಶವರಾಯರು ಆಧುನಿಕ ದೃಷ್ಟಿಯನ್ನೂ, ಶ್ರೀಧರಾಚಾರ್ಯರು ಸಂಪ್ರದಾಯ ಸಂಪತ್ತಿಯನ್ನೂ ಉಚಿತವಾಗಿ ಎತ್ತಿಹಿಡಿದು ವಾದಿಸುತ್ತಾರೆ. ಇವೆರಡರ ಬಲಾಬಲಗಳು ತೃಪ್ತಿಕರವಾಗಿ ಎದ್ದು ನಿಲ್ಲುತ್ತವೆ. ಇಲ್ಲಿ ಆರ್ಯ ಧರ್ಮದ ಮೂಲ ತತ್ವಗಳನ್ನು ಹೇಗೆ ಅಂಗೀಕರಿಸಿ, ಅವುಗಳ ಸಹಾಯದಿಂದ ನವೀನ ಸಮಸ್ಯೆಗಳನ್ನು ಹರಿಸಿ ಜೀವನವನ್ನು ಮತ್ತೆ ಪಾವನಮಾಡಿಕೊಳ್ಳಬಹುದು ? ಸಮಾಜೋದ್ಧಾರ ಕಾರ್ಯಗಳನ್ನು ಹೇಗೆ ಸ್ಫೂರ್ತಿಗೊಳಿಸಬಹುದು?—ಎಂಬ ವಿಷಯವು ಬಹಳ ಸ್ಪಷ್ಟವಾಗಿ ಸಂವಾದ ರೂಪದಲ್ಲಿ ಹೊರಬೀಳುತ್ತದೆ. ಈ ಕಾರ್ಯವು ವಿಚಾರ ರಾಜ್ಯದಲ್ಲಿ ಈ ಒಂದು ಶತಮಾನದಿಂದ ರಾಜಾ ರಾಮಮೋಹನರಾಯರ ಕಾಲದಿಂದಲೂ ಅವಿಚ್ಛಿನ್ನವಾಗಿ ಅನೇಕ ಮಾರ್ಗಗಳಲ್ಲಿ ನಡೆಯುತ್ತ ಬಂದಿದೆ. ಈ ಅಧ್ಯಾಯವು ಭಾರತದ ನವೀನ ತರಂಗಗಳ ಸಮಷ್ಟಿ ದೃಶ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಲ್ಲದೆ, ಹಿಂದೂಸ್ಥಾನದ ಆರ್ಯಧರ್ಮಗಳ ವಿಷಯವಾಗಿ ಅನೇಕ ಹೊಸ ಗ್ರಂಥಗಳು ಹೊರಬಿದ್ದಿವೆ. ಆದರೆ, ನನ್ನ ದೃಷ್ಟಿಗೆ ಬಂದಂತೆ ಯಾವುದೂ 'ಧರ್ಮಜ್ಯೋತಿ'ಯಷ್ಟು ಸಮಗ್ರವಾಗಿಯೂ, ಆರ್ಯಧರ್ಮದ ಸಂಸ್ಕೃತಿಯ ವಾತಾವರಣವನ್ನು ಪ್ರತಿಬಿಂಬಿಸುವುದಾಗಿಯೂ,

ಸಂಪ್ರದಾಯದ ಒಳಗುಟ್ಟನ್ನು ಅದರಷ್ಟು ನಿಷ್ಪಕ್ಷಪಾತವಾಗಿ ಚಿತ್ರಿಸುವುದಾಗಿಯೂ ಇಲ್ಲವೆಂದು ತೋರುತ್ತದೆ.

ಅಧ್ಯಾತ್ಮ ಧರ್ಮವನ್ನು ಒಪ್ಪಿದರೆ, ಜೀವನವು ಹೇಗೆ ಸ್ಫೂರ್ತಿಗೊಳ್ಳುವುದು? ಆತ್ಮೋದ್ಧಾರವು ಯಾವ ರೀತಿಯಲ್ಲಿ ಲಭಿಸುವುದು?—ಜೀವಾತ್ಮನು ವಿಕಾಸಹೊಂದಿ ಜ್ಞಾನ ಇಚ್ಛಾ ಕ್ರಿಯೆಗಳು ವಿಸ್ತಾರಹೊಂದಿ, ಸಮಸ್ತ ಜೀವರಾಶಿಯ ಐಕ್ಯನಾದದಲ್ಲಿ ಲೀನವಾಗುತ್ತಾನೆ. ಇದರ ಫಲ ಲೋಕಸಂಗ್ರಹ, ಲೋಕಕಲ್ಯಾಣ. ದೀನೋದ್ಧಾರವೊಂದೇ ಸಾಲದು. ದೀನದಾನಿಗಳೆಂಬ ಶ್ರೇಣಿಗಳೇ ಹುಟ್ಟದಂತೆ ಸಮಾಜದ ಮೂಲ ಸೂತ್ರಗಳನ್ನು ಪುನರ್ರಚಿಸಬೇಕು. ಹಿಂಸಾಮಾರ್ಗವು ಅನರ್ಥಕಾರಿ; ಅಹಿಂಸಾ ಮಾರ್ಗವೇ ಶ್ರೇಯಸ್ಕರ—ಫಲವು ಶಾಶ್ವತವಾಗಿ ನಿಲ್ಲಬೇಕಾದರೆ.

ಹೀಗೆ ಈ ಗ್ರಂಥವು 'ತತ್ವಮಸಿ' ಮೊದಲಾದ ಮಹಾ ವಾಕ್ಯಗಳಲ್ಲಿ ಅಡಗಿರುವ ಅಧ್ಯಾತ್ಮದೃಶ್ಯವನ್ನು ಮಾನವಕಲ್ಯಾಣದಲ್ಲಿ ಹೇಗೆ ಸಫಲಗೊಳಿಸಬೇಕೆಂಬ ಮರ್ಮವನ್ನು ನಾಟಕ ರೂಪದಲ್ಲಿ ಬಹಳ ಆಕರ್ಷಣೀಯವಾಗಿ ಮುಂದಿಡುತ್ತದೆ. ಈ ಉದ್ಯಮದಲ್ಲಿ ಯೂರೋಪಿನ ಪ್ರಸಿದ್ಧ ಮೇಧಾವಿಗಳಾದ ಟಾಲ್ಸ್ಟಾಯ್, ಬರ್ನಾರ್ಡ್ ಷಾರವರ ಕೃತಿಗಳಲ್ಲಿ ಕಾಣುವ ವಿಚಾರತರಂಗಗಳೂ, ನಮ್ಮ ಮಹಾತ್ಮಾ ಗಾಂಧಿಯವರ ಕಾರ್ಯತತ್ವಗಳೂ, ಮಾನವ ಹೃದಯವನ್ನು ಈಗ ಅಲ್ಲೋಲಕಲ್ಲೋಲಗೊಳಿಸುತ್ತಿರುವ ಭಾವತರಂಗಗಳೂ ಒಟ್ಟಿಗೆ 'ತ್ರಿವೇಣೀ' ಸಂಗಮವಾಗಿ ಪ್ರವಹಿಸುತ್ತಿರುವುದನ್ನು ನೋಡಬಹುದು. ಈ ಗ್ರಂಥಕರ್ತರ 'ತ್ರಿಪುರದಹನ'ವು ನಾಗರಿಕತೆಯ ಹೊರಮೈಯ ದೃಶ್ಯವೂ, ಶಿವನ ಉಗ್ರನೃತ್ಯವೂ ಆದರೆ, ಇವರ 'ಧರ್ಮಜ್ಯೋತಿ'ಯು ಮಾನವನ ಸುಪ್ತಶಕ್ತಿಯ ಅಂಕುರವೆಂದೂ, ಸೃಷ್ಟಿಯ ಸೌಮ್ಯ ದರ್ಶನವೆಂದೂ, ವೇಣುಗಾನವೆಂದೂ ಹೇಳಬಹುದು. ಸಮಾಜದಲ್ಲಿ ಈಗ ಬಂದೊದಗಿರುವ ವಿಪ್ಲವದ ಹಾಲಾಹಲವನ್ನು ಜನತೆಯು ಹೇಗೆ ನುಂಗಿ ಅದರ ಶಕ್ತಿಯನ್ನು ಪುನರ್ರಚನೆಗೆ ತಿರುಗಿಸಬಹುದು ಎಂಬ ದಾರುಣ ಸಮಸ್ಯೆಯನ್ನು ಪೂರಯಿಸುವ ಮಾರ್ಗವನ್ನು ಇವೆರಡು ಗ್ರಂಥಗಳೂ ಸೂಚಿಸುವುವು.

ಎಂ. ಎ. ವೆಂಕಟರಾವ್.

ಸಾದರ ಸ್ವೀಕಾರ

೧. **ಜೀವನ ಪ್ರಭಾತ** (ಕಾವ್ಯಸಂಗ್ರಹ)—'ವಿಮಾವಾಣಿಜ್ಯದ ಮೊದಲನೇ ಪುಷ್ಪ', ಪ್ರಕಾಶಕರು: ಶ್ರೀಮಾನ್ ಜಿ. ವಿ. ದೊಡ್ಡವೀರಪ್ಪ, ವ್ಯವಸ್ಥಾಪಕ-ಸಂಪಾದಕ, 'ವಿಮಾವಾಣಿಜ್ಯ', ಬೆಂಗಳೂರು ಸಿಟಿ; ಕ್ರೌನ್ ಅ. ೮೭.

೨. **ಪೂರ್ಣಯೋಗ** (ಪ್ರಥಮಪಾದ)—ಅನುವಾದಕರು: ಶ್ರೀಮಾನ್ ಮಧುರಚೆನ್ನ; ಪ್ರಕಾಶಕರು: ಅರವಿಂದಗ್ರಂಥಮಾಲೆ, ಹಲಸಂಗಿ; ಕ್ರೌನ್ ಅ. ೧೦೨; ಬೆಲೆ, ರೂ. ೧—೦—೦.

೩. **ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರವರ ಚರಿತ್ರೆ**—ಲೇಖಕರು: ಶ್ರೀಮಾನ್ ಎಲ್. ಸ್ವಾಮಿರಾವ್, ಬಿ.ಎ., ಬೆಂಗಳೂರು; ಕ್ರೌನ್ ಅ. ೧೦೦; ಬೆಲೆ, ರೂ. ೧—೪—೦; ೧೨ ಆಣೆ.

೪. **ಸೂಕ್ತಿಸುಧೆ** (ಸರ್ವೇಶ ಪದಗಳು)—ಲೇಖಕರು: ಶ್ರೀಮಾನ್ ಬಿ. ಶ್ರೀಕಂಠಯ್ಯ, ಮೈಸೂರು; ಪುಸ್ತಕ ದೊರೆಯುವ ಸ್ಥಳ: ಸ್ಟೂಡೆಂಟ್ಸ್ ಸೈಕಲ್ ಅಂಡ್ ಮ್ಯೂಸಿಕಲ್ ಮಾರ್ಟ್, ಲ್ಯಾನ್ಸ್‌ಡೌನ್ ಬಜಾರ್ಸ್, ಮೈಸೂರು; ಕ್ರೌನ್ ಅ. ೧೦೦; ಬೆಲೆ, ೬ ಆಣೆ.

೫. **ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವನ್ನು ಮುಕ್ತಾಯಗೊಳಿಸುವಾಗ್ಗೆ ದಿವಾನರವರು ಅಪ್ಪಣೆ ಕೊಡಿಸಿದ ಭಾಷಣ**—1938 ನೆಯ ಇಸವಿ ಅಕ್ಟೋಬರ್ 6 ನೆಯ ತಾರೀಖು.

೬. **ಸೀಮಂತದ ಉಡುಗೊರೆ**—ಲೇಖಕರು: ಶ್ರೀಮಾನ್ ಬಿ. ಶ್ರೀ. ಪಾಂಡುರಂಗ ರಾವ್; ಸತ್ಯಶೋಧನ ಪುಸ್ತಕಭಂಡಾರ, ಕೋಟೆ, ಬೆಂಗಳೂರು ನಗರ; ಕ್ರೌನ್ ಅ. ೨೨; ಬೆಲೆ, ೨ ಆಣೆ.

೭. **ಗ್ರೀಕ್ ಪುರಾಣದ ಅದ್ಭುತ ರಮ್ಯಕತೆಗಳು, ಭಾಗ ೧, ೨**—ಬರೆದವರು: ಶ್ರೀಮಾನ್ ರಾ. ನ. ಮಳಗಿ, ಹುಬ್ಬಳ್ಳಿ; ಪ್ರಕಾಶಕರು: ಪ್ರೇಮಪ್ರಕಟನಾಲಯ, ಧಾರವಾಡ; ಕ್ರೌನ್ ಅ. ೨೧೧; ಬೆಲೆ, ೬ ಆಣೆ.

೮. **Karnatak College Miscellany**—Karnatak College, Dharwar; October, 1938.

ಸಂಪಾದಕೀಯ

ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಅಭಿನಂದನೆ

ಈ ಸಲದ ದಸರಾ ಮಹೋತ್ಸವದಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ 'ರಾಜಸೇವಾಸಕ್ತ' ಎಂಬ ಬಿರುದನ್ನು ದಯಪಾಲಿಸಿದರು. ಈ ಸಂತೋಷದ ಸನ್ನಿವೇಶದಲ್ಲಿ ದೇಶಕ್ಕೆ ದೇಶವೇ ತನ್ನ ಹರ್ಷವನ್ನು ಅಭಿನಂದನಗಳ ಮೂಲಕ ವ್ಯಕ್ತಪಡಿಸಿದೆ. ಶ್ರೀಮಾನ್ ಶ್ರೀಕಂಠಯ್ಯನವರು ಈ ರಾಜಸನ್ಮಾನಕ್ಕೆ ಹೇಗೆ ಅರ್ಹರೆಂಬುದನ್ನೂ, ಅವರು ಕನ್ನಡ ನುಡಿಗೂ ನಾಡಿಗೂ ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆಯ ಮಹತ್ವವೇನೆಂಬುದನ್ನೂ ಹಲವು ಬಿನ್ನವತ್ತಳೆಗಳೂ ಭಾಷಣಗಳೂ ಪತ್ರಿಕಾಲೇಖನಗಳೂ ಎತ್ತಿ ತೋರಿಸಿವೆ; ಆದಕಾರಣ 'ಪ್ರಬುದ್ಧ ಕರ್ಣಾಟಕ'ದಲ್ಲಿ ಮತ್ತೆ ಅವನ್ನು ಉಲ್ಲೇಖಿಸುವುದು ಅಪ್ರಸಕ್ತವಾಗಬಹುದು; ಅಲ್ಲದೆ, ಈ ಪತ್ರಿಕೆ ಶ್ರೀಮಾನ್ ಶ್ರೀಕಂಠಯ್ಯನವರ ಪ್ರಧಾನ ಸಂಪಾದಕತ್ವದಲ್ಲಿ ಹೊರಡುವುದರಿಂದ ಹಾಗೆ ಮಾಡುವುದು ಅನುಚಿತವೂ ಆದೀತು. ಆದ್ದರಿಂದ ಈ ಪತ್ರಿಕೆಯ ಸಂಪಾದಕ ಮಂಡಲಿಯವರು ಬೇರೆ ಏನನ್ನೂ ಹೇಳದೆ, ಈ ಸಂದರ್ಭದಲ್ಲಿ ತಮಗೆ ಉಂಟಾಗಿರುವ ಅತಿಶಯವಾದ ಆನಂದವನ್ನು ಈ ಮೂಲಕ ಸೂಚಿಸಲು ಅಪೇಕ್ಷಿಸುತ್ತಾರೆ; ಜೊತೆಗೆ, ಶ್ರೀಮಾನ್ ಶ್ರೀಕಂಠಯ್ಯನವರ ಕನ್ನಡದ ಸೇವೆ ಅವಿಶ್ರಾಂತವಾಗಿ ಯಶಸ್ವಿಯಾಗಿ ನಡೆಯುವಂತೆ ಅವರಿಗೆ ಭಗವಂತನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತಾರೆ.

*
* *

ವಿಶ್ವವಿದ್ಯಾನಿಲಯದಲ್ಲಿ ಮಾತೃಭಾಷೆ ಬೋಧನೆಯ ಭಾಷೆಯಾಗಬೇಕು

ಈ ವರ್ಷ ಅಕ್ಟೋಬರ್ ತಿಂಗಳು ೬ನೆಯ ತಾರೀಖಿನಲ್ಲಿ ನಡೆದ ನಮ್ಮ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಯದಲ್ಲಿ ರೆವರೆಂಡ್ ಸಿ. ಎಫ್. ಆಂಡ್ರೂಸ್ ಅವರು ನೂತನ ಪದವೀಧರರಿಗೆ ಮಾಡಿದ ಹಿತೋಪದೇಶ ಭಾಷಣವು ಹಲವು ದೃಷ್ಟಿಗಳಿಂದ ಗಮನಾರ್ಹವಾಗಿದೆ. ಬಡವರಿಗೂ ಹಣವಂತರಿಗೂ, ವಿಶ್ವವಿದ್ಯಾನಿಲಯಕ್ಕೂ ಹಳ್ಳಿಗೂ ಇರುವ ಅಂತರವನ್ನು ಕಡಮೆ ಮಾಡುವುದು ಹೇಗೆ?—ಎಂಬ ಪ್ರಶ್ನೆಗೆ ಉತ್ತರವೇ ಆ ಭಾಷಣ. ವಿಶ್ವವಿದ್ಯಾನಿಲಯದಲ್ಲಿ ಬೋಧನೆಯ ಭಾಷೆ ಇಂಗ್ಲಿಷ್ ಆಗಿರುವುದು ಜನಜೀವನಕ್ಕೂ ವಿದ್ಯಾರ್ಥಿ ವರ್ಗದವರಿಗೂ ಉಂಟಾಗಿರುವ ಅಂತರಕ್ಕೆ ಮುಖ್ಯಕಾರಣವೆಂದು ಅವರು ಹೇಳಿದ್ದಾರೆ. ಇಂಗ್ಲಿಷು

ಒಂದಾನೊಂದು ಕಾಲದಲ್ಲಿ ಆವಶ್ಯಕವಾಗಿತ್ತು. ಈಗಲೂ ಅದು ಬೇಕು. ಆದರೆ ಅದಕ್ಕೆ ಹಿಂದೆ ಇದ್ದಷ್ಟು ಪ್ರಾಮುಖ್ಯವನ್ನು ಕೊಡುವ ಕಾಲ ಕಳೆದುಹೋಗಿದೆ. ಪ್ರಪಂಚದ ಪರಿಚಯವನ್ನು ಪಡೆದು ಸಜೀವವಾಗಿ ಬಾಳಬೇಕಾದರೆ ಇಂಗ್ಲಿಷಿನ ಅಭ್ಯಾಸವನ್ನು ಬಿಡಬಾರದು; ಅದಕ್ಕೆ ಈಗ ಯಾವ ಸ್ಥಾನವನ್ನು ಕೊಡಬೇಕೋ ಅದನ್ನು ವಿಚಾರಮಾಡಬೇಕು. ಈಗ ಅದು ಬೋಧನೆಯ ಭಾಷೆಯಾಗಿ ವಿದ್ಯಾರ್ಥಿಯ ಕಾಲವನ್ನೂ ಶಕ್ತಿಯನ್ನೂ ಬೇರಾವುದಕ್ಕೂ ಹೆಚ್ಚಾಗಿ ಬಿಡದೆ ತನ್ನ ಕಡೆಗೇ ಸೆಳೆದುಕೊಳ್ಳುತ್ತಿದೆ. ಇದನ್ನು ತಪ್ಪಿಸಿ ಪತ್ತು ವಿಷಯಗಳಲ್ಲಿ ಅದೂ ಒಂದು ಎಂದು ಗಣಿಸಿದರೆ ಎಲ್ಲರಿಗೂ ಮಹೋಪಕಾರವಾದೀತು. ಮಾತೃಭಾಷೆಯಲ್ಲೇ ಪಾಠಗಳನ್ನು ಹೇಳುವುದು ಮತ್ತು ಅದರಲ್ಲೇ ಉತ್ತರಗಳನ್ನು ನಿರೀಕ್ಷಿಸುವುದು ಈಗ ಆವಶ್ಯಕವಾಗಿದೆ. ಮಾತೃಭಾಷೆ ಬೆಳೆದು ಪುಷ್ಟವಾಗುವುದಲ್ಲದೆ, ಸಾಮಾನ್ಯಜನರಿಗೂ ಜ್ಞಾನದಾನಮಾಡಿದ ಹಾಗಾಗುತ್ತದೆ. ಈ ವಿಷಯದಲ್ಲಿ ರೆವರೆಂಡ್ ಆಂಡ್ರೂಸ್ ಅವರು ಹೀಗೆ ಹೇಳಿದ್ದಾರೆ:

"ಇಂಗ್ಲಿಷನ್ನು ಇನ್ನೂ ಕಲಿಸಲೇ ಬೇಕು; ಆದರೆ ಇನ್ನು ಮುಂದೆ ಅದು ಬೋಧನೆಯ ಭಾಷೆಯಾಗಿ ಇರಕೂಡದು. ಮಾತೃಭಾಷೆಯೇ ಆ ಸ್ಥಾನಕ್ಕೆ ಬರಬೇಕು. ಇಂಡಿಯಾ ದೇಶದ ಉಪಾಧ್ಯಾಯರು ಚರಿತ್ರೆಯನ್ನೂ ಭೂಗೋಳ ಶಾಸ್ತ್ರವನ್ನೂ ಗಣಿತಶಾಸ್ತ್ರವನ್ನೂ ಹೇಳಿಕೊಡುವಾಗಲೆಲ್ಲ ಮಾತೃಭಾಷೆಯನ್ನೇ ಬಳಸಬೇಕು; ಇಂಗ್ಲಿಷನ್ನು ಉಪಯೋಗಿಸಬಾರದು. ಈ ಕೆಲಸವನ್ನು ಕ್ಷಿಪ್ರವಾಗಿಯೇ ಮಾಡಬೇಕಾಗಿರುವುದರಿಂದ ನಾನು 'ಬೇಕು' ಎಂಬ ಪದವನ್ನು ಇಷ್ಟು ಖಂಡಿತವಾಗಿ ಉಪಯೋಗಿಸಿದ್ದೇನೆ.

"ವಿಶ್ವವಿದ್ಯಾನಿಲಯವು ಮಾತೃಭಾಷೆಗೆ ಈ ಮಹತ್ವವನ್ನು ಸಲ್ಲಿಸಿದ ಕೂಡಲೇ ಸರಕಾರವೂ ಅದನ್ನೇ ಅನುಸರಿಸಿ ಕೋರ್ಟು ಕಚೇರಿಗಳಲ್ಲಿ ಮಾತೃಭಾಷೆಯನ್ನೇ ಉಪಯೋಗಿಸುವುದೆಂದು ಆಶಿಸುತ್ತೇನೆ. ಈ ಹೊಸ ಏರ್ಪಾಟಿನಿಂದ ಆಗುವ ಪರಿಣಾಮವನ್ನು ನಾವು ಕಣ್ಣಾರ ನೋಡಬಹುದು; ಸ್ವತಂತ್ರವಾಗಿ ಆಲೋಚನೆ ಮಾಡುವ ಶಕ್ತಿ ಇಂಡಿಯಾ ದೇಶದ ಸ್ತ್ರೀಪುರುಷರಿಗೆ ಉಂಟಾಗುವುದಲ್ಲದೆ ವಿಶ್ವವಿದ್ಯಾನಿಲಯಕ್ಕೂ ಗ್ರಾಮಗಳಿಗೂ ನಡುವೆ ಇರುವ ಕೋಟೆಯ ಗೋಡೆ ಒಡೆದು ಪುಡಿಪುಡಿಯಾಗುತ್ತದೆ.

"ಭಾಷೆಯ ವಿಷಯವಾಗಿ ಇಷ್ಟು ಹೊತ್ತು ಏಕೆ ಮಾತನಾಡಿದೆನೆಂದು ಯಾರಾದರೂ ಕೇಳಬಹುದು. ಮಾತೃಭಾಷೆಯ ಮೂಲಕ ಶಿಕ್ಷಣ ಕೊಡುವ ವಿಷಯವನ್ನು ಶಾಸ್ತ್ರೀಯವಾಗಿ ಪರ್ಯಾಲೋಚಿಸಿ ಅದನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕಾದ ಕಾಲ ಅತಿ ಸನ್ನಿಹಿತವಾಗಿದೆಯೆಂದು ನನಗೆ ತೋರುವುದರಿಂದ

ಮೈಸೂರು ವಿಶ್ವವಿದ್ಯಾನಿಲಯವು ಈ ಕೆಲಸವನ್ನು ಎತ್ತಿಕೊಂಡು ಪ್ರಯೋಗ ಪರೀಕ್ಷೆಗಳನ್ನು ನಡಸಲೆಂಬ ಉದ್ದೇಶ ನನ್ನದು. ಮೈಸೂರು ಸೀಮೆ ಒಂದೇ ಭಾಷೆಯನ್ನಾಡುವ ಪ್ರಾಂತವಾಗಿರುವುದರಿಂದ ಅದಕ್ಕೆ ಈ ಹೊಸ ಪ್ರಯೋಗವನ್ನು ಕೈಕೊಳ್ಳಲು ಏನೂ ಕಷ್ಟವಾಗಲಾರದು.

"ಸ್ಕೂಲಿನಿಂದ ಹಿಡಿದು ವಿಶ್ವವಿದ್ಯಾನಿಲಯದ ವರೆಗೆ ಪರಕೀಯ ಭಾಷೆಯಲ್ಲೇ ಶಿಕ್ಷಣವನ್ನು ಕೊಡುತ್ತಿರುವ ದೇಶ ಇಂಡಿಯಾ ದೇಶವೊಂದು ಹೊರತಾಗಿ ಪ್ರಪಂಚದಲ್ಲಿ ಬೇರೆ ಯಾವುದಾದರೂ ಇದೆಯೆ? ಎಂಬ ಪ್ರಶ್ನೆಯನ್ನು ನಾನು ಕೇಳಲು ಬಯಸುತ್ತೇನೆ. ಇದಕ್ಕೆ ಉತ್ತರ ಸ್ಪಷ್ಟವಾಗಿದೆ. ಇಂಥ ಬೇರೊಂದು ದೇಶವನ್ನು ನಾನು ನೋಡಿಲ್ಲ; ಕಲಿತವರಿಗೂ ಕಲಿಯದವರಿಗೂ ಇಷ್ಟು ದೊಡ್ಡ ಅಂತರವಿರುವ ಯಾವ ಮತ್ತೊಂದು ಭೂಭಾಗವೂ ನನ್ನ ದೃಷ್ಟಿಗೆ ಬಿದ್ದಿಲ್ಲ."

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ದ್ವಿತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.; ಬೆಲೆ : ೦—೧೨—೦.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ; ಬೆಲೆ : ೦—೧೨—೦.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ. ; ಬೆಲೆ : ೦—೧೨—೦.

೪. **ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೦—೦ ; ಸಾದಾ ಪ್ರತಿ, ೦—೧೨—೦.

೫. **ಶ್ರೀರಾಮಕೃಷ್ಣ ಪರಮಹಂಸ** (ಸಚಿತ್ರ)—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೪—೦, ಸಾದಾ ಪ್ರತಿ, ೦—೧೨—೦.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಐಯಂಗಾರ್, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೪—೦ ; ಸಾದಾ ಪ್ರತಿ, ೦—೧೨—೦.

೭. **ಆರೋಗ್ಯ ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್ಸಿ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೪—೦ ; ಸಾದಾ ಪ್ರತಿ, ೦—೧೨—೦.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನಮಹಾವಿದ್ವಾನ್ ತಿರುಮಕೂಡ್ಲು ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾ ಚಾರ್, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೦—೦ ; ಸಾದಾ ಪ್ರತಿ, ೦—೧೨—೦.

೯. **ಹಣ ಪ್ರಪಂಚ**—ಲೇಖಕರು : ಎ. ಸೀತಾರಾಮಯ್ಯ, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೪—೦ ; ಸಾದಾ ಪ್ರತಿ, ೦—೧೨—೦.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ : ಕ್ಯಾಲಿಕೊ ಪ್ರತಿ, ರೂ. ೧—೪—೦ ; ಸಾದಾ ಪ್ರತಿ, ೦—೧೨—೦.

ಪುಸ್ತಕಗಳು ದೊರೆಯುವ ಸ್ಥಳ—

ಕ್ಯೂರೇಟರ್,

ಓರಿಯೆಂಟಲ್ ಲೈಬ್ರೆರಿ, ಮೈಸೂರು.

೨೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಬಳ್ಳಾರಿ ನಗರದಲ್ಲಿ

ಸಮಾಚಾರ ಪತ್ರಿಕೆ ೧

ಈ ವರ್ಷ ಡಿಸೆಂಬರ್ ತಿಂಗಳಿನಲ್ಲಿ ನಡೆಯಬೇಕಾಗಿರುವ ೨೩ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿ ನಗರಕ್ಕೆ ಆಹ್ವಾನಿಸಬೇಕೆಂದು ಅಲ್ಲಿನ ಕನ್ನಡ ಮುಂದಾಳುಗಳು ಉದ್ದೇಶಪಟ್ಟ ಮೇರೆಗೆ, ತಾ|| ೩೦–೭–೧೯೩೮ರಲ್ಲಿ ಬಳ್ಳಾರಿಯ ಶ್ರೀಮಾನ್ ಕೆ. ಗುರುರಾಜಾರಾವ್, ಬಿ.ಎ. ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಬಳ್ಳಾರಿಯ ಪ್ರಮುಖ ಕನ್ನಡಿಗರನೇಕರು ಈ ಸಭೆಯಲ್ಲಿ ಭಾಗವಹಿಸಿದ್ದರು. ಸಭೆ ಸರ್ವಾನುಮತದಿಂದ ತೀರ್ಮಾನಿಸಿದ ಮೇರೆಗೆ ಸಭೆಯ ಪರವಾಗಿ ಶ್ರೀಮಾನ್ ಎನ್. ಆರ್. ಗಂಗಾವತಿಯವರು ತಾ|| ೧೨–೮–೧೯೩೮ರಲ್ಲಿ ಪರಿಷತ್ತಿಗೆ ಲಿಖಿತಮೂಲಕ ಸಮ್ಮೇಳನದ ಆಹ್ವಾನವನ್ನು ಕಳಿಸಿದರು. ಹಾಗೆ ವಿಶ್ವಾಸ ಪೂರ್ವಕವಾಗಿ ಬಳ್ಳಾರಿಯವರು ಕಳಿಸಿಕೊಟ್ಟ ಆಹ್ವಾನವನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿ ತಾ|| ೨೭–೮–೧೯೩೮ರಲ್ಲಿ, ಸಂತೋಷ ಕೃತಜ್ಞತೆಗಳೊಡನೆ ಸ್ವೀಕರಿಸಿತು.

ಈಗ ಸುಮಾರು ೫೦ ಮಂದಿ ಮಹನೀಯರನ್ನೊಳಗೊಂಡ ಸ್ವಾಗತ ಮಂಡಲಿ ಏರ್ಪಾಟಾಗಿದೆ; ಶ್ರೀಮಾನ್ ಎನ್. ಆರ್. ಗಂಗಾವತಿಯವರು ಗೌ|| ಕಾರ್ಯದರ್ಶಿಯವರಾಗಿಯೂ, ಶ್ರೀಮಾನ್ ತೊಗರಿ ವೀರಮಲ್ಲಪ್ಪನವರು ಕೋಶಾಧ್ಯಕ್ಷರಾಗಿಯೂ ಇದ್ದಾರೆ.

ಈ ಸಲದ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡಸಬೇಕೆಂದು ಅಲ್ಲಿನ ಕನ್ನಡಿಗರು ಎರಡು ವರ್ಷಗಳಿಂದಲೂ ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ; ಸುತ್ತುಮುತ್ತಲಿನ ಕನ್ನಡಿಗರು ಬೆಂಬಲವಾಗಿ ನಿಂತಿದ್ದಾರೆ. ಈ ಸಮ್ಮೇಳನ ಬಹು ಯಶಸ್ವಿಯಾಗಿ ನಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ಸಲದ ಸಮ್ಮೇಳನದಲ್ಲಿ ಕನ್ನಡಭಾಷಾ ಸಾಹಿತ್ಯ ಸಂಸ್ಕೃತಿಗಳ ಏಳಿಗೆಗೂ ಕನ್ನಡಿಗರ ಒಕ್ಕೂಟಕ್ಕೂ ಸಂಬಂಧಪಟ್ಟ ಅನೇಕ ಪ್ರಶ್ನೆಗಳು ಪರ್ಯಾಲೋಚಿತವಾಗಿ ಬಹುಮುಖ್ಯವಾದ ತೀರ್ಮಾನಗಳಾಗತಕ್ಕದ್ದಿವೆ. ಆದುದರಿಂದ ಕರ್ನಾಟಕದ ಎಲ್ಲ ಭಾಗಗಳಿಂದಲೂ ಅಭಿಮಾನಿಗಳು ದಯಮಾಡಿ ಬಂದು ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಮಾಡಬೇಕೆಂದು ಪರಿಷತ್ತು ವಿನಯದಿಂದ ಪ್ರಾರ್ಥಿಸುತ್ತದೆ.

ತಾರೀಖುಗಳು

ಸಮ್ಮೇಳನ **೧೯೩೮ನೆಯ ಡಿಸೆಂಬರ್ ತಿಂಗಳ ೨೯, ೩೦ ಮತ್ತು ೩೧ನೆಯ ತಾರೀಖು**ಗಳಲ್ಲಿ (ಕ್ರಿಸ್‌ಮಸ್ ರಜಾ ಕಾಲದಲ್ಲಿ) ಸೇರುವಂತೆ ನಿಶ್ಚಯವಾಗಿದೆ.

ಅಧ್ಯಕ್ಷರು

ಬಹುಕಾಲದಿಂದ ಕನ್ನಡ ನಾಡು ನುಡಿಗಳ ಸೇವೆಯಲ್ಲಿ ನಿರತರಾಗಿದ್ದುಕೊಂಡು, ಅವುಗಳ ಏಳಿಗೆಗಾಗಿ ಅಪೂರ್ವ ಭಕ್ತಿತ್ಯಾಗಗಳಿಂದ ಬಹುಮುಖವಾಗಿ ಕೆಲಸಮಾಡುತ್ತಿರುವ, ಕನ್ನಡದ ಪ್ರಮುಖ ಮುಂದಾಳುಗಳಲ್ಲಿ ಒಬ್ಬರಾದ, ಹುಬ್ಬಳ್ಳಿಯ ಅಧ್ಯಾತ್ಮ ಕಾರ್ಯಾಲಯದ ಒಡೆಯರಾದ **ಶ್ರೀಮಾನ್ ಆರ್. ಆರ್. ದಿವಾಕರ್,** ಎಂ.ಎ., ಎಲ್‌ಎಲ್.ಬಿ. ಅವರು ದಯವಿಟ್ಟು ಪರಿಷತ್ತಿನ ಮತ್ತು ಸ್ವಾಗತ ಮಂಡಲಿಯವರ ಬೇಡಿಕೆಯನ್ನು ಮನ್ನಿಸಿ, ಈ ಸಲದ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಒಪ್ಪಿರುವುದು ವಿಶೇಷ ಸಂತೋಷದ ಸಂಗತಿಯಾಗಿದೆ.

ಕವಿಗೋಷ್ಠಿ, ನಾಟ್ಯಸಮ್ಮೇಳನ

ಕಳೆದ ವರ್ಷ ನಡಸಿದಂತೆ ಈ ವರ್ಷವೂ ಕವಿಗೋಷ್ಠಿಯನ್ನು ನಡೆಸಲು ಅವಕಾಶವಾಗಬಹುದು. ಇದರ ಜೊತೆಗೆ ನಾಟ್ಯಸಮ್ಮೇಳನವೊಂದನ್ನು ನಡೆಸುವ ಉದ್ದೇಶ ಸ್ವಾಗತಮಂಡಲಿಗೆ ಇದೆ.

ಪ್ರಬಂಧ, ಭಾಷಣ, ನಿರ್ಣಯಗಳು, ಇತ್ಯಾದಿ

ಕನ್ನಡ ಭಾಷಾ ಸಾಹಿತ್ಯ ವಿಚಾರಗಳಿಗೆ ಸಂಬಂಧಪಟ್ಟ ಭಾಷಣಗಳು, ಕನ್ನಡ ಸಾಹಿತ್ಯ ವಾಚನ ಮುಂತಾದ ಕಾರ್ಯಗಳಿಗೆ ಎಂದಿನಂತೆ ಅವಕಾಶವಿದೆ. ಮೇಲೆ ಕಂಡ ಕಾರ್ಯಗಳಲ್ಲಿ ಭಾಗವಹಿಸಲಿಚ್ಛಿಸುವ ಮಹನೀಯರು ತಮ್ಮ ಉದ್ದೇಶವನ್ನೂ, ತಾವು ಮಾಡಬೇಕೆಂದಿರುವ ಭಾಷಣದ ಅಥವಾ ಓದಬೇಕೆಂದಿರುವ ಸಾಹಿತ್ಯ ವಿಭಾಗದ ಹೆಸರು ವಿಷಯ ಮುಂತಾದ ವಿವರಗಳನ್ನೂ, ಮತ್ತು ಸಮ್ಮೇಳನದಲ್ಲಿ ನಿರ್ಣಯಗಳನ್ನು ಸೂಚಿಸಬೇಕೆಂದಿರುವವರು ಆ ನಿರ್ಣಯಗಳನ್ನೂ ಪರಿಷತ್ತಿನ ಗೌ|| ಕಾರ್ಯದರ್ಶಿಗಳಿಗಾಗಲಿ ಅಥವಾ ಸ್ವಾಗತ ಮಂಡಲಿಯ ಕಾರ್ಯದರ್ಶಿಗಳಿಗಾಗಲಿ **ತಾ|| ೩೦-೧೧-೧೯೩೮ರೊಳಗಾಗಿ ಬರಹದ ಮೂಲಕ** ತಿಳಿಸಬೇಕೆಂದು ಪ್ರಾರ್ಥನೆ. ಕನ್ನಡ ನಾಡಿನ ವಿದ್ವಾಂಸರೂ, ಸಾಹಿತಿಗಳೂ, ಕಲಾಭಿಜ್ಞರೂ, ಅಭಿಮಾನಿಗಳೂ ಈ ಮೂಲಕ ಪರಿಷತ್ತು ಕೊಟ್ಟಿರುವ ಆಹ್ವಾನವನ್ನು ಸ್ವೀಕರಿಸಿ, ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ಅದನ್ನು ನಡಸಿಕೊಡಬೇಕೆಂದು ಪರಿಷತ್ತು ಬೇಡುತ್ತದೆ.

ನಾಟಕ, ಯಕ್ಷಗಾನ, ಲಾವಣಿ

ಸಮ್ಮೇಳನದಲ್ಲಿ ಈ ತರಹ ಪ್ರದರ್ಶನಗಳಿಗೂ ಅವಕಾಶ ಕೊಡಬೇಕೆಂಬ ಉದ್ದೇಶವಿದೆ. ಕನ್ನಡ ನಾಡಿನ ನಾಟಕ ಸಂಘಗಳವರೂ, ಯಕ್ಷಗಾನ ಮಂಡಲಿಯವರೂ, ಲಾವಣಿಕಾರರೂ ಮುಂದಾಗಿ **ತಾ|| ೩೦-೧೧-೧೯೩೮ರೊಳಗೆ** ಪರಿಷತ್ತಿನ ಗೌ|| ಕಾರ್ಯದರ್ಶಿಗಳಿಗಾಗಲಿ ಅಥವಾ ಸ್ವಾಗತ ಮಂಡಲಿಗಾಗಲಿ ದರಖಾಸ್ತುಗಳನ್ನು ಕಳಿಸಬೇಕೆಂದು ಬೇಡಿಕೆ. ಸಮ್ಮೇಳನಕ್ಕೆ ಸುಮಾರು ಒಂದು ವಾರ ಮುಂಚಿತವಾಗಿ ಪರಿಷತ್ತು ಒಪ್ಪಿದ ದರಖಾಸ್ತುದಾರರಿಗೆ ಮಾತ್ರ ಉತ್ತರ ಬರೆಯಲಾಗುವುದು. ಹಾಗೆ ಪರಿಷತ್ತು ಒಪ್ಪಿದ ದರಖಾಸ್ತುದಾರರು ತಮ್ಮ ಪ್ರಯಾಣದ ವೆಚ್ಚ ಮುಂತಾದ ವಿಶಿಷ್ಟ ಖರ್ಚುಗಳನ್ನೂ ತಾವೇ ವಹಿಸಿಕೊಳ್ಳಲು ಸಿದ್ಧರಾಗತಕ್ಕದ್ದು; ಮತ್ತು ಕೂಡಿದ ಮಟ್ಟಿಗೂ ತಮ್ಮ ತಮ್ಮ ಸಲಕರಣೆ ಸಾಮಗ್ರಿಗಳನ್ನು ತಾವೇ ಒದಗಿಸಿಕೊಳ್ಳಬೇಕು; ಸ್ವಾಗತ ಮಂಡಲಿಯವರು ಸಂದರ್ಭ ಸನ್ನಿವೇಶಗಳ ಅನುಸಾರ ತಮ್ಮ ಅನುಕೂಲವಿರುವಷ್ಟು ಮಾತ್ರ ಸಹಕರಿಸಬಹುದು. ನಾಟಕ ಸಂಘದವರಾಗಲಿ ಯಕ್ಷಗಾನ ಮಂಡಲಿಯವರಾಗಲಿ ಇತರ ಬಗೆಯ ಪ್ರದರ್ಶನಕಾರರಾಗಲಿ ತಮ್ಮ ಪ್ರದರ್ಶನಗಳಿಗೆ ಸ್ವಾಗತ ಮಂಡಲಿಯ ಅಥವಾ ಪರಿಷತ್ತಿನ ಒಪ್ಪಿಗೆ ಪಡೆದು ಪ್ರವೇಶ ಶುಲ್ಕವನ್ನು ಹಾಕಬಹುದು.

ಒಟ್ಟು, ಕರ್ನಾಟಕದ ನಾನಾ ಭಾಗಗಳಲ್ಲಿರುವ ದೇಶಭಕ್ತರೂ, ಭಾಷಾಭಿಮಾನಿಗಳೂ, ಸಾಹಿತ್ಯ ಪ್ರೇಮಿಗಳೂ, ಕಲಾಭಿಜ್ಞರೂ ಸಮ್ಮೇಳನಕ್ಕೆ ಬರುವರೆಂದು ಬಳ್ಳಾರಿಯ ಸ್ವಾಗತ ಮಂಡಲಿ ನಿರೀಕ್ಷಿಸಿಕೊಂಡಿದೆ. ಎಲ್ಲರೂ ಬಂದು, ಸಮ್ಮೇಳನ ಕಾರ್ಯಗಳಲ್ಲಿ ಭಾಗವಹಿಸಿ, ತಾಯ್ನುಡಿಯ ಏಳಿಗೆಯ ಕೆಲಸಕ್ಕೆ ತಮ್ಮ ಬೆಂಬಲ ಕೊಡಬೇಕೆಂದು ಕರ್ನಾಟಕ ಸಾಹಿತ್ಯ ಪರಿಷತ್ತು ತನ್ನ ಪರವಾಗಿಯೂ ಬಳ್ಳಾರಿಯ ಸ್ವಾಗತ ಮಂಡಲಿಯ ಪರವಾಗಿಯೂ ಮತ್ತೊಮ್ಮೆ ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತದೆ.

ತಾ|| ೧೭-೧೧-೧೯೩೮, **ಸಿ. ಕೆ. ವೆಂಕಟರಾಮಯ್ಯ,** ಎಂ.ಎ., ಎಲ್‌ಎಲ್.ಬಿ.,

ಬೆಂಗಳೂರು. ಗೌ|| ಕಾರ್ಯದರ್ಶಿ, ಕ|| ಸಾ|| ಪರಿಷತ್ತು.

3

ಪ್ರಬುದ್ಧ ಕರ್ಣಾಟಕ

ಬಹುಧಾನ್ಯ ಸಂವತ್ಸರ] [ಸಂಕ್ರಾಂತಿಯ ಸಂಚಿಕೆ

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೩೯

ಸಂಪುಟ ೨೦] [ಸಂಚಿಕೆ ೩

ವಿಷಯ ಸೂಚಿಕೆ



ದಿವಂಗತ

ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು

ಪ್ರಬುದ್ಧ
ಕರ್ಣಾಟಕ

ಬಹುಧಾನ್ಯ ಸಂವತ್ಸರ — ೭೭ — ಸಂಕ್ರಾಂತಿಯ ಸಂಚಿಕೆ

ಕಿಟಕಿ-ಕಣ್ಣು

೧

ಮನೆಯ ಮೆಯ್ಗೆ ಕಿಟಕಿ ಕಣ್ಣು ;
ಕವಿ ಕೊಟಡಿಯ ಜೀವನು.
ಮನೆಯ ಗುಡಿಗೆ ಕಿಟಕಿ ಪಡಿಮೆ :
ಕಲೆಯ ಕಣ್ಣಿಗೇನು ಕಡಿಮೆ ?
ಪ್ರತ್ಯಕ್ಷನು ದೇವರು !

ಕೊಟಡಿಯ ಕುರ್ಚಿಯೊಳಿದ್ದವನೇಕೊ
ಕಿಟಕಿಯ ಕಡೆ ನೋಡಿದೆನಕ್ಕೊ !—
ಚಿತ್ತರದಾಕಾಶದ ತಿಳಿನೀಲಿ
ದೂರದ ಶಾಂತ ಸಮುದ್ರವ ಹೋಲಿ
ನೆರೆದಿದೆ. ಕಿಟಕಿಯ ಚೌಕವ ತುಂಬಿ ;
ಗೆರೆಯೆಳೆದಂತಿದೆ ಸರಳಿನ ಕಂಬಿ.

ಶಾರದ ನೀರದವೊಂದಿನಿತಿಲ್ಲ;
ನೀಲಿಯೆ, ನೀಲಿಯೆ, ನೀಲಿಯೆ ಎಲ್ಲ.
ಕಾಯ್ದಿದ್ದಿತು ಬಿಸಿಲಿನ ಹಗಲು,
ಸದ್ದಿಲ್ಲದ ನಿದ್ದೆಯ ಹಗಲು!
ನಿಶ್ಚಲವಾಗಿರೆ ನೀಲಿಯ ನೀರಧಿ,
ನೀಲಾಕಾಶದ ಓ ಆ ದೂರದಿ
ಬೆಳ್ಳಿಯ ಮುಗಿಲಿನ ಚೂರುಗಳಂತೆ
ಬೆಳ್ಳಕ್ಕಿಯ ಜೊತೆ ಹಾರಾಡುತ್ತಿವೆ;
ಮುಕ್ತಿಯ ಪಡೆವಮಲಾತ್ಮಗಳಂತೆ
ಶೂನ್ಯದಂಚಿನೊಳೆ ಹೊಂಚಾಡುತ್ತಿವೆ!
ದೃಷ್ಟಿಯೆ ದಣಿವಂದದೊಳಾ ಹಕ್ಕಿ
ಏರುತ್ತೇರುತ್ತಾಗಿವೆ ಚುಕ್ಕಿ!
ಅಃ! ಇಲ್ಲಾದುವೆ ಶೂನ್ಯಂಬೊಕ್ಕು,
ಕಣ್ಣಾಚೆಗೆ ಕಲ್ಪನೆಗೂ ಮಿಕ್ಕು!
ನೋಡುತ ನೋಡುತ ನೋಡುತ ನಾನೂ
ಮೇಲ್ ಮೇಲೇರಿದೆನಾದೆನು ಬಾನು....!

ಮನೆಯ ಮೆಯ್ಗೆ ಕಿಟಕಿ ಕಣ್ಣು;
ಕವಿ ಕೊಟಡಿಯು ಜೀವನು.
ಮನೆಯ ಗುಡಿಗೆ ಕಿಟಕಿ ಪಡಿಮೆ:
ಕಲೆಯ ಕಣ್ಣಿಗೇನು ಕಡಿಮೆ?
ಪ್ರತ್ಯಕ್ಷನು ದೇವನು!

ಕೆ. ವಿ. ಪುಟ್ಟಪ್ಪ.

ದೇಶದೇವಿಯ ಪೂಜೆಗೆ ಬನ್ನಿ!*

ಕನ್ನಡಮ್ಮನ ಹಿರಿಯ ಮಕ್ಕಳಿರಾ, ಕಿರಿಯ ಮಕ್ಕಳಿರಾ, ಓ ನನ್ನ ಸೋದರ ಸೋದರಿಯರಿರಾ,

ದೇಶದೇವಿಯ ಪೂಜೆಗೆ ಇಂದು ನಾಡೆಲ್ಲ ನೆರೆಯುತ್ತಿದೆ; ಎಲ್ಲರನ್ನೂ ಕರೆಯುತ್ತಿದೆ. ಈ ಪುಣ್ಯಸಂಭ್ರಮ ಸಮಯದಲ್ಲಿ ತಮ್ಮೆಲ್ಲರೊಡಗೂಡಿ ಆ ದೇವಿಯ ಮಹಾರಾಧನೆಯಲ್ಲಿ ಭಾಗಿಯಾಗುವ ಕೃಪೆ ಆಕೆಯ ತೊದಲುಮಕ್ಕಳಲ್ಲೊಬ್ಬನಾದ ನನಗೂ ದೊರೆಕೊಂಡಿರುವುದಕ್ಕಾಗಿ ತಮ್ಮೆಲ್ಲರನ್ನೂ ವಂದಿಸಿ, ನಾಡದೇವಿಗೆ ಮುಡಿ ಬಾಗುತ್ತೇನೆ.

ಇಂದು ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಎಚ್ಚತ್ತು ಕಣ್ದೆರೆಯುತ್ತಿರುವವರೆಲ್ಲರೂ ಈ ನಾಡಹಬ್ಬದಲ್ಲಿ ಉತ್ಸಾಹದಿಂದಲೂ ಆವೇಶದಿಂದಲೂ ತನುಮನಧನಗಳನ್ನು ಸಮರ್ಪಿಸಿ ಭಾಗಿಗಳಾಗಿದ್ದಾರೆ. ಈ ಉತ್ಸಾಹದ ಅರ್ಥವೇನು? ಈ ಆವೇಶದ ಉದ್ದೇಶವೇನು? ಯಾವ ದೇವತೆಗಾಗಿ ಈ ತೇರು ಶೃಂಗಾರವಾಗಿದೆ? ಯಾವ ಮಂಗಳಕ್ಕಾಗಿ ಆ ಗುಡಿಯಲ್ಲಿ ಆರತಿಯಾಗುತ್ತಿದೆ? ಯಾರ ಮಹಿಮೆಗಾಗಿ ಇಲ್ಲಿ ಮಕ್ಕಳು ಜಯಧ್ವನಿ ಗೈಯುತ್ತಿದ್ದಾರೆ? ಯಾರ ಶ್ರೇಯಸ್ಸಿಗಾಗಿ ಅಲ್ಲಿ ದೊಡ್ಡವರು ಪರಿಶ್ರಮಿಸುತ್ತಿದ್ದಾರೆ? ಯಾವ ನೆನಸದು ನಮ್ಮನ್ನು ಮುನ್ನೂಂಕುತ್ತಿದೆ? ಯಾವ ಕನಸಿದು ನಮ್ಮೆಲ್ಲರನ್ನೂ ಸೆಳೆಯುತ್ತಿದೆ? ದೇಶದೇವಿ ಇದಾರು? ಈ ಪೂಜೆಯ ಅರ್ಥ ಉದ್ದೇಶಗಳೇನು?

ಕನ್ನಡಿಗರ ಆತ್ಮಜಾಗೃತಿಯಿಂದ ಸಪ್ರಾಣವಾಗುತ್ತಿರುವ ಅವಿಚ್ಛಿನ್ನ ಕರ್ನಾಟಕವೇ ಈ ದೇಶದೇವಿ. ಕರ್ನಾಟಕ ಮಾತೆಯ ಪ್ರಾಣಪ್ರತಿಷ್ಠೆಗಾಗಿ ಕನ್ನಡಿಗರು ತಮ್ಮ ಸರ್ವಸ್ವವನ್ನೂ ಬಲಿದಾನಮಾಡಲು ಸೊಂಟ ಕಟ್ಟುತ್ತಿದ್ದಾರೆ ಎಂಬುದೇ ಈ ಆರಾಧನೆಯ ಅರ್ಥ. ಕನ್ನಡಿಗರ ಸರ್ವತೋಮುಖವಾದ ಏಳ್ಗೆಯೇ ಈ ಉತ್ಸಾಹದ ಉದ್ದೇಶ. ಕನ್ನಡನೆಲದೊಗ್ಗಟ್ಟಿಗಾಗಿ, ಕನ್ನಡ ನುಡಿಯ ನಡೆಯ ನಯದ ಸಿರಿಯೊಗ್ಗಟ್ಟಿಗಾಗಿ ಕಂಕಣಬದ್ಧರಾಗಿ, ಶಕ್ತಿ ಸಿಡಿಯೆ ದುಡಿದು, ಭಕ್ತಿಯುಕ್ಕಿ ಬಯಸುತ್ತೇವೆ ಎಂಬ ದೃಢಮನಸ್ಸಿನ ರಥೋತ್ಸವಕ್ಕಾಗಿಯೇ ನಾವಿಂದು ಒಂದುಗೂಡಿದ್ದೇವೆ.

---

* ಶಿವಮೊಗ್ಗೆಯ ಕರ್ನಾಟಕ ಸಂಘದವರು ಆಚರಿಸಿದ ನಾಡಹಬ್ಬದಲ್ಲಿ ಮಾಡಿದ ಅಧ್ಯಕ್ಷ ಭಾಷಣ.

ತಪಃಪೂರ್ಣವಾಯಿತೆಂದರೆ ಒಬ್ಬನ ಇಚ್ಛೆಯೇ ಅಘಟನ ಘಟನಕಾರಿಯಾಗುತ್ತದೆ ಎಂದಮೇಲೆ ಅನೇಕರು ಒಮ್ಮನಸ್ಸಿನಿಂದ ಇಚ್ಛಿಸಿದರೆ ಆಗಬಹುದಾದುದು ಆಗದಿರುತ್ತದೆಯೇ ? ಕೋಟಿ ಕೈಗಳು ಒಂದಕ್ಕೊಂದು ಸೇರಿದರೆ ಸ್ವರ್ಗದ ಕಲ್ಪವೃಕ್ಷದ ದೇವಫಲಗಳನ್ನೂ ನೆಲಕ್ಕುರುಳಿಸುವ ದೋಟಿಯಾಗಲಾರದೇ ? ಒಬ್ಬನು ಕೂಗಿದರೆ ನೆರೆಮನೆಗೂ ಕೇಳಿಸದೆ ಇರಬಹುದು. ನಾಡೆಲ್ಲ ನೆರೆದು ಒಕ್ಕೊರಲಾಗಿ ಕರೆದರೆ ಆ ಧ್ವನಿ ಉದಾಸೀನ ಪೃಥ್ವಿಯ ಪರ್ವತ ಕಾನನಗಳಿಂದ ಪ್ರತಿಧ್ವನಿತವಾಗಿ, ಸಾಗರದ ಘೋಷವನ್ನೂ ಮಿಕ್ಕುಮೀರಿ, ಅಂತರಿಕ್ಷದ ದೇವತೆಗಳ ಕಿವುಡನ್ನೂ ಹೊಡೆದೆಬ್ಬಿಸುವುದಿಲ್ಲವೇ ? ಹಾಗೆ ಮಾಡುತ್ತದೆಂದೇ ನಂಬಿ ನಾವಿಂದು ದೇಶದೇವಿಯ ತೇರೆಳೆಯಲೆಂದು ಇಲ್ಲಿ ಸೇರಿದ್ದೇವೆ. ಮತ್ತು ಆ ಹೆಮ್ಮೆಯ ಹಬ್ಬಕ್ಕೆ ಕನ್ನಡಮ್ಮನ ಕಂದರನ್ನೆಲ್ಲ ಕೂಗಿ ಕರೆಯುತ್ತಿದ್ದೇವೆ.

ಇತ್ತೀಚೆಗೆ ಜನಾಂಗಗಳ ಜೀವನದಲ್ಲಿ ಕಾರ್ಯಕಾರಿಯಲ್ಲದ ಉದಾರ ಅಸ್ಪಷ್ಟತೆಗೆ ಬದಲಾಗಿ ಫಲಕಾರಿಯಾದ ಸ್ಪಷ್ಟತೆ ಮೂಡುತ್ತಿದೆ. ಏಕೆಂದರೆ, ಬಲಿಷ್ಠರ ಔದಾರ್ಯದಲ್ಲಿ ಔದಾರ್ಯಕ್ಕಿಂತಲೂ ಹೆಚ್ಚಾಗಿ ಬಲವೇ ಪ್ರಕಾಶಿತವಾಗುತ್ತದೆ. ಔದಾರ್ಯವೇಷಿಯಾದ ಬಲವು ತಿಂಡಿಯಿಂದ ತನ್ನ ಕೊಂಡಿಯನ್ನು ಮರೆಮಾಡಿಕೊಂಡಿರುವ ಗಾಳದಂತೆ ಮೃತ್ಯುಕರವಾದುದು. ಅದರಿಂದ ಹೊಟ್ಟೆ ತುಂಬುವುದಕ್ಕೆ ಬದಲಾಗಿ ಗಂಟಲು ಹರಿದುಹೋಗುತ್ತದೆ. ಆದ್ದರಿಂದಲೇ ಆ ಆಕಾಶದೆತ್ತರದ ಆದರ್ಶದಿಂದ ಒಂದಿಷ್ಟು ಚ್ಯುತಿಗೊಂಡರೂ ಚಿಂತೆಯಿಲ್ಲವೆಂದು ಭಾವಿಸಿ ಜನಾಂಗಗಳು ತಮ್ಮ ತಮ್ಮ ಸ್ವಾರ್ಥಗಳನ್ನು ಭದ್ರಪಡಿಸಿಕೊಳ್ಳಲು ಹವಣಿಸುತ್ತಿವೆ. ದೊಡ್ಡ ದೊಡ್ಡವರು ದೊಡ್ಡ ದೊಡ್ಡ ವಿಧಾನಗಳಿಂದ ಪ್ರಯತ್ನಿಸುತ್ತಿರುವಂತೆ ಸಣ್ಣವರು ಸಣ್ಣ ರೀತಿಯಿಂದ ಕಾರ್ಯಸಾಧನೆಯಲ್ಲಿ ಸಾಹಸಿಗಳಾಗಿದ್ದಾರೆ. ಇಂದು ಇಲ್ಲಿ ನೆರೆದಿರುವ ನಾವೆಲ್ಲರೂ, ತಿಳಿದೋ ಅಥವಾ ತಿಳಿಯದೆಯೋ ಅಂತಹ ಸಾಹಸಿಗಳ ಗುಂಪಿಗೆ ಸೇರಿದವರಾಗಿದ್ದೇವೆ. ಅದನ್ನು ಭಾವಿಸುವ ನನ್ನ ಹೃದಯದಲ್ಲಿ ಹೇಗೆ ಹೆಮ್ಮೆಯ ಬುಗ್ಗೆ ಚಿಮ್ಮುತ್ತಿದೆಯೋ ಹಾಗೆಯೇ ನಿಮ್ಮೆಲ್ಲರ ಹೃದಯಗಳಲ್ಲಿಯೂ ಅದು ಚಿಮ್ಮುತ್ತಿದೆಯೆಂದು ನಾನು ಬಲ್ಲೆ.

ಸಮಸ್ತ ಭರತಖಂಡವೂ ಒಂದು ಕೊರಲಾಗಿ, ಒಂದು ಮೈಯಾಗಿ ಕೋಟ್ಯನುಕೋಟಿ ಕೈಗಳಿಂದ ಸಾಹಸಮಾಡುತ್ತಿದೆ, ತನ್ನ ಸ್ಪಷ್ಟತೆಯನ್ನು ಪ್ರಕಟಿಸುವುದಕ್ಕೆ. ಬಲಿಷ್ಠರ ಔದಾರ್ಯದ ಉದರದಲ್ಲಿ ನೆಮ್ಮದಿಯಾಗಿ ನಿದ್ರಿಸುವುದಕ್ಕೆ ಅದಕ್ಕೆ ಮನಸ್ಸಿಲ್ಲ. ಆ ಸ್ವಾತಂತ್ರ್ಯಸಂಪಾದನೆಯ ವಿಚಾರದಲ್ಲಿ ಯಾವನೊಬ್ಬ ದೇಶಭಕ್ತ ಭಾರತೀಯನಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಸ್ವಾತಂತ್ರ್ಯ ದೇವಿಯ ಆರಾಧನೆಗೆ

ಆವಶ್ಯಕವಾದ ನೈವೇದ್ಯಗಳೆಲ್ಲವನ್ನೂ ಅರ್ಪಿಸಲು ಬಲ್ಲವರೆಲ್ಲರೂ ಸಿದ್ಧರಾಗಿದ್ದಾರೆ. ಅದು ಅತ್ಯಂತ ಅಗ್ರಗಣ್ಯ ವಿಷಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಆದರೆ, ಸೆರೆಮನೆಯಿಂದ ಬಿಡುಗಡೆ ಬಯಸುವ ಸೆರೆಯಾಳು ತನ್ನ ಅಂಗಗಳ ಆರೋಗ್ಯದ ವಿಚಾರದಲ್ಲಿ ಅಲಕ್ಷ್ಯಮಾಡಿದರೆ ಅವಿವೇಕವಾಗುತ್ತದೆ. ಅವನ ಒಟ್ಟು ಮೈ ಸೆರೆಯಿಂದ ಹೊರಗೆ ಬರಬೇಕಾದುದು ಅವಶ್ಯ. ಆದರೆ ಸೆರೆಯಿಂದ ಹೊರಗೆ ಬಂದ ಮೇಲೆ, ಅವನು ಹೊಸದಾಗಿ ಪಡೆದ ಸ್ವಾತಂತ್ರ್ಯವು ಸಾರ್ಥಕವಾಗಬೇಕಾದರೆ ಅವನ ಅಂಗೋಪಾಂಗಗಳೆಲ್ಲವುಗಳ ಯೋಗಕ್ಷೇಮವೂ ಅತ್ಯಗತ್ಯ. ಉಪಾಂಗಗಳು ರೋಗಪೀಡಿತವಾಗಿದ್ದರೂ ದುರ್ಬಲವಾಗಿದ್ದರೂ ಅವನು ಅಸೀಮ ಸಾಹಸದಿಂದ ಗೆದ್ದುಕೊಂಡ ಆ ಸ್ವಾತಂತ್ರ್ಯವು ನಿರರ್ಥಕವಾಗುತ್ತದೆ.

ಅದರಂತೆಯೆ ವಿರಾಡ್ರೂಪಿಣಿಯಾದ ಭರತಮಾತೆಯನ್ನು ಬಂಧನಮುಕ್ತಳನ್ನಾಗಿ ಮಾಡುವುದಕ್ಕೆ ನಾನಾಪ್ರಾಂತಗಳ ಆಕೆಯ ಪುತ್ರರೆಲ್ಲರೂ ಒಟ್ಟುಗೂಡಿ ದುಡಿಯಬೇಕು ಎನ್ನುವ ವಿಚಾರದಲ್ಲಿ ಯಾರಲ್ಲಿಯೂ ಎರಡು ಮನಸ್ಸಿಲ್ಲ. ಆದರೆ ಆಕೆಯ ತನುಜಾತೆಯರಂತಿರುವ ಪ್ರಾಂತಗಳೆಲ್ಲವೂ ಬಹುಕಾಲದಿಂದಲೂ ಬೆಳೆಯಿಸಿಕೊಂಡು ಬಂದ ತಮ್ಮ ತಮ್ಮ ಸಂಪದ್ಯುಕ್ತವಾದ ವ್ಯಕ್ತಿತ್ವಗಳನ್ನೆಲ್ಲ ಬಲಿಗೊಡಬೇಕು ಎಂಬ ರಾಜಕೀಯಾದ್ವೈತವಾದವು ಅನೇಕ ಸದಭಿಪ್ರಾಯದ ಮತ್ತು ಸದ್ಬುದ್ಧಿಯ ಶ್ರದ್ಧಾಳುಗಳಿಗೆ ಅರ್ಥವಾಗುತ್ತಿಲ್ಲ; ಅಲ್ಲದೆ ವಿಲಕ್ಷಣವಾಗಿಯೂ ತೋರುತ್ತಿದೆ.

ಭರತಖಂಡವು ಒಂದು ಜನಾಂಗವೂ ಅಲ್ಲ, ಅನೇಕ ಜನಾಂಗಗಳೂ ಅಲ್ಲ; ಅದು ಅನೇಕ ಜನಾಂಗಗಳ ಒಂದು ಜನಾಂಗ. ಆದ್ದರಿಂದಲೇ ಭರತಮಾತೆಯನ್ನು ಎಷ್ಟರ ಮಟ್ಟಿಗೆ ಆರಾಧಿಸುತ್ತಿದ್ದೇವೆಯೋ ಅಷ್ಟರಮಟ್ಟಿಗೇ ಕರ್ನಾಟಕಮಾತೆಯನ್ನೂ ಪೂಜಿಸಲು ನಮಗೆ ಸಾಧ್ಯವಾಗಿದೆ. ತನ್ನ ಸಂಸಾರವನ್ನು ಪ್ರೀತಿಸಿದ ಮಾತ್ರದಿಂದಲೇ ಯಾರೂ ಸಮಾಜಕ್ಕೆ ವೈರಿಯಾಗಲಾರನು. ಸಮಾಜವೆಂದರೇನು ? ಅಂತಹ ಅಸಂಖ್ಯ ಸಂಸಾರಗಳ ಕೂಟವಲ್ಲವೇ ? ಎಲ್ಲ ಸಂಸಾರಗಳ ಸುಖವೇ ತಾನೆ ಒಟ್ಟು ಸಮಾಜದ ಸುಖ ! ಎಲ್ಲ ಪ್ರಾಂತಗಳ ಅಂಗಸೌಂದರ್ಯದಿಂದ ತಾನೆ ಭರತಮಾತೆ ಸರ್ವಾಂಗ ಸುಂದರಿಯಾಗುತ್ತಾಳೆ ! ಇಡೀ ಮನುಷ್ಯನನ್ನು ಜೈಲಿನಿಂದ ಹೊರಗೆ ಬಿಟ್ಟು, ಅವನ ಅಂಗಾಂಗಗಳಿಗೆ ಬೇರೆಬೇರೆಯಾಗಿ ಸಂಕೋಲೆಗಳನ್ನು ಬಿಗಿದರೆ ಅವನು ಸ್ವತಂತ್ರನೆನ್ನಿಸಿಕೊಳ್ಳುವುದಿಲ್ಲ. ಆದ್ದರಿಂದ ಪ್ರಾಂತಪ್ರಾಂತಗಳ ವ್ಯಕ್ತಿತ್ವ ರಕ್ಷಣೆಗೆ ಬೇಕಾದ ಸ್ವಾತಂತ್ರ್ಯವೂ ಭರತಖಂಡದ ಪೂರ್ಣ ಸ್ವಾತಂತ್ರ್ಯದಷ್ಟೇ ಅವಶ್ಯವಾದುದು. ಅಂದರೆ ಪ್ರತಿಯೊಂದು ಪ್ರಾಂತಕ್ಕೂ ಅದರ ಬೆಳೆ, ಅದರ ಕೈಗಾರಿಕೆ, ಅದರ ಹಣ ಕಾಸಿನ ವ್ಯವಸ್ಥೆ, ಅದರ ನಡೆ, ನುಡಿ, ಸಾಹಿತ್ಯ, ಸಂಸ್ಕೃತಿ ಮೊದಲಾದುವುಗಳನ್ನು

ಕಾಪಾಡಿಕೊಳ್ಳುವ ಹಕ್ಕು ಅದಕ್ಕೆ ಬೇಕೇಬೇಕಾಗುತ್ತದೆ. ಆ ಹಕ್ಕಿಗೆ ಭಂಗಬಂದರೆ, ಭರತಖಂಡವು ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸಿದರೂ ಆ ಸ್ವಾತಂತ್ರ್ಯವು ಭಗ್ನದರ್ಪಣವಾಗುತ್ತದೆ; ಅಂತಃಕಲಹದ ವಿಕಾರವನ್ನು ಮಾತ್ರ ವಿಕಾರವಾಗಿ ಪ್ರತಿಬಿಂಬಿಸುವ ಒಡೆದ ಕನ್ನಡಿಯಾಗುತ್ತದೆ.

ಹಾಗಾಗಬೇಕೆಂದು ಯಾವ ದೇಶಭಕ್ತನೂ ಹಾರೈಸುವುದಿಲ್ಲ. ಹಾಗಾಗದಿರುವಂತೆ ನೋಡಿಕೊಳ್ಳುವುದು ನಮ್ಮ ಪರಮ ಪ್ರಾಣಕರ್ತವ್ಯ. ಕರ್ನಾಟಕದ ಏಕೀಕರಣಕ್ಕೂ ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೂ ಕನ್ನಡ ಸಂಸ್ಕೃತಿಯ ಪುನಃಪ್ರಕಾಶನಕ್ಕೂ ಎಡೆಬಿಡದೆ ಮನಮುಟ್ಟಿ ದುಡಿಯುವುದರಿಂದಲೇ ಅಂತಹ ಕರ್ತವ್ಯಪಾಲನೆ ಮಾಡಿದಂತಾಗುತ್ತದೆ.

ಮಕ್ಕಳೆಲ್ಲ ಮನಸ್ಸು ಮಾಡಿದರೆ ನಾಡ ತಾಯಿ ಮೂಡುತ್ತಾಳೆ. ಅದೃಶ್ಯವಾದವಳು ಪ್ರತ್ಯಕ್ಷವಾಗುತ್ತಾಳೆ. ಅರೂಪವಾಗಿರುವ ಆಕೆಯ ಆತ್ಮಶಕ್ತಿ ಬೃಹದಾಕಾರದಿಂದ ಗೋಚರವಾಗುತ್ತದೆ. ಆಕೆ ಕವಿಕಲ್ಪನೆಯ ಮಿಥ್ಯಾಸೃಷ್ಟಿಯೆಂದು ಯಾರೂ ತಿಳಿಯದಿರಲಿ. ಏಕೆಂದರೆ, ಬರಿಯ ಮಿಥ್ಯೆಯಿಂದ ಶಕ್ತಿ ಗೋಚರವಾಗದು. ಸುಂಟರಗಾಳಿಯನ್ನು ನೀವೆಲ್ಲರೂ ನೋಡಿದ್ದೀರಿ. ಗಾಳಿಯನ್ನು ಕಂಡಿದ್ದೀರಿ ಎಂದರೆ ಆಶ್ಚರ್ಯವಾಗುತ್ತದೆ. ಆದರೂ ಸುಂಟರಗಾಳಿಯನ್ನು ನೋಡಿದ್ದೇವೆ. ಆ ಅನಿಲಶಕ್ತಿ ತಿರ್ರನೆ ತಿರುಗುವಾಗ ಧೂಳು ತರಗೆಲೆ ಕಸಕಡ್ಡಿಗಳನ್ನೆಲ್ಲ ಸುತ್ತಿಸುತ್ತ ಹೊತ್ತುಕೊಂಡು ಮೇಲೇಳುತ್ತದೆ. ಆಗ ನಮಗೆ ಸುಂಟರಗಾಳಿಯ ಇರವು ದೃಗ್ಗೋಚರವಾಗುತ್ತದೆ. ಹಾಗೆಯೇ ದೇಶದೇವಿಯ ಕೃಪಾಶಕ್ತಿ ತಿರ್ರನೆ ತಿರುಗುತ್ತಾ ಮೇಲೆದ್ದಿತೆಂದರೆ ಜಡವಾಗಿ ಹುಡಿಯಲ್ಲಿ ಹೊರಳುತ್ತಿರುವ ಒಣಗು ತೃಣಕಣ ಕಸ ಕಡ್ಡಿಗಳೆಲ್ಲ ಸಶಕ್ತವಾಗಿ, ಸಪ್ರಾಣವಾಗಿ, ಸಚೇತನವಾಗಿ, ಊರ್ಧ್ವಗಾಮಿಗಳಾಗಿ ಮುಗಿಲಿಗೇರಿ ಲೋಕದೃಷ್ಟಿಯನ್ನೇ ಸೂರೆಗೊಳ್ಳುತ್ತವೆ. ಆ ಶಕ್ತಿವಲಯಕ್ಕೆ ಸಿಕ್ಕುವ ಪ್ರತಿಯೊಬ್ಬನೂ ಬಡವನಾಗಲಿ ದೊಡ್ಡವನಾಗಲಿ, ಪ್ರಸಿದ್ಧನಾಗಲಿ ಅಪ್ರಸಿದ್ಧನಾಗಲಿ, ಜಾತಿ ಕುಲ ವಯಸ್ಸುಗಳ ತಾರತಮ್ಯವಿಲ್ಲದೆ ಗಗನಕ್ಕೇರುತ್ತಾನೆ; ಕೃತಾರ್ಥನಾಗುತ್ತಾನೆ; ಧನ್ಯನಾಗುತ್ತಾನೆ.

ಕನ್ನಡದ ನೆಲದೊಗ್ಗಟ್ಟಿಗಾಗಿ ಕರ್ನಾಟಕ ಏಕೀಕರಣದ ರಾಜಕೀಯ ಚಳವಳಿ ನಡೆಯುತ್ತಿದೆ. ಕನ್ನಡದ ನಡೆಯ ಮತ್ತು ನುಡಿಯ ಒಗ್ಗಟ್ಟಿಗಾಗಿ ಸಾಹಿತ್ಯದ ಸಾಂಸ್ಕೃತಿಕ ಚಳವಳಿ ಮುಂಬರಿಯುತ್ತಿದೆ. ಕನ್ನಡನಾಡಿನ ಸಿರಿಯ ಏಳ್ಗೆಗಾಗಿ ಆರ್ಥಿಕ ಚಳವಳಿ ಇನ್ನೂ ಸಾಕಷ್ಟು ನಡೆದಿಲ್ಲ; ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. ಆದರೆ ಅದೂ ಇಂದೋ ನಾಳೆಯೋ ರೂಪುಗೊಳ್ಳಲೇಬೇಕಾಗಿದೆ.

ಕನ್ನಡ ನಾಡಿನಲ್ಲಿ ಕನ್ನಡಿಗರ ಬ್ಯಾಂಕುಗಳೂ ಕನ್ನಡಿಗರ ಜೀವವಿಮಾ ಕಂಪೆನಿಗಳೂ ಕನ್ನಡಿಗರ ಕಾರ್ಖಾನೆಗಳೂ ಕನ್ನಡಿಗರ ಕೈಗಾರಿಕೆಗಳೂ ಮತ್ತು ಕನ್ನಡಿಗರ ವ್ಯಾಪಾರಸಂಸ್ಥೆಗಳೂ ಹುಟ್ಟಿ ಬೆಳೆದು ಕರ್ನಾಟಕದ ಸಂಪದಭ್ಯುದಯದ ಮಟ್ಟವನ್ನು ಮೇಲ್ಗೊಳಿಸಬೇಕಾದರೆ, ನಮ್ಮವರು ಕಣ್ಣುಮುಚ್ಚಿಕೊಂಡು ಹೊರನಾಡಿಗರ ಕೈಬಾಯಿ ತುಂಬುವ ತಮ್ಮ ದಾನಶೌರ್ಯದ ವಿಚಾರದಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ವಿವೇಚನೆಯಿಂದ ವರ್ತಿಸಬೇಕಾಗಿರುವ ಕಾಲ ಈಗಲೀಗ ಬಂದಿದೆ.

ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಕರ್ನಾಟಕ ಏಕೀಕರಣವು ಅತ್ಯಾವಶ್ಯಕವಾದುದಾದರೂ, ಸಾಧ್ಯದೂರವಲ್ಲದಿದ್ದರೂ, ಸದ್ಯಕ್ಕೆ ದೂರಸಾಧ್ಯವಾಗಿದೆ. ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಆ ಏಕೀಕರಣವು ಈಗ ಆಗಲೇ ಅರೆಪಾಲಿಗೆ ಮಿಗಿಲಾಗಿಯೇ ಕೈಗೂಡಿದಂತಿದೆ. ಆ ಪ್ರಯತ್ನಕ್ಕೆ ಪ್ರತಿನಿಧಿಯಾಗಿ ಕೇಂದ್ರಸಂಸ್ಥೆಯಾಗಿರುವ ಪರಿಷತ್ತೂ, ಆ ಉದ್ಯಮವನ್ನೇ ವಿಧವಿಧ ರೀತಿಗಳಿಂದ ಸಫಲಗೊಳಿಸುತ್ತಿರುವ ನೂರಾರು ಕರ್ನಾಟಕ ಸಂಘಗಳೂ, ಸಂಸ್ಥೆಗಳ ಮುಖಾಂತರವಾಗಿಯೋ ಅಥವಾ ಪ್ರತ್ಯೇಕವಾಗಿಯೋ ನಿರಂತರವೂ ಆ ವ್ರತಸಾಧನೆಯಲ್ಲಿಯೇ ದೀಕ್ಷೆಗೊಂಡಿರುವ ಇತರ ಮಹಾನುಭಾವ ವ್ಯಕ್ತಿಗಳೂ ಕೆಲಕಾಲದಲ್ಲಿಯೇ ಆ ಕನಸನ್ನು ನನಸುಗೊಳಿಸುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ನಾವೆಲ್ಲರೂ ಅವರಿಗೆ ನೆರವಾದರೆ ಅವರ ತಪಸ್ಸಿದ್ಧಿ ಶೀಘ್ರಸಾಧ್ಯವಾಗುತ್ತದೆ.

ರಾಜಕೀಯ ದೃಷ್ಟಿಯಿಂದ ಭೌಗೋಲಿಕ ಕರ್ನಾಟಕವು ಹರಿಹಂಚಿ ಹೋಗಿದ್ದರೂ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ದೃಷ್ಟಿಯಿಂದ ನೋಡಿದರೆ ಆತ್ಮಗೋಲಕ್ಕೆ ಸೇರಿರುವ ಸೂಕ್ಷ್ಮವೂ ಶಾಶ್ವತತರವೂ ಆದ ಕನ್ನಡನಾಡಿನ ನಿಜಬೆಸುಗೆ ಇನ್ನು ಬಿಚ್ಚಿ ಬಿರಿದಿಲ್ಲ. ಕನ್ನಡ ನೆಲವು ನಾಲ್ಕಾರು ಸರಕಾರಗಳ ಬೇರೆ ಬೇರೆ ಆಧಿಪತ್ಯಕ್ಕೆ ಈಡಾಗಿ ಬಿರಿದಿದ್ದರೂ ಕನ್ನಡಿಗರೊಲವು ಏಕಚ್ಛತ್ರಾಶ್ರಯದಲ್ಲಿದೆ. ಕರ್ನಾಟಕಕ್ಕೆ ಅಖಂಡವಾದ ಭೂಸಾಮ್ರಾಜ್ಯವಿನ್ನೂ ಸಿದ್ಧವಾಗದಿದ್ದರೂ ಸಾಹಿತ್ಯ ಸಾಮ್ರಾಜ್ಯವೇನೋ ಸಿದ್ಧವಾಗಿದೆ. ಎಲ್ಲಿಯವರೆಗೆ ಕನ್ನಡಿಗರೆಲ್ಲರೂ, ಅವರು ಎಲ್ಲಿಯೇ ಇರಲಿ, ಪಂಪ ರನ್ನ ನಾಗವರ್ಮ ರಾಘವಾಂಕ ನಾರಣಪ್ಪ ಲಕ್ಷ್ಮೀಶ ಮೊದಲಾದ ಕವಿವರ್ಯರ ಸಾಹಿತ್ಯಸಿಂಹಾಸನಕ್ಕೆ ತಲೆಬಾಗುತ್ತಾರೋ ಅಲ್ಲಿಯ ವರೆಗೆ ಕನ್ನಡ ಸಾಮ್ರಾಜ್ಯಕ್ಕೆ ಚ್ಯುತಿಯಿಲ್ಲ. ಸುಡಿಯೊಲ್ಮೆಯೊಂದಿದ್ದರೆ ದೇಶದೇವಿಯ ಗುಡಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಒಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿ ಕೆಳಕ್ಕುರುಳಿ ನೆಲಸಮವಾಗುತ್ತದೆ. ಸೂಡೆಟಾನ್ ಪ್ರಾಂತವು ಜರ್ಮನೇತರ ಸರ್ಕಾರಕ್ಕೆ ಇಪ್ಪತ್ತು ವರ್ಷಗಳಿಂದ

ಸೇರಿಹೋಗಿದ್ದರೇನಂತೆ? ಎಲ್ಲಿಯವರೆಗೆ ಆ ಪ್ರಾಂತದ ಜರ್ಮನರು ತಮ್ಮ ಭಾಷೆ, ತಮ್ಮ ಸಾಹಿತ್ಯ, ತಮ್ಮ ಸಂಸ್ಕೃತಿ, ತಮ್ಮ ಗಯಟೆ, ತಮ್ಮ ಷಿಲರ್ ಎಂಬ ಅಭಿಮಾನವನ್ನು ಸಜೀವವಾಗಿಟ್ಟುಕೊಂಡಿದ್ದರೋ ಅಲ್ಲಿಯವರೆಗೆ ಅವರು ಸೂಕ್ಷ್ಮವೂ ಶಾಶ್ವತತರವೂ ಆದ ಸ್ವೈಜಜರ್ಮನ್ ಸಾಮ್ರಾಜ್ಯಕ್ಕೆ ಸೇರಿದವರಾಗಿಯೇ ಇದ್ದರು. ಕೃತಕವಾದ ರಾಜಕೀಯ ವಿಭಜನೆಯು ಸ್ವೈಜವಾದ ಸಂಸ್ಕೃತಿಯ ಏಕತೆಯನ್ನು ಎಂದಿಗೂ ಶಾಶ್ವತವಾಗಿ ನಾಶಮಾಡಲಾರದು. ಇಂದಲ್ಲ ನಾಳೆ ಸ್ವೈಜಕ್ಕೆ ಜಯವಿದೆ, ಕೃತಕಕ್ಕೆ ಪತನವಿದೆ. ಆದ್ದರಿಂದ ವಿವಿಧ ರಾಜಕೀಯ ವಿಭಾಗಗಳಲ್ಲಿ ಹರಿಹಂಚಿ ಹೋದ ಕರ್ನಾಟಕದ ಉದಾರಹೃದಯದ ಜನರಲ್ಲಿ ನುಡಿಯೊಲ್ಮೆಯ ಕಿಡಿ ಕೆಡದಂತೆ ನಿರಂತರವೂ ಸಾವೇಶಪ್ರೋತ್ಸಾಹವೀಯಬೇಕಾದುದು ಕರ್ನಾಟಕದ ಪುನರುತ್ಥಾನಕ್ಕಾಗಿ ದುಡಿಯಲು ದೀಕ್ಷೆಗೊಂಡ ತಪಸ್ವಿಗಳೆಲ್ಲರ ಕರ್ತವ್ಯ. ಏಕೆಂದರೆ, ನುಡಿ ಬಿಟ್ಟರೆ ನಾಡು ಬಿಟ್ಟಂತೆ. ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ. ಅನಿವಾರ್ಯ.

ತಪಸ್ಸು ನಿರ್ವಿಘ್ನವಾಗಿ ಸಾಗುವುದು ಅಪೂರ್ವವಂತೆ; ಪುರಾಣ ಕಥೆಗಳನ್ನು ನೋಡಿದರೆ, ಅಸಂಭವವೆಂದರೂ ಎನ್ನಬಹುದು. ಬಹುಶಃ ತಪಸ್ಸಿನ ಬೆಂಕಿಗೆ ವಿಘ್ನದ ಕಟ್ಟಿಗೆ ಆವಶ್ಯಕವೋ ಏನೋ! ಪ್ರತಿಯೊಬ್ಬ ವಿಶ್ವಾಮಿತ್ರನಿಗೂ ತಪೋಭಂಗ ಕಾರಿಣಿಯಾದ ಮೇನಕೆ ಎಲ್ಲಿಂದಲೋ ಬರುತ್ತಾಳೆ! ಕನ್ನಡ ನುಡಿಯೊಗ್ಗಟ್ಟಿನ ವಿಶ್ವಾಮಿತ್ರನ ತಪಸ್ಸಿಗೂ ಅಪ್ಸರಿಯರಿಂದ ಅಪಾಯ ತಪ್ಪಿದ್ದಲ್ಲ. ಅಪಾಯ ಬರುವುದು ಅಪ್ಸರಿಯಿಂದಲ್ಲ; ಅಪ್ಸರಿಯ ಸಂಗದಿಂದ ತಪೋಭಂಗವಾಗುವುದಿಲ್ಲ ಎಂಬ ಬಿನ್ನಾಣದ ವಾದದಿಂದ. ಅಂತಹ ವಾದವು ಅದೂರ ದೃಷ್ಟಿಯ, ಅಲ್ಪ ಮತಿಯ, ಅನುಭವ ಹೀನತೆಯ ಆತ್ಮವಂಚನೆಯಲ್ಲದೆ ಮತ್ತೇನು? ಅಲಂಕಾರದ ತೆರೆಯನ್ನೆತ್ತಿ ಅದರ ಹಿಂದುಗಡೆಯ ಕಠೋರ ಸತ್ಯವನ್ನು ಪ್ರದರ್ಶಿಸುವುದಕ್ಕೆ ಈ ಲಲಿತ ಸನ್ನಿವೇಶದಲ್ಲಿ ನನಗೆ ಮನಸ್ಸು ಬರುವುದಿಲ್ಲ. ಆದರೂ ಇಷ್ಟುಮಾತ್ರ ಹೇಳುತ್ತೇನೆ:

ನಮ್ಮ ಮನೆಯ ನೆಮ್ಮದಿಯ ವಿಷಯದಲ್ಲಿ ಹೆರರ ಮಾತು ಸಲಹೆಯಾಗಿರಬೇಕೇ ಹೊರತು ವೇದವಾಕ್ಯವಾಗಿರಬಾರದು. ಏಕೆಂದರೆ, ನಮ್ಮ ಕಷ್ಟ ಸಂಕಟಗಳೂ ಆಸೆ ಬಯಕೆಗಳೂ ಅನ್ಯರ ಮನಸ್ಸಿಗೆ ಸಂಪೂರ್ಣವಾಗಿ ಬರಲಾರವೆಂದೇ ತೋರುತ್ತದೆ.

ಕನ್ನಡ ಜನತೆ ಎಚ್ಚತ್ತಿದೆ; ಕನ್ನಡಸಾಹಿತ್ಯ ಆ ಎಚ್ಚರವನ್ನು ಮರುಬಿಂಬಿಸುತ್ತಿದೆ ಮತ್ತು ಹುರುಪುಗೊಳಿಸುತ್ತಿದೆ; ಲೇಖಕರು ಹೆಚ್ಚು ಹೆಚ್ಚು ಆಸಕ್ತಿಯಿಂದ ವಿಜ್ಞಾನ ವ್ಯಾಪಾರಾದಿ ಶಾಸ್ತ್ರವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಯುತ್ತಿರುವಂತೆಯೆ ಜನರೂ ಅವುಗಳನ್ನು ಕೊಂಡು, ಓದಿ, ಮುಂದುವರಿಯುತ್ತಿದ್ದಾರೆ ಎಂಬ ನಂಬುಗೆ ಹಬ್ಬುತ್ತಿದೆ. ಜನರ ಸಾಹಿತ್ಯೋತ್ಸಾಹಕ್ಕೆ ಮಾಪನಯಂತ್ರಗಳಂತಿರುವ ಪುಸ್ತಕ

ವ್ಯಾಪಾರಿಗಳನ್ನೂ ಪತ್ರಿಕಾಸಂಪಾದಕರುಗಳನ್ನೂ ಕೇಳಿ ತಿಳಿಯುವವರಿಗೆ ಮಾತ್ರ ಆ ನಂಬುಗೆ ಸ್ವಲ್ಪಮಟ್ಟಿಗಾದರೂ ಅತಿಶಯೋಕ್ತಿಯಾಗಿರುವಂತೆ ತೋರುತ್ತದೆ. ಈ ಅಪನಂಬಿಕೆ ಶಿವಮೊಗ್ಗೆಯಂತಹ ಸುಶಿಕ್ಷಿತ ನಾಗರಿಕ ನಗರಕ್ಕೆ ಅನ್ವಯಿಸದಿರಬಹುದು. ಆದರೆ ಶಿವಮೊಗ್ಗೆಯೊಂದರ ಜಾಗ್ರತಿ ಸಮಸ್ತ ಕರ್ನಾಟಕದ ಜಾಗ್ರತಿಯಲ್ಲ. ಶಿವಮೊಗ್ಗೆಯ ಜನರನ್ನು ತೃಪ್ತಿಗೊಳಿಸಿ ಮೆಚ್ಚಿಸುವುದಕ್ಕಲ್ಲ ಈ ಪ್ರಶಂಸೆ, ಅವರನ್ನು ಇನ್ನೂ ಕಾರ್ಯೋನ್ಮುಖರನ್ನಾಗಿ ಮಾಡುವುದಕ್ಕೆ.

ಸಾಹಿತ್ಯ ಪ್ರಚಾರವು ಆವೇಶದಾವಾಗ್ನಿಯ ಪ್ರಸಾರವೆಂದು ತಿಳಿಯಿರಿ. ವಾಙ್ಮಂತ್ರಶಕ್ತಿಗೆ ಶಿಲೆ ಸಜೀವವಾಗುತ್ತದೆ; ಸುಡಿಕಲೆಯ ಹೊಳೆಯಲ್ಲಿ ಮಿಂದರೆ ಹೊಲೆ ಹೊಸಮುಡಿಯಾಗುತ್ತದೆ.

ಕರ್ನಾಟಕ ಭಕ್ತರಲ್ಲಿ, ಕನ್ನಡಸಾಹಿತ್ಯ ಸೇವಕರಲ್ಲಿ, ಕನ್ನಡಮ್ಮನ ಮಕ್ಕಳಲ್ಲಿ ಆ ನಾಡದೇವಿಯ ಉಪಾಸಕನಾದ ಕಬ್ಬಿಗನೊಬ್ಬನು ಇಂತೆಂದು ಪ್ರಜ್ಞಾಪಿಸುತ್ತಿದ್ದಾನೆ :

ನಾವು ತೋರಿಸುತ್ತಿರುವ ಆಸಕ್ತಿ ಶ್ಲಾಘನೀಯವಾಗಿದೆ; ಆದರೂ ಸಾಲದಾಗಿದೆ.

ನಮ್ಮ ಇಚ್ಛೆ ಎಚ್ಚತ್ತಿದೆ; ಆದರಿನ್ನೂ ಮುನ್ನುಗ್ಗಿ ಹೋರಾಡುವುದನ್ನು ಕಲಿಯಬೇಕಾಗಿದೆ.

ನಮ್ಮ ಆಸೆ ಕೆರಳಿದೆ; ಆದರಿನ್ನೂ ಕಾರ್ಯಕಾರಿಯಾಗಿ ಸೃಷ್ಟಿಸಲು ತೊಡಗಿಲ್ಲ.

ನಮ್ಮ ಆತ್ಮಗೌರವದ ಸರ್ಪಕ್ಕೆ ಅವಹೇಳನದ ಪದಾಘಾತವಾಗಿದೆ; ಆದರಿನ್ನೂ ಹೆಡೆಯೆತ್ತಿ ನಿಂತಿಲ್ಲ.

ನಮ್ಮ ಸ್ವಾರ್ಥತೆ ಬಲಿಪೀಠಕ್ಕೇರಿದೆ; ಆದರಿನ್ನೂ ದೃಢಚಿತ್ತದ ಖಡ್ಗವು ಕೆಳಗಿಳಿದಿಲ್ಲ. ಆದ್ದರಿಂದ ತ್ಯಾಗದೇವತೆ ಪ್ರತ್ಯಕ್ಷಳಾಗಿಲ್ಲ.

ತ್ಯಾಗದೇವತೆ ಪ್ರತ್ಯಕ್ಷಳಾಗುವ ವರೆಗೂ ಕರ್ನಾಟಕ ದೇಶದೇವಿ ನಮಗೆ ಸುಪ್ರಸನ್ನಳಾಗುವುದಿಲ್ಲ.

ದೇವಿ ಪ್ರಸನ್ನಳಾಗುವ ವರೆಗೂ ನಮಗೆ ನಿದ್ದೆಯಿಲ್ಲ, ಸುಖವಿಲ್ಲ, ಶಾಂತಿಯಿಲ್ಲ !

ಕೆ. ವಿ. ಪುಟ್ಟಪ್ಪ.

ಬೇಲೂರು ಚನ್ನಯ್ಯನ ತೇರು

(ಕೋಲಾಟದ ಪದ)

ಕೋಲು ರನ್ನದಿ ಕೋಲಾನ್ನ ಽ|
ಏ ಕೋಲು ಕೋಲು ಕೋಲಾನ್ನ ಽ|| ಪಲ್ಲ||

೧

ಬೇಲೂರು ಎಂಬೋದು ಏಳು ಸುತ್ತಿನ ಕೋಟೆ
ಮೇಲೆ ಡೊಂಕಾಣೀ ಹುಲಿ ಮುಖಾ—ಕೋಲು—
ಮೇಲೆ ಡೊಂಕಾಣೀ ಹುಲಿ ಮುಖ ಚನ್ನಯ್ನ
ಹೆಂಡಾರಿರುವೋದೊಂದಽರಮಽಸೇ—ಕೋಲು—

೨

ಗಂಧಾಪ ಹುಯಿಕೊಂಡು ಸಂದೀನ ಏರಿಕೊಂಡು
ಹೆಂಡಾರಿಬ್ಬರ ಸ್ವಾವ್ಯೊಡಗೊಂಡೂ—ಕೋಲು—
ಹೆಂಡಾರಿಬ್ಬರ ಸ್ವಾವ್ಯೊಡಗೊಂಡು ಚನ್ನಯ್ಯ
ಗಂಧಾದೋಕುಳಿಗೆಂದ್ಹೊರಟಾಸೇ—ಕೋಲು—

೩

ಭಸುಮಾವ ಹುಯಿಕೊಂಡು ಬಸವಾನ ಏರಿಕೊಂಡು
ಅರಸೇರಿಬ್ಬರ ಸ್ವಾವ್ಯೊಡಗೊಂಡೂ—ಕೋಲು—
ಅರಸೇರಿಬ್ಬರ ಸ್ವಾವ್ಯೊಡಗೊಂಡು ಚನ್ನಯ್ಯ
ದಸರೇದೋಕುಳಿಗೆಂದ್ಹೊರಟಾಸೇ—ಕೋಲು—

೪

ಬೇಲೂರು ಚನ್ನಯ್ನ ತೇರೆಂಟು ದಿನದಾಗೆ
ಬೀರೂರಿಗ್ವಾಲೇ ಬಽರೆದಾರೇ—ಕೋಲು—
ಬೀರೂರಿಗ್ವಾಲೇ ಏನಂತ ಬರೆದಾರೆ
ದೂರಾಲ ಪರುಸೇ ಬಽರಲೆಂದೂ—ಕೋಲು—

೫

ಬೇಲೂರು ಚನ್ನಯ್ನ ತೇರೆಂಟು ದಿನದಾಗೆ
ಕಿಕ್ಕೇರಿಗ್ವಾಲೇ ಬಽರೆದಾರೇ—ಕೋಲು—
ಕಿಕ್ಕೇರಿಗ್ವಾಲೇ ಏನಂತ ಬರೆದಾರೆ
ಹತ್ತಿರಲ ಪರುಸೇ ಬಽರಲೆಂದೂ—ಕೋಲು—

೬

ಬೇಲೂರು ಚನ್ನಯ್ನ ತೇರೆಂಟು ದಿನದಾಗೆ
ದೇವ್ಗ್ಗಂದಕ್ವಾಲೇ ಬಽರೆದಾರೆ—ಕೋಲು—
ದೇವ್ಗ್ಗಂದಕ್ವಾಲೇ ಏನಂತ ಬರೆದಾರೆ
ಮುತ್ತಿನ ಪಾಲ್ಕೀ ಬಽರಲೆಂದೂ—ಕೋಲು—

೭

ಕಿಕ್ಕೇರಿಗ್ಹೋಗ್ವಾಗ ಹೊಕ್ಕಾವೆ ಮಲ್ಲೀಗೆ
ಕಿಕ್ಕೇರಿಗ್ಹೋಗೀ ಬಽರುವೋನೇ—ಕೋಲು—
ಕಿಕ್ಕೇರಿಗ್ಹೋಗೀ ಬರುವೊ ಚನ್ನಯ್ಯಾನ
ಕತ್ತೀಗೆ ಧೂಳೂ ಗಽವಿದಾವೇ—ಕೋಲು—

೮

ಬಿದುರೂರಿಗ್ಹೋಗ್ವಾಗ ಉದುರಾವೆ ಮಲ್ಲೀಗೆ
ಬಿದುರೂರಿಗ್ಹೋಗೀ ಬಽರುವೋನೇ—ಕೋಲು—
ಬಿದುರೂರಿಗ್ಹೋಗೀ ಬರುವೋ ಚನ್ನಯ್ಯಾನ
ಕುದುರೇಗೆ ಧೂಳೂ ಗಽವಿದಾವೇ—ಕೋಲು—

೯

ಎಣ್ಣೆವಸ್ತ್ರದೋನೆ ಎಣ್ಣೆರುಮಾಲುದೋನೆ
ಎಣ್ಣೆಹೊಳೆಗ್ಹೋಗೀ ಬಽರುವೋನೇ—ಕೋಲು—
ಎಣ್ಣೀಹೊಳೆಗ್ಹೋಗೀ ಬರುವೋ ಚನ್ನಯ್ಯಾಗೇ
ಹಣ್ಣೆಟ್ಟು ಕೈಯಾ ಮುಗುದೇವೇ—ಕೋಲು—

೧೦

ಕಾವಿ ವಸ್ತ್ರದೋನೆ ಕಾವಿ ರುಮಾಲುದೋನೆ
ಕಾವೇರಿಗ್ಹೋಗೀ ಬರುವೋನೇ—ಕೋಲು—
ಕಾವೇರಿಗ್ಹೋಗೀ ಬರುವೋ ಚನ್ನಯ್ಯಾಗೇ
ಕಾಯಿಟ್ಟು ಕೈಯಾ ಮುಗುದೇವೇ—ಕೋಲು—

ಸಂಗ್ರಹಕಾರರು: ಎಂ. ಕೃಷ್ಣಮೂರ್ತಿ, ಮತಿಘಟ್ಟ.

ರಂಗಯ್ಯನ ವಚನಗಳು

(ಇನ್ನಷ್ಟು)

"ಬಹಿಷ್ಕೃತ ಸುಖದ ಬಟ್ಟಲಸು ಎತ್ತುವೆಸಿಂದು ಮಾತ್ರ: ಅದ ಬೀಸಿ ಒಗೆಯುವೆನು ಖಂಡಿತ ನಾಳೆ!" "ಮಧ್ಯಾಹ್ನವಾದರು ಮನಕೆ ತಾರದೆ ನಿದ್ರಿಪೆ ನಿದೊಂದು ದಿವಸ: ಬೇಗೆದ್ದು ಸೂರ್ಯಸಾರಥಿಯ ನಾಚಿಪೆನು ನಾಳೆ!" "ತಾಮಸದ ಬಳ್ಳಿ ಹಬ್ಬಿರಲಿ ಇಂದು: ತಪ್ಪದೆ ಅದರ ಬೇರ ಕೊಯ್ವೆನು ನಾಳೆ!" "ಆಲಸ್ಯ ಜೀವನಕೆ ಇಂದೆ ಚರಮದಿನ: ಆದರ್ಶಜೀವನವು ನಾಳೆ ಪ್ರಾರಂಭ!"

ಇದೆಂತಹ ಮರುಳು! ಎಂತಹ ಮಂಕುಬೂದಿ! ನಷ್ಟ ಸುಳಿಯವಗೆ ದೃಷ್ಟಿ ನಾಳೆಯ ಮೇಲೆ; ಬಾಳ ಬರಡುಗೈದುದಕೆ ಅವಗೆ ನಾಳೆ ನೆಪ. ಎಲ್ಲಿಹುದು ನಾಳೆ? ಅಸಂಖ್ಯಾತ ನಾಳೆಗಳು ನಿನ್ನೆಯ ರುದ್ರಭೂಮಿಯಲಿ ಸುಟ್ಟು ಭಸ್ಮವಾದುವು; ನಾಳೆ ಬರುವುದಕಿರುವ ನಾಳೆಯೂ ಅಷ್ಟೆ! ಎಲ್ಲಿಹುದಯ್ಯ ನಾಳೆ? ಶಾಶ್ವತ ಪುರುಷ! ದೇವರದೇವ ಮಾವಿನಕೆರೆಯ ರಂಗಯ್ಯ.

***

ಮರುಕಮಳೆಯನು ಕರೆವಮೊದಲು ಕ್ಷೇತ್ರ ಬಾಯಾರಿದೆಯೆ ಕಂಡುಹಿಡಿಯು ವುದು ಕ್ಷೇಮ. ತನ್ನ ಜೀವನದ ಸೂತ್ರವನು, ಶುಕ್ಲಪಕ್ಷದ ಸಾಧನೆಯ, ಕೃಷ್ಣ ಪಕ್ಷದ ಕಾರಣವ, ಅಳತೆ ಪರಿಮಾಣಗಳ, ಇತರರಿಗೆ ಅವಸರದಿ ಅನ್ವಯಿಸಿ ಎದೆಯ ಮೃದುಮಾಡುವುದು ನಿರರ್ಥಕವಯ್ಯ. ಬಾಲಕನ ತುಟಿಯನ್ನ ಮೀಸೆ ಮುಚ್ಚ ಲಿಲ್ಲೆಂದು ಮಧ್ಯವಯಸ್ಕ ಕುದ್ದುಕೊಂಡರೆ ಹುಚ್ಚಷ್ಟೆ! ಮೋಟಾರು ಗಾಡಿಯಲಿ ಕುಳಿತ ಬೊಜ್ಜು ಜಡಭರತನಿಗೆ ದಾರಿಯಲಿ ನಡೆವ ಕಾಲಿನ ಕಲಿಯ ನೋಡಿ ಕರುಳು ಹೊರಳುವುದು ಯಾವ ದೇವರಿಗೆ ಸಲೆ? ರಾಗಿ ಭೋಗಿಪಗೆ ಅಕ್ಕಿಮುಕ್ಕುವನ ಕರುಣೆ ಬೇಡ.

ಸಕಲ ಪ್ರಾಣಿಗಳ ಪ್ರಕೃತಿ ತುಂಬಿಹಳು ಆತ್ಮಗೌರವದಿ. ಕೂದಲುದಿರಿರಲಿ, ಖಜ್ಜಿ ಮೈ ತಿಂದಿರಲಿ, ಬೀದಿಯ ನಾಯಿ ನಾಯಿಯಂತೇ ಗುರ್ರೆನ್ನುವುದು. ಕೊಳಚೆ ನೀರ್ಕನ್ನಡಿಯಲ್ಲಿ ತಿರುಕಿ ತಿದ್ದುವಳು ತನ್ನ ಕುರುಳ. ಪಾತ್ರವರಿಯದೆ, ಪ್ರತಿಷ್ಠೆಯಲಿ, ಎಲ್ಲೆಡೆಗು ದಯೆಯ ಬೀರುವುದು ದುಂದುಗಾರಿಕೆಯಯ್ಯ. ವಿವೇಕ ಸರ್ವಸ್ವ! ದೇವರ ದೇವ ಮಾವಿನಕೆರೆಯ ರಂಗಯ್ಯ.

***

ಪ್ರತಿಯೊಬ್ಬ ಮನುಜನಿಗು ತೋರುವುದಯ್ಯ ಕೆಲದವನ ಕಸುಬು ಹೂವಿ ನಂದದಿ ಹಗುರ: ಸ್ವಂತ ಕೃಷಿ ಬಂಡೆಗಿಂತಲು ಭಾರ. ಕುರುಬನಿಗೆ ಕರುಬು ಅಂಗಡಿಗನ ಕಂಡು. ಕುಳಿತು ಕೈಲಾಳಿಯನಾಡಿಸಾಡಿಸಿ ಕಾಲುಕಟ್ಟಿದ ನೇಯ್ಗೆವನಿಗೆ ಹೊಲಗದ್ದೆಯಲಿ ಓಡಾಡಿ, ನಿರ್ಮಲ ಬೆಳಕು ಗಾಳಿಗಳ ಉಪಭೋಗಿಸುವ ಒಕ್ಕಲಿಗನ ಹದನೇ ಸೊಗಸು. ಕಂಗಳಿಗೆ ನಿದ್ದೆಯಿಲ್ಲದೆ, ಹೊತ್ತುಗೊತ್ತಿಗೆ ಊಟವಿಲ್ಲದೆ, ಊರೂರ ತಿರುಗುವ ಬಂಡಿಗಾರ ಒಂದೆಡೆಯಲ್ಲಿ ಮೊಳೆ ಬಡಿದಂತೆ ತಂಗಿ, ಬೆಳಗಿನಿಂ ಬೈಗಿನ ವರೆಗೆ ಬೆಳ್ಳಿ ಭಂಗಾರಗಳ ತಟ್ಟುವ ಅಕ್ಕಸಾಲಿಗನ ಬಾಯ್ಬಿಟ್ಟು ನೋಡುವನು. ಆಗಲೋ ಈಗಲೋ ಹತ್ತಿರ ಬರುವ ನೆಲೆಯಿಲ್ಲದಾದಾಯದಲಿ ನೆಮ್ಮದಿ ಅಳಿದ ವಕೀಲನಿಗೆ ತಿಂಗಳ ಗಡುವು ತೀರಿದ ಕ್ಷಣದಿ ಸಂಬಳವ ತುಂಬಿಕೊಳ್ಳುವ ಅಧಿಕಾರಿಯ ಕುರಿತು ಹೊಟ್ಟೆಯುರಿ. ಪಾಠಶಾಲೆಯ ಬಂಧನದಲ್ಲಿ ಬೇಸತ್ತು, ಬಾಲಮೌಢ್ಯದ ಕೂಡೆ ನಿತ್ಯಯುದ್ಧವ ಗೈದು ಬಳಲಿ ಬಸುಸುಯ್ವ ವಿದ್ಯಾವಿಚಕ್ಷಣಗೆ ನದಿಯ ಬಳಿಯಲಿ ಗಿಡದ ಮರೆಯಲಿ, ಬೆಟ್ಟದ ಮೇಲೆ, ಕೋಟೆಯ ಒಳಗೆ, ಸುಳಿದಾಡಿ, ಕಾಲವ ಕಳೆವ ವನರಕ್ಷಕನ ವೃತ್ತಿಯೆ ವೃತ್ತಿ!

ಅಹುದು, ಸಮಂಜಸ: ಅನ್ಯರುದ್ಯೋಗದಲಿ ಸಂತೋಷಜಾಲವನು ಮಾತ್ರ, ನಮ್ಮ ಜೀತದಲಿ ರಗಳೆಯ ರಾಶಿಯನು ಮಾತ್ರ, ಗಮನಿಪೆವಯ್ಯ. "ನೆರೆಮನೆಯ ದೋಸೆಯೂ ತೂತು" ಎನ್ನುವ ಸತ್ಯ ಹೇಗೆ ತಿಳಿದೀತು: ಮಧ್ಯದಲಿ ಗೋಡೆ ಯಿಹುದು; ಆ ಗೋಡೆಯಿಂದಾಚೆ ಆಮೋದದಾಗರ, ಈಚೆ ಅಳಲಿನ ಅಗಳು, ಅಲ್ಲವೆ!

ಛೀ, ಸುಖಕೆ ವ್ಯವಹಾರಗಳಲಿ ಅಸ್ಪೃಶ್ಯರಿಲ್ಲ; ಹಾಗು ದುಃಖವಿಲ್ಲದ ದುಡಿತವಿಲ್ಲ. ಕರ್ಮದೇಹಕೆ ದುಃಖವೆ ಮೂಳೆ, ಸುಖವೆ ಮಾಂಸ. "ಕೈಕೆಸರು ಬಾಯ್ಮೊಸರು" ಎಂದವನೊಬ್ಬ ಸಣ್ಣ ಸರ್ವಜ್ಞ. ಭ್ರಾಂತಿಯನು ಬಡಿದೋಡಿಸಯ್ಯ, ದೇವರದೇವ ಮಾವಿನಕೆರೆಯ ರಂಗಯ್ಯ.

***

ಕರ್ನಾಟ ಜನಪದವು ಈಗ ಕುರಿಮಂದೆ, ನರಿಬಳಗ, ಹೆಬ್ಬಾವು ಸಂಸಾರ, ಎಮ್ಮೆದೊಡ್ಡಿ, ತಟ್ಟುಕೊಟ್ಟಿಗೆ, ಇರುವೆಗೂಡು. ಎಲ್ಲವನು ಎಲ್ಲರನು ಎಚ್ಚರಿಸಿ, ಇದಿರು ನಿಲ್ಲಿಸಿ, ಶಾಸನವ ಪಾಲಿಸಯ್ಯ, ಕನ್ನಡವ ಕಾಪಿಡಲು ಕೆಲಸ ತಿಳಿಸಯ್ಯ, ಕುಶಲ ಕಲಿಸಯ್ಯ!

ಏಳನೆಯ ಮಾಸದಲಿ ಬಸುರಿ ಬಲಬಾಹುವಿಗೆ ಕನ್ನಡ ರಕ್ಷೆ ಕಟ್ಟಬೇಕು. ಮಗು ಜನಿಸಿದ ಒಡನೆ ತಿನ್ನಿಸುವ ಬಜೆಬೆಣ್ಣೆಯ ಜೊತೆಗೆ ಕನ್ನಡವ ಬೆರೆಸುವುದ ಮರೆಯಬಾರದು. ಅನ್ಯಭಾಷೆಯ ಕುರಿತು ಅತಿ ಅನ್ಯಾಯಕಾಮವೆನ್ನುವ ಸಾಂಕ್ರಾ

ಮಿಕ ಜಾಡ್ಯ ಸೋಂಕದಿರಲು, ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬ ಹಾಕಿಸಬೇಕು. ಆಮೇಲೆ ಸಮಸಂವತ್ಸರ ನಡೆಯುವಾಗ ಕತ್ತರಿಸಲಯ್ಯ ಕನ್ನಡಕೆ ಮುಡಿಪ. ಓನಾಮಹಬ್ಬಕ್ಕೆ ಸ್ವಾಮಿಯಾಗಿರಲಿ ಕನ್ನಡದಲ್ಲಿ ಮಾಡಿದ ಸಿದ್ಧಿ ವಿಘ್ನೇಶ. ವಿದ್ಯಾಭ್ಯಾಸವಾಗಬೇಕು ಕನ್ನಡ ಹಲಗೆ ಬಳಪ ಪುಸ್ತಕದಿಂದ. ಮುಂಜಿ ಯಲಿ ಕನ್ನಡ ಜನಿವಾರ, ಕನ್ನಡದ ಗಾಯತ್ರಿ. ಮದುವೆಯಲಿ ಕನ್ನಡ ಭಾಷಿಂಗ, ಕನ್ನಡ ಮಾಂಗಲ್ಯ, ಕನ್ನಡ ಸಂಕಲಿಕೆ, ಕನ್ನಡದ ಸಂಕಲ್ಪ. ತರುವಾಯ ಮನೆ ಕಟ್ಟಬೇಕು ಕನ್ನಡ ಚಾವುಟದ ಕೆಳಗೆ; ಆ ನಾಡು ಈ ನಾಡ ನುಡಿಗಳವೆಲ್ಲ ನೆಮ್ಮದಿಯ ದಾಸದಾಸಿಯರಾಗಿ, ಓಡಾಡಿ, ಗೆಯ್ಮೆದುಡಿದು, ತಂದು ತುಂಬಿಸಿ ಕುಟುಂಬ ಋಣಜವನು, ಕನ್ನಡ ಕುಳವ ಭಾರಿಯದಾಗಿ ಬೆಳೆಸಿ ಏಳಿಸಲಿ!

ಈ ಜೀವನ ಕ್ರಮವೆ ಕನ್ನಡಿಗನಿಗೆ ಸವಿ ಸಾರ್ಥಕವಾದ ನರಜನುಮದಾಸಂದ ದೀಕ್ಷೆ! ಅಪ್ಪಣೆಯ ಹಾಡಯ್ಯ, ಅನುಕೂಲ ಮಾಡಯ್ಯ; ವಿಧಿಕೂಸ ಹೊಕ್ಕುಳಲಿ ಹೊತ್ತವನೆ! ದೇವರದೇವ ಮಾವಿನಕೆರೆಯ ರಂಗಯ್ಯ.

***

ಬೂಡಸನು ಬಿಚ್ಚಿಡುವನೊಬ್ಬ ಆಳು; ಕಛೇರಿಯ ಉಡುಪ ಕಳಚಿ ಮಡಿಸುವ ನಿನ್ನೊಬ್ಬ; ಮತ್ತೊಬ್ಬ ವಿರಾಮದ ವಸನಗಳ ವಿವೇಕದಲಿ ತೊಡಿಸುವ; ಕಾದಿದ್ದ ನಾಲ್ಕನೆಯವನು ಕಾಫಿ ತಿಂಡಿಯ ತರುವ. ಮಾತಿನಪ್ಪಣೆಯ ಶಿರದಿ ವಹಿಸಲು ಒಂಭತ್ತು ಜಾಗ್ರತೆಯ ಜವಾನರು. ಹುಬ್ಬಿನ ಹುಕುಮ ಅರಿತು ನಡೆಯಲು ಮೂವರು ನುರಿತ ಭೃತ್ಯರು! ಠೀವಿಯ ಜೀವಿ! ನೌಕರಿಯಾಸೆಯ ಮೇಲೆ ಅಹಂಕಾರದಂಬಾರಿ ಯಲಿ ವಿಜೃಂಭಿಸುವ ಭೂದೇವತೆ ನೀನು. ಆತಂಕವಿಲ್ಲದೆ ನಂಬು: ಪರಲೋಕದಲಿ ಅಧಿಕಾರಿ ಆತ್ಮ ಸೇವಕ ಆತ್ಮಗಳ ವಿಂಗಡಿಸಿರುವ, ಎನ್ನಯ್ಯ ದೇವರದೇವ ಮಾವಿನ ಕೆರೆಯ ರಂಗಯ್ಯ.

***

ಅರ್ಥಮನಸಿನ ಆದರಣೆ ಜಡಿಮಳೆಯ ಜಿನುಗಿನಂತಯ್ಯ: ಕೊನೆಯೆ ಇಲ್ಲವೊ ಎನಿಪ ಹನುಕಲು; ಬಾವಿ ಕೆರೆಗಳಿಗೆ ತಣಿಯದೆ ಒಣಗುವ ಹಣೆಬರಹ! ದೇವರದೇವ ಮಾವಿನಕೆರೆಯ ರಂಗಯ್ಯ.

***

ಸಮಸ್ತ ಸಾಹಿತ್ಯವನು ಕಸವೆಂದೆ ಒಗೆದಿರುವ ಹಿರಿಯಣ್ಣ! ಒಪ್ಪಿದೆನು ನಿನ್ನಯ ಸಿದ್ಧಾಂತವನು: ಗ್ರಂಥಗಳ ಬರೆವರೆಲ್ಲರು ದಡ್ಡರೆಂಬುದ. ಆದರೆ ಎಲ್ಲ ದಡ್ಡರು ಬರೆಯ ಲಾರರು ಕಣಾ: ಅದಕೆ ನೀನೆ ಉದಾಹರಣೆ! ಮೇಲ್ನೋಡು; ತುಸುನಗುವ ನಗುತ ಲಿರುವನು ದೇವರದೇವ ಮಾವಿನಕೆರೆಯ ರಂಗಯ್ಯ.

***

ಪ್ರಣಯವನು ಕೆಮ್ಮನ್ನು ಬಚ್ಚಿಡಲಸಾಧ್ಯವೆನ್ನುವರು : ನಾಚಿಕೆಯ ನಿರ್ಬಂಧ, ಹೆದರಿಕೆಯ ಹಗ್ಗಗಳ ಲೆಕ್ಕಿಸವಯ್ಯ ಅವು. ಆದರೆ ಮೌನದ ಮುಖತೆರೆಯು ಇರುವ ತನಕ ಅಜ್ಞಾನ ಹೆಣ್ಣು ಲಾವಣ್ಯವತಿ! ದೇವರದೇವ ಮಾವಿನಕೆರೆಯ ರಂಗಯ್ಯ.

***

ಬೆಟ್ಟದಮೇಲೆ ಬೆಳಗಿದುದೆಲ್ಲವನು ನಕ್ಷತ್ರವೆಂದೇ ನಂಬಿದರೆ ಮೋಕ್ಷ ಬಂತೆ? ಅಲ್ಲಿ ಚಂಚಲದ ಮಿಂಚುಂಟು; ನಸುನಾಚಿ ಇಣಿಕಿನೋಡುವ ಚಂದ್ರಮನ ವದನ ಆಗಾಗ ಉದಯಿಸುವುದು; ನಿರ್ಜರರ ವಜ್ರವೆಂಬಂತೆ ಪ್ರಜ್ವಲಿಸುವುದು ಅಗಸ್ತ್ಯತಾರೆ ಒತ್ತಡವೆ; ಮತ್ತೊಮ್ಮೆ ಭಯವ ಹರಡುವ ಅಂಗಾರಕ ಗ್ರಹದ ಕೆಂಗಣ್ಣು ಉರಿಯುವುದು; ದಿನದಿನವು ಕೆಲಹೊತ್ತು ಮಿಣುಕುವುದು ಗುಡ್ಡದ ಜನರ ಹಣತೆಯ ದೀಪ.

ಬೆಳಕೆಲ್ಲದಕು ನಕ್ಷತ್ರತ್ವವನು ಹೊಂದಿಸುವ, ಎಲ್ಲ ವಸ್ತುಗಳು ಒಲ್ಲಿದವೆಂದು ಭಾವಿಸುವ, ಅರ್ಹವಾದ್ದೆಲ್ಲವನು ಅತ್ಯುತ್ತಮವೆಂದು ಕರೆಯುವ, ವಾಸ್ತವವಧೆಯ ಪಾಪ ನಮಗೇಕಯ್ಯ? ದೇವರದೇವ ಮಾವಿನಕೆರೆಯ ರಂಗಯ್ಯ.

***

ಪ್ರಪಂಚಗಳ ಪರಿಶೀಲಿಸುತ್ತ ವಿಭಜನೆಗೈಯುತ್ತ, ತತ್ವಗಳ ಹುಡುಕಿ ಹರ್ಷಗೊಂಡು, ನೂತನ ನಿರ್ಮಾಣಗಳ ಕಂಡುಹಿಡಿದೆದ್ದು, ಬುದ್ಧಿಯನು ತಿದ್ದಿ ಹದಮಾಡಿ, ಹಲವು ಅಚ್ಚರಿವಿಷಯಗಳ ಅಮಾನುಷತ್ವವ ಕುಗ್ಗಿಸುತ, ಹೊಸ ಹೊಸ ಆಶ್ಚರ್ಯಗಳ ಸೃಷ್ಟಿಸುತ, ತಾರೆಗಳ ತಕ್ಕಡಿಯಲಿಟ್ಟು ತೂಗಿ, ತಾನೆ ತಲೆದೂಗಿ, ಕಣ್ಣಿಗೆ ಕಾಣಿಸದ ಪರಮಾಣುವನು ಒಡೆದು ಒಳಹೊಕ್ಕು ಅಡಗಿ ಕುಳಿತಿರುವ ಅಸಾಧ್ಯ ಶಕ್ತಿಯನು ಹೊರಗೆಳೆವ ಯತ್ನಕಟ್ಟಿ, ಮಾನವನ ನಿಲುವ ನೀಳಾಗಿಸುತ, ಆತ್ಮವಿಶ್ವಾಸವನು ಗಾಢಗೈಯುತ್ತ, ನಡೆಯುತಿರುವಳು ವಿಶ್ವಸಂಚಾರಿ ವಿಜ್ಞಾನ ತಾಯಿ. ಅನುಕೂಲಗಳ ಉಗ್ರಾಣ ತುಂಬಿ, ಉಪಯೋಗಗಳ ಉದ್ಯಾನ ಹರಡಿ, ಉತ್ಸಾಹಗಳ ಸಂಸಾರ ಬೆಳೆಸಿ, ಮನುಷ್ಯನಿಗೆ ಹಿರಿಹೆಮ್ಮೆಯಾಗಿಹಳು. ಅವಳ ಉನ್ನತ ಶರೀರ, ಕಪ್ಪು ಗುಂಗುರು ಕುರುಳು, ನೇರ ನಾಸಿಕ, ಗುಲಾಬಿ ತುಟಿ, ಮಾಸತಿಯ ವೀರಗಲ್ಲ, ನೋಡಿದೊಡನೆಯೆ ಗೌರವವ ಸೂರೆಗೊಳ್ಳುವ ಪ್ರಶಾಂತ ವಿಶಾಲ ಲಲಾಟ, ಒಮ್ಮೆ ಈಕ್ಷಿಸಿದಲ್ಲಿ ಮರೆಯಲಾಗದ ಶುಭ್ರಪ್ರಭೆ,—ಏನು ಗೆಲವು, ಎಂಥಾ ದೇವಿ!

ಆದರೆ ಅಲ್ಲಾರು, ಅವಳ ಹಿಂಬಾಲಿಸುತ, ಅವಳು ಕಂಡಾಳೆಂದು ಹಿಂಜರಿದು, ಆಗಾಗ ಅವಿತುಕೊಳ್ಳುತ, ವಕ್ರನಡಿಗೆಯಲಿ ಹೆಜ್ಜೆ ಹಾಕುತಲಿರುವ ಗುಜ್ಜಾರಿ, ಭಯವ ಹುಟ್ಟಿಸುವ ಕುರೂಪಿ? ಆರವಳು? ವಿಜ್ಞಾನಮಾತೆಯ ನಡೆ ನುಡಿ ಆಟ ಪಾಠ ವ್ಯಸನ ವ್ಯವಹಾರಗಳನೆಲ್ಲ ಅತ್ಯಂತ ಕಾತರದಿ ದೃಷ್ಟಿಸುತ ಕಠೋರ ಕಾರ್ಪಣ್ಯವನು ಕಂಗಳಲಿ

ಸೂಸುತಿರುವಳು. ನೋಡವಳ ಅಂಗವಿರಚನೆಯ: ಅಮಾಸೆಯಂದದ ಕಪ್ಪುತೊಗಲು, ಉಬ್ಬಿ ಮುಂದಕೆ ನುಗ್ಗಿರುವ ಎರಡೆರಡು ಸಾಲು ಉದ್ದದ ಹಲ್ಲು, ಬಹು ಸೊಟ್ಟ ಬಾಯಿ, ಬೆಳೆದು ಕಾಡಾಗಿ ಕೆಳಗೆ ಬಾಗಿರುವ ಹುಬ್ಬು, ಚರ್ಮವನು ಹರಿದು ಹೊರ ಬರಲಿರುವ ಕೆನ್ನೆಯ ಎಲುಬುಗಳು, ಸಣ್ಣ ಇಳಿಜಾರು ಹಣೆ, ಕೆಂಪನೆಯ ಕೆದರು ಗೂದಲು, ಆ ಕಣ್ಣಿನ ಉಗ್ರಕೆಂಡಗಳೊ! ಕಂಡು ಮೂರ್ಛೆಬೀಳದೆ ನಿಲಲು ಬೇಕು ಪ್ರೇಕ್ಷಕಗೆ ಎಂಟು ಗುಂಡಿಗೆ! ಕುಬ್ಜೆಯಾದರು ಹೇಸರಕತ್ತೆಯ ಹಾಗೆ ಓಡುವಳು; ಮಂಗನಂದದಿ ಮೇಲೆ ಹತ್ತುವಳು; ನರಿಯಂತೆ ಮರೆಯಾಗುವಳು. ಜೊತೆಯಲ್ಲಿ ಹೊತ್ತಿಹಳು ಭಾರಿಯ ಗಂಟೊಂದ: ಅಲ್ಲಲ್ಲಿ ಅದರಿಂದ ಏನನ್ನೊ ಹೊರದೆಗೆದು ನೆಲದ ಮೇಲೆ ಎಸೆಯುತ್ತ ಗುಟುರೆಹಾಕುವಳು; ಕೂಡಲೆ ದೊಡ್ಡ ಶಬ್ದ, ಹೊಗೆಯ ಆವರಣ, ಬೆಂಕಿಯ ಸಿಡಿತ, ವಿಪರೀತ, ಹಾನಿ!

ಅವಳಾರು ಅಲ್ಲಯ್ಯ, ವಿಜ್ಞಾನಶ್ರೀಯ ಸಹೋದರಿ ಅಥರ್ವ ಪಿಶಾಚಿ! ತಂಗಿಯ ಉತ್ಕೃಷ್ಟ ಉಪಕರಣಗಳ ತನ್ನ ಕೊಲೆಕೃತ್ಯಗಳಿಗೆ ಸೆಳೆದುಕೊಳ್ಳುವ ಹೆಮ್ಮಾರಿ! ಮದ್ದು ಗುಂಡು ಫಿರಂಗಿ ಬಾಂಬು ಮರಣಕಿರಣ ವಿಷಗಾಳಿ ಮುಂತಾದ ರಕ್ಕಸ ರಕ್ತ ಸಾಮಗ್ರಿಗಳೆಲ್ಲ ಅವಳ ಬಸಿರಿನ ಹೊಲಸು. ಅವಳದೆ ಈಗ ನಿರಂಕುಶದ ದವಲತ್ತು!

ಆ ಶ್ವೇತವಸನೆ ಶ್ವೇತವದನೆ ವಿಜ್ಞಾನಲಕ್ಷ್ಮಿಯ ಶುಚಿ ಆಧಿಪತ್ಯ ಯಾವಾಗ ಹಿಂತಿರುಗಿ ಬರುವುದಯ್ಯ? ಲಕ್ಷ್ಮೀಕಾಂತ! ದೇವರದೇವ ಮಾವಿನಕೆರೆಯ ರಂಗಯ್ಯ.

* * *

ಚಿಂತೆಯಲಿ ಮುಳುಗಿ ಮಲಗಿದ್ದೆ. ಮೂರನೆಯ ಜಾವದಲಿ ನೆಳಲೊಂದು ಮಗ್ಗುಲಲಿ ನಿಂತು ಮಾತಾಡಿಸಿತು: "ಬಲ್ಲೆ ನಿನ್ನಯ ದುಃಖಮೂಲವ ಮಗುವೆ. ಸದುಪದೇಶದಿಂದ ಅದ ಪರಿಹರಿಸಲೆಂದು ಬಂದಿರುವೆ." ನಾನುತ್ತರವಿತ್ತೆ: "ಆಕಸ್ಮಿಕದ ಈ ಅನುಗ್ರಹಕೆ ನಮಸ್ಕಾರ. ಪ್ರಪಂಚದಲಿ ಬೇರೆ ಇಲ್ಲವೆ ನಿರ್ಭಾಗ್ಯ ಮಾನವರು; ಅಲ್ಪನನು ಅರಸಿ ಬಹುದೂರ ಬರಬೇಕೆ?" "ಕಿರುಬೆರಳು ಗಾತ್ರದ ಕಡ್ಡಿ, ಹೆಮ್ಮರನ ಹೆಗ್ಗೊಂಬು,—ಎರಡು ಒಂದೆ ಹರಿವ ಪ್ರವಾಹಕ್ಕೆ. ಉಪಕೃತಿಯ ಉದ್ದೇಶ ಗಣಿಸುವುದೆ ಭೇದಗಳ?" "ದೇವ! ಮನ್ನಿಸಿ ಅಜ್ಞಾನ ನುಡಿಸಿದ ತಪ್ಪ." "ಸ್ನೇಹ ಸುಲೋಚನಕೆ ಕಪ್ಪು ಕಾಣದು ಮಗುವೆ. ಎನ್ನ ವೀರದ ಎತ್ತರವ ಗುರುತಿಸ ಬಲ್ಲವರಿಲ್ಲ; ಎನ್ನ ಶಕ್ತಿಯ ಆಳವನು ಅಗೆದು ನೋಡಿದವರಿಲ್ಲ." "ಘನಮಹಿಮೆ ಉಂಟೆಂದು ನನಗೆ ನಂಬಿಕೆ, ದೇವ!" "ಅಹುದು, ನಂಬು! ಸಹಿಸಲಾಗದ ಸಾಮರ್ಥ್ಯ ಇರುವುದೆನ್ನಲ್ಲಿ. ಜವರಾಯನನ್ನನುಸರಿಸಿ ಹೋಗುವ ಜೀವಾತ್ಮಗಳ ತೆರದಿ, ಶೂರನಾರಿಯರು ಮಹಾತಪಸ್ವಿಗಳು ರಾಜಪರಮೇಶ್ವರರು ಮರುಮಾತುಗುಡದೆ

ಬಂದಿಹರು ಎನ್ನ ಹಿಂದೆ. ಎನ್ನಯ ಪ್ರತಾಪ ಸುಳಿಯಲ್ಲಿ ಸಿಕ್ಕಿ ನಾಶವಾಗಿಹುದು ಧರೆಯ ಹೆಚ್ಚಿನ ಭಾಗ ಯುಗ ಯುಗದಿ. ಎನಗೆ ಇದಿರಾಂತು ಇಷ್ಟವ ಸಲಿಸಿ ಕೊಂಡವರಿಲ್ಲ; ಬಿಡಗ ಪಡೆದವರಿಲ್ಲ!"

ಈ ಆಟೋಪಮಯ ಆತ್ಮಶ್ಲಾಘನೆ ಅಪ್ರಕೃತವೆಂದು ತೋರಿತು ಎನಗೆ. ಸಂದೇಹದಂಕುರವಾಯ್ತು ಬುದ್ಧಿಯಲಿ. ಆದರು ಹೇಳಿದೆ: "ದೊಡ್ಡವರಂತೆ ಕಾಣು ವಿರಿ, ಮಹಾಸ್ವಾಮಿ!" "ಶಂಕೆಗೆ ಆಸ್ಪದವ ಈಯಬೇಡ. ಕೇಳಿ ಎನ್ನಯ ಸಲಹೆ ಯಸು ನಡೆ ಸನ್ನೊಡನೆ. ಭೋಗಾತಿಶಯವ ಬೊಗಸೆಯಲಿ ಕುಡಿಯುವೆಯಂತೆ." "ಅಪ್ಪಣೆಯ ಮಾಡಿ, ಕಾದಿರುವೆ, ಸ್ವಾಮಿ." "ಈಗಲೆ ತಿಳಿಯುವುದು ತಾಳು. ಅ-ಅ- ಸಣ್ಣ ಬೆಲೆಯೊಂದ ನೀ ಕೊಡಬೇಕು, ಹೊಂದುವ ಪದವಿಗೋಸುಗವಲ್ಲ, ನಿನ್ನ ಪ್ರಾಮಾಣಿಕತೆಯ ಪರೀಕ್ಷೆಗಾಗಿ. ಸ್ವಹಿತವ ಸಾಧಿಸಲಿರುವ ಆತ್ಮಾಭಿಮಾನಿಗೆ ಸುಲಭ ಆ ಬೆಲೆಯು." ಆಗ "ಭೋಗ!" ಈಗ "ಬೆಲೆ!" ಏಕೆ ಹಾಲಿನಲಿ ಹುಳಿ? ದೈವಿಕ ದೃಶ್ಯದಲಿ ಪ್ರವೇಶಿಸಲಾಪುದೆ ಕೇಳೀಗೃಹದ ವ್ಯಾಪಾರ? ಎನ್ನ ಸಂಶಯವು ಗಿಡನಾಯ್ತು; ಸೂಚನೆಯ ಕೊಟ್ಟೆ: "ಇನ್ನು ಮುಖ್ಯ ಸಂಗತಿಯ ರಂಗವನು ಹತ್ತಬಹುದಲ್ಲ."

ಕೂಡಲೆ ಕಿವಿಗೆ ಬಡಿಯಿತು ಮುರುಕು ಜಾಗಟೆಯ ಖಣಲುಟಣಕಿಸಂದದ ಶಬ್ದಗಡಣ: "ನಿನ್ನಯ ನಾಡು ಅವನತಿಯ ಕಾಡು, ಲಜ್ಜೆಯ ಬೀಡು! ಬಲ ಬಿತ್ತು; ಕೆಚ್ಚು ಕರಗಿದೆ; ಉತ್ಸಾಹ ಉಳಿದಿಲ್ಲ; ಬುದ್ಧಿ ಸದ್ದುಗೈಯದು; ಭಕ್ತಿಗಿಂಬಾದ ದೇಹದಂಗದಲಿ ಅಘೋ ಎನ್ನುವ ಶೂನ್ಯ. ನಿನ್ನ ನಾಡವರ ಸ್ಥಿತಿಯು ನಾಚಿಕೆಗೇಡು: ತಿಳಿವಳಿಕೆ ಸಣ್ಣ ಸಣ್ಣಗೆ; ತಿಳಿವ ಕುತೂಹಲ ತಣ್ಣ ತಣ್ಣಗೆ. ಪುಲಿಕೇಶಿ ಪರ್ವತವೊ ಪಟ್ಟಣವೊ! ಹೊಸ್ತಿಲಿನ ಅಪಭ್ರಂಶವಲ್ಲವೆ ಹೊಯ್ಸಳ! ಅಯ್ವೊಳೆ,—ಸರಿ ಸರಿ, ಪಂಜಾಬಿನಲಿರುವ ಐದು ಹೊಳೆ! ಕಂತಿಯೊ ಕಂತೆಯೊ ಸಾಕು ಸಾಕು. ಅಕ್ಕ ಮಹಾದೇವಿ ಅರ್ಥವಾಗದ ಮಾತು. ವೇರೂಳು ತಮಿಳಿನಂತಿಹುದು; ಏತಕವರಿಗೆ ಅದರ ವಿಚಾರ? ಹಳೆಬೀಡು ಬೇಲೂರಿನಲಿ ಏನೊ ಇಹುದಂತೆ! ಚೀ, ದೂರೀಕರಿಸಿ ಬಾ ನನ್ನೊಡನೆ. ಅಭಿವೃದ್ಧಿಯುವತಿ ದೂತಿಯ ಕಳುಹುವಳು ನಿನ್ನೆಡೆಗೆ!" ಬಾಯಿಂದ ಬಣ್ಣ ಬಯಲು. ಅನುಮಾನ ವೃಕ್ಷ ಫಲವ ಬಿಟ್ಟಿತು ನನ್ನೊಳಗೆ. ಚಚ್ಚರದಿಂದ ಒತ್ತಿ ಹೇಳಿದೆ: "ತಾಯ್ನಾಡ ತಳ್ಳುವುದು ತರವೆ?" "ಹಹ್ಹ! ಮುರಿದು ಬೀಳುತ ಲಿರುವ ಮನೆಯಿಂದ ಸರಿಯುವುವು ಇಲಿ ಬೆಕ್ಕುಗಳು." "ಇಲಿ ಬೆಕ್ಕುಗಳಿಗೆ ಅದು ಯೋಗ್ಯ." "ನಿರರ್ಥಕ ಮೋಹದಲಿ ನಿಂದು ಕೆಡಬೇಡ, ಮರುಳೆ! ಏನುಂಟು ನಿನ್ನ ದೇಶದಲಿ? ಎಲ್ಲೆಲ್ಲು ಒಂದೇ ಸವನೆ ಸುರಿಯುತ್ತಲಿದೆ ಹಾಳು." "ಗತವೈಭವದ

ಹೆಗ್ಗುರುತು ಹಾಳಲ್ಲ; ಮುಂದುವರಿಯುವ ಚಟುವಟಿಕೆ ಸುಳ್ಳಲ್ಲ: ನೋಡುವ ಕಣ್ಣು ಹಾಳು, ನಿಂದಿಪ ನಾಲಗೆ ಸುಳ್ಳು!" "ಮೂರ್ಖ! ಉನ್ನತಿಯ ರೇವ ಮುಟ್ಟಲು ಅನುಕೂಲಪವನ ಬಾರದು ಎರಡನೆಯ ಬಾರಿ. ಎನ್ನ ಯಾಜಮಾನ್ಯವನೊಪ್ಪಿದರೆ ಯಂತ್ರಕೌಶಲ್ಯ ಪರಮಾವಧಿಯ ಕ್ಷೋಣಿಗೆ ಕೊಂಡೊಯ್ವೆ: ಚಾತುರ್ಯಪಟುವೆನಿಸಿ ಪೆರ್ಮೆಯಲಿ ಬಾಳುವೆಯಂತೆ." "ಅಪೇಕ್ಷೆಯಿಲ್ಲ. ಕೈಮೂಢನಾಗಿ ಇಲ್ಲಿಯೆ ಇರುವೆ.' "ಘಟ್ಟಿಯ ಚಕ್ರಾಧಿಪತ್ಯವ ಕಟ್ಟಿ, ತಲೆಯ ಬಾಗಿದ ನೃಪಸಾವಿರಕೆ ಬಿರುದುಗಳ ಎರಚುತ್ತ, ಉರಿಯುವ ಜಗದಭಿವಂದ್ಯ ಸಾಮ್ರಾಜ್ಯವನು ಸೇರಿಸುವೆ. ಸ್ವಾತಂತ್ರ್ಯದಲಿ, ದರ್ಪದಲಿ, ಆನತ ಜನಸ್ತೋಮಗಳನಾಳುತ್ತ ವಿಹರಿಸು." "ಹಾಗಿರಲಿ; ಮಾತೃಭೂಮಿಯಲಿ ದಾಸ್ಯವನುಣುವೆ ಮಾತೆಯ ಕೂಡ." "ತಿಳಿಗೇಡಿ! ತಡೆದು ಯೋಚಿಸು. ಉದ್ಧತ ಪಾಂಡಿತ್ಯಕೋಸುಗ ಪ್ರಸಿದ್ಧಿಪಡೆದ ಮೇಧಾವಿಮಂಡಲವ ಕೂಡಿಸುವೆ. ಪ್ರಜ್ಞಾಶಾಲಿಯೆಂದೆಂಬ ಹೆಮ್ಮೆಯ ವರಿಸು." "ಹೋಗು ಹೋಗು; ಹೆಡ್ಡನೆನ್ನಿಸಿ ನಿಲುವೆನೆನ್ನವರ ನಡುವೆ. ಸಂಸ್ಕೃತವಾದ ಪರಭಾಷೆಯಲಿ ಹೊಗಳಿಕೆ ಬೇಡ, ಅಸಲಂಕಾರ ಕನ್ನಡದಲ್ಲಿ ಬಯ್ಗುಳ ಬರಲಿ." "ಹಿಡಿ ಜೋಳಿಗೆಯ; ಇಗೊ ನೀ ಬೇಡಿದ ಭಿಕ್ಷೆ! ಗಾಂಪರ ಗೊಟ್ಟಿಗೊಡೆಯ, ಅತ್ತಿತ್ತ ನೋಡದ ಹೆಗ್ಗತ್ತೆ, ಗರ್ವವಿಲ್ಲದ ಜಂತು! ಏನೆಂದು ಕರೆಯಲಿ ನಿನ್ನ? ನೀನೊಂದು ಮರ!" "ಆಹ, ಎನಿತು ವಿನಯ! ಅಹುದೊ, ಕರ್ನಾಟವನದಲ್ಲಿ ವಿಲಾಸದಿಂ ಬೆಳೆವೆ ಮರನಾಗಿ: ಕನ್ನಡವಕ್ಕಿ ಸವಿಯಲಿ ಹೂವು ಹಣ್ಣುಗಳ ಸ್ವೇಚ್ಛೆಯಲಿ: ಕನ್ನಡ ಕೊಡಲಿಗಳು ಹಾಡುತ್ತ ಕಡಿಯಲಿ ಕೊಂಬೆ ದಿಂಡುಗಳ!" "ಥೂ; ದುರಹಂಕಾರಿ! ದುಷ್ಟ! ಆ ಆಶೆ ನಿನಗೇಕೆ? ಮರಕಿಂತ ಕೀಳು: ನಿನ್ನ ತಲೆಯಲಿ ಮಣ್ಣು; ಅಂಗಾಂಗ ಮಣ್ಣು; ನೀನೆ ಮಣ್ಣು!" "ಸಾಕು, ಕೊನೆಮಾಡು ನಿನ್ನ ಕಲುಷಿತ ಕಥೆಯ. ಕರ್ನಾಟ ಭೂಮಿಯಲಿ ಮುದದಿಂದ ಮಣ್ಣಾಗಿ ಬೀಳುವೆನು: ನೇಗಿಲ ನಡೆಸಿ ಏಳಿಸಲಿ ಹಲಕೆಲವು ನೆಲ್ಲ; ಕನ್ನಡಿಗ ಹೆಣ್ಣು ಗಂಡುಗಳು ತುಳಿದು ಪಾವನಗೈಯಲಿ; ಸಾರ್ಥಕ!" ಮಾಯವಾಯಿತು ನೆಳಲು.

ಮರುಕ್ಷಣದಲ್ಲಿ ಬೆಳಗಿತು ಅದೊಂದು ಅಪೂರ್ವ ದಿವ್ಯಜ್ಯೋತಿ. ಮಧ್ಯದಲಿ ಮಂಡಿತರಾಗಿ ದರ್ಶನವ ದಯಪಾಲಿಸಿದರು. ಹಂಪೆಯ ವಯಿರಮುಡಿ ವಿರೂಪಾಕ್ಷ, ಮಹಿಸೂರ ಮನೆದೇವಿ ಚಾಮುಂಡಾಂಬೆ! ಇದು ಅಜೀರ್ಣಕಲ್ಪಿತ ಕನಸೊ, ಕನ್ನಡಿಗರ ಸ್ಥಿರಮನಸೊ, ನೀನರಿದು ಹರಸಬೇಕಯ್ಯ! ದೇವರದೇವ ಮಾವಿನಕೆರೆಯ ರಂಗಯ್ಯ.

***

ಲಕ್ಷಕವಿಗಳ ಹೆಸರಿನಲಿ ಸರಸತಿಯ ಪುತ್ರಪುತ್ರಿಯರು ಹಲಕೆಲವು ಮಾತ್ರ. ಮಿಕ್ಕವರಲ್ಲಿ ಅನೇಕರನು ಹೆತ್ತವರು ಬ್ರಹ್ಮನರಮನೆಯಲ್ಲಿ ಭತ್ತಕುಟ್ಟುವ ತೊತ್ತುಗಳು,

ಅತ್ತಿತ್ತ ಸಂಚರಿಪ ಸುದ್ದಿಗಾರ್ತಿಯರು. ನೂರಾರು ಕವಿಗಳಿಗೆ ಜನನಿಯರು ಓಲಗದ ಪೆಣ್ಣುಗಳು, ಅಂತಃಪುರದ ಕಾಂತೆಯರು. ಕೆಲಬರಸು ಕುವರ ಕುವರಿಯರೆಂದು ಕರೆವ ಕಾಮಿನೀವರ್ಗ ಭಾರತಿಯ ಅತಿಗೆಳತಿಯರು. ಆದರೆ ಹತ್ತೆಂಟು ಕವಿಗಳ ಸಂಬಿಸಿದ ಅಮ್ಮದಿರು ಆ ಸತ್ಯಲೋಕದ ಸೂಳೆಮೂಳಿಗಳೆ ಸಹಜ. ಅನಾಥರಿಲ್ಲದೆಯು ಇಲ್ಲ: ಅವರ್ಗೆಲ್ಲ ಪೆತ್ತವಳೆ ತಾಯಿ, ಪೊರೆದವಳೆ ದಾದಿ! ಅಂತು ವಾಗೀಶ್ವರಿಯ ನೈಜ ಸಂತತಿ ಹೇರಳವಲ್ಲ.

ಆ ಮಕ್ಕಳಲು ತಾಯ ಮೊಲೆಯುಂಡು ಮಲೆತವರು ವಿರಳ; ಶತಮಾನಕೊಬ್ಬೊಬ್ಬ. ಜನಾಂಗಕೊಬ್ಬ ಇಬ್ಬರು: ವ್ಯಾಸ ವರ್ಜಿಲ ವಾಲ್ಮೀಕಿ ವಾಲ್ಟೇರು ಪ್ಲೇಟೊ ಪಂಪ ಹೋಮರ ಡಾಂಟೆ ನಾರಯಣ ಷೇಕ್ಸ್‌ಪಿಯರು ಸರ್ವಾಂಟೀಸ ತಿಕ್ಕನ ಗಯಟೆ ಭಾಸ ಕಾಳಿದಾಸ ಮಿಲ್ಟನ್ ಟಾಗೋರ ಕವಿ ಬೃಂದಾರಕರು. ಉಳಿದ ಕೆಲಬರಿಗೆ ಪೊತ್ತವಳು ವಾಣಿ, ಪಾಲಿಸಿದವಳು ದಾದಿ; ಮತ್ತೆ ಕೆಲಬರಿಗೆ ಎಳೆಯದಲಿ ಆಧಾರ ಅಜನ ರೊಪ್ಪದ ಆಡುಗಳು!

ಶಾರದೆಯ ಜಠರದಿಂದೊಗೆತಂದು, ಅವಳ ಎದೆಯಮೃತ ಚಪ್ಪರಿಸಿ, ಮುಂದೆ ಬರಲಿರುವ ಕವಿ ಚಿರಂಜೀವಿ ಕನ್ನಡಿಗನಾಗಿರಲಯ್ಯ; ಅಹಂಕಾರ ಕಂಸಾರಿ! ದೇವರ ದೇವ ಮಾವಿನಕೆರೆಯ ರಂಗಯ್ಯ.

***

ಹಿಂದಣ ಹಿರಿಯಜನ, ಹಿಂದಣ ಹೆಮ್ಮೆಯ ನಾಡು, ಹಿಂದಣ ಹೊನ್ನಿನ ಕಾಲ—ಹೀಗೆನುತ ಗುಡುಗುವ ಬಡಾಯಿ ಬ್ರಾಹ್ಮಣನ ನಾ ಕೇಳುವೆನಯ್ಯ: ಅದಾವುದು ಆ ಹಿಂದಿನ ಅವಧಿ? ವರ್ಷವೆಷ್ಟರ ಹಿಂದೆ, ಆವ ಸಂವತ್ಸರದ ಮಾಸವಾವುದರ ಆವ ತೇದಿಯ ಘಳಿಗೆಯೆಷ್ಟಕ್ಕೆ ಆ ಪ್ರಾಚೀನ ಯುಗ ಸತ್ತು ಶ್ಮಶಾನಕ್ಕೆ ಹೋಯಿತ್ತು? ಅಶೋಕನ ಆಳ್ವಿಕೆಯ ಆರಂಭದಲೆ; ಶಿವಾಜಿ ಸಿಂಹಾಸನವ ಹತ್ತಿದ ಹೊತ್ತೆ ಅಥವಾ ಕ್ರಿಸ್ತಶಕ ಒಂದು ಸಾವಿರದ ಏಳುನೂರು ತೊಂಭತ್ತೊಂಭತ್ತರ ಕಡೆಯ ದಿನವೆ? ಹಾಗಾದರೆ ಸಾವಿರದ ಎಂಟುನೂರು ಈಚಿನ ಕಾಲವಾಯಿತೆ? ನಾಲ್ಕೆಂಟು ವರ್ಷಗಳ ನಮ್ಮ ಎಣಿಕೆಗೆ ತೆಗೆದುಕೊಳಲಾಗದು ಎನಬಹುದೆ? ಹಾಗೆ ನಾಲ್ಕುನಾಲ್ಕಾಗಿ ಎಂಟು ಎಂಟಾಗಿ ಕೂಡುತ್ತ ಕಳೆಯುತ್ತ ವಿವಾದವ ಹೂಡಿದರೆ! ಆ ಮೇಲೆ ಇಪ್ಪತ್ತು ಮೂವತ್ತಾಗಿ ಐವತ್ತು ಅರುವತ್ತಕ್ಕೇರುವುದು. ಈ ಸಂಶಯ ಗಣಿತದಲಿ ಸೂಜಿ ಮೊನೆಯಂಶ ಗುಣವಿಲ್ಲ. ಬಾಂದು ಬದುಗಳ ಹಾಕಿ ವ್ಯವಸಾಯ ಭೂಮಿಯನು ಅಳೆದು ವಿಂಗಡಿಸುವಂತೆ, ದಶಕ ಶತಮಾನ ಬೇಲಿಗಳಿಂದ ವಿಭಾಗಿಸಲು ದಕ್ಕುವುದೆ ವಾಯುವೇಗ ಮನೋವೇಗದಲಿ ಓಡಿಹೋಗುವ ಕಾಲ!

ಹಗಲು ಇರುಳು ವಸಂತ ಹೇಮಂತ ಪ್ರಭವ ಅಕ್ಷಯವೆಂಬ ಊಹಾತೀತ ಪ್ರವಾಹ ಒರೆಯುತಿದೆ, ಮೊರೆಯುತಿದೆ, ಭೋರ್ಗರೆಯುತಿದೆ; ಮರಳುತಿದೆ ಉರುಳುತಿದೆ, ಸುರುಳಿಯಾಗುತಿದೆ; ಧುಮುಕುತಿದೆ, ಧಾಳಿಯಿಕ್ಕುತಿದೆ, ದಡಬಡಿಸುತಿದೆ; ಆಳವಾಗುತಿದೆ, ಅಗಲವಾಗುತಿದೆ, ಅಸದಳವಾಗುತಿದೆ. ಅದೆ ವಿಶ್ವಜೀವನದ ಅಗೋಚರ ಅನೆಜಾಸು! ತರ್ಕವೇತಕೆ; ಸತ್ಯ ಪ್ರತ್ಯಕ್ಷವಾಗಿಹುದು: ಈ ಕ್ಷಣದ ಹಿಂದಿನದೆಲ್ಲ ಹಿಂದು ಮರುಕ್ಷಣ ಹಿಡಿದು ಮುಂದಿನದೆಲ್ಲ ಮುಂದು. ಕುರುಡುನಂಬಿಕೆಯ ಮಾತಿನ ಮೋಸಕ್ಕೆ ಪಕ್ಕಾಗುವುದೆ? ಕಾಲ ಲೀಲೆಗೆ ತಾಳ ತಿಳಿಯಿಪ ಪರಮಪಂಡಿತ! ದೇವರ ದೇವ ಮಾವಿನಕೆರೆಯ ರಂಗಯ್ಯ.

* * *

ಬರಬೇಡ ಈ ಭಾರತದ ಕಡೆಗೆ, ಬಹುಭೂಮಿಗೊಡೆಯ! ಬರಬೇಡ, ನೀ ಬರಬೇಡವಯ್ಯ!

ಸ್ವಂತ ಕೃಷಿಯಿಂದ ಬೆಳೆದು ಗಳಿಸಿದುದ ಉಣ್ಣುವುದ ಮರೆತು, ಹೆತ್ತವರು ಮುತ್ತಾತದಿರು ತಿಂದುಳಿದ ಎಂಜಲಿಗೆ ಬಾಯ್ಬಿಟ್ಟು, ಹೊಟ್ಟೆಯನು ಹೊರೆವ ನಮ್ಮಂದಿಗರ ಹಿಟ್ಟುದಂಡದ ದೇಹಗಳು ಉಸಿರೆಳೆಯುತಿರುವನಕ, ಬರಬೇಡ ಈ ಭಾರತದ ಕಡೆಗೆ.

ಮತವೆಂದು ಕುಲವೆಂದು ಜಾತಿಯದೆಂದು ಆಚಾರ ಸಂಪ್ರದಾಯವೆಂದೆಂದು ಮೋಹಗಳ ಮದ್ಯವನು ಕುಡಿದು ಮತ್ತರಾಗಿ, ಸ್ವದೇಶವೆನ್ನುವ ಸೌಭಾಗ್ಯ ತತ್ವಾಮೃತವ ನೆಲಕೆ ಚೆಲ್ಲಿರುವ ಇಕ್ಕಣ್ಣುಕುರುಡರು ಇರುವ ವರೆಗು, ಬರಬೇಡ ಈ ಭಾರತದ ಕಡೆಗೆ.

ನಮ್ಮದು ಅಮಲಗಂಗೆಯ ಆವಾಸ ಆಚಂದ್ರಾರ್ಕಯಶವುಳ್ಳದ್ದು ಪುಣ್ಯಭೂಮಿ ಉದೆಸುತ ಬಾಯ್ತುಂಬಟೆಯ ಬಡಿಯುತ್ತ, ಒಬ್ಬರೊಬ್ಬರ ಕತ್ತುಕತ್ತ ಹಿಸುಕಿ ಕೊಲ್ಲಲಾಟಿಸುವ ಐಕಮತ್ಯ ಬಾಹಿರರು ಹುಟ್ಟು ಹೆಸರಿಲ್ಲದಲೆ ಅಳಿದರೆಂಬುದು ನಿಜವಾದ ಹೊರತು, ಬರಬೇಡ ಈ ಭಾರತದ ಕಡೆಗೆ.

ಹೆರರೋ ನಾವೋ ನಮ್ಮ ಜೀವನದಲ್ಲಿ ಕಡೆದಿರುವ ವಿಷವ ಕುಡಿದು ಸಾಯಲು ಅಂಜಿ, ಕುಡಿದು ದಕ್ಕಿಸಿಕೊಳುವ ಧೈರ್ಯವಿಲ್ಲದಲೆ, "ಕರುಣಾಳು ಪರಮೇಶ! ಇನ್ನೊಮ್ಮೆ ಗರಳ ಪಾನವಗೈದು ನಿನ್ನಯ ಒರಲುಕುನ್ನಿಗಳ ಸಲಹೊ!" ಎಂದು ಹೇಡಿಗಳು ಒಟ್ಟಾಗಿ ಮೊರೆಯಿಡುತಿರಲು, ಬರಬೇಡ ಈ ಭಾರತದ ಕಡೆಗೆ.

ಸ್ಥೈರ್ಯಸಂಕಲ್ಪದಲಿ ಅದಾರಿಗು ಕಡೆಯಲ್ಲ, ಪರಾಕ್ರಮ ಸತ್ವ ದರ್ಪದಲಿ ಕುಂದಿಲ್ಲ, ಭಾರತೀಯರು ಮೂಗುಮಾರಿದ ನಪುಂಸಕರಲ್ಲ, ಕಲಿತನದ ಗಂಡುಗಳು

ಬಲುಮೆಯ ಹೆಣ್ಣುಗಳೆಂದು ಎತ್ತಿದ ಬಾವುಟದ ಮೇಲೆ ಸುವರ್ಣಾಕ್ಷರದಲ್ಲಿ ಬರೆದು ತೋರುವ ತನಕ, ಬರಬೇಡ ಈ ಭಾರತದ ಕಡೆಗೆ.

ಅಗಾಧ ವಿಶ್ವನಿರ್ಮಾಣವನು ಪಾಲಿಸುವ ಅತ್ಯಂತ ಸೂಕ್ಷ್ಮದಲಿ ತೊಡಗಿರುವ ನಿನಗೆ, ಹುಳುಗಳು ನಾವು ನಮ್ಮ ಕೈಹುಣ್ಣು ಕಳೆಯುವುದು ನಮ್ಮಯ ಹಾಳೊಡಲ ತುಂಬುವುದು ಮುಖ್ಯದ ಕೆಲಸವಲ್ಲವೆಂಬುದು ನಮಗೆ ಸ್ಪಷ್ಟವಾದಲ್ಲದಲೆ, ಬರಬೇಡ ಈ ಭಾರತದ ಕಡೆಗೆ.

ನಾವು "ಅಯ್ಯೋ! ಬಾ!" ಎಂದು ಕೂಗಿಡುವ ಕರ್ಕಶಗೀತ ನಿಂತಾಗ, ಆತ್ಮಾವಲಂಬನೆಯ ಬೆಡಗುನಗಾರಿ ಘಂಘಮಿಸೆ ನುಡಿದಾಗ ಮಲ್ಲ ಮಾಸತಿ ಮಹಾಮಕ್ಕಳ ಕಂಡು ನಿನಗೇ ಅಚ್ಚರಿ ಅರಳಿದಾಗ, ಬಾರಯ್ಯ ಈ ಭಾರತದ ಕಡೆಗೆ; ಭರತಖಂಡದ ಪ್ರಾಚೀನ ಪ್ರೇಮಿ! ದೇವರದೇವ ಮಾವಿನಕೆರೆಯ ರಂಗಯ್ಯ.

ವಿಚಿತ್ರ ವ್ಯಥೆ*

ನಾರೀಹೃದಯ ? . . . . !

*　　　*　　　*　　　*　　　*

ಚಂದಣ್ಣನ ಹೆಂಡತಿ ಗಂಗೆಯು ಎದುರುಮನೆ ಶಾಂತಪ್ಪನ ಮನೆಗೆ ಬಂದಳು. ಶಾಂತಪ್ಪನ ಮಡದಿ ಶಿದ್ದವ್ವನು ಅವಳ ಗೆಳತಿ. ಅವರಿಬ್ಬರಿಗೂ ಪ್ರತಿನಿತ್ಯವೂ ಈ ತರಹ ಎದುರುಮನೆ ಓಡಾಟವು ಇದ್ದೇ ಇರುತ್ತದೆ.

"ಹ್ಯಾಗಿದೀನಿ ?"—ಗಂಗೆಯು ಹೆಮ್ಮೆಯಿಂದ ಶಿದ್ದವ್ವನ ಪರೀಕ್ಷೆಗೆ ತನ್ನ ಮುಖವನ್ನು ಎತ್ತಿಹಿಡಿದಳು. ಬಲಗಣ್ಣಿನ ಕೆಳಗೆ, ಕೆನ್ನೆಯ ಕಡೆ ಏಟಿನ ನೀಲಿಯು ಕಟ್ಟಿ, ಬಾದಾಮಿಯ ಗಾತ್ರ ಬೋರು ಬಂದಿತ್ತು. ಎಡಗೆನ್ನೆಯ ಮೇಲೆ ಮೂರು ಬೆರಳುಗಳ ಗುರುತು ಇನ್ನೂ ಅಳಿಸಿರಲಿಲ್ಲ.

"ನನ್ನ ಗಂಡ ನನ್ನ ಬಡಿಯೋದಿಲ್ಲವ್ವಾ"—ಶಿದ್ದವ್ವನು ಗಂಗೆಗೆ ಸೋವಾಗ ಬಾರದೆಂದು ತನ್ನ ಹೆಮ್ಮೆಯನ್ನು ಅಡಗಿಸಿಕೊಂಡೇ ಹೇಳಿದಳು.

ಗಂಗೆಯು ಕಿಲಕಿಲನೆ ನಕ್ಕಳು. "ತಿಂಗಳಿಗೆ ಒಂದಾವರ್ತಿ ಆದ್ರೂ ಹೊಡಿದೇ ಇರೋ ಗಂಡ ನನಗೆ ಬ್ಯಾಡ. ಹೊಡೀತಿದ್ರೆ, ನಿನ್ನ ಯೋಚನೆ ಅವನಿಗಿರುತ್ತೆ, ನೋಡು. ನಿನ್ನೆ ರಾತ್ರಿ ನನ್ನ ಗಂಡ ನನಗೆ ಇಕ್ಕಿದ್ದು ಪ್ರೀತಿ ಮುದ್ದಲ್ಲ. ಈಗ್ಲೂ ತಲೆ ದಿಮ್ ಅಂತಿದೆ. ಆದ್ರೇನಂತೆ. ಇವತ್ತಿನಿಂದ ಇನ್ನೊಂದು ತಿಂಗಳು ಹ್ಯಾಗಿರ್‍ತ್ತಾನೇ ಅಂತೀಯಾ. ಅಂಥ ಗಂಡ ಸಿಗೋದು ಅಪರೂಪ; ಹಾಗಿರುತ್ತಾನೆ. ನಿನ್ನೆ ರಾತ್ರಿ ಹೊಡೆತದ ಫಲ ಏನು ಗೊತ್ತೆ ? ಇವತ್ತು ಸಂಜೆ ಒಳಗೆ ಸೀರಿ ಬರ್‍ತದೆ, ನೋಡು. ಮೇಲೆ ಮೂರು ವಾರ ಸಿನಿಮಾ."

"ನನ್ನ ಗಂಡ ಒರಟಲ್ಲಮ್ಮ, ಗುಣವಂತ. ಬೈಯೋದು ಸಹ ಇಲ್ಲ"—ಶಿದ್ದವ್ವನು ಅಭಿಮಾನವನ್ನು ತೋರ್ಪಡಿಸಿ ಹೇಳಿದಳು.

"ನನಗೆ ಗೊತ್ತು ಶಿದ್ದಿ. ನನ್ನ ಕಂಡ್ರೆ ನಿನಗೆ ಆಗ್ಲೆ ಹೊಟ್ಟೆ ಉರಿ ಅಲ್ವಾ ? ಅದಕ್ಕೇ ನಿನ್ನ ಗಂಡನ್ನ ಹಾಗೆ ವಹಿಸಿಟ್ಟುಕೊಂಡು ಬರ್‍ತೀಯಾ. ಶಾಂತಪ್ಪಗೆ ಮೂವತ್ತೈದೇ ವಯಸ್ಸು. ಆದ್ರೇನಂತೆ. ಮುದಿಗೊಡ್ಡೇ. ಕೈ ಎತ್ತಿ ಹೊಡೆಯೋಕೆ ಆಗೊಲ್ಲಾ ಅನ್ನು. ಕೆಲಸ ಮುಗಿಸಿಕೊಂಡು ಮನೆಗೆ ಬಂದ್ರೆ, ಕೂತುಬಿಡ್ತಾನೆ ನೋಡು, ಜಗಲಿಮೇಲೆ ಎಲೆಡಿಕೆ ಜಗೀತಾ. ನಿಜಾ ಅಲ್ವೇ ?"

---

* O. Henry ಯವರ 'A Harlem Tragedy' ಎಂಬ ಕಥೆಯ ಅನುವಾದ.

"ಕಟ್ಟೆ ಮೇಲೆ ಕೂತುಕೊಂಡು ಎಲಡಿಕೆ ಜಗೀತಾನೆ, ನಿಜ. ಆದ್ರೆ ಅವನ ಹುಚ್ಚಾಟಕ್ಕೆ ನನ್ನ ಚಚ್ಚೋದಿಲ್ಲ—ಅದೂ ನಿಜ."

ಶಿದ್ದವ್ವನ ಮಾತಿಗೆ ಉತ್ತರವಾಗಿ ಗಂಗೆಯು ನಕ್ಕಳು. ಸಂತಸದ, ಹರ್ಷ ಪೂರಿತವಾದ ಆನಂದದ ನಗೆ. ಹೊಸ ನಾಗಮುರಿಗೆಯನ್ನು ತನ್ನ ಗೆಳತಿಗೆ ತೋರಿಸು ವಷ್ಟೇ ಹೆಮ್ಮೆಯಿಂದ, ಎಡಗೈ ಮೇಲಿನ ಸೆರಗನ್ನೆತ್ತಿ, ರಟ್ಟೆಯ ಮೇಲೆ ಕೆಂಪಾಗಿದ್ದ, ಬಲವಾಗಿ ಜಿಗಟಿದ ಕುರುಹನ್ನು ಗಂಗೆ ಶಿದ್ದವ್ವನಿಗೆ ತೋರಿಸಿದಳು. ಗಂಗೆಯ ಮುಖದಲ್ಲಿ ಹೊಡೆತದ ನೋವಿನ ಸುಳಿವೇ ಇರಲಿಲ್ಲ. ತುಂಬಿದ ಪ್ರೇಮದ, ತುಳುಕುವ ಸೌಖ್ಯದ ಮುದ್ರೆ ಇತ್ತು. ಅವಳ ಈ ಸಂತುಷ್ಟಿ ಶಿದ್ದವ್ವನ ಮೇಲೆ ಪರಿಣಾಮ ಮಾಡದೆ ಇರಲಿಲ್ಲ. ಗಂಗೆಯ ಮಿತ್ರತ್ವಕ್ಕೆ ಕಳಂಕತಾರದ, ಗಂಗೆ ಆಗ ತನ್ನೆದುರಿಗೆ ಪ್ರದರ್ಶಿಸುತ್ತಿದ್ದ, ದಾಂಪತ್ಯಸೌಖ್ಯದ ವಿಷಯದಲ್ಲಿ ಮಾತ್ರ ಶಿದ್ದವ್ವನಿಗೆ ಸ್ವಲ್ಪ ಮಾತ್ಸರ್ಯ ಉಂಟಾಯಿತು. ಪೆಟ್ಟು ತಿಂದೂ, ಸುಖವನ್ನು ಅನುಭವಿಸುತ್ತಿರುವ ಗಂಗೆಯನ್ನು ನೋಡಿ ಆಶ್ಚರ್ಯವೂ ಆಯಿತು. ತನ್ನ ಮನದಲ್ಲಿ ಆದ ಈ ಬದಲಾವಣೆ ಗಳನ್ನು ಅವಳು ತನ್ನ ಮುಖದಲ್ಲಿಯೂ ಸೂಚಿಸಿದಳು. "ಹೊಡೆದರೆ ನಿನಗೆ ಪೆಟ್ಟಾಗುವುದಿಲ್ಲವೆ? ನೋವಾಗುವುದಿಲ್ಲವೆ?" ಎಂದು ಪ್ರಶ್ನಿಸಿದಳು.

"ನೋವೆ? ಗುಡ್ಡದ ಮೇಲಿಂದ ನಿನ್ನ ಉರುಳಿಬಿಟ್ಟರೆ, ಬುಡಕ್ಕೆ ಬಂದಾಗ ನಿನಗೆ ಹೆಂಗಿರುತ್ತೆ, ನೋಡು, ಗಂಡ ಪೆಟ್ಟುಕೊಟ್ರೆ ಹಾಗಾಗುತ್ತೆ ನಂಗೆ. ಆಕಾಸದ ನಕ್ಷತ್ರ ಎಲ್ಲಾ ಕೆಳಗೆ ಥಳೀರಂತ ಉರುಳಿಕೊಂಡು ಬೀಳುತ್ತೆ. ಎಡಮುಷ್ಟಿ ಏಟು ಬಿದ್ರೆ ಒಂದು ರವಕೆ, ಹೋಟಲ್ ತಿಂಡಿ. ಬಲಮುಷ್ಟಿ ಏಟು ಬಿದ್ರೆ ಒಂದು ಸೀರಿ, ಮೇಲೆ ಸಿನಿಮಾ."

ಶಿದ್ದವ್ವನಿಗೆ ಚಂದಣ್ಣನ ಮೇಲಿದ್ದ ತಿರಸ್ಕಾರವು ಹೋಯಿತು. ಜತೆಗೆ ಪೆಟ್ಟಿನ ಸುಳಿವಿಲ್ಲದಿದ್ದ ತಮ್ಮ ದಾಂಪತ್ಯದಲ್ಲಿದ್ದ ಹೆಮ್ಮೆಯೂ ಮಾಯವಾಯಿತು. ಕುತೂಹಲ ದಿಂದ "ನಿನ್ನ ಯಾಕೆ ಬಡಿತಾನೆ?" ಎಂದು ಕೇಳಿದಳು.

"ಯಾಕೆ? ನಿನಗೆ ಗೊತ್ತಿಲ್ವೆ? ನಿನಗೆ ಹ್ಯಾಗೆ ಗೊತ್ತಾಗಬೇಕು? ಶಾಂತಪ್ಪ ಕುಡಿಯೋನಲ್ಲ. ಯಾಕೆ ಹೊಡಿತಾನೆ ಅಂದ್ರೆ, ಸಂಬಳ ತೊಗೊಂಡ ದಿನ ಭರ್ತಿ ಆಗಿ ಬರ್ತಾನೆ, ಅದಕ್ಕೆ."

"ಆದ್ರೆ? ನಿನ್ನ ಹೊಡೆಯೋಕೆ ಕಾರಣ?"

"ಕಾರಣಾ? ಕಾರಣ ಯಾಕೆ ಬೇಕು ಅದಕ್ಕೆ. ನನ್ನ ಲಗ್ನ ಆಗಿಲ್ವೆ? ನನ್ನ ಪ್ರೀತಿಸೊಲ್ವೆ? ಇನ್ನಾರನ್ನಾದ್ರೂ ಹೊಡೀಲಿ, ನಾನು ಸುಮ್ಮನೆ ಬಿಡ್ತೀನೇನು? ಒಂದು ಸಲ ಮುದ್ದಿ ಬಹಳ ಬಿಸಿ ಆಯ್ತು ಅಂತ ಹೊಡಿತಾನೆ. ಒಂದು ಸಲ ಕಿಟಕಿ

ಕಂಜಿ ಸೊಟ್ಟ ಯಾಕೆ ಇದೆ ಅಂತ ಹೊಡೀತಾನೆ. ಇಂಥಾದೇ ಕಾರಣ ಬೇಕು ಅಂತ ಒದ್ದಾಡೊಲ್ಲ. ಸಂಬಳ ಬರೋ ದಿವಸ, ಅವನು ರಾತ್ರಿ ಮನೆಗೆ ಬರುವ ಹೊತ್ತಿಗೆ ಅವನ ಕೈಗೆ ದೊಡ್ಡ ಸಾಮಾನು ಯಾವುದೂ ಸಿಗದಂತೆ ಬಚ್ಚಿಟ್ಟಿರ್ತೀನಿ. ಇಲ್ದೇ ಹೋದ್ರೆ ನನ್ನ ಪ್ರಾಣ ಉಳಿಬೇಕಲ್ಲ. ನನಗೆ ಏನೇನು ಬೇಕೋ ಅದಕ್ಕೆ ತಕ್ಕಷ್ಟು ಹೊಡಿಸಿಕೊಂಡು ಆ ಮೇಲೆ ನಿಲ್ಲಿಸಿಬಿಡ್ತೀನಿ. ಮೂರನೇ ಸೀರಿ ತಂದುಕೊಡುತ್ತೇನೆ ಅಂತ ಮೂರು ತಿಂಗಳಿಂದ ಹೇಳ್ತಿದ್ದ, ನೋಡು; ತರಲಿಲ್ಲ. ಅದಕ್ಕೆ ನಿನ್ನೆ ಸ್ವಲ್ಪ ಜಾಸ್ತಿ ಪೆಟ್ಟಾಗೋತನಕ ಸುಮ್ಮನಿದ್ದೆ. ನೋಡ್ತಿರು, ಮನೆಗೆ ಬರುವಾಗ ಇವತ್ತು ಸೀರೆ ತರ್ತಾನೆ.''—ಗಂಗೆ ಹಿಗ್ಗುತ್ತಿದ್ದಳು.

ಶಿದ್ದವ್ವನು ಯೋಚನೆಯ ತಡಕಿಗೆ ಸಿಕ್ಕಿದಳು. "ನಿಜ ಗಂಗಿ. ನನ್ನ ಗಂಡ ನನ್ನ ಹೊಡೆಯೋದೇ ಇಲ್ಲ ನೋಡು. ನೀನು ಹೇಳಿದಾಗೆ ಕಟ್ಟೆ ಮೇಲೆ ಕೂತು ಎಲಡಿಕೆ ಜಗಿಯುವುದೊಂದೇ ಅವನ ಕೆಲಸ. ನನ್ನ ಒಂದು ದಿವಸ ಸಿನಿಮಾಕ್ಕೆ ಕರೆಕೊಂಡು ಹೋಗಿಲ್ಲ; ಹೊಡೆದ್ರೆ ತಾನೆ ಕರೆಕೊಂಡು ಹೋಗೋಕೆ. ಹೊಟಲ್ ತಿಂಡಿ ವಾಸ್ನೇನೆ ನಮ್ಮ ಮನೆ ಒಳಗೆ ಬಂದಿಲ್ಲ'' ಎಂದು ಗೊಟಗುಟ್ಟಿದಳು.

"ಅಯ್ಯೋ ಶಿದ್ದಿ! ನಿನ್ನ ಕಂಡ್ರೆ ನನಗೆ ಅಯ್ಯೋ ಅನಿಸುತ್ತೆ. ಆದ್ರೆ ಎಲ್ಲರ್ಗೂ ನನ್ನ ಗಂಡನಂತ ಗಂಡ ಸಿಗ್ತಾನೇನೆ? ಅವನಂತೆ ಎಲ್ರೂ ಇದ್ರೆ ಜಗಳ ಯಾಕೆ ಆಗುತ್ತೆ? ಜಗಳ ಮಾಡೋ ಹೆಂಡತೀರಿಗೆಲ್ಲಾ, ಗಂಡಂದಿರು ತಿಂಗಳಿಗೊಮ್ಮೆ ಚೆನ್ನಾಗಿ ಬಡಿದು, ಆ ಮೇಲೆ ಜಾಸ್ತಿ ಪ್ರೀತಿಮಾಡಿ, ಸಿನಿಮಾ, ತಿಂಡಿ, ಬಟ್ಟೆ, ಹೀಗೇನಾದ್ರೂ ಮಾಡಿದ್ರೆ ಜಗಳಾನೇ ಇರೋಕಿಲ್ಲ.''—(ಇದು ಗಂಗೆಯ ಸಿದ್ಧಾಂತ).

ಶಿದ್ದವ್ವನು ನಿಟ್ಟುಸುರುಬಿಟ್ಟಳು. ಅವಳಿಗೆ ವಿಚಿತ್ರ ವ್ಯಥೆಯಾಯಿತು.

"ಗಂಗೀ! ಏ ಗಂಗೀ!'' ಎದುರುಮನೆಯಿಂದ ಚಂದಣ್ಣನ ನಿರ್ಮಲಕಂಠವು ಕೇಳಿಸಿತು. ಗಂಗೆ ಜಿಂಕೆಯಂತೆ ಓಡಿದಳು. ಶಿದ್ದವ್ವನು ಬಾಗಿಲ ಬಳಿ ಬಂದು ನಿಂತು ನೋಡಿದಳು. ಚಂದಣ್ಣನ ಕೈಲಿ ಎರಡು ಗಂಟುಗಳಿದ್ದುವು. "ಹೊಸ ಸೀರಿ ತಂದಿದ್ದೇನೆ, ನೋಡು. ಸಣ್ಣ ಪೊಟ್ಟಣದಾಗೆ ಏನೈತೆ ಗೊತ್ತೆ—ಲಾಡು ಉಂಡೆ, ಜೋಂಡ. ಸಿನಿಮಾಕ್ಕೆ ಬರ್ತಿಯಾ, ಪಸಂದಾಗಿದಂತೆ, 'ಲವಕುಸ'" ಎಂದು ಚಂದಣ್ಣನು ತನ್ನ ಹೆಂಡತಿಗೆ ಅರ್ಪಿಸುತ್ತಿದ್ದ ಏಟುಗಳ ತೆರವನ್ನು ಶಿದ್ದವ್ವನು ಕೇಳಿ ಮತ್ತೊಮ್ಮೆ ನಿಟ್ಟುಸುರುಬಿಟ್ಟಳು.

ಗಂಗೆ ಚಂದಣ್ಣನವರು ತಿಂಡಿ ತಿಂದು, ಸಿನಿಮಾಕ್ಕೆ ಹೋಗಿದ್ದನ್ನು ಶಿದ್ದವ್ವನು ಗಮನಿಸಿದಳು. ಅವರು ಹೋದೊಡನೆ ಅವಳ ಕಣ್ಣುಗಳಲ್ಲಿ ನೀರು ತುಂಬಿತು, ಅತ್ತು ಬಿಟ್ಟಳು, ನಿಜ. ಚಂದಣ್ಣನು ಗಂಗೆಯನ್ನು ಹೊಡೆದರೂ ಚಿಂತೆಯಿಲ್ಲ; ಗಂಗೆಯ

ಜೀವನದಲ್ಲಿ ಅದರ ಪರಿಣಾಮದಿಂದ ದಾಂಪತ್ಯಸೌಖ್ಯವೂ ಒಂದು ಮೆಟ್ಟಲು ಮೇಲೇರಿತ್ತು. ಗಂಗೆಯ ಜೀವನದಲ್ಲಿ ಹೊಡೆತದ ತಗ್ಗಿದ್ದರೂ ಪ್ರೇಮದ ದಿಣ್ಣೆ ಇತ್ತು. ಶಾಂತಪ್ಪನು ಹೆಸರಿಗೆ ಸರಿಯಾಗಿ ಶಾಂತಸ್ವಭಾವದವನು, ಸಾಧುಮನುಷ್ಯ. ಶಿದ್ದವ್ವನನ್ನು ಪ್ರೀತಿಸದೇ ಇರುತ್ತಿರಲಿಲ್ಲ. ಅವಳೇ ಅವನ ಸರ್ವಸ್ವ. ಆದರೆ ತನ್ನ ಪ್ರೇಮವನ್ನು ಬಹಿರಂಗಪಡಿಸುತ್ತಲೂ ಇರಲಿಲ್ಲ. ಇವರಿಬ್ಬರ ದಾಂಪತ್ಯದಲ್ಲಿ ಇಳಿತವೂ ಇಲ್ಲ, ದಿಣ್ಣೆಯೂ ಇಲ್ಲ. ಶಿದ್ದವ್ವನು ಅತ್ತಳು. ಅವಳದು ಆಶ್ಚರ್ಯಕರವಾದ ಅಳುವು. ಅರ್ಥವಿಲ್ಲದ ಅಳುವು. ವಿಚಿತ್ರವಾದ ಅಳುವು. ದಾಂಪತ್ಯಜೀವನದಲ್ಲಿ ವಿವಿಧವಾಗಿ ನೊಂದ ಸತಿಯರ ವ್ಯಥೆಗಳ ಪಟ್ಟಿಗೆ ಇನ್ನೂ ಸೇರದೇ ಇದ್ದ ವಿಚಿತ್ರ ವ್ಯಥೆಗಾಗಿ ಅತ್ತಳು. ಶಾಂತಪ್ಪನು ಎಂದೂ ತನ್ನನ್ನು ಹೊಡೆದಿರಲಿಲ್ಲ, ಅನಂತರ ಹೆಚ್ಚಾಗಿ ಪ್ರೀತಿಯನ್ನೂ ತೋರ್ಪಡಿಸಿರಲಿಲ್ಲ ಎಂದು ಅತ್ತಳು. ತಗ್ಗು ದಿಣ್ಣೆಗಳಿಲ್ಲದ ವೈವಿಧ್ಯವಿಲ್ಲದ ಅವರ ಜೀವನವು ಅವಳಿಗೆ ಇಂದು ಜುಗುಪ್ಸೆಯನ್ನುಂಟುಮಾಡಿತು. ಇದುವರೆಗೂ ಸುಷುಪ್ತಾವಸ್ಥೆಯಲ್ಲಿದ್ದ ಅವಳ ರಾಗಾಭಿಲಾಷೆಯು ಇಂದು ಅವಳ ಹೃದಯದಲ್ಲಿ ಎಚ್ಚತ್ತಿತು.

ಸಂಜೆ ಏಳು ಗಂಟೆಗೆ ಶಾಂತಪ್ಪನು ಬಂದು ಮಾಮೂಲಿನಂತೆ ಕೈಕಾಲುಗಳನ್ನು ತೊಳೆದುಕೊಂಡು ತಟ್ಟೆಹಾಕಿಕೊಂಡು ಊಟಕ್ಕೆ ಕುಳಿತನು :

" ಸಾರು ಚೆನ್ನಾಗಿದೆಯೇ ? "— ಎಂದು ಶಿದ್ದವ್ವನು ಕೇಳಿದಳು. " ಆ— ಓಹೋ !—ಚೆನ್ನಾಗಿದೆ " ಎಂದು ಶಾಂತಪ್ಪನು ಹೇಳಿದನು. ಶಿದ್ದವ್ವನು ಆ ರಾತ್ರಿ ಸಾರನ್ನು ಬೇಕೆಂದು ಕೆಡಿಸಿದ್ದಳು. ಮುದ್ದೆಯನ್ನೂ ಸರಿಯಾಗಿ ಬೇಯಿಸಿರಲಿಲ್ಲ. ಶಾಂತಪ್ಪನು ಏನೂ ಸಿಟ್ಟುಮಾಡದೆ ಊಟಮಾಡಿ ಅನಂತರ ಜಗಲಿಯ ಮೇಲೆ ಕುಳಿತು ಎಲಡಿಕೆ ಹಾಕಿಕೊಳ್ಳಲಾರಂಭಿಸಿದನು. ಶಿದ್ದವ್ವನಿಗೆ ಜುಗುಪ್ಸೆ ಅಧಿಕವಾಯಿತು.

ಮರುದಿವಸ ಭಾನುವಾರ. ಶಾಂತಪ್ಪ ಚಂದಣ್ಣ ಇಬ್ಬರಿಗೂ ರಜಾ. ಬೆಳಗ್ಗೆ ಶಿದ್ದವ್ವನು ಗಂಗವ್ವನ ಮನೆಗೆ ಹೋಗಿದ್ದಳು. ಚಂದಣ್ಣನು ತಂದಿದ್ದ ಸೆಂಟಿನ ವ್ಯಾಸಿಲೇನನ್ನು ಗಾಯಗಳಿಗೆ ಹಚ್ಚಿಕೊಂಡು ಗಂಗವ್ವನು ಸುವಾಸನೆಯಾಗಿದ್ದಳು; ಮಲ್ಲಿಗೆಹೂವು ಮುಡಿದು ಪರಿಮಳವನ್ನು ಬೀರುತ್ತಿದ್ದಳು; ಹೊಸ ಸೀರೆಯನ್ನುಟ್ಟು ನಗುವನ್ನು ಬೀರುತ್ತಿದ್ದಳು. ಏಕೆಂದರೆ ಚಂದಣ್ಣನು ಅವಳನ್ನು ಲಾಲ್‌ಬಾಗಿಗೆ ಕರೆದುಕೊಂಡು ಹೋಗುವುದರಲ್ಲಿದ್ದನು. ಶಿದ್ದವ್ವನ ವ್ಯಥೆಯು ದಾರುಣವಾಯ್ತು. ಚಂದಣ್ಣನು ಹೊಡೆದ ಏಟುಗಳಲ್ಲಿ ಗಂಗೆಗೆ ಇಷ್ಟು ಸೌಖ್ಯವಿರುವುದೆಂದು ಅವಳು ತಿಳಿದಿರಲಿಲ್ಲ. ತನ್ನ ಗಂಡನು ಸಿಟ್ಟಿಗೆದ್ದು ತನಗೂ ಫಟೀರನೆ ಕೆನ್ನೆಗೆ ಹೊಡೆಯ ಬಾರದೆ ಎಂದು ಬಂಜೆಯು ಮಗುವನ್ನು ಹಂಬಲಿಸುವಂತೆ ಶಿದ್ದವ್ವನು ಶಾಂತಪ್ಪನ

ಮುಷ್ಟಿಪ್ರಹಾರವನ್ನು ಹಂಬಲಿಸಲಾರಂಭಿಸಿದಳು. ಯೋಚನೆಮಾಡುತ್ತಿದ್ದ ಅವಳಿಗೆ ಅಕಸ್ಮಾತ್ ಉಪಾಯವೊಂದು ಹೊಳೆದು ಅವಳ ಮುಖದಲ್ಲಿ ದೂರದ ಸೌಖ್ಯದ ಕನಸಿನ ಕುರುಹೂ ಕಂಡುಬಂದಿತು. ತನ್ನ ಗಂಡನು ಹೊಡೆದ ಘಾಯದ ಕಲೆಗಳನ್ನು ಗಂಗವ್ವನಿಗೆ ತಾನೂ ಶೀಘ್ರದಲ್ಲೇ ತೋರಿಸುವೆನೆಂದುಕೊಂಡಳು.

ಆ ಭಾನುವಾರ ಚಂದಣ್ಣ ಗಂಗವ್ವ ಇವರುಗಳಿಗೆ ವಿಶೇಷ ಸೌಖ್ಯದ ದಿನವಾಗಿದ್ದರೂ ಅದು ಶಾಂತಪ್ಪ ಶಿದ್ದವ್ವ ಇವರುಗಳಿಗೆ ಪ್ರತಿನಿತ್ಯದಂತೆಯೇ ಇದ್ದಿತು. ಇವರುಗಳ ಸಂಸಾರವು ಅಂದೂ ಎಂದಿನಂತೆಯೇ ನಿರ್ಮಲವಾದ, ಏನೊಂದೂ ಅಲೆಯೇ ಇಲ್ಲದ ಕೊಳದಂತಿತ್ತು. ಆ ದಿವಸ ಕೆಲಸವಿಲ್ಲದ್ದರಿಂದ ಶಾಂತಪ್ಪನು ಬೆಳಗ್ಗೆ ಸ್ವಲ್ಪ ಅಡ್ಡಾಡಿಕೊಂಡು ಹತ್ತು ಗಂಟೆ ಹೊತ್ತಿಗೆ ಹಿಂದಿರುಗಿ ಬಂದು ಹರಿದಿದ್ದ ತನ್ನ ಅಂಗಿಯನ್ನು ಹೊಲಿಯುತ್ತಾ ಕುಳಿತುಕೊಂಡನು. ಶಾಂತವಾದ ಅವನ ಚಿತ್ತದಲ್ಲಿ ಯಾವಾಗಲೂ ಆಡಂಬರವಾಗಲಿ ಡೌಲಾಗಲಿ ಇರಲಿಲ್ಲ; ದ್ವೇಷವೂ ಇಲ್ಲ, ರಾಗವೂ ಇಲ್ಲ. ಅವನ ಮನಸ್ಸು ಏನೊಂದೂ ಸಂಕೋಚವಿಲ್ಲದೆ ಶಿದ್ದವ್ವಾರ್ಪಣವಾಗಿತ್ತೇ ವಿನಾ, ಅದರಲ್ಲಿ ಸಿನಿಮಾ, ಹೋಟಲ್, ವಿಹಾರ—ಈ ತರಹ ಏನೊಂದೂ ಸುಳಿಯುತ್ತಿರಲಿಲ್ಲ. ಶಿದ್ದವ್ವನು ಒಳಗಡೆ ಕೆಲಸಮಾಡುತ್ತಾ ಬಳೆ ಸದ್ದುಮಾಡುತ್ತಿದ್ದರೆ, ಅವುಗಳ ನಾದವನ್ನು ಆಲೈಸುತ್ತಾ ಎಲಡಿಕೆಗೆ ಕೈಹಚ್ಚಿದನೆಂದರೆ ಅದು ಅವನ ಸ್ವರ್ಗ. ಅವನ ಮನವು ವಿರಾಮಕಾಲದಲ್ಲಿಯೂ ಮನೆಯಿಂದಾಚೆ ಹೊರಹೊರಟದ್ದೇ ಅಲ್ಲ. ಇದುವರೆಗೂ ಶಿದ್ದವ್ವನು ಇದೇ ಮನೋವೃತ್ತಿಯಲ್ಲಿದ್ದು ಅವಳ ಮನದಲ್ಲಿ, ಗಂಗವ್ವನ ಮನದಲ್ಲಿ ಸುಳಿಯುತ್ತಿದ್ದ ಸಿನಿಮಾ ಹೋಟಲ್‌ಗಳು ಸುಳಿಯುತ್ತಿರಲಿಲ್ಲವಾದ್ದರಿಂದ ಶಾಂತಪ್ಪನು ಹೊರಗಡೆ ಅವರಿವರೊಡನೆ ಒಂದೆರಡು ಮಾತಾಡುತ್ತಿದ್ದರೆ ಅದನ್ನು ಕೇಳುತ್ತಾ ತನ್ನ ಮನೆ ಕೆಲಸಗಳಿಗೆ ಕೈಹಚ್ಚಿದಳೆಂದರೆ ಅವಳೂ ಶಾಂತಪ್ಪನಂತೆ. ಅದು ಅವಳ ಸ್ವರ್ಗ. ಆದರೆ ಈ ದಿವಸ ಶಿದ್ದವ್ವನ ಹೃದಯ ಕಲಕಿಹೋಗಿ ಗಂಗೆಯ ಅತಿಶಯದ ಸೌಖ್ಯದ ಮಾತ್ಸರ್ಯವೂ ತುಂಬಿದುದರಿಂದ ಅವಳ ಶಾಂತತೆ ಕಳಚಿಬಿದ್ದಿತ್ತು. ಗಂಡನಿಂದ ಬಲವಾಗಿ ಪೆಟ್ಟುಗಳನ್ನು ತಿನ್ನುವ ಹಂಚಿಕೆಯಲ್ಲಿದ್ದಳು. ಶಾಂತಪ್ಪನು ಭೀಮಸ್ವರೂಪನಾಗಿ ಎದ್ದುಬಂದು ಗುದ್ದಬಾರದೇ ? ಹೊಡೆಯಬಾರದೇ ? ತಾನು ಅವನ ಹೆಂಡತಿಯಲ್ಲವೇ ? ತನ್ನ ಮೇಲೆ ಅವನಿಗೆ ಅಷ್ಟು ಪ್ರೇಮವಿರಲಿಲ್ಲವೇ ? ಈ ತರಹ ಪ್ರಶ್ನೆಗಳು ಅವಳ ಮನವನ್ನು ಛಿದ್ರಛಿದ್ರವಾಗಿ ಮಾಡಿದ್ದುವು. ಅವಳು ಈ ಸ್ಥಿತಿಯಲ್ಲಿದ್ದಾಗ ಲಾಲ್‌ಬಾಗಿನಿಂದ ಹಿಂದಿರುಗಿ ಬಂದು ವಿನೋದಕೇಳಿಯಲ್ಲಿದ್ದ ಚಂದಣ್ಣ ಗಂಗೆಯರ ನಗುವಿನ ಅಲೆಗಳು ಮೇಲೆ ಮೇಲೆ ಬಂದು ಶಿದ್ದವ್ವನ ತಾಳ್ಮೆಯನ್ನು ಚ್ಯುತಿಮಾಡಿದುವು.

ಇದ್ದಕ್ಕಿದ್ದ ಹಾಗೆ ಅವಳು, ಶಾಂತಪ್ಪನ ಬಳಿಗೆ ಬಂದು "ಏನು ಮಾಡ್ತಿದ್ದೀಯಾ? ರಜಾದಿವಸ ಸ್ವಲ್ಪ ಮನೆ ಕೆಲಸಕ್ಕೆ ಬರಬಾರದೇನೂ. ಗೂಬೆ ಕೂತ ಹಾಗೆ ಕೂತಿರುವುದರ ಬದಲು" ಎಂದಳು. ಅಕಸ್ಮಾತ್ ಬದಲಾಯಿಸಿದ ಅವಳ ಚರ್ಯೆಗೆ ಶಾಂತಪ್ಪನು ಆಶ್ಚರ್ಯಗೊಂಡರೂ ಏನೂ ಉತ್ತರ ಕೊಡದೆ ತನ್ನ ಕೆಲಸವನ್ನು ಮಾಡಲಾರಂಭಿಸಿದನು. ಶಿದ್ದವ್ವನು ಹುಸಿ ಕೋಪಕೊಂಡು ಅವನು ಹೊಲಿಯುತ್ತಿದ್ದ ಅಂಗಿಯನ್ನು ಕಿತ್ತೊಗೆದು "ಹಿತ್ತಲಲ್ಲಿ ನನ್ನ ಸೀರೆ ನೆನಸಿಟ್ಟಿದ್ದೀನಿ, ಒಗಿ ಹೋಗು" ಎಂದು ಜೋರಾಗಿ ಕುಳಿತಿದ್ದ ಶಾಂತಪ್ಪನ ಕೆನ್ನೆಗೆ ಫಟೀರೆಂದು ಹೊಡೆದಳು. ಶಾಂತಪ್ಪನು ಛಂಗನೆ ಎದ್ದು ನಿಂತುಕೊಂಡನು. ಶಿದ್ದವ್ವನು ತನ್ನ ಇಷ್ಟಾರ್ಥವು ಸಲ್ಲುವುದೆಂದು ಮನದಲ್ಲಿ ಆನಂದಿಸುತ್ತಾ ತನ್ನ ಯುಕ್ತಿಯನ್ನು ಭದ್ರಪಡಿಸಲೋಸುಗ ಶಾಂತಪ್ಪನ ಕೆನ್ನೆಗೆ ಇನ್ನೊಂದು ಏಟು ಬಿಗಿದು ಮುಂದಿನ ಕ್ಷಣ ಬರಲಿರುವ ವಿಚಿತ್ರಸೌಖ್ಯವನ್ನು ಅನುಭವಿಸಲು ತನ್ನ ಮುಖವನ್ನು ಶಾಂತಪ್ಪನ ಕೈಗಳಿಗೆ ಸಿಲುಕುವಂತೆ ಎತ್ತಿ ಹಿಡಿದು ಆನಂದದಿಂದ ಕಣ್ಣುಗಳನ್ನು ಮುಚ್ಚಿ ಸಿದ್ಧಳಾಗಿ ನಿಂತಳು.

ಎದುರುಮನೆ ಚಂದಣ್ಣನು ಗಂಗವ್ವನಿಗೆ "ಗಂಗಿ! ಶಾಂತಪ್ಪ ಶಿದ್ದವ್ವ ನಮ್ಮನ್ನೇ ಹೋಲ್ತಾ ಬರ್ತಿದಾರೆ. ಕೇಳು ಜಗಳ ಆಡೋದು. ಶಿದ್ದವ್ವ ಇಷ್ಟು ಬಾಯಿ ಮಾಡಿದ್ದು ನಾನು ಎಂದೂ ಕೇಳಿರಲಿಲ್ಲ" ಎಂದನು.

ಗಂಗವ್ವನು ಆತುರದಿಂದ "ಹೌದು. ನಾನು ಹೋಗಿ ನೋಡಿಕೊಂಡು ಬರ್ತೀನಿ. ನನಗೆ ಗೊತ್ತು, ಶಿದ್ದವ್ವ ಯಾಕೆ ಜಗಳ ಕಾಯ್ತಾಳೆ ಅಂತ" ಎಂದು ಹೇಳಿ ಶಿದ್ದವ್ವನೆಡೆಗೆ ಓಡಿಬಂದಳು.

ಶಿದ್ದವ್ವನು ಮನೆಯ ಮಧ್ಯದಲ್ಲಿ ನಿಂತಿದ್ದಳು. ಶಾಂತಪ್ಪನು ಕಾಣಲಿಲ್ಲ. ಗಂಗೆಯು ಮೆಲ್ಲನೆ "ಶಿದ್ದಿ! ಹೊಡೆದನೆ! ಹೊಡೆದನೆ?" ಎಂದು ಪ್ರಶ್ನಿಸಿದಳು. ಶಿದ್ದವ್ವನು ಬಿಕ್ಕಿಬಿಕ್ಕಿ ಅಳುತ್ತಾ, ಮೆಲ್ಲನೆ "ಗಂಗಿ—ಯಾರಿಗೂ ಹೇಳ್ಬೇಡವ್ವಾ—ಯಾರಿಗೂ—ಶಿವಾ ಶಿವಾ—ಅವನು ನನ್ನ ಮುಟ್ಟಲೇ ಇಲ್ಲ—ಮೆಲ್ಲಗೆ ಹೋಗಿ—ಹಿತ್ತಲಕಡೆ—ಸೀರೆ—ಶಿವಾಶಿವಾ—ನನ್ನ ಸೀರೇ—ಒಗೀತಾ ಇದಾನೆ" ಎಂದಳು.

"ರಾಮು."

ಬೈಗಿನ ಬಲೆ

ಕೆಂದಳಿರಿನ ತೋರಣದೊಲು
ಚೆಂದದಿ ಮುಗಿಲೋಳಿ
ಆಗಸದಲಿ ಸಾಲ್ಗೊಂಡಿದೆ
ಕೆಂಬಣ್ಣವ ತಾಳಿ.
ಪಜ್ಜಳಿಸುವ ಬಾನ್ಮಣಿಯಾ
ಕರತತಿ ಧರೆಗೊರಗಿ
ಕೆನ್ನೀರಿನ ಕಾಲುವೆಯೊಲು
ಕಂಗೊಳಿಸಿದೆ ಬೆಳಗಿ !


ಪಸುರುಡುಗೆಯನುಟ್ಟಿರುವಳು
ಪ್ರಕೃತಿಯು ತಾನೊಲಿದು.
ಪೊಸಪೂಗಳ ತೊಡವುಗಳಿಂ
ನೆರೆಮೆರೆವಳು ನಲಿದು.
ಮುದವೀವಳು ಜನಕೆಲ್ಲಕು
ಮೆಲ್ನಗೆಯಿಂ ಕೂಡಿ—
ವಿಹಗಂಗಳ ಕಲರುತಿಯಿಂ
ಮೃದುಗಾನವ ಮಾಡಿ !

ಕಡುನೇಹದಲೆಳಬಳ್ಳಿಯು
ಮೆಲ್ಲೆಲರನು ಸೇರಿ
ಸಂತಸದಲಿ ನರ್ತಿಸುತಿದೆ
ವೈಖರಿಯನು ಬೀರಿ.
ತಿರೆವೆಣ್ಣನು ಬೆಂಗದಿರನು
ಚುಂಬಿಸುತಿಹನೋತು.
ಜಗವೆಲ್ಲವು ನಗುತಿರುವುದು
ಬಂಧುರತೆಯನಾಂತು !

ಹಗರಣದಾ ನೆನವುಗಳನು
  ಬಗೆಯಿಂದಲಿ ಮಾಸಿ
ತನಿಗಂಪನು ಸೂಸುತಲಿದೆ
  ತೆಳುಗಾಳಿಯು ಬೀಸಿ.
ಸುಲಲಿತವಹ ಪರಿತೋಷದ
  ನೆರೆಯೇರುತಲಿಹುದು.
ಸೌಂದರ್ಯದ ಭಂಡಾರದ
  ದ್ವಾರವೆ ತೆರೆದಿಹುದು!

ಏನಂದದ ನೋಟಗಳನು
  ಪೆತ್ತಿಹುದೀ ಸಂಜೆ!
ಮಾನವಕೃತ ಸೌಂದರ್ಯದ
  ಪೆಣ್ಣಿದರೆಡೆ ಬಂಜೆ!
ಕಲೆಗಾರರು ಸಿಲ್ಕಿರುವರು
  ಸುಖದಶ್ರುವ ಚೆಲ್ಲಿ—
ರಮ್ಯತೆಯನು ತಳೆದೆಸೆವೀ
  ಬೈಗಿನ ಬಲೆಯಲ್ಲಿ!

ಎ. ಸಿ. ಶಂಕರಭಾರತಿ, ಮೈಸೂರು.



ಹಲ್ಮಿಡಿಯ ಶಾಸನ

ಅತ್ಯಂತ ಪ್ರಾಚೀನ ಕನ್ನಡ ಶಾಸನ

ಕನ್ನಡ ಭಾಷೆಯು ಬಹಳ ಪ್ರಾಚೀನವಾದುದೆಂದೂ ಈಗ್ಗೆ ಒಂದೂವರೆ ಅಥವಾ ಎರಡು ಸಾವಿರ ವರ್ಷಗಳ ಕೆಳಗೆ ದ್ರಾವಿಡತಾಯ್ನುಡಿಯಿಂದ ಕವಲೊಡೆದು ರೂಪಾಂತರವನ್ನು ಹೊಂದಿತೆಂದೂ ವಿದ್ವಾಂಸರು ಸಾಮಾನ್ಯವಾಗಿ ಒಪ್ಪುತ್ತಾರೆ. ಶಾತವಾಹನರಾಜರ ಹೆಸರುಗಳಲ್ಲೂ ಬಿರುದಾವಳಿಗಳಲ್ಲೂ ಇರುವ 'ಪುಲಿಮಾಯಿ,' 'ವಿಳಿವಾಯಕುರ' ಮೊದಲಾದ ಪದಗಳು ದ್ರಾವಿಡ ಪದಗಳೆಂದೇ ನಿರ್ಧರಿಸಲ್ಪಟ್ಟರೂ ಕನ್ನಡಪದಗಳೆಂದು ಖಂಡಿತವಾಗಿ ಹೇಳುವುದು ಸಾಧ್ಯವಾಗಿಲ್ಲ. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟ ಪ್ರಹಸನವೊಂದು ಈಜಿಪ್ಟ್ ದೇಶದಲ್ಲಿ ಆಕ್ಸಿರಿಂಖಸ್ ಎಂಬಲ್ಲಿ ದೊರೆತ ಹಸ್ತಲಿಖಿತ 'ಪೆಪೈರಸ್' ಪುಸ್ತಕದಲ್ಲಿ ಕಾಣಬಂದಿದೆ. ಈ ಪ್ರಹಸನದ ಭಾರತೀಯ ಪಾತ್ರಗಳು ಇಲ್ಲಿಯ ಭಾಷೆಯೊಂದನ್ನು ಆಡುತ್ತಾರೆ. ಈ ಮಾತು ಕನ್ನಡವಿರಬಹುದೆಂದು ಡಾ|| ಹುಲ್ಷ್‌ರವರು ಈಗ್ಗೆ ಮೂವತ್ತು ವರ್ಷಗಳ ಹಿಂದೆಯೇ ಸೂಚಿಸಿದರು. ಡಾ|| ಶಾಮಶಾಸ್ತ್ರಿಗಳು ಈ ಭಾರತೀಯ ವಾಕ್ಯಗಳನ್ನು ಕನ್ನಡದಲ್ಲಿ ರೂಪಗೊಳಿಸಿ ೧೯೨೬ರ 'ಮೈಸೂರು ಶಾಸನ ಶಾಖೆಯ ವರದಿ'ಯಲ್ಲಿ ಪ್ರಕಟಿಸಿದರು. ಎರಡನೆಯ ಶತಮಾನದ ಕನ್ನಡವು ನಮಗೆ ದೊರೆತು ದಲ್ಲಾ ಎಂದು ಕನ್ನಡಿಗರು ಬಹುವಾಗಿ ಸಂತೋಷಪಟ್ಟರೂ ಈ ವಿಚಾರದಲ್ಲಿ ವಿದ್ವಾಂಸರ ಮನಸ್ಸಿನಲ್ಲಿ ಸಂದೇಹಗಳು ಇನ್ನೂ ನಿವೃತ್ತಿಯಾಗಿಲ್ಲ.

ನಿಸ್ಸಂದೇಹವಾಗಿ ಅತ್ಯಂತ ಪ್ರಾಚೀನ ಕನ್ನಡ ಲೇಖಗಳು ಯಾವುವೆಂದು ವಿಚಾರಮಾಡಿದರೆ ಇದುವರೆಗೂ ಚಾಲುಕ್ಯ ರಾಜನಾದ ಕೀರ್ತಿವರ್ಮನ ಶಾಸನ ಮತ್ತು ಮಂಗಳೇಶನ ಮೇಗುತಿ ದೇವಾಲಯದ ಶಾಸನ ಇವುಗಳೇ ಆಗಿದ್ದುವು. ಇವು ಕ್ರಿ. ಶ. ೫೭೦, ೫೮೦ಕ್ಕೆ ಸುಮಾರಾಗಿ ಅನ್ವಯಿಸುವುವು. ಈಗ ಅದೃಷ್ಟ ವಶಾತ್ ಕ್ರಿಸ್ತಾಬ್ದ ಸುಮಾರು ೪೫೦ರಲ್ಲಿ ಹುಟ್ಟಿದ ಕನ್ನಡ ಶಾಸನವೊಂದು ದೊರೆತಿದೆ. ಇದರಿಂದ ಅಷ್ಟು ಪ್ರಾಚೀನ ಕಾಲದಲ್ಲಿದ್ದ ಕನ್ನಡ ಭಾಷೆಯ ಸ್ಥಿತಿಯು ನಮಗೆ ತಿಳಿಯಬರುತ್ತದೆ.

ಮೈಸೂರು ಸಂಸ್ಥಾನದ ಹಾಸನ ಜಿಲ್ಲೆಯ ಅತ್ಯಂತ ಉತ್ತರ ಭಾಗದಲ್ಲಿ ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ರಾಜಮಾರ್ಗದ ಪಶ್ಚಿಮಕ್ಕೆ ಎರಡು ಮೈಲಿಯ ದೂರದಲ್ಲಿ ಯಗಚಿ ನದಿಗೆ ಸೇರುವ ಹಳ್ಳವೊಂದರ ಬಲದಡದ ಮೇಲೆ ಹಲ್ಮಿಡಿ ಎಂಬ ಸಣ್ಣ ಗ್ರಾಮವೊಂದು ಬಹಳ ಪ್ರಾಚೀನ ಕಾಲದಿಂದಲೂ ಇದೆ.

ಆ ಗ್ರಾಮದ ಮಧ್ಯದಲ್ಲಿ ಬಹಳ ಪ್ರಾಚೀನವಲ್ಲದ ಮತ್ತು ಶಿಲ್ಪದೃಷ್ಟಿಯಿಂದ ಅಮುಖ್ಯವಾದ ದೇವಾಲಯವೊಂದು ವೀರಭದ್ರಮೂರ್ತಿಗೆ ನೆಲೆಯಾಗಿದೆ. ಪೂರ್ವದಲ್ಲಿ ಆ ಊರನ್ನು ಸುತ್ತುಗಟ್ಟಿದ್ದ ಮಣ್ಣಿನ ಕೋಟೆಯು ಈಗ ಕಾಣಬರುವುದಿಲ್ಲ. ಆ ಕೋಟೆಯ ಪಶ್ಚಿಮ ಬಾಗಿಲು ನಿಂತಿದ್ದ ಸ್ಥಳದ ಬಳಿ ಸುಮಾರು ೧೯೩೦ರಲ್ಲಿ ಕಲ್ಲಿನ ಮೋಟುಕಂಬವೊಂದು ನೆಲದಲ್ಲಿ ದೊರೆಯಿತು. ಅದರ ಮೇಲೆ ಅಕ್ಷರಗಳಿದ್ದುದರಿಂದ ಗ್ರಾಮಸ್ಥರು ಅದನ್ನು ಒಯ್ದು ವೀರಭದ್ರ ದೇವಾಲಯದ ಮುಂದುಗಡೆ ಬಯಲಿನಲ್ಲಿ ನಿಲ್ಲಿಸಿದರು. ಕೆಲವು ವೇಳೆ ಆ ಕಂಬಕ್ಕೆ ದನ ಕರುಗಳನ್ನು ಕಟ್ಟುವುದೂ, ಗ್ರಾಮದ ಮಕ್ಕಳು ಕಲ್ಲುಗಳನ್ನು ಗುರಿಯಿಟ್ಟು ಅದಕ್ಕೆ ಹೊಡೆದು ಅಭ್ಯಾಸಮಾಡುವುದೂ ಸಾಮಾನ್ಯವಾಗಿತ್ತು. ಈ ಸ್ಥಿತಿಯಲ್ಲಿರುವಾಗ ಈ ಕಂಬವು ಮೈಸೂರು ಶಾಸನ ಶಾಖೆಯವರ ದೃಷ್ಟಿಗೆ ಬಿದ್ದಿತು. ಇದು ಮುಖ್ಯವಾದ ಶಾಸನವೆಂದು ತಿಳಿದು ಅವರು ಈ ಕಂಬವನ್ನು ಮೈಸೂರಿಗೆ ಕೊಂಡೊಯ್ದು ಶಾಸನ ಶಾಖೆಯ ಪ್ರದರ್ಶನ ಶಾಲೆಯಲ್ಲಿ ಇಟ್ಟು ಕಾಪಾಡಿರುವರು.

ಹಲ್ಮಿಡಿಯ ಶಾಸನದ ಕಲ್ಲು ನಾಲ್ಕುಅಡಿ ಎತ್ತರವಾಗಿಯೂ, ಒಂದು ಅಡಿ ಅಗಲವಾಗಿಯೂ, ಒಂಭತ್ತು ಅಂಗುಲ ದಪ್ಪವಾಗಿಯೂ ಇದೆ. ಇದರಲ್ಲಿ ಮೂರು ಭಾಗಗಳು ಕಾಣಬರುತ್ತವೆ. ಕೆಳಗಣ ಹಾಸುಗಲ್ಲಿನ ಗುಳಿಗೆ ಸಿಕ್ಕಿಸಲು ಕೆತ್ತಿರುವ ತೀರು ಅಥವಾ ಪಾದ, ಇದರ ಮೇಲೆ ಸುಮಾರು ಒಂದು ಮೊಳದಷ್ಟು ಎತ್ತರವಾಗಿರುವ ನಯಮಾಡಿದ ಕಂಬ, ಎಲ್ಲಕ್ಕೂ ಮೇಲೆ ಕಮಾನಿನ ಆಕಾರವುಳ್ಳ ಹತ್ತು ಅಂಗುಲ ಎತ್ತರವಿರುವ ತಲೆ. ಈ ತಲೆಯ ಮುಂಭಾಗದಲ್ಲಿ ಸುಮಾರು ಏಳು ಅಂಗುಲ ಅಗಲವಿರುವ ಚಕ್ರವೊಂದನ್ನು ಕೆತ್ತಿದೆ. ಇದು ವಿಷ್ಣುವಿನ ಸುದರ್ಶನ ಚಕ್ರವೆಂಬುದು ಪಕ್ಕದಲ್ಲಿರುವ ಶ್ಲೋಕದಿಂದ ವ್ಯಕ್ತವಾಗುತ್ತದೆ. ಈ ಚಕ್ರದ ಸುತ್ತಲೂ ಕುದುರೆಯ ಲಾಳದ ಆಕಾರದಲ್ಲಿ ಶಾಸನದ ಮೊದಲನೆಯ ಪಂಕ್ತಿಯು ಬರೆದಿದೆ. ಕಂಬದ ಮೇಲೆ ಎರಡನೆಯ ಪಂಕ್ತಿಯಿಂದ ಹದಿನೈದರ ವರೆಗೂ, ಕಂಬದ ಬಲಮಗ್ಗುಲಲ್ಲಿ ಮೇಲಿನಿಂದ ಕೆಳಕ್ಕೆ ಅಡ್ಡಲಾಗಿ ಹದಿನಾರನೆಯ ಪಂಕ್ತಿಯೂ ಕೆತ್ತಿದೆ. ಕಲ್ಲು ಒಂದು ವಿಧವಾದ ಬಳಪದ ಕಲ್ಲು. ಶಾಸನವು ಚೆನ್ನಾಗಿ ಕಾಣಿಸುತ್ತದೆ. ಆದರೆ ಹಳ್ಳಿಯ ಮಕ್ಕಳ ಕಲ್ಲಿನೇಟಿನಿಂದ ಶಾಸನದ ಕೆಲವೆಡೆಗಳಲ್ಲಿ ಹಳ್ಳಗಳು ಬಿದ್ದು ಸುಮಾರು ಇಪ್ಪತ್ತು ಕಡೆಗಳಲ್ಲಿ ಅಕ್ಷರಗಳನ್ನು ನಿರ್ಧರಿಸುವುದಕ್ಕೆ ಕಷ್ಟವಾಗಿದೆ. ಹೀಗಿರುವ ಹದಿನಾರು ಪಂಕ್ತಿಗಳ ಅಕ್ಷರಗಳು ಸುಮಾರು ೩/೪ ಅಂಗುಲ ಉದ್ದವೂ, ೧/೨ ಅಂಗುಲ ಅಗಲವೂ ಇವೆ.

ಈ ಹಲ್ಮಿಡಿ ಶಾಸನದ ಮೊದಲ ಹದಿನೈದು ಪಂಕ್ತಿಗಳ ಅಕ್ಷರಗಳು ಸ್ವಲ್ಪ ಮಟ್ಟಿಗೆ ಪಶ್ಚಿಮ ಘಟ್ಟಗಳ ಗವಿಗಳಲ್ಲಿ ದೊರೆತಿರುವ ಶಾತವಾಹನ ಚಕ್ರವರ್ತಿಗಳ

ಶಾಸನಗಳಲ್ಲಿ ಉಪಯೋಗಿಸಲ್ಪಟ್ಟಿರುವ ಗವಿಯ ಲಿಪಿಯನ್ನೂ, ಕೆಲವು ಲಕ್ಷಣಗಳಲ್ಲಿ ಕದಂಬರ ಕಾಕುಸ್ಥವರ್ಮನ ತಾಳಗುಂದದ ಶಾಸನವನ್ನೂ ಹೋಲುತ್ತವೆ. ನಣಕ್ಕಸ ಪಲ್ಲವನ ಅಣಜಿಯ ಶಾಸನ, ವಸ್ತಾರೆಯ ಪ್ರಾಚೀನ ಶಿಲಾಶಾಸನ, ಕಾಕುಸ್ಥ ವರ್ಮನ ಹಲಸಿಯ ತಾಮ್ರಶಾಸನ—ಇವುಗಳಲ್ಲಿರುವ ಅತ್ಯಂತ ಪ್ರಾಚೀನ ಕನ್ನಡ ಅಕ್ಷರಗಳಿಗೆ ಹಲ್ಮಿಡಿ ಶಾಸನದ ಅಕ್ಷರಗಳು ಬಹಳವಾಗಿ ಹೋಲುತ್ತವೆ.

ಈ ಶಾಸನದ ವರ್ಣೋಪಯೋಗದಲ್ಲಿ ಹೆಚ್ಚಿನ ತಪ್ಪುಗಳು ಯಾವುವೂ ಕಾಣ ಬರುವುದಿಲ್ಲ. ಮೊದಲನೆಯ ಪಂಕ್ತಿಯಲ್ಲಿ 'ವ್ಯಾನತಿ' ಎಂಬುದಕ್ಕೆ ಬದಲಾಗಿ 'ವ್ಯ್ಯಾನತಿ' ಎಂದೂ, ಮೂರನೆಯ ಪಂಕ್ತಿಯಲ್ಲಿ 'ಭಟ್ಟಾರನ್' ಎಂಬುದಕ್ಕೆ ಬದಲಾಗಿ 'ಭಟ್ಟೋರನ್' ಎಂದೂ, ಐದನೆಯ ಪಂಕ್ತಿಯಲ್ಲಿ 'ಭಟಾರಿ' ಎಂಬು ದಕ್ಕೆ ಬದಲಾಗಿ 'ಬಟರಿ' ಎಂದೂ ಬರೆದಿರುವುದು. ಇವು ಸಣ್ಣ ತಪ್ಪುಗಳಾಗಿ ಕಾಣಬರುತ್ತವೆ. ಕೆಲವೆಡೆಗಳಲ್ಲಿ ವ್ಯಂಜನಗಳು ದ್ವಿರುಕ್ತವಾಗಿ ಬರೆದಿವೆ; ಉದಾ. ನಾಲ್ಕನೆಯ ಪಂಕ್ತಿಯಲ್ಲಿ 'ಭ್ಭಟಃ' ಎಂದು ಬರೆದಿದೆ; ಹದಿನಾಲ್ಕನೆಯ ಪಂಕ್ತಿಯಲ್ಲಿ 'ವಿಜಯ ಅರಸ' ಎಂಬುದಕ್ಕೆ ಬದಲಾಗಿ 'ವಿಜಾರಸ' ಎಂದು ಪ್ರಯೋಗವಿದೆ—ಹೆಚ್ಚಿನ ವೈಶಿಷ್ಟ್ಯಗಳಾವುವೂ ಕಾಣಬರುವುದಿಲ್ಲ.

ಶಾಸನದ ಹದಿಮೂರನೆಯ ಪಂಕ್ತಿಯಲ್ಲಿ ದಾನಕ್ಕೆ ರುಜು ಮಾಡಿದವನು ತಾನು ಭಟಾರಿ ಕುಲದ 'ಅಳಕದಂಬ'ನೆಂದು ಹೇಳಿಕೊಂಡಿದ್ದಾನೆ. 'ಅಳಕದಂಬ'ನೆಂಬ ಮಾತಿಗೆ ಅಳಪ ಮತ್ತು ಕದಂಬ ಈ ಎರಡು ರಾಜವಂಶಗಳಿಂದ ಉದ್ಭವಿಸಿದವನೆಂಬ ಅರ್ಥವೆಂದು ಊಹಿಸಬಹುದಾಗಿದೆ. ಇವನು ಭಟಾರಿ ವಂಶಕ್ಕೆ ಸೇರಿದವನಾಗಿರಬೇಕು, ಇಂಥ ವ್ಯಕ್ತಿಯು ಅಳಪರಿಗೆ ದೊರೆಯಾದ ಪಶುಪತಿಗೆ ಸಂಬಂಧಪಟ್ಟಿರಬೇಕು ಎಂಬ ವಿಷಯವು ಐದನೆಯ ಮತ್ತು ಆರನೆಯ ಪಂಕ್ತಿಗಳಿಂದ ತಿಳಿಯಬರುತ್ತದೆ. ಪಶುಪತಿಯ ವಿಚಾರವಾಗಿ ಶಿಕಾರಿಪುರದ ತಾಲ್ಲೂಕು ತಾಳಗುಂದದಲ್ಲಿ ಪ್ರಣವೇಶ್ವರನ ಗುಡಿಯ ಬಾಗಿಲುವಾಡದ ಮೇಲಿರುವ ಶಾಸನದಿಂದ ಕೆಲವು ಅಂಶಗಳು ತಿಳಿದುಬರುತ್ತವೆ. ಅಲ್ಲಿಯೂ ಇವನು 'ದಕ್ಷಿಣ'ದಲ್ಲಿ ಅನೇಕ ಯುದ್ಧಗಳನ್ನು ಮಾಡಿ ಹೆಸರೆತ್ತಿದ್ದನೆಂದು ಹೇಳಿದೆ. ಇವನು ಕದಂಬರಾಜನಾದ ಕಾಕುಸ್ಥವರ್ಮನ ಮಗಳು ಲಕ್ಷ್ಮಿಯ ಪತಿಯಾಗಿರಬೇಕೆಂದೂ, ಕದಂಬರ ಸೈನ್ಯಗಳಿಗೆ ಮುಖ್ಯಾಧಿಪತಿಯಾಗಿ ಅವರ ಶತ್ರು ಗಳಾದ ಪಲ್ಲವರ ಮೇಲೆ ಯುದ್ಧಮಾಡಿದನೆಂದೂ ಕಾಣಬರುತ್ತದೆ. ಈ ಪಶುಪತಿಯ ಅಪ್ಪಣೆಯ ಪ್ರಕಾರ ಪ್ರಕೃತ ಶಾಸನದಲ್ಲಿ ಕಾಣುವ ದಾನವು ನಡೆದಿರಬೇಕು. ದಾನಶಾಸನವನ್ನು ಬರೆಸಿರುವ 'ಅಳಕದಂಬ'ನು ಪ್ರಾಯಶಃ ಪಶುಪತಿ ಮತ್ತು ಲಕ್ಷ್ಮಿ ಇವರ ಪುತ್ರನಾಗಿರಬಹುದು. ತಂದೆಯ ಅಪ್ಪಣೆಯಂತೆ ಅವನು ಈ ದಾನವನ್ನು ಮಾಡಿದಂತೆ ತೋರುತ್ತದೆ.

ದಾನವನ್ನು ತೆಗೆದುಕೊಂಡವನು ವಿಜ-ಅರಸ; ಇವನ ತಂದೆಯು ಎಲ್ಲಭಟಾರಿ. ವಿಜ-ಅರಸನು ಪಶುಪತಿಯ ಅಪ್ಪಣೆಯ ಪ್ರಕಾರ ಕದನದಲ್ಲಿ ಹೋರಾಡಿ ಜಯವನ್ನು ಪಡೆದನು. ಈ ಕಾರಣದಿಂದ ಅವನಿಗೆ ಪಲ್ಮಡಿ ಅಥವಾ ಈಗಿನ ಹಲ್ಮಿಡಿ ಎಂಬ ಗ್ರಾಮವೂ ಮೂಳಿವಳ್ಳಿ ಅಥವಾ ಹಲ್ಮಿಡಿಗೆ ಮೂರು ಮೈಲಿ ಪಶ್ಚಿಮಕ್ಕಿರುವ ಈಗಿನ ಮುಳವಳ್ಳಿ ಗ್ರಾಮವೂ ದಾನವಾಗಿ ಕೊಡಲ್ಪಟ್ಟುವು. ಕದನದಲ್ಲಿ ಹೋರಾಡಿದ ಕತ್ತಿಯ ಮರ್ಯಾದೆಗಾಗಿ ಕೊಟ್ಟ ದಾನವಾದುದರಿಂದ ಇದಕ್ಕೆ 'ಬಾಳ್ಗಚ್ಚು' ಎಂದು ಹೆಸರು.

ವಿಜ-ಅರಸನು ಭಟಾರಿ ಕುಲಕ್ಕೆ ಸೇರಿದವನೆಂದೂ ಆದ್ದರಿಂದ ಪಶುಪತಿಗೆ ದಾಯಾದಿಯಾಗಿರಬೇಕೆಂದೂ ತೋರುತ್ತದೆ.

ಈ ಶಾಸನದಲ್ಲಿ ಅದರ ಕಾಲವನ್ನು ಕೊಟ್ಟಿಲ್ಲ. ಅದರಲ್ಲಿ ಹೇಳಿರುವ ವಿಷಯಗಳಿಂದ ಕಾಲವನ್ನು ನಿರ್ಣಯಿಸಬೇಕಾಗಿದೆ. ಅದರಲ್ಲಿ ಹೇಳಿರುವ ಕದಂಬರ ದೊರೆಯು ಕಾಕುಸ್ಥವರ್ಮನು. ಇವನು ಕದಂಬರ ಮೂಲ ಪುರುಷನಾದ ಮಯೂರ ಶರ್ಮನ ಮೊಮ್ಮಗನಾದ ಭಗೀರಥನ ಮೊಮ್ಮಗನೆಂದೂ, ಮಯೂರಶರ್ಮನ ವಿಜಯದಿಂದ ೮೦ನೆಯ ವರ್ಷದಲ್ಲಿ ಯುವರಾಜನಾಗಿದ್ದನೆಂದೂ, ತರುವಾಯ ಕೆಲವು ವರ್ಷಗಳಲ್ಲಿ ದೊರೆಯಾಗಿ ವಿಜೃಂಭಣೆಯಿಂದ ಬಹುಕಾಲ ಆಳಿದನೆಂದೂ ಹಲಸಿಯ ತಾಮ್ರಶಾಸನ ಮತ್ತು ತಾಳಗುಂದದ ಕಂಬದ ಶಾಸನ ಇವುಗಳಿಂದ ತಿಳಿಯಬರುತ್ತದೆ. ಇವನ ತರುವಾಯ ಇವನ ಮಗ ಶಾಂತಿವರ್ಮನೂ ಅವನ ತರುವಾಯ ಮೊಮ್ಮಗ ಮೃಗೇಶನೂ ಆಳಿದರು. ಮೃಗೇಶನೆಂಬ ಹೆಸರು ನಾಲ್ಕನೆಯ ಪಂಕ್ತಿಯಲ್ಲಿ ಕಾಣಬರುವುದರಿಂದ ಪ್ರಕೃತ ಶಾಸನವು ಕಾಕುಸ್ಥವರ್ಮನ ವೃದ್ಧಾಪ್ಯದಲ್ಲಿ ಹುಟ್ಟಿತೆಂದು ಊಹಿಸಬೇಕಾಗಿದೆ. ಅಂದರೆ ಈ ಶಾಸನವು ಸುಮಾರು ಕ್ರಿ. ಶ. ೪೫೦ರಲ್ಲಿ ಬರೆದುದಾಗಿ ನಿರ್ಣಯಿಸಬಹುದು.

ಪ್ರಕೃತ ಶಾಸನದಿಂದ ಚರಿತ್ರೆಗೆ ಸಂಬಂಧಪಟ್ಟ ಒಂದು ಅಂಶವು ಹೊರಬೀಳುತ್ತದೆ. ಕಾಕುಸ್ಥವರ್ಮನ ಕಾಲದಲ್ಲಿ ಕನ್ನಡ ದೇಶದ ಒಡೆಯರಾದ ಕದಂಬರಿಗೂ ದ್ರಾವಿಡರ ಅಧಿಪತಿಗಳಾದ ಪಲ್ಲವರಿಗೂ ದೊಡ್ಡ ಯುದ್ಧಗಳು ನಡೆಯುತ್ತಿದ್ದಿರಬೇಕು. ಇಂತಹ ಯುದ್ಧವೊಂದರಲ್ಲಿ ಕದಂಬರ ಕಡೆಗೆ ಸೇಂದ್ರಕರು, ಬಾಣರು ಮತ್ತು ಅಳುಪರೂ, ಪಲ್ಲವರ ಕಡೆಗೆ ಕೇಕಯರೂ ಸೇರಿ ಯುದ್ಧ ಮಾಡಿದರು. ಈ ಕಾಲದಲ್ಲಿ ಪಲ್ಲವರಿಗೆ ರಾಜನಾಗಿದ್ದವನು ಕ್ರಿ. ಶ. ೪೩೬ರಿಂದ ೨೨ ವರ್ಷಗಳು ರಾಜ್ಯವಾಳಿದ ಎರಡನೆಯ ಸಿಂಹವರ್ಮನಾಗಿರಬೇಕು. ಎರಡು ಪಕ್ಷದವರಿಗೂ ಈಗಿನ ಬೇಲೂರಿನ ಬಳಿ ದೇವಳಿಗೆನಾಡಿನಲ್ಲಿ ಕದನವು ನಡೆದಂತೆ ತೋರುತ್ತದೆ. ಇಂತಹ ಇನ್ನೊಂದು

ಕದನದಲ್ಲಿ ಕದಂಬರ ಕೃಷ್ಣವರ್ಮನನ್ನು ಪಲ್ಲವರ ನಣಕ್ಕಸನು ಜಯಿಸಿದನೆಂಬುದು ಅಣಜಿಯ ಶಾಸನದಿಂದ ತಿಳಿಯ ಬರುತ್ತದೆ. ಆದರೆ ಪ್ರಕೃತ ಶಾಸನದಲ್ಲಿ ಹೇಳಿರುವ ಯುದ್ಧದಲ್ಲಿ ವಿಜ-ಅರಸನ ಪರಾಕ್ರಮದಿಂದ ಕದಂಬರ ಪಕ್ಷಕ್ಕೆ ಜಯವಾಯಿತೆಂದು ತಿಳಿಯಬರುತ್ತದೆ.

ಮೇಲೆ ಹೇಳಿದಂತೆ ಈ ಮೊದಲನೆಯ ದಾನಕ್ಕೆ ೧೩ನೆಯ ಪಂಕ್ತಿಯಲ್ಲಿ ಭಟಾರಿ ಕುಲದ ಅಳಕದಂಬನು ತನ್ನ ರುಜುಮಾಡಿರುತ್ತಾನೆ.

೧೪, ೧೫ನೆಯ ಪಂಕ್ತಿಗಳಲ್ಲಿ ವಿಜ-ಅರಸನೂ ಇನ್ನಿಬ್ಬರೂ ಸೇರಿ ಹಲ್ಮಿಡಿಗೆ 'ಕುಱುಂಬಿಡಿ'ಯನ್ನು ಬಿಟ್ಟರೆಂದು ಹೇಳಿದೆ. ಅಡ್ಡಲಾಗಿ ಬರೆದಿರುವ ೧೬ನೆಯ ಪಂಕ್ತಿಯಲ್ಲಿ ಆ ಗ್ರಾಮದ ಭಟ್ಟರಿಗೆ ಗದ್ದೆಯ ಉತ್ಪತ್ತಿಯಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಬಿಟ್ಟ ಸಂಗತಿಯು ಕಾಣಿಸಿದೆ.

ಕನ್ನಡ ಭಾಷೆಯ ಚರಿತ್ರೆಗೆ ಹಲ್ಮಿಡಿಯ ಶಾಸನವು ಬಹಳ ಉಪಯುಕ್ತ ವಾದುದೆಂದು ಹಿಂದೆಯೇ ಹೇಳಿದೆ. ಭಾಷಾದೃಷ್ಟಿಯಿಂದ ಸ್ಥೂಲವಾಗಿ ಕಾಣ ಬರುವ ಕೆಲವು ಅಂಶಗಳನ್ನು ಇಲ್ಲಿ ಸಂಗ್ರಹಿಸಿದೆ. ಹೆಚ್ಚಿನ ವಿಮರ್ಶೆಯನ್ನು ಮಾಡಿ ಭಾಷಾಶಾಸ್ತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಲೆಂದು ಈ ಮೂಲಕ ಕೋರಿದೆ.

ಹಲ್ಮಿಡಿಯ ಶಾಸನದ ಮೊದಲನೆಯ ಪಂಕ್ತಿಯು ಸಂಸ್ಕೃತದ ಶ್ಲೋಕರೂಪ ವಾಗಿದೆ. ಕಾಳಿದಾಸನೇ ಮೊದಲಾದ ಸಂಸ್ಕೃತ ಮಹಾಕವಿಗಳ ಪದ್ಯಗಳಲ್ಲಿ ಕಂಡು ಬರುವ ರೂಪಕದಿಂದಲೂ, ಮನೋಹರವಾದ ಭಾವದಿಂದಲೂ, ಉತ್ಕೃಷ್ಟವಾದ ಪದಸಂಯೋಗದಿಂದಲೂ ಈ ಶ್ಲೋಕವು ಕೂಡಿದೆ. ಇದನ್ನು ಬರೆದವನು ಸಂಸ್ಕೃತ ಕವಿತೆಯ ರೀತಿಯನ್ನು ಚೆನ್ನಾಗಿ ತಿಳಿದ ರಸಜ್ಞನಾದ ಕವಿಯೇ ಆಗಿರಬೇಕು.

ಗದ್ಯವನ್ನು ಬರೆಯುವಾಗ ಸಂಸ್ಕೃತ ಸಮಸ್ತಪದಗಳಲ್ಲಿ ಈತನಿಗಿರುವ ಪಕ್ಷಪಾತವು ಐದನೆಯ, ಆರನೆಯ ಮತ್ತು ಏಳನೆಯ ಪಂಕ್ತಿಗಳಲ್ಲಿರುವ ಸಮಾಸ ಗಳಿಂದ ಚೆನ್ನಾಗಿ ಕಾಣಬರುತ್ತದೆ. ಸಂಸ್ಕೃತ ಕವಿತೆಯಲ್ಲಿ ಪರಿಶ್ರಮವುಳ್ಳ ಮನುಷ್ಯ ನೊಬ್ಬನು ಪ್ರಕೃತ ಮೊದಲನೆಯ ದಾನ ಶಾಸನದ ಮಾತುಗಳನ್ನು ಜೋಡಿಸಿದನೆಂದು ವ್ಯಕ್ತವಾಗುತ್ತದೆ.

೧ರಿಂದ ೧೩ನೆಯ ಪಂಕ್ತಿಯವರೆಗೂ ಇರುವ ಮೊದಲನೆಯ ಶಾಸನದಲ್ಲಿ ಕನ್ನಡದ ಪದಗಳು ೧೩ ಮಾತ್ರ ಉಪಯೋಗಿಸಲ್ಪಟ್ಟಿವೆ. ೧೪ರಿಂದ ೧೬ನೆಯ ಪಂಕ್ತಿಯವರೆಗೆ ಇರುವ ೨ನೆಯ ಮತ್ತು ೩ನೆಯ ದಾನ ಶಾಸನಗಳಲ್ಲಿ ಕನ್ನಡ ಪದಗಳ ಪ್ರಯೋಗವು ಬಹಳ ಹೆಚ್ಚಾಗಿದೆ. ಸಾಮಾನ್ಯಜನರ ಭಾಷೆಯಲ್ಲಿ ಈಗಿನಂತೆಯೇ

ಶುದ್ಧ ಕನ್ನಡ ಪದಗಳು ಹೆಚ್ಚಾಗಿಯೂ ಪ್ರೌಢವಾದ ಕವಿತೆಯಲ್ಲಿ ಸಂಸ್ಕೃತ ಪದಗಳು ಹೆಚ್ಚಾಗಿಯೂ ಉಪಯೋಗದಲ್ಲಿ ಇದ್ದಂತೆ ತೋರಬರುತ್ತದೆ.

ಒಟ್ಟಿನಲ್ಲಿ ಈ ಶಿಲೆಯ ಮೇಲೆ ಕಾಣಬರುವ ಮೂರು ದಾನ ಶಾಸನಗಳಲ್ಲೂ ಕೂಡಿ ಸುಮಾರು ಇಪ್ಪತ್ತೈದು ಕನ್ನಡ ಪದಗಳು ದೊರೆಯುತ್ತವೆ. ಇವುಗಳ ರೂಪಗಳನ್ನು ಪರೀಕ್ಷಿಸಿ ನೋಡಿದಲ್ಲಿ ದಿವಂಗತರಾದ ಮಿ|| ಬಿ. ಎಲ್. ರೈಸ್ ಮತ್ತು ಶ್ರೀಮಾನ್ ರಾ. ನರಸಿಂಹಾಚಾರ್ ಇವರುಗಳು ಪೂರ್ವದ ಹಳಗನ್ನಡ (Primitive Old Kannada) ಎಂಬ ಹೆಸರಿನಿಂದ ವರ್ಣಿಸಿರುವ ಭಾಷಾರೂಪಗಳಿಗೆ ಅನುಗುಣವಾಗಿ ಕಾಣಬರುತ್ತದೆ. ಈ ಶಾಸನದಲ್ಲಿರುವ ಭಾಷೆಯು ಪ್ರೌಢವಾಗಿಯೂ ಗಂಭೀರವಾಗಿಯೂ ಲಕ್ಷಣ ಯುಕ್ತವಾಗಿಯೂ ಇರುವುದರಿಂದ ಇದನ್ನು 'ಪ್ರಿಮಿಟಿವ್' ಅಥವಾ ಅನಾಗರಿಕವೆಂದು ಕರೆಯಲು ಸಾಧ್ಯವಿಲ್ಲ. ಪಂಪಾದಿಗಳ ಗ್ರಂಥಗಳಲ್ಲಿ ಉಪಯೋಗಿಸಿರುವ ಭಾಷೆಗೂ ಈ ಹಳೆಯ ಭಾಷೆಗೂ ಕೆಲವು ವ್ಯಾಕರಣ ಲಕ್ಷಣಗಳು ಭಿನ್ನವಾಗಿರುವುದರಿಂದ ಇದನ್ನು ಹಳಗನ್ನಡವೆಂದು ಕರೆದರೆ ಸಂದೇಹವುಂಟಾಗಬಹುದು. ಇದನ್ನು 'ಪೂರ್ವದ ಕನ್ನಡ' (Early Kannada) ವೆಂದು ಕರೆಯಬಹುದಾಗಿದೆ.

ಈ ಶಾಸನದಲ್ಲಿ ಕಾಣಬರುವ ಪೂರ್ವದ ಕನ್ನಡವು ಸಾಮಾನ್ಯವಾಗಿ ಶ್ರೀಮಾನ್ ರಾ. ನರಸಿಂಹಾಚಾರ್ಯರು ತಮ್ಮ 'ಕನ್ನಡ ಭಾಷೆಯ ಚರಿತ್ರೆ'ಯ (History of the Kannada Language) ೧೨೮ನೆಯ ಪುಟದಲ್ಲಿ ಹೇಳಿರುವ ಲಕ್ಷಣಗಳಿಂದ ಕೂಡಿದೆ. ಆ ಲಕ್ಷಣಗಳನ್ನೂ, ಈ ಶಾಸನದಲ್ಲಿ ಸಿಕ್ಕುವ ಕೆಲವು ಉದಾಹರಣೆಗಳನ್ನೂ ಈ ಕೆಳಗೆ ಕಾಣಿಸಿದೆ—

೧. ಕ್ರಿಯಾಪದಗಳ ಪ್ರಥಮ ಪುರುಷದಲ್ಲಿ ಪ್ರತ್ಯಯಗಳ ಸ್ವರಗಳು ದೀರ್ಘವಾಗಿರುತ್ತವೆ.

ಪಂಕ್ತಿ ೧೩ ಕಳ್ದೋನ್
ಪ. ೧೫ ಅಟಿವೋನ್
ಪ. ೧೨ ಕೊಟ್ಟಾರ್
ಪ. ೧೫ ವಿಟ್ಟಾರ್

೨. ಪದಾಂತ್ಯದಲ್ಲಿರುವ 'ಅ' ಕಾರಕ್ಕೆ ಬದಲಾಗಿ 'ಓ' ಕಾರವು ಇರುತ್ತದೆ—

ಪ. ೪ ಅಪ್ಪೋರ್
ಪ. ೭ ಭರಿತೋನ್

೩. ಸಪ್ತಮೀ ವಿಭಕ್ತಿಯ ಪ್ರತ್ಯಯವು 'ಉಳ್' ಎಂದು ಇರುತ್ತದೆ—

ಪ. ೩ ನಾಡುಳ್

ಪ. ೭ ಆಹವದುಳ್

೪. ಪ್ರತಿಷೇಧಾರ್ಥ (Negative)ದ ಪ್ರತ್ಯಯಗಳಲ್ಲಿಯ ಸ್ವರಗಳು ದೀರ್ಘವಾಗುತ್ತವೆ—

ಈ ಶಾಸನದಲ್ಲಿ ಪ್ರಯೋಗವಿಲ್ಲ.

೫. ನಪುಂಸಕ ಪ್ರತ್ಯಯಗಳು 'ಒದು', 'ಅದು' ಎಂದು ಇರುತ್ತವೆ—

ಈ ಶಾಸನದಲ್ಲಿ ಪ್ರಯೋಗವಿಲ್ಲ.

೬. ಅನುಸ್ವಾರ ಅಥವಾ ಬಿಂದುವಿಗೆ 'ನ್' ಪ್ರಯೋಗ—

ಪ. ೧೦ ಸುತನ್ಗೆ

ಪ. ೧೨ ಅರಸನ್ಗೆ

೭. ದ್ವಿತೀಯಾ ವಿಭಕ್ತಿಯ ಪ್ರತ್ಯಯದಲ್ಲಿಯ ಸ್ವರವು ದೀರ್ಘವಾಗುತ್ತದೆ—

ಪ. ೧೫ ಅದಾನ್

೮. ಷಷ್ಠಿಯ ಪ್ರತ್ಯಯದಲ್ಲಿಯ 'ಅ' ಕಾರವು ದೀರ್ಘವಾಗಿರುತ್ತದೆ—

ಪ. ೯ ಭಟರಿಯಾ

ಪ. ೨ ಕಲಭೋರನಾ

೯. ವಿಧಿವಾಚಕ ಕ್ರಿಯೆಯಲ್ಲಿ ಪ್ರಥಮಪುರುಷೈಕವಚನದ ಪ್ರತ್ಯಯವು 'ಗ' ಅಥವಾ 'ಕ' ಎಂದು ಇರುತ್ತದೆ—

ಈ ಶಾಸನದಲ್ಲಿ ಪ್ರಯೋಗವಿಲ್ಲ.

೧೦. 'ಬ' ಕಾರಕ್ಕೆ ಬದಲಾಗಿ 'ವ' ಕಾರವು ಇರುತ್ತದೆ—

ಪ. ೧೫ ವಿಟ್ಟಾರ್

ಪ. ೧೬ ವಿಟ್ಟಾರ್

೧೧. ಪದಾರಂಭದಲ್ಲಿ 'ಇ' ಕಾರಕ್ಕೆ ಬದಲು 'ಎ' ಕಾರವು ಇರುತ್ತದೆ—

ಪ. ೧೧ ಎಱುದು

೧೨. ವ್ಯಂಜನಗಳಿಗೆ ಅನೇಕ ವೇಳೆ ದ್ವಿತ್ವ ರೂಪಗಳು ಬರುತ್ತವೆ—

ಪ. ೪ ಭ್ಭಟಹ
ಪ. ೫ ಇರ್ವ್ವರ್
ಪ. ೮ ಪ್ರೊಟ್ಟಣ
ಪ. ೧೪ ಇರ್ವ್ವರುಂ

ಒಟ್ಟಿನಲ್ಲಿ ಈ ಶಾಸನದ ಭಾಷೆಯಿಂದ ಈ ಕೆಲವು ವಿಷಯಗಳು ಕಾಣ ಬರುತ್ತವೆ*—

(೧) ಕನ್ನಡಕ್ಕೂ ಸಂಸ್ಕೃತಕ್ಕೂ ಉಭಯಸಂಬಂಧವು ಕ್ರಿ. ಶ. ೪೫೦ಕ್ಕೆ ಬಹಳ ಹಿಂದೆಯೇ ಆರಂಭವಾಗಿ ಸಂಸ್ಕೃತ ಸಮಸ್ತಪದಗಳಿಂದ ಕೂಡಿದ ಪ್ರೌಢ ವಾದ ಕನ್ನಡವು ೫ನೆಯ ಶತಮಾನದ ವೇಳೆಗೆ ಚೆನ್ನಾಗಿ ಬಳಕೆಗೆ ಬಂದಿತ್ತು.

(೨) ಜನ ಸಾಮಾನ್ಯದ ನಡೆವಳಿಕೆಯಲ್ಲೂ ಬರವಣಿಗೆಯಲ್ಲೂ ಹೆಚ್ಚಾಗಿ ಶುದ್ಧ ಕನ್ನಡ ಪದಗಳೇ ಉಪಯೋಗದಲ್ಲಿದ್ದುವು. ರಾಜರ ಆಸ್ಥಾನಗಳಲ್ಲಿಯೂ ಪಂಡಿತರ ಬರವಣಿಗೆಗಳಲ್ಲಿಯೂ ಸಂಸ್ಕೃತಪದಗಳಿಂದ ಹೆಚ್ಚಾಗಿ ಕೂಡಿದ ಭಾಷೆಯು ಪ್ರಚಾರದಲ್ಲಿತ್ತು. 'ಪೆತ್ತಜಯನ್' ಮೊದಲಾದ ಪದರೂಪಗಳು ಸಂಸ್ಕೃತ ಮಾರ್ಗವನ್ನು ಅನುಸರಿಸಿದ್ದುವು.

(೩) ಪೂರ್ವದ ಕನ್ನಡದ ಪದರೂಪಗಳು ಸುಪ್ರಸಿದ್ಧವಾದ ವ್ಯಾಕರಣ ನಿಯಮ ಗಳಿಗೆ ಕಟ್ಟುಬಿದ್ದಿದ್ದುವು. ಕನ್ನಡವು ಚೆನ್ನಾಗಿ ಬೆಳೆದು ಬಲಿತ ಭಾಷೆಯಾಗಿತ್ತು.

(೪) ಇದಕ್ಕೆ ಈ ಭಾಷೆಯೂ ಇದರ ವಾಙ್ಮಯವೂ ಕೆಲವು ಶತಮಾನಗಳ ಹಿಂದೆಯೇ ಬೆಳೆದು ಬದುಕಿ ಬಾಳಿರಬೇಕು.

ಬೇಲೂರು ಹೋಬಳಿ ಹಲ್ಮಿಡಿ ಗ್ರಾಮದಲ್ಲಿ ವೀರಭದ್ರ ದೇವಸ್ಥಾನದ ಮುಂದೆ ನೆಟ್ಟಿದ್ದ ಕಲ್ಲು

ಪ್ರಮಾಣ—2½′ × 1′.

೧. ಜಯತಿ ಶ್ರೀ ಪರಿಷ್ವಙ್ಗ ಶ್ಶಾರ್ಙ್ಗ [ವ್ಯಾನತಿ] ರಚ್ಯುತಃ
ದಾನವಾಕ್ಷ್ಣೋರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ

೨. ನಮಃ ಶ್ರೀಮತ್ಕದಂಬಪನ್ತ್ಯಾಗ ಸಂಪನ್ನನ್ಕಲಭೋರ [ನಾ] ಅರಿಕ

೩. ಕುಸ್ಥಭಟ್ಟೋರ ನಾಳೆ ನರಿದಾವಿ [ಳೆ] ನಾಡುಳ್ ಮೃಗೇಶನಾ

---

* ಹೆಚ್ಚಿನ ವಿಷಯಗಳಿಗೆ ಮೈಸೂರು ಶಾಸನದ ಇಲಾಖೆಯ ೧೯೩೬ನೆಯ ವರ್ಷದ ವರದಿ ಯನ್ನು ನೋಡುವುದು.

೪. ಗೇನ್ದ್ರಾಭೀಳಭ್ಬ್ರಟಹರಪ್ಪೋರ್ ಶ್ರೀ ಮೃಗೇಶ ನಾಗಾಹ್ವಯ
೫. ರಿರ್ವ್ವರಾ ಬಟರಿಕುಲಾಮಲವ್ಯೋಮ ತಾರಾಧಿನಾಥನ್ನಳಪ
೬. ಗಣಪಶುಪತಿಯಾ ದಕ್ಷಿಣಾಪಥ ಬಹು ಶತಹವನಾ
೭. ಹವದು [ಳ್] ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ[ನ್ದಾನ] ಪ
೮. ಶುಪತಿಯೆನ್ದು ಪೊಗಱೆ ಪ್ಪೊಟ್ಟಣ ಪಶುಪತಿ
೯. ನಾಮಧೇಯನಾ ಸರಕ್ಕೆಲ್ಲ ಭಟರಿಯಾ ಪ್ರೇಮಾಲಯ
೧೦. ಸುತನ್ಗೆ ಸೇನ್ದ್ರಕಬಣೋಭಯ ದೇಶದಾವೀರಾಪುರುಷಸಮಕ್ಷ
೧೧. ದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತ ಜಯನಾವಿಜ
೧೨. ಅರಸನ್ಗೆ ಬಾಳ್ಗಟ್ಚು ಪಲ್ಮಡಿಉಂ ಮೂಟವಳ್ಳಿಉಂ ಕೊ
೧೩. ಟ್ಟಾರ್ ಬಟಾರಿ ಕುಲದೊನಳಕದಮ್ಬನ್ಕಳ್ದೋನ್ ಮಹಾಪಾತಕನ್
೧೪. ಇರ್ವ್ವರುಂ ಸಚ್ಬಜ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು
೧೫. ಮ್ಬಿಡಿವಿಟ್ಟಾರ್ ಅದಾನಟಿವೊನ್ಗೆ ಮಹಾ ಪಾತಕಮ್ ಸ್ವಸ್ತಿ

ಎಡಪಕ್ಕದಲ್ಲಿ

೧೬. ಭಟ್ಟರ್ಗ್ಗಿಗೆಗಡ್ದೆ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ

ಅನುವಾದ

ದಾನವರ ಕಣ್ಣುಗಳಿಗೆ ಪ್ರಳಯಕಾಲದ ಅಗ್ನಿಯಂತೆಯೂ ಸತ್ಪುರುಷರಿಗೆ ಸುದರ್ಶನನಾಗಿ (ಸುದರ್ಶನಚಕ್ರವಾಗಿ)ಯೂ ಲಕ್ಷ್ಮಿಯಿಂದ ಆಲಿಂಗಿತನಾಗಿಯೂ ಶಾರ್ಙ್ಗವೆಂಬ ಧನುಸ್ಸನ್ನು ಬಗ್ಗಿಸಿ ಹಿಡಿದಿರುವ ಅಚ್ಯುತನು ಜಯಿಸುತ್ತಾನೆ.

ಕದಂಬರಾಜನೂ ತ್ಯಾಗಸಂಪನ್ನನೂ ಕಲಭೋರನ ಶತ್ರುವೂ ಆದ ಕಕುಸ್ಥ ಭಟ್ಟಾರಕನು ಆಳುತ್ತಿರಲು ನರಿದಾವಿಳ್ಗೆ ನಾಡಿನಲ್ಲಿ ಮೃಗೇಶನಾಗೇಂದ್ರರಂತೆ (ಸಿಂಹ ಅಥವಾ ಶಿವ, ಆನೆ ಅಥವಾ ಸರ್ಪ) ಭಯಂಕರರಾದ ಮೃಗೇಶ ನಾಗ ಎಂಬ ಹೆಸರುಳ್ಳವರು ಅಧಿಕಾರಿಗಳಾಗಿದ್ದರು. ಇವರಿಬ್ಬರು, ಪ್ರಸಿದ್ಧವಾದ ಭಟರಿ ವಂಶವೆಂಬ ಆಕಾಶಕ್ಕೆ ಚಂದ್ರನಂತಿರುವ, ಅಳಪರೆಂಬ ಗಣಕ್ಕೆ ಪಶುಪತಿಯಾಗಿರುವ, ಆ ದಕ್ಷಿಣಾಪಥದಲ್ಲಿ ಅನೇಕ ಯಜ್ಞಗಳೆಂಬ ಯುದ್ಧಗಳಲ್ಲಿ ಪಶುಪ್ರದಾನ (ದಾನ ಮಾಡುವುದು, ಕೊಲ್ಲುವುದು) ಶೌರ್ಯೋದ್ಯಮದಿಂದ ಕೂಡಿದ, ದಾನಪಶುಪತಿ ಯೆನ್ದು ಹೊಗಳಲ್ಪಟ್ಟ, ಪ್ರಸಿದ್ಧನಾದ ಪಶುಪತಿಯೆಂಬ ಹೆಸರುಳ್ಳವನ ಆಹ್ವಾನಕ್ಕೆ ಎಲ್ಲಭಟರಿಯ ಪ್ರೀತಿಪಾತ್ರಸುತನಾದ ಸೇನ್ದ್ರಕ ಮತ್ತು ಬಾಣ ಎಂಬ ದೇಶಗಳ ವೀರಪುರುಷರ ಎದುರಿಗೆ ಪಲ್ಲವರನ್ನೂ ಕೇಕಯರನ್ನೂ ಯುದ್ಧದಲ್ಲಿ ಕೊಂದು

ಜಯವನ್ನು ಪಡೆದ ವಿಜ-ಅರಸನಿಗೆ ಕತ್ತಿಯ ಕೊಡಗೆಯಾಗಿ ಪಲ್ಮಡಿಯನ್ನೂ ಮೂಳಿ ವಳ್ಳಿಯನ್ನೂ ಕೊಟ್ಟರು. ಘಟರಿವಂಶದ ಅಳಕದಂಬನು. ಇದನ್ನು ಅಪಹರಿಸುವವನು ಮಹಾ ಪಾತಕನು.

ಇಬ್ಬರು ಸಬ್ಬಜ್ಗದವರೂ ವಿಜ-ಅರಸರೂ ಹಲ್ಮಡಿಗೆ ಕುಳುದೆರೆಯನ್ನು ಬಿಟ್ಟರು. ಅದನ್ನು ನಾಶಮಾಡಿದವನಿಗೆ ಮಹಾಪಾತಕವು. ಸ್ವಸ್ತಿ.

ಈ ಗದ್ದೆಯ ಒಡ್ಡಿನಲ್ಲಿ ಹತ್ತನೆಯ ಒಂದು ಭಾಗ ಆದಾಯವು ಬ್ರಾಹ್ಮಣರಿಗೆ ತೆರಿಗೆ ಇಲ್ಲದೆ ಕೊಡಲ್ಪಟ್ಟಿದೆ.

ಎಂ. ಎಚ್. ಕೃಷ್ಣ.


ಅನುವಂಶೀಯತೆ

(HEREDITY)

" ತಾಯಿಯಂತೆ ಮಗು, ನೂಲಿನಂತೆ ಸೇಲೆ" ಎಂಬುದು ನಾಣ್ಣುಡಿಯಾಗಿದೆ. ಆದರೆ ಹುಟ್ಟುವ ಮಕ್ಕಳೆಲ್ಲ ಈ ನಿಯಮವನ್ನೇ ಸಂಪೂರ್ಣವಾಗಿ ಅನುಸರಿಸುವುದಿಲ್ಲ. ಏಕೆಂದರೆ, ಕೆಲವು ತಮ್ಮ ತಾಯಿಯನ್ನು ಮಾತ್ರ ಹೋಲಬಹುದು, ಕೆಲವು ತಂದೆತಾಯಿಗಳಿಬ್ಬರನ್ನೂ ಹೋಲಬಹುದು, ಮತ್ತೆ ಕೆಲವು ತಂದೆತಾಯಿಗಳಿಬ್ಬರ ಮಿಶ್ರಗುಣಗಳನ್ನು ತೋರಬಹುದು. ಹುಟ್ಟುವ ಮಕ್ಕಳು ಒಂದೊಂದು ವೇಳೆ ತಮ್ಮ ತಂದೆತಾಯಿಗಳಿಬ್ಬರನ್ನೂ ಹೋಲದೆ ಅವರಿಬ್ಬರಲ್ಲಿಯೂ ಇಲ್ಲದ ಗುಣಗಳನ್ನೊಳಗೊಂಡು ಜನಿಸಿ ತಂದೆತಾಯಿಗಳಿಗೆ ಕೌತುಕವನ್ನೂ ಇತರರಿಗೆ ಸಂಶಯವನ್ನೂ ತಂದಿರುವ ಸಂದರ್ಭಗಳೂ ಉಂಟು. ಹೀಗೆ, ತಂದೆತಾಯಿಗಳಿಬ್ಬರೂ ಕಪ್ಪಾಗಿದ್ದು ಅವರಿಗೆ ಸ್ಫುರದ್ರೂಪಿಯಾದ ಮಗುವು ಜನಿಸಿರಬಹುದಾದ ಅಪೂರ್ವ ಸಂದರ್ಭವು ಇಂಥವುಗಳಲ್ಲೊಂದು. ಇದೇಕೆ ಹೀಗಾಗುತ್ತದೆ ಎಂಬ ಅಂಶವನ್ನು ಆಧುನಿಕ ಜೀವಶಾಸ್ತ್ರ ಪ್ರಯೋಗಗಳ ಸಹಾಯದಿಂದ ತಿಳಿಯಬಹುದು.

ಜೀವಕೋಶ—ಜೀನುಗಳು

ಈಗ್ಗೆ ಎರಡು ವರ್ಷಗಳ ಹಿಂದೆ ನನ್ನ ಮಿತ್ರರಾದ ಶ್ರೀಮಾನ್ ಎಲ್. ಎಸ್. ವೀರಪ್ಪನವರು 'ಪ್ರಬುದ್ಧ ಕರ್ಣಾಟಕ'ದಲ್ಲಿ (XVIII, ii, ೭೭-೯೬) ಜೀವಕೋಶದ ವಿಚಾರವಾಗಿ ಒಂದು ಲೇಖನವನ್ನು ಬರೆದದ್ದು ವಾಚಕರ ಜ್ಞಾಪಕದಲ್ಲಿರಬಹುದು. ಜೀವಕೋಶದಲ್ಲಿ ಜೀವರಸವೆಂಬ ದ್ರವವೂ ಈ ದ್ರವದಲ್ಲಿ ತೇಲುತ್ತ ಅನೇಕ ವಸ್ತುಗಳೂ ಇರುತ್ತವೆ. ಅವುಗಳಲ್ಲಿ ಗೋಳಾಕಾರವಾದ 'ಬೀಜ'ವೆಂಬುದು ಮುಖ್ಯವಾದದ್ದು. ಈ ಬೀಜವು ಜೀವಕೋಶದ ಜೀವನ ವ್ಯಾಪಾರಗಳ ಕೇಂದ್ರಸ್ಥಾನ. ಇದರ ಬಹುಭಾಗವು 'ವರ್ಣಗ್ರಾಹಿ' ಎಂಬ ವಸ್ತುವಿನಿಂದ ಮಾಡಲ್ಪಟ್ಟಿದೆ. ಈ ವಸ್ತುವೇ ಜೀವಕೋಶಗಳ ವಿಭಾಗಸಮಯದಲ್ಲಿ ಹೆಪ್ಪುಗಟ್ಟಿ ರೇಕುಗಳಾಗುತ್ತದೆ. ಈ ರೇಕುಗಳಿಗೆ 'ವರ್ಣರೇಖೆ'ಗಳೆಂದು ಹೆಸರು. ಪ್ರತಿಯೊಂದು ವರ್ಣರೇಖೆಯೂ ಅನೇಕ ವರ್ಣಬಿಂದುಗಳಿಂದ ಮಾಡಲ್ಪಟ್ಟಿದೆ. ಈ ವರ್ಣಬಿಂದುಗಳಲ್ಲಿ ಅನೇಕ ಗುಣಧಾರಿಗಳಿವೆ. ಇವುಗಳಿಗೆ 'ಜೀನು'ಗಳೆಂದು ಹೆಸರು. 'ಜೀನು'ಗಳು ಕಣ್ಣಿಗೆ ಕಾಣುವ ವಸ್ತುಗಳಲ್ಲ. ಪ್ರಯೋಗ ಪರೀಕ್ಷೆಗಳ ಮೂಲಕ, ಒಂದೊಂದು ವರ್ಣಬಿಂದುವೂ ಅನೇಕ ಗುಣಗಳಿಗೆ ಆಧಾರವಾಗಿದೆಯೆಂದು ಕಂಡುಬಂದಿದೆ. ಆದ್ದರಿಂದ ಒಂದೊಂದು




I. ಜೀವಕೋಶ

ವರ್ಣಬಿಂದುವಿನಲ್ಲಿಯೂ ಅನೇಕ ಗುಣಧಾರಿಗಳಿವೆಯೆಂದು ಊಹಿಸಲ್ಪಟ್ಟಿದೆ. ಈ ಜೀನುಗಳೇ ಮುಂದೆ ಅನುವಂಶೀಯವಾಗಿ ಬರುವ ಗುಣಗಳನ್ನು ಧರಿಸಿರುತ್ತವೆ. ಆದ್ದರಿಂದ ಈ ಜೀನುಗಳನ್ನು ತಳೆದಿರುವ ವರ್ಣರೇಖೆಗಳನ್ನನುಸರಿಸಿ ಸಂತಾನದಲ್ಲಿ ಅನುವಂಶೀಯ ಗುಣಗಳು ಹೆಚ್ಚು ಕಡಮೆಯಾಗುತ್ತವೆ.

ಮೆಂಡಲನ ಪ್ರಯೋಗ— ಬಟಾಣಿ

ಅನುವಂಶೀಯ ಗುಣಗಳ ಅರಿವು ವಿಜ್ಞಾನ ಪ್ರಪಂಚಕ್ಕೆ ಆದದ್ದು ಆಸ್ಟ್ರಿಯಾ ದೇಶದ ಮೆಂಡಲ್ ಎಂಬ ಒಬ್ಬ ಸನ್ಯಾಸಿಯಿಂದ. ಆತನು ಸುಮಾರು ಎಂಟು ವರ್ಷಗಳ ವರೆಗೆ ಬಟಾಣಿಯ ಗಿಡದ ಮೇಲೆ ಪ್ರಯೋಗ ನಡಸಿ, ೧೮೬೬ ರಲ್ಲಿ ತನ್ನ ಪ್ರಯೋಗದ ಫಲವನ್ನು ಪ್ರಕಟಿಸಿದನು. ಆದರೆ ಅವನ ಪ್ರಯೋಗದ




II. ಜೀನುಗಳ ಸ್ಥಾನವಿವರಣೆ.

[ರೇಖಾವಿಭಾಗದ ಮೆಟ್ಟಲೊಂದರಲ್ಲಿ ವರ್ಣರೇಖೆಗಳು ತಾಳುವ ನಕ್ಷೆಯ ಕ್ರಮವನ್ನು ೧ನೆಯ ಚಿತ್ರದಲ್ಲಿ ತೋರಿಸಿದೆ. ಈ ಚಿತ್ರದಲ್ಲಿಯ ಕೊನೆಯ ವರ್ಣರೇಖೆಯನ್ನೇ ೨ನೆಯ ಚಿತ್ರದಲ್ಲಿ ದೊಡ್ಡದುಮಾಡಿದೆ. ಇದರಲ್ಲಿ ವರ್ಣರೇಖೆಯಲ್ಲಿ ಅಡಕವಾಗಿರುವ ಎರಡು ವರ್ಣತಂತುಗಳು ಹೊಸೆದುಕೊಂಡಿರುವುದನ್ನು ಕಾಣಬಹುದು. ೨ನೆಯ ಚಿತ್ರದಲ್ಲಿಯ ವರ್ಣರೇಖೆಯನ್ನೇ ೩ನೆಯದರಲ್ಲಿ ದೊಡ್ಡದುಮಾಡಿ, ಎಳೆದು ತೋರಿಸಿದೆ. ಇದರಲ್ಲಿ ವರ್ಣತಂತುಗಳು ಕಾಣುವುವಲ್ಲದೆ ಅವುಗಳಲ್ಲಿ ಅಡಕವಾಗಿರುವ ವರ್ಣಬಿಂದುಗಳೂ ಗೋಚರಿಸುತ್ತವೆ. ವರ್ಣತಂತುಗಳ ಮೇಲೆ ಪೋಣಿಸಿದ ಮಣಿಗಳಂತೆ ಅಲ್ಲಲ್ಲಿ ಕಪ್ಪಾಗಿ ಕಾಣುವ ಪ್ರದೇಶಗಳೇ ವರ್ಣಬಿಂದುಗಳು. ವರ್ಣಬಿಂದುಗಳನ್ನೊಳಗೊಂಡ ವರ್ಣತಂತುವಿನ ಒಂದು ಭಾಗವನ್ನೇ ೪ನೆಯ ಚಿತ್ರದಲ್ಲಿ ಇನ್ನೂ ದೊಡ್ಡದುಮಾಡಿ ತೋರಿಸಿದೆ. ಈ ವರ್ಣಬಿಂದುಗಳೇ ಜೀನುಗಳ ಗುಂಪುಗಳು. ಜೀನುಗಳನ್ನು ಇದುವರೆಗೆ ಯಾರೂ ಕಣ್ಣಿನಿಂದ ನೋಡಿಲ್ಲ ; ಒಂದು ಜೀನನ್ನು ಬೇರೆಯಾಗಿ ತೆಗೆದು ಅದರ ವಸ್ತುರೂಪಗಳನ್ನೂ ಅರಿತಿಲ್ಲ. ಆದರೆ ಶಾಸ್ತ್ರಜ್ಞರು ಸಸ್ಯ ಮತ್ತು ಪ್ರಾಣಿಜೀವನ ಚಕ್ರಗಳಲ್ಲಿ ಅವುಗಳ ಪಾತ್ರವನ್ನು ಮಿಶ್ರಸಂತಾನಾಭಿವೃದ್ಧಿ ಕ್ರಮದಿಂದ ಬಹು ಚೆನ್ನಾಗಿ ಅರಿತಿದ್ದಾರೆ ; ಮತ್ತೂ ಹೆಚ್ಚಾಗಿ ತಿಳಿಯಲು ಅನೇಕ ಪ್ರಯೋಗಗಳಲ್ಲಿ ತೊಡಗಿದ್ದಾರೆ. ಜೀನುಗಳ ಇರುವಿಕೆಯು ಇನ್ನೂ ಅನುಮಾನದಿಂದ ನಿರ್ಧರವಾದ ಸಿದ್ಧಾಂತ.]

ಮಹತ್ವವನ್ನು ಜೀವಶಾಸ್ತ್ರಜ್ಞರು ಅರಿತು ಅಂಗೀಕರಿಸಬೇಕಾದರೆ ಅರ್ಧ ಶತಮಾನ ಕಳೆಯಬೇಕಾಯಿತು. ಸುಮಾರು ೧೯೦೦ರಲ್ಲಿ ಡಿರೀಸ್ ಮೊದಲಾದ ಸಸ್ಯ ಶಾಸ್ತ್ರಜ್ಞರು ಸ್ವತಂತ್ರವಾಗಿ ಸಂಶೋಧನೆ ನಡಸಿ ಮೆಂಡಲನು ಯಾವ ಪ್ರಯೋಗ ಜ್ಞಾನವನ್ನು ಅಂದಿಗೆ ಸುಮಾರು ನಲವತ್ತು ವರ್ಷಗಳ ಹಿಂದೆಯೇ ಸಾರಿದ್ದನೋ ಅದನ್ನೇ ತಿಳಿಸಿದರು. ಬೇಟ್ಸನನೇ ಮೊದಲಾದವರು ಪ್ರಾಣಿಗಳ ಮೇಲೆ ಪ್ರಯೋಗ ನಡಸಿ ಅದರ ತತ್ವವನ್ನು ಸ್ಥಿರಪಡಿಸಿದರು.

ಮೆಂಡಲನು ಬೇರೆ ಬೇರೆ ಗುಣಗಳುಳ್ಳ ಬಟಾಣಿ ಗಿಡಗಳನ್ನು ತನ್ನ ಆಶ್ರಮದಲ್ಲಿ ಬೆಳಸಿ ಒಂದರೊಡನೊಂದನ್ನು ಕೃತಕರೀತಿಯಿಂದ ಸೇರಿಸಿ, ಆ ಮೂಲಕ ಉತ್ಪತ್ತಿಯಾದ ಮಿಶ್ರ ಸಂತಾನವನ್ನು ಪರೀಕ್ಷಿಸುತ್ತ ಬಂದನು. ಹೀಗೆ ಅವನು ಎತ್ತರವಾಗಿ ಬೆಳೆಯುವ ಜಾತಿಯ ಬಟಾಣಿಯ ಗಿಡದ ಹೂವಿಗೂ ಕುಳ್ಳಾಗಿ ಬೆಳೆಯುವ ಜಾತಿಯ ಗಿಡದ ಹೂವಿಗೂ ಸಂಬಂಧವನ್ನು ಕೃತಕರೀತಿಯಿಂದ ಕಲ್ಪಿಸಿ ಆ ಮೂಲಕ ಒಂದು ಮಿಶ್ರ ಸಂತಾನವನ್ನು ಪಡೆದನು. ಇದನ್ನು 'ಪ್ರಥಮಸಂತತಿ' ಎಂದು ಕರೆಯೋಣ. (ಈ ಸಂತತಿಯಲ್ಲಿ ಎಲ್ಲ ಗಿಡಗಳೂ ಎತ್ತರವಾಗಿಯೇ ಇದ್ದುವು.) ಈ ಪ್ರಥಮ ಸಂತತಿಯ ಗಿಡಗಳನ್ನು ಮಿಶ್ರಮಾಡುವುದರಿಂದ ಮತ್ತೊಂದು ಸಂತಾನವು ನಿರ್ಮಾಣವಾಯಿತು. (ಈ ಸಂತತಿಯನ್ನು ಎರಡನೆಯ ಸಂತತಿಯೆಂದು ಕರೆಯೋಣ.) ಅವುಗಳಲ್ಲಿ ಒಟ್ಟು ೧,೦೬೪ಕ್ಕೆ ೭೮೭ ಎತ್ತರವಾದ ಗಿಡಗಳೂ ೨೭೭ ಕುಳ್ಳಾದ ಗಿಡಗಳೂ—ಎಂದರೆ ಸುಮಾರು ಮೂರು ಎತ್ತರದ ಗಿಡಗಳಿಗೆ ಒಂದು ಕುಳ್ಳು ಗಿಡದಂತೆ—ಕಂಡುಬಂದುವು. ಈ ಎರಡನೆಯ ಸಂತತಿಯಲ್ಲಿರುವ ಕುಳ್ಳು ಗಿಡಗಳು ಸ್ವತಃ ಗರ್ಭಕಟ್ಟಿದಾಗ ಮುಂದೆ ಕುಳ್ಳು ಗಿಡಗಳನ್ನೇ ಕೊಡುತ್ತ ಬಂದುವು. ಆದರೆ, ಎತ್ತರವಾದ ಗಿಡಗಳಲ್ಲಿ ಎರಡು ವಿಧವಾಯಿತು. ಒಂದು ರೀತಿಯ ಎತ್ತರವಾದ ಗಿಡಗಳು ಸ್ವತಃ ಸಂತಾನ ನೀಡಿದಾಗ ಉದ್ದವಾದ ಗಿಡಗಳನ್ನೇ ಕೊಡುತ್ತ ಬಂದುವು. ಇನ್ನೊಂದು ರೀತಿಯ ಎತ್ತರವಾದ ಗಿಡಗಳು ಮಾತ್ರ "ಮೂರು ಎತ್ತರ ಒಂದು ಕುಳ್ಳು" ಪ್ರಮಾಣದ ಸಂತತಿಯನ್ನು ಕೊಡುತ್ತ ಬಂದುವು. ಇದಕ್ಕೆ ಏನು ವಿವರಣೆ?


ಸಾಮಾನ್ಯವಾಗಿ ಗರ್ಭಕಟ್ಟಿದ ತತ್ತಿಯಲ್ಲಾಗಲಿ, ಇತರ ದೈಹಿಕ ಕೋಶಗಳಲ್ಲಾಗಲಿ ಎರಡೆರಡು ಸಜಾತೀಯ ವರ್ಣರೇಖೆಗಳಿರುತ್ತವೆ. ಅಂಥ ಎರಡು ವರ್ಣರೇಖೆಗಳಲ್ಲಿಯೂ ಆಯಾ ಅನುವಂಶೀಯ ಗುಣಗಳನ್ನು ತಳೆದಿರುವ ಜೀನು ಒಂದೊಂದಿರುತ್ತದೆ. ಮಿಶ್ರವಾಗದಿರುವಾಗ ಈ ಎರಡು ಜೀನುಗಳೂ ಒಟ್ಟಿಗೆ ಸಹಕರಿಸಿ ಆಯಾ ಗುಣವನ್ನೇ ದೇಹದಲ್ಲಿ ವ್ಯಕ್ತಪಡಿಸುತ್ತವೆ. ಆದರೆ ಮಿಶ್ರವಾದಾಗ ನಡೆಯುವುದೇ



III. ಮೆಂಡಲನ ಪ್ರಯೋಗ.

ಜೇರೆ. ಹೀಗೆ, ಎತ್ತರ ಜಾತಿಯೂ ಕುಳ್ಳುಜಾತಿಯೂ ಸೇರಿದಾಗ ಮಿಶ್ರಕೋಶದಲ್ಲಿನ ಒಂದು ವರ್ಣರೇಖೆಯು ಎತ್ತರದ್ದರ ಜೇನನ್ನೂ ಮತ್ತೊಂದು ಕುಳ್ಳದರ ಜೇನನ್ನೂ ತಳೆದಿರುತ್ತದೆ. ಹೀಗಿದ್ದರೂ, ಮೊದಲನೆಯ ಮಿಶ್ರಸಂತಾನದಲ್ಲಿ ಎಲ್ಲವೂ ಎತ್ತರ ವಾಗಿಯೇ ಇದ್ದುವಲ್ಲ, ಇದಕ್ಕೆ ಕಾರಣವೇನು? ಕಾರಣವಿದೆ. ಮೇಲೆ ಹೇಳಿದ ಎರಡು ಜೇನುಗಳಲ್ಲಿ ಒಂದು ಪ್ರಮುಖ, ಮತ್ತೊಂದು ವಿಮುಖ. ಇಲ್ಲಿ ಎತ್ತರದ್ದು ಪ್ರಮುಖ ಜೇನು. ಕುಳ್ಳದರದ್ದು ವಿಮುಖ ಜೇನು. ಆದ್ದರಿಂದ ಮೊದಲನೆಯ ಮಿಶ್ರಸಂತತಿಯಲ್ಲಿ ಈ ಎರಡು ಜೇನುಗಳೂ ಇದ್ದರೂ, ವಿಮುಖ ಜೇನಿನ ಗುಣವು ಪ್ರಮುಖ ಜೇನಿನ ಗುಣದಿಂದ ಮಂಕಾಗಿ ಹೋಗುತ್ತದೆ. ಆದ್ದರಿಂದ ಪ್ರಮುಖ ಜೇನಿನ ಕೈವಾಡವೇ ಆ ಜೀವಿಗಳಲ್ಲಿ ಹೆಚ್ಚಾಗಿ ಪ್ರಮುಖಗುಣವೇ ದೇಹದಲ್ಲಿ ವ್ಯಕ್ತವಾಗುತ್ತದೆ. ಈ ವಿಮುಖ ಜೇನುಗಳೇ ಎರಡು ಒಟ್ಟುಗೂಡಿದಾಗ ತಮ್ಮ ಕೈವಾಡವನ್ನು ಧಾರಾಳವಾಗಿ ತೋರಿಸಿ ಪ್ರಾಣಿಯಲ್ಲಿ ವಿಮುಖಗುಣವನ್ನು ಸ್ಥಾಪಿಸುತ್ತವೆ. ಇಂಥ ಸಂದರ್ಭವನ್ನು ಎರಡನೆಯ ಮಿಶ್ರಸಂತತಿಯಲ್ಲಿ ಕಾಣಬಹುದು.

ಮೊದಲನೆಯ ಮಿಶ್ರಸಂತಾನದ ಜನನೇಂದ್ರಿಯದ ಬೀಜಾಶಯದಲ್ಲಿ ವಿಂಗಡ ವಿಭಾಗವಾದ ಮೇಲೆ ಎರಡು ವಿಧವಾದ ಜೀವಾಣುಗಳು ಉತ್ಪನ್ನವಾಗುತ್ತವೆ. ಒಂದರಲ್ಲಿರುವ ವರ್ಣರೇಖೆಯು ಪ್ರಮುಖಜೇನನ್ನೂ ಮತ್ತೊಂದರಲ್ಲಿರುವ ವರ್ಣ ರೇಖೆಯು ವಿಮುಖಜೇನನ್ನೂ ತಳೆದಿರುವುದು. ಆದ್ದರಿಂದ ತತ್ತಿಯು ಗರ್ಭ ಕಟ್ಟುವಾಗ ಈ ರೀತಿಯ ಜೀವಾಣುಗಳು ಒಂದರೊಡನೊಂದು ಬೆರೆತು ಆ ಮೂಲಕ ನಾಲ್ಕು ಜಾತಿಯ ತತ್ತಿಗಳಾಗುವುವು. ಈ ತತ್ತಿಗಳು ಬೆಳೆದು ವೃದ್ಧಿಹೊಂದಿದಾಗ ನಾಲ್ಕು ಜಾತಿಯ ಗಿಡಗಳಾಗುವುವು. ಅವುಗಳಲ್ಲಿ ಮೂರು ಭಾಗ ಎತ್ತರವಾಗಿಯೂ ಒಂದು ಭಾಗ ಕುಳ್ಳಾಗಿಯೂ ಇರುವುವು. ಕುಳ್ಳಾದ ಗಿಡಗಳು ತಮ್ಮ ಕೋಶದಲ್ಲಿಯ ಎರಡು ವರ್ಣರೇಖೆಗಳಲ್ಲಿಯೂ ವಿಮುಖಜೇನುಗಳನ್ನೇ ತಳೆದಿರುವುವು. ಆದ್ದರಿಂದ ಮುಂದೆ ಎಂದೆಂದಿಗೂ ಅವು ವಿಮುಖಗುಣವನ್ನು ತಾಳುವಂಥ ಸಂತಾನವನ್ನೇ ಬೆಳೆಸುವುವು. ಆದರೆ, ಎತ್ತರವಾಗಿರುವ ಗಿಡಗಳಲ್ಲಿ—ಹೊರನೋಟಕ್ಕೆ ಅವು ಒಂದೇ ಆಗಿದ್ದರೂ ಆಂತರಿಕ ವರ್ಣರೇಖಾ ವೈಶಿಷ್ಟ್ಯದಲ್ಲಿ ಭೇದವಿರುತ್ತದೆ. ಇವುಗಳಲ್ಲಿ ಮೂರರಲ್ಲಿ ಒಂದು ಗಿಡವು ತನ್ನಲ್ಲಿರುವ ವರ್ಣರೇಖೆಗಳೆರಡರಲ್ಲಿಯೂ ಪ್ರಮುಖ ಗುಣವುಳ್ಳ ಜೇನುಗಳನ್ನು ತಳೆದಿರುತ್ತದೆ. ಆದ್ದರಿಂದ ಈ ಜಾತಿಯ ಎತ್ತರದ ಗಿಡಗಳು ಯಾವಾಗಲೂ ಎತ್ತರದ ಗಿಡಗಳನ್ನೇ ಕೊಡುತ್ತ ಹೋಗುತ್ತವೆ. ಆದರೆ ಮಿಕ್ಕ ಎರಡು ಎತ್ತರವಾದ ಗಿಡಗಳಲ್ಲಿ ಒಂದು ಪ್ರಮುಖಜೇನುಗಳ ವರ್ಣರೇಖೆಯೂ, ಇನ್ನುಳಿದವು ವಿಮುಖಜೇನುಗಳ ವರ್ಣರೇಖೆಗಳೂ ಆಗಿರುತ್ತವೆ. ಆದಕಾರಣ



IV. ಬಾಳೆ ಚಿಟ್ಟೆಯಲ್ಲಿಯ ಜೋಡಣೆ ಹೊರಗಡೆ ಕಾಣುವ ವಿಧಾನ.

ಹೊರಗಡೆ ಪ್ರಮುಖಗುಣವೇ ಗೋಚರಿಸಿದರೂ ಅವುಗಳು ತಮ್ಮ ಸಂತಾನದಲ್ಲಿ ಎತ್ತರವೂ ಮತ್ತು ಕುಳ್ಳೂ ಆದ ಗಿಡಗಳೆರಡನ್ನೂ ಕೊಡುತ್ತವೆ.


ಮೆಂಡಲನು ಒಂದೊಂದು ಸಜಾತೀಯ ವರ್ಣರೇಖೆಯೂ ಒಂದೊಂದು ಅನುವಂಶೀಯ ಗುಣಕ್ಕೆ ಮಾತ್ರ ನೆಲೆಯಾಗಿದೆ ಎಂದು ಭಾವಿಸಿದನು. ಈ ಭಾವನೆಯು ಆಕಸ್ಮಿಕವಾಗಿ ಬಟಾಣಿ ಗಿಡದಲ್ಲಿ ಸರಿಗಂಡಿತು. ಬಟಾಣಿಯಲ್ಲಿ ಏಳು ಜೊತೆ ವರ್ಣರೇಖೆಗಳಿವೆ. ಆ ಗಿಡದಲ್ಲಿ ಮೆಂಡಲನಿಗೆ ಗೋಚರಿಸಿದ್ದು ಏಳು ಗುಣಗಳು. ಈ ಗುಣಗಳೊಂದೊಂದೂ ಸ್ವತಂತ್ರವಾಗಿಯೇ ಸಂತಾನಗಳಲ್ಲಿ ಪ್ರಿಂಗಡವಾಗು ತ್ತಿದ್ದುವು. ಇದೇ ಅವನ ಭಾವನೆಗೆ ಕಾರಣ.

ಬೇಟ್ಸ್‌ನ್ ಮತ್ತು ಇತರರ ಪ್ರಯೋಗ— ಬಾಳೆಚಿಟ್ಟೆ

ಬೇಟ್ಸನನೇ ಮೊದಲಾದ ಜೀವಶಾಸ್ತ್ರಜ್ಞರು ಮೆಂಡಲನ ಪ್ರಯೋಗವನ್ನು ಮುಂದುವರಿಸಿ ಹೊಸ ಶೋಧನೆಗಳನ್ನು ನಡಸಿ ''ಲಿಂಕೇಜ್'' ಅಥವಾ ಅನುವಂಶೀಯ ಗುಣಗಳ ಜೋಡಣೆಯ ತತ್ವವನ್ನು ಸಾರಿದರು. ಮೆಂಡಲನು ತಿಳಿದಿದ್ದಂತೆ ಒಂದು ಜೀವಿಯ ಕೋಶದಲ್ಲಿ ಎಷ್ಟು ಜೊತೆ ವರ್ಣರೇಖೆಗಳಿವೆಯೋ ಅಷ್ಟೇ ಅನುವಂಶೀಯ ಗುಣಗಳಿಲ್ಲ, ಇನ್ನೂ ಹೆಚ್ಚಾಗಿವೆ; ಒಂದೊಂದು ವರ್ಣರೇಖೆಯ ಜೊತೆಯಲ್ಲಿಯೂ ಒಂದಕ್ಕಿಂತ ಹೆಚ್ಚಾಗಿ ಆ ಗುಣಧಾರಿಗಳಿವೆ; ಆದ್ದರಿಂದ ಒಂದು ಗುಣದ ಸಂಗಡಲೇ ಮತ್ತೊಂದು ಗುಣವೂ ಕೊಂಡಿಯಂತೆ ತಗುಲಿಕೊಂಡಿದೆ. ಈ ತಗುಲಿಕೆಯೂ ಸಾಮಾನ್ಯವಾಗಿ ಅನುವಂಶೀಯವಾಗಿ ಸಾಗುವುದರಿಂದ ಗುಣಗಳು ಪ್ರತ್ಯೇಕ ಪ್ರತ್ಯೇಕವಾಗಿ ಕಾಣಿಸಿಕೊಳ್ಳುವುದಿಲ್ಲ—ಎಂಬುದೇ ಈ ತತ್ವದ ಸಾರಾಂಶ.

ಇದನ್ನು ಬಾಳೆಚಿಟ್ಟೆಯಲ್ಲಿ ನಿದರ್ಶಿಸಬಹುದು. ಈ ಚಿಟ್ಟೆಗಳಲ್ಲಿ ಕೆಲವು ಬಣ್ಣದಲ್ಲಿ ಕಪ್ಪಾಗಿಯೂ ಆಕಾರದಲ್ಲಿ ಮೋಟುರೆಕ್ಕೆಯುಳ್ಳವಾಗಿಯೂ ಇರುತ್ತವೆ. ಕಪ್ಪು ಚಿಟ್ಟೆಗೆ ಯಾವಾಗಲೂ ಮೋಟುರೆಕ್ಕೆಯೇ. ನೀಳರೆಕ್ಕೆಯುಳ್ಳವುಗಳು ಯಾವಾಗಲೂ ನರೆಬಣ್ಣದವೇಯೆ. ತಮ್ಮ ಸಂತಾನದಲ್ಲಿಯೂ ಈ ಗುಣಸಂಬಂಧವು ತಗುಲಿಕೊಂಡೇ ಸಾಗುತ್ತದೆ. ಇದನ್ನು ನೋಡಿದರೆ ಈ ಎರಡು ಗುಣಗಳೂ ಒಂದೇ ರೇಖೆಯಲ್ಲಿರ ಬೇಕು ಎಂಬುದು ಗೊತ್ತಾಗುತ್ತದೆ.

ಈ ಚಿಟ್ಟೆಯಲ್ಲಿ ನರೆಬಣ್ಣವೂ ಉದ್ದವಾದ ರೆಕ್ಕೆಯೂ ಪ್ರಮುಖಗುಣಗಳು; ಕಪ್ಪುಬಣ್ಣವೂ ಮೋಟುರೆಕ್ಕೆಗಳೂ ಏಮುಖಗುಣಗಳು. ಈ ಎರಡು ಜಾತಿಯ ಕೀಟಗಳಿಗೆ ಮಿಶ್ರಸಂತಾನವಾದಾಗ ಮೊದಲನೆಯ ಮಿಶ್ರಸಂತತಿಯಲ್ಲಿ ಎಲ್ಲವೂ ಪ್ರಮುಖ ಗುಣಗಳುಳ್ಳ ಚಿಟ್ಟೆಗಳೇ ಎಂದರೆ ನರೆಬಣ್ಣದ ಮತ್ತು ಉದ್ದರೆಕ್ಕೆಯವುಗಳೇ.



V. ಬಾಳೆ ಚಿಟ್ಟೆಯಲ್ಲಿ ಜೋಡಣೆಯಲ್ಲಿ ಆಗುವ ಆಂತರಿಕ ಬದಲಾವಣೆಗಳು.

ಆದರೂ, ಅವುಗಳ ವರ್ಣರೇಖೆಗಳಲ್ಲಿ ವಿಮುಖಗುಣ ಧಾರಿಗಳೂ ಅಡಗಿದ್ದು ತಮ್ಮ ಪ್ರಭಾವವನ್ನು ತೋರಿಸಲಾರದೆ ಇರುತ್ತವೆ. ಈ ಮೊದಲನೆಯ ಮಿಶ್ರಸಂತತಿಯು ಮತ್ತೆ ಜೀವಾಣುಗಳನ್ನು ನಿರ್ಮಿಸುವಾಗ ಎರಡುತರದ ಜೀವಾಣುಗಳಾಗುವುವು; ಒಂದರಲ್ಲಿ ಕಪ್ಪುಬಣ್ಣ ಮೋಟುರೆಕ್ಕೆಯ ಜೀನುಗಳೂ, ಇನ್ನೊಂದರಲ್ಲಿ ನರೆಬಣ್ಣ

ನೀಳರೆಕ್ಕೆಯ ಜೀನುಗಳೂ ಉಳ್ಳ ರೇಖೆಗಳಿರುತ್ತವೆ. ಈ ಜೀವಾಣುಗಳು ಕಪ್ಪು ಬಣ್ಣ ಮೋಟುರೆಕ್ಕೆಯ ಹುಳುವಿನಿಂದ ಉತ್ಪತ್ತಿಯಾದ ಜೀನುಗಳೊಡನೆ ಸೇರಿ ಗರ್ಭೋತ್ಪತ್ತಿಯಾದಾಗ ಎರಡು ತರದ ಚಿಟ್ಟೆಗಳು ಉತ್ಪತ್ತಿಯಾಗುತ್ತವೆ. ಅವುಗಳಲ್ಲಿ ಒಂದು ತರದವು ಕಪ್ಪುಬಣ್ಣ ನೀಳರೆಕ್ಕೆಯವಾಗಿಯೂ ಮತ್ತೊಂದು ತರದವು ನರೆಬಣ್ಣ ನೀಳರೆಕ್ಕೆಯವಾಗಿಯೂ ಇರುತ್ತವೆ.

ಹೀಗೆ ಜೀವಶಾಸ್ತ್ರ ಪ್ರಯೋಗ ಪರೀಕ್ಷೆಗಳ ಫಲವಾಗಿ ಈಗ್ಗೆ ಐವತ್ತು ವರ್ಷಗಳ ಹಿಂದೆ ಯಾವುದು ರಹಸ್ಯವಾಗಿತ್ತೋ ಅದು ಇಂದು ನಮ್ಮ ಜ್ಞಾನಕ್ಕೆ ಒಳಪಟ್ಟ ಪ್ರಕೃತಿನಿಯಮಗಳಲ್ಲೊಂದಾಗಿದೆ. ಈಗ ನಾವು ಬಟಾಣಿಯಲ್ಲಿ ಕುಳ್ಳು ಗಿಡವನ್ನಾಗಲಿ ಎತ್ತರ ಗಿಡವನ್ನಾಗಲಿ, ಬಾಳೆ ಚಿಟ್ಟೆಯಲ್ಲಿ ಕೆಂಪು ಕಣ್ಣಿನ ಚಿಟ್ಟೆಯನ್ನಾಗಲಿ ಬಿಳಿಯ ಕಣ್ಣಿನ ಚಿಟ್ಟೆಯನ್ನಾಗಲಿ ಪಡೆಯಬಹುದು. ಅನುವಂಶೀಯ ಗುಣಗಳ ನಡೆವಳಿಕೆ ಮಾನವನಿಗೆ ಸಂಪೂರ್ಣವಾಗಿ ವಶವಾದರೆ ಮನುಷ್ಯರಲ್ಲಿಯೂ ನಮಗೆ ಬೇಡದ ಗುಣಗಳನ್ನು ಮೂಲೆಗೊತ್ತಿ ಬೇಕಾದ ಆದರ್ಶಗುಣಗಳನ್ನುಳ್ಳ ಮಾನವ ಕುಲವನ್ನು ಪಡೆಯುವ ಕಾಲ ಬರಬಹುದು. ನೀಗ್ರೋ ಜನರ ಬಣ್ಣವು ಇಂದು ನಮಗೆ ಬೇಡದ ಬಣ್ಣ. ಈ ಜನಾಂಗವೂ ಒಂದು ದಿನ ಬಿಳಿಯ ಜನಾಂಗದವರಂತೆ ಬೆಳ್ಳಗಾಗುವ ಕಾಲ ಬರಬಹುದು. ಆದರೆ ಈ ಕನಸು ನನಸಾಗುವುದಕ್ಕೆ ಪ್ರಾಯಶಃ ಹಲವು ಶತಮಾನಗಳು ಉರುಳಬೇಕಾಗಬಹುದು!

ಡಿ. ಎಚ್. ವೀರಯ್ಯ.

ಈ ಬರವಣಿಗೆಗೆ ಬೇಕಾದ ಚಿತ್ರಗಳನ್ನು ಅಂದವಾಗಿ ಬರೆದುಕೊಟ್ಟ ಶ್ರೀಮಾನ್ ಬಿ. ಜಿ. ಎಲ್. ಸ್ವಾಮಿಯವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳು.

ಹಿಂದೆ ಪ್ರಯುಕ್ತವಾದ ಪಾರಿಭಾಷಿಕ ಶಬ್ದಗಳು

ಎರಡನೆಯ ಸಂತತಿ = Second Filial Generation.

ಕೀಟ = Insect.

ಗರ್ಭೋತ್ಪತ್ತಿ = Fertilization.

ಗುಣಧಾರಿ = Gene.

ಜೀವಕೋಶ = Cell.

ಜೀವರಸ = Protoplasm.

ಜೀವಾಣು = Gamete.

ಜೋಡಣೆ = Linkage.

ದೈಹಿಕ = Somatic.

ನಕ್ಷೆಯ ಕ್ರಮ = Configuration.

ನರೆಬಣ್ಣ = Gray Colour.

ಪ್ರಥಮ ಸಂತತಿ = First Filial Generation.

ಪ್ರಮುಖ = Dominant.

ಬಟಾಣಿ = Pea.

ಬಾಳೆಚಿಟ್ಟೆ = Drosophila.

ಬೀಜ = Nucleus.

ಮಿಶ್ರಸಂತಾನ = Hybrid Generation.

ಮಿಶ್ರಸಂತಾನಾಭಿವೃದ್ಧಿ = Hybridisation.

ವರ್ಣಗ್ರಾಹಿ = Chromatin.

ವರ್ಣತಂತು = Chromonema.

ವರ್ಣಬಿಂದು = Chromomere.

ವರ್ಣರೇಖೆ = Chromosome.

ವಿಮುಖ = Recessive.

ವೈಶಿಷ್ಟ್ಯ = Individuality.

ಸಜಾತೀಯ ವರ್ಣರೇಖೆ = Homologous Chromosome.

'ಅಮರು ಶತಕ'ದಿಂದ

ಮೆಲ್ಲನೆ ಹೊರಳಿ, ಒಲವೊಳು ಕರಗಿ,
ಮತ್ತೆ ಮತ್ತೆ ಕಿರುಮುಗುಳಾಗಿ,
ಕ್ಷಣವೆದುರಾಗಿ, ಲಜ್ಜೆಗೆ ಬಳುಕಿ,
ಎವೆಯಿಕ್ಕುವುದನೆ ಮರೆಮರೆತು,
ಹೃದಯದೊಳಡಗಿದ ಬಯಕೆಯ ಹೊರಚೆ-
ಲ್ಲುವ ವೊಲು ಹಾಯುವ ನೋಟದಲಿ
ನೀನಿಂದೀ ಪರಿ ನಿಟ್ಟಿಸುತಿರುವೀ
ಸುಕೃತಿ ಅದಾರೌ, ನುಡಿ ಮುಗುದೆ!

***

ನಾಡುಗಳು ಕಾಡುಗಳು ನೂರಾರು ತೊರೆ ಗಿರಿಗ-
ಳಡ್ಡವಿಸಿ ನಿಂದಿಹುವು, ಆಚೆಗವಳು;
ಎಷ್ಟೆಷ್ಟು ನಿಲುನಿಲುಕಿ ದಣಿದರೂ ಕಂಗಳಿಗೆ
ಕಾಂತೆ ಕಾಣಿಸಳೆಂದು ಬಲ್ಲನವನು.
ಆದರೂ ಕೊರಳೆತ್ತಿ, ಸೆಲವ ಮೆಟ್ಟುಂಗಾಲೊ-
ಳೊತ್ತಿ, ಕಣ್ಣಿನ ನೀರನೊರಸಿಕೊಳುತ,
ಆ ದಿಕ್ಕನೇ ಮತ್ತೆ ದಿಟ್ಟಿಸುತ ನಿಲ್ಲುವನು
ದಾರಿಗನದೇನನೋ ನೆನೆನೆನೆಯುತ.

***

ಹಗಲೆ ಲೇಸು ಈ ನಿಶೆ ನೂಕಲು ಕಡಿದು;
ನಿಶೆಯೆ ಲೇಸುಲೇಸಸದಳವೀ ಹಗಲು.
ಉಡುಗಿಹೋಗಲೀ ಎರಡೂ ಕ್ಷಯಸಂದು
ಪ್ರಿಯನ ಸಂಗಮವು ನೆರೆಯದೆ ಹೋದಂದು!

ತೀ. ನಂ. ಶ್ರೀ.

ಮಹಾಕವಿ ಪುರುಷಸರಸ್ವತಿಯ ಪರಿಚಯ

೪

(ಮುಂದುವರಿದದ್ದು)

ಈ ಲೇಖನದಲ್ಲಿ ಉಪಯೋಗಿಸಿರುವ ಸಂಕೇತಗಳು :

‘ ಕ. ಪು.’—‘ ಕಡಲೆ ಪುರಿ ’—ಶ್ರೀ. ರಾಜರತ್ನ ಕೃತ.

‘ ರ. ಪ.’—‘ ರತ್ನನ ಪದಗಳು ’—ಶ್ರೀ. ರಾಜರತ್ನ ಕೃತ.

‘ ಕ. ನಾ. ಪು.’—‘ ಕರ್ಣ ನಾಟಕ ಪುರಾಣ ’—ಪುರುಷಸರಸ್ವತಿ ಕೃತ.

‘ ಹಾ. ಹ.’—‘ ಹಾರ್ಮೋನಿಯಂ ಹರಣ ’—ಪುರುಷಸರಸ್ವತಿ ಕೃತ.

ಅಕ್ಷಮ್ಯ ಅಪಚಾರ

ಮಹಾಕವಿ ಪುರುಷಸರಸ್ವತಿಯ ಎರಡನೆಯ ಮಹಾಕ್ಷುದ್ರಕಾವ್ಯವಾದ “ಹಾ. ಹ.”ವನ್ನು ಜನತೆಯ ಮುಂದಿಡುವ ವೊದಲು ನಮ್ಮದೊಂದು ಅಕ್ಷಮ್ಯ ಅಪಚಾರಕ್ಕಾಗಿ ಅನಂತ ಅನುತಾಪವನ್ನು ಸೂಚಿಸಬೇಕಾಗಿದೆ. ಹಿಂದೆ ‘ ಕ. ನಾ. ಪು.’ವನ್ನು ಲೋಕಹಿತಾರ್ಥವಾಗಿ ಪ್ರಚುರಪಡಿಸುವಾಗ ಅದರ ಮುಖಪತ್ರದ ಅಟ್ಟಅಡಿ*ಯಲ್ಲಿ

—: ವಿಶೇಷ ಸೂಚನೆ :—

ಕಾವ್ಯಕರ್ತೃವೂ ವ್ಯಾಖ್ಯಾನಕಾರನೂ ‘ ಗುಪ್ತಸಂಪಾದಕ ಪಂಚಕ’ವೂ
ಸರ್ವವೂ **ಶ್ರೀಮಾನ್ ಜಿ. ಪಿ. ರಾಜರತ್ನಂ, ಎಂ.ಎ.** ಎಂಬವರೆಂದು
ಈಗತಾನೆ ಈ ಕೃತಿ ಅಚ್ಚಾದ ಮೇಲೆ ತಿಳಿದುಬಂದಿದೆ.

ಎಂದು ಅಚ್ಚಾಗಿದ್ದುದು ಸರಿಯಷ್ಟೆ. ಆದರೆ ಅದು ‘ ಸರಿ ’ ಹೇಗಾದೀತು? ಕಾವ್ಯಕರ್ತೃವು ಮಹಾಕವಿ ಪುರುಷಸರಸ್ವತಿಯೂ ವ್ಯಾಖ್ಯಾನಕರ್ತನು ಪ್ರಖ್ಯಾತನಾದ ವಿಪರೀತಬುದ್ಧಿಯೂ ಸಂಪಾದಕರು ಸಿರಿಗನ್ನಡಿಗರ ಡಿಂಗರಿಗರಾದ ನಾವು ಐವರೂ ಆಗಿರುವಾಗ “ಸರ್ವವೂ ಶ್ರೀಮಾನ್ ಜಿ. ಪಿ. ರಾಜರತ್ನಂ” ಎಂಬುದು ‘ ಸರಿ ’ ಹೇಗಾದೀತು? ಇದು ಸತ್ಯದ ಅಪಭ್ರಂಶ, ಸಂಬಂಧಿಸಿದ ಸರ್ವರಿಗೂ ಸಲ್ಲಿಸಿದ ಅಕ್ಷಮ್ಯ ಅಪಚಾರ.

ನಾವು ‘ ಕ. ನಾ. ಪು.’ವನ್ನು ನಮ್ಮ ಸ್ವಕೀಯ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಾಪಿಸಿದರೂ ಕೂಡ ಇಂತಹ ಪ್ರಮಾದ ಸಂಭವಿಸಿದುದು ಅತ್ಯಂತ ವಿಷಾದಕರವಾದ ಸಂಗತಿ. ಮುದ್ರಾಪಿಸಿದ ಅಷ್ಟು ಪ್ರತಿಗಳೂ ತೀರಿದನಂತರವೇ ಈ ಪ್ರಮಾದವು ನಮ್ಮ ಗಮನಕ್ಕೆ ತರಲ್ಪಟ್ಟುದು ಅತ್ಯಂತ ಆಶ್ಚರ್ಯಾವಹವಾಗಿದೆ. ಈ ಪ್ರಮಾದವನ್ನು

---

* ತುದಿ + ತುದಿ = ತುಟ್ಟತುದಿ ಆದಂತೆ ಅಡಿ + ಅಡಿ = ಅಟ್ಟಅಡಿ.

ಮುಂದಿನ ತಿದ್ದಿದ ಪರಿಷ್ಕರಣದಲ್ಲಿ ಸರಿಪಡಿಸಲಾಗುವುದು. ಆದರೂ ನಡೆದುಹೋದ ಪ್ರಮಾದಕ್ಕಾಗಿ ಅನುತಾಪ ಪರಿತಾಪಗಳನ್ನು ಸೂಚಿಸುವುದು ನಮ್ಮ ಕರ್ತವ್ಯವೆಂದು ಹಾಗೆಯೇ ಗೈದಿದ್ದೇವೆ. ಮಾತ್ರವಲ್ಲ, ಇಂತಹ ಅಕ್ಷಮ್ಯ ಅಪಚಾರಗಳು ಪುನಃ ಒದಗಬಾರದೆಂದು ನಮ್ಮ ಸ್ವಕೀಯ ಮುದ್ರಾಕ್ಷರ ಶಾಲೆಯನ್ನು ಮುಚ್ಚಿ, ಅಲ್ಲಿಯ ಅಚ್ಚುಮೊಳೆ, ಯಂತ್ರ, ಮಸಿ ಮುಂತಾದ ಯಾವತ್ತೂ ಸಕಲೋಪಕರಣಗಳನ್ನು ಹರಾಜು ಹಾಕಿಸಿದ್ದೇವೆ. ನಮ್ಮ ಅಪಚಾರಕ್ಕೆ ಇದು ತೀರ ಅಲ್ಪಪ್ರಾಯಶ್ಚಿತ್ತ ವೆಂದೇ ನಮ್ಮ ಭಾವನೆ. ಇರಲಿ.

ಅಸಹ್ಯ ಅಪಪ್ರಚಾರ

ಮೇಲಿನ ಮಾತನ್ನು ನಾವು ಅಲ್ಲಿಗೇ ಮುಗಿಸಬಹುದಾಗಿತ್ತಾದರೂ "ಕುಂಟನಿಗೆ ಎಂಟು ನೆವವಾದರೆ ಬಂಟನಿಗೆ ಒಂಟಿ ನೆವ" ಎಂಬ ನಾಣ್ನುಡಿಯಂತೆ, ನಮ್ಮ ಆ ಪ್ರಮಾದವನ್ನೇ ನೆಪಮಾಡಿಕೊಂಡು ಶ್ರೀಮಾರ್ಕ್ ರಾಜರತ್ನಂರ—(ಅವರ ಪರಿಚಯ ನಮಗಿಲ್ಲವಾದ್ದರಿಂದ ಯಾವ ವೈಯಕ್ತಿಕ ದ್ವೇಷಕ್ಕೂ ಇಲ್ಲಿ ಅವಕಾಶವಿಲ್ಲ.)—ಮಿತ್ರರನೇಕರು 'ಕ. ನಾ. ಪು.'ವನ್ನೂ ಅದರ ಮೇಲಿನ ವ್ಯಾಖ್ಯಾನವನ್ನೂ ಶ್ರೀಮಾರ್ಕ್ ರಾಜರತ್ನಂರೇ ಬರೆದು, ಕಾರಣಾಂತರಗಳಿಂದ—(ಅದೇನು ಕಾರಣಗಳೆಂಬುದನ್ನು ಶ್ರೀಯುತರಾಗಲಿ ಅವರ ಮಿತ್ರರಾಗಲಿ ನಮ್ಮ ಮನಸ್ಸು ಒಪ್ಪುವಂತೆ ಸಿದ್ಧಪಡಿಸಿಲ್ಲ; ನಮ್ಮನ್ನು ಒಪ್ಪಿಸುವುದು ಅವರಿಂದ ಸಾಧ್ಯವೂ ಇಲ್ಲ.)—ತಮ್ಮ ಕರ್ತೃತ್ವವನ್ನು ಅಡಗಿಸಿಟ್ಟು ತಾವೇ—(ನಾವು 'ಗುಪ್ತಸಂಪಾದಕ ಪಂಚಕ'ವು ಇನ್ನೂ ಇರುವಾಗಲೇ)—ಅದನ್ನು ಸಂಪಾದಿಸಿದರೆಂದೂ ನಡೆಸುತ್ತಿರುವ ಅಪಪ್ರಚಾರವನ್ನು ಎಂತಹ ಅಸತ್ಯದ್ವೇಷಿಯೂ ಅಸಹಿಸದೆ ಇರಲಾರನೆಂದು ನಾವು ದೃಢವಾಗಿ ನಂಬುತ್ತೇವೆ. ಮಾತ್ರವಲ್ಲ, ಶ್ರೀಯುತರೂ ಕೂಡ ತಮ್ಮ ಈ ಮಿತ್ರ ವಚನಗಳಿಗೆ ಪ್ರತ್ಯಕ್ಷಪರೋಕ್ಷಗಳಲ್ಲಿ ಪುಷ್ಟಿಗೊಡುತ್ತಿದ್ದಾರೆಂದೂ ಸುದ್ದಿ ನಮ್ಮ ಕಿವಿ ಮುಟ್ಟಿದೆ. ಇರಲಿ.

ರತ್ನ ಪರೀಕ್ಷೆ

ಈ ಅಪಪ್ರಚಾರದ ಸುಳಿವು ನಮ್ಮ ಶ್ರೋತ್ರೇಂದ್ರಿಯಗಳಿಗೆ ಸೋಕಿ ಗೋಚರ ವಾದ ಒಡನೆಯೇ ಶ್ರೀಮಾರ್ಕ್ ರಾಜರತ್ನಂ ಯಾರೆಂದು ತಿಳಿಯದಿದ್ದರೂ ಅವರು ನಮ್ಮ ಸಾಹಿತ್ಯಕ್ಕೆ ಸಲ್ಲಿಸಿರಬಹುದಾದ ಸೇವೆಯೇನಿರಬಹುದೆಂದು ಸಮೀಕ್ಷಿಸುವುದಕ್ಕಾಗಿ ನಮ್ಮ ಕನ್ನಡನಾಡಿನ ಸುಪ್ರಸಿದ್ಧ ಪ್ರಮುಖ ಪುಸ್ತಕವ್ಯಾಪಾರಿಗಳಾದ "ಸಮಸ್ತ ಸಿರಿಗನ್ನಡ ಸಾರಸ್ವತ ಸಮೃದ್ಧಿ ಬುಕ್‌ಡಿಪೊ" ಅವರೊಡನೆ ಪತ್ರವ್ಯವಹಾರವನ್ನು ಬೆಳೆಸಿದೆವು. (ಕುತೂಹಲವುಳ್ಳವರು ನಮ್ಮ ಆಫೀಸಿನ ಇಂದ—ಗೆ ರಿಜಿಸ್ಟರನ್ನು ಪರೀಕ್ಷಿಸಬಹುದು.) ಅದರ ಫಲವಾಗಿ ಅವರು ನಮಗೆ ಶ್ರೀಮಾರ್ಕ್ ರಾಜರತ್ನ ಕೃತ "ಕ. ಪು." ಮತ್ತು

"ರ. ಪ." ಎಂಬ ಎರಡು ಪುಸ್ತಕಗಳನ್ನು ವಿ. ಪಿ. ಮೂಲಕ (ಅಂಚೆವೆಚ್ಚ ಅಲಾಯಿದ) ಕಳುಹಿಸಿಕೊಟ್ಟರು. ಆ ಎರಡು ಪುಸ್ತಕಗಳ ರಟ್ಟಿನ ಹಿಂದೆ ಅದೇ ಕರ್ತೃಕೃತವೆನಿಸಿದ ಇನ್ನೂ ಹಲವಾರು ಪುಸ್ತಕಗಳ ಹೆಸರು ಕಂಡುಬಂದರೂ ಕೂಡ, ನಮ್ಮ ನಾಡಿನ ಪ್ರಮುಖ ಸುಪ್ರಸಿದ್ಧ ಪುಸ್ತಕವ್ಯಾಪಾರಿಗಳಾದ "ಸ. ಸಿ. ಸಾ. ಸ. ಬುಕ್ ಡಿಪೋ" ಅವರು ಆ ಪುಸ್ತಕಗಳ ಹೆಸರನ್ನೇ ಕೇಳಿಲ್ಲವೆಂದು ತಿಳಿಸುವುದರಿಂದ, ಶ್ರೀಮಾರ್ ರತ್ನರು ಈ ಎರಡು ಪುಸ್ತಕಗಳನ್ನು ಹೊರತಾಗಿ ಇನ್ನೇನೂ ಬರೆದಿಲ್ಲವೆಂದು—ಬರೆದಿರ ಬಹುದಾದರೂ ಅವು ಅಚ್ಚಾಗಿಲ್ಲವೆಂದು—ನಂಬಲು ಸಾಕಷ್ಟು ಆಧಾರವಿದೆ. ಆದರೂ ಶ್ರೀಯುತರು ಇನ್ನೂ ಎಷ್ಟೇ ಪುಸ್ತಕಗಳನ್ನು ಬರೆದು ಅವು ಅಚ್ಚಾಗಿದ್ದರೂ, ಅವರ ಸಾಹಿತ್ಯದ ಹುರುಳನ್ನು ಸ್ಥೂಲವಾಗಿ ತಿಳಿಯಲು "ಸ್ಥಾಲೀಪುಲಾಕ ನ್ಯಾಯ"ದ ಪ್ರಕಾರ ಈ ಎರಡೇ ಪುಸ್ತಕಗಳು ಸಾಕು.

ಅದೇ ಸ್ಥಾಲೀಪುಲಾಕ ನ್ಯಾಯವನ್ನು ಆಶ್ರಯಿಸಿ ಆ ಎರಡೂ ಪುಸ್ತಕಗಳನ್ನು ಮತ್ತೂ ಪರೀಕ್ಷಿಸಿದರೆ, 'ಕ. ಪು.'ಯಲ್ಲಿ

"ಪುರಿ! ಪುರಿ! ಕಡಲೆ ಪುರಿ!
ಗರಂ! ಗರಂ! ಕಡಲೆ ಪುರಿ!"

ಎಂದು ಒಂದು ಕಡೆ!

"ಚೆಡ್ಡಿ ಗಿಡ್ಡಿ ಹಾಕಿಕೊಂಡು" ಇತ್ಯಾದಿ
"ಪೀರ ಗಫೂರನ ಕುದುರೆಗಾಡಿ" ಇತ್ಯಾದಿ

ಇನ್ನೊಂದು ಕಡೆ! ಇಂತಹ ಬಾಲಭಾಷಿತವನ್ನು ತೊದಲಿದ ನಾಲಗೆ "ಕ. ನಾ. ಪು." ವನ್ನು ನುಡಿದೀತೆ? ಇತ್ತ "ರ. ಪ" ನೋಡಿ!*

"ಕುಡ್ಸ್ಬಟ್ಟ ಮೋರೀಲ್ನಾ ಬಿದ್ದೋಕ್ಕೇಂಡಿವ್ನೀಂತೇಳಿ
ಎಲ್ಲಾರ ನೆಗ್ತಾರೆ ಸುಮ್ಸುಮ್ಕೇನೆ." . . . !

ಈ ಪುಸ್ತಕದಿಂದ ಉದಾಹರಿಸುವುದಕ್ಕೂ ನಾವು ತಲೆ ತಗ್ಗಿಸಬೇಕಾಗಿದೆ. ಇಂತಹ ಸರ್ವಸಾಮಾನ್ಯ ವ್ಯಾಕರಣವಿಹೀನವಾದ ಆಭಾಸಕವಿತೆಗಳನ್ನು ಬರೆದು ಕನ್ನಡ ಸರಸ್ವತಿಯನ್ನು ಅವಮಾನಗೊಳಿಸಿದ ಆ ಅಧಮ ಲೇಖನಿಯು 'ಕ. ನಾ. ಪು.' ದಂತಹ ಅತ್ಯುತ್ಕೃಷ್ಟವಾದ ಮಹಾಕ್ಷುದ್ರ ಕಾವ್ಯವನ್ನು ಬರೆಯಿತೆಂದೆನ್ನುವ ಬಾಯಿ ರೌರವಾದಿ ನರಕಗಳಿಗೆ ಪಕ್ಕಾಗದಿದ್ದೀತೆ? ಅಂತಹ ಬಾಯಿಗಾಗಿ ಬೇರೊಂದು ಹೊಸ ನರಕ ಸೃಷ್ಟಿಯಾದೀತು!

---

* 'ಕ. ಪು.'ವನ್ನು ಬರೆದ ರಾಜರತ್ನಂ ಅವರೇ 'ರ. ಪ.'ವನ್ನೂ ಬರೆದಿರುವರೆಂದು ಅನೇಕರು ನಂಬಿರುವರಷ್ಟೆ. ಈ ಎರಡು ರಾಜರತ್ನಂಗಳೂ ಬೇರೆ ಬೇರೆ ಎಂಬುದಕ್ಕೆ ಆಂತರಿಕ ಪ್ರಮಾಣಗಳು ಅನೇಕವಾಗಿವೆ. ಇದನ್ನು ಕುರಿತ ವಿಚಾರ ಪರಿಪ್ಲುತವಾದ ಲೇಖನ ಸದ್ಯದಲ್ಲಿಯೇ ಬರುವುದು.

ಮಹಾಕವಿ ಪುರುಷಸರಸ್ವತಿಯ ಶೈಲಿ

'ಕ. ನಾ. ಪು.'ವನ್ನು ಬರೆದ ವಾಣಿಯು ಸಹಜವಾದ ಕವಿವಾಣಿ, ಮಹಾಕವಿ ವಾಣಿ, ದಿವ್ಯವಾಣಿ, ದೇದೀಪ್ಯಮಾನವಾಣಿ, ಅಮೃತವಾಣಿ, ಅಮರವಾಣಿ, ಅನಂತ ವಾಣಿ, ಅನೂನವಾಣಿ, ಅನನ್ಯಸಾಮಾನ್ಯವಾಣಿ. ಉತ್ಕೃಷ್ಟ ಭಾಷಾಶೈಲಿಯಲ್ಲಿ ವಿನಿರ್ಮಿತವಾಗಿರುವ ಈ ಗ್ರಂಥಸಮ್ರಾಜದ ಶೈಲಿಯು ನಿರರ್ಗಳವಾಗಿ ಪ್ರವಾಹ ರೂಪವಾಗಿ ಬಾಣಾಸುಬಾಣವಾಗಿ ಸ್ರೋತಪ್ರಸ್ರೋತಪರಂಪರೆಯಂತೆ ಬೆಂಬತ್ತಿ ಧಾವಿಸುತ್ತದೆ. ಈ ಮಹಾಕವಿಯ ಶೈಲಿಯು ಕರ್ಣಾನಂದಕರವಾಗಿ ಮನೋಹರ ವಾಗಿರುವುದಲ್ಲದೆ ರಮಣೀಯವೂ ಆಗಿದೆ. ಮೃದುಮಧುರಗಂಭೀರಪದಗೂಢಾರ್ಥ ಗುಂಫಿತವಾಗಿಯೂ ಸತ್ಯಸೌಂದರ್ಯಪುಂಜರಂಜಿತವಾಗಿಯೂ ರಾರಾಜಿಸುವ ಈ ಅನ್ಯಾದೃಶವಾದ ಶತಕಾರ್ಥಗಳು ನಾನಾವಿಧಪ್ರಾಸಪರಿಪ್ಲುತವಾಗಿ ಅರ್ಥ ಗಾಂಭೀರ್ಯ ಯುಕ್ತವಾಗಿ ಸಕಲಲಕ್ಷಣಬದ್ಧ ಬಂಧಯುತವಾಗಿವೆ. ಈತನ ಷಟ್ಪದಿಗಳು ಲಲಿತವಾಗಿ ಸರಸವಾಗಿ ಸರಳವಾಗಿದ್ದರೂ ಪ್ರೌಢವಾಗಿಯೂ ದೇಶ್ಯಪದಭೂಯಿಷ್ಠ ವಾಗಿಯೂ ಇವೆ. ಕುಳಕಗಳ ಪ್ರಯೋಗದಲ್ಲಿ ಪಳಗಿದ ಕೈಚಳಕದ ಈ ಕುಳಕ ಪ್ರಿಯನ ಪದಗಳ ಪಂಕ್ತಿಪರಂಪರೆಯು ಮುತ್ತುಕೋದಂತೆ ಹೊಂದಿಕೊಂಡಿದೆ. ಈತನ ಪಾಂಡಿತ್ಯ ಪ್ರೌಢಿಮೆ ಪ್ರತಿಭೆಗಳು ಪರಮಾಶ್ಚರ್ಯಕರವಾಗಿವೆ. ಬಂಧ ಗೌರವ ಬಹು ಸೊಗಸಾಗಿದೆ. ರಚನಾಶಕ್ತಿ ರೋಮಾಂಚಕಾರಕವಾಗಿದೆ. ಈ ಮಹಾ ಕವಿಯ ಓಜಸ್ಸು ತೇಜಸ್ಸುಗಳೇ ಮೊದಲಾದ ಸಕಲ ಸದ್ಗುಣಗಳು ಸಕಲರನ್ನೂ ಸ್ತಂಭೀಭೂತರನ್ನಾಗಿ ಮಾಡುತ್ತವೆ. ಈತನಲ್ಲಿ ದೊರಕುವಂತಹ ಪದಸಾಮಗ್ರಿಯು ಪಂಡಿತಪಾಮರ ಮನೋರಂಜಕವಾಗಿದೆ. ಈತನ ಧಾರಾಳವಾದ ವಾಗ್ಧಾರೆಯು ಲಲಿತವಾಗಿ ಕಿವಿಗಿಂಪಾಗಿ ಹೃದಯಂಗಮವಾಗಿದೆ. ಈತನ ವಾಗ್ಧೋರಣೆಯೂ ವಾಕ್ಪ್ರೌಢಿಮೆಯೂ ಕನ್ನಡ ಸರಸ್ವತಿಯ ಸಿಂಹವಿಷ್ಟರದ ಪರಾಕಾಷ್ಠೆಯನ್ನು ಪ್ರದರ್ಶಿಸುತ್ತವೆ. ಈತನ ಶಬ್ದಾರ್ಥಾಲಂಕಾರಗಳೂ ಅನುಪಮವಾದ ಉಪಮಾನ ಗಳೂ ಕನ್ನಡ ಸಾಹಿತ್ಯದಲ್ಲಿ ನವನವೋನ್ಮೇಷಶಾಲಿನಿಯಾಗಿ ಉಕ್ಕೇರುತ್ತಿವೆ. ಶತ ಕಾರ್ಥಷಟ್ಪದಸ್ರಷ್ಟಾರನಾದ ಈ ಮಹಾಕವಿ ಪುರುಷಸರಸ್ವತಿಯು ಷಟ್ಪದಿ ಒಂದಕ್ಕೆ ಆರೇ ಪಾದಗಳಂತೆಯೂ ಪ್ರತಿ ಶತಕಾರ್ಥವನ್ನೂ ಐವತ್ತೇ ಪದ್ಯಗಳಲ್ಲಿಯೂ ಮುಕ್ತಾಯಗೊಳಿಸಿರುವುದರಲ್ಲಿ ಆತನ ಇಂದ್ರಿಯನಿಗ್ರಹ, ಕರ್ತವ್ಯನಿರ್ವಹಣ ಸಾಮರ್ಥ್ಯ, ಔಚಿತ್ಯಾನೌಚಿತ್ಯಜ್ಞಾನ, ಸತ್ಯಸಂಧತೆ, ಪ್ರತಿಜ್ಞಾಪಾಲನ, ಮನೋ ದಾರ್ಢ್ಯ, ಇತ್ಯಾದಿ ಅಖಿಲ ಅಖಂಡ ಗುಣಗಳೂ ಕಂಡುಬರುವುವು. ಒಂದೇ ಮಾತಿನಲ್ಲಿ ಹೇಳುವುದಾದರೆ ಮಹಾಕವಿ ಪುರುಷ ಸರಸ್ವತಿಯ 'ಕ. ನಾ. ಪು.'ವು

"ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ!"

" ಪರಮಾಲಂಕಾರ ಪ್ರದರ್ಶನ ಪ್ರವೀಣ ಪದ್ಮನಾಭ" ಬಿರುದಾಂಕಿತ ಪುರುಷಸರಸ್ವತಿ

'ಕ. ಪು.' ಬರೆದವರೇ 'ರ. ಪ.' ಬರೆದರೇ ಎಂಬ ಸಂದೇಹವನ್ನು ಇನ್ನೂ ಯಾರೂ ಎತ್ತದಿರುವುದು ನಮಗೆ ಸೋಜಿಗವೆನಿಸಿದರೂ, ಆ ಎರಡರ ಅಥವಾ ಎರಡರಲ್ಲಿ ಒಂದರ ಕರ್ತನು 'ಕ. ನಾ. ಪು.'ವನ್ನು ಬರೆಯಲಿಲ್ಲವೆಂದು ಘಂಟಾಘೋಷವಾಗಿ ಹೇಳಲು ನಮಗಿರುವ ಎರಡನೆಯ ಆಧಾರವೆಂದರೆ, 'ಕ. ನಾ. ಪು.'ದಲ್ಲಿಯೂ ಅದರ ಕರ್ತನಾದವನ ಎರಡನೆಯ ಮಹಾಕ್ಷುದ್ರಕಾವ್ಯವಾದ 'ಹಾ. ಹ.'ದಲ್ಲಿಯೂ ಕಂಡುಬರುವ—ನಾಗವರ್ಮಾದಿ ಆಲಂಕಾರಿಕರಲ್ಲಿ ಕಂಡುಬರದ—ಅನೇಕ ನವೀನ ಅಲಂಕಾರಗಳು.

ನಮ್ಮ ಮಹಾಕವಿಗಿರುವ ಅನೇಕ ಬಿರುದುಗಳಲ್ಲಿ ಮೇಲೆ ಹೇಳಿರುವ "ಪ. ಪ್ರ. ಪ್ರ. ಪ." ಎಂಬುದೂ ಒಂದು. ಇದನ್ನು ಕುರಿತು ವಿಪರೀತಬುದ್ಧಿಯು ಹೀಗೆ ವಿವರಿಸಿದ್ದಾನೆ :

"'ಪರಮು' ಎಂಬುದನ್ನು ಕೇಳಿದೊಡನೆ ಸಾಹಿತ್ಯಜ್ಞರ ಮನಸ್ಸಿಗೆ ಸಂಭವಿಸುವ ಶಬ್ದ 'ಚರಮು' | 'ಚರಮು' ಎಂದರೆ 'ಕಡೆ'ಯದು | ಕಾವ್ಯದ 'ಕಡೆ'ಯ ಅರ್ಧ 'ಉತ್ತರಾ'ರ್ಧ | 'ಉತ್ತರ'ವಲ್ಲದ್ದು 'ಪೂರ್ವಾ'ರ್ಧ | 'ಪೂರ್ವ'ವಲ್ಲದ್ದು 'ಅಪೂರ್ವ' | ಆದ್ದರಿಂದ 'ಪರಮು' ಎಂದರೆ 'ಅಪೂರ್ವ' | ಎಂದರೆ, ಪರಮು=ಅಪೂರ್ವವಾದ ಅಲಂಕಾರಗಳನ್ನು ಪ್ರದರ್ಶಿಸುವುದರಲ್ಲಿ, ನಾಭಿಯಲ್ಲಿ ಪದ್ಮವನ್ನು ಪ್ರದರ್ಶಿಸುವುದರಲ್ಲಿ ಪ್ರವೀಣನಾದ ಪದ್ಮನಾಭನಂತೆ, ಪ್ರವೀಣನಾದವನು ಯಾವನೋ ಅವನು 'ಪ. ಪ್ರ. ಪ್ರ. ಪ.' ||"

ಈ ರೀತಿಯಲ್ಲಿ ಪರಮಾಲಂಕಾರ ಪ್ರದರ್ಶನ ಪ್ರವೀಣನಾಗಿ, ತನ್ನ 'ಕ. ನಾ. ಪು.'ದಲ್ಲಿ ಆದ್ಯಕ್ಷರನ್ಯಾಸ, ರಾಸಭಲಾಂಗೂಲ ಅರ್ಥಾತ್ ರಜಕರಹಸ್ಯ, ತಾಲೀಬುಲಾಕುನ್ಯಾಯ, ವ್ಯರ್ಥ ಎಂಬ ನಾಲ್ಕು ಪರಮಾಲಂಕಾರಗಳನ್ನು ಪ್ರದರ್ಶಿಸಿದ ಪುರುಷ ಸರಸ್ವತಿಯು 'ಹಾ. ಹ.'ದಲ್ಲಿ ಕೂಡ ಅಂತಹದೇ ಹನ್ನೊಂದು ಪರಮಾಲಂಕಾರಗಳನ್ನು ಪ್ರದರ್ಶಿಸಿರುವುದನ್ನೂ, ಇಂತಹ ಯಾವ ಅಲಂಕಾರಗಳೂ 'ಕ. ಪು.', 'ರ. ಪ.'ಗಳಲ್ಲಿ ಕಂಡುಬರುವುದಿಲ್ಲವೆಂಬುದನ್ನೂ ವಾಚಕರು ಗಮನಿಸಬೇಕಾಗಿ ವಿನಂತಿ.

"ಹಾರ್ಮೋನಿಯಂ ಹರಣ"ದಲ್ಲಿ ಪ್ರಯೋಗಿಸಿರುವ ಹನ್ನೊಂದು ಪರಮಾಲಂಕಾರಗಳು

೧. **ಸತಿಪತಿಸಮಾನಸ್ಥಾನಾಲಂಕಾರ** (ಪದ್ಯ ೬)—ಸತಿಪತಿಯರಿಗೆ ಸಮಾನಸ್ಥಾನವು ಸಲ್ಲಬೇಕೆಂಬ ತತ್ವದ ಪ್ರಕಾರ, ಗಂಡನಿಂದ ಹೆಂಡತಿಗೆ ಹೆಸರು ಬರಬಹುದಾದರೆ ಆ ಹೆಂಡತಿಯಿಂದ

ಅದೇ ಗಂಡನಿಗೂ ಹೆಸರು ಬರಬಹುದೆಂಬ ನ್ಯಾಯದ ಪ್ರಕಾರ, ಅಕಾರಾಂತನಾದ 'ಶಿವ'ನಿಂದ ಅವನ ಹೆಂಡತಿಗೆ ಎಕಾರಾಂತ 'ಶಿವೆ' ನಾಮಕರಣವಾದಂತೆ ಎಕಾರಾಂತ 'ಗಿರಿಜೆ'ಯ ಗಂಡನನ್ನು ಅಕಾರಾಂತ 'ಗಿರಿಜ'ನೆಂದು ಸಂಬೋಧಿಸಿರುವುದೇ ಈ ಪರಮಾಲಂಕಾರವು. ಇದನ್ನು ಪಾಮರರು "ಅಮ್ಮಾವ್ರ ಗಂಡಾಲಂಕಾರ"ವೆನ್ನುವರು.

೨. **ಟವರ್ಗ ಪ್ರಥಮಾಕ್ಷರ ದ್ವಿತ್ವ ಪಂಚದಶಾಲಂಕಾರ** (ಪದ್ಯ ೭)—ವಿವಿಧಸ್ವರ ಸಹಿತವಾದ ಟಕಾರಕ್ಕೆ ಟಒತ್ತು ಕೂಡಿದುದು ಒಂದು ಷಟ್ಪದಿಯಲ್ಲಿ ಹದಿನೈದು ಬಾರಿ ತಲೆದೋರಿದರೆ ಈ ಅಲಂಕಾರವೆನ್ನಿಸುತ್ತದೆ.

೩. **ಸ್ತಸ್ಥಪ್ರಾಸಾಲಂಕಾರ** (ಪದ್ಯ ೮)—ಷಟ್ಪದಿಯ ಪ್ರಾಸಸ್ಥಾನದಲ್ಲಿ ೧, ೨, ೪, ೫ ನೆಯ ಪಾದಗಳಲ್ಲಿ 'ಸ್ತ'ಕಾರವೂ ೩, ೬ನೆಯ ಪಾದಗಳಲ್ಲಿ 'ಸ್ಥ'ಕಾರವೂ ಬರಲು ಈ ಅಲಂಕಾರವಾಗುವುದು.

೪. **ಪರಪಂಕ್ತಿ ಪ್ರಾರಂಭಾಲಂಕಾರ** (ಪದ್ಯ ೧೦)—ಒಬ್ಬ ಕವಿಯ ಒಂದು ಪಂಕ್ತಿಯಿಂದ ಬೇರೊಬ್ಬ ಕವಿಯು ತನ್ನ ಪಂಕ್ತಿಯನ್ನು ಪ್ರಾರಂಭಿಸುವ ಈ ಅಲಂಕಾರಕ್ಕೆ ರಾಘವಾಂಕನ "ನಡೆವರೆಡಹದೆ" ಎಂದು ಮೊದಲಾಗುವ ಪದ್ಯ ನೋಡಿ.

೫. **ತ್ರಿತ್ರತ್ರಿತ್ರಿ ಪ್ರಾಸಾಲಂಕಾರ** (ಪದ್ಯ ೧೪)—ಮೇಲಿನ ಮೂರನೆಯ ಅಲಂಕಾರದಂತೆ ಪ್ರಾಸಸ್ಥಾನದಲ್ಲಿ ಮೂರು ತ್ರಿಕಾರಗಳನ್ನೂ ಮೂರು ತ್ರಕಾರಗಳನ್ನೂ ಪ್ರಯೋಗಿಸುವುದು.

೬. **ಮೌನಮಾರ್ತಾಂಡ ಮಹಾಲಂಕಾರ** (ಪದ್ಯ ೧೬)—ಯೆಂಕಳ ತಾಯಿಯನ್ನು ಈಯೊಂದು ಪದ್ಯದ ಮೊದಲ ಪಾದದ ಕೊನೆಯಲ್ಲಿ ಮಾತ್ರ ಸ್ಮರಿಸಿ, ಕಾವ್ಯದ ಉಳಿದೆಡೆಯಲ್ಲೆಲ್ಲ ಆಕೆಯ ವಿಷಯದಲ್ಲಿ ಕವಿಯು ಮೌನವನ್ನು ಅವಲಂಬಿಸಿರುವುದರಿಂದ ಈ ಅಲಂಕಾರಕ್ಕೆ ಈ ಹೆಸರು ಬಂದಿದೆ.

೭. **ತವರ್ಗ ತೃತೀಯಾಕ್ಷರ ದ್ವಿತ್ವ ದಶಕಾಲಂಕಾರ** (ಪದ್ಯ ೧೭.) ಮೇಲಿನ ಎರಡನೆಯ ಅಲಂಕಾರದಂತೆ ವಿವಿಧ ಸ್ವರ ಸಹಿತವಾದ ದಕಾರಕ್ಕೆ ದಒತ್ತು ಕೂಡಿದುದು ಒಂದು ಷಟ್ಪದಿಯಲ್ಲಿ ಹತ್ತು ಸಲ ಕಾಣಿಸಿಕೊಂಡರೆ ಈ ಅಲಂಕಾರವೆನಿಸುತ್ತದೆ.

೮. **ಏಕಜೀವ ದೇಹದ್ವಯ ನ್ಯಾಯಾಲಂಕಾರ** (ಪದ್ಯ ೩೯)—'ಮೈಯೆರಡು ತಾನುಸಿರೊಂದೊ' ಎಂಬಂತೆ ಗೊರಕೆಬಿಡುವುದು 'ಏಕಜೀವ ದೇಹದ್ವಯ ನ್ಯಾಯ.' ತನ್ನ್ಯಾಯವನ್ನು ಬಳಸಿದ ಅಲಂಕಾರವು ತನ್ನ್ಯಾಯಾಲಂಕಾರವು.

೯. **ಊನಾಲಂಕಾರ** (ಪದ್ಯ ೪೧)—ಐವತ್ತು ಷಟ್ಪದಿಗಳನ್ನು ಮೀರುವುದಿಲ್ಲನೆನ್ನುವುದಕ್ಕಾಗಿಯೇ ಐವತ್ತರಲ್ಲಿ ಒಂದು ಷಟ್ಪದಿಯನ್ನು ಊನಮಾಡಿಕೊಳ್ಳುವುದು 'ಊನಾಲಂಕಾರ'ವು.

೧೦. **ಶೂದ್ರಶ್ರೋತ್ರಿಯ ನ್ಯಾಯಾಲಂಕಾರ** (ಪದ್ಯ ೪೨)—ಅಶ್ಲೀಲವನ್ನು ಆಡಬಾರದೆಂದು ಬಹಿರಂಗದಲ್ಲಿ ಬೋಧಿಸುವ ಶ್ರೋತ್ರಿಯರು ಮನೆಗೆಲಸದ ಶೂದ್ರನೂ ಕೇಳಲಾರದೆ ಕಿವಿ ಮುಚ್ಚಿಕೊಳ್ಳುವಂತಹ ಅಶ್ಲೀಲವನ್ನು ಒಳಮನೆಯೊಳಗಾಡುವುದು 'ಶೂದ್ರಶ್ರೋತ್ರಿಯ ನ್ಯಾಯ'. ಮೇಲಿನ ಎಂಟನೆಯ ಅಲಂಕಾರದಂತೆ ತನ್ನ್ಯಾಯ—ತನ್ನ್ಯಾಯಾಲಂಕಾರ.

೧೧. **ಸಂದೇಹ ಸಂದೋಹಾಲಂಕಾರ** (ಪದ್ಯ ೪೯)—ಸಂದೇಹಗಳ ಸಂದೋಹಗಳನ್ನು ಸಾಲಿಡಿಸುವುದು ಇದೊಂದು ಪರಮಾಲಂಕಾರ.

"ಕರ್ಣಾಟಕ ಪುರಾಣ"ದ ಕಾಲ ನಿರ್ಣಯ

'ಕ. ಪು.', 'ರ. ಪ.'ಗಳ ಕರ್ತನು 'ಕ. ನಾ. ಪು.'ವನ್ನು ಬರೆದವನಲ್ಲವೆಂಬುದಕ್ಕೆ ಇರುವ ಇನ್ನೊಂದು ಅಗಾಧವಾದ ಸಾಕ್ಷಿಯೆಂದರೆ 'ಕ. ನಾ. ಪು.'ವನ್ನು ಬರೆದ ಕಾಲ. 'ಕ. ನಾ. ಪು.'ದ ಕಡೆಯ ಪದ್ಯ ಹೀಗಿದೆ:

ಶಾಂತವಾಗಲಿ ನಮ್ಮ ಜನ ಸಿರಿ|
ಕಾಂತನೊಲಿಯಲಿ ನೆಲಸಿ ನಿಲಲಿ ನಿ|
ತಾಂತ ಮೀ ಕರ್ಣಾಟಕವು ಸಹಣತ್ವವಾಗಿಯೆ ತಾ||
ಕ್ರಾಂತಿಕಾರಕನಲ್ಲ ನಾ ವಿ|
ಭ್ರಾಂತಿಗೊಂಡವನಲ್ಲಲಾ ವಿ|
ಶ್ರಾಂತಿಗೊಳುವೆನು ಮುಗಿಯಿತೀ ಶತಕಾರ್ಧಷಟ್ಪದವು||

ಇದರಿಂದ ಈ ಶತಕಾರ್ಧಷಟ್ಪದ ಮುಗಿದ ಕಾಲವು ಆರು ಪಾದಗಳಲ್ಲಿ ನಿರ್ಣಯವಾಗುತ್ತದೆ. ಹೇಗೆಂದರೆ:

(೧) ಶಾಂತವಾಗಲಿ ನಮ್ಮ ಜನ:—
ಶಾಂತ—ರಸಗಳಲ್ಲಿ ಒಂಬತ್ತನೆಯದು ∴ ಶಾಂತ=9.
ವಾಗಲಿ—ವಾ-ಗ-ಲಿ—ಮೂರು ಅಕ್ಷರ ∴ ವಾಗಲಿ=3.
ನಮ್ಮ—ನ-ಮ್ಮ—ಎರಡಕ್ಷರ ∴ ನಮ್ಮ=2.
ಜನ—ಅನಿರ್ದಿಷ್ಟ ಸಂಖ್ಯೆ ∴ ಜನ=0.
∴ ಶಾಂತವಾಗಲಿ ನಮ್ಮ ಜನ=9320.

(೨) ಸಿರಿಕಾಂತನೊಲಿಯಲಿ ನೆಲಸಿ ನಿಲಲಿ ನಿತಾಂತ:—
ಸಿರಿಕಾಂತ—ತ್ರಿಮೂರ್ತಿಗಳಲ್ಲಿ ಎರಡನೆಯವನು ∴ ಸಿರಿಕಾಂತ=2.
ನೊಲಿಯಲಿ—ಅರ್ಥಾತ್ ನುಲಿಯಲಿ. (ಕೊಡು—ಕುಡು, ಸೊಂಡಿಲು—ಸುಂಡಿಲು, ತೊಡು—ತುಡು, ಒಳ್—ಉಳ್ ಮುಂತಾದುವನ್ನು ಹೋಲಿಸಿರಿ)—ನುಲಿಯುವುದು ಯಾವುದು? ಹೊಟ್ಟೆ—ಹೊಟ್ಟೆ ಎಂದರೆ? ಕರುಳು—ಎಂದರೆ ಸಣ್ಣಕರುಳು, ದೊಡ್ಡಕರುಳು— ∴ ನೊಲಿಯಲಿ=2.
ನೆಲಸಿ ನಿಲಲಿ—ಸ್ಥಿರವಾಗಿ ಮೇರುವಿನಂತೆ ನಿಲ್ಲಲಿ—ಮೇರುವು ಅಸದೃಶವಾದ ಪರ್ವತ— ∴ ನೆಲಸಿ ನಿಲಲಿ=1.
ನಿತಾಂತ—ಸದಾ—ಕೊನೆ ಮೊದಲುಗಳಿಲ್ಲದೆ—ಚಕ್ರದಂತೆ ∴ ನಿತಾಂತ=0.
∴ ಸಿರಿಕಾಂತ ನೊಲಿಯಲಿ ನೆಲಸಿ ನಿಲಲಿ ನಿತಾಂತ=2210.

(೩) ಮೀ ಕರ್ಣಾಟಕವು ಸಹ ಣತ್ವವಾಗಿಯೆ ತಾ:
ಸಹ—ಕೂಡುವುದು—ಮೇಲೆ ಬಂದ ಎರಡು ಸಂಖ್ಯೆಗಳನ್ನೂ ಕೂಡುವುದು—
∴ 9320+2210=11530.

(೪) ಕ್ರಾಂತಿಕಾರಕನಲ್ಲ ನಾ:—

ಕ್ರಾಂತಿ—ತಲೆಕೆಳಗು ಮಾಡುವುದು—ಯಾವುದನ್ನು? ಮೇಲೆ 'ಸಹ' ಮಾಡಿಬಂದದ್ದನ್ನು

∴ 11530×ಕ್ರಾಂತಿ=03511=3511.

(೫) ವಿಭ್ರಾಂತಿಗೊಂಡವನಲ್ಲಲಾ :—

ವಿಭ್ರಾಂತಿ=ಭ್ರಾಂತಿ—ಸಮಾನಾರ್ಥಕ—ಹೇಗೆ ಬಂತು? ಮೊದಲ ಅಕ್ಷರ ನಾಶಮಾಡಿದ್ದರಿಂದ ∴ ಮೊದಲ ಸಂಖ್ಯೆ ನಾಶಮಾಡಿದರೆ ಉಳಿಯುವುದು—3511ನಲ್ಲಿ 3 ತೆಗೆದರೆ—511.

(೬) ವಿಶ್ರಾಂತಿಗೊಳುವೆನು ಮುಗಿಯಿತೀ ಶತಕಾರ್ಧಷಟ್ಪದವು :—

ವಿಶ್ರಾಂತಿ—ಲೆಕ್ಕಾಚಾರ ನಿಲ್ಲಿಸುವುದು.

∴ ಕಡೆಗೆ ಉಳಿದದ್ದು—511.

∴ ಶಕ 511 ರಲ್ಲಿ "ಮುಗಿಯಿತೀ ಶತಕಾರ್ಧ ಷಟ್ಪದವು"[1]

ಇದರಿಂದ ಒಂದು ಮಹತ್ವದ ವಿಷಯ ನಿರ್ಧರವಾಗುತ್ತದೆ. ಇದುವರೆಗೂ ಒಂಭತ್ತನೆಯ ಶತಮಾನದ ನೃಪತುಂಗನ "ಕವಿರಾಜಮಾರ್ಗ"[2]ವನ್ನು ಬಿಟ್ಟರೆ ಬೇರೆ ಯಾವ ಗ್ರಂಥವೂ ಉಪಲಬ್ಧವಾಗಿರಲಿಲ್ಲ. ಈಗ ಅದಕ್ಕಿಂತ ಮೂರು ಶತಮಾನ ಮುಂಚಿನ ಆರನೆಯ ಶತಮಾನದ ಕಡೆಯ ಮಹಾಕ್ಷುದ್ರಕಾವ್ಯವೊಂದು ಬೆಳಕಿಗೆ ಬಂದಂತಾಯಿತು. ಜೈನನಾದ ನೃಪತುಂಗನಿಗಿಂತ ಮೂರು ಶತಮಾನ ಹಿಂದಿನ ಕಾವ್ಯವಾದ 'ಕ. ನಾ. ಪು.'ವನ್ನು ಬರೆದ ಈ ಕವಿಯು ಬೌದ್ಧನಾಗಿದ್ದಿರಬಹುದೆಂಬ ನಮ್ಮ ಸಂಶಯವನ್ನು ಇಲ್ಲಿ ಸಾಕ್ಷೀಕರಿಸಿ ಸ್ಥಿರಪಡಿಸಲು ಸ್ಥಳಸಂಕೋಚದಿಂದಲೂ ಅಪ್ರಸ್ತುತವಾಗಬಹುದೆಂಬ ಮನಸ್ಸಂಕೋಚದಿಂದಲೂ ನಾವು ಹಿಂದೆಗೆದಿದ್ದೇವೆ.

ಪಂಚ ಸಂಪಾದಕರ ಪ್ರಚಂಡ ಪ್ರತಿಜ್ಞೆ

'ಕ. ನಾ. ಪು.'ವನ್ನು ಬರೆದವನು ಆರನೆಯ ಶತಮಾನದ ಪುರುಷಸರಸ್ವತಿಯೇ ಎಂಬುದಕ್ಕೆ ಆಧಾರಗಳು ಇಷ್ಟು ಬಲವತ್ತರವಾಗಿರುವಾಗ, 'ಕ. ಪು.' 'ರ. ಪ.'ಗಳ ಕರ್ತನಾದ ಇಂದಿನವನು ಈ ಗ್ರಂಥವನ್ನು ಬರೆದನೆಂದು ಹೇಳಲು ಬಾಯಾದರೂ ಹೇಗೆ ಬಂದೀತು? 'ಕ. ಪು.', 'ರ. ಪ.' ಎರಡನ್ನೂ ಬರೆದಿರಬಹುದಾದ ಶ್ರೀಮಾನ್ ರಾಜರತ್ನರು ಈ 'ಕ. ನಾ. ಪು.'ವನ್ನು ಬರೆದರೆಂಬ ವಾದವು ಕೇವಲ ಹಾಸ್ಯಾಸ್ಪದ

---

[1] ಈ ಕಾವ್ಯವು ಪಂಪನಿಗಿಂತ ಪ್ರಾಚೀನವೆಂಬುದಕ್ಕೆ 'ಕ. ನಾ. ಪು.'ದ ೩೮ ಮತ್ತು ೪೧ನೆಯ ಪದ್ಯಗಳ ಅಡಿಟಿಪ್ಪಣಿ ನೋಡಿ.

[2] 'ಕವಿರಾಜ ಮಾರ್ಗ'ದಲ್ಲಿ 'ತ್ರಿಪದಿ'ಯನ್ನು ಹೆಸರಿಸುವ ನೃಪತುಂಗನು, ಪುರುಷ ಸರಸ್ವತಿಯ ಯಾವುದಾದರೂ 'ಷಟ್ಪದಿ'ಯ ಮೂರು ಪಾದಗಳು ಮಾತ್ರ ಉಪಲಬ್ಧವಾಗಿ, ಅದನ್ನೇ 'ತ್ರಿಪದಿ'ಯೆಂದು ಭ್ರಮಿಸಿದ್ದಾನೊ!

ವಾದದ್ದು. ದಂಡೆಗಳಲ್ಲಿ ಪಂಡಿತನಾದವನು ದಂಡಕ ಬರೆಯುವುದು, ವ್ಯಾಯಾಮ ವಿಶಾರದನು ವ್ಯಾಕರಣಪಟುವಾಗುವುದು, ಸಪ್ಪಟ್ಟು ಶಿಕ್ಷಕನು ಷಟ್ಪದಿ ಬರೆಯುವುದು, ಕುಸ್ತಿ ಕಲಿಸುವವನು ಕಂದ ಕಟ್ಟುವುದು, 'ಕ. ಪು.' 'ರ. ಪ.'ಗಳ ಕರ್ತನು 'ಕ. ನಾ. ಪು.'ವನ್ನು ರಚಿಸುವುದು—ಈ ಮುಂತಾದುವು ರೋಮನ್ ರಿಂಗ್ಸಿನ ರುಸ್ತುಂ ಕೈಯಿ ರಾಮಾಶ್ವಮೇಧ ಬರೆದಂತೆ ಮೊಲದ ಕೊಂಬು, ಮರಳ ತುಪ್ಪ!

ಈಗಲೂ ಒಂದು ಮಾತು. ಪುರುಷಸರಸ್ವತಿಯ 'ಕ. ನಾ. ಪು.'ವನ್ನು 'ಕ. ಪು.', 'ರ. ಪ.'ಗಳ ಕರ್ತರೇ ಬರೆದುದು ಸತ್ಯವಾದರೆ, (ಅದು ಹೇಗಾದೀತು?) ಅದೇ ಮಹಾಕವಿಯ—ಈಗ ಪ್ರಕಟಿಸಿರುವ 'ಹಾ. ಹ.'ವನ್ನು ಬಿಟ್ಟು ಉಳಿದ—(೧) ಬೈರಿಗೇಂದ್ರ ಭಯಾನಕವು ಅಥವಾ ಭಯಂಕರ ಬೃಹದ್ಬೈರಿಗೇಶ್ವರ ಮಹಾಪುರಾಣವು, (೨) ಛೀರಾಮ ಚರಿತವು ಅಥವಾ ಶಾರದಾ ಸ್ವಯಂವರವು, ಮತ್ತು (೩) ದಶಕಾರ್ಧ ಕುಮಾರ ಚರಿತವು—ಎಂಬ ಮೂರು ಗ್ರಂಥಗಳನ್ನು ಆ 'ಕ. ಪು.', 'ರ. ಪ.'ಗಳ ಕರ್ತರು ತಾವೇ ಪ್ರಕಟಿಸಲಿ. ಇಲ್ಲದಿದ್ದರೆ, ಈ ಮಹಾಕ್ಷುದ್ರಕಾವ್ಯಗಳು ತಮ್ಮವು ಅಲ್ಲವೆಂದು ಒಪ್ಪಿಕೊಳ್ಳಲಿ!

ಅದಕ್ಕಾಗಿ ಇನ್ನು ಆರು ತಿಂಗಳ ಕಾಲ ನಾವು ಪುರುಷಸರಸ್ವತಿಯ ಯಾವ ಕಾವ್ಯವನ್ನೂ ಪ್ರಕಟಿಸುವುದಿಲ್ಲವಾಗಿ ಪ್ರತಿಜ್ಞೆಮಾಡಿದ್ದೇವೆ. ಆದರೆ, ಪುರುಷ ಸರಸ್ವತಿಯ ಮೇಲೆ 'ಕ. ಪು.' 'ರ. ಪ.'ಗಳ ಕರ್ತರ (ಮಿತ್ರರು ಹಾಗೂ ಅವರೂ) ನಡೆಸುತ್ತಿರುವ ಅಸಹ್ಯ ಅಪಪ್ರಚಾರವನ್ನು ಎದುರಿಸುವುದಕ್ಕಾಗಿ, ನಾವುಗಳು ಮುಂದಿನ ತಿಂಗಳ ಮೊದಲಿನಲ್ಲಿ **"ಸನಾತನ ಸಾರಾಸಾರ ಸರ್ವಾಚಾರ ಸಂರಕ್ಷಕ"**ರೆಂಬ ಅಪರಾಖ್ಯೆಯ **"ಹಾಳೂರಿನ ಹಳೆಯ ಹುಲಿಗಳ"** ಸಾಹಿತ್ಯ ಶಾಖೆಯ ಆಶ್ರಯದಲ್ಲಿ **ಮಹಾಕವಿ ಪುರುಷಸರಸ್ವತಿಯ ಜಯಂತಿಯನ್ನು** ಆಚರಿಸಲು ನಿರ್ಧರಿಸಿದ್ದೇವೆ. ಅದೇ ಸಮಯದಲ್ಲಿ **"ಪುರುಷಸರಸ್ವತಿ ಪ್ರಶಸ್ತಿ"** ಅಥವಾ **"ಅನಿರೀಕ್ಷಿತ ಅನಪೇಕ್ಷಿತ ಅನಾಮಕ ಅನೇಕಾಭಿಪ್ರಾಯ ಸಂಗ್ರಹ"**ವೆಂಬ ಸತ್ಕೃತಿಯ ಸ್ಮಾರಕ ಸಂಪುಟವನ್ನೂ ಪ್ರಕಟಿಸಬೇಕೆಂದು ತೀರ್ಮಾನಿಸಿದ್ದೇವೆ. ಈ ಸಂಪುಟಕ್ಕೆ ನಾವು ಯಾವ ಅಭಿಪ್ರಾಯಗಳನ್ನೂ ಅಪೇಕ್ಷಿಸುವುದಿಲ್ಲ, ನಿರೀಕ್ಷಿಸುವುದೂ ಇಲ್ಲ. ಆದರೆ ಬರುವ ಅಭಿಪ್ರಾಯಗಳೆಲ್ಲವೂ ಅನಾಮಕವಾಗಿರಬೇಕೆಂಬ ನಿಯಮವನ್ನು ಸಂಪುಟದಲ್ಲಿ ಸಹಕರಿಸಿ ಪ್ರೋತ್ಸಾಹಿಸುವವರೆಲ್ಲರೂ ಗಮನಿಸಬೇಕಾಗಿ ವಿನಂತಿ.

ಇಂತು

ಸಿರಿಗನ್ನಡಿಗರ ಡಿಂಗರಿಗರು

"ಗುಪ್ತ ಸಂಪಾದಕ ಪಂಚಕ."

"ಹಾರ್ಮೋನಿಯಂ ಹರಣ"ದ ವಸ್ತುಪರಿಚಯ

ಈ ಶತಕಾರ್ಧ ಷಟ್ಪದವು ಐದು ದಶಕಗಳಲ್ಲಿ ರಚಿತವಾಗಿದೆ. ಇದು ಒಂದೇ ಒಂದು ಪ್ರತಿ ದೊರಕಿದೆ. ಆದ್ದರಿಂದ ಪಾಠಾಂತರಗಳಿಲ್ಲ. ಇದಕ್ಕೆ ವಿಪರೀತ ಬುದ್ಧಿ ವ್ಯಾಖ್ಯಾನ ಬರೆದಿಲ್ಲ.

ಮೊದಲನೆಯ ದಶಕ: ಕವಿಯು ತ್ರಿಮೂರ್ತಿಗಳನ್ನು ಸ್ಮರಿಸಿ (೧), ತನ್ನ ಸಂಪ್ರದಾಯ ಪ್ರೇಮವನ್ನರುಹಿ (೨), ಸ್ವಪ್ರಶಂಸೆಯನ್ನೂ (೩-೬) ವಾಚಕ ನಿಂದೆಯನ್ನೂ (೭-೧೦) ಸಾಂಗವಾಗಿ ನೆರವೇರಿಸುತ್ತಾನೆ.

ಎರಡನೆಯ ದಶಕ: ದೇವತಾಪ್ರಾರ್ಥನೆ (೧೧)—ಜೈಳೂರ ವರ್ಣನೆ (೧೨, ೧೩)—ವೆಂಕಟಾರ್ಯರು ವೆಂಕಟೇಶ ವರದಿಂದ ವೆಂಕುವನ್ನು ಪಡೆದದ್ದು (೧೪-೧೫)—ಆಕೆಗೆ ವಯಸ್ಸಾಗಲು ಗಾಂಧರ್ವ ವಿದ್ಯೆಗೆ ನಿಶ್ಚಯಿಸಿದ್ದು (೧೬)—ಅವರ ಸಂಗೀತ ಸಮರ ಕೋಲಾಹಳ (೧೭-೨೦).

ಮೂರನೆಯ ದಶಕ: ಪಕ್ಕದ ಮನೆಯಲ್ಲಿ ಪರೀಕ್ಷೆಗೆ ಓದುತ್ತಿದ್ದ ನಿಂಗನೆಂಬ ನಾಯಕನ ಪ್ರಾರ್ಥನೆ (೨೧-೨೫), ಅದರ ನಿರಾಕರಣೆಗಾಗಿ ನಾಯಕ ನಿಂಗನ ಪ್ರಲಾಪ (೨೬-೨೯)—ಹಾರ್ಮೋನಿಯಮ್ಮನ್ನು ಕದಿಯಲು ನಾಯಕನ ನಿರ್ಧಾರ (೩೦).

ನಾಲ್ಕನೆಯ ದಶಕ: ನಿಂಗನು ರಾತ್ರಿಯಾಗುವುದನ್ನು ಕಾಯುತ್ತಿದ್ದುದು (೩೧-೩೮)—ನಿಂಗನ ಗೃಹಪ್ರವೇಶ (೩೯)—ನಿಂಗ ನಿರ್ಬಂಧನ (೪೦).

ಐದನೆಯ ದಶಕ: ಕವಿಯು ಪ್ರತಿಜ್ಞೆ (೪೧)—ನಾಯಕನನ್ನು ಶಿಕ್ಷಿಸಿದ್ದು (೪೨-೪೭)—ನಿಂಗ ನಿರ್ಧಾವನ (೪೮)—ಕವಿಯು ಸಂದೇಹ ಸಂದೋಹ (೪೯)—ಕಾವ್ಯಸಮಾಪನ* (೫೦).

---

* ಈ ಪದ್ಯದಲ್ಲಿ ಕವಿಯು ತನಗೆ ತ್ರಿಮೂರ್ತಿಗಳಲ್ಲಿರುವ ಸಮಾನವಾದ ಪೂಜ್ಯಭಾವವನ್ನು ವ್ಯಕ್ತಗೊಳಿಸಿದ್ದಾನೆ. ಯಾವ ಕ್ರಮದಲ್ಲಿ ಹೇಳಿದರೂ ತ್ರಿಮೂರ್ತಿಗಳಲ್ಲಿ ಒಬ್ಬನ ಹೆಸರು ಮಾತ್ರ ಮೊದಲು ಬರುವುದರಿಂದ, ಒಬ್ಬನನ್ನು 'ಮೊದಲಿ'ನಲ್ಲೂ ಇನ್ನೊಬ್ಬನನ್ನು 'ಪ್ರಾರಂಭ'ದಲ್ಲೂ ಉಳಿದವನನ್ನು 'ಆದಿ'ಯಲ್ಲೂ ಸ್ಮರಿಸಿ, ಇಂಗ್ಲಿಷಿನಲ್ಲಿ ಹೇಳುವಂತೆ ಮೂವರನ್ನೂ 'Bracket' ಮಾಡಿದ್ದಾನೆ.

ಹಾರ್ಮೋನಿಯಂ ಹರಣವು*

ಅರ್ಥಾತ್

ವೆಂಕಟೇಶ ಹಗರಣವು

ಅಥವಾ

ಸಿಂಗ ನಿರ್ಯಾಣವು

ಎಂಬ

ಹಾರ್ಮೋನಿಯಮ್ಮನ್ನು ಹರಣಮಾಡಲು ಹೋದವನ
ಹರಣವು ಹರಣವಾದ
ಹ(ಗ)ರಣವು

ಪೀಠಿಕಾ ಪ್ರಕರಣವೆಂಬ ಮೊದಲ ದಶಕವು

ಶ್ರೀ ಗಿರಿಜೆ ಸರಸತಿಯರೊಲಿದೆನ
ಗೀಗೆ ಸನ್ಮಂಗಳವನೀ ಕೃತಿ
ಗಾಗಿಯೊಲಿಸುತೆ ಹರಿಯ ಹರನ ಹಿರಣ್ಯಗರ್ಭರನು |
ಮೂಗುಬೆರಳಿನ ಜನರು ನೆರೆ ತಲೆ
ದೂಗುವಂತಿರೆ ನುಡಿಯು ನಡಸುತೆ
ಲಾಗಿನಲಿ ಹಾರ್ಮೋನಿಯಂ ಹರಣವನು ಬಣ್ಣಿಪೆನು ||೧||

ಶರಣನಾಗಿಯೆ ಸಂಪ್ರದಾಯಕೆ
ನರ ನಿಲಿಂಪರ ಪದವ ವೈಶ್ವಾ
ನರನ ತೇಜವ ಪಡೆದನಮೃತತ್ವದ ರಹಸ್ಯವನು |
ಮರಣಭಯವನು ದಾಟಿ ಸಾಕ್ಷಾತ್
ಪರಮಪದವನು ಪಡೆಯಲೋಸುಗ
ಮೆರೆವೆ ಕವಿವಾಚಕರ ಬಳಕೆಯ ನುತಿಯ ನಿಂದೆಗಳ ||೨||

---

* 'ಹಾ. ಹ.' 'ಕ. ನಾ. ಪು.'ಗಳಂ ತಾ |
ನೋಹೋ ಪುರುಷಸರಸ್ವತಿ ರಚಿಸಿದ ಬಳಿಕಾ ||
ದೇಹವನಚಿರವನುಳಿದಾ |
ಸಾಹಸಿ ಸಿಂಗನೊಲಮರರ ಪದಕ್ಕೆ ಸಂದಾ ||
(ಹಾಳೂರಿನ ಹುಲ್ಲುಗುಡ್ಡೆ ಶಾಸನ, ೩೭.)

ಪೆಸರಿನಲಿ ನಾ ಪುರಿಸಸರಸತಿ
ಹಸುರು ಹುಲ್ಲಿನ ಮೇಲೆ ಮಂಜಿನ
ಕುಸುರಿಕೆಲಸದ ಕುಶಲಕರ್ಮದ ಸುಣುವು ನಯಗಾರ|
ಮಸೆದಹಲ್ಲಿನದೆರಡುಹಿಡಿ ಗರ
ಗಸದ ಕುಯಿತವನಾರ್ಪುದಲ್ಲದೆ
ರಸರಸಾಂತರಗಳಸು ಬಣ್ಣಿಸಬಲ್ಲುದೆಸ್ನಳವು ||೩||

ಪುರುಷನಾಗಿ ಸರಸ್ವತಿಗೆ ತಾ
ವರೆಯ ಮನೆಯಲಿ ಜನಿಸಿ ಪಳವಾ
ತೊ[1]ರೆದು ಲೋಕವ ಪೊರೆದ ಲಕ್ಷ್ಮೀರಮಣಸಣುಗನೊಲು|
ಪುರುಷಸರಸತಿಯೆನಿಸಿ ತಾವರೆ
ಪುರದ ಬಸಿರಲಿ ಜನಿಸಿ ಪಳವಾ
ತೊ[2]ರೆದು ಕಬ್ಬವ ಬರೆದ ಲಕ್ಷ್ಮೀರಮಣಸುತನಾನು[3] ||೪||

ವೇದ ಮಂದರ ಮೇದಿನಿ ಪ್ರ
ಹ್ಲಾದ ಬಲಿ ಮೊದಲಾದವರ ನೆರೆ
ಕಾದ ತನ್ನೈದಾದಿಯುವತಾರದಲಿ ಬಿದ್ದವರ|
ಉದ್ಧರಿಸಿ ಮಲೆತವರ ತಾ ತೆಗೆ
ದೊದ್ದ ಹರಿಯಂತೆದ್ದು ಮೂಲೆಗೆ
ಬಿದ್ದ ಹಳೆಯದನುದ್ಧರಿಸುವೆನು ಹೊಸದ ತೆಗೆದೊದ್ದು ||೫||

ಮೂರುಕಣ್ಣಿನ ಮೂರುಶೂಲದ
ಆರುಮುಖದ ಕುಮಾರಕನ ಜಲ
ಧಾರೆ ಗಂಗಾದೇವಿ ಜಡೆಯೊಳಗಾದ ಗಿರಿಜನೊಲು|
ಮೂರು ಹೆಸರಿನ ಮೂರು ಕಾವ್ಯದ[4]
ಆರುಪಾದದ ಭಾಮಿನಿಯ ವಾ
ಗ್ಧಾರೆ ನುಡಿಯೊಳಗಾದ ಪರ್ವತನಳಿಯ[5] ನಾನಲ್ತೆ ||೬||

---

[1] ವೇದ. [2] ಹಲವು ಮಾತು. [3] ತಂದೆಯ ಹೆಸರು ಲಕ್ಷ್ಮೀಕಾಂತ ಅಥವಾ ಲಕ್ಷ್ಮೀಪತಯ್ಯ.

[4] 'ಕ. ನಾ. ಪು.', 'ಹಾ. ಹ.' ಮತ್ತು 'ಬೈರಿಗೇಂದ್ರ ಭಯಾನಕ.' ಈ ಪದ್ಯದಲ್ಲಿಯ ಅಲಂಕಾರ: 'ಸತಿಪತಿ ಸಮಾನಸ್ಥಾನಾಲಂಕಾರ.'

[5] ಇವನ ಮಾವನ ಹೆಸರು 'ಬೆಟ್ಟದಯ್ಯ' (?)

ಹುಟ್ಟಿದವಸುಳಿ ಕಟ್ಟಿ ಚಟ್ಟವ
ಸುಟ್ಟರೂ ಛಟ್ಟಾಗದೆಂದವ
ರಿಟ್ಟು ನುಡಿವರು ದಿಟ್ಟಮುನಿಗಳು ಕೊಟ್ಟ ಕಿವಿಗಳಿಗೆ |
ಮುಟ್ಟದೆಯೆ ರಸಘಟ್ಟಿಯನು ಬಲು
ಕೆಟ್ಟ ಕಾವ್ಯವಿದೆಂದು ಮೊಟ್ಟುವ
ಮಟ್ಟುಬುದ್ಧಿಯ ಮಟ್ಟಗೆಡಹುವ ಗಟ್ಟಿಗರು ನಾವು[1] ||೭||

ಪುಸ್ತಕವ ನೆರೆಯೋದಿಯೀರ್ಷ್ಯಾ
ಗ್ರಸ್ತಮಾನಸನಾಗಿ ತದ್ದುರ
ವಸ್ಥೆಯಿಂದೊಂದೆರಡು ತಪ್ಪುಗಳಿಲಿಯ ಹುಲಿಮಾಡಿ |
ನ್ಯಸ್ತಗುಣಗಣಕೋಟಿಯಸ್ತ
ವ್ಯಸ್ತವೆಂದರಚಾಡುವವನಾ
ಮಸ್ತಕ[3]ವೆ ಮಮ ವಾಮಚರಣಕೆ ಕಾಲುಮಣೆಯಲ್ತೆ[2] ||೮||

ನಾನೆ ಬಲ್ಲವನೆಲ್ಲ ನನ್ನ ಸ
ಮಾನೆ ಮಿಕ್ಕುಳಿದವರು ತೆಗೆಯೀ
ಮಾನವರು ಕೃತಿಕಾರರೇ ಪೇಳ್ ನಾನೆ ನಾನೆಂಬ |
ಬೋನು ಸಣ್ಣುದರೊಳಗೆ ಸಿಲುಕಿದ
ಬೇನೆ ಬೆನ್ನಿನ ಮುರಿಯು ಬಾಗಿದ
ಗೂನು ಜನ್ಮಾಂತರಗಳೆನಿತರ ಹೀನಸುಳಿ ತಾನೊ ||೯||

ನಡೆವರೆಡಹದೆ ಕುಳಿತು ಕೊಳೆವವ[4]
ರೆಡಹರೈ ಕೇಳಿಡವಲಾರರು
ಕಡುಸುಲಭ ಕುಳಿತವರು ನಡೆದಾಡುವರಣಕಿಸಲು |
ನಡುನಿಶಿಯು ಕೆಳಕುಳಿತು ತಾರಾ
ಗಡಣದಧಿಪ ಕಳಂಕಕೆಡೆಯೆಂ
ದೊಡೆದು ನುಡಿದಡೆ ಪೊಡವಿದೀಪವ ನಗದೆ ಸಕಲಜನ ||೧೦||

---

[1] 'ಟವರ್ಗ ಪ್ರಥಮಾಕ್ಷರ ದ್ವಿತ್ವ ಪಂಚದಶಾಲಂಕಾರ.'

[2] 'ಸ್ತಸ್ಥಪ್ರಾಸಾಲಂಕಾರ.'

[3] ಅಹಂಕಾರದಿಂದ ಬಾತುಹೋದ 'ಮಸ್ತಕ.'

[4] 'ಪರಪಂಕ್ತಿ ಪ್ರಾರಂಭಾಲಂಕಾರ.'

ಗಾಂಧರ್ವ ವಿದ್ಯಾ ವ್ಯಾಸಂಗವೆಂಬ ಎರಡನೆಯ ದಶಕವು

ಸಿರಿಯ ವಾಣಿಯ ಗಿರಿಜೆಯರಸರ
ಮುರಲಿ ವೇದ ಕಪಾಲಹಸ್ತರ
ವರದಕರಗಳ ಪೊರೆವ ಕರುಣಾಪಾಂಗವಿರಲೆನಗೆ |
ಪಿರಿಯ ಕವಿಗಳ ಮನೆಯ ಕಿರುಕಸ
ಬರಲು ನಾ ಯಃಕಶ್ಚಿತನು ಬಿ
ತ್ತರಿಸುವೆನು ಹಾರ್ಮೋನಿಯಂ ಹರಣದ ಕಥಾನಕವ ||೧೧||

ಮೂರುಲೋಕದ ಮದಿಯೆ[1] ದೇವರ
ತೇರ ನಡುವಣ ಪೀಠದೊಲು ಮೈ
ದೋರಿ ಮೆರೆಯುವ ಮರ್ತ್ಯಲೋಕದ ಭರತಭೂಮಿಯೊಳು |
ಭಾರಿಯವಗುಣಗಳಿಗೆ ತಾನೇ
ಗೋರಿಯೆಂಬಂದದಲಿ ನೆರೆ ಮೈ
ಸೂರುಪತ್ತನವೆಸೆವುತಿರ್ದುದನೇನವೊಗಳುವೆನು ||೧೨||

ಸಾಜದಲಿ ಮೈಸೂರು ರತಿಗೆ ಮ
ನೋಜ ಮೇಣ್ಸಿರಿಸರಸತಿಗೆ ತಾ
ನೋಜ ದಾನದ ಭೂಜ ಬುಧರಿಗೆ ಭೋಜನೆಂದೆನಿಸಿ |
ತಾಜಮಹಲಿನ ಮುಂದೆ ಬಣ್ಣದ
ಗಾಜೆಯೆಂಬೀ ಸಾಮ್ಯತಿಗೆ ತಾ
ಭಾಜನವು ಮೈಸೂರು ಮಿಕ್ಕಿನ ನಗರಮಾಲೆಯೊಳು ||೧೩||

ಧಾತ್ರಿಯೊಳು ಕಾವ್ಯೇಶನಿಗೆ ಸ
ತ್ಪಾತ್ರವಹ ಮೈಸೂರ ನಡುವಣ
ಸೂತ್ರಿಸಿದ ನೂರಾರು ಬೀದಿಗಳೊಂದರಂಚಿನಲಿ |
ಶ್ರೋತ್ರಿಯರು ಮೇಣ್ ಭಾರತೀಯಸ
ಗೋತ್ರಜ ಬ್ರಹ್ಮಾಂಡಗಾತ್ರರು
ವೇತ್ರಹಸ್ತರು ವೇಂಕಟಾರ್ಯರನರಿಯದವರಾರು[2] ||೧೪||

---

[1] 'ಮಧ್ಯೆ' ಎಂಬುದರ ತದ್ಭವ.

[2] 'ತ್ರಿತ್ರ ತ್ರಿತ್ರಿ ಪ್ರಾಸಾಲಂಕಾರ.'

ವೆಂಕಟಾರ್ಯರು—ಮಕ್ಕಳಿಲ್ಲದ
ಸಂಕಟವೆ ಸುಡುಬೆಂಕಿಯಲ್ಲವೆ—
ಸುಂಕ[1]ಗೊಟ್ಟು ಸಮಂತು ಪಂಕಜನಾಭನನು ಭಜಿಸಿ।
ವೆಂಕಟೇಶ ವರಪ್ರಸಾದದ
ಕೊಂಕುಳಿನ ಕಿರುಗೂಸ ಪಡೆದದ
ಕೆಂಕು ನಾಮಾಂತರವನಿಟ್ಟರು ಲೋಕ ಬೆರಗಾಗೆ ||೧೫||

ವೆಂಕಟಾತ್ಮಜೆ ಯೆಂಕು ತಾಯಿಯ[2]
ಕೊಂಕುಳಂಕಗಳುಳಿದು ವಯಸನ
ವುಂಕಿ ಬೆಳೆಯಲು ಬಿಟ್ಟು ಲಂಗನ ಸೀರೆ ನಿರಿಯುಡಲು।
ವೇಂಕಟಾರ್ಯರು ಮಗಳು ವಿದ್ಯೆಯ
ಸೋಂಕನೂ ತಾನರಿಯದಿರೆ ನೆರೆ
ಭೋಂಕನೆಯೆ ನಿಶ್ಚೈಸಿದರು ಗಾಂಧರ್ವವಿದ್ಯೆಯನು ||೧೬||

ಮುದ್ದುಮಗಳಿಗೆ ಕಲಿಸಬೇಕೆಂ
ದೆದ್ದು ಪೇಟೆಯೊಳುದ್ದ ಪರಿಕಿಸಿ
ಕದ್ದುತಂದರು[3] ಸದ್ದು ಹೆಚ್ಚಿನ ಹಾರುಮೋನಿಯವ।
ನಿದ್ದೆಗಿದ್ದೆಯ ಬಿಟ್ಟು ಸಂತತ
ವೊದ್ದು ಹೊಡೆದಂತೆದ್ದ ದನಿಯಲಿ
ಋದ್ದು ತಾವೇ ಕಲಿಸತೊಡಗಿದರಾತ್ಮಜೆಗೆ ಪದವ[4] ||೧೭||

ತಾವೆ ತಮಗಾಚಾರ್ಯರಾಗಿ ಮ
ಹಾ ವಿಲಾಸದಿ ನಾದದೇವನ
ಸೇವೆಯನು ಕೈಕೊಂಡು ಮಗಳಿಗು ಕಟ್ಟಿ ಕಂಕಣವ।
ಮೇವನರಸುವ ಕುರುಡುಕರುವಿನ
ಗೋವಿನೋಪಾದಿಯಲಿ ಕಾಣದ
ಕಾವಲನು ತಡಕಿದರು ಸಂಗೀತದ ಸಮುದ್ರದಲಿ ||೧೮||

---

[1] ಪ್ರಾಸವಿಲ್ಲದಿದ್ದರೆ ‘ಲಂಚ’ವೆಂಬುದು ಇನ್ನೂ ಚೆನ್ನಾಗಿ ಒಪ್ಪುತ್ತಿತ್ತು.

[2] ‘ಮೌನಮಾರ್ತಾಂಡ ಮಹಾಲಂಕಾರ.’

[3] ಮನೆಗೆ ಬರುವ ಮುಂಚೆಯೇ ಯಾರಾದರೂ ತಡೆದಾರೆಂದು ಕದ್ದುತಂದರು.

[4] ‘ತವರ್ಗ ತೃತೀಯಾಕ್ಷರ ದ್ವಿತ್ವ ದಶಕಾಲಂಕಾರ.’

ಕೀರ ಕಚ್ಚಿದ ಬಾಯ ಬೆಕ್ಕಿನ
ವೋರೆಗಂಡ ಶ್ವಾನ ತನ್ನಯ
ತೋರಬಾಯಸು ತೆರೆಯಲಾ ಸರ ಮೂರಸುರೆ ವಿಾರಿ |
ಹಾರುಮುನಿಯುಂ ತಂದೆ ಮಗಳುದಿ
ರೇರುಕೂಗಿನ ಕಿರಿಚುಗೊರಲಿಸ
ಸಾರಿಗಮುಗಳ ಸಮರಕೋಳಾಹಳವನೇನೆಂಬೆ ||೧೯||

ಹೇಳಲೇನಿಹುದಿನ್ನವಂದಿರು
ಚೇಳುಕಡಿದವರೆಳೆವ ರಾಗದ
ಮೇಳದಾಲಾಪನೆಯ ಪಲ್ಲವಿ ಚರಣಗಳನೆಲ್ಲ |
ಸೂಳಯಿಸಿ ಪಾಡಿದರು ಖರ ಕರ
ವಾಳ ಕಿವಿವೊಕ್ಕಂತೆ ಬೀಸಿದ
ಗಾಳ ತಾಗಿದ ವಿಾನಿನ ಸ್ಪಂದನವನನುಕರಿಸಿ ||೨೦||

ನಿಂಗನಿರ್ಧಾರಣವು ಎಂಬ ಮೂರನೆಯ ದಶಕವು

ಆದಿಶೇಷನ ಹೆಡೆಯ ಸಾಲಿನ
ಲೈದನೆಯದರ ಪಕ್ಕದಲಿ ತಾ
ಹಾದು ಕುಳಿತ ಫಣಾಪ್ರಪಂಚದಲಾರನೆಯದರೊಲು |
ವೇದಮೂರುತಿ ವೇಂಕಟಾರ್ಯರ
ನಾದ ಮಹಡಿಯ ಮನೆಯ ಬಲಭುಜ
ತೇದು ನಿಂತಿತು ಸೌಧ ಗಗನಕೆ ನಿಮಿರಿ ತಲೆಯೆತ್ತಿ ||೨೧||

[1]ಅದರ ಮುಂಗಡೆ ಮಹಡಿಮೆಟ್ಟಲ
ಬದಿಯೊಳಿಪ್ಪತ್ತೊಂಬತಂಗುಲ
ಚದರವಿರಬಹುದಾದ ಕೋಣೆಯ ಪಡೆದು ಜಾಡಿಗೆಗೆ |
ತುದಿಯ ಕಾಟದ ಕಡುಪರೀಕ್ಷೆಯ
ಕದನಕೋಸುಗವರಿವಿನಗ್ನಿಗೆ
ತಿದಿಗುಸೊತ್ತುತ ಕುಟ್ಟಿ ಕಾಯಿಸುತುತ್ತರಾಸ್ತ್ರಗಳ ||೨೨||

---

[1] ಮಹಾಕವಿ ಪುರುಷ ಸರಸ್ವತಿಗೆ 'ಕುಳಕಪ್ರಿಯ'ನೆಂಬ ಬಿರುದಿರುವುದನ್ನು ವಾಚಕರು ಮರೆತಿರಲಾರರು. ಇಲ್ಲಿ ಪದ್ಯ ೨೨ರಿಂದ ೨೬ರ ವರೆಗೆ ಕುಳಕದ ಹೊಳೆ ನಿರರ್ಗಳವಾಗಿ ಹರಿಯುತ್ತಿದೆ.

ಮಸೆದು ಮಸೆದು ಕ್ಷುರದ ಧಾರೆಗು
ಮಸದಳದ ನಿಶಿತತೆಯನೆಸಗುತ
ಲಸಮನಯನನ ಪೆಸರ ಬಾಲಕ ನಿಂಗನೆಂಬವಸು[1] |
ಬಿಸಿಯ ಘುಮುಘುಮುಗುಡುವ ರಸಪಾ
ಯಸದ ಬಾಯಿಗೆ ಮರಳು ಥಡಭಡ
ಕುಸಿದು ಬಿದ್ದಂತೆಸೆದ ಹಾವೋರ್ನಿಯಮಿನಬ್ಬರವ ||೨೩||

ತಡೆಯಲಾರದೆ ನಡೆದು ವಿನಯದಿ
ನಡಿಯನಿಟ್ಟು ತದಾರ್ಯಭವನಕೆ[2]
ನುಡಿಯ ನಡಸಿದನಿಂತು ಹಿರಿಯರೆ ಬಲ್ಲವರಿಗಾನು |
ಬಡವನೇನೆಂದುಸಿರುವೆನು ಬಲು
ಗಡವಬೆಕ್ಕಿಗೆ ಸುಂಡ ತಾ ನಡ
ನಡುಗುವಂದದೊಳದುರಿ ಬೆದರುವೆನೆನ್ನ ಬಿನ್ನಪವ ||೨೪||

ಲಾಲಿಸಿರಿ ನನಗೇಳು ದಿನಗಳ
ಮೇಲೆ ಕಡೆಯ ಪರೀಕ್ಷೆಯದರೊಳು
ಸೋಲೆ ಸದ್ಗತಿ ಸಿಗದು ಕರುಣದಿನಲ್ಲಿವರವೊಲಿದು |
ನಿಲಿಸಿ ಸಂಗೀತವನು ಪಾಠವ
ಕಲಿಯಲನುಕೂಲಿಸಿದರೆಂದಿಗು
ಕಲಸಿ ಕೈಗಳ ಮುಗಿವೆನೆನಲವರಾಗದಾಗದೆನೆ ||೨೫||

ಕೇಳಿ ಚಿಂತಾಕ್ರಾಂತನಾದನು
ಪೇಳಿರೆಲೆ ಗೋಡೆಗಳೆ ಕಿಟಕಿಯೆ
ಪೇಳು ನೀನೆಲೆ ಕದವೆ ಸುತ್ತಿನ ಹರುಕು ಮುರುಕುಗಳೆ |
ಪೇಳಿ ನೀವೀತಂದೆಮಗಳುದಿ
ರೂಳುತಿರಲೆನಗೇನು ಗತಿಯಿ
ನ್ನೇಳು ದಿವಸ ಪರೀಕ್ಷೆಗಿಹುದೆಂದೊರಲಿದನು ತರಳ ||೨೬||

---

[1] ಕವಿಯು ಇಲ್ಲಿ ನಿಂಗನ ಹೆಸರನ್ನು ಹೇಳುವ ನೆಪದಿಂದ ಕೇವಲ 'ಅಸಮನಯನ'ನೊಬ್ಬನನ್ನೇ ನೆನೆದು ಹರಿವಿರಿಂಚಿಗಳನ್ನು ಬಿಟ್ಟುದು ಕವಿಯ ಶಿವಪಕ್ಷಪಾತವನ್ನು ತೋರಿಸುವುದೆಂದು ನಮ್ಮ ನಂಬಿಕೆ.

[2] ಇದು ಬೈಲೂರಿನ ವೇಂಕಾರ್ಯಭವನ; ಮೈಸೂರು ಬೆಂಗಳೂರುಗಳ 'ಆರ್ಯಭವನ'ವಲ್ಲ.

ಪೇಳು ಚರಿತೆಯು ಮೇಳವಿಪ ಭೂ
ಗೋಳ[1] ಕಾಸಿಗೆ ತಂದ ಮುಸುಕಿನ
ಜೋಳ[2] ಪೇಳಿಲೆ ಪೇಳಿ ಪೇಳಿರೆ ನಾನು ಬಾಳಸಲಾ |
ಭಾಳಲೋಚನಸರೆನಿಮೀಲಿತ
ಫಾಳನಯನದೊಲುರಿವ ಹಣತೆಯೆ
ಪೇಳು ತೇರ್ಗಡೆಯಹುದೆ ನನಗಾ ಬಹ ಪರೀಕ್ಷೆಯಲಿ ||೨೭||

ಏಕೆ ನುಡಿಯೈ ಸೊಳ್ಳೆ ನುಸಿಗಳೆ
ನಾಕುಮಾತುಗಳಾಡಿರೇ ಕಿವಿ
ತಾಕದೇನೀ ಮೊರೆಯು ಸಣ್ಣದು ಹಾಸು ಹೊದಿಕೆಗಳೆ |
ನೂಕಿಯಾದರು ಬಿಡಿರೆ ಬಾವಿಗೆ
ಹೋಕೆಯೀ ಸುಡುಗಾಡು ಜನ್ಮವು
ಸಾಕು ಸಾಕೀ ಹಾಳುಹಾಡೆಂದೊರಲಿದನು ಹಸುಳೆ ||೨೮||

ಏನಗೈಯುವೆನೆಂತುಗೈಯುವೆ
ನಾನೆ ಕುದುರೆ ಪದಾತಿ ರಥಗಳ
ಸೇನೆ ಮೊದಲಾದಖಿಳ ಸಂಪದ ವಿಭವವಿಲ್ಲದೆಯೆ |
ಖೂನಿಯಾದರು ಗೆಯಲೆ ಛೀಛೀ
ಹೀನಕಾರಿಯವದರಿನಾತ್ಮಕೆ
ಹಾನಿ[3] ತಾನಲ್ಲವೆ ಗಡಾ ಎಂದೊದರಿದನು ಹಲುಬಿ ||೨೯||

ಹಲುಬಿದನು ತಾನಿಂತು ಸಿಂಗನು
ಕಿಲುಬುಪಾತ್ರೆಯ ಹುಳಿಯನರಿಯದೆ
ಮೆಲುಕುಗೈದವರನುಭವವ ತಾ ತಡೆಯದನುಭವಿಸಿ[4] |
ಕೊಲೆಗೆ ಬಯಸಿದ ಮನವ ಛೀಃ ಬಲು
ಹೊಲೆಗೆಲಸ ಬಿಡು ಎಂದು ಮಾರ್ಗವ
ಸುಲಭವದನಾಳಾಪಿಸಿದನವ ತನ್ನ ಮನದೊಳಗೆ ||೩೦||

---

[1] ಆ ಕಾಲದಲ್ಲಿ ಕೂಡ ಚರಿತ್ರೆ ಭೂಗೋಳ ಒಟ್ಟಿಗಿತ್ತು.

[2] ಸಿಂಗನ ರಿಕ್ತದಶೆಯ ಸೂಚಕ 'ಧ್ವನಿ'; ಆದ್ದರಿಂದ ಉತ್ತಮಕಾವ್ಯ.

[3] ಖೂನಿಯು ಆತ್ಮಹಾನಿಯೆಂಬುದು ಬಹಳ ಪ್ರಾಚೀನ ತತ್ವ.

[4] ಪುರುಷಸರಸ್ವತಿಯ ಅಪೂರ್ವವಾದ ಉಪಮಾನಗಳಲ್ಲಿ ಒಂದು.

ನಿಂಗನಿರ್ಬಂಧನವೆಂಬ ನಾಲ್ಕನೆಯ ದಶಕವು

[1]ಲೋಕವನು ಕಾಪಿಡಲು ಪೆರುಮನ
ನೇಕ ರೂಪುಗಳಾಂತು ಖೂಳರ
ನೂಕಿ ಸಾವಿನದಾಡೆಗೆಂಟವತಾರದಲಿ ತನ್ನ |
ಶಾಕ್ಯಮುನಿ ತಾನಾದ ಕಾಲದೊ
ಳೇಕೆ ಕೊಲೆಯೀಖಳವಿನಾಶಕೆ
ಸಾಕು ಸೋದಿಸಲವರ ದುರ್ಗುಣಜಾಳಗಳನೆಂದು ||೩೧||

ಕರೆದ ವಚನಾಮೃತವ ನೆನೆನೆನೆ
ದರರೆ ಹಾರ್ಮೋನಿಯಮಿನಿಂದವ
ತರಿಸಿತಲ್ಲವೆ ಘೋರವಿಪದವಿದೆನ್ನ ಕಲಿವುದಕೆ |
ಸರಿಕಣಾ ಹಾರ್ಮೋನಿಯಮಿನಪ
ಹರಣದಿಂದಲೆ ನೀಗುವೆನು ನಿ
ತ್ತರಿಸುವೆನು ಬಂದೆಡರನೆಂದಾಳಾಪಿಸುತಲಾಗ ||೩೨||

ನಿಂಗ ನಿಶ್ಚೈಸಿದನು ಮನದೊಳ
ನಂಗ ಶಾನಂದಭವನುರುತಪ
ಭಂಗಕೆಳಸಿದೊಲಾರುಮುನಿಯಂ ತಂದೆಮಗಳುದಿರ |
ಸಂಗವನು ಮುರಿದಿಡಲು ಜೀವದ
ಹಂಗುದೊರೆದು ಮಹಾಪ್ಲವಂಗವ
ದಿಂಗು ನುಂಗಿದ ಮಾಳ್ಕೆಯಿಂ ನೆಗೆನೆಗೆಯುವುತ್ಸಹವ ||೩೩||

ತಡೆದು ವರಸಾರಥಿಯವೊಲು ಬಿಗಿ
ಹಿಡಿದು ವಾಘೆಯನದರ ತಲೆಮೇ
ಲ್ಬಡಿದು ನಿಲ್ಲಿಸಿ ತವಕದಶ್ವಾನೀಕಗಳನೆಲ್ಲ |
ಸುಡುವ ಸೂರ್ಯನು ಮಡಿದು ರಾತ್ರಿಯು
ನಡುವ ಸಾಂಗತ್ಯದಲಿ ಕಾರ್ಯಕೆ
ತೊಡಗಬೇಕೆಂದಾಖುವಾಹನ ಪಿತನ ಹೆಸರಿನವ[2] ||೩೪||

---

[1] ಪದ್ಯ ೩೧ ರಿಂದ ೩೫ ರ ವರೆಗೆ ಪುನಃ 'ಕುಳಕ'.

[2] ಆಖು = ಇಲಿ. ಆಖುವಾಹನ = ಗಣೇಶ. ಆಖುವಾಹನ ಪಿತ = ಈಶ್ವರ. ಆಖುವಾಹನ ಪಿತನ ಹೆಸರು = ಲಿಂಗ. ಆಖುವಾಹನ ಪಿತನ ಹೆಸರಿನವ = ನಿಂಗ.

ಕಾಯಿದನು ಹಗಲೆಲ್ಲ ಕುದುರೆಯ
ಲಾಯದಾಳುಗಳೆಳೆದು ಹುರುಳಿಯ
ಬೇಯಿಸುವ ವೇಳೆಯಸು ಕುದುರೆ ನಿರೀಕ್ಷಿಸುವವೋಲು[1] |
ಗೇಯ ಮುಗಿದಾತ್ಮಜೆಯನೆಂಕೂ
ಬಾಯ[2] ನಿಲಿಸಲು ಹೇಳಿ ವೇಂಕಟ
ರಾಯರಾರ್ಮೋನಿಯಮ ಮುಚ್ಚಿಸಿ ಮಲಗಿ ಮರೆಯುವುದ ||೩೫||

ನಾಯ ಕಾವಲುಮಿಲ್ಲ ಮಿಕ್ಕಿನ
ಪಾಯ ತಾನೊಂದಿಲ್ಲ ಕಾಣಿರೆ
ಮಾಯವಾಗುವುದಿಂದು ಹಾರ್ಮೋನಿಯಮು ತಪ್ಪದೆಯೆ |
ಸಾಯಿ ಸೂರ್ಯನೆ ಬೇಗ ಬರದಿರು
ತೋಯಜಾರಿಯೆ ಗಗನಭೂಮಿಗ
ಜೇಯನಾಗುವೆನಿಂದು ಹರಣೋದ್ಯೋಗದೊಳಗೆಂದ ||೩೬||

ತವಕವವನದ ನೋಡಲಾರದೆ
ರವಿಯನಸ್ತಾಸುರ[3] ಗಬಕ್ಕನೆ
ಕವಳಿಸಿದ ಕಥೆಯುಸುರಿ ಬಣ್ಣಿಸಲೇಸರವನಾಸು |
ಬುವಿಯು ಕತ್ತುರಿ ಪೂಸಿ ಕಗ್ಗರಿ
ರವಿಕೆ ಸೀರೆಯ ಧರಿಸಿ ತನ್ನೆರ
ಡೆವೆಯ ಮುಚ್ಚಿದೊಲಿಳಿದು ನುಂಗಿತು ಕಾರಿರುಳು ಜಗವ ||೩೭||

ಅಸ್ತನಾಗಲು ದಿನಪ ಗಾನದ
ಕುಸ್ತಿಯಲಿ ಬಿದ್ದೆದ್ದು ನೆರೆ ಪಗ
ದಸ್ತು ಪಟ್ಟುಗಳಿಟ್ಟು ಸೆಣಸಲು ತಂದೆಮಗಳುದಿರು |
ಸುಸ್ತು ಸಾಕೆನಲೆಂಕು ಹಾಗೇ
ಅಸ್ತುವೆನೆ ವೇಂಕಾರ್ಯರಾಗಡೆ
ಗಸ್ತು ತಿರುಗುವನಾತ ನಡೆವುದ ಕೇಳಿದರು ಮಲಗಿ[4] ||೩೮||

---

[1] ಇನ್ನೊಂದು ಅಮೋಘವಾದ ಉಪಮಾನ. [2] ಎಂಕೂಬಾಯಿ — ಎರಡು ಕನ್ನಡ ಪದಗಳಿಂದಾದ ಅಚ್ಚಗನ್ನಡದ ಸಮಾಸ. ಎಂಕೂಬಾಯ = ಎಂಕುವಿನ ಬಾಯಿಯನ್ನು. [3] ಅಸ್ತವನ್ನು ಅಸುರನಿಗೆ ಹೋಲಿಸಿದ ಅಪೂರ್ವ ಕವಿ ಇವನೊಬ್ಬನೇ. [4] ಗಸ್ತು ತಿರುಗುವುದರಿಂದ ವೇಳೆಯನ್ನು ಸೂಚಿಸುವುದು ಎರಡನೆಯ ಧ್ವನಿ. ∴ ಉತ್ತಮಕಾವ್ಯ.

ಉರುಳಿದಾಕ್ಷಣವವರು ಬಲುವ್ಮೈ
ಮರೆತು ಮಲಗಿದರೆಳೆಯುತೊಂದೇ
ಗೊರಕೆಯನು ಮೈಯೆರಡು ತಾನುಸಿರೊಂದೊ ಎಂಬಂತೆ[1] |
ಬರಿದೆ ಬೆಳಸುವುದೇಕೆ ನಿಂಗನು
ಮುರಿದು ಹಿತ್ತಿಲ ಕದವ ಮೆಲ್ಲನೆ
ಹರಿಸಿ ಹೆಜ್ಜೆಯ ಯೆಂಕುವೇಂಕರ ಗೊರಕೆಗಾವಲಲಿ ||೩೯||

ಕೈಯ ಕಾರ್‍ಯವ ನೆನೆದು ಪಾದ್ಯದ
ಮೈಯ ಹಿಡಿದಡೆ ಹಾಳುಶನಿಯದು
ಕೊಯ್ಯೆಂದಿತು ಹಿಂದೆ ತುದಿ ಮುಚ್ಚಿರದೆ ಹೋಯಿತಲಾ |
ಧೈಯನೆದ್ದರು ವೇಂಕಟಾರ್ಯರು
ರೊಯ್ಯನಾರ್‍ಮೋನಿಯಮನಿಸಿದರು
ಬೈಯತೊಡಗಿದರವನ ಮನಸಿಗೆ ಬಾಯ್ಗೆ ಬಂದಂತೆ ||೪೦||

ನಿಂಗನಿರ್ಧಾವನವೆಂಬ ಐದನೆಯ ದಶಕವು

ವಾಣಿ ನಿನ್ನಯ ನಾಕುವರ್ಣದ
ಜಾಣ ಹೆಸರಿನ ಹಿಂದೆ ಪು-ರು-ಷ-ವ
ಕಾಣಿಸಿದ ನನ್ನೆಲ್ಲ ಕಬ್ಬಗಳರ್ಧಶತಕಗಳೆ |
ಮಾಣದೆಯೆ ಮೇಲೊಂದನಿಕ್ಕಿದ
ರಾಣೆ ನಿಮ್ಮಡಿಯಾಣೆ ಸಾಕೊಂ
ದೂಣೆಯವು ತಾನಾಯಿತಲ್ಲವೆ ಪೂರ್ಣ ಸಂಖ್ಯೆಯಲಿ[2] ||೪೧||

ಶ್ಲೀಲವಶ್ಲೀಲಗಳ ಗೋವಿನ
ಹಾಲು ಗಂಜಳಕಂದು ಸಭೆಯೊಳು
ಹೋಲಿಸಿದ ವೇಂಕಾರ್ಯರೊಳಮನೆಯೊಳಗೆ ಮರೆದದನು |
ಸಾಲು ಬೈಗಳ ತಂದೆಳೆದು ಜೋ
ಮಾಲೆಯದನವಗೆಸೆಯುತಿರಲಾ
ಬಾಲ ತತ್ತರಿಸಿದನು ತಡೆಯದೆ ಮುಚ್ಚಿದನು ಕಿವಿಯ[3] ||೪೨||

---

1 'ಏಕಜೀವ ದೇಹದ್ವಯ ನ್ಯಾಯಾಲಂಕಾರ.'

2 'ಊನಾಲಂಕಾರ.'

3 'ಶೂದ್ರಶ್ರೋತ್ರಿಯ ನ್ಯಾಯಾಲಂಕಾರ.'

ಗಾಯನದೆ ಬಲಗೊಂಡ[1] ವೇಂಕರ
ಬಾಯ ಬೈಗುಳ ಕೇಳಿ ನಿಂಗನು
ಪಾಯುಗಾಣದೆ ತಾನವಾಕ್ಕಾಗಲ್ಲೆ ಮರವಡಲು |
ಹೋಯಿ ಹೋಯೆಂದರಚಿ ಬೀದಿಯ
ನಾಯ ಬಡಿದಿಡುವಂತೆ ವೇಂಕರು
ಸಾಯಬಡಿದರು ನಿಂಗನನು ತುಸು ಕರುಣೆಯಿಲ್ಲದೆಯೆ ||೪೩||

ಬಡಿಬಡಿದು ಸದೆಬಡಿದು ತೋಳ್ಬಲ
ವುಡುಗಲಾಬಳಿಕೆಂದರವನನು
ಕೊಡು ಕೊಡೋ ನೀನಿಲ್ಲಿಗೆಯ್ತಂದುದಕೆ ಕಾರಣವ |
ಸುಡುವೆ ಸುಳ್ಳಾಡಿದರೆ ಮಂಡೆಯ
ನೊಡೆವೆ ಹಲ್ಲನು ಮುರಿವೆ ನಾ ಬರೆ
ಯಿಡುವೆ ನಿನಗೆಂದಾರ್ಯರಾಗಳು ಝಂಕಿಸಿದರವನು ||೪೪||

ಗುದ್ದದಿರಿ ನಿಮ್ಮಿಬ್ಬರೀ ಕೈ
ಗುದ್ದಲಿಯ ಹಾರ್ಮೋನಿಯಮಿನೀ
ಗದ್ದಲವ ತಡೆಯದೆಯೆ ಬಂದೆನು ತೆಗೆಯಲಿದನೆನಲು |
ಸದ್ದು ಬಾಯನು ಮುಚ್ಚು ನಿನ್ನೀ
ಹದ್ದುಮೀರಿದ ನಡತೆಗಿದುವೇ
ಮದ್ದು ಇದೆಕೋ ಸುಂಗುಸುಂಗೆಂದಾರ್ಯರಾರ್ಭಟಿಸಿ ||೪೫||

ಬಿಡದೆ ನಿಂಗನ ತಡೆದು ಕುಕ್ಕರ
ಬಡಿಯೊ ಎನುತಲಿ ಜಡಿದು ಗೋಡೆಯ
ಕಡೆಗೆ ತಿರುಗಿದ [2]ಮಗಳನೆಚ್ಚರಗೊಳಿಸಿಯವಳೊಡನೆ |
ಎಡೆಬಿಡದೆ ಹಾರ್ಮೋನಿಯಮನವ
ರಿಡಿದು ಕುಟ್ಟಿದರವನ ಕಿವಿಗಳ
ಹಿಡಿದು ಗಾನವ ಗಿಡಿದರಾಗಳು ನಡುನಿಶೀಥದಲಿ ||೪೬||

---

[1] ಇದು 'ಗಾಯನವು ಬಲಗೊಂಡ' ಎಂದಿರಬೇಕೆಂದು ತೋರುತ್ತದೆ. ಇವರ ಸೇವೆಯನ್ನು ಸಹಿಸಲಾರದೆ, 'ಸ್ಪೇರ್ ಮಿ ಫ್ರಮ್ ಮೈ ಫ್ರೆಂಡ್ಸ್' ಎಂಬಂತೆ, ನಾದದೇವ ಸ್ವರೂಪಿಯಾದ ಗಾಯನವು ತನ್ನನ್ನು ಈ ಸೇವೆಯ ಸಂತಾಪದಿಂದ ಬಿಡುಗಡೆಮಾಡಬೇಕೆಂದು ವೆಂಕರ ಬಾಯನ್ನು, ಅರ್ಥಾತ್ ಕೊರಳನ್ನು ಬಲಗೊಂಡಿತ್ತು, ಎಂದರೆ, ಕಾಲಿಗೆ ಬಿದ್ದು ಕೇಳಿಕೊಳ್ಳುತ್ತಿತ್ತು.

[2] ನಿಂಗನನ್ನು ಕಂಡು ಲಜ್ಜೆಯಿಂದ ತಿರುಗಿದ.

ಗಾನದೇವನ ಸೇವೆಗಂತನ
ಮಾನನಿಗೆಳಿಹಿದನೆಂದನಾಗೆ ನ
ಹೀನ ಶಿಕ್ಷಾಕ್ರಮವ ವಿಧಿಸಿದರಾಶ್ರಯನುಪವನವ |
ಅಶನವಿಲ್ಲದೆ ಬಂದು ತನ್ನಯ
ಸೂನು[1]—ಅಲ್ಲವು—ಮಕೆಯು ಗಾನದ
ಸೋನೆಯಲಿ ನೆನೆನೆನೆಯುತೇಕಂದಾಜ್ಞೆಗೆಯ್ದುದರಾ ||೪೭||

ಉರಿವ ಶಿಕ್ಷೆಯುಸಿದನು ತಾನೊಂ
ದೆರಡು ದಿನ ಸಹಿಸಿದನು ಕದನಂ
ತರಹೊಳಾಗದೆ ಕಡೆಯುಳಾದದೆ ಬಿಡಲಸಾಗದಿರೆ |
ಮರಣವೇ ಶರಣೆಂದು ಜೈಳಾ
ಪುರದ ಕೆರೆಯೊಳು ನೆಗೆದ ಸಿಂಗನ
ಸುದರು ಕೈಬಿಡದೆಯಿದ್ದರಲ್ಲಿಗೆ ನಾಗಯತೀ ಕಥನ[2] ||೪೮||

ಒಂದೆ ಸಂದೆಗ ಸಿಂಗನಾ ಹಸು
ಕಂದ ಕೆರೆಯಲಿ ಮುಳುಗಿದನಲಾ
ಕೊಂದುಹಾಕಿದ ತಪ್ಪದಾರದು ಶಾರದಾಮುನಿಯಮನೆಯ |
ಇಂದುಮುಖಿ ಯೆಂಕಳದೊ ವಾದ್ಯವ
ತಂದ ವೆಂಕಾರ್ಯರದೊ ನೋಡರ
ಬಿಂದವದನೆಯ ಕರುಣೆಸಿದನಾ ವೆಂಕಟೇಶನದೊ[3] ||೪೯||

ಅಂಬುಜೋದ್ಭವ ಮೊದಲು ಸುನಾ
ರಂಭದಲಿ ನಾರಾಯಣನ ನೋಣ್
ಕಂಭ ಶಾಸಾದಿಯಲಿ ಹರಸಲು ಶಾಸ್ತ್ರವಿದನೆಲೆದು |
ಇಂಬಗಬ್ಬವಿದಿಲ್ಲಿಗಾಯಿತು
ತುಂಬಿತೀ ಶತಕಾರ್ಧಷಟ್ಪದ
ದಂಬುಧಿಯು ಶಾಪಮೋಚನೆಯುಂ ಹರಣೆಂಬ ಸತ್ಕೃತಿಯು[4] ||೫೦||

---

1 ಪ್ರಾಸರಕ್ಷಣೆಗಾಗಿ ಗೈದ ಚಮತ್ಕಾರ.

2 ಮಗ್ಗಲು ಪುಟದ 'ಪ್ರಕ್ಷಿಪ್ತ ಪದ್ಯಾವಳಿ' ನೋಡಿ.

3 'ಸಂದೇಹ ಸಂದೋಹಾಲಂಕಾರ.'

4 ಈ ಕಥನದ ಕಾಲನಿರ್ಣಯವು ಇಲ್ಲಿದೆ.

ಪ್ರಕ್ಷಿಪ್ತ ಪದ್ಯಾವಳಿ

[ಮಹಾಕವಿ ಪುರುಷಸರಸ್ವತಿಯ ಹಾರ್ಮೋನಿಯಂ ಹರಣವು ವಿಷಾದಾಂತವಾಗಿ ಕೊನೆಗೊಂಡುದು ಕಂಡುಬಂದಿದೆಯಷ್ಟೆ. ಕಾವ್ಯದ ನಾಯಕನು ಈ ರೀತಿಯಲ್ಲಿ ಆತ್ಮಹತ್ಯಮಾಡಿಕೊಂಡುದರಿಂದ ನಮ್ಮ ಆರ್ಯ ಸಂಸ್ಕೃತಿಗೆ ಧಕ್ಕೆ ತಗುಲಿತೆಂದು ಯಾರಾದರೂ ಮನ ನೊಂದುಕೊಳ್ಳುವುದಾದರೆ, ಅಂತಹವರ ದುಃಖೋಪಶಮನಾರ್ಥವಾಗಿ ಈ ಕೆಳಗೆ ಕಂಡುಬರುವ ಪಾಠಾಂತರವನ್ನು ನಾವು ರಚಿಸಿ ಪ್ರಕ್ಷಿಪ್ತ ಪದ್ಯಾವಳಿಯಾಗಿ ಸಮರ್ಪಿಸಿದ್ದೇವೆ. ನೊಂದವರ ಆತ್ಮಕ್ಕೆ ತೃಪ್ತಿಯಾಗಲಿ—'ಗುಪ್ತಸಂಪಾದಕ ಪಂಚಕ.']

೪೮ನೆಯ ಪದ್ಯದ ಉತ್ತರಾರ್ಧದಿಂದ ಮುಂದಕ್ಕೆ:—

ಪರಿಣಯುವೆ ಶರಣೆಂದು ಯೆಂಕಳ
ವರಿಸಲೊಪ್ಪಿದ ಸಿಂಗಸನು ವೇಂ
ಕರು ಕಟಾಕ್ಷಿ ಸಲಾತನಾದಸು ಮನೆಯಳಿಯತನಕೆ ||೪೮||

ಮದುವೆಗೊದಗಿದ ಮಗಳ ಗಾಳಕೆ
ಮದುವಣಿಗ ವಿನಾನೊಂದ ಹಿಡಿಯಲು
ಗದೆಯ ಘಟ್ಟಣೆಗೆಣೆಯ ವಾದ್ಯದ ಹುಳುವ ತಾವಿರಿಸಿ |
ಕದಿಯಲದನ್ನೆತಂದ ಸಿಂಗನಿ
ಗುದುವಹನಗ್ನೈದರು ಗಡಾರ್ಯರು
(ಬಿದಿಗೆಲಗ್ನದೊಳೆಂಬೆನ್ನೆ ಸುಪ್ರಾಸ ರಕ್ಷಣೆಗೆ) ||೪೯||

ಕನ್ನೆಯನು ಕೈಹಿಡಿದು ವಿದ್ಯೆಗೆ
ಸೊನ್ನೆಯಾಯಿತ್ತಿತ್ತಲವನಿಗೆ
ಹನ್ನೆರಡು ವತ್ಸರದೊಳಾದುದು ಹೆಣ್ಣು ಹದಿನೈದು |
ಬನ್ನವವನದ ನೋಡಲಾರದೆ
ಸನ್ನುತ ಶ್ರೀ ವೆಂಕಟೇಶನು
ಹೊನ್ನ ಸುರಿಮಳೆಗರೆದು ಸಲಹಿದನರರೆ ಮಝು ಭಾಪು ||೫೦||

ಮಾಲ್‌ಖೇಡಿನ ರಾಷ್ಟ್ರಕೂಟರು ಎಲ್ಲಿಯವರು?

ಇದುವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಮೊದಲನೆಯದಾದ ಕವಿರಾಜಮಾರ್ಗದ ಕರ್ತನು ನೃಪತುಂಗಾಪರನಾಮಧೇಯನಾದ ರಾಷ್ಟ್ರಕೂಟ ಮೊದಲನೆಯ ಅಮೋಘವರ್ಷ (ಕ್ರಿ. ಶ. ೮೧೪–೮೭೭)ನೆಂಬುದನ್ನು ಅರಿಯದ ಕನ್ನಡಿಗರು ವಿರಳ. ಈ ಅಮೋಘವರ್ಷನ ಮನೆತನದ ಅರಸರು ಕ್ರಿ. ಶ. ೭೧೫ರಿಂದ ೯೭೩ರ ವರೆಗೂ ಕರ್ಣಾಟಕದಲ್ಲಿ ಒಂದು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿ ಅದನ್ನು ಮಾನ್ಯಖೇಟದ (ಹೈದರಾಬಾದು ಸಂಸ್ಥಾನದಲ್ಲಿರುವ ಮಾಲ್‌ಖೇಡ್) ರಾಜಧಾನಿಯಿಂದ ಆಳುತ್ತಿದ್ದರು. ಬಿರಾರಿನಲ್ಲೂ, ಮಧ್ಯ ಹಿಂದೂಸ್ಥಾನದಲ್ಲೂ ಉತ್ತರ ದೇಶದ ಇನ್ನೂ ಕೆಲಭಾಗಗಳಲ್ಲೂ ಕೆಲರಾಷ್ಟ್ರಕೂಟಮನೆತನಗಳು ಕ್ರಿ. ಶ. ೭ನೆಯ ಶತಮಾನದಿಂದಲೇ ಸಣ್ಣಪುಟ್ಟ ರಾಜ್ಯಗಳನ್ನು ಸಂಪಾದಿಸಿಕೊಂಡಿದ್ದವು.[1] ಕರ್ಣಾಟಕದಲ್ಲಿ ರಾಜ್ಯಭಾರ

---

[1] ಈ ಪ್ರದೇಶಗಳಲ್ಲಿ ಏಳು ರಾಷ್ಟ್ರಕೂಟ ಮನೆತನಗಳಿದ್ದವೆಂದು ಶಾಸನಗಳಿಂದ ತಿಳಿದು ಬಂದಿದೆ—

(೧) ಮಧ್ಯ ಹಿಂದೂಸ್ಥಾನದ ಮ್ಹೌ-ಹೋಶಂಗಾಬಾದ್ ಪ್ರಾಂತದಲ್ಲಿ ಸುಮಾರು ಏಳನೆಯ ಶತಮಾನದಲ್ಲಿ ಆಳುತ್ತಿದ್ದ ಮಾನಪುರದ ರಾಷ್ಟ್ರಕೂಟರು (ಅಭಿಮನ್ಯುವಿನ ಉಂಡಿಕವಾಟಿಕಾ ದಾನಪತ್ರ, *Ep. Ind.*, Vol. VIII, pp. 165 ff.).

(೨) ಬಿರಾರಿನಲ್ಲಿ ಏಳನೆಯ ಶತಮಾನದಲ್ಲಿ ಆಳುತ್ತಿದ್ದ ಬೇತೂಲಿನ ರಾಷ್ಟ್ರಕೂಟರು (ನನ್ನರಾಜನ ತಿವಾರ್‌ಖೇಡ್, ಮುಲ್ತಾಯಿ ತಾಮ್ರಶಾಸನಗಳು—ಇವುಗಳಲ್ಲಿ ಎರಡನೆಯದು ಕೂಟಲೇಖ (forgery)ಯಾಗಿರಬಹುದು. (*Ep. Ind.*, Vol. XI, pp. 279 f.; *Ind. Ant.*, Vol. XVIII, pp. 234 ff.).

(೩) ಬೋಧ್‌ಗಯಾದ ರಾಷ್ಟ್ರಕೂಟರು—ಸುಮಾರು ೯–೧೦ನೆಯ ಶತಮಾನಗಳು (Rajendralal Mitra: *Bodh-Gayā*, p. 195).

(೪) ಮಧ್ಯ ಹಿಂದೂಸ್ಥಾನದ ಪಠಾರಿಯ ರಾಷ್ಟ್ರಕೂಟರು ೯ನೆಯ ಶತಮಾನ (ಪರಬಲನ ಪಠಾರಿ ಶಿಲಾಶಾಸನ, *Ep. Ind.*, Vol. IX, pp. 252 ff.).

(೫) ೧೦–೧೧ನೆಯ ಶತಮಾನಗಳಲ್ಲಿ ರಾಜಪುತಾನದಲ್ಲಿ ಆಳುತ್ತಿದ್ದ ಹಸ್ತಿಕುಂಡಿಯ ರಾಷ್ಟ್ರಕೂಟರು (ಬಾಲಪ್ರಸಾದನ ಬಿಜಾಪುರ [ಜೋಧ್‌ಪುರ ಸಂಸ್ಥಾನ] ಶಿಲಾಶಾಸನ, *Ep. Ind.*, Vol. X, pp. 22 ff.).

(೬) ೧೧ನೆಯ ಶತಮಾನದ ಧನೋಪ (ರಾಜಪುತಾನಾ)ದ ರಾಷ್ಟ್ರಕೂಟರು (ಚಚ್ಚನ ಧನೋಪ ಶಿಲಾಶಾಸನ, *Ind. Ant.*, Vol. XL, p. 175).

(೭) ಸಂಯುಕ್ತ ಸಂಸ್ಥಾನಗಳಲ್ಲಿ ೧೧–೧೨ನೆಯ ಶತಮಾನಗಳಲ್ಲಿದ್ದ ವೋದಾಮಯೂತದ ರಾಷ್ಟ್ರಕೂಟರು (ಲಕ್ಷ್ಮಣಪಾಲನ ಬದಾಯೂನ್ ಶಿಲಾಶಾಸನ, *Ep. Ind.*, Vol. I, pp. 64 ff.).

ಮಾಡುತ್ತಿದ್ದ ರಾಷ್ಟ್ರಕೂಟರಿಗೆ ಐತಿಹಾಸಿಕರು ಮಾಲ್‌ಖೇಡಿನ ರಾಷ್ಟ್ರಕೂಟರೆಂದು ನಾಮಕರಣಮಾಡಿದ್ದಾರೆ. ಆದರೆ ಮೇಲೆ ಹೇಳಿದ ಬೇರೆ ಬೇರೆ ರಾಷ್ಟ್ರಕೂಟರಿಗೂ ಮಾಲ್‌ಖೇಡಿನ ರಾಷ್ಟ್ರಕೂಟರಿಗೂ ಯಾವ ಸಂಬಂಧವಿತ್ತೆಂಬುದನ್ನು ಹೇಳುವುದು ಸಾಧ್ಯವಿಲ್ಲವಾದರೂ ಈ ಮಾಲ್‌ಖೇಡಿನ ರಾಷ್ಟ್ರಕೂಟರು ಕರ್ಣಾಟಕರೇ ಅಲ್ಲವೇ ಎಂಬುದನ್ನು ವಿಚಾರಮಾಡುವುದಕ್ಕೆ ಸಾಧನಗಳಿವೆ. ಈ ವಿಷಯದಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ.

ಮೊಟ್ಟಮೊದಲು ಈ ವಿಷಯವನ್ನು ಪರ್ಯಾಲೋಚಿಸಿದ ವಿದ್ವಾಂಸರು ಡಾ|| ಬರ್ನೆಲ್‌ರವರು. ಮಾಲ್‌ಖೇಡಿನ ರಾಷ್ಟ್ರಕೂಟರೂ ಆಂಧ್ರದೇಶದ ರೆಡ್ಡಿಗಳೂ ಒಂದೇ ಪಂಗಡಕ್ಕೆ ಸೇರಿದವರೆಂದು ಇವರು ಸೂಚಿಸಿದ್ದಾರೆ.[2] ಮಹಾರಾಷ್ಟ್ರದೇಶಕ್ಕೆ ಆ ಹೆಸರನ್ನು ಕೊಟ್ಟ ರಟ್ಟರೆಂಬ ಕ್ಷತ್ರಿಯರೇ ರಾಷ್ಟ್ರಕೂಟರೆಂದು ಸರ್ ಆರ್. ಜಿ. ಭಂಡಾರ್‌ಕರರು ಅಭಿಪ್ರಾಯಪಟ್ಟರು.[3] ಡಾ|| ಫ್ಲೀಟರು ೧೮೯೬ರಲ್ಲಿ ರಚಿಸಿದ *Dynastis of the Kanarese Districts* ಎಂಬ ಗ್ರಂಥದಲ್ಲಿ ರಾಷ್ಟ್ರಕೂಟ ಎಂಬ ಪದವು ರಾಠೋಡ್ ಪದದ ಸಂಸ್ಕೃತ ರೂಪವಿರಬಹುದಾದುದರಿಂದ ಈ ಮಾಲ್‌ಖೇಡ್ ರಾಷ್ಟ್ರಕೂಟರು ರಾಜಪುತಾನಾ, ಕನೋಜ್ ಪ್ರಾಂತದವರಾಗಿದ್ದಂತೆ ತೋರುತ್ತದೆ ಎಂದು ಹೇಳಿದರು.[4] ಆದರೆ ೭-೮ ವರ್ಷಗಳನಂತರ ಈ ಸಂಶೋಧಕರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡು ಈ ರಾಷ್ಟ್ರಕೂಟರ ಮೂಲ ನಿವಾಸ ಸ್ಥಾನವು ಹೈದರಾಬಾದು ಸಂಸ್ಥಾನದಲ್ಲಿರುವ ಲಾತೂರೇ ಆಗಿರಬಹುದೆಂಬುದಕ್ಕೆ ಕೆಲ ಪ್ರಬಲವಾದ ಕಾರಣಗಳನ್ನು ಕೊಟ್ಟಿದ್ದಾರೆ.[5] ಇದಾದ ಮೇಲೆ ಶ್ರೀಮಾನ್ ಸಿ. ವಿ. ವೈದ್ಯರು ಮಾಲ್‌ಖೇಡ್ ರಾಷ್ಟ್ರಕೂಟರು ಈಗಿನ ಮರಾಠರ ಪೂರ್ವಿಕರೆಂದೂ, ಮಹಾರಾಷ್ಟ್ರದೇಶದವರೇ ಎಂದೂ ಬರೆದರು.[6] ಇವರೆಲ್ಲರ ಅಭಿಪ್ರಾಯಗಳನ್ನೂ ವಿಶದವಾಗಿ ಪರಿಶೀಲಿಸಿ ಮಾಲ್‌ಖೇಡಿನ ರಾಷ್ಟ್ರಕೂಟರು ಕರ್ಣಾಟಕದವರೇ ಆಗಿ ಕನ್ನಡವನ್ನು ಮಾತಾಡುತ್ತಿದ್ದರೂ ಬಿರಾರಿನಲ್ಲಿ ೭ನೆಯ ಶತಮಾನದಲ್ಲಿದ್ದ ರಾಷ್ಟ್ರಕೂಟರ ಸಂತತಿಯವರೇ ಆಗಿರಬೇಕೆಂದು ತೋರಿಸಲು ಪ್ರೊ. ಅಳ್ತೇಕರರು ಪ್ರಯತ್ನಪಟ್ಟಿದ್ದಾರೆ.[7]

ಮಾಲ್‌ಖೇಡಿನ ರಾಷ್ಟ್ರಕೂಟರು ಮಧ್ಯ ಹಿಂದೂಸ್ಥಾನದಿಂದಲೋ ಮಹಾ

---

[2] *South-Indian Palæography*, p. 54, n. 3.

[3] *Early History of Deccan*, p. 194.

[4] *Bombay Gazettee*, Vol. I, part ii, p. 384.

[5] *Ep. Ind.*, Vol. VII, pp. 223 ff.

[6] *History of Mediæval Hindu India*, Vol. II, pp. 322 ff.

[7] *Rāshṭrakūṭas and Their Times*, pp. 15 ff.

ರಾಷ್ಟ್ರದಿಂದಲೋ ಬಂದು ಕರ್ಣಾಟಕದಲ್ಲಿ ನೆಲಸಿದರೆಂದು ವಾದಿಸಿರುವ ಪಂಡಿತರು ಈ ರೀತಿಯಾಗಿ ಅಭಿಪ್ರಾಯಪಡಲು ಅವರು ಕೊಟ್ಟ ಮುಖ್ಯಕಾರಣಗಳನ್ನು ವಿಮರ್ಶೆ ಮಾಡಿ ತರುವಾಯ ಈ ರಾಷ್ಟ್ರಕೂಟರು ಕರ್ಣಾಟಕರೇ ಹೊರತು ಹೊರಗಿನಿಂದ ಬಂದವರಲ್ಲವೆಂಬುದನ್ನು ಸಮರ್ಥಿಸುವುದು ಉತ್ತಮ. ಡಾ|| ಫ್ಲೀಟರು ಪ್ರಾಚೀನ ಶಾಸನಗಳಲ್ಲಿ ಕಂಡುಬರುವ ರಾಷ್ಟ್ರಕೂಟ ಎಂಬ ಪದವು ಸಂಸ್ಕೃತವಾಗಿರುವುದರಿಂದಲೂ ಇದರ ರೂಪಾಂತರವಾದ 'ರಾಠೋಡ್' ಎಂಬ ಹೆಸರುಳ್ಳ ರಾಜಪುತ್ರರ ಜನ್ಮಸ್ಥಾನವು ರಾಜಪುತಾನಾ ಮತ್ತು ಕನೋಜ್ ಪ್ರಾಂತವಾದುದರಿಂದಲೂ ನಮ್ಮ ರಾಷ್ಟ್ರಕೂಟರು ಉತ್ತರದಿಂದ ಕರ್ಣಾಟಕಕ್ಕೆ ಬಂದಿರಬೇಕೆಂದು ಮೊದಲು ಹೇಳಿದರು. ಮಾಲ್‌ಖೇಡ್ ರಾಷ್ಟ್ರಕೂಟ ವಂಶಕ್ಕೆ ರಟ್ಟವಂಶವೆಂಬ ಹೆಸರೂ ಇದ್ದಿತೆಂದು ಈ ಮನೆತನದ ರಾಜರ ಶಾಸನಗಳು ತಿಳಿಸುವುದರಿಂದ 'ರಟ್ಟ' ಶಬ್ದವು 'ರಾಷ್ಟ್ರಕೂಟ'ದ ಅಪಭ್ರಂಶವೆಂದು ಭಾವಿಸಿದರು. ಇವರ ಮೂಲಾವಾಸಸ್ಥಾನವನ್ನು ಸೂಚಿಸುವ 'ಲತ್ತನೂರಪುರವರೇಶ್ವರ' ಎಂಬ ಇವರ ಬಿರುದಿನಲ್ಲಿ ಉಕ್ತವಾದ ಲತ್ತನೂರಪುರವು ಮಧ್ಯ ಹಿಂದೂಸ್ಥಾನದಲ್ಲಿರುವ ರತ್ನಪುರವಾಗಿರಬೇಕೆಂದು ಊಹಿಸಿದರು. ಈ ಮನೆತನದವರು ಮಹಾರಾಷ್ಟ್ರದವರೆಂದು ನಿರ್ಣಯಿಸಿದ ಪಂಡಿತರು ರಠಿಕ, ರಾಷ್ಟಿಕ ಎಂದು ಅಶೋಕನ ಶಾಸನಗಳಲ್ಲಿ ನಿರ್ದಿಷ್ಟರಾದ ಅಧಿಕಾರಿಗಳೇ ಕೆಲಕಾಲಾನಂತರ ಒಂದು ಪಂಗಡವಾಗಿ ರಠಿ, ಮಹಾರಠಿಗಳೆನ್ನಿಸಿಕೊಂಡರೆಂದೂ ಅವರಿದ್ದ ದೇಶವೇ ಮಹಾರಾಷ್ಟ್ರವಾಯಿತೆಂದೂ ಅವರ ವಂಶಜರೇ ರಾಷ್ಟ್ರಕೂಟರೆಂದೂ ಹೇಳಿದರು. ಇತಿಹಾಸ ಪರಿಶೋಧನೆಯನ್ನು ಹೆಚ್ಚುಹೆಚ್ಚಾಗಿ ನಡೆಸಿದ ಮೇಲೆ ಡಾ|| ಫ್ಲೀಟರು ತಮ್ಮ ಮೊದಲಿನ ಅಭಿಪ್ರಾಯವನ್ನು ತಿದ್ದಿಕೊಂಡು 'ರಟ್ಟ' ಎಂಬ ಹೆಸರು ಮಾಲ್‌ಖೇಡ್ ರಾಷ್ಟ್ರಕೂಟರ ಶಾಸನಗಳಲ್ಲಿ ಕ್ರಿ. ಶ. ೮ನೆಯ ಶತಮಾನಕ್ಕಿಂತ ಮುಂಚೆ ಕಂಡುಬರುವುದಿಲ್ಲವಾದರೂ ಇದೇ ಈ ವಂಶದ ಮೊದಲಿನ ಹೆಸರೆಂಬುದಕ್ಕೆ ಕಾರಣಗಳನ್ನು ತೋರಿಸಿಕೊಟ್ಟರು. ಈ ವಂಶದ ಮೂರನೆಯ ಕೃಷ್ಣನ ದೇವೊಳಿ ತಾಮ್ರ ಶಾಸನ[8]ದಲ್ಲಿ ರಟ್ಟ ಎಂಬಾತನು ಈ ರಾಜರ ಮೂಲಪುರುಷನೆಂದೂ ಕೆಲ ತಲೆಗಳಾದ ಮೇಲೆ ಆ ಮನೆತನದಲ್ಲಿ ರಾಷ್ಟ್ರಕೂಟನು ಜನಿಸಿದನೆಂದೂ ಹೇಳಿರುವುದರಿಂದ ರಟ್ಟ ಎಂಬುದೇ ಮೊದಲಿನ ರೂಪವಾಗಿರಬೇಕು. ಈ ಮನೆತನದ ಅರಸರ ಬಿರುದುಗಳಾದ ರಟ್ಟಮಾರ್ತ್ತಂಡ, ರಟ್ಟಕಂದರ್ಪ, ರಟ್ಟವಿದ್ಯಾಧರ ಮೊದಲಾದ ಪದಗಳೂ ರಟ್ಟ ಎಂಬುದೇ ಇವರ ಮೊದಲಿನ ನಾಮಧೇಯವೆಂದು ಸೂಚಿಸುತ್ತವೆ. ಎಂಟನೆಯ ಶತಮಾನದ ಕೆಲ ವೇಂಗೀ ಚಾಳುಕ್ಯರ ಶಾಸನಗಳಲ್ಲಿಯೂ ತಲಕಾಡಿನ

[8] *Ep. Ind.*, Vol. V, pp. 188 ff.

ಗಂಗರ ಶಾಸನಗಳಲ್ಲಿಯೂ ಇವರು ರಟ್ಟರೆಂದೇ ನಿರ್ದೇಶಿಸಲ್ಪಟ್ಟಿದ್ದಾರೆ. 'ರಾಷ್ಟ್ರ ಕೂಟ' ಪದದ ಅಪಭ್ರಷ್ಟ ರೂಪವು 'ರಾಠೋಡ' ಅಥವಾ 'ರಾಷ್ಟ್ರೌಡ' ಆಗ ಬಹುದೇ ವಿನಾ 'ರಟ್ಟ' ಎಂದು ಮಾತ್ರ ಆಗಲಾರದು. ಏಕೆಂದರೆ 'ರಟ್ಟ' ಪದದಲ್ಲಿ 'ರಾಷ್ಟ್ರಕೂಟ'ದ ಕೊನೆಯಲ್ಲಿರುವ 'ಕೂಟ'ಕ್ಕೆ ಸರಿಹೋಗುವ ಪದವಿಲ್ಲ. ಮಾಲ್ಖೇಡ್ ರಾಷ್ಟ್ರಕೂಟರ ವಂಶಜರಾದ ಸೌಂದತ್ತಿಯ 'ರಟ್ಟ'ರ ವಂಶದ ಹೆಸರಾದರೂ ಅವರು ತಮ್ಮ ಪೂರ್ವಿಕರ ಮೂಲ ನಾಮಧೇಯವನ್ನೇ ಉಳಿಸಿಕೊಂಡಿದ್ದರೆಂಬುದನ್ನು ತೋರಿಸುತ್ತದೆ. ಈ ಎಲ್ಲ ಕಾರಣಗಳಿಂದ 'ರಟ್ಟ' ಎಂಬುದೇ ಮೂಲರೂಪವೆಂದೂ ಇದರ ಸಂಸ್ಕೃತ ರೂಪವಾದ 'ರಾಷ್ಟ್ರ' ಎಂಬ ಪದವು ಒಂದು ಮನೆತನದ ಹೆಸರಾಗಲಾರದಾದ ಕಾರಣ ಗಂಭೀರವಾಗಿ ತೋರುವ ರಾಷ್ಟ್ರಕೂಟ ಶಬ್ದವನ್ನು ಇವರು ಉಪಯೋಗಿಸುತ್ತಾ ಬಂದರೆಂದೂ ಹೇಳಿದರು.[9] ಪ್ರೊ|| ಅಳ್ತೇಕರರು 'ರಟ್ಟ'ವು 'ರಾಷ್ಟ್ರಕೂಟ'ದ ಸಂಕ್ಷಿಪ್ತ ರೂಪವೇ ಎಂದು ವಾದಿಸಿದ್ದರೂ ರಠಿ, ಮಹಾರಠಿ ಎಂಬ ಪದಗಳು ಅಧಿಕಾರ ಸೂಚಕಗಳೇ ಹೊರತು ಪಂಗಡ ಅಥವಾ ಕುಲವನ್ನು ನಿರ್ದೇಶಿಸುವುದಿಲ್ಲವೆಂದೂ ಈ ರಠಿ, ಮಹಾರಠಿಗಳು ಮಹಾರಾಷ್ಟ್ರದಲ್ಲಿ ಮಾತ್ರವೇ ಅಲ್ಲದೆ ಕರ್ಣಾಟಕ, ಆಂಧ್ರ ದೇಶಗಳಲ್ಲಿಯೂ ಕ್ರಿ. ಶ. ೨-೩ನೆಯ ಶತಮಾನಗಳಲ್ಲಿಯೇ ಇದ್ದರೆಂಬುದಕ್ಕೆ ಆಧಾರಗಳಿವೆಯಾದಕಾರಣ ರಾಷ್ಟ್ರಕೂಟರು ಮಹಾರಾಷ್ಟ್ರದಿಂದ ಬಂದವರೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ತೋರಿಸಿದ್ದಾರೆ. 'ರಟ್ಟ' ಎಂಬುದೇ ಮೊದಲಿನ ರೂಪವಿರಬಹುದೆಂದೂ ಇದು ಬಹುಶಃ ದ್ರಾವಿಡ ಪದವೇ ಆಗಿರಬೇಕೆಂದೂ ಹೇಳುವುದಕ್ಕೆ ಇನ್ನೊಂದು ಕಾರಣ ವನ್ನು ಕೊಡಬಹುದು. ಕಡಪಾ ಜಿಲ್ಲೆಯಲ್ಲಿ ದೊರೆತಿರುವ ೬ನೆಯ ಶತಮಾನದ ಆದಿಭಾಗದ ಶಿಲಾಶಾಸನಗಳಲ್ಲಿ ಸಳ್ಕಿರಟ್ಟಗುಡ್ಲು, ಪಲ್ಲವರಟ್ಟಗುಡ್ಲು, ಚೋಟಿ ಅಥವಾ ಚೋಟಿಯರಟ್ಟಗುಡ್ಲು, ಗಗ್ಗ(ಗಂಗ)ರಟ್ಟಗುಡ್ಲು ಎಂಬ ಅಧಿಕಾರಿಗಳು ಉಕ್ತರಾಗಿದ್ದಾರೆ. ರಟ್ಟಗುಡ್ಲು ಪದದ ಹಿಂದೆ ಇರುವ ಸಳ್ಕಿ (ಚಾಲುಕ್ಯ), ಪಲ್ಲವ, ಚೋಟಿ, ಗಂಗ ಎಂಬುವು ವಂಶವಾಚಕಗಳಾಗಿರುವುದರಿಂದ ಈ ಅಧಿಕಾರಿಗಳು ಆಯಾ ವಂಶದ ರಾಜರ ಆಶ್ರಯದಲ್ಲಿದ್ದರೆಂಬುದನ್ನು ತೋರಿಸುತ್ತವೆ.[10] ಆದುದರಿಂದ ೬ನೆಯ ಶತಮಾನಕ್ಕೆ ಎಷ್ಟೋ ಮುಂಚೆ 'ರಟ್ಟ' ಪದವು ಬಳಕೆಯಲ್ಲಿದ್ದಿರಬೇಕೆಂದು ತೋರುತ್ತದೆ. ಪರಂತು 'ರಟ್ಟ' ಎಂಬುದು ದ್ರಾವಿಡ ಪದವೋ ಅಥವಾ ಪ್ರಾಕೃತವೋ ಎಂಬುದೂ ಇದರಿಂದ 'ರಾಷ್ಟ್ರಕೂಟ'ವು ಹುಟ್ಟಿತೋ ಇಲ್ಲ

---

[9] *Ibid.*, Vol. VII, pp. 214 ff.

[10] *Ibid.*, Vol. XI, p. 343.

'ರಾಷ್ಟ್ರಕೂಟ' ದಿಂದ 'ರಟ್ಟ' ಎಂದು ಅಪಭ್ರಷ್ಟವಾಯಿತೋ ಎಂಬ ವಿಷಯವು ಚರ್ಚಾಸ್ಪದವಾಗಿಯೇ ಉಳಿದಿರುವುದರಿಂದ ದಕ್ಷಿಣ ದೇಶವೇ ಮಾಲ್‌ಖೇಡ್ ರಾಷ್ಟ್ರಕೂಟದ ಜನ್ಮಭೂಮಿಯೆಂದು ದೃಢಪಡಿಸುವುದಕ್ಕೆ ನಿರ್ವಿವಾದವಾದ ಆಧಾರಗಳಿವೆಯೇ ಎಂಬುದನ್ನು ವಿಚಾರಿಸೋಣ.

ಇವರು ದಾಕ್ಷಿಣಾತ್ಯರಷ್ಟೇ ಅಲ್ಲ, ಕರ್ಣಾಟಕರು; ಮತ್ತು ಕನ್ನಡವೇ ಇವರ ಮಾತೃಭಾಷೆ ಎಂದು ಹೇಳುವುದಕ್ಕೆ ಪ್ರಬಲವಾದ ಪ್ರಮಾಣಗಳಿವೆ. ಮೇಲೆ ಹೇಳಿರುವಂತೆ ಶಾಸನಗಳಲ್ಲಿ ಇವರು ಲತ್ತನೂರಪುರವರೇಶ್ವರರೆಂದು ವರ್ಣಿತರಾಗಿದ್ದಾರೆ. ಇವರಂತೆಯೇ ಕೊವಳಾಲಪುರವರಾಧೀಶ್ವರರೆಂದು ಹೇಳಿಕೊಂಡಿರುವ ತಲಕಾಡಿನ ಗಂಗರ ಮೂಲಾವಾಸಸ್ಥಾನವು ಕೊವಳಾಲ (ಈಗಿನ ಕೋಲಾರ)ವೇ ಎಂದು ಪಂಡಿತರು ತೋರಿಸಿಕೊಟ್ಟಿದ್ದಾರೆ. ತಗರಪುರಪರಮೇಶ್ವರರೆಂದು ವರ್ಣಿಸಲ್ಪಟ್ಟಿರುವ ಸಿಲಾಹಾರರು ತಗರ (ಹೈದರಾಬಾದ್ ಸಂಸ್ಥಾನದಲ್ಲಿರುವ ತೇರ್) ಪುರದವರೇ ಎಂಬುದರಲ್ಲಿ ಸಂದೇಹವಿಲ್ಲ. ಒಱೆಯೂಪುರ್ವರೇಶ್ವರರೆಂಬ ಬಿರುದುಳ್ಳ ಚೋಳರು ಕರ್ಣಾಟಕ ಮತ್ತು ಆಂಧ್ರ ದೇಶಗಳಲ್ಲಿ ಮಧ್ಯ ಯುಗದಲ್ಲಿ ಸಾಮಂತರಾಗಿ ಆಳುತ್ತಿದ್ದರೂ ಇವರ ಮೂಲನಿವಾಸಸ್ಥಾನವು ಒಱೆಯೂರೇ (ಉಱೈಯೂರ್). ಬಳ್ಳಾರಿ, ಅನಂತಪುರ, ಚಿತ್ರದುರ್ಗ, ತುಂಕೂರು ಜಿಲ್ಲೆಗಳಲ್ಲಿ ರಾಜ್ಯವನ್ನು ಸ್ಥಾಪಿಸಿಕೊಂಡಿದ್ದ ನೊಳಂಬ ಪಲ್ಲವರ 'ಕಾಂಚೀಪುರವರೇಶ್ವರ' ಎಂಬ ಬಿರುದೂ ಇವರು ಕಂಚಿಯಿಂದ ಕರ್ಣಾಟಕಕ್ಕೆ ಬಂದವರೆಂಬುದನ್ನು ತೋರಿಸುತ್ತದೆ. ಕೆಲ ಸಂದರ್ಭಗಳಲ್ಲಿ ಪುರವರೇಶ್ವರವೆಂಬ ಪದವು ಅರಸರ ಆಗಿನ ಅಥವಾ ಒಂದಾನೊಂದು ಕಾಲದ ರಾಜಧಾನಿಯಾಗಿತ್ತೆಂದು ಸೂಚಿಸುತ್ತದೆ. ಗೋವೆಯ ಕದಂಬರು 'ಬನವಾಸೀಪುರವರೇಶ್ವರರೆಂದು' ಹೇಳಿಕೊಂಡಿರುವುದು ಇವರ ಪೂರ್ವಜರ ರಾಜಧಾನಿಯು ಬನವಾಸಿಯಾಗಿತ್ತೆಂಬುದನ್ನು ವ್ಯಕ್ತಪಡಿಸುತ್ತದೆ. ಏಕೆಂದರೆ ಕದಂಬರು ತಾಳಗುಂದದವರೆಂದು ಅಲ್ಲಿರುವ ಕಾಕುಸ್ಥವರ್ಮನ ಶಾಸನವು[11] ಸ್ಪಷ್ಟವಾಗಿ ಹೇಳಿದೆ. ಹೀಗೆಯೇ 'ಕಾಲಂಜರಪುರವರೇಶ್ವರ'ರೆನಿಸಿಕೊಂಡ ಕಳಚುರ್ಯರ ಪೂರ್ವದ ರಾಜಧಾನಿಯು ಬುಂದೇಲ್‌ಖಂಡದ ಕಾಲಂಜರವೆಂದು ಗೊತ್ತೇ ಇದೆ. ಆದುದರಿಂದ ಪುರವರೇಶ್ವರ, ಪುರಪರಮೇಶ್ವರ ಎಂಬ ವಿಶೇಷಣಗಳು ಆಯಾ ಊರುಗಳು ಆಯಾ ರಾಜರ ನಿವಾಸಸ್ಥಾನ ಅಥವಾ ರಾಜಧಾನಿಯಾಗಿದ್ದವೆಂದು ಸೂಚಿಸುತ್ತವೆ. ಲತ್ತಲೂರು ಯಾವಾಗಲೂ ರಾಷ್ಟ್ರಕೂಟರ ರಾಜಧಾನಿಯಾಗಿರಲಿಲ್ಲವಾದುದರಿಂದ ಅದು ಅವರ ಮೂಲನಿವಾಸಸ್ಥಾನವೇ ಆಗಿರಬೇಕು. ಈಗ ಈ ಲತ್ತಲೂರು ಅಥವಾ ಲತ್ತನೂರು ಯಾವುದೆಂಬುದನ್ನು

[11] *Ep. Ind.*, Vol. VIII., pp. 24 ff.

ನೋಡೋಣ. ಮಾಲ್‌ಖೇಡಿನ ರಾಷ್ಟ್ರಕೂಟರು ಔತ್ತರೇಯರೆಂದು ತಿಳಿದಿದ್ದ ಫ್ಲೀಟ್, ರಾಜವಾಡೆ ಮೊದಲಾದವರು ಇದು ಮಧ್ಯ ಹಿಂದೂಸ್ಥಾನದಲ್ಲಿನ ರತ್ನಪುರ ವೆಂದು ಊಹಿಸಿದರು. ಆದರೆ ತಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡಮೇಲೆ ಫ್ಲೀಟರು ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಬೀದರ್ ಜಿಲ್ಲೆಯೊಳಗೆ ಮುಂಜೇರಾ ನದಿಯ ತೀರದಲ್ಲಿರುವ ಲಾತೂರೇ ಈ ಲತ್ತಲೂರಾಗಿದ್ದಿರಬೇಕೆಂದು ಹೇಳಿದ್ದಾರೆ. ಈಚೆಗೆ ಈ ಲಾತೂರಿನಲ್ಲಿ ಸಿಕ್ಕಿರುವ ಚಾಲುಕ್ಯ ಮೂರನೆಯ ಸೋಮೇಶ್ವರನ ಕಾಲದ ಒಂದು ಶಿಲಾಶಾಸನದಲ್ಲಿ[12] ಈ ಕೆಳಗಿನ ಶ್ಲೋಕಗಳಿವೆ :—

> ಅಸ್ತಿ ದಿವ್ಯಂ ಪುರಸ್ರೇ(ಶ್ರೇ)ಷ್ಟಂ ಲತ್ತಲೌರಾಭಿಧಾನಕಂ |
> ಮಹಾಜನೈಃ ಪಂಚಶತೈರ್ವೇದವಿದ್ಭಿರ್ನಿಷೇವಿತಂ ||
> ದೇವೋಸ್ತಿ ಪ್ರಥಿತಸ್ತತ್ರ ನಾಮ್ನಾ ಪಾಪವಿನಾಶನಃ |
> ಯಂ ದೃಷ್ಟ್ವಾ ದೇವದೇವದೇವೇಶಂ ಸಿದ್ಧ್ಯಂತಿ ಮನುಜಾ ಭುವಿ ||

ಆ ವೂರಿನಲ್ಲಿ ಮಾಡಿದ ಒಂದು ದಾನವು ಈ ಶಾಸನದಲ್ಲಿ ಉಕ್ತವಾಗಿರುವುದರಿಂದ ಪೂರ್ವದಲ್ಲಿ ಲತ್ತಲೌರ (ಲತ್ತಲೂರ)ವೆಂಬ ಹೆಸರೇ ಲಾತೂರಿಗಿತ್ತೆಂಬುದನ್ನೂ ಸ್ಥಿರ ಪಡಿಸುತ್ತದೆ. ಆದುದರಿಂದ ಮಾಲ್‌ಖೇಡಿನ ರಾಷ್ಟ್ರಕೂಟರ ಮೂಲನಿವಾಸ ಸ್ಥಾನವು ಕರ್ಣಾಟಕದಲ್ಲಿನ ಲಾತೂರೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನು ಇವರು ಮಾತಾಡುತ್ತಿದ್ದ ಭಾಷೆ ಕನ್ನಡವೇ ಆಗಿದ್ದಿತೆಂಬುದಕ್ಕೂ ತಕ್ಕ ಆಧಾರಗಳಿವೆ. ಮಾಲ್‌ಖೇಡ್ ರಾಷ್ಟ್ರಕೂಟ ವಂಶದಲ್ಲಿ ಬಹಳ ಪ್ರಖ್ಯಾತನೂ, ಮೊದಲನೆಯ ಅಮೋಘವರ್ಷನ ತಂದೆಯೂ ಆದ ಮೂರನೆಯ ಗೋವಿಂದನು (ಕ್ರಿ. ಶ. ೭೯೩-೮೧೪) ತನ್ನ ಪರಾಕ್ರಮದಿಂದ ಅನೇಕ ರಾಜ್ಯಗಳನ್ನು ಗೆದ್ದು ಹಿಮವತ್ಪರ್ವತದವರೆಗೂ ತನ್ನ ವಂಶದ ಕೀರ್ತಿಯನ್ನು ಹರಡಿದನು. ಹೀಗೆ ಇವನು ಸ್ವಾಧೀನ ಪಡಿಸಿಕೊಂಡ ರಾಜ್ಯಗಳಲ್ಲೊಂದಾದ ಲಾಟಮಂಡಲ (ದಕ್ಷಿಣ ಗುಜರಾತ್)ದಲ್ಲಿ ತನ್ನ ತಮ್ಮನಾದ ಇಂದ್ರರಾಜನನ್ನು ಸಾಮಂತನನ್ನಾಗಿ ನೇಮಿಸಿದನು. ಈ ಇಂದ್ರನ ಸಂತತಿಯ ಅರಸರು ತಮ್ಮ ಸಾಮ್ರಾಟರಾದ ಮಾಲ್‌ಖೇಡ್ ಮನೆತನದವರ ಅಧೀನರಾಗಿ ಬಹುಕಾಲ ಗುಜರಾತಿನಲ್ಲಿ ರಾಜ್ಯಭಾರ ಮಾಡಿದರು. ಇವರ ತಾಮ್ರ ಶಾಸನಗಳು ಹಲವು ನಮಗೆ ದೊರೆತಿವೆ. ಇವುಗಳಲ್ಲಿ ಕೆಲವು ನಾಗರೀ ಲಿಪಿಯಲ್ಲಿಯೂ ಮತ್ತೆ ಕೆಲವು ಗುಜರಾತ್ ದೇಶದಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿದ್ದ ಲಿಪಿಯಲ್ಲಿಯೂ ಕೊರೆಯಲ್ಪಟ್ಟಿವೆ. ಈ ಮನೆತನದವರ ಐದು ತಾಮ್ರ ಪಟ್ಟಿಕೆಗಳಲ್ಲಿ ಒಂದು ವಿಶೇಷವು ಕಂಡುಬರುತ್ತದೆ. ಇವುಗಳ ಭಾಷೆಯೇನೋ ಸಂಸ್ಕೃತ. ಶಾಸನ

[12] *Proceedings of the VII Oriental Conference*, pp. 591 ff.

ವೆಲ್ಲವೂ ನಾಗರೀ ಲಿಪಿಯಲ್ಲೋ ಅಥವಾ ಆಗಿನ ಗುಜರಾತಿ ಲಿಪಿಯಲ್ಲೋ ಇದ್ದರೂ ಇವುಗಳ ದಾತರಾದ ರಾಜರ ಸ್ವಹಸ್ತದ ಒಪ್ಪವು ಮಾತ್ರ ಕನ್ನಡ ಅಕ್ಷರಗಳಲ್ಲಿ ಬರೆಯಲ್ಪಟ್ಟಿದೆ. ಇವುಗಳಲ್ಲಿ ಮೊದಲನೆಯದು ಗುಜರಾತ್ ರಾಷ್ಟ್ರಕೂಟ ಕರ್ಕರಾಜ ಸುವರ್ಣವರ್ಷನು ಶಕವರ್ಷ ೭೩೪ (ಕ್ರಿ. ಶ. ೮೧೨)ರಲ್ಲಿ ಕೊಟ್ಟ ದಾನಪತ್ರ.[13] ಈ ಶಾಸನದ ವಂಶವೃಕ್ಷ, ದಾನ ಮೊದಲಾದ ಭಾಗಗಳು ಆಗ್ಗೆ ಗುಜರಾತಿನಲ್ಲಿ ರೂಢಿಯಲ್ಲಿದ್ದ ಲಿಪಿಯಲ್ಲಿದ್ದರೂ 'ಸ್ವಹಸ್ತೋಯಂ ಮಮ ಶ್ರೀಕರ್ಕರಾಜಸ್ಯ ಶ್ರೀಮದಿಂದ್ರರಾಜಸುತಸ್ಯ' ಎಂಬ ಕರ್ಕನ ಸ್ವಹಸ್ತವು ಕನ್ನಡ ಲಿಪಿಯಲ್ಲೇ ಇದೆ. ಹೀಗೆಯೇ ಶಕ ೭೩೭ (ಕ್ರಿ. ಶ. ೮೧೬)ನೆಯ ವರ್ಷದ ಇದೇ ರಾಜನ ನೌಸಾರಿ ತಾಮ್ರ ಶಾಸನದಲ್ಲಿ[14]ಯೂ ರಾಜನ ಅಂಕಿತವಾದ 'ಸ್ವಹಸ್ತೋಯಂ ಮಮ ಶ್ರೀಮದಿನ್ದ್ರರಾಜಸುತಸ್ಯ ಶ್ರೀಕರ್ಕರಾಜಸ್ಯ' ಎಂಬ ಪದಗಳು ಮಾತ್ರ ಕನ್ನಡದಲ್ಲಿವೆ. ಈ ಶಾಸನವನ್ನು ಪ್ರಕಟಿಸಿರುವ ಡಾ|| ಡಿ. ಆರ್. ಭಂಡಾರಕರರು ಈ ವೈಲಕ್ಷಣ್ಯದ ಮೇಲೆ ಟೀಕೆ ಮಾಡುತ್ತಾ ಗುಜರಾತ್ ರಾಷ್ಟ್ರಕೂಟ ಅರಸರು ತಮ್ಮ ವಂಶದ ಮೂಲ ನಿವಾಸಸ್ಥಾನದಲ್ಲಿ ಪ್ರಚಾರದಲ್ಲಿದ್ದ ಲಿಪಿಯನ್ನೇ ಗುಜರಾತಿಗೆ ಬಂದ ಮೇಲೂ ಉಪಯೋಗಿಸುತ್ತಿದ್ದರೆಂದು ಹೇಳಿದ್ದಾರೆ. ಶಕ ೭೪೬ (ಕ್ರಿ. ಶ. ೮೨೪)ರ ಬ್ರಾಹ್ಮಣಪಲ್ಲಿ ಶಾಸನ[15]ದಲ್ಲಿ ಮಾಂಡಲಿಕನಾದ ಕರ್ಕರಾಜ ಮತ್ತು ಅವನ ಅಧಿಪತಿಯಾದ ಅಮೋಘವರ್ಷ ಇವರಿಬ್ಬರ ಒಪ್ಪಗಳೂ 'ಮತಮ್ಮಮ ಶ್ರೀಜಗತ್ತುಙ್ಗದೇವಸುತಸ್ಯ ಶ್ರೀಮದಮೋಘವರ್ಷದೇವಸ್ಯ ಯದುಪರಿ ಲಿಖಿತಂ|| ಮತಮ್ಮಮ ಇನ್ದ್ರರಾಜಸುತಸ್ಯ ಶ್ರೀಕರ್ಕರಾಜದೇವಸ್ಯ ಯದುಪರಿ ಲಿಖಿತಮಿತಿ||' ಎಂದು ಕನ್ನಡ ಅಕ್ಷರದಲ್ಲಿಯೇ ಬರೆಯಲ್ಪಟ್ಟಿವೆ. ಈ ಕರ್ಕರಾಜನ ಮಗನಾದ ಒಂದನೆಯ ಧ್ರುವರಾಜನ ಶಕ ೭೫೭ (ಕ್ರಿ. ಶ. ೮೩೫)ನೆಯ ವರ್ಷದ ಮತ್ತು ಧ್ರುವನ ಮೊಮ್ಮಗನಾದ ಎರಡನೆಯ ಧ್ರುವರಾಜನ ಶಕ ೮೦೬ (ಕ್ರಿ. ಶ. ೮೮೪)ರ ಶಾಸನಗಳು[16] ನಾಗರೀ ಲಿಪಿಯಲ್ಲಿ ಬರೆಯಲ್ಪಟ್ಟು ರಾಜರ ಸ್ವಹಸ್ತಗಳು 'ಮತಮ್ಮಮ ಶ್ರೀಧ್ರುವರಾಜದೇವಸ್ಯ || ಶ್ರೀಕರ್ಕರಾಜಸುತಸ್ಯ ಯದುಪರಿ ಲಿಖಿತಂ' || ಎಂದೂ 'ಸ್ವಹಸ್ತೋಯಂ ಶ್ರೀಧ್ರುವರಾಜದೇವಸ್ಯ' ಎಂದೂ ಕನ್ನಡ ಅಕ್ಷರದಲ್ಲಿಯೇ ಕೊರೆಯಲ್ಪಟ್ಟಿವೆ. ಗುಜರಾತ್ ರಾಷ್ಟ್ರಕೂಟರು ಸ್ವದೇಶವಾದ ಕರ್ಣಾಟಕವನ್ನು ಬಿಟ್ಟುಹೋಗಿ ಸುಮಾರು ಒಂದು ಶತಮಾನಕಾಲ ದೂರದೇಶದಲ್ಲಿ ರಾಜ್ಯಭಾರಮಾಡುತ್ತಿದ್ದರೂ ಇವರ

13 *Ind. Ant.*, Vol. XII, pp. 156 ff.

14 *Journal of the Bombay Branch of the Royal Asiatic Society*, Vol. XX, pp. 134 ff.

15 *Ep. Ind.*, Vol. XXII, pp. 77 ff.

16 *Ind. Ant.*, Vol. XIV, pp. 196 ff. and *Ep. Ind.*, Vol. XXII, pp. 64 ff.

ಬರವಣಿಗೆಯು ಮಾತ್ರ ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿಯೇ ನಡೆಯುತ್ತಿದ್ದಿತೆಂಬುದನ್ನು ಈ ಶಾಸನಗಳು ತೋರಿಸುತ್ತವೆ. ಮಧ್ಯಹಿಂದೂಸ್ಥಾನಕ್ಕೆ ಸೇರಿದ ಜೂರಾದಲ್ಲಿ ದೊರೆತ ರಾಷ್ಟ್ರಕೂಟ ೩ನೆಯ ಕೃಷ್ಣನ ಕನ್ನಡ ಶಾಸನ[17]ವೂ ಸಹ ಈ ರಾಜರ ತಾಯ್ನುಡಿಯು ಕನ್ನಡವೆಂದೇ ತೋರಿಸುತ್ತದೆ.

ಇನ್ನು ಮಾಲ್‌ಖೇಡ್ ಮನೆತನವು ಬಿರಾರ್ ರಾಷ್ಟ್ರಕೂಟರ ಒಂದು ಶಾಖೆಯೇ ಆಗಿರಬಹುದೆಂಬ ವಾದಕ್ಕೆ ಆಧಾರ ಸಾಲದು. ಪ್ರೊ. ಅಲ್ತೇಕರರು ತಮ್ಮ ಈ ಅಭಿಪ್ರಾಯಕ್ಕೆ ಎರಡು ಮುಖ್ಯಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯದು ಈ ಎರಡು ಮನೆತನಗಳ ರಾಜರ ಹೆಸರುಗಳಲ್ಲಿ ಕಂಡುಬರುವ ಸಾಮ್ಯ. ಎರಡನೆಯದು ಬಿರಾರ್ ರಾಷ್ಟ್ರಕೂಟರ ಶಾಸನಗಳು ದಕ್ಷಿಣದೇಶದಲ್ಲಿ ಸಿಕ್ಕಿದ ರಾಷ್ಟ್ರಕೂಟ ಶಾಸನಗಳಿಗಿಂತಲೂ ಪ್ರಾಚೀನವಾದವು. ಒಬ್ಬರಿಬ್ಬರ ಹೆಸರಿನಲ್ಲಿ ಹೋಲಿಕೆಯಿದ್ದ ಮಾತ್ರಕ್ಕೆ ಮನೆತನಗಳೆರಡೂ ಒಂದೇ ಎಂದು ಹೇಳುವುದು ಸರಿಯಲ್ಲ. ಅಲ್ತೇಕರರು ಬರೆದಾಗ ೮ನೆಯ ಶತಮಾನಕ್ಕೆ ಹಿಂದಿನ ರಾಷ್ಟ್ರಕೂಟ ಶಾಸನಗಳು ಕರ್ನಾಟಕದಲ್ಲಿ ದೊರೆತಿರಲಿಲ್ಲ. ಆದರೆ ಈಚೆಗೆ ಗೋಕಾಕಿನಲ್ಲಿ ರಾಷ್ಟ್ರಕೂಟ ದೇಜ್ಜಮಹಾರಾಜನ ೬-೭ನೆಯ ಶತಮಾನದ ಕನ್ನಡ ಲಿಪಿಯ ತಾಮ್ರ ಶಾಸನವೊಂದು ಸಿಕ್ಕಿದೆ[18]. ಈತನು ಮಾಲ್‌ಖೇಡ್ ಮನೆತನಕ್ಕೆ ಸೇರಿದ್ದನೋ ಇಲ್ಲವೋ ಎಂಬುದು ಗೊತ್ತಿಲ್ಲದಿದ್ದರೂ ಈತನು ಕರ್ನಾಟಕದಲ್ಲಿಯೇ ಆಳುತ್ತಿದ್ದನೆಂಬುದು ನಿಶ್ಚಯ. ಬಿರಾರ್ ರಾಷ್ಟ್ರಕೂಟರ ಕಾಲದಲ್ಲಿಯೇ ಕರ್ನಾಟಕದಲ್ಲಿಯೂ ರಾಷ್ಟ್ರಕೂಟರಿದ್ದುದರಿಂದ ಮಾಲ್‌ಖೇಡಿನ ರಾಷ್ಟ್ರಕೂಟರು ಹೊರಗಿನಿಂದ ಒಂದವರೆಂಬ ಶಂಕೆಗೆ ಅವಕಾಶವೇ ಇಲ್ಲ.

ಎನ್. ಲಕ್ಷ್ಮೀನಾರಾಯಣರಾವ್.

[17] *Ep. Ind.*, Vol. XIX, pp. 287 ff.

[18] *Ep. Ind.*, Vol. XXI, pp. 289 ff.

ಚಾತಕವ್ರತ

ಭಾಗ ೧

'ಬೇಡಿ ಪಡೆದು ದಿವ್ಯರಸವ ಚಾತಕ!
ಮಾಡು ನಿನ್ನ ಜನ್ಮಜಾಲ ಸಾರ್ಥಕ!
ಜಗದ ನೀರು ಹರಿದು ಬಂದು ಕರೆದರು
ಮುಗಿಲ ಹನಿಯ ಪಡೆವವರೆಗೆ ತಡೆದಿರು!'
ಕೇಳಿತಿಂತು ಎಳೆಯ ಹಕ್ಕಿ ಹಸುಳಗೆ
ಗಾಳಿ ಹರಹಿ ನಿಂತ ಸುಡಿಯ ಜಾಳಿಗೆ.
ಹರುಷವದಕೆ ಉಕ್ಕಿ ಮೈಯು ಅರಳಿಸೆ
ತೆರೆದು ಕವಳಿಗಣ್ಣು ಸುತ್ತು ಹೊರಳಿಸೆ.
ಮಳೆಯ ಕಾಲದಂತೆ ಮೋಡವೆತ್ತಲು
ಇಳೆಯ ಹಿರಿಯ ಕೊಡೆಯ ಹಾಗೆ ಮುತ್ತಲು
ಎಲ್ಲ ದೆಸೆಯ ನೀಲ ಮುಗಿಲ ಪಟದಲಿ
ಸೊಲ್ಲು ಅದುವೆ ಕೇಳಿತು ನಿಚ್ಚಟದಲಿ.
ಮಿಂಚುಬಳ್ಳಿಯಕ್ಕರದಲಿ ಬರೆದಿತು
ಹೊಂಚಿ ಕಣ್ಣು ಚಿವುಟಿ ಕೂಸ ಕರೆದಿತು.
ಬಯಲ ನೆಲದಿ ಆಲದೊಂದು ಮರದೊಳು
ನಯದಿ ಬೆಳೆದ ಚಾತಕಮರಿ ಮರೆಯೊಳು
ಅಂದೆ ಬಲಿತ ಪಕ್ಕದಿಂದ ಹಾರಲು
ಮುಂದೆ ಕಾಲನೆತ್ತಿ ಇಟ್ಟು ತೋರಲು
ಕರೆಯ ಕೇಳಿ ಇರದ ಮನವು ತಾನೆಯೆ
ಹರಿಯೆ ಕಣ್ಣು ಕಿರಣವೇರಿ ಮೇಲೆಯೆ
ಅಳಿದು ಮಿಂಚು ಮೊದಲ ಬಿಸಿಲು ಮೊಗಸಿತು
ಬಿಳಿಯ ಮೋಡದರಳೆ-ಸುರುಳಿ ಸೊಗಸಿತು
'ಕಾವು ಕೆಂಡದುರಿಯ ಕಾಲವಿಂತು ಈ
ನೋವನುಂಡು ತಣಿವ ಬರವು ಕಾಯು ನೀ'
ಎನೆ ಗಭೀರಶಾಂತಿಯಂತರಿಕ್ಷದಿ

ಮನವ ತರುಬಿ ತನುವ ಮುದುಡಿ ಪಕ್ಕದಿ
ಮರದ ಮನೆಯ ಗವಿಯ ಸೇರಿ ಒರಗಿರೆ
ತೆರೆದ ಚುಂಚು ನೀರು ಎಂದು ಒರಲಿರೆ
ರಸವ ಹೀರಲೆಂಬ ಬಿಸಿಲಿಸರಸನು
ತೃಷೆಯ ಮಿಗಿಸಿ ಮೆರೆಯೆ ನಗೆಯ ಬಿರುಸನು
ಕತ್ತಲಡಸಿ ಕವಿಯೆ ಕಣ್ಣಮುಂದಲು
ಸುತ್ತಿಹೊಳೆದವೆನಿತೊ ಹೊಳೆಯ ಬಂಬಲು.
ಕೆರೆಯು ಝರಿಯು ನೂರು ಕಡಲ ರಾಸಿಯು
ತೆರೆಯ ಚಿಮ್ಮಿ ತೂಸರವನು ಸೂಸಿಯು.
'ಕುಡಿಯೊ ತಟಕು ಗುಟುಕು ನೀರನೀಗಳೆ
ಮಡಿಯುತಿರುವೆ ನೀರಡಿಕೆಯ ಕಳೆಕಳೆ!'
ಎಂಬ ಕರೆಗೆ ಹಕ್ಕಿಹರಣ ಬೇಡಿರೆ
ಹಂಬಲಿಸುತ ಮನದಿ ಓಡಿ ನೋಡಿರೆ
ಬಾಯ ತೆರೆಯು ಮುಚ್ಚಲಾರದಾಗಲು
ಹಾಯುವಂತೆ ನೀರ ತಳಕೆ ಬಾಗಲು.
ಎದ್ದು ನೆಗೆವ ಬುದ್ಧಿ ತಿವಿಯೆ ಮುಂಗಡೆ
ಮುದ್ದೆಮಾಂಸ ಹಾರಬಯಸೆ ನೀರೆಡೆ
ಅಂತರಂಗದಲ್ಲಿ ನಿಂತ ಬಲ್ಮೆವದು
ಎಂತೊ ನುಗ್ಗಿ ಮೈಯ ತುಂಬಿ ಬಲಿವುದು
ಹೊರಟ ಕಿರಿಯ ಚಾತಕವನು ತಡೆದಿತು
ಹಿರಿಯದೊಂದು ವ್ರತವ ಹಸುಳೆ ಹಿಡಿದಿತು.
'ಕುಡಿಯಲಾರೆ ನೆಲದ ಕದಡುನೀರನು
ಪಡೆವವರೆಗೆ ಮುಗಿಲ ತಿಳಿಯ ಜಲವನು
ಅಸುವ ಕಸಿದರೇನು ನಾನು ಸಾರ್ಥಕ
ಹಸುಳನಹುದು ದಿವ್ಯರಸದ ಸಾಧಕ!'

ಭಾಗ ೨

'ಬೇಡಿಪಡೆದು ದಿವ್ಯರಸವ ಚಾತಕ
ಮಾಡು ನಿನ್ನ ಜನ್ಮಜಾಲ ಸಾರ್ಥಕ

ಜಗದ ನೀರು ಹರಿದು ಬಂದು ಕರೆದರು
ಮುಗಿಲಹನಿಯ ಪಡೆವವರೆಗೆ ತಡೆದಿರು!'

ಮರುದಿನದಲಿ ಸುಣ್ಣ ನಸುಕು ತೋರಿರೆ
ಕಿರಿಯಗಾಳಿ ತಂಪನೇರಿ ಸಾರಿರೆ
ಅರುಣ ತನ್ನ ಹೊಂಗರಿಯನು ತೆರೆದಿರೆ
ಹಿರಿಯ ಚೆಂದ ಹಿರಿಮೆಬರೆಹ ಬರೆದಿರೆ
ತಿರೆಯ ಮಗುಟದಂತೆ ಹೊತ್ತು ಮೂಡಿರೆ
ಮರಗಳೆಲ್ಲ ಹೊನ್ನ ಮುಡಿಗೆ ಸೂಡಿರೆ
ಮುನ್ನ ದಿನದಿ ಪೊಣ್ದು ಮಲಗಿದಾ ಮರಿ
ಕಂಡಿತೆದ್ದು ಬೆಳಕು ಚಿಮ್ಮಿ ದೀಪರಿ.
ಗೂಡ ತುದಿಗೆ ಸರಿದು ನೋಡೆ ನೋಡಿತು
ನಾಡೆ ಬೇರೆ ಇದುವು ಎಂದು ಹಾಡಿತು.
ಹಲವು ಬೆಳಗು ಹಳೆಯವಾದ ಕಣ್ಣದು
ಚೆಲುವ ಹೊಸತು ಕಿರಣವುಂಡು ಸೋತುದು
'ಚೆನ್ನು! ನನಗೆ ಅನ್ನ ನೀರು ಈ ಕಳೆ
ಇನ್ನು ಎಂತು ಎನ್ನ ವ್ರತಕೆ ಇಳಿಕಳೆ?'
ಎಂದು ಎರಕೆ ಹರಹಿ ಮೈಯ ತೂರಿತು
ಬಂದ ಬಿರಿತ ಅಂದದಂತೆ ಹಾರಿತು.
ಮೊತ್ತಮೊದಲ ನೆಗೆತದಾಟ ಎಂತವೊ!
ಎತ್ತಲತ್ತ ಸೆಡೆದು ಸುಳಿವ ಪಂತವೊ!
ಮರದಿ ಮರಕೆ ಹಾರುತಿರುವ ಚಾದಗೆ
ಗುರಿಯಗುಂಟ ಹರಿವ ಜೀವ ನೋಳ್ಪಗೆ.
ಹಾರಲೀಗ ಆರ್ಪೆನೆಂದು ವಿಹಗವು
ಸೂರ್ಯನತ್ತ ಮೋರೆತಿರುವಲಾಗವು
ಕಣ್ಣ ತಿವಿದು ಕೋಟಿಕದಿರು ಸುಳಿದುವು
ಅನ್ನ ನೀರ ರೂಹಿನಲ್ಲಿ ಹೊಳೆದುವು.
ಬೆಳಕುಬೀಡಿನಲ್ಲಿ ಬಯಕೆ ಹಣ್ಣಿತು
ಒಳಿತು ಎಂದು ಹಕ್ಕಿಯಣುಗ ಹಿಗ್ಗಿತು.
ತಡೆಯದತ್ತ ಬೆಳ್ಳಿಬೆಳಕು ಬಯಲಲಿ

ಗಿಡುವ ರೆಂಬೆಯೊದೆದು ನೆಗೆದಿತಲೆಯಲಿ.
ಕಾಂಬ ಬೆಳಕು ತಾನೆಯೆಂದು ಅರಿಯುತ
ಸಂಜಿತೇನೊ ತನ್ನ ಕರೆಯ ಮರೆಯುತ
ಮೈಯ ಮುತ್ತಿ ಪಳುಕಿನಂಥ ಕಳೆಗಳು
ಒಯ್ಯನದರ ಪರಿವೆಕಳೆಯೆ ಆಗಳು.
ನೇಸರೆದ್ದ ದೆಸೆಯ ಬಿಸಿಯ ಬಾನೊಳು
ಸೂಸಿಬಂದವೇಸೊ ಏನೊ ಖಗಗಳು.
ನಸುಕುಜೇಲಿ ಕೊಸರಿ ಬಂದ ಇರುಳಿನಾ
ಮಸುಕು ಕಣಗಳಾಗಿ ಕಂಡವಾಕ್ಷಣಾ.
ದೂರದಿಂದ ನಭದ ಕಣ್ಣಿನೆವೆಯೊಲು
ಸಾರೆಬರಲು ಬಣ್ಣಬಣ್ಣದುರುಗಲು.
ಕಾರಹುಲ್ಲ ಹಚ್ಚಹಸುರ ಹೊದಿಕೆಯ
ಗೋರ ಬೇಸಗೆಯಲಿ ಕೂಡ ಹೊದೆದಿಹ
ಸಾರುತಿರುವುದೊಂದು ಗಿಳಿಯ ಮೋಹರ
ಕೀರಿ ಚೀರಿ ಮಲೆದು ಕೆಲೆವ ಗಾವರ
ಒಂದೆ ಒಲುಮೆಯೊಕ್ಕಲಂತೆ ತೋರುವ
ಬಂದವಾಗ ತಿಳಿಯ ಬಿಳಿಯ ಪಾರಿವ.
ಬಸಿತಬಣ್ಣ ಬೆಳುವ ಕಾಗೆ-ನೇರಿಲ
ಹೆಸರುಗೊಂಡ ಕೊಳಲಕೊರಳ ಕೋಕಿಲ.
ಮೆಚ್ಚಿ ಜಾಣತಿಯರ ಮೈಯ ಅರಿಸಿಣ
ಕಚ್ಚಿ ಬಾಯಿ ಹಾಗೆಯಾದ ಖಗಗಣ.
ಎಲ್ಲ ಬೆರೆತು ಎರಕೆಯೆತ್ತಿ ಇಳಿಸುತ
ಪಿಳ್ಳೆಚಾತಕವನು ಕರೆದು ಎಳೆಯುತ
ಹಿಂಡುಗೊಂಡು ಹತ್ತೆಸಾರಿ ಬಂದುವು
ಬಂಡದಂಡಿನಂತೆ ಅಡರಿ ನಿಂದುವು.
ಅರಸುಕನಸಿನಲ್ಲಿ ಬೆರೆತ ಕವಿಮರಿ
ಅರಿವು-ಹೊಂದಿ ಸರಿಯಿತೆಂತ ಗಾಬರಿ!
ಪಿಳುಕುಗಣ್ಣು ಬಿಡುತ ಬಯಲ ನೋಡಿತು.
ಬೆಳಕಿನೂಟವಳಿಯಿತೆಂದು ಬಾಡಿತು.

ಸುತ್ತು ನೆರೆದ ಬಣ್ಣಬಳಗದುಲಿಗಳು
ಮುತ್ತಿ ಮಾಯಬಲೆಯ ನೀಳ್ದ ನುಲಿಗಳು
ತನ್ನ ಮೊದಲ ತಂಪುತಾಣಕಾರಿಸಿ
ಮುನ್ನ ಮರಕೆ ನಡೆಯೆ ರೆಕ್ಕೆಹಾರಿಸಿ
'ನಿಲ್ಲು ನಿಲ್ಲೊ ಚೆಲುವ ಕಿರಿಯ ಬರುವೆವು
ಎಲ್ಲರೊಂದೆ ಆಗಿ ಸೊಗವ ಸವಿವೆವು'
ಎಂಬ ಕೂಗು ಮುಸುಕಿ ಬಗೆಯ ಮುಸುಳಿಸೆ
ತುಂಬುಹೊಳೆಯ ಸುಳಿಯಹಾಗೆ ಸುಳಿಯಿಸೆ
ಸೂರುಬಯಕೆ ಸೇರಿ ಸೆಳೆವ ದಿಕ್ಕಿಗೆ
ಮಾರಿಕೊಂಡು ಸಾರಿತೆಂತೊ ಚಾದಗೆ
ಅಂದೆ ಇಳೆಗೆ ಹುಮ್ಮಸಿಳಿದ ಹಾಗೆಯೆ
ಮುಂದುವರಿದವೆಲ್ಲ ಬೆರೆತು ಸಾಗಿಯೆ.
ಒಮ್ಮೆ ಮರದ ಬಣ್ಣಮೈಯ ಕಣ್ಣೊಲು
ಒಮ್ಮೆ ನೆಲದ ಬಣ್ಣವಲ್ಲಿಕುಸುರೊಲು.
ನುಗುಳೆ ಕೆರೆಯ ತೆರೆಯ ಚಿಮ್ಮಿ ಸುತ್ತಲು
ಮುಗಿಲ ತುದಿಗೆ ಹಾರಿ ಮುಸುರಿ ಸುತ್ತಲು.
ಹಸಿವು ಭರದಿ ತಾಳತಟ್ಟಿದಂತೆಯೆ
ಒಸೆದು ಪಕ್ಕಬೀಸಿ ಮುಂತೆ ಮುಂತೆಯೆ
ರಾಸಿಹೊಲಕೆ ನೀರ ಬೆಳೆಯ ತೋಟಕೆ
ಸೂಸುಗಾಳು ಸವಿಯಲೆಂಬ ಮಾಟಕೆ
ಎಲ್ಲ ಸೊಗವ ಸವಿವ ಸೊಮ್ಮು ಸರದಲಿ
ಚೆಲ್ಲದಾಟ ಸೊಲ್ಲುಗೊಂಡ ತೆರದಲಿ
ಗೆಡೆಯುಗಡಣ ತಡವರಿಸದೆ ನಡೆಯಲು
ಒಡನೆ ಬರಲು ಚಾತಕಮರಿ ನೆರಳೊಲು
ಕಾಳ ಕಡಿದು ಹಣ್ಣ ಮೆದ್ದು ಬಿಸಿಲಲು
ತಾಳದಂಥ ನೀರಡಿಕೆಯ ತಾಳಲು
'ಇಹುದು ಗೆಳೆಯ ಹೋಗಲೀಚೆ ಬರೆಬರೆ
ಸಿಹಿಯು ಮಲೆಯು ಕರಗಿ ಆದ ಹಿರಿತೊರೆ'
ಎನಲು ಸಲಿಗೆಬಲೆಗೆ ಸಿಲುಕಿ ಸರಿಯಿತು

ಚಣವದೇಕೋ ತನ್ನ ನೋಂಪಿ ಮರೆಯಿತು
ನೀರು ಎಲ್ಲಿ ತೋರಿರೆಂಬ ಮಣಿತದಿ
ಹಾರಿ ಹೋಗೆಹೋಗೆ ಕಂಡಿತಾ ನದಿ.
ತಡಿಗೆ ಬಾಗಿ ಮೆಚ್ಚಿ ಮುತ್ತನಿಡುವೊಲು
ಕುಡಿಯಲಾಗ ಉಳಿದ ಹಕ್ಕಿದುರುಗಲು.
ತಣುವಿನಲ್ಲಿ ಕಾಲನಿರಿಸಿ ಚಾದಗೆ
ಮೊನೆಯ ಮುಂದೆ ಚಾಚೆ ನೀರಿನಾಸೆಗೆ.
'ಎನ್ನ ಹರಿವ ನೀರಿನಂತೆ ನಿಲ್ಲದು
ಎಂತ ಹಿರಿಯ ವ್ರತವು ಇರಲಿ ಜೊಳ್ಳದು'
ಎಂದು ಕೊಂಕಿ ನುಡಿವ ನದಿಯ ನುಡಿಗಳ
ತಂದು ಮನದಿ ತೋರಿ ಕಣ್ಣ ಹನಿಗಳ
ನೆನೆದು ನಾಚಿ ಮುನ್ನ ದಿನದ ವ್ರತವನು
ಮಣಿದು ಹಿಂದೆ ಇಡುತಲಿರಲು ಪದವನು
ಹೊರದ ಹೊನಲು ಬರೆತಹಾಗೆ ಆರಲು
ತೊರೆಯು ಬಂದು ಬಳಗೆ ತೀವಿ ತೋರಲು
ತಣಿವುಗೊಂಡು ದೂರಮರದಿ ಕುಳಿತಿರೆ
ಏನು ಏಕೆ ಎಂದು ಹಕ್ಕಿ ನುಳಿದಿರೆ
ಸುತ್ತುನೇಣಿನಂತೆ ನೀರಿಗೆಳೆಯಲು
ಮತ್ತೆ ತನ್ನ ಪೂಣ್ಕೆ ಸಾರಿತಾಗಳು
'ಕುಡಿಯಲಾರೆ ನೆಲದ ಕದಡುನೀರನು
ಪಡೆವವರೆಗೆ ಮುಗಿಲ ತಿಳಿಯ ಜಲವನು
ಅಸುವ ಕಸಿದರೇನು ನಾನು ಸಾರ್ಥಕ
ಹಸುಳನಹುದು ದಿವ್ಯರಸದ ಸಾಧಕ!'

ರಂ. ಶ್ರೀ. ಮುಗಳಿ.

(ಮುಂದೆ ಸಾಗುವುದು)

ಅಹಲ್ಯೆ

ಪೂರ್ವಾರ್ಧಾಂಕ

ನಾಂದಿ

ಹುಲುಬಯಕೆ ಬಾ ಎನಲು, ಓ ಎಂದು ಬಾರದಿರು
　　ವಾತಾಪಿಯಂದದೊಳು ಬಾಳನೊಡೆದು.
ಮೊಗ್ಗಿನೊಳು ಕಂಪಂತೆ ಚೇತದೊಳು ಬಳೆಯುತ್ತ
　　ಸಮಯವರಿತರಳಿ ಬಾ, ಒಲವೆ ನಲಿದು.—
ಇಂತೆಮ್ಮ ಬಿನ್ನಹವ ಮಾರ ಮನ್ನಿಸಲಿ,
ಆಮೋದಕಾಗುವೊಲು ಬಾಳನಾಗಿಸಲಿ!

ದೃಶ್ಯ ೧

(ನಂದನವನ. ಸುರರೂ ಸುರಸುಂದರಿಯರೂ ಜತೆಜತೆಯಾಗಿ ಹಾಡಿಕೊಂಡು ರಂಗಕ್ಕೆ ಪ್ರವೇಶಿಸುವರು.—ಇದನ್ನು ತಿರೆಯವರ ಒಂದು ಮೋಹಕವಾದ ಕನಸಿನಂತೆ ತೋರಿಸಬೇಕು: ವ್ಯಕ್ತಾವ್ಯಕ್ತ ವ್ಯಕ್ತಿಗಳ ತಂಡ; ಎಲರ ಮೇಲೆ ನಡೆದಂತೆ ನಡೆ; ಇರುಳಿನಲ್ಲಿ ತಾರೆಗಳಂತೆ ಹೊಳಹು; ಇತ್ಯಾದಿ ಇತ್ಯಾದಿ. ರಂಗನಿರ್ಮಾಣ ಚಾತುರ್ಯವಿದ್ದಂತೆ. ಈ ಉಪಕರಣಗಳು ಇಲ್ಲದ ಎಡೆಯಲ್ಲಿ ಇದನ್ನು ತೆರೆಯ ಮರೆಯಲ್ಲಿ ಹಾಡಿ, ನೆಳಲ ಕುಣಿತಗಳಿಂದ ಅಭಿನಯಿಸಿ ತೋರಿಸಬಹುದು.)

ನಿರ್ಜರರಾವೆಮಗೇತರ ಭೀತಿ?
ಸತತ ಬಿನದಮೇ ನಮ್ಮಯ ರೀತಿ!
ಸುಮನಸರಾವೆಮಗೇತರ ಕಟ್ಟು?
ಸಂತಸಕೆಂದೇ ಆಯಿತು ಹುಟ್ಟು.
ಸೊದೆ ಕುಡಿವವರಾವೆಮಗೇನರಕೆ?
ಆಯಿತು ಬವಣಿಕೆಯೇ ಹಂಬಲಿಕೆ.
ಬಯಕೆಗಳೆಮ್ಮನು ಬಾಧಿಪುವೆಂತು
ಸುರತರುವಡಿಯೊಳೆ ನಾವಿರಲಿಂತು?
ನಂದನವನಮಿದು ಸುಸ್ಥಿರ ಚೈತ್ರಂ

ಶಿಶಿರಾಮಿತ್ರಂ ವರ್ಣವಿಚಿತ್ರಂ.
ಇಲ್ಲಿನ ಬೆರಗಿನ ಕಮ್ಮಲರಿಂದ
ನಡೆಗೆಟ್ಟಿಹುದೋ ಚಪಲದ ಚೆಂದ.
ಇಲ್ಲಲ್ಲೆನ್ನುತ ನಾವದನರಸಿ
ಕಿನ್ನರ ಗೀತದ ಗತಿಯನುಸರಿಸಿ
ಪರಿದಾಡುವೆವಹಹಾ ಜತೆಜತೆಗೆ
ಪೂವೂವಿಗೆ ಗಿಡಗಿಡಕೆ ಲತೆಲತೆಗೆ.
ಇದುವೇ ನಮ್ಮಯ ಬಾಳಿನ ರೀತಿ!
ನಿರ್ಜರರಾವೆಮಗೇತರ ಭೀತಿ?

ಸುರಸುಂದರಿಯರ ತಂಡ

ಆಗಸವೇ ನಮ್ಮಾಡುಂಬೊಲವು
ಜಗೆದಂತಾಡಲು ನಮಗಿದು ತೆರವು.
ಯಾಮಿನಿ ಒಯ್ಯುವ ಉಡುಗಳ ಹುಡುಕಿ
ಉಷೆಯೊಡನಲಸುವ ಬೆಳ್ಳಿಯ ತುಡುಕಿ
ಜಗ ಬೆಳಗಲು ದೆಸೆ ಹೊಳಲಿಡೆ ನಕ್ಕು
ಮುಗಿಲ ಬೆನ್ನೇರಿ ವೋದದಿ ಮಿಕ್ಕು
ನಡುಬಾನೊಳು ನಡೆಬವಣೆಗೆ ಸಿಲುಕಿ
ನಿದ್ರಿಪ ರವಿಯುರಿದೇಳಲು ಕೆಣಕಿ
ಸಂಜೆಯೊಡನೆ ಸುರಪುರಿ ಹೆದ್ದಾರಿ
ನಿಗಿ ಎನ್ನಲು ಸಿಂಗಾರವ ತೋರಿ
ಬಾನೋಲಗದೊಳು ವಿಭವದಿ ನೆರೆದು
ಗೀತ ನಾಟ್ಯ ಸಲ್ಲಾಪದಿ ಮೆರೆದು
ಇರುಳ ಬನದಿ ಸಂಕೇತವ ಮಾಡಿ
ನಲ್ಲರ ಜತೆಯೊಳು ಬಗೆದಂತಾಡಿ
ಜಿನದಿಪೆವಹಹಾ ದಿನದಿನವಿಂತು!
ಇದನೂ ಮೀರಿದ ವೋದವದೆಂತು?
ನಿರ್ಜರರಾವೆಮಗೇತರ ಭೀತಿ?
ಸತತ ಬಿನದಮೇ ನಮ್ಮಯ ನೀತಿ!

ಸುರರ ತಂಡ

ಜಯ ಜಯ ವಾಸವ! ಜಯ ದೇವೇಂದ್ರ!
ಜಯ ವಿಭವಪ್ರಿಯ! ಜಯ ಅಮರೇಂದ್ರ!—
ಇಂತುಗ್ಗಡಿಪುದೆ ನಮ್ಮಯ ಹಿರಿಮೆ,
ವಾಸವನಾಳಲು ನಮಗೇಂ ಕಡಮೆ?
ಆತನಿಂದಲಾ ನಮಗೀ ಸಲ್ಮೆ,
ಹೆರರಿಗರಿದೆನಿಪ ದಿವದೀ ಮೇಲ್ಮೆ;
ಸೊದೆಗು ಮಿಕ್ಕ ಹಸಿಯುಣಿಸಿನ ಭೋಗಂ
ತುಷ್ಟತಿರೆ ನಮ್ಮ ಭಾವಿಪ ಯೋಗಂ.
ಒಡೆಯಗಾಕೆಯೊಳು ಕಸಿಕರವೆನಿತು!
ಆಕೆಗಮರರೊಳು ಭಾವನೆಯೆನಿತು!
ಮಾಗಿ ಕಾಡುತಿರೆ ಮಧುವಂ ಕಳುಪಿ
ಬಿಸಿಲು ಬಾಡಿಸಲು ಮುಗಿಲಂ ನೆರಪಿ
ಅವಳ ಪೊರೆವುದೇ ನಮ್ಮುದ್ಯೋಗಂ
ಅವಳ ಸೊಗಯಿಪುದೆ ನಮ್ಮನುರಾಗಂ.
ಹಿಮಸೀಮಂತಿನಿ ಕಾನನಕುಂತಳೆ
ಸಾಗರದುಕೂಲೆ ಶಾದ್ವಲಾಂಚಲೆ
ನದಿನದಮುಕ್ತಾಹಾರೆ ಮನೋಹರೆ—
ಈ ತಿರೆ ನಮಗಿರೆ, ಶಕ್ರನಾಳುತಿರೆ,
ನಿರ್ಭಯರಾವೆಮಗೇತರ ಭೀತಿ?
ಸತತ ಬಿಸದಮೇ ನಮ್ಮಯ ರೀತಿ!

ತೆರೆ.

ದೃಶ್ಯ ೨

(ಗೌತಮಾಶ್ರಮಕ್ಕೆ ಸ್ವಲ್ಪ ದೂರದಲ್ಲಿರುವ ವನಪ್ರದೇಶ. ಭೂಪ್ರವಾಸಿಯಾದ ಇಂದ್ರನು ಮೇಘನಿರ್ವಾಹಕನಾದ ಪುಷ್ಕರನೊಡನೆ ಪ್ರವೇಶಿಸುತ್ತಾನೆ. ನಂದನದ ಸಂಗೀತವು ದೂರ ದೂರ ಸರಿದು, ಕ್ಷೀಣವಾಗಿ ಕೇಳಿಬರುತ್ತಿದೆ.)

ಇಂದ್ರ

(ಹಸನ್ಮುಖನಾಗಿ)

ಲಾಲಿಸಿಗೋ! ನಂದನದೊಳು ಬಾನ್ಮಕ್ಕಳು ನಲಿದು
ಸಂಗೀತವನಾಚರಿಸರು ಜಡದೆಮ್ಮನು ನೆನೆದು.

ತಿರೆತಾಯಿಯ ಅಕ್ಕರೆಗೂ ವಿಕ್ರನ್ನಯ ಒಲವು
ಬಾನೆಡೆಗಾಯಿತು, ಪುಷ್ಕರ, ಇಂದ್ರನ್ನಯ ಮನವು.
ಇದೆ ಪಯಣದ ಕೊನೆದಿನವೀ ರಮ್ಯವನೋತ್ಸಂಗ
ಸ್ವಾಗತಿಸುತ್ತಿದೆ ನಮ್ಮನು; ಈ ಎಡೆ ತುಸ ತಂಗಿ,
ಮುಂಬರಿಯುವ. ಸನಿಯದೊಳಿಹ ಆ ಭೂಸುರಧಾಮ
ಸೌಹಾರ್ದವ ಸೂಚಿಸುತಿದೆ; ಅಗೊ ಹೋಮದ ಧೂಮ!

ಪುಷ್ಕರ

ಆಣತಿ ಎಂತಂತೆಯೆ ಸರಿ! ಆ ತರುತಲದಿ
ಬಿಡುವಂ ಕೊಳೆ ವೇದಿಕೆ ಇದೆ—ಗುಲ್ಮದ ಕೆಲದಿ.

ಇಂದ್ರ

ನಡೆ, ಪುಷ್ಕರ, ದಾರಿಯ ತೋರಿಂದೆಮ್ಮಯ ಮನಕೆ
ನವಭಾವಗಳೊದಗುತ್ತಿವೆ, ಬಗೆ ಸೋತಿದೆ ಬನಕೆ—
ಈ ತಿರೆಯಂತೀ ತಾಣವನಗಲಲು ಮನ ಬರದೆ
ನಿಟ್ಟಿಸುವೀ ನೀರ್ದಿಟ್ಟಿಯು ದಿನದೇವನ ತೆರದೆ.

ಪುಷ್ಕರ

ಅಹುದೊಡೆಯಾ, ಚೆಲುವೀ ಬನ.—ಇದೆ ಇದೆ ಹಾದಿ.

(ಎಂದು ಕರೆದೊಯ್ಯುವನು.)

ಇಂದ್ರ

(ವೇದಿಕೆಯಲ್ಲಿ ಆಸೀನನಾಗಿ, ಸುಖವನ್ನು ಅಭಿನಯಿಸಿ)

ಅಹಹಾ ದಿಟ! ನಿಶ್ಶಂಕತೆ ಶಾಂತತೆ ನಿಶ್ಚಿಂತೆ—
ಇವಕಾಶಿಸಿ ಬಹ ಮಂದಿಗೆ ಇಲ್ಲಾಗದು ಕೊರತೆ.

(ಪುಷ್ಕರನನ್ನು ಕುರಿತು)

ಆರಾಶ್ರಮ? ತವಸಿಗರಾರೇಬಗೆಯವರಿವರು?

(ನಗುತ್ತಾ)

ಈ ತಿರೆಯೊಳು ಪೇಳುಂಟೇ ನೀನರಿಯದ ಜನರು?

ಪುಷ್ಕರ

ಗೌತಮವನಮಿದು, ಜೀಯಾ, ಖ್ಯಾತನು ಈ ಯೋಗಿ:
ಜಿತಕಾಮಂ, ದೇವಪ್ರಿಯನೀ ನರಸ ತ್ಯಾಗಿ.
ನಮಗಾದವರೀ ಮಂದಿಯು—

ಒಂದು ದನಿ

(ಗುಲ್ಮದ ಕಡೆಯಿಂದ)

ಪೊರೆವರುಂಟೆ ಪೊರೆವರುಂಟೆ, ಹಾ ಬಾನ ಹೆಣ್ಣ?
ದುರುಳ ತವಸಿ ತರುಬುವನೇ, ಹಾ ನನ್ನ ಬನ್ನ!

ಇಂದ್ರ

(ಝುಗ್ಗನೆದ್ದು)

ಜನದ ಶಾಂತಿ ಭಂಗವಾಗೆ, ನಮ್ಮ ಮನದ ಹದುಳ ನೀಗೆ,
ಅಂಜಿದಬಲೆಯಾರ್ತನಾದವಾರದೇನಿದು?
ಈ ತಪೋನ್ಮತ್ತನಾರು? ಬಾನ ಹೆಣ್ಣದಾರು? ಆರು?
ಬಾ ಪುಷ್ಕರ, ಪರಿಕಿಸುವೀ ಸುದ್ದಿಯೇನಿದು!

(ಗುಲ್ಮದ ಕೆಲದಲ್ಲಿ ಮೂರ್ಛಿತಳಾದ ರಂಭೆಯನ್ನು ನೋಡಿ, ಪುಷ್ಕರನು ಅವಳನ್ನು ಎತ್ತಿ ಎಚ್ಚರಿಸುತ್ತಿರುವಾಗ)

ಇಂದ್ರ

ಅಹಹಾ!
ಕಡಿದು ಬಿದ್ದ ಕಲ್ಪಲತೆಯೊ? ತೊಟ್ಟುಗಳೆದ ಮಂದಾರವೊ?
ಗುರಿಯು ತಪ್ಪಿ ವಿಫಲವಾದ ಪುಷ್ಪಬಾಣವೊ?
ಯೋಗಿ ಬಿಸುಟ ರಾಗವಿದುವೊ, ತವಸಿ ಎಸೆದ ಭೋಗವಿದುವೊ?
ರಂಭೆ ಇವಳೊ? ಮುರುಟಿಬಿದ್ದ ನಮ್ಮ ಮಾನವೊ?

ರಂಭೆ

(ಪುಷ್ಕರನಿಂದ ಮೂರ್ಛೆ ತಿಳಿದೆದ್ದು, ದೇವೇಂದ್ರನನ್ನು ನೋಡಿ)

ಶರಣು ಶರಣು ದೇವೇಂದ್ರ, ಶರಣು ಶರಣು ಶರಣು!

ಇಂದ್ರ

ತಾಳಿಕೊ ಸಖಿ, ಅಂಜಿಕೆಯುಳಿ, ಪೇಳೇನೀ ಹದನು?

ರಂಭೆ

ಏನೇಳ್ವೆನು, ನನ್ನೊಡೆಯಾ, ಬೇಡ ನನ್ನ ಪಾಡು—
ದಿವಕೆ ಹಿತವನೆಸಗಲಾದೆ ಮುನಿಯು ಮುಳಿಸಿಗೀಡು!

ಇಂದ್ರ

ಮುನಿ ಇದಾರು? ಮುಳಿದನೇಕೆ? ಹಿತದ ಕಜ್ಜವೇನು?
ಶಾಂತರಲಾ ಈ ಮಂದಿ! ಏನ ಗೈದೆ ನೀನು?

ರಂಭೆ

ಕೌಶಿಕನೊಲು ಹೆಸರುಗೊಂಡ ಮುನಿ ಗೌತಮನಾಮಂ
ಮಿಥಿಲೆ ಬನದಿ ತಪವಿರುತಿಹನೀ ಸಾಧಿತನೇಮಂ.
ಯೋಗಿಜನದ ಹುರಳನರಿವುದಲಾ ಒಡೆಯರಾಣೆ;
ಈ ಮುನಿಬನಕಿದಕೆ ಬಂದೆ, ಆತನಳವ ಕಾಣೆ.

ಇಂದ್ರ

ಉಚಿತವನ್ನೆ ಗೈದೆ ರಂಭೆ, ಕಾರ್ಯಜ್ಞೆ ನೀನು;
ಮನಕೆ ತಂದುಕೊಂಡೆವಿದನು; ಹೇಳು, ಮುಂದೇನು?

ರಂಭೆ

ನಿಮ್ಮೊಡೆತನಕೆಡರ ತರುವ ಬಲದ ಸಿದ್ಧಿಗಾಗಿ
ಅತ್ಯುಗ್ರತಪವ ಕೊಂಡು ಇರುತಿಹನೀ ಜೋಗಿ—
ಎಂಬ ಸುದ್ದಿಯಿರಲು ಕೇಳಿ ತವಕಗೊಂಡು ಇಂದೆ
ಇದರ ನಿಜವನರಿಯಲೆಂದು ಮಿಥಿಲೆ ಬನಕೆ ಬಂದೆ.
ತರುತಲದೊಳು ಏಕಾಂತದಿ ಮುನಿ ಯೋಗಕೆ ಸಂದು
ಅಲುಗಾಡದ ಸೊಡರ ಕುಡಿಯ ತೆರದೊಳಿದ್ದನಿಂದು.
ಮನವ ಕದಡೆ ಕಲಿತುದೆಲ್ಲ ವೆಚ್ಚಗೈದೆ ನಾನು—
ಒನಪು ಒಯ್ಯಾರವೆಲ್ಲ ಕೆಂದಲಿಲ್ಲವೇನೂ!
ಕೊಸೆಗದೊಂದು ಗೀತದಿಂದ ಧ್ಯಾನಭಂಗವಾಗೆ
ಎಚ್ಚರುತ್ತ ಕಣ್ಣ ತೆರೆದು ಮುಳಿದ, ಶಿವನ ಹಾಗೆ!
ಅತ್ತ ಇತ್ತ ನಿರುಕಿಸುತ್ತ, ಕೊನೆಗೆ ನನ್ನ ಕಂಡು
ಶಪಿಸಲೆಳಸಿ ಕೈಯೆತ್ತಲು ಕೆಂಡ ಕೋಪಗೊಂಡು—

ಇಂದ್ರ

ಆಮೇಲಾಮೇಲೆ—

ರಂಭೆ

ಏನಪ್ಪುದೊ ಮುಂದೆ ಎನುತ ತಲ್ಲಣಿಸುತ ನಿಂತೆ
ಅಂದು ಮುಕ್ಕಣ್ಣನೆದುರು ಭೀತ ಕಾಮನಂತೆ.

ಸಿಡಿಲು ಹೊಡೆವ ಮುನ್ನ ಗುಡುಗುವಂತೆ ಕಾಳಮೇಘ
ಮಂತ್ರ ಜಪಿಸುತಿನ್ನೇನು ಶಪಿಸಬೇಕು—ಆಗ—
ಏವೇಳ್ವೆ ನನ್ನ ಪುಣ್ಯ! ಶುಶ್ರೂಷೆಗೆಂದು
ಬಂದಹಲ್ಯೆ ಆತನ ಸತಿ ಕೈಯ ತಡೆದಳಂದು.
"ಹೆಣ್ಣು ಈಕೆ, ನನ್ನ ಸಲ್ಲ, ಕೋಪಕಾಳಲ್ಲ!
ಅರಿತಳಲ್ಲ, ಪಾಪ ಬಿಡಿರಿ, ಶಾಪಕೀಡಲ್ಲ"—
ಎನ್ನುತಾ ಕಾಂತೆ ತಡೆಯೆ, ಮಾತ ಮನ್ನಿಸುತ್ತ
ಹೂಂಕಾರ ಮಾತ್ರದಿಂದ ದೂಡಿದನೆನ್ನಿತ್ತ!
ಸತಿಯ ದಯದಿ ಬದುಕಿಬಂದೆ, ಜೀಯ, ನಾನಿಂದು.
ಮುನಿಯ ತಪೋಬಲವ, ಪ್ರಭೋ, ಪೇಳ್ವೆನೆಷ್ಟೆಂದು!—
ಮೂಲೋಕವನಳಿಸಬಲ್ಲ ಮುನಿದೊಡೆ ಈ ಜೋಗಿ!
ಮೂಲೋಕವ ಗಳಿಸಬಲ್ಲ ಒಗೆದೊಡೆ ಈ ಜೋಗಿ!

ಇಂದ್ರ

ಇಂತೆ, ಕೆಳದಿ! ಪರಿಕಿಸುವೆವು ಇದರ ನಿಜವನಿಂದೆ.
ಆಸರಾಯ್ತು ನಿನಗೆ ರಂಭೆ —ನಮಗೆ ಬಹಳ ನೊಂದೆ.
ಪೋ ಪುಷ್ಕರ, ಇವಳ ಜತೆಗೆ; ಪೋಗಿ ಬಾನಿನತ್ತ,
ನಾ ಬಿನ್ನಪಗೈದೆನೆಂದು ಕಳುಹಿ ಮದನನಿತ್ತ.

(ಮುಗಿಲು ಸೆಳೆಮಿಂಚನ್ನು ಒಯ್ಯುವಂತೆ ಪುಷ್ಕರನು ರಂಭೆಯನ್ನು ಒಯ್ಯುತ್ತಾನೆ.)

ಇಂದ್ರ

ಈ ಮರ್ತ್ಯಮಾನಸದ ಅಳವ ಬಲ್ಲವರಾರು?
ಇರುಳಂತೆ ಗಹನವಿದು, ದುರ್ಗ್ರಾಹ್ಯವು!
ಇದನಳೆವ ಬೆಳಕಿಲ್ಲ, ಇದನರಿವ ಅರಿವಿಲ್ಲ—
ಇದರಾಸೆ ಎಂತೆಂದು ಹೇಳಲಳವು!
ಗೌತಮನ ವಿರಸತೆಯ ಹವಣ ನಾ ಕಂಡು
ಉಚಿತವೆಸಗುವೆನಿಂತೆ ಒಲವ ಸೆರೆಗೊಂಡು.

(ಹೊರಡುತ್ತಾನೆ.)

ತೆರೆ.

ದೃಶ್ಯ ೩

(ಗೌತಮಾಶ್ರಮ—ಪರ್ಣಶಾಲೆಯ ಮುಂದಿನ ಉಪವನದಲ್ಲಿ :
ತೆರೆದ ಮುಗಿಲಿನ ಬಾನು—ಸಂಜೆಯ ನಸುಕು)

ಕಾಮ

(ಸೆಳೆಮಿಂಚೊಂದು ರೂಪವಡೆದಂತೆ
ಆವಿರ್ಭವಿಸಿ)

ಅಹ್ಹ ಹ್ಹಾ! ನಾ ತಿರೆಗಿಳಿತಂದೆನೊ!
ಬೇಸರದೀ ಬಿಡುಗಣ್ಣರನುಳಿದೆನೊ!
ತುಷ್ಟೇಂದ್ರಿಯರೊಳು ಎನಗೇಮಾತು?
ಬಿಲ್ಲಬಿಜ್ಜೆ ಇವರೊಳು ಹುಸಿಯಾಯ್ತು!
ಎವೆಯಿಕ್ಕದ ಎಚ್ಚರದಿರವಲ್ಲಿ,
ಸೊದೆಕುಡಿದೂ ಮತ್ತೇರದೊ ಅಲ್ಲಿ!
ನೂರಂಬೆಸೆದರು ಕೆರಳದು ಕಾಮ,
ಏಸು ಭೋಗಿಯೋ, ಕಾಣೆ, ಸುತ್ರಾಮ!
ಅಚ್ಚರಿ! ಅಚ್ಚರಿ! ಆ ದೈತೇಯರೋ!
ಅವರಿರಲತ್ತೆಡೆ,—ಈ ತಿರೆಯವರೋ!
ಎಲರುಂಡೆಲೆಯಗಿದುರುತಪಗೈದು
ಆ ಜಡ ಬೊಮ್ಮಗೆ ಕೈ ಕೈ ಮುಗಿದು
ಅಗ್ನಿ ತಿರುಕನಿಗೆ ಕಟ್ಟರೆಯುಣಿಸಿ
ವಿವಿಧೋಪಾಯದಿ ದೇವರನೊಲಿಸಿ
ಆಸರುಗೊಂಬರೊ, ಈ ಬೇಸರಕೆ!
ಆದೊಡೆ, ಭಲೆ! ಭಲೆ! ಅವರೀ ಛಲಕೆ
ಬೆಬ್ಬಳಿಪನಲಾ ಶಕ್ರನು ದಿವದೆ!
ಮರೆವೊಗುವನಲಾ ನನ್ನನು ಭಯದೆ!
ಬೆಲೆಗೊಂಡಿತಲಾ ಎನಗೆನ್ನಿರವು,
ಜಗ ನಡುಗಿಸಿತೋ ಪೂವಿಲ್ಲುಲಿವು;
ಮೆಮ್ಮರೆದುದೊ ಕಂದರ್ಪನ ದರ್ಪ!
ಶಿವನೂ ಕಂಡನೊ ಎನ್ನಿಸುಕೂರ್ಪ!
ಹುಲ್ಲಲುಗಿದರೂ ಭಯ ಶಕ್ರನಿಗೆ;

ಕುತ್ಸಾದಸಹಾ, ಗೌತಮನಿವಗೆ!
ಥೂ! ಎನಗೀ ಬಡಮುನಿ ಏತರವ?
ಚಣದೊಳೇ ಕಣಾ ಕಾಮಜಿತನವ!

(ಆಲೋಚನೆಯನ್ನು ಅಭಿನಯಿಸಿ)

ಬರಿ ಹಗೆ ಸಲ್ಲದು ಇವನೊಳು ನನಗೆ;
ಸುಮ್ಮನೆ ಬಲಿಗೊಡೆನಿಂದ್ರನ ಕೆಳೆಗೆ.
ಹವಣಿಕೆಯೇನೋ ಈತನ ತಪದ,
ಹಂಬಲವೇನೋ ಈತನ ಮನದ—
ಪರಿಕಿಸುವೆನು ನಾನಿವನೊಳ ತಿರುಳ,
ಇವನೊಳಗಾಳುವ ನಿಯತಿಯ ಪುರುಳ.
ತನ್ನ ಪ್ರಕೃತಿಯ ತಾನರಿಯದಲೆ
ಪರಸದಿ ಬಗೆಯನು ಬಿಗಿಹಿಡಿಯುತಲೆ
ರಂಭೆಯ ಜರೆದನೊ?—ಇಂತೀ ಮರುಳ
ಕೇಡ ಬಗೆದನೋ ಶಕ್ರಗೆ ದುರುಳ?
ಇಂದೀ ಜನಜೀವನವನು ಹೊಕ್ಕು
ಕಟ್ಟುಕಟ್ಟಳೆಗಳೆಲ್ಲವನೊಕ್ಕು
ಎದೆಗವಿಯಾಸೆಗಳೆಲ್ಲವ ಹಿರಿದು
ತೃಷಿತೇಂದ್ರಿಯಗಳ ಮುಂದವನೆಸೆದು
ಅಂತಃಸತ್ವವ ನಾನಿಂದಳೆವೆ,
ಈ ಬಾಳೊಳು ಬಿದಿಯಿಚ್ಛೆಯನರಿವೆ.
ಎಲ್ಲಿಹನೋ ಕಾಣೆನು, ಸುರರರಸ—
ಈ ಎಡೆಯೇ ಇಹೆನೆಂದೀ ಅಲಸ?
ಜೆಚ್ಚರಗೆಟ್ಟವನಿವನನು ಕಾದು
ಕುಳ್ಳಿರೆ ವೇಳೆಯೆ? ಕಜ್ಜವೆ ಸಾಧು.
ಇಗೊ! ಸತಿ ಅಹಲ್ಯೆ ಸುತನೊಡಕಲೆತು
ನುಡಿದಾಡುತ್ತಿಹಳಿದನೇ ಕುರಿತು!
ತಪೋಭಿರಕ್ಷಿತ ಗೌತಮನೊಳಗ
ನಿರುಕಿಸಲಾಯಿತು ಲೇಸೀ ಬಳಗ.

ಬರವನರುಹುವೆನು ಬಿಲ್ಲಂ ಮಿಡಿದು ;
ಬಳಿಕ ಬರಲಿ ಶಕ್ರಂ ಬಳಿವಿಡಿದು !

(ಬಿಲ್ಮಿಡಿಯುತ್ತಾ ಮರೆಯಾಗುವನು.)

(ಇಂದ್ರನು ಬರುವನು.)

ಇಂದ್ರ

(ಮದನನ ಧನುಷ್ಟಂಕಾರವನ್ನು ಲಾಲಿಸಿ)

ಇದೆ ಇದುವೇ ಪೂವಿಲ್ದನಿ !
ಸ್ವಸ್ಥರ ಮತಿಗಿದು ಅಶನಿ
ಎಂಬುದು ದಿಟ ! ಚಿರ ಪರಿಚಿತ
ಇದು ; ಆದರು ಮನ ಮಥಿಸುತ
ವಶ್ಯೇಂದ್ರಿಯನೆನ್ನಾತ್ಮದೆ
ಕಾತರತೆಯ ಹುಟ್ಟಿಸುತಿದೆ,
ತಿರೆಸೋಕಿದ ಕತಕೆ !

ಅಲ್ಲಿಗೋ ! ಒಲವರಸು ನಿಂತಿಹನು —ಕೊಂಕು ನಗೆ
ಎಂತಿವನ ತುಟಿಬಿಲ್ಲೊಳಾಡುತಿಹುದು !
ಇತ್ತ ನೋಡದೆ ಎತ್ತ ನುಸುಳಿಹೋದನು ಬನದೆ ?
ಈ ಆಟಕುಳಿಯೆಂತು ನೆಚ್ಚಲಹುದು ?

ಆಹ !
ಅವನಿದ್ದ ತಾಣದೊಳೆ ಅವನೆ ಹೆಣ್ಣಾದಂತೆ
ಕಣ್ಣಿಗಚ್ಚರಿಯಾಗಿ ತೋರುವಿವಳಾರು ?
ಗಿಡದ ಹಸುರಿನ ನಡುವೆ, ಮರೆಮುಗಿಲ ಮಿಂಚಂತೆ
ಈಗಾಗ ಹೊಳೆಯುತ್ತ ಬರುವೀಕೆ ಯಾರು ?
ಇತ್ತಲೇ ಬರುತಿಹಳು ಈ ಕಣ್ಣ ಮೋಡಿ !—
ಸಲ್ಲಾಪಗೈಯುತ್ತ ಹಸುಳೆಯೊಡಗೂಡಿ.
ತಾಪಸರ ಸತಿಯಂತೆ ವೇಷವಾಂತೀಕೆ
ವನದೇವಿ, ಅಲ್ಲದಿರೆ ರಂಭೆ ನುಡಿದಾಕೆ.

(ನಿಟ್ಟಿಸಿ)

ಅಹಹ !
ದಿಟ ! ಇಂಥ ಚೆಲ್ವಿಕೆಯ ನಾನೆಂದು ಕಂಡಿಲ್ಲ ;
ಈಕೆಗೆಣೆ ನಾ ಕಾಣೆ ಮೂಲೋಕದಿ !
ನಮ್ಮ ಹೆಣ್ಣಾಸು ಕುರಿತು ಕನಿಕರಿಸಿದೀ ಮಡದಿ
ಕೌತುಕವ ಹುಟ್ಟಿಸಿಹಳೆನ್ನ ಮನದಿ.

(ಕಂಗಳನ್ನು ಯತ್ನಪೂರ್ವಕವಾಗಿ ಹಿಂದಿರುಗಿಸಿ)

ಪರಸತಿಕುತೂಹಲವು ಛೀ ! ನನಗೆ ತರವಲ್ಲ,
ನಾ ಪೋಪೆನೆತ್ತೆಡೆಗೆ ಒಲವನರಿಸಿ.

(ತೆರೆಯಲ್ಲಿ)

ಮೇಲಿಂದಿಲ್ಲಿಗೆ ಇಳಿದಳೆ ಅವಳು ?
ಹೇಗಮ್ಮಾ ? ನೀ ಹೇಳಮ್ಮಾ.

ಇಂದ್ರ

ಈ ಸುದ್ದಿಯನೆ ಕುರಿತು ಇವರು ಜಲ್ಪಿಸುತಿಹರು !
ಇದರೊಳಗ ನಾನರಿವೆನಿದನಾಲಿಸಿ.

(ಒಂದು ಕಡೆ ನಿಲ್ಲುವನು.)

(ಹಸುಳೆ ಮತ್ತು ಅಹಲ್ಯೆ ಪ್ರವೇಶಿಸುವರು.)

ಹಸುಳೆ

ಮೇಲಿಂದಿಲ್ಲಿಗೆ ಇಳಿದಳೆ ಅವಳು ?—
ಹೇಗಮ್ಮಾ ಇದು, ಹೇಳಮ್ಮಾ ?
ಹಕ್ಕಿಯು ಹಾಗೆಯೆ ಹಾರಿ ಬಂದಳೆ,
ರೆಕ್ಕೆಗಳಿದ್ದುವೆ ಹೇಳಮ್ಮಾ ?

ಅಹಲ್ಯೆ

ಇದಕೇನುತ್ತರ ಹೇಳಲೆ ನಾನು ?
ಮೇಲಿಂದಿಳಿದಳು—ಹೂ ಕಂದಾ—
ಕಾಮನ ಜಿಲ್ಲಿನ ಜಾರುಗುಪ್ಪೆಯೊಳು
ಜಾರುತ ಬಂದಳು ಮುಗಿಲಿಂದ !

ಹಸುಳೆ

ದಿಟವಮ್ಮಾ! ದಿಟ ನಾ ನೋಡಿದೆನಿದ!
ಬಣ್ಣದ ಬಣ್ಣದ ಆ ಬಿಲ್ಲು
ಇಲ್ಲಿಂದಲ್ಲಿಗೆ ಬಿದ್ದಿತ್ತೀ ದಿನ!
ಬಲುಸೊಗಸೇ ಆ ಜಾರ್ಕಲ್ಲು!
ಆಗಸದೊಳಗಿದು ಆದಾಗೆಲ್ಲಾ
ಹೀಗೆಯೆ ಜಾರುವರೇನಮ್ಮಾ?
ಇತ್ತಿಗೊ ನೋಡೇ ಸುಣ್ಣಪಿನ ಜಿಲ್ಲು!
ಈಗಲು ಬಂದಿಹರೇನಮ್ಮಾ?

ಅಹಲ್ಯೆ

ದಿಟ, ನನ್ನಪ್ಪಾ, ಬಿಲ್ಲು ಬಿದ್ದಿದೆ—
ಈಗಲು ಬಂದಿರಬಹುದಪ್ಪಾ.

ಹಸುಳೆ

ಹಿಂದಿನ ಹಾಗೆಯೆ ಇಲ್ಲಿಗು ಬರುವರೆ?

ಅಹಲ್ಯೆ

ಬಂದರು ಬರಬಹುದೆನ್ನಪ್ಪಾ.

ಹಸುಳೆ

ಬಂದರೆ ಈ ಸಲ ಅಪ್ಪನಿಗವರನು
ಅಟ್ಟದಿರೆನ್ನುತ ಹೇಳಮ್ಮಾ.
ಕೆಟ್ಟವರೇನೇ ಈ ದೇವತೆಗಳು?
ಅಪ್ಪನಿಗಾಗದು, ಏಕಮ್ಮಾ?

ಅಹಲ್ಯೆ

ಏನು ಹರಟೆಯೋ ನಿನ್ನದು ಪೋರಾ,
ಎಲ್ಲಿ ಕಲಿತೆಯೋ ಈ ಮಾತ?

(ಅಹಲ್ಯೆಯ ಸಖಿ ಮಾಧವಿ ಪ್ರವೇಶಿಸುತ್ತಾಳೆ.)

ಮಾಧವಿ

ಸರಿ ಕಣೆ! ಅಹಲ್ಯೆ! ಹೊತ್ತೇ ಕಾಣದು
ನೀನಿವನೊಡನಿರೆ ಹರಟುತ್ತ!

ಅಹಲ್ಯೆ

ಬಾ ಬಾ ಮಾಧವಿ, ನಾನೇಗೈಯಲೆ?
ಏನೇನೋ ಹರಟುವನಿವನು.
ನಿನ್ನೆಯಿಂದ ಈ ಮಾತೇ ಮಾತು,
ಇನ್ನೂ ಇದ ಮುಗಿಸಿಲ್ಲವನು!

ಮಾಧವಿ

ಹುಡುಗರೆ ಹಾಗೆ; ಯಾವುದ ಹಿಡಿದರು
ಜಿಗಣೆಯಂತೆಯೇ ಕೊನೆವರೆಗು!
ನಮ್ಮವನಿಗೆ ಆ ಹುಲ್ಲೆಯ ಕರುವಿನ
ಹಂಬಲವಾಯಿತು ದಿನ ಬೆಳಗು.

ಮಾಧವಿಯ ಹುಡುಗ

('ಲೇ ಅಮ್ಮಾ!' ಎಂದು ಓಡಿಬಂದು)

ಅಮ್ಮಾ, ನಾ ಮುಂದೋಡುತಲಿರೆ, ಈ
ಕರುವೂ ಬರುವುದು ಹಿಂದೇನೇ!
ನಡೆದರೆ ನಡೆವುದು, ನಿಂತರೆ ನಿಲುವುದು,
ಜಾಣ ಕರುವಿದು ಅಲ್ಲೇನೇ?
ಲೋ ಶತಾನಂದ! ಹೇಗೆ ಗುದ್ದುವುದೊ
ಅಹ್ಹಾ ನಮ್ಮೆಳೆ ಹುಲ್ಲೆಕರ!
ಅದರ ತಲೆಮೇಲೆ ಕೊಂಬು ಮೊಳೆತಿವೆ
ದೋರನೇರಿಳೆಯ ಹಣ್ಣಿನ ತೆರ!

ಶತಾನಂದ

ಹಾಗೆ ಮರೀಚಿ? ನನಗದ ತೋರೊ.

ಮರೀಚಿ

ಹಟ್ಟಿಗೆ ಬಂದರೆ ತೋರುವೆ ಬಾರೊ.

ಶತಾನಂದ

ಅಮ್ಮಾ, ನಾ ಹೋಗುವೆನಿದ ನೋಡೆ
ಹುಲ್ಲೆಯ ಕರುವಿನ ಜೊತೆಯೊಳಗಾಡೆ.

ಅಹಲ್ಯೆ

ಹೋಗಿರಿ ಕಂದರೆ,

(ಹಸುಳೆಗಳು ಓಡುತ್ತಾರೆ.)

ಅಹಲ್ಯೆ

ಮೆಲ್ಲನೆ ನಡೆಯಿರಿ ಬಿದ್ದೀರಿ.

(ತನ್ನ ಮಗನ ಕಡೆಗೆ ಸ್ನೇಹದಿಂದ ನೋಡುತ್ತಾಳೆ.)

(ಮಿಂಚು, ಗುಡುಗು.)

ಮಾಧವಿ

ಬಾ ಅಹಲ್ಯೆ, ಏನ ನೋಡುವೆ?
ಹೊತ್ತು ಮುಳುಗುವ ಸಮಯವಾಯಿತು;
ಹನಿವ ತೆರದೊಳು ಮೋಡ ಕಟ್ಟಿದೆ.
ಮಗನನೆಂದೂ ಕಾಣೆಯಾ?

ಅಹಲ್ಯೆ

ದೇವ ದುಂದುಭಿಯೊ, ಸುರ ರಣಭೇರಿಯೊ,
ಏನೊ ಕಾಣೆ, ಸಖಿ, ಲಾಲಿಸದ!
ಕೇಳಕೇಳುತಿರೆ, ನನಗಿಳೆಯಾಸರೆ
ತಪ್ಪಿದೊಲಪ್ಪುದು, ಲಾಲಿಸಿದ!
ಮನ ಉನ್ಮಾದಕ, ಚಿತ್ತಭ್ರಾಮಕ
ನಾದ ಇದಾಲಿಸು ನೀ ಗೆಳತಿ!
ತಿರೆಗಿದು ಸಲ್ಲದು, ಸ್ವರ್ಗದ ಸಂಚಿದು;
ದಿಟ ಎದೆಗೆಟ್ಟಿಹೆ ನಾ ಗೆಳತಿ!
ಅಲ್ಲಗೊ ನೋಡದ! ತೇಜಃಪುಂಜದ
ರೂಪವೊಂದು ತೋರಿ,
ಕಣ್‌ಕೋರೈಸಿತು, ಹಳುವೊಳು ಸುಸುಳಿತು—
ಮುಂದೆ ಏನೆ ದಾರಿ?

ಮಾಧವಿ

ಮೂಡಣ ಬಾನೊಳು ಮೋಡವು ಗುಡಗಲು
ಏಕೀ ಕವಿತೆಯನೊರೆವೆ ಸಖಿ?

ಇತ್ತಣೆನತ್ತೆಡೆ ಮಿಂಚು ಹರಿದೊಡೆ,
ಏಕೀ ಕಾತರ ನಿನಗೆ ಸಖಿ ?

ಅಹಲ್ಯೆ

ಇಂತೆಯೆ ಗೆಳತಿ, ಭ್ರಮಿಸಿದೆ ಮನ್ಮತಿ ;
ಬೆಳಗಿನಿಂದಲೀತೆರನಾಯ್ತು !
ಕಾಣದ ನೋಟವ ಕೇಳದ ನಾದವ
ಕಾಣುವ ಕೇಳುವ ತೆರನಾಯ್ತು !

ಮಾಧವಿ

ಏನೇ ಭಯವಿದು, ಆರೂ ಕಾಣದು ?
ತವಕವಿದೇತಕೆ ಇನಿಸೊಂದು ?
ಏಕೀ ಹಲ್ಲಣ, ಏಕೀ ತಲ್ಲಣ,
ಏಕೀ ಹುಸಿಬಗೆ ನಿನಗಿಂದು ?

ಅಹಲ್ಯೆ

ಅಮರಾವತಿಪತಿ ಕೆರಳಿದೊಡೇಗತಿ
ರಂಭೆಗಿಲ್ಲಾದ ಅವಮತಿಗೆ ?
ಆತ ಮುಳಿದೊಡೆ ಉಂಟೆ ಉಳಿಗಡೆ
ಇದೆ ಹದನಾಯಿತು ಅಂಜಿಕೆಗೆ !

ಮಾಧವಿ

ಇದಕೀ ರೀತಿಯೆ, ಇದಕೀ ಭೀತಿಯೆ,
ಗೌತಮಸತಿಗಿದು ತರವೆ ?
ದೀಪಕ್ಕೆ ಹಾರಿ, ನೊಂದಳಾ ಪೋರಿ —
ಮುಳಿಯಲಿಂದ್ರಗಿದು ಕತವೆ ?
ಮುಳಿದರು ತಾನೇ ಏನೋ ಕಾಣೆ !
ರುದ್ರನಂಥ ಪತಿ ನಿನಗಿರಲು,
ಆರೇಗೈವರು ? ಹುಸಿ ನಿನ್ನಾಸರು
ಪತಿಯನರಿಯೆ—ಇಹೆ ಸನಿಯದೊಳು !

ಅಹಲ್ಯೆ

ರುದ್ರನೆ ಸರಿ ! ಏ ಮುಳಿಸೇ !—ಸಖಿ ನಿನ್ನೀ ಮಾತು
ತವಕದ ಶಮನಕ್ಕಾಗದೆ, ಹೆಚ್ಚಳಕೇ ಆಯ್ತು.

ನನ್ನಿಂದಿನ ಹಳಹಳಿಕೆಗೆ ಕಾರಣ ತಾನೇನೋ,
ನಾನೇ ಕಾಣೆನು, ಮಾಧವಿ ಮೂಲವದೇನೋ?

ಈ ತಪವನು ತಾ ಕೊಳ್ಳದೆ ನಮ್ಮಯ ಎಡೆಯೊಳಗೆ
ಅವರಿದ್ದೊಡೆ!—ಇದೆ ಹಂಬಲವಾಯಿತು ಸಖಿ ನನಗೆ.
ಈ ನೇಮದ ಹಿಂಬದಿಗಿಹ ಹೆಬ್ಬಯಕೆ ಅದೇನೆ,
ಅರಿತಿಹೆಯಾದೊಡೆ ಗೆಳತಿ, ಪೇಳಿಂದೆನ್ನಾಣೆ.

ಮಾಧವಿ

ಇದನರಿಯೆಯ ನೀ ಅಹಲ್ಯೆ? ಎನಗಿದು ಸೋಜಿಗವು.
ಮೂಜಗವನೆ ಗೆಲುವುದಲಾ ಈ ಯೋಗದ ಬಲವು!
ಏನೆಂದೊಡೆ ಸಿದ್ಧಿಪುದದು ಬಯಸಿದ ವರು ಚಣವೆ!
ಈ ಶಕುತಿಗು ಮಿಗಿಲಿಲ್ಲವು, ಅದ ಬಣ್ಣಿಸಲಳವೆ?

ಈ ಬಲಮಿರೆ ಆ ಮನುಜನ ಬಯಕೆಯು ಬಾಧಿಸದು—
ಸ್ವರ್ಗದೊಳಾಗದ ಭೋಗದ ಸೊಗದಾ ತಣಿವಹುದು!
ದೆಸೆಯೊಡೆಯರು ಕಂದುವರೀ ಮಹಿಮನ ತೇಜಕ್ಕೆ;
ದೇವೇಂದ್ರನೆ ಅಂಜುವನೀ ಯೋಗಿಯ ಓಜಕ್ಕೆ!

ಅಹಲ್ಯೆ

ಇದರಿಂದೆನಗೇನಹುದೇ ಮುನಿಗೀ ಮಹಿಮೆ ಬರೆ?

ಮಾಧವಿ

ಏಕಿಂತೊರೆವೆ, ಅಹಲ್ಯೇ, ಏಕೀ ಬೇಸರವೆ?
ಪತಿಗಚ್ಚಿನ ಮೆಚ್ಚಿನ ಸತಿ—ನೀನೇಕಿದ ಮರೆವೆ?

(ಅಹಲ್ಯೆ ನಗುವಳು.)

ಮಾಧವಿ

ಈ ಬಲವಿರೆ, ಈ ಬಲವಿರೆ, ತಾನೊಲಿದಳ ಬಯಕೆ
ಇಚ್ಛಿಪೊಡೇ ತೀರಲು ಬರೆ, ಸಲಿಸರೆ ನಿನ್ನರಕೆ?
ನೀ ಬಯಪೊಡೆ ಅಮರಾವತಿ ಹೊಳಲಾಳುವರವರು,
ಇಂದ್ರನ ಮಿಕ್ಕಿಂದ್ರಾಣಿಯ ತೆರ, ಸಖಿ, ಬಾಳಿಪರು!

ಅಹಲ್ಯೆ

ಏನೊರೆವೆಯೆ ಸಖಿ, ಮಾತಿದ ನಂಬುವೆ ನಾನೆಂತು ?
ಅರಿಯದ ಹಸುಳೆಯ ನೆಚ್ಚಿಸೆ ನುಡಿವಳು ತಾಯಿಂತು.
ಮೂಲೋಕವೆ ಶರಣೆನ್ನುವ ಸುರಪುರದೊರೆಯೆಲ್ಲಿ ?
ಆತನ ಹಸಾದವೆರೆಯುವ ತಿರೆಯುವರಾವೆಲ್ಲಿ ?

ಬಗೆಬಗೆ ಯಾಗದೊಳೊಲಿಸುತ, ಯಜ್ಞದಿ ನುತಿಸುತ್ತ
ಬಗೆಬಗೆ ಹರಕೆಯನೊಪ್ಪಿಸಿ, ನೇಮಗಳಪ್ಪುತ್ತ
ಕೊಡು ಕಾಪಿಡು ಎಂದೆನ್ನುತ, ದಿನವಾತನ ಬೇಡಿ
ಬದುಕನು ನಡೆಸುವ ನಾವೆಂತವಗಪ್ಪೆವು ಜೋಡಿ !

ಅವನಿಂ ಮಳೆ, ಅವನಿಂ ಬೆಳೆ, ಅವನಿಂದಲೆ ಸುಗ್ಗಿ —
ಹದುಳಕೆ ಹೊಣೆ ಅವನಿರದಿರೆ, ತಿರೆ ಪೋಪುದು ಮುಗ್ಗಿ !
ಎಲ್ಲಾ ರಾಗದ ಭೋಗದ ವೈಭವದರಸವನು !
ನೋವಿನ ಸಾವಿನ ಬಾಳಿನ ನರರಪ್ಪರೆ ಸಮನು ?

ಸಿಡಿಲೇಟಿಗೆ ಅಬ್ಬರಿಸುವ ಕೊಬ್ಬಿದ ಮುಗಿಲೇರಿ
ಅಂಕೆಯು ಅಂಕುಶ ಮಿಂಚಲು, ಮೊಳಗಲು ಸುರಭೇರಿ
ಜಗವಾತುರಗೊಳ್ಳುವ ತೆರ ಮೆರೆವಾ ಸುರಪತಿಗೆ
ಆರೆಣೆ ಮಾಧವಿ, ಪೇಳಾ ಭೀಕರ ಮಂಗಳಗೆ ?

ಇಂತೆಂದೊಡೆ, ಪತಿದೇವರ ಸಂಬೆಸು ನಾನೆಂದು
ಭಾಪಿಸದಿರು, ನೀ ; ಅವರಿಂ ಪಿರಿದಲ್ಲೆನಗೊಂದು.
ಆದೊಡೆ ಬಲ್ಲಿದನಿಂದ್ರನು, ಹಿರಿಯನು ಲೋಕಕ್ಕೆ !
ಅವನೆದುರಿಸಿ ನಾವಿರುವೊಡೆ ಆಗದು ಕ್ಷೇಮಕ್ಕೆ.

ನೋಡೆಲೆ ಮಾಧವಿ, ಮೇಗಡೆ ಕಪ್ಪಿಡಿದಿದೆ ಬಾನು ;
ಮಳೆಮುಗಿಲುರವಣಿಸುತ್ತಿದೆ ; ತೋರಿದೆ ಶಕ್ರಧನು.
ಮಿಂಚಿನ ಕೆಂಚುರಿ ನಾಲಗೆ ನಮ್ಮನೆ ಸೋಕುವಂತೆ
ತಹತಹಿಸಿದೆ ಗುಡುಗಾಗಿದೆ ನಮ್ಮನೆ ನಗುವಂತೆ !

ಮುಯ್ಯಿಸಗಲು ಮನಮಾಡಿರುವಿಂದ್ರನ ಸನ್ನಾಹ
ಇಂತಲ್ಲದೆ ಬೇರಿಲ್ಲವು—ಇದು ನಿಸ್ಸಂದೇಹ!
ನಮ್ಮ ನಕಕೆ ಮುಳಿದಾತನ ಸಿಡಿಲೆರಗುವ ಮುನ್ನ
ಮರೆಹೊಕ್ಕಾತಗೆ ಮೊರೆಯಿಡದಿರೆ ತಪ್ಪದು ಬನ್ನ.

ಮಾಧವಿ

ನಲ್ಲದ ಭಯವಿದು, ಕಾಲಕೆ ತಕ್ಕುದು ಈ ಮುಗಿಲು;
ಹದಗೆಟ್ಟಿದನೇ ಚಿಂತಿಸಿ ನಿನಗಾಯ್ತೀ ದಿಗಿಲು.
ಈ ಅಳುಕಿರೆ, ಬಾ, ಕಳಶವನಿಟ್ಟಿಂದ್ರನ ಎರೆವ—
ಆ ಪೂಜಾಪ್ರಿಯ ದೇವನು ತಪ್ಪದೆ ನಮಗೊಲಿವ.

ಅಹಲ್ಯೆ

ಒಳ್ಳಿತನೊರೆದೆಯೆ ಗೆಳತಿ,—ಮನಕೊಪ್ಪಿನ ಮಾತು!
ಹದುಳವ ಹರಸುವ ಜಾರೇ ನಾವಿಂದ್ರಗೆ ನೋಂತು.
ತಪದಾಣದೊಳಿರುವಗ್ನಿಯ ನಿತ್ಯದ ಪೂಜೆಯನು
ಸಲ್ಲಿಸಿ ನಾ ಬಹೆ ಮೊದಲೊಳು, ಕೊಳಲೀ ಪೂಜೆಯನು.

ನನ್ನೆಳೆಯನು ಹಂಬಲಿಸದ ತೆರ ನಾ ಬಹವರೆಗೆ
ನೋಡಿಕೊ, ಸಖಿ; ನಾ ಪೋಪೆನು ಸ್ವಾಮಿಯ ಸನ್ನಿಧಿಗೆ.
ದೇವರು ಮುಳಿವೀ ತಪವನು ಕೊನೆಗಾಣಿಸಿರೆಂದು
ಎಚ್ಚತ್ತಿರೆ ಪತಿದೇವರ ಬೇಡುವೆ ನಾನಿಂದು.

ಮಾಧವಿ

ನೀನೆಳಸಿದ ತೆರನಾಗಲಿ! ಬಾ ಬೇಗನಹಲ್ಯೆ.

(ಹೋಗುವರು.)

ಮದನ

(ಆ ಕಡೆ ಕಾಣಿಸಿಕೊಂಡು, ಅಹಲ್ಯೆ ಹೋದ ಕಡೆಯನ್ನು ಬೆರಗುಗೊಂಡು ನಿಟ್ಟಿಸುತ್ತಿರುವ ಇಂದ್ರನನ್ನು ಕಂಡು)

ನೋಡುತಿದ್ದರು ಕಾಣಲೊಲ್ಲದೆ, ಬಯಲ ನಿಟ್ಟಿಪ ನೋಟದಿ
ಏನ ನೋಡುತ ನಿಂತೆ ವಾಸವ, ಇಂತು ಬೆರಗಿನ ಮಾಟದಿ?

ಇಂದ್ರ

ಏನು ಹೇಳಲಿ, ಮದನ, ಅಜ್ಜನ ಮಾಟಗಾರಿಕೆ ಎಂಥದೊ!
ಚೆಲುವ ರೂಪಿನ ತಿರುಳ ಬಲ್ಲೀ ಕಣ್ಣಿಗೂ ಬೆರಗಾದುದೊ!
ದಿತಿಯ ಮಕ್ಕಳನಂದು ವಂಚಿಸಲಾದ ಮೋಹಿನಿಯಂದದಿ
ಬನದಿ ಸುಳಿದೀ ಹೆಣ್ಣ ಮಾಟಕೆ, ಆದೆ ಮನವುಳಿವಂದದಿ.

ಹೊಮ್ಮುಕಳೆಯಿಂದಮರಯೌವತವನ್ನೆ ಜರೆಯುವ ವೈಸಿರಿ
ಅಂತಿದಲ್ಲವು ಇಂತಿದಲ್ಲವು ಹೊಸತು ಹೊಸತೆನಲಚ್ಚರಿ!
ನೋಡನೋಡಲು ನೋಡುವಾಸೆಯು ಕಡಲು ಉಕ್ಕುವ ತೆರದೊಳು
ನನ್ನ ತನದೆಲ್ಲೆಯನೆ ಮೀರಲು ನಿಂದೆ ನಾನಳಿದರಿವೊಳು.

ಸಂಜೆಗೆಂಪನೊಳೆಸೆವ ಬಿದಿಗೆಯ ಪೆರೆಯ ಕಾಂತಿಯ ನಿಂದಿಸಿ
ದಂತಕಾಂತಿಯು ಮಿನುಗಲಧರದಿ, ನೋಳ್ಪ ಚಿತ್ತವ ಬಂಧಿಸಿ
ನುಡಿದು, ನುಡಿಗೂ ಮಿಕ್ಕು ಬಂದುದ ಕಣ್ಣು ಹೊಳೆಯಿಸುವಂದದಿ
ಭಾವಜನಕನೆ, ಭಾವವೆಂತೊಗೆತಂದಿತೀಕೆಯ ಹೃದಯದಿ!

ಕಿವಿಗೆ ಹೊಸ ಸೊದೆಯನ್ನೆ ಕರೆಯುವ ಮಾತೊಳೆನ್ನನು ಬಣ್ಣಿಸಿ
'ನನ್ನಿ, ನನಗೆಣೆಯಾರು ಲೋಕದೊಳೆ'ಂದು ಮನದೊಳಗೆನ್ನಿಸಿ,
ನನ್ನ ಮಹಿಮೆಗೆ ಮೋಹಗೊಳ್ಳುತ ನನ್ನ ಹಿರಿಮೆಗೆ ಹೆದರುತ
ನನ್ನನೇ ನೆನೆದಿದ್ದ ಮುಗುದೆಗೆ ನಿಂತೆನೈ ಮನ ನೀಗುತ.

ಮದನ

ಸರಿಯೆ, ವಾಸನ, ಒಳ್ಳಿತೆಸಗಿದೆ! ಬಂದುದಾಯಿತು ಸಾರ್ಥವು!
ಹೆಣ್ಣ ನೋಡುತ ನಿಂತೊಡಾಯಿತೆ ಮುನಿಯ ಗೆಲ್ಲುವ ಕಜ್ಜವು?

ಇಂದ್ರ

ದಿಟ, ಮದನ, ಮರೆತಿದ್ದೆ ನಾನಿದ; ಏನು ಮುಂದಿನ ಮಾಟವು—
ಮುನಿಯ ಬಲವೆಂತವನ ಬಗೆಯೆಂತವನ ಗೆಲ್ಲುವ ಹೂಟವು?

ಮದನ

ಬಿಡು ಬಿಡೀತನ ಭಯವ ವಾಸವ, ಹೂಡಿಹೆನು ನಾ ಹೂಟವ;
ಇವನ ಸತಿಯಿಂದಿವನ ಗೆಲ್ಲುವೆ, ನೋಡು ನನ್ನೀ ಮಾಟವ.

ತಪೋಲುಬ್ಧಗೆ ನೇಮಬದ್ಧಗೆ ಸರಸಕಾಮವಿರುದ್ಧಗೆ
ತೋರಿ ನಾನಿಂದೊಲುಮೆ ಹುರುಳನು ಸೆಳೆವೆ ರಾಗದ ಹಾದಿಗೆ.

ಇಂದ್ರ

ಧರ್ಮಕಾದವಳಿವಳು ; ಇವಳಿಂ ಮುನಿಯ ಕೆಡಿಸುವೆನೆಂಬೆ ನೀ !
ಏನು ಸಂಚಿದು, ನಿನ್ನ ಕಜ್ಜಕೆ ಅಪ್ಪಳೆಂತೀ ಭಾಮಿನಿ ?

ಮದನ

ಹೆರರಂಗನೆಯೇಂ ತನ್ನಂಗನೆಯೇಂ—
ಮೋಹದಿ ಕೆಡೆವೊಡೆ ಈ ನೆವ ತಡೆಯೇಂ ?
ನೀತಿಯ ನೆವದೊಳು ರಂಭೆಯು ಗೆದ್ದಂ,
ನೀತಿಯ ನೆವದೊಳೆ ಕಾಮಗೆ ಬಿದ್ದಂ !
ಮುನಿಯೊಳು ಹದುಗಿದೆ ಸತಿಯಾಸಕ್ತಿ
ಮಾಗಿಯೊಳಿರುವೊಲು ಮಧುರಾಸಕ್ತಿ.
ಇಂದಾಗಲು ಈ ಕಾಮಕೆ ಮುಕ್ತಿ
ಕುಂದಲು ಈತನ ಸಂಯಮ ಶಕ್ತಿ—
ಕೂರಂಬಿಟ್ಟೆಸು ಕೇಕರದೊಳಗೆ ;
ಇವಳೊಗೆಯಲು ಇದ ಗೌತಮನೆದೆಗೆ
ವಿಭ್ರಮದಿಂದಿಪ್ಪನು ಸ್ವಚ್ಛಂದ
ಮೋಹದಿ ತೊಳಲುವನೇನದು ಚಂದ !
ಇಂದೀತನು ನನ್ನಂಬಿಗೆ ಹವಣು !
ಹದನಿಲ್ಲದೆ ಮದನನು ವರ್ತಿಸನು.
ತಮ್ಮನು ತಾವೇ ವಂಚಿಸುತಿಹರಂ
ವಂಚಿಸಲಲ್ಲವೆ ಇಹುದೀ ಚದುರಂ ?
ನೀತಿಯ ನೆವದೊಳು ಬಲವಂ ಗೆದ್ದಂ,
ನೀತಿಯ ನೆವದೊಳೆ ಬಲವಿಗೆ ಬಿದ್ದಂ !

ಇಂದ್ರ

ಬಲು ಠಕ್ಕಿನವಂ ಸೈ ನೀ ಕಂತು !
ನಿನ್ನ ಮರ್ಮವನು ಅರಿವೆನದೆಂತು ?

ಮದನ

ಅರಿಯಲು ಬಯಸುವೆಯಾದೊಡೆ ಬಾರಾ
ಗೌತಮು ತಪಮಿಹ ತಾಣಕ್ಕೆ.

ಇಂದ್ರ

ಅಂತೇ ನಡೆ ನಡೆ, ಒಲವೇ, ನಾನೂ
ಸಲಿಪೆನು ಕಾಣಿಕೆ ನೋಟಕ್ಕೆ.

(ಹೋಗುವರು.)

ತೆರೆ.

ದೃಶ್ಯ ೪

(ಗೌತಮನ ತಪಃಸ್ಥಾನ. ಮುಂದೆ ಒಂದು ಪಾರ್ಶ್ವದಲ್ಲಿ—ಅಗ್ನಿಯ ಬಳಿ—ವಟು ಮತ್ತು ಮೈತ್ರೇಯ ಇರುವರು. ಮತ್ತೊಂದು ಪಾರ್ಶ್ವದಲ್ಲಿ—ಮರದ ಕೆಳಗೆ—ಧ್ಯಾನಸ್ಥನಾಗಿ ಗೌತಮನಿರುವನು. ವಟು ಮತ್ತು ಮೈತ್ರೇಯರ ಕಡೆಗೆ ಬೆಳಕು ಹೆಚ್ಚಾಗಿ ಬಿದ್ದಿರುತ್ತದೆ. ಗೌತಮನು ನೆರಳಿನಲ್ಲಿ ಇರುತ್ತಾನೆ.)

ವಟು

ಋವಿ ಬಾನಳೆದುರವಣಿಸಿದ
ಹರಿಪಾದಕೆ ತಲೆಯೊಡ್ಡುತ
ಕೆಳಲೋಕಕೆ ತೆರಳುತ್ತಿಹ
ಬಲಿದೊರೆಯಂದದೊಳು—
ಮಿಗುವಿರುಳಿನ ನಿಡು ನೀಡಿದ
ದೆಸೆ ಮುಟ್ಟಿದ ಮುಗಿಲಡಿಯುಡಿ
ಮರೆಯಾದುದು ಪಗಲ್ಸೆಸಿರಿ
ಪಡುವಣ ಕಮರಿಯೊಳು.

ಮೈತ್ರೇಯ

ರವಿಮಂಥಿತ ನೀಲಾಂಬುಧಿ
ಹೆತ್ತಿತು ಕೆನೆ ಇದಿಗೋ ಎನೆ
ಹೆಪ್ಪಿನ ಕಪ್ಪಿನ ಮೋಡವು
ಕಟ್ಟಿದೆ ಬಾನಿನೊಳು;

ಮೋಹದ ಹುದುಲೊಳು ಮುಳುಗುವ
ತಾಮಸಿಯಾತ್ಮದ ತೆರದೊಳು
ಸಂಜೆಯು ಚೆಂಬೆಳಗಿಳಿಯಿತು
ತಾಮಸಿಯೊಡಲಿನೊಳು.

ವಟು

ಕೂರ್ಮನ ಬೆನ್ನಿಂದೇಳುವ
ಮಂದರ ಪರ್ವತದಂದದಿ
ಚಣಚಣಕೂ ಹಿರಿದಹುದೀ
ರೋದೋಂತದ ಮುಗಿಲು;
ಥಳ್ಳನೆ ನೀಳ್ಮಿಂಚಿದಿಗೋ
ದೇವಾಸುರರೆಳೆದಾಟಕೆ
ಚಣಚಣಕೂ ಹೊರಳಾಡುವ
ವಾಸುಕಿ ತನು ಎನಲು.

ಮೈತ್ರೇಯ

ಅದೊ! ಅತ್ತೆಡೆ ಆ ಮರದೆಡೆ
ಮೆಲಮೆಲ್ಲನೆ ಪದವಿಕ್ಕುತ
ನಿದ್ರಾಲೋಕದಿ ಮೂಡುವ
ಕನಸಿನ ರೂಪಂತೆ—
ಬಹರಾರಿದು ಈ ನಸುಕೊಳು
ಪರಿಚಿತರಂತೀ ಹಳುವೊಳು?
ತಪಭಂಗಕೆ ಹೊಂಚಿಹನೋ
ಅಬಲಾಬಲನಿಂತೆ?

ವಟು

ದಿಟ, ಗುರುಗಳೆ, ನೀವೊರೆದುದು
ಇರಬೇಹುದು ಚೆಚ್ಚರದೊಳು.
ಏಗಳಿಗೆಗೆ ಏನಹುದೋ?
ಬಲು ತಂತ್ರಿಗಳಿವರು!

ಆದೊಡೆ, ನಿಟ್ಟಿಸಿರಾರ್‍ಯ,
ತಾಪಸವೇಷದ ಹೆಂಗಸು—
ಗುರು ಪತ್ನಿಯು ನಡೆ.—ಆಕೆಯೆ
ಈ ಎಡೆಗೇ ಬಹರು.

ಮೈತ್ರೇಯ

ದಿಟವಾಗಿಯು ಆಕೆಯೆ ಸರಿ!
ಪೋ, ವತ್ಸಾ. ನೀ ಮುನ್ನಡೆ-
ದವರಿಲ್ಲಿಗೆ ಕರೆತಾರೈ—
ತಮಕಂಜದ ತೆರದಿ.
ನಾನಿಲ್ಲಿನ ಸುಪ್ತಾಗ್ನಿಯ
ಕಿರುಬೇಗದೊಳುದ್ದೀಪಿಪೆ-
ನೀ ತಾಣವು ನೈಷ್ಠುರ್ಯವ
ತುಸ ನೀಗುವ ತೆರದಿ.

(ಅಹಲ್ಯೆ ವಟುವಿನೊಡನೆ ಮಾತನಾಡುತ್ತ ಪ್ರವೇಶಿಸುತ್ತಾಳೆ.)

ಅಹಲ್ಯೆ

ಇರುಳಿಟ್ಟಣಿಸಿದೆ
ಮುಗಿಲೊಡ್ಡಣಿಸಿದೆ
ಮೌನದೊಳದ್ದಿದೆ ಬನಮೆಲ್ಲಾ!
ಬಳಕೆಯ ನೆಲವಿದು
ಏ ತೆರನಾದುದು!
ಅಂಜಿಪುವೀ ತರುಗಿಡವೆಲ್ಲಾ.

ರಕ್ಷೆಯದಾವುದು
ನಿಮ್ಮನು ಕಾವುದು?
ನೀವೆಂತನುಜಾ, ಎದೆಗೆಡದೆ
ಒಂಟಿಯೊಳೀಪರಿ
ರಾತ್ರಿಯ ಕಳೆವಿರಿ,
ಬಗೆಬಗೆದನಿಯೀ ಕಾನನದೆ?

ವಟು

ಹವಿತುಷ್ಟಾಗ್ನಿಯು
ಮುಖದೊಳಗೇಭಯು ?
ತಾಯೇ, ರುದ್ರನ ತೆರದೊಳಗೆ
ಗುರುವಿರಲಾಪದ-
ಕೆಂತಹುದಾಸ್ಪದ !
ನೆಮ್ಮದಿಯಲ್ಲದೆ ಏನೆಮಗೆ ?

ಅಹಲ್ಯೆ

ದಿಟ ದಿಟ ! ಕೌಶಿಕ !
ನಗುತೀ ಪಾವಕ
ದಟ್ಟಿಸುತಿಹನೀ ತಮವನ್ನು ;
ಮತ್ಪತಿದೇವನ
ಮಂಗಳ ದರುಶನ
ಅಡಗಿಸುತಿದೆ ತಲ್ಲಣವನ್ನು.

ಮೈತ್ರೇಯ
(ಮುಂದೆ ಬಂದು)

ಹೊತ್ತಾಯ್ತುತ್ತಿಗೆ
ಅಗ್ನಿಯ ಪೂಜೆಗೆ ;
ಬಾನ್ ಮುನಿದಿಹುದಾಲಿಸಿ ಸೊಲ್ಲ.
ಚಣದೊಳೆ ಹನಿವುದು,
ತಳುವಿದೊಡಾಗದು ;
ಏಳಿರಿ, ಅಣಿಯಾಗಿಹುದೆಲ್ಲ.

ಅಹಲ್ಯೆ

ಆಯಿತು ಅಣ್ಣಾ ;
ನಿಮ್ಮೀ ಬನ್ನ
ಎಂದಿಗೆ ಮುಗಿವುದು ?—ಮನದೊಳಗೆ

ಹದುಳವ ನೀಗದೆ
ಕೇಡನು ಹಾರದೆ
ಎಂದೊಂದುವೆವೈ ಮನೆಯೊಳಗೆ ?

ಈ ತಪವೇತಕೆ ?
ಈ ಚಟವೇತಕೆ ?
ಸಿದ್ಧಿಯದೇನಹುದಿದರಿಂದ ?
ದೇವರೊಳೇತಕೆ
ನಮಗೀ ಹೋರಿಕೆ ?
ಹಿತವೇನಹುದೀ ಹಗೆಯಿಂದ ?

ಪತಿಯೀ ಮನವನು
ಮರಳಿಸುವನುವನು
ಕಾಣೆರಿ, ಅಣ್ಣಾ ನೀವಿಂದು.
ಮಂಗಳವಲ್ಲದ
ಆವುದೊ ಪೊಲ್ಲದ
ಶಂಕಿಸುತಳುಕಿಹೆ ನಾನಿಂದು.

ಮೈತ್ರೇಯ

ಏತಕೆ ಅತ್ತಿಗೆ
ನಿಮಗಿಂದೀ ಬಗೆ ;
ಹದನೇನಿಹುದಿಲ್ಲಂಜಿಕೆಗೆ ?
ತಪವಂ ಗಳಿಪುದು
ಮುನಿಜನಕಾದುದು ;
ಎಡರೇನಿಹುದಿಲ್ಲಮರರಿಗೆ ?

ಆತ್ಮೋದ್ದೀಪನ-
ಕಾದೀಸಾಧನ
ಲೋಕದ ಕಲ್ಯಾಣಕೆ ಆಯ್ತು ;
ದುರುಳರು ದೌಷ್ಟ್ಯದಿ
ಮರುಳರು ಮೌಢ್ಯದಿ
ನಯುಗೆಡೆ, ಹದ್ದಿಸೊಳಿಡಲಾಯ್ತು.

ಈ ತಪಬಲಮಿರೆ
ಅಮರಾವತಿದೊರೆ
ತಲೆಬಾಗಿಪನೆನ್ನೊಮ್ಮೆ ಜಕ್ಕೆ !
ಈ ಬಲ ಮಿಗಿಲು,
ಏಕೀ ದಿಗಿಲು ?
ನಡೆಯಿರಿ ಅಗ್ನಿಯ ನೇಮಕ್ಕೆ.

ಅಹಲ್ಯೆ

ದಿಟ ! ಸಲ್ಲದು ಭಯ ;
ನಾನೀ ಪೂಜೆಯ
ಮುಗಿಸುವೆ ಬೇಗನೆ, ಅಣ್ಣಯ್ಯ.
ಇತ್ತೆಡೆ ಬಾರೈ,
ಕೌಶಿಕ ತೋರೈ
ಪಾವಕನರ್ಚಿಸೆ ತಕ್ಕಣಿಯ.

(ಅಗ್ನಿಯ ಬಳಿಗೆ ಹೋಗಿ ಪೂಜೆಯನ್ನು ಪ್ರಾರಂಭಿಸುವರು.)
(ಮದನ ಮತ್ತು ಇಂದ್ರ ಕಾಣಿಸಿಕೊಳ್ಳುತ್ತಾರೆ.)

ಮದನ

ಇದುವೆ ಆ ತಪದಾಣ! ಅಲ್ಲಗೋ ಗೌತಮನು
ಧ್ಯಾನಮುದ್ರಿತವದನ ಭೀಮದರ್ಶನನು !
ಅದ್ರಿಕನ್ಯಾವಿಮುಖ ಇಂತೆಯುಲ ತಪವಿದ್ದ ;
ಎಂತು ಮನವಳುಕುತ್ತ ನೆನೆವುದದನು !
ಪತಿಮುಖದೊಳೀ ಭೀರು ನೇಮವಾಚರಿಸಿಹಳು—
ಭಾವಕಾತರೆ ಗಿರಿಜೆ ಅಂದೆಂತುಟಂತು.
ನೀ ಕೆಲದೊಳಿಂತಿದ್ದೆ, ನಾ ಬಿಲ್ಲುಗೊಂಡಿದ್ದೆ ;
ಆದೊಡಾ ಕತೆ ಬೇರೆ—ಇಂದದಲ್ತು :
ನೀನಿತ್ತ ಮರೆಯೊಳಿರು, ನಾನತ್ತ ತವಸಿಯೆಡೆ
ಹೊಂಚುತ್ತ ಹಾಡುತ್ತ ಶರವನೊಗೆಯುವೆನು.
ನೀ ನೋಡುನೋಡುತಿರೆ, ಮೋಹಾಗ್ನಿ ಭುಗಿಲೆದ್ದು
ತಪವುರುಹಲೆಂತಹಾ ಮುನಿ ತವಿಪನು !

(ಮದನನು ಮುನಿಯೆಡೆಗೆ ಹೋಗುವನು.)

ಇಂದ್ರ

(ಅಹಲ್ಯೆಯನ್ನು ನೋಡುತ್ತ)

ಅಹ!—

ಎಂತ ಅಚ್ಚರಿ ಚೆಲುವೆ! ಏಂ ಸುಕೃತಿ ಈ ಅಗ್ನಿ!
ಮೊಗಕೆ ಮಿರುಗಿಡುವ್ವೋಲು ಹೊಂಬೆಳಗ ಲೇಪಿಸುತ
ಸುತ್ತಲೆಡೆಬಿಡದಂತೆ ಕುಣಿದು ನಲಿದಾಡಿ
ನುತಿಯ ಪೂಜೆಯಗೊಂಬನೀ ಧನ್ಯಪಾವಕನು!
ನನ್ನ ಮನ ಮತ್ಸರಿಪುದಿದನು ನೋಡಿ.

(ಮದನನು ಗೌತಮನ ಹತ್ತಿರ ಹಾಡುವನು—ಅಲ್ಲಿ ಬೆಳಕು ಬೀಳುವುದು.)

ಮದನ

ಮರುಳ ತವಸಿ ಗೌತಮಾ!
ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು
ಇನ್ನಾದರೆಚ್ಚರು!

ತಪದ ಲೋಭಕಿಂತು ದುಡಿವೆ
ನಿನಗೆ ನೀನೆ ಎರಡ ಬಗೆವೆ;
ಹುಸಿಯ ಬಾಳನೆನ್ನೆ ವರಂ
ಬಾಳ್ವೆ? ನಿನಗೆ ಇದುವೆ ತರಂ?
ಮರುಳ ಜೋಗಿ ಗೌತಮಾ! ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು ಇನ್ನಾದರೆಚ್ಚರು!

ಗೋವಕಾವ ಗೊಲ್ಲನೆಂತು
ತನ್ನಿರತನಪ್ಪನಂತು
ಅಂತೆ ಆಯ್ತು ನಿನ್ನ ಬಾಳು—
ಕರಣಗಳನು ಕಾಯುವಾಳು!
ಅಸ್ವತಂತ್ರ ಗೌತಮಾ! ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು ಇನ್ನಾದರೆಚ್ಚರು!

ನೇಮವೆಂಬೆ, ನೋಂಪಿ ಎಂಬೆ,
ಇರವ ಪುರುಳ ಹಿಡಿವೆನೆಂಬೆ;
ನಿಧಿಯನೆಡಹಿ ಮುಂದೆ ನಡೆವ
ಕುರುಡನಂತೆ ಒಲುಮೆಬಡವ!
ಪ್ರೇಮಕೃಪಣ ಗೌತಮಾ! ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು ಇನ್ನಾದರೆಚ್ಚರು!

ಬಾಳ ಕಾಡೊಳೊಲುಮೆಯೊರತೆ
ಹಿಂಗಿಹೋಗಲೆಂಥ ಕೊರತೆ!
ಗದ್ದೆನೆಂಬೆ ಕಾವನ—
ಅರಿಯೆ ವಿಫಲ ಜೀವನ!
ಜಂಬಗಾರ ಗೌತಮಾ! ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು ಇನ್ನಾದರೆಚ್ಚರು!

ಗಂಗೆ ತಡೆವ ರುದ್ರನಂತೆ
ಕಾಲಪೂರದಿದಿರು ನಿಂತೆ!
ನೆಳೆತವರಿಯೆ, ಅದರ ವೇಗ
ಮುಪ್ಪಿಗೊಯ್ವುದಣ್ಣಾ ಬೇಗ!
ಪ್ರಕೃತಿಗಿದಿರೆ ಮರುಳ ತಪಸಿ? ಇನ್ನಾದರೆಚ್ಚರು!
ನಿನ್ನ ಹೃದ್ಧರ್ಮವರಿತು ಇನ್ನಾದರೆಚ್ಚರು!

(ಅಹಲ್ಯೆ ಪೂಜೆಯನ್ನು ಮುಗಿಸಿ ಗೌತಮನ ಕಡೆಗೆ ಹೋಗುವಳು.)

ಇಂದ್ರ

ಅತ್ತ ಸರಿದಳು, ವಹ್ನಿ ಕುಂಡದೊಳು ಹದುಗುತ್ತ
ಕಳೆಗುಂದಿ ಉತ್ಸಾಹವುಡುಗುತಿಹನು.
ಗೌತಮನ ಬಲವಂದು ಪೊಡವಡುವಳೀ ಮಡದಿ;
ಸ್ಥಾಣುವೇ ಸರಿ ಆತ—ಅಲುಗದಿಹನು!

(ಇಂದ್ರನು ಅಹಲ್ಯೆಯನ್ನೇ ನೋಡುತ್ತಾ ಗೌತಮನ ಒಂದು ಪಾರ್ಶ್ವಕ್ಕೆ ಹೋಗುತ್ತಾನೆ.)

ಅಹಲ್ಯೆ

(ಹಾಡುವಳು)

ಎನಿತು ದೂರಕೆ ಸರಿದು ನಿಂತಿಹೆಯೋ
    ನನ್ನ ಮನದನ್ನ—ಹೇ
    ಸತ್ವಸಂಪನ್ನ !

ನನ್ನ ನಿಲುವಿಗೆ ನಿಲುಕದೀ ಪರಿ
ಬುವಿಯೊಳಡಿಯಿಟ್ಟಮರಪಥವನು
ಮುಟ್ಟಿ, ಮರೆಗೊಂಡಂತೆ ವಾಮನ—
ಎನಿತು ದೂರಕೆ ಸರಿದು ನಿಂತಿಹೆಯೋ
    ನನ್ನ ಮನದನ್ನ—ಹೇ
    ಸತ್ವಸಂಪನ್ನ !

ನಿನ್ನ ತಣಿವಿನ ತಾಣವೆಲ್ಲಿಹುದೋ ?
    ಹೇಳು ಲೇಸಾಗಿ—
    ನನ್ನ ಬೈರಾಗಿ !
ಆವ ಆಸೆಯು ಗಂಧ ಸೆಳೆಯಿತು,
ಆವ ಮುದಮಕರಂದ ತಣಿಸಿತು,
ಆವ ಮತ್ತಿಂತಿಹವ ಮರೆಸಿತು ?
    ಹೇಳು ಲೇಸಾಗಿ—
    ನನ್ನ ಬೈರಾಗಿ !

ಎನಿತು ದೂರಕೆ ಸರಿದು ನಿಂತಿಹೆಯೋ
    ನನ್ನ ಮನದನ್ನ—ಹೇ
    ಸತ್ವಸಂಪನ್ನ !

ಎಂಥ ಮರವೆಯೊ ಇನಿಯ, ಇನಿತೊಂದು
    ಹಂಬಲನು ಬಿಟ್ಟೆ—ನನ್ನ
    ಒಂಟಿಯೊಳಗಿಟ್ಟೆ !
ಮನವು ಮುದುಟಿತು ಆಸೆ ನೂರಕೆ,
ಬದುಕು ತೆರವೋ ನೂರು ತವಕಕೆ ;

ಏನುಹೇಳಲಿ ನಿನ್ನ ಸ್ವಾರ್ಥಕೆ !
ಹಂಬಲನು ಬಿಟ್ಟೆ—ನನ್ನ
ಒಂಟಿಯೊಳಗಿಟ್ಟೆ !

ಎನಿತು ದೂರಕೆ ಸರಿದು ನಿಂತಿಹೆಯೋ
ನನ್ನ ಮನದನ್ನ—ಹೇ
ಸತ್ವಸಂಪನ್ನ !

(ಕಾಮನು ಅಂಬುಹೂಡಿ ಬಿಡುವನು; ಅದು ಗೌತಮನನ್ನೂ ಗೌತಮನ ಹಿಂದಿರುವ ಇಂದ್ರನನ್ನೂ ಮುಟ್ಟುವುದು. ಗೌತಮನು ಚಲಿಸುವನು—ಕಣ್ತೆರೆದು ಮುಚ್ಚುವನು.)

ಮೈತ್ರೇಯ

(ಅಹಲ್ಯೆಯನ್ನು ಸಮೀಪಿಸಿ)

ಹೊತ್ತು ಮೀರಿತು ನಡೆಯಿರತ್ತಿಗೆ—
ತಪಸಿಗೆಚ್ಚರವಾಗೆ ಮುನಿವರು.
ಮನೆಯೊಳೊಂಟಿಯೊಳಿಹನು ಹಸುಳೆ.
ಬಿಟ್ಟು ಬಾ ನೀ ಕೌಶಿಕ.

ಅಹಲ್ಯೆ

ಅಂತೆ ಆಗಲಿ ಅಣ್ಣ. ಬಾರಾ
ತಮ್ಮ ಕೌಶಿಕ, ಮುಂದೆ ಅಡಿಯಿಡು—
ಎಂತು ಅಂಜುವುದೆನ್ನ ಈ ಬಗೆ
ಪತಿಯ ಸನ್ನಿಧಿಯುಳಿಯಲು !

(ಹೋಗುವರು.)

ಇಂದ್ರ

ಮರೆಯಾದಳು ಬನದೈಸಿರಿ.
ಹಿಂಬಾಲಿಸುತವಳೀಪರಿ
ಕಣ್ ತುಯ್ಯುವುದೇನಚ್ಚರಿ—
ನನ್ನುಳಿವಂತು ?

ಕರಿಮುಗಿಲಿನ ಪಂಜರದೊಳು
ಪರದಾಡುವ ಮಿಂಚಿನವೊಲು
ಹೊಯ್ದಾಡುವುದೆನ್ನೆದೆಯೊಳು
ಆಸೆ—ಅದೆಂತು!

ಎಂದಿಲ್ಲದ ಹೊಸ ರೀತಿಗೆ
ಇಂದಾಯಿತು ನನ್ನೀ ಬಗೆ
ಕಣ್ ರೂಪಿಗೆ ಕಿವಿ ಮಾತಿಗೆ
ನೀರಡಿಸುವ ತೆರದಿ!

ಕುಸುಮೇಷುವು ನನ್ನೆದೆಯನೆ
ಹೊಸ ಚಳಕಗೊಳಿಸಿದನೊ ಎನೆ
ನೋಟದ ನೆನಪದು ತಿಣ್ಣನೆ
ಮರುಕೊಳಿವುದು ಮನದಿ.

ಮದನ

(ಹತ್ತಿರ ಬಂದು, ಇಂದ್ರನ ಬೆನ್ನು ತಟ್ಟಿ)

ಬಂದ ಕಜ್ಜವಾಯ್ತು, ಶಕ್ರ, ಬಾನಿಗೇರ್ವ ಬಾ.
ಮನವ ಮುಟ್ಟಿ ಅಂಬ ಬಿಟ್ಟೆ, ತಪವ ಸುಟ್ಟೆ ಬಾ.

ಇಂದ್ರ

ಏನಾಯ್ತು! ಏನ ಗೈದೆ! ಗುರಿಯ ಮಾತೆ ಕುರುಡಗೆ?
ತಾಕಿತಿಲ್ಲಿ ನೆಟ್ಟಿತಿಲ್ಲಿ, ಸೋತೆನಿಂದು ಚೆಲುವೆಗೆ.

ಮದನ

ಚೆಲುವ ಕಂಡ ಚಣದ ಮೋಹ! ಬಾರ ನಿನ್ನ ಸ್ವರ್ಗಕೆ.
ನಂದನದೊಳು ಅಪ್ಸರೆಯರು ಕಾದಿಹರೋ ಬಿಸದಕೆ.

ಇಂದ್ರ

ನನ್ನ ನಾಚಿಪಂತೆ ನುಡಿವೆ, ಹಳೆಯ ಬಯಕೆಯುಣಕಿಸಿ—
ಇಂತುಟಲ್ಪಕಾಮದಿಂದ ನನ್ನ ಮುಕ್ತನಾಗಿಸಿ.

ಮದನ

ಮೂರು ಜಗವೆ ನಿನ್ನದಿರಲು, ನಿನ್ನ ಆಸೆಗೇ ತಡೆ?
ಇಸ್ಟು ಒಂದ ಬಳಿಯ ಹಿಡಿದು ನಾನು ಹೋಹೆನತ್ತೆಡೆ.

ಇಂದ್ರ

ಎಲ್ಲರೊಳಗ ಬಲ್ಲೆ—ನೀನೆ ಇಂತುಟೆನ್ನ ಹಳಿವರೆ?
ಸಮಯಕಪ್ಪ ಕೆಳೆಯನಲಾ ವಿಷಮತೆಯೊಳು ತೊರೆವರೆ?

ಮದನ

ಧರ್ಮ ನರಿತವನೆಂತಧರ್ಮಕೆ ಮನವನೀ ಪರಿ ಗೈದೆಯೊ?
ಮುನಿಯ ಸತಿಯನು ಬಯಸುವಾಪದವೆನಿತು ಎಂಬುದ ಮರೆತೆಯೊ?
ಮೂರು ಲೋಕವನಾಳ್ವ ಘನತೆಯು ಚಣದ ಬಯಕೆಗೆ ನೀಗಲು
ಎಂತು ನೀನಿಂದಾದೆ ಶಕ್ರ, ಇಂತು ಮೋಹಕೆ ಮೀಸಲು?

ಇಂದ್ರ

ಗುರುಗಳೊರೆವಂತೊರೆವೆ, ಮನ್ಮಥ, ಸಾಕು ನಿನ್ನುಪದೇಶವು!
ಅಂತರಂಗವ ಬಲ್ಲೆ, ನನ್ನೊಳಿ ಏತಕೀ ಪರಿಹಾಸ್ಯವು?
ನೂರು ಹೆಂಗಳ ಕಂಡೆನಾರಿಗೆ ಹೃದಯವೀತೆರ ತೆರೆಯಿತು?
ಇಂದದೇತಕೆ ಇವಳ ಚೆಲ್ವಿಕೆ ನನ್ನನೀ ಪರಿ ಸೆಳೆಯಿತು?

ಧರ್ಮಮರ್ಮದ ಮಾತ ತೆಗೆ ತೆಗೆ! ಇವನು ಅರಿತವಗೇಕಿದು?
ಸಂಪದಾಪದವೆಂಬ ತರ್ಕವ ಜಡೆಲೊ ಒಲಿದವಗೇಕದು?
ಒಳಗನೊಳಗನು ಕಂಡು ನಡೆವುದು ತಾನೆ ಧರ್ಮದ ಮರ್ಮವು;
ನರಸ ಬೆದರಿಕೆಗಾನು ಭಯಗೊಳೆ ಅದುವೆ ದೇವರ ಧರ್ಮವು?

ಹಲವು ಮಾತಿಂದೇನು, ಮದನ, ಒಲಿದೆನೆಂದೊಡೆ ಸಾಲದೆ?
ಮಧುವಿನಂತಃಸ್ಫೂರ್ತಿಗೊಲವೇ, ಶಿಶಿರಸಂಯಮ ಸೋಲದೆ?
ದಿನದ ಬಾಳ್ವೆಯ ರೂಢಿ ಮುಚ್ಚಿದ್ದೊಳಗಿನಾಳದ ಅರಕೆಯು
ಹೆಣ್ಣ ಬೆಳಕಿಂ ಕಂಡು ಬೆದರಿಹೆ; ಪೂರ್ಣಗೊಳಿಸೀ ಹರಕೆಯು.

ಸ್ವರ್ಗದೊಡೆತನವುಳಿಯಲಳಿಯಲಿ, ನನ್ನ ಸಂಪದವೆಲ್ಲವೂ
ಸೂರೆಯಾಗುತ ಹೋಗಲೊಲವೆ, ನನಗೆ ಹಂಬಲವಿಲ್ಲವು!

ಸಕಲಹೃದಯದ ಸೂತ್ರಧಾರನೆ ಸತಿಯನೆನ್ನವಳೆನ್ನಿಸೈ.
ಸೋಲಸರಿಯದ ಮಿತ್ರ ಮನಸಿಜ, ನನ್ನ ಹರಕೆಯ ಸಲ್ಲಿಸೈ.

ಮದನ

(ಬೇರಗಾಗಿ, ತನ್ನಲ್ಲಿ ತಾನೆ)

ತಾಪಸಗೆ ಸತಿಮೋಹ—ಸತಿಗೆ ವಿಭವದ ಮೋಹ—
ಸಕಲವಿಭವೇಶ್ವರನೊ ರೂಪಕಾಮ!
ಅರಿಯೊಣಗಿದಿಂಧನದಿ ಇಂತೆ ಹೊಗೆವುದು ಬೆಂಕಿ
ತನ್ನ ನಿಜ ತಾನಡೆವ ಮುನ್ನ; ವಿಧಿನೇಮ!

(ಇಂದ್ರನಿಗೆ)

ನಿನ್ನ ಈ ಬಗೆ ಕಂಡು ಕನಿಕರಿಪೆ ನಾ ಶಕ್ರ,
ಮುನಿಗು ಮಡದಿಗು ಇಂತೆ ಮರುಗುತಿಹೆನು.
ಅವರವರ ಪ್ರಕೃತಿಯೊಲು ನಡೆಯಲೆಲ್ಲರು ಇಂದು
ಇನಿತಡ್ಡಿಯಿಲ್ಲದಲೆ—ಇಂತೆಸಪೆನು.
ಇಂತೆಸಗಲೆನ್ನೆಸಕ ತೀರಿತಿಲ್ಲಿಂದು—
ಪ್ರೇರಣೆಯನರಿತು ನಡೆ ಜೆಚ್ಚರದಿ ಬಂಧು!

(ಮದನನು ಅಂತರ್ಹಿತನಾಗುವನು.)

ಇಂದ್ರ

ಅಹ!—
ಎಂತಹ ವರವಿತ್ತೆಯೊ ಕಂತು—
ನನ್ನ ಪ್ರಕೃತಿಯ ಪ್ರೇರಣೆಯೆಂತು!
ಏನು ಮಾಯೆಯೋ ನಿನ್ನದು, ಒಲವೆ
ಏನು ಶಕ್ತನೋ ನೀನೆನ್ನೊಲವೆ!
ಸ್ವರ್ಗಭೋಗ ತ್ರೈಲೋಕ್ಯವೈಭವಂ
ಭ್ರಾಂತಿ ಎನಿಪುದೀ ಮೋದಕೈತವಂ
ಆಕರ್ಷಿತ ಉಡು ಪಥವುಳಿವಂತೆ
ಧಾವಿಸುತಿದೆ ಸನ್ನಿರವೊಲವಂತೆ.

ಕೊಳ್ ಎಂಬುದು ನನ್ನಂತಃಸ್ಫೂರ್ತಿ,
ಕೊಡು ಎಂಬುದು ನನ್ನೊಳಗಿನ ಅರ್ತಿ;
ಹುಸಿ ಹುಸಿ ಮಿಕ್ಕಿನ ರಾಗಮಿದೆಲ್ಲಾ
ಅವಳ ಪಡೆವ ಸೈಪೇ ನನ್ನಿಯಲಾ!

(ಆಲಿಸಿ ನೋಡಿ)

ಶರಣೆಂದೆರೆಯುತ ಕರೆವಳು ಚೆಲುವೆ.
ಅವಳ ಸಂತವಿಸೆ ನಾನೀ ಚಣವೆ
ಪೋಪೆನಿದೋ—ನನ್ನೊಲವನರ್ಚಿಸೆ.
ಈ ಆರಾಧನೆಗೆನ್ನನರ್ಪಿಸೆ
ಮಧು ಒದಗಲಿ, ಚೆಲುವಾಗಲಿ ಬಸವು,
ತಣ್ಣೆಲರೊಳು ತೇಲಲಿ ಸೌರಭವು,
ಓಸರಿಸಲಿ ಕಾರ್ಮೋಡದ ತೆರೆಯು,
ಜೊನ್ನದ ಸೊದೆಯಸು ಕರೆಯಲಿ ಪೆರೆಯು.
ಇಂದು ಮಹೇಂದ್ರಂಗಪ್ಪ ಸಲ್ಮೆಗೆ
ಜಗಮೆ ಸಗಲಿ ನನಗಪ್ಪ ಸಲ್ಮೆಗೆ!

(ಹೋಗುವನು.)

ತೆರೆ.

[ಮುಂದೆ ಸಾಗುವುದು.]

ಸಾದರ ಸ್ವೀಕಾರ

೧-೫. ಕಾನೂರು ಸುಬ್ಬಮ್ಮ ಹೆಗ್ಗಡಿತಿ (ಅಧ್ಯಾಯಗಳು ೧-೮೧)—ಲೇಖಕರು: ಶ್ರೀಮಾನ್ ಕೆ. ವಿ. ಪುಟ್ಟಪ್ಪ; ಪ್ರಕಾಶಕರು: ಕಾವ್ಯಾಲಯ, ಶಿವಮೊಗ್ಗ; ಕ್ರೌನ್ ಅ. v + ೮೦೭; ಬೆಲೆ, ಕ್ಯಾಲಿಕೊ ರೂ. ೧೦—೦—೦, ಸಾದಾ ಪ್ರತಿ ರೂ. ೬—೦—೦.

೬. ಸಂಸಾರ-ಸಮರ (ಚಾರ್ಲ್ಸ್ ಡಿಕಿನ್ಸಿನ ಕಾದಂಬರಿ)—ಅನುವಾದಕರು: ಶ್ರೀಮಾನ್ ಈಶ್ವರ ಸಣಕಲ್ಲ; ಪ್ರಕಾಶಕರು: ಅರವಿಂದ ಗ್ರಂಥಮಾಲೆ, ಹಲಸಂಗಿ; ಕ್ರೌನ್ ಅ. ೪ + ೧೬೧; ಬೆಲೆ, ೮ ಆಣೆ.

೭. ಕಲ್ಲುಸಕ್ಕರೆ ಬೆಟ್ಟ (ಸಚಿತ್ರ)—ಲೇಖಕರು: ಶ್ರೀಮಾನ್ ಬಿ. ಶ್ರೀ. ಪಾಂಡುರಂಗ ರಾವ್; ಪುಸ್ತಕ ದೊರೆಯುವ ಸ್ಥಳ: ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ; ಕ್ರೌನ್ ಅ. ೨೪; ಬೆಲೆ, ೨ ಆಣೆ.

೮. ಹಳ್ಳಿಯ ಹಾಡುಗಳು—ಸಂಗ್ರಾಹಕರು: ಶ್ರೀಮಾನ್ ಬಿ. ಎನ್. ರಂಗಸ್ವಾಮಿ ಮತ್ತು ಶ್ರೀಮಾನ್ ಗೊರೂರು ರಾಮಸ್ವಾಮಿ ಐಯಂಗಾರ್; ಪ್ರಕಾಶಕರು: ರೈತ ಜ್ಞಾನ ಪ್ರಚಾರ ಮಂಡಲಿ, ಗೊರೂರು, ಮೈಸೂರು ಸೀಮೆ; ಕ್ರೌನ್ ಅ. xviii + ೧೨೩; ಬೆಲೆ, ೧೪ ಆಣೆ.

೯. ಶ್ರೀರಾಮಾಯಣದ ಮಹಾಪುರುಷರು (ಸಚಿತ್ರ)—ಲೇಖಕರು: ಶ್ರೀಮಾನ್ ದೇವುಡು; ಪ್ರಕಾಶಕರು: ಎಸ್. ಎಸ್. ಎನ್. ಬುಕ್ ಡಿಪೊ, ಬೆಂಗಳೂರು ಸಿಟಿ; ಕ್ರೌನ್ ಅ. ೧೭೨; ಬೆಲೆ, ರೂ. ೧—೨—೦.

೧೦. ವಿಜಯಕುಮಾರೀಚರಿತ್ರಾದಿ ಪಂಚಗ್ರಂಥಗಳು—ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಸರಾಫ್ ಪದ್ಮರಾಜಯ್ಯನವರು, ಸಾಲಿಗ್ರಾಮ; ಡೆಮಿ ಅ. iv + ೩೧.

೧೧. ಶ್ರೀ ಶಾಂತೀಶ್ವರ ಚರಿತಂ (ಶ್ರೀ ಶಾಂತಿಕೀರ್ತಿಮುನಿ ವಿರಚಿತ)—ಸಂಪಾದಕರು: ಶ್ರೀಮಾನ್ ಎಂ. ನೇಮಿರಾಜ ಶಾಸ್ತ್ರಿಗಳು, ಮೈಸೂರು; ಪ್ರಕಾಶಿಕೆಯರು: ಶ್ರೀಮತಿ ಪದ್ಮಾವತಮ್ಮನವರು, ಸಾಲಿಗ್ರಾಮ; ಡೆಮಿ ಅ. v + ೫೭ + ii + ೯೫; ಬೆಲೆ, ರೂ. ೧—೦—೦.

೧೨. ಬುದ್ಧಿವಂತಿಕೆ (ಮೂರು ಅಂಕಗಳ ನಾಟಕ)—ಲೇಖಕರು: ಶ್ರೀಮಾನ್ ಕೈವಾರ್ ರಾಜಾರಾವ್, ಬಿ.ಎ.; ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ; ಫುಲ್ಸ್‌ಕ್ಯಾಪ್ ಷೋ. ೯೨; ಬೆಲೆ, ೬ ಆಣೆ.

೧೩. ಬಣ್ಣದ ಬೀಸಣಿಕೆ (ಏಳು ಏಕಾಂಕ ನಾಟಕಗಳು)—ಬರೆದವರು: ಶ್ರೀಮಾನ್ ಅ. ನ. ಕೃಷ್ಣರಾಯರು; ಪ್ರಕಾಶಕರು: ಪ್ರೇಮ ಪ್ರಕಟನಾಲಯ, ಧಾರವಾಡ; ಕ್ರೌನ್ ಅ. ೧೦ + ೨೨೫; ಬೆಲೆ, ೧೨ ಆಣೆ.

೧೪. ಗ್ರಾಮಪುನರುಜ್ಜೀವನ—ಲೇಖಕರು: ಶ್ರೀಮಾನ್ ಬಿ. ರಾಮಸ್ವಾಮಯ್ಯ, ಬಿ.ಎಸ್‌ಸಿ.; ಪ್ರಕಾಶಕರು: ಕರ್ನಾಟಕ ಸಂಘ, ಮಧುಗಿರಿ; ಕ್ರೌನ್ ಅ. ೧೦; ಬೆಲೆ, ಉಚಿತ.

೧೫. ಹೊನಲು (ಕವನ ಸಂಗ್ರಹ)—ಲೇಖಕರು: ಶ್ರೀಮಾನ್ ಮೂರ್ತಿ; ಮಾರಾಟಗಾರರು: ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ; ಕ್ರೌನ್ ಅ. ೪೪; ಬೆಲೆ, ೬ ಆಣೆ.

೧೬. ಪ್ರಸಾದ (ಮಾಸಪತ್ರ: ವರ್ಷ ೧, ಸಂಚಿಕೆ ೧)—ಸಂಪಾದಕರು: ಶ್ರೀಮಾನ್ ತಟ್ಟಿಕೃಷ್ಣರಾಯರು; ಪ್ರಕಾಶಕರು: ಶ್ರೀಮಾನ್ ಕೆ. ಬಿ. ತಟ್ಟಿ, 'ಪ್ರಸಾದ' ಆಫೀಸ್, ಧಾರವಾಡ; ವಾರ್ಷಿಕ ಚಂದಾ, ರೂ. ೧—೦—೦.

೧೭. ನವಸಂದೇಶ (ಜನ್ಮದಿನೋತ್ಸವ ಸಂಚಿಕೆಯು)—ಸಂಪಾದಕರು: ಪಂಡಿತ ಟಿ. ಎಚ್. ಎಂ. ಹೊಳೆಬಸವಶಾಸ್ತ್ರಿಗಳು, ಬಳ್ಳಾರಿ; ಬೆಲೆ, ೨ ಆಣೆ.

೧೮. ವಿಚಾರವಾಹಿನಿ (ಮಾಸ ಪತ್ರಿಕೆ: ಸಂಪುಟ ೧, ಸಂಚಿಕೆ ೧)—ಸಂಪಾದಕರು: ಶ್ರೀಮಾನ್ ಕೂಡಲಿ ಚಿದಂಬರಂ, ತೀರ್ಥಹಳ್ಳಿ; ವಾರ್ಷಿಕ ಚಂದಾ, ರೂ. ೩—೦—೦.

೧೯. ಹಿಂದೂ ಸಂದೇಶ (ವಾರ ಪತ್ರಿಕೆ: ಸಂಪುಟ ೧, ಸಂಚಿಕೆ ೧೨)—ಅಖಿಲ ಹಿಂದೂ ಸನ್ಯಾಸಿಗಳ ಮುಖಪತ್ರಿಕೆ; ಸಂಪಾದಕರು: ಶ್ರೀ ಸ್ವಾಮಿ ಶಿವಾನಂದರು; ಪ್ರಕಾಶಕರು: ಅರಭಾವಿ ಮಠ, ಅರಭಾವಿ, ಜಿಲ್ಲಾ ಬೆಳಗಾಂವ; ವಾರ್ಷಿಕ ಚಂದಾ, ರೂ. ೧—೫—೦.

ದಿವಂಗತ
ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು

ಮೈಸೂರು ಮಹಾರಾಜರವರ ಕಾಲೇಜಿನ ಕನ್ನಡದ ಪ್ರೊಫೆಸರೂ 'ಪ್ರಬುದ್ಧ ಕರ್ಣಾಟಕ'ದ ಸಂಪಾದಕರೂ ಆಗಿದ್ದ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಅವರು ೨೪–೨–೧೯೩೯ನೆಯ ಶುಕ್ರವಾರ ರಾತ್ರಿ ಹತ್ತೂವರೆ ಘಂಟೆಯ ಸಮಯದಲ್ಲಿ ದೈವಾಧೀನರಾದರೆಂಬ ದುಃಖವಾರ್ತೆಯನ್ನು ಅತ್ಯಂತ ಸಂತಾಪದಿಂದ ನಮ್ಮ ವಾಚಕರಿಗೆ ಅರಿಕೆಮಾಡುತ್ತೇವೆ. ಈ ಸಂಕ್ರಾಂತಿಯ ಸಂಚಿಕೆಯನ್ನು ಈ ಮೊದಲೇ ಹೊರಡಿಸುವುದಕ್ಕೆ ಎಲ್ಲ ಏರ್ಪಾಡುಗಳೂ ನಡೆದಿದ್ದುವು. ಆದರೆ ಸಂಪಾದಕರ ಮರಣವಾರ್ತೆಯನ್ನು ಇದರಲ್ಲೇ ಪ್ರಕಟಿಸಬೇಕಾಗಿ ವಿಧಿಸಂಕೇತವಿದ್ದಂತೆ ತೋರುತ್ತದೆ. . . .

ಶ್ರೀಮಾನ್ ವೆಂಕಣ್ಣಯ್ಯನವರ ದೇಹಾರೋಗ್ಯವು ಈಚೆಗೆ ಉತ್ತಮವಾಗಿರಲಿಲ್ಲ. ಆದರೂ ಅವರು ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಬಂದರು. ಅಲ್ಲಿಂದೀಚೆಗೆ ಕೆಲವು ದಿನಗಳಾದ ಮೇಲೆ, ಮೊದಲೇ ಇದ್ದ ದೇಹದೌರ್ಬಲ್ಯದ ಜೊತೆಗೆ ನ್ಯುಮೋನಿಯಾ ರೋಗವು ಬಂದೊದಗಿತು. ಚಿಕಿತ್ಸೆಯ ಬಲದಿಂದ ರೋಗವೇನೋ ಹಿಮ್ಮೆಟ್ಟಿತು; ಶ್ರೀಯುತರು ಮತ್ತೆ ಚೇತರಿಸಿಕೊಳ್ಳುವರೆಂಬ ಆಸೆ ಅವರ ಆಪ್ತವರ್ಗದಲ್ಲೆಲ್ಲಾ ತಲೆಯೆತ್ತಿತ್ತು. ಆದರೆ ವಿಧಿಯ ಉದ್ದೇಶ ಬೇರೆಯಾಗಿತ್ತು. ಹೃದಯದ ಕ್ರಿಯೆ ನಿಂತುಹೋಗಿ, ಶ್ರೀಮಾನ್ ವೆಂಕಣ್ಣಯ್ಯನವರು ದಿವಂಗತರಾದರು; ಕನ್ನಡನಾಡನ್ನು ಶೋಕದಲ್ಲಿ ಮುಳುಗಿಸಿಬಿಟ್ಟರು; ಕನ್ನಡ ನುಡಿಯನ್ನು ಅಪಾರನಷ್ಟಕ್ಕೆ ಗುರಿಮಾಡಿಬಿಟ್ಟರು.

ಶೋಕ ಕವಿದಿರುವ ಈ ಸಮಯದಲ್ಲಿ ಹೆಚ್ಚಾಗಿ ಏನನ್ನೂ ಬರೆಯಲಾರೆವು. ದಿವಂಗತರ ಆತ್ಮಕ್ಕೆ ದೇವರು ಶಾಂತಿಯನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ; ಅವರ ಕುಟುಂಬಕ್ಕೆ ಒದಗಿರುವ ಮಹಾದುಃಖದಲ್ಲಿ ನಾವೂ ಸಮಭಾಗಿಗಳಾಗಿದ್ದೇವೆಂದು ಈ ಮೂಲಕ ಶ್ರುತಪಡಿಸುತ್ತೇವೆ.

ಪ್ರಬುದ್ಧ

ಕರ್ನಾಟಕ

ಬಹುಧಾನ್ಯ ಸಂವತ್ಸರ] [ಕಾಮನ ಸಂಚಿಕೆ

ಮೈಸೂರು :

ಮೈಸೂರು ವಿಶ್ವವಿದ್ಯಾನಿಲಯ

೧೯೩೯

ಸಂಪುಟ ೨೦] [ಸಂಚಿಕೆ ೪

ವಿಷಯ ಸೂಚಿಕೆ



ಈ ವರ್ಷ ಬೆಂಗಳೂರು ನಗರದಲ್ಲಿ ನಡೆದ ವಸಂತ ಸಾಹಿತ್ಯೋತ್ಸವವನ್ನು
ಯುವರಾಜಕುಮಾರರಾದ ಜಯಚಾಮರಾಜ ಒಡೆಯರವರು ಆರಂಭ ಮಾಡಿದಾಗ ತೆಗೆದ ಚಿತ್ರ

(ಪಡಿಯಚ್ಚು "ತಾಯಿನಾಡು" ಪತ್ರಿಕೆಯ ಕೃಪೆಯಿಂದ ದೊರೆತದ್ದು.)

ಪ್ರಬುದ್ಧ

ಕರ್ಣಾಟಕ

ಬಹುಧಾನ್ಯ ಸಂವತ್ಸರ — ೭೮ — ಕಾಮುನ ಸಂಚಿಕೆ

ವೆಂಕಣ್ಣಯ್ಯನವರಿಗೆ

ಬೆಂದ ನೆಲದಿಂದೊಡನೆ ಹೊಸ ಹಸುರು ಹೊಮ್ಮುವುದೆ?
ಹಸಿನೋವಿನಿಂದೆ ಹಾಡಿನ ಚಿಲುಮೆ ಚಿಮ್ಮುವುದೆ?
ಮೌನವೆ ಮಹಾಸ್ತುತಿ ನಿಮಗೆ, ನೀರವ ವ್ಯಕ್ತಿ:
ನಿಮ್ಮ ನೆನೆದೊಡಮೆನ್ನ ಗಾನದ ಹಕ್ಕಿ ರೆಕ್ಕೆ
ಮುದುರಿ, ರೆಪ್ಪೆಯ ಮುಚ್ಚಿ, ಕಾವು ಕೂರುವುದಳಲ
ಮೊಟ್ಟೆಯ ಮೇಲೆ, ಸುಯ್ದು: ಸುಯ್ವುದೆ ಚರಮಗೀತೆ!

ಕೆ. ವಿ. ಪುಟ್ಟಪ್ಪ.

ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು

ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರ ಮರಣದಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ದೊಡ್ಡ ಘಾತವಾಗಿದೆ. ಒಬ್ಬ ನುರಿತ ವಿದ್ವಾಂಸರನ್ನು, ಸತ್ಪುರುಷರನ್ನು, ನಾವು ಕಳೆದುಕೊಂಡೆವು. ವಿದ್ವತ್ತು, ಸರಳವಾದ ನಡತೆ, ಲೌಕಿಕ ಪ್ರಯೋಜನದಲ್ಲಿ ಅತ್ಯಂತ ಅನಾಸಕ್ತಿ, ಶಿಷ್ಯರಲ್ಲಿ ವಾತ್ಸಲ್ಯ, ಇವೆಲ್ಲಕ್ಕಿಂತ ಹೆಚ್ಚಾಗಿ—ಕನ್ನಡದ ವ್ಯಾಸಂಗವನ್ನು ಮುಂದುವರಿಸುವುದರಲ್ಲೂ ಜನಸಾಮಾನ್ಯದಲ್ಲಿ ತಾಯ್ನುಡಿಯ ಮೂಲಕ ಸಂಸ್ಕೃತಿಯನ್ನು ಹರಡುವುದರಲ್ಲೂ ಅವರಿಗಿದ್ದ ಗಲಭೆಯಿಲ್ಲದ ಉತ್ಸಾಹ: ಇಂಥ ಅನೇಕ ಅಂಶಗಳಲ್ಲಿ ಅವರು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳ ಪ್ರೊಫೆಸರುಗಳನ್ನು ಹೋಲುತ್ತಿದ್ದರು. ಅವರ ಪ್ರಸನ್ನಮುಖವೂ, ಮನಸ್ಸಿಗೆ ನೆಮ್ಮದಿ ಕೊಡುತ್ತಿದ್ದ ಅವರ ಸ್ನೇಹವೂ ಇನ್ನು ನಮಗೆ ಮರೆಯಾದುವು.

ಎನ್. ಎಸ್. ಸುಬ್ಬರಾವ್.

ಶ್ರೀಮಾನ್ ವೆಂಕಣ್ಣಯ್ಯನವರು

ಶ್ರೀಮಾನ್ ವೆಂಕಣ್ಣಯ್ಯನವರು ದಿವಂಗತರಾದುದರಿಂದ ಕನ್ನಡ ನಾಡಿಗೂ ನುಡಿಗೂ ಆಗಿರುವ ನಷ್ಟವನ್ನು ನಾಡಿಗೆ ನಾಡೇ ಸಭೆಸೇರಿ, ಸಂತಾಪಪಟ್ಟು, ವ್ಯಕ್ತಪಡಿಸಿದೆ. ವಿಶ್ವವಿದ್ಯಾನಿಲಯದಲ್ಲಿಯೂ, ಸಾಹಿತ್ಯ ಪರಿಷತ್ತಿನಲ್ಲಿಯೂ, ಅವರ ಮಿತ್ರವರ್ಗದಲ್ಲಿಯೂ ಅವರ ಗುಣಾತಿಶಯಗಳನ್ನೂ ಮಹಾಪ್ರಭಾವವನ್ನೂ ಅರಿತು ನುರಿತ ನಮಗೆ ಆಡಿತೋರುವುದಕ್ಕೆ ಮಾತೇ ಬಾರದಾಗಿದೆ.

ಆದರೂ ಪ್ರಬುದ್ಧ ಕರ್ಣಾಟಕದ ಬಾಷ್ಪಾಂಜಲಿಯೆಂದು ಒಂದೆರಡು ಮಾತನ್ನು ನಾನು ಆಡಿಯೇ ತೀರಬೇಕಾಗಿದೆ.

ಶ್ರೀ. ವೆಂಕಣ್ಣಯ್ಯನವರು ಶ್ರೀ. ಕೃಷ್ಣಶಾಸ್ತ್ರಿಗಳ ನೆರವಿನಿಂದ ಈ ಪತ್ರಿಕೆಯನ್ನು ಆರಂಭಿಸಿ ಬೆಳಸಿದರು. ವಿಶ್ವವಿದ್ಯಾನಿಲಯದ ಆಶ್ರಯಕ್ಕೆ ಅದು ಸಂದಾಗ, ಅವರೇ ಪ್ರಮುಖ ಸಂಪಾದಕರಾಗಿ ನಿಂತು, ಅದನ್ನು ವಿಸ್ತರಿಸಿ ಈಗಿನ ಮಟ್ಟಕ್ಕೆ ತಂದರು. ತೆರೆಯ ಹಿಂದೆ ಅವರು ಎಷ್ಟು ದುಡಿಯುತ್ತಿದ್ದರೆಂಬುದನ್ನು ಬಲ್ಲವರೇ ಬಲ್ಲರು. ಲೇಖಕರನ್ನು ಒಂದುಗೂಡಿಸುವ ಅವರ ಸ್ನೇಹಶಕ್ತಿಯೂ, ಎಳೆಯ ಸಾಹಿತಿಗಳನ್ನು ಹುರುಪುಗೊಳಿಸುವ ಅವರ ಉದಾರಹೃದಯವೂ, ಗಟ್ಟಿಯನ್ನಾಯುವ ಅವರ ವಿಮರ್ಶ ಸೂಕ್ಷ್ಮತೆಯೂ, ವೈವಿಧ್ಯವನ್ನು ಪ್ರಚೋದನೆಮಾಡುವ ಅವರ ವಿಶಾಲ ದೃಷ್ಟಿಯೂ ಅನ್ಯಾದೃಶವಾದುವು.

ಕನ್ನಡ ಪ್ರೊಫೆಸರಾಗಿ ಅವರು ನಿಷ್ಕೃಷ್ಟಜ್ಞಾನವುಳ್ಳವರು. ಹಳದರಲ್ಲಿ ಅತಿ ಭಕ್ತಿಯಿಲ್ಲದೆ, ಹೊಸದರಲ್ಲಿ ಅತಿಕ್ರಾಂತಿಗೆ ಹೋಗದೆ, ಮಧ್ಯಮಾರ್ಗಿಗಳಾದವರು. ವಿದ್ಯಾರ್ಥಿಗಳಲ್ಲಿ ತಂದೆಯಂತೆ ಹಿರಿಯಣ್ಣನಂತೆ ನಡೆದುಕೊಂಡು ಅವರ ಜ್ಞಾನಾಭಿವೃದ್ಧಿ, ಯೋಗಕ್ಷೇಮ, ಸಚ್ಚಾರಿತ್ರಗಳಲ್ಲಿಯೇ ಸದಾ ಗಮನವಿಟ್ಟವರು. ಸಹೋಪಾಧ್ಯಾಯರಲ್ಲಿ ಸರಳತೆಯಿಂದ ವರ್ತಿಸಿ ಅವರ ಗೌರವ ಪ್ರೀತಿಗಳಿಗೆ ಪೂರ್ಣಪಾತ್ರರು.

ಪರಿಷತ್ತಿನ ಕಾರ್ಯಸಮಿತಿಯಲ್ಲಿಯೂ, ಅದರ ಎಲ್ಲಾ ಉದ್ಯಮಗಳಲ್ಲಿಯೂ ಅವರು ಶ್ರದ್ಧೆಯಿಂದ, ಒಮ್ಮನಸ್ಸಿನಿಂದ ಸಹಕರಿಸುತ್ತಿದ್ದರು. ಶ್ರೀ. ಡಿ. ವಿ. ಗುಂಡಪ್ಪನವರಿಗೂ ನನಗೂ ಆಪ್ತರೂ, ದೊಡ್ಡ ಧೈರ್ಯವೂ ಆಗಿದ್ದರು. ಕನ್ನಡದ ಚಳವಳಿಗೆ ಚತುರ್ಭುಜವಾಗಿದ್ದರು. ಸಮ್ಮೇಳನದ ಅಧ್ಯಕ್ಷಪದವಿಯನ್ನು ಒಮ್ಮೆ ಅವರು ಅಲಂಕರಿಸಬೇಕೆಂಬ ಆಸೆ ಅನೇಕರಲ್ಲಿತ್ತು. ಆದರೆ ಅವರು ತಮ್ಮನ್ನು ಮುಂದಕ್ಕೆ ತಳ್ಳಿಕೊಳ್ಳುವ ಗುಣವಿಲ್ಲದವರಾದ್ದರಿಂದ ಅದಕ್ಕೆ ಅವಕಾಶಕೊಡದೆ ಹೋದರು.

ಸಾಹಿತಿಗಳಾಗಿ ಅವರು ಹೆಚ್ಚು ಬರವಣಿಗೆ ಹಿಡಲಿಲ್ಲ. ಅವರ ಉದ್ಯೋಗವೆಲ್ಲಾ ಸತ್ಸಂಗಕ್ಕೂ, ಪಾಠಪ್ರವಚನಗಳಿಗೂ, ಕನ್ನಡದ ಕೆಲಸಕ್ಕೂ ವಿನಿಯೋಗವಾಗಿತ್ತು. ಹೆಚ್ಚು ಮಾತು, ಹೆಚ್ಚು ಬರಹ ಅವರಿಗೆ ಸೇರದು.

ಆದರೂ, ಅವರ ಪಾಂಡಿತ್ಯದ ಮತ್ತು ವಿಮರ್ಶನಶಕ್ತಿಯ ರುಚಿಯನ್ನು ಸ್ವಲ್ಪ ಮಟ್ಟಿಗಾದರೂ ಲೋಕ ಪಡೆಯದೆ ಹೋಗಿಲ್ಲವೆಂಬುದು ನಮ್ಮ ಮನಸ್ಸಿಗೆ ಸ್ವಲ್ಪ ಸಮಾಧಾನ. ಶ್ರೀ. ವೆಂಕಟನಾರಣಪ್ಪನವರೊಂದಿಗೆ ಪಂಪಭಾರತ ಮತ್ತು ಇಂಗ್ಲಿಷ್-ಕನ್ನಡ ನಿಘಂಟುವಿನ ಕೆಲಸವೂ, ನನ್ನೊಡನೆ ಹರಿಶ್ಚಂದ್ರಕಾವ್ಯ ಸಂಗ್ರಹ, ಕರ್ಣಾಟಕ ಕಾದಂಬರೀ ಸಂಗ್ರಹ, ಕನ್ನಡ ಕೈಪಿಡಿ, ಗದುಗಿನ ಭಾರತಗಳ ಸಂಪಾದನೆಯೂ, ತಾವೇ ಸಂಪಾದಕರಾಗಿ ಪ್ರಕಟಿಸಿದ ಬಸವರಾಜದೇವರ ರಗಳೆಯೂ ಅವರ ಸಾಹಿತ್ಯ ಸೇವೆಗೆ ಹೆಗ್ಗುರುತುಗಳಾಗಿ ನಿಲ್ಲುವುವೆಂದು ನಂಬಿದ್ದೇನೆ.

ಇವಲ್ಲದೆ, ಪರಿಶೋಧನೆಯಲ್ಲಿ ಅವರು ಬಳ್ಳಿಯ ಪ್ರಮುಖತೆಯ ಪ್ರಶ್ನೆಗಳನ್ನೆತ್ತಿ ವಿಚಾರಮಾಡುತ್ತಿದ್ದರು. ಅವರ ಈ ಬಗೆಯ ಪ್ರಾಸ್ತಾವಿಕ ಲೇಖನಗಳು ಕೆಲವೇ ಇದ್ದರೂ, ಅವರ ಆಧಾರಪೂರ್ವಕವಾದ ವಿಚಾರಸರಣಿಗೂ, ತೂಕದ ಶೈಲಿಗೂ ನಿದರ್ಶನವಾಗಿವೆ. ಕನ್ನಡದಲ್ಲಿ ಬೌದ್ಧ ಸಾಹಿತ್ಯವಿತ್ತೆ? ನಿಜಾಂ ಕರ್ನಾಟಕದ ಸುರಪುರವೇ ಲಕ್ಷ್ಮೀಶನ ಊರೇ? ಜಜ್ಜಳನು ಜೈನನೆ?—ಈ ಬಗೆಯ ದೊಡ್ಡ ಬೇಟೆಯನ್ನೇ ಅವರು ಹೂಡುತ್ತಿದ್ದದ್ದು. ಈ ಲೇಖನಮಾಲೆ ಪುಸ್ತಕ ರೂಪದಲ್ಲಿ ಬೇಗನೆ ಹೊರಬೀಳಲೆಂದು ಬಯಸುತ್ತೇನೆ.

ಮುಖ್ಯವಾಗಿ ಸಾಹಿತಿಗಳನ್ನು ತಯಾರುಮಾಡುವುದರಲ್ಲಿ, ಸಾಹಿತ್ಯ ಪ್ರಚಾರದಲ್ಲಿ ಅವರು ಮಗ್ನರಾಗಿದ್ದರೇ ಹೊರತು ತಮ್ಮ ಕೀರ್ತಿಗಾಗಿ ಹಂಬಲಿಸಿದವರಲ್ಲ. ಹಾಗೆ ತೊರೆದವರನ್ನೇ ಹಂಬಲಿಸುವುದಲ್ಲವೇ ಕೀರ್ತಿ?

ಇನ್ನು ಅವರ ಅಂತರ್ಯಕ್ಕೆ ಸೇರಿದ ಮಿತ್ರರ ಅದೃಷ್ಟವನ್ನು ಏನು ಹೇಳಲಿ? ನನಗಂತೂ ಅವರೊಂದು ಹೆಮ್ಮೆ, ಬೆಳಕು, ಕಾವಲು. ಅವರು ಕಣ್ಮರೆಯಾದರೆಂದು ಕೇಳಿದ ಕಾರಿರುಳಿನಲ್ಲಿ ನನಗೆ ಒಂದು ಪ್ರಾಣ ಹಾರಿತು; ಒಂದು ಕೈ ಮುರಿಯಿತು. ನನ್ನಂತೆ ಒಳಗುದಿ ಕುದಿಯುತ್ತಿರುವ ಕೆಳೆಯರು ಹಲವರು. ನಾವೆಲ್ಲಾ ಈ ಹಡಗು ಮುಳುಗಿ, ಬಡವರು.

ಲೋಕವರಿಯುವಂತೆ ತಾನು ಮಾಡಿದ ಕಾರ್ಯಕ್ಕಿಂತಲೂ ಮನುಷ್ಯ ದೊಡ್ಡವನೆಂದು ಹಿರಿಯರು ಹೇಳಿರುವರು. ಅಂತಹ ಹಿರಿಮೆಯ ಮನುಷ್ಯರು ವೆಂಕಣ್ಣಯ್ಯನವರು. ಅವರ ನೆನಪಾಗಿ ಅವರ ಶಿಷ್ಯರೂ, ಮಿತ್ರರೂ, ನಾಡೂ ಉದಾರ ಸಹಾಯ ಮಾಡಿ ವಿದ್ಯಾಪೀಠದಲ್ಲಿ ಕನ್ನಡದ ವ್ಯಾಸಂಗಕ್ಕೆ ಉತ್ತೇಜನವನ್ನು ಕಲ್ಪಿಸಿ ಕೃತಾರ್ಥರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಬಿ. ಎಂ. ಶ್ರೀಕಂಠಯ್ಯ.



ಟಿ. ಎಸ್. ವೆಂಕಣ್ಣಯ್ಯನವರು ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು

(ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಶ್ರೀಮಾನ್ ಶಿವರಾಮ ಕಾರಂತರು ತೆಗೆದ ಛಾಯಾಚಿತ್ರ)

ದಿವಂಗತ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು

“ ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ ”

ದಿವಂಗತ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರ ಹಿರಿಯರು ಮೈಸೂರು ಸಂಸ್ಥಾನದ ಚಿತ್ರದುರ್ಗ ಡಿಸ್ಟ್ರಿಕ್ಟಿನವರು. ಅವರ ತಂದೆಯ ಹೆಸರು ಸುಬ್ಬಣ್ಣನವರು. ತಾಯಿ ಲಕ್ಷ್ಮೀದೇವಮ್ಮನವರು. ಸುಬ್ಬಣ್ಣನವರು ಎತ್ತರವಾದ, ತೆಳುವಾದ, ಆದರೆ ಚಟುವಟಿಕೆಯುಳ್ಳ ಆಳು. ಅವರು ಯಾವ ದೊಡ್ಡ ಪರೀಕ್ಷೆಯನ್ನಾಗಲಿ ಕೊಟ್ಟು ಪದವಿ ಪಡೆಯದಿದ್ದರೂ ತಕ್ಕಮಟ್ಟಿಗೆ ವಿದ್ಯಾವಂತರಾಗಿದ್ದು, ವ್ಯವಹಾರಜ್ಞರಾಗಿದ್ದರು. ಹತ್ತು ಜನಕ್ಕೆ ಬೇಕಾಗಿದ್ದು, ತಮ್ಮ ಪ್ರಾಂತದಲ್ಲೆಲ್ಲರ ಗೌರವಕ್ಕೂ ಪಾತ್ರರಾಗಿದ್ದರು; ಧರ್ಮ, ದೇವರು, ಆಚಾರಗಳಲ್ಲಿ ಭಕ್ತಿಯುಳ್ಳವರಾಗಿದ್ದರು; ೧೯೧೯ರಲ್ಲಿ, ಸುಮಾರು ತಮ್ಮ ೫೫ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಶ್ರೀಮತೀ ಲಕ್ಷ್ಮೀದೇವಮ್ಮನವರೂ ಪ್ರಾಯಶಃ ಮೇಲಿನ ಗುಣಗಳೆಲ್ಲವನ್ನೂ ಉಳ್ಳವರು; ಅವರು ಚಿಕ್ಕವರಾಗಿದ್ದ ಕಾಲಕ್ಕೆ ಗ್ರಾಮಾಂತರಗಳಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದಿದ್ದರೂ ಕನ್ನಡ ರಾಮಾಯಣ, ಭಾರತ, ವೆಂಕಟಾಚಾರ್ಯರ ಕಾದಂಬರಿಗಳು ಇವುಗಳನ್ನು ಓದಿ ಅರ್ಥಗ್ರಹಿಸಬಲ್ಲ ಸಾಮರ್ಥ್ಯ ಪಡೆದವರು. ಅವರು ಈಗ ವೆಂಕಣ್ಣಯ್ಯನವರ ಮರಣದಿಂದ ಒದಗಿದ ತೀವ್ರ ಪುತ್ರಶೋಕವನ್ನು ಅನುಭವಿಸುತ್ತಿದ್ದಾರೆ.

ವೆಂಕಣ್ಣಯ್ಯನವರ ಒಡಹುಟ್ಟಿದವರು ಎಲ್ಲಾ ಒಟ್ಟು ಹನ್ನೆರಡು ಜನ—ಏಳು ಜನ ಅಣ್ಣತಮ್ಮಂದಿರು, ಐದು ಜನ ಅಕ್ಕತಂಗಿಯರು. ವೆಂಕಣ್ಣಯ್ಯನವರೇ ಹಿರಿಯರು. ಅವರು ಹುಟ್ಟಿದ್ದು ಚಿತ್ರದುರ್ಗ ಡಿಸ್ಟ್ರಿಕ್ಟಿನ ಚಳ್ಳಕೆರೆ ತಾಲ್ಲೂಕು ತಳುಕು ಗ್ರಾಮದಲ್ಲಿ; ೧೮೮೫ನೆಯ ಇಸವಿ ಅಕ್ಟೋಬರ್ ಒಂದನೆಯ ತಾರೀಖಿನ ದಿನ. ಅವರು ಲೋವರ್ ಸೆಕೆಂಡರಿ ಪರೀಕ್ಷೆಗೆ ಚಳ್ಳಕೆರೆಯಲ್ಲಿಯೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಚಿತ್ರದುರ್ಗದ ಹೈಸ್ಕೂಲಿನಲ್ಲಿಯೂ ಓದಿ ತೇರ್ಗಡೆ ಹೊಂದಿ ಎಫ್.ಎ. ಪರೀಕ್ಷೆಗೆ ಓದಲು ೧೯೦೪ರಲ್ಲಿ* ಮೈಸೂರಿಗೆ ಬಂದರು. ಆಗ ಮೈಸೂರಲ್ಲಿ ನನಗೂ ಅವರಿಗೂ ಮೊದಲು ಪರಿಚಯವಾಯಿತು. ಎಫ್.ಎ. ಪರೀಕ್ಷೆಗೆ ಒಂದು ವರ್ಷ ಬಳ್ಳಾರಿಯ ವಾರ್ಡ್ಲಾ ಕಾಲೇಜಿನಲ್ಲೂ ಓದುತ್ತಿದ್ದರು. ಅದರಲ್ಲಿ ತೇರ್ಗಡೆ ಹೊಂದಿ

---

* ಮುಂದೆ ಕೊಟ್ಟಿರುವ ಇಸವಿಗಳು ಕೆಲವು ಕಡೆ ಒಂದೆರಡು ವರ್ಷ ಹೆಚ್ಚುಕಡಮೆಯಾಗಿರಬಹುದು; ಅವುಗಳನ್ನು ಸರಿನೋಡಲು ಅವಕಾಶ ದೊರೆಯಲಿಲ್ಲ.

ಮೈಸೂರಿನ ಮಹಾರಾಜಾ ಕಾಲೇಜಿಗೆ ಬಂದು ಚರಿತ್ರೆ ಅರ್ಥಶಾಸ್ತ್ರಗಳನ್ನು ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ (೧೯೦೯) ಬೊಂಬಾಯಿಗೆ ಎಲ್‌ಎಲ್.ಬಿ. ಪರೀಕ್ಷೆಗೆ ಓದಲು ಹೋದರು. ಅದರಲ್ಲಿ ಮೊದಲನೆಯ ಪರೀಕ್ಷೆಯಾಗಿ, ಎರಡನೆಯ ಪರೀಕ್ಷೆಗೂ ಕುಳಿತಿದ್ದರು. ಅಲ್ಲಿರುವಾಗಲೇ ಎಂ.ಎ. ಪರೀಕ್ಷೆ ಮಾಡಬೇಕೆಂಬ ಸಂಕಲ್ಪ ಹುಟ್ಟಿ, ಮೈಸೂರಿಗೆ ಬಂದು ಕೀರ್ತಿಶೇಷರಾದ ಪಂಡಿತ ಎಸ್. ತಿಮ್ಮಪ್ಪಯ್ಯ ಶಾಸ್ತ್ರಿಗಳವರಲ್ಲಿ ಕನ್ನಡವನ್ನೂ, ಮಹಾರಾಜಾ ಕಾಲೇಜಿನಲ್ಲಿ ತೆಲುಗು ಪಂಡಿತರಾಗಿರುವ ಶ್ರೀಮಾನ್ ರಾ. ಅನಂತಕೃಷ್ಣಶರ್ಮರವರಲ್ಲಿ ತೆಲುಗನ್ನೂ ವ್ಯಾಸಂಗ ಮಾಡಿ ಖಾಸಗಿಯಾಗಿ ಪರೀಕ್ಷೆಕೊಟ್ಟು ಉತ್ತೀರ್ಣರಾದರು (೧೯೧೪).

ಅವರ ವಿದ್ಯಾವ್ಯಾಸಂಗ ಮುಗಿಯುವ ವರೆಗೂ ಅವರ ಚಿಕ್ಕಪ್ಪನವರಾದ ಶ್ರೀಮಾನ್ ಟಿ. ಶ್ರೀನಿವಾಸರಾಯರು ಧನ ಸಹಾಯಮಾಡುತ್ತಿದ್ದರು. ಕೆಲವು ಕಾಲ ವಿದ್ಯಾರ್ಥಿವೇತನ ಬರುತ್ತಿದ್ದರೂ, ಅವರ ಸಹಾಯವಿಲ್ಲದಿದ್ದರೆ ವೆಂಕಣ್ಣಯ್ಯನವರಿಗೆ ಪ್ರೌಢವ್ಯಾಸಂಗ ನಡೆಯುವುದಕ್ಕೆ ಪ್ರೋತ್ಸಾಹವಿರುತ್ತಿರಲಿಲ್ಲ. ಅವರ ಈ ಸಹಾಯ ಇಷ್ಟು ಫಲಕಾರಿಯಾದದ್ದನ್ನು ನೋಡಿ ಶ್ರೀಮಾನ್ ಶ್ರೀನಿವಾಸರಾಯರು ಎಷ್ಟೋ ಸಂತೋಷಪಡುತ್ತಿದ್ದರು. ಆದರೆ ಅವರಿಗೆ ವೆಂಕಣ್ಣಯ್ಯನವರ ಮರಣದಿಂದ ಅಷ್ಟೂ ಅಷ್ಟು ದುಃಖ ಪ್ರಾಪ್ತವಾಗಿದೆ.

ವೆಂಕಣ್ಣಯ್ಯನವರು ಒಳ್ಳೆಯ ಮೇಧಾವಿಗಳು; ಅದನ್ನು ಅವರ ಉಪಾಧ್ಯಾಯರಿರಲಿ, ಪರಿಚಿತರೆಲ್ಲರೂ ಬಲ್ಲರು. ಆದರೆ ಅವರು ಬಹುಮಾನದ ಮೇಲಾಟಕ್ಕೆ ನಿಂತವರಲ್ಲ; ಅವರ ಮನೋವೃತ್ತಿಯೂ ದೇಹಾರೋಗ್ಯವೂ ಅದಕ್ಕೆ ಅನುಕೂಲವಾಗಿರಲಿಲ್ಲ. ಆದರೂ ಅವರಿಗೆ ಕೆಲವು ವೇಳೆ, ಪ್ರಾಯಶಃ ಅವರಿಗೇ ಅನಿರೀಕ್ಷಿತವಾಗಿ, ಬಹುಮಾನಗಳು ಬಂದಿರುವುದುಂಟು. ಹೀಗೆ, ವಾಡ್ಲ್ಲಾರ್ ಕಾಲೇಜಿನಲ್ಲಿ ಬೈಬಲ್ ವ್ಯಾಸಂಗಕ್ಕಾಗಿ ಕ್ರಿಸ್ತನ ಜೀವನ ಚರಿತ್ರೆಯ ಎರಡು ದೊಡ್ಡ ಸಂಪುಟಗಳು ಬಂದಿದ್ದುವು. ಈಗ ಕೆಲವು ತಿಂಗಳ ಕೆಳಗೆ ದಿವಂಗತರಾದ ಥಾಮಸ್ ಡೆನ್ಹಂ ಸಾಹೇಬರು ಮಹಾರಾಜಾ ಕಾಲೇಜಿನ ಚರಿತ್ರ ಸಂಘದ ಅಧ್ಯಕ್ಷರಾಗಿದ್ದು, ಸಂಘದ ವಾರ್ಷಿಕ ಸಂತೋಷ ಕೂಟದಲ್ಲಿ ವೀಕ್ಷಣ ಶಕ್ತಿಯನ್ನು ಪರೀಕ್ಷಿಸುವ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದರು. ಅದರಲ್ಲಿ, ಮೇಜಿನ ತುಂಬ ವಿಧವಿಧವಾದ ಸಾಮಾನುಗಳನ್ನಿಟ್ಟಿದ್ದು ಅವುಗಳನ್ನು ಒಂದು ನಿಮಿಷ ಮಾತ್ರ ನೋಡಿ ಆ ಸಾಮಾನುಗಳ ಪಟ್ಟಿ ಮಾಡಬೇಕಾಗಿತ್ತು. ಯಾರು ಹೆಚ್ಚಿನ ಸಂಖ್ಯೆಯ ವಸ್ತುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಬರೆದುಕೊಡುತ್ತಿದ್ದರೋ ಅವರಿಗೆ ಒಂದು ಬಹುಮಾನ. ಈ ಬಹುಮಾನವು ವೆಂಕಣ್ಣಯ್ಯನವರಿಗೆ ಬಂದ ಹಾಗೂ ಅದಕ್ಕೆ ಬಾಸ್ವೆಲನ ಜಾನ್ಸನ್ ಜೀವನ

ಚರಿತ್ರೆಯ ಅಂದವಾದ ಎರಡು ಸಂಪುಟಗಳು ಬಂದಂತೆಯೂ ನನಗೆ ಜ್ಞಾಪಕವಿದೆ. ಈಚೆಗೆ, ಎಂದರೆ ಬಹುಶಃ ೧೯೩೭ರಲ್ಲಿ, ಮಹಾರಾಣಿಯವರ ಕಾಲೇಜಿನಲ್ಲಿ ಜರುಗಿದ ಒಂದು ಸಂತೋಷ ಕೂಟದಲ್ಲಿ ಒಂದು ವಿನೋದವಾದ ಸ್ಪರ್ಧೆ ಏರ್ಪಟ್ಟಿತ್ತು. ಎದುರಿಗೆ ಬೋರ್ಡಿನ ಮೇಲೆ ಒಂದು ಹಂದಿಯನ್ನು ಬರೆದಿತ್ತು; ಅದಕ್ಕೆ ಬಾಲ ಮಾತ್ರ ಇರಲಿಲ್ಲ. ಸ್ಪರ್ಧಿಗಳು ಚೆನ್ನಾಗಿ ಕಣ್ಣು ಕಟ್ಟಿಸಿಕೊಂಡು ಹೋಗಿ ಅದರ ಬಾಲವನ್ನು ಸರಿಯಾದ ಸ್ಥಾನದಲ್ಲಿ ಸೀಮೆಸುಣ್ಣದಿಂದ ಬರೆದು ಬರಬೇಕಾಗಿತ್ತು. ಪ್ರತಿಯೊಬ್ಬರೂ 'ಇದೇನು ದೊಡ್ಡ ಕಷ್ಟ' ಎಂದು ಧೈರ್ಯದಿಂದ ಎದ್ದುಹೋಗಿ ತಲೆಯ ಮೇಲೋ ಹೊಟ್ಟೆಯ ಕೆಳಗೋ ಕಾಲಿಗೆ ಅಡ್ಡಲಾಗಿಯೋ ಬಾಲ ಬರೆಯು ವುದು, ಅದನ್ನು ನೋಡಿ ಎಲ್ಲರೂ ನಗುವುದು ಹೀಗೆಯೇ ನಡೆಯಿತು. ವೆಂಕಣ್ಣಯ್ಯ ನವರೂ ಸ್ನೇಹಿತರ ನಿರ್ಬಂಧಕ್ಕೆ ಎದ್ದುಹೋಗಿ ಸ್ಪರ್ಧೆಯಲ್ಲಿ ಜಯಶೀಲರಾದರು. ಅವರಿಗೆ ಒಂದು ಬೆಳ್ಳಿಯ ಹಕ್ಕಿ ಬಹುಮಾನವಾಗಿ ಬಂತು. "ವೆಂಕಣ್ಣಯ್ಯನವರು ಹಂದಿಯ ಬಾಲ ಎಳೆದು ಬೆಳ್ಳಿಯ ಹಕ್ಕಿ ಸಂಪಾದಿಸಿದರು" ಎಂಬುದು ಕೆಲವು ಕಾಲದ ವರೆಗೆ "ಟಂಟಂಟಟಂಟಂ ಟಟಟಂಟಟಂಟಃ" ಎಂಬಂತೆ ಇದನ್ನೆಲ್ಲಾ ತಿಳಿಯದವರಿಗೆ ಒಂದು ಸಮಸ್ಯೆಯಾಗಿತ್ತು.

ಅವರು ಎಲ್‌ಎಲ್.ಬಿ. ಪರೀಕ್ಷೆಗೆ ಓದುತ್ತಿದ್ದಾಗ ಬೊಂಬಾಯಿ ಪಟ್ಟಣದಲ್ಲಿ ಕೆಲವು ಕಾಲ ಜನರಲ್ ಪೋಸ್ಟಾಫೀಸಿನಲ್ಲಿ ಗುಮಾಸ್ತರಾಗಿದ್ದರು. ಅನಂತರ ಧಾರವಾಡದ ಮಿಷನ್ ಹೈ ಸ್ಕೂಲಿನಲ್ಲಿಯೂ, ಬೆಂಗಳೂರು ದಂಡಿನಲ್ಲಿರುವ ಸೆಂಟ್ ಜೋಸೆಫ್ ಕಾಲೇಜಿನಲ್ಲಿಯೂ (೧೯೧೬) ಸಹಾಯೋಪಾಧ್ಯಾಯರಾಗಿದ್ದು ೧೯೧೭ರಲ್ಲಿ ದೊಡ್ಡಬಳ್ಳಾಪುರದ ಕನ್ನಡ ಹೈ ಸ್ಕೂಲಿನ ಮುಖ್ಯೋಪಾಧ್ಯಾಯ ರಾದರು. ಇದೇ ಅವರಿಗೆ ದೊರೆತ ಸರ್ಕಾರದ ಮೊದಲ ನೌಕರಿ. ಅಲ್ಲಿಂದ ಮುಂದೆ ಬೆಂಗಳೂರಿನ ಇಂಗ್ಲಿಷ್ ಹೈ ಸ್ಕೂಲು ಸೆಂಟ್ರಲ್ ಕಾಲೇಜುಗಳಲ್ಲಿ ಮೇಲಕ್ಕೆ ಬಂದು, ಮಹಾರಾಜಾ ಕಾಲೇಜಿನಲ್ಲಿ (೧೯೨೭) ಕನ್ನಡದ ಪ್ರೊಫೆಸರಾದರು.

ವೆಂಕಣ್ಣಯ್ಯನವರಲ್ಲಿ ವಿದ್ವತ್ತಿನ ಜೊತೆಗೆ ಬುದ್ಧಿ, ಜಾಣತನ, ವಿವೇಕ—ಇವೆ ಲ್ಲವೂ ಮುಪ್ಪುರಿಗೊಂಡು ಸೇರಿಹೋಗಿದ್ದುವು. ಅವರು ಉಗುರಿನಲ್ಲಿ ಹೋಗುವುದಕ್ಕೆ ಎಂದೂ ಕೊಡಲಿ ತೆಗೆದುಕೊಳ್ಳುತ್ತಿರಲಿಲ್ಲ. ಯಾವುದನ್ನೂ ಆದಷ್ಟು ಉಪಾಯವಾಗಿ, ಅಡ್ಡಿ ಅಡಚಣೆಗಳು ಬರದ ರೀತಿಯಲ್ಲಿ, ಮಾಡುವುದು ಅವರ ಸ್ವಭಾವ. ಅವರು ಎಂದೂ ಹಿಂದುಮುಂದು ನೋಡದೆ "ಧುಡುಂ" ಎಂದು ನುಗ್ಗಿ ಕೆಲಸಮಾಡಿದ್ದೇ ಇಲ್ಲ. "ತೌ ಸಂಪರೀತ್ಯ ವಿವಿನಕ್ತಿ ಧೀರಃ" ಎಂಬಂತೆ ಎಲ್ಲಾ ದೃಷ್ಟಿಯಿಂದಲೂ ನೋಡಿ ವಿಚಾರಮಾಡಿ, ಅಳೆದು ಸುರಿದು, ಕೇಳಬೇಕಾದವರನ್ನೆಲ್ಲಾ ಕೇಳಿ, ತೂಗಿ

ನಿರ್ಧರಿಸಿ ಕೈಕೊಳ್ಳುತ್ತಿದ್ದರು. ಕೊನೆಗೆ “ಇಂಥಾದ್ದನ್ನು ಕೊಡು” ಎಂದು ದೇವರನ್ನು ಪ್ರಾರ್ಥಿಸಿದವರಲ್ಲ. ಏಕೆಂದರೆ, “ನಮಗೆ ಯಾವುದು ಹಿತವೆಂದು ನಾವೇನು ಬಲ್ಲೆವು? ನಾವು ಯಾವುದೋ ಒಂದನ್ನು ನಮ್ಮ ಚಾಪಲ್ಯದಿಂದ ಕೇಳಿ, ದೇವರು ಅದನ್ನು ಅನುಗ್ರಹಿಸಿ ಮುಂದೆ ಅವಿವೇಕವಾದರೆ ಏನುಮಾಡುವುದು?” ಎಂಬುದು ಅವರ ವಾದ. (ಇದಕ್ಕೆ ಅಗಡಿಯ ಸಾಧುಗಳ ಜೀವನ ಚರಿತ್ರೆಯಲ್ಲಿ ನಡೆದ ಒಂದು ಸಂಗತಿಯನ್ನು ಉದಾಹರಿಸುತ್ತಿದ್ದರು.) ಇಂಥವರು ಒಂದು ಸಾರಿ ಮಾತ್ರ—ನಾನು ೧೯೧೮ರಲ್ಲಿ ಹಾಸಿಗೆ ಹತ್ತಿ ಮಲಗಿ ಇತ್ತಲೋ ಅತ್ತಲೋ ಎನ್ನುವಹಾಗೆ ಆದಾಗ—“ದೇವರೇ, ನಮ್ಮ ಕೃಷ್ಣನನ್ನು ಉಳಿಸಿಕೊಡು!” ಎಂದು ಪ್ರಾರ್ಥಿಸಿದರು. (ಇದನ್ನು ಆಮೇಲೆ ಅವರೇ ಹೇಳಿದರು.) ಅವರ ಪ್ರಾರ್ಥನೆಯನ್ನು ದೇವರು ಆಲಿಸಿದನೆಂದೂ ಸಲ್ಲಿಸಿದನೆಂದೂ ಇಂದಿಗೂ ನಾನು ನಂಬಿದ್ದೇನೆ.

ವೆಂಕಣ್ಣಯ್ಯನವರು ಜನರ ಯೋಗ್ಯತೆ ಸಾಮರ್ಥ್ಯದೌರ್ಬಲ್ಯಗಳನ್ನು ಅರಿತವರಾಗಿದ್ದು, ಯಾರು ಯಾರಿಂದ ಯಾವ ಯಾವ ರೀತಿಯಲ್ಲಿ ಕೆಲಸವಾಗಬಹುದೆಂಬುದನ್ನು ತಿಳಿದು, ಪ್ರೀತಿ ವಿನೋದ ಸಹಾಯ ಸೌಜನ್ಯಾದಿಗಳಿಂದ ಅವರನ್ನು ಒಲಿಸಿಕೊಂಡು ನೆರವಾಗಿಸಿಕೊಳ್ಳುತ್ತಿದ್ದರು. ಆದ್ದರಿಂದ ಅವರ ಮಿತ್ರರು—

> ಎಪ್ಪಟಿಕೆಯ್ಯದಿ ಪ್ರಸ್ತುತ
> ಮಪ್ಪಟಿಕಾಮಾಟಲಾಡಿ ಅನ್ಯುಲ ಮನಸುಲ್ |
> ನೊಪ್ಪಿಂಪಕ ತಾನೊವ್ವಕ
> ತಪ್ಪಿಂಚುಕ ತಿರುಗುವಾಡು ಧನ್ಯುಡು ಸುಮತೀ ||

ಎಂಬ ಪದ್ಯವನ್ನು ಅವರಿಗೆ ಅನ್ವಯಿಸಿ ಹೇಳುತ್ತಿದ್ದರು. ಭವಭೂತಿಯ

> ಬಹಿಃ ಸರ್ವಾಕಾರಪ್ರಗುಣರಮಣೀಯಂ ವ್ಯವಹರನ್
> ಪರಾಭ್ಯೂಹಸ್ಥಾನಾನ್ಯಪಿ ತನುತರಾಣಿ ಸ್ಥಗಯತಿ |
> ಜನಂ ವಿದ್ವಾನೇಕಃ ಸಕಲಮಭಿಸಂಧಾಯ ಕಪಟೈಃ
> ತಟಸ್ಥಃ ಸ್ವಾನರ್ಥಾನ್ ಘಟಯತಿ ಚ ಮೌನಂ ಚ ಭಜತೇ ||

ಎಂಬ ಪದ್ಯವನ್ನು ನಾನು ಒಂದು ದಿನ ಅವರಿಗೆ ಹೇಳಿದೆ. ಅದನ್ನು ಕೇಳಿ ನಕ್ಕುಬಿಟ್ಟರು. ತರ್ಕ, ವ್ಯಾಜ್ಯ, ಪ್ರತಿಭಟನೆ ಇವುಗಳಲ್ಲಿ ಅವರು ಹೆಚ್ಚಾಗಿ ಪ್ರವೇಶಿಸುತ್ತಿರಲಿಲ್ಲ. ಕೊನೆಕೊನೆಗಂತೂ ಇವು ನಿಂತೇ ಹೋಗಿದ್ದುವು. ತಮ್ಮ ಅಭಿಪ್ರಾಯವೇ ಸರಿ, ಅದನ್ನು ಸಾಧಿಸಲೇಬೇಕು ಎಂಬ ಹಟ ಅವರ ಕಾರ್ಯದಲ್ಲಿ ಕಾಣುತ್ತಿರಲಿಲ್ಲ. ಆದ್ದರಿಂದ ತಾವು ಗೆದ್ದರೆ ಸಂತೋಷವಾಗಲಿ, ಗೆಲ್ಲದಿದ್ದರೆ ದುಃಖವಾಗಲಿ ಇರುತ್ತಿರಲಿಲ್ಲ. ಯಾವುದಾದರೂ ಪತ್ರಿಕೆಗೆ ಒಂದು ಲೇಖನವನ್ನು ಬರೆದುಕೊಟ್ಟರೆ ಸಂಪಾದಕರಿಗೆ

"ಅದನ್ನು ನೀವೇನಾದರೂ ಮಾಡಿಕೊಳ್ಳಿ" ಎಂದು ಹೇಳುತ್ತಿದ್ದರೇ ಹೊರತು ಅದನ್ನು ತಮ್ಮ ಇಷ್ಟದಂತೆ ಪ್ರಕಟಿಸಿದರು, ಬಿಟ್ಟರು, ರೂಪಗಳನ್ನು ಬದಲಾಯಿಸಿದರು ಎಂಬ ತಾಪತ್ರಯವನ್ನೇ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಆ ಸಂಬಂಧದಲ್ಲಿ ಏನಾದರೂ ಒಂದು ಪ್ರಮಾದವಾದರೂ, "ಹೋಗಲಿ! ಏನು ಮಾಡುವುದು!" ಎಂದುಬಿಡುತ್ತಿದ್ದರೇ ಹೊರತು ಕ್ರೋಧವಾಗಲಿ, ಕೊರಗಾಗಲಿ ಇರುತ್ತಿರಲಿಲ್ಲ. ಇದರಿಂದ ಅವರ ಮನಸ್ಸು ಶಾಂತವಾಗಿ ಉಳಿಯುತ್ತಿತ್ತಲ್ಲದೆ ಪ್ರತಿಪಕ್ಷವು ಸುಮುಖ ವಾಗುತ್ತಿತ್ತು. ಅದರಲ್ಲಿಯೂ ಎದುರಾಳಿಗಳು ಹಿರಿಯರಾಗಿದ್ದು ಹಟವಾದಿಗಳಾಗಿದ್ದು ವಿಧೇಯತೆಯನ್ನು ನಿರೀಕ್ಷಿಸುವವರಾಗಿದ್ದರೆ ಅಂಥವರನ್ನು ಮೆಚ್ಚಿಸುವುದಕ್ಕೆ ಇದಕ್ಕಿಂತಲೂ ಉತ್ತಮವಾದ ಮಾರ್ಗವಿಲ್ಲ. ಆದರೆ ಅಹಂಭಾವವನ್ನು ಏಳಗೊಡದೆ, ಬೆಳೆಯಗೊಡದೆ, ಸೋತುಹೋಗುವ ಸಾತ್ವಿಕಗುಣವು ಎಲ್ಲರಿಗೂ ಬರುವುದಿಲ್ಲ. ಪ್ರಾಯಶಃ ಅವರ ಮೈದುನರಾದ ಕೈ. ಶ್ರೀಕಂಠಶಾಸ್ತ್ರಿಗಳನ್ನು ಬಿಟ್ಟು ಅವರ ಬಂಧುಮಿತ್ರರಾರಲ್ಲೂ ಇಷ್ಟುಮಟ್ಟಿನ ಸಾಧುಗುಣವನ್ನು ನಾನು ಕಂಡಿಲ್ಲ.

ಇಲ್ಲಿ ವೇ. ಶ್ರೀಕಂಠಶಾಸ್ತ್ರಿಗಳ ಸೂಕ್ಷ್ಮ ಪರಿಚಯವು ಅಪ್ರಕೃತವಾಗಲಾರದು. ಏಕೆಂದರೆ, ಭಕ್ತಿ, ಜ್ಞಾನ, ವೈರಾಗ್ಯ, ಲೌಕಿಕ ಧಾರ್ಮಿಕ ವ್ಯವಹಾರ, ಶುದ್ಧವಾದ ಜೀವನ—ಇವೆಲ್ಲದರಲ್ಲೂ ಅವರನ್ನು ವೆಂಕಣ್ಣಯ್ಯನವರು ಆದರ್ಶವ್ಯಕ್ತಿಯಾಗಿ ಭಾವಿಸಿಕೊಂಡಿದ್ದರು. ಅಗಡಿಯ ಸಾಧುಗಳು, ಅವರ ಶಿಷ್ಯರಾದ ನಾರಾಯಣ ಭಗವಾನರು ಇವರ ಚಿತ್ರಗಳೊಡನೆ ಶಾಸ್ತ್ರಿಗಳ ಭಾವಚಿತ್ರವೂ ವೆಂಕಣ್ಣಯ್ಯನವರ ದೇವರಮನೆಯ ಮಂಡಾಸನದ ಮಧ್ಯೆ ಪೂಜಾಮೂರ್ತಿಗಳ ನಡುವೆ ಇರುತ್ತಿತ್ತು. ವೆಂಕಣ್ಣಯ್ಯನವರು ಮೈಸೂರಿಗೆ ಮೊದಲು ಬಂದ ಸರಿಸುಮಾರಿನಲ್ಲಿಯೇ ಶ್ರೀಕಂಠ ಶಾಸ್ತ್ರಿಗಳೂ ಅಲ್ಲಿಯ ಸಂಸ್ಕೃತ ಮಹಾಪಾಠಶಾಲೆಗೆ ಓದುವುದಕ್ಕೆ ಬಂದು ಅಲ್ಲಿ ವ್ಯಾಸಂಗಮಾಡಿ ಸಾಹಿತ್ಯ ವಿದ್ವತ್ಪರೀಕ್ಷೆಯನ್ನು ಕೊಟ್ಟರು. ಆದರೆ ಅವರಲ್ಲಿ ತಾವು ವಿದ್ವಾಂಸರೆಂಬ ಅಹಂಭಾವವು ಸುತರಾಂ ಕಂಡುಬರುತ್ತಿರಲಿಲ್ಲ. ಅಗಲವಾದ, ಶಾಂತವಾದ ದುಂಡುಮುಖ, ನಗುಮುಖ; ಆ ಮುಖದ ತುಂಬ ವರ್ಚಸ್ಸು; ಅಗಲವಾದ ಹೊಳೆಯುತ್ತಿದ್ದ ಕಣ್ಣುಗಳು. ಅವರಲ್ಲಿದ್ದ ಒಂದು ದೊಡ್ಡ ಗುಣ, ವೆಂಕಣ್ಣಯ್ಯನವರ ಮೆಚ್ಚಿಗೆಗೂ ಆಶ್ಚರ್ಯಕ್ಕೂ ಪಾತ್ರವಾದ ಒಂದು ಅಪೂರ್ವ ಗುಣ—ಏನೆಂದರೆ, ಅವರ ಹೊಂದಿಕೆಯ ಸ್ವಭಾವ: ಯಾರೊಡನೆ ಇದ್ದರೆ, ಅವರೊಡನೆ ಅವರಂತೆ ಇದ್ದುಬಿಡುವುದು.—ಕಾಫಿ ಕುಡಿಯುವವರ ಮನೆಯಲ್ಲಿ ಕಾಫಿ ಕುಡಿದು ಬಿಡುವುದು, ನಸ್ಯ ಹಾಕುವವರ ಜೊತೆಯಲ್ಲಿದ್ದಾಗ ನಸ್ಯ ಹಾಕಿಕೊಂಡುಬಿಡುವುದು; ಕೇಳಿ, ಕೇಳಿ, ಹಾಕಿಕೊಂಡುಬಿಡುವುದು; ಇಲ್ಲದವರ ಜೊತೆಯಲ್ಲಿದ್ದಾಗ ಅದರ

ಹಂಬಲೇ ಇಲ್ಲ; ವೈದಿಕರ ಮನೆಯಲ್ಲಿ ಅವರ ಜೊತೆಗೂ ಕರ್ಮಾನುಷ್ಠಾನ, ಒಪ್ಪತ್ತು ಉಪವಾಸ ಮಾಡಿಬಿಡುವುದು; ಹೆಂಗಸರ ಜೊತೆಯಲ್ಲಿದ್ದಾಗ, ಅವರಿಗೆ ತಕ್ಕಂತೆ ಮಾತು; ಮಕ್ಕಳ ಜೊತೆಯಲ್ಲಿದ್ದಾಗ, ಅವರೊಡನೆ ಆಟ, ಊಟ, ಉಪಚಾರ. ತಿಂಡಿತೀರ್ಥಗಳಲ್ಲಿ ಹೆಚ್ಚು ಕಡಮೆಯಾಯಿತೆಂದೂ, ಅದರಿಂದ ಬಾಧಕವಾಯಿತೆಂದೂ ಎಂದೂ ಹೇಳಿದ್ದಿಲ್ಲ; ಕೋಪಿಸಿಕೊಂಡದ್ದಾಗಲಿ, ಮುಖ ಗಂಟುಹಾಕಿಕೊಂಡ ದ್ದಾಗಲಿ, ಇಲ್ಲವೇ ಇಲ್ಲ; 'ಶುದ್ಧ ಸ್ಫಟಿಕಸಂಕಾಶ'ವಾದ ವಸ್ತು; ಅವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಹೆಂಡತಿ ತೀರಿಹೋಗಲು, ಅವರು ಮತ್ತೆ ಮದುವೆಯ ಯೋಚನೆ ಬಿಟ್ಟು ಅಗಡಿಯ ಸಾಧುಗಳಲ್ಲಿ ಹೋಗಿ ಸೇರಿದರು. ಈ ಸಂಬಂಧ ಹೇಗೆ ಸಂಘಟಿ ಸಿತೋ ನನಗೆ ತಿಳಿಯದು. ಅಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿರುತ್ತ ಸಾಧುಸೇವೆ ಸತ್ಸಂಗಗಳಲ್ಲಿ ಸಂಸಾರವನ್ನು ಮರೆತುಬಿಟ್ಟರು. (ಅಲ್ಲಿಯೇ ಅವರು ಅಧ್ಯಾತ್ಮ ರಾಮಾಯಣವನ್ನು ಕನ್ನಡಿಸಿ 'ಸದ್ಬೋಧ ಚಂದ್ರಿಕೆ'ಯ ಮೂಲಕ ಪ್ರಕಟಿಸಿದರು.) ಈ ಮಧ್ಯೆ ಅವರ ಮದುವೆಯಲ್ಲಿ ಆಸಕ್ತರಾಗಿದ್ದ ನಂಟರು, ಸಾಧುಗಳ ಜೊತೆ ಸೇರಿ ತಮ್ಮ ಹುಡುಗ ಕೈಬಿಟ್ಟುಹೋದನೆಂದು ಗೊಣಗುವುದಕ್ಕೆ ಮೊದಲು ಮಾಡಿ ಅಗಡಿಗೆ ಬಂದು ಸಾಧುಗಳಲ್ಲಿ ದೂರಿಟ್ಟರು. ಅವರು ಶಾಸ್ತ್ರಿಗಳನ್ನು ಕರೆದು "ಶಾಸ್ತ್ರಿಗಳೇ, ನೀವು ಮದುವೆಮಾಡಿಕೊಳ್ಳಿ!" ಎಂದು ಅಪ್ಪಣೆಮಾಡಿದರು. ಅವರು ಗುರುಗಳ ಮಾತಿಗೆ ಪ್ರತಿ ಹೇಳಲಿಲ್ಲ. ಮದುವೆಯಾಯಿತು; ಆದರೆ, ಅದರ ಫಲ ಮಾತ್ರ ನಿರೀಕ್ಷಿಸಿದಂತೆ ಆಗಲಿಲ್ಲ. ಸಂಸಾರ ಕೂಡಲಿಲ್ಲ, ಬೆಳೆಯಲಿಲ್ಲ. ಅಗಡಿಯಲ್ಲಿ ಇದುವರೆಗೆ ಇದ್ದ ಒಂದು ವ್ಯಕ್ತಿಯ ಜೊತೆಗೆ ಮತ್ತೊಂದು ವ್ಯಕ್ತಿ ಬಂದು ಸೇರಿದಂತಾಯಿತು. ನಾನು ಅವರನ್ನು ವಿದ್ಯಾರ್ಥಿದಶೆಯಲ್ಲಿಯೂ, ಆಮೇಲೆ ಆಗಿಂದಾಗ್ಗೆಯೂ ನೋಡಿದ್ದೆ; ಅವರು ತಾವರೆ ಎಲೆಯ ಮೇಲಿನ ನೀರಿನಂತೆ, ಅಂಟಿಯೂ ಅಂಟದ ಹಾಗೆ ಬಾಳಿದರು; ಜೀವನ್ಮುಕ್ತರ ವರ್ಣನೆ ಅವರಿಗೆ ಅನ್ವಯಿಸು ತ್ತಿತ್ತು; ಅವರ ಮರಣವೂ ಅದಕ್ಕೆ ಅನುರೂಪವಾಗಿತ್ತಂತೆ; ಸಾಯುವುದಕ್ಕೆ ಸ್ವಲ್ಪ ಮುಂಚೆ, ಮಲಗಿದ್ದವರು ಎದ್ದು ಕುಳಿತು, ಸ್ವಲ್ಪ ಸಕ್ಕರೆ ತರಿಸಿ, ಕೈಯಲ್ಲಿ ಹಿಡಿದು ಕಣ್ಣುಮುಚ್ಚಿ ಧ್ಯಾನಮಾಡುತ್ತಿದ್ದು, ಹತ್ತಿರದಲ್ಲಿದ್ದವರಿಗೆ 'ಪ್ರಸಾದ'ವೆಂದು ಅದನ್ನು ಹಂಚಿ, ಮುಸುಕು ಹಾಕಿಕೊಂಡು ಮಲಗಿದರಂತೆ; ಸ್ವಲ್ಪ ಹೊತ್ತಿನ ಮೇಲೆ ಮುಸುಕು ತೆಗೆದು ನೋಡಲು ಪ್ರಾಣ ಹೋಗಿತ್ತಂತೆ. ಈ ಸಂಗತಿಯನ್ನು ವೆಂಕಣ್ಣಯ್ಯನವರೇ ಬಹು ಆಸ್ಥೆಯಿಂದ ಹೇಳುತ್ತಿದ್ದರು. ಅವರ ಆ ಸಾತ್ವಿಕತೆಯು ವಿವೇಕ ರಹಿತವಾದ ನಿರ್ವೀರ್ಯತೆಯಲ್ಲ; ವೆಂಕಣ್ಣಯ್ಯನವರ ತಂದೆಯವರು ಸ್ವರ್ಗಸ್ಥರಾದಾಗಲೋ, ಮತ್ತಾವುದೋ ಸಾಂಸಾರಿಕ ಕ್ಲೇಶದಲ್ಲೋ ವೆಂಕಣ್ಣಯ್ಯ

ನವರು ಉಭಯ ಸಂಕಟಕ್ಕೆ ಸಿಕ್ಕಿ ಏನು ಮಾಡುವುದಕ್ಕೂ ತೋರದೆ ತಲೆಯ ಮೇಲೆ ಕೈಹೊತ್ತು ಕುಳಿತಾಗ, ಅವರು ಬಂದು "ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ! ಈ ಮಾತನ್ನು ಕೃಷ್ಣನು ಅರ್ಜುನನೊಬ್ಬನಿಗೆ ಹೇಳಿ ಹೋದನೆಂದು ಮಾಡಿದ್ದೀಯಾ ವೆಂಕಣ್ಣಯ್ಯ? ಏಳು, ಮನಸ್ಸನ್ನು ಗಟ್ಟಿಮಾಡಿ ಕೊಂಡು ಮುಂದಿನ ಕೆಲಸದಲ್ಲಿ ಪ್ರವೃತ್ತನಾಗು!" ಎಂದು ಜಬರಿಸಿದರಂತೆ. ಆ ಸಮಯದಲ್ಲಿ ತಮಗೆ ಬುದ್ಧಿ ಹೇಳುವುದು ಇನ್ನಾರಿಗೂ ಸಾಧ್ಯವಿರಲಿಲ್ಲವೆಂದೂ, ಹೇಳಿದ್ದರೂ ಪ್ರಯೋಜನವಾಗುತ್ತಿರಲಿಲ್ಲವೆಂದೂ ವೆಂಕಣ್ಣಯ್ಯನವರು ಹೇಳಿದ್ದರು. ಪ್ರಾಯಶಃ, ಶ್ರೀಕಂಠಶಾಸ್ತ್ರಿಗಳಿಗಿಂತ ಹೆಚ್ಚಾಗಿ ಅವರ ಧಾರ್ಮಿಕ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರಿದವರು ಅಗಡಿಯ ಶೇಷಾಚಲ ಸಾಧುಗಳು. ಆದರೆ, ಅವರನ್ನು ನಾನು ಕಣ್ಣಾರ ಕಂಡಿಲ್ಲದ್ದರಿಂದ ಅವರ ವಿಷಯವನ್ನು ಇಲ್ಲಿ ಎತ್ತಿಲ್ಲ.

ಯಾರ ಮನಸ್ಸನ್ನೂ ನೋಯಿಸಬಾರದು, ಎಲ್ಲರನ್ನೂ ಸಂತೋಷಪಡಿಸಬೇಕು, ಎಂಬುದು ವೆಂಕಣ್ಣಯ್ಯನವರ ಜೀವನದ ಮುಖ್ಯ ಸೂತ್ರವಾಗಿತ್ತು. ಇದರಲ್ಲಿ ಕಾರ್ಯ ವಾಸಿಯ ಪ್ರಯೋಜನದೃಷ್ಟಿ ಇದ್ದರೂ, ಅದಕ್ಕಿಂತ ಹೆಚ್ಚಾಗಿ ಅಹಿಂಸಾ ತತ್ವವಿತ್ತು. ಅವರು ಅಪ್ರಿಯವಾದದ್ದನ್ನು ಎಂದಿಗೂ ಹೇಳುತ್ತಿರಲಿಲ್ಲ; ಹಾಗೆಂದು ಅಸತ್ಯವಾದ ಸ್ತೋತ್ರವನ್ನೂ ಮಾಡುತ್ತಿರಲಿಲ್ಲ. ಬೇಕಾದರೆ, ಸೂಕ್ಷ್ಮವಾಗಿ ಸೂಚಿಸುವುದು, ಇಲ್ಲದಿದ್ದರೆ ಸುಮ್ಮನಿದ್ದು ಬಿಡುವುದು—ಇದು ಅವರಿಗೆ ರೂಢಿಯಾಗಿತ್ತು. ಏನಾದರೂ ಒಂದು ಅಪ್ರಿಯವನ್ನು ಹೇಳಲೇ ಬೇಕೆಂಬ ಬಿಕ್ಕಟ್ಟಿಗೆ ಸಿಕ್ಕಿದರೆ, "ನಾನು ಸೋಮಾರಿ, ಮೈ ಬಗ್ಗಿ ಕೂತು ಬರೆಯಲಾರೆ" ಎಂದೋ, "ನನಗೆ ಜ್ಞಾಪಕಶಕ್ತಿ ಸುತರಾಂ ಇಲ್ಲ; ಮರೆತು ಹೋಗಿಬಿಡುತ್ತೇನೆ" ಎಂದೋ, "ನಾನು ಯಾವುದನ್ನೂ ಬೇಗ ಗ್ರಹಿಸಲಾರೆ; ನಿದಾನವಾಗಿ ಇನ್ನೊಂದು ಸಲ ಓದಿ ಹೇಳುತ್ತೇನೆ" ಎಂದೋ, "ನಾನು ಮಖೇಡಿ, ಒಬ್ಬರನ್ನು ಹೋಗಿ ಕೇಳಲಾರೆ" ಎಂದೋ ತಮ್ಮಲ್ಲಿ ಒಂದು ಲೋಪವನ್ನು ಆರೋಪಿಸಿಕೊಂಡು ಮುಂದಕ್ಕೆ ಹಾಕಿಬಿಡುವರು. ಪ್ರಿಯವಾದ—ಆದರೆ ಬಾಧಕವಿಲ್ಲದ—ಸುಳ್ಳನ್ನಾದರೂ ಹೇಳಬಹುದೇ ಹೊರತು, ಅಪ್ರಿಯವಾದ ನಿಜವನ್ನು ಹೇಳಿ ವಿಶ್ವಾಸವನ್ನು ಕಳೆದುಕೊಳ್ಳುವುದು ಸೂಕ್ತವಲ್ಲವೆಂಬುದು ಅವರ ಭಾವ. ಇದರ ಜೊತೆಗೆ ಗೌರವ, ಭಕ್ತಿ, ನಮ್ರತೆ, ವಿಶ್ವಾಸ, ಆದರ, ಸ್ನೇಹ, ವಾತ್ಸಲ್ಯ, ಮಮತೆ—ಇವುಗಳನ್ನು ಸಂದರ್ಭ ಬಿದ್ದಂತೆ ಸಾಧ್ಯವಾದಷ್ಟು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿ ಆತ್ಮೀಯತೆಯನ್ನು ಸಂಪಾದಿಸಿದ್ದರು. ಆದ್ದರಿಂದ ಪ್ರಾಯಶಃ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತ ಹೆಚ್ಚಾಗಿ ಕೆಲವು ಸಂದರ್ಭಗಳಲ್ಲಿ ಹೊರಗಿನವರು ಅವರಲ್ಲಿ ಅನುರಕ್ತರಾಗಿದ್ದರು. "ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ

ಪೂಜನಂ" ಎಂಬ ವಾಕ್ಯಕ್ಕೆ ಅವರು ಮೂರ್ತಿಮತ್ತಾದ ನಿದರ್ಶನವಾಗಿದ್ದರು. ಒಂದು ಸಾರಿ ಧಾರವಾಡದಲ್ಲಿದ್ದಾಗ ಮನೆಯವರನ್ನೆಲ್ಲಾ ಊರಿಗೆ ಕಳುಹಿಸಿ ತಾವು ಒಬ್ಬರೇ ಇರಬೇಕಾಗಿತ್ತು. ಆಗ ಸುಮಾರು ಒಂದು ತಿಂಗಳ ದಿವಸ ಬೆಳಗ್ಗೆ ಸಾಯಂಕಾಲ ಒಂದೊಂದು ಸೇರು ಹಸುವಿನ ನೊರೆಹಾಲನ್ನು ಕುಡಿದುಕೊಂಡಿದ್ದು ಬಿಟ್ಟರಂತೆ.—ಇದರಿಂದ, ಸಾಮಗ್ರಿ ಒದಗಿಸಿಕೊಂಡು ಅಡಿಗೆಮಾಡಿಕೊಳ್ಳುವ ಕಷ್ಟ ತಪ್ಪಿತು; ಊಟಕ್ಕೆ ಅವರಿವರನ್ನು ಆಶ್ರಯಿಸುವುದಾಗಲಿ, ಹೋಟಲಿಗೆ ಹೋಗುವುದಾಗಲಿ ತಪ್ಪಿತು; ಕೊನೆಗೆ ಹಾಲನ್ನು ಕಾಯಿಸುವ ಕಷ್ಟ, ಅದಕ್ಕೆ ಪಾತ್ರೆ ಪದಾರ್ಥಗಳನ್ನು ಸರಿಪಡಿಸಿಕೊಳ್ಳುವ ರಗಳೆ ಕೂಡ ತಪ್ಪಿತು. ಇದನ್ನು ಅವರು ಬಹು ತೃಪ್ತಿಯಿಂದಲೂ, ಒಪ್ಪಿಗೆಯಿಂದಲೂ ವಿವರಿಸುತ್ತಿದ್ದರು.

ಸಾಮಾನ್ಯವಾಗಿ ಅವರು ಏತರಿಂದಲೂ ಉದ್ರೇಕಗೊಳ್ಳುತ್ತಿರಲಿಲ್ಲ; ಕೋಪತಾಪಗಳನ್ನೂ ಚಿಂತೆ ಕೊರಗುಗಳನ್ನೂ ನುಂಗಿಕೊಂಡು, ವಿವೇಕದಿಂದ ಜೀರ್ಣಮಾಡಿಕೊಂಡು, ಸಂತೋಷಚಿತ್ತರಾಗಿ ನಗುನಗುತ್ತ ಇರುವುದು ಅವರಿಗೆ ವಾಡಿಕೆಯಾಗಿ ಹೋಗಿತ್ತು. ಆದರೆ ಕೊನೆಕೊನೆಗೆ, ಆಡಬಾರದ ಅನುಭವಿಸಲಾರದ ಪರಿಹಾರವಾಗದ ಕಷ್ಟನಿಷ್ಠುರಗಳು ಕೆಲವು ಒದಗಿ ಅವರಿಗೆ ಕೊರಗು ಹತ್ತಿಸಿದುವು. ೧೯೩೭ರಲ್ಲಿ ಅವರ ಮನೆಗೆ ಕಳ್ಳರು ಬಿದ್ದು ಸ್ವಲ್ಪ ನಗನಾಣ್ಯಗಳನ್ನೂ ಅವರು ಊಟಮಾಡುತ್ತಿದ್ದ ಬೆಳ್ಳಿಯ ತಟ್ಟೆಯನ್ನೂ ಹೊತ್ತುಕೊಂಡು ಹೋದರು. ಅದರಿಂದಲೂ ಅವರು ಚಲಿತರಾಗಲಿಲ್ಲ; ಹೋಗಲಿ, ನಮ್ಮ ಪ್ರಾಪ್ತಿ ಅಷ್ಟೇಯೆ; ನಾನು ಬೆಳ್ಳಿಯ ತಟ್ಟೆಯಲ್ಲಿ ಊಟಮಾಡುವುದು ದೇವರಿಗೆ ಇಷ್ಟವಿಲ್ಲವೆಂದು ತೋರುತ್ತದೆ ಎನ್ನುತ್ತಿದ್ದರು. ಆದರೆ ಸುಮಾರು ಆ ಕಾಲದಿಂದಲೂ ತನಗೆ ಯಾವುದೋ ಕಷ್ಟದೆಸೆ ಒದಗಿದೆ ಎಂದು ಅವರಿಗೆ ಬಲವಾದ ಒಂದು ಶಂಕೆಯುಂಟಾಯಿತು ; "ಏನೋ, ಮನಸ್ಸಿಗೆ ಶಾಂತಿಯೇ ಇಲ್ಲ ; ದೇವರ ಪೂಜೆ, ಸಂಧ್ಯಾವಂದನೆ, ಪಾರಾಯಣ ಒಂದೂ ಬೇಕಾಗುವುದಿಲ್ಲ ; ಹೋಗಲಿಯೆಂದು ನಾನೂ ಬಿಟ್ಟುಬಿಟ್ಟಿದ್ದೇನೆ. ಗ್ರಹಚಾರ ಅದೊಂದನ್ನೂ ಮಾಡಗೊಡಿಸುವುದಿಲ್ಲ; ನಮ್ಮ ತಂದೆಗೂ ತುಂಬ ಕಷ್ಟಕಾಲ ಒಂದು ಸಾರಿ ಬಂದಿತ್ತು; ಆಗ ಅವರಿಗೂ ಹೀಗೇ ಆಗಿತ್ತು" ಎನ್ನುತ್ತಿದ್ದರು. ಸಾಯುವುದಕ್ಕೆ ಮೂರು-ನಾಲ್ಕು ತಿಂಗಳಿದ್ದಾಗ, ಮನಶ್ಶಾಂತಿ ಬಂದೀತೆಂಬ ಆಸೆಯಿಂದ ಸಪ್ತಸರ್ಗ ಸುಂದರಕಾಂಡ ಪಾರಾಯಣವನ್ನು ಆರಂಭಿಸಿದ್ದರು. ಆ ಕಾಲದಲ್ಲಿ ಬೆಂಗಳೂರಿಗೆ ಬಂದಾಗ, ಪುಸ್ತಕವನ್ನು ತಂದು ಅಲ್ಲಿಯೂ ಪಾರಾಯಣಮಾಡುತ್ತಿದ್ದದ್ದನ್ನು ನೋಡಿ, ವಿಚಾರಿಸಿ, ಇದನ್ನು ತಿಳಿದುಕೊಂಡೆ. ಆದರೆ ಇನ್ನು ಸ್ವಲ್ಪ ಕಾಲಬಿಟ್ಟು ಮತ್ತೊಂದು ಸಾರಿ ಬಂದಾಗ ಪಾರಾಯಣಮಾಡಲಿಲ್ಲ. ಅದೇಕೆಂದು ಕೇಳಲು, "ಏನೋ ಮೈಲಿಗೆ ಮಧ್ಯೆ

ಅಡ್ಡಿಯಾಗಿ ಬಂದು ಸಿಲ್ಲಿಸಿಬಿಟ್ಟೆ" ಎಂದರು. ಅದರಿಂದ ಅವರ ಮನಸ್ಸಿಗೆ ಸ್ವಲ್ಪ ಅಳುಕಾಗಿದ್ದಂತೆ ತೋರಿತು. ಆದರೆ ಆ ಅಳುಕು ಬಂದು ಉತ್ಪಾತವಾಯಿತು.

ಅವರಿಗೆ ತಕ್ಕ ಮಟ್ಟಿಗೆ ಫಲಜ್ಯೋತಿಷ ಜ್ಞಾನವಿತ್ತು ; ಅದರಲ್ಲಿ ನಂಬಿಕೆಯೂ ಇತ್ತು ; ಆದ್ದರಿಂದ ತಮ್ಮ ಜಾತಕವನ್ನು ನೋಡಿಕೊಂಡು ಆ ಕಾಲಕ್ಕೆ ಗ್ರಹಚಾರ ಕ್ರೂರವಾಗಿದೆಯೆಂದು ಹೇಳುತ್ತಿದ್ದರು. ಆದರೆ ಇಷ್ಟು ಕ್ರೂರವೆಂದು ಯಾರೂ ಭಾವಿಸಿರಲಿಲ್ಲ.

ಅವರು ಎಂದೂ ದೃಢಾಂಗರಾಗಿ ಪೂರ್ಣಾರೋಗ್ಯದಲ್ಲಿದ್ದವರಲ್ಲ; ಮೊದಲು ನಾನು ಅವರನ್ನು ನೋಡಿದಾಗಲೇ (೧೯೦೪) ಮಲಬಂಧ ಚರ್ಮವ್ಯಾಧಿಗಳಿಂದ ನರಳುತ್ತ ಅಶಕ್ತರಾಗಿ ಕಾಣುತ್ತಿದ್ದರು. ಆದರೆ ಬೆಂಗಳೂರಿಗೆ ಬರುವ ಹೊತ್ತಿಗೆ (೧೯೧೬) ಕ್ರಮವಾಗಿ ಚೇತರಿಸಿಕೊಂಡು, ದೃಢವಾಗಿಲ್ಲದಿದ್ದರೂ ತಕ್ಕ ಮಟ್ಟಿಗೆ ಆರೋಗ್ಯವಾಗಿದ್ದರು. ಊಟ ತಿಂಡಿಗಳಲ್ಲಿ ಹುರುಡುಗಟ್ಟಿ, ಹುಡುಗಾಟವಾಡಿ, ಭಾಗ ವಹಿಸಿ ಸುಖಪಡಬಲ್ಲವರಾಗಿದ್ದರು. ಹುಳಿತೊವ್ವೆಯೆಂದರೆ ಅವರಿಗೆ ಪ್ರಾಣ; ಆದರೆ ಮೈಸೂರಿಗೆ ಬಂದ ಮೇಲೆ (೧೯೨೭) ಅವರಿಗೆ ಇಲ್ಲಿಯ ಹವ ಒಗ್ಗಲಿಲ್ಲ; ಜೀರ್ಣಶಕ್ತಿ ಕುಗ್ಗಿ, ಮೂಲವ್ಯಾಧಿ ಹುಟ್ಟಿ, ಅವರ ದೇಹವನ್ನು ಶೋಷಿಸಿತು. ಕೊನೆಗಾಲಕ್ಕೆ ಒಂದು ನಾಡುವೈದ್ಯದಿಂದ ಅದೂ ಗುಣಕ್ಕೆ ಬಂದಿತ್ತು; ಆದರೆ ದೇಹದಾರ್ಢ್ಯ ಮಾತ್ರ ಕಡಮೆಯಾಗುತ್ತಿತ್ತು ; ಈ ಸಮಯದಲ್ಲಿ ಅಲಪಟೆಯಿಂದ ಆಯಾಸ ಹೆಚ್ಚಾಗಿ ಚಳಿಗಾಳಿಗಳ ಹೊಡೆತಕ್ಕೆ ಸಿಕ್ಕಿ ಜ್ವರಬಂದು ಮಲಗಿದರು. ಜ್ವರವು ವಿಷಮಿಸಿ ನ್ಯೂಮೋನಿಯಾಕ್ಕೆ ತಿರುಗಿತು. ಸ್ವಾಭಾವಿಕವಾಗಿಯೇ ದುರ್ಬಲವಾಗಿದ್ದ ಅವರ ಶ್ವಾಸಕೋಶಗಳೂ ಹೃದಯವೂ ಮತ್ತಷ್ಟು ದುರ್ಬಲವಾಗಿ, ದೇಹವು ದಿನದಿನಕ್ಕೂ ಕುಗ್ಗುತ್ತ ಬಂತು. "ರೋಗ ಚಿಹ್ನೆಗಳೊಂದೂ ಇಲ್ಲ; ಎಲ್ಲಾ ಗುಣವಾಗಿದೆ; ಹೃದಯದೌರ್ಬಲ್ಯ ಮಾತ್ರವಿದೆ; ತುಂಬ ನಿಶ್ಶಕ್ತಿ ಇದೆ; ಕ್ರಮವಾಗಿ ಚೇತರಿಸಿ ಕೊಳ್ಳುತ್ತಾರೆ"—ಎಂದೇ ಎಲ್ಲರೂ ಆಶೆಯನ್ನಿಟ್ಟುಕೊಂಡಿದ್ದರು ; ಅವರಿಗೂ ತಮ್ಮ ಅಂತ್ಯಕಾಲ ಸಮೀಪಿಸಿರಬಹುದೆಂಬ ಶಂಕೆ ತೋರಿದಂತೆ ಕಾಣುವುದಿಲ್ಲ; ಆದರೆ ಜೀವದೀಪ ಅನಿರೀಕ್ಷಿತವಾಗಿ ನಂದಿಹೋಯಿತು. ಶೋಕ ಕವಿದುಕೊಂಡಿತು.

ವೆಂಕಣ್ಣಯ್ಯನವರಲ್ಲಿ ಅವರ ಉದ್ದಕ್ಕೂ ಎಲ್ಲರಿಗೂ ಗೋಚರಿಸುತ್ತಿದ್ದದ್ದು ಅವರ ಸಾಧುತ್ವ. ಸತ್ಸಂಗ, ಜವಾಬ್ದಾರಿಯ ಸಂದರ್ಭಸನ್ನಿವೇಶಗಳು, ಆತ್ಮವಿಮರ್ಶೆ, ಅಂತರ್ಮುಖತೆ ಮುಂತಾದವುಗಳಿಂದ ಸಂಸ್ಕಾರಪಡೆದು ಬೆಳೆದುಬಂದರೂ ಅದು ಅವರ ಹುಟ್ಟುಗುಣವೆಂದೇ ಹೇಳಬೇಕು. ಆದ್ದರಿಂದಲೇ ಅವರು ಚಿಕ್ಕ ವಯಸ್ಸಿನಿಂದಲೂ ಎಲ್ಲರಿಗೂ ಬೇಕಾಗಿದ್ದದ್ದು ; ಮೈಸೂರಿಗೆ ಮೊದಲು ಬಂದಾಗ ಅವರು

ಸುಮಾರು ಒಂದು ವರ್ಷ ಹೋಟಲಿನಲ್ಲಿ ಊಟ ವಸತಿ ಮಾಡಿಕೊಂಡಿದ್ದರು. ಅಲ್ಲಿ ಕೂಡ ಅವರನ್ನು ಕಂಡರೆ ಎಲ್ಲರಿಗೂ ವಿಶ್ವಾಸ; ಅಲ್ಲಿದ್ದ ಪರಿಚಾರಕನು ಅನಾರೋಗ್ಯದಲ್ಲಿ ನರಳುತ್ತಿದ್ದ ಅವರನ್ನು ಉಪಚರಿಸಿ, ಹೆಚ್ಚಾಗಿ ತುಪ್ಪ ಮಜ್ಜಿಗೆ ಹಾಕಿ, ನೀರೆರೆದು ಆರೈಕೆಮಾಡಿ ತಿಂಡಿಕೊಟ್ಟು ಅವರಿಗೆ ಮೆಚ್ಚಾಗಿದ್ದನು. ಆಗ ಅವರು ಅವನಿಗೆ ದುಡ್ಡುಕಾಸು ಕೊಟ್ಟು ಒಲಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ದುಡ್ಡು ಕೊಟ್ಟರೆ ತಾನೇ ವಿಶ್ವಾಸ ಬಂದೀತೇ? ಅವರ ಮೃದುವಾದ ಮಾತು, ಸಾತ್ವಿಕವಾದ ನಡತೆ, ನಗುಮುಖ ಇವೇ ದುಡ್ಡಿಗಿಂತ ದೊಡ್ಡವಾಗಿದ್ದುವು.

ದುಷ್ಟನಿಗ್ರಹದಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. "ದುಷ್ಟಾನುಗ್ರಹ, ಶಿಷ್ಟಗೌರವ" ಇದೇ ಅವರ ನಡತೆಗೆ ಮೂಲಮಂತ್ರವಾಗಿತ್ತು. ಸ್ನೇಹ ಸಾಧುತ್ವ ಹೊಂದಿಕೆಗಳಿಂದ ಸರಿಹೋದರೆ ಹೋಗಲಿ, ಇಲ್ಲದಿದ್ದರೆ ಅಪ್ರಿಯವಾದ ರೀತಿಯಲ್ಲಿ ವರ್ತಿಸಿ ದುಷ್ಟರನ್ನು ತಿದ್ದಹೋಗುವುದು ಅನಾವಶ್ಯಕವೆಂದು ಅವರು ಹೇಳುತ್ತಿದ್ದರು. "ಕಾಲಿಗೆ ಮುಳ್ಳು ಚುಚ್ಚಿದರೆ, ಅದು ಹಾಗೇ ಕೊಳೆತು ಕರಗಿಹೋಗಲಿ, ಅದನ್ನು ಸೂಜಿಯಿಂದ ಯಾರು ಚುಚ್ಚಿ ತೆಗೆದು ಕಾಲು ನೋಯಿಸಿಕೊಂಡಾರು!"—ಎನ್ನುವ ಹಾಗೆ. "ಧ್ರುವಂ ಸ ನೀಲೋತ್ಪಲಪತ್ರಧಾರಯಾ ಶಮೀಲತಾಂ ಛೇತ್ತುಮೃಷಿರ್ವ್ಯವಸ್ಯತಿ" ಎಂದು ದುಷ್ಯಂತನು ದೂರಬಹುದು. ಆದರೆ ಕಣ್ವರು ತಮ್ಮ ಮಾರ್ಗವನ್ನು ಬಲ್ಲವರಾಗಿದ್ದರು; ಅದರಿಂದಲೇ ಅವರು ಋಷಿಗಳಾಗಿ ಉಳಿದರು. ಈ ವಿಧವಾದ ರೀತಿ ವೃತ್ತಿ ಪ್ರವೃತ್ತಿಗಳು ಉಪ್ಪು ಹುಳಿ ಖಾರ ತಿನ್ನುವ ದೇಹಕ್ಕೆ ಸುಮ್ಮನೆ ದೊರಕುವುದಿಲ್ಲ. ಅವರು ಮನಸ್ಸನ್ನು ದಂಡಿಸಿ ದಂಡಿಸಿ, ಕೋಪತಾಪಗಳನ್ನು ನುಂಗಿ ನುಂಗಿ, ಸಾಧಕ ಮಾರ್ಗದಲ್ಲಿ ಮುಂದುವರಿಯುತ್ತಿದ್ದರು. ಆ ಹೋರಾಟವು ಪ್ರಯತ್ನಪೂರ್ವಕವಾಗಿ ನಡೆಯುತ್ತಿದ್ದದ್ದರಿಂದಲೇ ಅದರ ಅರಿವು ದಿನದಿನಕ್ಕೆ ಹೆಚ್ಚಾಗಿ, ಕೊನೆಕೊನೆಗೆ "ನಾನು ಮುದುಕನಾದೆನೆಂದು ತೋರುತ್ತದೆ; ನನಗೆ ಸಿಡುಕು ಬಹಳವಾಗುತ್ತಿದೆ; ಶಾಂತಿ ಹೋಗುತ್ತಿದೆ" ಎನ್ನುತ್ತಿದ್ದರು. ಆದರೆ ಅವರನ್ನು ನೋಡಿದವರೆಲ್ಲರೂ ಬಲ್ಲರು—ಅವರ ಶಾಂತಿ ಸ್ನೇಹ ಸಮಾಧಾನಗಳು ಹೇಗೆ ಬೆಳೆಯುತ್ತಿದ್ದುವೆಂಬುದನ್ನು.

ಸಂಯಮದಲ್ಲೆಲ್ಲಾ ಬಹು ಕಷ್ಟವಾದದ್ದು ನಾಲಗೆಯ ಮೇಲಣ ಸಂಯಮ; ಗೋಪ್ಯವಾಗಿರಬೇಕಾದ ವಿಷಯಗಳಲ್ಲಿ ನಾಲಗೆಯನ್ನು ಬಿಗಿ ಹಿಡಿದುಕೊಂಡು ಮಾತನಾಡದೆ ಸುಮ್ಮನಿರುವುದು ಬಹು ಕಷ್ಟ; ಅದನ್ನು ವೆಂಕಣ್ಣಯ್ಯನವರು ಚೆನ್ನಾಗಿ ಕಲಿತಿದ್ದರು. "ಮಾತು ಆಡಿ ಹೋಯಿತು, ಮುತ್ತು ಒಡೆದು ಹೋಯಿತು" ಎಂಬ ಹೇಳಿಕೆಗೆ ಅವರು ನಿದರ್ಶನವಾಗಿದ್ದರು. ಯಾವ ಮಾತನ್ನಾಡಿದರೆ ಅದು ಹೇಗೆ ಪರಿಣಮಿಸಬಹುದೋ ಜನರು ಅದಕ್ಕೆ ಕೈಕಾಲುಂಟುಮಾಡಿ ಹೇಗೆ ಹರಡ

ಬಹುದೋ ಎಂದು ಹೆದರಿ ಹೆದರಿ, ಆವಶ್ಯಕವಾದದ್ದಕ್ಕಿಂತಲೂ ಇನ್ನೂ ಎರಡು ಮಾತನ್ನು ಕಡಮೆಯಾಗಿಯೇ ಆಡುವುದು ಅವರ ಅಭ್ಯಾಸವಾಗಿತ್ತು. ಅವರ ಮನಸ್ಸಿನಲ್ಲೇನಿತ್ತೆಂಬುದನ್ನು ನೂರಕ್ಕೆ ನೂರರಷ್ಟು ತಿಳಿಯುವುದು ಅವರ ಆಪ್ತ ಸ್ನೇಹಿತರಿಗೂ ಅಸಾಧ್ಯವಾಗಿತ್ತು. ಹೀಗೆ ಅವರು ಒಂದು ವಿಧದಲ್ಲಿ ಗುಪ್ತರಾಗಿದ್ದರು. ಆದರೆ ಇದರಿಂದ ಸ್ನೇಹ, ಸರಳತೆ, ವಿಶ್ವಾಸ ಇವುಗಳಿಗೆ ಕುಂದಾಗುತ್ತಿರಲಿಲ್ಲ; ತಮಗೆ ಬೇಕಾದವರಲ್ಲಿ ಇತರ ವಿಷಯಗಳನ್ನು ಕುರಿತು ಎಷ್ಟು ಹೊತ್ತು ಬೇಕಾದರೂ ಸರಸವಾಗಿ ಮಾತನಾಡುತ್ತಿದ್ದರು; ಮಾತಿನ ಸರಣಿಯಲ್ಲಿಯೇ ಒಂದು ಆತ್ಮೀಯ ಭಾವನೆಯನ್ನುಂಟುಮಾಡಿಕೊಳ್ಳುತ್ತಿದ್ದರು.

ಮ|| ವೆಂಕಣ್ಣಯ್ಯನವರಲ್ಲಿ ಕನ್ನಡ ಇಂಗ್ಲಿಷ್ ಭಾಷಾಸಾಹಿತ್ಯಗಳ ವಿಪುಲ ವ್ಯಾಸಂಗದ ಜೊತೆಗೆ ತೆಲುಗು ಬಂಗಾಳಿ ಭಾಷೆಗಳ ಚೆನ್ನಾದ ಪರಿಚಯವೂ ತಮಿಳು ಸಂಸ್ಕೃತಗಳ ತಕ್ಕಮಟ್ಟಿನ ಪರಿಚಯವೂ ಇದ್ದುವು. ಶ್ರೀ ರಾಮಕೃಷ್ಣ ಮಠಕ್ಕಾಗಿ ಬಂಗಾಳಿ ಗ್ರಂಥಗಳ ಆಧಾರದ ಮೇಲೆ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಬರೆದರು; ಶ್ರೀ ರಾಮಕೃಷ್ಣಲೀಲಾಪ್ರಸಂಗದ ಒಂದು ಭಾಗವನ್ನು ಭಾಷಾಂತರಮಾಡಿದರು; ರವೀಂದ್ರನಾಥ ಠಾಕೂರರವರು ಸಾಹಿತ್ಯ ವಿಷಯಕವಾಗಿ ಬರೆದ ಅನೇಕ ಪ್ರಬಂಧಗಳನ್ನು ಕನ್ನಡಿಸಿ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟಿಸಿದರು. ಉಪನಿಷತ್ತುಗಳ ಪರಿಚಯವಿತ್ತು. ವಾಲ್ಮೀಕಿ ರಾಮಾಯಣ ಅಧ್ಯಾತ್ಮ ರಾಮಾಯಣ ಭಗವದ್ಗೀತೆಗಳನ್ನು ಗದ್ಗದದಿಂದ ಕಣ್ಣೀರುಹಾಕುತ್ತ ಪಾರಾಯಣ ಮಾಡುತ್ತಿದ್ದುದುಂಟು. 'ಸಾಹಿತ್ಯ ಪರಿಷತ್ಪತ್ರಿಕೆ'ಗೆ ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಕೆಲವು ಲೇಖನಗಳನ್ನೂ ಪ್ರಬುದ್ಧ ಕರ್ಣಾಟಕಕ್ಕೆ ಕೆಲವು ಲೇಖನಗಳನ್ನೂ ಬರೆದಿದ್ದಾರೆ. ಹರಿಶ್ಚಂದ್ರಕಾವ್ಯ ಸಂಗ್ರಹ, ಕಾದಂಬರೀ ಸಂಗ್ರಹ, ಬಸವರಾಜದೇವರ ರಗಳೆಗಳನ್ನು ಶೋಧನೆಮಾಡಿ ಸಂಪಾದಿಸಿ, ಕಾದಂಬರೀ ಸಂಗ್ರಹಕ್ಕೂ ಬಸವರಾಜದೇವರ ರಗಳೆಗೂ ಸಾರವತ್ತಾದ ಉಪೋದ್ಘಾತಗಳನ್ನು ಬರೆದಿದ್ದಾರೆ. 'ಕನ್ನಡ ಕೈಪಿಡಿ'ಗೆ ಹಳಗನ್ನಡ ವ್ಯಾಕರಣದ ಮತ್ತು ಭಾಷಾಚರಿತ್ರೆಯ ಭಾಗವನ್ನು ಬರೆದಿದ್ದಾರೆ. ಪರಿಷತ್ತು ಪ್ರಕಟಿಸಿದ ಪಂಪಭಾರತದ ಸಂಪಾದನ ಕಾರ್ಯದಲ್ಲಿಯೂ ಓರಿಯಂಟಲ್ ಲೈಬ್ರರಿ ಪ್ರಕಟಿಸುತ್ತಿರುವ ಕುಮಾರವ್ಯಾಸಭಾರತದ ಸಂಪಾದನ ಕಾರ್ಯದಲ್ಲಿಯೂ ಸಹಕರಿಸಿದ್ದಾರೆ. ಸಿದ್ಧರಾಮ ಪುರಾಣವನ್ನು ಶೋಧಿಸಿ ಅಚ್ಚಿಗೆ ಸಿದ್ಧಮಾಡಿದ್ದಾರೆ. ಕುಮಾರವ್ಯಾಸ ಭಾರತವನ್ನು ಒಂದೇ ಸಂಪುಟದಲ್ಲಿ ಸುಂದರವಾಗಿ ಶುದ್ಧವಾಗಿ ಪ್ರಕಟಿಸಬೇಕೆಂಬ ಉದ್ದೇಶವಿತ್ತು. ಇದಕ್ಕಾಗಿ ಒಂದು ಪ್ರಾಚೀನ ಪ್ರತಿಯನ್ನು ಸಂಪಾದಿಸಿ ಅದನ್ನು ಕಾಗದದಲ್ಲಿ ಪ್ರತಿ ಮಾಡಿಸಿದ್ದರು. ಆದರೆ ಮಿಕ್ಕ ಕೆಲಸಗಳು,

ಅಂದಂದಿಗೆ ಆವಶ್ಯಕವಾಗಿ ನಡೆಯಲೇ ಬೇಕಾದ ಕೆಲಸಗಳು, ಹೆಚ್ಚಾಗಿ ಇವಕ್ಕೆ ಗಮನ ಕೊಡಲಾಗಲಿಲ್ಲ.

ಬಟ್ಟಿನ ಮೇಲೆ ಅವರು ಬರೆದದ್ದಕ್ಕಿಂತ ಉಪನ್ಯಾಸಮಾಡಿದ್ದೇ ಹೆಚ್ಚು. ಆದರೆ ಅವರ ಮಾತಿನಲ್ಲಿಯೂ ಬರೆವಣಿಗೆಯಲ್ಲಿಯೂ ಒಂದು ಅಪೂರ್ವವಾದ ಗುಣವಿತ್ತು; ಅದನ್ನು ಅವರು ಚೆನ್ನಾಗಿ ಸಂಸ್ಕಾರಗೊಳಿಸಿಯೇ, ನಿರ್ವಿವಾದವಾಗುವಂತೆಯೇ, ಸಪ್ರಮಾಣವಾಗಿಯೇ ಪ್ರಯೋಗಿಸುತ್ತಿದ್ದರು. ಅದರಲ್ಲಿ ಸಂದಿಗ್ಧತೆಯಾಗಲಿ ಬೆಡಗು ಬಿನ್ನಾಣಗಳಾಗಲಿ ಇರುವುದಿಲ್ಲ; "ತಳುಕಿನ ವೆಂಕಣ್ಣಯ್ಯನವರಲ್ಲಿ ತಳುಕಿಲ್ಲ" ಎಂದು ನಮ್ಮ ಮಾನ್ಯಮಿತ್ರರೊಬ್ಬರು ಪದೇ ಪದೇ ವಿನೋದವಾಗಿ ಹೇಳುತ್ತಿದ್ದದ್ದನ್ನು ಅವರ ಬರೆವಣಿಗೆಗೆ ಚೆನ್ನಾಗಿ ಅನ್ವಯಿಸಬಹುದು. ಅದರಲ್ಲಿ ಯಾವ ಮಾತನ್ನಾದರೂ ತೆಗೆದು, ಸೇರಿಸಿ, ಬದಲಾಯಿಸುವಂತಿರುವುದಿಲ್ಲ. ಅವರು ಬರೆಯುವುದರ ಜವಾಬ್ದಾರಿಯನ್ನು ಬಹು ಚೆನ್ನಾಗಿ ಗ್ರಹಿಸಿದ್ದರು; ಆದ್ದರಿಂದ ಬರೆಯಬೇಕೆಂಬ ಪ್ರಾರ್ಥನೆಗೆ ಸುಲಭವಾಗಿ ಒಪ್ಪುತ್ತಿರಲಿಲ್ಲ; ತಾವಾಗಿಯಂತೂ ಮೇಲೆಬಿದ್ದು ಬರೆದದ್ದೇ ಇಲ್ಲ.

ವೆಂಕಣ್ಣಯ್ಯನವರ ಉತ್ತಮವಾದ ಬರೆವಣಿಗೆ, ಅವರ ಬರೆವಣಿಗೆಗಿಂತಲೂ ಅವರ ಮಾತು, ಅವರ ಮಾತಿಗಿಂತಲೂ ಅವರ ನಡತೆ, ಅವರ ನಡತೆಗಿಂತಲೂ ಅವರ ಗುಣ, ಇವು ಅವರನ್ನು ಬಲ್ಲವರ ಹೃದಯದಲ್ಲಿ ಮೆಚ್ಚಿಗೆ ಪಡೆದು ನಿಲ್ಲುತ್ತವೆ: ಕನ್ನಡಿಗರಲ್ಲಿ ಅವರ ನೆನಪು ಅಮರವಾಗಿರುತ್ತದೆ.

ವೆಂಕಣ್ಣಯ್ಯನವರು ಪುಣ್ಯವಂತರು; ಅವರು ಇರುವ ತನಕ ಒಳ್ಳೆಯವರಾಗಿದ್ದು, ಒಳ್ಳೆಯವರೆಂದೆನಿಸಿಕೊಂಡು, ನಯವಾದ ನವಿರಾದ ಸಾತ್ವಿಕ ಜೀವನವನ್ನು ಜೀವಿಸಿ, ಗಂಟು ನಂಟು ಎರಡನ್ನೂ ಉಳಿಸಿಕೊಂಡು, ದೇವರಿಗೂ ಮನುಷ್ಯರಿಗೂ ಮೆಚ್ಚಿಕೆಯಾಗಿ ಬಾಳಿ ಕಣ್ಮರೆಯಾದರು. ಆದರೆ ಅವರ ಬಂಧುಬಾಂಧವರಿಗೂ ಇಷ್ಟ ಮಿತ್ರರಿಗೂ ಅವರನ್ನು ಇನ್ನು ಕೆಲವು ಕಾಲ ಪಡೆದಿರುವ ಭಾಗ್ಯವಿರಲಿಲ್ಲ.

ಎ. ಆರ್. ಕೃಷ್ಣಶಾಸ್ತ್ರೀ.

ಕಣ್ಮರೆಯಾದ ಕನ್ನಡದ ಹಕ್ಕಿ

ವೇದವತಿನಾಡಿಂದ
ಕಾವೇರಿನಾಡಿಂಗೆ
ಹಕ್ಕಿ ಹಾರಿತ್ತೊಂದು ಕನ್ನಡದ ಹಕ್ಕಿ :
ಹಕ್ಕಿ ಹಾರಿತ್ತೆಂದು ಕರುನಾಡ ಹಕ್ಕಿ !

ಬೆಳುವೊಲದ ತಳುಕಿಂದ,
ಬಳಿಬೆಳಕ ಮೈಸೂರ
ಕಳಶದಲಿ ಮೆರೆವುದಕೆ ಕನ್ನಡದ ಹಕ್ಕಿ—
ಹಕ್ಕಿ ಹಾರಿತ್ತೆಂದು ಕರುನಾಡ ಹಕ್ಕಿ ;
ಹಕ್ಕಿ ಹಾರಿತ್ತೊಂದು ಕನ್ನಡದ ಹಕ್ಕಿ !

ಎಲ್ಲೆಲ್ಲು ಹಾರಾಡಿ, ಮೈಸೂರ ಮನೆಮಾಡಿ,
ಮರಿಗಳಿಗೆ ಗುಟುಕಿಡುತ, ಹಾರಿಕೆಯ ಕಲಿಸುತ್ತ,
ನುಡಿಗತಿಯ ನಲಿಸುತ್ತ, ಅತಿರೀತಿ ನಿಲಿಸುತ್ತ,
ಒಲಿಸುತ್ತ, ಬೆಳೆಸುತ್ತ, ನಾಡೆಲ್ಲ ಮೊಳಗುವೊಲು,
ನಲಿಯುತ್ತ ಕೆಲೆಯುತ್ತ ಇತ್ತೊಂದು ಹಕ್ಕಿ !
ನುಡಿವಕ್ಕಿ ಇತ್ತೊಂದು, ಕನ್ನಡದ ಹಕ್ಕಿ !
ಪಂಡಿತರ ಮಂಡಲದಿ ಖಂಡಿತವ ನುಡಿವಕ್ಕಿ,
ಮಂಡಪದ ದೇವಿಯರ ಮುಂಗುಡಿಯ ಮೊರೆವಕ್ಕಿ,
ದಂಡಿಗೆಯ ಗೆಲುವಕ್ಕಿ ಇಲ್ಲಾಯ್ತು ಇಂದೆಂದು,
ಕೇಳಿಸಿತು ಕೂಗು !

“ ಜಂಜಡದ ಜಗವನ್ನು ಬಿಟ್ಟು ಹಾರಿಹುದೆಂದು,
ಕಣ್‌ಮೇರೆ ಮೀರಿಹುದು, ಮರೆಯಾಯ್ತು, ಧರೆಗಿಂದು ”
ಹೀಗೆಂದು ಕೇಳುತ್ತ ದುರ್ಗದಿಂ ದುರ್ಗಕ್ಕೆ
ಕಾನನದಿ ಕಾನನಕೆ, ಗಗನದಿಂ ಗಗನಕ್ಕೆ,

ಹಾರುತಿಹ ಬಾಣ! ಶೋಕಾಗ್ನಿಬಾಣ!
ಮರೆಯಾಯ್ತು ಹಕ್ಕಿ, ಕನ್ನಡದ ಹಕ್ಕಿ!

ಚೀರಿದವು ಹಕ್ಕಿಗಳು, ನೆಲಕುರುಳಿ ಸೋರಿ,
ತೆಂಗಲ್ಲಿ, ಮಾವಲ್ಲಿ, ತೇಗದಲಿ, ಭೋಗಿಯಲಿ,
ಮರಗಳಲಿ ತೊರೆಗಳಲಿ, ಕಾಣಿಸಿತು ಅಳಲು!
ಮುತ್ತುಗದ ಹೂವಾಗಿ ಮುತ್ತೈದೆಯಳಲಾಗಿ
ಕೆಂಪಾಗಿ ಕೆಚ್ಚಾಗಿ ಬಿಡಮೂಡಿತಳಲು!—
ಮರೆಯಾಗೆ ಕನ್ನಡದ ತೊರೆವಕ್ಕಿಯಿಂದು!

ಕನ್ನಡದ ನಾಡೆಲ್ಲ, ಕರ್ಣಾಟರ ನೆಲೆಯಾಗಿ,
ಒಸರುಗಳ ಬೇಗೆಯಾ ಬರಿಯುಸುರು ಸಯ್ಯಾದ್ರಿ
ಕಾವೇರಿಗೋದೆಯರು, ವೇದವತಿಹಾಗಿಯರು
ಕುದಿಯುಳಲ ಕಾವಿಂಗೆ, ಬತ್ತಿದವು ಅಂದು,
ಮಡಿದಂದು ಮಡಿವಕ್ಕಿ, ಕನ್ನಡದ ಹಕ್ಕಿ!

ಇತ್ತು ಇತ್ತೊಂದೆಂದು ಹೇಳುವಂತಾಯಿತ್ತು,
ಕತ್ತಲೆಯು ಕವಿದಿತ್ತು, ಸೈದೋದ್ರ ಮೀರಿತ್ತು,
ಸುತ್ತಾದ ಮುತ್ತೇನು, ಬಲವಿಲ್ಲವಾಯಿತ್ತು,
ಕರ್ಣಾಟಕುಂಟಿ ದುಗುಡಗತಿ ಸುಡಿಗಡಿಯ ಮೀರಿತ್ತು.
ಮರೆಯಾಗೆ ಎದೆವಕ್ಕಿ ಕನ್ನಡದ ಹಕ್ಕಿ!
ಅಂದು ಆ ದಿನದಲ್ಲಿ ಮೃತ್ಯುವೇ ನುಡಿಗೊಡಲು,
ಸಾಗರವು ದುಗುಡದಲಿ ಅಲೆಗಳನು ತಡೆದಿತ್ತು,
ಧರೆಯಕ್ಕಿ ಜೋಗಗಳ ನೀರ್ದಾರೆಗಳು ನಿಂತಿತ್ತು!
ಅಂದು ಆ ರಾತ್ರಿಯಲಿ ಮಾಘಸಂಜೆಯಲ್ಲಿ
ಸಂಚತ್ಸ್ನೈಮುದ್ದೋಡೆ ಕನ್ನಡದ ಹಕ್ಕಿ!

ಬಹುಧಾನ್ಯ ಫಲವಾಗಿ, ಪ್ರಭುತ್ವಸ್ಥಿರೋಲವಾಗಿ,
ನುಡಿ ಚಂದ್ರ ಚೆಲುವಾಗಿ, ಸಾಹಿತ್ಯಸೂನಾಡಿ,
ನಡುಗಿಸುವ ಗಾಳಿಗಳು ಅಡಗುತಿರಲೆಲ್ಲೆಲ್ಲು,
ಬಹುಕಾಲ ಬಯಸಿದ್ದ ಭೋಗಗಳು ಕಾದಿರಲು.

ಹೂವುಗಳ ರಸಹೀರಿದು ಮಾವೆಲ್ಲ ಕಾಯಾಗೆ,
ಸಮಯವನು ಕಾದಿರಲು, ಬಿಳಿಜೋಳ ಹೆಜ್ಜೇನು,
ಅರಳೆಗಳು ಹಾಸಿರಲು, ಚಿತ್ತಾರ ನಾಡಲ್ಲಿ,
ಕನ್ನಡದ ನುಡಿದೀಪ ಕುಡಿಯುಡಲು ನಾಲಾಗಿ—
ಭಾರತಿಯ ಮುಂದಿರದಿ, ರಾಗದಲಿ ಕೂಗುವರು
ಋತ್ವಿಜ ಪುರೋಹಿತರು, ಕಾದಿರಲು ಬರಲೆಂದು,
ಬಯಲಾದೆ, ಇನಿಹಕ್ಕಿ, ಕನ್ನಡದ ಹಕ್ಕಿ!

ಎತ್ತರಕೆ ಸುತ್ತುತ್ತ, ಸುತ್ತಣದ ನಾಡೆಲ್ಲ
ಕರೆಯುತ್ತ ಮೊರೆಯುತ್ತ, ಇತ್ತೆಸ್ವಂದು ಹಕ್ಕಿ!
ಚಿತ್ತದಲಿ ಕನ್ನಡದ ಜ್ಯೋತಿಗಳ ಹತ್ತಿಸುತ,
ಚಿತ್ತಾರನಾಡಿಸೀ ಕನ್ನಡದ ಬಳಗಕ್ಕೆ
ಒಲವಿನವನೆನಿಸಿದ್ದೆ ಕನ್ನಡದ ಹಕ್ಕಿ!

ನಿನಗಂತು ಚೆಲುವಾಯ್ತು, ಸಗ್ಗಿಗರ ಜತೆಯಾಯ್ತು,
   ಕನ್ನಡದ ಹಕ್ಕಿ!
ಕ್ಲೇಶಗಳ ತೊಳೆದಿಟ್ಟೆ, ಕಟ್ಟುಗಳ ಕಳೆದಿಟ್ಟೆ,
ಸತ್ಕರ್ಮಫಲವೆಂದೆ! ಹಿರಿಮಹಿಮ ಮುಕುಟವನು
   ಧರಿಸುತ್ತೆ ಮಾಯವಾದೆ!

ವೀಣೆಯಿಂ ಜಾರಿರುವ ವಾಣಿಯೋ ನೀನು!
ಬತ್ತಿಯಿಂ ಚಿಗಿದೆದ್ದ ಸೊಡರಕುಡಿ ನೀನು!
ಹೂವನ್ನು ಹಿಂದಿಟ್ಟ ಗಂಧಾತ್ಮ ನೀನು!
ಕಾಂತಿಯಲಿ ಕಾಂತಿಯಲಿ ಮಾಯವಾದೆ!
ಕನ್ನಡದ ದೇವಿಯರ ಹೊಂಗುಡಿಯ ಹಕ್ಕಿ!

ಹೊಳಪಾಗಿ ಹೊನ್ನರುಳ ಹೊನಲಾಗು ನೀನು!
ಮಣ್‌ನೆಲಕು ವಿಣ್‌ನೆಲಕು ಕನ್ನಡದ ಕೀಲು!
ಮನದಲ್ಲಿ ಮನೆಮಾಡು ನಾಲಗೆಯಲೋಲಾಡು,
ಕನ್ನಡದ ಕಣ್ಣಲ್ಲಿ ಹೊಸ ಹೊಳಪು ನೀನು!

ಕನ್ನಡದ ನುಡಿಯಲ್ಲಿ ಹೊಸ ಹುರುಪು ನೀನು !
ನಗೆಯಾಗು ಬಗೆಯಾಗು ಕನ್ನಡದ ಬಾನ್ಹಕ್ಕಿ !
ಸೂಕ್ಷ್ಮದಲಿ ನುಳಿದಾಡು ಕನ್ನಡದ ಹಕ್ಕಿ !
ಸದ್ಗತಿಯ ಪಡೆದಿದ್ದು, ಸಗ್ಗಿಗರ ಒಡನಿದ್ದು
ಮರಳೆಂದು ಬೇಡುವೆನು ಹಿರಿನಾಡ ಹಕ್ಕಿ !
ಸೊಗಸಿಟ್ಟು ತೊದಳಲ್ಲಿ, ನಗೆಯಿಟ್ಟು ಮೊಗದಲ್ಲಿ,
ಕನ್ನಡ ಕುಲದಲ್ಲಿ ಮಗುವಾಗಿ ಬಾರೈ !
ಅಳಲೆಲ್ಲ ತೀರಲೈ, ಹೊಳಲೆಲ್ಲ ಹಾಡಲೈ
"ಮರಳಿಹುದು ನಮ್ಮೊಳಿಗೆ ಮಗುಪಕ್ಕಿ"—ಎಂದು !

"ಹೊಯಿಸಳ."

ಪ್ರೊಫೆಸರ್ ವೆಂಕಣ್ಣಯ್ಯನವರು

[ಗುರುವರ್ಯರಾದ ಶ್ರೀಮಾನ್ ತಳಕಿನ ವೆಂಕಣ್ಣಯ್ಯನವರ ಸ್ವಗ್ರಾಮಕ್ಕೆ ನಾನು ಹೋಗಿದ್ದಾಗ ಹನುಮನ ದೇಗುಲದ ಬಳಿ ಕುಳಿತು ಅವರು ನನಗೆ ಹೇಳಿದ್ದ ಅವರ ಜೀವಮಾನದಲ್ಲಿನ ಒಂದು ಸನ್ನಿವೇಶವನ್ನು ಈಗ ಇಲ್ಲಿ ಪದ್ಯರೂಪದಲ್ಲಿ ಕೊಟ್ಟಿದೆ. ಇದರ ಧಾಟಿ ಸಾಂಗತ್ಯದಂತೆ.]

ಐದು ರೂಪಾಯಿಯ ಪರೀಕ್ಷೆಗಾ ವರ್ಷ
ನಮ್ಮ ವೆಂಕಣ್ಣನು ಕಟ್ಟಿದ್ದನು
ನಾಳೆ ಪ್ರಾರಂಭವು ದೊಡ್ಡ ಪರೀಕ್ಷೆಯು
ತಳಕಿಂದ ದುರ್ಗಕ್ಕೆ ಹೋಗಬೇಕು ||೧||

ಏನು ಕೋಲಾಹಲವೀ ದಿನ ತಳಕಲ್ಲಿ
ಜೋಯಿಸ ಕರಣೀಕ ಪಟೇಲನು
ಆ ರೈತ ಈ ರೈತ ಎಲ್ಲರು ಕಲೆತರು
ತಂತಮ್ಮ ಮಕ್ಕಳ ಕಳುಹಿಸಲು ||೨||

ಶಾಲೆಯ ಮೇಷ್ಟರ ಓಡಾಟ, ಓಹೋ!
ಮಗಳ ಮದುವೆಗಿಲ್ಲ ಈ ಸಂಭ್ರಮ
ಹುಡುಗರನೆಲ್ಲಾ ಕಲೆಹಾಕುತಿರುವನು
ತಳಕಿಗು ದುರ್ಗಕ್ಕು ರಾತ್ರಿ ಪಯಣ ||೩||

ನಲ್ಕುಂಟೆ ರಂಗಪ್ಪ ಗಾಡಿಯ ಹೂಡಿದ
ಹೇರಿದರದರಲ್ಲಿ ಬಟ್ಟೆಬರೆ
ಹಿಂದಿನ ಮನೆಯಜ್ಜಿ ಪುಟ್ಟಮ್ಮಗೇನ್ ಮಮತೆ
ಹುರಿಹಿಟ್ಟ ಮೂಟೇಸೆ ತಂದಿಟ್ಟಳು ||೪||

ತಳಕಿನ ಹಿರಿಯರು ಸುಬ್ಬಣ್ಣ ಯಜಮಾನ್ರು
ದಯಮಾಡುತಿರುವರು ದಾರಿ ಬಿಡಿ
ಅಗೊ ಅವರೆಲ್ಲರ ಹತ್ತಿರ ಕರೆದರು
ಹರಸಿದರವರನ್ನು ಮಮತೆಯಲಿ ||೫||

ನೆಲಮನೆ ದೀಕ್ಷಿತರೆಂದರು ಆಗಲ್ಲಿ
ಹೊರಡುವ ಮೊದಲು ಗುಡಿಗೆ ಹೋಗಿ
ತೆಂಗಿನಕಾಯೊಡೆದು ಕರ್ಪೂರವನು ಹಚ್ಚಿ
ಹನುಮನ ಭಕ್ತೀಲಿ ಬೇಡಿಕೊಳ್ಳಿ ||೬||

ಹೇಳಿರಿ ಹನುಮಗೆ 'ಪಾಸ' ಮಾಡಿಸಿದರೆ
ನಾವೆಲ್ಲರು ಸೇರಿ ಅಭಿಷೇಕವ
ಪಾನಕ ಪನ್ಯಾರ ಮಾಡುವೆವೆಂದೆನ್ನಿ
ರಕ್ಷೆಯ ಹಚ್ಕೊಂಡು ಹೊರಟುಬನ್ನಿ ||೭||

ದೀಕ್ಷಿತರಾಡಿದ ನುಡಿ ವೇದವಾಕ್ಯವು
ಲೆಕ್ಕಿಸಲಾರಿಗೆ ಧೈರ್ಯವಿದೆ
ಹೊರಟರು ಹುಡುಗರು ಹನುಮನ ಗುಡಿಗಂದು
ಹಿಂದೇನೆ ನಿಂತನು ವೆಂಕಣ್ಣನು ||೮||

ಏನು ವೆಂಕಣ್ಣ ನಿನ್ನ ಕಾಯೆಲ್ಲೋ
ಯಾಕೊ ಹಿಂದೆಯೆ ನಿಂತೆ ಹೊರಡೊ ಬೇಗ
ತೆಗೆದುಕೊ ಈ ಕಾಯ ನಡೆ ನಡೆ ಹೊತ್ತಾಯ್ತು
ಎಂದವನ ಹೊರಡಿಸೆ ಮೇಷ್ಟರಾಗ ||೯||

ನಾನು ಒಲ್ಲೇ ಎಂದು ಹೇಳಿದ ವೆಂಕಣ್ಣ
ನೀವೆಲ್ಲ ದೇಗುಲಕೆ ಹೋಗಿಬನ್ನಿ
ನಾನಿಲ್ಲೆ ಇರುತೇನೆ ಆಮೇಲೆ ಹೊರಡೋಣ
ನಾನಿಂದು ದೇಗುಲಕೆ ಬರಲಾರೆನು ||೧೦||

ಅವನ ಮಾತನು ಕೇಳಿ ಉರಿಯುರಿಯಾದರು
ಎಲ್ಲಿ ಬಂತೋ ನಿನಗೆ ಈ ಬುದ್ಧಿಯು
ಹಿರಿಯರ ಮಾತನುಲ್ಲಂಘಿಸಲುಂಟೇನೊ
ನಡೆ ನಡೆ ಹೊತ್ತಾಯ್ತು ಗುಡಿಗೆಂದರು ||೧೧||

ಅವನ ಕೈಹಿಡಿದೂ ಎಳಕೊಂಡು ಹೊರಟರು
ತಳಕಿನ ಹನುಮನ ದೇಗುಲಕೆ
ಕೆರೆಯೇರಿಯನು ದಾಟಿದರೆ ಅಗೊ ಕಂಡಿತು
ಹನುಮನ ಗುಡಿ ಮುಂದೆ ಗರುಡಗಂಬ ||೧೨||

ಅಲ್ಲಿಗೈತರಲಾಗ ಮುಂದಕ್ಕೆ ಬರೆನೆಂದ
ಗರುಡಗಂಬಕೆ ಕಾಯನೊಪ್ಪಿಸುವೆ
ದೇವರ ಒಡನೆ ನಾನೊಪ್ಪಂದ ಮಾಡೆನು
ದೇವರಿಗಿದೊ ನಾನು ಮಣಿಯುವೆನು ||೧೩||

ಪಾಸಾಯ್ತು ಎಂದರೆ ಹಿರಿಯರು ಗುರುವಿಗೆ
ಸಕ್ಕರೆ ಹಂಚುವ ಮೊದಲೆ ನಮ್ಮ
ಹನುಮಗೆ ಭಕ್ತಿಯಿಂದರ್ಪಿಪೆ ನೈವೇದ್ಯ
ಈಗೇಕೆ ಅವನಲ್ಲಿ ಮಾತುಕತೆ ||೧೪||

ವೆಂಕಣ್ಣಗಾವಾಗ ಹದಿನಾಲ್ಕು ವರುಷವು
ಆದರು ಅವನದೆ ಒಂದು ದಾರಿ
ನೂರಾರು ಜನವಿರಲಿ ತನ್ನದೆ ಸಿದ್ಧಾಂತ
ನೀತೀಲಿ ರೀತೀಲಿ ಬಾಳಿನಲಿ ||೧೫||

ಮುಂದೆ ವೆಂಕಣ್ಣನು ಪ್ರೊಫೆಸರು ಆದಾಗ
ಸ್ವತಂತ್ರ ವಿಚಾರ ಜ್ಞಾನವನು
ಬಿತ್ತಿದ ಬರೆಸಿದ ನೂತನ ಸಾಹಿತ್ಯ
ಶಿಷ್ಯರಿಂದೆನ್ನಲು ಏನಚ್ಚರಿ ||೧೬||

ಗೋ. ಕೃ.

ದಿವಂಗತ ವೆಂಕಣ್ಣಯ್ಯನವರು

ಸುತ್ತ ಸೊಬಗಸು ಸೂಸಿ ಸೌರಭವ ಪಸರಿಸುತೆ
    ಬೀಗಿ ನಲಿನಲಿದರಳಿದೊಂದು ತಾವರೆಯಂತೆ
    ಅರಳಿದುದು ಜೀವಸಂ; ಮುಚ್ಚಿದುದು ಮೇಣಂತೆ.
ಸರಸಸಾಹಿತಿಯಾಗಿ ಕಲಿಸಿ ಸಾಹಿತ್ಯಮಂ
ರಸಿಕ ರಸಋಷಿಯಾಗಿ ತಿಳುಹಿ ಸೌಂದರ್ಯಮಂ
    ಸಂಸಾರಿಯಾಗಿ ಸಾಧಕನಾಗಿ ಬೋಧಿಸುತೆ
ಧರ್ಮ ಕರ್ಮ ಜ್ಞಾನ ತತ್ವೋಪದೇಶಮಂ
    ಕನ್ನಡದ ಗುರುಕುಲಕೆ ಆಚಾರ್ಯನೆಂದೆನಿಸಿ
ಮೆರೆದು ನೀಂ ಕಣ್ಣ ಮರೆಯಾಗುವರೆ, ಕಂದರಂ
    ಕನ್ನಡದ ಶಿಷ್ಯರಂ ತಬ್ಬಲಿಗಳೆಂದೆನಿಸಿ.
ಕುಲಪತಿಗಳಿಲ್ಲದೆಲೆವಸೆವೋಲೆ ಇದೊ ಶಾಲೆ
    ತನ್ನಾಲಯದ ತರಳ ತಬ್ಬಲಿಗಳಂ ಕೂಡಿ
    ದೇವನಲಿ ನಿಮ್ಮಾತ್ಮಕಮಳಶಾಂತಿಯ ಬೇಡಿ
ಚರಮಗೀತೆಯ ಹಾಡಿ ನಿಂತಿದೆ ಮೊಗಂ ಬಾಡಿ.

ಶ್ರೀ ಪರಮೇಶ್ವರ.

ಮಹಾಕವಿ ಪುರುಷ ಸರಸ್ವತಿ ಪ್ರಶಸ್ತಿ

ಎಂಬ

ಅಭಿನವ ಬೈರಿಗೇಂದ್ರ ಭಯಾನಕವು

[ಇದು ಮಹಾಕವಿ ಪುರುಷ ಸರಸ್ವತಿ ಜಯಂತಿಯ ಸಂಕ್ಷಿಪ್ತ ವರದಿ. ಕಾರಣಾಂತರಗಳಿಂದ ಇದನ್ನೇ '**ಪ್ರಶಸ್ತಿ**'ಯಾಗಿ ಪ್ರಕಟಿಸಿದ್ದೇವೆ. ಇದರ ಸಂಪೂರ್ಣ ವಿವರಗಳು ನಮ್ಮ ನಿಖಿಲ ಕರ್ಣಾಟಕದ ಏಕಮಾತ್ರ ತ್ರೈವಾರ ಪತ್ರಿಕೆಯಾದ '**ಹಾಳೂರಿನ ಹಳದಿಯ ಹಾಳೆ**'ಯಲ್ಲಿ ಈಗಾಗಲೆ ಪ್ರಕಟವಾಗಿವೆ.

೧. ಮೇಲ್ಕಂಡ ಜಯಂತಿಯು **ಐವತ್ತಾರೂ ಮುಕ್ಕಾಲು ಗಂಟೆ**ಗಳ ಕಾಲ ಅವ್ಯಾಹತವಾಗಿ ಅವ್ಯವಚ್ಛಿನ್ನವಾಗಿ ಅಖಂಡವಾಗಿ ಅಸ್ಖಲಿತವಾಗಿ ಅನಂತರವಾಗಿ ಸಕಲ ವೈಭವ ವಿಜೃಂಭಣೆಗಳೊಡನೆ ಸಾಂಗವಾಗಿ ಜಯಪ್ರದವೆನಿಸಿ ಮುಕ್ತಾಯದೊಡನೆ ಕೊನೆಗಂಡಿತು.

೨. ಆ ದಿನ ಸಭೆಯ ನಡುನಡುವೆ **ಶ್ರೀಯುತ 'ಅನಾಮಕ'ರವರು** ಹಸಿದವರಿಗೆ ಪಾನಕ ಪಣ್ಯಾರಗಳನ್ನೂ ನಿದ್ರೆಯಿಂದ ಬಾಧಿತರಾದವರಿಗೆ ದಿಂಬು ಸುಪ್ಪತ್ತಿಗೆಗಳನ್ನೂ ಒದಗಿಸಿ ಪುಣ್ಯವನ್ನು ಗಳಿಸಿಕೊಂಡರು.

೩. ಸಭೆಯು ಬರಖಾಸ್ತಾದಾಗ ಎದ್ದೇಳಲಾಗದವರಿಗೆ ಸ್ಟ್ರೆಚರುಗಳನ್ನು ಮುಫತ್ತಾಗಿ ಒದಗಿಸಿ ಅದಕ್ಕೆ ತಕ್ಕ ಸಿಬ್ಬಂದಿಯನ್ನೂ ಹೊಂದಿಸಿ **ಶ್ರೀಮಾನ್ 'ಅನಾಮಧೇಯ'ರವರು** ಮಾಡಿದ್ದ ಏರ್ಪಾಡು ಬಹು ಸಮರ್ಪಕವಾಗಿತ್ತು.

ಈ ಮೂರು ಸಂಗತಿಗಳು ಪತ್ರಿಕೆಯ ವರದಿಯಲ್ಲಿ ಬಿಟ್ಟುಹೋಗಿದ್ದುವು. ವಾಚಕರು ಈ ತಿದ್ದುಪಡಿಯನ್ನು ಸೇರಿಸಿಕೊಳ್ಳಬೇಕಾಗಿ ಸವಿನಯ ವಿನಂತಿ.]

ಸಂಪಾದಕ :

'ಗುಪ್ತ ಸಂಪಾದಕ ಪಂಚಕ'ದ ಆಪ್ತಕಾರ್ಯದರ್ಶಿಯಾದ

"ಕನ್ನಡಿ ಗರಡಿಯಾಳು"

'ಗುಪ್ತ ಸಂಪಾದಕ ಪಂಚಕ'ದ

ದ್ವಿತೀಯರ ಅದ್ವಿತೀಯ ಪ್ರಶಂಸಾ ಪದ್ಯಮಾಲಿಕೆ

[ಇದನ್ನು ದ್ವಿತೀಯರು ಅಪೂರ್ವವಾದ ಹಲವು ವೃತ್ತಬಂಧಗಳಲ್ಲಿ ಬಂಧಿಸಿರುತ್ತಾರೆ. ದ್ವಿತೀಯರು ಬಹು ಸಂಕೋಚಪ್ರವೃತ್ತರಾದ್ದರಿಂದ, ಅವರ ಮಿತ್ರರೊಬ್ಬರು ಅವುಗಳನ್ನು ಬಹು ಕರ್ಣಾನಂದಕರವಾಗಿ ಹಾಡಿದರು; ಇದನ್ನು ಎಡಗಡೆ ಅಚ್ಚುಮಾಡಿದೆ. ಈ ಕವಿತೆಯ ಭಾರಗೌರವವನ್ನು ಕವಿಗಿಂತ ಚೆನ್ನಾಗಿ ಅರಿತ ಇನ್ನೊಬ್ಬರು ಮಿತ್ರರು ಅದಕ್ಕೆ ಮಾಡಿದ ವ್ಯಾಖ್ಯಾನವನ್ನು ಬಲಗಡೆ ಅಚ್ಚುಮಾಡಿದೆ. ಈ ವಾಚನ ವ್ಯಾಖ್ಯಾನಗಳ ನಡುನಡುವೆ, ದ್ವಿತೀಯರು, ಆಯಾಸ ಪರಿಹಾರಾರ್ಥವಾಗಿ ಆಕಳ ಹಾಲನ್ನು ಆಸ್ವಾದಿಸಿ ತಲೆತೂಗುತ್ತಿದ್ದರು. ಇಲ್ಲಿ ಉಪಯೋಗಿಸಿರುವ ವೃತ್ತಗಳನ್ನು ಹಿಂದಿನ ಯಾವ ಕವಿಯೂ ಬಳಸಿದಂತೆ ಕಂಡುಬಂದಿಲ್ಲ.]

ಹ ! ಹ ! ಹ ! ಹ ! ‖೧‖	—: ಲಕ್ಷಣಂ :— ೧. ಉಕ್ತೆಯೆಂಬ ಛಂದದೊಳೊಂದಕ್ಕರಂ ಪಾದಮಾಗಿ ಪುಟ್ಟುವ ಎರಡು ವೃತ್ತಂಗಳೊಳಗೆ ಎರಡನೆಯದಾದ 'ನಾಗವರ್ಮಂ ಪೆಸರಿಡದ' ವೃತ್ತಂ. ೨. ಅದೇ ಛಂದದೊಳು ಅದೇ ಎರಡು ವೃತ್ತಂಗಳೊಳಗೆ ಮೊದಲನೆಯದಾದ 'ಶ್ರೀವೃತ್ತಂ.'
ಸೀ ಸೇ ಸೀ ಸೈ ‖೨‖	—: ತಾತ್ಪರ್ಯಂ :— ೧. ಪುರುಷ ಸರಸ್ವತಿಯ ಜಯಂತಿ ಬಗೆಗೆ ಕವಿ ತನ್ನ ಅಪರಿಮಿತವಾದ ಆನಂದವನ್ನು ಸೂಕ್ಷ್ಮವಾಗಿ ಸಂಕ್ಷೇಪವಾಗಿ ಸೂಚಿಸಿದ್ದಾನೆ. ೨. ಪುರುಷ ಸರಸ್ವತಿಯು ಅಪ್ರತಿಮನಾದ ಅಸಮಾನನಾದ ಕವಿಯೆಂಬುದು ಇಲ್ಲಿ ನಿರೂಪಿತವಾಗಿದೆ.

ಪುರುಷ ಸರಸ ತಿ ರಸಿ ಕರಿಗೆ ‖೩‖	—: ಲಕ್ಷಣಂ :— ೩. ಮಧ್ಯೆಯೆಂಬ ಛಂದದೊಳ್ ಮೂರಕ್ಕರಂ ಪಾದಮಾಗಿ ಪುಟ್ಟುವ ಎಂಟು ವೃತ್ತಂಗಳೊಳಗೆ ಐದನೆಯದಾದ 'ಪರಮ' ವೃತ್ತಂ. ೪. ಸುಪ್ರತಿಷ್ಠೆಯೆಂಬ ಛಂದದೊಳೆಯ್ದಕ್ಕರಂ ಪಾದಮಾಗಿ ಪುಟ್ಟುವ ಮೂವತ್ತೆರಡು ವೃತ್ತಂಗಳೊಳಗೆ ಒಂದಾದ 'ಸರಸಿರುಹ' ವೃತ್ತಂ.
ರಸಗವಳಂ ಗುಸುಗುಸಿನಾ ಪುಸಿನುಡಿಯು ಲ್ಲೊಸೆದೆನಿದಂ ‖೪‖	—: ತಾತ್ಪರ್ಯಂ :— ೩, ೪. ಪುರುಷ ಸರಸ್ವತಿ ರಸಿಕರಿಗೆ ರಸಗವಳ. (ಇದು) ಗುಸಿಗುಸಿನ ಪುಸಿನುಡಿಯಲ್ಲ. ಇದಂ ಒಸೆದೆ (=ಹೇಳಿದೆ)— ಎಂದು ಕವಿಯು ತಿಳಿಯಪಡಿಸುತ್ತಾನೆ.

'ಕರ್ಣನಾಟಕ ಪು
ರಾಣ' ವಾದಿಗಳ
ಜಾಣನಾ 'ಪುರುಷ
ವಾಣಿ'ನಾಮಕನ ||೫||

—: ಲಕ್ಷಣಂ :—

೫. ಗಾಯತ್ರಿಯೆಂಬ ಛಂದದೊಳಾರಕ್ಕರಂ ಪಾದಮಾಗಿ ಪುಟ್ಟುವ ಅರುವತ್ತುನಾಲ್ಕು ವೃತ್ತಂಗಳೊಳೊಂದಾದ 'ನಾಗವರ್ಮ ನಲ್ಲಿಲ್ಲದ' ವೃತ್ತಂ.

೬. ಮಧ್ಯೆಯೆಂಬ ಛಂದದೊಳ್ ಮೂರಕ್ಕರಂ ಪಾದಮಾಗಿ ಪುಟ್ಟುವ ಎಂಟು ವೃತ್ತಂಗಳೊಳಗೆ 'ಪ್ರವರ' ವೃತ್ತಂ.

—: ತಾತ್ಪರ್ಯಂ :—

ಕವಿ ಪುಂ
ಗವನಂ
ಜವನ್ನೈ
ಕವಳಂ ||೬||

೫, ೬. 'ಕರ್ಣನಾಟಕ ಪುರಾಣ' ಆದಿಗಳನ್ನು (ಬರೆದ) ಜಾಣನಾ(ದ) ಪುರುಷವಾಣಿ (=ಸರಸ್ವತಿ) ನಾಮಕನ ಕವಿಪುಂಗವನಂ ಜವ (=ಯಮ)ನ್ನೈ ಕವಳಂ!

ಮಹಾಕವಿಯು ಸ್ವರ್ಗಸ್ಥನಾದುದರಿಂದುದ್ಭವಿಸಿದ ಅದ್ಭುತ ರಸ!

—: ಲಕ್ಷಣಂ :—

ವರ ಕವಿ
ಸುರತರು
ಚಿರಮಿಹು
ದುರಿಯುತ ||೭||

೭. ಪ್ರತಿಷ್ಠೆಯೆಂಬ ಛಂದದೊಳ್ ನಾಲ್ಕಕ್ಕರಂ ಪಾದಮಾಗಿ ಪುಟ್ಟುವ ಪದಿನಾರು ವೃತ್ತಂಗಳೊಳಗೆ 'ಸುರತರು' ವೃತ್ತಂ.

೮. ಅತ್ಯುಕ್ತೆಯೆಂಬ ಛಂದದೊಳೆರಡಕ್ಕರಂ ಪಾದಮಾಗಿ ಪುಟ್ಟುವ ನಾಲ್ಕು ವೃತ್ತಂಗಳೊಳಗೆ 'ಗಿರಿಧರ' ವೃತ್ತಂ.

—: ತಾತ್ಪರ್ಯಂ :—

ಕವಿ
ಕಿವಿ
ನವ
ಸವಿ ||೮||

೭, ೮. (ಅಂದಿನ) ವರಕವಿ (ಇಂದಿಗೂ) ಸುರತರು (ವಿನಂತೆ) ಉರಿಯುತ ಚಿರಮಿಹುದು. (ಆ ಅಂದಿನ) ಕವಿ (ಈ ಇಂದಿನ) ಕಿವಿಗೆ ನವ ಸವಿ(ಯಾಗಿದ್ದಾನೆ).

—: ಲಕ್ಷಣಂ :—

ಸಿಮ್ಮ
ಬೊಮ್ಮ
ನಮ್ಮ
ಹೆಮ್ಮೆ ||೯||

೯. ಅತ್ಯುಕ್ತೆಯೆಂಬ ಛಂದದೊಳ್ 'ನಾಗವರ್ಮಂ ಕುಡದ' ವೃತ್ತಂ.

೧೦. ಮೇಲೆ ಎರಡನೆಯ ವೃತ್ತ ನೋಡಿ.

—: ತಾತ್ಪರ್ಯಂ :—

೯. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' ಎಂಬಂತೆ 'ಸಿಂಹ' ಎಂಬುದರ ಅರ್ಧಾಂಗ 'ಪುರುಷ'. 'ಬೊಮ್ಮ'ನ ಅರ್ಧಾಂಗಿ 'ಸರಸ್ವತಿ'. ಅರ್ಥಾತ್, 'ಸಿಮ್ಮ ಬೊಮ್ಮ' ಎಂದರೆ 'ಪುರುಷ ಸರಸ್ವತಿ' ನಮ್ಮ ಹೆಮ್ಮೆ!

ಜೈ
ಜೈ
ಜೈ
ಜೈ ||೧೦||

೧೦. (ಪುರುಷ ಸರಸ್ವತಿಗೆ) ಜೈ! (ಜಯಂತಿಗೆ) ಜೈ! (ನನಗೆ) ಜೈ! (ಲೋಕಕ್ಕೆ) ಜೈ!

ಅಭಿನವಾರ್ಧ ಪುರುಷ ಸರಸ್ವತಿ*

ಭಾಮಿನೀರಮಾರಮಣ ಭಾಮಿನೀಭಾಗ್ಯವಿಧಾತಾ

ಬೈಲಿಂಗ್ಯುಅಲ್ ಬಿಗ್ ಭಾರತಿ † ಕನ್ನಡಾಂಗ್ಲೋಭಯ ಭಾಷಾಚಕ್ರವರ್ತಿ

ಇತ್ಯಾದ್ಯನೇಕ ಬಿರುದಾಂಕಿತರಾದ

'ಗುಪ್ತ ಸಂಪಾದಕ ಪಂಚಕ'ದ

ಮಧ್ಯಮರ "ಮಹಾಕ್ಷುದ್ರಾರ್ಧ ಶತಕಾರ್ಧ"ವನ್ನೊಳಕೊಂಡ ಪುರುಷ ಸರಸ್ವತಿ ಜಯಂತಿಯ ಶಾಸನ ಪದ್ಯವಲ್ಲರಿ

ಸ್ವಸ್ತಿ ಶ್ರೀ ವರದಾಭಯ |
ಹಸ್ತರ್ ಹರಿಯಜ ಪುರಾರಿಗಳ್ ದಯೆಗೆಯ್ಯಲ್ ||
ಪುಸ್ತಕ ಗಗನಕ್ಕಾದಿ ಗ |
ಭಸ್ತಿಯ ನೆರೆ ಪೊಗಳಿ ಪಾಡಿದಿನ್ಸ್ಕ್ರಿಪ್ಷನಿದಂ ||೧||

ಬರೆದೆಂ ಪ್ರಿಂಟ್ಹಾಕಿಸಿದೆಂ |
ವೆರಿ ಬೆಸ್ಟ್ ಎಲ್ಬಿಗಳ ನೂರತೊಂಬತ್ತುಗಳಂ ||
ಮೀರಿದ ಫೆದರ್ವೆಯಿಟಿನ ನಿ |
ಸ್ಸಾರದ ಪೇಪರಿನಲಿಂಡೆಲಿಬಲಿಂಕಿಂದಂ ||೨||

ಸ್ಟೋನ್ ಮೆಟಲಲ್ಲೀ ಶಾಸನ |
ಪೇನಲ್ ಷೇಪಿನಲಿ ಕುಯ್ದ ಡೆಮ್ಮೈ ಪೇಪರ್ ||
ಸ್ವಾನ್ಪೆನ್ನಿನ ಜೊತೆಯೊಳಿದ |
ನ್ನಿಡಿಸ್ಟ್ರಕ್ಟಿಬಲು ಎಂದು ಸಪ್ಲೈ ಗೈದರ್ ||೩||

ಸ್ವಸ್ತಿ. ಶ್ರೀ ವರದಾಭಯಹಸ್ತರ್ ಹರಿಯಜ ಪುರಾರಿಗಳ್ ದಯೆಗೈಯಲ್ ಪುಸ್ತಕ ಗಗನಕ್ಕೆ ಆದಿ ಗಭಸ್ತಿಯ(ನ್ನು) ನೆರೆ ಪೊಗಳಿ ಪಾಡಿದ inscriptionಇದಂ ||೧||

lbಗಳ 190ಗಳಂ ಮೀರಿದ very best feather-weightಇನ ನಿಸ್ಸಾರದ paper ಇನಲಿ indelible inkಇಂದಂ ಬರೆದೆಂ, printಹಾಕಿಸಿದೆಂ ||೨||

ಈ ಶಾಸನ stone, metalಅಲ್ಲ; panel shapeಇನಲಿ ಕುಯ್ದ Demy paper. ಇದಂ Swan Penಇನ ಜೊತೆಯೊಳ್ indestructibleಉ ಎಂದು supply ಗೈದರ್ ||೩||

---

* ಪುರುಷ ಸರಸ್ವತಿ 50 ಪದ್ಯ ಬರೆಯುತ್ತಿದ್ದ. ಇವನು 25 ಬರೆದಿದ್ದಾನೆ. ∴ 'ಅರ್ಧ'.

† Bi-lingual Big Bharati.

I

೧. ಓ ಟ್ರಿನಿಟಿ ಹರಿಯಜಹರರ್ಕಳೆ
ಓ ಟ್ರಿನಿಟಿ ಹರಿ ಹರರಜರ್ಕಳೆ
ಓ ಟ್ರಿನಿಟಿ ಹರ ಹರಿಯಜರ್ಕಳೆ ಅಜನೆ ಹರಿಹರರೆ|
ಓ ಟ್ರಿನಿಟಿ ಅಜ ಹರ ಹರಿಗಳೇ
ಓ ಟ್ರಿನಿಟಿ ಹರ ಅಜ ಹರಿಗಳೇ
ಪೇಟ್ರನುಗಳ್ಳೆ ನೀವು ನಮ್ಮಯ ಪುರುಷ ಸರಸತಿಗೆ ||

೨. ಮೈ ಡಿಯರ್ ಮೂದೇವರೇ ನ
ಮ್ಮೈಡಿಯಲ್ ಕವಿಗಗದಿ ಬ್ರಿಲಿಯಂ
ಟೈಡಿಯಾಸ್ಗಳನೆಕ್ಸಿಕ್ಯೂಟಿಂಗ್ ಪವರಿನೊಡಗೂಡಿ |
ನೀಡಿ ನಡಸಿದವೋಲೆನಗು ನೀವ್
ಗೈಡು ಗೈವಿರಿಯಾದರಿದಿಗೋ
ಫೈಡು ಫೈಡೆಂದಿಕ್ಕುವೆನು ಕವಿತಾಲಸತ್ಫಲಕೆ ||

೩. ಕಳ್ಟು ಕಾವ್ಯದ ಮಸಿಯ ಕುಡಿಕೆಯ
ಟಿಳ್ಟು ಮಾಡುವ ಮೊದಲು ಹಾವಿನ
ಬೆಳ್ಟು ಹಾಕಿದ ಗಣಪನನು ಹಾಡುವುದು ನಮ್ಮವರ |
ಫಾಳ್ಟು ಮೀರಿದರಿದನು ಸಿವಿಯರ್
ಜೋಳ್ಟು ತಪ್ಪದು ಸತ್ಯ ಥಂಡರ್
ಬೋಳ್ಟು ಬಿದ್ದಂತೆಂದು ದೇಫ಼ೋರ್ ಗಣಪತಿಯ ನೆನೆವೆ ||

ಓ Trinity ಹರಿ ಅಜ ಹರರ್ಕಳೆ (ಎಂದು ಮೊದಲಾಗಿ ನೆನೆಯಬಹುದಾದ ಆರು ವಿಧಗಳಿಂದಲೂ ಆ ತ್ರಿಮೂರ್ತಿಗಳನ್ನು ನೆನೆದು*), ನೀವು ನಮ್ಮಯ ಪುರುಷ ಸರಸತಿಗೆ Patronಉಗಳ್ಳೆ ! || 1 || My dear ಮೂದೇವರೇ ! ನಮ್ಮ ideal ಕವಿಗೆ ಅಗದಿ (= ಬಹಳ) brilliant ideasಗಳನು executing powerಇನ ಒಡಗೂಡಿ ನೀಡಿ ನಡಸಿದವೋಲು ಎನಗು ನೀವ್ guideಉ ಗೈವಿರಿಯಾದರೆ ಇದಿಗೋ ! ಕವಿತಾಲಸತ್ಫಲಕೆ ಫೈಡು ಫೈಡೆಂದು ಇಕ್ಕುವೆನು || 2 || ಕಾವ್ಯದ ಮಸಿಯ ಕುಡಿಕೆಯ tiltಉ ಮಾಡುವ ಮೊದಲು ಹಾವಿನ beltಉ ಹಾಕಿದ ಗಣಪನನು ಹಾಡುವುದು ನಮ್ಮವರ cultಉ. ಇದನು ಮೀರಿದರೆ faultಉ; (ಮೀರಿದರೆ) thunder boltಉ ಬಿದ್ದಂತೆ severe joltಉ ತಪ್ಪದು, ಸತ್ಯ—ಎಂದು, therefore ಗಣಪತಿಯ ನೆನೆವೆ || 3 ||

---

* ಅಜಹರಹರಿ ಹರಅಜಹರಿ ಹರಿಹರಅಜ
ಅಜಹರಿಹರ ಹರಹರಿಅಜ ಹರಿಅಜಹರ.

೪. ಕಂಟಕಕೆ ಕಡು ಡೈನಮೈಟ್ ಟೀ
ಯೆಂಟಿ ರೋಗೆಲಿಫೆಂಟು ಹೆಡ್ಡಿನ
ವೊಂಟಿ ಟಸ್ಕಿನ ಪಾಟ್ಬೆಲೀಡ್ ರ್‍ಯಾಟ್‌ರೈಡರೋ ಬೆನಕ |
ಕಂಟ್ರಿ ಕರ್ಣಾಟಕದ ಕಲ್ಚ
ರ್ಜೆಂಟ್ರಿಯೆದುರಿನಲಿಡುವ ನನ್ನೀ
ಎಂಟ್ರಿಯಂ ಸ್ಮೂತಾಗಿ ನಡೆಸಲು ಹೆಲ್ಪಸಿಸ್ಟಯ್ಯ ||

೫. ಸ್ಯಾಲ್ಯುಟೇಷನ್ಸ್ ವಾಣಿ ನಿನ್ನಯ
ವ್ಯಾಲ್ಯುಬಲ್ ಕೋ—ಆಪ ನೆಚ್ಚಿಯೆ
ವಾಲ್ಯುಬಲ್ ನಾನಪ್ಪೆನೆಂಬೀಯಾಂಬಿಷನ್ನೆನಗೆ ||
ಸ್ಟಿಲ್ಯು ಮೇ ನಾಟ್ ಕೇರ್‍ಟು ಏಡ್ಮೀ
ಸಿಲ್ಲಿ ಫಿಯರಿದು—ಅಲ್ಲ ವರದೇ
ವಿಲ್ಯು ಹೆಲ್ಪ್‌ಮೀ ಯುವಿಲ್ ಥ್ಯಾಂಕ್ಯು ಫಾರ್ದಿ ಅಷ್ಯೂರೆನ್ಸ್ ||

II

೧. ಲಾಂಗ್ಬಿಫೋರ್ ಕವಿರಾಜಮಾರ್ಗಂ—
ಸಾಂಗ್ಸು ಬರೆಯುವ ಜನಕೆ ರೈಟ್ಮೇಣ್
ರಾಂಗ್ಸುಗಳ ತಿಳುಹಿಸುವ ವೆರಿಫಸ್ಟ್ ಬುಕ್ಕು—ವಾಸ್ಥಾಟಾಫ್ |
ನಿಂಗಸಿರ್‍ಯಾಣಾದಿ ಕಾವ್ಯವಿ
ಹಂಗಮಂಗಳನಾದಿ ಕಾವ್ಯ ನ
ಭೋಂಗಣದೊಳಾಡಿಸಿದ ಸರಸತಿ ಪುರುಷನಾದಿ ಕವಿ ||

ಕಂಟಕಕೆ ಕಡು dynamite! T. N. T.!* Rogue elephantಉ headಇನ ಒಂಟಿ tuskಇನ pot-bellied rat-rider! ಓ ಬೆನಕ! country ಕರ್ಣಾಟಕದ cultured gentryಯ ಎದುರಿನಲಿ ಇಡುವ ನನ್ನೀ entryಯಂ smoothಆಗಿ ನಡಿಸಲು help assist ಅಯ್ಯ || 4 || Salutations, ವಾಣಿ! ನಿನ್ನಯ valuable co-op(eration)ಅನ್ನು ನೆಚ್ಚಿಯೆ ನಾನು voluble ಅಪ್ಪೆನು ಎಂಬ ಈ ambition ಎನಗೆ. 'Still, you may not care to aid me.' ಇದು silly fear; ಅಲ್ಲ, ವರದೆ? Will you help me? You will! Thank you for the assurance. || 5 || Long before ಕವಿರಾಜಮಾರ್ಗಂ—songsಉ ಬರೆಯುವ ಜನಕೆ right ಮೇಣ್ wrongsಉಗಳ ತಿಳುಹಿಸುವ very first bookಉ—was thought of, ಆದಿಕವಿ ಪುರುಷಸರಸ್ವತಿ ಆದಿಕಾವ್ಯ ನಭೋಂಗಣದೊಳು ನಿಂಗಸಿರ್‍ಯಾಣಾದಿ ಕಾವ್ಯವಿಹಂಗ ಮಂಗಳನು ಆಡಿಸಿದನು ||೧|| *Tri-Nitro-Toulene: deadlier than dynamite, an explosive.

೨. ಹೇ ಹಿಯರ್ದಿಸ್ಸೆನ್ನುತೂಹಾ
ಪೋಹಗಳ ಬಲು ಕಾಂಟ್ರೊವರ್ಸಿಯ
ಮೋಹಮೋಹಿತರಿಗೆ ಕ. ನಾ. ಪು.ವ ಸೊರೆದು ದೆನ್ನಾಫ್ಟರ್ |
ಹಾ. ಹ., ಅಥವಾ ನಿಂ. ನಿ., ಅಥವಾ
ವೆಂ. ಹ., ಛಿಃ. ರಾ., ಶಾ. ಸ್ವ., ದ. ಕು. ಚ., ಗ
ಳೋಹೊ ಸಂ. ಸಂ. ಸಂ.,ವು ಭ. ಬೃ. ಮ.,ವು ಬೈ. ಭ.,ವಾದಿಗಳ ||

೩. ಈಸ್ಥಿದನುಪಮುವೆಂಬವೊಲ್ಕಂ
ಪೋಸ್ಲುಗೈದನು ನ್ಯಾಚುರಲ್ ನೋ
ಪೋಸ್ಸಿದೆಂಬಂತವುಗಳನು ಕಂಟಿನ್ಯುಅಸ್ಸಾಗಿ |
ಫೇಸಿನಲಿ ಮುಮ್ಮೇಲು ತಾನಾ
ನೋಸು ನಿಲುವಂತೈಸಲೇ ಸ
ರ್ವೀಸು ನಮ್ಮಯ ಪೊಯಟಿನದು ಮಿಕ್ಕಿತರ ಕವಿಗಳಲಿ ||

೪. ಡಸ್ಟಿನಲಿ ಗೋಲ್ಡ್‌ಡಸ್ಟು ಮೌಂಟೆವ
ರೆಸ್ಟು ಗಿರಿಗಳ ಗಡಣದಲಿ ಫಾ
ರೆಸ್ಟು ಬೀಸ್ಟುಗಳೊಳಗೆ ಲಯನೆಂತಪ್ರತಿಮವಂತೆ |
ವೇಸ್ಟು ಬರಿಮಾತೇಕೆಯೀ ಫೋರ್
ಮೋಸ್ಟು ಪೊಯಟನು ನೆನೆಯೆ ತಾನೆ
ಕ್ಸಾಸ್ಟು ಕವಿಗಳ ಲಿಸ್ಟಿನೊಳಗೊಬ್ಬೊಂಟಿ ನರವಾಣಿ ||

'Hey! Hear this!'—ಎನ್ನುತ ಊಹಾಪೋಹಗಳ ಬಲು controversyಯ ಮೋಹ ಮೋಹಿತರಿಗೆ ಕರ್ಣನಾಟಕ ಪುರಾಣವನ್ನು ಒರೆದು, then—after ಹಾರ್ಮೋನಿಯಂ ಹರಣ ಅಥವಾ ನಿಂಗನಿರ್ಯಾಣ ಅಥವಾ ವೆಂಕಟೇಶ ಹಗರಣ, ಛಿಃ ರಾಮಚರಿತ, ಶಾರದಾ ಸ್ವಯಂವರ, ದಶಕಾರ್ಥ ಕುಮಾರ ಚರಿತಗಳು, ಓಹೋ! ಸಂದೇಹ ಸಂದೋಹ ಸಂದೇಶವು, ಭಯಂಕರ ಬೃಹದ್ಬೈರಿಗೇಶ್ವರ ಮಹಾಪುರಾಣವು, ಬೈರಿಗೇಂದ್ರ ಭಯಾನಕವು ಆದಿಗಳನ್ನು ||೨|| ಇದು easeಉ ಅನುಪಮವು ಎಂಬವೋಲ್, 'ಇದು natural, no pose' ಎಂಬಂತೆ ಅವುಗಳನು continuous ಆಗಿ composeಉ ಗೈದನು. Faceಇನಲಿ ಆ noseಉ ತಾನು ಮುಮ್ಮೇಲು ನಿಲುವಂತೆ ಐಸಲೇ ಮಿಕ್ಕಿತರ ಕವಿಗಳಲಿ ನಮ್ಮಯ poetಇನದು serviceಉ ||೩|| Dustಇನಲಿ gold-dustಉ! ಗಿರಿಗಳ ಗಡಣದಲಿ Mount Everestಉ! Forestಉ beastಉಗಳೊಳಗೆ Lionಉ ಎಂತು ಅಪ್ರತಿಮವು ಅಂತೆ . . . Wasteಉ! ಬರಿಮಾತೇಕೆ! ಈ fore-mostಉ poetಅನು ನೆನೆಯೆ ತಾನು exhaustಉ! ಕವಿಗಳ listಇನಲಿ ನರವಾಣಿ (=ಪುರುಷ ಸರಸ್ವತಿ) ಒಬ್ಬೊಂಟಿ! ||೪||

೫. ಪಾಸ್ಟೊಳಿರಲಿಲ್ಲ ಪ್ರಸೆಂಟಿನ
ಪೋಸ್ಟುಡೇಟಿನ ಗರ್ಭದೊಳಗ
ಕ್ಯಾಕಸ್ಟು ಮಾಡಲು ಪುರುಷ ಸರಸತಿಯನದರಿಸ್ನಿಲ್ಲ।
ಲಾಸ್ಟು ಲಾಸ್ಟೋ ಲಾಸ್ಟು ವರಕವಿ
ಈಸ್ಟು ವೆಸ್ಟೆಲ್ಲೆಡೆಯೊಳಟ್‌ವನ್ಸ್
ಹೇಸ್ಟಿನಿಂದೀ ಕವಿಜಯಂತಿಯನೆಸಗಲಿಟ್ಸ್ ವರ್ತಿಟ್ ॥

III

೧. ಆಡುವುದು ಕಡುಸುಲಭವೆದ್ದು ಪ್ರೊ
ಸೀಡು ಗೈವುದೆ ಕಷ್ಟ ನುಡಿದುದ
ಡೀಡುಗಳ ಷೇಪಿನಲಿ ತೋರುವ ನೀಡಿನಿಂಪಾರ್ಟೆನ್ಸ್।
ಗೋಡುಮಾಡಲು ನಮ್ಮನಿದೆ ಫಸ್ಟ್
ಸೀಡು ತಾನಕ್ಕೆಂದೆವೈ ಕೇಳ್
ಏ. ಡಿ. ಯೈನೂರೆಂಬತೊಂಬತರೆಣಿಕೆಯಿಯರಿನಲಿ* ॥

೨. ಮೇ ಮೊದಲ ಮಂಡೇ ದಿ ಥರ್ಡಿನ
ಸೋಮವಾರದ ದಿವಸ ಬರ್ನಿಂಗ್
ಕಾಮೆಟುದಯಿಸಿದನಲೆ ತಾವರೆಪುರದ ಹಾರ್ಟಿನಲಿ।
ನೇಮಿನಲಿ ತಾ ಪುರಿಸ ಸರಸತಿ
ಯಾ ಮಹಾಕವಿಯತಿ ಯುನಿಕೆಸ್ಟ್
ಥೀಮುಗಳ ವರ್ಕೌಟು ಮಾಡಿದನವನ ಮೆಮರಿಯನು ॥

Past ಒಳಿರಲಿಲ್ಲ; Presentಇನ postಉ dateಇನ ಗರ್ಭದೊಳಗೆ accostಉ ಮಾಡಲು ಪುರುಷ ಸರಸತಿ another ಇನ್ನಿಲ್ಲ. ವರಕವಿ Lostಉ, Lostಓ Lostಉ! Eastಉ west ಎಲ್ಲೆಡೆಯೊಳ್ at once, hasteಇನಿಂದ ಈ ಕವಿಜಯಂತಿಯನು ಎಸಗಲು, it's worth it! ॥೫॥ ಆಡುವುದು ಕಡು ಸುಲಭ; ಎದ್ದು proceedಉ ಗೈವುದೆ ಕಷ್ಟ. ನುಡಿದುದ deedಉಗಳ shapeಇನಲಿ ತೋರುವ needಇನ importance ನಮ್ಮನು goodಉ ಮಾಡಲು, ಇದೆ ತಾನು first seedಉ ಅಕ್ಕೆ ಎಂದೆವೈ. ಕೇಳ್ A. D. ೫೮೯ರ ಎಣಿಕೆಯ yearಇನಲಿ ॥೧॥ May ಮೊದಲ Monday the thirdಇನ ಸೋಮವಾರದ ದಿವಸ ತಾವರೆಪುರದ heartಇನಲಿ burning comet ಉದಯಿಸಿದನಲೆ! ತಾನು nameಇನಲಿ ಪುರಿಸ ಸರಸತಿ. ಆ ಮಹಾಕವಿ ಅತಿ uniquest themeಉಗಳ work-outಉ ಮಾಡಿದನು. ಅವನ memoryಯನು ॥೨॥

---

* ಕ. ನಾ. ಪು.ದ ೫ನೆಯ ಪದ್ಯದ ಪ್ರಕಾರ ಕವಿಯ ಕಾಲ ಶಕ ೫೧೧, ಎಂದರೆ ಏ.ಡಿ. ೫೮೯. ಇಲ್ಲಿಂದ ಮುಂದಿನ ಐದು ಪದ್ಯಗಳು 'ಕುಳಕ.'

೩. ಸ್ಯೂಟಬಲ್ ಫಾರ್ಮಿನಲಿ ಪೋಟಾ
ಪೋಟಿಯಿಂ ಗ್ರಾಂಡಾಗಿಯೆ ಸೆಲಿ
ಬ್ರೇಟುಮಾಡಲಿಬೇಕು ಸೇಕ್ರೆಡ್ ಡ್ಯೂಟಿಯೆಂದೆಣಿಸಿ |
ಥೇಟು ಹದಿನಾರಾಣೆ ಪೇಡ್ಡೆಲಿ
ಗೇಟು ರಿಸರ್ವ್ಡ್ ಕಾಂಪ್ಲಿಮೆಂಟರಿ
ಸೀಟು ಬಿಟ್ಟಿಟಿಕೀಟು ತುಂಬಿದ ಗ್ಯಾದರಿಂಗಿನಲಿ ||

೪. ಟೆಸ್ಟಿಗಾಗಿ ಕವೀಂದ್ರನಪ್ಪರ್
ಬಸ್ಟಿನೆನ್ಲಾರ್ಜ್ಮೆಂಟುಗಳ ವೆರಿ
ಬೆಸ್ಟನನ್ವೇಲ್ಮಾಡಿ ತದನಂತರದೊಳಾ ಬಳಿಕ |
ಕಾಸ್ಟುಗಳ ಲೆಕ್ಕಿಸದೆ ಪಬ್ಲಿಕ್
ಟೇಸ್ಟಿಗನುಗುಣವಾಗಿ ಮಚ್‌ಮೋರ್
ಮೋಸ್ಟಿನ ಕ್ರಮದಿಂದೆ ಫುಲ್‌ಲೆಂಗ್ತ್ ಸೈಸು ಬರುವನಕ ||

೫. ಹಂತಹಂತಗಳಾಗಿ ಕವಿಯ ಜ
ಯಂತಿಯ ಕ್ಲೈಮ್ಯಾಕ್ಸಿಗೇರಿ ಸ
ಮಂತು ಸೇವೆಯ ಸಲಿಸುವೆಂಥೂಸಿಯಸಮನು ಚಿವುಟಿ |
ಮಂತ್ಲಿಯಿನ್ಸ್ಟಾಲ್ಮೆಂಟ್ಸುಗಳ ಬಿಡಿ
ಕಂತುಗಳನಟ್ವನ್ಸೆ ತಾ ತೆ
ತ್ತೆಂತೆ ನಡೆಯಿಸುವಿದಕೆ ತಿಳಿಸುವೆ ಕಥನ ಕಾರಣವ ||

Suitable formಇನಲಿ ಪೋಟಾಪೋಟಿಯಿಂ grandಆಗಿಯೆ celebrateಉ ಮಾಡಲಿ ಬೇಕು, sacred dutyಎಂದೆಣಿಸಿ; ಥೇಟು ಹದಿನಾರಾಣೆ paid delegateಉ, reserved complementary seatಉ, ಬಿಟ್ಟಿಟಿಕೀಟು ತುಂಬಿದ gatheringಇನಲಿ ||೩||

Testಇಗಾಗಿ ಕವೀಂದ್ರನ upper bustಇನ enlargementಉಗಳ very bestಅನು unveil ಮಾಡಿ ತದನಂತರದೊಳಾ ಬಳಿಕ, costಉಗಳ ಲೆಕ್ಕಿಸದೆ, public tasteಇಗನುಗುಣವಾಗಿ much-more-mostಇನ ಕ್ರಮದಿಂದೆ full-length sizeಉ ಬರುವನಕ ||೪||

ಹಂತಹಂತಗಳಾಗಿ ಕವಿಯ ಜಯಂತಿಯ climaxಇಗೆ ಏರಿ ಸಮಂತು ಸೇವೆಯ ಸಲಿಸುವ enthusiasmಅನು ಚಿವುಟಿ, monthly instalmentsಉಗಳ ಬಿಡಿ ಕಂತುಗಳನು at onceಉ ತೆತ್ತೆಂತೆ ನಡೆಯಿಸುವ ಇದಕೆ ಕಥನ ಕಾರಣವ ತಿಳಿಸುವೆನು ||೫||

IV

೧. ರಾಜರತ್ನಂ, ಜೀ.ಪಿ. ಯೆಂಬಿಂ
ಗೇಜಿನವರೆಂಟತ್ತು ಕನ್ನಡ
ಪೇಜಿನೊಂದೆರಡೇನೊ ಪದ್ಯದ ಬುಕ್ಕುಗಳ ಬರೆದು |
ಪೂಜೆ ತನಗಿಸಿಸಿಲ್ಲವೆಂದೆ
ನ್ರೇಜುಗೊಂಡಿಹರಂತೆ ಮೇಣ್ತ
ದ್ರೇಜಿನಿಂದಲೆ ನ್ಯಾಸ್ಟಿಯಾಗಿಹರಂತೆ ಪೂರೋಳ್ಡ್ ಛ್ಯಾಪ್ ||

೨. ನಿರ್ನೆರಂ ನಿಲುವಂಥ ಫೇಮ
ನ್ನರ್ನುಮಾಡಲು ತನ್ನ ತಾನೇ
ಛರ್ನುಮಾಡಿ ಘನಾಮೃತವ ಪಡೆಯಲಿಕೆ ಬೇಕೆಂದು |
ಲರ್ನುಮಾಡದೆ ಚಿಲ್ಲಪಲ್ಲರೆ
ಜರ್ನಲುಗಳಿಗೆ ಗೀಚಿ ಬರಿ ಹಾರ್ಟ್
ಬರ್ನಿನಿಂದೋಳ್ಡ್ ಪುರುಷ ಸರಸತಿ ಬರೆದ ವರ್ಕ್ಸುಗಳ ||

೩. ಫ್ಯಾನ್ಮೆಯಿಲ ನೆರೆನೋಡಿ ಆಥ
ರ್ನಾನೆ ಬರೆದವನೆಲ್ಲ ಜೋಕಿಗ
ನಾನಿಮಸ್ಸಾಗೆನಲು ವೆರಿಬ್ಯಾಡ್ ಡರ್ಟಿ ಷೇಂಫುಲಲಾ |
ಏನ ಹೇಳಿದರೇನು ಬಹಳ ಇ
ನೇನು ನಮ್ಮವರಿದಕೆ ಈ ಮ್ಯುಂ
ಡೇನು ಮ್ಯಾಟರಿಗಿನಿತು ಫಸ್ಸೇಕೆಂಬರೈ ಬರಿದೆ ||

Rajaratnam, G. P. ಎಂಬ young-ageಇನವರು 8-10 ಕನ್ನಡ pageಇನ 1-2 ಏನೋ ಪದ್ಯದ bookಉಗಳ ಬರೆದು, ತನಗೆ ಇನಿಸೂ ಪೂಜೆ ಇಲ್ಲವೆಂದು enrageಉಗೊಂಡಿಹರಂತೆ; ಮೇಣ್ ತತ್ (=ಆ) rageಇನಿಂದಲೆ nastyಯಾಗಿಹರಂತೆ. Poor old chap! ||೧||

ನಿರ್ನೆರಂ (=ಸದಾ) ನಿಲುವಂಥ fameಅನ್ನು earnಉ ಮಾಡಲು ತನ್ನ ತಾನೇ churnಉ ಮಾಡಿ ಘನಾಮೃತವ ಪಡೆಯಲಿಕೆ ಬೇಕೆಂದು learnಉ ಮಾಡದೆ, ಚಿಲ್ಲಪಲ್ಲರೆ journalಉಗಳಿಗೆ ಗೀಚಿ, ಬರಿ heart-burnಇನಿಂದ old ಪುರುಷ ಸರಸತಿ ಬರೆದ worksಉಗಳ ||೨||

Fan-mailಅ ನೆರೆ ನೋಡಿ, 'ನಾನೆ Author, jokeಇಗೆ anonymousಆಗಿ ಎಲ್ಲ ಬರೆದವನು' ಎನಲು—very bad, dirty, shamefulಅಲಾ! ಏನ ಹೇಳಿದರೇನು? ನಮ್ಮವರು ಬಹಳ inaneಉ. 'ಇದಕೆ, ಈ mundaneಉ matterಇಗೆ ಇನಿತು fuss ಏಕೆ ಬರಿದೆ!' ಎಂಬರೈ ||೩||

೪. ಪಾರ್ಟಿ ಡೆಡ್ಡ್ನಿಜವಾದರಾ ಗ್ರೇ
ಟಾರ್ಟು ಡೆಡ್ಡೇ ನೋನೊ ಐ ಎ
ಕ್ಸಾರ್ಟ್ಯು ಛೇರ್ಮನ್ ಲೇಡಿಸ್ ಎಂಡ್ ದೋಸ್ಸಾಫ್ದಿ ಅಪೊಸಿಟ್ಸೆಕ್ಸ್ |
ಹಾರ್ಟಿಲಾಫಿನ ಹೆಸರನಿಂತಿಂ
ಪೋರ್ಟುಗೊಳ್ಳುವ ಡರ್ಟಿ ಹಾರ್ಟ್ಲೆ
ಸ್ಸಾರ್ಟುಗಳು ಸೈರಿಸುವ ಪಾತಕವಿದುವೆ ಇಮ್ಮೆನ್ಸ್ ಸಿನ್ ||

೫. ವೇಕಪೆಂದೆನಿತೂಳ್ದರೇನೀ
ಲೋಕವಿಂಡಿಫರೆಂಟು ಯಾರೇ
ನೇಕೆಯೆಲ್ಲಿಗೆ ಯೆತ್ತಣಿಂದಾವಾಗವದಕೇಕೆ |
ರೇಕುಗಳ ರೋಗರಿಯನೆದುರಿಸು
ವಾ ಕರೇಜನು ಸತ್ಯಧರ್ಮದ
ಸೇಕಿಗೋಸುಗ ತಳೆದ ಹಾಳೂರವರೆ ಧೀರರಲ ||

V

೧. ವೆರಿ ಹಿರೋಯಿಕ್ಕೆಂಬೆನ್ಸೈ ಈ
ಸಿರಿ ಸನಾತನ ಸಕಲ ಸಾರಾ
ಸಾರ ಸರ್ವಾಚಾರ ಸಂರಕ್ಷಣೆಯ ಭಾರವನು |
ನಿರುತ ಶಿರಸಾವಹಿಸಿ ನಡೆಸುವು
ದರಿದಿದಿಸ್ಕಂಪೇರಬಲ್ಹಾ
ಳೂರ ಕಲಿಗಳ ಹಳೆಯ ಹುಲಿಗಳ ಬಳಗದವರೆಸಕ ||

Party dead ನಿಜ. ಆದರಾ great artಉ deadಏ? No, no. I exhort you, Chairman, Ladies and those of the opposite sex! ಇಂತು hearty laughಇನ ಹೆಸರನು importಉಗೊಳ್ಳುವ dirty heartless sortಉಗಳ ಸೈರಿಸುವ ಪಾತಕವು ಇದುವೆ immense sin! ||೪||

Wake up!—ಎಂದು ಎನಿತು ಊಳ್ದರೇನು? ಈ ಲೋಕವು indifferentಉ. ಯಾರು, ಏನು, ಏಕೆ, ಎಲ್ಲಿಗೆ, ಎತ್ತಣಿಂದ, ಆವಾಗ—ಅದಕೇಕೆ! Rakeಉಗಳ rogueryಯನು ಎದುರಿಸುವ ಆ courageಅನು ಸತ್ಯಧರ್ಮದ sakeಇಗೋಸುಗ ತಳೆದ ಹಾಳೂರವರೆ ಧೀರರಲ! ||೫||

(ಇದನ್ನು) Very heroic ಎಂಬೆನ್ಸೈ! ಈ ಸಿರಿ ಸನಾತನ ಸಕಲ ಸಾರಾಸಾರ ಸರ್ವಾಚಾರ ಸಂರಕ್ಷಣೆಯ ಭಾರವನು ನಿರುತ ಶಿರಸಾವಹಿಸಿ ನಡೆಸುವುದು ಅರಿದು. ಇದು (ಈ) ಹಾಳೂರ ಕಲಿಗಳ ಹಳೆಯ ಹುಲಿಗಳ ಬಳಗದವರ ಎಸಕ, incomparable! ||೧||

೨. ಹೋಮರನಿಗಿದು ಥೀಮು ಸೆವರಲ್
ಟೋಮುಗಳನಾಕ್ರಮಿಸಿ ಕಾವ್ಯ
ಸ್ತೋಮದತ್ಯಗ್ರದಲಿ ನಿಲಿಸುವ ಡೋಮಿನಂತಹದು |
ಗಾಮಮಲ್ಲಂಗೆದುರೆ ಕಲಿಯುಗ
ವಾಮನನು ಎನಬೇಡಿ—ನನ್ನೆ
ಸ್ಟೀಮಿನ ಸ್ಲೈಟಿಂಡಿಕೇಷನ್ನೈಸೆಯಿರಾ ಮಾತು ||

೩. ಕೌಂಗು ನೀ ನಾ ಕುರುಚಲೆನ್ನೀ
ಟಾಂಗದೆದುರಿಗೆ ಬಸ್ಸು ನೀ ಕಿಂಗ್
ಕಾಂಗು ನೀ ಕ್ರಿಮಿ ನಾನು ಪೂವರ್ಮಿ ಎಂದು ಮೊದಲಾಗಿ |
ಲಾಂಗೆಗೋ ನಾ ನುಡಿದ ಫೈನಿನ್
ಕಾಂಗ್ರುಯಿಟಿಗಳ ಪುನಃ ನೆರೆದೀ
ಥ್ರಾಂಗಿನೆದುರಿನಲಿಡುವೆನಿನ್ಫರ್ಮೇಷನಿರಲೆಂದು ||

೪. ಸೊರಗದಾ ಹೈಟೆತ್ತ ಪರ್ಗೇ
ಟರಿಯಿನಾಳವದೆತ್ತ ತಾವರೆ
ಪುರದ ಮುಹಕವಿ ಪುರುಷ ಸರಸತಿಯೆತ್ತ ನಾನೆತ್ತ |
ವೇರ್ಟು ವೇರಿನ ಲೆಕ್ಕ ಜೋಗಿನ
ರೋರರಿನ ಸರಿಸದಲಿ ನಲ್ಲಿಯ
ನೀರು ಸುರಿದಂತಲ್ತೆ ಕಂಪೇಗ್ಗೈರ್ಯಯಲಿಬ್ಬರಸು ||

Several tomeಉಗಳನಾಕ್ರಮಿಸಿ ಕಾವ್ಯಸ್ತೋಮದ ಅತ್ಯಗ್ರದಲಿ ನಿಲಿಸುವ domeಇನ ಅಂತಹದು (ಆದ) ಇದು Homerಅನಿಗೆ themeಉ! Gama(ನೆಂಬ) ಮಲ್ಲನಿಗೆ ಕಲಿಯುಗ ವಾಮನನು ಎದುರೆ?—ಎನಬೇಡಿ. ಈ ಮಾತು ನನ್ನ esteemಇನ slight indication ಐಸೆ! ||೨||

ಕೌಂಗು ನೀ, ನಾ ಕುರುಚಲು! ಎನ್ನೀ tongaದ ಎದುರಿಗೆ ನೀ busಉ! King kongಉ ನೀ, ಕ್ರಿಮಿ ನಾನು! Poor me!—ಎಂದು ಮೊದಲಾಗಿ long ago (ಕರ್ಣನಾಟಕ ಪುರಾಣದ ಮುನ್ನುಡಿಯಲ್ಲಿ) ನಾನು ನುಡಿದ fine incongruityಗಳನು information ಇರಲೆಂದು, ನೆರೆದ ಈ throngಇನ ಎದುರಿನಲಿ ಪುನಃ ಇಡುವೆನು ||೩||

ಸೊರಗ (ಸ್ವರ್ಗ)ದಾ height ಎತ್ತ? Purgatoryಇನ ಆಳವದೆತ್ತ! ತಾವರೆ ಪುರದ ಮುಹಕವಿ ಪುರುಷ ಸರಸತಿಯೆತ್ತ! ನಾನೆತ್ತ! Where-to-whereಇನ ಲೆಕ್ಕ! ಇಬ್ಬರನು compare ಗೈಯಲು Jogಇನ Roarerಇನ ಸರಿಸದಲಿ ನಲ್ಲಿಯ ನೀರು ಸುರಿದಂತಲ್ತೆ! ||೪||

೫. ವೆಲ್ ಯು ಸೀ ಮೈ ಪೊಸ್ಸಿಷನೆಸಲಿನ್
ವ್ಯಾಲ್ಯುಬಲ್ ನೀನಿಲ್ಲದಿರಲಿನ್
ಕ್ಯಾಲ್ಕ್ಯುಲಬಲಾ ಲಾಸು ನಮ್ಮದು ಕಂಕಮಾನೆಂದು।
ಫುಲ್ಮನಸಿನಿಂದುಯ್ಯಲಾನಿ
ಲ್ಲಾಲ್ದಿ ಗುಡ್ಲಕ್ಕೀ ಜಯಂತಿಯ
ಪಾಲಿಗಿಮ್ಮೆನ್ಸ್ ಮೆಷರಿಸಲಿ ಒರಲೆಂದು ಹರಸುವೆನು ||

೧. ಈ ವೆರಿ ಸೇಮಿನ್ಸ್ಕ್ರಿಪ್ಷನಿ।
ಗೈವರಿ ಚೌಕಟ್ಟು ಹಾಕಿ ಗಿಫ್ಟಂ ಕೊಟ್ಟೆಂ ||
ಆವನಿದಂ ತಾಂ ಡಿಸ್ಟ್ರಾಯ್।
ಗೈವನವ ಬಾಲದಹುಳುವಹನಿದು ಶಾಪಂ ||

೨. ಮೋಣೆದರೊಂದಕ್ಕರಮಂ।
ಕಾಣಿಸಿದವರಾ ಮೃಕಂಡು ಪುತ್ರನ ತೆರದೊಳ್ ||
ಕೋಣನನೇರಿದನಂ ಗೆ।
ಲ್ದೇಣಿಯ ಬೇಡದೆ ದಿವಕ್ಕೆ ನೆಗೆದೇಳುವರೈ ||

'Well! you see my position!'—ಎನಲ್, 'Invaluable! ನೀನು ಇಲ್ಲದಿರಲಾ lossಉ incalculable! come! come on!' ಎಂದು full ಮನಸಿನಿಂದ ಉಯ್ಯಲು, ಆನು ಇಲ್ಲಿ 'All the good luck ಈ ಜಯಂತಿಯ ಪಾಲಿಗೆ immense measureಇನಲಿ ಬರಲಿ' ಎಂದು ಹರಸುವೆನು ||೫||

ಈ very same inscriptionಇಗೆ ivory ಚೌಕಟ್ಟು ಹಾಕಿ(ಸಿ) giftಅಂ ಕೊಟ್ಟೆಂ. ಆವಂ ಇದಂ destroy ಗೈವಂ—ಅವಂ ಬಾಲದ ಹುಳುವಹಂ. ಇದು ಶಾಪಂ. ||೧|| ಮುಂದಿನದು ಸುಲಭವಾಗಿದೆ ||೨||

['ಗುಪ್ತಸಂಪಾದಕ ಪಂಚಕ'ದ ಅವಶೇಷರಾದ ಶ್ರೀ 'ಚತುರ್ಥರು', ಇಲ್ಲಿಂದ ಮುಂದೆ, ತಾವು ಪದ್ಯರಚನೆಯಲ್ಲಿ ಅಸಮರ್ಥರಾದ ಪ್ರಯುಕ್ತ, ಗದ್ಯದಲ್ಲಿ ಒಂದು ಚತುರ್ವಿಂಶತಿ ವ್ಯಾಖ್ಯಾನ ಮಾಲೆಯನ್ನು ಅವ್ಯಾಹತವಾದ ವಾಗ್ವೈಖರಿಯೊಡನೆ ಒಂದೊಂದು ವಿಷಯಕ್ಕೆ ನಲುವತ್ತು ನಿಮಿಷಗಳಂತೆ ಪ್ರದರ್ಶಿಸಿದರು. ಪ್ರತಿಯೆರಡರ ನಡುನಡುವೆ "ಸುನೋ ಸುನೋ" ಸಂಗೀತವೂ ನಡೆಯಿತು. ದ್ರವ್ಯಾಭಾವದಿಂದ ಆ ವ್ಯಾಖ್ಯಾನಗಳ ಹೆಸರನ್ನು ಮಾತ್ರ ಮಗ್ಗಲು ಪುಟದಲ್ಲಿ ಸೂಚಿಸಿದೆ.]

'ಗುಪ್ತ ಸಂಪಾದಕ ಪಂಚಕ'ದ

ಚತುರ್ಥರ ಚತುರ್ವಿಂಶತಿ ವ್ಯಾಖ್ಯಾನಮಾಲೆ

೧. ಪುರುಷ ಸರಸ್ವತಿಯ ಪ್ರಭಾವ ಪರಂಜ್ಯೋತಿ. (ಜೀವನ ಚರಿತ್ರೆ)
೨. ಪುರುಷ ಸರಸ್ವತಿಯ ಕಾವ್ಯಪರಮಾನ್ನ. (ರಸಪ್ರಕರಣ)
೩. ನಳಪಾಕದಲ್ಲಿ ದಮಯಂತಿಯ ಸಹಾಯ. (ಪಾಕಶಾಸ್ತ್ರ)
೪. **ಪುರುಷ** ಸರಸ್ವತಿಯು **ಪರುಷ** ಸರಸ್ವತಿಯೊ? **ಹರುಷ** ಸರಸ್ವತಿಯೊ?
೫. ಅಥರ್ವಣ ವೇದದಲ್ಲಿ ಅಲಾರಂ ಗಡಿಯಾರ. (ಪ್ರಾಚೀನ ಸಂಸ್ಕೃತಿ)
೬. ಸಾಹಿತ್ಯದ '**ಸರ್ವ**'ನಾಶವೊ? '**ಸರ್ಪ**'ನಾಶವೊ? (ವಿಚಾರಂ)
೭. ಹಾವಿನ ಮೊಟ್ಟೆಗಳಿಂದ ಹಲ್ಲಿಗಳ ಉತ್ಪತ್ತಿ. (ಸರ್ಪ ಶಾಸ್ತ್ರ)
೮. ಸರ್ವಧರ್ಮಸಮನ್ವಯಕ್ಕೆ 'ಹಾರ್ಮೋನಿಯಂ ಹರಣ'ದ ಸಹಾಯ.
೯. ಉಷಃಕಾಲದಲ್ಲಿ ಸೂರ್ಯಾಸ್ತವು ಸೂಕ್ತವೆ? (ವಿಚಿತ್ರ ವಿಜ್ಞಾನ)
೧೦. ಪುರುಷ ಸರಸ್ವತಿಯು ಪೋಲೆಂಡು ದೇಶದವನು. (ಒಂದು ಮತ)
೧೧. ಹಸೀ ಕವಡೆಯ ಹಸುರು ವಿಾಸೆ. (ವಿವಿಧ ವರ್ಣಾರ್ಥ ನಿರ್ಣಯ)
೧೨. ಪುರುಷ ಸರಸ್ವತಿಯ ಉದ್ದ ಕಿವಿ ಅರ್ಥಾತ್ ಮಹಾಕವಿಯ ಮುರಿದಕೊಂಬು.
೧೩. ಸಸ್ಯವರ್ಗದವರಿಗೆ ನೈಶ್ಯದ ಆವಶ್ಯಕತೆ. (ಒಂದು ಊಹೆ)
೧೪. ಕವಿಪುಂಗವನ ಗೋಣಗುಂಗಾಟ. (ಗಾನ ದೋಸೆಗಳ ಮೂಲಕ)
೧೫. ಕಾಡುಕೋಳಿಯ ಕೆಂಪು ಕಿರೀಟ. (ಪಶುಪಕ್ಷ್ಯಾದಿಗಳ ವ್ಯವಸಾಯ)
೧೬. ಔಷ್ಟ್ರರಾಷ್ಟ್ರದಲ್ಲಿ ಉಷ್ಟ್ರಭಾಷೆಯ ಅಗತ್ಯ. (ಉದ್ಧಾರ ಕಾರ್ಯ)
೧೭. ವಿಾಸೆ, ವಿಾಶೆ, ವಿಾಷೆ—ಇವುಗಳ ಬೆಳವಣಿಗೆ. (ಭಾಷಾ ಶಾಸ್ತ್ರ)
೧೮. ಪುರುಷ ಸರಸ್ವತಿ ಪೂರ್ವ ಜನ್ಮದಲ್ಲಿ ಪ್ರಚಾರಕನಾಗಿದ್ದನೊ? ಪರಿಚಾರಕನಾಗಿದ್ದನೊ? (ಇತಿಹಾಸ)
೧೯. ತಾವರೆ ಪುರದಲ್ಲಿ ತೊಣಚಿಗಳ ಹಾವಳಿ. (ಸಚಿತ್ರ)
೨೦. ಜಿರಲೆಗಳು ಜೇನುತುಪ್ಪ ಕುಡಿಯುವ ವಿಧಾನ. (ಕ್ರೀಡಾ ಪ್ರಪಂಚ)
೨೧. ಪುರುಷ ಸರಸ್ವತಿ ಪುರುಷನೊ? ಪುರುಷಾಮೃಗವೊ? (ಚರ್ಚೆ)
೨೨. ಸಮಶೀತೋಷ್ಣವಲಯಗಳಲ್ಲಿ ಪುರುಷ ಸರಸ್ವತಿಯ ಅವಶೇಷಗಳು. (ಪ್ರಾಚ್ಯನ್ವೇಷಣ)
೨೩. ಪುರುಷ ಸರಸ್ವತಿಯೂ ಪ್ಯಾರಿಸ್ಸಿನ ಕ್ಲಬ್ಬುಗಳೂ. (ಮಾಯಾಲಾಂದ್ರ)
೨೪. ಜೈನ ಬೌದ್ಧ ವೀರಶೈವ ಬ್ರಾಹ್ಮಣೇತ್ಯಾದಿ ಧರ್ಮಗಳಲ್ಲಿ ಪುರುಷ ಸರಸ್ವತಿಯ ಸ್ಥಾನ. (ಧರ್ಮ ಜಿಜ್ಞಾಸೆ)

ಕಾರ್ಯದರ್ಶಿಗಳ ಉಪಕ್ರಮಾನಂತರದ ಆಶುಭಾಷಣ

[ಕಾರ್ಯದರ್ಶಿಯವರು ತಮ್ಮ ಉಪಕ್ರಮ ಭಾಷಣವನ್ನು ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸಿರುವುದರಿಂದ ಅವರು ಅನಂತರ ಮಾಡಿದ ಆಶುಭಾಷಣವನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ.]

ಶ್ರೀ'ಮಧ್ಯಮ'ರು ನಮಗೆ ಕೊಟ್ಟಿರುವ ಶಾಸನಕ್ಕೆ ನಾವು ಕೃತಜ್ಞರಾಗಿದ್ದೇವೆ. ಇದನ್ನು ನಾಶಮಾಡಿದವನು ಬಾಲದ ಹುಳುವಾಗುವ ಶಾಪವೂ ಇದನ್ನು ಕಾಣಿಸಿದವನು ದಿವಂಗತನಾಗುವ ಅನುಗ್ರಹವೂ ಸಂಪ್ರದಾಯೋಕ್ತಿಗಳೆಂದು ಹೇಳಬಹುದಾದರೂ ಇಂತಹ ಶಾಸನಗಳನ್ನು ನಮ್ಮ ಬಳಗದ ಕಚೇರಿಯ ಕುಡ್ಯಗಳ ಮೇಲೆ ಪ್ರದರ್ಶಿಸಬೇಕೆಂದು ತತ್ಕರ್ತರುಗಳ ನಿರೀಕ್ಷಣೆಯೆಂದು ನಾವು ಭಾವಿಸಿದರೆ ಅದು ತಪ್ಪಾಗಲಾರದೆಂದು ನಾನು ನಂಬಿದರೆ ತಾವು ಅದನ್ನು ಅಪಚಾರವಾಗಿ ಎಣಿಸುವುದಿಲ್ಲವೆಂದು ಆಶಿಸಿದರೆ ಅದು ಅಕ್ಷಮ್ಯವೆನಿಸುವ ಅಪರಾಧಕ್ಕೆ ಒಳಗಾಗಲಾರದಷ್ಟೆ.

ಆದರೆ ಈ ಶಾಸನಗಳನ್ನೆಲ್ಲ ಯೋಗ್ಯವಾದ ರೀತಿಯಲ್ಲಿ ಪ್ರದರ್ಶಿಸಲು ನಮ್ಮ ಕಟ್ಟಡದ ಕೋಣೆಗಳಿಗೆ ನಾಲ್ಕೇ ಗೋಡೆಗಳಿರುವುದು ಒಂದು ದೊಡ್ಡ ಕೊರತೆಯಾಗಿದೆ. ಇದನ್ನು ಗಮನಿಸಿ ಉದಾರಿಗಳು ನಮಗೆ ಇನ್ನೂ ಒಂದೆರಡು ವಿಶಾಲವಾದ ಗೋಡೆಗಳನ್ನು ಕಟ್ಟಿಸಿಕೊಡಬೇಕೆಂದು ಈ ಮೂಲಕ ಬೇಡುತ್ತೇನೆ. ಇದೇ ಸಮಯದಲ್ಲಿ ಒಂದು ಸುತ್ತಿಗೆಯನ್ನೂ ಮೊಳೆಗಳನ್ನೂ ದಾನಮಾಡುವವರಿಗೆ ಬಳಗವು ಬಹು ಕೃತಜ್ಞವಾಗಿರುತ್ತದೆ.

ಈಚೆಗೆ ನಮ್ಮ ನಡುವೆ ಯಾವ ಮದುವೆ, ಮುಂಜಿ, ಮರಣ ಮುಂತಾದ ಮಹೋತ್ಸವಗಳಾದರೂ ಅದನ್ನು ಕುರಿತು ಮನೋವೇಗ ವಿದ್ಯುದ್ವೇಗಗಳಿಗಿಂತ ಮಿಗಿಲಾದ ವೇಗದಿಂದ ಕಬ್ಬಂಗಳುದ್ಭವಿಸುತ್ತಿರುವುದು ನಮ್ಮ ಪುರಾಕೃತಕರ್ಮವಿಶೇಷ, ನಮ್ಮ ಉತ್ತರೋತ್ತರದ ದಿಕ್ಸೂಚಿ. ಆದರೆ ಹೀಗೆ ಬರುವವುಗಳಲ್ಲಿ ಅನೇಕವು ಅಪಕ್ವವಾಗಿವೆಯೆಂಬುದನ್ನು ವಿಷಾದದಿಂದ ತಿಳಿಸಬೇಕಾಗಿದೆ. ಅಂತಹ ಅಪಕ್ವಗಳನ್ನು ಕೆಳಗೆ ನೆಲಮಾಳಿಗೆಯಲ್ಲಿ ಒಣಹುಲ್ಲಿನಡಿ ಹೂತಿಟ್ಟು, ಅವು ಪಕ್ವವಾದನಂತರ ಹೊರಗೆ ತಂದು ನೇತುಹಾಕಬೇಕೆಂದು ಕಳೆದ ಮೀಟಿಂಗಿನಲ್ಲಿ ಬಹುಮತದಿಂದ ತೀರ್ಮಾನಿಸಿದ್ದೇವೆ. ಆದ್ದರಿಂದ ಈಗ ಇರುವ ನೆಲಮಾಳಿಗೆಯನ್ನು ಇನ್ನೂ ಬಡಾಯಿಸಲು ಮಹಾಜನರು ತಮ್ಮ ತನುಮನಧನಗಳಿಂದ ನೆರವಾಗಬೇಕೆಂದು ಕಳಕಳಿಯ ಬೇಡಿಕೆ.

(ಇಲ್ಲಿ ಪುರುಷ ಸರಸ್ವತಿಯ 'ಕರ್ಣನಾಟಕ ಪುರಾಣ' ಮತ್ತು 'ಹಾರ್ಮೋನಿಯಂ ಹರಣ' ಎಂಬ ಎರಡು ಶತಕಾರ್ಧಗಳಿಂದ ಒಂದೊಂದು ಷಟ್ಪದಿಯನ್ನು ಆರಿಸಿಕೊಂಡು ಒಂದು ನೂರು ಮಂದಿ ಗಮಕಿಗಳು ಸುಶ್ರಾವ್ಯವಾಗಿ ಅಂದು ತೋರಿಸಿದರು.)

ಅಧ್ಯಕ್ಷರ ಆರಂಭ ಭಾಷಣದ ಸಂಗ್ರಹ

(ಅಧ್ಯಕ್ಷರು ತಮ್ಮ ಭಾಷಣವನ್ನು ಉಷ್ಟ್ರಭಾಷೆಯಲ್ಲಿ ಅಪ್ಪಣೆ ಕೊಡಿಸಿದರು. ಸಭಿಕರೊಬ್ಬರು ಅದನ್ನು ಕನ್ನಡಕ್ಕೆ ತರ್ಜುಮೆಮಾಡಿ ಉಪಕರಿಸಿದರು.)

ನಾನು ಪ್ರಾಜ್ಞನಲ್ಲ, ಅಜ್ಞ. ನಾನು ಪ್ರೌಢನಲ್ಲ, ಮೂಢ. ನಾನು ಕನ್ನಡಿಗನಾದರೂ ನನಗೆ ಕನ್ನಡ ಅಷ್ಟು ಚೆನ್ನಾಗಿ ಗೊತ್ತಿಲ್ಲ. ನಾನು ಹಲವು ತಿಂಗಳು ಔಷ್ಟ್ರರಾಷ್ಟ್ರದಲ್ಲಿ ತಿರುಗಾಡಿ ಉಷ್ಟ್ರಭಾಷೆಯಲ್ಲಿ ಪಾರಂಗತನಾಗಿ ಕಳೆದ ತಿಂಗಳು ಇಲ್ಲಿಗೆ ಬಂದಾಗ, ನನ್ನ ಪೂಜ್ಯ ತೀರ್ಥರೂಪರು ಪರಂಧಾಮವನ್ನೈದಲು ನಾನು ನಿರ್ಗತಿಕನಾಗಿ ನಿರಾಶ್ರಿತನಾಗಿ ನಿಸ್ಸಹಾಯನಾಗಿ ನಿರಾಲಂಬನನಾಗಿ—ಒಟ್ಟಿನಲ್ಲಿ ನಿರ್ ಎಲ್ಲಾ—ಆಗಿದ್ದ ಕಾಲದಲ್ಲಿ ಈ ದಿವಸ ಉದ್ದಾಮ ಕವಿತೆಗಳನ್ನು ರಚಿಸಿ ತಮ್ಮನ್ನು ಸಂತೋಷಪಡಿಸಿದ 'ಗುಪ್ತ ಸಂಪಾದಕ ಪಂಚಕ'ವು ನನ್ನ ಇದ್ದ ಎರಡು ಭುಜಗಳು ಐದಾದುವೆಂಬಂತೆ ನನಗೆ ಆ ಅಪರಕರ್ಮವನ್ನು ನೆರವೇರಿಸುವುದಕ್ಕೆ ಸಹಾಯಕರಾದುದು ಮಾತ್ರವಲ್ಲದೆ, ನಾಲ್ವರು ವಾಹಕರಾಗಿಯೂ ಒಬ್ಬರು ಪುರೋಹಿತರಾಗಿಯೂ ನಿಂತು, ನಮ್ಮ ಪೂಜ್ಯಪಾದರಾದ ತೀರ್ಥರೂಪರಿಗೆ ಕೈ ಕೊಟ್ಟು ಮೆಟ್ಟಲು ಮೆಟ್ಟಲಾಗಿ ಸ್ವರ್ಗದ ಸೋಪಾನಗಳನ್ನು ಹತ್ತಿಸಿ ಇಂದ್ರನ ಅರ್ಧಾಸನವನ್ನು ದೊರಕಿಸಿಕೊಡುವ ಮೂಲಕ ನನ್ನ ಧರ್ಮವನ್ನು ಕಾಪಾಡಿ ಕೊಟ್ಟು ನನ್ನ ಆತ್ಮಕ್ಕೆ ಪಂಚಭೂತಪ್ರಾಯರಾದರು, ನನ್ನ ದೇಹಕ್ಕೆ ಪಂಚಪ್ರಾಣ ಸಮಾನರಾದರು.

ಮಹನೀಯರೆ, ಜಗತ್ತಿನಲ್ಲಿ ಕೃತಜ್ಞತೆಯೆಂಬುದು ಅಪರೂಪ. ಈ ಅಪೂರ್ವ ಗುಣವನ್ನು ಮರೆಯದೆ ಆ ಋಣವನ್ನು ಪರಿಹರಿಸುವುದಕ್ಕಾಗಿ ನಾನು ಈ ದಿವಸ, ಈ ನನ್ನ ಪಂಚೇಂದ್ರಿಯ ಪಂಚಭೂತ ಪಂಚಪ್ರಾಣ ಸರ್ವಸ್ವರಾದ 'ಗುಪ್ತ ಸಂಪಾದಕ ಪಂಚಕ'ವು ಸಂಪಾದಿಸಿರುವ ಗ್ರಂಥಗಳ ಕರ್ತನಾದ ಮಹಾಕವಿ ಪುರುಷ ಸರಸ್ವತಿಯ ಜಯಂತಿಯಲ್ಲಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಒಪ್ಪಿ ಬಂದಿದ್ದೇನೆ.

ಇದುವರೆಗೆ ನಡೆದಿರುವ ಚತುರ್ವಿಂಶತಿ ವ್ಯಾಖ್ಯಾನ ಮಾಲೆಯ ಕೆಲವು ವ್ಯಾಖ್ಯಾನಗಳ ಸಾರಾಂಶವನ್ನು ಸಭಾಸದರಿಗೆ ಸೂಕ್ಷ್ಮವಾಗಿ ಸಮರ್ಪಿಸಬೇಕೆಂದು ಹಲವರು ತವಕಿಸುತ್ತಿರುವುದರಿಂದ, ೨೪ ಮಂದಿ ಮಾತ್ರ, ಆ ೨೪ ವಿಷಯಗಳ ಸಾರಾಂಶವನ್ನು ಮಟ್ಟಿಗೆ, ಒಬ್ಬೊಬ್ಬರೂ ಅರ್ಧ ಗಂಟೆಗಿಂತ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳದೆ ಭಾಷಣಮಾಡಬೇಕಾಗಿ ಜಿನ್ನಹಮಾಡಿಕೊಳ್ಳುತ್ತೇನೆ. ಇಂತು ತಮ್ಮ ದಾಸಾನುದಾಸನಾದ ನಾನು—ಅಧ್ಯಕ್ಷ.

(ಮೂರು ಭಾಷಣಗಳ ಸಂಗ್ರಹವನ್ನು ಮಾದರಿಗಾಗಿ ಮುಂದೆ ಕೊಟ್ಟಿದೆ.)

೧. ಜಿರಲೆಗಳು ಜೇನುತುಪ್ಪ ಕುಡಿಯುವ ವಿಧಾನ

ಜಿರಲೆಗಳು ಜೇನುತುಪ್ಪ ಕುಡಿಯಬೇಕೆಂದು ಬಯಸಿದಾಗ ಜೇನುಹುಳುಗಳ ಗೂಡಿನ ಬಳಿಗೆ ಗುಂಪಾಗಿ ಬಂದು "ಏ, ಜೇನುಹುಳುಗಳೇ! ಕಣ್ಣಾಮುಚ್ಚಾಲೆ ಆಟವಾಡೋಣ, ಬರುತ್ತೀರಾ?" ಎಂದು ಕರೆಯುತ್ತವೆ. ಜೇನುಹುಳುಗಳೂ ಆಟವಾಡಲು ಒಪ್ಪಿ ಬರುತ್ತವೆ. ಆಗ ಒಂದು ಜಿರಲೆ ತಾನು 'ಹಕ್ಕಿ'ಯಾಗಿ ಬಚ್ಚಿಟ್ಟು ಕೊಳ್ಳಲು ಒಪ್ಪಿಕೊಳ್ಳುತ್ತದೆ. ಆಗ ಉಳಿದ ಜಿರಳೆಗಳಲ್ಲಿ ಒಂದೊಂದು ಜಿರಳೆ ಒಂದೊಂದು ಜೇನುಹುಳುವಿನ ಕಣ್ಣುಮುಚ್ಚುತ್ತದೆ. ಆಗ 'ಹಕ್ಕಿ'ಯಾಗಿದ್ದ ಜಿರಳೆ ಅವಿತು ಕೊಳ್ಳುತ್ತದೆ. ಆಗ ಉಳಿದ ಜಿರಳೆಗಳು

ಕಣ್ಣಾಮುಚ್ಚೇ—ಕಾಡೇಗೂಡೇ ಉದ್ದಿನ ಮೂಟೇ—ಉರುಳೇ ಹೋಯ್ತು
ನಮ್ಮಕ್ಕಿ ಬಿಟ್ಟೆನೋ ಬಿಟ್ಟೆ—ನಿಮ್ಮಕ್ಕಿ ಹಿಡಕೊಳ್ರೋ ಹಿಡಕೊಳ್ಳಿ.

ಎಂದು ಮೇಳವಾಗಿ ಹಾಡಿ ಹಿಡಿದಿದ್ದ ಜೇನುಹುಳುಗಳನ್ನು ಬಿಡುತ್ತವೆ. ಆ ಜೇನು ಹುಳುಗಳೆಲ್ಲವೂ ಕಣ್ಣುಗಳನ್ನು ಹೊಸಗುತ್ತ ಮಿಟಿಕಿಸಿಕೊಂಡು ಅವಿತ ಜಿರಳೆಯನ್ನು ಹುಡುಕಿಕೊಂಡು ಹೋಗುತ್ತವೆ.

ಅದೇ ಸಮಯವನ್ನು ಕಾಯುತ್ತಿದ್ದ ಜಿರಲೆಗಳು ಸರಸರನೆ ಜೇನುಹುಳು ವಿರಹಿತವಾದ ಜೇನುಗೂಡನ್ನು ಆಕ್ರಮಿಸಿ ಒಳಗಿನ ಜೇನುತುಪ್ಪವನ್ನೆಲ್ಲ ಬರಬರನೆ ಹೀರಿ ಹಾರಿಹೋಗುತ್ತವೆ. ಅಷ್ಟರಲ್ಲಿ ಜೇನುಹುಳುಗಳು ಅವಿತ ಜಿರಲೆಯನ್ನು ಪತ್ತೆ ಹಚ್ಚಿ ಹಿಡಿದುಕೊಂಡು ಬಂದು "ನಮ್ಮಕ್ಕಿ ಹಿಡಿದೆವೋ ಹಿಡಿದೆವು!" ಎಂದು ಜಯಘೋಷ ಹಾಕುತ್ತವೆ. ಆದರೆ ಮರುಕ್ಷಣದಲ್ಲಿಯೇ ಅಲ್ಲಿ ಜಿರಳೆಗಳೂ ಇಲ್ಲ! ಜೇನುತುಪ್ಪವೂ ಇಲ್ಲ!—ಎಂಬುದನ್ನು ಕಂಡು ಆ ಜೇನುಗಳಿಗೆ ಅಸಾಧ್ಯ ಆಗ್ರಹ ವುಂಟಾಗಿ, ಒಂದೊಂದೂ ಒಂದೊಂದು ಕುಟುಕು ಹಾಕಿ ಆ 'ಹಕ್ಕಿ' ಜಿರಲೆಯನ್ನು ಕೊಂದು, ಅದನ್ನು ಸಮಭಾಗವಾಗಿ ವಿಭಾಗಿಸಿ ತಿನ್ನುವುವು.

ಇದು ಜಿರಲೆಗಳು ಜೇನುತುಪ್ಪ ಕುಡಿಯುವ ವಿಧಾನ.

ಇದರಿಂದ ಕಲಿಯಬೇಕಾದ ನೀತಿಗಳು

೧. ಕಣ್ಣಾಮುಚ್ಚೆಯಾಡುವಾಗ 'ಹಕ್ಕಿ'ಯಾದವನು ಬಚ್ಚಿಟ್ಟುಕೊಳ್ಳಬಾರದು. ಬಚ್ಚಿಟ್ಟುಕೊಳ್ಳುವಂತೆ ನಟಿಸಿ ತಲೆಮರೆಸಿಕೊಂಡು ಬದುಕಬೇಕು.

೨. ಸಮಸ್ತ ಜಿರಳಾ ಸಮಾಜದ ಸುಖಕ್ಕಾಗಿ ವ್ಯಕ್ತಿ ಜಿರಳೆಯು ತನ್ನ ಸ್ವಾತ್ಮಾರ್ಪಣವನ್ನು ಹೇಗೆ ತೃಣಸಮಾನವಾಗಿ ಸಲ್ಲಿಸಿತೋ ಹಾಗೆ ಮನುಷ್ಯನೂ ತನ್ನ ಸಮಾಜದ ಹಿತಕ್ಕಾಗಿ ಹತನಾಗಿ ಬಲಿದಾನ ಕೊಟ್ಟು ಹುತಾತ್ಮನೆನ್ನಿಸಿಕೊಳ್ಳಬೇಕು.

೨. ಸಾಹಿತ್ಯದ “ಸರ್ವ” ನಾಶವೊ? “ಸರ್‍ವ” ನಾಶವೊ?

ಕನ್ನಡವೆಲ್ಲವೂ ಸಂಸ್ಕೃತಜನ್ಯ.

‘ಸರ್ವ’ ಎಂಬುದು ಸಂಸ್ಕೃತ ರೂಪ. ಇದನ್ನು ಸಂಸ್ಕೃತದಲ್ಲಿ सर्व ಎಂದು ಬರೆಯುತ್ತಾರೆ. ಇದು ಸರಿ.

‘ಸರ್‍ವ’ ಎಂಬುದು ಕನ್ನಡದ ರೂಪ. ಈ ರೂಪ ಸಂಸ್ಕೃತದಲ್ಲಿ ಕಂಡುಬರುವುದಿಲ್ಲ. ಇದು ತಪ್ಪು.

‘ಸರ್ವ’, ‘ಧರ್ಮ’, ‘ಕರ್ಣ’, ‘ಬರ್ಹಿ’ ಮುಂತಾದ ಅನೇಕ ರೂಪಗಳಲ್ಲಿ ಮೂಲಾಕ್ಷರವನ್ನು ಬರೆದು ಅದರ **ತಲೆಯ ಮೇಲೆ** ರೇಫೆಯನ್ನು ಕಾಣಿಸುವುದು ಸನಾತನ ಸತ್ಸಂಪ್ರದಾಯ. ಉದಾ.— सर्व, कर्ण, धर्म, बर्हि, ಇತ್ಯಾದಿ.

ಈ ರೀತಿಯ ರೇಫೆಯನ್ನು ಕನ್ನಡಿಗರು ‘ಅರ್ಕಾವೊತ್ತು’ ಎನ್ನುವರು.

‘ಅರ್ಕ’ ಎಂದರೆ ಸೂರ್ಯ, ಭಗವಾನ್ ಸೂರ್ಯನಾರಾಯಣಸ್ವಾಮಿ.

‘ಒತ್ತು’ ಎಂದರೆ ಗುರುತು, ಮುದ್ರೆ, ಪ್ರಭಾವ ಮುದ್ರೆ.

ಆದ್ದರಿಂದ ‘ಅರ್ಕಾವೊತ್ತು’ ಎಂದರೆ ಸೂರ್ಯನಾರಾಯಣನ ಪ್ರಭಾವ ಮುದ್ರೆ.

ಸೂರ್ಯನಾರಾಯಣನ ಪ್ರಭಾವವಿರುವುದು ಜನರ ತಲೆಯ ಮೇಲೆ. ‘ಅರ್ಕಾವೊತ್ತು’ ಇರುವುದೂ ಮೂಲಾಕ್ಷರದ ತಲೆಯ ಮೇಲೆ.

ಸೂರ್ಯನಾರಾಯಣನ ಪ್ರಭಾವವನ್ನು ತಿರಸ್ಕರಿಸಿದರೆ ಜೀವ ಹಾನಿಯಾಗುತ್ತದೆ. ಅದರಂತೆಯೇ ‘ಅರ್ಕಾವೊತ್ತ’ನ್ನು ತಿರಸ್ಕರಿಸಿದರೆ ಸಾಹಿತ್ಯ ಹಾನಿಯಾಗುತ್ತದೆ.

ಆದ್ದರಿಂದ ‘ಅರ್ಕಾವೊತ್ತು’ ಅಮೃತಕ್ಕಿಂತ ಅಮೂಲ್ಯ.

ಅದಕ್ಕಾಗಿ ‘ಅರ್ಕಾವೊತ್ತ’ನ್ನು ಮೂರ್ಧ್ನದಲ್ಲಿ ಧರಿಸಿದ ‘ಸರ್ವ’ ವೊಂದೇ ಸ್ವೀಕರಣೀಯವಲ್ಲದೆ, ಇನ್ನೊಂದು ರೂಪದ ಹೆಸರನ್ನು ಬಾಯಿಂದ **ಉಚ್ಚರಿಸಲೂ ಬಾರದು.** ಶಾಂತಂ ಪಾಪಂ.

[ಈ ವೇಳೆಗೆ ಸಭಿಕರೊಬ್ಬರು “ ‘ಸರ್ವ’ವೊಂದೇ ಸ್ವೀಕರಣೀಯವಾದರೆ ಸಾಹಿತ್ಯದ ‘ಸರ್‍ವ’ ನಾಶವಾಗುತ್ತದೆ. ‘ಸರ್‍ವ’ ವೊಂದೇ ಸ್ವೀಕರಣೀಯವಾದರೆ ಸಾಹಿತ್ಯದ ‘ಸರ್ವ’ ನಾಶವಾಗುತ್ತದೆ. ಅಂತೂ ಒಟ್ಟಿನಲ್ಲಿ ಸಾಹಿತ್ಯದ ‘ಸರ್ವ(ರ್‍ವ)’ ನಾಶ ಸಿದ್ಧ” ಎಂಬ ವಿಷಯದ ಕಡೆಗೆ ಸಭೆಯ ಗಮನವನ್ನೆಳೆಯಲು, “ಸಾಹಿತ್ಯದ ‘ಸರ್ವ(ರ್‍ವ)’ ನಾಶವಾಗದಿರಬೇಕಾದರೆ ‘ಸರ್ವ’ ಮತ್ತು ‘ಸರ್‍ವ’ ಎಂಬ ಎರಡೂ ರೂಪಗಳು ಸ್ವೀಕರಣೀಯಗಳಾಗಬೇಕು” ಎಂಬ ಠರಾವನ್ನು ಸಭೆಯು ಸರ್ವಾನುಮತದಿಂದ ಪ್ರಚಂಡ ಹರ್ಷಧ್ವನಿಗಳ ನಡುವೆ ಅಂಗೀಕರಿಸಿತು.]

೩. ಮೀಸೆ⟶ಮೀಶೆ⟶ಮೀಷೆ: ಇವುಗಳ ಬೆಳೆವಣಿಗೆ

ಪ್ರಜ್ವಲಿಸುವ ಅಗ್ನಿಯ ಮೇಲೆ ಕಬ್ಬಿಣದ ಬಾಣಲೆಯನ್ನಿಟ್ಟು, ಅದರಲ್ಲಿ ಎಣ್ಣೆಯನ್ನು ಹಾಕಿದರೆ, ಅದು ಕುದಿಯುವುದು. ಆ ಕುದಿಯುವ ಎಣ್ಣೆಯಲ್ಲಿ ಹಪ್ಪಳ ಸಂಡಿಗೆಗಳನ್ನು ಹಾಕಿದರೆ, ಅವು ಹಿಗ್ಗಿ ಅರಳಿ ಹಿರಿದಾಗುತ್ತವೆ—

ಇದು ದೃಷ್ಟಾಂತ.

ಅಗ್ನಿಯೆಂಬುದು ಯೌವನ. ಕಬ್ಬಿಣದ ಬಾಣಲೆಯೆಂಬುದು ಮುಖ. ಅದರೊಳಗಿನ ಎಣ್ಣೆಯು ಮುಖದೊಳಗಿನ ರಕ್ತ. ಮೇಲುತುಟಿಯ ರೋಮವಿಶೇಷವೇ ಹಪ್ಪಳ, ಸಂಡಿಗೆ—

ಇದು ವಿವರಣೆ.

ಪ್ರಜ್ವಲನವು ಅಗ್ನಿಯೌವನಗಳಿಗೂ, ಆಕರತ್ವವು ಬಾಣಲೆಮುಖಗಳಿಗೂ, ಕುದಿಯುವಿಕೆಯು ಎಣ್ಣೆರಕ್ತಗಳಿಗೂ, ಹಿಗ್ಗಿ ಅರಳಿ ಹಿರಿದಾಗುವಿಕೆಯು ಮೇಲುತುಟಿಯ ರೋಮವಿಶೇಷ ಹಪ್ಪಳ ಸಂಡಿಗೆಗಳಿಗೂ—

ಸಮಾನಧರ್ಮ.

ಇದು **ಮೀಸೆ⟶ಮೀಶೆ⟶ಮೀಷೆ:** ಇವುಗಳ ಬೆಳವಳಿಗೆಯ ರಹಸ್ಯ.

(ಇತರ ಭಾಷಣಗಳಿಗೆ 'ಹಾಳೂರ ಹಳದಿಯ ಹಾಳೆ' ನೋಡಿ)

ಅಧ್ಯಕ್ಷರ ಅಂತರಭಾಷಣ

(ಈ ವೇಳೆಗೆ ಅಧ್ಯಕ್ಷರು ಅನಿರೀಕ್ಷಿತವಾಗಿ ಹಾಳೂರಿಗೆ ಹತ್ತೊಂಬತ್ತು ಮೈಲಿ ದೂರದಲ್ಲಿರುವ ಅಂತರಪುರಕ್ಕೆ ಕಾರ್ಯಾಂತರದಿಂದ ಹೋಗಲೇಬೇಕಾಗಿ ಬಂದದ್ದರಿಂದಲೂ ಹಾಳೂರಿನಿಂದ ಅಂತರಪುರಕ್ಕೆ ಬಸ್ಸು ತಿಂಗಳಿಗೆ ಮೂರಾವರ್ತಿ ಮಾತ್ರ ಓಡಾಡುವುದರಿಂದಲೂ ಅಧ್ಯಕ್ಷರು ತಮ್ಮ ನಿರ್ಗಮನಕ್ಕೆ ವಿಷಾದವನ್ನು ಸೂಚಿಸಿ, ಹಳ್ಳಿಗಾಡುಗಳಲ್ಲಿ ಪ್ರಯಾಣಕ್ಕಿರುವ ತೊಂದರೆಗಳನ್ನು ಕುರಿತು ಕೂಲಂಕಷವಾಗಿ ವಿಚಾರಮಾಡಿ ಶ್ಲಾಘ್ಯವಾದ ದೀರ್ಘಭಾಷಣವನ್ನು ಉಜ್ವಲವಾಗಿ ಅಪ್ಪಣೆ ಕೊಡಿಸಿ ಬೈಳಾಪುರದ ಬೃಹಸ್ಪತ್ಯಾಶ್ರಮದ "ಭೃಗು" ಎಂಬವರನ್ನು ತಮ್ಮ ಸ್ಥಾನಕ್ಕೆ ನೇಮಿಸಿ ಅಧ್ಯಕ್ಷಭಾಷಣವನ್ನು ಮುಂದುವರಿಸುವಂತೆ ಪ್ರಾರ್ಥಿಸಿ ನಿರ್ಗಮಿಸಿದರು.)

“ಭೃಗು” ಅಧ್ಯಕ್ಷರ ಭಾಷಣದ ಮುಖ್ಯಾಂಶಗಳು

[ಅಧ್ಯಕ್ಷರು ಅಧ್ಯಕ್ಷಪೀಠಕ್ಕೆ ತಮ್ಮ ಅನರ್ಹತೆಯನ್ನೂ ತಮಗೆ ಈ ಗೌರವ ಬರಲು ಕಾರಣರಾದ ಪೂಜ್ಯ ಪೂರ್ವಾಧ್ಯಕ್ಷರಿಗೆ ಕೃತಜ್ಞತೆಯನ್ನೂ ಹಿಂದಿನವರು ಹೇಳಬೇಕಾದುದನ್ನೆಲ್ಲ ಆಗಲೇ ಹೇಳಿಬಿಟ್ಟಿರುವುದರಿಂದ ತಾವೇನೂ ಹೇಳಲುಳಿದಿಲ್ಲವೆಂಬುದನ್ನೂ ಹೃದಯಂಗಮವಾಗಿ ವರ್ಣಿಸಿ ವಿವರಿಸಿ, ಹಂಸಕ್ಷೀರನ್ಯಾಯವನ್ನು ಸಭಿಕರಿಗೆ ಶ್ರುತಪಡಿಸಿ, ತಮ್ಮ ಉಜ್ವಲವಾದ ಭಾಷಣವನ್ನು ಹೀಗೆ ಅಪ್ಪಣೆ ಕೊಡಿಸಿದರು. ಇದು ಅದರ ಸಾರಾಂಶ.]

ಈ ದಿವಸ ನಾವು ‘ಮಹಾಕವಿ ಪುರುಷ ಸರಸ್ವತಿ’ಯ ಜಯಂತಿಯನ್ನು ನಡಸಲು ಸೇರಿದ್ದೇವೆ. ಈ ‘ಮಹಾಕವಿ’ಯೆಂಬ ಬಿರುದು ಸರ್ವಜನ ಸುಲಭವಲ್ಲ. ಕನ್ನಡದಲ್ಲಿ ಮೊದಲ ‘ಮಹಾಕವಿ’ಯೆಂದರೆ ಈತನೇ. ಇವನನಂತರ ಬಂದ ಮಹಾಕವಿಯು ತಮ್ಮೆಲ್ಲರಿಗೂ ಚಿರಪರಿಚಿತನಾದ ಪಂಪ. ಪಂಪನು ಎರಡು ಗ್ರಂಥಗಳನ್ನು ಬರೆದ. ಅವುಗಳಲ್ಲಿ ಎರಡನೆಯದಾದ ‘ವಿಕ್ರಮಾರ್ಜುನ ವಿಜಯ’ದಲ್ಲಿ ಭೀಮ ದುರ್ಯೋಧನರ ಗದಾಯುದ್ಧವನ್ನು ಎಂಟತ್ತು ಪದ್ಯಗಳಲ್ಲಿ ವರ್ಣಿಸಿದ್ದಾನೆ. ಅದನ್ನು ಆಧರಿಸಿ ರನ್ನನು ತನ್ನ ‘ಗದಾಯುದ್ಧ’ದಲ್ಲಿ ಕುಸುರಿ ಕೆಲಸದ ಪರಾಕಾಷ್ಠೆಯನ್ನು ಪ್ರದರ್ಶಿಸಿದ್ದಾನೆ. ಕುಸುರಿ ಕೆಲಸದ ಪರಾಕಾಷ್ಠೆಯನ್ನು ಪುನಃ ಕಾಣಬೇಕಾದರೆ, ನೀವು ಬೇಲೂರಿನ ಶಿಲಾಬಾಲಿಕೆಯರನ್ನು ನೋಡಬೇಕು. ಬೇಲೂರು ಇರುವುದು ಹಾಸನ ಡಿಸ್ಟ್ರಿಕ್ಟಿನಲ್ಲಿ. ಅದೇ ಡಿಸ್ಟ್ರಿಕ್ಟಿನ ಚೆನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳುಗೊಳ ಗ್ರಾಮದಲ್ಲಿ ಜಗತ್ಪ್ರಸಿದ್ಧವಾದ ಶ್ರೀ ಗೋಮಟೇಶ್ವರ ವಿಗ್ರಹವಿದೆ. ಈ ಭವ್ಯಮೂರ್ತಿಯನ್ನೆತ್ತಿಸಿದವನು ಶ್ರೀ ಚಾವುಂಡರಾಯ. ಈತನು ಗಂಗರ ಮಂತ್ರಿಯಾಗಿದ್ದನು. ಆ ಕಾಲದಲ್ಲಿ ತಲಕಾಡು ಗಂಗರ ರಾಜಧಾನಿಯಾಗಿತ್ತು. ಆಗಲೂ ತಲಕಾಡು ಕಾವೇರೀ ನದಿಯ ದಡದಲ್ಲಿತ್ತು. ಈ ಕಾವೇರಿಯ ಜನ್ಮಸ್ಥಾನವು ಭಾಗಮಂಡಲವೆಂದು ನೀವು ಭೂಗೋಳದಲ್ಲಿ ಓದಿರಬಹುದು. ಭಾಗಮಂಡಲವೆಂಬುದು ಉರಿಮಂಡಲ ಕೊಳಕುಮಂಡಲಗಳಂತೆ ಒಂದು ಜಾತಿಯ ಹಾವಲ್ಲ. (ನಗು.) ಏಕೆಂದರೆ, ಹಿಂದೆ ಕೊಡಗರು ಹೆಬ್ಬಾವುಗಳಿಂದ ಕವಣೆ ಬೀಸುತ್ತಿದ್ದರಂತೆ. ಕವಣೆ ಬೀಸುವುದೆಂದರೆ ಈಗ ಎಷ್ಟೋ ಜನಕ್ಕೆ ಅರ್ಥವೇ ಆಗುವುದಿಲ್ಲ. ಹೀಗೆಯೇ ನಮ್ಮ ಅನೇಕ ಪ್ರಾಚೀನ ವ್ಯವಹಾರಗಳು ಖಿಲವಾಗುತ್ತಿವೆ. ಬಲ್ಗುಡಾರಿಗುಡುಗುಡು, ಗಣೇಶನ ಆಟ, ಟೋಪಿ ಆಟ—ಎಂದರೆ ಈಗಿನ ಹುಡುಗರಿಗೆ ಏನಾದರೂ ಕಲ್ಪನೆಯಾಗುತ್ತದೆಯೇ ?

ಇಲ್ಲ. ಇಂತಹ ವಿಷಯಗಳ ಪರಿಚಯವೇ ಇಲ್ಲದವರಿಗೆ ಕವಣೆ ಬೀಸುವುದೆಂದರೆ ಹೇಗೆ ತಿಳಿಸುವುದು? ಈಗಿನವರು ಕವಣೆಗೆ ಹಗ್ಗ ಉಪಯೋಗಿಸುವಂತೆ ಹಿಂದಿನ ಕೊಡಗರು ಹೆಬ್ಬಾವನ್ನು ಉಪಯೋಗಿಸುತ್ತಿದ್ದರಂತೆ. ಹೆಬ್ಬಾವು ಹಾವಿನ ಜಾತಿಗೆ ಸೇರಿದಂತೆ ಅದೇ ಹಾವುಜಾತಿಯ ಉರಿಮಂಡಲ ಕೊಳಕುಮಂಡಲಗಳ ಹೆಸರನ್ನು ಕೇಳಿದವರಿಗೆ ಭಾಗಮಂಡಲವೆಂಬ ಹೆಸರು ನೆನಪಾಗಲೂ ಸಾಕು. ಇಲ್ಲಿಯೇ ಕಾವೇರಿ ಹುಟ್ಟುವುದೆಂದು ಭೂಗೋಳವನ್ನು ಓದಿದವರು ಬಲ್ಲರು. ಅದರಂತೆಯೇ ಚರಿತ್ರೆಯನ್ನು ಓದಿದವರು ಈ ಕಾವೇರೀ ನದಿಯ ದಡದಲ್ಲಿರುವ ತಲಕಾಡು ಹಿಂದಿನ ಕಾಲಕ್ಕೆ ಗಂಗರ ರಾಜಧಾನಿಯಾಗಿತ್ತೆಂದೂ ಬಲ್ಲರು. ಆ ಕಾಲದಲ್ಲಿ ಗಂಗರಿಗೆ ಶ್ರೀ ಚಾವುಂಡ ರಾಯನೆಂಬವನು ಮಂತ್ರಿಯಾಗಿದ್ದನು. ಈತನು ಶ್ರವಣಬೆಳುಗೊಳ ಗ್ರಾಮದ ಶ್ರೀ ಗೋಮಟೇಶ್ವರ ಮೂರ್ತಿಯನ್ನು ಮಾಡಿಸಿದನು. ಈ ಶ್ರವಣಬೆಳುಗೊಳವು ಹಾಸನ ಡಿಸ್ಟ್ರಿಕ್ಟಿನ ಚೆನ್ನರಾಯಪಟ್ಟಣ ತಾಲ್ಲೂಕಿನಲ್ಲಿದೆ. ಇದೇ ಹಾಸನ ಡಿಸ್ಟ್ರಿಕ್ಟಿನಲ್ಲಿ ಬೇಲೂರಿದೆ. ಬೇಲೂರಿನ ದೇವಾಲಯಗಳು ಜಗತ್ಪ್ರಸಿದ್ಧವಾದವು. ಅಲ್ಲಿನ ಶಿಲಾಬಾಲಿಕೆಯರಲ್ಲಿ ಕಂಡುಬರುವ ಕುಸುರಿ ಕೆಲಸದ ನೈಪುಣ್ಯವು ರನ್ನನ 'ಗದಾಯುದ್ಧ'ದ ಕುಸುರಿ ಕೆಲಸವನ್ನು ನೆನಪಿಗೆ ತರುವುದು. ಈ ರನ್ನನು ತನ್ನ 'ಗದಾಯುದ್ಧ'ವನ್ನು ರಚಿಸಲು 'ವಿಕ್ರಮಾರ್ಜುನ ವಿಜಯ'ದ ಸಹಾಯಪಡೆದನು. ಇದನ್ನು ಬರೆದವನು ಪಂಪ. ಈತನೇ ಈಗ ತಿಳಿದಿರುವ ಮಟ್ಟಿಗೆ ಕನ್ನಡದ ಆದಿಕವಿ. ಈತನಿಗಿಂತ ನಾಲ್ಕು ಶತಮಾನ ಹಿಂದಿನವನಾದ ಮಹಾಕವಿ ಪುರುಷ ಸರಸ್ವತಿಯ ಜಯಂತಿಯನ್ನು ನೆರವೇರಿಸಲು ನಾವು ಇಲ್ಲಿ ಸೇರಿದ್ದೇವೆ, ನೆರವೇರಿಸಿದ್ದೇವೆ. ಈಗಾಗಲೇ ಬಹಳ ವೇಳಾತಿಕ್ರಮವಾಗಿರುವುದರಿಂದ ನನ್ನ ಬಣಭಾಷಣವನ್ನು ಮುಕ್ತಾಯಗೊಳಿಸುತ್ತೇನೆ. (ಹರ್ಷಧ್ವನಿಗಳು.)

ಕಾರ್ಯದರ್ಶಿಗಳ ಉಪಸಂಹಾರ ಭಾಷಣ

[ಕಾರ್ಯದರ್ಶಿಗಳು ತಮ್ಮ ಸ್ವಂತ ವೆಚ್ಚದಿಂದ ತಮ್ಮ ಉಪಸಂಹಾರ ಭಾಷಣವನ್ನೂ ಕೃತಜ್ಞತೆಯ ಪಟ್ಟಿಯನ್ನೂ ಪ್ರತ್ಯೇಕವಾಗಿ ಅಚ್ಚುಮಾಡಿಸಿ ಪುಕ್ಕಟೆಯಾಗಿ ಹಂಚಿರುವುದರಿಂದ ಅದನ್ನು ಇಲ್ಲಿ ಕೊಡುವ ಆವಶ್ಯಕತೆ ಕಂಡುಬರುವುದಿಲ್ಲ.—ಸಂಪಾದಕ.]

ಪುರುಷ ಸರಸ್ವತಿ ಪ್ರಶಸ್ತಿ ಮುಗಿಯಿತು

ಮುಗಿಯಿತು

ಶ್ರೀ ಗಿರಿಜೆ ಸರಸತಿಯರಾಣ್ಮರ
ನೇಗಳುಂ ಬಿಡದೊಲಿಸಿ ಕಬ್ಬವ
ನಾಗುವಾಡಿಯೆ ಪೇಳ್ದನೆಂಬಾ ಪುರಿಸ ಸರಸತಿಯ |
ಸೋಗಿನಲಿ ಸಾಹಿತ್ಯ ಜೀವನ
ದೀಗಳಿನ ವಿಕೃತಿಗಳನತಿಗಳ
ಲಾಗ ಹಾಕಿಸುವೀ ಕೃತಿಯು (ಚಾಮರಸನೆಂದಂತೆ) ||

ಬಾಯ ನುಡಿಗಳ ಕೇಳಿ ಕಿವಿಯೊಳ
ಗಾಯೆನುತ ಪರಿಣಮಿಸಿ ಹೋಹ ವಿ
ಡಾಯವಲ್ಲಿದು ಪಂಕ್ತಿ ಪಂಕ್ತಿಯ ಹಿಂದೆ ನಡುನಡುವೆ |
ಕಾಯುತಿಹ ಕುಟುಕುಗಳ ನಗುವಿಸು
ಪಾಯದುರು ಮೊಟುಕುಗಳ ಸೋರುವ
ಗಾಯಕುಪ್ಪಿನ ಚಿಟಿಕೆಗಳ ತಿಳಿಯದೆಯೆ ಕಣ್ಮುಚ್ಚಿ ||

ಕುರಿಗಳೋಪಾದಿಯಲಿ ಕಬ್ಬಿನ
ಹೊರಗಣೆಲೆಯನು ಮೇದಕಟ ಮೆಲು
ಕಿರಿವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳು ರಸವ |
ನೆರೆ ಸವಿವ ಗಜದಂತೆ ಚುಚ್ಚಿನ
ತೆರನ ತಿಳಿದೆಚ್ಚರಲುಬೇಕೆಂ
ದರಿಸವರ ಕೈಯೆಡೆಯ ಮಾಡಿದೆನೀ ವಿಡಂಬನವ ||

ಓದುವವರೋದುವರು ಸಹಿಸದೆ
ಸೀದು ಸಿಡಿಮಿಡಿಗೊಂಡು ನಡುವಣ
ಬೀದಿಯಲಿ ಬೈದಿಡುವವರು ಬೈದಾಡುವರು ಜಿಡೆಲಾ |
ವೇದನಾಲ್ಕರ ಪಿರಿಯ ಬೊಮ್ಮನ
ಮೇದಿನಿಯ ಮೇಲೆತ್ತಿದವನನ
ನಾದಿಮೂರುತಿ ಶಿವನ ನೆನೆಯುತೆ ನುಡಿದು ಮುಗಿಸಿದೆನು ||

ಅಹಲ್ಯೆ

ಪೂರ್ವಾರ್ಧಾಂಕ

(ಮುಂದುವರಿದದ್ದು)

ದೃಶ್ಯ ೫

(ಅದೇ ಸ್ಥಾನ. ಅಗ್ನಿಯ ಹತ್ತಿರವಿರುವ ಮೈತ್ರೇಯನನ್ನು ತೋರಿ ತೆರೆಯೇಳುವುದು. ತೆರೆ ಎದ್ದ ವೇಳೆಯಲ್ಲಿಯೇ ವಟು ಕೌಶಿಕನು ಪ್ರವೇಶಿಸುವನು.)

ಮೈತ್ರೇಯ

ಸತಿ ಅಹಲ್ಯೆಯ ಹದುಳದಿಂದಲಿ
ಪರ್ಣಶಾಲೆಯನೈದಿಸಿ
ಬಂದೆಯಾ? ತಡವಾಯ್ತು—ದಿಟವಾ
ಗೇಸು ಭೀಕರೆ ತಾಮಸಿ!

ಕೌಶಿಕ

ನಿಮ್ಮನುಗ್ರಹ ಕಾಪಿಗಾಯಿತು,
ಎಡರ ಕಾಣದೆ ಮರಳಿದೆ.
ಸತಿಗೆ ಶಕ್ರನ ಭೀತಿ ತಣಿಯಲು
ಅವನ ಪೂಜೆಯ ಬೆಳಸಿದೆ.

ಮೈತ್ರೇಯ

ಒಳ್ಳಿತೆಸಗಿದೆ ತಮ್ಮ, ಕೌಶಿಕ,—
ನಾವು ಹಗೆದಿಲ್ಲಿಂದ್ರಗೆ.
ಏನು ವಿಲಯದ ನಿಶಿಯೊ ಇದುವು!
ಏನು ಹೇಳಲಿ ಗಾಳಿಗೆ!
ತಿರೆಯನದುಮುತ ಮೇಲಕೆದ್ದೊಲು
ಬಾನ ಬಟ್ಟೆಗೆ ಚಿಮ್ಮುತ
ಮುಗಿಲನೆಲ್ಲವ ಗುಡಿಸಿ ಬಿಸುಡುವ
ತೆರದಿ ಬಹನೀ ಮಾರುತ!

ಕೌಶಿಕ

ಏನಿದಚ್ಚರಿ! ಸೊಲ್ಲನುಡುಗುತ
ಮೂಲೆಗಾಯಿತು ಮೋಡವು!
ಬಾನು ತಿಳಿಯಿತು—ಚುಕ್ಕಿ ಮೂಡಿತು,
ಸಿಗ್ಗನುಳಿಯಿತು ಕಾಳವು!

ಮೈತ್ರೇಯ

ಏನು ಬೆರಗಿದು! ತೆಂಕಣತ್ತಣಿ-
ನೆಂತು ಮೆಲ್ಲನೆ ಮೋದದಿ
ಬರುತಿಹುದು ಈ ಗಾಳಿ—ವಿಜಯಕೆ
ಸಂದ ಕಂಪಿನ ಮಾನದಿ!

ಜಗವನೆಲ್ಲವ ನುಂಗಿ ಶಾಂತಿಯ-
ನಾಳ್ವ ಹೆಗ್ಗಡಲೇನಿದು—
ಅಳಿದ ತೀರದ, ನೊರೆವ ತಾರೆಯ
ತುಂಬುತನುವೆನಗೆನಿಪುದು!

ಕೌಶಿಕ

ಅದೆಕೊ ಗುರುಗಳೆ! ಬುವಿಗು ಬಾನಿಗು
ಎಳೆಯುತೆಲ್ಲೆಯ ಗೆರೆಯನು
ಇರುಳ ಪಾಚೆಯ ಸುತ್ತಲೊತ್ತರಿ-
ಸುತ್ತ ಬಹ ಕೆಂಬೆಳಗನು!

ಮೈತ್ರೇಯ

ಅಹುದು, ಕೌಶಿಕ, ಮೂಡುತಿರುವನು
ಚಂದ್ರನಹ, ಸೋಜಿಗದೊಳು—
ಮತ್ತನುಳಿಯುತ ಕಣ್ಣ ತೆರೆದಳು
ಈಗಳೆಂದೆನೆ ಕತ್ತಲು!

ಕೌಶಿಕ

ಕಲೆಯ ಬಲ್ಲ ಕುಲಾಲ ಮೂಡಿಪ
ಮಾಟದೊಲು ಮೃತ್ತಿಕೆಯೊಳು—

ತಿರುಗಿ ಜಗವೆಂತಾಗುತಿರುವುದು
ಪೆರೆಯ ಕಲೆಯಿಂ ತಮದೊಳು !

ಇತ್ತ ಒತ್ತಿದ: ಕೆರೆಗಳಾದುವು !
ಅತ್ತ ಎತ್ತಿದ: ಗಿರಿಗಳು !—
ಅಲ್ಲಿ ನೀಲಿಮಲೇಖೆ ರಚಿಸಿತು
ಬನದ ಮೊತ್ತವ ಚಣದೊಳು !

ಮೈತ್ರೇಯ

ಮುಟ್ಟಿದೆಡೆ ರೂಪಾಯ್ತು ಬಯಲೊಳು—
ಎಂಥ ಶಿಲ್ಪಿಯೊ ಸೌಮ್ಯನು !
ಕಲ್ಪದಾದಿಯೊಳಿಂತೆ ಜಗವನು
ರಚಿಸ ಬಿದಿಯೊಲು ಕಾಂಬನು.

ಕೌಶಿಕ

ಎಂಥ ಮಾಯೆಯ ಇರುಳು, ಗುರುಗಳೆ !
ಚಣಕು ಬಗೆಬಗೆಯಪ್ಪುದು—
ಇಂಥದಪ್ಪುದು, ಇಂಥದಾಗದು
ಎನ್ನಲಾಗದ ತೆರನಿದು !

(ದೂರದಲ್ಲಿ ಗೌತಮನು 'ಮಿತ್ರ, ಮೈತ್ರೇಯಾ !' ಎಂದು ಕರೆಯುವನು.)

ಮೈತ್ರೇಯ

ಆರು ಕರೆವರು ಇಂತು ನನ್ನನು ?

ಕೌಶಿಕ

ಆರ್ಯ, ಗುರುಗಳ ಕೊರಲಿದು.

ಗೌತಮ

ಮೈತ್ರೇಯಾ !

ಮೈತ್ರೇಯ

ಅಹುದು, ಗೌತಮ ಕರೆವನಾತನು
ಸೋಜಿಗವೆ ಎಚ್ಚತ್ತುದು !

(ಕೌಶಿಕನು ಕತ್ತಲಲ್ಲಿರುವನು ; ಮೈತ್ರೇಯನು ಗೌತಮನ ಹತ್ತಿರ ಹೋಗುವನು.)

ಮೈತ್ರೇಯ

ಎಚ್ಚರಾಯಿತೆ ಅಣ್ಣ? ಗೌತಮಾ ಕರೆದೆಯಾ ?

ಗೌತಮ

ನೀನಿದಕೆ ಸೋಜಿಗಂಗೊಂಡಿರುವೆ, ಮೈತ್ರೇಯ?

ಮೈತ್ರೇಯ

ಸೋಜಿಗವೆ ಸಾಜವೆಂದೆನಿಸುವುದು ಈ ರಾತ್ರಿ.
ಎಂದಿನಂತಿಲ್ಲಣ್ಣ ಈ ಇರುಳೊಳೀ ಧಾತ್ರಿ!

ಗೌತಮ

ಎಂದಿನಂತಿಲ್ಲ ದಿಟ ಈ ಇರುಳೊಳಾವುದೂ.—

ನಿಯಮಶುಷ್ಕ ರಸರಹಿತೆ ಯಾಮಿನೀ
ಆರ್ದ್ರಳಾದಳಿಂದಿಂದುಕಾಮಿನೀ.
ಪ್ರಳಯಶಕ್ತನುನ್ಮತ್ತ ಮಾರುತಂ
ಮೆತ್ತಗಾದನುಲ್ಲಸವ ಬೀರುತಂ.
ಬಾನ ಬಗೆ ಇಂದು ರೌದ್ರಭಾವವಂ
ಬಿಟ್ಟು ಹಸನಾಯ್ತು ಮರೆದು ಹೇವವಂ.
ಸಹಜ ಧೀರತೆಯನುಳಿದು ಮನ್ಮನಂ
ನೆರವನಾಶಿಸುತ ಆಯಿತುನ್ಮನಂ.

ಮೈತ್ರೇಯ

ನಮ್ಮ ತಪವನು ಕೆಡಿಸೆ ಸುರರು ಹೂಡಿದ ಹೂಟ—
ಇಂತಿಲ್ಲದಿನ್ನಿಲ್ಲ—ಬಲ್ಲೆ ನಾನವರಾಟ.

ಗೌತಮ

ಕಣ್ಣ ಮುಚ್ಚೆ ರೂಪವೊಂದು
ಕಣ್ಣ ಮುಂದೆ ಕುಣಿವುದು ;
ಕಿವಿಯ ಮುಚ್ಚೆ ಕೊರಲದೊಂದು
ಧ್ಯಾನವನ್ನು ಮುರಿವುದು.

ಚಪಲ ಮನವೊ ಬಳಿಗೆ ಬರದು
ಎದೆಯನೆತ್ತೊ ತುಯ್ಯುವುದು;
'ಹುಂಬ ನೀ ಹುಂಬ' ಎಂದು
ಏನೊ ಮರೆಗೆ ಸಗುವುದು.

ಮೈತ್ರೇಯ

ಮಾರನಡೆ ಈ ಮಾಟ, ಸಂದೇಹವಿನಿತಿಲ್ಲ;
ನಿನ್ನ ಮನವನು ಕದಿಯೆ ಹೊಂಚಿಹನು ಆ ಕಳ್ಳ.

ಗೌತಮ

ಮರುಳ ಮುನಿ ಹುಸಿ ಜೋಗಿ ಜಂಭದವ ನೀನೆಂದು
ಒಲವೊರತೆ ಹಿಂಗಿಸಿದೆ, ಬದುಕರೂಪಾಯ್ತೆಂದು
ದನಿ ಮೊಳಗಿತೆನ್ನೊಳಗೆ, ಎಚ್ಚರೆಚ್ಚರು ಎಂದು.
ಮನಸಿಜನ ಮಾಯೆ ಇದು, ಇದ ಗೆಲ್ಲಬೇಕೆಂದು
ಮೊದಮೊದಲು ನಾನಿಂತೆ ಬಗೆದು ಬಗೆಯನು ತಡೆದೆ.
ಕೊನೆಗೆ ಕಡುಕಷ್ಟದೊಳು ಧ್ಯಾನದಾಳಕೆ ನಡೆದೆ.
ತುಸ ಕಾಲವಿಂತಿರಲು, ಸನ್ನಿರವಿನಬುಧಿಯೊಳು
ಮಥಿತವಾಯಿತು ಶಾಂತಿ ಮೃದುಮಧುರಗೀತದೊಳು.
ಸುಳಿಗೆ ಸಿಕ್ಕಿದ ತೆರದೊಳೆಚ್ಚರಕೆ ನಾನೆದ್ದೆ,
ಅಚ್ಚರಚ್ಚರಿಗೊಂಡು ಆ ಹಾಡನಾಲಿಸಿದೆ.
ಎಂದೊ ಕೇಳಿದ ಕೊರಲು—ಪರಿಚಿತಾಪರಿಚಿತಂ
ಮನ್ಮಾನಸಗ್ರಾಹಿ ಉನ್ಮದ ಮುದಾಂಚಿತಂ!
ಆಗ ಹೊಳೆಯಿತು ಮಿಂಚು—ಕಂಡೆ ನಾ ಕಣಸೊಂದು;
ಕಂಡ ಚಣವೇ ಕುಸಿಯಿತೆನ್ನೆದೆಯು ದೊಸಕೆಂದು!
ದಿವ್ಯರೂಪದ ಹೆಣ್ಣು! ಎಂತು ನಾನದ ಮರೆವೆ?
ಅಹಲ್ಯೆ—ನನ್ನ ನಚ್ಚಿನ ಮಡದಿ—ಆ ಚೆಲುವೆ!
ನೂರು ಹೆಂಗಳ ಜರೆದು ಆರಿಸಿದೆನಿವಳೋವಿ
ಈ ತಿರೆಯೊಳೀ ಬಾಳ ನಡೆಸಲೆಂದೀ ದೇವಿ.
ರೂಢಿಯೊಳು ಮರೆತೆ!—ಬಾಳ ಹಿನ್ನೆಲೆಗಿಟ್ಟೆ,
ನನ್ನ ಧರ್ಮದ ಗುಡಿಯ ಬೆಳಕಿಗೇ ಮುಸುಕಿಟ್ಟೆ.

ತಪವೆಂದೆ ಜಪವೆಂದೆ, ರಾಗವನು ಹಿಂಗಿಸಿದೆ;
ಒಲಿದಗೊಲವೊಳೆ ಮುಕ್ತಿ ಎಂಬುದರಿಯದೆ ಹೋದೆ!
ಎನಿತು ಕೊರಗೊಳು ಸಿಂದಳೀ ಚೆಲುವೆ ಸನ್ನಿದಿರು;
ಎನಿತು ದೈನ್ಯದೊಳಿರೆದಳಿನ್ನಿನಿಯ ಅಗಲದಿರು!
ಅಪ್ಸರೆಯ ಹಿಂಚಿಸುವ ಈ ರೂಪು ಈ ಕೊರಲು;
ಧರ್ಮದೊಳೆ ಎನಗಾದ ಹೆಣ್ಣಿವಳು ನನ್ನವಳು!
ಆಗರಿತೆನಾ ಸೊಲ್ಲ ಸ್ಮರಸ ಸಂಚಲ್ಲೆಂದು
ನನ್ನೊಳಗೆ ನುಡಿಯುತಿಹ ಹುರುಳ ನುಡಿ ಇಂತೆಂದು.
ತಪವ ಗಳಿಸುವ ಲೋಭವೀ ದನಿಯ ಮರೆಸಿತ್ತು,
ಇಂದುವರೆಗೆನ್ನನುವ್ರ ಕಾಳದೊಳು ಮುಳುಗಿತ್ತು.
ಈಗೆನಗೆ ಬೆಳಗಾಯ್ತು, ಕಾಳ ಕಾಲ್ಗೆಟ್ಟಿತು.
ಇಂದು ಈ ದರ್ಶನದಿ ನೋಂಪಿ ಕೊನೆಗಂಡಿತು.
   ಬಾ, ಪೋಪ, ಮೈತ್ರೇಯ, ಒಲವನನುಸರಿಸಿ;
   ಒಂಟಿಯೊಳು ಕಂಗೆಟ್ಟು ಇರುವಳೆನ್ನರಸಿ.

ಮೈತ್ರೇಯ

ಕಂಡೆಯಾ ನೀನವಳ, ಕೇಳಿದೆಯ ಆ ಕೊರಲ?

ಗೌತಮ

ಕಂಡೆನಾ ಸುಂದರಿಯ, ಕೇಳಿದೆನು ಆ ಕೊರಲ;
ಅರಿತೆ ನಾನೀ ಜಗವ ನಡೆಸುವೊಲುಮೆಯ ಪುರುಳ.
ಇದಕಾಗಿಯೇ ಹೊಸಲು ಕಡಲ ಕುರಿತೋಡುವುದು
   ಇದಕಾಗಿಯೇ ಹಳುವು ಪೂತು ಫಲಿಸುವುದು.
ಇದಕಾಗಿಯೇ ಜೀವ ಬೇರೊಂದನರಸುವುದು
   ಇದಕಾಗಿಯೇ ದೇವ ಸಂಸಾರಿಯಹುದು.
ಬಾ, ಮಿತ್ರ ಮೈತ್ರೇಯ, ಮನೆಯ ಬಳಿವಿಡಿದು;
   ಸ್ನೇಹವೆನ್ನೆದೆಯತ್ತ ತುಯ್ಯುತಿಹುದು.

ಮೈತ್ರೇಯ

ಇನ್ನೆರಡು ದಿನ ತಡೆಯೆ, ಸಿದ್ಧಿಸುವುದೀ ಸಿದ್ಧಿ.
ಆಗ ಬೊಮ್ಮನ ಮಿಗುವೆ—ವಶವಗೈ ಈ ಬುದ್ಧಿ.

ಗೌತಮ

ಮೂಜಗವನೆ ರಚಿಸಬಲ್ಲ
ತಪದ ಶಕುತಿ ಇಹುದೆನ್ನೊಳು.
ಸೂರಾಸೆಗೀಡಾಗಿ
ಸುಯ್ಯುತಿಹಳು ಎನ್ನವಳು.
ಲೋಭಕುಂಟು ಪರಿಮಿತಿ
ಬಳಿಕ ತ್ಯಾಗ ಪ್ರೇಮಮಿತಿ.
ಹಲವು ಮಾತೇಕೆ ಕೆಳೆಯ—
ಪ್ರೇಮತಂತುಬದ್ಧ ಹೃದಯನಾದೆ—ಬಾ, ಬಾ.
ಲೋಭಮುಕ್ತ ತ್ಯಾಗಸಕ್ತ
ಇಂದು ನಾ ಪ್ರಿಯಾನುರಕ್ತನಾದೆ—ಬಾ, ಬಾ.
ಕೌಶಿಕಮುನಿ ಮೇನಕೆಯನು
ಒಲಿಸಿದ ತೆರನೆನ್ನೊಲವನು
ಎಲ್ಲ ಆಸೆ ಹಿಂಗುವಂತೆ
ಒಲಿಸಲಾದೆ ನಾನಿದಿಂತೆ.
ತಪದ ರಾಶಿ ವೆಚ್ಚವಾಗಲಿಂದು ಮೋದಕೆ!
ಹೊನ್ನ ಮಾಡ ಹೂದೋಟವೆಮ್ಮ ಭೋಗಕೆ!
ಧನದ ಸೈ ಎನ್ನಲಿಂದು ನಮ್ಮ ತ್ಯಾಗಕೆ!
ಮದನ ಮೂಗುಮುಟ್ಟಿಕೊಳಲಿ ನಮ್ಮ ರಾಗಕೆ!
ಸತಿಯೊಲಿಪೆನು ಇಂದ್ರಾಣಿಯ
ಇಂದ್ರನಂದದಿ—
ಇಂಥ ಜೋಡಿ ಇನ್ನಿಲ್ಲ
ಎನ್ನುವಂದದಿ!

(ಹೋಗುವನು.)

ಮೈತ್ರೇಯ

ಮದನನ ಗೆದ್ದವರುಂಟೇ ಜಗದಿ?
ತನ್ನ ಪತಾಕೆಯ ಈ ಮುನಿಮನದಿ
ನೆಟ್ಟನಲಾ ಈ ಮಡದಿಯ ನೆವದಿ.
ಮಾಟದ ಇರುಳಿದು, ಏತಕೊ ಭಯದಿ

ಶಂಕಿಪುದೆನ್ನದೆ ಮೋಸವಿದೆನಿಸಿ.
ಕೌಶಿಕ, ಬಾರಾ, ಸಖನನುಸರಿಸಿ
ಪೋಗುವ ಪಾವಕನಂ ನಮಿಸಿ
ಮಂಗಳವನು ಹರಸಿ.

ತೆರೆ.

ದೃಶ್ಯ ೬

(ಪರ್ಣಶಾಲೆಯಲ್ಲಿ ಅಹಲ್ಯೆ ಹಸುಳೆಯ ತಲೆಯನ್ನು ತೊಡೆಯಮೇಲಿಟ್ಟು ಮಲಗಿಸಿಕೊಂಡು ನುಡಿದಾಡುತ್ತಿರುವಳು.)

ಮಗು

ಇಂದು ಬಂದಿದ್ದರೇ ನಮ್ಮಯ್ಯನೆಡೆಗೆ
ನೀನೊರೆದ ದೇವತೆಗಳೀ ನಾಡ ಕಡೆಗೆ?
ನನಗೆ ಭಯವಾಯ್ತಮ್ಮ ನಿನ್ನ ಕಾಣದೆಯೆ;
ನನ್ನನೂ ಜೊತೆಗೊಯ್ಯೆ ನಾಳೆ ತಪ್ಪದೆಯೆ.

ಅಹಲ್ಯೆ

ಅಂತಾಗಲೆನ್ನಯ್ಯ ಕರೆದೊಯ್ವೆ ನಾಳೆ,
ಇಂದು ಮಲಗೆಲೆ ಕಂದ ಹಾಸಿಗೆಯ ಮೇಲೆ.

ಮಗು

ಅಮ್ಮ ನೀನೆನಗೊಂದು ಸವಿಯ ಕತೆ ಹೇಳೆ—
ಅಪ್ಸರೆಯರಿರುತಿರುವ ನಾಡ ಕತೆ ಹೇಳೆ.

ಅಹಲ್ಯೆ

ಎಂತೊರೆಯಲಣ್ಣಯ್ಯ ಆ ನಾಡ ಕತೆಯ
ಎಲ್ಲ ಲೋಗರ ಕನಸ ಲೋಕದಚ್ಚರಿಯ?
ಅಲ್ಲಿ ಇರುಳೇ ಇಲ್ಲ ನಮ್ಮನಂಜಿಸಲು
ಬೇಕಾದುದೆಲ್ಲವಿದೆ ನಮ್ಮ ನಂಬಿಸಲು.

ಮಗು

ಹುಲ್ಲೆಕರುವಲ್ಲಿಹುದೆ, ಕರಿಗಣಿಕೆ ಹಣ್ಣು
ರಸಬಾಳೆ ದಾಳಿಂಬೆ ಚಕ್ಕೋತ ಹಣ್ಣು?

ಅಹಲ್ಯೆ

ಇಷ್ಟೆ ಸಾಕೇ ಕಂದ, ಸಾಕೆ ನಿನಗಿನಿಸು ?
ಬೇಕಾದ ಹಣ್ಣಿಹುದೊ ಅಲ್ಲಿ ದಿನದಿನಸು !

ಮಗು

ಆಮೇಲೆ ?—

ಅಹಲ್ಯೆ

ಕುಡಿಯಲಮೃತವು ಅಲ್ಲಿ—ಗದರಿಪರ ಕಾಟ
ಇಲ್ಲದಾಡಲು ಇಹುದು ನಂದನದ ತೋಟ.
ನಗುನಗುವ ಜನವಲ್ಲಿ—ಅಳುವ ಸೊಲ್ಲಿಲ್ಲ—
ಬಯಸಿದೊಡೆ ದೊರಕುವುದು ಬೇಡಿದನಿತೆಲ್ಲಾ.
ದಿವವೆಂಬರಾ ನಾಡ ;—ಇಂದ್ರನೆಂಬರಸು
ವೈಭವದೊಳಾಳುತಿಹನಿಂದ್ರಾಣಿವೆರಸು.
ಅವಳ ಪುಣ್ಯವೆ ಪುಣ್ಯ—ಮೂಜಗದ ಕನಸು
ಆಯಿತಾ ಭಾಗ್ಯವತಿಗಿರವಿನೊಳೆ ನನಸು !
ಮಳೆರಾಯನೆನ್ನುವರು, ಬೆಳೆರಾಯನವನು,
ತಿರೆಯೆಲ್ಲವೀತನೇ ಪೊರೆಯುತಿರುವವನು.
ಕಂದಮ್ಮ . . .

ನಿದ್ದಿಸಿದ ನೀ ಮುದ್ದನೇವಹಾಯೆಗಾಯ್ತಮ್ಮ
ಈ ನಾಡು? ನಾ ಬಗೆದ ಕನಸೆ ಮೂಡಿ
ಬಂದ ತೆರನೀ ಜೊನ್ನ ಈ ಗಾಳಿ ಈ ಕಂಪು
ಎನಗೆನಿಪುದಿಳೆಯಿಂದು ದಿವಕೆ ಜೋಡಿ.
ರೆಕ್ಕೆಗೊಂಡೇರಿತೇ ಪುಷ್ಪಕದ ತೆರದಿ
ಕರಿಮುಗಿಲ ಮೇರೆಯುಳಿದೀ ನಾಡು ಭರದಿ ?
ಇಂತಹುದು ಕನಸಿನೊಳು—ನನಸಲ್ಲವಿದುವು ;
ಹಗುರವಾಗುಲ್ಲಸಕೆ ತವರಾಯಿತಿರವು.

ಅಲ್ಲಗೋ ದೂರದೊಳು ಕಾಣುವಚ್ಚರಿ ಏನು ?
ಆರ ಮೂರ್ತಿಯದವ್ವ, ಬರುವರಾರಿಂತು ?

ಇಚ್ಛೆ ಕೈಗೂಡಿತೇ ಪತಿದೇವ ಬರುತಿಹರೆ
ತಪದ ಸಿದ್ಧಿಯ ಪಡೆದು ದಿವ್ಯತೆಯನಾಂತು?
ಧೀರಗತಿ, ನೆಲನೋಕಿ ನೋಕದೊಲು ನಡೆ ಹಗುರ,
ಪರಿವೇಷಗೊಂಡಿರುವ ಸೌಮ್ಯತೇಜ!
ತಿರೆ ನಡೆವ ಸುರನಂತೆ ಹೊಸ ತೆರದಿ ಬರುವಿವರ
ಕಂಡು ಬೆಚ್ಚರಿಸುವುದು ಮನಕೆ ಸಾಜ.
ಧಿಕ್, ನನ್ನ ಅಲಸತೆಗೆ, ಬಗೆಯ ಕಳವಳಕೆ!
ಅಣಿಗೈಯದಿಂತಿಹೆನೆ ಪತಿಯ ಸ್ವಾಗತಕೆ!

(ಒಳಕ್ಕೆ ಹೋಗಿ ಅರ್ಘ್ಯಪಾದ್ಯಗಳನ್ನು ಅಣಿಮಾಡುವಳು.)

ಇಂದ್ರ

(ಗೌತಮವೇಷದಿಂದ ಪ್ರವೇಶಿಸಿ)

ಸತಿ ನೋಡಲೆ ಬೆಚ್ಚದೊಲು ಪತಿರೂಪವಾಂತೆ;
ದಿಟವರಿಯಲೇನೆಸಪಳೋ ಕಾಣೆ ಕಾಂತೆ.
ಗೌತಮನ ಮನೆ ಎನ್ನ ಕಪಟದೊಳಹೊಕ್ಕು
ಕಂಡಿತೆನೆ, ಭಯಮಿಗುವುದೆನ್ನುಲ್ಲಸಕ್ಕೂ.

ಅಹಲ್ಯೆ

(ಅರ್ಘ್ಯಪಾದ್ಯದೊಡನೆ ಪ್ರವೇಶಿಸಿ)

ಸ್ವಾಗತಮೆ, ನನ್ನಿನಿಯ, ನೋಂಪಿ ಕೊನೆಗಂಡಿತೇ,
ಮನೆಯಾಸೆ ಮರಳಿತೇ, ನನ್ನಾಸೆ ಫಲಿಸಿತೇನು?
ಈ ನಲವು ನನ್ನಿಯೋ? ಚಿತ್ತದುದ್ಭ್ರಾಂತಿಯೋ?
ಏ ಮಾಯೆ ಇರುಳಿದುವು; ಬಗೆದುದನುವಪ್ಪುದೇನು!

ಇಂದ್ರ

ನಾ ಬಂದುದಚ್ಚರಿಯೆ, ಪ್ರಿಯೆ, ಇಲ್ಲಿ ಬೆರಗೇನು?
ನನ್ನೊಳಗನಿಂದರಿತೆ, ಏವೇಳ್ವೆನದ ನಾನು?
ಪೆರೆಗಣ್ಣ ನಿಶೆ ತೆರೆದಳರಳರಳಿ ಕಂಪಾಯ್ತು,
ತಂಗಾಳಿ ಮೈಮೇಲೆ ತಣುವಾಗಿ ಹರಿಯಿತ್ತು.
ಅಪ್ಸರೆಯ ಗೀತಕೂ ಇನಿದಾದ ಹಾಡೊಂದು
ಧ್ಯಾನದಾಳದೊಳಿದ್ದ ಮನಕೆ ಎಚ್ಚರ ತಂದು,

ಇಂತೆಂದಿತೆಲೆ ಮರುಳೆ, ನಿನ್ನಿನಿಯಳಿಂದೊಂಟಿ,
ಇಂದಿಂತು ಅಗಲುವರೆ?—ಎಸಲೆದ್ದೆ, ಕಲಕಂಠಿ,
ಈ ಚೆಲುವಿನಿರುಳಿನೊಳು, ಬಾ, ಒಲವನರ್ಚಿಸುವ,
ಬಾ, ಇಂದು ಸಮ್ಮುದಕೆ ತನುಮನವನೊಪ್ಪಿಸುವ!

ಅಹಲ್ಯೆ

ಎಂದುಮಿಲ್ಲದ ರೀತಿ, ಎಂದುಮಿಲ್ಲದ ಮಾತು!
ನಂಬಲೇ, ಬಂದನೆನೆ ನನ್ನಿನಿಯ ನನಗೀತು?

ಇಂದ್ರ

ನಿನ್ನಿನಿಯ ನಾನ್ಯೆಸೆ—ಇಲ್ಲಿ ಸಂದೆಗವೇಕೆ?
ಪೂರ್ಣೇಂದುವದನೆ ಬಾ, ಸಲಿಸೆನ್ನ ಹಾರೈಕೆ.

(ಮುಂದೆ ಮುಟ್ಟಹೋಗುವನು)

ಅಹಲ್ಯೆ

(ದಿಟ್ಟಿಸಿ ನೋಡಿ ಬೆಚ್ಚಿ ಹಿಮ್ಮೆಟ್ಟಿ)

ಉಹು ಅಲ್ಲ, ಅಬ್ಬಯ್ಯ! ಏಗೈವೆ, ಪತಿಯಲ್ಲ—
ಪತಿವೇಷವಾಂತಿರುವ ಮಾಯಾವಿ ಈ ಹೊಲ್ಲ!

ಇಂದ್ರ

(ಸ್ವರೂಪವಾಂತು)

ಬೆದರದಿರು, ಹೇ ಭೀರು, ಏತಕೀ ದಿಗಿಲು?
ನೀ ನೆನೆದೆ, ನಾನಾದೆ ನಿನ್ನಭೀಷ್ಟದೊಲು.

ಅಹಲ್ಯೆ

(ಭ್ರಾಂತಳಾಗಿ, ಬಾಯಿಕಟ್ಟಿಹೋದವಳಂತೆ)

ಎಲೆ ದುರುಳ ನೀನಾರು, ಈ ಕಪಟವೇಕೆ?
ಎನಿತು ಧೈರ್ಯವೊ ನಿನಗೆ ಮುನಿಸತಿಯ ಕೆಣಕೆ?

ಇಂದ್ರ

ಒಲುಮೆ ಸೆಳೆತಕೆ ಸಂದ ಸುರರ ದೊರೆ ನಾನು—
ತ್ರಿಜಗವಂದಿತನಿಂದು ನಿನಗಾದ ಶರಣು.

ಅಹಲ್ಯೆ

(ಅದೇ ಬೆರಗಿನ ಭಾವದಲ್ಲಿ)

ಹೇ ದಿವ್ಯದರ್ಶನನೆ, ದಿವದರಸೆ ನೀನು!
ಹೆರರ ಸತಿಗಾಶಿಸುವ ನಿನ್ನ ಘನವೇನು?

ಇಂದ್ರ

ಏನೆಂಬೆನೆಲೆ ಚೆಲುವೆ ಈ ಮರುಳುತನಕೆ?
ಹೊರತೇನು, ನನ್ನರಸಿ, ಒಲಿದಿರುವ ಮನಕೆ?
ಒಲಿದವಗೆ ಹಿರಿದೊಲವು, ಅದಕು ಘನವಿಲ್ಲೆ;
ನನ್ನೆಲ್ಲ ಭಾಗ್ಯಕೂ ಮಿಗಿಲಾದೆ, ನಲ್ಲೆ.

ಅಹಲ್ಯೆ

ಹೇ ಭ್ರಾಂತದೇವತೆಯೆ ಹೋಗು ಬಳಿಬಿಡಿದು—
ನಿನ್ನ ಬಗೆ ನೀನರಿತು ನನ್ನಾಸೆ ತೊರೆದು.

ಇಂದ್ರ

ನನ್ನ ನಾನರಿತಿಹೆನು, ನಿನ್ನ ನೀನರಿಯೆ.
ರೂಢಿಗೀತೆರ ನುಡಿವೆ, ಎಲೆ ಮುಗುದೆ, ಅರಿಯೆ.
ನಿನ್ನೆಲ್ಲ ಆಸೆಗಳ ಸಲಿಸಬಲ್ಲವನು
ನಿನ್ನೊಲುಮೆಭಿಕ್ಷೆಯನು ಬೇಡಿ ನಿಂದಿಹನು.

ಅಹಲ್ಯೆ

ಓ ಸರ್ವದರ್ಶನನೆ ಇಂತೊರೆಯ ಬೇಡೈ,
ನನ್ನ ಮರ್ಮವ ಹಿಡಿದು ಇಂತು ನುಡಿ ಬೇಡೈ.

ಇಂದ್ರ

ಮರುಳ ಗೌತಮನೆಂತು ನನ್ನ ಸಮನಹನು—
ತಪದಿ ದೇಹವ ಬರಿದೆ ಬಣಗಿಸುತ್ತಿಹನು!
ಆ ನಚ್ಚು ಬಿಡು, ನಲ್ಲೆ, ಕನ್ನಡಿಯ ಗಂಟು!
ನಿನ್ನ ಬಯಕೆಗಳೆಲ್ಲ ಸಲೆ ನಾನೆ ನಂಟು.

ಅಹಲ್ಯೆ

ಹೇ ಸರ್ವಶಕ್ತನೇ, ಎನ್ನ ಪೊಲೆಶಕುತಿ!

ಇಂದ್ರ

ಎನ್ನಿಂದಲಹುದೊಲವೆ ನಿನ್ನಾಸೆಮುಕುತಿ.
ನಂದನದ ತೋಟದೊಳು ಮಂದಾರ ಮುಡಿದು
ಕಲ್ಪಲತೆ ಮಾಡದೊಳು ಸವಿಯ ಸೊದೆಗುಡಿದು
ಮರೆಯೊಳಗೆ ಕಿನ್ನರಿಯರೊರೆವ ಗೀತಕ್ಕೆ
ಮನಸೋಲುತಪ್ಪ ಬಾ ದಿವದ ಮೋದಕ್ಕೆ!

ಅಹಲ್ಯೆ

ಓ ಮನೋವಿಭ್ರಾಂತಿ, ಓ ಆಸೆ ಕಣಸೆ!

ಇಂದ್ರ

ಭ್ರಾಂತಿಯಲ್ಲವು ಕಾಂತೆ, ನನ್ನಿ ಇದು ನನಸೆ.
ತಾರೆಗಳ ನೂಪುರವ ತೊಡಿಸುವೆನು ಅಡಿಗೆ
ಕೊಂಕುಪೆರೆಯನು ತಂದು ಮುಡಿಸುವೆನು ಮುಡಿಗೆ
ಕ್ಷೀರಪಥ ಮೇಖಲೆಯನೊಪ್ಪಿಸುವೆ ಕಟಿಗೆ
ಕೊನೆಗೆನ್ನ ಮಕುಟವನೆ ಮುಡಿಪಿಡುವೆ ನಿನಗೆ!

ಅಹಲ್ಯೆ

ನನ್ನಿರವು ಕುರುಡಾಗಿ ಕೋರೈಪ ಬೆಳಕೆ,
ಮೊದಲಿರುಳೆ ಸೈ ಎನಿಪೆ ನೀನೆನ್ನ ಮನಕೆ.

ಇಂದ್ರ

ಮಂಗ ಮಾಣಿಕವನ್ನು ಬಿಸುಡುವೊಲು ಮುಗುದೆ
ಬಳಿಸಂದ ಭಾಗ್ಯವನು ಬಿಸುಡದಿರು ಬರಿದೆ.

ಅಹಲ್ಯೆ

ಶರಣಾದೆ ಶರಣಾದೆ, ದೇವ, ನಿನಗಿಂದು—
ಸತಿಯ ಗೆಲೆ ಬಯಸದಿರು ಮರೆಯಾಗು ಸಂದು.

ಇಂದ್ರ

ಸತಿತನವಸಂತಳಿವೆ, ಭೀರು, ಒಲಿದೆನಗೆ?
ಮೊದಲಿಳೆಯ ಮಡದಿಯರು ಸಲುವರಿಂದ್ರನಿಗೆ.

ಅಹಲ್ಯೆ

ಹರಕೆ ಇಡೆ ಮಂಗಳಕೆ, ಏನೊರೆವೆಯಿಂದು ?
ಹಿಂಗೆನ್ನ ಬೀಳಾಸೆ, ಕನಸೆ ಮರಸೊಂದು.

ಇಂದ್ರ

ಇಂತೆಯೇ ನಿನ್ನಿಚ್ಛೆ, ಎಲೆ ಬೆರಗಿನಬಲೆ ?
ಕನಿಕರಿಪವರೆಗಿಹೆನು ನಿನ್ನ ಹಂಬಲೊಳೆ.

(ಮರೆಯಾಗುವನು.)

ಅಹಲ್ಯೆ

ಮುಂಚಿತಚ್ಚರಿಬೆಳಕು,
ಕವಿಯಿತಿರುಳು ;
ಮರೆಯಾಯಿತೀ ಕಣಸು,
ದಿಟ್ಟಿ ಬಯಲು !
ಶಾಂತವಾಗೆಲೆ ರಾಗ ಹೃದಯದಾವೇಗ !
ಭ್ರಾಂತೆ ನಾ ಭ್ರಾಂತೆ ನಾನೇಗೈವೆನೀಗ ?

ಗಾಳಿ ದನಿಗಳು

ಮರುಳೆ ಹೆಣ್ಣೆ ಏನಗೈದೆ ?
ಸಾವವರೆಗು ಮರುಗಲಾದೆ.

ಎಲ್ಲರಾಸೆ ತಪದ ಪುಣ್ಯ
ಹುಚ್ಚಿ, ಈ ಸುರವರೇಣ್ಯ !

ಇಂಥ ಭಾಗ್ಯ ಬಾಳಿಗಹುದು
ಯುಗಕೊಮ್ಮೆಗೆ, ಹೋಯ್ತು ಹರಿದು !

ಮುರುಟಿದೆಯಲಾ ನೀನೆ ಮಳ್ಳಿ
ನೀನೆ ಬೆಳೆದ ಬಯಕೆ ಬಳ್ಳಿ !

ಮಂದಭಾಗ್ಯೆ, ಹುಸಿಯಿತೊಲವು ;
ಬಯಕೆಗಾದೆ ತಿರುಗಿ ತೆರವು !

ದೇವಗೆಂಥದಮ್ಮ ಧರ್ಮ ?
ಏವೇಳ್ವೆ ನಿನ್ನ ಕರ್ಮ !

ಅಹಲ್ಯೆ

ದಿಟ! ಓ ದಿಟ! ಚಾಂದನಿಗಳೆ
   ನನ್ನೊಳ ನುಡಿ ಇಂತೆ
ಮಾರ್ದನಿಗೊಡುವುದು, 'ಮರುಳೆ
   ಎಡರಾಯಿತಹಂತೆ!'
ಕದಡಿದ ಬಗೆ ಮದಡಾಯಿತು
   ಮುಂಗಾಣದೆ ಹೋದೆ;
ಒಳಗೊಗೆದೀ ಹೊಸ ಮಿಂಚಿಗೆ
   ಬೆಚ್ಚಿದೆ ಬೆರಗಾದೆ!
ದಿಟ, ತಿರುಳಿದು, ಬಾಳ್ ಪುರುಳಿದು
   ಇರವಿನ ನನ್ನಿಯಿದು.
ಮಿಕ್ಕೆಲ್ಲವು ಹುಸಿ! ಕೋ ಕೋ
   ನಿನ್ನದು ನಿನ್ನದಿದು!
ಸಡಿಲಿದ ತೊಟ್ಟಿನ ಕಟ್ಟಿನ
   ಅರಳಿದ ಮಲರಂತೆ
ಒಗೆ ಮುದಕಾಯಿತು ಬಾರಾ
   ಬಾ, ಬಿರುವೆಲರಂತೆ!
ಬಾ ಸೊಗವೇ ಬಾ ರಾಗವೆ
   ಬಾ ನಲವೇ ಕೊಳ್ಳು—
ತನುವಂ ಮನವಂ ನಾಣಂ
   ಜಾಣಂ ನೀ ಕೊಳ್ಳು!
ಆಸೆಯ ಗಾಳಿಗೆ ಬಿರಿದೀ
   ರಾಗದ ಪಂಕೇಜ
ಮುಡಿಪಾಯಿತು ನಿನಗೀ ಬಗೆ—
   ಕೊಳ್ಳಿದ ಸುರರಾಜ!

ಇಂದ್ರ

(ಕಾಣಿಸಿಕೊಂಡು)

ಬಂದೆನಿದೊ ಬಂದೆನಿದೊ
   ತಿರೆಯರಳೇ, ಇಂತೆ

ಉಲ್ಲಸದೊಳು ಬಸವೊಲಿಪೀ
ಚೈತ್ರಾಸಿಲಸಂತೆ—
ಕಟ್ಟಿಲ್ಲದೆ ಸಿಟ್ಟಿಲ್ಲದೆ
ಬರಿಸೊಗವಪ್ಪಸ್ನ
ಸುರಪಥದೊಳು ಸೌರಭದೊಲು
ತೇಲಿಪೆ ಬಾ ನಿನ್ನ !

ಅಹಲ್ಯೆ

ಬಾರೊಲವೇ ಬಾ ಮುದವೇ
ಬಾ ಬಚ್ಚಿಟ್ಟಾಸೆ—
ಎಲ್ಲವ ಕೊಳ್ಳಿನ್ನಿಲ್ಲೆನೆ
ಎನೆ, ಮುಕ್ತಿ ಇದೈಸೆ.
ನಿನ್ನವಳಾಂ ಇನ್ನಿಲ್ಲಾಂ
ಇಂದಳಿದಳಹಲ್ಯೆ—
ಬಾಳ್ಮಿಗುವೀ ಅನುರಾಗಕೆ
ಇಗೊ ವಿಾಸಲಹಲ್ಯೆ !
(ಹೋಗುವರು.)

(ಸಂಗೀತನಾಗುತ್ತಿರುವುದು. ಒಂದು ಗಳಿಗೆ ರಂಗಸ್ಥಲವು ನಿರ್ಜನವಾಗಿರುವುದು. ಬಳಿಕ ಗೌತಮನು ಪ್ರವೇಶಿಸುವನು. ಸಂಗೀತವು ಬೇರೆಯ ರಾಗಕ್ಕೆ ಬದಲಾಯಿಸುವುದು.)

ಗೌತಮ

(ಪರ್ಣಶಾಲೆಯನ್ನು ನಿಟ್ಟಿಸುತ್ತಾ)

ಕಂಡಿತೆನ್ನ ಲೆಸಾಲೆ—ಸಸ್ನೊಲುಮೆ ಕರುಮಾಡ.
ಜೊನ್ನದೀ ಕಡಲಿಸೊಳು ಸನ್ನಿಸಿಯಳಿಹ ಮಾಡ
ಸಿರಿಯುನೆಡೆಗೊಂಡಿರುವ ಕಮಲದೊಲು ಕಾಣುತಿದೆ;
ಈ ನೋಟವೆನ್ನೆದೆಗೆ ಸಮ್ಮುದವ ಬೀರುತಿದೆ
ವಿವಿಧ ರಾಗವ ತೋರಿ. ಹಾರೈಸದೀ ಬರವು,
ಮೊದಮೊದಲ ದಿನದಂತೆ ಪೂರಗೊಂಡೀ ಒಲವು,
ಬೆರಗುಗೊಳಿಸುವುದವಳ, ನಾ ಬಲ್ಲೆ. ಈ ಮುಗುದೆ
ಚಕಿತ ದೃಷ್ಟಿಯೊಳೆನ್ನ ನೋಡಿ ನುಡಿಸಲು ಬರದೆ,

ಅರಿತು ಮೌನದಿ ತಗ್ಗಿ, ಮಂದಹಾಸವ ಬೀರಿ
ಎಂತು ಸ್ವಾಗತಿಸುವಳು ವಧುವಂತೆ ನಾಣೇರಿ!
ಸಿರಿಗುರುಳ ಪೆರೆನೊಸಲ ಎರಳೆಗಂಗಳ ಚೆಲುವೆ,
ನನ್ನ ವಂಶದ ತಾಯಿ, ನನ್ನಾಸೆ ನನ್ನೊಡವೆ—
ಎಂತಿವಳ ನಾಸೊಲಿಪೆ—ಇಂದ್ರನೊಲೆ, ಚಂದ್ರನೊಲೆ?
ಎನಿತು ಚೆಲುವೀ ಇರುಳು ನಮ್ಮೊಲುಮೆಗಾದವೊಲೆ!

ಅಂಚೆಯಂತೆ ತೇಲುತಿಹನು
  ಆಗಸದೊಳು ಇಂದುವು;
ಕೊಂಚೆಯಂತೆ ಸಾಲಿಟ್ಟುವು
  ಬಿಳಿಯ ಮುಗಿಲ ತಂಡವು.
ವಿಶ್ವ ನೀಲ ನೀರಧಿಯೊಳು
  ತಿರೆಯು ಕುಮುದವರಳಿತೆನಲು
ಸೂಸುತಿಹುದು ಸೌಸವಂ
  ತುಂಬುತಾಕಾಶವಂ.

ಅದೆಕೊ ಮೇಘಪಥದೊಳೆಂತು
  ಮಿತಿಯಿಲ್ಲದ ಮೋದದಿ
ತೇಲುತಿಹರು ಸುರದಂಪತಿ
  ಸ್ಮೃತಿ ಇಲ್ಲದ ತೋಷದಿ!
ಇಂದ್ರಪುರಿಯ ನಂದನದೊಳು
  ಇಂಥ ಸೊಗಸು ಕಾಣದಿರಲು
ಬಂದರಿವರು ಮೇಳೈಸಿ
  ತಿರೆ ಎಲರಿಗೆ ಹಾರೈಸಿ.
ಅಹಹ!—

ರಾಗದಾವೇಗವೆಂತೊ
  ಅಂತೆ ಮುಲೆವರತ್ತು—
ಕಾಮುದೇವನೆಳೆತವೆಂತೊ
  ಅಂತೆ ಒಲೆವರಿತ್ತು!
ಏಳ್ವರಿತ್ತು ಬೀಳ್ವರತ್ತು

ಕೊನೆಗಿಳಿವರು ಭೂಮಿಗಿತ್ತ—
ಮಲರ ಜೊತೆಗೆ ಸೊಕ್ಕಿತ ಅಳಿ
ನೆಲಕುರುಳುವ ಚೆಂದದಲಿ!

(ಕೆಲವು ಹೂವುಗಳನ್ನು ಆರಿಸುತ್ತ)

ಎಂಥ ನೋಟ! ಎಂಥ ಬೇಟ!
ಎಂಥ ಮುಕ್ತಿಯಾಟ!
ಮೋದಕೊಂದಕಾಗಲಿಂದು
ಇಂತೆ ನಮ್ಮ ಕೂಟ—
ಬೆಳದಿಂಗಳ ಈ ಇರುಳೊಳು
ಸನ್ನಿಧಿಯಳ ನಾನೊಲಿಸಲು
ಬಂದುದೆ ಸೈ ತಪಬಿಟ್ಟು
ಮುದಕಿರವನು ಮುಡುಪಿಟ್ಟು.

(ಪರ್ಣಶಾಲೆಯ ಬಾಗಿಲಿಗೆ ಹೋಗಿ)

ಅಹಲ್ಯೆ! ಅಹಲ್ಯೆ!

(ಬಾಗಿಲನ್ನು ನೂಕಿ ತೆರೆದು)

ತೆರವೀ ಮನೆ, ಬಯಲೀ ಮನೆ!
ಒಂಟಿಯೊಳೀ ಹಸುಳೆ
ಮಲಗಿರುವನು ನಡುವಿರುಳೊಳು—
ಎಲ್ಲಾದಳು ತರಳೆ?

ಪವಡಿಸದಂತೀ ಹಾಸಿಗೆ
ತುಸ ಮಾಸದೆ ಇಹುದು—
ಮಚ್ಚಿಂತೆಯೊಳೀ ವಿರಹಿಣಿ
ನಿದ್ದಿಸದಿರಬಹುದು.

ಮನೆ ಹೊರಗಣ ಮೊದಲೊಲುಮೆಯ
ಬಳ್ಳಿಯ ಚಪ್ಪರದಿ
ಇರುಳಿಳಿವಳೊ ಸಹಧರ್ಮಿಣಿ
ಸವಿನೆನಪಿನ ನೆವದಿ?

ಹಸುಳೆ

(ಕನವರಿಸುವುದು)

ನನಗೆ ಬಹು ಭಯವಾಯ್ತಮ್ಮ ನಿನ್ನ ಕಾಣದೆಯೆ!

ಗೌತಮ

ಬೆಚ್ಚರಗೊಳ್ಳದೆ ಕಂದಾ
ಮಲಗಿರು; ನಾ ಭರದೆ—
ಇನ್ನಗಲಿಕೆ ಇಲ್ಲದವೊಲು
ತಹೆ ತಾಯಿಯ ಮುದದೆ.

(ಹೊರಗೆ ಬರುವನು—ತೆರೆಯ ಕಡೆ ಸರಿಯುವನು.)

ತೆರೆ.

ದೃಶ್ಯ ೭

(ಪೂರ್ವೋಕ್ತವಾದ ಬಳ್ಳಿಯ ಚಪ್ಪರದಲ್ಲಿ)

ಅಹಲ್ಯೆ

ಸೊಗದ ಸುಳಿಗಾಳಿಯೊಳು ತರಗೆಲೆಯ ತೆರದಿ
ಬಾನಲೆದು ಬಸವಳಿದೆನೈ ಪ್ರೇಮಭರದಿ!

ಇಂದ್ರ

ಈ ತೋಳಿನಂದಣದಿ ನನ್ನೊಲವೆ ತಂಗು—
ಶಶಿಗೆ ಶಶಿಕಲೆಯಂತೆ ಆಗಲೀ ಪಾಂಗು.

ಅಹಲ್ಯೆ

ಮುಟ್ಟಲೊಡೆಯುವ ನೀರ ಹೊಳೆಗುಳ್ಳೆಯಂತೆ
ಮೋದವೆಂತಾಯಿತಹ! ಆದೆ ವಿಭ್ರಾಂತೆ!

ಇಂದ್ರ

ಹೊಸತೆಂದರಾವುದಕು ಬೆಚ್ಚುವುದು ಮನವು—
ಭ್ರಾಂತಿ ಎನಿಸಿತೆ ಕಾಂತೆ ದೇವೇಂದ್ರನೊಲವು?

ಅಹಲ್ಯೆ

ಧನ್ಯಳೆನಿಸಿದೆ, ದೇವ, ಒಲುಮೆವರವಿತ್ತು.
ಪೋ ಇಂದ್ರ, ಸೊಗಬೆಳಸಲಹುದದುವೆ ಕುತ್ತು.

ಇಂದ್ರ

ಬೇಸರಾಯಿತೆ ನಿನಗೆ ಶಕ್ರನೀ ಸಂಗ—
ಆಸರೇ ನಿನಗೆ ಸಖಿ ಈ ಪರಿಷ್ವಂಗ?

ಅಹಲ್ಯೆ

ನಲವುಕ್ಕೆ ನಲಿಯಿಸಿದೆ, ಆಸೆ ಹಿಂಗಿಸಿದೆ—
ಹೋಗೀಗ, ನನ್ನೊಲವೆ, ನನ್ನ ಹಂಗಿಸದೆ.

ಇಂದ್ರ

ಇದ್ದಕಿದ್ದವೊಲೇಕೆ ಬಗೆ ಬೇರೆಯಾಯ್ತು—
ಆವ ಶಂಕೆಗೆ, ಭೀರು, ನಲವರತುಹೋಯ್ತು?

ಅಹಲ್ಯೆ

ಪೋ ದೇವ ನುಡಿಸದೆಯೆ ನಮ್ಮ ನೀ ಹರಸಿ,
ನನ್ನಿಂದ ನಿನಗಾದ ಸಮ್ಮುದವ ಸ್ಮರಿಸಿ.

ಇಂದ್ರ

ಧ್ಯಾನಜಡ ಗೌತಮನ ಭೀತಿ ನಿನಗೇನು?
ಇಳೆಯನೇ ಉಳಿವ ಬಾ—ಬಾ, ನಾನು ನೀನು.

ಅಹಲ್ಯೆ

ಒಲಿದರೆಚ್ಚರದಿಂದ ಒಳನೋಟದಿಂದ
ಪಳಿಯರಿತು ಮುನಿ ಮುನಿವ ಮುನ್ನ, ಪೋ ಇಂದ್ರ!
ಆಲಿಸಿಗೊ! ಪೋ ನೀರ! . . . ಹಾ! ಏನಾಂತು!
ರುದ್ರಗೌತಮನಯ್ಯೊ! ಬಾಳಾರಿತು!

(ಮೂರ್ಛೆ ಹೋಗುವಳು.)

ಇಂದ್ರ

ಹಾ ಪ್ರಮಾದ!—ಹೋ ಗೌತಮ! ಬಿದ್ದಳೀ ಅಬಲೆ!
ಏ ಗತಿ! ಏ ಗತಿ!

(ನಿಸ್ತೇಜನಾಗುವನು.)

(ರುದ್ರವೂ ಕರುಣರಸಪೂರಿತವೂ ಆದ ವಾದ್ಯಗಳ ಮೇಳದ ಸಂಗೀತ ಸ್ವಲ್ಪ ಹೊತ್ತು ಮೊಳಗಿ ಶಾಂತವಾಗುವುದು.)

ತೆರೆ.

ದೃಶ್ಯ ೮

(ಗೌತಮಾಶ್ರಮದಲ್ಲಿ ಒಂದು ಕಡೆ ನತಶಿರನಾದ ಗೌತಮನೂ ಮೈತ್ರೇಯನೂ ಪ್ರವೇಶಿಸುವರು. ವಟುವು ದೂರದಲ್ಲಿರುವನು.)

ಗೌತಮ

(ಕುಳಿತು, ತನಗೆ ತಾನೆ ನಿಟ್ಟುಸಿರಿಟ್ಟು)

ಇಂತಾಯ್ತು ನನ್ನಾತ್ಮಸಂಯಮದ ವೆಚ್ಚ—
ಜಗ ಜಗವೆ ನಗುವಂತೆ ನಾನಾದೆ ತುಚ್ಛ! . . .
ವ್ರತಗೆಟ್ಟು ಬಂದೆನೀ ಪಾಪ ಕೋಪಕ್ಕೆ—
ಮನ ಕಾಮವಾಯಿತೀ ಶಾಪತಾಪಕ್ಕೆ.
ಎತ್ತ ಹೋಗಲಿ ನಾನು ನನಗೆ ಮರೆ ಎಲ್ಲಿ?
ಸುಟ್ಟುಕೊಳಲೇ ಬಾಳ ಜಗವುರುಹುತಿಲ್ಲಿ?

ಮೈತ್ರೇಯ

ಇಂತವಶರಪ್ಪರೇ ನಿನ್ನನ್ನರಯ್ಯ?

ಗೌತಮ

(ತನಗೆ ತಾನೆ)

ತನ್ನ ಪಳಿ ತಾನೊರೆಯುತಳುತಿರಲಿ ಇವಳು—
ಒಬ್ಬರೂ ಇಲ್ಲದಲೆ ಅಯ್ಯೋ ಎಂದೆನಲು!
ಅನ್ನ ನೀರಿಲ್ಲದೆಯೆ ಧೂಳಿನಲಿ ಹೊರಳಿ
ಆರ ಕಣ್ಣಿಗು ಬೀಳದೆ ಗಾಳಿಯಂತಿರಲಿ!

ಮೈತ್ರೇಯ

ಏಕಿಂತು ಶಾಪವನು ಮರಮರಳಿ ನುಡಿವೆ ?
ಇಂದ್ರನೇ ನೀತಿಗೆಡೆ ಬಿದ್ದಳೇ ಬಡವೆ.

ಗೌತಮ

(ತನಗೆ ತಾನೆ)

ಆಃ! ನೀಚ ಪಾಪಿಷ್ಠ, ಹೋಗಲವ ಕೆಟ್ಟು—
ನಿರ್ನಿರಿಂದ್ರಿಯನಾಗಿ ಕಪಟಿ ದಿಕ್ಕೆಟ್ಟು!

ಮೈತ್ರೇಯ

ಕೋಪವನು ಸಂಹರಿಸು ಶಾಂತನಾಗಣ್ಣ,
ಆದುದನು ಚಿಂತಿಸಲು ಬಗೆಗೆ ಬರಿ ಬನ್ನ.

ಗೌತಮ

ಕೆಂಡವನು ಆತಿರುವ ಒಟ್ಟೆಯುಂತೆನ್ನ
ಈ ಬಾಳನೀ ಜೀವ ಸುಡುತಿಹುದೊ ಅಣ್ಣ!

(ತನಗೆ ತಾನೆ)

ಏಗೈವೆ ಏಗೈವೆ ಏಗೈವೆನೀಗ?
ಏಬಗೆದೆನೆಂತಾಯ್ತು ಈ ತಪದ ತ್ಯಾಗ!
ರಾಗಕ್ಕೆ ಈಡಾಗಿ ಮೋಹ ವಶನಾಗಿ
ಕೆಟ್ಟೆನೋ ಕೆಟ್ಟೆನೋ ಆತುಮವ ನೀಗಿ!

(ತುಸ ಮೌನದಿಂದಿದ್ದು ನಿಟ್ಟುಸಿರಿಟ್ಟು)

ದಿಕ್ಕಿಲ್ಲದಂತಾದೆ ಈ ಲೋಕದೊಳಗೆ
ಹರಿಗೋಲು ಮುಳುಗಿತ್ತು ಭವಜಲಧಿಯೊಳಗೆ!

ಮೈತ್ರೇಯ

ನೀ ನಿರೀಹತೆಗಾಗೆ ನಮಗಾರು ದಿಕ್ಕು?
ನೀನೆಮ್ಮ ಬಾಳ್‌ಬೆಳಕು ಇಂದುಮುಂದಕ್ಕು.

ಗೌತಮ

ಕಾಮವಶೀ ಕ್ರೋಧವಶೀ ನಷ್ಟಾತ್ಮಂ ಏರಸಿ!
ತನ್ನನೆ ತಾ ಗೆಲ್ಲದವಂ ಇಕೊ ಈ ಹುಸಿ ತವಸಿ!

ಗತಮತಿಯನು ಸಚ್ಚುವರೇ ಭವದುರ್ಗಮಪಥದಿ?
ಇನ್ನಿರೆ ನಾನೀ ತಾಣದಿ, ಬೀಳ್ಕೊಡು ಸಮ್ಮತದಿ.

ನನ್ನಳಿಯಗೆ ನೀನೇ ಪಿತ, ಮಾಧವಿ ತಾಯಿನ್ನು
ನಮ್ಮನು ಮರೆವಂತವನನು ಕಾಪಿಡಿರೀ ಮುನ್ನು.
ಪಳಿದಾಣವನಿದ ತೊರೆಯುತ ಬೇರೊಂದೆಡೆ ನೆಲಸಿ
ಇಲ್ಲಿಂದಾದುದ ನಿಮ್ಮಯ ಮನದಿಂದಲೆ ಅಳಿಸಿ.

ಮರುಗುವೆ ನಾನೀ ಹೆಣ್ಣಿಗೆ: ಒಲಿದಳು ದೇವತೆಗೆ
ರಾಗಭ್ರಾಂತಿಯೊಳಾದಳು ನನ್ನಹಮಹಮಿಕೆಗೆ!
ವಿಧಿ ನಿಯಮವ ಮೀರಿದರಾರ್? ಈ ಚೇತನವಿಂತು
ಶುದ್ಧಿಗೆ ಬರೆ ತವಿಸುತ್ತಿದೆ ಮಮ ಶಾಪವನಾಂತು.

ಬಾಳ್‌ಬಾಳಿಗು ಏನಂತರ! ಇದ್ದೆವು ಸನಿಯದೊಳೇ—
ಒಬ್ಬರ ಹಂಬಲವೊಬ್ಬರು ತುಸವೂ ತಿಳಿಯದಲೇ!
ತಾನೆನ್ನುವ ಮರೆಗಾಗಲು ಆತ್ಮದ ಬೆಳಕಿಂತು
ತನ್ನಲ್ಲದೆ ಬೇರೊಂದನು ಕಾಣುವ ಬಗೆಯೆಂತು?

ಹಿಮಗಿರಿಯೇಕಾಂತದ ಗವಿ—ಆತ್ಮವಿಸಂಬೋಧಿ!
ಈ ಬೇಗೆಯ ನಂದಿಸಲಹುದಾ ಶಿಶಿರ ಸಮಾಧಿ!
ಬೀಳ್ಕೊಡು, ಕೆಳೆಯಾ, ಹೋಗುವೆ ನನ್ನೊಳಗನು ತಿಳಿಯೆ
ವಿಶ್ವಾತ್ಮದ ಚಿಂತನೆಯೊಳು ನಾನೆಂಬುದನಳಿಯೆ.

(ಹೋಗುವನು.)

(ಮೈತ್ರೇಯನ ಹತ್ತಿರ ವಟುವು ಬರುತ್ತಿರುವನು.)

ಮೈತ್ರೇಯ

(ತನಗೆ ತಾನೆ)

ಹೋದನು ಗೌತಮ ಎಲ್ಲವ ತೊರೆದು,
ಸುತ್ತಲೆತ್ತಲೂ ಬರಿದೋ ಬರಿದು!
ಮಸಣವಿದಾಯಿತು ಮಂಗಳ ನಾಡು
ಗಾಳಿಗಳೂಳುವ ಗೋಳಿನ ಬೀಡು!

ಹಾರೈಸಿದುದೇನಾದುದು ತಾನೇಂ ?
ಹಿಂಬದಿಯೊಳು ವಿಧಿ ನಕ್ಕುದ ಕಾಣೆಂ.
ಹಸುಳೆ ಬೆಸಕ್ಕೈಯಲೇನೆಂದೊರೆವೆ ?
ಎಂತೀ ತಾಯ್ನೆಲವನು ನಾ ತೊರೆವೆ ?
ಫಕ್ಕನೆ ತುಡುಕಿತು ನಮ್ಮ ವಿಪತ್ತು
ಮುಂದ ತೋರದೋ ಈ ಆಪತ್ತು.

(ಹತ್ತಿರ ಬಂದ ವಟುವನ್ನು ಕುರಿತು)

ಬಾ ಕೌಶಿಕ, ಬಾ, ಅಳದಿರು ಕಂದ,
ಇಂತಾಯಿತು ವಿಧಿಯಾಟದ ಚೆಂದ !

ತೆರೆ.

ಶಿಲಾಹಾರ ಅಪರಾಜಿತನು ನೂರ್ಮಡಿ ತೈಲಪನ ಮಾಂಡಲಿಕನಿದ್ದಿರಬಹುದೇ?

೧

ಶ್ರೀಪಾರ್ ಸಾ. ಶ್ರೀ. ರಾಜಪುರೋಹಿತರು "ಅಪರಾದಿತ್ಯನು ಶಿಲಾಹಾರ ರಾಜನೇ ಹೊರತು ಚೋಳರಾಜನಲ್ಲ" ('ಜಯಕರ್ನಾಟಕ', ಸಂ. ೧೭, ಸಂ. ೩, ಪು. ೨೦೨–೨೦೪) ಎಂಬ ಲೇಖದಲ್ಲಿ "ಚಾಳುಕ್ಯ ಚಕ್ರವರ್ತಿಯಾದ ಈ ನೂರ್ಮಡಿ ತೈಲಪನು (ಕ್ರಿ. ಶ. ೯೭೩–೯೯೭) ಕೊಂಕಣೇಶ್ವರನಾದ ಶಿಲಾಹಾರ ರಾಜನನ್ನು ಗೆದ್ದಿದ್ದಾನೆ; ಹಾಗೂ ಚೋಳರಾಜನನ್ನು ಜಯಿಸಿದ್ದಾನೆ ಎಂದು ತಾಮ್ರಶಾಸನ, ಶಿಲಾಶಾಸನಗಳು ಘಂಟಾಘೋಷವಾಗಿ ಹೇಳುತ್ತವೆ" ಎಂದು ಹೇಳಿದ್ದಾರೆ.

ಚಾಳುಕ್ಯ ನೂರ್ಮಡಿ ತೈಲಪನು ಚೋಳರನ್ನು ಸೋಲಿಸಿದ ಉಲ್ಲೇಖವು ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ (*I.A.*, Vol. V, 17; *I.A.*, Vol. VIII, 17; *E.C.*, Vol. VII, 234–235). ಶಕ ೯೪೧ರಲ್ಲಿ ಹುಟ್ಟಿದ ಚಾಳುಕ್ಯ ಜಯಸಿಂಹನ ಕಾಲದ ಶಿಲಾಲೇಖವನ್ನು ಶ್ರೀಪಾರ್ ರಾಜಪುರೋಹಿತರೇ ತಮ್ಮ ಆಧಾರಕ್ಕಾಗಿ ಕೊಟ್ಟಿದ್ದಾರೆ (*I.A.*, Vol. V, 17). ಈ ಶಿಲಾಲೇಖದಲ್ಲಿ ತೈಲಪನಿಗೆ 'ಚೋಳೋಗ್ರ ಕಾಳಾನಳ', ಚೋಳಭಂಡಣಾಪೇಕ್ಷವಿದಗ್ಧರಾಯ' ಎಂಬ ವಿಶೇಷಣಗಳಿವೆ.

ಶಿಲಾಹಾರ ಅಪರಾದಿತ್ಯನನ್ನು ಚಾಳುಕ್ಯ ತೈಲಪನು ಸೋಲಿಸಿ ಆತನನ್ನು ತನ್ನ ಮಾಂಡಲಿಕನನ್ನಾಗಿಸಿಕೊಂಡನೆಂದು ತೋರಿಸುವ ಪ್ರಮಾಣಗಳನ್ನು ಶ್ರೀಪಾರ್ ರಾಜಪುರೋಹಿತರು ಕೆಳಗೆ ಕಾಣಿಸಿದಂತೆ ನಿದರ್ಶನಕ್ಕೆ ತಂದಿದ್ದಾರೆ.

೧. ಶಿಲಾಹಾರ ಅಪರಾಜಿತನ ಬಧಾನ ತಾಮ್ರಶಾಸನ (*E.I.*, Vol. VIII, 267–276. ಶಕ. ೯೧೯. ಕ್ರಿ. ಶ. ೯೯೭)ದಿಂದ ಶಿಲಾಹಾರ ಅಪರಾಜಿತನು (ಕ್ರಿ. ಶ. ೯೭೫–೧೦೧೦). ತೈಲಪನ ಮಾಂಡಲಿಕನಾಗಿದ್ದನೆಂದು ತಿಳಿಯುತ್ತದೆ. "ಇದರಲ್ಲಿ ಅಪರಾಜಿತನು ತನ್ನ ಚಕ್ರವರ್ತಿಯಾದ ತೈಲಪನನ್ನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಪಾದಾಕ್ರಾಂತಮಾಡಿದ ನೃಪಶ್ರೇಷ್ಠನೆಂದೂ ಪ್ರತಾಪಶಾಲಿಯೆಂದೂ ಹೊಗಳಿ, ಈ 'ಪ್ರಚಂಡ' ತೈಲಪನಿಗೆ ತಾನು ಅಧೀನನಾಗಿದ್ದೇನೆಂಬದನ್ನು ವ್ಯಕ್ತಗೊಳಿಸುವದಕ್ಕೋಸ್ಕರ ತನ್ನನ್ನು 'ಮಹಾಮಂಡಲೇಶ್ವರ' ಎಂದು ಹೇಳಿಕೊಂಡಿದ್ದಾನೆ."

೨. ರನ್ನನು ತನ್ನ ಗದಾಯುದ್ಧದ ಎರಡನೆಯ ಆಶ್ವಾಸದ ಗದ್ಯದಲ್ಲಿ (ಪು. ೨೨) ಚಾಳುಕ್ಯ ನೂರ್ಮಡಿ ತೈಲಪನನ್ನು 'ಕೊಂಕಣ ಭಯಂಕರ'ನೆಂದು ಹೊಗಳಿದ್ದಾನೆ.

೩. ನರಪತಿ ತೈಲಪಂ ಬೆಸಸೆ ಘೂರ್ಜರಸೇನೆಗೆ ಸೂಚಿಯಾನೆಯುಂ |
ಪರಿಯಿಸಿ ಗೆಲ್ದನೊಂದೆ ಜಯಕಪ್ಪಮನಟ್ಟುವುದೆಂದು ಕೊಂಕಣೇ ||
ಶ್ವರನನಿದಿರ್ಚಿ ಸಾಧಿಸಿದನಂಬುಧಿ ಸೀಮೆವರಂ ನಿಮಿರ್ಚಿದಂ |
ಧರೆಯುನದೇಕೆ ಕೇಳ್ದುಜಿಯ ಸಾಹಸಭೀಮನ ಸಾಹಸಂಗಳಂ ||

(ಗದಾ., II., ೪೭.)

"ಈ ಪದ್ಯದಿಂದ ತೈಲಪ ಚಕ್ರವರ್ತಿಯ ಆಜ್ಞೆಯ ಮೇರೆಗೆ ಈ ಸಾಮ್ರಾಟನ ಮಗನಾದ ಸತ್ಯಾಶ್ರಯ ಯುವರಾಜನು ಕೊಂಕಣೇಶ್ವರನನ್ನು ಅಂದರೆ ಕೊಂಕಣದೇಶದ ರಾಜನನ್ನು ಜಯಿಸಿ, ತಂದೆಯ ರಾಜ್ಯವನ್ನು (ಅರ್ಥಾತ್ ಚಾಳುಕ್ಯ ಸಾಮ್ರಾಜ್ಯವನ್ನು) ಸಮುದ್ರದ ವರೆಗೂ ವಿಸ್ತರಿಸಿದನು" ಎಂದು ನಿಃಸಂದೇಹವಾಗಿ ಹೇಳಿದ್ದರಿಂದ ಕ್ರಿ. ಶ. ೯೮೩ರ ಪೂರ್ವದಲ್ಲಿಯೇ (ಕಿಂಬಹುನಾ ಸುಮಾರು ಕ್ರಿ. ಶ. ೯೮೦ರಲ್ಲಿ) ಸತ್ಯಾಶ್ರಯ ಯುವರಾಜನು (ಅತ ಏವ ತೈಲಪ ಚಕ್ರವರ್ತಿಯು) ಕೊಂಕಣದೇಶದ ರಾಜನಾದ ಅಪರಾಜಿತನನ್ನು ಅಂದರೆ ಅಪರಾದಿತ್ಯನನ್ನು ಗೆದ್ದು ಆತನನ್ನು ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡನೆಂಬುದು ಸಿದ್ಧ.

ಇನ್ನು ಮೊಟ್ಟಮೊದಲು ರನ್ನನ ಅಪರಾದಿತ್ಯನು ಶಿಲಾಹಾರ ಅಪರಾಜಿತನೇ ಎಂದು ಸಿದ್ಧಮಾಡಿ ಅನಂತರ ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು ಶಿಲಾಹಾರ ಅಪರಾಜಿತನು ಚಾಳುಕ್ಯ ಸಾರ್ವಭೌಮ ತೈಲಪನ ಮಾಂಡಲಿಕನೆಂದು ಸಿದ್ಧಮಾಡುವುದಕ್ಕಾಗಿ ತೋರಿಸಿದ ಪ್ರಮಾಣಗಳನ್ನು ಒಂದೊಂದಾಗಿ ತೆಗೆದುಕೊಂಡು ಅವುಗಳನ್ನು ಖಂಡಿಸುವುದೇ ಈ ಲೇಖನದ ಉದ್ದೇಶ.

ಠಾಣೆಯ ಶಿಲಾಹಾರರಲ್ಲಿ ಈ ವರೆಗೆ ಗೊತ್ತಾದ ವಂಶಾವಳಿಯು ಮೇರೆಗೆ—

ಅಪರಾಜಿತನು ಕ್ರಿ. ಶ. ೯೭೫ರಿಂದ ಕ್ರಿ. ಶ. ೧೦೧೦ರ ವರೆಗೆ
ಅಪರಾದಿತ್ಯನು ,, ೧೧೧೦ರಿಂದ ,, ೧೧೪೦ರ ,,
ಅಪರಾದಿತ್ಯನು ,, ೧೧೭೦ರಿಂದ ,, ೧೧೯೫ರ ,,

*ಡಾ|| ಸಂಕಲ್ಲರವರು ಕ್ರಿ. ಶ. ೧೯೩೬ರ ಜುಲೈ ತಿಂಗಳ 'ಎಪಿಗ್ರಾಫಿಕಾ ಇಂಡಿಕಾ'ದಲ್ಲಿ ಶಿಲಾಹಾರರ ಆರು ಶಾಸನಗಳನ್ನು ಪ್ರಸಿದ್ಧಿಸಿದ್ದಾರೆ. ಅದರಲ್ಲಿ ಶಕ ೧೦೬೦ರಲ್ಲಿ (ಅಂದರೆ ಕ್ರಿ. ಶ. ೧೧೩೮) ಹುಟ್ಟಿದ ಚೆಂಜೆಶಾಸನದಲ್ಲಿಯ ಅಪರಾದಿತ್ಯನ ಬಗ್ಗೆ ವಿಚಾರಮಾಡುವಾಗ್ಗೆ ಡಾ|| ಸಂಕಲ್ಲರವರು "ವಡವಲ್ಲಿ ತಾಮ್ರಪಟಗಳಲ್ಲಿ ಅಪರಾದಿತ್ಯನನ್ನು ಅಪರಾಜಿತನೆಂದು ಹೇಳಿದೆಯೋ ಹೊರತು ಅಪರಾರ್ಕ

---

* ಈ ಶಾಸನಗಳನ್ನು ನನಗೆ ಓದಲು ಸೂಚಿಸಿದ ಮಹನೀಯರಾದ ಡಾ|| ಎಂ. ಎಚ್. ಕೃಷ್ಣರವರಿಗೂ ಮತ್ತು ಶ್ರೀಮಾನ್ ಯು. ರಾಮರಾಯರಿಗೂ ನಾನು ತುಂಬಾ ಋಣಿಯಾಗಿದ್ದೇನೆ.

ನೆಂದು ಹೇಳಿಲ್ಲ" ಎಂದು ಹೇಳಿದ್ದಾರೆ. ಅಂತೆಯೆ ಭದನಳ್ಳಿ ತಾಮ್ರಪಟಗಳಿಂದ ಅಪರಾದಿತ್ಯನಿಗೆ ಅಪರಾಜಿತನೆಂದು ಕರೆಯುವ ರೂಢಿಯಿತ್ತೆಂದು ಭಾವಿಸಲು ಆಸ್ಪದವಿಲ್ಲ. ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು ಈ ವಿಷಯವನ್ನೇ ಇನ್ನೂ ಶತ್ರುತ್ವದ ಅಥವಾ ಮಿತ್ರತ್ವದ ಹೆಸರನ್ನು ವೈರಿಗಳಿಗಾಗಲಿ ಮಿತ್ರರಿಗಾಗಲಿ ಇಡುವ ವಾಡಿಕೆ ಸಾಧಾರಣವಾಗಿ ಹಿಂದೂ ಅರಸರಲ್ಲಿದೆ ಎಂದು ಹೇಳಿದ್ದಾರೆ. ಅದ್ದರಿಂದ ಭದನಳ್ಳಿ ತಾಮ್ರಪಟಗಳಿಂದ ಅಪರಾಜಿತನೆಂಬ ಅಪರನಾಮಧೇಯವುಳ್ಳ ಅಪರಾದಿತ್ಯನು (೧೧೧೦-೧೧೪೦) ಮೊದಲನೆಯ ಅಪರಾಜಿತನ (೯೭೫-೧೦೧೦) ಮರಿಮಗನ ಮಗನಾದ್ದರಿಂದ ಮೊದಲನೆಯ ಅಪರಾಜಿತನಿಗೂ ಅಪರಾದಿತ್ಯನೆಂಬ ಅಪರನಾಮಧೇಯವಿರಲು ಶಕ್ಯವಿದೆ ಎಂದು ಹೇಳಬಹುದು.

ಶಿಲಾಹಾರ ಅಪರಾದಿತ್ಯದೇವನೆಂಬವನೊಬ್ಬನು 'ಯಾಜ್ಞವಲ್ಕ್ಯಸ್ಮೃತಿ'ಗೆ ಟೀಕೆಯನ್ನು ಬರೆದಿದ್ದಾನೆ. ಈತನು ಮಿತಾಕ್ಷರನ ತರುವಾಯದವನೆಂದು ವಿದ್ವಾಂಸರ ಮತವಿದ್ದುದ್ದರಿಂದ [ಮಿತಾಕ್ಷರನು ತ್ರಿಭುವನಮಲ್ಲಚಾಳುಕ್ಯ ಆರನೆಯ ವಿಕ್ರಮಾದಿತ್ಯನ (ಕ್ರಿ. ಶ. ೧೦೭೬-೧೧೨೬) ಸಮಕಾಲದವನಾದ್ದರಿಂದ] ಸುಮಾರು ಕ್ರಿ. ಶ. ೧೧೭೦-೧೧೯೫ರಲ್ಲಿ ಆಳಿದ ಶಿಲಾಹಾರ ಅಪರಾದಿತ್ಯನೇ ಎಂದು ಹೇಳಬಹುದು. ಈ ಅಪರಾದಿತ್ಯನು ತನ್ನ ಗ್ರಂಥದ ಪ್ರತಿಯೊಂದು ಪ್ರಕರಣದ ಕೊನೆಗೆ ಈ ಪ್ರಕಾರ ಹೇಳಿದ್ದಾನೆ—

"ಶ್ರೀ ವಿದ್ಯಾಧರ ವಂಶಪ್ರಭವ ಶ್ರೀ ಶಿಲಾಹಾರ ನರೇಂದ್ರ ಜೀಮೂತ ವಾಹನಾನ್ವಯ ಪ್ರಸೂತ ಶ್ರೀಮದಪರಾದಿತ್ಯದೇವವಿರಚಿತೇ ಯಾಜ್ಞವಲ್ಕೀಯ ಧರ್ಮಶಾಸ್ತ್ರನಿಬಂಧೇಽಪರಾರ್ಕೇ ಪ್ರಾಯಶ್ಚಿತ್ತ ಪ್ರಕರಣಮ್."

ಇದರಿಂದ ಈ ಅಪರಾದಿತ್ಯನು ಅಪರಾರ್ಕನೆಂಬ ಬೇರೊಂದು ಹೆಸರಿನಿಂದ ಕರೆಯಿಸಿಕೊಳ್ಳುತ್ತಿದ್ದನೆಂದು ತಿಳಿಯುತ್ತದೆ. ಈ ಎಲ್ಲ ಮೇಲ್ಕಾಣಿಸಿದ ಪ್ರಮಾಣಗಳ ಮೇಲಿಂದ—(i) ಠಾಣೆಯ ಶಿಲಾಹಾರರಲ್ಲಿ ಮೂವರು ಅಪರಾದಿತ್ಯರಿದ್ದಂತಾಯಿತು. ಅವರಲ್ಲಿ ಅನುಕ್ರಮದಿಂದ ಕೆಳಗೆ ತೋರಿಸಿದಂತೆ ಆಳಿದ್ದಾರೆ—

೧. ಅಪರಾದಿತ್ಯ—ಅಪರಾಜಿತ ಕ್ರಿ. ಶ. ೯೭೫-೧೦೧೦.
೨. ಅಪರಾದಿತ್ಯ ,, ೧೧೧೦-೧೧೪೦.
೩. ಅಪರಾದಿತ್ಯ—ಅಪರಾರ್ಕ ,, ೧೧೭೦-೧೧೯೫.

(ii) ಪ್ರತಿಯೊಬ್ಬ ಅಪರಾದಿತ್ಯನಿಗೆ ಸಾಧಾರಣವಾಗಿ ಅಪರಾಜಿತನೆಂದಾಗಲಿ ಅಪರಾರ್ಕನೆಂದಾಗಲಿ ಅಪರನಾಮಧೇಯಗಳಿವೆ ಎಂದು ಕಾಣುತ್ತದೆ.

ಈ ಮೂವರು ಅಪರಾದಿತ್ಯರಲ್ಲಿ ಮೊದಲನೆಯವನು (ಅಪರಾಜಿತನೆಂಬಪರನಾಮಧೇಯವುಳ್ಳವನು) ಕ್ರಿ. ಶ. ೯೭೫ರಿಂದ ಕ್ರಿ. ಶ. ೧೦೧೦ರ ವರೆಗೆ ಆಳಿದನೆಂದು ಹೇಳಿದೆ. ಈತನು ಚಾಳುಕ್ಯ ಸೂರ್ಮಡಿ ತೈಲಪನ (ಕ್ರಿ. ಶ. ೯೭೩–೯೯೭) ಸಮಕಾಲೀನನಾದ್ದರಿಂದ ರನ್ನನು ಹೇಳಿದ ಅಪರಾದಿತ್ಯನು ಈ ಶಿಲಾಹಾರ ಅಪರಾಜಿತನೇ ಎಂಬುದು ಸಿದ್ಧ.

ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು ಶಿಲಾಹಾರ ಅಪರಾಜಿತನು ಚಾಳುಕ್ಯ ತೈಲಪನ ಮಾಂಡಲಿಕನಿದ್ದಿರಬಹುದೆಂದು ಹೇಳುವಂಥ ಪ್ರಮಾಣಗಳನ್ನು ಹಿಂದೆ ಹೇಳಿದ್ದೇನೆ. ಈಗ್ಗೆ ಅವನ್ನು ಒಂದೊಂದನ್ನಾಗಿ ತೆಗೆದುಕೊಂಡು ವಿಚಾರ ಮಾಡೋಣ—

೧. ಭಧಾನ ತಾಮ್ರಪಟವು ಶಕ ೯೧೯ರಲ್ಲಿ ಅಂದರೆ ಕ್ರಿ. ಶ. ೯೯೭ರಲ್ಲಿ ಹುಟ್ಟಿದ್ದು. ಇದರಲ್ಲಿ ಶಿಲಾಹಾರ ಅಪರಾಜಿತನು ಶಕ ೯೧೯ರಲ್ಲಿ ಲವಣೇತಟದಲ್ಲಿ ಲವಣಾದಿತ್ಯ ದೇವಾಲಯಕ್ಕೆ ಭಧಾನ ಗ್ರಾಮವನ್ನು ದತ್ತಿ ಬರೆದುಕೊಟ್ಟನೆಂದು ತಿಳಿಯುತ್ತದೆ. ಈ ತಾಮ್ರಪಟವನ್ನು ಸಾಧಾರಣವಾಗಿ ಎರಡು ಭಾಗವಾಗಿ ವಿಭಾಗಿಸಬಹುದು. ಮೊದಲನೆಯ ಭಾಗದಲ್ಲಿ ಅಪರಾಜಿತ ರಾಷ್ಟ್ರಕೂಟರ ವಂಶಾವಳಿಯನ್ನೂ ಮತ್ತು ತನ್ನ ವಂಶಾವಳಿಯನ್ನೂ ವಿಸ್ತಾರವಾಗಿ ವರ್ಣಿಸಿದ್ದಾನೆ. ಎರಡನೆಯ ಭಾಗದಲ್ಲಿ ತಾನು (ಅಪರಾಜಿತ) ಲವಣೇತಟದಲ್ಲಿ ಲವಣಾದಿತ್ಯ ದೇವಾಲಯಕ್ಕೆ ಭಧಾನ ಗ್ರಾಮವನ್ನು ದತ್ತಿಯಾಗಿ ಬರೆದುಕೊಟ್ಟ ಉಲ್ಲೇಖವಿದೆ (*E.I.*, Vol. III, pp. 256–267). ಇದರಲ್ಲಿ ಅಪರಾಜಿತನು ತನ್ನನ್ನು 'ಮೃಗಾಂಕಃ' 'ಶ್ರೀಮನ್ ಅಪರಾಜಿತೋऽಜಿತಃ' ಎಂದೂ ಮತ್ತು ತನಗೆ 'ಶ್ರೀ ಜಿರುದಾಂಕರಾಮಃ' 'ಶನಿವಾರ ವಿಜಯ'ಗಳೆಂಬ ಬಿರುದುಗಳು ಇವೆ ಎಂದೂ ಹೇಳಿಕೊಂಡಿದ್ದಾನೆ.

ಅಪರಾಜಿತನು ತನ್ನನ್ನು 'ಮಹಾಮಂಡಲೇಶ್ವರ'ನೆಂದೂ 'ಮಹಾಸಾಮಂತಾಧಿಪತಿ' ಎಂದೂ ಹೇಳಿಕೊಂಡಿದ್ದರಿಂದ ಆತನು ಚಾಳುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದಾನೆಂದು ಹೇಳುವುದು ಸಯುಕ್ತಿಕವಾಗಲಾರದು. ಒಂದು ವೇಳೆ ಆತನು ನಿಜವಾಗಿ ಚಾಳುಕ್ಯ ತೈಲಪನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರೆ ಉಳಿದ ಮಾಂಡಲಿಕರ ದತ್ತಿಗಳಂತೆ ಆತನು ಚಾಳುಕ್ಯರ ವಂಶಾವಳಿಯನ್ನು ಮೊದಲು ಕೊಟ್ಟು ಆ ಮೇಲೆ ತನ್ನ ವಂಶಾವಳಿಯನ್ನು ಹೇಳಿಕೊಳ್ಳುತ್ತಿದ್ದನು. ಮತ್ತು ತಾನು ಅವರ ಪಾದಕಮಲ ಭ್ರಮರನೆಂದಾಗಲಿ ಇಲ್ಲದೆ ಪಾದಾರವಿಂದನೆಂದಾಗಲಿ ಹೇಳಿಕೊಳ್ಳುತ್ತಿದ್ದನು. ಆದರೆ ಈ ಭಧಾನದ ತಾಮ್ರಪಟದಲ್ಲಿ ಹಾಗೇನೂ ಹೇಳಿಕೊಂಡಿಲ್ಲ. ಈ ಪಟದಲ್ಲಿ ರಾಷ್ಟ್ರಕೂಟರ ವಂಶಾವಳಿಯನ್ನು ಸಮಗ್ರವಾಗಿ ಕೊಟ್ಟಿದ್ದಾನೆ. ಅವರ ಹದಿನೇಳು

ಅರಸರ ಹೆಸರುಗಳನ್ನು ಹೇಳಿದ್ದಾನೆ; ಮತ್ತು ತನ್ನ ಪೂರ್ವಜರು ರಾಷ್ಟ್ರಕೂಟರಿಗೆ ಮಾಂಡಲಿಕರಾಗಿದ್ದರೆಂದು ಸೂಚಿಸಿದ್ದಾನೆ. ಕಟ್ಟಕಡೆಗೆ ಇಂಥ ಉಜ್ವಲವಾದ ರಾಷ್ಟ್ರಕೂಟ ಸಾಮ್ರಾಜ್ಯವೆಂಬ ದೇದೀಪ್ಯಮಾನವಾದ ಜ್ಯೋತಿಯು ಪ್ರಚಂಡ ತೈಲಪ್ಪನೆಂಬ ಬಿರುಗಾಳಿಯಿಂದ ನಂದಿಹೋಯಿತೆಂದು ಖೇದದಿಂದ ಹೇಳಿ ಮಲ್ಮಲನೆ ಮರುಗುತ್ತಿದ್ದಾನೆ ಅಪರಾಜಿತ. ಈತನು ಚಾಳುಕ್ಯ ತೈಲಪನಿಗೆ 'ಪ್ರಚಂಡ'ವೆಂಬ ವಿಶೇಷಣವನ್ನು ಕೊಟ್ಟಿದ್ದನ್ನು ನೋಡಿ ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು "ಅಪರಾಜಿತನು ತನ್ನ ಸಾರ್ವಭೌಮನಾದ ತೈಲಪನಿಗೆ 'ಪ್ರಚಂಡ' ಅಂದರೆ ಪರಾಕ್ರಮಶಾಲಿ, ರಾಷ್ಟ್ರಕೂಟರನ್ನು ಕೊಂದ ನೃಪಶ್ರೇಷ್ಠ ಎಂದು ಹೊಗಳಿದ್ದಾನೆ" ಎಂದು ಭಾವಿಸಿದ್ದಾರೆ. ಆದರೆ ಇಲ್ಲಿ ಈ 'ಪ್ರಚಂಡ' ಎಂಬ ವಿಶೇಷಣವು ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು ಭಾವಿಸಿದಂತೆ ಕಂಡುಬರುವುದಿಲ್ಲ. ಯಾಕೆಂದರೆ, ಬಧಾನ ತಾಮ್ರಪಟದಲ್ಲಿ "ಪ್ರಚಂಡ ತೈಲಪ್ಪ ಸಮೀರಣೇನ ಜ್ಯೋತಿರಲಮ್" ಎಂದು ಹೇಳಿದೆ. ಅಂದರೆ ತೈಲಪ್ಪನೆಂಬ ಪ್ರಚಂಡವಾದ ಬಿರುಗಾಳಿಯಿಂದ ರಾಷ್ಟ್ರಕೂಟ ವಂಶಾವಳಿ ಎಂಬ ಜ್ಯೋತಿಯು ನಂದಿಹೋಯಿತು" ಎಂದು ದುಃಖದಿಂದ ಹೇಳಿದಂತಿದೆ. ಇಲ್ಲಿ 'ಪ್ರಚಂಡ' ಶಬ್ದವು ಸಮೀರಣ (ಬಿರುಗಾಳಿ) ಕ್ಕಾಗಿಯೇ ಉಪಯೋಗಿಸಿದೆಯೇ ಹೊರತು ಅದು ತೈಲಪನಿಗೆ ಅನ್ವಯಿಸುವಂತೆ ಕಾಣುವುದಿಲ್ಲ.

ಇಲ್ಲಿ ಇನ್ನೊಂದು ಮಾತು ಯೋಚಿಸತಕ್ಕಂಥಾದ್ದು. ಚಾಳುಕ್ಯ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿ ತನ್ನ ರಾಜ್ಯವನ್ನು ಸ್ಥಾಪಿಸಿದ್ದು ಕ್ರಿ. ಶ. ೯೭೩ರಲ್ಲಿ. ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು "ಸತ್ಯಾಶ್ರಯನು ತನ್ನ ತಂದೆಯ ಕಾಳಗಗಳನ್ನು ಮಾಡುವಾಗ್ಗ ಅಪರಾಜಿತನನ್ನು ಬಹುಶಃ ಕ್ರಿ. ಶ. ೯೮೫ಕ್ಕಿಂತ ಮೊದಲೇ ಅಂದರೆ ಕ್ರಿ. ಶ. ೯೮೦ರಲ್ಲಿ ಸೋಲಿಸಿರಬಹುದು" ಎಂದು ಹೇಳಿದ್ದಾರೆ. ಅಂದಮೇಲೆ ಅಪರಾಜಿತನ ಬಧಾನ ತಾಮ್ರಪಟವು ಕ್ರಿ. ಶ. ೯೯೭ರಲ್ಲಿ ಅಂದರೆ ತೈಲಪನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಪಾದಾಕ್ರಾಂತಮಾಡಿದನಂತರ ೨೪ ವರ್ಷಗಳ ಮೇಲೆ ಮತ್ತು ಸತ್ಯಾಶ್ರಯನು ಅಪರಾದಿತ್ಯನನ್ನು ಸೋಲಿಸಿದ ನಂತರ ೧೭ ವರ್ಷಗಳ ಮೇಲೆ ಹುಟ್ಟಿದಂತಾಯಿತು. ಆದರೆ ಅಪರಾಜಿತನು ರಾಷ್ಟ್ರಕೂಟ ವಂಶಾವಳಿಯನ್ನು ಅಚ್ಚಳಿಯದೆ ಹದಿನೇಳು ಅರಸರ ಹೆಸರನ್ನು ಹೇಳುತ್ತಾನೆ. ಇಷ್ಟೇ ಅಲ್ಲ, ತನ್ನ ಪೂರ್ವಜರು ಅವರಿಗೆ ಸಾಮಂತರಾಗಿದ್ದದ್ದನ್ನು ಉಲ್ಲೇಖಿಸಿದ್ದಾನೆ. ತೈಲಪನು ರಾಷ್ಟ್ರಕೂಟರ ಜಾಜ್ವಲ್ಯಮಾನವಾದಂಥ ಜ್ಯೋತಿಗೆ ಪ್ರಚಂಡ ಬಿರುಗಾಳಿಯಾಗಿ (ಯಮನಾಗಿ) ಬಂದನೆಂದು ಹೇಳಿದ್ದಾನೆ. ಈ ಪಟದಲ್ಲಿ ತೈಲಪನ ವಂಶಾವಳಿಯ

ಹೆಸರೇ ಇಲ್ಲ. ರಾಷ್ಟ್ರಕೂಟರ ವಂಶಾವಳಿಯನಂತರ ತನ್ನ ವಂಶಾವಳಿಯನ್ನೇ 'ಹೇಳಲು ತೊಡಗಿ ತನ್ನನ್ನು 'ಮೃಗಾಂಕ' 'ಶಸಿವಾರ ವಿಜಯ' ಶ್ರೀ ಜಿರುದಾಂಕ ರಾಮ, 'ಅಪರಾಜಿತೋಽಜಿತಃ' ಎಂದು ಹೊಗಳಿಕೊಂಡಿದ್ದಾನೆ. ಒಂದು ವೇಳೆ ಅಪರಾದಿತನು ಚಾಳುಕ್ಯ ಸೂರ್ಮಡಿ ತೈಲಪನ ಮಾಂಡಲಿಕನಿದ್ದು ಆತನ ಸಾರ್ವ ಭೌಮತ್ವವನ್ನು ಒಪ್ಪಿಕೊಂಡಿದ್ದರೆ ಆತನನ್ನು ಇಷ್ಟು ಅಲಕ್ಷ್ಯಮಾಡುತ್ತಿದ್ದನೇ? ಚಾಳುಕ್ಯ ಸೂರ್ಮಡಿ ತೈಲಪನನ್ನು ಜಿರುಗಾಳಿಗೆ ಹೋಲಿಸಿದ್ದನ್ನು ನೋಡಿದರೆ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಹಾಳುಮಾಡಿದ 'ಯಮ'ನೆಂದು ಅಪರಾಜಿತನಿಗೆ ಆತನ ಮೇಲಿರುವ ದ್ವೇಷವೇ ವ್ಯಕ್ತವಾಗುವುದೇ ಹೊರತು ತೈಲಪನ ಬಗ್ಗೆ ಇದ್ದ ಆದರ ಗೌರವ ಸಹಾನುಭೂತಿಗಳಾಗಲಿ—ಮಾಂಡಲಿಕತ್ವ ಹಾಗೂ ಸಾರ್ವಭೌಮತ್ವಗಳನ್ನು ಒಪ್ಪಿಕೊಂಡ ಚಿಹ್ನಗಳೇನೂ ಕಂಡುಬರುವುದಿಲ್ಲ.

ಅಪರಾಜಿತನು ಬಧಾನ ತಾಮ್ರಪಟದಲ್ಲಿ ತನ್ನನ್ನು ಮಹಾಮಂಡಲೇಶ್ವರ ಮತ್ತು ಮಹಾಸಾಮಂತಾಧಿಪತಿ ಎಂದು ಹೇಳಿಕೊಂಡಿದ್ದರಿಂದ ಆತನು ಚಾಳುಕ್ಯ ತೈಲಪನ ಮಾಂಡಲಿಕನಿದ್ದನೆಂದು ಹೇಳುವುದು ಸಯುಕ್ತಿಕವಾಗಲಾರದು ಎಂದು ಹಿಂದೆ ಹೇಳಿದೆ. ಈ ಪಟದಲ್ಲಿ ತನ್ನ ಹಿರಿಯರು ರಾಷ್ಟ್ರಕೂಟರಿಗೆ ಮಾಂಡಲಿಕ ರಾಗಿದ್ದರೆಂದು ಅಪರಾಜಿತನು ಹೇಳಿಕೊಂಡಿದ್ದಾನಷ್ಟೆ? ಈಗ್ಗೆ, ಕ್ರಿ. ಶ. ೯೯೭ರಲ್ಲಿ, ರಾಷ್ಟ್ರಕೂಟರೆಲ್ಲ ನಿರ್ನಾಮವಾಗಿ ಹೋಗಿದ್ದಾರೆ. ಆದ್ದರಿಂದ ಈಗ್ಯೂ ತನ್ನನ್ನು ಮಹಾಮಂಡಲೇಶ್ವರನೆಂದು ಹೇಳಿಕೊಳ್ಳುವುದರಲ್ಲಿ ಔಚಿತ್ಯವೇನಿರಬಹುದು? ಎಂದು ಕೇಳಬಹುದು. ಈ ಸಮಸ್ಯೆಯನ್ನು ಶ್ರೀಮಾನ್ ಕೆ. ಟಿ. ತೈಲಂಗರವರು ಕ್ಷತ್ರಪರ ಬಗ್ಗೆ ಸ್ಪಟನರು ಮಾಡಿದ ಸಿದ್ಧಾಂತದಿಂದ ಜಿಡಿಸಬಹುದು ಎಂದು ಸೂಚಿಸಿದ್ದಾರೆ (*I.A.*, Vol. IX, p. 45): "ಉಳಿದ ಜಿರುದಾವಲಿಗಳ ಕೂಡ ಮಹಾಮಂಡಲೇಶ್ವರ ಮತ್ತು ಮಹಾಸಾಮಂತಾಧಿಪತಿಗಳು ಅಧಿಕಾರಸೂಚಕ ಪದಗಳೆಂದೇ ಗಣಿಸಬೇಕೇ ಹೊರತು ಅಧೀನತೆಯನ್ನು ತೋರಿಸತಕ್ಕ ಪದಗಳಲ್ಲ."

ಒಂದು ವೇಳೆ ಸತ್ಯಾಶ್ರಯನು ಯುವರಾಜನಾಗಿ ತನ್ನ ತಂದೆಯ ಕಾಳಗ ಗಳನ್ನು ಆಡುವಾಗ್ಗೆ ಶಿಲಾಹಾರ ಅಪರಾಜಿತನನ್ನು ಸೋಲಿಸಿದ್ದರೆ ತೈಲಪನ ಕಾಲದಲ್ಲಿ ಹುಟ್ಟಿದ ಶಾಸನಗಳಲ್ಲಿಯವಾಗಲಿ ಅಥವಾ ಇತರ ಚಾಳುಕ್ಯರ ಶಾಸನಗಳಲ್ಲಾಗಲಿ ಈ ಗೆಲವಿನ ಉಲ್ಲೇಖ ಮಾಡಬಹುದಾಗಿತ್ತು. ತೈಲಪನು ರಾಷ್ಟ್ರಕೂಟ, ಲಾಟ, ಚೋಳ, ಪಾಂಡ್ಯ, ಉತ್ಕಲರನ್ನು ಜಯಿಸಿದ್ದು ಚಾಳುಕ್ಯರ ಕಾಲದ ಅನೇಕ ಶಾಸನ ಗಳಲ್ಲಿ ಕಂಡುಬರುತ್ತದೆ (*I.A.*, Vol. VIII, p. 17). ಆದರೆ ಆತನು ಶಿಲಾಹಾರರನ್ನು ಸೋಲಿಸಿದ್ದು ಮಾತ್ರ ಎಲ್ಲಿಯೂ ಉಲ್ಲೇಖವಿಲ್ಲ.

೨. ರನ್ನನು ತನ್ನ ಗದಾಯುದ್ಧದ ೨ನೆಯ ಆಶ್ವಾಸದ ಗದ್ಯದಲ್ಲಿ ನೂರ್ಮಡಿ ತೈಲಪನನ್ನು 'ಕೊಂಕಣ ಭಯಂಕರ'ನೆಂದು ವರ್ಣಿಸಿದ್ದಾನೆನ್ನೋ ನಿಜ. ಆದರೆ ಕೊಂಕಣ ಭಯಂಕರನೆಂದಾಕ್ಷಣಕ್ಕೆ ಆತನು ಶಿಲಾಹಾರರನ್ನು ಸೋಲಿಸಿದನೆಂದು ಹೇಳಿದಂತಾಯಿತೇ? ತೈಲಪನು ಪಾಂಡ್ಯರನ್ನು ಸೋಲಿಸಿದ್ದನೆಂದು ಅನೇಕ ಚಾಳುಕ್ಯ ಶಾಸನಗಳಿಂದ ಕಂಡುಬರುತ್ತದೆ. ಈ ಪಾಂಡ್ಯರು ಕೊಂಕಣಕ್ಕೆ ಕಂಕಣದಂತೆಸೆವ ಹೈವೆಯಲ್ಲಿ ಆಳುತ್ತಿದ್ದರೆಂದು ತಾಳಗುಂದ ಹೋಬಳಿ ಗ್ರಾಮದ ಕೇದಾರೇಶ್ವರ ದೇವಾಲಯದ ಎಂಟನೆಯ ಶಿಲಾಲೇಖದಿಂದ ತಿಳಿಯುತ್ತದೆ (*E.C.*, Vol. VII, Sk. 184). ಈ ಶಿಲಾಲೇಖದಲ್ಲಿ ಗೋಕರ್ಣದಲ್ಲಿ ಆಳುವಂಥ ಪಾಂಡ್ಯ ಕಾಮದೇವನು ಚಾಳುಕ್ಯ ತ್ರಿಭುವನಮಲ್ಲ ೬ನೆಯ ವಿಕ್ರಮಾದಿತ್ಯನು ಕಲ್ಯಾಣದಲ್ಲಿ ಆಳುತ್ತಿರುವಾಗ್ಗೆ ಕೇದಾರೇಶ್ವರ ದೇವಾಲಯದ ಜೀರ್ಣೋದ್ಧಾರದ ಸಲುವಾಗಿ ಬಳ್ಳಿಗಾವೆಯನ್ನು ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟಿದೆ ಎಂದು ಹೇಳಿದ್ದಾನೆ. ಪಾಂಡ್ಯ ಕಾಮದೇವನು ತನ್ನನ್ನು ಗೋಕರ್ಣ ಪುರವರಾಧೀಶ್ವರನೆಂದೂ ಕೊಂಕಣ ರಾಷ್ಟ್ರಪಾಲನೆಂದೂ ಹೊಗಳಿಕೊಂಡಿದ್ದಾನೆ. ಇದರ ಮೇಲಿಂದ ಪಾಂಡ್ಯರ ಮೊದಲನೆಯ ರಾಜಧಾನಿ ಯಾದ ಶಿಸುಗಲಿಯನಂತರ ಗೋಕರ್ಣವೇ ಅವರ ಎರಡನೆಯ ರಾಜಧಾನಿ ಎಂದು ತಿಳಿಯುತ್ತದೆ. ತೈಲಪನು ಈ ಪಾಂಡ್ಯರನ್ನು ಸೋಲಿಸಿದ್ದರಿಂದ (ಮತ್ತು ತಾವು ಕೊಂಕಣ ರಾಷ್ಟ್ರಪಾಲರೆಂದು ಅವರು ಹೇಳಿಕೊಳ್ಳುತ್ತಿದ್ದದ್ದರಿಂದ) ತಾನು ಕೊಂಕಣ ಭಯಂಕರನೆಂದು ಹೇಳಿಕೊಂಡಿರಬಹುದೇ ವಿನಾ ಶಿಲಾಹಾರರನ್ನು ಸೋಲಿಸಿರಬಹುದೆಂದು ತಿಳಿದುಕೊಳ್ಳುವುದು ಸರಿಯಾಗಿ ಕಾಣುವುದಿಲ್ಲ.

೩. ಇಲ್ಲಿ ಕವಿಯು (ರನ್ನ) ಸಂಜಯನ ಮುಖದಿಂದ ಸಾಹಸ ಭೀಮನ (ಸತ್ಯಾಶ್ರಯನ) ಗುಣವರ್ಣನೆಯನ್ನು ಮಾಡುತ್ತಲಿದ್ದಾನೆ. ಈ ಪದ್ಯವನ್ನು ಎರಡು ಭಾಗವಾಗಿ ವಿಭಾಗಿಸಬಹುದು. ಮೊದಲನೆಯ ಭಾಗದಿಂದ—"ಚಕ್ರವರ್ತಿಯಾದ ತೈಲಪನ ಆಜ್ಞೆಯಿಂದ ಸತ್ಯಾಶ್ರಯನು ಘೂರ್ಜರ ಅರಸರನ್ನು ಸೋಲಿಸಿದನು." ಎಂದು ತಿಳಿಯುತ್ತದೆ. ಇದೇ ಸಂಗತಿಯನ್ನು ರನ್ನ ಕವಿಯು ಕೆಳಗಿನ ಪದ್ಯದಲ್ಲಿ ಹೇಳಿದ್ದಾನೆ—

> ನೆಗೆಟ್ದರಿಘೂರ್ಜರ ದ್ವಿಪಘಟಾಳಿಗೆ ತನ್ನಯ ಸೂಚಿಯಾನೆ ತೊ |
> ಟ್ಟಗೆ ಸಮರಾಗ್ರದೊಳ್ಪರಿಯೆ ಪಿಂದನೆ ಸಂದುವು ರಾಜಪುತ್ರರಾ ||
> ನೆಗಳೆನೆ ಮುನ್ನಮೆಂಬ ಬಟಿಕೆಂಬ ಜನೋಕ್ತಿಯೊಳಾಯ್ತು ಸೂಚಿ ಶ |
> ಕ್ತಿಗೆ ನೃಪರಾನೆ ದಾರದವೊಲಾದುವು ರಾಜಕುಮಾರರಾನೆಗಳ್ ||

(ಗದಾ., I., ೧೬.)

ಈ ಪದ್ಯದಿಂದ ಸತ್ಯಾಶ್ರಯನು ಯುವರಾಜನಾಗಿ ತನ್ನ ತಂದೆಯ ಯುದ್ಧಗಳ ನ್ನಾಡುತ್ತಿರುವಾಗ್ಗೆ ಘೂರ್ಜರ ಅರಸರನ್ನು ಸೋಲಿಸಿದನೆಂದು ವ್ಯಕ್ತವಾಗುತ್ತದೆ. ತೈಲಪನ ಕಾಲದ ಹಾಗೂ ಉಳಿದ ಚಾಳುಕ್ಯ ಅರಸರ ಕಾಲದ ಶಾಸನಗಳು ಇದಕ್ಕೆ ಬೆಂಬಲ ಕೊಡುತ್ತವೆ.

ಈ ಪದ್ಯದ ಎರಡನೆಯ ಭಾಗದಿಂದ—"ಸತ್ಯಾಶ್ರಯನು ಕೂಡಲೇ ಜಯಕಪ್ಪ ವನ್ನು ಕೊಡಬೇಕೆಂದು ಕೊಂಕಣೇಶ್ವರನನ್ನು ಇದಿರ್ಚಿ ಆತನನ್ನು ಸೋಲಿಸಿ ಭೂಮಿಯನ್ನು ಸಮುದ್ರದ ವರೆಗೆ ಬೆಳಸಿದ"ನೆಂದು ತಿಳಿಯುತ್ತದೆ. ಇದೇ ಸಂಗತಿ ಯನ್ನು ರನ್ನನು ಗದಾಯುದ್ಧದಲ್ಲಿಯ ಬೇರೊಂದು ಪದ್ಯದಲ್ಲಿ ಹೇಳಿದ್ದಾನೆ—

ಮುನಿದಿರ್ಪತ್ತೊಂದು ಸೂಳ್ ಕ್ಷತ್ರಿಯರನಳಿಸಿ ಕೊಂದಿಕ್ಕಿದಾರಾಮನಿಂದಿ |
ತ್ತ ನರೇಂದ್ರರ್ ಪೊಕ್ಕರಿಲ್ಲೊಬ್ಬರುಮಿವನಧಿಕಂ ಪೊಕ್ಕನೆಂದಾಪವಣ್ಬ ||
ರ್ಗಿನಮಿಪ್ಪತ್ತೊಂದನಿತ್ತಂ ಕರಿಗಳನಪರಾದಿತ್ಯನಂತೀಯದಂಡಾ |
ತನನಿರ್ಪತ್ತೊಂದು ವಂಶಂ ಕಿಡೆ ಮುಳಿವನೊ ಸತ್ಯಾಶ್ರಯಂ ಸಾರ್ವಭೌಮಂ ||

(ಗದಾ., I., ೨೭.)

ಈ ಪದ್ಯದಲ್ಲಿ ಸಾರ್ವಭೌಮನಾದ ಸತ್ಯಾಶ್ರಯನು ಅಪರಾದಿತ್ಯನನ್ನು ಸೋಲಿಸಿ ಆತನ ಕಡೆಯಿಂದ ಇಪ್ಪತ್ತೊಂದು ಆನೆಗಳ ಕಪ್ಪವನ್ನು ತೆಗೆದುಕೊಂಡನೆಂದು ರನ್ನ ಕವಿಯು ಹೇಳುತ್ತಾನೆ. ಪರಶುರಾಮನು ಕ್ಷತ್ರಿಯರನ್ನು ಇಪ್ಪತ್ತೊಂದು ಸಲ ಕೊಂದುಹೋದನಂತರ ಆ ಸ್ಥಳಕ್ಕೆ ಬಂದವನೀತನೊಬ್ಬನೇ ಎಂದು ಅಪರಾದಿತ್ಯನು ಆ ಪ್ರಮಾಣ ಬರುವ ಹಾಗೆ ಇಪ್ಪತ್ತೊಂದು ಆನೆಗಳ ಕಪ್ಪ ಕೊಟ್ಟನು. ಇದರ ಮೇಲಿಂದ ಸತ್ಯಾಶ್ರಯನು ಅಪರಾದಿತ್ಯನನ್ನು ಸೋಲಿಸಿದ್ದು ಇದು ಮೊದಲನೆಯ ಸಲವೇ ಎಂದು ಸ್ಪಷ್ಟವಾಗುತ್ತದೆ. ಮೇಲಾಗಿ ಇಲ್ಲಿ ರನ್ನಕವಿಯು ಸತ್ಯಾಶ್ರಯನಿಗೆ ಸಾರ್ವಭೌಮನೆಂದು ಕರೆದುದರಿಂದ ಸತ್ಯಾಶ್ರಯನು ಸಾರ್ವಭೌಮ—ಚಕ್ರವರ್ತಿ— ಯಾದಾಗ್ಗೆ (ಕ್ರಿ. ಶ. ೯೯೭–೧೦೦೯) ಸೋಲಿಸಿರಬಹುದಾಗಿ ಕಾಣುತ್ತದೆ. ಒಂದು ವೇಳೆ ತೈಲಪನು ಚಕ್ರವರ್ತಿ ಇದ್ದಾಗ್ಗೆ ಸತ್ಯಾಶ್ರಯನು ಅಪರಾದಿತ್ಯನನ್ನು ಸೋಲಿಸಿ ದ್ದರೆ ರನ್ನನು ಆತನನ್ನು ಸಾರ್ವಭೌಮನೆಂದು ಕರೆಯುತ್ತಿರಲಿಲ್ಲ. ಒಂದೇ ಕಾಲಕ್ಕೆ ಒಂದೇ ಸಿಂಹಾಸನದ ಮೇಲೆ ತಂದೆ-ಮಕ್ಕಳಿಗೆ ಚಕ್ರವರ್ತಿ ಸಾರ್ವಭೌಮ ಎಂದು ಹೇಳುವುದು ಶಕ್ಯವಿಲ್ಲ. ಆದ್ದರಿಂದ ಸತ್ಯಾಶ್ರಯನು ತಾನು ಸಾರ್ವಭೌಮನಾದಾಗ್ಗೆ ಅಂದರೆ ತನ್ನ ಆಳಿಕೆಯಲ್ಲಿಯೇ (ಕ್ರಿ. ಶ. ೯೯೭ರಿಂದ ಕ್ರಿ. ಶ. ೧೦೦೯ರ ವರೆಗೆ) ಅಪರಾದಿತ್ಯನನ್ನು ಸೋಲಿಸಿರಬಹುದು. ಡಾ|| ಎ. ಎಸ್. ಅಳ್ತೇಕರರವರು ಚಾಳುಕ್ಯ ಸತ್ಯಾಶ್ರಯನಿಗೂ ಮತ್ತು ಶಿಲಾಹಾರ ಅಪರಾಜಿತನಿಗೂ ಕ್ರಿ. ಶ. ೧೦೦೫ರಲ್ಲಿಯೇ

ಯುದ್ಧವಾಯಿತೆಂದು ಹೇಳುತ್ತಾರೆ (*Indian Culture*, Vol. II, No. 3, p. 405 and 406). ಈ ಯುದ್ಧವೇ ತಳಹದಿಯಾಗಿ ರಚಿಸಲ್ಪಟ್ಟಂಥ ಗದಾಯುದ್ಧವು ಸುಮಾರು ಕ್ರಿ. ಶ. ೧೦೦೫ರಮೇಲೆ—ಅಂದರೆ ಈ ಯುದ್ಧ ಆದನಂತರ ಮತ್ತು ಕ್ರಿ. ಶ. ೧೦೦೯ರೊಳಗಾಗಿ ಅಂದರೆ ಗದಾಯುದ್ಧದ ನಾಯಕನಾದ ಸತ್ಯಾಶ್ರಯನ ಮರಣದೊಳಗಾಗಿ ರನ್ನನಿಂದ ರಚಿಸಲ್ಪಟ್ಟಿರಬೇಕು.

ಮೇಲ್ಕಾಣಿಸಿದ ಕಾರಣಗಳಿಂದ ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರು ತಮ್ಮ ಮೂರನೆಯ ಪ್ರಮಾಣದಲ್ಲಿ ತೋರಿಸಿದ "ನರಪತಿ ತೈಲಪಂ ಬೆಸಸೆ. . . ." ಎಂಬ ಪದ್ಯದ ಎರಡೂ ಭಾಗಗಳ ಸಂಗತಿಗಳು ಒಂದೇ ವೇಳೆಗೆ ಸಂಭವಿಸುವುದು ಶಕ್ಯ ಕಾಣುವುದಿಲ್ಲ. ಮೊದಲನೆಯ ಭಾಗದಲ್ಲಿನ ಸಂಗತಿಯು ತೈಲಪನ ಆಳಿಕೆಯಲ್ಲಿ ಸಂಭವಿಸಿದ್ದರೆ ಎರಡನೆಯ ಭಾಗದ ಸಂಗತಿಯು ಸತ್ಯಾಶ್ರಯನ ಆಳಿಕೆಗೊಳಪಟ್ಟಿರುವುದು.

ಸತ್ಯಾಶ್ರಯನು ತನ್ನ ಆಳಿಕೆಯಲ್ಲಿಯೇ ಮತ್ತು ಅದೂ ಕೂಡ ಮೊದಲನೆಯ ಸಲವೇ ಅಪರಾಜಿತನನ್ನು ಸೋಲಿಸಿದ್ದರಿಂದ ಚಾಳುಕ್ಯ ನೂರ್ಮಡಿ ತೈಲಪನು ತನ್ನ ಆಳಿಕೆಯಲ್ಲಿ ಅಪರಾಜಿತನನ್ನು ಸೋಲಿಸಲಿಲ್ಲ ಎಂಬುದು ಸ್ಪಷ್ಟ. ಅಂದಮೇಲೆ ಅಪರಾಜಿತನು ಚಾಳುಕ್ಯ ನೂರ್ಮಡಿ ತೈಲಪನ ಸಾಮ್ರಾಜ್ಯತ್ವವನ್ನು ಒಪ್ಪಿಕೊಳ್ಳುವದೆಂತು ? ಮತ್ತು ಆತನ ಮಾಂಡಲಿಕತ್ವ ವಹಿಸುವ ಕಾರಣವೇನು ?

ವೆಂ. ಬಿ. ಲೋಕಾಪೂರ, ಬಿ.ಎ., ಬೆಳಗಾವಿ.

ಫಾಲ್ಗುಣ ಶಶಿ

೧

ಫಾಲ್ಗುಣ ನಿಶಿ; ಪೌರ್ಣಿಮ ಶಶಿ
ಬಾನ್ವೆಣ್ಣಿನ ಭಾಳದಲಿ!
ಇಂಗಡಲಿನ ನವನೀತಂ
ಬಿತ್ತರ ನಭದಾಳದಲಿ
ತೇಲುತಲಿದೆ: ಚೆಂಡಾಡಿದೆ!
ಕವಿ ಹೃದಯದ ಸುಮ್ಮಾನ
ಕೊನರೊಡೆದಿದೆ; ಗರಿಮೂಡಿದೆ:
ಜಗವಿದೊ ನಿದ್ರಾಮೌನ.

೨

ಕಾಮನ ಸತಿ, ಪ್ರಕೃತಿ ರತಿ,
ಜಾನಕೆ ಸಂದಿಹಳಿಂದು!
ಪ್ರೇಮಸ್ಮೃತಿ; ಕಾಮದ ಮೃತಿ:
ಹರಸುರಿಗಣ್ಣಿಗೆ ಬೆಂದು!
ಓ ತವಸಿಯೆ! ಬಾ ಹೊರಗಡೆ,
ಸೌಂದರ್ಯದ ಪೂರದಲಿ
ಸಿದ್ಧಿಯು ಹಡೆ; ಶಿವನಂ ಪಡೆ:
ನೈಸರ್ಗದ ತೀರದಲಿ!

೩

ನೀರದರಹಿತಾಂಬರ ತಲ
ನೀಲವಿತಾನವ ಹೋಲಿದೆ:
ಉಡುಗಡಣದ ಸುಮವಿಸರಂ
ಬಾಂಬೊಲದಲಿ ಚೆಲ್ಲಾಡಿದೆ:

ಜೊನ್ನಿನ ಸರಿ, ಶಾಂತಿಯ ಸಿರಿ,
ಬುವಿ, ಬನ, ಬಾನಾವರಿಸಿದೆ:
ಸುಖ ಮಾರುತ ಬೀಸುತಲಿದೆ;
ಸೃಷ್ಟಿಯ ತೊಟ್ಟಿಲ ತೂಗಿದೆ!

೪

ಶಿವ ತಾಂಡವ ಗೈಯುತಲಿಹ
ಸೌಂದರ್ಯದ ಸನಿಯದಲಿ:
ಶಿವ ಜೂಟದಿ ಮೆರೆಯುತಲಿಹ
ಧವಲಿಮ ಶಶಿ ಚೆಂದದಲಿ!
ರಸಯೋಗಿಯೆ, ಅರ್ಪಿಸು ಬಾ,
ರಸಹೃದಯದ ಮಂದಾರ!
ಶಿವ-ಸೌಂದರ ದರ್ಶನವಿದೆ
ರಸಜೀವನದಭಿಸಾರ!

—ಟಿ. ಎಲ್. ಶ್ರೀನಿವಾಸಮೂರ್ತಿ, ಮೈಸೂರು.

ಚಾತಕವ್ರತ

(ಮುಂದುವರಿದದ್ದು)

ಭಾಗ ೩

‘ಬೇಡಿ ಪಡೆದು ದಿವ್ಯರಸವ ಚಾತಕ
ಮಾಡು ನಿನ್ನ ಜನ್ಮಜಾಲ ಸಾರ್ಥಕ
ಜಗದ ನೀರು ಹರಿದು ಬಂದು ಕರೆದರು
ಮುಗಿಲ ಹನಿಯ ಪಡೆವವರೆಗೆ ತಡೆದಿರು’

ಮುಂದೆ ಮುಂದೆ ಬಿಸಿಲಿನಗ್ನಿ ತೂರುತ
ಬಂದು ಹೋಗಲೇಸೊ ದಿನದ ಮಾರುತ
ತನ್ನ ಮರದ ಮನೆಯ ನೆಳಲು ನೆಮ್ಮದಾ
ಚಿನ್ನಹಕ್ಕಿ ರೆಕ್ಕೆಬಲಿತು ಸೊಮ್ಮದಾ
ಎದೆಯ ಬಲುಮೆಯಿಂದ ತನ್ನ ವ್ರತದೊಳು
ಬದುಕಿ ಜೀಗುತಿರಲು ತುಂಬ ಮುದದೊಳು
ನಿಚ್ಚವೆದ್ದು ಬೆಳಗು ಕಣ್ಣ ಕವಿಯಲು
ಅಚ್ಚ-ಹೊಸಬನಾಗಿ ಆದಿಕವಿಯೊಲು
ಮೂಡಣದಲಿ ಚಿಮ್ಮುತಿರುವ ಬೆಳ್ಳಿಯ
ನೋಡಿ ಮೇಲೆ ಕೆಂಪುಹರಳ ಬಳ್ಳಿಯ
ತಳದಿ ನೆಗೆದು ತೆಕ್ಕನೆಳ್ದ ತೇಜಗೆ
ಇಳೆಯ ಭಕುತಿಯಾಗಿ ಬಾಗಿ ಚಾದಗೆ
‘ದೊರೆಯೆ ಎನ್ನ ನೋಂಪಿಮನೆಯ ಸುತ್ತಲು
ಕಿರಣದೊಂದು ಕೋಟೆ ನಿಲಿಸು ಕಾಯಲು’
ಹೀಗೆ ಬೇಡಿ ಹರಣ ಹಗುರವಾಗಿಸೆ
ಹಿಗ್ಗುಜೋಲೆಯಲ್ಲಿ ಜೀವ ತೂಗಿಸೆ
ತನ್ನ ತವರಿನಾಲಮರದ ಎಲ್ಲೆಡೆ
ಚೆನ್ನ ಬೆಳಗು ಸುರುಳಿಸಿಂದ ಹಣ್ಣೆಡೆ

ತಣಿದು ಕಂಡು ಕುಣಿದು ರೆಂಬೆರೆಂಬೆಗೆ
ಮಣಿದು ಕದುಕಿ ತಿಂದು ತೇಗಿ ಚಾದಗೆ
ಬಿಸಿಲುಗುದುರೆಯೇರಿ ಬಯಲೊಳೀಸುತ
ಮಸಗಿ ಬಂದು ಗರಿಯ ಗುಡಿಯ ಸೂಸುತ
ಕರೆಯೆ ಹಕ್ಕಿಹಿಂಡು ಮೇಳದಾಟಕೆ
ಬೆರೆತು ಬೆರೆಯದಂತೆ ಚಿಕ್ಕ ಚಾತಕೆ
ಜೊತೆಗೆ ಹಾರಿ ಬಾನೊಳೇರಿ ಸಾರುತ
ಜೊತೆಯ ಕೂಡ ನೂರು ನಿಲವು ತೋರುತ
ಗಕ್ಕನಿಳಿದು ಕೆಳಗೆ ತೋಟ ಹಸುರಲಿ
ಸಿಕ್ಕ ಹಣ್ಣುಹಂಪಲಗಳ ಬಸಿರಲಿ
ಎಸೆದು ಕಾಡುಮೊಲ್ಲೆ ಹೂವ ಸಾರಿರೆ
ಹಸಿವು ತಣಿದ ಮಿಕ್ಕ ಬಾಯಿ ಆರಿರೆ
ನೀರ ತಾಣಕೆಂದು ಪಕ್ಕ ಬೀಸಲು
‘ನೀರು ನನಗೆ ಹಣ್ಣರಸವೆ ಮೀಸಲು’
ಎಂದು ನೆನೆದು ಹಿಂಡಿನೆಳೆತ ತಪ್ಪಿಸಿ
ಬಂದಿತಣುಗ ತನ್ನ ನೆಲೆಗೆ ಜಪ್ಪಿಸಿ
ಇರುತಿರುತಲೆ ಹಕ್ಕಿಗೆಲ್ಲ ಹರುಷವು
ಕರೆಯುಬಂತು ನೀರಾಟದ ಹಬ್ಬವು
ಮುಗಿಲು ಮುಸುರಿ ನೂರು ನೆರವಿ ನಡೆದಿರೆ
ದಿಗಿಲುಗೊಂಡ ಚಾತಕಮರಿ ತಡೆದಿರೆ
ಮೈಯ ಬಲೆಯ ಮರಕೆ ಬೀಸುತೆಳೆದುವು
ಒಯ್ಯನದನು ಹಿರಿಯ ಹೊಳೆಗೆ ಸೆಳೆದುವು
ಪಾದದಾಳ ತಿಳಿಯ ತುದಿಯ ಪೊಸಲೊಳು
ಹಾದು ಕೆಲೆದು ಹಾರಿ ಮುಳುಗಿ ಜಣದೊಳು
ಪಕ್ಕಬಿದಿರಿ ಮತ್ತೆ ಮುದುರಿ ಅದ್ದುತ
ಮುಕ್ಕನೀರನೀಂಟಿ ಮೀಂಟಿ ಮೋದುತ
ಆಡುತಿರೆಯು ಹಾಡಿ ಹಕ್ಕಿಗಡಣವು
ನೋಡುತುಂತೆ ನೀರನೋಂಪಿಯಣುಗವು
ದೂರ ಕುಳಿತು ಕೆಳೆಯ ಕರೆಗೆ ಮಿಸುಕದೆ

ಹಾರಯಿಕೆಯು ಹೊಳೆಯು ತರುಬಲಾರದೆ
ಬಿರುಗಾಳಿಯು ಬೀಸಿ ತೂರಿದಂತಿರೆ
ತೊರೆಯ ತಂಪುದಡದಿ ಮೈಯು ನಿಂತಿರೆ
ಮುಳುಗಿ ಮುತ್ತಿ ನೀರನೆಲ್ಲ ಹೀರಲು
ಕೊರಲುಕಾಲುನರಗಳೆಲ್ಲ ಹಾರಲು
ಚಕ್ಕನೊಂದು ಯುಗಯುಗದೊಳ್ತಿವಿತವು
ಮಿಕ್ಕಿಮೀರಿ ಮನವ ಮುತ್ತೆ ವಿಹಗವು
ಜೋಡುಜೊತೆಯ ನೋಡಿ ಬೇಡವೆನ್ನುತ
ಕಾಡಿನಲ್ಲಿ ಕಾಣದೊಂಟಿ ತಾನೆ ತಾ
ಆಗಿರುವುದು ಎಂದು ಅಡಗಿ ಹಾರಿತು
ಸಾಗಿಸಾಗಿ ಮಳಲುಗಾಡು ಸೇರಿತು
ಕೆಳಗೆ ಮೇಲೆ ಸುತ್ತುಮುತ್ತು ಕಾಡೊಳು
ಕೆಳೆಯರೊಬ್ಬನೊಬ್ಬರಿರದ ನಾಡೊಳು
ಇಲ್ಲಿ ಎಂತು ಎನ್ನ ನೋಂಪಿಗೆಡೆತಡೆ
ಇಲ್ಲವೆಂದು ಹಿಗ್ಗಿನುಗ್ಗಿ ಮುಂದೆಡೆ
ಬಳಲಿ ಇಳಿದು ಕಾಲುಮುಳುಗಿ ಕಾಣಲು
ಮಳಲೆ ಮಳಲು ಆದ ಬಯಲು ಕಣ್ಣೊಳು
ಮರಳಿ ತಳರೆ ಕುಪ್ಪಳಿಸುತ ಚಾದಗೆ
ಮರದ ನೋಟು ಕೂಡ ದೊರೆಯದಾಂಕೆಗೆ
ಬೆಳಗಿನಲಿಯೆ ನಡುಹಗಲಿನ ಕಾವನು
ಪ್ರಳಯದಗ್ನಿಯಂತೆ ತೂರ್ವ ದೇವನು
ಮಸಗಿ ಆಳ್ವ ಕಾಡಿನಲ್ಲಿ ಬಾಳ್ವುದೆ?
ಹಸುರು ಹೂವು ಭಳ್ಳಿಮರವು ತಾಳ್ವುದೆ?
ಕಸಿಯುವಂತೆ ಒಳಹೊರಗಿನ ನೀರನು
ಬಿಸಿಲು ಏರಿ ಬೀಸೆ ಬೆಳ್ಳ ಬಲೆಯನು
ಮನವ ಮಸೆದು ಮುಂದೆ ಲೇಸನೆಳಸುತ
ತನುವ ತೂಗಿ ಎದೆಯ ಬಲ್ಪುಗೊಳಿಸುತ
ರೆಕ್ಕೆ ಬೀಸಿ ಬಯಲೊಳೀಸಿ ಬಾಗಿರೆ
ಚಿಕ್ಕಮರಿಯು ಹಿರಿಯವ್ರತಿಯು ಸಾಗಿರೆ

ಗಗನಮಣಿಯು ಬಾನ ನಡುವನಡರುತ
ಧಗಧಗನೆಂಬುರಿಯ ನಗೆಯ ಕೆದರುತ
ನೆಲೆ ಆಗಲೆ ಸುಡುಬಾಯಿಯು ಚಾಚುತ
ಬಲಿತು ಬೀಸಿತೊಂದು ಚಂಡಮಾರುತ
ತರಗೆಲೆಗಳ ತೆರದಿ ಉಸುಕುಕಣಗಳ
ತೂರಿ ತೂಳ್ದು ಚೆಂಡಾಟದ ಚಣಗಳ
ಕಳೆಯುತಿರಲು ಚಾತಕವರಿ ಕಂಗೆಡೆ
ಅಳವುಮೀರಿ ಹಿಂಚಿ ಹಾರೆ ಮುಂಗಡೆ
ಮಳಲು ಕಿಚ್ಚು ಸುತ್ತಿ ಮೈಯ ಸದೆಯಲು
ಕಳೆಯ ಚಿಕ್ಕೆಯಂತೆ ಕೆಳಕೆ ಕೆಡೆಯಲು
ಕತಕತ ಕುದಿಯುಸುಬೆ ಹಾಸು ಹೊಚ್ಚಿರೆ
ವೆತೆಯ ಮರೆಸಿ ಸಾವುಸಿದ್ದೆ ಮುಚ್ಚಿರೆ
ಬದುಕುಸಾವನುಂಡು ನೋಡಲೆಂತಲೊ
ಆದಯ ಗಾಳಿ ಚೇತರಿಸಲು ಬಂತೆಲೊ
ಮಳಲ ಮರೆಯು ಸರಿಯೆ ಹಕ್ಕಿ ಎಚ್ಚರೆ
ಒಳರಿತೊಡನೆ ನೀರು ಎಂದು ಬಾಯ್ದೆರೆ
ಮೇಳ ಶೂಳವೆಂದು ಜರಿದು ಜಾರಿದಾ
ಬಾಳಹಕ್ಕಿಗಾರು ನೆರವು ದೊರೆಯದಾ
ಮಳಲು ಪಳುವಿನಲ್ಲಿ ನೀರು ಪಾರಿಯೆ
ಮಳ್ಮಳಿಯುತ ಬಾಯಿ ತಾರಿ ಸಾರಿಯೆ
‘ಬದುಕನುಳಿಸು ಬಾಯ ತಣಿಸು ನೆಲಜಲ’
ಎನುತ ಬೇಡಿ ಎದ್ದುಬಿದ್ದು ಕಲಮಲ
ಬಂಡೆಹೊರೆಯ ಮೈಯನೆಳೆದು ಮುಂದಲು
ಕಂಡಿತೆಂತೊ ತಾಳಮರದ ತುರುಗಲು
ಮರಪೊರಕೆಯ ಸೇರಿ ಕುಳಿತು ಕೆಳದಲಿ
ಒರತೆಗುಳಿಯ ಜವುಳುನೆಲವ ತಳದಲಿ
ನಿರುಕಿಸಿ ಹಿರಿಮಿಂಚಿನಂತೆ ಹರಿಯುತ
ತರಹರಿಸದೆ ನೀರ ತುದಿಗೆ ಸರಿಯುತ
ಮರೆತು ತನ್ನ ಹಿರಿಯ ಆಸೆಬಾಸೆಯ

ಸೆರೆಗೆ ಸಿಕ್ಕಿ ಬಳಲಿ ಬರತ ಬಾಯಿಯ
ಒಲಿದು ತಳಕೆ ಚಂಚುತೆರೆದು ನಿರಿಸಲು
ನೆಲದ ನಿಂತ ನೀರಿನೊಳಕೆ ಇರಿಸಲು
ಮೊದಲ ಹನಿಯನೀಂಟುವನಿತರಲ್ಲಿಯೆ
ನೆಸವು ಸಿಡಿಲ ರೂಹುಗೊಂಡು ನುಗ್ಗಿಯೆ
ಓಸರಿಸಿರೆ ಹಲವು ಹೆಜ್ಜೆ ಹಿಂದಕೆ
ಲೇಸು ಮೊಳಗೆ ಕವಿಯೆ ನೋವು ನಾಚಿಕೆ
ಸವೆಯದೊಳದ ಸವಿಯ ಜೀವ ಸವಿದಿರೆ
ನವೆಯದಂತೆ ನಿಚ್ಚ ನೋಂಪಿ ನಲಿದಿರೆ
ಕಣೆಯ ಬಿಲ್ಲುಕೊಡೆಯು ತಲೆಗೆ ಮೂಡಿತು
ಕೆಳಕೆ ಬಾಯಿ ಮಣಿಯದಂತೆ ಮಾಡಿತು
ಹೊಸದನೇನೊ ಪಡೆದೆನೆಂದು ಹಿಗ್ಗುತಾ
ಒಸೆದು ಸಾರಿ ನೀರ ಬಳಿಗೆ ಹಕ್ಕಿ ತಾ
ಮೈಯ ಮಣಿಸಿ ಕಾಣಲೆಳಸೆ ಬಿಲ್ಲದು
ಬಾಯ ತುಡುಕಿ ಕೆಳಕೆ ಕೆಡವಲೊಲ್ಲದು
ನೋಯದದಕೆ ಭಲರೆ ಗೆದ್ದೆನೆನ್ನುತ
ನೋಂಪಿದೇವನಿತ್ತ ಒಲುಮೆತಾಯತ
ದೊರೆಯಿತೆಂದು ದೂರ ಕಣ್ಣು ಹರಿಯಿಸಿ
ನೀರಿನೊಳದಿ ತಲೆಬಿಲ್ಲನು ನಿರುಕಿಸಿ
'ವೀರ ನಾನು ಬಿಲ್ಲನೆಳೆದು ಗೆಲ್ಲುವೆ
ನೀರಡಿಕೆಯ ಹಗೆಯನಿನ್ನು ಕೊಲ್ಲುವೆ'
ಸಾರುತಿಂತು ಸುಖಸಾರದಿ ನೆರೆಯುತ
ಹಾರಿತೆದ್ದು ಮುನ್ನೋಟದಿ ಮೆರೆಯುತ
ಹುಚ್ಚುಬಿಸಿಲು ಸೀದ ಮಳಲು ಮತ್ತೆಯೂ
ಎಚ್ಚ ಬಾಣವ್ಯೂಹದಂತೆಯೊತ್ತೆಯೂ
ಅದಿರದಳ್ಕದಂತರಂಗಬಲದಲಿ
ಹೊದಿಕೆಮೈಯ ಹುರಿಗೊಳಿಸುತ ಚಲದಲಿ
ಜಿಗಿದು ಮುಗಿಲ ಮುನ್ನೀರೊಳು ಈಜುತ
ಹಗುರು ಪುಚ್ಚಪರಿಯಾಗಿಯೆ ಮುಂಚುತ

ಪಯಣವೋಗೆವೋಗೆ ಹಲವು ಗಾವುದ
ನಯನಕೊಮ್ಮೆ ಕಂಡಿತೊಂದು ಅದುಬುದ
ತಂಗಾಳಿಯು ಬೀಸಣಿಕೆಯು ಬೀಸುವ
ಸಿಂಗಾರದ ನೀರದೇವಿ ವಾಸವಾ
ಮುಗಿಯಿಲ್ಲದ ಕಡಲಕಂಡು ತನ್ನ ತಾ
ಸೊಗವೆಲ್ಲವು ಜಲವಾಯಿತೊ ಎನ್ನುತಾ
ಹಿರಿತವಕದಿ ನಡುಬಂಡೆಗೆ ಹಾರಿರೆ
ಕರುನೋಟದಿ ಕಣ್ಣುಣಿಸಲು ಕೂರಿರೆ
ಸಾವಿರಾರು ಹೆಡೆತೆರೆದಿಹ ನಾಗರ
ಹಾವಾಡಿಗ ತರುವಂತೆಯೆ ಸಾಗರ
ತೆರೆಸೊರೆಯನು ತೂರಿ ವೊರೆದು ಅಡಸಲು
ಅರೆಯೇರುತ ಸೀರ್ಪನಿಗಳ ಸಿಡಿಸಲು
ನೆಲನೀರಿನ ಸೋಂಕಿಗಳುಕಿ ಚಾದಗೆ
ಅಲೆದಾಡಿರೆ ಮೇಲೆ ಕೆಳಗೆ ಮೇಲಕೆ
‘ನೀರಾಟವನಾಡದಿಲ್ಲಿ ನನ್ನೊಳು
ಹಾರಾಡುವಿಯೇತಕೆಳೆಯ ಹುಳದೊಲು’
ಅಲೆ-ಮೊರೆತದ ನುಡಿಯದಿಂತು ಕೇಳಿರೆ
‘ನೆಲ ನೀರನು ಸೋಂಕೆ’ನೆಂದು ಹೇಳಿರೆ
‘ನೀರಾವುದು ನೀ ಬೇಡುವು’ದೆನ್ನಲು
‘ಕಾರ್ಮೋಡದ ತಿಳಿಯ ತೊಳಪ ತಂದಲು
ಪಡೆವೆನಿಲ್ಲದಳಿವೆ’ನೆಂಬ ಮಾತಿಗೆ
ಕಡಲು ನಕ್ಕಿತೊಂದು ನೊರೆಯ ಹಿರಿನಗೆ
‘ನೀ ಬಯಸುವ ಮೋಡ ತಾನೆ ತವರಿಹೆ
ತಾಯ್ಬೇರನು ತೊರೆದು ಮಿಡಿಗೆ ತವಕಿಪೆ!’
ಕೂಗುತಿಂತು ಬೆಟ್ಟದೆರೆಯ ಮೋಹರ
ಸಾಗಿ ಬಂತು ಹಿರಿಯ ಮೋಹ-ಸಾಗರ
ಮಿಡುಮಿಡುಕುತ ಬಿಲ್ಲಗಾವು ಹುಸಿಯಲು
ಕಿಡುಗಾಲವು ಸುಸುಳಿತೆಂದು ಸುಯ್ಯಲು
ಮೈಯು ಮುಳುಗೆ ತೆರೆನೀರಿನ ಮಿಾಹದಿ

ಬಾಯ ತೆರೆಯದಿದ್ದು ನೋಂಪಿನೇಹದಿ
ಕಾಯೆನ್ನನು ತಾಯೆನ್ನುತ ಗೂಡಿಗೆ
ಹಾಯ್ದಲೆಗಳ ಹಾರುತಿರುವ ಚಾದಗೆ
ನುಡಿಯುತಿತ್ತು ಬೀಸಿ ಸೂಸಿ ರೆಕ್ಕೆಯ
ಪಡೆದ ತನ್ನ ಬಾಳ ಹಿರಿಯ ಪೂಣ್ಕೆಯ
'ಕುಡಿಯಲಾರೆ ನೆಲದ ಕದಡುನೀರನು
ಪಡೆವವರೆಗೆ ಮುಗಿಲ ತಿಳಿಯ ಜಲವನು
ಅಸುವ ಕಸಿದರೇನು ನಾನು ಸಾರ್ಥಕ
ಹಸುಳನಹುದು ದಿವ್ಯರಸದ ಸಾಧಕ.'

ಭಾಗ ೪

'ಬೇಡಿ ಪಡೆದು ದಿವ್ಯರಸವ ಚಾತಕ
ಮಾಡು ನಿನ್ನ ಜನ್ಮಜಾಲ ಸಾರ್ಥಕ
ಜಗದ ನೀರು ಹರಿದು ಬಂದು ಕರೆದರು
ಮುಗಿಲಹಸಿಯ ಪಡೆವವರೆಗೆ ತಡೆದಿರು'

ತನ್ನ ವ್ರತದ ರನ್ನ ಕಾವ ಹಂಬಲು
ಇನ್ನೆಲ್ಲಿಯು ತೀರದೆಂದು ನಂಬಲು
ಸಾರಿ ಕೆಳಕೆ ಜಾರಿ ದಣಿವುದುಕ್ಕದಿ
ಹಾರಿತೆಂತೊ ಬಿದ್ದೇಳುತ ಪಕ್ಕದಿ
ಬಳಲಿ ನವೆದು ದಾರಿಕಳಿದು ಕೊನೆಯಲಿ
ಇಳಿದಿತೊಮ್ಮೆ ಆಲಮರದ ಮನೆಯಲಿ
ತವರುಕಂಡೆನೆಂಬ ತಣಿವುತೀವುತ
ಬವಣೆಬನ್ನ ಕಳೆದು ಪದುಳವೀಯುತ
ಏರುತಿರಲು ಹೊಸ ಹಿಗ್ಗಿನ ಹಗುರನು
ಯಾರೆನಸಗೆಣೆ ಎನಲು ಹಕ್ಕಿಯಣುಗನು
ಒಣರೆಂಬೆಯ ತರಗೆಲೆಗಳ ಗೂಡದು
ಗನವುಕ್ಕಿನ ಕಾವುಗೋಟೆಯಾದುದು
ಓವೆನಿನ್ನು ನೋಂಪಿಯೆಂಬ ಮಲ್ಲಗೆ
ಕಾವುಗಾಲವಳಿಯುಬಂತು ಮೆಲ್ಲಗೆ

ಬಿಸಿಲುಬೇಗೆ ಹೆಚ್ಚುಗೊಂಡ ಹಾಗೆಯೆ
ಹಸಿಯ ಹೊಳೆಯು ಸನಿಯ ಬಂತು ಸಾಗಿಯೆ
ಹಗಲೆಲ್ಲವು ನೇಸರುರಿಯೆ ಆಗಳೆ
ಜಗವೆತ್ತಲು ಹುರಿಹಂಚೆನೆ ಕಂಗೊಳೆ
ಉಸಿರಾಡದ ಗಾಳಿ ತಪಕೆ ನಿಂದಿರೆ
ಕಸಿವಿಸಿಯುಸು ಹಕ್ಕಿಬ್ರತಿಗೆ ತಂದಿರೆ
ತಂಗಾಳಿಯ ಎಳಸುಳಿಗಳು ತೇಲುತ
ಮುಂಗಾರಿನ ಸವಿಸೋಂಕನು ಬೀರುತ
ಬರೆ ಬೈಗೊಳು ಬರಿಬಾನಿನ ತುದಿಯೊಳು
ಗೆರೆಮಿಂಚುಗಳೊಲಿದಾಡಿದುವಿದರೊಳು
ಕರೆಸಾರಿದ ಆ ಮೊದಲಿನ ಅಕ್ಕರ
ಬರೆವುವು ಎನೆ ಕೊನೆಬರವಿನ ಬಿತ್ತರ
ಓಲಾಡುತ ಹಿಗ್ಗಿನಲ್ಲಿ ಚಾತಕ
'ಗೋಳಾಟದ ಬಾಳು ಇನ್ನು ಸಾರ್ಥಕ
ಆಗಲಿಹುದು' ಎಂದು ಮರದ ಮೇಲಕೆ
ಸಾಗಿ ಕುಳಿತು ತುತ್ತತುದಿಯ ತೋಲಕೆ
ತೂಗಿ ತನ್ನ ಕಣ್ಣ ಮೇಲೆ ಸುಳಿಯಿಸಿ
ಯೋಗಿಯಂತೆ ಎವೆಯಿಕ್ಕದೊಲುಳಿಯಿಸಿ
ಜಾನಿಸುತಿರೆ ಮುಗಿಲಹನಿಯೆ ಬಾರೆನೆ
ಬಾನ ತರುಣ ಕಣ್ಣು ತೆರೆದು ತೋರೆನೆ
ತಿಳಿನೀಲಿಯ ಹರಿವಾಣದಿ ಹರಿಯುವ
ಬಿಳಿಮೋಡವು ತಳೆಯೆ ಕಾರ ವರುಣವ
ಮಿಂಚಾಟವು ಹಕ್ಕಿಕಣ್ಣ ಮಿಂಚಿಸೆ
ಕಣ್ಬೈವುಟುತ ಮರೆಗೆ ಸಾರಿ ಬಂಚಿಸೆ
ಕಾರಬರವುನೋಟ ಕರಗಿ ತೊರೆಯಲು
ಗೋರನೋವು ಕೊಂತವಾಗಿ ಇರಿಯಲು
ಮರಳಿ ಮನವ ಸಮತೂಕದಿ ನಿಲ್ಲಿಸಿ
ಹಿರಿಯ ಜಾನದರಿವುಗೊಳದಿ ಮಿಾಯಿಸಿ
ಇರೆ ಚಾತಕ ಹಲವುಹಗಲು ಹೊರಳಿರೆ

ಹಿರಿಗಾಳಿಯು ಕುಳಿರುಕುದುರೆಯೇರಿರೆ
ತಂಪೆತ್ತಲು ನೆಲಮುಗಿಲನು ತುಂಬಲು
ತಂಪೇರಿದ ಬೆಂಗದಿರನೊ ಎಂಬೊಲು
ಪಡುವಣ ಮಲೆಯಿಂದ ಮೇಲಕೇಳುತ
ಪಡೆಗೂಡಿಯೆ ಕಾರಮೋಡ ಸುಳಿಯುತ
ದೆಸೆಯೆಲ್ಲವ ಇಡಿಕಿರಿಯುತ ಇಂಬೆಸೆ
ರಸದುಂಬಿದ ಹೊರೆಯಿಂದಲೊ ಎಂಬೆಸೆ
ಗತಿಯಿಲ್ಲದ ಗತಿಯಿಂದಲೆ ನಡೆದಿರೆ
ಬಾನೆಲ್ಲವು ಗೌಸಣಿಗೆಯ ಪಡೆದಿರೆ
ಹನಿತುಂಬಿದ ತುರುತುರುಗಿದ ಮುಗಿಲನು
ತಣಿಗಾಣುತ ಹಿಗ್ಗಿ ಹಕ್ಕಿಯಣುಗನು
ನೀರೆಂಬುವ ಹಂಬಲುಕ್ಕಿ ಮಿಕ್ಕಿರೆ
ತಾರಾರಿದ ಚುಂಚುತೆರೆದು ಎಕ್ಕಿರೆ
ಬಳಗುಂದಿದ ಹರಣ ಹೇಗೊ ಹೊಂದಿರೆ
ತಿಳಿತೊಳಗುವ ಹನಿಗಾಗಿಯೆ ನಿಂದಿರೆ
ಇಳೆ-ಕಂಪನು ಸೂಸಾಡುತ ಸುತ್ತಲು
ಮಳೆಗಾಳಿಯು ಮಳೆಸಾರುತ ಮುತ್ತಲು
ಅದೆ ದೂರದಿ ಮಳೆವನಿಗಳು ಬೀಳುವ
ಪದೆವುಕಾಣ್ಕೆ ಕಣ್ಮುಂದಲು ಏಳುವ
ಹಕ್ಕಿಯೆದೆಯು ಹಾತೊರೆಯುತ ಮಿಡಿಯಲು
ಎಕ್ಕೆಕ್ಕೆಯ ಮುಗಿಲುಹಿಂಡ ನೋಡಲು
ಬಾನೊಡೆಯನ ಹಿರಿಯಾನೆಯ ಪಡೆವೊಲು
ಹನಿಯೊಡೆಯದೆ ಮುನ್ನಡೆಯಲು ಮೂಡಲು
ಮುಂದೆಲ್ಲಿಯೊ ಮಳೆಸರಿಗಳು ಕಂಡವು
ಬಂದಳಲಿನ ಕಣೆಹಕ್ಕಿಯ ಕೊಂಡವು
ತನಗಿಲ್ಲವು ಸೈಪುಪಡೆಯೆ ಬಾಂಬನಿ
ಎನುತುಕ್ಕುತೆ ಮೂಡಿತೊಂದು ಕಂಬನಿ
ಈಸುದಿನದ ಬಯಕೆದುಕ್ಕ ಕರುಗುತ
ಸೂಸಿ ಕಣ್ಣ ಹನಿಯಾಗಿಯೆ ಮಿರುಗುತ

ನಿಲುವಾಗಿಸ ಎದೆಬೇಗುದಿ ಆರಿರೆ
ನೆಲೆಗೊಂಡಿಹ ಚಿರಶಾಂತಿಯು ಸಾರಿರೆ
ಹಲವಾಟದಿ ನೀಲದೆಲ್ಲ ಉಡಿಗೆಯ
ತಳೆದೋಡಿರೆ ಮೋಡ ಹಲವು ನಡಿಗೆಯ
ಬೀಳದಿರೆಯು ಹನಿಹೊಳಪಿನ ಶಕಲವು
ತಾಳುತೊಲಿದು ತಪವಿದ್ದಿತು ವಿಹಗವು
'ನೀನೆ ಮೊದಲೆ ಕರೆದು ಮುಗಿಲೆ ಪೂಣ್ಕೆಯ
ನನ್ನೊಳಿತ್ತು ಮುಂದುವರಿಸಿ ಬಾಳ್ಕೆಯ
ಎನಿತೊ ಜಾರುಗಾಲದಾಸರಾಗಿಯೆ
ಎನಗೆ ಬಿಲ್ಲಗಾಪನೆರೆದು ಹಾಗೆಯೆ
ಈಗಲೆಲ್ಲ ಬಾನ ಕವಿದು ಬಂದಿಹೆ
ಮಾಗಿದೆನ್ನ ಬಯಕೆಸುದೆಯ ತಂದಿಹೆ
ಬೇರಾವುದ ಬೇಡದೊಡೆಯ ಜೀವನ
ಹಾರುತಿಹುದು ಮುಗಿಲುಹನಿಯ ದೇವನ
ಬೇಡಿರುವುದು ಬಾಳ ಸುಗ್ಗಿ ತಿಣ್ಣನೆ
ಕೂಡಿರುವುದು ಪಡೆವ ಪುಣ್ಯ ನಿನ್ನನೆ'
ಇಂತೊರೆಯುತ ಜಾನದೊರೆಯಲೀಸುತ
ಶಾಂತಿಶಿಖರದಲ್ಲಿ ತನ್ನ ನಿಲಿಸುತ
ಕಾಲದೆಲ್ಲ ಕಳವಳವಸು ಕಳೆದಿರೆ
ಹೋಲದಂಥ ಹೊಸಬಸಗೆಯು ತಳೆದಿರೆ
ನೇಸರೊಮ್ಮೆ ನಡುಹಗಲಲಿ ನೀಲದಿ
ಸೂಸುತಿರಲು ಬಿಸಿಯ ಕಿರಣಜಾಲದಿ
ಬಿಸವಂದವೊ ದೆಸೆಯೆಲ್ಲವ ಮುಸುಳಿಸಿ
ಬಸಿತಬಣ್ಣದೊಂದು ಮುಗಿಲು ಹೊಸಯಿಸಿ
ನಡುನೇರದಿ ತಾನೇರುತ ಮೂಡಿರೆ
ಒಡನೆತ್ತಲು ತಣುಗಾಳಿಯು ತೀಡಿರೆ
ಹಿರಿಬಯಕೆಯ ಕಿರಿಹಕ್ಕಿಯು ಪರಿಕಿಸೆ
ತೆರೆಬಾಯಿಯ ತೆರೆದೆತ್ತರ ನಿರುಕಿಸೆ
ಮುಗಿಯಿಲ್ಲದ ಮುಗಿಲಲ್ಲಿಯೆ ಬಂದು ತಾ

ಸೊಗದಿರುಳಿನ ಹನಿವೈಯನು ಹೊಂದುತಾ
ಸುಳಿಯಲರಿನ ಮುದ್ದಾಟಕೆ ಒಲಿಯಲು
ತಿಳಿಮುತ್ತಿನ ಹನಿಸುದೆ ಕೆಳಗಿಳಿಯಲು
ತನ್ನಾಲದ ತವರಲ್ಲಿಯೆ ಕೂರಿದಾ
ಚಿನ್ನನವನು ಬರಮಾಡುತ ಮಿಾರಿದಾ
ಸುಖಸಾರಧಿ ಸವಿಸವಿಯುತ ಸುಧೆಯನು
ಹಗುರಾಗುತ ಹಳನೋವನು ನೆಸೆಯನು
ಕೊನೆಗಂಡಿತು ಬಾಳೆನ್ನದು ಸಾರ್ಥಕ
ಹನಿಪೂರದಿ ಬೆರೆವೆಸೆನಲು ಚಾತಕ
ನೆರೆಸೋತಿರುವಳಿವೈಯದು ಒರಗಿತು
ಹೊರಹಾರುವ ಜೀವವಿಂತು ಒರೆದಿತು

‘ಕುಡಿಯಲಾರೆ ನೆಲದ ಕದಡು ನೀರನು
ಪಡೆದೆನೀಗ ಮುಗಿಲ ತಿಳಿಯ ಜಲವನು
ಅಸುವ ಕಸಿದರೇನು ನಾನು ಸಾರ್ಥಕ
ಹಸುಳನಹುದು ದಿವ್ಯರಸದ ಸಾಧಕ.’

ರಂ. ಶ್ರೀ. ಮುಗಳಿ.

ಸಾದರ ಸ್ವೀಕಾರ

೧. **ನಾದಲೀಲೆ** (ಕವಿತೆ)—ಲೇಖಕರು: ಶ್ರೀ 'ಅಂಬಿಕಾತನಯದತ್ತ' (ಬೇಂದ್ರೆ); ಪ್ರಕಾಶಕರು: ಕರ್ಣಾಟಕ ಸಂಘ, ಶಿವಮೊಗ್ಗ; ಕ್ರೌನ್ ಅ. xx + ೮೮; ಬೆಲೆ, ೧೨ ಆಣೆ.

೨. **ಜನನಾಯಕ** (ನಾಟಕ)—ಮನೋಹರ ಗ್ರಂಥಮಾಲೆಯ ೩೪ನೆಯ ಕುಸುಮ; ಬರೆದವರು: ಶ್ರೀ ವಿ. ಕೃ. ಗೋಕಾಕ; ಸಂಪಾದಕರು ಮತ್ತು ಪ್ರಕಾಶಕರು: ಶ್ರೀ ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ; ಕ್ರೌನ್ ಅ. ೨೨ + ೧೩೫; ಬೆಲೆ, ೧೪ ಆಣೆ.

೩. **ಬ್ರಹ್ಮಾನಂದ ಕೇಶವ ಚಂದ್ರಸೇನ** (ಜೀವನ ಚರಿತ್ರೆ)—ಶ್ರೀ ಸರ್ವಮಂಗಳಾ ಗ್ರಂಥಮಾಲಾ, ಪ್ರಥಮಕುಸುಮ; ಲೇಖಕರು: ಶ್ರೀ ಡಿ. ರೇಣುಕಾಚಾರ್ಯ, ಬಿ.ಎ. (ಆನರ್ಸ್), ಬೆಂಗಳೂರು; ಕ್ರೌನ್ ಅ. ix + ೨೦೦; ಬೆಲೆ, ರೂ. ೧—೦—೦.

೪. **ಮೈಸೂರು ಒಡೆಯರ ಕಥೆಗಳು** (ಶ್ರೀ ಶೈಲಕುಮಾರೀ ಗ್ರಂಥಮಾಲೆಯ ದ್ವಿತೀಯಕುಸುಮ)—ಲೇಖಕರು: ಶ್ರೀ ಓ. ಎನ್. ಲಿಂಗಯ್ಯ, ಬಿ.ಎ. (ಆನರ್ಸ್); ಮಲ್ಲೇಶ್ವರಂ, ಬೆಂಗಳೂರು; ಕ್ರೌನ್ ಅ. vi + ೯೪; ಬೆಲೆ, ೮ ಆಣೆ.

೫. **ಪುಟಾಣಿ ಕಥೆಗಳು**—ಚಿಕ್ಕಮಕ್ಕಳು ಬರೆದದ್ದು; ಪ್ರಕಾಶಕರು: ಕನ್ನಡಿಗರ ಕಣಜ, ಬೆಂಗಳೂರು; ಕ್ರೌನ್ ಅ. ೩೨; ಬೆಲೆ, ೨ ಆಣೆ.

೬. **ಗೆಲುವು ಗುರಾಣಿ** (ಕಾವ್ಯ)—ಲೇಖಕರು: ಶ್ರೀ ಹೊಯಿಸಳ, ಹೈ ಸ್ಕೂಲು, ಚಿತ್ರದುರ್ಗ; ಕ್ರೌನ್ ಅ. ೧೮; ಬೆಲೆ, ?.

೭. **ಸದ್ಗುರುವಿನ ಅನುಗ್ರಹ**—ಬರೆದವರು: ಶ್ರೀ ವೈ. ಸುಬ್ಬರಾವ್; ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಬೆಂಗಳೂರು ಸಿಟಿ; ಕ್ರೌನ್ ಅ. ೩೦; ಬೆಲೆ, ೨ ಆಣೆ.

೮. **ಕಾಶ್ಮೀರ ಪ್ರವಾಸ** (ಪ್ರೇಮ ಪ್ರಕಟನಾಲಯದ ೧೨ನೆಯ ಪ್ರಕಟನೆ)—ಬರೆದವರು: ಶ್ರೀ ಗುರುನಾಥಜೋಶಿ; ಪ್ರಕಾಶಕರು: ಪ್ರೇಮ ಪ್ರಕಟನಾಲಯ, ಧಾರವಾಡ; ಸೋಲ್ ಏಜಂಟರು: ಸಾಹಿತ್ಯಭಂಡಾರ, ಹುಬ್ಬಳ್ಳಿ; ಕ್ರೌನ್ ಅ. ೭೮; ಬೆಲೆ, ೬ ಆಣೆ.

೯. **ವಯಸ್ಕರ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕ**—ಲೇಖಕರು: ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.; ಪ್ರಕಾಶಕರು: ಕರ್ಣಾಟಕ ಸಂಘ, ಶಿವಮೊಗ್ಗ; ಕ್ರೌನ್ ಅ. ೬೪; ಬೆಲೆ, ೦—೧—೬.

೧೦. **ಬೆಲ್ಲಾ ಹಿಟ್ಟು** (ಬಾಲಕಥಾವಲಿ ೧)—ಬರೆದವರು: "ವಸಂತ"; ಪ್ರಕಾಶಕರು: ಮನೋಹರ ಗ್ರಂಥ ಭಾಂಡಾರ, ಧಾರವಾಡ; ಕ್ರೌನ್ ಅ. ೪ + ೨೦; ಬೆಲೆ, ೨ ಆಣೆ.

೧೧. ಅಕ್ಕನ ಯೋಗಾಂಗತ್ರಿವಿಧಿ (ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಗ್ರಂಥ ಮಾಲಾ, ಪುಷ್ಪ ೪)—ಸಂಗ್ರಾಹಕರು: ಶ್ರೀ ಚಂದ್ರಶೇಖರ ದೇವರು, ಅಡ್ನೂರು; ಪ್ರಕಾಶಕರು: ಬಸವರಾಜ, ಬೆಂಗಳೂರು ; ಫುಲ್‌ಸ್ಕೇಪ್ ಅ. ೯+೧೪ ; ಬೆಲೆ, ೧ ಆಣೆ.

೧೨. ನಾಲ್ಮಣಿ ಕಡುಕು (ತಮಿಳಿನಿಂದ ಕನ್ನಡಿಸಿದ್ದು)—ಅನುವಾದಕರು: ಶ್ರೀ. ಎಲ್. ಗುಂಡಪ್ಪ, ಎಂ.ಎ., ಬೆಂಗಳೂರು; ಡೆಮಿ. ಅ. ೧೯; ಬೆಲೆ, ೩ ಆಣೆ.

೧೩. ನೋಪಾಸಾನ ಕತೆಗಳು—ಅನುವಾದಕರು: ಶ್ರೀ. ಗೋವಿಂದ ಚುಳಕಿ; ಪ್ರಕಾಶಕರು: ಮನೋಹರ ಗ್ರಂಥ ಭಾಂಡಾರ, ಧಾರವಾಡ; ಕ್ರೌನ್ ಅ. ೪೪; ಬೆಲೆ, ೧೦ ಆಣೆ.

೧೪. ವಿವಾಹ ವಾಣಿಜ್ಯ (ನಾಲ್ಕನೆಯ ಜನ್ಮೋತ್ಸವ ಸಂಚಿಕೆ)—ವ್ಯವಸ್ಥಾಪಕ, ಸಂಪಾದಕ: ಶ್ರೀ. ಜಿ. ವಿ. ದೊಡ್ಡವೀರಪ್ಪ; ನಗರ್ತರ ಪೇಟೆ, ಬೆಂಗಳೂರು ಸಿಟಿ.

೧೫. ಕನ್ನಡ ಕೋಗಿಲೆ (ಮಾಸಪತ್ರಿಕೆ ಹೂ. ೧, ಎಸಳು ೬, ೭)—ಸಂಪಾದಕರು: ಶ್ರೀಪಂಚಾಕ್ಷರಿ; ಗುರುಪಾದಮಠ, ಗದುಗು; ವಾರ್ಷಿಕ ಚಂದಾ ರೂ. ೧—೮—೦; ಬಿಡಿ ಎಸಳು, ೨ ಆಣೆ.

೧೬. ವಸಂತ (ಮಾಸಪತ್ರಿಕೆ, ವರುಷ ೧, ಸಂಚಿಕೆ ೧, ೬)—ಸಂಪಾದಕರು: ಶ್ರೀ. ಎನ್. ಕೆ. ಕುಲಕರ್ಣಿ, ಎಂ.ಎ.; ಪ್ರಕಾಶಕರು: ವಸಂತ ಆಫೀಸ, ಗದಗ; ವಾರ್ಷಿಕ ಚಂದ; ಸ್ಥಳದವರಿಗೆ ರೂ. ೧—೮—೦, ಪರಸ್ಥಳದವರಿಗೆ ರೂ. ೧—೧೨—೦.

೧೭. ವಿಭೂತಿ (ಸಾರಸ್ವತ ಧಾರ್ಮಿಕ ಸಚಿತ್ರ ಮಾಸಪತ್ರಿಕ, ಪುಂಡ್ರಮು ೧, ರೇಖ ೪)—ಸಂಪಾದಕಲು: ಪಂಡಿತ ಚಿದಿರೆಮಠಮು ವೀರಭದ್ರಶರ್ಮಗಾರು; ಸಿಕಿಂದ್ರಾಬಾದು; ಸಂವತ್ಸರ ಚಂದಾ ರೂ. ೨—೮—೦; ವಿಡಿ ಸಂಚಿಕ ೪ ಆಣೆ.

೧೮. ಶರಣಸಾಹಿತ್ಯ (ಬಸವಜಯಂತಿಯ ವಿಶೇಷ ಸಂಚಿಕೆ)—ಸಂಪಾದಕರು: ಕೀರ್ತನಕೇಸರಿ ಶ್ರೀಮಾನ್ ಬಿ. ಶಿವಮೂರ್ತಿಶಾಸ್ತ್ರಿ, ಬೆಂಗಳೂರು; ೧೯೩೯.

ಸಂಪಾದಕೀಯ

ಈ ವರ್ಷ ಮೇ ತಿಂಗಳು ೧೪ನೆಯ ತಾರೀಖಿನಿಂದ ಕನ್ನಡಸಾಹಿತ್ಯಪರಿಷತ್ತು ನಡಸಿದ ಆರನೆಯ ವಸಂತ ಸಾಹಿತ್ಯೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಆರನೆಯ ವಸಂತ ಸಾಹಿತ್ಯೋತ್ಸವ

ಇದುವರೆಗೆ ಬೆಂಗಳೂರು ನಗರ ಒಂದರಲ್ಲಿಯೇ ಜರುಗುತ್ತಿದ್ದ ಈ ಉತ್ಸವವು ಕನ್ನಡಿಗರ ಉತ್ಸಾಹಾಭಿಮಾನಗಳನ್ನು ಅನುಸರಿಸಿ ಕರ್ನಾಟಕದ ಇತರ ಪ್ರಾಂತಗಳಿಗೂ ಹಬ್ಬಿ, ಉಡುಪಿ ಬಾರಕೂರು ಗೋಕರ್ಣ ಕೊಳ್ಳೇಗಾಲ ಈ ಸ್ಥಳಗಳಲ್ಲಿಯೂ ನಡೆಯಿತು. ಇದಕ್ಕಿಂತ ಹೆಚ್ಚಾಗಿ ಪರಿಷತ್ತಿನ, ಕನ್ನಡದ, ಪ್ರೋತ್ಸಾಹಕ್ಕೆ ಕಾರಣವಾದ ಒಂದು ದೊಡ್ಡ ಸಂಗತಿಯೆಂದರೆ "ವಿದ್ಯಾಸಂಪನ್ನರೂ ದೇಶವತ್ಸಲರೂ ಸ್ವಭಾಷಾ ಪ್ರೇಮಿಗಳೂ ಸರ್ವಜನ ಪ್ರಿಯರೂ ಆಗಿ ಶೋಭಿಸುತ್ತಿರುವ ನಮ್ಮ ಶ್ರೀಮದ್ಯುವರಾಜ ಕುಮಾರರು ಕೃಪೆಯಿಟ್ಟು ಈ ಉತ್ಸವವನ್ನು ಆರಂಭ"ಗೊಳಿಸಿದ್ದು. ಇದರಿಂದ "ನಮ್ಮೆಲ್ಲರಿಗೂ ಒಂದು ಹಿರಿಯ ಹೆಮ್ಮೆ, ಒಂದು ಅಪಾರವಾದ ಆನಂದ, ಇದುವರೆಗೆ ಲಭ್ಯವಾಗದಿದ್ದ ಒಂದು ದೊಡ್ಡ ಗೌರವ ಕೈಗೂಡಿದಂತಾಗಿದೆ."

ಅಂದು ಪರಿಷತ್ತಿನ ಉಪಾಧ್ಯಕ್ಷರಾಗಿರುವ ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರು ತಮ್ಮ ಸ್ವಾಗತ ಭಾಷಣದಲ್ಲಿ, ಹೊಸ ಕಾರ್ಯಸಮಿತಿ ಮತ್ತು ಪ್ರಾಂತಸಮಿತಿಗಳ ಯೋಜನೆ, ಕರ್ನಾಟಕದ ನಾಲ್ಕು ದಿಕ್ಕುಗಳಲ್ಲಿಯೂ ಉತ್ಸವದ ಏರ್ಪಾಡು, ಗಮಕ ಶಿಕ್ಷಣ, ಕನ್ನಡನಾಡಿನ ಚರಿತ್ರೆ, ಅಚ್ಚುಕೂಟ, ವಯಸ್ಕರ ವಿದ್ಯಾಭ್ಯಾಸ, ಪ್ರಶಸ್ತಿ ಪರೀಕ್ಷೆಗಳು, ನಾಟಕ ಶಾಖೆ, ಸಾಹಿತಿಗಳ ಸಂಘದ ಸ್ಥಾಪನೆ ಮುಂತಾಗಿ ಪರಿಷತ್ತು ಹೊಸ ವರ್ಷದಲ್ಲಿ ಕೈಕೊಂಡ ಅಥವಾ ಕೈಕೊಳ್ಳಬೇಕೆಂದಿರುವ ಕಾರ್ಯಗಳನ್ನು ಅರಿಕೆಮಾಡಿ, ಉತ್ಸವವನ್ನು ಆರಂಭಗೊಳಿಸಬೇಕೆಂದೂ ಪುಸ್ತಕ ಪ್ರದರ್ಶನವನ್ನು ತೆರೆದುಕೊಡಬೇಕೆಂದೂ ಶ್ರೀಜಯಚಾಮರಾಜವೊಡೆಯರವರನ್ನು ಪ್ರಾರ್ಥಿಸಿದರು. ಅಂದು ಶ್ರೀಮದ್ಯುವರಾಜ ಕುಮಾರರವರು ತಮ್ಮ ದೇಶಪ್ರೇಮ ಭಾಷಾಪ್ರೇಮ ಪೂರಿತವಾದ ಆರಂಭ ಭಾಷಣದಲ್ಲಿ ಅಪ್ಪಣೆ ಕೊಡಿಸಿದ ವಾಕ್ಯಗಳು ಕನ್ನಡಿಗರೆಲ್ಲರಿಗೂ ಮನಸ್ಸಿನಲ್ಲಿರಬೇಕಾದ ಒಂದು ಘನ ಸಂದೇಶವಾಗಿವೆ—

"ಸಂಸ್ಕೃತಿಯ ದೃಷ್ಟಿಯಿಂದ ಕನ್ನಡಿಗರೆಲ್ಲ ಒಂದಾಗಬೇಕಾದುದು ಅತ್ಯಂತ ಆವಶ್ಯಕ, ನಾಡಿನ ಅಭ್ಯುದಯ ಸಾಧನೆಗೆ ತೀರ ಅಗತ್ಯ. ನಾವೆಲ್ಲ ಒಬ್ಬಳೇ ಕನ್ನಡ

ತಾಯಿಯ ಮಕ್ಕಳೆಂಬುದನ್ನು ಎಷ್ಟು ಬೇಗ ಮನಗಂಡು ಅದಕ್ಕನುಸಾರವಾಗಿ ವರ್ತಿಸಿದರೆ ಅಷ್ಟು ಅನುಕೂಲ.

ನಮ್ಮ ನಾಡು ಮುಂದಕ್ಕೆ ಬರಬೇಕಾದರೆ ತಾಯಿನುಡಿಯಾದ ಕನ್ನಡ ಭಾಷೆಯ ಬೆಳವಣಿಗೆ ಬಹು ಮುಖ್ಯವಾದ ಅಂಶವಾಗಿದೆ. ನಮ್ಮ ಜನರಲ್ಲಿ ತಿಳಿವಳಿಕೆಯು ಹೆಚ್ಚಿ ನಮ್ಮ ಸಾಹಿತ್ಯವು ಎಷ್ಟೆಷ್ಟು ಹೆಚ್ಚಾಗಿ ಅಭಿವೃದ್ಧಿ ಹೊಂದಿದರೆ ಅಷ್ಟಷ್ಟು ಬೇಗ ನಮ್ಮ ಸಂಸ್ಕೃತಿಯೂ ವೃದ್ಧಿಹೊಂದುತ್ತವೆ. . . .''

ಕನ್ನಡಸಾಹಿತ್ಯವೂ ಸಾಹಿತ್ಯಪರಿಷತ್ತೂ ಮೈಸೂರು ರಾಜರುಗಳ ಕೃಪಾಶ್ರಯ ದಲ್ಲಿಯೇ ಬೆಳೆದು ಬರುತ್ತಿವೆ. ಶ್ರೀಮನ್ ಮಹಾರಾಜರವರು ಪರಿಷತ್ತಿನ ಮಹಾ ಪೋಷಕರಾಗಿಯೂ ಶ್ರೀಮದ್ಯುವರಾಜರವರು ಅದರ ಅಧ್ಯಕ್ಷರಾಗಿಯೂ ಅದನ್ನು ಪೋಷಿಸಿಕೊಂಡು ಬರುತ್ತಿದ್ದಾರೆ. ಆದರೂ ಶ್ರೀಮದ್ಯುವರಾಜಕುಮಾರರವರು ಈ ಸಾರಿ ಪರಿಷನ್ಮಂದಿರಕ್ಕೆ ದಯಮಾಡಿ ಅಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಪರಾಂಬರಿಸಿ ಕನ್ನಡದ ಮುನ್ನಡೆಗೆ ಪ್ರೋತ್ಸಾಹ ಭರವಸೆಗಳನ್ನು ದಯಪಾಲಿಸಿದ್ದು ಪರಿಷತ್ತಿನ ಇತಿಹಾಸದಲ್ಲಿ ಒಂದು ಚರಿತ್ರಾರ್ಹವಾದ ಸಂಗತಿಯೆಂದು ನಾವು ಭಾವಿಸುತ್ತೇವೆ. ಇದಕ್ಕಾಗಿ ಕನ್ನಡಿಗರ ಪರವಾಗಿ ಶ್ರೀಮದ್ಯುವರಾಜಕುಮಾರರಿಗೆ ರಾಜಭಕ್ತಿಪುರಸ್ಸರವಾದ ನಮ್ಮ ಕೃತಜ್ಞತೆಯನ್ನೂ ಪರಿಷತ್ತಿಗೆ ನಮ್ಮ ಅಭಿನಂದನ ಗಳನ್ನೂ ಸಮರ್ಪಿಸುತ್ತೇವೆ.

ಅಂದು ಆರಂಭೋತ್ಸವ ಸಂದರ್ಭದಲ್ಲಿ ಶ್ರೀಜಯಚಾಮರಾಜವೊಡೆಯರವರು, ಭಾಸ್ಕರರಾಯರ ಜ್ಞಾಪಕ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನವನ್ನು ಪಡೆದ ಶ್ರೀಮಾನ್ ಟಿ. ಎಸ್. ಶಾಮರಾಯರವರಿಗೆ ಬೆಳ್ಳಿಯ ಬಟ್ಟಲ ರೂಪವಾದ ಬಹು ಮಾನವನ್ನು ದಯಪಾಲಿಸಿದರು. ಶ್ರೀಮಾನ್ ಶಾಮರಾಯರು ದಿವಂಗತ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರ ತಮ್ಮಂದಿರು ; ಈ ವರ್ಷ ಮಹಾರಾಜಾ ಕಾಲೇಜಿನ ಮೂರನೆಯ ವರ್ಷದ ಕನ್ನಡ ಆನರ್ಸ್ ತರಗತಿಯಲ್ಲಿ ವಿದ್ಯಾರ್ಥಿಗಳು ; ಅವರಿಗೆ ನಮ್ಮ ಆನಂದಪೂರ್ವಕವಾದ ಅಭಿನಂದನಗಳು.

***

ನವೀಕರಣೋಪನ್ಯಾಸ ಮಾಲೆ—ಕನ್ನಡ

ಇದೇ ಏಪ್ರಿಲ್ ಮೇ ತಿಂಗಳುಗಳಲ್ಲಿ ನಡೆದ ಮತ್ತೊಂದು ಸಾಹಿತ್ಯೋತ್ಸವ ವೆಂದರೆ, ವಿಶ್ವವಿದ್ಯಾನಿಲಯ ಮತ್ತು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಹೈ ಸ್ಕೂಲಿನ ಅಧ್ಯಾಪಕ ವರ್ಗದವರಿಗಾಗಿ ಏರ್ಪಡಿಸಿದ್ದ "ನವೀಕರಣೋಪನ್ಯಾಸ ಮಾಲೆ". ಇಂಗ್ಲಿಷ್ ಚರಿತ್ರೆ ಕನ್ನಡ ಉರ್ದುಗಳ ವಿಷಯವಾಗಿ ಮೈಸೂರಿನ ಮಹಾರಾಜಾ

ಕಾಲೇಜಿನಲ್ಲಿಯೂ, ಗಣಿತ ಭೌತಶಾಸ್ತ್ರ ರಸಾಯನಶಾಸ್ತ್ರ ಜೀವಶಾಸ್ತ್ರಗಳ ವಿಷಯವಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೂ ಸುಮಾರು ಒಂದು ತಿಂಗಳ ಕಾಲ ಉಪನ್ಯಾಸಗಳು ನಡೆದುವು. ಈಗಿನ ಕಾಲದಲ್ಲಿ ಶಾಸ್ತ್ರ ವಿಷಯಗಳೇ ಅಲ್ಲದೆ ಭಾಷಾಸಾಹಿತ್ಯ ವಿಚಾರಗಳೂ ದಿನದಿನಕ್ಕೆ ಬೆಳೆಯುತ್ತಿವೆ. ಆಧುನಿಕ ಪ್ರಪಂಚದಲ್ಲಿ ನಾಗರಿಕವೆನಿಸಿಕೊಂಡ ದೇಶಗಳೆಲ್ಲ ಅವುಗಳಲ್ಲಿ ಆಸಕ್ತಿ ವಹಿಸಿ ಅವುಗಳನ್ನು ವ್ಯಾಸಂಗ ಮಾಡಿ ಮುಂದುವರಿಸುತ್ತಿವೆ. ಆದರೆ ಅವುಗಳನ್ನು ಆಮೂಲಾಗ್ರವಾಗಿ ಎಲ್ಲರೂ ಎಲ್ಲ ಸ್ಥಳಗಳಲ್ಲಿಯೂ ಅರಿಯಲು ಅವಕಾಶ ದೊರೆಯುವುದು ಸಾಧ್ಯವಲ್ಲ. ಆದ್ದರಿಂದ ಈಗ ಎಲ್ಲಾ ಮುಂದುವರಿದ ದೇಶಗಳಲ್ಲಿಯೂ, ಮುಖ್ಯವಾಗಿ ಔದ್ಯೋಗಿಕ ವಿಚಾರಗಳಲ್ಲಿ, ಇಂಥ ಶಿಕ್ಷಣೋಪನ್ಯಾಸಗಳು ನಡೆಯುತ್ತವೆ. ಕನ್ನಡ ಭಾಷಾಸಾಹಿತ್ಯಗಳು ಆಧುನಿಕ ಪ್ರಪಂಚದ ನವೀನ ವಾತಾವರಣದಲ್ಲಿ ಬೆಳೆಯುತ್ತಿರುವುದರಿಂದ ಈ ವಿಧವಾದ ಉಪನ್ಯಾಸಗಳ ಆವಶ್ಯಕತೆಯು ಕನ್ನಡಕ್ಕೂ ಇದೆಯೆಂದು ಸರ್ಕಾರದವರು ಮನಗಂಡು ಹೈಸ್ಕೂಲಿನ ಸುಮಾರು ಇಪ್ಪತ್ತೈದು ಕನ್ನಡದ ಉಪಾಧ್ಯಾಯರನ್ನು ಈ ಉಪನ್ಯಾಸಗಳಿಗೆ ಕಳುಹಿಸಿದ್ದರು. ವಿಶ್ವವಿದ್ಯಾನಿಲಯದ ಕನ್ನಡದ ಅಧ್ಯಾಪಕರಾದ ಶ್ರೀಮಾನ್‌ಗಳಾದ ಬಿ. ಎಂ. ಶ್ರೀಕಂಠಯ್ಯನವರು, ಎ. ಆರ್. ಕೃಷ್ಣಶಾಸ್ತ್ರಿಗಳು, ಮತ್ತು ಟಿ. ಎಸ್. ಶ್ರೀಕಂಠಯ್ಯನವರು ಈ ಉಪನ್ಯಾಸಗಳನ್ನು ಕೊಟ್ಟರು. ಇವುಗಳ ವಿಷಯ ವಿವರವನ್ನು ಮುಂದೆ ಕಾಣಬಹುದು. ಈ ಉಪನ್ಯಾಸಗಳ ಜೊತೆಗೆ ಸಂಜೆಯಲ್ಲಿ ಕನ್ನಡ ದೇಶದ ಚರಿತ್ರೆ, ಸಂಸ್ಕೃತಿ, ಕಲೆ, ಶಿಲ್ಪ, ಲಿಪಿ ಮುಂತಾದುವುಗಳ ಮೇಲಣ ಉಪನ್ಯಾಸಗಳನ್ನೂ, 'ಭಾರತ' 'ತಿರುಪಾಣಿ' ಮುಂತಾದ ಹಿಂದಿನ ಮತ್ತು ಇಂದಿನ ಕೆಲವು ಕಾವ್ಯಗಳ ಪಠನವನ್ನೂ ಏರ್ಪಡಿಸಿತ್ತು. ಒಟ್ಟಿನ ಮೇಲೆ, ತಮ್ಮ ದೃಷ್ಟಿಗೆ ಬಾರದಿದ್ದ ಅನೇಕ ಹೊಸ ವಿಷಯಗಳು ತಿಳಿದುವೆಂದೂ ಅವುಗಳಿಂದ ಮುಂದಿನ ಕನ್ನಡ ಸಾಹಿತ್ಯದ ಬೆಳೆವಳಿಗೆಯಲ್ಲಿ ಉಪಕಾರವಾಗುವುದೆಂದೂ ಉಪಾಧ್ಯಾಯರು ಅಭಿಪ್ರಾಯಪಟ್ಟರು. ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಪಂಡಿತ ಮಂಡಲಿ ಬಂದು ಒಂದು ಕಡೆ ಸೇರಿ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರೊಡನೆ ಅಭಿಪ್ರಾಯಗಳನ್ನು ವಿನಿಮಯಮಾಡಿಕೊಂಡದ್ದರಿಂದ, ಶಂಕಾಸ್ಪದವಾಗಿಯೂ ಚರ್ಚಾಸ್ಪದವಾಗಿಯೂ ಇದ್ದ ಅನೇಕ ಸಂಗತಿಗಳು ಚರ್ವಿತವಾಗಿ, ಸ್ನೇಹ ಸೌಹಾರ್ದಗಳು ಬೆಳೆದು, ಶ್ರೇಯಸ್ಸಿಗೆ ಸಾಧಕವಾಯಿತೆಂದು ನಾವು ಭಾವಿಸುತ್ತೇವೆ. ಇದರ ಚಿಹ್ನೆಗಳು ಈಗಾಗಲೇ ಕಾಣುತ್ತಿವೆ.

ಉಪನ್ಯಾಸ ವಿಷಯ ಕ್ರಮ

I. **ಉಪಕ್ರಮ ಭಾಷಣ**—ಆಧುನಿಕ ದೃಷ್ಟಿ.

II. **ಪ್ರಾಚ್ಯವಿದ್ಯಾಭ್ಯಾಸಂಗದ ಚರಿತ್ರೆ**—ಸಂಸ್ಕೃತ ಭಾಷೆ ದ್ರಾವಿಡ ಭಾಷೆಗಳನ್ನು ಪಾಶ್ಚಾತ್ಯರು ಕಂಡುಕೊಂಡದ್ದು; ಭಾರತೀಯ ವಿಚಾರಶಾಸ್ತ್ರ; ಯೂರೋಪಿನಲ್ಲೂ ಇಂಡಿಯಾದಲ್ಲೂ ಜರುಗುತ್ತಿರುವ ಪ್ರಾಚ್ಯವಿದ್ವತ್ ಸಮ್ಮೇಳನಗಳು; ಮುಖ್ಯವಾದ ಸಂಶೋಧನ ಪತ್ರಿಕೆಗಳು, ದ್ರಾವಿಡ ಭಾಷೆಗಳ ವ್ಯಾಸಂಗಕ್ಕೆ ಇವುಗಳಿಂದ ಆಗಿರುವ ಪ್ರಯೋಜನ.

III. **ಪುರಾತತ್ವ ಶಾಸ್ತ್ರದ ಬೆಳೆವಳಿಗೆ**—ಇಂಡಿಯಾ ದೇಶದಲ್ಲಿ, ಅದರಲ್ಲೂ ಕನ್ನಡನಾಡಿನಲ್ಲಿ, ಕನ್ನಡ ಭಾಷೆಯ ಮತ್ತು ಸಾಹಿತ್ಯದ ಮೇಲೆ ಇದು ಬೀರುವ ಬೆಳಕು—ಶ್ರವಣಬೆಳ್ಗೊಳದ ಶಾಸನಗಳು, ಅಶೋಕನ ಶಾಸನಗಳು (ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ದೊರೆತಿರತಕ್ಕವು)—ಇವುಗಳ ಪ್ರಾಮುಖ್ಯತೆ—ರೈಸ್ ಮತ್ತು ನರಸಿಂಹಾಚಾರ್ಯರು, ಇವರ ಕಾರ್ಯಗಳು: 'ಎಪಿಗ್ರಾಫಿಯ ಕರ್ನಾಟಕ'—'ಬಿಬ್ಲೋಥಿಕ ಕರ್ನಾಟಕ'—'ಕವಿಚರಿತೆ'—'ಶಾಸನ ಪದ್ಯ ಮಂಜರಿ'.

ಪರಭಣಿ, ಅರ್ಜುನವಾಡ, ಹಲ್ಮಿಡಿ: ಇಲ್ಲಿಯ ಶಾಸನಗಳು.

ಸಿಂಧೂ ತೀರದ ಸಂಸ್ಕೃತಿ—ಆರ್ಯ ಮತ್ತು ದ್ರಾವಿಡ ವಾದಗಳು.

IV. **ಕನ್ನಡ ಭಾಷೆ**—ನಾಡು ಮತ್ತು ನುಡಿ—ಭಾರತೀಯ ಭಾಷೆಗಳಲ್ಲಿ ಇದರ ಸ್ಥಾನ—ಯಾವ ವರ್ಗಕ್ಕೆ ಸೇರಿದ್ದು—ಪ್ರಾಂತೀಯ ವೈಲಕ್ಷಣ್ಯಗಳು—ಭಾಷಾಚರಿತ್ರೆಗೆ ಸಂಬಂಧಿಸಿದ ಕೆಲವು ಮುಖ್ಯ ವಿಷಯಗಳು.

V. **ಕನ್ನಡ ಸಾಹಿತ್ಯ**—(1) ಹಳಗನ್ನಡ ಸಾಹಿತ್ಯ: ಇದರ ಮೇಲೆ ಸಂಸ್ಕೃತದ ಪ್ರಭಾವ.

(2) ಹೊಸಗನ್ನಡ ಸಾಹಿತ್ಯ: ಇದರ ಮೇಲೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ—ಸಾಹಿತ್ಯದ ಹೊಸ ಹುಟ್ಟು (ಬಂಗಾಳಿ, ಮರಾಠಿ, ತೆಲುಗು, ತಮಿಳುಗಳೊಡನೆ ಹೋಲಿಕೆ)—ಹೊಸ ಹೊಸ ಸಾಹಿತ್ಯ ರೂಪಗಳು.

VI. **ಪದ್ಯಕಾವ್ಯದ ಪಾಠ**—(1) ಪ್ರಾಚೀನ ಕಾವ್ಯಗಳು—ಸಂಸ್ಕೃತದ ಪ್ರಭಾವ.

(2) ಆಧುನಿಕ ಕಾವ್ಯಗಳು—ಹೊಸ ಭಾವಗಳು, ಹೊಸ ಆದರ್ಶಗಳು—ಅಂತಃಸ್ಫೂರ್ತಿಯಲ್ಲಿ ಬದಲಾವಣೆ—ಛಂದಸ್ಸಿನಲ್ಲಿ ಹೊಸ ಪ್ರಯೋಗಗಳು—ಕೆಲವು ಕೃತಿಗಳಿಂದ ಉದಾಹರಣೆ.

VII. **ನಾಟಕದ ಪಾಠ**—(1) ಪ್ರಾಚೀನ ನಾಟಕಗಳು.

(2) ಆಧುನಿಕ ನಾಟಕಗಳು—ಯೂರೋಪಿನ ನಾಟಕವಾಙ್ಮಯದ ಸಂಕ್ಷಿಪ್ತ ಚರಿತ್ರೆ—ಕನ್ನಡಕ್ಕೆ ಆಗಿರುವ ಕೆಲವು ಅನುವಾದಗಳ ಪರಿಶೀಲನೆ.

VIII. **ಗದ್ಯದ ಪಾಠ**—(1) ಆಧುನಿಕ ಗದ್ಯದ ವಿಕಾಸ—ಬೇರೆ ಬೇರೆ ಬಗೆಗಳು.

(2) ಕಾದಂಬರಿ: ಇದರ ಚರಿತ್ರೆ—ಬಂಕಿಮ್, ಆಪಟೆ, ಪುಟ್ಟಣ್ಣ, ಪುಟ್ಟಪ್ಪ.

(3) ಜೀವನ ಚರಿತ್ರೆ ಮತ್ತು ಆತ್ಮಕಥೆ.

(4) ಚರಿತ್ರೆ: ಇದಕ್ಕೂ ಐತಿಹಾಸಿಕ ಕಾದಂಬರಿಗೂ ಐತಿಹಾಸಿಕ ಚಂಪೂ ಕಾವ್ಯಕ್ಕೂ ಇರುವ ಭೇದ.

(5) ಸಣ್ಣಕಥೆ: ಠಾಕೂರರು, 'ಶ್ರೀನಿವಾಸ', ಟಾಲ್‌ಸ್ಟಾಯ್—ಸಣ್ಣ ಕಥೆಗೇ ಮೀಸಲಾಗಿರುವ ಪತ್ರಿಕೆಗಳು—'ನಿಜವಾದ ಕಥೆಗಳು'.

(6) ಗದ್ಯ ಪ್ರಬಂಧಗಳು—ಗದ್ಯ ಚಿತ್ರಗಳು.

(7) ವಿಮರ್ಶೆ: ವಿಮರ್ಶೆಯ ತತ್ವಗಳು (ಪಾಶ್ಚಾತ್ಯ ಮತ್ತು ಪ್ರಾಚ್ಯ)—ಇಂಗ್ಲಿಷಿನ 'ಜೀವನ ಮತ್ತು ಕೃತಿ' ಗ್ರಂಥಮಾಲೆ.

(8) ವೃತ್ತಪತ್ರಿಕೆಗಳು.

IX. **ವಾಕ್ಯರಚನೆಯ ಪಾಠ**—(1) ಸಂಗ್ರಹ ಮತ್ತು ವಿಸ್ತರ.

(2) ಶೈಲಿ—ಶೈಲಿಯ ವಿಕಾಸ—ಶೈಲಿಯ ಗುಣಗಳು ಮತ್ತು ಬಗೆಗಳು—ಗ್ರಾಂಥಿಕ ಶೈಲಿ, ಮನೆ ಮಾತಿನ ಶೈಲಿ.

(3) ವ್ಯಾಕರಣ ಮತ್ತು ಭಾಷಾರೂಢಿ—'ಶಬ್ದ ಶುದ್ಧಿ'.

(4) ಶಬ್ದಕೋಶ—ಅನ್ಯ ದೇಶ್ಯಗಳು, ನೂತನ ಸೃಷ್ಟಿ.

(5) ಸಾಮಾನ್ಯವಾಗಿ ಮಾಡುವ ಕಾಗುಣಿತದ ತಪ್ಪುಗಳು—ಲಿಪಿ ಸಂಸ್ಕರಣ.

***

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಗ್ರಂಥಮಾಲೆ

ಈಗ ಕೆಲವು ವರ್ಷಗಳಿಂದ, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ಕರ್ಣಾಟಕ ಸಂಘಗಳ ಆಶ್ರಯದಲ್ಲಿ "ಉಪನ್ಯಾಸ ಸಪ್ತಾಹ"ಗಳನ್ನು ಏರ್ಪಡಿಸಿ ಶಾಸ್ತ್ರ, ಸಾಹಿತ್ಯ, ವಿಜ್ಞಾನ, ದರ್ಶನ ಮುಂತಾದ ಹಲವು ವಿಚಾರಗಳ ಮೇಲೆ ಕನ್ನಡದಲ್ಲಿ ಭಾಷಣಮಾಡುತ್ತ ಜನ ಸಾಮಾನ್ಯಕ್ಕೆ ತಿಳಿವಳಿಕೆ ಕೊಡುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ತಿಳಿವಳಿಕೆ ಜನರಲ್ಲಿ ಊರಿ ನಿಲ್ಲುವುದಕ್ಕೂ ಹೆಚ್ಚು ಹೆಚ್ಚಾಗಿ ಹರಡುವುದಕ್ಕೂ ಸಹಾಯವಾಗುವಂತೆ ಉಪನ್ಯಾಸಗಳನ್ನು ಅಂದವಾಗಿಯೂ ಅಗ್ಗವಾಗಿಯೂ ಶುದ್ಧವಾಗಿಯೂ ಅಚ್ಚುಹಾಕಿಸಿಕೊಡಬೇಕೆಂದು ಯೋಚಿಸಿ ನಮ್ಮ ವೈಸ್ ಛಾನ್ಸೆಲರವರು ಬೇಕಾದ ಸಲಹೆ ಸಹಾಯಗಳನ್ನು ನೀಡಿ ಒಂದು ಪ್ರಚಾರೋಪನ್ಯಾಸ ಗ್ರಂಥಮಾಲೆಯನ್ನು ಆರಂಭಮಾಡಿಸಿದ್ದಾರೆ. ಇದರಲ್ಲಿ, ಈ ವರ್ಷ ಅಧ್ಯಾಪಕವರ್ಗದವರು ಕೊಟ್ಟ ಉಪನ್ಯಾಸಗಳು ರೂಪುಗೊಂಡು ಈಗ ಮುಂದೆ ಹೇಳುವಂತೆ ಐದು ಪುಸ್ತಕಗಳು ಬಂದಿವೆ—

೧. **ಖಗೋಳಶಾಸ್ತ್ರ ಪರಿಚಯ**—ಡಾ|| ಸಿ. ಎನ್. ಶ್ರೀನಿವಾಸಯ್ಯಂಗಾರ್, ಡಿ.ಎಸ್‌ಸಿ. ಅವರಿಂದ.

೨. **ಸಮಾಜದ ರೋಗರುಜಿನಗಳು.**—ಮ|| ಜಿ. ಹನುಮಂತರಾವ್, ಎಂ.ಎ. ಅವರಿಂದ.

೩. **ತೆರಿಗೆ**—ಮ|| ಜಿ. ಆರ್. ಸುಬ್ಬರಾವ್, ಎಂ.ಎ. ಅವರಿಂದ.

೪. **ನವರತ್ನಗಳು**—ಮ|| ಎಚ್. ಸುಬ್ಬಾಜೋಯಿಸ್, ಎಂ.ಎ. ಅವರಿಂದ.

೫. **ನಮ್ಮ ಹಳ್ಳಿಗಳು**—ಮ|| ಜಿ. ಎನ್. ಕೃಷ್ಣಮೂರ್ತಿ, ಎಂ.ಎ. ಅವರಿಂದ.

ಇವು ಜೇಬಿನಲ್ಲಿ ಅಡಗಬಹುದಾದ ಸಣ್ಣ ಆಕಾರದಲ್ಲಿ ಮುದ್ದಾಗಿ ಅಚ್ಚಾಗಿವೆ. ೪೮ ಪುಟದಿಂದ ೧೦೦ ಪುಟಗಳ ವರೆಗೆ ಇದ್ದರೂ ಪ್ರತಿಯೊಂದು ಪುಸ್ತಕಕ್ಕೂ ಎರಡೇ ಆಣೆ ಬೆಲೆ ಇಟ್ಟಿದೆ. ಅದನ್ನು ಆಯಾ ಶಾಸ್ತ್ರದಲ್ಲಿ ನುರಿತ ವಿದ್ವಾಂಸರು ಸಪ್ರಮಾಣವಾಗಿ, ರಸವತ್ತಾಗಿ, ಸುಲಭವಾಗಿ ಬರೆದಿರುತ್ತಾರೆ. ಈ ಕಾರ್ಯಕ್ಕಾಗಿ ದಕ್ಷವಾದ ಒಂದು ಸಂಪಾದಕ ಮಂಡಲಿ ಏರ್ಪಟ್ಟಿದೆ. ಈ ಗ್ರಂಥಮಾಲೆಯನ್ನು ಹರಸಿ ಅದರ ಸ್ವರೂಪ, ಉದ್ದೇಶ ಮುಂತಾದವುಗಳನ್ನು ವಿವರಿಸಿ ನಮ್ಮ ವೈಸ್ ಛಾನ್ಸೆಲರವರು ಈ ರೀತಿ ಅಪ್ಪಣೆ ಕೊಡಿಸಿರುತ್ತಾರೆ—

> "ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರಾದ ಶ್ರೀಮನ್ಮಹಾರಾಜರವರು ಈ ವಿಶ್ವವಿದ್ಯಾನಿಲಯದ ಮೊದಲನೆಯ ಸೆನೆಟ್ ಸಭೆಯ ಆರಂಭೋತ್ಸವವನ್ನು ನೆರವೇರಿಸುವಾಗ ಮಾಡಿದ ಭಾಷಣದಲ್ಲಿಯೂ ಇದರ ಮೊದಲನೆಯ ಪಟ್ಟಪ್ರದಾನೋತ್ಸವದ

ಕಾಲದಲ್ಲಿ ಮಾಡಿದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಇತರ ಕರ್ತವ್ಯಗಳ ಜೊತೆಗೆ ವಿಶೇಷವಾಗಿ ಈ ಎರಡರ ನಿರ್ವಾಹವನ್ನು ಅದಕ್ಕೆ ವಹಿಸಿಕೊಟ್ಟರು : (೧) ಲಲಿತವಾದ ಕನ್ನಡದಲ್ಲಿ ಗ್ರಂಥಗಳನ್ನು ಬರಸಿ ಪ್ರಕಟಿಸುವುದು, ಮತ್ತು ಕನ್ನಡ ಸಾಹಿತ್ಯಕ್ಕೆ ಉತ್ತೇಜನ ಕೊಡುವುದು, (೨) ಮಹಾಸ್ವಾಮಿಯವರ ಪ್ರಜೆಗಳಲ್ಲಿ, ವಿಶ್ವವಿದ್ಯಾನಿಲಯದ ನಿಯತಪರೀಕ್ಷೆಗಳಿಗಾಗಿ ಏರ್ಪಟ್ಟ ಪಾಠಪ್ರವಚನಗಳಲ್ಲಿ ಭಾಗಿಗಳಾಗಲು ಹಲವಾರು ಕಾರಣಗಳಿಂದ ಅನುಕೂಲ ಹೊಂದದವರಿಗೆ ಜ್ಞಾನಪ್ರಚಾರಮಾಡುವುದು, ಮತ್ತು ಸಂಸ್ಥಾನದ ಎರಡು ಮುಖ್ಯ ನಗರಗಳ ವಿದ್ಯಾಭ್ಯಾಸ ಸೌಕರ್ಯವನ್ನು ಪಡೆಯಲಾರದ ಗ್ರಾಮಾಂತರಗಳವರಿಗೆ ಮೇಲುಮಟ್ಟದ ಸಂಸ್ಕೃತಿಯ ಪರಿಚಯವನ್ನು ಒದಗಿಸಿಕೊಡುವುದು.

ನಮ್ಮ ವಿಶ್ವವಿದ್ಯಾನಿಲಯವು ಉದ್ದಕ್ಕೂ ಈ ಎರಡು ಘನೋದ್ದೇಶಗಳನ್ನೂ ಸಂತತವಾಗಿ ತನ್ನ ದೃಷ್ಟಿಯಲ್ಲಿಟ್ಟುಕೊಂಡೇ ಕೆಲಸಮಾಡುತ್ತಿದೆ. ವಿಶ್ವವಿದ್ಯಾನಿಲಯದ ಗ್ರಂಥ ಪ್ರಕಟನ ಸಮಿತಿಯವರು ಕನ್ನಡದ ಪ್ರಾಚೀನ ಮಹಾಕಾವ್ಯ ಸಂಗ್ರಹಗಳನ್ನು ಸಂಶೋಧಿಸಿಯೂ, ಸಾಹಿತ್ಯ ವಿಜ್ಞಾನಗಳಿಗೆ ಸಂಬಂಧಪಟ್ಟ ಸ್ವತಂತ್ರ ಗ್ರಂಥಗಳನ್ನು ಬರಸಿಯೂ ಪ್ರಕಾಶಗೊಳಿಸಿದ್ದಾರೆ. ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಉಪನ್ಯಾಸಗಳನ್ನು ಪ್ರಧಾನವಾಗಿ ಕನ್ನಡದ ಮೂಲಕ ಕೊಡಿಸುವ ಏರ್ಪಾಡುಮಾಡಿದ್ದಾರೆ.

ಕೆಲವು ವರ್ಷಗಳಿಂದ ಈಚೆಗೆ ಇನ್ನೊಂದು ಮುಖ್ಯವಾದ ರೀತಿಯಲ್ಲಿ ಕಾರ್ಯಕ್ರಮವು ಬೆಳೆದಿದೆ. ವಿವಿಧ ವಿಷಯಗಳ ಮೇಲೆ ಒಂದೊಂದೇ ಉಪನ್ಯಾಸಕೊಟ್ಟು ಮುಗಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರ ಸಹಕಾರದಿಂದ, 'ಉಪನ್ಯಾಸ ಸಪ್ತಾಹ'ವೆಂದು ಈಗ ಕರೆಯುತ್ತಿರುವ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲಾಗಿದೆ. ಒಂದೊಂದು ಕೇಂದ್ರದಲ್ಲೂ ಐದಾರು ದಿನಗಳ ತನಕ ಭಾಷಣ ಕಾವ್ಯವಾಚನ ಗಾಯನಗಳನ್ನು ನಡಸಲಾಗಿದೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಾಮಾಜಿಕ ಮೊದಲಾದ ಎಲ್ಲ ವಿಷಯಗಳನ್ನೂ ಒಳಕೊಳ್ಳುತ್ತವೆ. ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಈ ಮೊದಲಾದ ಕಡೆಗಳಲ್ಲೆಲ್ಲಾ ಈ ಉಪನ್ಯಾಸ ಸಪ್ತಾಹಗಳು ನಡೆದು ಜನರ ಮೆಚ್ಚಿಕೆಯನ್ನು ವಿಶೇಷವಾಗಿ ಪಡೆದಿವೆ.

ನಮ್ಮ ಕಾರ್ಯಕ್ರಮದಲ್ಲಿ ಇನ್ನೂ ಈಚೆಯ ವಿಸ್ತರಣವೇನೆಂದರೆ—ಕೆಲವು ಕೇಂದ್ರಗಳನ್ನು ಆರಿಸಿಕೊಂಡು ಆ ಸ್ಥಳಗಳಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಬೇರೆ ಬೇರೆ ವಿಷಯಗಳನ್ನು ಕುರಿತು ಒಂದೊಂದರ ಮೇಲೂ ಉಪನ್ಯಾಸ ಮಾಲೆಯನ್ನು ಕೊಡಿಸುವುದು. ಹೀಗೆ ಮಾಡುವುದರಿಂದ, ಒಂದು ಸ್ಥಳದ ಜನಗಳು ತಕ್ಕಮಟ್ಟಿಗೆ ದೀರ್ಘವಾದ ಕಾಲಾವಧಿಯಲ್ಲಿ ಉದ್ದಕ್ಕೂ ಆ ವಿಷಯಗಳ ಮೇಲೆ ಹಲವು ಪ್ರವಚನಗಳನ್ನು ಕೇಳಲು ಸಾಧ್ಯವಾಗಿದೆ. ಉಪನ್ಯಾಸಗಳನ್ನು ಯಾವ ಸ್ಥಳದ ಉಪಯೋಗಕ್ಕಾಗಿ ಮೊದಲು ಏರ್ಪಡಿಸಿತ್ತೋ ಅಲ್ಲಿಯವರು ಮಾತ್ರವೇ ಅಲ್ಲದೆ ಹೊರಗಿನವರು ಕೂಡ ಅವುಗಳ ಲಾಭವನ್ನು ಪಡೆಯಲೆಂದು ಈ ಉಪನ್ಯಾಸಗಳನ್ನು ಜೊತೆಗೂಡಿಸಿ ಚಿಕ್ಕ ಕೈಪಿಡಿಗಳ ರೂಪದಲ್ಲಿ ಈಗ ಪ್ರಕಟಿಸಲಾಗಿದೆ.

> ಈ ಉಪನ್ಯಾಸಗಳನ್ನು ಕೊಟ್ಟು ಈ ಕೈಪಿಡಿಗಳನ್ನು ರಚಿಸಿದವರ ಹಾರೈಕೆ ಹೆಬ್ಬಯಕೆಗಳು ಇಷ್ಟೇ: ದಯಾಳುಗಳಾದ ಮಹಾಸ್ವಾಮಿಯವರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟ ಮುಖ್ಯ ಕಾರ್ಯಗಳೆರಡೂ, ಎಂದರೆ ಲಲಿತವೂ ಸರಳವೂ ಆದ ಕನ್ನಡದಲ್ಲಿ ಪುಸ್ತಕಗಳನ್ನು ಬರಸಿ ಪ್ರಕಟಿಸುವುದು ಮತ್ತು ಜನಸಾಮಾನ್ಯದಲ್ಲಿ ಮೇಲುಮಟ್ಟದ ಸಂಸ್ಕೃತಿಯನ್ನು ಹರಡುವುದು—ಈ ಎರಡೂ ಈ ಗ್ರಂಥಗಳ ಮೂಲಕ ಜೊತೆಜೊತೆಗೇ ಕೈಗೂಡಲಿ.’’

ದೇಶಭಾಷೆಯಲ್ಲಿ ಪ್ರವಚನಗಳು, ಪ್ರಕಟನೆಗಳು, ಉಪನ್ಯಾಸಗಳು—ಮುಂತಾದವುಗಳಲ್ಲಿ ಮೇಲ್ಪಂಕ್ತಿಯಾಗಿರುವಂತೆ ನಮ್ಮ ವಿಶ್ವವಿದ್ಯಾನಿಲಯವು ಈ ಹೊಸ ಉದ್ಯಮದಲ್ಲಿಯೂ ಮೇಲ್ಪಂಕ್ತಿಯಾಗಲೆಂದೂ ಪ್ರಚಾರೋಪನ್ಯಾಸ ಗ್ರಂಥಮಾಲೆ ದಿನದಿನಕ್ಕೆ ಬೆಳೆದು ಜನರ ಪ್ರೀತಿಗೂ ಮೆಚ್ಚಿಗೆಗೂ ಪಾತ್ರವಾಗಿ ಜ್ಞಾನಪ್ರಸಾರದಲ್ಲಿ ಸಹಾಯವಾಗಲೆಂದೂ ಹಾರೈಸುತ್ತೇವೆ.

* * *

ದಿವಂಗತ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು

ಈ ಸಂಚಿಕೆಗೆ ‘ಪ್ರಬುದ್ಧ ಕರ್ಣಾಟಕ’ದ ಇಪ್ಪತ್ತನೆಯ ಸಂಪುಟವು ಮುಗಿಯುತ್ತದೆ. ಇದನ್ನು ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕ ಸಂಚಿಕೆಯಾಗಿ ಮಾಡಬೇಕೆಂಬ ಉದ್ದೇಶದಿಂದ ಅವರ ಆಪ್ತ ಬಂಧು ಮಿತ್ರರನ್ನು ಲೇಖನಗಳಿಗಾಗಿ ಪ್ರಾರ್ಥಿಸಿಕೊಳ್ಳಲಾಯಿತು. ಅವರನ್ನು ಅಣ್ಣತಮ್ಮಂದಿರಿಗಿಂತ ಹೆಚ್ಚಾಗಿ ತಿಳಿದ ಹಲವರಿರುವರಾದರೂ, ಅವರ ವಿಷಯವಾಗಿ ಎಷ್ಟೋ ಸಂಗತಿಗಳನ್ನು ಹೇಳುವವರಾದರೂ, ಬರೆಯುವುದಕ್ಕೆ ಕುಳಿತರೆ ಎದೆ ಕುಗ್ಗಿ ಮನಸೊರಗಿ ಕೈನಿಂತು ಹೋಗುತ್ತದೆ; ಸುದೀರ್ಘವಾದ ಆ ದೊಡ್ಡ ವ್ಯಕ್ತಿ ನಗುನಗುತ್ತ ಇನ್ನೂ ಬರುತ್ತಿದೆಯೆನ್ನುವ ಹಾಗೆ ಆಗುತ್ತದೆಯೇ ಹೊರತು, ನಮ್ಮಿಂದ ಶಾಶ್ವತವಾಗಿ ಮರೆಯಾಗಿ ಹೋಯಿತು ಎನ್ನಿಸುವುದಿಲ್ಲ—ಈ ಅನುಭವವನ್ನು ಎಲ್ಲರೂ ಹೇಳಿ ಹೇಳಿ ಸುಮ್ಮನಾದರು; ನಾವೂ ಕೇಳಿ ಕೇಳಿ ಸುಮ್ಮನಾಗಿ, ಕೊನೆಗೆ ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳೂ ‘ಪ್ರಬುದ್ಧ ಕರ್ಣಾಟಕ’ದ ಮುಖ್ಯಾಧಿಕಾರಿಗಳೂ ಇಬ್ಬರಾದರೂ ತಮ್ಮ ಸಂತಾಪವನ್ನು ಸೂಚಿಸಬೇಕೆಂದು ಅವರನ್ನು ಒತ್ತಾಯ ಪಡಿಸಿದೆವು. ವಿದ್ಯಾರ್ಥಿಕಾಲದಿಂದಲೂ ವೆಂಕಣ್ಣಯ್ಯನವರನ್ನು ಬಲ್ಲ ಅವರಿಬ್ಬರೂ ನಮ್ಮ ಪ್ರಾರ್ಥನೆಯನ್ನು ಸಲ್ಲಿಸಿ ಸ್ವರ್ಗಸ್ಥರ ವಿಷಯವಾಗಿ ಚರಮವಾಕ್ಯಗಳನ್ನು ಬರೆದುಕೊಟ್ಟರು. ಇದಕ್ಕೆ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಈ ಮೆಚ್ಚಿಗೆಯ ವಾಕ್ಯಗಳಿಗೆ—ಸ್ವಭಾವೋಕ್ತಿಗೆ—ಕನ್ನಡನಾಡೇ ಸಮ್ಮತಿ ಕೊಡುವುದೆಂದೂ ಅವುಗಳಿಂದ ವೆಂಕಣ್ಣಯ್ಯನವರ ಆತ್ಮಕ್ಕೆ ಸ್ವಲ್ಪವಾದರೂ ಶಾಂತಿ ಸಮಾ

ಧಾನ ದೊರಕುವುದೆಂದೂ ನಂಬುತ್ತೇವೆ. (ನನಗೆ ಜ್ಞಾಪಕಕ್ಕೆ ಬಂದ ಒಂದೆರಡು ಅಂಶಗಳನ್ನು ಹರುಕುಮುರುಕಾಗಿ ಸೇರಿಸಿ ನಾನೂ ಒಂದು ಲೇಖನವನ್ನು ಬರೆದಿದ್ದೇನೆ.) 'ಪ್ರಬುದ್ಧ ಕರ್ಣಾಟಕ'ಕ್ಕೆ ವೆಂಕಣ್ಣಯ್ಯನವರು ಆತ್ಮ, ನಾನು ದೇಹ—ಎಂದು ಒಬ್ಬ ಲೇಖಕರು ಹಿಂದೆ ಬರೆದಿದ್ದರು. ಕಳೆದ ಮೈಸೂರು ಪ್ರಜಾಗಣಿತಿಯಲ್ಲಿ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ತಮ್ಮ ವರದಿಗೆ ಆಧುನಿಕ ಕನ್ನಡಸಾಹಿತ್ಯದ ಮೇಲಣ ಒಂದು ಅನುಬಂಧವನ್ನು ಬರೆಯುತ್ತ, ಅದರಲ್ಲಿ ನಾವಿಬ್ಬರೂ ಕೆಲಸಕಾರ್ಯಗಳಲ್ಲಿ ಅವಳಿಜವಳಿಗಳೆಂದು ಬರೆದರು. ದೇವರು ಈ ರೀತಿ ಮಾತನಾಡಬಲ್ಲವರ ಬಾಯನ್ನು ಕಿತ್ತುಕೊಂಡುಬಿಟ್ಟನು! ದೇಹವು ಆತ್ಮಶಕ್ತಿಯಿಲ್ಲದೆ ಕೆಲಸಮಾಡಬೇಕಾಗಿದೆ; ಜೋಡಿಕುದುರೆ ಸಾರೋಟಾಗಿದ್ದದ್ದು ಒಂಟೆತ್ತಿನ ಗಾಡಿಯಾಗಿದೆ. ಆದರೆ ಕನ್ನಡಿಗರು ಇದನ್ನು ಮನಸ್ಸಿಗೆ ತಂದುಕೊಳ್ಳದೆ, ಇದುವರೆಗೆ 'ಪ್ರಬುದ್ಧ ಕರ್ಣಾಟಕ'ವು ಕನ್ನಡಕ್ಕೆ ಮಾಡಿರುವ ಯತ್ಕಿಂಚಿತ್ ಸೇವೆಯನ್ನು ತಮ್ಮ ಉದಾರ ಚಿತ್ತಕ್ಕೆ ತಂದುಕೊಂಡು ಅದನ್ನು ಬೆಳೆಸಿಕೊಂಡುಬರುವರೆಂದು ನಂಬುತ್ತೇವೆ.

ಮುಂದಿನ ಸಂಪುಟದಿಂದ 'ಪ್ರಬುದ್ಧ ಕರ್ಣಾಟಕ'ವನ್ನು ಇನ್ನೂ ಹೆಚ್ಚು ಉಪಯುಕ್ತವಾಗುವಂತೆಯೂ, ರಂಜಕವಾಗುವಂತೆಯೂ, ಸಕಾಲದಲ್ಲಿ ಬರುವಂತೆಯೂ ನಡಸಬೇಕೆಂದು ಸಂಕಲ್ಪಿಸಿದ್ದೇವೆ.—ಶಾಸ್ತ್ರ, ಸಾಹಿತ್ಯ, ಕಲೆ ಇವುಗಳ ಮೇಲಣ ಲೇಖನಗಳ ಜೊತೆಗೆ ಹಲವು ವಿಧವಾದ ಸಣ್ಣ ಪುಟ್ಟ ಕಥೆಗಳು, ಇತಿಹಾಸಗಳು, ಉಪಾಖ್ಯಾನಗಳು, ಸಂಸ್ಕೃತಿಯ ಮೇಲಣ ಟಿಪ್ಪಣಿಗಳು, ಪ್ರಾಚ್ಯ ಲೇಖನ ಮಾಲೆ, ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರಗಳಿಗೆ ಸೇರುವ ಪ್ರಾಚ್ಯ ಪುಸ್ತಕಗಳ ಪಟ್ಟಿ ಮುಂತಾದವುಗಳನ್ನು ಕೊಡಬೇಕೆಂಬ ಯೋಚನೆಯಿದೆ. ನನ್ನ ಮಿತ್ರರನೇಕರು ಈ ಕಾರ್ಯದಲ್ಲಿ ನೆರವಾಗುವುದಾಗಿ ಮಾತುಕೊಟ್ಟಿದ್ದಾರೆ. ಕನ್ನಡಿಗ ಮಹಾಜನಗಳೂ ಹೆಚ್ಚು ಹೆಚ್ಚಾಗಿ 'ಪ್ರಬುದ್ಧ ಕರ್ಣಾಟಕ'ಕ್ಕೆ ಚಂದಾದಾರರಾಗುತ್ತೇವೆಂಬ ಭರವಸೆ ಕೊಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

***

ಶ್ರೀಮಾನ್ ವೆಂಕಣ್ಣಯ್ಯನವರ ಸ್ಮಾರಕವಾಗಿ ಮಹಾರಾಜಾ ಕಾಲೇಜಿನಲ್ಲಿ ಕನ್ನಡಕ್ಕೆ ಒಂದೆರಡು ವೇತನಗಳನ್ನು ಇಡಬೇಕೆಂದು ಉದ್ದೇಶಿಸಿ ಅದಕ್ಕಾಗಿ ಒಂದು ನಿಧಿಯನ್ನು ಆರಂಭಿಸಿರುವುದು ಕನ್ನಡಿಗರೆಲ್ಲರಿಗೂ ತಿಳಿದಿದೆ. ಆ ನಿಧಿಗೆ ಈಗ ಸುಮಾರು ೧,೨೦೦ ರೂಪಾಯಿಗಳಷ್ಟು ಹಣವು ವಾಗ್ದಾನವಾಗಿ ಸುಮಾರು ೯೦೦ ರೂಪಾಯಿಗಳು ಬಂದಿವೆ. ಈ ಹಣವನ್ನು ಮೈಸೂರು ಬ್ಯಾಂಕಿನಲ್ಲಿ ಶೇಖರಿಸಿದೆ. ಬ್ಯಾಂಕಿನವರು

ಪ್ರೊ|| ಟಿ. ಎಸ್. ವೆಂಕಣ್ಣಯ್ಯ ಸ್ಮಾರಕನಿಧಿ

ಯಾವ ಊರಿನ ಯಾವ ಬ್ಯಾಂಕಿನ ಚೆಕ್ಕನ್ನಾದರೂ ಈ ನಿಧಿಗೆ ವಟ್ಟ ಕೇಳದೆ ತೆಗೆದು ಕೊಳ್ಳುವುದಾಗಿಯೂ ತಮ್ಮ ಎಲ್ಲಾ ಶಾಖೆಗಳಲ್ಲಿಯೂ ಹಣವನ್ನು ಸ್ವೀಕರಿಸುವು ದಾಗಿಯೂ ಒಪ್ಪಿ ಅನುಕೂಲಮಾಡಿಕೊಟ್ಟಿದ್ದಾರೆ. ಶ್ರೀಮಾನ್ ವೆಂಕಣ್ಣಯ್ಯನ ವರ ಇಷ್ಟಮಿತ್ರರೂ ಶಿಷ್ಯರೂ ಮಾತ್ರವಲ್ಲದೆ, ಅವರಲ್ಲಿ ಗೌರವವಿದ್ದ, ವಿಶ್ವಾಸವಿದ್ದ ಮಹನೀಯರೂ, ಕನ್ನಡದಲ್ಲಿ ಮಮತೆಯುಳ್ಳ ಅಭಿಮಾನಿಗಳೂ ಈ ನಿಧಿಯನ್ನು ಬೆಳೆಸಿ ಕನ್ನಡದ ಮುನ್ನಡೆಗೆ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

***

ಈ ಸಂಚಿಕೆಯ ಸಂಪಾದಕೀಯ ಟಿಪ್ಪಣಿಗಳು ಮುದ್ರಣಕ್ಕೆ ಸಿದ್ಧವಾಗು ತ್ತಿರುವಾಗ ಕನ್ನಡಿಗರಿಗೆ ಚಿರಪರಿಚಿತರಾದ ರಾಜಕಾರ್ಯಪ್ರಸಕ್ತ ರಾವ್ ಬಹ ದ್ದೂರ್ ಮಹಿಷಿ ಶಾಮರಾಯರ ಮರಣವಾರ್ತೆಯು ತಿಳಿದು ಮತ್ತೊಂದು ಶೋಕದ ತೆರೆಯು ಮೇಲೆ ಕವಿಯಿತು. ಅವರು ಇದೇ ಜುಲೈ ತಿಂಗಳು ಐದನೆಯ ತಾರೀಖಿನ ದಿನ ತಮ್ಮ ಮನೆ ಯಲ್ಲಿ ಹೃದಯಚಲನೆ ನಿಂತು ಸ್ವರ್ಗಸ್ಥರಾದರು. ಅವರ ಮರಣದಿಂದ ಮೈಸೂರಿನ ಹಿರಿಯ ಕನ್ನಡಿಗರಾದ ಒಬ್ಬ ದೊಡ್ಡ ವಿದ್ವಾಂಸರನ್ನು ನಾವು ಕಳೆದುಕೊಂಡೆವು; ಮೈಸೂರು, ಕನ್ನಡ ಇವುಗಳ ಮೇಲೆ ಅಕಪಟವಾದ ತೀವ್ರವಾದ ಅಭಿಮಾನವುಳ್ಳ ಒಬ್ಬ ದೇಶವತ್ಸಲರನ್ನು ಕಳೆದು ಕೊಂಡೆವು. ಅವರು ವಯಸ್ಸಿನಲ್ಲಿ ಹಣ್ಣಾಗಿದ್ದರೂ, ಸಾಂಸಾರಿಕ ಕೊರತೆಗಳಲ್ಲಿ ಕುಗ್ಗಿದ್ದರೂ, ಅವರ ಉತ್ಸಾಹಾಭಿಮಾನಗಳು ತಗ್ಗಿರಲಿಲ್ಲ. ಅವರು ತಮ್ಮ ಮುಪ್ಪಿ ನಲ್ಲಿ, ಈಚೀಚೆಗೆ ಬರೆದ 'ಮೈಸೂರು ಚರಿತ್ರೆ'ಯ ಮೇಲಣ ಪ್ರೌಢಗ್ರಂಥವಿರಲಿ; ಅವರೊಡನೆ ಮಾತುಕಥೆಗಳಿಗೆ ಕುಳಿತರೆ ಸಾಕು, ಅವರ ಭಾಷಾಸಕ್ತಿ, ಕಾರ್ಯೋತ್ಸಾಹ, ದೇಶಾಭಿಮಾನಗಳು ಕಂಡುಬರುತ್ತಿದ್ದುವು. ಯಾವ ದೊಡ್ಡ ಸಭೆಯಾಗಲಿ, ಅದಕ್ಕೆ ಅಧ್ಯಕ್ಷರು ಬೇಕೆಂದರೆ ಮನಸ್ಸಿಗೆ ಮೊದಲು ಅವರ ಹೆಸರು ಮುಂದೆ ಬರುತ್ತಿತ್ತು. ಅವರು ಮುಪ್ಪಿನಲ್ಲಿಯೂ ಹಿಂತೆಗೆಯದೆ, ಆದಷ್ಟು ಹೊತ್ತು ಬಂದು ಕುಳಿತಿರುತ್ತಿದ್ದರು; ಇಲ್ಲದಿದ್ದರೆ ತಮ್ಮ ಸಂದೇಶವನ್ನಾದರೂ ಕಳುಹಿಸುತ್ತಿದ್ದರು; ಅವರು, ರಾವ್ ಬಹದ್ದೂರ್ ನರಸಿಂಹಾಚಾರ್ಯರು, ಸರ್ ಕೆ. ಪುಟ್ಟಣ್ಣ ಸೆಟ್ಟರು, ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಮುಂತಾದವರ ಪುರಾತನ ಪಂಕ್ತಿಗೆ ಸೇರಿದ ಪೂಜ್ಯ ಹಿರಿಯರು; ಸುಮಾರು ಅರ್ಧ ಶತಮಾನಕ್ಕೆ ಮೇಲ್ಪಟ್ಟು ಮೈಸೂರು ಸರ್ಕಾರದ ನಾನಾ ಇಲಾಖೆಗಳಲ್ಲಿಯೂ, ಪ್ರಜಾಜೀವನದ ಹಲವು ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿ ಪೂರ್ಣಾನುಭವವನ್ನು ಪಡೆದವರು.

ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾವ್, ಎಂ.ಎ.

ಅವರು ವಿದ್ಯಾಧಿಕಾರಿಗಳಾಗಿದ್ದಾಗ 'ವಿದ್ಯಾದಾಯಿನಿ', 'ಕರ್ಣಾಟಕ ಗ್ರಂಥ ಮಾಲೆ', 'ಕಾವ್ಯಮಂಜರಿ' ಮುಂತಾದ ಕನ್ನಡ ಮಾಸ ಪತ್ರಿಕೆಗಳು ಆರಂಭವಾಗಿ ಬೆಂಬಲ ಪಡೆದು ಅಭಿವೃದ್ಧಿಯಾಗಿ ಹಳಗನ್ನಡ ಸಾಹಿತ್ಯ ಬೆಳಕಿಗೆ ಬರಲೂ ಹೊಸ ಕನ್ನಡ ಸಾಹಿತ್ಯ ಬೆಳೆಗೆ ಬರಲೂ ತುಂಬ ಸಹಾಯವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಸಂಸ್ಥಾಪಕರಲ್ಲಿ ಅವರೂ ಒಬ್ಬರು. 'ಪ್ರಬುದ್ಧ ಕರ್ಣಾಟಕ'ಕ್ಕೆ ಅದು ಹುಟ್ಟಿದಂದಿನಿಂದ ಪೋಷಕರಾಗಿ ಅದರ ಪುರೋಭಿವೃದ್ಧಿಯಲ್ಲಿ ಅತ್ಯಂತ ಆಸಕ್ತಿ ವಹಿಸಿದ್ದರು; ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೂ ಹಲವು ದೊಡ್ಡ ಸ್ಥಾನಗಳಲ್ಲಿದ್ದು ತಮ್ಮ ಜ್ಞಾನ ಅನುಭವ ಗೌರವಗಳ ಫಲವನ್ನಿತ್ತರು; ಬೆಂಗಳೂರಿನಲ್ಲಿರುವ ಏಥಿಕ್ ಸೊಸೈಟಿಯ ಅಧ್ಯಕ್ಷರಾಗಿದ್ದು ಅದನ್ನು ಮುಂದಕ್ಕೆ ತಂದರು. ಇಂಥ ಒಂದೊಂದು ವ್ಯಕ್ತಿಯೂ ಒಂದೊಂದು ದೊಡ್ಡ ಸಂಸ್ಥೆಯ ಹಾಗೆ; ಅವರೊಡನೆ ಓಡಾಡಿ ಕೊಂಡಿರುವುದೇ ಒಂದು ದೊಡ್ಡ ಶಿಕ್ಷಣ. ಅವರ ಮರಣದಿಂದ ಬೆಂಗಳೂರಿನಲ್ಲಿ, ಮೈಸೂರು ಸಂಸ್ಥಾನದಲ್ಲಿ, ಕನ್ನಡನಾಡಿನಲ್ಲಿ, ಸುಲಭವಾಗಿ ತುಂಬಿಸಲಾರದ ಒಂದು ದೊಡ್ಡ ತೆರಪು ಉಂಟಾಯಿತು!

ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ—ಈ ಹಬ್ಬಗಳ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಚಂದಾದಾರರಿಗೆ	ರೂ.	೨	೦	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೩	೦	೦
ವಿದ್ಯಾರ್ಥಿಗಳಿಗೆ ಮಾತ್ರ	ರೂ.	೧	೮	೦

ಚಂದಾಹಣವನ್ನು ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರರವರಿಗೆ ಪಾವತಿಮಾಡಬೇಕು. ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಧ್ಯಕ್ಷರಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಈ ಪತ್ರಿಕೆಯ ಸಂಪಾದಕರಿಗೆ ಕಳುಹಿಸಿಕೊಡಬೇಕು. ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು.

ಜಾಹಿರಾತು ಪ್ರಕಟನೆಯ ದರಗಳು

	ಒಂದು ಸಲಕ್ಕೆ				ಮೂರು ಅಥವಾ ಹೆಚ್ಚು ಸಲಕ್ಕೆ
ಒಂದು ಪುಟಕ್ಕೆ	ರೂ.	೧೦	೦	೦	೧೫% ಸೋಡಿ
ಅರ್ಧ ಪುಟಕ್ಕೆ	ರೂ.	೫	೦	೦	೧೦% ಸೋಡಿ

(ಅಥವಾ ಅದಕ್ಕೂ ಕಡಮೆ ಜಾಗಕ್ಕೆ)

ಒಟ್ಟಿಗೆ ಮೂರು ಪುಟಗಳನ್ನು ಒಂದು ಸಲ ಪ್ರಕಟಿಸುವುದಕ್ಕೂ ೧೫% ಸೋಡಿ.

ಜಾಹಿರಾತು ಹಸ್ತಪತ್ರಿಕೆಗಳನ್ನು ಹಂಚಲು ದರಗಳು :

ಡೆಮಿ ಅಷ್ಟಪತ್ರದ ಆಕಾರದಲ್ಲಿದ್ದರೆ, ಒಂದು ಸಲಕ್ಕೆ	ರೂ.	೫	೦	೦
ಇದಕ್ಕೆ ದೊಡ್ಡ ಬೇರೆ ಯಾವ ಆಕಾರದಲ್ಲಿದ್ದರೂ	ರೂ.	೧೦	೦	೦

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನೂ ವಿಮರ್ಶೆಗಾಗಿ ಗ್ರಂಥಗಳನ್ನೂ ವಿನಿಮಯಕ್ಕಾಗಿ ಪತ್ರಿಕೆಗಳನ್ನೂ ವಿಶಿಷ್ಟ ಪತ್ರವ್ಯವಹಾರವನ್ನೂ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಸಂಪಾದಕ,
'ಪ್ರಬುದ್ಧ ಕರ್ಣಾಟಕ',
ಯೂನಿವರ್ಸಿಟಿ ಲೈಬ್ರೆರಿ,
ಮೈಸೂರು.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳು

ಇಂಗ್ಲಿಷ್ ಗೀತಗಳು—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ.
ಬೆಂಡು ಕಾಗದದ ಪ್ರತಿ, ಬೆಲೆ ರೂ. ೧-೮-೦.

ಉಮರನ ಒಸಗೆ—ಡಿ. ವಿ. ಗುಂಡಪ್ಪನವರಿಂದ. ಬೆಲೆ ರೂ. ೧-೦-೦.

ಮುದ್ದಣ—ಸಂದಳಿಕೆ ಲಕ್ಷ್ಮೀನಾರಣಪ್ಪನವರ ಜೀವನಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ. (ಪ್ರತಿಗಳು ಮುಗಿದುಹೋಗಿವೆ) ಬೆಲೆ ರೂ. ೨-೦-೦.

ಗದಾಯುದ್ಧ ನಾಟಕಂ (ದ್ವಿತೀಯ ಮುದ್ರಣ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ಸಂಪಾದಿತವಾದದ್ದು. ಬೆಲೆ ೦-೮-೦.

ಭಕ್ತಿಭಾಂಡಾರಿ ಬಸವಣ್ಣನವರು (ದ್ವಿತೀಯ ಮುದ್ರಣ)—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರಿಂದ. ಬೆಲೆ ರೂ. ೧-೦-೦.

ತಾವರೆ—ಎಂ. ವೆಂಕಟೇಶ ಐಯಂಗಾರ್, ಎಂ.ಎ. ಅವರಿಂದ ರಚಿತವಾದ ಪದ್ಯಕಾವ್ಯ (ಸಚಿತ್ರ). ಬೆಲೆ ೦-೧೨-೦.

ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ. ಅವರಿಂದ. ಡಿ. ವಿ. ಗುಂಡಪ್ಪನವರ ಅವತರಣಿಕೆಯೊಡನೆ. ಬೆಲೆ ರೂ. ೧-೦-೦.

ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ. ಅವರಿಂದ. ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್. ಅವರ ಮುನ್ನುಡಿಯೊಡನೆ.
ಬೆಲೆ ರೂ. ೧-೦-೦.

ಭಾಸನ ಏಕಾಂಕ ನಾಟಕಗಳು—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಸಾದಾ ಪ್ರತಿ, ಬೆಲೆ ರೂ. ೧-೦-೦; ಕ್ಯಾಲಿಕೋ ಪ್ರತಿ, ಬೆಲೆ ರೂ. ೧-೮-೦.

ಷೇಕ್ಸ್‌ಪಿಯರ್ ನಾಟಕ ಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದ. ಎಸ್. ವಿ. ರಂಗಣ್ಣ, ಎಂ.ಎ. ಅವರ ಅವತರಣಿಕೆಯೊಡನೆ.
ಬೆಲೆ ೦-೧೨-೦.

ಮಲೆನಾಡಿನ ಚಿತ್ರಗಳು (ಸಚಿತ್ರ)—ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ.
ಬೆಲೆ ರೂ. ೧-೦-೦.

ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ.
ಬೆಲೆ ರೂ. ೧-೪-೦.

ವಿಗಡ ವಿಕ್ರಮರಾಯ—ಸಂಸ ವಿರಚಿತ (ಎ. ಡಿ. ಎ. ಅವರಿಂದ ಪ್ರಕಾಶಿತವಾದ ದ್ವಿತೀಯ ಮುದ್ರಣ). ಬೆಲೆ ೦-೧೨-೦.

ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ), ಭಾಗ ೧—ಬಿ. ವೆಂಕೋಬರಾವ್, ಬಿ.ಎ. ಅವರಿಂದ. ಬೆಲೆ ರೂ. ೫—೦—೦.

PRINTED IN INDIA AT THE WESLEY PRESS AND PUBLISHING HOUSE, MYSORE CITY

